## ಡಾ. ಸಿದ್ಧಯ್ಯ ಪುರಾಣಿಕರ (ಕಾವ್ಯಾನಂದ)

# ಸಮಗ್ರ ಗದ್ಯ – ಭಾಗ ೨

**ಬಸವಣ್ಣನವರ ಜೀವನ ಹಾಗೂ ಸಂದೇಶ**
**ಅಲ್ಲಮ ಪ್ರಭು, ಸಿಧರಾಮ, ಮಹಾದೇವಿ**
**ಶರಣ ಸರಣಿ**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು–560 002

**SAMGRA GADYA BHAGA - 2**
**(BASAVANNANAVARA JEEVANA HAGU SANDESHA,**
**ALLAMA PRABHU, SIDDHARAMA, MAHADEVI, SHARANA SARANI):**
Written by Dr. Siddayya Puranik, Published by: Director,
Department of Kannada and Culture, Kannada Bhavan,
J.C. Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮೊದಲನೆಯ ಮುದ್ರಣ : ೨೦೨೦

ಪ್ರತಿಗಳು : ೧೦೦೦

ಪುಟಗಳು : viii + ೫೮೪ = ೫೯೨

ಕಾಗದ : ೮೦ GSM N.S. Maplitho

ಬೆಲೆ : ರೂ.

ಡಾ. ಸಿದ್ಧಯ್ಯ ಪುರಾಣಿಕರ (ಕಾವ್ಯಾನಂದ) ಸಮಗ್ರ ಗದ್ಯ ಕೃತಿಗಳು ೩ ಭಾಗದಲ್ಲಿ ಪ್ರಕಟವಾಗಿವೆ.

**ಭಾಗ ೧ – ಬೆಲೆ ರೂ.**
**ಭಾಗ ೨ – ಬೆಲೆ ರೂ.**
**ಭಾಗ ೩ – ಬೆಲೆ ರೂ.**

ರಕ್ಷಾಪತ್ರ ವಿನ್ಯಾಸ : **ಲಾವಣ್ಯ ಮುದ್ರಣ,** ಬೆಂಗಳೂರು.

ಛಾಯಾಕ್ಷರ ಜೋಡಣೆ : **ಎಂ.ಎಸ್.ಗ್ರಾಫಿಕ್ಸ್, ಬೆಂಗಳೂರು**

ಮುದ್ರಕರು :
**ಲಾವಣ್ಯ ಮುದ್ರಣ**
ನಂ.19, ವಿದ್ಯಾಪೀಠ ವೃತ್ತ, ಬಿ.ಎಸ್.ಕೆ. 1ನೇ ಹಂತ,
ಬೆಂಗಳೂರು – 560 050
ಮೊಬೈಲ್ : 98450 63381

# ಪ್ರಕಾಶಕರ ಮಾತು

ಕನ್ನಡ ಓದುಗರಿಗೆ ಸುಲಭ ಬೆಲೆಯಲ್ಲಿ ಉತ್ತಮ ಕೃತಿಗಳು ಲಭ್ಯವಾಗಬೇಕೆನ್ನುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವಾರು ಪ್ರಕಟಣಾ ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯರೂಪಕ್ಕೆ ತರುತ್ತಿದೆ.

ಡಾ. ಸಿದ್ಧಯ್ಯ ಪುರಾಣಿಕರ ಜನ್ಮ ಶತಮಾನೋತ್ಸವದ ಅಂಗವಾಗಿ ಅವರ ಸಮಗ್ರ ಕಾವ್ಯ, ಸಮಗ್ರ ವಚನ, ಸಮಗ್ರ ನಾಟಕ ಮತ್ತು ಸಮಗ್ರ ಗದ್ಯದ ಕೃತಿಗಳನ್ನು ಪ್ರಕಟಿಸ ಲಾಗುತ್ತಿದೆ.

ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಕಾಣೆಯಾಗುತ್ತಿದ್ದ ಕಾಲದಲ್ಲಿ ಅದಕ್ಕೆ ಆಸರೆ ಯಾಗಿ ನಿಂತು ಕನ್ನಡವನ್ನು ಪುನರುಜ್ಜೀವಗೊಳಿಸಿದ ಡಾ. ಸಿದ್ಧಯ್ಯ ಪುರಾಣಿಕರು ನಿರ್ಜೀವವಾಗುತ್ತಿದ್ದ ಕನ್ನಡ ಸಂಘ–ಸಂಸ್ಥೆಗಳಿಗೆ ಜೀವ ತುಂಬಿದವರು. ಸರ್ಕಾರದ ಅಧಿಕಾರಿಯಾಗಿ ದಕ್ಷ, ಸ್ವಚ್ಛ ಮತ್ತು ನಿಸ್ಪೃಹ ಆಡಳಿತಗಾರರೆಂದು ಪ್ರಖ್ಯಾತಿ ಪಡೆದಿದ್ದರು.

ಡಾ. ಸಿದ್ಧಯ್ಯ ಪುರಾಣಿಕರು "ಕಾವ್ಯಾನಂದ" ಕಾವ್ಯನಾಮದಿಂದ ಕವಿತೆ, ಕಥೆ, ಕಾದಂಬರಿ, ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ನಾಟಕ, ವಚನ ಸಾಹಿತ್ಯ ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸುಮಾರು 38 ಕೃತಿಗಳನ್ನು ರಚಿಸಿದ್ದಾರೆ. ಉತ್ತಮ ವಾಗ್ಮಿ, ವಿಮರ್ಶಕ ಮತ್ತು ವಿದ್ವಾಂಸರಾಗಿದ್ದ ಡಾ. ಸಿದ್ಧಯ್ಯ ಪುರಾಣಿಕರಿಗೆ ಅನೇಕ ಸಮ್ಮೇಳನಗಳ ಅಧ್ಯಕ್ಷತೆಯ ಗೌರವ, ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಬಿಲ್ವಾರ ಪ್ರಶಸ್ತಿ ಮುಂತಾದ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಅನೇಕ ಕೃತಿಗಳು ಇತರ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಕುವೆಂಪುರವರು ಡಾ. ಸಿದ್ಧಯ್ಯ ಪುರಾಣಿಕರು ಒಬ್ಬ ಅಪರೂಪದ ವ್ಯಕ್ತಿ ಎಂದು ಹೀಗೆ ಹೇಳಿದ್ದಾರೆ :

"ಜ್ಞಾನ, ಅಧಿಕಾರ, ವಿನಯ, ಸೌಜನ್ಯಶೀಲತೆಗಳು ಏಕತ್ರ ಸಮಾವೇಶಗೊಳ್ಳುವುದು ತುಂಬಾ ಅಪರೂಪ ಎಂಬುದು ನಮ್ಮೆಲ್ಲರ ಅನುಭವಕ್ಕೆ ಬಂದ ವಿಷಯವಾಗಿದೆ. ಇದಕ್ಕೆ ಅಪರೂಪವಾಗಿ ನಿಂತ ಪ್ರತಿಭಾಶೀಲ – ಸತ್ಪುರುಷರ ವಿರಳ ಪಂಕ್ತಿಯಲ್ಲಿ ನಿಂತಿದ್ದಾರೆ ಶ್ರೀ ಪುರಾಣಿಕರು. ಮೊದಲ ಬಾರಿಗೇ ಅವರು ನನ್ನನ್ನು ತಮ್ಮ ಬರವಣಿಗೆಯಿಂದ ಹೇಗೋ ಹಾಗೆ ಸುಸಂಸ್ಕೃತ ವ್ಯಕ್ತಿತ್ವದಿಂದಲು ಆಕರ್ಷಿಸಿದರು. ಆ ಆಕರ್ಷಣೆ ದಶಕಗಳ ಕಾಲ ಮಾಸದೆ ಹಾಗೆಯೇ ಉಳಿದಿದೆ."

ಈ ಎಲ್ಲಾ ಸಮಗ್ರ ಕೃತಿಗಳನ್ನು ಹೊರತರಲು ಸಹಕರಿಸಿದ ಜಂಟಿ ನಿರ್ದೇಶಕರಾದ ಶ್ರೀ ಕೆ.ಎಚ್. ಚೆನ್ನೂರ ಅವರಿಗೆ ಮತ್ತು ಇತರ ಅಧಿಕಾರಿ ಸಿಬ್ಬಂದಿಗೆ, ಕರಡುಪ್ರತಿಯನ್ನು ತಿದ್ದಲು ನೆರವಾದ, ವಿದ್ವಾಂಸರಾದ ಶ್ರೀ ಶಾ.ಮಂ. ಕೃಷ್ಣರಾಯ ಅವರಿಗೆ, ಈ ಸಂಪುಟ ಗಳನ್ನು ಅಂದವಾಗಿ ಮುದ್ರಿಸಿಕೊಟ್ಟ ಲಾವಣ್ಯ ಮುದ್ರಣದ ಮಾಲೀಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಮತ್ತು ಈ ಎಲ್ಲ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಲು ಅನುಮತಿ ನೀಡಿದ ಡಾ. ಸಿದ್ಧಯ್ಯ ಪುರಾಣಿಕರ ಪುತ್ರರಾದ ಶ್ರೀ ಪ್ರಸನ್ನಕುಮಾರ ಪುರಾಣಿಕ ಅವರಿಗೆ ನನ್ನ ಕೃತಜ್ಞತೆಗಳು.

ಕನ್ನಡದ ಧೀಮಂತ ಕವಿ, ವಿಮರ್ಶಕರಲ್ಲಿ ಒಬ್ಬರಾದ ಡಾ. ಸಿದ್ಧಯ್ಯ ಪುರಾಣಿಕರ ಸಮಗ್ರ ಕೃತಿಗಳು ಸುಲಭ ಬೆಲೆಯಲ್ಲಿ ಕನ್ನಡಿಗರಿಗೆ ಒದಗಿಸುವುದು ನಮ್ಮ ಆಶಯ. ಈ ಕೃತಿಗಳನ್ನು ಸಾಹಿತ್ಯಾಸಕ್ತರು ಪ್ರೀತಿಯಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇವೆ.

– **ಶ್ರೀ ಎಸ್. ರಂಗಪ್ಪ,** **ಎಫ್.ಸಿ.ಎ., ಕ.ಆ.ಸೇ.**
ನಿರ್ದೇಶಕರು

# ಪರಿವಿಡಿ


ಪ್ರಕಾಶಕರ ಮಾತು iii

**೧. ಬಸವಣ್ಣನವರ ಜೀವನ ಹಾಗೂ ಸಂದೇಶ ೧–೧೭೯**

ಬಸವಣ್ಣನವರ ಜೀವನ ೩

ಹೊಸ ಧರ್ಮದೃಷ್ಟಿ ೬೭

ಅಸ್ಪೃಶ್ಯತೆಯ ಅಭಿಶಾಪ ೭೬

ಸಮಾನತೆಯ ಸಮಗ್ರ ಕ್ರಾಂತಿ ೯೬

ಆರ್ಥಿಕ ಅಸ್ತಿವಾರ ೧೦೪

ಮೌಢ್ಯದ ಚಕ್ರವ್ಯೂಹ ೧೧೯

ಸಾಂಸ್ಕೃತಿಕ ಕ್ರಾಂತಿ ೧೨೬

ಹಿನ್ನೋಟ – ಮುನ್ನೋಟ ೧೭೬

**೨. ಅಲ್ಲಮಪ್ರಭು ೧೮೧–೨೪೮**

ಅಗ್ನಿ ಪರೀಕ್ಷೆ ೧೮೩

ಅಜ್ಞಾತಸಾಧನೆ ೧೮೬

ಅನುಭವ ಮಂಟಪದಲ್ಲಿ ೨೧೦

ಪ್ರಭುವಿನ ಪ್ರಬೋಧೆ ೨೧೬

ಅನುಬಂಧ – ೧ ೨೩೦

ಅನುಬಂಧ – ೨ ೨೪೧

**೩. ಸಿದ್ಧರಾಮ ೨೪೯–೨೬೮**

**೪. ಮಹಾದೇವಿ ೨೬೯–೩೫೯**

ಮಹಾದೇವಿಯ ಮಹಾಜೀವನ ೨೭೧

ಅಸಾಮಾನ್ಯ ಸಾಧನೆಗಳು ೨೯೭

ಅಕ್ಕನ ಆಲೋಚನಾಮೃತ ೩೨೪

ಅಕ್ಕನ ವ್ಯಕ್ತಿತ್ವ ೩೫೩

**೫. ಶರಣ ಸರಣಿ** **೩೬೧–೫೪೪**
ಶರಣರ ಅನುಭಾವ ಸರಣಿ ೩೬೩
ಶರಣರ ನೀತಿ ಸಂಹಿತೆ ೩೭೪
ಆಚಾರ ಸ್ವರ್ಗದ ಆರೋಹಣ ೩೮೮
ಪರಿಶುದ್ಧತೆ–ಶರಣರು ಕಂಡಂತೆ ೩೯೬
ವಿಷಯದಿಂದ ನಿರ್ವಿಷಯದತ್ತ ೪೦೩
ಶರಣರ ದೃಷ್ಟಿಯಲ್ಲಿ ಸುಖ ದುಃಖಗಳು ೪೧೦
ಶರಣರು ಪರಿಶೋಧಿಸಿ ಸಾಧಿಸಿದ ಶಿವಯೋಗ ೪೧೭
ಕಾಯಕದ ಅರ್ಥಪ್ರಪಂಚ ೪೪೫
ಕಾಯಕ ಮೀಮಾಂಸೆ ೪೫೧
ಶರಣರ ಸಾಹಿತ್ಯಸರಣಿ ೪೫೭
ವಚನಕಾರರ ಶೈಲಿ ೪೬೫
ಬಸವಣ್ಣನವರ ವಾಕ್–ಪರುಷ ೪೭೭
ಬಸವಣ್ಣನವರ ವಚನಗಳಲ್ಲಿ ದುರಂತಪ್ರಜ್ಞೆ–ಬದುಕುವ ಪ್ರತಿಜ್ಞೆ ೪೮೩
ಬಸವಣ್ಣನವರು ಹೆಸರಿಸಿದ ಶರಣರು ೪೮೭
ಪ್ರಭು ವಚನಲೀಲಾವಿಲಾಸ ೪೯೩
ಅಣ್ಣನ ಅಸೀಮ ಅನುಕಂಪೆ ೫೦೮
ಬಚ್ಚ ಬರಿಯ ಬಸವ ೫೧೨
ಅಕ್ಕಮಹಾದೇವಿಯ ತ್ರಿವಿಧಾಮೃತ ೫೧೬
ಅದ್ವಿತೀಯ ಅನುಭವ ಮಂಟಪ ೫೨೫
ಸಿದ್ಧಾಂತ ಸಾಧನ ಪಥಗಳ ಸಮನ್ವಯ–ಷಟ್ಸ್ಥಲ ೫೩೩

**೬. ಅನುಬಂಧಗಳು** **೫೪೫–೫೮೨**
ಅನುಬಂಧ ೧ : ಹಿಂದಿನ ಆವೃತ್ತಿಗಳ ಪ್ರಕಾಶಕರ ಮಾತು ೫೪೫
ಅನುಬಂಧ ೨ : ಮುನ್ನುಡಿಗಳು ೫೫೫
ಅನುಬಂಧ ೩ : ನಿವೇದನೆಗಳು ೫೬೧
ಅನುಬಂಧ ೪ : ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ ೫೬೯
ಅನುಬಂಧ ೫ : ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ ೫೭೩

# ಬಸವಣ್ಣನವರ
# ಜೀವನ ಹಾಗೂ ಸಂದೇಶ

## ೧

# ಬಸವಣ್ಣನವರ ಜೀವನ

**ಬಸವ**ಣ್ಣನವರ, ಅವರ ಸಮಕಾಲೀನರ ಜೀವನ ಚರಿತ್ರೆಗಳನ್ನು ಬರೆಯ–ಹೊರಡುವವರಿಗೆ ಎದುರಾಗುವ ಮುಖ್ಯ ಸಮಸ್ಯೆಗಳೆಂದರೆ ಚಾರಿತ್ರಿಕ ಅಂಶಗಳನ್ನೊಳಗೊಂಡ ವಿಶ್ವಸನೀಯ ಆಕರಗಳ ಅಭಾವ ಮತ್ತು ಪರಸ್ಪರ ವಿರುದ್ಧಾಂಶಗಳನ್ನೊಳಗೊಂಡ ಪವಾಡಪ್ರಧಾನ ಪುರಾಣ ಕಾವ್ಯಗಳ ವಿಪುಲತೆ. ಹೀಗಿದ್ದರೂ ಅನೇಕ ಸಂಶೋಧಕರ ಪರಿಶ್ರಮಪೂರ್ಣ ಸಂಶೋಧನೆಗಳ ಫಲವಾಗಿ ಬಸವಣ್ಣನವರ ಜೀವನಚರಿತ್ರೆಯನ್ನು ನಿರೂಪಿಸುವುದು ಮೊದಲಿಗಿಂತ ಈಗ ಕಡಿಮೆ ದಿಗ್ಭ್ರಮೆಯ ಕಾರ್ಯವೆನಿಸಿದೆ. ಸಿಕ್ಕಿರುವಷ್ಟು ಶಾಸನಗಳು, ವಚನಸಾಹಿತ್ಯದಲ್ಲಿ ದೊರೆಯುವ ಅಂತಃಪ್ರಮಾಣಗಳು, ಬಸವಯುಗಕ್ಕೆ ಸಮೀಪವಾಗಿ ಬದುಕಿದ್ದವರ ಕೃತಿಗಳು, ಆ ತರುವಾಯವೂ ಸ್ವಲ್ಪವಾದರೂ ಐತಿಹಾಸಿಕ ಪ್ರಜ್ಞೆಯಿಂದ ಬರೆದವರ ಕಾವ್ಯಗಳು–ಇವುಗಳನ್ನು ಇದೇ ಕ್ರಮದಲ್ಲಿ ಆಧರಿಸಿ, ಸರ್ವಸಮ್ಮತವಾಗದಿದ್ದರೂ ವಿವೇಚನಾಶೀಲರಿಗೆ ತಕ್ಕಷ್ಟು ತೃಪ್ತಿಯನ್ನು ತರಬಲ್ಲ ತೆರದಲ್ಲಿ ಬಸವಣ್ಣನವರ ಜೀವನವನ್ನು ರೂಪಿಸಬಹುದಾಗಿದೆ.

ಹಲವು ಸಿಕ್ಕುಗಳನ್ನು ಸೃಷ್ಟಿಸಿದ್ದ ಮನಗೋಳಿ ಅಥವಾ ಮಣಿಗವಳ್ಳಿಯ ಶಾಸನದಲ್ಲಿ ಉಕ್ತವಾಗಿರುವ 'ಬಸವನ'ನೇ ಕಲ್ಯಾಣದ ಬಸವಣ್ಣನೆಂಬ ವಾದ ಇತ್ತೀಚೆಗೆ ಇವರಿಬ್ಬರೂ ಬೇರೆ ಬೇರೆ ವ್ಯಕ್ತಿಗಳೆಂಬ ತೀರ್ಮಾನದಲ್ಲಿ ಪರ್ಯವಸಾನವನ್ನು ಹೊಂದಿರುವುದು ಬಸವಚರಿತ್ರೆಯನ್ನು ಬರೆಯುವವರಿಗಿದ್ದ ದೊಡ್ಡ ತೊಡಕೊಂದನ್ನು ತೊಡೆದುಹಾಕಿದೆ. ಈ ವಾದದ ಪರವಾಗಿ ವಿರೋಧವಾಗಿ ಉದಾಹೃತವಾಗಿರುವ ಆಧಾರಗಳನ್ನೆಲ್ಲ ಇಲ್ಲಿ ಮತ್ತೆ ಉದ್ಧರಿಸಿ ಚರ್ವಿತರ್ವಣಕ್ಕೆಡೆಗೊಡುವುದಕ್ಕಿಂತ ಆಸ್ಥೆಯುಳ್ಳವರು ಡಾ. ಪಾ. ಭೀ. ದೇಸಾಯಿಯವರ 'Basavesvara and His Times'ಎಂಬ ಗ್ರಂಥದ ೧೨೮ ರಿಂದ ೧೪೨ರವರೆಗಿನ ಪುಟಗಳನ್ನೂ ಶ್ರೀ ಮಲ್ಲನಗೌಡಾ ಪಾಟೀಲರ ಪುಸ್ತಕ – 'ಶ್ರೀ ಬಸವೇಶ್ವರರ ಚರಿತ್ರೆಯ ಮೇಲೆ ಹೊಸ ಬೆಳಕು' – ಪ್ರಕರಣ ೮ನ್ನೂ, 'ಬಸವ ಪುರುಷ'ದಲ್ಲಿ ಡಾ. ಎಚ್. ತಿಪ್ಪೇರುದ್ರ ಸ್ವಾಮಿಯವರ ಲೇಖನ – 'ಬಸವಣ್ಣನವರ ಐತಿಹಾಸಿಕತೆ' (ಪುಟಗಳು ೮೫ ರಿಂದ ೯೦) ಮತ್ತು ಡಾ. ಎಂ.ಎಂ. ಕಲಬುರ್ಗಿಯವರ 'ಬಸವಣ್ಣನವರ ಕುರಿತ ಶಾಸನಗಳು' ಎಂಬ ಗ್ರಂಥವನ್ನು ಅವಲೋಕಿಸಲಿ,

ಇಲ್ಲಿ ಈ ವಾದಕ್ಕೆ ಪೂರ್ಣವಿರಾಮವನ್ನಿಡುವ ಮುನ್ನ ಮನಗೋಳಿ ಶಾಸನದ ಕಸಪಯ್ಯನೇ ಬಸವಣ್ಣನೆಂದು ಗ್ರಹಿಸಿದರೆ ಉದ್ಭವಿಸುವ ವಿರೋಧಾಭಾಸಗಳಲ್ಲಿ ಒಂದನ್ನು ಇಲ್ಲಿ ಉಲ್ಲೇಖಿಸಬಹುದು: 'ಬಸವಣ್ಣನವರು ಕಾಶ್ಯಪ ಗೋತ್ರದವರೆಂದು ಕೆಲವು ಶಾಸನಗಳಿಂದ ತಿಳಿಯುತ್ತದೆ. ಆದರೆ ಮಾದರಸನು ಹಾರೀತಸ ಗೋತ್ರದವನೆಂದು ಶಾಸನಗಳೇ ಹೇಳಿರುವುದರಿಂದ ಬಸವಣ್ಣನವರು ಮಾದರಸನ ಔರಸಮಗನಾಗಲಾರರು. ಇನ್ನು ಮಣಿಗವಳ್ಳಿ ಶಾಸನದಲ್ಲಿ ವರ್ಣಿತ ಚಂದಿಮರಾಜನು ಕಾಶ್ಯಪ ಗೋಗ್ರದವನೆಂದೂ ಅವನಿಗೆ ಚಂದ್ರಿಕಾಂಬೆಯಲ್ಲಿ ಬಸವಯ್ಯ ಜನಿಸಿದನೆಂದೂ ಗೊತ್ತಾಗುತ್ತದೆ. ಈ ಬಸವನು ಕಾಶ್ಯಪ ಗೋತ್ರದವನಾಗಿರುವುದರಿಂದ ಇವನೇ ಬಸವಣ್ಣನವರೆಂದೂ ಊಹಿಸಲು ಬರುವಂತಿದೆ. ಈ ಶಾಸನದಲ್ಲಿಯೂ ಮಾದರಸನ ಹೆಸರು ಬರುತ್ತಿದೆ. ಮಣಿಗವಳ್ಳಿ (ಮನಗೋಳಿ) ಬಾಗೇವಾಡಿಗೆ ಸಮೀಪದಲ್ಲಿಯೇ ಇರುವುದರಿಂದ ಈ ಮಾದರಸನು ಬಾಗೇವಾಡಿಗೂ, ಮಣಿಗವಳ್ಳಿಗೂ ಕೂಡಾ ಪುರಾಗ್ರೇಸರನಾಗಿರಬಹುದು. ಅಲ್ಲದೆ ಇವನಿಗೂ ಚಂದಿಮರಸನಿಗೂ ಬಾಂಧವ್ಯವಿದ್ದಿರಬಹುದು. ಈ ಊಹೆ ನಿಜವಾದರೆ ಬಸವಣ್ಣನವರು ಚಂದಿಮ ಚಂದ್ರಾಂಬಿಕೆಯರಲ್ಲಿ ಮಣಿಗವಳ್ಳಿಯಲ್ಲಿ ಜನಿಸಿದರೆಂದೂ, ತಂದೆ ತಾಯಿಗಳು ಶೈಶವದಲ್ಲಿಯೇ ತೀರಲು ಮುತ್ತಬ್ಬೆಯ ಪೋಷಣೆಯಲ್ಲಿ ಕೆಲಕಾಲವಿದ್ದು, ಬಳಿಕ ಮಾದರಸ, ಮಾದಲಾಂಬಿಕೆಯವರ ಪೋಷಣೆಯಲ್ಲಿ ಬಾಗೇವಾಡಿಯಲ್ಲಿ ಬೆಳೆದರೆಂದೂ ಊಹಿಸಬಹುದು.' (ಬಸವನಾಳ ಸ್ಮಾರಕ ಸಂಪುಟ; ಪುಟ ೪೭೮). ಇದಕ್ಕೆ ವ್ಯತಿರಿಕ್ತವಾಗಿ ಹರಿಹರನು 'ನೆಲದಲ್ಲಿ ಮೂಡಿದ ಸ್ವಯಂಬಭುಲಿಂಗಕ್ಕೆ ನೆಲಂ ತಾಯಾಗಲರಿಯದೆಂಬಂತೆ ಹರನ ಬೆಸನಂ ಹೊತ್ತು ಪಲವು ಕಾರಣದಿಂ ಮರ್ತ್ಯಲೋಕದೊಳ್ ಪುಟ್ಟಿದ ಗಣೇಶ್ವರನಪ್ಪ ಬಸವರಾಜಂಗೆ ತಾಯ್ತಂದೆಗಳಿಲ್ಲವೆಂಬುದನರಿಪುವಂತೆ, ಶಿವಭಕ್ತನುಮಂ, ಶಿವಭಕ್ತೆಯುಮಂ ಶಿವನಾಜ್ಞೆಯಿಂ ಕೈಲಾಸಕೆಕ ಕೊಂಡೊಯ್ಯೆ; ಬಸವರಾಜು ಪುಸಿಯ ತಾಯ್ತಂದೆಗಳ್ ಪೋದುದಂ ಕಂಡಾದರಂ ಮಿಕ್ಕು ಸಂಸಾರದ ಭಾರವಿಳಿದು ನಲಿ ನಲಿದಾಡಿ, ಶಿವಭಕ್ತಿ ಮುತ್ತಂತಿರ್ದ ಮುತ್ತಬ್ಬೆಯ ಪಕ್ಕದೊಳು ಶಿವಪ್ರಸಾದ ಸಂತುಷ್ಟ ಹೃದಯನಾಗಿ ನಾಲ್ಕೆರಡು ವರುಷಂ ಸುಖದೊಳಿರೆ... ಪದಿನಾರು ವತ್ಸರದೊಡನೆ ನವಯೌವನಂ ಸಾರ್ದು... ಜನನದ ಬಳಿವಿಡಿದೆಂತಕ್ಕೆ ಬಂದ ಜವ್ವನಂ ಶಿವಪೂಜೆಯಲ್ಲಿ ಸವೆಯವೇಳ್ಕುಂ' ಎಂದು 'ಬಾಗೆವಾಡಿಯಂ ಪೊರಮಟ್ಟು' ಹೊರಟುಬಿಡುತ್ತಾನೆ. ಆದುದರಿಂದ 'ಮುತ್ತಬ್ಬೆಯ ಪೋಷಣೆಯಲ್ಲಿ ಕೆಲಕಾಲವಿದ್ದು, ಬಳಿಕ ಮಾದರಸ ಮಾದಲಾಂಬಿಕೆಯರ ಪೋಷಣೆಯಲ್ಲಿ ಬಾಗೇವಾಡಿಯಲ್ಲಿ ಬೆಳೆ'ವ ಬಗೆ ಹೇಗೆ? ಸುದೈವದಿಂದ ಮುಂದೆ ಸ್ವಯಂ ಸಾಹಿತ್ಯದಿಂದ ಸಾಹಿತ್ಯಶರಣ ಶಿ.ಶಿ. ಬಸವನಾಳರೇ 'ಆದರೆ ಇದನ್ನೂ ಊಹಾಪ್ರಪಂಚದಲ್ಲಿದೆ ಎಂಬುದನ್ನು ಮರೆಯತಕ್ಕದ್ದಲ್ಲ' ಎಂದು ಎಚ್ಚರಿಸಿ ಉಪಕಾರ ಮಾಡಿದ್ದಾರೆ. (ಅದೇ ಗ್ರಂಥ : ಪುಟ ೪೭೯). ಅವರಿಂದು ಇದ್ದಿದ್ದರೆ ಈ ಊಹೆ ಬಿದ್ದು ಹೋದುದನ್ನು ಕಂಡು ಹಿಗ್ಗುತ್ತಿದ್ದರೆಂದೇ ಹೇಳಬಹುದು. ಇದೆ ರೀತಿ, ಬಿಜ್ಜಳನು ಜೈನನಲ್ಲವೆಂಬುದು ಖಚಿತವಾಗಿರುವುದೂ ಬಸವಚರಿತ್ರೆ ಬರೆಯುವವರಿಗೆ ಇನ್ನೊಂದು ತಲೆನೋವು ಕಡಮೆಯಾದಂತಾಗಿದೆ.

ಬಸವಣ್ಣನವರ ಚರಿತ್ರೆಯನ್ನು ಸಾದ್ಯಂತವಾಗಿ, ಸುಸಂಬದ್ಧವಾಗಿ ಬರೆಯಲು ಪ್ರಯತ್ನಿಸುವ ಮೊದಲು ಅವರ ಚರಿತ್ರೆಗೆ ಸಂಬಂಧಿಸಿದಂತೆ ಮುಖ್ಯ ಸಮಸ್ಯೆಯೊಂದನ್ನು ಚರ್ಚಿಸಿ ಒಂದು ನಿಲವಿಗೆ ಬರಬೇಕಾಗುತ್ತದೆ. ಸಣ್ಣ ಪುಟ್ಟ ಸಮಸ್ಯೆಗಳನ್ನು ಅಲ್ಲಲ್ಲಿಯೇ ಚರ್ಚಿಸಿ ಸೂಕ್ತ ನಿರ್ಣಯಕ್ಕೆ ಬರುತ್ತ ಹೋಗಬಹುದು. ಆದರೆ ಈ ಮುಖ್ಯ ಸಮಸ್ಯೆಯ ಬಗ್ಗೆ ಒಂದಿಲ್ಲೊಂದು ನಿರ್ಧಾರಕ್ಕೆ ಬರದೇ ಅವರ ಚರಿತ್ರೆಯನ್ನು ನಿರೂಪಿಸುವುದೇ ಕಷ್ಟಕರವಾಗಬಹುದು.

ಈ ಮುಖ್ಯ ಸಮಸ್ಯೆ ಅವರ ಜೀವಮಾನವಧಿಯನ್ನು ಕುರಿತದ್ದು. ಇದನ್ನು ವಿವರವಾಗಿ ಚರ್ಚಿಸಿದರೆ ಅವರ ಜೀವನದ ಮುಖ್ಯ ಘಟನೆಗಳ ಚೌಕಟ್ಟು ಸಿದ್ಧವಾಗುತ್ತದೆ. ಆಮೇಲೆ ಅದನ್ನನುಸರಿಸಿ ಅವರ ಚರಿತ್ರೆಯನ್ನು ರೂಪಿಸುವುದು ಸಾಧ್ಯವಾಗುತ್ತದೆ. ಅವರ ಜೀವಮಾನಾವಧಿ ಮೂರು ಪಟ್ಟ – ಮುವ್ವತ್ತಾರು ವರ್ಷಗಳೆಂಬುದು ಪರಂಪರಾಗತ ಗ್ರಹಿಕೆ. ಇದನ್ನು ಅನುಮೋದಿಸುವ ಆಧಾರಗಳು ಕೆಳಗಿನಂತಿವೆ :

೧) ಲಕ್ಕಣ್ಣದಂಡೇಶನ 'ಶಿವತತ್ತ್ವ ಚಿಂತಾಮಣಿ'ಯಲ್ಲಿ ಬಸವ ಜನನದ ಕಾಲವನ್ನು ಹೇಳಿರುವುದು ಹೀಗೆ : 'ಸಿದ್ಧಾರ್ಥಿ ಸಂವತ್ಸರದ ಕಾರ್ತಿಕಂ ಶುದ್ಧ ಪೌರ್ಣಮಿಯ ಸೋಮವಾರದ ಮಧ್ಯರಾತ್ರಿಯಲ್ಲಿ ಒದವಿರ್ದ ಕೃತ್ತಿಕಾ ಶಿವಯೋಗ ವೃಷಭ ಲಗ್ನದೊಳು ಮಾದಾಂಬಿಕೆಯ ಗರ್ಭರತ್ನಾ ಕರದೊಳುದಯವಾದಂ'.

ಸಕೃದ್ದರ್ಶನಕ್ಕೆ ಅತ್ಯಂತ ಅಸಂದಿಗ್ಧವಾಗಿಈ ಜನನ ಕಾಲವನ್ನು ಹೇಳಿದಂತೆ ತೋರಿದರೂ ನಮ್ಮ ಕಾಲಗಣನೆಯ ವಿಚಾರದಲ್ಲಿರುವ ವಿಭಿನ್ನತೆಯಿಂದಾಗಿ ಈ ವಿವರಗಳನ್ನನುಸರಿಸಿ ಮಾಡಿರುವ ಕಾಲಗಣನೆಯ ಭಿನ್ನಾಭಿಪ್ರಾಯಗಳು ತಲೆದೋರಿವೆ. ವಿಕ್ರಮಶಕ, ಶಾಲಿವಾಹನಶಕ ಮೊದಲಾದ ಶಕೆಗಳು ಈ ದೇಶದಲ್ಲಿ ಪ್ರಚಲಿತವಿದ್ದು ಎಲ್ಲವೂ ಅವೇ ಅರವತ್ತು ಸಂವತ್ಸರಗಳ ಗಣನೆಯನ್ನೇ ಅವಲಂಬಿಸಿವೆ. ಲಕ್ಕಣ ದಂಡೇಶ ಕೊಟ್ಟಿರುವ ವಿವರಗಳನ್ನು ಯಾವ ಶಕೆಯನ್ನು ಅನುಸರಿಸಿ ಅರ್ಥೈಸಬೇಕೆಂಬುದೇ ಪ್ರಶ್ನೆ. ಇದು ೧೧೩೯ ಕ್ಕೆ ಸರಿಹೋಗುವುದಾದರೂ (೨೭.೧೦.೧೧೪೦ ಕ್ಕೆ ಸರಿಯಾಗುವುದೆನ್ನುತ್ತಾರೆ ಡಾ। ಎಲ್. ಬಸವರಾಜು ಅವರು – 'ಉಪಾಯನ'ದಲ್ಲಿ). ಉತ್ತರ ದಕ್ಷಿಣಗಳ ಕಾಲಗಣನೆಯಲ್ಲಿ ೮–೯ ವರ್ಷಗಳ ವ್ಯತ್ಯಾಸ ತೋರುವುದರಿಂದ ಇದು ೧೧೩೦–೩೧ಕ್ಕೆ ಸರಿಹೋಗುವುದೆನ್ನುತ್ತಾರೆ ಕಾಲಗಣನೆಯ ಪರಿಣತರು. ಇದನ್ನು ನಂಬುವುದಾದರೆ ಬಿಜ್ಜಳನ ಆಳಿಕೆ ೧೧೬೭ ರ ಕೊನೆಯಲ್ಲಿ ಮುಗಿವ ಮೂರು ತಿಂಗಳು ಮೊದಲೇ ಕಲ್ಯಾಣ ಬಿಟ್ಟು ಕೂಡಲಸಂಗಮಕ್ಕೆ ಹೋಗಿ ಅಲ್ಲಿ ಬಯಲಾದ ಬಸವಣ್ಣನವರು ಭೂಮಿಯಲ್ಲಿ ಬದುಕಿದುದು ಮೂವತ್ತಾರು ವರ್ಷ ಮಾತ್ರ ಎಂದಾಗುತ್ತದೆ. ಬಿಜ್ಜಳನ ತರುವಾಯವೂ ಬಸವಣ್ಣನವರು ೧೧೮೦ರವರೆಗೆ ಕೂಡಲಸಂಗಮದಲ್ಲಿ ಅಜ್ಞಾತರಾಗಿ ಬದುಕಿದ್ದರೆಂಬ ವಾದವನ್ನು ಮಂಡಿಸಿರುವ

ಡಾ|| ಎಲ್. ಬಸವರಾಜು ಅವರೂ, 'ಕ್ರಿ.ಶ. ೧೧೦೬ರವರೆಗೆ ಬಸವ ಜನನವನ್ನು ಒಯ್ಯುವುದರಿಂದ ಆಗುವ ಚಾರಿತ್ರಿಕ ಅಸಂಬದ್ಧತೆಯನ್ನು ಕುರಿತು' ಆಲೋಚಿಸುತ್ತ – 'ಬಸವನು ಕಲ್ಯಾಣಕ್ಕೆ ಬಂದಾಗ ಬಿಜ್ಜಳನು ಚಕ್ರವರ್ತಿಯಾಗಿದ್ದುದರಿಂದ, ಆತನು ಅಲ್ಲಿಗೆ ಬಂದುದು ಕ್ರಿ.ಶ. ೧೧೬೨–೩ಕ್ಕಿಂತ ಹಿಂದೆಂಬುದು ಅಸಾಧ್ಯ. ಬಿಜ್ಜಳನು ಮಂಗಳವಾಡದಲ್ಲಿ ಆಳುತ್ತಿದ್ದಾಗ, ಕ್ರಿ.ಶ. ೧೧೫೬ರಲ್ಲೇ ಬಸವನು ಅವನ ಆಸ್ಥಾನಕ್ಕೆ ಬಂದು ಸೇರಿದನೆಂದು ಊಹಿಸಿದರೂ, ಆ ವೇಳೆಗಾಗಲೇ ಅವನಿಗೆ ೫೦ ವರ್ಷ ವಯಸ್ಸಾಗಿರಬೇಕು. ಆ ಅಪರ ವಯಸ್ಸಿನಲ್ಲಿ ಬಸವನು ಸಿದ್ಧರಸ ಅಥವಾ ಬಸಲದೇವನ ಮಗಳನ್ನು ಮದುವೆ ಯಾದನೆಂಬುದು ವಿಕೃತವಾಗಿ ಕಾಣುವುದು. ಮತ್ತು ಕ್ರಿ.ಶ. ೧೧೦೬ರಲ್ಲಿ ಹುಟ್ಟಿದ ಬಸವನಿಗೆ ಕ್ರಿ.ಶ. ೧೧೧೪ ರ ವೇಳೆಗೆ ನಡೆದ ಉಪನಯನಕ್ಕೆ ಬಿಜ್ಜಳನ ಮಂತ್ರಿಯಾದ ಬಲದೇವನು ಬಂದಿದ್ದನೆಂಬುದು ತೀರ ಅಸಂಭಾವ್ಯ. ಏಕೆಂದರೆ ಆ ವೇಳೆಗೆ ಬಹುಶಃ ಬಿಜ್ಜಳನೇ ಹುಟ್ಟಿರುವುದಿಲ್ಲವಾಗಬಹುದು. ಆತನು ತನ್ನ ತಂದೆಯಿಂದ ರಾಜ್ಯಭಾರ ವಹಿಸಿಕೊಂಡುದೇ ಕ್ರಿ.ಶ. ೧೧೪೦ರಷ್ಟು ಈಚೆಗೆ.... ಆದುದರಿಂದ ಬಸವನು ಹುಟ್ಟಿದ ವರ್ಷವನ್ನು ಕ್ರಿ.ಶ. ೧೦೪೦ರ ಹಿಂದು ಮುಂದಕ್ಕೆ ಒಯ್ದಂತೆಲ್ಲ, ಸತ್ಯವೂ ದೂರವಾಗುತ್ತ ಹೋಗುವುದಲ್ಲದೆ, ಬಸವನ ಜೀವನದಲ್ಲಿ ನಡೆದಿರಬಹುದಾದ ವಾಸ್ತವಿಕಾಂಶಗಳೆಲ್ಲ ಮುಂದುಹಿಂದಾಗುತ್ತವೆ' ಎಂದು ಅಭಿಪ್ರಾಯಪಟ್ಟಿದ್ದಾರೆ. ('ಉಪಾಯನ'; ಪು. ೧೯೫)

ಇನ್ನು ಬಸವ ಜನನವನ್ನು ೧೧೩೦–೩೧ರಿಂದ ಆಚೆ ಒಯ್ಯುವುದರಿಂದ ಅಸಂಗತತೆಗಳು ಉದ್ಭವಿಸುವುದಿಲ್ಲವೆ? ನೋಡೋಣ. ಡಾ| ಎಲ್. ಬಸವರಾಜು ಅವರ ಅಭಿಪ್ರಾಯದಂತೆ ಬಸವಣ್ಣನವರು ಹುಟ್ಟಿದುದು ಕ್ರಿ.ಶ. ೧೧೪೦ರಲ್ಲಿ ಎಂದು ಇಟ್ಟುಕೊಂಡರೆ ಬಸವಣ್ಣನವರು ಹುಟ್ಟಿದುದು ಕ್ರಿ.ಶ. ೧೧೪೦ರಲ್ಲಿ ಎಂದು ಇಟ್ಟುಕೊಂಡರೆ ಬಸವಣ್ಣನವರು ಕಲ್ಯಾಣವನ್ನು ಬಿಟ್ಟಾಗ ಅವರಿಗೆ ಕೇವಲ ೨೭–೨೮ ವರ್ಷ ವಯಸ್ಸಾಗಿದ್ದಿತೆಂದು ನಂಬಬೇಕಾಗುತ್ತದೆ; ಅಲ್ಲದೆ, ೧೧೫೬ರಲ್ಲಿ ಅವರಿಗೆ ಮದುವೆಯಾಗಿರಬಹುದಾದುದರಿಂದ ಹದಿನಾರನೆಯ ವಯಸ್ಸಿನಲ್ಲಿಯೇ ಅವರು ಮದುವೆಯಾದರೆಂದು ಹೇಳಬೇಕಾಗುತ್ತದೆ. ಚನ್ನಬಸವಣ್ಣನವರು ಕೂಡಲ ಸಂಗಮದಲ್ಲಿರುವಾಗಲೇ ಹುಟ್ಟಿದ್ದರೆಂದಿಟ್ಟುಕೊಂಡು ಅವರ ವಯಸ್ಸಿನ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದಾದರೂ ಬಸವಣ್ಣನವರ ವಯಸ್ಸಿನ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ಹೇಗೆ? ಅಲ್ಲದೆ, ಕಲ್ಯಾಣ ಬಿಟ್ಟ ತರುವಾಯದಲ್ಲಿಯೂ, ಬಿಜ್ಜಳನಳಿದ ಮೇಲೂ ಅವರ ೧೧೮೦ರವರೆಗೆ ಕೂಡಲಸಂಗಮದಲ್ಲಿ ಜೀವಿಸಿದ್ದರೆ ಅಜ್ಞಾತವಾಸದಲ್ಲಿದ್ದರೆ ಇಲ್ಲವೆ ತಮ್ಮ ಮಾನವೋದ್ಧರಣ ಕಾರ್ಯವನ್ನು ಮುಂದುವರಿಸಿದ್ದರೆ? ಅಜ್ಞಾತವಾಸದಲ್ಲಿದ್ದರೆ ಅವರ ವಚನಗಳಲ್ಲಿ ಪ್ರಖರವಾಗಿ ಪ್ರಕಟವಾಗಿರುವ, ಅವರ ಸಮಕಾಲೀನರ ವಚನಗಳಲ್ಲಿ ಪುಷ್ಟಿಪಡೆದಿರುವ, ಅವರ ಮಹೋಜ್ವಲ ಮಹಾವ್ಯಕ್ತಿತ್ವಕ್ಕೆ ಇದು ಸರಿಹೋಗುವುದೆ? ಸಿಂಗಿರಾಜ ಪುರಾಣ, ಶಿವತತ್ತ್ವ

ಚಿಂತಾಮಣಿಗಳೆರಡರಲ್ಲಿಯೂ ಉಲ್ಲೇಖಿತವಾಗಿರುವ, ಬಸವಣ್ಣನವರು ಬಿಜ್ಜಳನ ಆದೇಶದಂತೆ ಮಂತ್ರಿ ಪದಕ್ಕೆ ತ್ಯಾಗಪತ್ರವಿತ್ತು ಮ್ತಿಘಟ್ಟದಲ್ಲಿ ಕೆಲವು ದಿನ ಬಿಡಾರ ಮಾಡಿದಾಗ ಅಲ್ಲಿಗೂ ಶಿವಶರಣರು ಬರತೊಡಗಿದುದನ್ನೂ ಅಂತಹ ಸ್ಥಿತಿಯಲ್ಲಿಯೂ ಬಂದ ಭಕ್ತರಿಗೆ ಬಸವಣ್ಣನವರು ಅವರವರ ಇಷ್ಟಾರ್ಥಗಳನ್ನು ನೆರವೇರಿಸಿಕೊಡುತ್ತಿದ್ದರೆಂಬುದನ್ನೂ ನೆನೆದಾಗ ೧೧೬೭ ರಿಂದ ೧೧೮೦ರವರೆಗೆ ಸುಮಾರು ಹದಿಮೂರು ವರ್ಷ ಬಸವಣ್ಣನವರು ಏಕಾಂತ ಜೀವನ ನಡೆಸಿದರೆಂಬುದನ್ನು ನಂಬುವುದು ಹೇಗೆ? ೧೧೩೧-೩೨ನ್ನುಳಿದು ಬೇರೆ ಯಾವ ಜನನ ಕಾಲವನ್ನು ಅಂಗೀಕರಿಸಿದರೂ ಸುಸಂಗತತೆಗಿಂತ ವಿಸಂಗತತೆಗಳೆ ಹೆಚ್ಚು ಒಡಮೂಡುವುದಾಗಿ ೧೧೩೧-೩೨ನ್ನೇ ಒಪ್ಪಿಕೊಳ್ಳುವುದು ವಿಹಿತ.

೨. 'ಶಿವತತ್ತ್ವ ಚಿಂತಾಮಣಿ' ಮತ್ತು 'ಸಿಂಗಿರಾಜ ಪುರಾಣ'ಗಳಲ್ಲಿ ಬಸವಣ್ಣನವರು ಕೂಡಲಸಂಗಮದಲ್ಲಿ ಸಾಧನೆಯಲ್ಲಿದ್ದಾಗ ಜರುಗಿದ ಒಂದು ಘಟನೆಯ ಪ್ರಸ್ತಾಪ ಬರುತ್ತದೆ. ಬಸವಣ್ಣನವರಲ್ಲಿರುವಾಗಲೇ ಒಮ್ಮೆ ಸಂಗಮದಲ್ಲಿ ಜಾತ್ರೆ ಸೇರುವ ಸಮಯಕ್ಕೆ ಸರಿಯಾಗಿ ಕಪಿಲಷಷ್ಠಿಯ ಸುಮುಹೂರ್ತವೂ ಸಂಭವಿಸಿತಂತೆ, ಅದು ಸ್ನಾನ ಪೂಜಾದಿಗಳಿಗಾಗಿ ಅನೇಕ ಪಂಡಿತರನ್ನೂ ಬ್ರಾಹ್ಮಣರನ್ನೂ ಕೂಡಲ ಸಂಗಮ ಸುಕ್ಷೇತ್ರಕ್ಕೆ ಆಕರ್ಷಿಸಿತಂತೆ. ಬಸವಣ್ಣನವರು ಅವರೆಲ್ಲರ ಕರ್ಮಪ್ರಧಾನ ಪೂಜಾ ವಿಧಾನವನ್ನು ಖಂಡಿಸಿ ತಮ್ಮ ನಿರ್ಮಲ ಭಕ್ತಿಪ್ರಧಾನ ಪೂಜಾವಿಧಾನವನ್ನು ಸಮರ್ಥಿಸಿ ಸಫಲರಾದರಂತೆ. ಈ ಯಶಸ್ಸು ಅವರ ಯಶೋಧುಂದುಭಿಯನ್ನು ದಶದಿಕ್ಕುಗಳಲ್ಲಿ ಮೊಳಗಿಸಿ ಬಲದೇವನ ಮನಸ್ಸಿನಲ್ಲಿ ಬಸವಣ್ಣನವರನ್ನು ತನ್ನ ಅಳಿಯನ್ನಾಗಿ ಮಾಡಿಕೊಳ್ಳಬೇಕೆಂಬ ಆತುರವನ್ನು ಮೂಡಿಸಿತಂತೆ.

ಈ ಕಪಿಲಷಷ್ಠಿ ೧೧೫೪ರಲ್ಲಿ ಬಂದಿತ್ತೆಂದು ತಿಳಿದುಬರುತ್ತದೆ. ಡಾ. ಎಲ್. ಬಸವರಾಜು ಅವರು ಹುಲುಗೂರು ಮಣಿಗವಳ್ಳಿ ಶಾಸನಗಳ ಆಧಾರದ ಮೇರೆಗೆ ಈ ಕಪಿಲಷಷ್ಠಿ ೧೧೬೧ರಲ್ಲಿ ಬಂದಿದ್ದಿತೆಂದು ತೀರ್ಮಾನಿಸಿದ್ದಾರೆ. ಇವುಗಳಲ್ಲಿ ಯಾವುದನ್ನು ಒಪ್ಪಿದರೂ ಬಸವಣ್ಣನವರ ಜನ್ಮಕಾಲ ೧೧೦೬ ಎಂಬ ಊಹೆ ಮುಗ್ಗರಿಸುತ್ತದೆ. ಬಸವಣ್ಣನವರು ತಮ್ಮ ೪೮ನೆಯ ಇಲ್ಲದೆ ೫೫ನೆಯ ವಯಸ್ಸಿನವರೆಗೆ ಕೂಡಲಸಂಗಮದಲ್ಲಿ ಅವಿವಾಹಿತ ಸಾಧಕರಾಗಿಯೇ, ಇಲ್ಲವೆ ವಿವಾಹಿತ ವ್ಯಕ್ತಿಯಾಗಿಯೇ ಇದ್ದರೆನ್ನುವುದು ಅಗ್ರಾಹ್ಯವೆನಿಸುತ್ತದೆ. ಈ ದೃಷ್ಟಿಯಿಂದ ನೋಡಿದರೂ ೧೧೩೧-೩೨ ಸಮಂಜಸವೆನಿಸುತ್ತದೆ.

೩. ಕಾಲಜ್ಞಾನದ ವಚನಗಳು ಅಷ್ಟು ಪ್ರಬಲವಾದ ಆಧಾರಗಳೆಲ್ಲ. ಅವುಗಳಲ್ಲಿಪರಸ್ಪರ ವಿರುದ್ಧವಾದ ಹೇಳಿಕೆಗಳೂ ಇಲ್ಲದಿಲ್ಲ. ಆದರೂ ಎರಡು ಕಡೆ ಒಂದೆ ಅಭಿಪ್ರಾಯ ವ್ಯಕ್ತಪಟ್ಟಿದ್ದರೆ, ಅದು ಇತರ ಪ್ರಮಾಣಗಳಿಗೆ ಪುಷ್ಟಿಯನ್ನೀಯುತ್ತಿದ್ದರೆ ಅದನ್ನು ಉಪೇಕ್ಷಿಸಲೂ ಆಗುವುದಿಲ್ಲ. ಅಂಥ ಎರಡು ಹೇಳಿಕೆಗಳು ಇಲ್ಲಿವೆ: 'ಇತ್ತ ಬಸವರಾಜದೇವರು ರಾಕ್ಷಸನಾಮ ಸಂವತ್ಸರದ ಶ್ರಾವಣ ಶುದ್ಧ ಪಾಡ್ಯ ಮಂಗಳವಾರ ಉದಯವಾದ ಇಪ್ಪತ್ತೈದು ಗಳಿಗೆಗೆ

ಕೂಡಲಸಂಗಮೇಶ್ವರನೊಳಗೆ ಬಯಲಾದರು. ೩೬ ವರುಷ ಮರ್ತ್ಯದಲ್ಲಿದ್ದರು' – ಇದು 'ಎಲ್ಲ ಪುರಾತನರು ನಿರೂಪಿಸಿದ ಕಾಲಜ್ಞಾನದ ವಚನ'ದಲ್ಲಿ ಉಲ್ಲಿಖಿತವಾದ ಹೇಳಿಕೆ.

'ಬಸವರಾಜದೇವರಿಗೆ ಕೈಲಾಸದಲ್ಲಿ ದ್ವಾರಪಾಲಕರು ತಡೆದ ಕಾರಣ ಮರ್ತ್ಯಕ್ಕೆ ಕಳುಹಿಸಿಕೊಂಡು ಬಂದು ಇಂದಿಗೂ ಮೂವತ್ತಾರು ವರುಷವಾಯಿತು', ಇದು 'ಕಾಲಜ್ಞಾನ ವಚನ'ದಲ್ಲಿ ಉಕ್ತವಾದ ಹೇಳಿಕೆ. ಈ ಸ್ಪಷ್ಟವಾದ ಹೇಳಿಕೆ ಇದೇ ಕಾಲಜ್ಞಾನ ವಚನದ ಪುಟ ೪೦ರಲ್ಲಿರುವ ದ್ವಂದ್ವಾರ್ಥಸೂಚಕ ಸಂದಿಗ್ಧತೆಯ ವಚನದಿಂದುಂಟಾಗಬಹುದಾದ ೩೬ ವರ್ಷಗಳ ಕಲ್ಯಾಣದ ವಾಸ್ತವ್ಯದ ಕಲ್ಪನೆಯನ್ನು ಅಳಿಸುತ್ತದೆ. 'ಕಾಲಜ್ಞಾನದ ವಚನಗಳಲ್ಲಿ ಬಸವಣ್ಣನವರ ಜನನದ ಉಲ್ಲೇಖ ಬರುತ್ತದೆ. ಆ ಪ್ರಕಾರ ಕಲಿಯುಗ ೩೯೬೫ನೇ ವಿಕ್ರಮ ಸಂವತ್ಸರ ಶ್ರಾವಣ ಶುದ್ಧ ೫ನೇ ಸೋಮವಾರ ಬಸವೇಶ್ವರರ ಜನನವಾಯಿತೆಂದು ಹೇಳುತ್ತಾರೆ. ಇದು ಸಹ ತಜ್ಞರ ಕಾಲಗಣನೆಯಂತೆ ಕ್ರಿ.ಶ. ೧೧೩೧ನೆಯ ವರ್ಷಕ್ಕೆ ಸರಿಹೋಗುತ್ತದೆ. (ಡಾ. ಎಚ್. ತಿಪ್ಪೇರುದ್ರಸ್ವಾಮಿ : ಬಸವ ಪುರುಷ – ಪುಟ ೯೪)

ಇದನ್ನು ಪುಷ್ಟೀಕರಿಸುವ ಇನ್ನೊಂದು ಆಧಾರವನ್ನು ಇಲ್ಲಿ ಗಮನಿಸಬಹುದು, 'ವಿಮರ್ಶನಾಗ್ರೇಸರ' ಶ್ರೀ ಬಂಡಾರು ತಮ್ಮಯ್ಯನವರು ಪರಿಷ್ಕರಿಸಿ ಪ್ರಕಟಿಸಿರುವ ಪಾಲ್ಕುರಿಕೆ ಸೋಮನಾಥಪ್ರಣೀತ ತೆಲುಗು ಬಸವಪುರಾಣದ ಪ್ರಸ್ತಾವನೆಯಲ್ಲಿ ಸೋಮನಾಥನ ಕಾಲವನ್ನು ಕುರಿತ ಭಾಗದಲ್ಲಿ ಹೀಗೆ ಹೇಳಿದ್ದಾರೆ: 'ಶ್ರೀ ಬಸವೇಶ್ವರರ ಸಂದರ್ಶನಾರ್ಥ ಶ್ರೀ ಮಲ್ಲಿಕಾರ್ಜುನ ಪಂಡಿತರು ಕಲ್ಯಾಣಕ್ಕೆ ಹೊರಟರು. ಹಾದಿಯಲ್ಲಿ ವನಿಪುರ ಗ್ರಾಮದಲ್ಲಿ ಬಿಡಾರ ಮಾಡಿದರು.ಅತ್ತಣಿಂದ ಬಂದ ಕೆಲವು ಭಕ್ತರಿಂದ ಅಂದಿಗೆ ಒಂದು ವಾರ ಮೊದಲೇ ಕಲ್ಯಾಣದಲ್ಲಿ ಘಟಿಸಿದ ಗಜಿಬಿಜಿಯಿಂದಾಗಿ ಶ್ರೀ ಬಸವೇಶ್ವರರ ಅವತಾರ ಮುಗಿದು ಅವರು ಸಂಗಮೇಶ್ವರನಲ್ಲಿ ಐಕ್ಯಾರಾದರೆಂಬ ಸುದ್ದಿ ಅವರಿಗೆ ತಿಳಿಯಲು ಅವರು ಪ್ರಲಾಪಿಸಿ, ಬಸವೇಶ್ವರರ ತರುವಾಯ ತಾವು ಪ್ರಪಂಚದಲ್ಲಿರುವುದರಲ್ಲಿ ಪ್ರಯೋಜನವಿಲ್ಲವೆಂದು ಬಗೆದು ಕಲ್ಯಾಣಯಾತ್ರೆ ನಿಲ್ಲಿಸಿ ಶ್ರೀಶೈಲಕ್ಕೆ ಮರಳುತ್ತಾರೆ. ಶ್ರೀಗಿರಿಯ ಪ್ರದಕ್ಷಿಣಿ ಮಾಡಿ, ಶಿವರಾತ್ರಿ ವ್ರತವನಾಚರಿಸಿ, ಸಂಗಮೇಶ್ವರ ಕ್ಷೇತ್ರದಲ್ಲಿ ಬಸವೇಶ್ವರನಿಗಿಂಬುಗೊಟ್ಟಂತೆ ತಮ್ಮನ್ನೂ ಐಕ್ಯ ಮಾಡಿಕೊಳ್ಳಬೇಕೆಂದು ಮಲ್ಲಿಕಾರ್ಜುನಸ್ವಾಮಿಯನ್ನು ಪ್ರಾರ್ಥಿಸಿದರೆಂದು ಸೋಮನಾಥನು ಪಂಡಿತಾರಾಧ್ಯ ಚರಿತ್ರೆಯಲ್ಲಿ ಹೇಳಿದ್ದಾನೆ. ಅಂತೆಯೇ, ಬಸವೇಶ್ವರರ ತರುವಾಯ ಒಂದೆರಡು ವರ್ಷಗಳಲ್ಲಿಯೇ ಮಲ್ಲಿಕಾರ್ಜುನ ಪಂಡಿತರು ಕ್ರಿ.ಶ. ೧೧೭೦ರ ಸುಮಾರಿಗೆ ಮರಣಹೊಂದಿದರೆಂಬುದನ್ನು ಬಹಳ ಮಂದಿ ಚರಿತ್ರಜ್ಞರು ಅಂಗೀರಕರಿಸಿದ್ದಾರೆ.' ಇದು ಬಸವಣ್ಣನವರ ಲಿಂಗೈಕ್ಯ ೧೧೬೭ರ ಆಚರ ಆಗಿರಲಾರದೆಂಬುದಕ್ಕೆ ಬಲವಾದ ಆಧಾರ. ಇದಕ್ಕೆ ಹಿಂದೆ ೩೬ ವರ್ಷ ಹೋದರೆ ದೊರೆಯುವುದು ೧೧೩೦–೩೧ ಮಾತ್ರ.

ಇನ್ನು ಬಸವಣ್ಣನವರು ಹುಟ್ಟಿದ ವರ್ಷ ೧೧೦೫-೬ ಎಂಬ ವಾದಕ್ಕೆ ದೊರೆವ ಆಧಾರಗಳನ್ನು ಪರೀಕ್ಷಿಸಬೇಕು:

(೧) ವ್ಯಾಸಕೃತ ಬಸವಪುರಾಣದ ಆಧಾರ :
'ತತಃ ಪುಣ್ಯ ಮುಹೂರ್ತೇಷು ಸರ್ವಲಕ್ಷಣ ಸಂಯುತೆ।
ಮೀನಸ್ಥಿತೇ ಭೃಗೋಃ ಪುತ್ರೇ ಮೇಷಸ್ಥೇಚ ದಿವಾಕರೇ॥
ತುಲಾ ಸ್ಥಿತೇಚ ತತ್ಪುತ್ರೇ ಕರ್ಕಟಸ್ಥ ಬೃಹಸ್ಪತೌ।
ಶಶಾಂಕೇ ರೋಹಿಣೀ ಸಂಸ್ಥೇ ಮರಕಸ್ಥೇಚ ಭೂಸುತೇ॥
ಶಿಶೋರರ್ಧೋದಯೇ ಜಾತೇ ಲಗ್ನೇ ಕರ್ಕಟ ಸಂಜ್ಞಕೇ।
ಸಂಗಮೇಶಸ್ತದಾತೂರ್ಣಮದೃಶ್ಯಸ್ತ್ರಂ ಸಮಾಯಯೌ॥'

ಇದರ ಪ್ರಕಾರ ಸರ್ವಲಕ್ಷಣಸಂಯುತ ಪುಣ್ಯ ಮುಹೂರ್ತದಲ್ಲಿ ಮೀನ ರಾಶಿಯಲ್ಲಿ ಶುಕ್ರನು, ಮೇಷದಲ್ಲಿ ಸೂರ್ಯನು, ತುಲಾರಾಶಿಯಲ್ಲಿ ಶನಿಯು, ಕಟಕ ರಾಶಿಯಲ್ಲಿ ಗುರುವು, ರೋಹಿಣಿಯಲ್ಲಿ ಚಂದ್ರನು, ಮಕರದಲ್ಲಿ ಅಂಗಾರಕನು ಇದ್ದಾಗ, ಕಟಕಲಗ್ನ ಹುಟ್ಟುತ್ತಲಿದ್ದಾಗ ಶಿಶುವಿನ ಉದಯವಾಯಿತು. ಅಲ್ಲಿಗೆ ಆಗ ಅಗೋಚರನಾಗಿ ಸಂಗಮೇಶ್ವರನು ಬಂದನು. ಇದನ್ನವಲಂಬಿಸಿ ಶ್ರೀ ಶಾಂತಪ್ಪಾಜಿ ಎನ್ನುವವರು ಜನ್ಮಕುಂಡಲಿಯನ್ನು ಬರೆದಿದ್ದಾರೆ. ಇದರ ಪ್ರಕಾರ 'ಮನ್ಮಥ ಸಂವತ್ಸರದ ವೈಶಾಖ ಶುದ್ಧ ತೃತೀಯ ರೋಹಿಣೀ ನಕ್ಷತ್ರದ ಕಾಲಕ್ಕೆ' ಬಸವಣ್ಣನವರು ಹುಟ್ಟಿದರೆಂದೂ ಅದು ಕ್ರಿ.ಶ. ೧೧೧೫ಕ್ಕೆ ಸಂವಾದಿಯಾಗುತ್ತದೆಂದೂ ನಿರ್ಧರಿಸಿದ್ದಾರೆ. ಇದನ್ನೇ ವಿಕ್ರಮಶಕೆಯ ಪ್ರಕಾರ ಲೆಕ್ಕ ಮಾಡಿದರೆ ಬಸವಣ್ಣನವರ ಜನನ ಕ್ರಿ.ಶ. ೧೧೦೬ರಲ್ಲಿ ಆಗಿರಬೇಕೆಂದು ಶ್ರೀ ಮಲ್ಲಿಕಾರ್ಜುನರು ತರ್ಕಿಸಿದ್ದಾರೆ.

ಇದರ ಬಗ್ಗೆ ಪ್ರಸಿದ್ಧ ಇತಿಹಾಸಕಾರರಾದ ಡಾ. ಪಿ.ಬಿ. ದೇಸಾಯಿ ಅವರ ಅಭಿಪ್ರಾಯ ಇಂತಿದೆ : 'In the sanskrit Basavapurana of Vyasa, a work of about the fifteenth centrury, the date of birth of Basavesvara is cited with astronomical details, According to the calculations made by a modern scholar recently, this corresponds to vaisakha su. 3, Rohini nakshatra. This date has many loopholes. The cyclic year is unknown and the tithi also is questionable. An important detail, namely, the Archodaya cited therein, is not taken into consideration. This yoga, as stated above, occurs on Magha amavasya and not in vaisakha. Hence we have to set this date aside.' (Basavesvara and His Times - Page 282-3). ಪಾಲ್ಕುರಿಕೆ

ಸೋಮನಾಥನೂ (ತೆಲುಗು ಬಸವಪುರಾಣ – ಆಶ್ವಾಸ ೩, ಪು. ೩೬) ಮತ್ತು ಅವನನ್ನನುಸರಿಸಿ ಭೀಮಕವಿಯೂ (ಬಸವಪುರಾಣ : ಸಂಧಿ ೩, ಪದ್ಯ ೨೪), ಎರಡೂ ಸಂಸ್ಕೃತ ಬಸವಪುರಾಣಗಳೂ (ವೀರಶೈವ–ಸಂಪುಟ ೪, ಸಂಚಿಕೆಗಳು ೨–೩, ಪುಟಗಳು ೭೩ ಮತ್ತು ೭೫) ಅಘೋರ್ಽದಯದಲ್ಲಿ ಬಸವಣ್ಣನವರ ಜನನವನ್ನು ಹೇಳುತ್ತಿವೆ. ಆದರೆ ಎಲ್ಲಿಯೂ ಶಕೆ, ವರ್ಷಗಳ ಪ್ರಸ್ತಾಪವಿಲ್ಲವಾಗಿ ಇವುಗಳ ಆಧಾರದ ಮೇಲೆ ಬಸವ ಜನನವರ್ಷವನ್ನು ನಿರ್ಧರಿಸುವುದೊಂದು ಪಾಂಡಿತ್ಯದ ಕಸರತ್ತಿನ ಕೆಲಸವಾಗಿ ಪರಿಣಮಿಸಿದೆ.

೨) 'ಬಸವಣ್ಣನವರು ಮೂವತ್ತಾರು ವರ್ಷ ಜೀವಿಸಿದ್ದರೇಂದು ಸಾಮಾನ್ಯ ಗ್ರಹಿಕೆ. ಆದುದರಿಂದ ಅವರು ಕ್ರಿ.ಶ. ೧೧೩೧ರಲ್ಲಿ ಜನಿಸಿರಬೇಕೆಂಬ ಊಹೆ ಪ್ರಚಲಿತವಾಗಿದೆ. ಇದಕ್ಕನುರೂಪವಾಗಿ ವಿಕ್ರಮ ಸಂವತ್ಸರದಲ್ಲಿ ಅವರ ಜನನವಾಯಿತೆಂದೂ ರಾಕ್ಷಸದಲ್ಲಿ ಅವರು ಲಿಂಗೈಕ್ಯರಾದರೆಂದೂ ಕೆಲವು ಗ್ರಂಥಗಳು ಹೇಳುತ್ತವೆ. ಆದರೆ ಚನ್ನಬಸವಣ್ಣನವರು ತಮ್ಮ ಐಕ್ಯಸ್ಥಲದ ಒಂದು ವಚನದಲ್ಲಿ 'ನಾನು ಬಂದ ಮಣಿಹ ಈ ರಾಕ್ಷಸ ಸಂವತ್ಸರದ ಇಂದಿಗೇ ಸಾಧ್ಯವಾಯಿತ್ತು. ಬಸವರಾಜ ದೇವರಿಗೆ ಅನಿಮಿಷನ ಕತದಿಂದ ಮರ್ತ್ಯಕ್ಕೆ ಕಳುಹಿಸಿಕೊಂಡು ಬಂದು ಇಂದಿಗೆ ಮೂವತ್ತಾರು ವರುಷವಾಯ್ತು' ಎಂದು ಹೇಳಿರುವುದನ್ನು ಆಲೋಚಿಸಿದರೆ ಮೇಲಿನ ಲೆಕ್ಕದ ಮೇರೆಗೆ ಕಲ್ಯಾಣ ಬಿಡುವಾಗ ಚನ್ನಬಸವಣ್ಣನವರಿಗೆ ಹನ್ನೆರಡೇ ವರ್ಷಗಳಾಗಿರಬೇಕೆಂದು ಊಹಿಸಬೇಕಾಗುತ್ತದೆ. ಆದರೆ ಕಲ್ಯಾಣದಲ್ಲಿರುವಾಗಲೇ ಚನ್ನಬಸವಣ್ಣನವರು ಚಿಕ್ಕ ದಣ್ಣಾಯಕರಾಗಿದ್ದರೆಂದೂ, ಬಸವಣ್ಣ ಪ್ರಭುದೇವರೊಡನೆ ಅನುಭವಗೋಷ್ಠಿ ಮಾಡುತ್ತಿದ್ದರೆಂದೂ, ಆಲೋಚಿಸಿದರೆ ಅವರು ಆಗ ಪ್ರೌಢವಯಸ್ಕರಾಗಿದ್ದರೆಂದೇ ಹೇಳಬೇಕಾಗುವುದು. (ಲಿಂ. ಶಿ. ಶಿ. ಬಸವನಾಳರು : ಬಸವನಾಳ ಸ್ಮಾರಕ ಸಂಪುಟದಲ್ಲಿ – ಪುಟಗಳು ೪೭೪–೪೭೫).

ಈ ಆಧಾರ ಬಹಳವಾದರೆ ಚನ್ನಬಸವಣ್ಣನವರ ವಯಸ್ಸು ತಪ್ಪೆಂದು ಸಿದ್ಧಪಡಿಸಲು ಸಹಾಯವಾಗುತ್ತದೆ. ಆದರೆ 'ಅನಿಮಿಷನ ಕತದಿಂದ ಬಸವರಾಜದೇವರು ಮರ್ತ್ಯಕ್ಕೆ ಕಳುಹಿಸಿಕೊಂಡು ಬಂದು ಮೂವತ್ತಾರು ವರುಷಗಳಾದು'ವೆಂದು ಬೇರೆ ಉಲ್ಲೇಖಗಳು ದೊರೆಯುವುದರಿಂದ ಅದು ಸರಿಯೆಂದೂ, ಚೆನ್ನಬಸವಣ್ಣನವರು ಹನ್ನೆರಡೇ ವರ್ಷ ಜೀವಿಸಿದ್ದರೆಂಬುದಕ್ಕೆ ಬೇರೆ ದಾಖಲೆಗಳು ದೊರೆಯುವುದಿಲ್ಲವಾಗಿ ಅದು ಸರಿಯಲ್ಲವೆಂದೂ ಸಾಧಿಸಬಹುದು.

೩) (ಅ) ವಿವಾದಾಸ್ಪದವೆನಿಸಿರುವ 'ಮುಕ್ತಿ ಕಂಠಾಭರಣ'ದ ೨೫೬ನೆಯ ವಚನವಿಂತಿದೆ:

'ಅಯ್ಯ, ಭಕ್ತಿಗೆ ಬೀಡಾದುದು ಕಲ್ಯಾಣ ಮೂವತ್ತಾರು ವರ್ಷ;
ಅಯ್ಯಾ, ಅಭವಕ್ಕೆ ಶಿವಸದನವಾದುದು ಇಪ್ಪತ್ತೇಳು ವರ್ಷ;
ಅಯ್ಯಾ, ಹಿಂದಿನಂತನುಭಾವ ಹಿಂದಿನಂತೆ ಭಕ್ತಿ ಇಲ್ಲ;

ಮೂರು ಮಾಸದೊಳಗಾಗಿ ಅಲ್ಲಿ ಆಡಲು ಉಭಯವಿಲ್ಲವಯ್ಯ –
ಕೇಳಯ್ಯ, ಕೂಡಲಸಂಗಮದೇವಾ!"

(ಬ) 'ನಿರಂಜನ ವಂಶರತ್ನಾಕರ'ದಲ್ಲಿ ಬಸವಣ್ಣನವರು ೩೬ ವರ್ಷ ಬಿಜ್ಜಳನಲ್ಲಿ ಪ್ರಧಾನಪಟ್ಟವನ್ನು ಮಾಡಿದರೆಂದು ಹೇಳಿದೆ.

(ಕ) ಶರಣ ಲೀಲಾಮೃತದಲ್ಲಿ ಬಸವಣ್ಣನವರು ಕಲ್ಯಾಣಕ್ಕೆ ಬಂದುದು ವಿಕ್ರಮ ಸಂವತ್ಸರದಲ್ಲಿಯೆಂದೂ, ಕಲ್ಯಾಣವನ್ನು ಬಿಟ್ಟುದು ರಾಕ್ಷಸವೆಂತಲೂ ಹೇಳಿದೆ.

ಈ ಮೂರನ್ನು ಒಟ್ಟಿಗೆ ಆಲೋಚಿಸೋಣ. ಮೊದಲು ಶರಣಲೀಲಾ ಮೃತದ ಸಂವತ್ಸರಗಳ ಸಮಾಚಾರ ತಕ್ಕೊಳ್ಳೋಣ. ಬಸವಾದಿ ಪ್ರಮಥರ ಬಗ್ಗೆ ಪುರಾಣಗಳಲ್ಲಿ, ಕಾಲಜ್ಞಾನದ ವಚನಗಳಲ್ಲಿ ಉಕ್ತವಾಗಿರುವ ಸಂವತ್ಸರಗಳಾವುವೂ ವಿಶ್ವಾಸಾರ್ಹವಲ್ಲವೆಂದು ಸ್ಥೂಲವಾಗಿ ಹೇಳಬಹುದು. ತಮತಮಗೆ ತಿಳಿದಂತೆ ಬೇರೆ ಬೇರೆ ಕೃತಿಕರ್ತರು ಬೇರೆ ಬೇರೆ ತಿಥಿ, ಮಾಸ, ನಕ್ಷತ್ರ, ಸಂವತ್ಸರಗಳ ಹೆಸರು ಹೇಳಿ ಗೊಂದಲಪುರವನ್ನೇ ಕಟ್ಟಿ ನಿಲ್ಲಿಸಿದ್ದಾರೆ. ಈಗ ವಿಕ್ರಮ. ರಾಕ್ಷಸ ಸಂವತ್ಸರಗಳು ಬಸವಣ್ಣನವರ ಜೀವಿತ ಕಾಲಾವಧಿಯಲ್ಲಿ ಬಂದಿದ್ದುವೇ ಇಲ್ಲವೆ ಎಂಬುದನ್ನು ನೋಡೋಣ. ಯಾರೇನು ಹೇಳಿದರೂ ಬಿಜ್ಜಳನು ಕಲ್ಯಾಣದಲ್ಲಿ ಚಕ್ರವರ್ತಿಯಾಗಿ ಆಳಿದುದು ೧೧೬೨ರಿಂದ ೧೧೬೮ರವರೆಗೆ ಮಾತ್ರ ಎಂಬುದನ್ನು ಬದಲಿಸಲು ಬಾರದಷ್ಟೆ? ಬಸವಣ್ಣನವರು ಕಲ್ಯಾಣವನ್ನು ಬಿಟ್ಟುದು ೧೧೬೭ರ ಕೊನೆಗೆಂಬುದೂ ಕೊನೆಯ ತೀರ್ಮಾನದ ಹಂತಕ್ಕೆ ತಲುಪಿದೆ. ಆದುದರಿಂದ ಈ ವರ್ಷ ರಾಕ್ಷಸನಾಮ ಸಂವತ್ಸರಕ್ಕೆ ಹೊಂದಿಕೆಯಾಗಬೇಕು. ಆದರೆ ರಾಕ್ಷಸನಾಮ ಸಂವತ್ಸರ ಬರುವುದು ಕ್ರಿ.ಶ. ೧೧೩೫–೩೬ರಲ್ಲಿ ಅಥವಾ ೧೧೯೫–೯೬ರಲ್ಲಿ, ಈ ಎರಡೂ ಬಸವಣ್ಣನವರು ಕಲ್ಯಾಣ ಬಿಟ್ಟ ವರ್ಷಗಳಾಗಲಾರವು. ಹೀಗೆಯೇ ವಿಕ್ರಮ ಸಂವತ್ಸರವೂ ಬಸವಣ್ಣನವರು ಕಲ್ಯಾಣಕ್ಕೆ ಬಂದ ವರ್ಷವಾಗಲಾರದು. ಅದು ಬಂದದ್ದು ಒಮ್ಮೆ ಕ್ರಿ.ಶ. ೧೧೦೦ರಲ್ಲಿ, ಇನ್ನೊಮ್ಮೆ ೧೧೬೦ರಲ್ಲಿ. ಇವುಗಳಲ್ಲಿ ೧೧೬೦ಕ್ಕೆ ಬಸವಣ್ಣನವರು ಕಲ್ಯಾಣಕ್ಕೆ ಬಂದರೆಂದಿಟ್ಟುಕೊಂಡರೆ ೧೧೯೬ರಲ್ಲಿ ಕಲ್ಯಾಣವನ್ನು ಅವರು ಬಿಡಬೇಕಾಗುತ್ತದೆ : ೧೧೦೦ರಲ್ಲಿ ಬರುವುದಂತೂ ಅಸಂಭವವಷ್ಟೆ?

ಇನ್ನು 'ಮುಕ್ತಿಕಂಠಾಭರಣ' 'ನಿರಂಜನವಂಶರತ್ನಾಕರ' ಗಳೊಳಗಣ ಉಲ್ಲೇಖನಗಳ ವಿಚಾರ, ಇವುಗಳ ಪ್ರಕಾರ ಬಸವಣ್ಣನವರು ೧೧೩೧ರಲ್ಲಿಯೇ ಕಲ್ಯಾಣಕ್ಕೋ ಇಲ್ಲವೆ ಮಂಗಳವಾಡಕ್ಕೋ ಹೋಗಬೇಕಾಗುತ್ತದೆ. ಮಂಗಳವಾಡಕ್ಕೇ ಹೋದರೆಂದರೆ ಯಾರ ಆಸ್ಥಾನಕ್ಕೆ ಹೋದರು? ಆಗ ಅಲ್ಲಿ ಬಿಜ್ಜಳನ ಆಳಿಕೆಯೂ ಇರಲಿಲ್ಲ. ಬಿಜ್ಜಳನ ಆಳ್ವಿಕೆಯಲ್ಲಿ ಆರಂಭವಾದುದು ಸುಮಾರು ೧೧೪೫ರ ಅವನ ತಂದೆ ಪೆರ್ಮಾಡಿಯ ತರುವಾಯ, ಹಾಗಾದರೆ ಬಸವಣ್ಣನವರು ಪೆರ್ಮಾಡಿಯ ಆಸ್ಥಾನಕ್ಕೆ ಹೋದರೆ ಇಲ್ಲವೆ ಆಗ

ಬನವಾಸಿಯಲ್ಲಿದ್ದ ಬಿಜ್ಜಳನ ಬಳಿಗೆ ಹೋದರೆ? ಹಾಗಾದರೆ, 'ಎಲೆ ಮಗನೆ, ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು' ಎಂಬ ಬಸವರಾಜದೇವರ ರಗಳೆಯ, ಬಸವಣ್ಣನವರು ಬಿಜ್ಜಳರಾಯನಿದ್ದ ಕಲ್ಯಾಣಕ್ಕೆ ಹೋದರೆಂಬ ಬಸವ ಪುರಾಣಾದಿಗಳ ಹೇಳಿಕೆಯ ಗತಿಯೇನು?

(೪) ಅರ್ಜುನವಾಡದ ಶಿಲಾಶಾಸನವನ್ನು ಆಧರಿಸಿ ಮೂವರು ವಿದ್ವಾಂಸರು ಬಸವಣ್ಣನವರ ಕಾಲನಿರ್ಣಯ ಮಾಡಿದ್ದಾರೆ. ಡಾ. ಪಾ.ಭೀ. ದೇಸಾಯಿಯವರು ಹೇಳಿರುವುದು ಹೀಗೆ: 'The Arjunavad inscription is dated 1260 A.D. On the basis of this year, we can suggest a provisional date for Basavesvara. For this we have to retrace back in time. From his description, Halabasavideva appears to have been of a fairly advanced age. Assuming that he was 60 years old at that time, his date of birth would be 1200 A.D. The maximum period for a generation is rackoned to be 30 years and this longer spare of calculation can reasonably be adopted in the present case, a family of religious persons. Going reverse the birth dates of Kalideva, Kavarasa and Devaraja would be 1170, 1140 and 1110 A.D. respectively, Lastly, Devaraja's younger brother, Basavaraja would have been born in about 1115 A.D. (Basvesvara and His Times : Page 437).

ಇದೇ ಶಾಸನವನ್ನು ಆಧರಿಸಿ ಡಾ. ಆರ್.ಸಿ. ಹಿರೇಮಠರು ಈ ನಿರ್ಣಯಕ್ಕೆ ಬಂದಿದ್ದಾರೆ. 'ಈ ಶಾಸನದ ಕಾಲ ಕ್ರಿ.ಶ. ೧೨೬೦ನೇ ಏಪ್ರಿಲ್ ೧೨ನೆಯ ಸೋಮವಾರ, ಹಾಲಬಸವಿದೇವನ ಕಾಲದಲ್ಲಿ ಕೆತ್ತಿದ ಈ ಶಾಸನದಲ್ಲಿ ಆತನನ್ನು ಮನೀಶನೆಂದೂ ಅಶನ–ವಸನಗಳನ್ನು ಗೆದ್ದಾತನೆಂದೂ ವರ್ಣಿಸಿರುವುದರಿಂದ ಆಗ ಅವನಿಗೆ ಸುಮಾರು ೫೦ ವರ್ಷಗಳಿಗೆ ಮಿಕ್ಕಿ ವಯಸ್ಸಾಗಿರಬೇಕು. ಅಲ್ಲಿಂದ ಹಿಂದೆ ತಲೆಗೆ ಇಪ್ಪತ್ತೈದು ವರ್ಷಗಳಂತೆ ಗಣನೆ ಮಾಡಿದರೆ ಬಸವಣ್ಣನವರ ಕಾಲ ಹಾಲಬಸವಿ ದೇವನ ಹಿಂದೆ ಸುಮಾರು ೧೩೦ ವರ್ಷ ಇರಬೇಕು. ಅಂದರೆ ಕ್ರಿ.ಶ. ೧೧೩೦ ಬಸವಣ್ಣನವರ ಕಾಲವೆಂದು ಇಟ್ಟುಕೊಳ್ಳಬೇಕಾಗುತ್ತದೆ. ಇದರಿಂದ ಬಸವಣ್ಣನವರ ಜನನ, ಬಾಲ್ಯ, ವಿದ್ಯಾಭ್ಯಾಸ ಮುಂತಾದುವೆಲ್ಲ ಕ್ರಿ.ಶ. ೧೧೩೦ರ ಪೂರ್ವದಲ್ಲಿಯೇ ಆಗಿರುವ ಸಂಭವವಿದೆ.' (ಷಟಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು : ಪುಟಗಳು ೧೮೭–೮೮)

ಈ ಶಾಸನದ ಆಧಾರದ ಮೇಲೆ ಬಸವಣ್ಣನವರ ವಂಶಚಿತ್ರವನ್ನು ಎಂಟು ಜನ ವಿದ್ವಾಂಸರು ಶಾಸನದ ತ್ರುಟಿತ ಅಕ್ಷರಗಳನ್ನು ತುಂಬಿಕೊಡುವುದರ ಮೂಲಕ ಎಂಟು ಬಗೆಯಾಗಿ ಹೊರಡಿಸಿದ್ದಾರೆ. ಅವರಲ್ಲಿ ಒಬ್ಬರಾದ ಡಾ. ಎಂ.ಎಂ. ಕಲಬುರ್ಗಿ 'ಹಾಲಬಸವಿದೇವನ ಕಾಲ ೧೨೬೦ ಇದ್ದು ತಲೆಮಾರಿಗೆ ೩೦ ವರ್ಷಗಳಂತೆ ಹಿಂದೆ ಹೋದರೂ ದೇವರಾಜನ ಕಾಲ ಕ್ರಿ.ಶ. ೧೨೦೦ ಆಗುವುದರಿಂದ ಈತನ ತಮ್ಮ ಬಸವಣ್ಣನು ಸುಮಾರು ಈ ಕಾಲದವನೇ ಎಂದು ಊಹಿಸಲಾಗಿದೆ' ಎಂದಿದ್ದಾರೆ. (ಶಾಸನಗಳಲ್ಲಿ ಶಿವಶರಣರು : ಪುಟ ೬೧; ಬಸವಪುರುಷ ; ಪುಟ ೨೭೦).

ಈ ಎಲ್ಲ ವಿವರಗಳಿಂದ ಈ ಶಾಸನವು ಖಚಿತವಾದ ಕಾಲನಿರ್ಣಯಕ್ಕೆ ಅಷ್ಟೊಂದು ಸಹಕಾರಿಯಲ್ಲವೆಂಬ ಅಂಶ ವ್ಯಕ್ತವಾಗುತ್ತದೆ. ಡಾ। ಪಿ.ಬಿ. ದೇಸಾಯಿಯವರು ಹಾಲಬಸವಿದೇವನ ವಯಸ್ಸನ್ನು ೬೦ ವರ್ಷಗಳೆಂದು ಗ್ರಹಿಸದೆ ಡಾ। ಆರ್.ಸಿ. ಹಿರೇಮಠರಂತೆ ೫೦ ವರ್ಷಗಳೆಂದು ಗಣಿಸಿದ್ದರೆ, ಹಾಗೂ ಅಣ್ಣ ದೇವರಾಜನಿಗಿಂತ ತಮ್ಮ ಬಸವಣ್ಣ ಐದು ವರ್ಷ ಸಣ್ಣವನಿರದೆ – ಬಹುಕಾಲ ಮಕ್ಕಳಾಗದಿದ್ದುದಕ್ಕಾಗಿ ನಂದಿವ್ರತವನ್ನಾಚರಿಸಿದ ವದಂತಿಯಂತೆ – ಹತ್ತು ವರ್ಷ ಸಣ್ಣವನಿದ್ದನೆಂದು ಹಿಡಿದಿದ್ದರೆ ಪರಂಪರಾಗತ ಬಸವಜನನ ವರ್ಷ ೧೧೩೦–೩೧ಕ್ಕೇ ಮುಟ್ಟುತ್ತಿದ್ದರು. ಇನ್ನು ಡಾ। ಆರ್. ಸಿ. ಹಿರೇಮಠರ ಕಾಲಗಣನೆಯ ವಿಚಾರ. ಅವರೇ ಇನ್ನೊಂದೆಡೆ ಹೀಗೆ ತೀರ್ಮಾನಿಸಿದ್ದಾರೆ. 'Arjunwada inscription mentions the date of Halabasavideva as 1260 A.D. He is the fourth in the genealogy. At the rate of 25 years for a generation which is normally accepted by historians, 125 years would have to be deducted to have the birth date of Basavesvara as (1260-125). This also will come to the same period i.e. 1131. The sum total of the evidence is that Basavesvara was born on Vaisakha Suddha Trtiya, in the year 1131 A.D. - the naksatra being Rohini'. (Sri Basavesvara Commemoraton Volume : Page 11-12). ಇದು ಒಪ್ಪಬೇಕಾದುದೇ.

ಬಸವಣ್ಣನವರು ೩೬ ವರ್ಷಗಳಿಗಿಂತ ಹೆಚ್ಚು ಕಾಲ ಜೀವಿಸಿದ್ದರೆಂದು ಊಹಿಸಿ ಅವರ ಜನನ ವರ್ಷವನ್ನು ೧೧೩೦–೩೧ಕ್ಕೆ ಹಿಂದೆ ಎಳೆದಷ್ಟೂ ಮನಗೋಳಿ ಶಾಸನವನ್ನು ಕೈಬಿಟ್ಟುದರಿಂದ ಪರಿಹಾರಗೊಂಡಿದ್ದ ಸಮಸ್ಯೆಗಳು ಮತ್ತೆ ಹಿತ್ತಿಲ ಬಾಗಿಲಿನಿಂದ ಒಳನುಗ್ಗುತ್ತವೆ. ಅವರ ಜನ್ಮವರ್ಷ ೧೧೦೬ ಎಂದು ಸಾಧಿಸಿದ ಡಾ । ಪಿ.ಬಿ. ದೇಸಾಯಿಯವರು ಅವರ ೩೬ ವರ್ಷಗಳ ಕಾರ್ಯಾವಧಿಯನ್ನು ವರ್ಗೀಕರಿಸಿರುವುದು ಹೀಗೆ: 'Retracing our steps, we have to accomdate the thirty six years

of Basavesvara's career. This can be divided into two stages: the first, of 21 years at Mangalavada; and the second of 15 years at Kalyana. It would have commenced about 1132 A.D. at Mangalavada, under Bijjala to start with'. ಇದಕ್ಕೆ ಸಂವಾದಿಯಾಗಿ ಡಾ। ಆರ್.ಸಿ. ಹಿರೇಮಠರು ಹೇಳಿರುವುದು ಹೀಗೆ: 'ಬಸವಣ್ಣನವರು ಕ್ರಿ.ಶ. ೧೧೩೦ರ ಸುಮಾರಿಗೆ ಮಂಗಳವಾಡಕ್ಕೆ ಹೋಗಿರಬೇಕಾಗುತ್ತದೆ. ಆಗ ಮಂಗಳವಾಡವನ್ನು ಬಿಜ್ಜಳನ ತಂದೆ ಪೆರ್ಮಾಡಿ ಆಳುತ್ತಿದ್ದು ಬಿಜ್ಜಳನು ಯುವರಾಜನಾಗಿರಬೇಕು. ಕ್ರಿ.ಶ. ೧೧೨೮ನೆಯ ಇಶ್ವಿಯ ಇಂಗಳೇಶ್ವರದ ಶಾಸನದಿಂದ ಕಲಚೂರಿಯ ಪೆರ್ಮಾಡಿಯ ಚಾಲುಕ್ಯ ಸಾಮ್ರಾಟ ಭೂಲೋಕಮಲ್ಲ ೩ನೆಯ ಸೋಮೇಶ್ವರನ (೧೧೨೬–೧೧೩೭) ಕೈಕೆಳಗೆ ತರ್ದೇವಾಡಿಯ ಮಹಾಮಂಡಳೇಶ್ವರನಾಗಿದ್ದನೆಂದು ತಿಳಿದು ಬರುತ್ತದೆ. ಈ ಅವಧಿಯಲ್ಲಿ ಬಸವಣ್ಣನವರು ಮಂಗಳವಾಡಕ್ಕೆ ಹೋಗಿರುವ ಸಂಭವವಿದೆ.' (ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು : ಪುಟ ೧೦೯).

೨೧ ರಿಂದ ೨೨, ೨೩ ವರ್ಷಗಳವರೆಗೆ ಬಸವಣ್ಣನವರು ಮಂಗಳವಾಡದಲ್ಲಿ ಅನಾಮಧೇಯರಾಗಿ, ಇಲ್ಲವೆ ಕರಣಿಕನ ಕೆಲಸದಿಂದ ಮೇಲೇರುತ್ತ ಭಂಡಾರಿ ಪದದವರೆಗೆ ಬಢತಿಗಳನ್ನು ಪಡೆಯುತ್ತ ಸುಖವಾಗಿದ್ದಿರಬಹುದೆ? ಇಲ್ಲದಿದ್ದರೆ ಇನ್ನೇನು ಮಾಡಿದರು? ಹಿಂದೆ ಕೂಡಲಸಂಗಮದಲ್ಲಿ ೧೧೬೭ರಿಂದ ೧೧೮೦ರವರೆಗೆ ಅವರು ಏಕಾಕಿಯಾಗಿ ಇದ್ದರೆಂಬುದನ್ನು ಅಲ್ಲಗೆಳೆಯಲು ಹೇಳಿದ ಕಾರಣಗಳನ್ನೇ ಇಲ್ಲಿಗೂ ಅನ್ವಯಿಸಬಹುದು. ೧೧೪೦ರಲ್ಲಿ ಮಂಗಳವಾಡದಲ್ಲಿಯೇ 'ಅನುಭವ ಮಂಟಪ'ವನ್ನು ಸ್ಥಾಪಿಸಿ ಅದರ ಮೂಲಕ ತಮ್ಮ ಜೀವನದ ಮುಖ್ಯ ಮಣಿಹವನ್ನು ಆರಂಭಿಸಿದ್ದರೆಂದು ಇಟ್ಟುಕೊಳ್ಳೋಣವೆಂದರೂ, 'ಹಮ್ಮಿ ಹನ್ನೆರಡು ವರ್ಷ' (ಬ.ಹೆ.ವ. ೩೮೨) ಹಿಂದಾದ ಮೇಲೆ ೧೧೫೨ರಲ್ಲಿಯೋ ೧೧೫೩ರಲ್ಲಿಯೋ ಅಲ್ಲಮಪ್ರಭು ಎರಡನೆಯ ಸಲವೂ ಅಲ್ಲಿಗೇ ಬರಬೇಕಾಗುತ್ತದೆ. ಪ್ರಭು ಮೊದಲನೆಯ ಸಲ ಅಲ್ಲಿಗೆ ಬಂದಿದ್ದ ನಂಬುದಕ್ಕೆ 'ಮಂಗಳವಾಡದಲಿಪ್ಪ ಲಿಂಗವಂತರಿಗೆಲ್ಲ। ಹಿಂಗದೆ ಮೆಲ್ಲಡಿಯ ಪ್ರಭುಲಿಂಗ ತೋರಿ। ಲಿಂಗಾಂಗ ಷಟ್‌ಸ್ಥಲದ ಸಂಗವ ಬೋಧಿಸಿ ಮೆರೆದ । ಮಂಗಳ ಪ್ರಭುರಾಯ, ಯೋಗಿನಾಥ' ಎಂಬ ಸಿದ್ಧರಾಮನ 'ಮಿಶ್ರಸ್ತೋತ್ರ ತ್ರಿವಿಧಿ'ಯೊಳಗಣ ಈ ತ್ರಿಪದಿ ಆಧಾರವಾಗಬಹುದಾದರೂ, ಎರಡನೆಯ ಸಲವೂ ಪ್ರಭು ಅಲ್ಲಿಗೇ ಹೋಗುವಂಥಾಗಿದ್ದರೆ ಕಲ್ಯಾಣದ ಗತಿ? 'ಅದೇ ಎರಡನೆಯ ಸಾರೆ ಪ್ರಭು ಕಲ್ಯಾಣಕ್ಕೆ ಬಂದಾಗ ಶೂನ್ಯ ಸಿಂಹಾಸನವನ್ನು ಏರುತ್ತಾನೆ. ಅಷ್ಟರಲ್ಲಿ ಇದನ್ನು ರಚಿಸಿ ಹನ್ನೆರಡು ವರ್ಷಗಳಾಗಿವೆ' (ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನವರು : ಪುಟ ೧೦೫). ಅನುಭವ ಮಂಟಪದ ಸ್ಥಾಪನೆಯಾಗಿ ಕೆಲವು ವರ್ಷಗಳು ಕಳೆದ ಮೇಲೆ ಶೂನ್ಯಸಿಂಹಾಸನದ ಸ್ಥಾಪನೆಯಾಯಿತೆ? ಅದಾಗಿ ಹನ್ನೆರಡು ವರ್ಷಗಳು ಕಳೆದ ಮೇಲೆ ಪ್ರಭು ಎರಡನೆಯ ಸಲ ಕಲ್ಯಾಣದಲ್ಲಿ

ಬಸವನ ಬಳಿಗೆ ಬರಬೇಕಾದರೆ ಮೊದಲಸಲ ಇನ್ನೂ ಶೂನ್ಯಸಿಂಹಾಸನ ಸ್ಥಾಪಿತವಾಗದಿದ್ದಾಗ ಅವನು ಹನ್ನೆರಡು ವರ್ಷಗಳಿಗೂ ಹೆಚ್ಚು ಕಾಲ ಹಿಂದೆ ಬಂದಿರಬೇಕು. ಇಷ್ಟು ವರ್ಷ ಅವರು ಏನು ಮಾಡಿದರು? ಅನುಭವ ಮಂಟಪದಲ್ಲಿ ಏನು ಮಾಡಲಾಯಿತು? ಅದರಲ್ಲಿ ಭಾಗವಹಿಸಿದವರಾರು? ಚರ್ಚಿಸಿದ ವಿಷಯಗಳೇನು? ಹೊರಬಿದ್ದ ವಚನಗಳಾವುವು?

ಒಟ್ಟಾರೆ ಹೇಳುವುದಾದರೆ ಬಸವಣ್ಣನವರ ಜನನವನ್ನು ೧೧೩೦–೩೧ರಿಂದ ಹಿಂದಕ್ಕೆ ಎಳೆದರೆ ಮಂಗಳವಾಡದಲ್ಲಿ ಅನೇಕ ವರ್ಷ ಅವರನ್ನು ಅಪ್ರಸಿದ್ಧರನ್ನಾಗಿ ಇರಿಸಬೇಕಾಗುತ್ತದೆ; ೧೧೯೭ಕ್ಕೆ ಆಚೆ ಅವರ ಮರಣಕಾಲವನ್ನು ಜಗ್ಗಿದರೆ ಕೂಡಲ ಸಂಗಮದಲ್ಲಿ ಅಜ್ಞಾತವಾಸದಲ್ಲಿ ಅವರನ್ನು ಕೊಳೆಸಬೇಕಾಗುತ್ತದೆ. ಇದುವರೆಗೆ ಒದಗಿರುವ ಚಾರಿತ್ರಿಕಾಂಶಗಳನ್ನು ಅನುಸರಿಸಿ ಬಸವಣ್ಣನವರ ಜೀವಿತ ಕಾಲವನ್ನು ಹೀಗೆ ವಿಭಾಗಿಸಬಹುದೆಂದು ತೋರುತ್ತಿದೆ :

ಜನನ : ೧೧೩೦–೩೧ರಲ್ಲಿ ಬಾಗೇವಾಡಿಯಲ್ಲಿ
ಉಪನಯನ : ೧೧೩೮–೩೯ರಲ್ಲಿ – ಬಾಗೇವಾಡಿಯಲ್ಲಿ
ವಿಪ್ರಕರ್ಮಾಚರಣೆ – ವಿದ್ಯಾಭ್ಯಾಸ : ೧೧೪೬–೪೭ರವರೆಗೆ
ಬಾಗೇವಾಡಿ – ಇಂಗಳೇಶ್ವರಗಳಲ್ಲಿ
ಕೂಡಲಸಂಗಮಕ್ಕೆ ಪ್ರಯಾಣ : ೧೧೪೬–೪೭ರಲ್ಲಿ
ಮಂಗಳವಾಡಕ್ಕೆ ಪ್ರಯಾಣ : ೧೧೫೪ ರಲ್ಲಿ
ಮಂಗಳವಾಡದಲ್ಲಿ ಕರಣಿಕ ವೃತ್ತಿ,
ದಂಡನಾಥ ಪದವಿ, ಅನುಭವ ಮಂಟಪದ
ಆರಂಭ ೧೧೫೪–೫೫ರಲ್ಲಿ
ಕಲ್ಯಾಣಕ್ಕೆ ಪ್ರಯಾಣ : ೧೧೫೬
ಕೂಡಲಸಂಗಮಕ್ಕೆ ನಿರ್ಗಮನ ಮತ್ತು
ಅಲ್ಲಿಯೇ ಬಯಲಾದುದು ೧೧೬೭ ರ ಕೊನೆಗೆ,

ಇದರಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳು ಸಾಧ್ಯ.* ಹೆಚ್ಚಿನ ವ್ಯಾಸಂಗ, ಸಂಶೋಧನೆಗಳಿಂದ ಇದನ್ನು ಮಾಡಲು ಅವಕಾಶವಿದೆ. ಆದರೆ ಜನನ–ಮರಣ ಕಾಲಗಳು ಇಲ್ಲಿ ಕೊಟ್ಟಿರುವ ಕಾಲಗಳಿಗೆ ಹಿಂದೆ ಹಾಗೂ ಮುಂದೆ ಹೋದರೆ ಪರಿಹರಿಸಲಾಗದ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಳ್ಳುತ್ತೇವೆ. ಆದುದರಿಂದ ಪರಂಪರಾಗತವಾದ ಬಸವಣ್ಣ ಮೂರು ಪಟ್ಟ, ಚನ್ನಬಸವಣ್ಣ ಎರಡು ಪಟ್ಟವೆಂಬ ಜೀವಿತಾವಧಿಗಳನ್ನು ಒಪ್ಪಿಕೊಳ್ಳುವುದೇ ವಿಹಿತವೆನಿಸುತ್ತದೆ.

ಮಹಾಪುರುಷರ ಜೀವನಚರಿತ್ರೆಯನ್ನು ಬರೆಯುವಾಗ ಅವರು ಉದಯವಾದ ಕಾಲಕ್ಕೆ ಇದ್ದ, ಅದಕ್ಕೂ ಹಿಂದೆ ಇದ್ದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಪರಿಸ್ಥಿತಿಯನ್ನೂ, ಅದರ ಹಿನ್ನೆಲೆಯನ್ನೂ, ವಿವರಿಸುವುದು ವಾಡಿಕೆ. ಇದನ್ನು ನಾನು ಬಸವಣ್ಣನವರ ಸಾಧನೆಗಳನ್ನು ಕುರಿತ ಎರಡನೆಯ ಉಪನ್ಯಾಸದಲ್ಲಿ ವಿವರಿಸಲಿರುವೆನಾಗಿ ಇಲ್ಲಿ ಅದನ್ನು ವಿಲಂಬಿಸುವುದಿಲ್ಲ. ಈಗ ಸಂಕ್ಷೇಪಿಸಿ ಹೇಳುವುದಾದರೆ, ಈ ದೇಶದಲ್ಲಿ ಹಿಂದಿನಂತೆ ಅಂದೂ ಬಹುಜನ ಸಮಾಜವು ಆರ್ಥಿಕವಾಗಿ ಅನುತ್ಪಾದಕ

---

* ಉದಾಹರಣೆಗಾಗಿ ಡಾ। ಎಂ.ಎಂ. ಕಲಬುರ್ಗಿಯವರು ಬಸವಣ್ಣನವರು ಹತ್ತು ವರ್ಷಗಳ ವಯಸ್ಸಿನಲ್ಲಿಯೇ ಬಾಗೇವಾಡಿಯನ್ನು ಬಿಟ್ಟು ಕೂಡಲಸಂಗಮಕ್ಕೆ ಹೋಗಿರಬೇಕೆಂದು ಹೇಳಿದ್ದಾರೆ. (ಪ್ರಬುದ್ಧ ಕರ್ಣಾಟಕ, ಸಂ.೪೭, ಸಂ.೭ ಪು.೪೭.) ಇದನ್ನು ಉಪನಯನವಾದ ಮೇಲೆ ಬಸವಣ್ಣ ಮುತ್ತಬ್ಬೆಯ ಪೋಷಣೆಯಲ್ಲಿ ಎರಡು ವರ್ಷವಿದ್ದನೆಂದು ಅರ್ಥ ಮಾಡಿ ಒಪ್ಪಬಹುದು; ಒಪ್ಪಿ ಈ ೬ ವರ್ಷಗಳ ಉಳಿತಾಯವನ್ನೂ ಸಂಗಮ–ಮಂಗಳವಾಡಗಳ ವಾಸ್ತವ್ಯಗಳಿಗೆ ಸೂಕ್ತವೆನಿಸುವಂತೆ ಸೇರಿಸಬಹುದು. ಅವರಿಲ್ಲಿ ಹೇಳುವ ಕಾರಣವನ್ನೇ ಎಂದರೆ 'ಕ್ರಾಂತಿಮತಿಯಾದ ಬಸವಣ್ಣನು ಮುಂಜಿಯಾದ ತರುವಾಯ ಮತ್ತೆ ಎಂಟು ವರ್ಷಗಳ ದೀರ್ಘಕಾಲವನ್ನು ತೆಪ್ಪಗೆ ಕಳೆದಿರಲಾರ' ಎಂಬ ಕಾರಣವನ್ನೇ ಅವರ ಮಂಗಳವಾಡದ ೨೦–೨೨ ವರ್ಷಗಳ ವಾಸ್ತವ್ಯಕ್ಕೂ, ಕಲ್ಯಾಣದಿಂದ ಕೂಡಲಸಂಗಮಕ್ಕೆ ಹಿಂದಿರುಗಿದ ಮೇಲೆ ಬಹಳ ವರ್ಷ ಬದುಕಿದ್ದರೆಂಬ ವಾದಕ್ಕೂ ಅನ್ವಯಿಸಬೇಕಾಗುತ್ತದೆ. ಪುರಾಣಗಳಲ್ಲಿ ಕಾಲಜ್ಞಾನ ವಚನಗಳಲ್ಲಿ ಉಲ್ಲಿಖಿತವಾದ ತಿಥಿ ನಕ್ಷತ್ರಗಳನ್ನು ಸತ್ಯಗೊಳಿಸಲೆಂದು ಇತಿಹಾಸವನ್ನು ಬಸವಣ್ಣನವರ ಪರಂಪರಾಗತ ಚರಿತ್ರೆಯನ್ನು ಸುಳ್ಳುಗೊಳಿಸುವುದು ಕೆಲವರಿಗೆ ಸಂಶೋಧನೆಯೆನಿಸಬಹುದಾದರೂ ಸಮಂಜಸವೆನಿಸಲಾರದು. ಉದಾಹರಣೆಗಾಗಿ ಶ್ರೀ ಬಾಡಾಲ ರಾಮಯ್ಯನವರ ಇತ್ತೀಚಿನ ಲೇಖನ (ಪ್ರಬುದ್ಧ ಕರ್ಣಾಟಕ ಸಂ.೫೮, ಸಂ.೧)ವನ್ನು ನೋಡಬಹುದು. ಇದರ ಪ್ರಕಾರ ೩೦–೪–೧೧೯೮ ರಲ್ಲಿ ಬಿಜ್ಜಳನ ಕೊಲೆ ನಡೆಯುತ್ತದೆ. ೧೧೬೭ರಲ್ಲಿ ನಡೆದಿರಬೇಕಾದ ಹರಳಯ್ಯ ಮಧುವರಸರ ಎಳೆಹೂಟಿಗೆ ೩೧ ವರ್ಷಗಳ ತರುವಾಯ ಬಿಜ್ಜಳನ ಕೊಲೆಯಾಗುತ್ತದೆ. ಆಗ ಸೋವಿದೇವನು ಶಿವಶರಣರ ಬೆಂಬತ್ತಿ ಹೋದನೋ? ಇನ್ನು ಬಸವಣ್ಣನವರು ೧೧೯೬ ಫೆಬ್ರವರಿಯವರೆಗೆ ಕಾಲ್ಯಾಣದಲ್ಲಿ 'ತೆಪ್ಪಗೆ' ಇದ್ದು ಆಮೇಲೆ ಕೂಡಲಸಂಗಮಕ್ಕೆ ಹೋಗಿ ೩–೬–೧೧೯೬ರಲ್ಲಿ ಲಿಂಗೈಕ್ಯರಾಗಬೇಕಾಗುತ್ತದೆ. ೧೧೮೩–೮೪ರ ಹೊತ್ತಿಗೆ ಕಲಚೂರ್ಯ ವಂಶವೇ ಕೊನೆಗೊಂಡಿರುವಾಗ ೧೧೯೮ರ ವರೆಗೆ ಬಿಜ್ಜಳ ಬದುಕಿದ್ದನೆನ್ನುವುದು ಸಾಹಸದ ಮಾತೇ ಸರಿ.

ಸೇವಾವೃತ್ತಿಗೆ ಸಹಜವಾದ ದಾರಿದ್ರ್ಯದಿಂದ, ಸಾಮಾಜಿಕವಾಗಿ ವರ್ಣ–ಜಾತಿ–ಕುಲ ಗೋತ್ರಾದಿಗಳ ಶೃಂಖಲೆಗಳಿಂದ, ಧಾರ್ಮಿಕವಾಗಿ ಬಹುದೇವತಾರಾಧನೆ, ಅಂಧವಿಶ್ವಾಸಗಳು, ದೇವರು – ದೇಗುಲ–ಧರ್ಮ–ಕರ್ಮಗಳ ಹೆಸರಿನಲ್ಲಿ ಹೆಜ್ಜೆ ಹೆಜ್ಜೆಗೆ ಹಬ್ಬಿದ್ದ ಶೋಷಣೆಗಳಿಂದ, ಹುಟ್ಟುತ್ತಲೆ ಅಂಜಿ ಸಾಯುವವರೆಗೂ ಶನಿಯಾಗಿ ಬೆನ್ನು ಹತ್ತುತ್ತಿದ್ದ ಕೆಳ ಕುಲದವರೆಂಬುದು ಕೀಳರಿಮೆ, ದೈವವಾದ – ಕರ್ಮವಾದ – ಪಾಪ–ಪುಣ್ಯ, ಸ್ವರ್ಗ – ನರ, ಪೂರ್ವಜನ್ಮ – ಪುನರ್ಜನ್ಮ ಇತ್ಯಾದಿಗಳ ಜಟಿಲ ಜಾಲ, ಯಜ್ಞ ಯಾಗ, ಮಂತ್ರ ತಂತ್ರ–ಶಾಸ್ತ್ರ – ಪುರಾಣ – ಸ್ಥಳಪುರಾಣ, ರಾಜಕೀಯವಾಗಿ ನಿರಂಕುಶ ಪ್ರಭುತ್ವ, ಮಹತ್ವಾಕಾಂಕ್ಷಿಗಳ ರಾಜ್ಯದಾಹದ ಫಲವಾಗಿ ಹಗಲೆಲ್ಲ ನಡೆಯುತ್ತಿದ್ದ ಒಳಗಿನ ದಂಗೆ ಹೊರಗಿನ ದಂಗೆ ಹೊರಗಿನ ದಾಳಿಗಳಿಂದ, ತಜ್ಜನ್ಯ ಅರಾಜಕತೆ, ನಿರ್ವೀರ್ಣ್ಯವಾಗಿ, ದೇಹತೊಟ್ಟ ದೈನ್ಯವಾಗಿ ಹೋಗಿದ್ದಿತೆಂದು ಹೇಳಬಹುದು. ಈ ದಾರುಣ ಪರಿಸ್ಥಿತಿಯಲ್ಲಿ ಹುಟ್ಟಿದನೊಬ್ಬ ದೇವಮಾನವ, ಅವನ ಹೆಸರು ಬಸವ.

ಇಂದಿನ ವಿಜಾಪುರ ಜಿಲ್ಲೆಯ ಬಾಗೇವಾಡಿ ಹಿಂದೆ ಪ್ರಸಿದ್ಧವಾದ ಅಗ್ರಹಾರವಾಗಿದ್ದಿತು. ಕ್ರಿ.ಶ. ೧೦೪೯ರ ಹೊನ್ನವಾಡಿಯ ಶಾಸನದಲ್ಲಿ (No.43 Bombay Karnataka Inscriptions : Vol. I Part - II) 'ಬಾಗೇವಾಡಿಯ ಮಹಾಜನ ಮಯ್ನೂರ್ವರುಮೀ ಧರ್ಮಮಂ ಪ್ರತಿಪಾಲಿಸುವರ್' ಎಂದೂ ಅವರು, 'ವಿನುತಾನೇಕ ವೇದ ವೇದಾಂಗ ತತ್ತ್ವಜ್ಞಾನ ಮಾರ್ತಾಂಡ ಜ್ವಾಲಾಮಂಡಿತ ಪುಂಡರೀಕಾಕ್ಷ ಬ್ರಹ್ಮಲಕ್ಷ್ಮೀ ಲಕ್ಷಿತ ವಿಶಾಳ ವಕ್ಷಸ್ಥಳರ್ ಹಂಸಯುವತಿ ಸರಾಜಿ ವಿರಾಜಮಾನರಪ್ಪ ಶ್ರೀಮತ್ ಬಾಗವಾಡಿಯ ಮಹಾಜನಮಯ್ನೂರ್ವರುಂ' ಎಂದೂ ವರ್ಣಿಸಲಾಗಿದೆ. ಈ ಬಾಗೇವಾಡಿಗೆ ಆರೇಳು ಮೈಲಿಗಳ ಅಂತರದಲ್ಲಿ ಆಗ ಪತ್ತನವಾಗಿದ್ದು ಈಗ ಹಳ್ಳಿಯಾಗಿರುವ ಇಂಗಳೇಶ್ವರವಿದೆ. ಇದಕ್ಕೆ ಒಂದು ಮೈಲು ದೂರದಲ್ಲಿ ರೇವಣಸಿದ್ಧನ ಗವಿಯಿದ್ದು ಅದರಲ್ಲಿ ಪಾರ್ಶ್ವನಾಥ ಜಿನವಿಗ್ರಹವು ಒಮ್ಮೆ ಅಲ್ಲಿ ಜೈನಧರ್ಮ ಪ್ರಾಬಲ್ಯವಿದ್ದುದರ ಕುರುಹಾಗಿ ಉಳಿದಿದೆ. ಅಗ್ಗಳನು ೧೧೮೯ರಲ್ಲಿ ತನ್ನ ಚಂದ್ರಪ್ರಭ ಪುರಾಣವನ್ನು ರಚಿಸಿದ ಸ್ಥಳವಿದು. ಹೀಗೆ ಬಾಗೇವಾಡಿ ತ್ರಿಮತ ತ್ರಿವೇಣಿಯಾಗಿದ್ದಿತು.

ಇಂಥ ವಿದ್ಯೆ ಸಂಸ್ಕೃತಿಗಳ ಕೇಂದ್ರವಾಗಿದ್ದ ಇಂಗಳೇಶ್ವರ – ಬಾಗೇವಾಡಿಯಲ್ಲಿದ್ದ ಐನೂರು 'ಮಹಾಜನ'ರಿಗೆ ಅಗ್ರೇಶ್ವರನಾಗಿದ್ದಾತ ಮಾದಿರಾಜ – ಮಂಡಗೆಯ ಮಾದಿರಾಜ. ಅವನ ಸತಿ ಸದ್ಗುಣವತಿ ಮಾದಾಂಬೆ – ಮೊದಲಾಂಬೆ. ಅವರಿಗೆ ಬಹಳ ಕಾಲ ಗಂಡುಮಕ್ಕಳಾಗಲಿಲ್ಲವೆಂದು ಮಾದಲಾಂಬೆ ನಂದಿನಾಥನ ನೋಂಪಿಯನ್ನು ಆಚರಿಸಿದಳು. (ಅರ್ಜುನವಾಡ ಶಾಸನದ ಪ್ರಕಾರ ದೇವರಾಜನೆಂಬ ಒಬ್ಬ ಮಗನಿದ್ದುದೇ ನಿಜವಾದರೆ ಈ ನೋಂಪಿಯ ಅಗತ್ಯವಿರುತ್ತಿರಲಿಲ್ಲ. ದೇವರಾಜ ಹುಟ್ಟಿದ ಮೇಲೆ ಬಹಳ ವರ್ಷ ಮತ್ತೆ ಮಕ್ಕಳಾಗಲಿಲ್ಲವೆಂದು ಮಾಡಿದ್ದರೆ ಆ ಮಾತು ಬೇರೆ. ಈ ದೇವರಾಜ ಬಸವಣ್ಣನವರಿಗೆ

ಏನಾಗಬೇಕೆಂಬುದೂ ವಾದಗ್ರಸ್ಥ ವಿಷಯವಾಗಿದೆ. ಆದುದರಿಂದಲೇ ಆ ಶಾಸನವನ್ನು ಆಧರಿಸಿ ಕಾಲನಿರ್ಣಯ ಮಾಡುವುದು ಸಾಧ್ಯವಿದ್ದರೂ ಸಾಧುವಲ್ಲವೆಂದೇ ಹೇಳಬೇಕು). ಈ ನೋಂಪಿಯ ಫಲವಾಗಿಯೋ ಎಂಬಂತೆ ಮಾದಲಾಂಬೆ ಗರ್ಭವತಿಯಾದಳು. ಸುಮುಹೂರ್ತದಲ್ಲಿ ಗಂಡು ಮಗುವಿಗೆ ಜನ್ಮವಿತ್ತಳು. ಮಹಾ ತೇಜಸ್ವಿಯಾಗಿದ್ದಿತು ಆ ಮಗು. ಕಾರಣಿಕ ಶಿಶುವೆಂಬಂತೆ ಕಾಣಿಸಿತು ಎಲ್ಲರಿಗೂ. ಹೀಗೆ, ಮುಂದೆ ವಿಶ್ವವಿಭೂತಿಯಾಗಲಿದ್ದ ಶಿಶುವೊಂದಕ್ಕೆ ತಂದೆ ತಾಯಿಗಳಾಗುವ ಭಾಗ್ಯ ಮಾದರಸ ಮಾದಲಾಂಬಿಕೆಯರದಾಯಿತು. ಇವರೇ ಬಸವನ ತಂದೆ ತಾಯಿಗಳೆಂಬುದು ಬಗ್ಗೆ ಬಸವಣ್ಣನವರ ಬಗ್ಗೆ ಬರೆದ ಎಲ್ಲರಲ್ಲಿಯೂ ಒಮ್ಮತವಿದ್ದಿತಾದರೂ ಮನಗೋಳಿಯ ಶಿಲಾಶಾಸನ ಚಂದಿರಾಜ ಚಂದ್ರಾಂಬಿಕೆಯರ ಹೆಸರುಗಳನ್ನು ಮುಂದೆ ಮಾಡಿದ್ದಿತು. ಕೆಲವರು ಇವರೇ ಬಸವನ ತಂದೆ ತಾಯಿಗಳು; ಇವರ ಮಗ ಕಸಪಯ್ಯನೇ ಬಸವಣ್ಣನೆಂದೂ ನಂಬಿದರು. ಈಗ ಈ ವಾದಕ್ಕೆ ಇತಿಶ್ರೀ ಆಗಿದೆಯಾದರೂ ಇದನ್ನು ಇನ್ನಷ್ಟು ಸ್ಥಿರೀಕರಿಸಲು ಎರಡು ಸಂಗತಿಗಳನ್ನಿಲ್ಲಿ ಸ್ಮರಿಸಲೇಬೇಕು. ಒಂದು ಅರ್ಜುನವಾಡ ಶಾಸನದ 'ಮತ್ತಂ ತರ್ದವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರ ಮಾದಿರಾಜ ತನೂಜಂ ಬಸವರಾಜ' ಎಂಬ ಸ್ಪಷ್ಟ ಘೋಷಣೆ; ಇನ್ನೊಂದು, ಚೆನ್ನಂಜೆದೇವರು ಸಂಕಲಿಸಿರುವ 'ಮಿಶ್ರಸ್ತೋತ್ರ ವಚನ'ದಲ್ಲಿ ಬರುವ ಘಟ್ಟಿವಾಳಯ್ಯನ ಈ ವಚನ :

'ಕರವೂರ ನಿರಹಂಕಾರ ಸುಜ್ಞಾನದೇವಿಯರ ಬಸುರಲ್ಲಿ
ಬಂದಎನ್ನಬಹುದೆ ಪ್ರಭುದೇವರ?
ಮಂಡಗೆಯ ಮಾದಿರಾಜ ಮಾದಲಾಂಬಿಕೆಯ ಬಸುರಲ್ಲಿ
ಬಂದನೆನ್ನಬಹುದೆ ಬಸವೇಶ್ವರನ?
ಅಕ್ಕ ನಾಗಲಾಂಬಿಕೆಯ ಬಸುರಲ್ಲಿ ಬಂದನೆನ್ನಬಹುದೇ
ಚೆನ್ನಬಸವೇಶ್ವರನ ?
ಇವರು ಒಬ್ಬರಿಂದಾದವರಲ್ಲ; ತಮ್ಮಿಂದ ತಾವಾದರು –
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು!'

ಬಸವಣ್ಣನವರು ಬಾಗೇವಾಡಿಯಲ್ಲಿ ಹುಟ್ಟಿದರೆ, ಇಂಗಳೇಶ್ವರದಲ್ಲಿ ಹುಟ್ಟಿದರೆ, ಎರಡರ ಮಧ್ಯದ 'ಹೋರಿಮಟ್ಟಿ'ಯಲ್ಲಿ ಹುಟ್ಟಿದರೆ? 'ತಿಂಗಳೇಸವರ' ಇಲ್ಲವೆ ಇಂಗಳೇಶ್ವರ ಬಾಗೇವಾಡಿಯಲ್ಲಿ ಹುಟ್ಟಿದನೆಂದರೆ ಸಾಲದೆ? ಹೇಗೆ ಹುಟ್ಟಿದರು?

'ಇಳೆಗೆ ಶಿವಭಕ್ತಿಯಂ ತೀವಲ್ ಮನಗೊಂಡು
ಚಿಪ್ಪಿನೊಳ್ ಮುತ್ತು ಕಾಸಾರದೊಳ್ ಪಂಕಜಂ
ಅಪ್ಪಿನಿಂ ತಣ್ಪು ಮಲಯಾದ್ರಿಯಿಂ ಮಲಯಜಂ
ಕೇತಕೀ ಕುಸುಮದಿಂ ರುಚಿರತರ ಪರಿಮಳಂ

ಶೀರಕರನಿಂ ಸಾಂದ್ರತರ ಕೌಮುದೋಜ್ವಳಂ
ಪುಟ್ಟಿದಂತಿರೆ ಪುಟ್ಟಿದಂ ಶಿವನ ಶಿಶುವಲ್ಲಿ!'
(ಬ.ರಾ.ದೇ.ರ.ಸ್ಥಲ ೧)
ಹೇಗೆ ಬೆಳೆಯಿತು ಈ 'ಶಿವನ ಶಿಶು'?
'ಲಿಂಗಮಂ ತೋಱಿದು ಸುಖಿಯಾಗುತಂ
ಲಿಂಗ ಪ್ರಸಾದಮಂ ಕೊಂಡು ಹೊರೆಯೇಱತಂ
ಮಾತೆಯ ಮನೋರಾಜ್ಯ ಪಿತನ ಕಣ್ಗಳ ಸೊಂಪು
ಆತುರದೆ ಪಾಡುತ್ತಲಿಹರ ಜೋಗುಳ ಜೊಂಪು
..............................................
ಸೋಗಿಲ ಸುಧಾಕಿರಣವಂಗೈಯ ಮಾಣಿಕಂ
ಸಾಗಿಪರ ಪರಬೊಮ್ಮ ವರ್ತಿಸುವ ಕೌತುಕಂ
ನೋಡುವರ ನಯನಸುಧೆ ಸೋಂಕುವರ ಪುಳಕ ತತಿ
ಬೇಡುವರನರ್ಘ್ಯವಪ್ಪುವರ ಪುಣ್ಯದ ಸುಗತಿ
.......................................................................
ತಾನಾಗಿ' ಬೆಳೆಯಿತು.

ಈ ಶಿಶುವಿಗೆ – ಶಿವನ ಶಿಶುವಿಗೆ – ಹುಟ್ಟುತ್ತಲೇ ಸಂಗಮನಾಥನಿಂದ ಲಿಂಗಧಾರಣೆ ನಡೆಯಿತೆಂದು ಬಸವ ಪುರಾಣ ಹೇಳಿದರೆ, ಹುಟ್ಟಿದ ಶಿಶು ಎವೆಯಿಕ್ಕದೆ, ಮಿಸುಕಿಲ್ಲದೆ ಇರಲು, ಮಾದಾಂಬಿಕ ದುಃಖಿಗೊಂಡು 'ತನುವಂ ಮರೆದು ಪಟ್ಟಿರಲು' ಗಿರಜಾತೆ ಸಹಿತ ಚಂದ್ರಶೇಖರ ಬಂದು ಶಿಶುವಂ ನೋಡಲು, 'ಶಶಿಯುದಯಮಂ ಕಾಣುತಂ ಕುಮುದ ಕುಟ್ಮಳು ಪಸರಿಸುವ ತೆರದಿಂ ಕಂದೆರದು' ಶಿಶು ನೋಡಿತೆಂದು 'ಶಿವತತ್ತ್ವ ಚಿಂತಾಮಣಿ' ತಿಳಿಸುತ್ತದೆ. ಬಳಿಕ ಶಿವನು ಭಸಿತರುದ್ರಾಕ್ಷಿಗಳನ್ನಿಟ್ಟನಂತೆ, ಪಂಚಾಕ್ಷರಿಯನ್ನು ಕರ್ಣದೊಳು ಪೂರೈಸಿದನಂತೆ, 'ಬಸವ' ಎಂದು ಹೆಸರಿಟ್ಟು ಹೋದನಂತೆ. ಸಿಂಗಿರಾಜ ಪುರಾಣ ಮಾತ್ರ ಆಗ ಕಪ್ಪಡಿ ಸಂಗಮ ಕ್ಷೇತ್ರದಿಂದ ಬಾಗೆವಾಡಿಗೆ ಬಂದಿದ್ದ ಜಾತವೇದಮುನಿಗಳು ಆ ಮಗುವಿಗೆ ಶಿವಮಂತ್ರವನ್ನುಚ್ಚರಿಸಿ ತ್ರಿಪುಂಡ್ರವಿಡಲು, 'ಆ ಮಹಾತ್ಮನು ಕಣ್ತೆರೆದು ಕಂಡನು ಕರ್ಮನಿರ್ಮೂಲಗುರುವನು' ಎಂದು ಬಿತ್ತರಿಸುತ್ತದೆ. ಮುಂದೆ ಕರ್ಮಲತೆಯಂತಿದ್ದ ಜನ್ನಿವಾರಮುಂಕಳೆದು ಬಿಸುಟು' ಹೊರಡಲಿದ್ದ ಬಸವಣ್ಣನಿಗೆ ಹುಟ್ಟಿದಾಗಲೇ 'ಕರ್ಮನಿರ್ಮೂಲಗುರುವನು' ಎಂದು ಬಿತ್ತರಿಸುತ್ತದೆ. ಮುಂದೆ 'ಕರ್ಮಲತೆಯಂತಿದ್ದ ಜನ್ನಿವಾರಮುಂ ಕಳೆದು ಬಿಸುಟು' ಹೊರಡಲಿದ್ದ ಬಸವಣ್ಣನಿಗೆ ಹುಟ್ಟಿದಾಗಲೇ 'ಕರ್ಮನಿರ್ಮೂಲಗುರು' ಕಂಡನೆಂಬುದು ಸಾಂಕೇತಿಕವಾಗಿ ಸಹಜವಾಗಿ ತೋರುತ್ತದೆ. ಶಿಶು ಶಿವಭಕ್ತಿ ಬೆಳೆದಂತೆ ಬೆಳೆದ ರೀತಿಯನ್ನು ನೋಡಿದರೆ ಈ ಮುನಿಗಳ ಪ್ರಭಾವವೂ ಇದಕ್ಕೆ ಕಾರಣವಾಗಿರ ಬಹುದೆನ್ನಿಸುತ್ತದೆ.

ಬಾಲ ಬಸವ ತನ್ನ ಮೊದಲ ಎಂಟು ವರ್ಷಗಳನ್ನು ಎಂದು ಕಳೆದ? ಅಗ್ರ ಹಾರಾಧಿಪತಿಯ ಮಗನೆಂದ ಮೇಲೆ ಊರಿಗೆಲ್ಲ ಮುದ್ದಿನ ಸೂರೆಯಾಗಿಯೇ ಬೆಳೆದಿರಬೇಕು. ಇದು ಮುಖ್ಯವಲ್ಲ. ಯಾವ ಒಲವುಗಳನ್ನು ಅಳವಡಿಸಿಕೊಳ್ಳುತ್ತ ಬೆಳೆದನು. ಯಾವ ಕನಸುಗಳನ್ನು ಕಾಣುತ್ತ ಬೆಳೆದನು – ಇದು ಮುಖ್ಯ. ಇದನ್ನು ವಿವರಿಸಲು ಬಸವಣ್ಣನವರ ಬಗ್ಗೆ ಬರೆದ ಕವಿಗಳಿಗೆ ವಿವರಗಳು ದೊರೆತಿರಲಿಲ್ಲವೋ ಅವರಿದಕ್ಕೆ ಮಹತ್ವನ್ನಿತ್ತಿರಲಿಲ್ಲವೋ ತಿಳಿಯದು. ಪಾಲ್ಕುರಿಗೆ ಸೋಮನಾಥನು ತನ್ನ ತೆಲುಗು ಬಸವ ಪುರಾಣದಲ್ಲಿ, (ಆಶ್ವಾಸ ೧, ಪುಟ ೧೬) ಅವನ ಬಳಿವಿಡಿದು ಭೀಮಕವಿ ಕನ್ನಡ ಬಸವಪುರಾಣದಲ್ಲಿ (ಸಂಧಿ ૩, ಪದ್ಯಗಳು ೪೧, ೪೨) ಕೆಲವಾದರೂ ವಿವರಗಳನ್ನು ಕೊಟ್ಟಿದ್ದಾರೆ :

‘ಧರಣಿಯೊಳು ಶೈಶವ ವಿನೋದದ । ಹರಯದಲ್ಲಿ ಲಿಂಗಾರ್ಚನೆಯನಾ।
ಚರಿಸುವನು ಬುದ್ಧಿಯನರಿವ ಕಿರುಗಾಲವಾಗಿಂತು
ಪರಮ ಮಾಹೇಶ್ವರರನೊಲವಿಂ। ಪರಮನೆಂದೇ ಕಣ್ಬನಾಗಳು।
ಶರಣಮಾನಸನಿಳಯನೆನಿಸಿದ ಬಸವಸುಕುಮಾರ ॥
ಬರೆಹ ವಾಚನ ಗಣಿತ ಶಬ್ದಾರ್ಥ ರಸ ಭಾವೋಕ್ತಿ ಪ್ರವೀಣತೆ ।
ಭರತ ಛಂದೋ ವ್ಯಾಕರಣ ಸಂಗೀತ ಸಾಹಿತ್ಯ ॥
ಹರರಹಸ್ಯಾಗಮ ಪುರಾಣೋತ್ಕರ ಸಕಳ ವೇದಾದಿ ಕಲೆಗಳು ।
ಸ್ಮರಿಸಲೊಡನೆ ಮುಖೋದ್ಗತಂ ಬಸವಂಗದೇವೊಗಳ್ವೆ॥

ಇಲ್ಲಿ ಬಸವನು ಗಣಿತ, ಸಾಹಿತ್ಯ, ಸಂಗೀತ, ವೇದಾಗಮ ಪುರಾಣಗಳನ್ನು ಕಲಿತನೆಂಬುದನ್ನು ವಿವರಿಸಿರುವುದು ಲಕ್ಷಿಸತಕ್ಕ ವಿಷಯವಾಗಿದೆ. ಮುಂದೆ ಕರಣಿಕ ವೃತ್ತಿಯಿಂದ ಲೌಕಿಕ ಜೀವನವನ್ನು ಆರಂಭಿಸಲಿದ್ದ ಬಸವನು ಬಾಲ್ಯದಲ್ಲಿಯೇ ಗಣಿತವನ್ನು ಅಭ್ಯಸಿಸಿದನೆಂಬುದೂ, ಮುಂದೆ ವಚನ ರಚನೆಯ ಮೂಲಕ ಸಾಹಿತ್ಯ ಕ್ರಾಂತಿಯನ್ನು ಸಾಧಿಸಲಿದ್ದ ಅವನು ಸಂಗೀತ ಸಾಹಿತ್ಯಗಳನ್ನು ಕಲಿತನೆಂಬುದೂ, ಮುಂದೆ ವೇದಾಗಮ ಪುರಾಣಾದಿಗಳನ್ನು ಮಾನವತೆಯ ಕಣದಲ್ಲಿ ಶರಣ ಬಸವಗಳಿಂದ ತುಳಿಸಿ, ಅನುಭವದ ಮೆಟ್ಟಿನಮೇಲೆ ನಿಂತು, ಅನುಭಾವದ ಗಾಳಿಗೆ ತೂರಿ, ಹಸನಾದ ಹೊಸ ವಿಚಾರಗಳ ರಾಶಿಯನ್ನು ಒಕ್ಕಿದ ಅವನು ಆಗ ವೇದಾಗಮ ಪುರಾಣಾದಿಗಳ ಅಧ್ಯಯನ ಮಾಡಿದನೆಂಬುದೂ ಸಹಜವೇ.

ಬಸವನ ಜೀವನದಲ್ಲಿ ಮೊದಲಿನ ಎಂಟು ವರ್ಷಗಳು ಮಾತ್ರ ತೊಡಕಿಲ್ಲದ, ಹೋರಾಟವಲ್ಲದ, ಹೊಯ್ದಾಟಕೆಡೆಗುಡದ ವರ್ಷಗಳೆಂದು ತೋರುತ್ತದೆ. ಎಂಟನೆಯ ವರ್ಷದಲ್ಲಿ ಉಪನಯನದ ಕತದಿಂದಾಗಿ ಪ್ರಾರಂಭವಾದ ಅವರ ಅಂತರಂಗದ ತುಮುಲ ಕಲ್ಯಾಣದ ವಿಪ್ಲವದವರೆಗೂ ಅವ್ಯಾಹತವಾಗಿ ಸಾಗುತ್ತದೆ. ಹುಡುಕಾಟ, ಹೋರಾಟ,

ಏಕಾಂಗವೀರನಾಗಿ ಅಂದಿನ ಪುರೋಹಿತಶಾಹಿಯನ್ನೂ, ಪಟ್ಟಭದ್ರ ಹಿತಗಳನ್ನು, ರಾಜಸತ್ತೆಯನ್ನು, ಸನಾತನೀಶಕ್ತಿಗಳನ್ನು ಶೋಷಕರ ಸಮುದಾಯವನ್ನು ಎದುರಿಸಿ ನಿಲ್ಲುವ ಕಲಿತನ, ಗೆದ್ದೇ ಗೆಲ್ಲುವೆನೆಂಬ ಛಲವಂತಿಕೆ, ತತ್ತ್ವಕ್ಕೆ ಬಾಗುವವರ ತೊತ್ತಾಗಿ ನಡೆಯುತ್ತ, ತತ್ತ್ವಗಳನ್ನು ತೊತ್ತಳದುಳಿವವರ ಉನ್ಮತ್ತತೆಯನ್ನು ಇಳಿಸಿ ಅವರನ್ನೂ ಸೈಪಿನ, ಲೇಸಿನ, ಹದುಳದ, ಹೊಲಬಿನ ನೇರ ದಾರಿಗೆ ತರಬೇಕೆಂಬ ಉತ್ಸಾಹ ಆಗ ಮುಗುಳೊಡೆದು ಮುಂದೆ ಮೂರು ದಶಕಗಳಿಗೂ ಮೊದಲೇ ಮನುಕುಲದ ಚರಿತ್ರೆಯಲ್ಲಿಯೇ ಒಂದು ಹೊಸ ಅಧ್ಯಾಯವನ್ನು – ಅದ್ಭುತರಮ್ಯ ಅಧ್ಯಾಯವನ್ನು ಬರೆಯುವಂತೆ ಪ್ರೇರಿಸುತ್ತವೆ.

ಎಂಟನೆಯ ವಯದಲ್ಲಿ ಬಸವನಿಗೆ ಉಪನಯನ ಆಯಿತೆ ಇಲ್ಲವೆ? ಮಾಡುವ ಪ್ರಯತ್ನ ನಡೆದರೂ ಮಾಡಗೊಡಲಿಲ್ಲ ಬಾಲಕ ಬಸವಣ್ಣನೆಂಬುದೊಂದು ಮತ; ತಂದೆ ತಾಯಿಗಳ ಆಗ್ರಹಕ್ಕಾಗಿ ಆಗ ಒಪ್ಪಿ ಮುಂದೆ ಹದಿನಾರನೆಯ ವಯಸ್ಸಿನಲ್ಲಿ ಅದನ್ನು ತ್ಯಜಿಸಿ ಕೂಡಲಸಂಗಮಕ್ಕೆ ಹೋದನೆಂಬುದು ಇನ್ನೊಂದು ಮತ. ಮೊದಲನೆಯ ಮತದ ಪ್ರಕಾರ ಬಸವಣ್ಣ ಹುಟ್ಟುತ್ತಲೇ ತನಗಾದ 'ನೀರನೇಣಿನ ಬಾಧೆಯಿಲ್ಲದೆ' ವೀರಶೈವ ದೀಕ್ಷೆಯನ್ನು ತಂದೆಯ ನೆನಪಿಗೆ ತಂದುಕೊಡುತ್ತಾನೆ; 'ಉಭಯ ಕರ್ಮನಿರ್ಮಲನ ಘೋರ ಕರ್ಮಾಶ್ರಯದ ಪಾರಾವಾರದೊಳು ಮುಳುಗಿಸುವೆನೆಂಬ ವಿಚಾರವಿಂತಿದು ಧರ್ಮವೇ ಬೊಪ್ಪ?' ಎಂದು ತಂದೆಗೆ ಕೇಳುತ್ತಾನೆ. ಮಾದಿರಾಜನಿದಕ್ಕೆ 'ಗರ್ಭಸಂಸ್ಕಾರ ಮೊದಲಾದ ಹದಿನಾರು ಕರ್ಮಗಳಲ್ಲಿ ಒಂದುವುಂ ಕುಂದಾದಡಾತನು ಬ್ರಾಹ್ಮಣೋತ್ತಮನಾಗನರಿಯನೆಲಾ.... ಪರಮ ಭಕ್ತಿಗೆ ಹೀನವಹುದೇ ಮುಂಜಿಗಟ್ಟಿದಡೆ? – ನಾವು ಹೇಳಿದ ಮಾತನಾಲಿಸಿ ಮಾಡಬೇಹುದು ಮಕ್ಕಳಾದವರು.... ಜಾತಿಗುತ್ತಮಕುಲದೊಳೊಗೆದು ಪುನೀತನಾಗಿ ಸಮಸ್ತ ವರ್ಣವ್ರಾತದೊಳಗ್ರಜಕುಲಾಗ್ರಣಿಯೆನಿಸಿ ಬಾಳ್ದು..... ಕಾವುದೆಮ್ಮುವನು; ಉದ್ಧರಿಸು ಕುಲಕೋಟಿಯೆಲ್ಲವನು... ಕುಲದ ಬೇರಿಗೆ ನೀನೆ ಗುದ್ದಲಿಗೊಳಲದೇಕೆ ಸುಪುತ್ರನಾಗಿ... ಇದನಲಘು ವಿಪ್ರರ್ ಕೇಳಿದೊಡೆ ಪೊರಗಿಕ್ಕರೇ ನಿನ್ನ?' ತಂದೆ ಇಷ್ಟೆಲ್ಲ ಆಲ್ಪರಿದರೂ ಬಸವ ತನ್ನ ಇಂಗಿತವನ್ನೇ ಮತ್ತೆ ಒತ್ತಿ ಹೇಳಿದನು : 'ಕಾಗೆ ಸಾಗಿಪ ಕೋಗಿಲೆಯ ಮರಿ ಕೂಗುವುದೆ ಸುಸ್ವರದೊಳಲ್ಲವೆ?' ಅಂತೆಯೇ ಬಸವ ತನ್ನ ಹೃದಯದ ಹಂಬಲವನ್ನೇ ಹೇಳಿದನು :

'ಗುರುಪದಾರ್ಚನೆಗೊಲಿದು ಹಾರುವ । ಪರಮ ಶೈವೋನ್ನತಿಗೆ ಹಾರುವ।
ಶರಣ ಸ್ವಾನುಭವಕ್ಕೆ ಹಾರುವ ತತ್ ಪ್ರಸಾದಕ್ಕೆ ॥
ಹರಿದು ಹಾರುವ ವೀರಭಕ್ತಿಗೆ । ಪಿರಿದು ಹಾರುವ ನಾನದೆಂದುಂ।
ಬೆರಸಿ ಹಾರುವ ಕುಲಕೆ ಹಾರುವನಲ್ಲ ನುಡಿಯದಿರು!॥
(ಭೀಮಕವಿಯ ಬಸವಪುರಾಣ : ಸಂಧಿ ೩
ಪದ್ಯಗಳು ೪೯ ರಿಂದ ೮೦).

ಚಾರಿತ್ರಿಕವಾಗಿ ಎಂಟನೆಯ ವಯಸ್ಸಿನಲ್ಲಿಯೇ ಬಸವನು ಉಪನಯನವನ್ನು ನಿರಾಕರಿಸಿ ಮಾತಾಪಿತೃಗಳನ್ನುಳಿದು, ಮನೆತೊರೆದು ಹೊರಟನೆಂಬುದನ್ನು ಒಪ್ಪದಿದ್ದರೂ ಬಸವಪುರಾಣದ ಈ ಭಾಗದಲ್ಲಿ ಪ್ರಕಟವಾಗಿರುವ ಮಾದರಸ ಮನೋಧರ್ಮ ಮತ್ತು ಬಸವಣ್ಣನ ಎಳೆಯ ಮನದಲ್ಲಿ ಎದ್ದೇಳುತ್ತಿರಬಹುದಾದ ಅನಿಸಿಕೆಗಳ ಚಿತ್ರ – ಅವುಗಳಿಗಾಗಿ ನಾವು 'ಸೋಮ–ಭೀಮ'ರಿಗೆ ಉಪಕೃತರಾಗಿರಲೇಬೇಕು. ಹಾರುವನಾಗಿ ಹುಟ್ಟಿದ ಮಾದರಸನಿಗೆ ತನ್ನ ಹಾರುವತನವನ್ನು ಮಾತ್ರ ಉಳಿಸಿಕೊಳ್ಳುವ ಉತ್ಕಟೇಚ್ಛೆಯಿದ್ದರೆ ಮಾದರಸನ ಮಗನಿಗೋ 'ಹಾರುವ ಹಾರುವ' ನಾಗಬೇಕೆಂಬ ಹಂಬಲ. ಮುಂದೆ ಇದೇ ವಚನವಾಗಿ ಹೊಮ್ಮಿದೆ :

'ಹಾರುವ ಹಾರುವನಪ್ಪೆ ಸದ್ಭಕ್ತರೆನ್ನವರೆನ್ನವರೆಂದು;
ಹಾರುವ ಹಾರುವನಪ್ಪೆ ಶರಣರು ಎನ್ನವರೆನ್ನವರೆಂದು;
ಕೂಡಲಸಂಗನ ಶರಣರು ತಮ್ಮೊಕ್ಕುದನಿಕ್ಕಿ ಸಲಹುವರಾಗಿ'

ಮಾದರಸನೇನೋ ಮಗನಿಗೆ 'ಕುಲದ ಬೇರಿಗೆ ನೀನೆ ಗುದ್ದಲಿಗೊಳಲದೇಕೆ?' ಎಂಬ 'ಬುದ್ಧಿ' ಹೇಳಿದ; ಆದರೆ ಬಸವರ್ಣಣ ತಾನು ಹುಟ್ಟಿದ್ದ ಕುಲಕ್ಕಷ್ಟೇ ಅಲ್ಲ, ಹುಟ್ಟಿನಿಂದ ಬಂದ ಎಲ್ಲ ಕುಲಗಳ ಮೂಲಗಳಿಗೂ ಗುದ್ದಲಿಗೊಂಡ, ಕೊಡಲಿಯಾದ, ಮನೆಯಲ್ಲಿ ಪ್ರಾರಂಭವಾದ ಈ ಕುಲ–ಜಾತಿ–ವರ್ಣ–ಗಿರ್ಣಗಳ ವಿರೋಧ ಮಂತ್ರಿಪದದಲ್ಲಿಯೂ ಮುಂದುವರಿದು, ಮನೆ ಬಿಟ್ಟು ಹೊರಡಲು ಕಾರಣನಾದ ಇದೆ ಬಸವನು ಮಂತ್ರಿಪದ ಬಿಟ್ಟು ಹೊರಡಲೂ ಕಾರಣವಾಗುವುದೆಂಬುದನ್ನು ಮುಂದೆ ನೋಡುವೆವು.

ಹರಿಹರನ ಬಸವರಾಜದೇವರ ರಗಳೆಯಿಂದ ಬಸವಣ್ಣನವರಿಗೆ ಔಪಚಾರಿಕವಾಗಿ ಉಪನಯನವಾಗಿತ್ತೆಂಬುದು ಧ್ವನಿತವಾಗುತ್ತದೆ: ಅಷ್ಟೇ. ಹದಿನಾರನೆಯ ವಯಸ್ಸಿನಲ್ಲಿ ಜನಿವಾರವನ್ನು ಬಿಸುಟಬೇಕಾದರೆ ಮೊದಲು ಅದನ್ನು ಸ್ವೀಕರಿಸಿರಲೇಬೇಕು. ಆದರೆ ಸಿಂಗಿರಾಜ ಪುರಾಣದಲ್ಲಿ ಮಾತ್ರ ಮಾದರಸ, 'ದ್ವಿಜಕರ್ಮಕ್ಕಿದಾದಿ, ಇದನತಿಗಳೆದಡೆ ಎಂತು ನೀನು ಕರ್ಮಧರ್ಮಕ್ಕುಭಯಕುಲ ಸೂತಕಕೆ ಬ್ರಹ್ಮ ಕರ್ಮಯೋಗದ ಬಳಕೆಗೆ ಅರ್ಹನಹೆ?' ಎಂದು ಪ್ರಶ್ನಿಸುತ್ತಾನೆ; ಇದಕ್ಕೆ ಬಸವ, 'ಜಾತ್ಯಂಧವಳಿಯೊ ಳೊಬ್ಬ ಅಮಳಾಕ್ಷನುದಿಸಿ ದರ್ಪಣಗಂಡು ಕಣ್ಮುಚ್ಚುವನೆ ಜಗದೊಳು?' ಎಂದು ಮರುಪ್ರಶ್ನೆ ಕೇಳುತ್ತಾನೆ. ಎಂಥ ಪ್ರಶ್ನೆ? ಕಣ್ಣಿದ್ದೂ ಕುರುಡರಂತೆ ಬದುಕಿ, ಸ್ವರೂಪದರ್ಶನ ಮಾಡಿಸಲು ಯಾರಾದರೂ ಕನ್ನಡಿಯ ತೋರಿದರೂ ಕಣ್ಣು ಮುಚ್ಚಿ ಕುರುಡುತನವೇ ಶ್ರೇಷ್ಠ ಇಷ್ಟವೆಂದು ಭಾವಿಸಿದ್ದ ಆಗಿನ (ಈಗಿನ ಕೂಡ) ಜನಕ್ಕೆ ಎಂಥ ಪ್ರಶ್ನೆ? ಇದಕ್ಕೇನುತ್ತರ ಕೊಡಬೇಕು ಸಂಪ್ರದಾಯಶರಣ ಮಾದರಸ, ಶಾಸ್ತ್ರಕ್ಕಿಂತ ಸಬಲವಾಗಿದ್ದ ರೂಢಿಯ ಮೂಢತೆಯನ್ನು

ಕೊಡಹಿ ಬಿಸುಡುವ ಬಲವಿಲ್ಲದಿದ್ದ ಮಾದಲಾಂಬಿಕೆ? 'ಈತನೇ ತಾನೊಂದು ಕಥನದಿಂದುದಿಸಿದ ಸನಾಥನು, ಆದ್ಯರಿಗಾದ್ಯ ನೈಸಲೆ' ಎಂದು ಭಾವಿಸಿ, 'ಸ್ವಾತಂತ್ರ್ಯ ನೀನು, ನಿನಗುಪತಂತ್ರವಿಲ್ಲ. ಪರಮ ಕಾರಣಿಕ ಕೇಳು, ನಮಗೆ ನೀತ ತಾತ. ನಿನಗೆ ನಿಜವಲ್ಲದವನು ಒಲ್ಲದವನು. ಏತೆರದೊಳಿವನೀಗ ಪರಿಹರಿಸದಿರು ತಾನೆ ಬೀತು ಬಿನ್ನಳವಳಿದು ಹೋದಾಗಲೆ ಹೋಗಲಿ' ಎಂದು ಹೇಳುತ್ತಾರೆ. ಅದಕ್ಕೆ ಆದರಾಗಲಿ ಎಂದು ಬಸವಣ್ಣ ಒಪ್ಪಿಕೊಳ್ಳುತ್ತಾನೆ. ಮುಂದೆ ಹದಿನಾರರ ಹರೆಯದಲ್ಲಿ ಹರಿಹರನು ಹೇಳುವಂತೆ, 'ಜನನದ ಬಳಿವಿಡಿದೆಂತಕ್ಕೆ ಬಂದ ಜವ್ವನಂ ಶಿವಪೂಜೆಯಲ್ಲಿ ಸವೆಯವೇಳ್ಕುಂ. ಇಂತಲ್ಲಲ್ಲಿ ಶಿವಭಕ್ತಿಯುಂ ಕರ್ಮಮುಂ ಎಂದುವೊಂದಾಗಿರದು – ಎಂದೊಲ್ಲದೆ' ತ್ಯಜಿಸಿಬಿಡುತ್ತಾನೆ. ಇದು ಬಸವನ ವಚನ :

'ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ
ವೃಥಾಯ ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ ।
ಹಾರುವೆನಯ್ಯಾ ಭಕ್ತರ ಬರವ ಗುಡಿಗಟ್ಟಿ, ಹಾರುವೆನಯ್ಯಾ
ಶರಣರ ಬರವ ಗುಡಿಗಟ್ಟಿ
ಕೂಡಲಸಂಗಮದೇವನು ವಿಪ್ರಕರ್ಮವ ಬಿಡಿಸಿ ಅಶುದ್ಧನ
ಶುದ್ಧನ ಮಾಡಿದನಾಗಿ !'

ಮೇಲೆ ವಿವರಿಸಿದಂತೆ ಉಪನಯನವಾದುದರ ಸಮರ್ಥನೆ ಈ ವಚನದಲ್ಲಿ ಸಿಕ್ಕುತ್ತದೆ; ಪ್ರಭುಲಿಂಗಲೀಲೆಯಲ್ಲಿ ಚಾಮರಸನೂ ಉಪನಯನವಯಿತೆಂಬುದನ್ನು ಒಪ್ಪಿದ್ದಾನೆ (ಗತಿ ೧೧–ಪದ್ಯ ೧೮). ಆದುದರಿಂದ ಮಾತಾ ಪಿತೃಗಳ, ಬಂಧು ಬಳಗದವರ ಒತ್ತಾಯಕ್ಕೆ ಒಳಗಾಗಿ, ಇಲ್ಲವೆ ಅವರ ಮನಸ್ಸು ನೋಯಿಸಲಾರದೆ ಬಸವ ಉಪನಯನವನ್ನು ಒಪ್ಪಿದನೆಂದೂ, ಮುಂದೆ ಹದಿನಾರನೆಯ ವರ್ಷದಲ್ಲಿ ಕಾಲಿಟ್ಟಾಗ ಅದನ್ನು ಪರಿತ್ಯಜಿಸಿದನೆಂದೂ ಒಪ್ಪಬಹುದಾಗಿದೆ. ಇಲ್ಲಿ ತಂದೆ ಮಗನಿಗೆ 'ಸ್ವಾತಂತ್ರ್ಯ ನೀನು!' ಎಂದು ಕರದಿರುವುದು ಗಮನಾರ್ಹ. ನಿಜ, ಸ್ವಾತಂತ್ರ್ಯದ ಜ್ಯೋತಿರ್ಧರ ಬಸವ, ಸ್ವಾತಂತ್ರ್ಯವೇ ಬಸವ !

ಉಪನಯನ ಸ್ವೀಕಾರದಿಂದ ಅದರ ನಿರಾಕರಣೆಯವರೆಗಿನ ಕಾಲದಲ್ಲಿ ಬಸವನೇನು ಮಾಡುತ್ತಿದ್ದನೆಂಬುದನ್ನು ತಿಳಿದುಕೊಳ್ಳುವ ಮೊದಲು ಅವನ ತಂದೆ ತಾಯಿಗಳು ಎಲ್ಲಿಯವರೆಗೆ ಬದುಕಿದ್ದರೆಂಬುದನ್ನಷ್ಟು ಖಚಿತಪಡಿಸಿಕೊಳ್ಳಬೇಕು. ಹರಿಹರನಾದರೋ 'ಬಾಲಲೀಲೆಯ ಬಸವನೊಪ್ಪಿದಂ' ಎನ್ನುತ್ತ ತನ್ನ ಬಸವರಾಜದೇವರ ರಗಳೆಯ ಮೊದಲನೆಯ ಸ್ಥಲವನ್ನು ಮುಗಿಸಿ, ಎರಡನೆಯ ಸ್ಥಲವನ್ನು ಮಾದರಸ ಮಾದಲಾಂಬಿಕೆಯರ ಮರಣದೊಡನೆಯೇ ಮೊದಲು ಮಾಡುತ್ತಾನೆ : 'ಕಾರಣಿಕ ಬಸವಂ ಸಂಗಸುಖದಿಂದಿರ್ಪಲ್ಲಿ

(ಎಷ್ಟು ಕಾಲವೆಂಬುದನ್ನು ಹೇಳಿಲ್ಲ)..... ಶಿವಭಕ್ತನುಮಂ ಶಿವಭಕ್ತೆಯುಮಂ ಶಿವನಾಜ್ಞೆಯಿಂ ಕೈಲಾಸಕ್ಕೆ ಕೊಂಡೊಯ್ಯೆ' : ಏನೆಂದು ಅರ್ಥವಿಸಬೇಕು ಇದನ್ನು ? ಸುದೈವದಿಂದ ಮುಂದೊಂದು ಎಳೆ ಸಿಕ್ಕುತ್ತದೆ : 'ಶಿವಭಕ್ತಿ ಮುತ್ತಂತಿರ್ದ‌ಮುತ್ತಬ್ಬೆಯ ಪಕ್ಕದೊಳು... ನಾಲ್ಕೆರಡು ವರ್ಷಂ ಸುಖದೊಳಿರೆ.... ಪದಿನಾರು ವತ್ಸರದೊಡನೆ ನವಯೌವನಂ ಸಾರ್ದು ಬಸವರಾಜನ....' ಎಂದರೆ ಮುತ್ತಬ್ಬೆಯ ಪಕ್ಕದಲ್ಲಿ ನಾಲ್ಕು ವರ್ಷ ಕಳೆದ ಮೇಲೆ ಬಸವರಾಜನಿಗೆ ಹರಿನಾರರ ಹರೆಯ ಪ್ರಾಪ್ತವಾಯಿತು; ಆದುದರಿಂದ ಅವನ ಮಾತಾಪಿತೃಗಳು ಮರಣಹೊಂದಿದಾಗ ಅವನಿಗೆ ಹನ್ನೆರಡು ವರ್ಷಗಳಾಗಿರಬೇಕು; ಎಂದರೆ ಎಂಟನೆಯ ವರ್ಷದಲ್ಲಿ ಬಸವನಿಗೆ ಉಪನಯನವಾದ ಮೇಲೆ ನಾಲ್ಕು ವರ್ಷಗಳವರೆಗೆಮಾತ್ರ ಅಥವಾ ಎರಡು ವರ್ಷಗಳವರೆಗೆ ಮಾತ್ರ ಅವನ ತಂದೆತಾಯಿಗಳು ಬದುಕಿದ್ದರು. ಇದು ಒಪ್ಪಬಹುದಾದ ಅಂಶವೆನಿಸುತ್ತಿದೆ. ಯಾಕೆಂದರೆ ಬಸವಪುರಾಣದಲ್ಲಿ ಬಸವಣ್ಣ ಉಪನಯನವನ್ನು ನಿರಾಕರಿಸಿದ ಮೇಲೆ ಮತ್ತೆ ಮಾದರಸ ಮಾದಲಾಂಬಿಕೆಯರ ಹೆಸರನ್ನೇ ಎತ್ತಿಲ್ಲ; ಸಿಂಗಿರಾಜ ಪುರಾಣದಲ್ಲಿ (ಸಂಧಿ ೬) ಬಸವನ ಮದುವೆಗೆ ಅವನ ತಂದೆ ತಾಯಿಗಳು ಬಂದಿದ್ದುದರ ಉಲ್ಲೇಖವಿಲ್ಲ.

ಅಂತೂ ಹನ್ನೆರಡು ಅಥವಾ ಹತ್ತು ವರ್ಷಗಳವರೆಗೆ ಮಾತಾಪಿತೃಗಳ ಸಹವಾಸದಲ್ಲಿ, ಆಮೇಲೆ ಒಂದೆರಡು ವರ್ಷ ಮುತ್ತಬ್ಬೆಯ ಮಮತೆಯ ಮಡಿಲಲ್ಲಿ ಬೆಳೆಯುತ್ತಾನೆ ಬಸವಣ್ಣ. ಈ ಎಂಟು ವರ್ಷಗಳಲ್ಲಿ ಅವನು ಓದಿ ಅರಿತುಕೊಂಡ, ಕೇಳಿ ತಿಳಿದುಕೊಂಡ, ನೋಡಿ ಅನುಭವಿಸಿದ ವಿಷಯಗಳಾವವು? ಅವನ ವಿದ್ಯಾಗುರುಗಳಾರಾರು? ಅವರು ಎಂಥ ವಿಚಾರದವರು, ಯಾವ ಆಚಾರದವರು? ಅವರಿಲ್ಲದೆ ಬಸವಣ್ಣನ ಮೇಲೆ ಈ ಪರಿಣಾಮಗ್ರಹೀ ವವಯ (ಖಟಶಿಡಿಫುಶಟಿಚಿಳಿಭಟಜ ಚಿರಿಜ)ದಲ್ಲಿ ಪ್ರಭಾವ ಬೀರಿದವರು ಯಾರು ಯಾರು? ಮತ್ತೆ ವಿವರಗಳ ಅಭಾವ; ಆದರೂ ಸುಸ್ಪಷ್ಟ ಅನೇಕರ ಪ್ರಭವ. ತಾಯಿಯಿಂದ ಭಕ್ತ ಹೃದಯ ಬಳುವಳಿಯಾಗಿ ಬಂದಿರಲೇಬೇಕು; ಬಾಗೇವಾಡಿಯ ಪಂಡಿತರಿಂದ ಜ್ಞಾನೋಪಾಸನೆಯಲ್ಲಿ ನಿಷ್ಠೆ, 'ಯಃ ಕ್ರಿಯಾವಾನ್ಸಪಂಡಿತಃ' ಎಂಬ ವಿಶ್ವಾಸ ದೊರೆತಿರಬೇಕು; ರೇವಣ್ಣಸಿದ್ದೇಶ್ವರರಂದ ಪ್ರಭಾವಿತವಾಗಿದ್ದಿರಬಹುದಾದ ಮುತ್ತಬ್ಬೆಯಿಂದ ಶೈವಮಹಾರಣ್ಯದಲ್ಲಿ ಅಲ್ಲಲ್ಲಿ ಬಳ್ಳಿಯಾಗಿ ಉಳಿದು, ಬೆಳೆಯಲು ಹಾತೊರೆಯುತ್ತಿದ್ದ ವೀರಶೈವದ ಸ್ಥೂಲ ಪರಿಚಯ ಪಡೆಯುವುದರ ಜೊತೆಗೆ ಪ್ರಸಿದ್ಧ ಶಿವಭಕ್ತರ, ಅರುವತ್ತು ಮೂರು ಪುರಾತನರ ಕಥೆಗಳನ್ನು ಕೇಳಿರಬೇಕು; ಮುದನೂರು, ಕೊಂಡಗುಳಿಗಳು ಬಾಗೇವಾಡಿಯಿಂದ ಅನತಿ ದೂರದಲ್ಲಿಯೇ ಇರುವ ಕಾರಣ ಜೇಡರ ದಾಸಿಮಯ್ಯ, ಶಂಕರ ದಾಸಿಮಯ್ಯ, ತೆಲುಗು ಬೊಮ್ಮಯ್ಯ, ಕೇಶಿರಾಜ ಮೊದಲಾದವರ ಉಜ್ವಲ ಜೀವನ ಮತ್ತು ಕಾರ್ಯಗಳ ಪಿರಣಾಮ ಖಂಡಿತವಾಗಿ ಆಗಿರಬೇಕು; ಎಲ್ಲಕ್ಕಿಂತ ಹೆಚ್ಚಾಗಿ ಸುತ್ತುಮುತ್ತಲಿನ ಸಮಾಜದಲ್ಲಿದ್ದ ಎದ್ದುಕಾಣುವ ವೈಷಮ್ಯಗಳು – ಹುಟ್ಟು, ಹೊಲೆ, ಲಿಂಗ, ವರ್ಣ, ಧನ, ದಾರಿದ್ರ್ಯ ಮುಂತಾದುವುಗಳನ್ನು ಆಧರಿಸಿ ನಾಯಿಕೊಡೆಗಳಂತೆ,

ಮುಳ್ಳುಬಳ್ಳಿಗಳಂತೆ, ವಿಷವೃಕ್ಷಗಳಂತೆ ಬೆಳೆದುನಿಂತಿದ್ದ ವೈಷಮ್ಯಗಳು ಅವನ ಎದೆಯನ್ನು ಕಲಕಿ ಅವುಗಳ ಬಗ್ಗೆ ಆಳವಾಗಿ ಆಲೋಚಿಸಹಚ್ಚಿರಬೇಕು. ಅಲ್ಲದೆ, ಎಲ್ಲ ಕುಲಜಾತಿಗಳ ಮಕ್ಕಳೊಡನೆ ಬೆರೆತು ಬೆಳೆದಿದ್ದ, ಉಪನಯನವನ್ನು ವಿರೋಧಿಸಿ ಕಾಟಾಚಾರಕ್ಕೆ ಒಪ್ಪಿದ್ದ ಅವನನ್ನು ಕಂಡಾಗಲೆಲ್ಲ 'ವಿಶುದ್ಧ' ವಿಪ್ರರು ಮೂಗು ಮುರಿದಾಗ ಆ ಅಸಹನೆ ಬಸವ ತಾನು ಹುಟ್ಟಿದ ಕುಲದ ಬಗೆಗೆ ಜಿಗುಪ್ಸೆ ಹೊಂದುವಂತೆಸಗಿರಬೇಕು.

ಅಂತೂ ಹದಿನಾರು ವರುಷಗಳು ಉರುಳಿದುವು. ಎಂತೆಂತೋ ಆ ಅವಧಿಯನ್ನು ಅಲ್ಲಿ ಕಳೆದಿದ್ದ ಬಸವನ ಉದಾರ ಚೇತನ ಇನ್ನು ಆ ಪರಿಸರದಲ್ಲಿ ಇರಲೊಪ್ಪಲಿಲ್ಲ. ಕೂಡಲಸಂಗಮದ ಕರೆ ದಿನದಿನಕ್ಕೆ ಪ್ರಬಲವಾಗುತ್ತ ನಡೆದಿದ್ದಿತು. 'ಕೂಡಲ ಸಂಗನ ಕರೆ, ಆಲಿಸು ಕೂಡಲಸಂಗನ ಕರೆ; ಸಂಗಮೇಶ್ವರಕೆ ತ್ವರೆ ತ್ವರೆ!' ಹೊರಟ ಬಸವಣ್ಣ – ಬಾಗೇವಾಡಿಯು ಭುವನಕ್ಕೆ ನೀಡಿದ ಭಾಗ್ಯವಾಗಿ ಹೊರಟ. ಜೊತೆಗೆ ಅಕ್ಕ ನಾಗಲಾಂಬೆ, ಮಾವ ಶಿವಸ್ವಾಮಿ. ಯಾರೇ ಬಸವಣ್ಣನಲ್ಲಿ ಅವಿತಿದ್ದ ಅದ್ಭುತ ಶಕ್ತಿಯನ್ನು ಅರಿತಿದ್ದಿರಲಿ, ಬಿಡಲಿ – ಅಕ್ಕ ನಾಗಲಾಂಬಿಕೆ ಮಾತ್ರ ಖಂಡಿತವಾಗಿ ಅರಿತಿದ್ದಳು. ಶಿವತತ್ವ ಚಿಂತಾಮಣಿಯಲ್ಲಿ ಉಲ್ಲಿಖಿತವಾಗಿರುವಂತೆ ಮಾದಲಾಂಬಿಕೆ ತಾನು ಕಂಡ 'ರೂಢಿಗಚ್ಚರಿಯ ಕನಸು' ಹೇಳಲು ನಾಗಲಾಂಬೆಯು, 'ಮಾತೆ ಇದು ಕನಸೆ? ಕಂಗಳ ಮುಂದೆ ತೋರುವೀ ಜ್ಯೋತಿರ್ಮಯನ ಲಕ್ಷಣಂಗಳ್ ಪೇಳುತಿವೆ!' ಈ ಶಿಶು ಸಾಮಾನ್ಯವಾದುದೆಂದು ತಿಳಿಯಬೇಡ. 'ಭೂತಳದ ಸಕಲ ಜೀವರುಗಳು ಕೃಪೆಯಿಂ ಮಾನಿತರಂ ಮಾಡಿ ಶಿವಲೋಕಕ್ಕೆ ಸಲಿಸಬಂದೀತನೇಂ ನರನೆ, ಶಿವನು!' ಎಂದು ಹೇಳುತ್ತಾಳೆ. ಗಂಡ ಶಿವಸ್ವಾಮಿಯೇನೋ ಸಿಂಗಿರಾಜ ಪುರಾಣವೆ ಹೇಳುವಂತೆ 'ಸಂಸಾರಭ್ರಾಂತಳಿಯದಳಿಯ' ನೆನಿಸಿಕೊಂಡಿದ್ದರೂ ಅಕ್ಕ ನಾಗಾಯಿ ದೈವೀ ತೇಜಸ್ಸಿನ ಧೀರೆ. ತನ್ನ ಸಾಧನೆ ಸಿದ್ಧಿಗಳಿಂದ ತನ್ನ ಗಂಡನ ಹೆಸರೂ ಹೇಳಹೆಸರಿಲ್ಲದಂತೆ ಮಾಡಿದ ಆಕೆ ಮೇರಿ ಮೊದಲಾದವರನ್ನು ನೆನಪಿಗೆ ತರುತ್ತಾಳೆ. ಅಂಥ ಅಕ್ಕ ಬಸವಣ್ಣನಿಗೆ ದೊರೆತುದು ಬಸವನ ಭಾಗ್ಯವಷ್ಟೇ ಅಲ್ಲ, ಬಸವಭಕ್ತರೆಲ್ಲರ ಭಗ್ಯ.

ಕಪ್ಪಡಿ ಸಂಗಮದ ಕುಲಪತಿ ಜಾತವೇದಮುನಿ (ಈಶಾನ್ಯಗುರು)ಗಳು ಬಹಳ ಪ್ರೀತಿ ವಾತ್ಸಲ್ಯಗಳಿಂದ ಬಸವಣ್ಣನನ್ನು ಬರಮಾಡಿಕೊಳ್ಳುತ್ತಾರೆ. ಬಸವ ಹುಟ್ಟುತ್ತಲೇ ಬಾಗೇವಾಡಿಗೆ ಹೋಗಿ ಅವರು ಬಸವನಿಗೆ ಭಸಿತ ಧರಿಸಿರಲಿ, ಬಿಡಲಿ, ಸ್ವಲ್ಪ ದೂರದಲ್ಲಿಯೇ ಒಂದು ಜೀವಜ್ಯೋತಿ ಹೊತ್ತಿಕೊಂಡು ಅಲ್ಪಕಾಲದಲ್ಲಿಯೇ ಅಮರ ಪ್ರಕಾಶವನ್ನು ಪಸರಿಸತೊಡಗಿದುದನ್ನು ಗಮನಿಸದೆ ಹೋಗಿರಲಾರರು. ತಮಗೆ ತಕ್ಕ ಶಿಷ್ಯ ದೊರಕಬೇಕೆಂಬುದು ಎಲ್ಲ ನೈಜ ಗುರುಗಳ ಬಯಕೆ. ಜಾತವೇದಮುನಿ (ಈಶಾನ್ಯ ಗುರು)ಗಳಿಗೂ ಅಂಥ ಆಸೆ ಇದ್ದಿರಬೇಕು. ಬಸವನ ಬರವಿನಿಂದಾಗಿ ಅವರ ಯೋಗ್ಯ ಶಿಷ್ಯನ ಆಸೆ ಫಲಿಸಿತು; ಬಸವಣ್ಣನಿಗಿದ್ದ ಯೋಗ್ಯ ಗುರುಗಳ ಹಂಬಲವೂ ಹಣ್ಣಿತು.

ಸಂಗನ ಸಾನ್ನಿಧ್ಯದಲ್ಲಿ, ಗುರುವಿನ ಆಶ್ರಯದಲ್ಲಿ ಬಸವಣ್ಣ ದಿನಗಳೆದ ಬಗೆ ಯಾವುದಿದ್ದಿರಬಹುದು? ಬಸವಣ್ಣನಲ್ಲಿಗೆ ಹೋಗುತ್ತಲೆ 'ಈಶಾನ್ಯ ಗುರುಗಳ್ ಕಂಡು, ಈತಂ ಕಾರಣಿಕನಾಗಲೆವೇಳ್ಕುಮೆಂದೇ ಹತ್ತೆ ಸಾರ್ದು – ಎಲೆ ಭಕ್ತ ನೀನೆಲ್ಲಿಗಂ ಪೋಗಬೇಡ. ಆವುದುಂ ಚಿಂತೆ ಬೇಡ. ಸಂಗಮೇಶ್ವರಂಗೆ ಪೊಸ ಪುಷ್ಪಮಂ ತಿಳಿಯಗ್ಗವಣಿಯಂ ತಂದು ಓಜೆಯಿಂ ಪೂಜೆಗೈದು ಪ್ರಸಾದಕಾಯಕನಾಗಿ ಸುಖದೊಳಿಪ್ಪುದು' ಎಂದು ಹೇಳುತ್ತಾರೆ. 'ಓಜೆಯಿಂ ಪೂಜೆಗೈದು'ದರ ಮೈ ಜುಮ್ಮೆನ್ನಿಸುವ ವರ್ಣನೆಗಾಗಿ ಮೂರನೆಯ ಸ್ಥಲವೆಲ್ಲ ಮೀಸಲಾಗಿದೆ. ಅದೆಲ್ಲವನ್ನೂ ಇಡಿಯಾಗಿ ಓದಿಯೇ ಅದರ ಆನಂದವನ್ನು ಅನುಭವಿಸಬೇಕು; ಬಿಡಿಯಾಗಿ ಉದ್ಧರಿಸಿದರೆ ಅದಕ್ಕೆ ಅಪಚಾರವೆಸಗಿದಂತೆ. ಆದರೂ ಅದರಲ್ಲಿಯ ಎರಡು ಸಾಲುಗಳನ್ನು ಉಲ್ಲಿಖಿಸಲೇಬೇಕು:

> 'ಲಿಂಗ ಜಂಗಮವೊ ಮೇಣ್ ಜಂಗಮವೆ ಲಿಂಗವೋ!
> ಲಿಂಗ ಜಂಗಮವೆರಡು ಇಳೆಯೊಳು ವಿಭೇದವೋ।
> ಎಂಬಂತೆ ಸಾತ್ವಿಕ ಪ್ರಭು ಪೂಜಿಸುತ್ತಮಿರೆ...'

ಇದಕ್ಕೆ ಮೇಲೆ ಉಕ್ತವಾದ 'ಪ್ರಸಾದಕಾಯಕನಾಗಿ ಸುಖದೊಳಿಪ್ಪುದು' ಎಂಬುದನ್ನು ಸೇರಿಸಿದಾಗ ಏನು ಅರ್ಥ ಹೊರಡುತ್ತದೆ? ಮುಂದೆ 'ಲಿಂಗ ಜಂಗಮದಲ್ಲಿ ಲೀನವಾದ ಆಚಾರವೇ ಸಮಯಾಚಾರ'ವೆಂದು ಸಾರಿದ ಬಸವಣ್ಣನವರು. ಆ ವೇಳೆಗಾಗಲೇ 'ನೇಣಿಂಗೆ ಹೊರಗಾಗಿ ಸಮಯಾಚಾರಕ್ಕೆ ಒಳಗಾಗು'ತ್ತಿದ್ದರೆಂಬ ಅರ್ಥವನ್ನಲ್ಲವೆ? ಆದುದರಿಂದ ಜಾತವೇದಮುನಿ ಅಥವಾ ಈಶಾನ್ಯಗುರುಗಳು ಸನಾತನ ದೃಷ್ಟಿಯ ಸೈವಗುರುಗಳಾಗಿರಲಾರರು. ಅವರೂ ಆ ಕಾಲದ 'ಹೊಸ ಅಲೆ'ಯ ಹೊಡೆತಕ್ಕೆ ಸಿಕ್ಕಿ ಹಳೆಯ ನಂಬಿಕೆಗಳತ್ತ ಹೊಸ ನೋಟವನ್ನು ಹರಿಸಿದವರಾಗಿರಬೇಕು. ಬಸವಣ್ಣನವರಿಲ್ಲಿ ಸ್ಥಾವರಲಿಂಗ ಪೂಜಕರಾಗಿ ಪ್ರಾರಂಬಿಸಿ ಶೀಘ್ರದಲ್ಲಿಯೇ ಇಷ್ಟ ಲಿಂಗೋಪಾಸಕರಾಗಿ ಪರಿವರ್ತಿತರಾದರೆಂಬುದು ಸ್ಪಷ್ಟ. ಅವರಿಗೆ ಇಷ್ಟಲಿಂಗ ಇಷ್ಟವಾದುದು ಅವರ ಒಳಗಿನ ಸ್ಫುರಣೆಯಿಂದಲೊ, ಸಂಗನ ಆದೇಶದಿಂದಲೊ, ಗುರುಗಳ ಉಪದೇಶದಿಂದಲೊ, ಆದ್ಯರ ವಚನಗಳಿಂದಲೊ, ಕಲ್ಲುಲಿಂಗದ ಕೊಡುಗೆಯಾಗಿಯೊ? 'ವೇದವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗವ ತಂದುಕೊಟ್ಟನಯ್ಯಾ ಸದ್ಗುರು ಎನ್ನ ಕರಸ್ಥಲಕ್ಕೆ' ಎಂಬ ವಚನವನ್ನೂ, 'ಲಿಂಗದ ಒಡಲ ಮನೆ ಮಾಡಿಪ್ಪ ಜಂಗಮವೆನ್ನ ಕಣ್ಣ ಮುಂದೆ (ಬ.ಹೆ.ವ.೬೨) ತೋರಿದರೆ ಇಂದೆನ್ನ ಭಾಗ್ಯಕ್ಕೆ ಕಡೆಯಿಲ್ಲ' (ಬ.ಹ.ವ.೨೭೬) ಎಂಬ ವಚನವನ್ನೂ ಗಮನಿಸಿದಾಗ ಸದ್ಗುರುವೊಬ್ಬನಿಂದ ಬಸವಣ್ಣನವರಿಗೆ ಇಷ್ಟಲಿಂಗಧಾರಣವಾಗಿರಬೇಕೆಂದೆನಿಸುತ್ತದೆ. ಮುಂದೆ 'ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು' ಎಂದು ಸಾರಿದ ಬಸವಣ್ಣನ ಅಂಗದ ಮೇಲೆ ಲಿಂಗ ಬಂದಾಗ ಶಿವಲಿಂಗದ ಸ್ಥಾವರತ್ವ ಹೋಗಿ ಇಷ್ಟಲಿಂಗದ ಜಂಗಮತ್ವ ಅದಕ್ಕೆ ಅಳವಟ್ಟಿತು ಎಂದರೆ, ದೇಗುಲದಲ್ಲಿ

ನಿಶ್ಚಲವಾಗಿರುತ್ತಿದ್ದ ಲಿಂಗ ಭಕ್ತ ಚಲಿಸಿದಂತೆಲ್ಲ ಚಲಿಸುತ್ತ, ಭಕ್ತ ಗಮಿಸಿದಂತೆ ಗಮಿಸುತ್ತ ಜಂಗಮಲಿಂಗವಾಯಿತು.

ಈ ಭಕ್ತಿಯ ಬೆಳವಣಿಗೆಯ ಒಳಬಾಳು ಒಂದೆ ಕಡೆ ನಡೆದಿದ್ದರೆ ಆಳವಾದ ಅಧ್ಯಯನ, ಚಿಂತನ, ಮಂಥನಗಳು ಇನ್ನೊಂದುಕಡೆಗೆ ನಡೆದಿದ್ದುವು. ಮಹಾಗ್ರಹಾರವೆನಿಸಿದ್ದ 'ಮತತ್ರಿವೇಣಿ' ಬಾಗೇವಾಡಿಯಲ್ಲಿ, 'ಕರ್ನಾಟ ಕಾಶೀಪುರಂ' ಎಂದೆನಿಸಿದ್ದ ಇಂಗುಳೇಶ್ವರದಲ್ಲಿ ಇದ್ದ ವಿದ್ವದ್ವೃಂದದಿಂದ ಪಡೆದಿದ್ದ ವೇದಾಗಮೋಪನಿಷತ್ ಪುರಾಣಾದಿಗಳ ಪರಿಚಯವನ್ನು 'ಆದಿ ಬ್ರಹ್ಮಪುರಿ' ಎನಿಸಿದ್ದ ಕಪ್ಪಡಿ ಸಂಗಮದಲ್ಲಿ ಪಾರಮರ್ಶೆಗೆ ಗುರಿಮಾಡಿರಬೇಕು ಬಸವಣ್ಣ, 'ಮಹೀಸುರಪುರಂ' ಎನಿಸಿದ್ದ ಮನಗೂಳಿ 'ಜಗದ್ವಿನುತ' ಎನಿಸಿದ್ದ ಮುತ್ತಗೆಗಳ ಪಂಡಿತರ ಸಂಪರ್ಕವೂ ಉಂಟಾಗಿ ಅವರೊಡನೆ ಶಾಸ್ತ್ರಾರ್ಥ ಚರ್ಚೆಗಳು ನಡೆದಿರಬೇಕು, "ಶಾಸ್ತ್ರಘನವೆಂಬೆನೆ? ಕರ್ಮವ ಭಜಿಸುತ್ತಿದೆ! ವೇದ ಘನವೆಂಬೆನೆ? ಪ್ರಾಣಿವಧೆಯ ಹೇಳುತ್ತಿದೆ! ಸ್ಮೃತಿಘನವೆಂಬೆನೆ? ಮುಂದಿಟ್ಟರಸುತ್ತದೆ! (೨೦೮) 'ಆದಿಪುರಾಣ ಅಸುರರಿಗೆ ಮಾರಿ; ವೇದ ಪುರಾಣ ಹೋತಿಂಗೆ ಮಾರಿ; ರಾಮಪುರಾಣ ರಕ್ಕಸರಿಗೆ ಮಾರಿ; ಭಾರತ ಪುರಾಣ ಗೋತ್ರಕ್ಕೆ ಮಾರಿ....' (೫೬೨) ಇತ್ಯಾದಿ ಉಕ್ತಿಗಳನ್ನವರು ಉಸಿರುತ್ತಿರಲಿಲ್ಲ. ಅವರಿಗೆ ಅತ್ಯಂತ ವೇದನೆಯನ್ನುಂಟು ಮಾಡಿದ ವಿಷಯಗಳೆಂದರೆ ಎರಡೆಂದು ತೋರುತ್ತಿದೆ ಆ ಕಾಲದಲ್ಲಿ; ೧) ಧರ್ಮಾಧಿಕಾರ, ತನ್ಮೂಲಕ ರಾಜಕೀಯ ಅಧಿಕಾರ, ವಿದ್ಯಾರ್ಜನೆಯ ಅಧಿಕಾರ, ಸಾಮಾಜಿಕ ಸ್ಥಾನ ಮಾನಗಳ ಅಧಿಕಾರ – ಎಲ್ಲ ಅಧಿಕಾರಗಳ ಗುತ್ತಿಗೆ ಪಡೆದಿದ್ದ ವಿಪ್ರರು ಕರ್ಮ, ಪ್ರಾಣಿವಧೆ, ಕಂದಾಚಾರಗಳಿಗೆ ಕಟ್ಟುಬಿದ್ದವರಾಗಿರುವದಲ್ಲದೆ ನುಡಿಯುವುದೊಂದು, ನಡೆಯುವುದೊಂದು ಮಾಡುತ್ತಿರುವುದು ಒಂದನೆಯ ವ್ಯಥೆ; 'ಏನಯ್ಯಾ, ವಿಪ್ರರು ನುಡಿದಂತೆ ನಡೆಯರು! ಇದೆಂಥಹದಯ್ಯ, ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ !' (೫೭೬). ೨) ಸಮಾಜಮಂದಿರದ ಗೋಪುರದಲ್ಲಿ ಕುಳಿತು ಸುಲಿಗೆಯಿಂದ ಸುಖ ಪಡುತ್ತಿದ್ದ ಮೇಲ್ವರ್ಗಗಳ ಸ್ಥಿತಿ ಇಂತಿದ್ದರೆ ಅದರ ಬುನಾದಿಯ ಕಲ್ಲುಗಳಾಗಿ, ಮೇಲಿನ ಭರವನ್ನೆಲ್ಲ ಹೊತ್ತು, ದಾಸಸ್ಯ, ದಾರಿದ್ರ್ಯ, ಅಜ್ಞಾನ, ಅಪಮಾನ, ಅಂಧ ವಿಶ್ವಾಸಗಳಲ್ಲಿ ನರಳುತ್ತಿದ್ದ ಅಸ್ಪೃಶ್ಯರೂ, ಅಂತ್ಯಜರೂ, ಪಂಚಮರೂ, ಗುಲಾಮರೂ, ಸೇವಾ ಜೀವಿಗಳೂ, ಶೂದ್ರರೂ ಇದ್ದ ಕರುಣಾಜನಕ ಸ್ಥಿತಿ ಇನ್ನೊಂದು ಕಡೆಗೆ: 'ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲ ನಾರಿ ದೈವ ಕಾಣಿರೋ! ದೈವ ದೈವವೆಂದು ಕಾಲಿಡಲಿಂಬಿಲ್ಲ' (೫೬೩)ದಂತಹ ಹಾಸ್ಯಾಸ್ಪದ ಸ್ಥಿತಿ: 'ಹಾಳು ಮೊರಡಿಗಳಲ್ಲಿ, ಊರ ದಾರಿಗಳಲ್ಲಿ, ಕೆರೆ ಬಾವಿ ಹೂಗಿಡ ಮರಂಗಳಲ್ಲಿ, ಗ್ರಾಮ ಮಧ್ಯಗಳಲ್ಲಿ, ಚೌಪಥ ಪಟ್ಟಣ ಪ್ರದೇಶದಲ್ಲಿ, ಹಿರಿಯಾಲದ ಮರದಲ್ಲಿ ಮನೆಯ ಮಾಡಿ ಕರೆವೆಮ್ಮಯ, ಹಸುಗೂಸು, ಬಸುರಿ ಬಾಣಂತಿ,ಲ ಕುಮಾರಿ ಕೊಡಗೂಸೆಂಬರ ಹಿಡಿದು ತಿಂಬ, ತಿರಿದುಂಬ ಮಾರಯ್ಯ, ಬೀರಯ್ಯ, ಕೇಚರಗಾವಿಲ, ಅಂತರಬೆಂತರ, ಮಾರಯ್ಯ, ಬೀರಯ್ಯ, ಧೂಳಯ್ಯ, ಕೇತಯ್ಯ,' (೫೫೭) ಎಂಬ ಅಜ್ಞಾನಜನ್ಯ ಅಸಂಖ್ಯ ದೇವ

ದೇವಿಯರ ಹಿಂಡು, ಅವುಗಳಿಗೆ ಅಷ್ಟೇ ಮೌಢ್ಯಮಯ ಪೂಜೆ : 'ಮಾರಿಕವ್ವೆಯನೋಂತು ಕೊರಳಲ್ಲಿ ಕಟ್ಟಿಕೊಂಬರು; ಮೊರನ ಗೋಟಿಗೆ ಬರ್ಪ ಕಿರುಕುಳ ದೈವಕ್ಕೆ ಕುರಿಯನಿಕ್ಕಿಹೆವೆಂದು ನಲಿನಲಿದಾಡುವರು...!' (೫೫೯). ಇಂಥ ದೈವಗಳನ್ನೇ ನಂಬಿ ಕುರುಡು ಬಾಳು–ಬರಡು ಬಾಳು ಬದುಕಿ ಹೋಗಬೇಕೆ ಭಾರತ ನಿವಾಸಿಗಳು? ಈ 'ಅರಗು ತಿಂದು ಕರಗುವ, ಉರಿಯ ಕಂಡರೆ ಮುರುಟುವ, ಅವಸರ ಬಂದರೆ ಮಾರುವ, ಅಂಜಿಕೆಯಾದರೆ ಹೂಳುವ ದೈವ' (೫೫೮)ಗಳೇ ದಾರಿದೀಪವಾಗಬೇಕೆ ನೂರರಲ್ಲಿ ತೊಂಬತ್ತು ಜನರಿಗೆ? 'ಲೋಗರ ಬೇಡಿಕೊಂಡುಂಬ ದೈವಂಗಳು ತಾವೇನ ಕೊಡುವವು?' ಆದರೂ ಇವರು ಈ ರೀತಿ ಅಂಧತಮಸ್ಸಿನ ಅಜ್ಞಾನ ಲೋಕದಲ್ಲಿರುವುದು ಮೇಲ್ವರ್ಗಗಳಿಗೆ ಬೇಕಾಗಿದ್ದಿತು. ಅವರನ್ನು ಆಳಾಗಿ ಇರಿಸಿ, ಕೀಳಾಗಿ ನಡೆಸಿ, ಗೋಳಾಡಿಸಿ ದುಡಿಸಿಕೊಳ್ಳಲು. ಅವರಾದರೂ ಬೆಳಕಿನ ಬಾಳು ಬಾಳುತ್ತಿದ್ದರೆ? ಇಲ್ಲ. 'ವಿಷ್ಣುವ ಪೂಜಿಸಿ ಮುದುಹ ಸುಡಿಸಿಕೊಂಡುದ ಕಂಡೆ; ಜಿನನ ಪೂಜಿಸಿ ಬತ್ತಲೆಯಪ್ಪುದ ಕಂಡೆ, ಮೈಲಾರನ ಪೂಜಿಸಿ ನಾಯಾಗಿ ಬೊಗಳುವರ ಕಂಡೆ...!' (೫೬೦) ಮುಂದೆ ಚೆನ್ನಬಸವಣ್ಣನವರೊರೆದಂತೆ, 'ಶೈವ ಸೈವೆರಗಾದ, ಪಾಶುಪತಿ ಪಥವರಿಯ, ಕಾಳಾಮುಖಿ ಕಂಗೆಟ್ಟ, ಮಹಾವ್ರತಿ ಮದವೇರಿದ, ಸನ್ಯಾಸಿ ಪಾಷಂಡಿಯಾದ, ಕಾಪಾಲಿ ಮರುಳಾಗಿ ತಿರುಗಿದ !'

ದಾರಿ ಯಾವುದು ಈ ದರಿ ತಪ್ಪಿದ, ಗುರಿಗೆಟ್ಟ, ಕಂಗೆಟ್ಟ ಜನಕ್ಕೆ? ಅರುವತ್ತು ಮೂವರು ಪುರಾತನ ದಾರಿಯೆ? ಅವರಲ್ಲಿ ಅನೇಕರು ಅನುಸರಿಸಿದ್ದ ಘೋರ ಭಕ್ತಿಯ ಪಥ ಸುಪಥವಾಗಬಲ್ಲುದೆ ಸಾಮಾನ್ಯರಿಗೆ? 'ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣಾ! ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ ಭಯ ಕಾಣಿರಣ್ಣಾ! ಸಿರಿಯಾಳನ ಮಗನ ಬೇಡಿದಂದಿಂ ಭಯ ಕಾಣಿರಣ್ಣಾ!' (೫೪೭). ಆದುದರಿಂದ, 'ಮುನ್ನಿನ ಆದ್ಯರ ಪಂಥಗಳು ಇನ್ನಾರಿಗೆಯೂ ಅಳವಡದು, ನೋಡಾ! ಬಲ್ಲೆನಾಗಿ ಒಲ್ಲೆನು!' (೬೩೫). ಅವರಲ್ಲಿಯೂ ಸೌಮ್ಯಭಕ್ತಿಯ ಸಾಧಕರಿಲ್ಲವೆ? ಏಕಿಲ್ಲ? 'ದೇವಾ, ನಿಮ್ಮ ಪೂಜಿಸಿ ಚೆನ್ನನ ಕುಲ ಚೆನ್ನಾಯಿತ್ತಯ್ಯಾ! ದೇವಾ. ನಿಮ್ಮ ಪೂಜಿಸಿ ದಾಸನ ಕುಲ ದೆಸೆವಡೆಯಿತು....' (೬೦೬). ಆದುದರಿಂದ ಅಲ್ಲಿಯ ಮಾದರ ಚೆನ್ನ, ಇಲ್ಲಿಯ ಜೇಡರದಾಸ – ಇಂಥವರ, ಇವರಂಥವರ ಜೀವನ–ಸಾಧನೆಗಳಿಂದ ಶಿವಕರವಾದುದನ್ನು ಹೆಕ್ಕಿ ತೆಗೆದು ಶ್ರೀಸಾಮಾನ್ಯರೂ ಅಸಾಮಾನ್ಯರೂ ಸೇರಿಯೇ ಸ್ವೀಕರಿಸಬಹುದಾದ ಶಿವಾಚಾರವೊಂದನ್ನು ರೂಪಿಸಲು ಆಗುವುದಿಲ್ಲವೆ?

ಏಕೆ ಆಗುವುದಿಲ್ಲ? ಮಗನ ಮಾಂಸ ಬಡಿಸಿದರೇ ಒಲಿಯುವನೆ ಶಿವನು? 'ನಂಬಿ ಕರೆದರೆ ಓ' ಎನ್ನದಿರುವನೆ? ಕುಲ ಜಾತಿಗಳನ್ನು ನೋಡಿ ಒಲಿಯುವನೆ ಅವನು? ಕುಲ, ಕುಲ, ಕುಲವೆಂದು ಕುಣಿದಾಡುವರಲ್ಲ – ಯಾವುದು ಕುಲ? 'ನೀನಿಲಿದ ಕುಲಕ್ಕೆ, ನೀನೊಲ್ಲದ ಹೊಲೆಗೆ ಮೇರೆಯುಂಟೆ, ದೇವಾ'? 'ಅವನ ಒಲವನ್ನು ಗಳಿಸಿದವನೆ

ಕುಲಜ, ಗಳಿಸದವನೆ ಅಂತ್ಯಜ!' ಮಾದಾರ ಚೆನ್ನಯ್ಯ ಘಂಟಾ ಘೋಷವಾಗಿ ಸಾರಿದ್ದಾನೆ: 'ಆಚಾರವೇ ಕುಲ, ಅನಾಚಾರವೆ ಹೊಲೆ...! ವೇದ ಶಾಸ್ತ್ರಕ್ಕೆ ಹಾರುವನಾಗಿ, ವೀರ ವಿತರಣಕ್ಕೆ ಕ್ಷತ್ರಿಯನಾಗಿ, ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ, ವ್ಯವಹಾರದೊಳಗಾಗಿ, ಕೃಷಿಯ ಮಾಡುವುದಕ್ಕೆ ಶೂದ್ರನಾಗಿ... ನೀಚ ಶ್ರೇಷ್ಠವೆಂಬೆರಡು ಕುಲವಲ್ಲದೆ ಹೊಲೆ ಹದಿನೆಂಟು ಜಾತಿಯೆಂಬ ಕುಲವಿಲ್ಲ.... ನರಕುಲ ಹಲವಾದಲ್ಲಿ ಯೋನಿಯ ಉತ್ಪತ್ತಿಯೊಂದೇ ಭೇದ.... ಎಲ್ಲಕ್ಕೂ ನೀರು, ನೆಲ, ಸೂರ್ಯ, ಸೋಮ ಆರೈದು ನೋಡುವ ದೃಷ್ಟಿಯೊಂದೇ... ತಿಳಿದು ನಿಂದಲ್ಲಿ ಹಲವು ಕುಲದ ಹೊಲೆಯೊಂದೂ ಇಲ್ಲವೆಂದೆ... ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲಿಗ, ದೂರ್ವಾಸ ಮಚ್ಚಿಗ, ದಧೀಚಿ ಕೀಲಿಗ, ಕಶ್ಯಪ ಕಮ್ಮಾರ, ರೋಮಜ ಕಂಚುಗಾರ, ಕೌಂಡಿಲ್ಯ ನಾವಿದನೆಂಬುದನರಿದ ಮೇಲೆ ಕುಲ ಉಂಟೆಂದು ಛಲಕ್ಕೆ ಹೋರಲೇತಕ್ಕೆ? ಹೆಣ್ಣು ಗಂಡೆಂಬ ತಾರತಮ್ಯಕ್ಕಾದರೂ ತಳಹದಿಯಿದೆಯೆ? ದಾಸಿಮಯ್ಯ ಲೇಸಾಗಿ ಹೇಳಿದ್ದಾನೆ: 'ಮಡದಿಯ ಪ್ರಾಣಕ್ಕೆ ಇದ್ದಿತ್ತೇ ಮೊಲೆಮುಡಿ; ಒಡೆಯರ ಪ್ರಾಣಕ್ಕೆ ಇದ್ದಿತ್ತೇ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಪ್ರಾಣದಲ್ಲಿ ಹಿಡಿಗೋಲ....?' ಕುಲಭೇದ, ಲಿಂಗಭೇದ, ವರ್ಗಭೇದ, ವರ್ಣಭೇದ – ಮನುಜಕೃತ ಭೇದಗಳೆಲ್ಲವೂ ಕೃತ್ರಿಮವಾದವುಗಳು; ಶಿವನಿಚ್ಛೆಗೆ ವಿರುದ್ಧವಾದುವುಗಳು. ಎಲ್ಲರ ಉತ್ಪತ್ತಿ ಯೋನಿಯಲ್ಲಿ; ಯಾರ ಪ್ರಾಣಕ್ಕೂ ಹೆಣ್ಣು ಗಂಡೆಂಬ, ಮೇಲು ಕೀಳೆಂಬ, ಉಪಾಧಿಯಿಲ್ಲ, ಕಲಂಕವಿಲ್ಲ.... ಎಂದಮೇಲೆ ಯಾಕೆ ಈ ಕೃತ್ರಿಮ ವಿಭೇದಗಳು, ಅನ್ಯಾಯ ಪೂರ್ಣ ವೈಷಮ್ಯಗಳು. ಕೆಲವರ ಸುಖಕ್ಕಾಗಿ ಬಹುಜನರ ಶೋಷಣೆಗಳು ಮುಂದುವರಿಯಬೇಕು? ಯಾಕೆ???....

ಈ ಬಗೆಯ ಒಳತೋಟಿಯಲ್ಲಿ, ಅಧ್ಯಯನದಲ್ಲಿ, ಮತಮತಗಳ ನಿಷ್ಠುರ ವಿಮರ್ಶೆಯಲ್ಲಿ, ಬಹುಜನ ಸಮಾಜದ ಪತನದ ಕಾರಣಗಳ ಪರಾಮರ್ಶೆಯಲ್ಲಿ, ಹೊಸ ಧರ್ಮವೊಂದರ ಸಂಸ್ಥಾಪನೆಯ ಸಾಧ್ಯಾಸಾಧ್ಯತೆಗಳ ಅನ್ವೇಷಣೆಯಲ್ಲಿ, ಒಟ್ಟು ಜೀವನ ಗ್ಲಾನಿಯ ವಿಶ್ಲೇಷಣೆಯಲ್ಲಿ ಬಸವಣ್ಣನಲ್ಲಿ ಎಷ್ಟು ವರ್ಷ ಕಳೆದನೆಂಬುದು ಕುತೂಹಲಕರ ವಿಷಯವಾದರೂ ಖಚಿತವಾಗಿ ನಿರ್ಧರಿಸಬಹುದಾದ ವಿಷಯವೇನಲ್ಲ. ಕನಿಷ್ಠ ಆರು ವರ್ಷಗಳಾದರೂ ಅವರಲ್ಲಿ ಇದ್ದಿರಬೇಕು; ಅನೇಕರನ್ನು ಆಕರ್ಷಿಸಿರಬೇಕು; ತಮ್ಮ ಹೊಸ ಧರ್ಮದ ರೂಪರೇಷೆಗಳನ್ನು ಸ್ಥೂಲವಾಗಿ ರಚಿಸಿಕೊಂಡಿರಬೇಕು. ಮುಂದೆ ಅನುಭವ ಮಂಟಪವಾಗಿ ಅರಳಿತ 'ಆತ್ಮ ಆತ್ಮ ಮಥನಿಸುವ' ಪ್ರಯೋಗ ಇಲ್ಲಿಯೇ ಅಲ್ಪ ಪ್ರಮಾಣದಲ್ಲಾದರೂ ಪ್ರಾರಂಭವಾಗಿರಬೇಕು.

ಬಸವಣ್ಣನವರಿಗೆ ಮೊದಲನೆಯ ಮದುವೆ ಇಲ್ಲಿಯೇ ಆಯಿತೆ, ಕಲ್ಯಾಣದಲ್ಲಿ ಆಯಿತೆ, ಮಂಗಳವಾಡದಲ್ಲಿ ಆಯಿತೆ? ಈ ಬಗ್ಗೆಯೂ ಒಬ್ಬೊಬ್ಬರು ಹೇಳಿರುವುದು ಒಂದೊಂದು ತೆರ. ಇಲ್ಲಿಯೂ ವಿಸರ್ಜನ (ಜಟುಟುಟಿಚಿಣುಠಿ) ವಿಧಾನ ಅನಿವಾರ್ಯ. ಈ ಒಂದು ವಿಷಯದಲ್ಲಿ ಮಾತ್ರ ನಮಗೆ ಹರಹರನಿಂದ ಯಾವ ಸಹಾಯವೂ ಸಿಕ್ಕುವುದಿಲ್ಲ.

ಬಸವಣ್ಣನವರು ಮಂಗಳವಾಡಕ್ಕೆ ಹೋದ ಮೇಲೆ, ಸಿದ್ಧದಂಡಾಧಿಪನು ಅಪುತ್ರಕನಾಗಿ ತೀರಿಹೋದ ಮೇಲೆ, ಆತನ ಆಸ್ತಿಪಾಸ್ತಿಗೆ ಬಸವಣ್ಣ ಉತ್ತರಾಧಿಕಾರಿಯಾಗಿ ಭಂಡಾರಿಯಾದ ಮೇಲೆ, 'ಇಂತು ಪಡೆದು ಸಂಗನಬಸವಂ ಕೆಲವು ದಿನಂಗಳು ಕಳೆದು, ಸಕತ್ಕುಲಿ ಸಾದೃಶ್ಯ ಸುಶೀಲೆಯರಪ್ಪ ಗಂಗಾದೇವಿ ಮಾಯಾದೇವಿಯರೊಡತಣ ವಿವಾಹ ಸಂಪದದಿಂ ಸಂತಸುಖಮಿರ್ದು' ಎಂದು ಹೇಳಿ ಮುಗಿಸಿಬಿಡುತ್ತಾನೆ. ಇವರು ಯಾರ ಮಕ್ಕಳು? ಇಬ್ಬರನ್ನೂ ಒಮ್ಮೆಗೆ ಮದುವೆಯಾದರೆ? ಬೇರೆ ಬೇರೆ ಕಾಲಗಳಲ್ಲಿ ಮದುವೆಯಾದರೆ? ಇತ್ಯಾದಿ ಯಾವ ವಿಷಯದ ಮೇಲೂ ಬೆಳಕು ಬೀರುವುದಿಲ್ಲ. ಈ ಇಬ್ಬರಲ್ಲಿ ಒಬ್ಬಳು ಮಾಯಾದೇವಿ ಸಿದ್ಧರಸನ ಮಗಳೆ? ಬಿಜ್ಜಳನ ಸಾಕುತಂಗಿಯೆ? ಖಚಿತವಾಗಿ ಹೇಳಿಲ್ಲ. ಬಲದೇವನ ಹೆಸರಂತೂ ಎಲ್ಲಿಯೂ ಬರುವುದಿಲ್ಲ. ಅದೇಕೆ, ಕಲ್ಯಾಣದ ಪ್ರಸ್ತಪವೂ ಇಲ್ಲ. ಎಲ್ಲ ಘಟನೆಗಳೂ – ಕೊನೆಗೆ ಅಲ್ಲಮಪ್ರಭು ಬರುವುದೂ – ಮಂಗಳವಾಡದಲ್ಲಿಯೇ ನಡೆಯುತ್ತವೆ. ಕೆಲವರು ಕಲ್ಯಾಣವನ್ನೇ ಹಿಡಿದು ಕಲ್ಯಾಣದ ಕೈಬಿಟ್ಟ! ಆದರೂ ಒಂದು ಎಳೆ ಸಿಕ್ಕುತ್ತದೆ ಈ ರಗಳೆಯಲ್ಲಿ; 'ತನ್ನರಸಿ ಗಂಗಾದೇವಿಯರ್ಗೆ... ಸುಪುತ್ರನುದ್ಭವಿಸೆ... ನಾಮಕರಣಮಂ ಸಿದ್ಧರಸನೆಂದಿಟ್ಟು....' (ಸ್ಥಲ ೧೦) ಅಜ್ಜನ ಹೆಸರೆಂದು ಇದನ್ನು ಇಟ್ಟಿರುವುದಾದರೆ ಮಾಯಿದೇವಿ ಸಿದ್ಧರಸನ ಮಗಳು, ಬಿಜ್ಜಳನ ಸಾಕುತಂಗಿಯೆಂದಾಗುತ್ತದೆ.

ಇನ್ನು ಬಸವಪುರಾಣ : ಬಸವಣ್ಣನ ಉಪನಯನೋತ್ಸವಕ್ಕೆ ಬಂದಿದ್ದ ಬಲದೇವ, 'ಈ ರಮಾಕರ ಭಕ್ತಿಯುಕ್ತಾ । ಜಾರಿಗೀಯದೆ ಮತ್ತುತೆಯನಿನ್ನಾರಿಗೀವೆನೆನುತ್ತ.... ಬಸವನನುಮತದಿನದನಗರಿಯಂ ಶೋಭನಾರ್ಥವಲಂಕರಿಸವೇಳ್ದು'. ಅಲ್ಲಿಯೇ ಮಗಳು ಗಂಗಾಂಬೆಯೊಡನೆ ಬಸವನ ಮದುವೆ ಮಾಡಿಬಿಡುತ್ತಾನೆ (ಬ.ಪು.ಸಂಧಿ ೪ ಪ.೧,೨). ಆಗ ಬಸವಣ್ಣನಿಗೆ ಎಂಟು ವರ್ಷ. ಗಂಗಾದೇವಿಗೆ...? ಈ ಮದುವೆ ಆಗಂತೂ ನಡೆದಿರಲಾರದು. ಬಸವಣ್ಣನ ಉಪನಯನ ನಿರಾಕರಣೆ ಬಲದೇವನಲ್ಲಿ ಬಸವಣ್ಣನ ಬಗ್ಗೆ ಅಸಹನೆಯನ್ನು ಹುಟ್ಟಿಸದೆ ಅಭಿಮಾನವನ್ನು ಹುಟ್ಟಿಸಿತೆಂದು ಈ ಘಟನೆಯಿಂದ ಅರಿತುಕೊಳ್ಳಬಹುದು ಅಷ್ಟೆ.

ಸಿಂಗಿರಾಜಪುರಾಣ ಶಿವತತ್ತ್ವ ಚಿಂತಾಮಣಿಗಳಲ್ಲಿ ಈ ಬಗ್ಗೆ ಒಂದೇ ವಿಧವಾದ ವಿವರಣೆಯಿದೆ. ಸಂಗಮೇಶ್ವರ ಜಾತ್ರೆಗೆ ಬಂದಿದ್ದ ಬ್ರಾಹ್ಮಣರಿಗೂ ಬಸವನಿಗೂ ಪೂಜಾವಿಧಾನದ ಬಗ್ಗೆ ವಾಗ್ವಾದ ಜರುಗುತ್ತದೆ. ಅದರಲ್ಲಿ ಬಸವಣ್ಣ ವಿಜಯಿಯಾಗುತ್ತನೆ. ಜಾತ್ರೆ ಮುಗಿದ ಮೇಲೆ ಜಾತ್ರೆಗೆ ಬಂದಿದ್ದ ಕೆಲವರು ಕಲ್ಯಾಣಕ್ಕೆ ಹಿಂದಿರುಗಿ ಅಲ್ಲಿ ಬಸವಣ್ಣನನ್ನು ಕೊಂಡಾಡುತ್ತಾರೆ. ಆ ಸುದ್ದಿ ಬಲದೇವನಿಗೂ ತಿಳಿದು, 'ಮುದೊಳಾತಂ, ತನ್ನ ಮಗಳನಾತಗೆ ಕೊಡುವೆ, ಪೂರ್ವಸಂಬಂಧವುಂಟು, ವಿದಿತದಿಂದಾತ ಮಾತಾಮಹರದೆಸೆಯಿಂದಲೊದವಿ ತನಗೆ' (ಚಿ.ತ.ಚಿ) ಎಂದು ಆಲೋಚಿಸಿ, ಓಲೆ ಬರೆದು, ಹಿತೈಷಿಗಳೊಡನೆ ಸಂಗಮಕ್ಷೇತ್ರಕ್ಕೆ ಕಳಿಸುತ್ತಾನೆ. ಅವರು ಬಸವಣ್ಣನನ್ನು ಮದುವೆಗೆ

ಒಪ್ಪಿಸುತ್ತರೆ. ಗುರುಗಳೂ ಸಮ್ಮತಿಸುತ್ತಾರೆ. ಬಸವಣ್ಣ ಅಕ್ಕನೊಡನೆ ಕಲ್ಯಾಣವನ್ನು ಸೇರಿ ಸೊಡ್ಡಳ ಬಾಚರಸರ ಮನೆಯಲ್ಲಿ ತಂಗುತ್ತಾರೆ. ಕಲ್ಯಾಣದಲ್ಲಿ ಬಸವಣ್ಣ ಗಂಗಾಂಬೆಯ ಕೈ ಹಿಡಿದು ಗೃಹಸ್ಥನಾಗುತ್ತಾನೆ. ಬಲದೇವ ಬೇಗ ತೀರಿಹೋಗುತ್ತಾನೆ. ಬಸವ ಬಾಚಿರಾಜನ ಮನೆಯಲ್ಲಿ ದಾಸೋಹನಿರತನಾಗಿರತೊಡಗುತ್ತಾನೆ. ಬಸವ ಬಾಚಿರಾಜನ ಮನೆಯಲ್ಲಿ ದಾಸೋಹನಿರತನಾಗಿರತೊಡಗುತ್ತಾನೆ. ಒಂದು ದಿನ ಬಸವರಾಜ ಬಸವಣ್ಣನನನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು 'ತಟ್ಟು ಮುಟ್ಟಿಲ್ಲದ ಸದಾಚಾರ ಸಂಪದದ ಕಟ್ಟಾಣಿ ನೀನು; ನಿನ್ನ ಮನ ವಚನ ಶಿವಪದವ ಮುಟ್ಟಿಹುದು; ಕಾಯಕಮದೊಂದಿಲ್ಲ; ಸ್ವಾರ್ಜಿತಂ ಶುದ್ಧ, ಪಿತೃಧನ ಮಧ್ಯಮಂ; ಕಷ್ಟವನ್ಯಾರ್ಜಿತಂ... ಅದಕ್ಕೂ ಕಷ್ಟ ಸ್ತ್ರೀ ಸಂಬಂಧ ಮುಟ್ಟಿ ಬಹ ಧನಂ, ಲೋಕೋತ್ತಮರು ಮುಟ್ಟರು. ಕಾಯಕವೆ ಕೈಲಾಸದ ವಿಲಾಸ. ಅದು ನಿಮಿತ್ತದಿ ನೀನು ಕರಣಶಾಲೆಗೆ ಬಾ. ಕೆಲಸಕ್ಕೆ ನಿಲ್ಲು' ಎಂದು ತಿಳಿಹೇಳುತ್ತಾನೆ. (ಸಿಂಪು.). ಆ ಮಾತಿಗೆ ಒಡಂಪಟ್ಟು ಬಸವಣ್ಣ ಕರಣಿಕ ವೃತ್ತಿಯನ್ನು ಕೈಕೊಂಡು, ಮುಂಧೆ ಗುಪ್ತಲಿಪಿ (ಲಿಖಿತ)ಯನ್ನು ಓದಿ ಬಿಜ್ಜಳನಿಗೆ ಗುಪ್ತಭಾಂಡಾರ ಒದಗಿಸಿ ದಂಡನಾಥನಾಗುತ್ತಾನೆ. ಆಮೇಲೆ ಬಿಜ್ಜಳ ನೀಲಾಂಬಿಕೆಯುನ್ನು ಬಸವಣ್ಣನವರಿಗೆ ಕೊಟ್ಟು ಮದುವೆ ಮಾಡುತ್ತಾನೆ. ಪ್ರಭುಲಿಂಗಲೀಲೆಯಲ್ಲಾದರೋ 'ಮಹಾ ಪ್ರಧಾನಿಕೆಯನ್ನು' ಕೊಟ್ಟು ಬಿಜ್ಜಳನೇ 'ಪ್ರೀತಿಮಿಗೆ ವಿವಾಹವನು' ಮಾಡಿದನೆಂದು ಹೇಳಿದೆ. ಸಿದ್ಧರಸ, ಬಲದೇವರಿಬ್ಬರ ಹಸರೂ ಇಲ್ಲ. ವಧುವಿನ ಹೆಸರೂ ಇಲ್ಲ. ಷಡಕ್ಷರಿದೇವಕೃತ 'ಬಸವರಾಜ ವಿಜಯಂ' ಕಾವ್ಯದಲ್ಲಿ ಕಲ್ಯಾಣದಲ್ಲಿ ವಿವಾಹ ಜರುಗಿತೆಂಂದೂ, ವಿವಾಹ ಮುಗಿದೊಡನೆ ಬಸವಣ್ಣನು ಗಂಗಾಂಬಿಕೆಯೊಡನೆ ಕಪ್ಪಡಿ ಸಂಗಮಕ್ಕೆ ಹಿಂದಿರುಗಿ ಅಲ್ಲಿ ಬಲದೇವನ ಮರಣದವರೆಗೆ ಇದ್ದನೆಂದೂ, ಆಮೇಲೆ ಬಿಜ್ಜಳನು ಅವರನ್ನು ಬಲದೇವನ ತೆರವಾದ ಸ್ಥಳಕ್ಕೆ ನಿಯಮಿಸಲು ಮತ್ತೆ ಕಲ್ಯಾಣಕ್ಕೆ ಹೋದರೆಂದೂ ಹೇಳಿದೆ. (ಬ.ವಿ.ಆ.೫, ಪ.೧೦).

ಈ ಸಮಯಕ್ಕೆ ಕಲ್ಯಾಣ ಬಿಜ್ಜಳನ ಆಳ್ವಿಕೆಯ ಕೇಂದ್ರವಾಗಿರಲಿಲ್ಲ. ಆದುದರಿಂದ ಕಲ್ಯಾಣದಲ್ಲಿ ಎರಡೂ ಮದುವೆಗಳು ನಡೆದುವೆಂದು ನಿರ್ಧರಿಸುವುದು ಸರಿಯೆನಿಸದು. ಆದುದರಿಂದ ಡಾ. ಎಂ. ಎಂ. ಕಲಬುರ್ಗಿಯವರು ಬರೆದಿರುವಂತೆ, (ಶ್ರೀ ಬಸವೇಶ್ವರರು : ಪುಟ ೬೮) ಕೂಡಲ ಸಂಗಮದಲ್ಲಿರುವಾಗಲೇ ಗಂಗಾದೇವಿಯೊಡನೆ ಅವರ ಮದುವೆಯಾಯಿತೆಂದೂ, ಅವರು ಗುರುಕುಲವಾಸವನ್ನು ಮುಗಿಸಿ ಕಾರ್ಯನಿರತ ಜೀವನದಲ್ಲಿ ಕಾಲಿರಿಸುವಂತೆ ಮಾಡಿದುದು ಈ ಮದುವೆಯ ಘಟನೆಯೇ ಎಂದೂ ಊಹಿಸುವುದು ಉಚಿತವೆನಿಸುತ್ತದೆ. 'ಮತ್ತೆ ಮತ್ತೆ ಪೋಗೆಂದಪಂ ಸಂಗಮಂ' ಎಂದು 'ಆದರು ಕುಂದುತ್ತೆ ಚಿಂತೆಯಂ ಕೈಕೊಂಡು' ಹೋದನೆನ್ನುವುದಕ್ಕಿಂತ ತನ್ನ ಸಾಂಸಾರಿಕ ಹೊಣೆ, ಸಾಮಾಜಿಕ ಹೊಣೆ, ಜೀವನೋದ್ದೇಶ, ಜನಸೇವಾದರ್ಶಗಳನ್ನು ನೆನೆದೇ ಹೊರಟನೆನ್ನುವುದು ಹೆಚ್ಚು ಸಮಂಜಸವೆನಿಸುತ್ತದೆ. ಸನ್ಯಾಸಕ್ಕಾಗಿ, ಮಣಿಯನೆಣಿಸಿ ದಿನಗಳೆವುದಕ್ಕಾಗಿ ತಾನು ಹುಟ್ಟಿಲ್ಲ, ತನ್ನೊಬ್ಬನ ವೈಯಕ್ತಿಕ ಉದ್ಧಾರ ದೊಡ್ಡದಲ್ಲ, ಸರ್ವೋದ್ಧಾರಕ್ಕಾಗಿಯೇ ತನ್ನ ತನು ಮನ

ಧನ ಜೀವನಗಳು ಸಮರ್ಪಿತವಾಗಬೇಕು, ಸರ್ವಶಕ್ತಿಗಳ ವಿನಿಯೋಗವಾಗಬೇಕು, ಸಂಕಷ್ಟಗಳಲ್ಲಿರುವವರ ಕ್ಲೇಶ ನಿವಾರಣೆ, ಅಜ್ಞಾನದಲ್ಲಿರುವವರಿಗೆ ಜ್ಞಾನದಾನ, ದಾಸ್ಯದಲ್ಲಿರುವವರಿಗೆ ವಿಮುಕ್ತಿ, ತುಳಿತಕ್ಕೆ ಒಳಗಾಗಿದ್ದವರನ್ನು ಮೇಲೆತ್ತಿ ಅವರಿಗೆ ಮೇಲ್ಮೆ ನೀಡುವುದು – ಇಂಥ ಸತ್ಕಾರ್ಯಗಳಲ್ಲಿಯೇ ಸಮಯ ಸವೆಯಬೇಕು – ಎಂಬ ವಿಚಾರಗಳು ಅವರನ್ನು ಆಶ್ರಮವಾಸದಿಂದ ಸಶ್ರಮ ಜೀವನಕ್ಕೆ ಎಳೆದೊಯ್ದಿರಬೇಕು. ಇದು ಅಸ್ಪಷ್ಟವಾಗಿಯೇ ಆಗಲಿ, ಹರಿಹರನ ಈ ಸಾಲುಗಳಲ್ಲಿ ಒಡಮೂಡಿದೆ :

'ಶಿವಭಕ್ತ ಸಂತತಿಗೆ ಬೆಸಕಯ್ವುಪಾಯಮಂ
ಶಿವಭಕ್ತಿ ನೆಲೆಗೊಳ್ವ ಸಮಸುಖ ಸಹಾಯಮಂ
ನೆನೆದು ತಿಳಿದಂ ತನ್ನೊಳಗೊಳಗೆ ಶಿವಧ್ಯಾನಿ....
ಅಕ್ಷರಜ್ಞಾನಮುಂಟದನ್ನೆದೆ ಮಾರುವೆಂ...
ಎಂದಲ್ಲಿ ಗಣಕಕಾಯಿಕಮಂ ಮನಂಗೊಂಡು...
ಕುಪ್ಪಸದ ಬೀರಣೆಯ ಬಿನ್ನಣದ ಹಸನಿಗಂ
ಟೊಪ್ಪಿಗೆಯ ಹೊರವೇಷವಿಹಪರದಲೆಕ್ಕಗಂ'

ಆಗಿ ಹೊರಡುತ್ತಾನೆ. 'ಆದ ಹೊಂಗಳಂ ತ್ರ್ಯಕ್ಷನಣುಗರ್ಗೆ ಬೀರುವೆಂ' ಎಂಬ ಮಾತಿನಲ್ಲಿ ಬಸವಣ್ಣನವರ ಕೆಳಗಣ ವಚನಗಳ ಸಾರ ಶೇಖರಿತವಾದಂತಿದೆ : ಸೂಚಿತವಾದಂತಿದೆ :

'ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ, ನಿಮ್ಮ ಪುರಾತನರಾಣೆ;
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆನು!' (೪೩೫)
'ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ
ಎನ್ನೊಡಲಿಂಗೆ, ಎನ್ನೊಡವೆಗೆ, ಎನ್ನ ಮಡದಿ ಮಕ್ಕಳಿಗೆಂದು
ಕುದಿದೆನಾದರೆ
ಎನ್ನ ಮನಕ್ಕೆ ಮನವೇ ಸಾಕ್ಷಿ!' (೭೦೯)

'ನಾನು ಆರಂಭ ವ ಮಾಡುವೆನಯ್ಯಾ ಗುರುಪೂಜೆಗೆಂದು,
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು...
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದ ಕ್ರೀಯ ಮಾಡೆನು
ನಿಮ್ಮ ಸೊಮ್ಮಿಂಗೆ ಸಲಿಸುವೆನು...' (೭೦೮)

ಸಂಗಮಕ್ಷೇತ್ರವನ್ನು ಬಿಟ್ಟು ಹೊರಟ ಬಸವಣ್ಣನು ಯಾವ ಯಾವ ಯೋಚನೆಗಳನ್ನು, ಯೋಜನೆಗಳನ್ನು, ಕನಸುಗಳನ್ನು, ಕಾಣ್ಕೆ ಕಣಸುಗಳನ್ನು ಹೊತ್ತು ಹೊರಟಿದ್ದನೆಂಬುದರ ರೇಖಾಚಿತ್ರ ಇದುವರೆಗಿನ ವಿಷಯ ದೋಹನದಿಂದ ಮೂಡಿರಬೇಕು. ಇಂದ್ರಿಯನಿಗ್ರಹ ಮಾಡದೆ ಸತಿಪತಿಗಳೊಂದಾದ ಭಕ್ತಿಯೇ ಹಿತವಹುದು ಲಿಂಗಕ್ಕೆಂದು ನಂಬಿ ವೈವಾಹಿಕ ಜೀವನ ನಡೆಸಬೇಕು; ಅದಕ್ಕಾಗಿ ಪರಸೇವೆಯಾದರೂ ಸರಿಯೇ, ಹೊಲೆ ಹೊಲೆಯರ ಮನೆ ಹೊಕ್ಕಾದರೂ ಸರಿಯೆ; ಕಾಯಕವೊಂದನ್ನುಕೈಕೊಳ್ಳಬೇಕು; ಕಾಯಕದಿಂದ ಬಂದುದೂ ಒಡಲಿಗಾಗಿ, ಮಡದಿ ಮಕ್ಕಳಿಗಾಗಿ ಮಾತ್ರ ಮೀಸಲಾಗಿರಬಾರದು ಶಿವನ ಮಕ್ಕಳಿಗೆ ಸಲ್ಲಬೇಕು; ಶ್ರೀಸಾಮಾನ್ಯರ ಕತ್ತಿಗೆ ನೇಣಾಗಿ ಪರಿಣಮಿಸಿದ್ದ ಮತಗಳನ್ನು ಮುರಿದು ಕರಗಿಸಿ, ಸರ್ವ ಸಮತೆಯ ತಳಹದಿಯ ಮೇಲೆ, ಜನತಾಂತ್ರಿಕ ವಿಧಾನವನ್ನನುಸರಿಸಿ, ಆರ್ಥಿಕ ಸ್ವಪರಿಪೂರ್ಣತೆಯ ಸಿದ್ಧಾಂತಕ್ಕನುಗುಣವಾಗಿ, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ – ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು – ಎಂಬ ತತ್ವವನ್ನಾಧರಿಸಿ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಶರಣರನ್ನು ಕೂಡಿಸಿ ಅವರ ಸಹಕಾರದಿಂದ ವರ್ಗರಹಿತ, ವರ್ಣರಹಿತ, ಶೋಷಣರಹಿತ ಸಮಾಜವೊಂದನ್ನುಕಟ್ಟಬೇಕು – ಇತ್ಯಾದಿ ಹೆಗ್ಗುರಿಗಳನ್ನು ಹೊತ್ತುಕೊಂಡೇ ಸಮಾಜದ ತೋಳಗಳಿಗೆ ಹೆಗ್ಗುರಿಗಳಾಗಿದ್ದ ದಲಿತರ, ದುರ್ಬಲರ, ದರಿದ್ರರ, ವಂಚಿತರ, ಶೋಷಿತರ, ಪತಿತರ, ಪದಹತರ, ಪಾಮರರ ಉದ್ಧಾರಕ್ಕಾಗಿ ಮಂಗಳವಾಡದತ್ತ ಹೊರಟರವರು. ಇಷ್ಟು ಚಿಕ್ಕ ವಯಸ್ಸಿನಲ್ಲಿ ಇಷ್ಟೆಲ್ಲ ಆದರ್ಶಗಳು ಆಕಾರ ಪಡೆಯುವುದು ಸಾಧ್ಯವೇ? ನಮಗೆ ಸಾಧ್ಯವಿಲ್ಲ – 'ಅಸಾಧ್ಯ ಸಾಧಕ' ಬಸವಣ್ಣನಿಗೆ ಸಾಧ್ಯ. ಹರಿಹರ ಹೇಳುವಂತೆ ಆ ವೇಳೆಗಾಗಲೆ 'ನಡೆವಲ್ಲಿ ನುಡಿವಲ್ಲಿ ಸಂಗ ಶರಣೆಂದೆನುತೆ! ತೊಡುವಲ್ಲಿ ಪೊದೆವಲ್ಲಿ ಸಂಗ ಶರಣೆಂದೆನುತೆ!' 'ಸಂಗಂ ಬಸವನೋ ಬಸವಂ ಸಂಗನೊ ಎನಿಪೊಂದಭೇದಭಾವದೊಳಿ'ದ್ದುದು ಬಸವನಿಗೆ ಸಾಧ್ಯವಾಗಿದ್ದಿದ್ದರೆ ಇದೂ ಸಾಧ್ಯವಾಗುವುದು ಯಾವ ಆಶ್ಚರ್ಯ?

ಬಸವಣ್ಣನವರು ಮಂಗಳವಾಡಕ್ಕೆ ಕ್ರಿ.ಶ. ೧೧೫೪ರಲ್ಲಿ ಹೋಗುವಷ್ಟರಲ್ಲಿ ಅಲ್ಲಿ ಆಳುತ್ತಿದ್ದ ಸಾಮಂತರಾಜ ಕಲಚೂರ್ಯ ಪೆರ್ಮಾಡಿಯ ಆಳಿಕೆ ಮುಗಿದು ಅವನ ಮಗ ಬಿಜ್ಜಳ ಅಲ್ಲಿಗೆ ಬಂದಿದ್ದ ಕ್ರಿ.ಶ. ೧೧೪೨ರ ಸುಮಾರಿಗೆ, ಚಕ್ರವರ್ತಿಯಾಗಬೇಕೆಂದಿದ್ದ ತಂದೆಯ ಮಹತ್ವಾಕಾಂಕ್ಷೆಯನ್ನು ಮುಂದುವರಿಸಿದನೋ ಅಥವಾ ತನ್ನಲ್ಲಿಯೇ ಹೆಡೆಯುತ್ತಿದ್ದ ಹೆಬ್ಬಯಕೆಯ ಹೆಬ್ಬಾವಿನ ಸೆಳೆತಕ್ಕೆ ಒಳಗಾಗಿಯೋ ಅವನೇ ಬಲ್ಲ, ಶಿವನೇ ಬಲ್ಲ; ಕಲ್ಯಾಣದ ಸಿಂಹಾಸನದ ಮೇಲೆ ಕಣ್ಣಿರಿಸಿದ್ದ ಅವನು! ೧೧೫೦ರಲ್ಲಿ ಚಾಲುಕ್ಯ ಚಕ್ರವರ್ತಿ ಜಗದೇಕಮಲ್ಲ ದುಡಿಯುತ್ತಲೆ, ಒಂದೊಂದಾಗಿ ದ್ರೋಹದ ಹೆಜ್ಜೆಯನ್ನಿಡುತ್ತಾ ೧೧೫೩ರ ಹೊತ್ತಿಗೆ 'ಮಂಗಳವಾಡದ ಮಾಂಡಲಿಕತ್ವವನ್ನು ಒಂದು ಕೈಯಲ್ಲಿಟ್ಟುಕೊಂಡು ಅಪ್ರತ್ಯಕ್ಷವಾಗಿ ಕಲ್ಯಾಣದ ಸಿಂಹಾಸನದ ಹಿಂದಿನ ಶಕ್ತಿಯಾಗಿ ಕುಳಿತಿದ್ದ; ಸಾಮ್ರಾಟ ಪದವಿಯನ್ನು ಸ್ವಾಹಾ ಮಾಡಲು ಹೊಂಚುಹಾಕುತ್ತಿದ್ದ. ಅವನ ಹೊಂಚು ಒಳಸಂಚಾಗಿ. ಕರಾಡದ

ಶಿಲಾಹಾರರಸ ವಿಜಯಾದಿತ್ಯ, ಕಾಕತೀಯ ರಾಜಪ್ರೋಲ, ಬನವಾಸಿಯ ಮುಂಡಲೇಶ್ವರ ಕಸಪಯ್ಯ ಮೊದಲಾದವರ ಸಹಾಯದಿಂದ ೧೧೬೨ರ ಹರಿಹರನ ಶಾಸನವೊಂದು ಹೇಳುವಂತೆ ಕುಂಭಜನು ಕಡಲನು ಕುಡಿದ ಹಾಗೆ.* ಈ ಸಾಮಂತನು ಚಾಲುಕ್ಯ ಸಾಮ್ರಾಜ್ಯವನ್ನು ಕಬಳಿಸುವವರೆಗೆ ಬಿಜ್ಜಳನು ನಡೆಸಿದ ಕಾರಸ್ಥಾನಗಳೆನಿತೋ, ಕುಕರ್ಮಗಳೆನಿತೋ! ಇದೇ ಶಾಸನ ಇದಕ್ಕೆ ಸಾಕ್ಷಿಯಾಗಿ ನಿಂತಿದೆ: 'ಶಸ್ತ್ರಬಲ ತನ್ನ ಪರವಾಗಿರಲು, ತನಗೆ ಬಗ್ಗದ ಸಾಮಂತರಿಗೆ ತರತರದ ತೊಂದರೆಗಳನ್ನಿತ್ತ; ಆ ಮೇಲೆ ಮೆಲ್ಲಮೆಲ್ಲನೆ ದೃಢನಿರ್ಧಾರದೊಡನೆ ತನಗೆದುರಾಗಿ ನಿಂತಿದ್ದ ಸ್ಥಳೀಯ ಪಾಳೆಯಗಾರರ ಮೂಲೋತ್ಪಾಟನ ಮಾಡಿದನು; ಕೊನೆಗೆ ಒಂದೇಟಿಗೆ ಆಳರಸನನ್ನು ಕೊನೆಗೊಳಿಸಿದನು. ಅವನು ಬಿಜ್ಜಳ, ಜಗದ್ರಕ್ಷಕ – ದೈವದಿಂದಲೇ ಸಾಮ್ರಾಜ್ಯ ಶುಭಚಿಹ್ನೆಯನ್ನು ಪಡೆದು ಹುಟ್ಟಿದವನು!'

ಆಳರಸನೊಬ್ಬನನ್ನೇ ಅಲ್ಲ, ಚಾಲುಕ್ಯವಂಶದ ಅನೇಕ ರಾಜಕುಮಾರರನ್ನೂ ಅಳುಕಿಲ್ಲದೆ, ಆತಂಕವಿಲ್ಲದೆ ಕೊಲ್ಲಿಸಿದವನಿವನು; 'ಆ ಪೆರ್ಮಾಡಿ ನೃಪಾಳಂ। ಹೀಪಾಳ ನಿಕರನಾದನಾ ಬಿಜ್ಜಳನೃಪಂ॥' ಬಿಜ್ಜಳನ ಪಾತಕಭರಿತ ಜೀವನಗತಿಗೆ (Career of crimes) ಇದಕ್ಕೂ ಹೆಚ್ಚಿನ ನಿದರ್ಶನ ಬೇಕಿಲ್ಲ. ಈ ಕಂದ ಪದ್ಯದಲ್ಲಿರುವ 'ವ್ಯಾಪಾದಿತ ಚಾಳುಕ್ಯ ಮಹೀಪಾಲಕನಿಕರನ್' ಎಂಬೊಂದು ಪದಸಮುಚ್ಚಯ ಸಾಕು. ಹೀಗಿಲ್ಲದೆ ಹರಿಹರನು ಅವನನ್ನು 'ಕಲಿಯುಗರಾವಣಂ' ಎಂದು ಕರೆದಿರಲಾರ (ಐದನೆಯ ಸ್ಥಲ).

ಅವನು ಜೈನನಲ್ಲವೆಂಬುದೀಗ ಖಚಿತವಾಗಿದೆ. ಶೈವನೆಂಬುದು ಸಿದ್ಧಾಂತವಾಗಿದೆ. ಅವನಾವ ಮತದವನೇ ಇರಲಿ, ಪಾಪಭೀರು ಅಲ್ಲವೆಂಬುದೂ ಸತ್ಯ.

ಇಂಥ ರಾಕ್ಷಸೀ ಮಹತ್ವಾಕಾಂಕ್ಷೆಯ, ಕುಟಿಲ ತಂತ್ರದ, ಕ್ರೂರ ನೀತಿಯ ಮಹಾ ಮಂಡಳೇಶ್ವರನೊಬ್ಬನ ಕೈಕೆಳಗೆ ಕರಣಿಕರಾಗಿ ಕೆಲಸಕ್ಕೆ ಸೇರಿದುದು ಬಸವಣ್ಣನವರಿಗೊದಗಿದ ಅಗ್ನಿದಿವ್ಯವೆಂದೇ ಹೇಳಬೇಕು. ಆ ಎಳೆವರೆಯದಲ್ಲಿ ಅವರೀ ತಳದಲ್ಲಿ ನಡೆದಿದ್ದ ತಂತ್ರಗಳನ್ನು ತಿಳಿಯಲಾರದೆ ಹೋಗಿರಬಹುದು. ಅಥವಾ, ಕಾಯಕವೆಂದು ಕೈ ಕೊಂಡಿದ್ದ ಕರಣಿಕ ವೃತ್ತಿ ಅನೇಕ ಆಕಸ್ಮಿಕಗಳ ಮೂಲಕ ಅವರನ್ನು ದಂಡನಾಥ ಪದದವರೆಗೆ ಎತ್ತಿ ಸಾಮ್ರಾಟ ಬಿಜ್ಜಳನೊಡನೆ ನೇರ ಸಂಬಂಧವೇರ್ಪಡುವಂತೆ ಮಾಡುವುದೆಂಬುದನ್ನು ಅವರಾಗ

---

* **ಕೊಡದೊಳಗೆ ಪುಟ್ಟಿ ಕಡಲಂ। ಕುಡಿದಂ ಘಟಯೋನಿ, ಪುಟ್ಟಿ ಕಳಚೂರ್ಯರೊಳ್ ಅನ॥**
**ಗಡಿಸದೆ ಚಾಳುಕ್ಯರನ್ವಯ । ಕಡಲಂ ಕುಡಿದಿರ್ದು ಸಜ್ಜನಂ ಬಿಜ್ಜಣನೊಳ್॥(Ep. Ind. Vol.V)**
**'ಕೊಡದಿನುದಯಿಸಿದಗಸುಬಂ। ಕಡಲಂ ಪೀರ್ದಂತೆ ಮಂಡಲೇಶ್ವರ ರಾಜ್ಯ।**
**ಕ್ಕೊಡೆಯನೆನೆ ಪುಟ್ಟವೀರದಿ। ನೆಡೆಗೊಂಡಂ ಸಕಳಧಾತ್ರಿಯಂ ಬಿಜ್ಜನೃಪಂ॥**

ಊಹಿಸುವುದಾದರೂ ಹೇಗೆ? ಅಂತೂ, ಬಾಚರಸರ ಮುಖಾಂತರ ಸಿದ್ಧರಸರಿಂದಲೋ, ಸ್ವಯಂಸಿದ್ಧರಸರ ಮುಖಾಂತರ ಬಿಜ್ಜಳನಿಂದಲೋ ಅವರಿಗೊಂದು ಕರಣಿಕನ ಕೆಲಸ ಸಿಕ್ಕಿತು. ಆ ಕೆಲಸ ಸಿಕ್ಕಲು ಅವರು ಕರಣಶಾಲೆಯಲ್ಲಿ ನಡೆದಿದ್ದ ತಪ್ಪು ಗಣನೆಯನ್ನು ಕಂಡುಹಿಡಿದುದೂ ಕಾರಣವಾಗಿರಬಹುದು. ಅಂತೂ ಮುಂದೆ ನೂರೊಂದು ಸ್ಥಲಗಳ ಮೀರಿ ನಿಲ್ಲುವ ಮಹಾತ್ಮನಾಗಲಿದ್ದ ಬಸವಣ್ಣ ವರ್ಷಕ್ಕೆ ನೂರೊಂದು ಹೊನ್ನುಗಳ ಸಂಬಳದೊಡನೆ ಕರಣಿಕ ವೃತ್ತಿಯನ್ನು ಆರಂಭಿಸುತ್ತಾನೆ. ಎಂಥ ಪರಿಸರದಲ್ಲಿ? ಕರಣಶಾಲೆಯಲ್ಲಿ. ಎಂಥ ಕರಣಶಾಲೆ? 'ಎರೆವ ಲಂಚವನೀವ ದಂಡನಾಥರ್ಕಳಂ। ಲೆಕ್ಕಕ್ಕೆ ಬಂದಿರ್ಪ ರಜ ಪುತ್ರರ್ಕಳಂ। ಮಿಕ್ಕು ಝುಂಕಿಪ ಸಲುಗೆಯಾಳ್ಗಳೊಪ್ಪಂಗಳಂ।' ಒಳಗೊಂಡಿಪ್ಪ ಕರಣಶಾಲೆ; ಬಸವಣ್ಣನ ಕಣ್ಣಿಗೆ ಕಂಡ ಅಂದಿನ ಆಡಳಿತದ ಕರಾಳ ಚಿತ್ರವಿದು. ಇದರಲ್ಲಿಯೇ ಈಸಿ ಜೈಸಬೇಕಾಗಿತ್ತು ಅವರು.

ಬೇರೆಯವರಿಗೆ ಬಿಜ್ಜಳನು ಕೊಟ್ಟ ಕೆಲಸ ಉದರಂಭರಣ ಸಾಧನ ಮಾತ್ರವಾಗಿದ್ದರೆ ಬಸವಣ್ಣನವರಿಗೆ ಮಾತ್ರ ಪವಿತ್ರ ಕಾಯಕವಾಗಿದ್ದಿತು. ಆದುದರಿಂದಲೇ ಅವರು ತ್ರಿಕರಣಶುದ್ಧಿಯಿಂದ ಕರಣಿಕ ವೃತ್ತಿಯನ್ನು ನಡೆಸಿದರು. ಜೊತೆಜೊತೆಗೆ 'ಸತ್ಯಶರಣ ಸಮಾಖ್ಯಆಧನೆ'ಯನ್ನೂ 'ಶರಣಾನುಭಾವ ಗೋಷ್ಠಿ'ಗಳನ್ನೂ, ಜಂಗಮ ದಾಸೋಹವನ್ನೂ ನಡೆಸಿದರು. ಬಹುಬೇಗ ಭಂಡಾರಿಗಳಾಗಿ ಬಢತಿಯನ್ನು ಪಡೆದರು. ಸಿದ್ಧರಸನ ಆಕಸ್ಮಿಕ ಮರಣದಿಂದ ಇಲ್ಲವೆ ಯಾವುದೋ ಒಂದು ಗುಪ್ತಲಿಖಿತವನ್ನೋದಿ ಬಿಜ್ಜಳನಿಗೆ ಹೂಳಿಟ್ಟ ನಿಧಿಯೊಂದನ್ನು ತೋರಿಸಿದುದರಿಂದ ಅವರಿಗೆ ಈ ಭಂಡಾರಿ ಪದ ದೊರೆಯಿತೆನ್ನುವುದಕ್ಕಿಂತ ಬಾಲ್ಯದಲ್ಲಿಯೇ ಗಣಿತದ ಅಧ್ಯಯನ ಮಾಡಿದ್ದ ಆ ನಿಶಿತಮತಿಗಳ ದಕ್ಷತೆ, ಪ್ರಮಾಣಿಕತೆ, ಅಸಾಧಾರಣ ಪ್ರಾವೀಣ್ಯ ಹಾಗೂ ಅದ್ಭುತ ವ್ಯಕ್ತಿತ್ವಗಳಿಂದಲೇ ದೊರೆಯಿತೆಂದು ತಿಳಿಯುವುದು ಸಮೀಚೀನ. ಕರಣಶಾಲೆಯನ್ನು ಪ್ರವೇಶಿಸಿದ ದಿನವೇ ಗಣಕರು ಮಾಡಿದ್ದ ತಪ್ಪನ್ನು ದೂರದಿಂದಲೇ ಕಂಡುಹಿಡಿದುಃ 'ಭಕ್ತನೊಡವೆ ಕೆಡಲಾಗದಿದು' ಎಂದು ಮನದಂದು ಒಂದೆಣಿಕೆಯಲ್ಲಿಯೆ ಐವತ್ತು ಲಕ್ಷವನ್ನುಳಿಸಿಕೊಟ್ಟ ಬಸವಣ್ಣ ಮುಂದೆ ಮತ್ತಿನ್ನೆಷ್ಟು ಉಳಿಸಿರಬೇಡ? ಉಳಿದವರಿಗೊ ಭಂಡಾರದಲ್ಲಿದ್ದ ಹಣ ಸೂರೆಗೊಳ್ಳುವುದಕ್ಕೆ; ಬಸವಣ್ಣನಿಗೋ ಅದು 'ಭಕ್ತ ನೊಡವೆ – Public Finance'. ಆದುದರಿಂದ ಸೋರಿಹೋಗುತಿದ್ದ ಹಣವನ್ನೆಲ್ಲ ಸೋರಿಹೋಗದಂತೆ ನಿಲ್ಲಿಸಿರಬೇಕು ಬಸವಣ್ಣನವರು; ಅಪವ್ಯಯವಾಗುತ್ತಿದ್ದುದನ್ನು ತಡೆದಿರಬೇಕು; ಹೊಸ ಆದಾಯ ಮೂಲಗಳನ್ನು ಕಂಡುಹಿಡಿದಿರಬೇಕು; 'ಲಂಚವನೀವ ದಂಡನಾಥರ್ಕಳ' 'ಲೆಕ್ಕಕ್ಕೆ ಬರುತ್ತಿದ್ದ ರಾಜಪುತ್ರರ', ಇತರ ಇಲಿ ಹೆಗ್ಗಣಗಳ ಆಟ ನಡೆಯದಂತೆ ಮಾಡಿರಬೇಕು. ಇವೆಲ್ಲ ಅಲ್ಲಿ ಬೀಡುಬಿಟ್ಟು ಕ್ರಮಬದ್ಧವಾಗಿಯೇ ಕೊಳ್ಳೆ ಹೊಡೆಯುತ್ತಿದ್ದ ಅಪ್ರಮಾಣಿಕ ಗಣಕರಿಗೆ, ಅವರ ಬೆಂಬಲಿಗರಿಗೆ, ಹಿಂಗಾಲಕರಿಗೆ ನುಂಗಲಾಗದ ತುತ್ತಾಗಿರಬೇಕು. ಆದರೆ ಬಸವಣ್ಣನವರ ನಿರ್ಮಲ ಚಾರಿತ್ರ್ಯ, ಭಂಡಾರದ 'ನಿಲವು – balance' ಹೆಚ್ಚುತ್ತ ಹೊರಟುದರಿಂದ ಮೆಚ್ಚಿದ್ದ ಬಿಜ್ಜಳನಭಯ,

ಸಿದ್ಧರಸ ಬಲದೇವರ ಬಾಂಧವ್ಯದ ಬಲ – ಇವುಗಳಿಂದಾಗಿ ಬಸವಣ್ಣನವರಿಗೇನೂ ಮಾಡಲು ಆ ಅತೃಪ್ತ ಪಟ್ಟಭದ್ರ ಹಿತಗಳಿಗೆ ಸಾಧ್ಯವಾಗದೆ ಹೋಗಿರಬೇಕು. ಚಾಲುಕ್ಯ ಸಾಮ್ರಾಜ್ಯದ ಸ್ವಾಹಾಹಾರಕ್ಕಾಗಿ ಸನ್ನದ್ಧನಾಗುತ್ತಲಿದ್ದ ಬಿಜ್ಜಳನಿಗೆ ಭಂಡಾರ ಬೆಳೆಯುತ್ತ ಹೊರಟುದು ಬಹಳ ಸಂತೋಷವನ್ನುಂಟುಮಾಡಿರಬೇಕು. ತನ್ನ ಸೈನಿಕ ಶಕ್ತಿಯ ಸಂವರ್ಧನೆಗೆ ಸಹಾಯಕವಾದ ಹೆಚ್ಚಿನ ಹಣ ಬರಲು ಬಸವಣ್ಣನವರ ಅನುಪಮವಾದ ಲೆಕ್ಕಗತನ, ಲೆಖ್ಖ ಪರೀಕ್ಷಕತನ, ಪ್ರಾಮಾಣಿಕತನಗಳೆ ಕಾರಣಗಳೆಂದು ತಿಳಿದು ಅವರ ಬಗ್ಗೆ ಅಮಿತವಾದ ಪ್ರೀತಿ, ವಿಶ್ವಾಸಗಳನ್ನು ತಾಳಿರಬೇಕು.

ಮೂರನೆಯ ತೈಲನ ದೌರ್ಬಲ್ಯ ಬಿಜ್ಜಳನ ಸಾಮ್ರಾಜ್ಯದಾಹ ಜ್ವಾಲೆಗೆ ತೈಲವಾಗಿ ಪರಿಣಮಿಸಿತು. ಬಳ್ಳಿಗಾವೆಯ ಶಾಸನದಲ್ಲಿ (1155-B.G. Vol.1, Pt. II, p.473) ತೈಲಪನ ಹೆಸರಿಲ್ಲದಂತೆ ಮಾಡಿ, ಅಣ್ಣಿಗೇರಿಯ ಶಾಸನದಲ್ಲಿ (೧೧೫೭––ಋಭುಜ, ೩.೪೭೪) ‘ತ್ರಿಭುವನಮಲ್ಲ’, ‘ಭುಜಬಲಚಕ್ರವರ್ತಿ’ ಬಿರುದುಗಳನ್ನು ತಾಳಿ, ಅದು ಕಲಚೂರ್ಯ ಆಳಿಕೆಯ ಎರಡನೆಯ ವರ್ಷವೆಂದು ಹೇಳಿ, ಚಿಕ್ಕಲಗಿ ಶಾಸನದಲ್ಲಿ (1157-Ibid., p.474; E.C. Vol.XI, Dg 84) ಸ್ವಪ್ರೇರಿತ ಪ್ರೋಲದಾಳಿಯಲ್ಲಿ ಸೋತು ಸೆರೆಸಿಕ್ಕ (ಅನುಮಕೊಂಡ ಶಾಸನ– ೧೧೫೫ Ibid. DG42) ತೈಲಪನನ್ನು ಬಿಡಿಸಿದೆನೆಂಬ ಕಾರಣದಿಂದಲೋ ಏನೋ ‘ರಾಯಸಮುದ್ಧರಣ’ ಎಂಬ ಬಿರುದನ್ನು ಧರಿಸಿ ೧೧೫೬ರ ಹೊತ್ತಿಗೆ ಚಕ್ರವರ್ತಿಯಾಗಿರದಿದ್ದುದೂ ಕಲ್ಯಾಣದಲ್ಲಿ ಹೆಚ್ಚು ಕಾಲವಿರುತ್ತ ಅನಭಿಷಕ್ತ ಅಘೋಷಿತ ಚಕ್ರವರ್ತಿಯಾಗಿ ಆಳುತ್ತಿರಬಹುದಾದ ಅವನು ಅದೇ ಸಮಯಕ್ಕೆ ರಾಜಧಾನಿಯಲ್ಲಿ ತನಗೆ ಬೇಕಾದವರನ್ನು ಮಹತ್ವದ ಅಧಿಕಾರ ಸ್ಥಾನಗಳಿಗೆ ತರಲು ಪ್ರಾರಂಭಿಸಿರಬೇಕು. ಹಣಕಾಸಿನ ಅಧಿಕಾರವೂ ಆಯಕಟ್ಟಿನ ಅಧಿಕಾರವಾದುದರಿಂದ ಆ ಸ್ಥಾನಕ್ಕೆ ಪ್ರವೀಣರೂ ಪ್ರಾಮಾಣಿಕರೂ ಪರಮ ವಿಶ್ವಾಸಪಾತ್ರರೂ ಆಗಿದ್ದ ಬಸವಣ್ಣನವರನ್ನು ತಂದಿರಬೇಕು. ಇದಕ್ಕೆ ಬಲದೇವನ ಪ್ರೇರಣೇಯೂ ಕಾರಣವಾಗಿರಬೇಕು. ಅಂತೂ ಬಸವಣ್ಣನವರು ೧೧೫೬ರ ಹೊತ್ತಿಗೆ ಮಂಗಳವಾಡದಿಂದ ಕಲ್ಯಾಣಕ್ಕೆ ಸ್ಥಳಾಂತರ ಹೊಂದಿದರೆಂದು ಹೇಳಬಹುದಾಗಿದೆ. ತೈಲ ತೃತೀಯನು ೧೧೫೭ರಲ್ಲಿ ಕಲ್ಯಾಣ ಬಿಟ್ಟ ಮೇಲೆ ಕ್ರಮೇಣ ಅಧಿಕಾರ ಸಾಧಿಸಿ, ೧೧೬೨ರಲ್ಲಿ ಅವನು ತೀರಿದ ಮೇಲೋ ತೀರಿಸಲ್ಪಟ್ಟ ಮೇಲೋ ಯಾವ ಮುಚ್ಚು ಮರೆಯೂ ಇಲ್ಲದೆ ಬಿಜ್ಜಳನು ಬಹಿರಂಗವಾಗಿ ತಾನೇ ಚಕ್ರವರ್ತಿಯೆಂದು ೧೧೬೨ರಲ್ಲಿ ಕಲ್ಯಾಣ, ಸಿಂಹಾಸನಾರೂಢನಾಗುವವರೆಗೆ ಬಸವಣ್ಣನವರು ನೇರವಾಗಿ ಅವನ ಅಧೀನದಲ್ಲಿದ್ದರೋ, ಚಾಲುಕ್ಯರಾಯ ತೈಲನ ಅಧೀನದಲ್ಲಿದ್ದು ಬಿಜ್ಜಳನಿಗೆ ನಿಷ್ಠರಾಗಿದ್ದರೋ ತಿಳಿಯದು.

ಒಂದು ವಿಷಯ ಸ್ವಷ್ಟ. ಬಿಜ್ಜಳ ಬಸವರ ಸಂಬಂಧಗಳು ಮಂಗಳವಾಡದಲ್ಲಿ ಬಿಜ್ಜಳನು ಬಹಿರಂಗವಾಗಿ ಚಕ್ರವರ್ತಿಯೆಂದು ಆಳುವ ಮುನ್ನ ಕಲ್ಯಾಣದಲ್ಲಿ, ಮಧುರವಾಗಿಯೇ

ಇದ್ದುವೆಂದು ಊಹಿಸಬಹುದು. ಇದಕ್ಕೆ ಚೆನ್ನಬಸವಣ್ಣನವರ ವಚನ, ಹರಿಹರನ ರಗಳೆ ಆಧಾರ:

'ಇಂತಹ ಬಸವಣ್ಣನ ಭಕ್ತಿಯನು ಒಱೆದೊಱೆದು ನೋಡುವ,
ಪ್ರಜ್ವಲಿತ ಮಾಡುವ
ಅಶ್ವಪತಿ, ಗಜಪತಿ, ನರಪತಿರಾಯ ರಾಜಾಧಿರಾಜ ಬಿಜ್ಜಳನೂ
ಆ ಬಸವಣ್ಣನೂ
ಆ ಕಲ್ಯಾಣ ಪಟ್ಟಣದೊಳಗೆ ಸುಖಸಂಕಥಾ ವಿನೋದದಿಂದ
ರಾಜ್ಯಂಗೈಯುತ್ತಿರಲು....' (೩೫೭)
'ಎನೆ ಬಿಜ್ಜಳಂ ನುಡಿದನಲ್ಲಿ ಸಭೆ ಹೊಗಳುತಿರೆ....
ಎನ್ನ ರಾಜ್ಯದ ಶಿಕ್ಷೆ ರಕ್ಷೆ ನಿನ್ನದು ಬಸವ
ಎನ್ನ ತೇಜೋಭಿಮಾನಂ ನಿನ್ನದೆಲೆ ಬಸವ
ನಿನ್ನಂತೆ ಇನ್ನುಂಟೆ ಭಂಡಾರಿ ಬಸವಣ್ಣ
ನಿನ್ನ ಬರವಿಂದ ಭಂಡಾರವೊದಗಿತು ಬಸವ
ನಿನ್ನ ಬರವಿಂದೆ ಪ್ರತಾಪವೊದಗಿತು ಬಸವ'

ಬಿಜ್ಜಳನಿಂದ ಆಗಾಗ ಒದಗುತ್ತಿದ್ದಿರಬಹುದಾದ ಕಿರುಕುಳಗಳನ್ನು ಬಸವಣ್ಣನವರೂ ಅಪಾರ್ಥಮಾಡಿಕೊಂಡಿರಲಿಲ್ಲ, ತದ್ವಿರುದ್ಧ ಅವು ತಮ್ಮ ಹಿತಕ್ಕಾಗಿಯೇ ಎಂದು ಭಾವಿಸಿದ್ದರೆಂಬುದಕ್ಕೆ ಶೂನ್ಯ ಸಂಪಾದನೆಯಲ್ಲಿ ಬರುವ ಅವರ ಈ ವಚನ ಸಾಕ್ಷಿ:

'ಪರವಾದಿ ಬಿಜ್ಜಳ ಒರೆಗಲ್ಲಾದಲ್ಲಿ.... ಮೂವತ್ತಾರು ಕೊಂಡೆಯವರ ಪರಿಹರಿಸಿ' ಬಸವಣ್ಣನವರ ದೃಷ್ಟಿಯಲ್ಲಿ ಬಿಜ್ಜಳ 'ಪರವಾದಿ' ಮಾತ್ರ, 'ಪರಧರ್ಮಿ'ಯಲ್ಲ 'ಕೊಂಡೆಯರ ಮಾತುಕೇಳಿಕೊಂಡು ಅವರ ವಾದವನ್ನು ಒಮ್ಮೊಮ್ಮೆ ಪುರಸ್ಕರಿಸಿ 'ಭವಿ'ಯಾಗುತ್ತಾನೆ ಅಷ್ಟೆ. ಆದರೇನು? ಅವನೆನಗೆ ಒರೆಗಲ್ಲು! ಈ ಒರೆಗಲ್ಲು ಇರುವುದೆಂದೇ ನನ್ನ ಗಮನಕ್ಕೆ ಬಾರದೆ ಹೋಗಬಹುದಾಗಿದ್ದ ದೋಷಗಳು ನನ್ನ ಲಕ್ಷ್ಯಕ್ಕೆ ಬಂದು ನಾನವನ್ನು ಸರಿಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.' ಎಂಬುದು ಅವರ ನಿಲವೆಂದು ತೋರುತ್ತಿದೆ. ಚೆನ್ನಬಸವಣ್ಣನವರ ಉಪರಿನಿರ್ದಿಷ್ಟ ವಚನದಲ್ಲಿ ಬರುವ 'ಬಸವಣ್ಣನ ಭಕ್ತಿಯ ಒರೆದೊರೆದು ನೋಡುವ' ಎಂಬ ಪದಗಳಿಗೂ ಅದೇ ಅರ್ಥ ಅನ್ವಯಿಸುತ್ತದೆ.

ಇಂಥ ಕಿರುಕುಳಗಳಲ್ಲಿ ಒಂದನ್ನು ವಿಶದವಾಗಿಯೇ ವಿಮರ್ಶಿಸೋಣ. ಬಸವಣ್ಣನವರು ಕೇವಲ ಭಂಡಾರಿಯ ಕಾರ್ಯವನ್ನು ಮಾತ್ರ ಮಾಡಿದ್ದರೆ ಇಂತ ಕಿರುಕುಳಗಳು ಇರುತ್ತಿರಲಿಲ್ಲವೇನೋ. ಆದರೆ ಹರಿಹರ ಹೇಳುವಂತೆ 'ಈಶನ ಮೀಸಲಪ್ಪ ಭಕ್ತ'ನೂ,

'ಶರಣಸಮಾಜ ಜಾತಕ ಸುಧಾವರ್ಷ'ನೂ, 'ಸತ್ಯ ಸಾಮ್ರಾಜ್ಯ ಸಾರ್ವಭೌಮ'ನೂ, ಶಿವಶರಣರೇ ಹರಣವಾಗಿ ಧರೆಗೆಸೆವನೂ ಆದ ಬಸವ ಬಂದುದು ಭಂಡಾರಿಯಾಗಿ ಸುಖಲೋಲುಪನಾಗಿ ಕಾಲ ಕಳೆಯುವುದಕ್ಕಲ್ಲ, 'ಪಾಷಂಡಿ ಭೂಮಿಯೊಳು ಶಿವ ಭಕ್ತಿಯನಾರಂಬಿಸಿ, ಸಾಮರ್ಥ್ಯವಂ ಬಿತ್ತಿ, ಪ್ರತ್ಯಕ್ಷಂಗಳಂ ಎಳೆದು, ಗಣಪರ್ವಂಗಳಂ ಸುಫಲಂ ಮಾಡಲೆಂದು.' ಆತ 'ಹೊಸ ಹೊಸಗೀತಮಂ' ಹಾಡ ತೊಡಗಲು ಹೊಸ ಹುಟ್ಟಿನ ಒಸಗೆಯಾಯಿತದು ಬಡವರಿಗೆ, ಬಿದ್ದವರಿಗೆ, ಪಾಮರರಿಗೆ ಪರಿತಕ್ತರಿಗೆ, ವಂಚಿತರಿಗೆ, ಅನಾಥರಿಗೆ, ಅಂತ್ಯಜರಿಗೆ, ತುಳಿತಕ್ಕೆ ಒಳಗಾದವರಿಗೆ, ಸುಲಿಗೆಗೆ ಸಿಕ್ಕವರಿಗೆ. ಸಾಲುಸಾಲಾಗಿ ಸದ್ಭಕ್ತರು ಬರಲು ಮೊದಲು ಮಾಡಿದರು ಬಸವಣ್ಣನ 'ಮಹಾಮನೆ'ಗೆ. ಶ್ರೀಸಾಮಾನ್ಯರೇ ಬಂದರೆಂತಲ್ಲ – ಅಲ್ಲಮಪ್ರಭು, ಅಕ್ಕಮಹಾದೇವಿ, ಸಿದ್ಧರಾಮ, ಮೋಳಿಗೆಯ ಮಾರಯ್ಯ, ಮಡಿವಳ ಮಾಚಯ್ಯ, ಡೋಹರ ಕಕ್ಕಯ್ಯ, ಹಡಪದ ಅಪ್ಪಣ್ಣ, ಹರಳಯ್ಯರಂಥ ಅಸಾಮಾನ್ಯರೂ ಬಂದರು. ಇಲ್ಲಿ ನೋಡಿ;

'ಈ ಬಂದುದಿದೆ ಚೋಳದೇಶದ ಮಹಾಗಣಂ
ಆ ಬಂದುದೇ ಪಾಂಡ್ಯ ಕೇರಳ ದಿಶಾಗಣಂ
ಇದು ಗೌಳದೇಶದ ಗಣಾವಳಿಯ ಸಂಭ್ರಮಂ
ಅದು ಮಾಳವದ ಮಹಾಗಣಕುಲದ ವಿಭ್ರಮಂ
ಇದು ವಂಗ ಬಂಗಾಳ ಲಾಳದೇಶದ ಗಣಂ
ಇದು ಕಳಿಂಗಂ ಮಹಾರಾಷ್ಟ್ರದೇಶದ ಗಣಂ
ಇದು ತುಳುವ ಮಲೆಯಾಳದೇಶ ಗಣದೊತ್ತೊತ್ತಿ
ಇದು ತೆಲುಗು ತಿಗುಳು ಬರ್ಬರಗಣದ ಸಂಪತ್ತಿ
ಇತ್ತಲಿದೆ ಸಿಂಗಣದ್ವೀಪದ ಗಣವ್ರಾತ
ಇತ್ತಲಿದೆ ಕಾಶ್ಮೀರ ದೇಶದ ಶರಣಜಾತ!

ಇಷ್ಟು ಬೇಗ ಬಸವನ ನವಜನ್ಮದಾಯಕ, ನವಜೀವನಪ್ರೇರಕ, ನವ–ಮಾನವ–ನಿರ್ಮಾಪಕ ನವೀನ ವಿಚಾರ ಪ್ರಣಾಲಿಯು ಭಾರತದ ಆದ್ಯಂತಗಳಲ್ಲಿ ಪ್ರಸರಿಸಿ 'ಹಳಮತದ ಕೊಳೆ'ಯಲ್ಲಿ ಕೊಳೆತು ಕೊಳೆತು ಸಾಕಾಗಿ 'ಹೊಸಮತದ ಹೊಳೆ'ಯಲ್ಲಿ ಈಸಲು ಆತುರರಾಗಿದ್ದವರನ್ನು ಬಸವನ ಬಳಿಗೆ ಎಳೆದು ತಂದುದು ಅತ್ಯಾಶ್ಚರ್ಯಕರವಾದ ಘಟನೆ, ದೇವವಾಣಿಯನ್ನು ತ್ಯಜಿಸಿ ಜನವಾಣಿಯನ್ನೇ – ಕನ್ನಡವನ್ನೇ – ತನ್ನ ವಿಚಾರಾಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದರೂ ಈ ಅಂತರ್‌ಪ್ರಾಂತೀಯ ಪ್ರಚಾರ, ಪುರಸ್ಕಾರ ಅವನ ವಿಚಾರಗಳಿಗೆ ದೊರೆತುದು ಅಷ್ಟೇ ಆಶ್ಚರ್ಯಕರ. 'ಕಿವಿಯರಿಯದಿದ್ದರೂ ಕರುಳರಿಯದೇ' ಎಂಬ ರೀತಿಯ ಸಾವಿರ ಸಾವಿರ ಸಂಖ್ಯೆಯಲ್ಲಿ ಅನುಯಾಯಿಗಳು ಬಂದು ಸೇರಿದರು ಬಸವನನ್ನು.

ಇವರೆಲ್ಲರಿಗೆ, – ಒಂದು ಲಕ್ಷ ತೊಂಬತ್ತಾರು ಸಾವಿರವೆಂದು ಪ್ರತೀತಿಯಿರುವ ಜಂಗಮ ಸಮೂಹಕ್ಕೆ – ಬಸವಣ್ಣನ ಮನೆಯಲ್ಲಿ ನಿತ್ಯ ದಾಸೋಹ ಅವರಿಗೆ ಬರುತ್ತಿದ್ದ ಸಂಬಳದಲ್ಲಿ ಹೇಗೆ ಸಾಧ್ಯ? ಬಸವಣ್ಣನವರು ಬಿಜ್ಜಳನ ಭಾಂಡಾರದಿಂದ ಹಣ ಲಪಟಾಯಿಸಿರಲೇಬೇಕು. ಇದು ಅಂದಿನ ಕೊಂಡೆಯವರ ಕುತರ್ಕವಾಗಿದ್ದಂತೆ ಇಂದಿನ ಕೆಲವರ 'ಸಂಶೋಧನೆ'ಯೂ ಆಗಿದೆ. ಉದಾಹರಣೆಗೆ : ಬಿಜ್ಜಳನ ಭಂಡಾರವೆನಗೇಕಯ್ಯ ಎಂದು (ಬಸವಣ್ಣನವರು) ಹೇಳಿರುವುದರಿಂದ ಅವರು ರಾಜಭಂಡಾರವನ್ನು ಜಂಗಮರಿಗಾಗಿ ವ್ಯಯಿಸಲೇ ಇಲ್ಲವೆಂದು ತೀರ್ಮಾನಕ್ಕೆ ಬಂದು ಬಿಡಬಹುದು. ಆದರೆ ಕೆಳಗಿನ ವಚನವನ್ನು ನೋಡಿ –

> 'ಆನೆ ಭಂಡಾರ ಲಾಯದ ಕುದುರೆ ಬೇಡುವರಿಲ್ಲದೆ ಬಡವನಾದೆನಯ್ಯಾ~
> ಮುನ್ನ ಬೇಡಿದೆ ಸಿಂಧು ಬಲ್ಲಾಳನ ವಧುವನು; ಇನ್ನು ಬೇಡದೊಡೆ
> ನಿಗಳವನಿಕ್ಕುವೆ!
> ಬೇಡಿದ ಶರಣರಿಗೆ ನೀಡದಿರ್ದಡೆ ತಲೆದಂಡ, ಕೂಡಲಸಂಗಮದೇವ!

ಆನೆ, ಭಂಡಾರ, ಲಾಯದ ಕುದುರೆಗಳನ್ನು ಬೇಡಿದರೆ ಸಾಕು, ಕೊಡುತ್ತೇನೆ ಎಂದಿದ್ದಾರೆ. ಈ ಎಲ್ಲ ಆಧಾರಗಳನ್ನು ನೋಡಿದರೆ, ಭಕ್ತರೂ ಭಾವಕರೂ ಆದ ಬಸವಣ್ಣನವರು ಸ್ವಲ್ಪ ಹಣವನ್ನು ಭಂಡಾರದಿಂದ ತೆಗೆದು ಭಕ್ತರಿಗಾಗಿ ವ್ಯಯಿಸಿರಬಹುದು. ಬಿಜ್ಜಳನ ಹಣದ ಸ್ವಲ್ಪ ಭಾಗ ಇತ್ತ ಹರಿದರೆ ತಪ್ಪೇನೂ ಇಲ್ಲ ಎಂದು ಅವನ ಭಾವನೆಯಿರಬಹುದು. ಆದರೆ ಇದನ್ನೇ ವೀರಸೈವ ಪುರಾಣಗಳು ದೊಡ್ಡದಾಗಿ ಮಾಡಿ ಅನೇಕ ಮೂರ್ಖತೆಗಳನ್ನು ಕಟ್ಟಿವೆ'.

(ಡಾ. ಎಂ. ಚಿದಾನಂದಮೂರ್ತಿ : ಬಸವಣ್ಣನವರು
ಪು. ೬೯–೭೦)

ಇದು 'ಜಾಣ' ಕತೆಯೇ? ನೋಡೋಣ. ಬಸವಣ್ಣನವರಿಗೆ ಬರುತ್ತಿದ್ದ ಸಂಬಳವೆಷ್ಟು? ಕರಣಿಕನಾಗಿ ವರುಷಕ್ಕೆ ನೂರೊಂದು ಹೊನ್ನು; ದಂಡನಾಥ ಚೂಡಾಮಣಿಯಾಗಿ? ಸಿಂಗಿರಾಜ ಪುರಾಣದ ಪ್ರಕಾರ ತಿಂಗಳಿಗೆ ಸಾವಿರ ಹೊನ್ನು. ಇದಲ್ಲದೆ ಸಿದ್ಧರಸನ ಆಸ್ತಿಗೆಲ್ಲ ಆತ ಉತ್ತರಾಧಿಕಾರಿಯಾಗಿದ್ದಾನೆ. ಬಲದೇವನ ಆಸ್ತಿಗೂ ಅಧಿಕಾರಕ್ಕೂ ಆತ ಉತ್ತರಾಧಿಕಾರಿ. ಸಾಲದುದಕ್ಕೆ ಬಿಜ್ಜಳನೊಮ್ಮೆ 'ತಪ್ಪು ದಂಡಕ್ಕೆ ಪನ್ನಿಚ್ಛಾಸಿರ ಹೊನ್ನಂ ಕೊಟ್ಟ'ನೆಂದು ಹರಿಹರ ಹೇಳುತ್ತಾನೆ. (ಐದನೆಯ ಸ್ಥಲ ಬ.ರಾ.ದೇ.ರಗಳೆ) ಚನ್ನಬಸವಣ್ಣನವರ ವಚನವೊಂದರಲ್ಲಿ (೬೯೮) 'ಇದನ್ನೋದಿದವರಿಗೆ ಆನೆ, ಸೇನೆ, ಕುದುರೆ, ಭಂಡಾರ ಅರವತ್ತಾರು ಕರಣಿಕರಿಗೆ ಮುಖ್ಯನ ಮಾಡುವೆನೆಂದು ಬಿಜ್ಜಳ ಭಾಷೆಯ ಕೊಡುತ್ತಿರಲಿಲ್ಲ ಹರನಿರೂಪವ ಶಿರದ ಮೇಲಿಟ್ಟು ಶಿವಶರಣೆಂದು ಬಸವಣ್ಣನೋದಿ

ಮೆಟ್ಟಿ ತೆಗೆಸಿದನಯ್ಯ, ಅರವತ್ತಾರು ಕೋಟಿ ವಸ್ತುವ ಅರಮನೆಗೆ, ರಾಜ್ಯಕ್ಕೆ ಒಡೆಯನಾಗಿ, ಹರಗಣಂಗಳಿಗೆ ಗತಿಮತಿ ಚೈತನ್ಯನಾಗಿ ಕೂಡಲ ಚನ್ನಸಂಗಯ್ಯನಲ್ಲಿ, ಅಂಡಜದೊಳಗಿದ್ದು ಶಿವನ ಭಂಡಾರಿಯಾದನಯ್ಯಾ ಎನ್ನ ತಂದೆ ಪೂರ್ವಾಚಾರಿ ಸಂಗನಬಸವಣ್ಣ ಎಂದು ಹೇಳಿದೆ. ಇದಕ್ಕೆ ಉಪಷ್ಟಂಭಕವಾಗಿ ಸಿಂಗಿರಾಜ ಪುರಾಣದಲ್ಲಿ ಬಸವಣ್ಣನು ಲಿಪಿಯನ್ನೋದುತ್ತಲೆ ಬಿಜ್ಜಳನು ತನ್ನ ವಾಗ್ದಾನದಂತೆ ಬಸವೇಶ್ವರನಿಗೆ ದಂಡಾಧಿನಾಥ ಪದವಿಯನ್ನೂ, ಅರಮನೆ, ವಸ್ತು, ಒಡವೆ ಮೊದಲಾದವನ್ನೂ ಕೊಟ್ಟನೆಂದು ಹೇಳಿದೆ. ಆದುದರಿಂದ ಮೇಲ್ಕಾಣಿಸಿದ ವಚನದಲ್ಲಿ ಉಕ್ತವಾಗಿರುವ 'ಆನೆ, ಭಂಡಾರ, ಲಾಯದ ಕುದುರೆ'ಗಳು; ಬಿಜ್ಜಳನವಲ್ಲ. ಇವು ಬಿಜ್ಜಳನವೆಂದು ಅರ್ಥ ಮಾಡುವುದಕ್ಕೆ ಈ ವಚನದಲ್ಲಿ ಯಾವ ಸೂಚನೆಯೂ ಇಲ್ಲ. ಮೂಲದಿಂದ ನೇರವಾಗಿ ನಿಷ್ಪನ್ನವಾಗುವ ಅರ್ಥವನ್ನು ಬಿಟ್ಟು ಇನ್ನಾವುದೋ ಅರ್ಥವನ್ನು ಎಳೆದು ತಂದು ಆರೋಪಿಸುವುದು ಸಂಶೋಧನೆಯಲ್ಲ – ಸ್ವಯಂಶೋಧನೆ.'

ಈಗಿನ ಕಾಲದ ಕಾಳು ಕಡಿಗಳ ಕ್ರಯಗಳನ್ನು ಗಮನದಲ್ಲಿರಿಸಿಕೊಂಡು ಆಗಿನ ಕಾಲದ ದಾಸೋಹದ ವೆಚ್ಚವನ್ನು ಊಹಿಸಿ ಮಾಡಿದಂತಿದೆ ಈ ಆರೋಪ. ಆದರೆ ಆ ಕಾಲದ ಜೀವನ ವೆಚ್ಚವನ್ನು ಗಣನೆಗೆ ತಂದುಕೊಂಡರೆ ಬಸವಣ್ಣನವರು ತಮಗೆ ದೊರೆತಿದ್ದ ಆಸ್ತಿ, ದೊರೆಯುತ್ತಿದ್ದ ಸಂಬಳಗಳಲ್ಲಿ ಈ ದಾಸೋಹವನ್ನು ನಡೆಸಿದುದು ತೀರ ಸಾಧ್ಯವಾದ ವಿಷಯವಾಗಿದೆಯೆಂಬುದು ವಿದಿತವಾಗದಿರದು. ಆಗ ಒಂದು ಕಳಂಜು ಚಿನ್ನದ ನಾಣ್ಯಕ್ಕೆ ೧೫೦ ಸೇರು ಅಕ್ಕಿ ಬರುತ್ತಿತ್ತು. ಬೇರೆ ಮಾತಿನಲ್ಲಿ ಹೇಳುವುದಾದರೆ, ಅಕ್ಕಿ ಆಗ – ಚಿನ್ನದ ಬೆಲೆ ತೊಲಕ್ಕೆ ೨೦ ರೂಪಾಯಿ ಇದ್ದ ೧೯೩೦ರಲ್ಲಿ ರೂಪಾಯಿಗೆ ಸುಮಾರು ೧೩೦ ಸೇರು ಸಿಕ್ಕುತ್ತಿತ್ತು; ಅದೇ ೧೯೩೦ರ ರೂಪಾಯಿಗೆ ೨೫ ಸೇರು ದ್ವಿದಳಧಾನ್ಯ ದೊರೆಯುತ್ತಿತ್ತು. ಹೊನ್ನೊಂದಕ್ಕೆ 'ಕಳಂಜು' ಆದರೆ ೫ ರೂಪಾಯಿಗಳು. 'ದ್ರವ್ಯ'ವಾದರೆ ೭ ರೂಪಾಯಿಗಳು. 'ಗದ್ಯಾಣಕ' ಎಂದರೆ ೧೦ ರೂಪಾಯಿಗಳು. ಒಂದು ಶಾಸನಧಾರದಂತೆ (ಖ.ಖ.ಖ. ಓಂ.೨೮) ೨೪೦ ಶಿವಯೋಗಿಗಳಿಗೆ ಒಪ್ಪೊತ್ತಿನ ದಾಸೋಹಕ್ಕೆ ೨೫ ಕಳಂಜುಗಳಷ್ಟು ಬತ್ತವನ್ನು ಕೊಂಡು ಕೊಳ್ಳುವುದಕ್ಕೆ ಅವಕಾಶಮಾಡಿತ್ತು. ಇದರ ಪ್ರಕಾರ ಪ್ರತಿವ್ಯಕ್ತಿಗೂ ದಿನವೊಂದಕ್ಕೆ ಒಂದುವರೆ ಸೇರು ಸಾಕಾಗುತ್ತಿತ್ತು. ಇದರಂತೆ ಒಬ್ಬ ಮನುಷ್ಯನಿಗೆ ವರ್ಷಕ್ಕೆ ೨೪೦ ಸೇರು ಅಕ್ಕಿ ಬೇಕಾಗುವುದೆಂದೂ ಹಿಡಿದರೂ ಅದರ ಕ್ರಮ ನಾಲ್ಕು ಕಳಂಜುಗಳಿಗಿಂತ ಕಡಿಮೆಯೆ. ಬಸವಣ್ಣನವರಿಗೆ ದೊರೆಯುತ್ತಿದ್ದ ಸಂಬಳ ಕಳಂಜುಗಳಲ್ಲಿ ಅಲ್ಲ, ಗದ್ಯಾಣಕಗಳಲ್ಲಿ ಎಂದು ಊಹಿಸಿದರೆ ಈ ಅಕ್ಕಿಯ ಬೆಲೆ ಎರಡು ಗದ್ಯಾಣಕಗಳಿಗಿಂತ ಕಡಿಮೆ. (ಆಧಾರ, ೦ಟಣಜಡಿಇಚಿಡಿ' ಖಚಿಣಡಿಚಿಇಣಣಚಿ' ಹಾಗೂ 'ಕರ್ಣಾಟಕದ ಪರಂಪರೆ' ಪುಟಗಳು ೪೦೪ ರಿಂದ ೪೦೬ ಸಂಪುಟ ೧) ಈ ಮಾನದಿಂದ ಆಗಿನಿಂದ ೧೯೬೫ರೊಳಗೆ ಬೆಲೆಗಳು ೧೮, ೨೦೦ ಪಟ್ಟು ಬೆಳೆದಿವೆ! ಈ ಬೆಲೆಗಳ ದೃಷ್ಟಿಯಿಂದ ಬಸವಣ್ಣನವರ ಸಂಬಳ ಸಾಕಾಗುತ್ತಿರಲಿಲ್ಲ ಆ ದಾಸೋಹಕ್ಕೆ ಆಗಿನ ಬೆಲೆಗಳ ದೃಷ್ಟಿಯಿಂದ?

ಮೇಲಾಗಿ, ದಾಸೋಹಕ್ಕೆ ದಾಸೋಹ ನಡೆಸುವವರಷ್ಟೇ ಧನಧಾನ್ಯಾದಿಗಳನ್ನು ಒದಗಿಸಬೇಕೆಂದಿಲ್ಲ. ಇಷ್ಟವುಳ್ಳವರೆಲ್ಲರೂ ಒದಗಿಸಬಹುದು. ಆದುದರಿಂದ ಬೇರೆ ಭಕ್ತರೂ ಭಾಗವಹಿಸಿರಬೇಕು. ಯಾವುದೊಂದು ಸ್ಥಿರಾದಾಯವಿಲ್ಲದೆ ಪ್ರತಿವರ್ಷ ಸಹಸ್ರಾವಧಿ ವಿದ್ಯಾರ್ಥಿಗಳಿಗೆ, ಭಕ್ತರಿಗೆ ದಾಸೋಹ ನಡೆಸುವ ಸಿದ್ಧಗಂಗೆ, ಧಾರವಾಡ, ಬೆಳಗಾವಿ ಮುಂತಾದ ಸ್ಥಳಗಳ ಶ್ರೀಮಠಗಳ ಉದಾಹರಣೆ ಕಣ್ಣೆದುರಿಗಿರುವಾಗ ಬಸವಣ್ಣನವರು ಈ ದೊಡ್ಡ ದಾಸೋಹ ನಡೆಸಿದುದು ಏನಾಶ್ಚರ್ಯ?

ಆದರೂ 'ಕರ್ನಾಟಕದ ಇತಿಹಾಸದರ್ಶನ' (ರಚನೆ : ಡಾ. ಎಂ. ವಿ.ಕೃಷ್ಣರಾವ ಮತ್ತು ಶ್ರೀ ಎಂ. ಕೇಶವಭಟ್ಟ)ದಲ್ಲಿ ಜಂಗಮರಿಗೆ ಅನ್ನವಸ್ತ್ರಗಳನ್ನು ದಾನಮಾಡುವ ಸಲುವಾಗಿ ಬಸವೇಶ್ವರರು ರಾಜ್ಯಕೋಶದ ೧೮ ಕೋಟಿ ದ್ರವ್ಯವನ್ನು ವಿನಿಯೋಗಿಸಿದರೆಂದು 'ಬಸವರಾಜ ದೇವರ ರಗಳೆ' ಸಾರಿದೆ. ಇದರಿಂದ ಬಸವೇಶ್ವರರ ವಿರೋಧಿಗಳು ಮತ್ಸರಗ್ರಸ್ತರಾಗಿ ಬಿಜ್ಜಳನ ಬಳಿಗೆ ಬಂದು ರಾಜ್ಯಸಂಪತ್ತೆಲ್ಲ ವಿಧರ್ಮೀಯರ ಪಾಲಾಯಿತೆಂದೂ, ಅದಕ್ಕೆಲ್ಲ ಬಸವೇಶ್ವರರೇ ಕಾರಣರೆಂದೂ ಮೊರೆಯಿಟ್ಟರಂತೆ. ಪರಿಸ್ಥಿತಿ ಕೈಮೀರುವ ಲಕ್ಷಣ ಕಂಡುಬಂದಾಗ ಬಿಜ್ಜಳನು ವೈಷ್ಣವರ ಉಪರೋಧಿಯನ್ನು ಕಡೆಗಣಿಸಲಾರದೆ ಇಬ್ಬರು ಲಿಂಗಾಯಿತರ ಕಣ್ಣುಗಳನ್ನು ಕೀಳಿಸಿದರಂತೆ' ಎಂದು ಬರೆದಿದೆ! ಯಾವ ಬಸವರಾಜ ದೇವರ ರಗಳೆ ಇವರಿಗೆ ಆಧಾರವಾಗಿದೆಯೋ, ಯಾವ ಆಕರದಿಂದ ಈ ಕಥೆಯನ್ನು ಸಂಗ್ರಹಿಸಿರುವರೋ ಬರೆದವರಿಗೇ ಗೊತ್ತು. ಚಾಡಿಕಾರರ ಮಾತುಕೇಳಿ ಮರುಳಾಗಿ ಬಿಜ್ಜಳನು, 'ಭಂಡಾರದ ಆದಾಯ ಬೀಯಮಂ ನೋಡೆ ಬಸವನ ಮೇಲೆ ಪದಿನೆಂಟುಕೋಟಿ ದ್ರವ್ಯಂ ಸ್ಥಿತಮಾಗೆ...ನಿಂದ ಹೊನ್ನಿಂಗೆ ನಿರ್ಣಯಮಂ ಕೊಡುವುದು' ಎಂದು ವಿರೋಧವಂ ನುಡಿಯುತ್ತಾನೆ; ಆಗ ಬಸವ ಭಂಡಾರದ ಮನೆಗೆ ಬಂದು, ಮುದ್ರಿಸಿದ ಪೆಟ್ಟಿಗೆಯ... ತೆಗೆದು ನೋಳ್ಪಾಗಲು ನಿಲವಿನ ಪದಿನೆಂಟು ಕೋಟಿಗಿಂತ... ಇಮ್ಮಡಿ ನೂರ್ಮಡಿ.... ಪೆರ್ಚುತ್ತಿರೆ....ಬಿಜ್ಜಳಂ ಧರೆಗಿಳಿದು... ಕರುಣಿಸುವುದು. ಎಂದು ಪನ್ನಿಚ್ಛಾಸಿರ ಲಕ್ಷವಸ್ತುವಂ ಚರಣದ ಮೇಲೆ ಸುರಿದು ದಣ್ಣಾಯಕರಿಂ ಮನ್ನಣೆ ಪಡೆದು.... ಬೀಳ್ಕೊಂಡು, ಹೋಗುತ್ತಾನೆ – ಇದು ಹರಿಹರನ ಬಸವರಾಜ ದೇವರ ರಗಳೆಯು ಸಾರಿದ ಸಂಗತಿ. ಇವರಿಗೆ ದೊರೆತ ಬಸವ ರಾಜದೇವರ ರಗಳೆ ಯಾವುದೋ! ಇಂದಿಗೂ ಬಸವನ ಬಗ್ಗೆ ಇಂಥ ಪ್ರಮಾದ ಪೂರ್ಣ ಉಲ್ಲೇಖಗಳು ಬರುತ್ತಿರುವಾಗ ವೀರಶೈವ ಪುರಾಣಕಾರರೂ, ಧರಣಿ ಪಂಡಿತ ಚಂದ್ರಸಾಗರವರ್ಣಿಗಳೂ ತಪ್ಪು ತಪ್ಪಾಗಿ ಬರೆದುದೇನಾಶ್ಚರ್ಯ?

'ಬಸವರಾಜದೇವರ ರಗಳೆ'ಯಲ್ಲಿಯೇ ಇನ್ನೊಂದು ಸೂಚನೆ ಸಿಕ್ಕುತ್ತದೆ. ಬಸವಣ್ಣನು ಕರಣಿಕನಾದ ಮೇಲೆ ಸಂಪತ್ತಿನ ಮಧ್ಯದಲ್ಲಿ ಕುಳಿತು ಯಾವ ವಿಚಾರ ಮಾಡುತ್ತಿದ್ದನು? 'ಅಯ್ಯಲಾ ಇಂತಪ್ಪನರ್ಘ್ಯಮಂ ಭಕ್ತರ್ಗೆ। ಕಯ್ಯಾರೆ ಕೊಡಲಿಲ್ಲ ಪರಮ ಶಿವಭಕ್ತರ್ಗೆ...

ಆಕಭಾಜನವಾಗಿ ಹೋಗುತಿರ್ಪುದಕಟ... ದೇವ ಸಂಗಯ್ಯಸಲಿಸೆನ್ನ ಮನದಳ್ತಿಯಂ, ದೇವ ಭಕ್ತರ್ಗೀವ ಪುಣ್ಯಮಯ ಭಕ್ತಿಯಂ.... ಎಂದನು ದಿನಂ ಮನದೊಳನುತಾಪವಾಗುತಿರೆ... ಬಂದುದು ಸಚಿವ ಸಿದ್ಧಂಗೆ ಸ್ವರ್ಗದದಾಳಿ.... ಕರಣಿಕರ ಸಂಬಳದಲ್ಲಿ ಅದು ಸಾಧ್ಯವಿರಲಿಲ್ಲವಾಗಿ 'ಕೈಯಾರೆ ಕೊಡಲಿಲ್ಲ ಪರಮ ಶಿವಭಕ್ತರ್ಗೆ', ಎಂದು ಅವರು ಅನುತಾಪಕ್ಕೊಳಗಾಗಿರುವಾಗಲೇ ಸಿದ್ದರಸ ಶಿವಾಧೀನನಾಗುತ್ತಾನೆ. ಬಿಜ್ಜಳನು 'ಸರ್ವಭಂಡಾರವೆಲ್ಲಂ ನಿನಗೆ ಬಸವಣ್ಣ' ಎಂದು ಸಿದ್ಧರಸನ ಆಸ್ತಿಯನ್ನೆಲ್ಲ ಬಸವನಿಗೆ ಕೊಟ್ಟುಬಿಡುತ್ತಾನೆ; ಅವನ ಸ್ಥಳದಲ್ಲಿ ಭಂಡಾರಿಯನ್ನಾಗಿಯೂ ನಿಯಮಿಸುತ್ತಾನೆ. ಆಗ 'ಪರಮ ಶಿವಭಕ್ತರ್ಗೆ ಕೊಡುವ' ಅವರ ಆಸೆ ಈಡೇರುತ್ತದೆ.

ಇಲ್ಲಿಯ ಇನ್ನೊಂದು ಎಳೆಯನ್ನು ಹಿಡಿದು, ವಾದಿಸಬಹುದು: ಬಿಜ್ಜಳನ – ಎಂದರೆ ರಾಜ್ಯದ – ಎಂದರೆ ಜನರ – ಬೊಕ್ಕಸದ ಹಣ 'ಕಾಕಭಾಜನವಾಗಿ' ಹೋಗುತ್ತಿದೆ! ಇದು ಅನ್ಯಾಯ. ಜನರಿಂದ ಬಂದ ಹಣ ಜನಹಿತಕ್ಕಾಗಿ ಸಲ್ಲಬೇಕು, ಸವೆಯಬೇಕು ಎಂದು ಭಾವಿಸಿ ಬಸವಣ್ಣನವರು ತಮ್ಮ ನಿಯೋಜಿತ ಅಧಿಕಾರದ (Delegated authority) ಪರಿಮಿತಿಯಲ್ಲಿದ್ದುಕೊಂಡೇ ಜನಮಂಗಲ ಕಾರ್ಯಗಳಿಗೆ ಹೆಚ್ಚು ಹಣ ಒದಗಿಸಿರಬಹುದು. ಇದಕ್ಕೆ ಪ್ರಭುಲಿಂಗಲೀಲೆಯಿಂದ ಪುಷ್ಟಿ ದೊರೆಯುತ್ತಿದೆ.

> 'ಕೆರೆ ಸರೋವರ ಬಾವಿ ಕಾಲುವೆ। ಯೊರತೆ ಪೂ ಗಿಡು ತೋಟ ಕಿಕ್ಕಿರಿ ।
> ಗಿರಿದ ಮಾದಲ ಮಾವು ನೇರಲ ಹಲಸು ನಾರಂಗ ॥
> ಅರವಟಿಗೆ ಛತ್ರಗಳು ಪಥದಲಿ । ತುರುಗಿದುವು ಬಸವೇಶ ಮಾಡಿಸೆ।
> ಮೆರೆದುವಾ ಕಾನನದ ಪಥಿಕರ ಡಗೆಯನಾರಿಸುತ ॥
> ಲೇಸೆನಿಸಿ ವಿಶ್ರಮಿಸುವವರಿಗೆ ನಿ। ವಾಸಗೇಹಗಳಲ್ಲಿಗಲ್ಲಿಗೆ।
> ಹಾಸುಗಳು ಹಲವಂದದುಪಚಾರದ ಪದಾರ್ಥಗಳು ॥
> ಭಾಸುರತೆಯೆನಿಸಿರ್ದುವಾ ಬಸ । ವೇಶ ಮಾಡಿಸಲಡವಿಯಲಿ ಸಂ।
> ತೋಷವನೆ ಸಲೆ ಬೀರುತಿರ್ದುವು ಸಕಲ ಪಥಿಕರಿಗೆ ॥
>
> (ಪ್ರ. ಲಿಂ. ಲೀ. ಗತಿ : ೧೪)

ಹೀಗೆ ಜನಹಿತಕಾರ್ಯಗಳಿಗೆ ಹಣ ಹೆಚ್ಚು ವೆಚ್ಚವಾಗಲು ಬಿಜ್ಜಳನಿಗೆ ಪ್ರಿಯವಾದ ಬಾಬಿನಲ್ಲಿ –ಸೈನ್ಯ ಹಾಗೂ ರಕ್ಷಣಾ ವಿಭಾಗದಲ್ಲಿ – ಹಣದ ಕೊರತೆಯುಂಟಾಗಿದ್ದಿರಬೇಕು. ಅದೇ ಬಿಜ್ಜಳ–ಬಸವರಲ್ಲಿ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿ ಇಬ್ಬರಲ್ಲಿಯೂ ತೀಕ್ಷ್ಣವಿವಾದವೇನಾದರೂ ನಡೆದಿರಬೇಕು. ಅದಕ್ಕೆ ಆಸಕ್ತವರ್ಗಗಳು ತಮಗೆ ಬೇಕಾದ ಬಣ್ಣಕೊಟ್ಟು ಬಲ್ಲಂತೆ ಬಣ್ಣಿಸಿ ಹೇಳಿರಬೇಕು.

ಒಂದು ಮಾತು ಮಾತ್ರ ಸ್ಪಷ್ಟ. ತನ್ನ ಮಹಾಮನೆಯ ದಾಸೋಹಕ್ಕಾಗಿ ಬಸವಣ್ಣ ಬಿಜ್ಜಳನ ಭಂಡಾರವನ್ನಾಶ್ರಯಿಸುವು ಅಗತ್ಯವೇ ಇರಲಿಲ್ಲ. ಈ ವಚನದಿಂದ ಇದು ಧ್ವನಿತವಾಗುತ್ತದೆ.

'ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು
ಓರೆ ಯಾವಿನ ಬೆನ್ನಲ್ಲಿ ಹರಿಯದಿದೇಕಯ್ಯಾ?
ಲಜ್ಜೆಗೆಡಲೇಕೆ? ನಾಣುಗೆಡಲೇಕೆ?
ಕೂಡಲಸಂಗಮದೇವಯ್ಯನುಳ್ಳನ್ನಕ್ಕೆ ಬಿಜ್ಜಳನ ಭಂಡಾರವೆನಗೇಕಯ್ಯಾ?

ಇಲ್ಲಿ 'ಊರ ಮುಂದೆ ಹರಿದು 'ಹಾಲಹಳ್ಳ'ವಾವುದಿರಬಹುದೆಂದು ತಲೆಕೆಡಿಸಿಕೊಳ್ಳುವ ಕಾರಣವಿಲ್ಲ. ಮೊದಲ ಎರಡೂ ಸಾಲುಗಳು ಸೇರಿ ಒಂದು ಹೋಲಿಕೆ. ಇದಕ್ಕೆ ಅರ್ಥ ಬೇಕೇ ಬೇಕೆನಿಸಿದರೆ ಕಾಯಕನಿರತಭಕ್ತರ ಬೆಂಬಲ, ಸಂಗನ ಕರುಣೆಯೆಂದಿಟ್ಟು ಕೊಳ್ಳಬಹುದು.

ಇಂಥ ಕೆಲವು ಕಹಿ ಪ್ರಸಂಗಗಳನ್ನು ಬಿಟ್ಟರೆ ಬಿಜ್ಜಳ ಬಸವಣ್ಣನವರ ಬಗ್ಗೆ ತುಂಬ ಆದರವುಳ್ಳವನಾಗಿದ್ದನೆಂದೇ ಹೇಳಬೇಕು. ತಾನು ಅನ್ಯಾಯದಿಂದ ಚಾಲುಕ್ಯ ಸಿಂಹಾಸನವನ್ನೇರಿದುದರಿಂದ ಉಂಟಾಗಿರಬಹುದಾಗಿದ್ದ ಸಂಕ್ಷೋಭೆಗೆ ಶಾಂತಿಜಲವನ್ನು ಸಿಂಪಡಿಸಿ ಸಾಮ್ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಗಳು ನೆಲೆಗೊಳ್ಳಲು ಬಹುಮಟ್ಟಿಗೆ ಕಾರಣರಾಗಿದ್ದ ಬಸವಣ್ಣನವರು ಅವನಿಗೆ ಅಪ್ರತ್ಯಕ್ಷವಾಗಿ ಶ್ರೀರಕ್ಷೆಯಂತಾಗಿದ್ದರು. ಅವನು ಸಿಂಹಾಸನದ ಮೇಲಿರುವವರೆಗೆ ಒಳ ಹೊರಗಿನ ವಿರೋಧಿಗಳ ವೈಪುಲ್ಯವಿದ್ದೂ, ಒಳಗಿನ ವಿದ್ರೋಹ ಹೊರಗಿನ ಆಕ್ರಮಣಗಳು ನಡೆಯದಿದ್ದುದು ಈ ಭುಜಬಲ ಚಕ್ರವರ್ತಿಯ ಬಾಹುಬಲಕ್ಕಿಂತ ಬಸವಣ್ಣನವರ ಆತ್ಮಬಲದಿಂದ ಸಾಧ್ಯವಾಯಿತೆಂದು ಹೇಳಿದರೂ ಸಲ್ಲುತ್ತದೆ. ಬಸವಣ್ಣನವರ ಬಗ್ಗೆ ಉಪಲಬ್ಧವಿರುವ ಎಲ್ಲ ಕೃತಿಗಳಲ್ಲಿಯೂ ಸ್ವಯಂ ಅವರ ವಚನಗಳಲ್ಲಿಯೂ ಏಕಪ್ರಕಾರವಾಗಿ ಉಕ್ತವಾಗಿರುವ ಎರಡು ಘಟನೆಗಳಿಂದ ಬಸವಣ್ಣನವರು ವ್ಯಕ್ತಿ, ಸಮಾಜ, ಸಮಸ್ಯೆ, ಘಟನೆಗಳನ್ನು ಎದುರಿಸಿದ ಅಪೂರ್ವ ರೀತಿ-ನೀತಿಗಳ ಪರಿಚಯವಾಗುತ್ತದೆ. ಅವರ ಆಕಳುಗಳನ್ನು ಕಳ್ಳರು ಕದ್ದೊಯ್ದ ಘಟನೆ, ಅವರ ವಚನದಲ್ಲಿ ಬಂದಿರುವುದು ಹೀಗೆ:

'ಆಕಳ ಕಳ್ಳರು ಕೊಂಡೊಯ್ದರೆನ್ನದಿರಂ ಭೋ, ನಿಮ್ಮ ಧರ್ಮ!
ಬೊಬ್ಬಿಡದಿಂಭೋ, ನಿಮ್ಮ ಧರ್ಮ । ಆಡದಿರಿಂ ಭೋ, ನಿಮ್ಮ ಧರ್ಮ
ಅಲ್ಲಿ ಉಂಬರೆ ಸಂಗ, ಇಲ್ಲಿ ಉಂಬರೆ ಸಂಗ!
ಕೂಡಲಸಂಗಮದೇವ ಏಕೋಭಾವ' (೮೨೯)

ಇದು ಕಳ್ಳರು ಆಕಳುಗಳನ್ನು ಕದ್ದೊಯ್ದು ಘಟನೆಯೆಂದು ನನ್ನ ಬುದ್ಧಿಗೆ ತಕ್ಕಂತೆ ಬರೆದುಬಿಟ್ಟೆ. ಆದರೆ ಬಸಬಣ್ಣನವರು 'ಕದ್ದೊಯ್ದ'ರೆಂದು ಹೇಳಲು ಸಿದ್ಧರಿಲ್ಲ; 'ಕೊಂಡೊಯ್ದು'ರೆಂದೇ ಬರೆದಿದ್ದಾರೆ! ಯಾಕೆ? ತಮ್ಮ ಸುತ್ತುಮುತ್ತಲಿನ ಸಮಾಜದಲ್ಲಿ ಬಿಡಿಕಾಸುಗಳಿಗಾಗಿ ಬಿಡುವಿಲ್ಲದೆ ದುಡಿಯುವ ಬಡಬಗ್ಗರಿರುವಾಗ, ತುತ್ತು ರೊಟ್ಟಿಗಾಗಿ ಹೊತ್ತು ಗೊತ್ತಿಲ್ಲದೆ ದುಡಿವ ತೊತ್ತುಗಳಿರುವಾಗ, ತಾವು ತಿಂಗಳಿಗೆ ಒಂದು ಸಾವಿರ ಹೊನ್ನು ಪಡೆಯುತ್ತಿದ್ದುದು ಅವರಿಗೆ ಕಳವಾಗಿಯೇ ಕಂಡಿರಬೇಕು. ಆದುದರಿಂದಲೇ ಅದೆಲ್ಲವನ್ನು ಸದ್ಭಕ್ತರಿಗಾಗಿ ಸವೆಸುತ್ತಿದ್ದ ಅವರು ಆಕಳುಗಳನ್ನು 'ಕೊಂಡೊಯ್ದು' ಗೋವಳಂಗೆ ಸಾಂತ್ವನ ನೀಡಿದರು! ಇದು ಇಷ್ಟಕ್ಕೇ ನಿಲ್ಲಲಿಲ್ಲ. ಹರಿಹರ ಹೇಳುವುದನ್ನು ಕೇಳೋಣ:

> 'ತಾಯ್ಗಳುಮ್ಮಳಿಸಲಾಗದು ಕರುಗಳು ಬಿಡಿರೆ!
> ಬೇಗ ಮೊಲೆ ತೊರೆದು ಮರುಗುವವು ಕರುವಂ ಬಿಡಿರೆ!
> ಮಕ್ಕಳುಗಳವ್ವೆಗಳು ನೋಯಲಾಗದು ಬಿಡಿರೆ!
> ಮಿಕ್ಕ ನೆನಹಿಂ ಮಲಮಲಂ ಮರುಗುವವು ಬಿಡಿರೆ!
> ಎಲೆಲೆ ತಾಯ್ ಕರುಗೊಡಿರೇ ಬೇಗದೊಳು ಬಿಟ್ಟು;
> ಎಲೆಲೆ ಅಗಲಿರಲಾರ್ಪವೇ ಮಕ್ಕಳಂ ಬಿಟ್ಟು!
> ಎಂದು ಕರುಗಳನಲ್ಲಿ ಬಿಡುಸುತೆ ದಯಾಪರಂ
> ಹೆಂದದಾನಂದಾಶ್ರುಜಲಪೂರ್ಣ ನಿರ್ಭರಂ!'

ಇದೀಗ 'ದಯವೇ ಧರ್ಮದ ಮೂಲ'ವೆಂದು ಸಾರಿದ ಬಸವಣ್ಣನವರ ನಿಜ ಚಿತ್ರ; ಮಾನವ ಜೀವಿಗಳಿಂದ ಜಂತುಗಳವರೆಗೆ ಎಲ್ಲ ಜೀವರಾಶಿಗಳನ್ನೂ ಬಾಚಿ ಅಪ್ಪಿಕೊಂಡಿದ್ದ ಬಸವಣ್ಣನವರ ಒಲವಿನ ಆಳ, ಅಗಲ, ಎತ್ತರಗಳನ್ನು ಅಳೆಯಬಲ್ಲವರಿಲ್ಲ. ಆ ಪಾವನ ಪ್ರೀತಿಯ ಪುಣ್ಯ ಪ್ರವಾಹ ಅರಮನೆ ಗುರುಮನೆಗಳ ಸುತ್ತು ಮಾತ್ರವಲ್ಲ, ಬಡಗುಡಿಸಲುಗಳತ್ತಲೂ ಹರಿಯಿತು; ಊರೂರಿನ, ಕೇರಿಕೇರಿಯ ಮನೆ–ಮನೆಗಳಿಗೂ ಹರಿಯಿತು. ಅವರೆದುರು ಕ್ಷುದ್ರತೆ, ಕ್ಷುಲ್ಲಕತೆ, ಅಲ್ಪತೆ, ಅಪವಿತ್ರತೆ, ಅಶಿವ, ಅನಾಚಾರಗಳು ನಿಲ್ಲಲಾಗದೆ ಕೊಚ್ಚಿ ಹೋದುವು; ಇಲ್ಲವೆ ಅದರಲ್ಲಿ ಮಿಂದು ಮಡಿಯಾಗಿ, ಶಿವದ ಕುಡಿಯಾಗಿ, ಮಾನವತೆಯ ಮಿಡಿಯಾಗಿ ಹೊರಬಿದ್ದುವು.'

ಎರಡನೆಯ ಘಟನೆಯನ್ನು ಅವಲೋಕಿಸೋಣ. ಇದು ನಡೆದುದೂ ಅವರ ಅರಮನೆಯಲ್ಲಿಯೇ. ಇದೂ ಕಳ್ಳರಿಗೆ ಸಂಬಂಧಿಸಿದುದೇ. ಈ ಸಲ ಗೋಶಾಲೆಯಿಂದ ಅವರ ಅಂತಃಪುರಕ್ಕೆ ಆಗಮಿಸಿತು, ಅಗ್ನಿ ದಿವ್ಯ. ಅವರ ಸತಿಯ ಆಭರಣಕ್ಕೇ ಕೈ ಹಾಕಿಸಿತು. ಆದರೂ ಅಣ್ಣನವರು ಸಮತೆಗೆಡಲಿಲ್ಲ; ತಮ್ಮ ಅತ್ಯುನ್ನತಿಯನ್ನು ಬಿಡಲಿಲ್ಲ; ಸೊತ್ತು ಸರ್ವರಿಗಾಗಿ ಎಂಬ ತತ್ತ್ವಕ್ಕೆ ತಿಲಾಂಜಲಿ ಕೊಡಲಿಲ್ಲ. ಒಡೆಯರೊಡವೆಯ

ಕೊಂಡರೆ ಕಳ್ಳಂಗಳಲಾಯಿತ್ತೆಂಬ ಗಾದೆ ಎನಗಿಲ್ಲವಯ್ಯಾ, ಎಂದು ಬಗೆದ ಅವರು 'ಒಡೆಯರಿಗೆ ಒಡವೆಯನೊಪ್ಪಿಸಲಾರದೆ ಮೊರೆಯಿಡುವ ಮನದಿಂದ ಒಮ್ಮೊಮ್ಮೆ 'ನೆತ್ತಿಯಲಿ ಅಲಗ ತಿರುಹುವಂತಪ್ಪ, ಕೊಯ್ದು ಮೂಗಿಂಗೆ ಕನ್ನಡಿಯ ತೋರುವಂತಪ್ಪ, ಬೆಂದ ಹುಣ್ಣ ಕಂಬಿಯಲ್ಲಿ ಕೀಸುವಂತಪ್ಪ, ವೇದನೆ'ಯನ್ನು ಅನುಭವಿಸಿದ್ದಾರೆ (೩೬೩). 'ಕೊನೆಗೂ ಒಡಲೊಡವೆ, ಹಡೆದರ್ಥ ನಿಮ್ಮದೆಂಬ' ತತ್ತ್ವದ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಪ್ರಥಮವಾಗಿ ತೇರ್ಗಡೆ ಹೊಂದಿದ್ದಾರೆ. ಅಂತೆಯೇ ಕಿವಿಯೋಲೆಯನ್ನು ಕೊಡದೇ (೩೦೮) ಕೂಗಿ ಕೊಡಹಿದ ಕೈಹಿಡಿದ ಸತಿಗೇ ಹೀಗೆ ಹಿತವಾಣಿ ಹೇಳಲು ಸಮರ್ಥರಾಗಿದ್ದಾರೆ:

'ಒಡನಿರ್ದಸತಿಯೆಂದು ನಂಬಿರ್ದೆನಯ್ಯಾ !
ಕೈವಿಡಿದ ಸಜ್ಜನೆಯೆಂದು ನಚ್ಚಿರ್ದೆನಯ್ಯಾ । ತೆಗೆದುಕೊಡಾ...!
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ
ಕೂಡಲಸಂಗಯ್ಯನಲ್ಲದೆ ಮತ್ತಾರೂ ಅಲ್ಲ!'

ಸಣ್ಣ ಕಳ್ಳ ದೊಡ್ಡ ಕಳ್ಳನ ಮನೆಗೆ ಬರುತ್ತಾನೆ; ದೊಡ್ಡ ಕಳ್ಳ ಇನ್ನೂ ದೊಡ್ಡ ಕಳ್ಳನ ಮನೆಗೆ ಹೋಗುತ್ತಾನೆ! ತನಗೆ ಅತ್ಯಗತ್ಯವಿದ್ದುದಕ್ಕಿಂತ ಹೆಚ್ಚು ತಮ್ಮಲ್ಲಿ ಉಳಿಸಿಕೊಳ್ಳುವವರೆಲ್ಲರೂ ಕಳ್ಳರೇ! ಈ ಅರ್ಥದಲ್ಲಿ ಯಾರು ಕಳ್ಳರಲ್ಲ? ಎದೆಮುಟ್ಟಿ ನೋಡಿಕೊಳ್ಳಲಿ, ಎದೆ ತಟ್ಟಿ ಹೇಳಲಿ 'ಈ ಸೊತ್ತು ನನ್ನದೇ, ಇದು ನನಗಾಗಿ' ಎಂಬ ದುರ್ಮೋಹ ಆವರಿಸಿರುವವರೆಗೆ ಈ ಕಾಣುವ, ಕಾಣದ ಕಳ್ಳತನ ತಪ್ಪಿದ್ದಲ್ಲ, ಎಲ್ಲ ಸೊಮ್ಮು ಶಿವನ ಸೊಮ್ಮು; ಅದನ್ನು ಇಲ್ಲಿ ನಾನೇ ಉಣ್ಣಲಿ, ಅಲ್ಲಿ ಇನ್ನಾರೇ ಉಣ್ಣಲಿ – ಕೊನೆಗೆ ಉಣ್ಣುವವನು ಎಲ್ಲರಲ್ಲೂ ಇರುವ ಪ್ರಾಣಲಿಂಗರೂಪೀ ಪರಮಾತ್ಮ, ಜಗದ ಕೂಡಲಸಂಗಮದೊಡೆಯ ಸಂಗಯ್ಯಾ ಎಂಬ ಭಾವನೆ ಬಂದಿತೆಂದರೆ ಕಳ್ಳರಾರು, ಕದಿಯುವುದೇನನ್ನು? ಸ್ವಂತ ಆಸ್ತಿಯ ಕಲ್ಪನೆಗೇ ಕುಠಾರವಾದರು ಬಸವಣ್ಣನವರು!

ಬಸವಣ್ಣನವರ ಈ ಹೃದಯ ಪರಿವರ್ತನೆಯ ಮಾರ್ಗ, ತೊತ್ತಿನ ಸಮಾಜೀಕರಣ ಮಾರ್ಗ, ಸರ್ವಸಮದೃಷ್ಟಿಯ ಮಾರ್ಗ, ಸಾಮಾನ್ಯರ ಸಮುದ್ಧರಣ ಮಾರ್ಗ ಬಿಜ್ಜಳನಿಗೆ ಹೇಗೆ ಹೇಗೋ ಎನಿಸಿರಬೇಕು; ನುಂಗಲಾಗದ ತುತ್ತಾಗಿ ಕಂಡಿರಬೇಕು. ಆದರೂ ತಾನು ಸಾಮ್ರಾಟನಾಗಿ ಉಳಿದರೆ ಸಾಕೆಂಬ ಸೀಮಿತ ದೃಷ್ಟಿಯಿಂದಲೋ, ಬಸವಣ್ಣನವರನ್ನು ಎದುರು ಹಾಕಿಕೊಂಡು ಹೊಸ ಸಮಸ್ಯೆಯೊಂದನ್ನು ಹುಟ್ಟಿಸಿಕೊಳ್ಳುವುದ ತನ್ನ ಆಗಿನ ಅಸ್ಥಿರ ಸತ್ತೆಯ ಶಿಥಿಲೀಕರಣಕ್ಕೆ ಕಾರಣವಾದೀತೆಂಬ ಅಳುಕು – ಅಂಜಿಕೆಗಳಿಂದಲೋ – ಇವುಗಳನ್ನೆಲ್ಲ ತೋರಿಕೆಯಲ್ಲಾದರೂ ತಾಳಿಕೊಂಡನೆಂದು ತೋರುತ್ತದೆ.

ಹಾಗಾದರೆ ಒಂಟೆಯ ಬೆನ್ನನ್ನು ಮುರಿದು ಕೊನೆಯ ಕಡ್ಡಿ ಯಾವುದು? ಬಸವರಾಜದೇವರ ರಗಳೆಯಲ್ಲಿಯೆ ಇದಕ್ಕೆ ಸುಸ್ಪಷ್ಟ ಸೂಚನೆ ಸಿಕ್ಕುತ್ತಿದೆ. ಬಸವಣ್ಣನೊಮ್ಮೆ 'ದಂಡಿಗೆಯಿಂ ಘಳಿಲನಿಳಿದು ಕಂಬಳಿಯ ನಾಗಿದೇವನೆಂಬ ಹಿರಿಯ ಮಾಹೇಶ್ವರನ ಮನೆಯಂ ಪೊಕ್ಕು, ಸಂಗಪ್ರಸಾದವನವರಪ್ರಸಾದವೆರಸಿ ಕೈಕೊಳ್ಳುತ್ತಿರೆ' ಭಂಡಾರ ಬರಿದು ಮಾಡಿದನೆಂಬ ಆರೋಪವನ್ನು ಹೊರಿಸಿ ಮುಖ ಭಂಗಿತರಾಗಿದ್ದ ಕೊಂಡೆಯರಿಗೆ ಹೊಸ ಜೀವ ಬಂದಂತಾಗುತ್ತದೆ. ಬಿಜ್ಜಳನ ಬಳಿಗೆ ಧಾವಿಸಿ, 'ಎಲೆಲೆಲೆ ಬಿಜ್ಜಳ, ಬಸವನ ನಡೆವಳಿ ದಿನದಿನಕ್ಕೆ ವಿಪರೀತವಾಗಿರ್ದಪುದು, ಹಿರಿಯ ಮಾಹೇಶ್ವರರೆಂದು ಬೆರೆಸಿಕೊಂಡಿಪುದಂತಲ್ಲದೆ, ಇಂದೀ ಗಳಿಗೆಯೊಳು ಹೊಲಗೇರಿಯೋಳೊರ್ವಂ – ಪೊಲೆಯನೆಂದಡೆ ಕೋಪಂ– ಹಿರಿಯ ಭಕ್ತನ ಮನೆಯೊಳ ಗುಂಡುದಲ್ಲದೆ ನಿನ್ನೋಲಗದೊಳು ಪೊಲೆಗಲಸಲುಂ ಬಂದಪಂ ಇಂತಾದಡೆ ಮುಗಿರಲ್ಬಾರದು' ಎಂದು ಚಾಡಿ ಹೇಳುತ್ತಾರೆ. ಈ ಸಲ ಅವರ ಕೊಂಡೆಯ ಕೊಂಡಿ ನಾಟುತ್ತದೆ ಬಿಜ್ಜಳನ ಬುದ್ಧಿಯಲ್ಲಿ 'ಪೇಳ್ವರಂ ಸಂತೈಸಿ, ಬಸವನಂ ಕರೆಯಿಂ, ಎಂದು ಅರಸಾಳ್ಗಳಂ ಕಳುಪುತ್ತಂ, ಬಸವರಾಜಂ ಬಂದೋಲಗದ ಮನೆಯಂ ಪೊಗುವನೆಂದು ರಾಜಾಂಗಣದ ಬಯಲೊಳು ಒಡ್ಡೋಲಗಂಗೊಟ್ಟು ಕುಳ್ಳಿರಲು.'

ಬಸವ ಬಿಜ್ಜಳರ ಮಧ್ಯದ ಘರ್ಷಣೆಯ ಗುಟ್ಟು ಇಲ್ಲಿ ರಟ್ಟಾಗಿದೆ. ಬಸವಣ್ಣನವರು ಕಂಬಳಿನಾಗಿದೇವನ ಮನೆಯಲ್ಲಿ 'ಸಂಗಪರಸಾದವನವರಪ್ರಸಾದವೆರಸಿ' ಕೊಳ್ಳುತ್ತಾರೆ. ಅವರು ಮೇಲ್ಮೈ ಕ್ರಾಂತಿಯನ್ನಷ್ಟೇ ಮಾಡಿದರೆನ್ನುವವರಗಿಲ್ಲಿ ನಿರುತ್ತರಗೊಳಿಸುವ ಉತ್ತರ ಸಿಕ್ಕಲೇಬೇಕು. ಚಾಡಿಕಾರರ ದೃಷ್ಟಿಯಲ್ಲಿ ಇದು ಅಕ್ಷಮ್ಯ, ಅಪರಾಧ : ವರ್ಣಸಂಕರ, ವರ್ಣಾಶ್ರಮಧರ್ಮಕ್ಕೆ ಮರ್ಮಘಾತ. ಇಷ್ಟೇ ಅಲ್ಲ, ತಾನು ತನ್ನಲ್ಲಿ ಹೊಲೆಗಲಸಿಕೊಂಡು ಸಾಕಾಗದೆ ಬಿಜ್ಜಳನ 'ಓಲಗದೊಳು ಪೊಲೆಗಲಸಲುಂ ಬಂದಪಂ!' ಎಂಥ ಅನಾಹುತ! ಇದುವರೆಗೆ ಇನ್ನೇನನ್ನೋ ತಾಳಿಕೊಂಡಿದ್ದ ಬಿಜ್ಜಳನ ತಾಳ್ಮೆಯ ಕಟ್ಟೆ ಈ ಘಟನೆಯಿಂದ ಒಡೆದುಬಿಡುತ್ತದೆ. ಆದುದರಿಂದಲೇ 'ಬಸವರಾಜಂ ಬಂದೋಲಗದ ಮನೆಯಂ ಪೊಗುವನೆಂದು,' ಆತನೊಡನೆ, ತಂದ ಹೊಲೆಯನ್ನು ತನ್ನ ಓಲಗದೊಳಗೂ ಹೊಗಿಸುವನೆಂದೂ, 'ರಾಜಾಂಗಣದ ಬಯಲೊಳು ಒಡ್ಡೋಲಗಂಗೊಟ್ಟು' ಕುಳಿತುಬಿಡುತ್ತಾನೆ! ಬಸವಣ್ಣ ಬರುತ್ತಲೆ ತನ್ನ ಹೃದಯವನ್ನು ಬಿಚ್ಚಿ ಬಯಲಿಗಿಡುತ್ತಾನೆ. 'ಎಲೆ ಬಸವಣ್ಣ, ಸುವರ್ಣಂ ಕಮ್ಮಿತಾದಂತೆ ವಿಪ್ರಕುಲಕ್ಕನುಕೂಲಮೊಪ್ಪ ಪೊರ್ದಿರ್ದು ಸದಾಚಾರದಿಂ ಸುಖಿಯಾಗಿರ್ಪುದನೊಲ್ಲದೆ, ಅತಿಭಕ್ತಿ ತಲೆಗೇರಿ ಹಿರಿಯ ಮಾಹೇಶ್ವರರೆಂದು ಪೊಲೆಗಲಸಿ ಅವರ ಮನೆಯೊಳುಂಡುದಲ್ಲದೆ ಇಲ್ಲಿ ಬಂದು ಎಲ್ಲರಂ ಗೋಜಾಗತಂ ಮಾಳ್ಪುದು ಮಾರ್ಗವಲ್ಲ!' ಎಂದು ವಿಪ್ರಪ್ರೇರಿತವನ್ನು ನುಡಿಯುತ್ತಾನೆ.

ಇದಕ್ಕೆ ಉತ್ತರ ರೂಪವಾಗಿ ಬಸವಣ್ಣನವರು ನಾಗಿದೇವರನ ಮೈಯಿಂದ ಹಾಲು ಹೊರಡಿಸಿ ಪವಾಡ ಮೆರೆದು ಬಿಜ್ಜಳನ ಬಾಯಿ ಮುಚ್ಚಿಸಿದರೆಂಬುದು ಮುಖ್ಯವಲ್ಲ. ಆಗ ಬಿಜ್ಜಳನ ಮನದಲ್ಲಿ ಎದ್ದಿದ್ದ ಬಿರುಗಾಳಿ ಯಾವುದೆಂಬುದು ಮುಖ್ಯ. ಹಿಂದೆ ಮಾದರಸನ ಮನದಲ್ಲಿ ಎದ್ದಿದ್ದ ಬಿರುಗಾಳಿಯೇ ಅದು. ಬಿಜ್ಜಳನು ಬಸವಣ್ಣನ ಭಕ್ತಿ ಮಾರ್ಗಪ್ರಸಾರಕ್ಕೆ ವಿರೋಧಿಯಾಗಿರಲಿಲ್ಲ; ವಿಪ್ರಕುಲಾನುಕೂಲವಾದ ಶಿವಭಕ್ತಿಯನ್ನವರು ಪಸರಿಸಲು ಪ್ರಯತ್ನಿಸಬೇಕು; ಇದು ಸದಾಚಾರ, ಇದು ಸುಖದ ಮಾರ್ಗ. ಇದನ್ನುಳಿದು ಅತಿಭಕ್ತಿ ತಲೆಗೇರಿ ಕಂಡವರ ಮನೆಗಳಲ್ಲೆಲ್ಲ ಉಂಡು, ಹೊಲೆಗಲಸಿ, ಅದೂ ಸಾಲದೇ ಬಿಜ್ಜಳನ ಓಲಗಕ್ಕೂ ಹೋಗಿ ಎಲ್ಲರನ್ನು ಗೋಜಾಗತ ಮಾಡುವುದು ಅನಾಚಾರ!'

ಇಲ್ಲಿ ಬಿಜ್ಜಳ ಸ್ಪಷ್ಟವಾಗಿ ವರ್ಣವಾದಿಯಾಗಿ, ಅಸ್ಪೃಶ್ಯತಾ ನಿವಾರಣಾ ವಿರೋಧಿಯಾಗಿ, ಯಥಾ ಸ್ಥಿತಿ (Status Quoism)ಯ ಬೆಂಬಲಿಗನಾಗಿ, ಎರಗಿವಿಯವನಾಗಿ, 'ಪದುಳಮಿರ್ದಡೆ ಸಾಲ್ವುದು' ಎಂಬ ಉಳಿವ ಗುರಿಯವ (Survivalist)ನಾಗಿ, ಇದ್ದುದರೊಡನೆ ಒಪ್ಪಂದ ಮಾಡಿಕೊಂಡು ಗೆದ್ದು ಹೋದರಾಯಿತು – ಎನ್ನುವವನಾಗಿ ತೋರಿಕೊಳ್ಳುತ್ತಾನೆ. ಬಸವಣ್ಣನವರಾದರೋ – ಇದ್ದುದರೊಡನೆ ಒಪ್ಪಂದ ಮಾಡಿ ಹದ್ದಿನ ಬಾಳು ಬಾಳುವುದಕ್ಕಿಂತ ಇದ್ದುದನ್ನು ಹೃದಯದ ಹಂಬಲಕ್ಕನುಗುಣವಾಗಿ, ಜನಹಿತಕ್ಕಧೀನವಾಗಿ, ಯುಗಧರ್ಮಕ್ಕನುಸರಿಸಿ ತಿದ್ದುವುದು, ತಿದ್ದುವಲ್ಲಿ ಮರಣ ಬಂದರೂ ಅದನ್ನು ಮಹಾನವಮಿಯೊಂದು ಸ್ವೀಕರಿಸುವುದು', ಎಂಬ ಆದರ್ಶಕ್ಕೆ ಅರ್ಪಿತರಾದವರು; ಪರಿವರ್ತನೆ ಅಪರಿವರ್ತನೀಯ ನಿಯಮವೆಂದು ನಂಬಿದವರು; ಸಮಾಜವು ಸ್ವಲ್ಪಭಾಗ ಸ್ಪೃಶ್ಯ, ಬಹುಭಾಗ ಅಸ್ಪೃಶ್ಯವಾಗಿ ಬಹಳಕಾಲ ಬದುಕದೆಂದು ಬಲವಾಗಿ ಪ್ರತಿವಾದಿಸುತ್ತ, ಅಷ್ಟೇ ಪ್ರಬಲವಾಗಿ ಪ್ರಯತ್ನಿಸುತ್ತಿದ್ದವರು; ದಾಸ್ಯ, ದಾರಿದ್ರ್ಯ, ದುಃಖ, ಅಜ್ಞಾನ, ಅಂಧಶ್ರದ್ಧೆ, ಕರ್ಮವಾದ, ವರ್ಣವಾದ, ಸ್ಪೃಶ್ಯಾ ಸ್ಪೃಶ್ಯವಾದಗಳು ದೇಶದಲ್ಲಿ, ಸಮಾಜದಲ್ಲಿ ಎಲ್ಲಿಯೇ ಇದ್ದರೂ ಎಲ್ಲಡೆಯೊಳಿದ್ದಂತೆ. ಸಮಾಜದ ಹಡಗಕ್ಕೆ ಯಾವ ಭಾಗದಲ್ಲಿ ತೂತು ಬಿದ್ದರೂ ಎಲ್ಲ ಭಾಗದಲ್ಲಿ ತೂತು ಬಿದ್ದಂತೆ, ಊರಿನ ಯಾವ ಭಾಗಕ್ಕೆ ಬೆಂಕಿ ಹತ್ತಿದರೂ ಎಲ್ಲ ಭಾಗಕ್ಕೆ ಬೆಂಕಿ ಹತ್ತಿದಂತೆ. – ಎಂದು ಮಹಾಸೂತ್ರವನ್ನೂ ಮನನ ಮಾಡಿಕೊಂಡವರು. ಅವರು ವಿಪ್ರಕುಲಾನುಕೂಲವಾದ ಶಿವಭಕ್ತಿಯಿಂದ ತೃಪ್ತರಾಗುವುದು ಹೇಗೆ? ಸಮಾಜದ ವೈಷಮ್ಯಗಳಿಂದ ಬಸವಣ್ಣನವರು ಅತೃಪ್ತರಾಗಿದ್ದಾರೆ, ಬಸವಣ್ಣನವರ ಅಮೂಲಾಗ್ರ ಪರಿವರ್ತನೆಯ ಪ್ರಯತ್ನಗಳಿಂದ ಬಿಜ್ಜಳ ತಪ್ತನಾಇದ್ದಾನೆ! ಮುಂದೆ ಗತಿ?

ಉರಿಯುವ ಗಾಯಕ್ಕೆ ಉಪ್ಪೆರಚಿದಂತೆ ಬಸವಣ್ಣನವರು 'ಕಂಬಳಿಯ ನಾಗಿದೇವನ ನಂದಣದಲುಂ ಬಿಜಯಂಗೆಯ್ಸಿ ತಾಂ ಕೆಲದೊಳು' ಬರುತ್ತಾರೆ! 'ಬರುತ್ತಂ, ದೇವ, ಭಕ್ತ ದೇಹಿಕದೇವ, ನೀಂ ಪೋದಲ್ಲಿ ಪೊಕ್ಕವರೊಕ್ಕುದಂ ಕೊಂಡೆ. ನೀನಿರ್ದ ಕುಲವೆ ಸತ್ಕುಲಂ. ನಿನ್ನಿಂದ ನಾಂ ಕುಲಜನೆ? । ಕೂಡಲಸಂಗ ಕರುಣಿಸು' ಎಂಬ ಗೀತಮಂ ಪಾಡುತಂ

ಬರುತ್ತಾರೆ! 'ಬಂದು ದಂಡಿಗೆಯಿಂದುಪಮನ್ಕುದೇವರನಿಳುಪುವಂತೆ' ನಾಗಿ ದೇವನನ್ನು ಇಳಿಸುತ್ತಾರೆ. ತಾವೆ ಕೈಕೊಟ್ಟು 'ಆಸ್ಥಾನದ ನಡುವೆ ನಿಲ್ಲಿಸುತ್ತಾರೆ' ಬಿಜ್ಜಳನಿಗೆ ಹೇಗಾಗಿರಬೇಕು ಆಗ? ಹೊಟ್ಟೆಯಲ್ಲಿ ಸಾವಿರ ಕಹಿತುತ್ತುಗಳು ಒಮ್ಮೆಗೇ ಪ್ರವೇಶಿಸಿದಂತೆನಿಸಿರಬೇಕು!

ನಾಗಿದೇವನ ಮೈಯಿಂದ ಹಾಲು ಹೊರಡಿಸಿದ ಪವಾಡದಿಂದ ಬಿಜ್ಜಳನ ವರ್ಣ ಸಂಕರ ವಿರೋಧ, 'ಹೊಲೆಗಲಸುವ ಕೆಲಸ'ದ ವಿರೋಧ, ಸಾಮಾಜಿಕ ಕ್ರಾಂತಿಯ ವಿರೋಧ, ಸರ್ವಸಮಾನತೆಯ ತತ್ತ್ವದ ವಿರೋಧ ಕರಗಿ ಹೋಯಿತೆಂದು ಕಲ್ಪಿಸುವದು ಭ್ರಾಮಕವೆನಿಸಿತು! ಅಂದಿನ ಆ ಘಟನೆ ಯಾವ ರೀತಿಯಲ್ಲಿಯೇ ಇತ್ಯರ್ಥವಾಗಿರಲಿ, ಮುಂದಿನ ಅನರ್ಥದ ಬೀಜ ಅದರೊಳಗೆ ಇದ್ದಂತೆಯೇ ಉಳಿಯಿತು. ಅದು ಸುಟ್ಟು ಹೋಗಲಿಲ್ಲವೆಂಬುದು ಸ್ಪಷ್ಟ! 'ವಿಪ್ರಪ್ರೇರಿತವ' ನುಡಿಯುತ್ತಿದ್ದ, ಕೊಂಡೆಯವರಿಗೆ ಕಿವಿಗೊಡುತ್ತಿದ್ದ ಎರಗಿವಿಯ ಅರಸನವ, ಮುಂದೆ ವಿರಸ ತಲೆದೋರದಂತೆ ವರ್ತಿಸಿಯಾನೆ?

ಈ ಘಟನೆಯಿಂದ ವಿಚಲಿತರಾಗಲಿಲ್ಲ ಬಸವಣ್ಣನವರು. ಬಹಿಷ್ಕಾರದ ಬೆದರಿಕೆ, ಜೀವಕ್ಕೆ ಅಪಾಯದ ಹೆದರಿಕೆ. ಬಿಜ್ಜಳ ಪ್ರಕೋಪದ ಪರಿಣಾಮ, ಅಧಿಕಾರ ತ್ಯಾಗದ ಅನಿವಾರ್ಯತೆ, ಸಂಘರ್ಷದ ಸಂಭವನೀಯತೆ – ಇತ್ಯಾದಿಗಳಿಂದ ಅಂಜಿ ಹಿಂಜರಿಯುವ ಹಂದೆ (ಹೇಡಿ)ಯಾಗಿರಲಿಲ್ಲ ಅವರು.

> 'ಆರು ಮುನಿದು ನಮ್ಮನೇನ ಮಾಡುವರು?
> ಊರು ಮುನಿದು ನಮ್ಮನೆಂತು ಮಾಡುವರು?
> ನಮ್ಮ ಕುನ್ನಿಗೆ ಕೂಸ ಕೊಡಬೇಡ;
> ನಮ್ಮ ಸೊಣಗಂಗೆ ತಳಿಗೆಯ ನಿಕ್ಕಬೇಡ!
> ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ
> ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ?' (೭೫೨)

ಎಂಬ ಧೀರ ನಿಲವು ಅವರದು. ಮೇಲಾಗಿ, ಸಂಗಮಕ್ಷೇತ್ರದಲ್ಲಿದ್ದು ತಮ್ಮೊಬ್ಬರ ಜೀವನ್ಮುಕ್ತಿಯನ್ನು ಸಾಧಿಸುವುದು ಸರಿಯಲ್ಲವೆಂದು ನಂಬಿ ಅಮೂಲಾಗ್ರ ಸಮಗ್ರ ಸಾಮಾಜಿಕ ಪರಿವರ್ತನೆಯು ಕಣ್ಕ್ಕೆ ಧುಮುಕಿದ್ದ ಅವರು, ತಮ್ಮ ದಯಾಪ್ರೇರಿತ ದಲಿತೋದ್ಧರಣಕಾರ್ಯಕ್ಕಾಗಿ ಶಿವನಾಗಮಯ್ಯನ ಗುಡಿಸಲಿಂದ ಕಕ್ಕಯ್ಯನ ಕುಟಿಗೆ, ಕಕ್ಕಯ್ಯನ ಕುಟಿಯಿಂದ ಹರಳಯ್ಯನ ಹಾಳು ಮನೆಗೆ ಧಾವಿಸಿದ್ದ ಅವರು ತಮ್ಮ ಪದವಿ ಉಳಿಸಿಕೊಳ್ಳಲೆಂದು ತಮ್ಮ ತತ್ತ್ವಗಳಿಗೆ ತಿಲಾಂಜಲಿಯನ್ನಿತ್ತು ಪದ ಭ್ರಷ್ಟರಾಗುವುದು ಸಾಧ್ಯವೆ? ವೇದಿಕೆಗಳಿಂದ ದಯಾಧರ್ಮವನ್ನು ಸೋದರತೆ ಸಮಾನತೆಗಳನ್ನು ಬೋಧಿಸಿ. ಆಮೇಲೆ ಶ್ರೋತೃಗಳನ್ನು ಅವರವರವ ಪಾಡಿಗೆ ಬಿಟ್ಟು ಹೋಗಲು ಬಂದಿರಲಿಲ್ಲ ಅವರು.

ಯುಗಯುಗದಿಂದ ಷಂಡ ಕಂಬನಿ ಸುರಿಸುತ್ತ, ಅಳುವವರೊಡನೆ ತಾನೂ ಅಳುತ್ತ, ಶುಷ್ಕ ಸಾಂತ್ವನ ಮಾತ್ರವಾಗಿ ಮಾರ್ಪಟ್ಟಿದ್ದ ದಯೆಗೆ ಕ್ರಿಯಾ ದೀಕ್ಷೆಯನ್ನುಕೊಟ್ಟು, ಅದು ಧೈರ್ಯವಾಗಿ ದಲಿತೋದ್ಧರಣ ಕಾರ್ಯಕ್ಕೆ ಸನ್ನದ್ಧವಾಗುವಂತೆ ಮಾಡಿದ್ದರು ಬಸವಣ್ಣನವರು. ಕೃತಿಯಾಗಿ ಕಾಣಿಸಿಕೊಳ್ಳುವ ತತ್ತ್ವ ನಿಸ್ಸತ್ವ ಅವರ ದೃಷ್ಟಿಯಲ್ಲಿ. ಇನ್ನೂ ಎಷ್ಟು ದಿನ ಈ ಹತಭಾಗ್ಯರಿಗೆ, ನತದೃಷ್ಟರಿಗೆ. ಪತಿತಮಾನವರಿಗೆ ಪೂರ್ವಜನ್ಮ ಕರ್ಮಫಲದ, ಪುನರ್ಜನ್ಮ ಸಂಭಾವನೆಯ, ದೈವವಾದದ ದುರ್ದಮನೀಯತೆಯ ಅಡಗೂಲಜ್ಜಿಯ ಕತೆಗಳನ್ನು ಹೇಳುತ್ತ ವಂಚಿಸುತ್ತ ಹೋಗುವುದು? ಒಮ್ಮಿಲ್ಲೊಮ್ಮೆ. ಇಲ್ಲಿಯೋ ಎಲ್ಲಿಯೋ ಇವರ ಉದ್ಧಾರ ಕಾರ್ಯ ಆರಂಭವಾಗಲೇಬೇಕು. ಅದು ಇಂದೇ, ಈಗಲೇ ಇಲ್ಲಿಯೇ ಏಕೆ ಆರಂಭವಾಗಬಾರದು? ಇದರಲ್ಲಿ ಅಪಾಯಬಂದರೆ? ಬರಲಿ!

'ನಾಳೆ ಬಪ್ಪುದು ನಮಗಿಂದೆ ಬರಲಿ; ಇಂದು ಬಪ್ಪುದು
ನಮಗೀಗಲೆ ಬರಲಿ!
ಇದಕಾರಂಜುವರು, ಇದಕಾರಳುಕುವರು?' (೬೯೬)
'ಜೋಳವಾಳಿಯಾನಲ್ಲ, ವೇಳೆಯಾಳಿಯವ ನಾನಯ್ಯ,
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ;
ಕೇಳು, ಕೂಡಲ ಸಂಗಮದೇವಾ, ಮರಣವೆ ಮಹಾನವಮಿ!' (೬೯೮)
'ಶರಣರೊಡನೆ ಶ್ರವದ ಮಾಡಿ ಮಾರುಗೋಲ ಬಿಡುವೆನಯ್ಯ!
ತಾಗಲಿ, ತಪ್ಪಲಿ, ಗೆಲವೆನ್ನದೆಂಬೆನಯ್ಯಾ!'(೭೦೨)

ಹೌದು, ತತ್ತ್ವಕ್ಕಾಗಿ, ಆದರ್ಶಕ್ಕಾಗಿ ಹೋರಾಡಿ ಸೋತರೂ ಗೆದ್ದಂತೆ; ಸ್ವಾರ್ಥಕ್ಕಾಗಿ ಹೆಣಗಿ ಗೆದ್ದರೂ ಸೋತಂತೆ! ಜೀವಿಸುವ ಆಸೆಯನ್ನೇ ತೊರೆದು ಜಡವಾಗಿ ಬಿದ್ದಿರುವ ಈ ಹೀನಕುಲದವರೆಂದು ಹಳಿಯಲ್ಪಟ್ಟ ದೀನ ಜನರನ್ನೆಬ್ಬಿಸಲು ಸಂಘರ್ಷದ ಸೊನ್ನೆ ಬೇಕಾದರೂ ಬೇಡವೆನ್ನುವುದೇಕೆ? ಒಮ್ಮೆ ಮುಂದಿಟ್ಟ ಅಡಿಯನ್ನು ಹಿಂದಿಡುವುದು ಬೇಡ!

ಬಿಡುವಿಲ್ಲದಂತೆ, ಭಯವರಿಯದಂತೆ, ಕೃತ್ರಿಮತೆ ಕಪಟ ವಂಚನೆಗಳ ಸೋಂಕಿಲ್ಲದಂತೆ ಸಾಗಿತು ಬಸವಣ್ಣನವರ ದಯಾಧರ್ಮಪ್ರಸಾರ; ಅದರೊಡನೆ ದೀನೋದ್ಧಾರ, ಅವರು ದಿನದಿನವೂ ನಿರ್ವಹಿಸುತ್ತಿದ್ದ ಕಾರ್ಯಗಳ ವೈವಿಧ್ಯ ವೈಪುಲ್ಯ ವೈಶಿಷ್ಟ್ಯಗಳನ್ನು ಗಮನಿಸಿದಾಗ ಅವರ ಅಗಾಧವಾದ ಆತ್ಮಶಕ್ತಿ, ಆಕರ್ಷಣಶಕ್ತಿ, ಕ್ರಿಯಾಶಕ್ತಿ, ಪ್ರಶಾಸನ ಶಕ್ತಿಗಳ ಬಗ್ಗೆ ಬೆಕ್ಕಸ ಬೆರಗಾಗಬೇಕಾಗುತ್ತದೆ. 'ಹೊತ್ತಾರೆ ಎದ್ದು, ಅಗ್ಗವಣಿ ಪತ್ರೆಯ ತಂದು ಕರ್ತ ಕೂಡಲಸಂಗಮದೇವನ' ಪೂಜಿಸಿ 'ಸುಪ್ರಭಾತದೊಳು ಅಸಂಖ್ಯಾತರೊಡಗೊಂಡು ಅನುಭವ ಮಂಟಪಕ್ಕೆ' ಹೋಗುವುದು. ಅನುಭವದ ಆಲಿಮನೆಯೂ ವಚನಗಳ ಕಮ್ಮಟವೂ ಆಗಿದ್ದ ಆ ಅದ್ವಿತೀಯ ಅನುಭವ ಮಂಟಪದಲ್ಲಿ 'ವಚನಭಂಡಾರದ ಶಾಂತರಸಯ್ಯಗಳು

ಲೇಖನಂಗೈದು' ಕೊಟ್ಟಿದ್ದ 'ವಚನಾಮೃತ'ಗಳನ್ನು ಚನ್ನಬಸವರಾಜ ದೇವರಿಗೆ ಕೊಡುವುದು', ಅವರು ತ್ರಿವಿಧ ಲಿಂಗಾನುಭಾವವಂ ಮಾಡಲು' ಎಲ್ಲರೊಡನೆ 'ಒಂದು ಜಾವ ಹೊತ್ತು' ಕೇಳುವುದು, ಆಮೇಲೆ ಎಲ್ಲ ಶರಣರು 'ತಮ್ಮ ತಮ್ಮ ಗೃಹಕ್ಕೆ ಹೋಗಿ ಕಾಯಕ ವೃತ್ತಿಯಂ ಕೈಕೊಂಡು ತ್ರಿವಿಧ ದಾಸೋಹದಲ್ಲಿ ನಿರತರಾಗಲು ತಾವೂ ತಮ್ಮ ಕಾಯಕವನ್ನು ಆರಂಭಿಸುವುದು, ಅದಾಗಲೇ ಬಂದಿದ್ದ ಶರಣರ ಯೋಗಕ್ಷೇಮವನ್ನು ವಿಚಾರಿಸುವುದು, ಅಂದು ಬಂದ ಶರಣರಿಗೆ ಕಾಯಕವಿತ್ತು ಅಗತ್ಯ ಏರ್ಪಾಡುಗಳನ್ನು ಮಾಡಿಸಿಕೊಡುವುದು. ಅವರಲ್ಲಿ ಉದ್ಭವಿಸಿರಬಹುದಾದ ಮತಭೇದಗಳನ್ನು ನಿವಾರಿಸುವುದು, ತಮ್ಮ ತ್ರಿವಿಧ ದಾಸೋಹವನ್ನು ಮುಂದುವರಿಸುವುದು. ಕೊಂಡೆಯರು ಬಿಜ್ಜಳನ ತಲೆಕೆಡಿಸಿದ್ದರೆ ಅದನ್ನು ಸರಿಪಡಿಸುವುದು, ರಾಜ್ಯಭಂಡಾರದ ತಲೆತಿನ್ನುವ ಕೆಲಸವನ್ನು ಮುಗಿಸುವುದು, ಆಡಳಿತದ ಸಿಕ್ಕುಗಳನ್ನು ಬಿಡಿಸುವುದು, ತಮ್ಮ ಆಂದೋಲನಕ್ಕೆ ಆಗದವರು ತಂದೊಡ್ಡುವ ತೊಂದರೆಗಳನ್ನು ಪರಿಹರಿಸಿಕೊಳ್ಳುವುದು. ಅಲ್ಲಮಪ್ರಭುವೇ ಆಗಲಿ ಶರಣಕುಲದೀಪಕರು ತಮ್ಮಲ್ಲಿ ಕಂಡುಹಿಡಿದ ನ್ಯೂನತೆಗಳನ್ನು ಹೋಗಲಾಡಿಸಿಕೊಳ್ಳುವುದು, ತಮ್ಮ ಆಂದೋಲನದ ಮುಂದಿನ ಮಾರ್ಗವನ್ನು ಗೊತ್ತುಮಾಡಿಕೊಳ್ಳುವುದು, ಗೃಹಸ್ಥ ಧರ್ಮದ ಹೊಣೆಯನ್ನುನಿರ್ವಹಿಸುವುದು – ಒಂದೇ ಎರಡೇ – ಎಷ್ಟು ಕೆಲಸಗಳು ಅವರ ಪಾಲಿಗೆ! ಆದರೂ ಒಮ್ಮೆಯಾದರೂ ದಣಿದೆನೆಂದು ಗೊಣಗಿದರೆ, ಟೀಕಿಸಿದರೆಂದು ನೊಂದರೆ, ನುತಿಸಿದರೆಂದು ಹಿಗ್ಗಿದರೆ, ಅಧಿಕಾರ ಸ್ಥಾನಗಳು ಉನ್ನತವಾಗುತ್ತ ಹೋದರೂ ಬೀಗಿದರೆ, ಬರುವ ಶರಣರ ಸಂಖ್ಯೆ ಎಣಿಕೆ ಮೀರಿ ಬೆಳೆಯಿತೆಂದು ಸಿಡಿಮಿಡಿಗೊಂಡರೆ, ಹೆಸರಿಗಾಗಿ ಹಂಬಲಿಸಿದರೆ – 'ಎನಗಿಂತ ಕಿರಿಯರಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ವೆಂಬ ತಮ್ಮ ಮಹಾಸೂತ್ರಕ್ಕೆ ತಾವೇ ಸರ್ವೋತ್ತಮ ನಿದರ್ಶನವಾಗಿ ಬದುಕಿದರು ಅವರು. ತೆಯ್ದನಿತೂ ಸುಗಂಧ ಬೀರಿತು ಅವರ ಬಾಳ ಬಾವನ್ನ; ಸುಟ್ಟಷ್ಟೂ ಕಾಂತಿಯೇರಿತು ಅವರ ಬದುಕಿನ ಚಿನ್ನ!

೩) ಬೆಳಗಾಯಿತೆಂದರೆ ಒಂದು ಮಹದ್ಘಟನೆ – ಕಲ್ಯಾಣವನ್ನು ಅಲ್ಲಾಡಿಸಿ ಭಾರತದ ಮೂಲೆ ಮೂಲೆಗಳಲ್ಲಿಯೂ ಅಚ್ಚರಿಯ ತೆರೆಗಳನ್ನೆಬ್ಬಿಸುತ್ತಿದ್ದ ಚರಿತ್ರಾರ್ಹ ಘಟನೆ, ಇಂದು ಆಧ್ಯಾತ್ಮ ಹಿಮಗಿರಿಯ ಗೌರೀಶಂಕರ ಅಲ್ಲಮ ಪ್ರಭುಗಳ ಆಗಮನ. ನಾಳೆ ಚನ್ನಬಸವಣ್ಣನವರಿಂದ ಸಿದ್ಧರಾಮೇಶ್ವರರಿಗೆ ಇಷ್ಟಲಿಂಗ ಧಾರಣ. ನಾಡಿದ್ದು ರಾಜ್ಯವನ್ನೇ ಕಃಪದಾರ್ಥವೆಂದು ಕಡೆಗಣಿಸಿ ಬಂದ ಮೋಳಿಗೆಯ ಮಾರಯ್ಯ – ಮಹಾದೇವಿಯರ ಬರವು – ಅಕ್ಕಮಹಾದೇವಿಯರ ಬರವು – ಹೀಗೆ'ನ ಭೂತೋನ ಭವಿಷ್ಯತಿ' ಎನ್ನುವಂತೆ ನಡೆಯಿತು ಈ ಆಧ್ಯಾತ್ಮಿಕ – ಸಾಮಾಜಿಕ – ಆರ್ಥಿಕ – ಸಾಂಸ್ಕೃತಿಕ ಆಂದೋಲನ. ನೋಡುವವರು ನೋಡುತ್ತಲೇ ನಿಂತರು. ಆಡಿಕೊಳ್ಳುವವರು ಆಡಿಕೊಳ್ಳುತ್ತಲೇ ಕುಳಿತರು. ಅವರ ಕಣ್ಣೆದುರಿಗೇ ರೂಪುಗೊಳ್ಳತೊಡಗಿತು ಒಂದು ಹೊಚ್ಚ ಹೊಸ ಆತ್ಮದರ್ಶನ, ಜೀವನದರ್ಶನ, ಸಮಾಜರಚನೆ, ಸಾಹಿತ್ಯಸೃಷ್ಟಿ, ಸಾಂಸ್ಕೃತಿಕ ನವಜನ್ಮ – ಒಟ್ಟಿನಲ್ಲಿ ಹೊಸ ಪ್ರಪಂಚ! ಈ ಆಂದೋಲನದ ಅಧ್ವರ್ಯುಗಳ ಅನುಯಾಯಿಗಳು ಬಸವನ

ಗುಪ್ತ ಸೈನ್ಯದ ಸಿಪಾಯಿಗಳೆಂದು ಆಡಿಕೊಂಡವರಾರೋ, ಚಾಡಿ ಹೇಳಿದವರಾರೋ, ಅವರ ಧರ್ಮಭ್ರಷ್ಟರೆಂದು ದೂರಿಕೊಂಡವರಾರೋ, ಪಾಷಂಡಿಗಳೆಂದು ತೆಗಳಿದವರಾರೋ!

ಆದರೂ ಮಹಾಪ್ರವಾಹವಾಗಿ, ಪತಿತಪಾವನ ಪ್ರವಾಹವಾಗಿ ಮುನ್ನುಗ್ಗಿತು ಈ ಆಂದೋಲನ. ಅವರಿವರೆನ್ನದೆ, ಶ್ರೀ ಮಹಾದೇವನ ನೆನೆವ ಅವನೇ ಆಗಲಿ, ಅವರು ಸದ್ಭಕ್ತರು, ವಂದ್ಯರು ಎಂಬ ವಿಶ್ವವಿಶಾಲ ಭಾವನೆಯೊಂದಿಗೆ ಬಂದವರ ಪೂರ್ವಜನ್ಮ ನಿವೃತ್ತಿ, ಪೂರ್ವವರ್ಣ ನಿವೃತ್ತಿ, ಪೂರ್ವಕುಲ ನಿವೃತ್ತಿಯನ್ನು ಮಾಡುತ್ತ ಹೊರಟರು ಈ ಹೊಸಯುಗದ ಪ್ರವರ್ತಕರು. ಬೆಳಗುಗಳ ಬಳಗ ಸೇರಿತು ಕಲ್ಯಾಣದಲ್ಲಿ! ನವೋದಯದ ಮಂಗಳಗೀತೆ ಹಾಡಿದುವು ವಿಹಂಗಮಗಳು ನಾಡಿನ ಬಾನಿನ ಅಂಗಣದಲ್ಲಿ.

ಪರಮಗುರು ಪ್ರಭುದೇವರು ದೇಶವನ್ನೆಲ್ಲ ಸುತ್ತಿ ಎರಡನೆಯ ಸಲ ಕಲ್ಯಾಣಕ್ಕೆ ಬಂದು ಅವರಿಗಾಗಿಯೇ ಬಸವಣ್ಣ ಕಲ್ಪಿಸಿದ್ದ ಶೂನ್ಯಸಿಂಹಾಸನಾರೋಹಣ ಮಾಡಿದುದು ಈ ಪ್ರಚಂಡ ಆಂದೋಲನದ ಪರಾಕಾಷ್ಠೆಯೆಂದು ಹೇಳಬಹುದು. ಅಂದು ಬಸವನ ಕಾಯಕಧರ್ಮದ ನಾಯಕರೆಲ್ಲ, ಸಾಮಾನ್ಯರ ಧರ್ಮದ ಧುರೀಣರೆಲ್ಲ, ಆರ್ತರ ಧರ್ಮದ ಅನುಯಾಯಿಗಳೆಲ್ಲ ಆನಂದದಿಂದ ನಲಿದಿರಬೇಕು. ಎಂಟುನೂರು ವರ್ಷಗಳ ತರುವಾಯವೂ ಅಪೂರ್ವವೆನಿಸಿ ತೋರುವ ಆ ಚಾರಿತ್ರಿಕ ಘಟನೆ ಎಲ್ಲೆಡೆಗಳಲ್ಲಿಯೂ ಸಂಭ್ರಮದಿಂದ ಸ್ವಾಗತಿಸಲ್ಪಟ್ಟಿರಬೇಕು. ಕಲ್ಯಾಣವೆಂಬ ಪ್ರಣತಿ ಅಂದು ಭಕ್ತಿರಸದಿಂದ ಪೂರ್ಣ ತುಂಬಿ ಅದರ ಆಚಾರದ ಬತ್ತಿಗೆ ಬಸವಣ್ಣನೆಂಬ ಜ್ಯೋತಿ ಮುಟ್ಟಿ ಶಿವನ ಪ್ರಕಾಶ ತೊಳಗಿ ಬೆಳಗಿತು; ದಿಕ್ಕು ದಿಕ್ಕಿಗೆ ಹರಡಿ ಆಗದವರ ಕಣ್ಣು ಕುಕ್ಕಿಸಿತು!

ಆದರೆ ಈ ಪ್ರಣತಿ ಒಡೆಯುವ ಕಾಲವೂ ದೂರ ಉಳಿದಿರಲಿಲ್ಲ! ಕಲ್ಯಾಣದ ಪ್ರಣತಿ ತುಂಬುತ್ತ ನಡೆದಿರುವಂತೆಯೇ ಕರ್ನಾಟಕದ ಭಾಗ್ಯದ ಪ್ರಣತಿ ಬರಿದಾಗುತ್ತ ನಡೆದಿದ್ದಿತು. ಇದನ್ನು ಮುಂದೆ ನೋಡೋಣ. ಇಲ್ಲಿ ಇಷ್ಟನ್ನು ಹೇಳಬಹುದು: ಆರುವ ಮುನ್ನ ದೀಪ ದೊಡ್ಡದಾಗಿ ದ್ಯೋತಿಸುವಂತೆ ಅಂದು ಕಲ್ಯಾಣ ಜ್ಯೋತಿಯೂ ದೊಡ್ಡದಾಗಿ, ದೇದೀಪ್ಯಮಾನವಾಗಿ ಬೆಳಗಿತು. ಈ ಆಂದೋಲನದ ಮುಂದಾಳುಗಳ ಉತ್ಸಾಹ ಉಕ್ಕೇರಿತು. ಧೈರ್ಯ ಇಮ್ಮಡಿಸಿತು; ಹುಮ್ಮಸ್ಸು ಹೊನಲಾಗಿ ಹರಿಯಿತು. ಅಷ್ಟರೊಳಗಾಗಿಯೇ ಶರಣಧರ್ಮವನ್ನು ಸ್ವೀಕರಿಸಿದ್ದ, ಅಥವಾ ಆ ತರುವಾಯ ಶೀಘ್ರದಲ್ಲಿಯೇ ಸ್ವೀಕರಿಸಿರಬಹುದಾದ ಹರಳಯ್ಯ ಮಧುವರಸರ ನಂಟು ಕಂಟಕವಾಗಿ ಮೋರೆ ಚಾಚಿತು. ಅವರಿಬ್ಬರೂ ಮೊದಲು ಅಸ್ಪೃಶ್ಯ ಮತ್ತು ವಿಪ್ರರಾಗಿದ್ದರೂ ಈಗ ಇಬ್ಬರೂ ಬಸವ ಮತದ ಅನುಯಾಯಿಗಳು; ಆ ಮತದ ತತ್ತ್ವದ ಪ್ರಕಾರ ಸಮಾನಸ್ಕಂಧರು. ಆದುದರಿಂದ ಹರಳಯ್ಯನ ಮಗನಿಗೆ ಮಧುವಯ್ಯನ ಮಗಳನ್ನು ಕೊಟ್ಟು ವಿವಾಹ ಮಾಡಿದುದು ಬಸವಮತಕ್ಕೆ ಸಮ್ಮತವಾದ ವಿಷಯ. ಆದರೆ ಸನಾತನಿಗಳ ಮತಕ್ಕೆ?

ಅವರ ಹೃದಯಕ್ಕೆ ಆಗಿರಬಹುದಾದ ಆಘಾತವನ್ನು ಇಂದಿನವರು ಊಹಿಸುವುದೂ ಕಷ್ಟ. ಆಗಿನಿಂದೀಚೆಗೆ ಕಾವೇರಿ ಗೋದಾವರಿಗಳಲ್ಲಿ ಅಷ್ಟೇ ಅಲ್ಲ, ನರ್ಮದೆಯಿಂದ ಸಿಂಧು ಬ್ರಹ್ಮಪುತ್ರಾಗಳವರೆಗೆ ಎಲ್ಲ ನದಿಗಳಲ್ಲಿ ಬಹಳ ನೀರು ಹರಿದಿದೆ; ಅಂಧಕಾರ ಸರಿದಿದೆ; ಹೊಸ ಬೆಳಗಿನ ಮಳೆ ಸುರಿದಿದೆ, ಅಂದು ವಿಪ್ಲವ, ಕ್ರಾಂತಿ, ಅದ್ಭುತ ಪರಿವರ್ತನೆಯೆನಿಸಿರಬಹುದಾದುದು ಇಂದು ಸರ್ವರೂ ಹುಟ್ಟುತ್ತಲೇ ಮೈಗೂಡಿಸಿಕೊಂಡು ಹೊರಡುವ ಸಾಮಾನ್ಯ ವಿಷಯ. ಆದರೂ ಒಂದು ವಿಶೇಷ ಇಂದೂ ಹರಿಜನ ವರ–ವಿಪ್ರವಧುಗಳಿರುವ ಮದುವೆಗಳು ಅತ್ಯಂತ ವಿರಲ; ಇಂದೂ ಅಸ್ಪೃಶ್ಯತೆಯ ರಕ್ಕಸ–ರಕ್ತಬೀಜ ಕಡಿದಷ್ಟೂ ಕೊನರುತ್ತಿದ್ದಾನೆ! ಆದುದರಿಂದ ಅಂದು ಭಾರತದ ಇತಿಹಾಸದಲ್ಲಿಯೇ ಕ್ರಾಂತಿಕಾರವೆನಿಸಬಹುದಾದ ಈ ಘಟನೆ ಅದೆಷ್ಟು ಮನಗಳಲ್ಲಿ ಕ್ರೋಧದ ಕಿಡಿಗೆದರಿತೆಂಬುದನ್ನು ಊಹಿಸಿಯೇ ಅರಿತುಕೊಳ್ಳಬೇಕು.

ಈ ಆಂದೋಲನದ ವಿರೋಧಿಗಳಿಗೆ ವಿರೋಧಿಗಳಿಗೆ ಇದಕ್ಕಿಂತ ಒಳ್ಳೆಯ ಸಂದರ್ಭ ಮತ್ತೊಂದು ಸಿಕ್ಕಲಾರದು – ಇದನ್ನು ಬಗ್ಗುಬಡಿಯಲಿಕ್ಕೆ ಅವರೆಲ್ಲ ಉರಿದೆದ್ದರು! ಈ ವಿರೋಧಿಗಳಲ್ಲಿ ವರ್ಣವ್ಯವಸ್ಥೆಯ ಬೆಂಗಲಿಗರಂತೂ ಸರಿಯೆ, ವ್ಯಾಪಕಪ್ರಮಾಣದಲ್ಲಿ ಕಾಯಕಗಳು ತಲೆದೋರಿ, ತತ್ಪರಿಣಾಮವಾಗಿ ಅದುವರೆಗೆ ಆರ್ಥಿಕ ದಾಸ್ಯದಲ್ಲಿದ್ದ ದಲಿತ–ದರಿದ್ರರ ಆರ್ಥಿಕ ಸ್ವಾವಲಂಬನೆ ಸಾಧಿತವಾಗಿ, ಅದರಿಂದ ಹಾನಿ ಅನಾನುಕೂಲ–ಗಳಿಗೊಳಗಾಗಿದ್ದ ಶೋಷಕವರ್ಗಗಳೂ ಸೇರಿರಬಹುದು! ಬಸವಣ್ಣನವರ ಉಲ್ಕಾವೇಗದ ಅಧಿಕಾರೋತ್ಕರ್ಷದಿಂದ ಅತೃಪ್ತರಾಗಿದ್ದ ಅಧಿಕಾರಿಗಳೂ ಸೇರಿದ್ದಿರಬಹುದು: ಚಾಲುಕ್ಯವಂಶದ ರಾಜಕುಮಾರರನ್ನೂ, ಕೊನೆಗೆ ಚಾಲುಕ್ಯ ಚಕ್ರೇಶ್ವರನನ್ನೂ ಕೊಲ್ಲಿಸಿದ್ದರಿಂದ ಕೆರಳಿ ಸೇಡಿಗಾಗಿ ಒಳಗೊಳಗೇ ಕುದಿಯುತ್ತ, ಅನುಕೂಲಕ್ಕಾಗಿ ಕಾದಿದ್ದ ಚಾಲುಕ್ಯವಂಶನಿಷ್ಠರೂ ಸೇರಿರಬಹುದು; ಬಿಜ್ಜಳನಿಂದ ಒಂದಿಲ್ಲೊಂದು ಕಾರಣಕ್ಕಾಗಿ ಅತೃಪ್ತರಾಗಿದ್ದ ಸಾಮಂತಶ್ರೀಮಂತರೂ ಸೇರಿರಬಹುದು; ಅಲ್ಲದೆ, ಸಾಮಾನ್ಯವಾಗಿ ಸರ್ವಸ್ಥಿತ್ಯಂತರಗಳನ್ನೂ ವಿರೋಧಿಸುವ, ಬದಲಾವಣೆಯೆಂದರೆ ಭಯಪಡುವ ಈಗಿದ್ದುದೇ ಶ್ರೇಯಸ್ಕರವೆಂದು ಭಾವಿಸುವ ಭಾವುಕರೂ, ಸಂಪ್ರದಾಯಶರಣರೂ ಸೇರಿರಬಹುದು. ಇವರೆಲ್ಲ ಒಟ್ಟುಗೂಡಲು ಇದೊಂದು ಸುವರ್ಣಸಂಧಿ ಸಿಕ್ಕಿತು. ಎಲ್ಲರೂ ಸೇರಿ ದೊರೆಯ ಹತ್ತಿರ ದೂರು ಒಯ್ದರು. ಇಷ್ಟೊಂದು ಸಂಘಟಿತವಾದ, ಪ್ರಾತಿನಿಧಿಕವಾದ, ಪ್ರಬಲವಾದ ದೂರನ್ನು ದೊರೆ ಇದುವರೆಗೂ ಎದುರಿಸಿರಲಿಲ್ಲ. ಸಾಲದುದಕ್ಕೆ, ದೊರೆಗೂ ದುರ್ದಿನಗಳು ಬರತೊಡಗಿದ್ದ ಕೆಟ್ಟಕಾಲದಲ್ಲಿ ಈ ಘಟನೆ ನಡೆದು ನಡುಗಿಸಿದ್ದಿತು ರೂಢಿಬದ್ಧ, ಸಂಪ್ರದಾಯಶರಣ ಸಮಾಜವನ್ನು.

'The political situation in the kingdom was far from satisfactory. Bijjala was not destined to enjoy the fruits of his ill-gotten prize long and peacefully. He reigned for a short period of six years at the end of

which he seems to have been forced to step down from his office in an adverse situation.

In the palace itself, there were parties and factions which were the breeding house for intriguls. The near and dear Kinsmen of the Chalukyan family and almost all field for safety. Wherever they went, they gathered around them a group of sympathisers and supporters who detested the Kalachuri house of upstarts and usurpers. The example of perfidy set by Bijjala Whipped up inpulses of rank selfishness and foul ambition in the hearts of his own brothers and for a favourable opportunity to revold and seize power.

The Sons were not only not on good terms with one another, but, it appears, were prepared to go  to to the extent of wresting power from their own father!' (Basavesvara and His Times : pages 44-45).

ಬಿಜ್ಜಳನ ಮಕ್ಕಳೇ ತಂದೆಯಿಂದ ಅಧಿಕಾರ ಕಸಿದುಕೊಳ್ಳಲು ಆತುರರಾಗಿದ್ದರೆಂಬುದಕ್ಕೆ ಮುತ್ತಗಿಯ ಶಾಸನ (S.I.I. Vol. XV, Nop. III) ವೇ ಸಾಕ್ಷಿ. ಇದರ ಪ್ರಕಾರ ಬಿಜ್ಜಳನ ಪ್ರಿಯಪುತ್ರ ಸೋವಿದೇವ ಹಿಂದೆ ತಂದೆಯಾಳಿದ್ದ ತರ್ದವಾಡಿ ನಾಡನ್ನೇ ತನ್ನ 'ಭುಜಬಲ'ದಿಂದಲೇ ಗೆದ್ದು ಕ್ರಿ.ಶ. ೧೧೬೫ ರಲ್ಲಿಯೇ ಸಕಲ ರಾಜೋಚಿತ ಬಿರುದಾವಳಿಗಳೊಡನೆ ಆಳುತ್ತಿರುತ್ತಾನೆ. ಅಲ್ಲಿಂದ ಮುಂದೆ ಬಿಜ್ಜಳನ ಆಳಿಕೆ ಎರಡೇ ವರ್ಷ! ಎಷ್ಟು ಬೇಗ ಬಿಜ್ಜಳನ ದುರ್ನೀತಿ ಬಿಜ್ಜಳನಿಗೇ ಮುಳ್ಳಾಯಿತು!

ಇನ್ನೂ ಉದಾಹರಣೆಗಳನ್ನು ಉದ್ಧರಿಸಬಹುದು – ಬಿಜ್ಜಳನ ಕೊನೆಯ ದಿನಗಳಲ್ಲಿ ಅವನ ಅರಮನೆ ಅಂತಃಕಲಹಗಳಿಂದ ಅವನ ಸಾಮ್ರಾಜ್ಯ ಒಳಸಂಚುಗಳಿಂದ ಅವನ ಆಡಳಿತ ಶೈಥಿಲ್ಯಗಳಿಂದ ಅಸ್ತವ್ಯಸ್ತವಾಗಿದ್ದುವೆಂಬುದನ್ನು ದೃಢೀಕರಿಸುವುದಕ್ಕೆ. ಇಂದಿನ ಉಪನ್ಯಾಸ ಪರಿಮಿತಿಗೆ ಇಷ್ಟು ಸಾಕೆಂದು ತೋರುತ್ತಿದೆ. ಇಂತ ಇಕ್ಕಟ್ಟಿನ ಘಟ್ಟದಲ್ಲಿ ಅವನಿರುವಾಗ ಪ್ರತಿಗಾಮೀಶಕ್ತಿಗಳನ್ನೆಲ್ಲ ಒಂದುಗೂಡಿಸಿ, ಪ್ರತಿಭಟನೆಗೆ ಸಜ್ಜುಗೊಳಿಸಿದ ಈ ಪ್ರತಿಲೋಮ ವಿವಾಹದ 'ಘೋರ' ಘಟನೆ ಸಂಭವಿಸುತ್ತದೆ! ಬಿಜ್ಜಳನೀಗ ಇಬ್ಬರಲ್ಲಿ ಬಸವಣ್ಣ ಇಲ್ಲವೆ ಆತನ ವಿರೋಧಿಗಳಲ್ಲಿ ಒಬ್ಬರನ್ನು ಆರಿಸಿಕೊಳ್ಳಲೇಬೇಕು! ಎಂಥ ಇರುಕು ಇದು ಅವನಿಗೆ! ಆದರೂ ತನ್ನ ತೀರ್ಮಾನಕ್ಕೆ ಬೇಗ ಬರಲೇಬೇಕು ಬಿಜ್ಜಳ, ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದೆ, ಅಂಕೆಮೀರಿ ಹೋಗುತ್ತಿದೆ! ಇವರಲ್ಲಿ ಯಾರು

ಹಿತವರು ನನಗೆ? ಯಾರನ್ನು ಆಯ್ದುಕೊಳ್ಳಲಿ, ಯಾರೊಡನೆ ನನ್ನ ಭವಿತವ್ಯವನ್ನು ಸುಲಗ್ನಗೊಳಿಸಲಿ?

ದುರದೃಷ್ಟವಶಾತ್, ಬಹುಸಂಖ್ಯಾಕರ ಬಲವೇ ಬಲವೆಂದು ಬಿಜ್ಜಳ ಪ್ರತಿಗಾಮೀ ಶಕ್ತಿಗಳ ಪಕ್ಷವನ್ನೇ ವಹಿಸಿಬಿಡುತ್ತಾನೆ! ಇದು ಅವನ ಮೊದಲ ಒಲವಿಗೆ ಅನುಗುಣವಾಗಿಯೂ ಇದೆ! ಈ ಬೊಬ್ಬುಲಿ ಬಸವಚಂದನತರುವಿನ ಸಂಸರ್ಗದಿಂದ ತಾತ್ಕಾಲಿಕವಾಗಿ ಸುಗಂಧಿತವಾಗಿದ್ದಿತು. ಅಷ್ಟೇ. ಪ್ರಗತಿ ಪರಶಕ್ತಿಗಳ ಮತ್ತು ಪ್ರತಿಗಾಮೀ ಶಕ್ತಿಗಳ ಬಲಾಬಲಗಳ ಪರೀಕ್ಷೆ ಅಪರಿಹಾರ್ಯವಾಗುತ್ತದೆ. ಬಿಜ್ಜಳ ಹರಳಯ್ಯ ಮಧುವಯ್ಯಗಳಿಗೆ ಕ್ರೂರ ಶಿಕ್ಷೆ ವಿಧಿಸುತ್ತಾನೆ – ಘೋರ ಪಾತಕಿಗಳಿಗೆ ಮಾತ್ರ ಮೀಸಲಾದ ಕ್ರೂರ ಶಿಕ್ಷೆಯನ್ನು ವಿಧಿಸುತ್ತಾನೆ! ಅವರ ಕಣ್ಣುಗಳನ್ನು ಕೀಳಿಸಿ ಎಳಹೂಟೆಯೆಳೆಸಿ ಕೊಲ್ಲಿಸಿನೆಂದು ತಿಳಿದುಬರುತ್ತದೆ. ಎಂಥ 'ತಪ್ಪಿಗೆ' ಎಂಥ ಶಿಕ್ಷೆ! ನಿರಂಕುಶ ಸಾಮ್ರಾಟನೊಬ್ಬನ ನಿರ್ಣಯ ಇದನ್ನು ಯಾರು ತಪ್ಪಿಸಬಲ್ಲರು?

ಬಿಜ್ಜಳನು ನಿಷ್ಕಾರಣವಾಗಿ ಹರಳಯ್ಯ ಮಧುವಯ್ಯಗಳಿಗೆ ಈ ಘೋರ ಶಿಕ್ಷೆ ವಿಧಿಸಿದನೆಂದು ಕೆಲವು ಗ್ರಂಥಗಳು ಹೇಳಿದರೆ (ಬಸವ ಪುರಾಣ ಇತ್ಯಾದಿ) ಅವರ ಮಕ್ಕಳ ಪ್ರತಿಲೋಮ ವಿವಾಹವಿದಕ್ಕೆ ಕಾರಣವಾಯಿತೆಂದು ಕೆಲವು ಕೃತಿಗಳು ಹೇಳುತ್ತಿವೆ (ಶರಣಲೀಲಾಮೃತ, ಭೈರವೇಶ್ವರ ಕಾವ್ಯದ ಕಥಾಮಣಿ, ಸೂತ್ರರತ್ನಾಕರ, ಬಿಜ್ಜಳ ಚರಿತ್ರೆ, ಇತ್ಯಾದಿ). ನಿಷ್ಕಾರಣವಾಗಿ ದಂಡಿಸಿದನೆನ್ನುವುದು ಸಮುಚಿತವೆನಿಸದಾಗಿ ಪ್ರತಿಲೋಮ ವಿವಾಹದ ಕಾರಣದಿಂದಲೇ ದಂಡಿಸಿದನೆನ್ನುವುದು ವಿಹಿತ. ಯಾವ ಕಾರಣವಿಲ್ಲದೆಯೇ, ದಂಡಿಸಿರಲಿ, ಈ ಮದುವೆಯ ಕಾರಣಕ್ಕಾಗಿಯೇ ದಂಡಿಸಿರಲಿ ಇದೊಂದು ಅಮಾನುಷವಾದ ದಂಡನೆಯೆಂಬುದು ನಿಜ.

ಮುಂದೆ ಏನಾಯಿತು? ಬಿಜ್ಜಳನ ಕೊಲೆ ಆಯಿತೆ? ಆಗಲಿಲ್ಲವೆ? ಆಯಿತೆನ್ನುವವರು ಹಲವರಾದರೆ ಆಗಲಿಲ್ಲವೆನ್ನುವವರು ಕೆಲವರಿದ್ದಾರೆ. ಮೊದಲು ಆಗಲಿಲ್ಲವೆನ್ನುವವರ ಅಭಿಪ್ರಾಯಗಳನ್ನೇ ಗಮನಿಸೋಣ:

೧) ಶಿವತತ್ತ್ವ ಚಿಂತಾಮಣಿ ಈ ಬಗ್ಗೆ ಮೌನವಹಿಸಿದೆ. ಸಿಂಗಿರಾಜ ಪುರಾಣದಲ್ಲಾದರೋ ಬಿಜ್ಜಳನೇ ಬಸವಣ್ಣನವರಿಗೆ ವಿಶ್ರಾಂತಿಯನ್ನು ಕಲ್ಪಿಸಿ ಚೆನ್ನಬಸವನಿಗೆ ಮಂತ್ರಿಪಟ್ಟವನ್ನು ಕಟ್ಟಿ ಸುಖವಾಗಿ ರಾಜ್ಯಭಾರವನ್ನು ಮಾಡುತ್ತಾನೆ.*

೨) ಚಂದ್ರಸಾಗರವರ್ಣಿಯ ಬಿಜ್ಜಳರಾಯ ಪುರಾಣದಲ್ಲಿ ಬಿಜ್ಜಳನು ಯಮಧರ ಮನಿಯಿಂದ ಸನ್ಯಾಸವನ್ನು ಕೈಕೊಂಡು ಸಲ್ಲೇಖನ ವ್ರತದಿಂದ ಮಡಿದನೆಂದು ಹೇಳಿದೆ. (ಬಿ.ಪು.ಆಶ್ವಾಸ ೭, ಪದ್ಯ ೬೪)

೩) ಡಾ. ಫ್ಲೀಟರು ಬೊಂಬಾಯಿ ಗೆಜಟಿಯರ (ಪುಟಗಳು ೪೭೬, ೭೭, ೭೮) ನಲ್ಲಿ ಬರೆದಿರುವುದು ಹೀಗೆ :

'And finally, an inscription at Belgamve.... corresponding, probably, to the 24th April, A.D. 1168, says that, while still happily reigning over the whole earth... Bijjala transferred the burden of Government to his dear or favourite son Sovideva, who was reigning at the time when this record was drawn up.

As we gave already seen, in A.D. 1167, Bijjala abdicted in favour of his eldest son...'

ಈ ಅಭಿಪ್ರಾಯವನ್ನು ಹಿರಿಯರಾದ ಹಳಕಟ್ಟಿಯವರು ಎತ್ತಿ ಹಿಡಿದಿದ್ದಾರೆ (ಶಿವಾನುಭವ: ಸಂ.೧ ಸಂಚಿಕೆ–೩). ಆದರೆ ಈ ಶಾಸನದಲ್ಲಿ "... ಬಿಜ್ಜಣದೇವಂ ಮಹೀವಲ್ಲಭೆಯನನುದಿನವನುಭವಿಸಿದನೆಂತೆಂದಡೆ... ಇನ್ತದ್ವಿತೀಯ ಸ್ವಾಮಿತ್ವದಿಂ ವಸುಧಾವಳಯಮಂ ಸುಖದಿನೇಕಚ್ಛತ್ರದಿಂ ರಾಜ್ಯಂಗೈಯ್ಯುತ್ತಿರ್ದಾತ್ಮರಾಜ್ಯಭರನಿ ರೂಪಣಂ ಮಾಡಿದಾ ಮಹಾರಾಜ ಪ್ರಿಯತನಯ ಪ್ರತಾಪವಮಂ ಪೇಳ್ವೊಡೆ' ಎಂದು ಮಾತ್ರವಿರುವುದರಿಂದಲೂ, ಈ ಮಾತುಗಳು ಮಗನಿಗೆ ರಾಜ್ಯವನ್ನು ವಹಿಸಿಕೊಟ್ಟು ತಾನು ವಿಶ್ರಾಂತಿ ಪಡೆದನೆಂಬ ಅಭಿಪ್ರಾಯವನ್ನು ಹೊರಸೂಸುವುದಿಲ್ಲವಾದ್ದರಿಂದಲೂ ಡಾ. ಫ್ಲೀಟರ ಮತ್ತು ರಾವ್ ಬಹದ್ದೂರ್ ಹಳಕಟ್ಟಿಯವರ ಹೇಳಿಕೆಗಳಿಗೆ ನಾವು ಹೆಚ್ಚು ಪ್ರಾಶಸ್ತ್ಯವನ್ನು ಕೊಡಬೇಕಾಗಿಲ್ಲ'ವೆಂದು ಇನ್ನೊಬ್ಬ ಹಿರಿಯರಾದ ಎಂ.ಆರ್. ಶ್ರೀನಿವಾಸಮೂರ್ತಿಗಳವರು ಅಭಿಪ್ರಾಯಪಡುತ್ತಾರೆ.

ಈ ಅಬಲ ಆಧಾರಗಳಿಗೆದುರಾಗಿ ಬಿಜ್ಜಳನ ಕೊಲೆಯಾಯಿತೆಂಬುದಕ್ಕೆ ಈ ಪ್ರಬಲ ಆಧಾರಗಳಿವೆ:

೧) ಹರಿಹರ : 'ಶಿವದ್ರೋಹವಂ ಗೈದ ಬಿಜ್ಜಳನ ಕೊಲಿಸುತುಂ' (ಈ ಭಾಗ ಪ್ರಕ್ಷಿಪ್ತವಲ್ಲವೆಂದು ಸಿದ್ಧವಾದರೆ ಮಾತ್ರ) –(ಬ.ದೇ.ರ.ಸ್ಥಲ ೧೩)

---

* 'ಬಿನ್ನಣಂ ಬೀತು ತಾಂ ಕೈ ಮುಗಿವುತೂಳಿಗವ । ಚೆನ್ನಬಸವಣ್ಣಂಗೆ ಕರುಣಿಸಿರ್ದು ನೀ।
ವೆನ್ನಪಾಲಿಪುದಲ್ಲದೋಲಗಕೆ ಬರಬೇಡ ಬೇಹ ಪ್ರಸ್ತಗಳುಳ್ಳೊಡೆ।
ಬಿನ್ನಹಂ ಮಾಡಿ ಕಳುಪುದೆ ಮೇಣನಾಂ ಬಪ್ಪೆ....' (ಸಿ.ಪು. ಸಂಧಿ ೮)

೨) ರಾಘವಾಂಕ : 'ಭೂಪ ಬಿಜ್ಜಳನಳಿದ ವೀರಜಗದೇವನಿಂ ಸಿದ್ಧಸಂಕೇತ (ಸಂಖ್ಯಾತ?) ದಿಂದ' (ಸಿ. ಪು.ಸಂಧಿ ೮, ಪ. ೯೫).

೩) ಪಾಲ್ಕುರಿಕೆ ಸೋಮನಾಥ, ಭೀಮಕವಿ, ಹರಳಯ್ಯ ಮಧುವಯ್ಯಗಳಿಗಾದ ಮರಣದಂಡನೆಯಿಂದ ಮನನೊಂದ ಬಸವಣ್ಣನವರು ಜಗದೇವನನ್ನು ಕರೆಸಿ, ಹಿಂದೆ ಜಂಗಮರನ್ನು ಆರೋಗಣೆಗೆ ಕರೆದು ಅವರು ಬರಲು ತಡವಾಗಲು ಭೂಸುರರನ್ನು ಕರೆದು ಉಣಿಸಿದ ತಪ್ಪಿಗಾಗಿ ಮುಂದೆ ಕಲ್ಯಾಣದಲ್ಲಿ ಶಿವದ್ರೋಹ ಸಂಭವಿಸುವುದು, ಆಗ ಆ ದ್ರೋಹವನ್ನು ದಂಡಿಸಬೇಕೆಂದುದಕ್ಕೆ ಆಗಲೆಂದು ಅವನೊಪ್ಪಿದುದನ್ನು ಅವನ ನೆನಪಿಗೆ ತಂದುಕೊಟ್ಟು, 'ನಿನ್ನ ಮುನ್ನಿನ ಭಾಷೆಯಂ ಸಲಿಸಿನ್ನು, ತದ್ರೋಹಿಯನಪಹರಿಸಿ ನನ್ನಿಯಂ ಮೆರೆ' ಎಂದು 'ಸಂಗಮೇಶ್ವರ–ಪುರಕ್ಕೆ ನಡೆಯುತ್ತಾರೆ. ಆಮೇಲೆ ಜಗದೇವ, ಬೊಮ್ಮಾಯರು ಬಿಜ್ಜಳನನ್ನು ಕೊಲ್ಲುತ್ತಾರೆ. ಷಡಕ್ಷರದೇವ ಇದರಲ್ಲಿ ಒಂದೇ ಒಂದು ಮಾರ್ಪಟು ಮಾಡುತ್ತಾನೆ: ಬಸವಣ್ಣನವರು ಮೇಲಿನಂತೆ ಜಗದೇವನಿಂದ ವಚನವನ್ನೇನೋ ತೆಗೆದುಕೊಳ್ಳುತ್ತಾರೆ. ಆದರೆ ಕಲ್ಯಾಣ ಬಿಡುವ ಮುನ್ನ ಜಗದೇವನನ್ನು ಕರೆದು ಅವನಿಗೆ ಅದರ ನೆನಪು ಕೊಟ್ಟು ಹೋಗುವುದಿಲ್ಲ. ಆ ಕಾರ್ಯವನ್ನು ಮಡಿವಳಯ್ಯಾದಿಗಳು ಮಾಡುತ್ತಾರೆ. (ಬ.ರಾ.ವಿ.ಆ.೪೨). ವಿರೂಪಾಕ್ಷ ಪಂಡಿತ (ಚ.ಬ.ಪು. ಕಾಂಡ ೫, ಸಂಧಿ ೯, ಪ. ೨೨–೨೩) ಶಾಂತ ವೀರೇಶ್ವರ (ಶಿವಗಣಚಾರಿತ್ರ, ಸಂಧಿ ೪೫) ಚನ್ನಪ್ಪ ಕವಿ (ಶ.ಲೀ.ಸಂ.೨೨, ಪ.೨೨), ಮತ್ತು ಇಂದಿನ ಇತಿಹಾಸಕಾರರೆಲ್ಲರೂ. ಚರಿತ್ರ ಲೇಖಕರೆಲ್ಲರೂ ಬಿಜ್ಜಳನ ಕೊಲೆಯಾಯಿತೆಂದೇ ಹೇಳಿದ್ದಾರೆ. ಆದುದರಿಂದ ಕೊಲೆಯಾಯಿತೆಂದೇ ಹೇಳಬೇಕು.

ಹಾಗಾದರೆ ಯಾರು ಕಾರಣರು ಈ ಕೊಲೆಗೆ? ಇದಕ್ಕೆ ಉತ್ತರ ಹುಡುಕುವ ಮುನ್ನ ಇಂತ ವಿಷಯದಲ್ಲಿ ಈ ದೇಶದ ನಿಲವೇನೆಂಬುದನ್ನು ಇಲ್ಲಿ ವಿವರಿಸುವುದು ಅಪ್ರಸ್ತುತವೆನಿಸಲಿಕ್ಕಿಲ್ಲವಷ್ಟೆ? ಬಸವಣ್ಣನವರು ಬಿಜ್ಜಳನನ್ನು ಕೊಲ್ಲಿಸಿದ್ದರೂ ಅದು ಅಪರಾಧವೇನಿಲ್ಲವೆಂಬುದೇ ಈ ನಿಲವು. ದುಷ್ಟನಿಗ್ರಹ ಶಿಷ್ಟಪರಿಪಾಲನೆಯೇ ಆದಿಯಿಂದಲೂ ಈ ದೇಶದ ಧರ್ಮ ಮತ್ತು ರಾಜ್ಯಶಾಸ್ತ್ರಗಳ ಮೂಲಸೂತ್ರವಾಗಿದ್ದು, ಇದರ ಅನುಷ್ಠಾನಕ್ಕಾಗಿಯೇ ಶಿವನೂ, ವಿಷ್ಣುವೂ, ದೇವಿಯೂ ಅವತಾರಗಳನ್ನೆತ್ತಿ ಬಂದು ಸಾವಿರ ಸಾವಿರ ದುಷ್ಟರ ಸಂಹಾರ ಮಾಡಿ ಶಿಷ್ಟರನ್ನು ರಕ್ಷಿಸಿದರೆಂಬುದು ಸ್ಪಷ್ಟವಿರುವಾಗ ಬಸವಣ್ಣ ಒಬ್ಬ ದುಷ್ಟನನ್ನು ಕೊಲ್ಲಿಸಿದುದು ಅದಾವ ಅಪರಾಧ?' ಎಂದು ಹೇಳಬಹುದು. 'ಆದರೆ ದಯೆಯೇ ಧರ್ಮದ ಮೂಲ'ವೆಂದು ಸಾರಿದ ಬಸವಣ್ಣನವರು ಹೇಗೆ ಕೊಲ್ಲಿಸಿದರೆಂಬುದೇ ಪ್ರಶ್ನೆ. ಇದಕ್ಕೂ ಸಮರ್ಥನೆಯನ್ನು ಕೊಡಬಹುದು:

'ಒಬ್ಬ ಮಹನೀಯರೆಂದರು – ದಯೆಯಿಲ್ಲದ ಧರ್ಮವಾವುದಯ್ಯಾ? – ಎಂದು. ಇನ್ನೊಬ್ಬರೆಂದರು – ಧರ್ಮವಿಲ್ಲದ ದಯೆ ಎಂಥದಯ್ಯಾ? – ಎಂದು. ಹೀಗೆ ಧರ್ಮ ಸಾಧನೆಯಲ್ಲಿ ದಯೆಗೊಂದು ಸ್ಥನವಿದ್ದರೆ ದಂಡಕ್ಕೂ ಒಂದು ಸ್ಥಾನವಿರುತ್ತದೆ. ಧರ್ಮವನ್ನು ಉಳಿಸಹೊರಟವನಿಗೆ ಮೊದಲು ಬೇಕಾದ ಗುಣ ಎದೆಗಾರಿಕೆ. ಅನ್ಯಾಯವನ್ನೂ ಅಧರ್ಮವನ್ನೂ ಕಂಡಾಗ ಎದುರಿಸಿ ಹೋರದೆ ಓಡಿಹೋಗುವೆನೆಂಬವನು ತೋರುವುದು ದಯೆಯನ್ನಲ್ಲ; ಅಧರ್ಮ ಪ್ರೋತ್ಸಾಹವನ್ನು'. (ಡಿ.ವಿ.ಜಿ. : ಶ್ರೀಮದ್ಭಗವದ್ಗೀತಾ ತಾತ್ಪರ್ಯ, ಪು. ೯೬–೯೭).

ಇದೇ ದೃಷ್ಟಿಯಿಂದಲೇ ಮಹಾತ್ಮಾ ಗಾಂಧಿಯವರು ಕಾಶ್ಮೀರವನ್ನು ರಕ್ಷಿಸಲು ಹೊರಟಿದ್ದ ಭಾರತೀಯ ಸೈನಿಕರಿಗೆ ಸಂದೇಶವಿತ್ತರು : ವೈರಿಗಳನ್ನು ಜಯಿಸಿಯೇ ಭಾರತಕ್ಕೆ ಮರಳಿರಿ'.

ಇದೇನೇ ಇರಲಿ, ಬಿಜ್ಜಳನ ಕೊಲೆಗೆ ಬಸವಣ್ಣನವರು ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ, ಕಾರಣರಾದರೆ ಇಲ್ಲವೆ ಎಂಬುದನ್ನು ನಿಷ್ಠುರ ವಿಮರ್ಶೆಯ ನಿಕಷಕ್ಕೆ ತಿಕ್ಕಿನೋಡೋಣ :

೧) ಹರಿಹರನ ಬಸವರಾಜದೇವರ ರಗಳೆಯ ಆ ಭಾಗ ಹರಿಹರನ–ದಾಗಿರಲಾರದೆಂದು ಅದನ್ನು ಸಂಪಾದಿಸಿದ ಪಂಡಿತೋತ್ತಮರಾದ ದಿವಂಗತ ಟಿ.ಎಸ್. ವೆಂಕಣ್ಣಯ್ಯನವರೇ ಹೇಳಿದಾರೆ. ಆದುದರಿಂದ ಅದನ್ನು ಗಣನೆಗೆ ತೆಗೆದುಕೊಳ್ಳದಿರೋಣ.

೨) ರಾಘವಾಂಕನ ವಾಕ್ಯ, 'ಭೂಪ ಬಿಜ್ಜಳನಳಿದ ವೀರಜಗದೇವ–ನಿಂಸಿದ್ಧಸಂಕೇತದಿಂದ' ಎಂಬುದು ಎರಡು ರೀತಿಯ ಅರ್ಥವಿವರಣೆಗೆ ಇಂಬುಕೊಟ್ಟಿದೆ: ಇಲ್ಲಿ ಬರುವ ಸಿದ್ದ ಶಬ್ದ ಸಿದ್ಧರಾಮನನ್ನು ಸಂಕೇತಿಸುವುದೆಂಬ ಒಂದು ಅರ್ಥ! ಅದು ರೇವಣಸಿದ್ದನನ್ನು ಸೂಚಿಸುವುದೆಂಬುದು ಇನ್ನೊಂದು ಅರ್ಥ. ಮೊದಲನೆಯ ಅಥ್ ಅನರ್ಥವನ್ನೇ ಉಂಟುಮಾಡುತ್ತದೆ. ಸಿದ್ಧರಾಮನ ಜೀವನದಲ್ಲಿ ಇಂಥದೊಂದು ಘಟನೆ ನಡೆಯಿತೆಂದು ಬೇರಾರೂ ಹೇಳಿಲ್ಲ. ಇನ್ನು ರೇವಣಸಿದ್ಧನೆಂದು ಅರ್ಥವಿಸಿದರೆ ಆಗುವ ಅಸಂಗತತೆಯನ್ನು ವೇದ ವೇದಾಂತ ಸಿದ್ಧಾಂತವಾಚಸ್ಪತಿ ಶ್ರೀ ಟಿ.ಎನ್. ಮಲ್ಲಪ್ಪನವರು ತೋರಿಸಿದ್ದಾರೆ: 'ಸಿದ್ಧ ಸಂಕೇತವೆಂದರೇನು> ಬಸವೇಶವನು ತನ್ನ ಹೆಂಡತಿಯ ಅಣ್ಣನ ಕೊಲೆಯನ್ನು ಹೇಗೆ ಸಹಿಸನೋ ಹಾಗೆಯೇ ರೇವಣಸಿದ್ಧನು ಬಿಜ್ಜಳನ ಮಗಳನ್ನು ಮದುವೆಯಾಗಿದ್ದನಾಗಿ ಅವನ ಸಂಕೇತದಿಂದ ಬಿಜ್ಜಳನು ಮಡಿದನೆನ್ನಲಾಗುವುದಿಲ್ಲ. ಕಾಕತೀಯರ ಕಾಲದಲ್ಲಿಯೇ ರಚಿತವಾದ

ಗೌರವಾಂಕನ 'ನವನಾಥ ಚರಿತೆ'ಯಲ್ಲಿ ಸಿದ್ಧರು ಬಿಜ್ಜಳನ ಮರಣಕ್ಕೆ ಕಾರಣರೆಂದು ಹೇಳಿದೆ. ವ್ಯಾಳಿಸಿದ್ದನನ್ನು ಬಿಜ್ಜಳನು ಕಾದ ಎಣ್ಣೆ ಕೊಪ್ಪರಿಗೆಯಲ್ಲಿ ಹಾಕಿ ಕೊಂದುದಕ್ಕೆ ಪ್ರತಿಯಾಗಿ ಸಿದ್ಧರು ಬಿಜ್ಜಳನ ಕೊಲೆಗೆ ಕಾರಣರಾಗಿರಬಹುದೆಂಬ ನಿಲುವಿಗೆ ಗೌರನ ನವನಾಥಚರಿತ್ರೆಯಲ್ಲಿ ಆಧಾರ ದೊರೆಯುವುದು.' (ಬಸವೇಶ್ವರರ ಸಮಕಾಲೀನರು : ಪುಟ ೨೮). ಬಿಜ್ಜಳನು ಇನ್ನೂ ಯಾರು ಯಾರನ್ನು ಕೊಂದನೋ, ಯಾರು ಅವನನ್ನು ಕೊಂದರೋ – ಎಲ್ಲ ಅನಿಶ್ಚಿತ. ಒಂದೆ ಸುನಿಶ್ಚಿತ : 'ಕೊಂದವಗೆ ಕೊಲೆ ತಪ್ಪದು !' 'ಕೊಂದವರುಳಿದರೆ, ಕೂಡಲ ಸಂಗಮದೇವಾ?' (೧೩೦).

೩) ಇನ್ನು ಸೋಮಭೀಮಾದಿಗಳ ಕಥನ. ಇವರೆಲ್ಲ ಇದಕ್ಕಾಗಿ ಕಟ್ಟಿದ ಜಗದೇವನ ಕಥೆಯೇ ವಿಚಿತ್ರವಾಗಿದೆ. ಜಗದೇವನೇನೂ ಬೆಪ್ಪನಲ್ಲ! ಅಧಿಕಾರದಲ್ಲಿದ್ದನು. ಶಿಷ್ಟಾಚಾರಗಳನ್ನು ಬಲ್ಲವ. ಅಂಥವನು ಬಸವಣ್ಣನವರನ್ನು ಅವರ ಅನುಯಾಯಿಗಳನ್ನೂ ಆರೋಗಣೆಗೆ ಕರೆದು, ಅವರು ಬರಲು ತಡವಾಯಿತೆಂದು ಕೈಗೆ ಸಿಕ್ಕ ಬ್ರಾಹ್ಮಣರನ್ನು ಕರೆದು ಊಟ ಮಾಡಿಸಿಬಿಟ್ಟನೆ? ಇಂಥ ಹಾಸ್ಯಾಸ್ಪದ ಕತೆಯನ್ನು ಪಾಲ್ಕುರಿಕೆ ಸೋಮನಾಥನೇಕೆ ಕಟ್ಟಿದ? ಅವನ ಬಳಿವಿಡಿದು ಭೀಮ ಷಡಕ್ಷರಿ ವಿರೂಪಾಕ್ಷಾದಿಗಳು ಅದರ ಅಂಧಾನುಸರಣೆ ಮಾಡಿದರೇಕೆ? ಶರಣರ ಚರಿತ್ರೆಗಳಲ್ಲಿ ಒಬ್ಬರ ಜೀವನಕ್ಕೆ ಸಂಬಂಧಿಸಿದುವೆಂದು ಹೇಳಿದ ಘಟನೆಗಳು ಬೇರೆ ಶರಣರ ಚರಿತ್ರೆಗಳಲ್ಲಿಯೂ ಪುನರುಕ್ತವಾದ ಉದಾಹರಣೆಗಳು ವಿರಳವೇನಲ್ಲ. ಕೊಂಡಗುಳಿಯ ಕೇಶಿರಾಜ ಮತ್ತು ಬಸವಣ್ಣನವರ ಜೀವನಗಳ ಒಂದೆರಡು ಘಟನೆಗಳಲ್ಲಿ ಇರುವ ಸಾಮ್ಯ ಸಾದೃಶ್ಯಗಳನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಹಾಗೆ ಆದಯ್ಯನ ಚರಿತ್ರೆಯಲ್ಲಿ ಬರುವ ಇಂತದೇ ಒಂದು ಸಂದರ್ಭದಿಂದ ಸ್ಫೂರ್ತಿ ಪಡೆದಿರಬಹುದೆ ಸೋಮನಾಥ? ಪಡೆದರೆ ಪಡೆಯಲಿ, ಯಾವ ಉದ್ದೇಶಕ್ಕಾಗಿ ಈ ಕಥೆ ಕಟ್ಟಿರಬಹುದು? ಬಸವಣ್ಣನವರ ಹೆಸರಿಗೆ ಕೆಸರು ಬಡಿಯುಲಂತೂ ಅಲ್ಲ. ಅವನ ಬಸವಭಕ್ತಿ ಸಂಶಯಾತೀತವಾದುದು. ನನ್ನ ವಿದ್ಯಾಗುರುಗಳಾದ ಡಾ. ಪಿ.ಬಿ. ದೇಸಾಯಿಯವರು ಈ ವಿಷಯದಲ್ಲಿ ಮಾಡಿರುವ ಅನುಮಿತವು ಅಂಗೀಕಾರಾರ್ಹವೆಂದು ತೋರುತ್ತಿದೆ; 'When they (Jagadeva and his accomplices) succeeded in their objective majority of the common followers heiled them as the defenders of the faith. (Jagadeva, according to the puranik account was given the status of a Gava, i.e. a member of Siva's counceil in Kailas; Sananda Charitre, IX, 5). In the emotional out of success

nobody bothered to find out whether Basava had actually approved of this action.

Over half a century had elapsed when the first puranic version of this episode was compiled by Palkurike Somanatha in his Telugu ‘Basavapuragam’ and this author belonged to Andhra area. Thus he was places at a distance from the point of time and region of the event. In the meanwhile the story was provided with a legendary background. The legendary elements in the story comprise Jagadeva’s affront of the teacher by honouring the Brahmanas, prophesy of sacrilege against Siva, pronouncement of curse when it was committees, and atonement of the sinner for his offence. The episode was thus rounded off and made into a whole piece. The teacher who was not really in the picture was dragged into it in order to defend Jagadeva and justify his action.’ (Basavesvara and His Times : page 227)

ಇದಕ್ಕೆ ಪೂರಕವಾಗಿ ಎಂ.ಆರ್. ಶ್ರೀ. ವಾಣಿಯನ್ನು ಆಲಿಸಬೇಕು : ‘ಬಸವಣ್ಣನವರು ಅವರಿಗೆ ಸಮಾಧಾನ ಹೇಳತೊಡಗಿದರು. ಆದರೆ ಸಮಾಧಾನ ಗಿಮಾಧಾನಗಳಿಗೆ ಕಾಲವು ಮೀರಿಹೋಗಿತ್ತು. ಬಿಜ್ಜಳನಿಗೆ ಹೆದರಿಕೊಂಡು ಶೈವದ್ರೋಹಗಳನ್ನೆಲ್ಲ ಸೈರಿಸುತ್ತಿರುವರೆಂಬ ದೋಷಾರೋಪಣೆಯೂ ಬಂತು. ಮಂತ್ರಿಸ್ಥಾನದ ಮೋಹದಿಂದ ಧರ್ಮಚ್ಯುತರಾದರೆಂಬ ಆಕ್ಷೇಪಣೆಯೂ ಬಂತು. ಶಿವ ಶಿವಾ! ಎಂದರು ಬಸವಣ್ಣನವರು... ಈ ನಿರ್ನಿಮಿತ್ತ ದೂಷಣೆಗೆ ಕೊರಗಿದರು..... ಆನೆ ಅಂಕುಶಕ್ಕಲ್ಲದೆ ಅಂಜುವುದೇ ಅಯ್ಯ, ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ? ಆನೀಬಿಜ್ಜಳಗಂಜುವೆನೆ ಅಯ್ಯ? ಕೂಡಲಸಂಗಮದೇವ, ನೀನು ಸರ್ವಜೀವದಯಾಪಾರಿಯಾದ ಕಾರಣ ನಿಮಗಂಜುವೆನಲ್ಲದೆ’ ಎಂದು ಹೇಳಿಕೊಂಡರು... ಏನೂ ಫಲಕಾರಿಯಾಗಲಿಲ್ಲ.... ಬಸವಣ್ಣನವರನ್ನು ಅವರು ತಿಳಿಯದಾದರು. ಅವರಾ ಶಾಂತಿವರ್ತನೆಯು ಅರ್ಥವಾಗಲಿಲ್ಲ... ಬಸವಣ್ಣನವರು ತಮ್ಮನ್ನು ತಡೆಯುವುದೇಕೆ? ತಮಗೆ ದೊರೆಯುವ ಗಣಪದವಿಗೆ ಅವರು ಅಡ್ಡ ಬರುವರೇಕೆ?”

ಬಸವಣ್ಣನವರನ್ನು ಈ ತೆರನಾದ ದೋಷಾರೋಪಣೆಗಳಿಂದ ಮುಕ್ತರನ್ನಾಗಿ ಮಾಡಲೂ ಈ ಕಥೆ ಹುಟ್ಟಿತೇನೋ ಎನ್ನಿಸುತ್ತಿದೆ. ಬಸವಣ್ಣನವರು ತಮ್ಮನ್ನು ನಂಬಿದ ಭಕ್ತರಿಗೆ ಆಪತ್ತು ಒದಗಿದಾಗ ಅವರಿಗೆ ರಕ್ಷಣೆ ನೀಡಲಿಲ್ಲ, ಮತ್ತೆ ಮತ್ತೆ ಶಾಂತಿ ಸೈರಣೆಗಳನ್ನೇ ಬೋಧಿಸಿದರು. ಎಲ್ಲಿಯವರೆಗೆ ಈ ಸೈರಣೆ? ಪಂಚಾಚಾರಗಳಿಂದ ಗಣಾಚಾರವನ್ನು

ತೆಗೆದುಹಾಕಬಾರದೇಕೆ? ಆತ್ಮಸಂರಕ್ಷಣೆಗಾಗಿ ಮಾಡುವ ಹಿಂಸೆಯೂ ಅಧರ್ಮವೆ? ಮುನ್ನಿನ ಪ್ರವಾದಿಗಳು ಅಧರ್ಮವಲ್ಲವೆಂದು ಸಾರಿರುವರಲ್ಲ? ಇಂಥವರ ಸಮಾಧಾನಕ್ಕಾಗಿ ಈ ಕಥೆ ಹುಟ್ಟಿದ್ದರೆ? ಯಾವ ದೃಷ್ಟಿಯಿಂದಲೇ ನೋಡಲಿ, ಇದೊಂದು ಕಟ್ಟುಕತೆಯಾಗಿಯೇ ತೋರುತ್ತಿದೆ.

ಗಣಾಚಾರದ ಪ್ರಸ್ತಾಪ ಬಂದಿತು. ಗಣಾಚಾರವೆಂದರೇನು? ಇಂಥ ಪ್ರಶ್ನೆಗಳಿಗೆ ಅಧಿಕಾರವಾಣಿಯಿಂದ ಉತ್ತರ ಕೊಡಬಲ್ಲ ಚನ್ನಬಸವಣ್ಣನವರನ್ನೇ ಕೇಳೋಣ. ಅವರ ಪ್ರಕಾರ ಇದು ಇದ್ದೆರನಾದುದು:

'ಶಿವಾಚಾರದ ನಿಂದೆಯ ಕೇಳದಿಹುದೆ ಗಣಾಚಾರ' (೧೧೯೦)
'ಅಷ್ಟಾವರಣಂಗಳ ಮೇಲೆ ಅನ್ಯರಿಂದ ಕುಂದು ನಿಂದೆಗಳು ಬಂದು
ತಟ್ಟಿದಲ್ಲಿ
ಗಣಸಮೂಹವನೊಡಗೂಡಿ ಆ ಸ್ಥಲವ ತ್ಯಜಿಸುವುದೆ ಗಣಾಚಾರ
ವೆಂಬೆನಯ್ಯ' (೧೪೧೦)
'ಆಚಾರವೆಂಬುದು ಕೂರಲಗು ತಪ್ಪಿ ಬಂದಡೆ ಪ್ರಾಣವ ತಗಲುವುದು
ಅದುಕಾರಣ, ಅರಿದರಿದು ಆಚರಿಸಬೇಕು...
ಲಿಂಗದ್ರೋಹವ ಕೇಳಿ ತಾನು ಪ್ರಾಣವಬಿಡುವುದೇ
ನಾಲ್ವತ್ತು ಮೂರನೆಯ ಆಚಾರ :
ಜಂಗಮದ್ರೋಹವ ಮಾಡಿದವರ ಪ್ರಾಣವ ಭೇದಿಸುವುದೇ
ನಾಲ್ವತ್ತೈದನೆಯ ಆಚಾರ:
ಜಂಗಮದ್ರೋಹವ ಮಾಡಿದವನ ಶಿರವನೀಡಾಡುವುದೇ
ನಾಲ್ವತ್ತಾರನೆಯ ಆಚಾರ' (೧೧೨)

'ಈ ಎರಡು ಬಗೆಯ ಗಣಾಚಾರದಲ್ಲಿ ಯಾವುದನ್ನು ಅನುಸರಿಸಬೇಕು?' ಎಂಬ ಪ್ರಶ್ನೆ ಸಹಜವಾಗಿಯೇ ಬಸವಣ್ಣನವರ ಮತ್ತು ಬಸವಭಕ್ತರ ಗಮನವನ್ನು ಸೆಳೆದಿರಬೇಕು. ಬಸವಣ್ಣನವರೂ, ಅವರ ವಿಚಾರಧಾರೆಯನ್ನು ಸರಿಯಾಗಿ ಅರ್ಥವಿಸಿಕೊಂಡು ತ್ರಿಕರಣಪೂರ್ವಕವಾಗಿ ಅದರ ಅನುಷ್ಠಾನ ಮಾಡುತ್ತಲಿದ್ದವರೂ 'ಗಣ ಸಮೂಹವನೊಡಗೂಡಿ ಆ ಸ್ಥಲವ ತ್ಯಜಿಸುವುದೆ' ಗಣಾಚಾರವೆಂದು ಭಾವಿಸಿ ಅದರಂತೆ ಆಚರಿಸಲು ನಿರ್ಧರಿಸಬೇಕು; ವಿಚಾರಕ್ಕಿಂತ ಉದ್ರೇಕಕ್ಕೆ, ವಿವೇಕಕ್ಕಿಂತ ವೀರಾವೇಶಕ್ಕೆ, ತಮ್ಮ ಆಂದೋಲನದ ಭವಿತವ್ಯಕ್ಕಿಂತ ಅಂದಿನ ಘಟನೆಯಿಂದಾದ ಆಘಾತಕ್ಕೆ ಹೆಚ್ಚು ಮಹತ್ವ ಕೊಟ್ಟಿರಬಹುದಾದ ರಾಗದ್ವೇಷಗಳಿಂದ ಇನ್ನೂ ಸಂಪೂರ್ಣವಾಗಿ ಬಿಡುಗಡೆಯನ್ನು ಪಡೆಯದಿದ್ದ, ಹುಚ್ಚು ಹುಮ್ಮನಸ್ಸಿನ ಭಕ್ತರು 'ಪ್ರಾಣವ ಭೇದಿಸುವುದೇ ಶಿರವನೀಡಾಡುವುದೆ'

ಗಣಾಚಾರವೆಂದು ಪ್ರತಿಪಾದಿಸಿ ಆ ಮಾರ್ಗವನ್ನೇ ಅನುಸರಿಸುವುದು ಉಚಿತವೆಂದು ತೀರ್ಮಾನಿಸಿರಬೇಕು.

ಈ ಆಂದೋಲನದ ಇತಿಹಾಸದಲ್ಲಿಯೇ ಇದೊಂದು ಅಸಾಮಾನ್ಯವಾದ ಅಭಿಪ್ರಾಯ ಭೇದ. ಇದರ ನಿವಾರಣೆಗಾಗಿ ಪ್ರಬಲ ಪ್ರಯತ್ನಗಳು ನಡೆಯಲಿಲ್ಲವೆಂತಲ್ಲ; ನಡೆದುದಕ್ಕೆ ಆಧಾರಗಳು ದೊರೆಯುತ್ತಿವೆ. ಪ್ರಭುದೇವರು ಸಹ ಪ್ರಯತ್ನಿಸಿ ವಿಫಲರಾದಂತೆ ಅವರ ಈ ವಚನದಿಂದ ಧ್ವನಿತವಾಗುತ್ತಿದೆ:

ನಾನೊಂದ ನುಡಿದರೆ ತಾವೊಂದು ನುಡಿವರು; ತಾವೊಂದು
ನುಡಿದರೆ ನಾನೊಂದು ನುಡಿವೆನು,
ಇದು ಕಾರಣ, ಅವರಿಗೆ ನಮಗೆ ಮೇಳವಿಲ್ಲ!
ಮೇಳವಿಲ್ಲದ ಬಳಿಕ ಅನುಭವ ಗೋಷ್ಠಿಯಲ್ಲ;
ಅನುಭವಗೋಷ್ಠಿಯಿಲ್ಲದ ಬಳಿಕ ಗುಹೇಶ್ವರನು ಇಲ್ಲಿಲ್ಲ
ಕೇಳು ಚೆನ್ನಬಸವಾ' (ವ.ಶಾ.ಸಾ.ಭಾಗ ೧
ಸೂ. ಪು.೨೩೭).

ಅನುಭವ ಮಂಟಪದ ಕೊನೆಯ ದಿನಗಳು ಅಮೃತಮಂಥನದಲ್ಲಿ ಹುಟ್ಟಿದ್ದ ಈ ಹಾಲಾಹಲವನ್ನು ಹೇಗೆ ಹತೋಟಿಗೆ ತಂದುಕೊಳ್ಳಬೇಕೆಂಬ ವಾದ ವಿವಾದಗಳಲ್ಲಿ ಕಳೆದುವೆಂದು ತೋರುತ್ತಿದೆ. ಪುರಾಣೋಕ್ತ ಅಮೃತಮಂಥನದಲ್ಲಾದರೋ ಮೊದಲು ಹಾಲಾಹಲ ಹುಟ್ಟಿ ಆಮೇಲೆ ಅಮೃತ ಉದಿಸುತ್ತದೆ. ಆದರೆ ಇಲ್ಲಿ ಮೊದಲು ಅಮೃತ ಉಕ್ಕಿ ಕೊನೆಯಲ್ಲಿ ಈ ದುರ್ಘಟನೆ ವಿಷವನ್ನು ಕಕ್ಕಿತು. ಪ್ರಭುದೇವರೂ ಸಹ, 'ಆನೆಯ ಜರಿದು ಕೋಣವನೇರಿದ, ಕಸ್ತುರಿಯ ಬಿಟ್ಟು ಕೆಸರು ಪೂಸಿಕೊಂಡ, ಪಾಯಸ ಜರಿದು ಮದ್ಯವ ಕುಡಿದ, ಅರಿದರಿದು ಗುಹೇಶ್ವರನ ಶರಣರಲ್ಲಿ ವಾದಿಸಿದ,' (ವ.ಶಾ. ಸಾ. ಭಾಗ ೧ (ಪೂ) ಪುಟ ೨೩೮) ವಿವೇಕಭ್ರಷ್ಟರಿಂದ ಬೇಸತ್ತು ಶ್ರೀಶೈಲಾಭಿಮುಖವಾಗಿ ತೆರಳಿದ ಮೇಲೆ ಈ ವಿಷವನ್ನು ಯಾರು ಕುಡಿಯಬೇಕು?

ಬಸವಣ್ಣನವರೇ ಕುಡಿಯಬೇಕು! ಕುಡಿದರು, ಕುಡಿದೇ ಕುಡಿದರು! ಆದರೆ ಈ ವಿಷವು ಕುಡಿದಷ್ಟೂ ಚಿಮ್ಮಿ ಬರುತ್ತಿದ್ದ ವಿಷವಾಗಿದ್ದಿತು. ಕಲ್ಯಾಣದ ಕ್ಷುಬ್ಧ, ಕ್ಷುದ್ಧ, ದ್ವೇಷ ನಿಬದ್ಧ ವಾತಾವರಣದಲ್ಲಿ ಶಾಂತಿ, ಸೈರಣೆ, ಸಮತೆ, ದಯೆ, ಅಹಿಂಸೆಗಳ ಅಮೃತವಾಣಿಯನ್ನು ಆಲಿಸುವುದೂ ಅಸಾಧ್ಯವೆನಿಸುವಷ್ಟು ಕೋಲಾಹಲ ತುಂಬಿತ್ತು. ಇಂಥದೇ ಒಂದು ವಿಷಮ ಪರಿಸ್ಥಿತಿಯನ್ನು, ದಾರುಣ ಸನ್ನಿವೇಶವನ್ನು, ದುರ್ಧರ ಪ್ರಸಂಗವನ್ನು ಸ್ವಾತಂತ್ರ್ಯ ಸಂಪಾದನೆಯ ತರುಣದಲ್ಲಿಯೇ ಭಾರತ ನಿವಾಸಿಗಳು ನೋಡಿದರು, ಬಾಪೂಜಿ ಬಾಷ್ಪ ಸುರಿಸಿದರು.

ಕಲಕತ್ತೆಯಲ್ಲೊಮ್ಮೆ, ರಾಜಧಾನಿ ದೆಹಲಿಯಲ್ಲೊಮ್ಮೆ ಆಮರಣ ಉಪವಾಸ ಕೈಕೊಂಡರು. ಬೆಂಕಿ ಹತ್ತಿದೆಡೆಗಳಿಗೆ ಹೋಗಿ ಶಾಂತಿಜಲ ಸಿಂಚನ ಮಾಡಿಬಂದರು. ಇತ್ತೀಚಿನ 'ಫ್ರೀಡಮ್ ಎಟ್ ಮಿಡ್ ನೈಟ್' ಎಂಬ ಪುಸ್ತಕದಲ್ಲಿ ರಾಷ್ಟ್ರಪಿತ ಗಾಂಧೀಜಿಯವರಿಗೆ ಒದಗಿದ್ದ ದುರವಸ್ಥೆಯ ದಾರುಣ ಚಿತ್ರ ಇಂತಿದೆ : 'As the weeks passed, his depression deepened. To his faithful secretary who had served him for years, GAndhi appared in mid December 1947m 'the saddest man one could picture.'

'If India has no further use for non-violence,' Gandhi noted, `can she have any for me?' He would not be surprised, he remarked, if India's leaders said one day, `we have had enough of this old man. Why does'not he leave us alone?'

ಬಸವಣ್ಣನವರಿಗೂ ಇದೇ ದುಃಸ್ಥಿತಿ ಬಂದೊದಗಿದ್ದಿತು. ಬಾಪೂಜಿ ಗುಂಡಿನೇಟಿಗೆ ಬಲಿಯಾಗಬೇಕಾಯಿತು; ಬಸವಣ್ಣನವರು ಪದವಿ ತ್ಯಜಿಸಿ ಕೂಡಲಸಂಗನ ಪಾದಗಳನ್ನು ಸೇರಿ ಬಯಲಾಗಬೇಕಾಯಿತು. ಇನ್ನೇನು ಮಾಡಬಹುದಾಗಿತ್ತು ಅವರು? 'ಅರಸು ಮುನಿದಿದ್ದಾನೆ; ಜಂಗಮರೂ ಮುನಿದಿದ್ದಾರೆ (೮೨೪) ಚನ್ನಬಸವಣ್ಣನವರನ್ನು ಕರೆದರು; ಕಂಬನಿದುಂಬಿ ಕಂಪಿಸುವ ಸ್ವರದಲ್ಲಿ ಹೇಳಿದರು: 'ಕಲ್ಯಾಣವೆಂಬುದು ಪ್ರಣತಿಯಾಯಿತ್ತು; ನಾನು ತೈಲವಾದೆನು, ನೀವು ಬತ್ತಿಯಾದಿರಿ, ಪ್ರಭುದೇವರು ಜ್ಯೋತಿಯಾದರು. ಪ್ರಣತಿ ಒಡೆಯಿತ್ತು, ತೈಲವರತಿತ್ತು, ಜ್ಯೋತಿ ಬಯಲಾಗಿತ್ತು!'

ಭಾರವಾದ ಹೃದಯದೊಡನೆ, ಭಾರವಾದ ಹೆಜ್ಜೆಗಳನ್ನಿಡುತ್ತ ಬಸವಣ್ಣನವರು ಹೊರಟರು ಕಲ್ಯಾಣಬಿಟ್ಟು; ಅವರೊಡನೆ ಅನೇಕ ಅನುಭಾವಿಗಳು, ಅವರೊಡನೆ ಅನುಭಾವಗೋಷ್ಠಿಗಳು ಹೊರಟುವು ಕಲ್ಯಾಣ ಬಿಟ್ಟು; ಕಲ್ಯಾಣದ ಭಾಗ್ಯ, ಭುವಿಯ ಭಕ್ತರ ಭಾಗ್ಯ, ಕನ್ನಡ ನುಡಿಯ ಭಾಗ್ಯಗಳೂ ಹೊರಟುವು ಕಲ್ಯಾಣ ಬಿಟ್ಟು; ಸಂಗಮನಾಥನ ಮುಂದೆ ನಿಂತು ಹಲುಬಿದರು ಬಸವಣ್ಣನವರು : 'ನೀವು ಹೇಳಿದ ಮಣಿಹವ ಮಾಡಿದೆ. ಇನ್ನು ನಿಮ್ಮೊಳಗೆ ಕೂಡಿಕೊಳ್ಳಾ, ಕೂಡಲಸಂಗಮದೇವಾ!' ಎಂದು. (ಶೂ. ಸಂ.೩೯೫) ಮುಂದೆ ಏನಾಯಿತು?

> 'ಭಕ್ತಿಯಿಂದ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕರಿಸಿ
> ಲಿಂಗವೆಂಬ ಎಲೆಯಾಯಿತ್ತು; ಲಿಂಗವೆಂಬ ಎಲೆಯ ಮೇಲೆ
> ವಿಚಾರವೆಂಬ ಹೂವಾಯಿತ್ತು;
> ಆಚಾರವೆಂಬ ಕಾಯಾಯಿತ್ತು; ನಿಷ್ಪತ್ತಿಯೆಂಬ ಹಣ್ಣಾಯಿತ್ತು;

ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ!' (೫೨೭)

ತುಂಬು ಕಲ್ಯಾಣದಲ್ಲಿ ಉಳಿಯಿತು, ಹಣ್ಣು ಕೂಡಲಸಂಗನನ್ನು ಕೂಡಿಕೊಂಡಿತು; ಯಾವಾಗ? ಬಿಜ್ಜಳನ ಕೊನೆ ಕ್ರಿ.ಶ. ೧೧೬೮ರ ಮಾರ್ಚ್ ಕೊನೆಯಲ್ಲಿ ಇಲ್ಲವೆ ಏಪ್ರಿಲ್ ತಿಂಗಳ ಆರಂಭದಲ್ಲಿ ಎಂದು ಇತಿಹಾಸಕಾರರು ನಿರ್ಣಯಿಸಿದ್ದಾರೆ. ಬಸವಣ್ಣನವರು ಬಿಜ್ಜಳ ವಧೆಗೆ ಮೂರೂವರೆ ತಿಂಗಳು ಮೊದಲೇ ಲಿಂಗೈಕ್ಯರಾಗಿರುವರಾಗಿ ಅವರು ೧೧೬೭ರ ಕೊನೆಯಲ್ಲಿ ಕಾಲವಾಗಿರಬೇಕು. 'ಈ ಯಾವತ್ತು ತಿಥಿಗಳಲ್ಲಿ ಎಲ್ಲ ಪುರಾತನರ ಕಾಲಜ್ಞಾನದಲ್ಲಿ* ನಮೂದಿಸಿದ ಬಸವಣ್ಣನವರ ಲಿಂಗೈಕ್ಯದ ತಿಥಿಯೇ ಹೆಚ್ಚು ವಿಶ್ವಸನೀಯವಾಗಿ ತೋರುತ್ತದೆ. ಇಲ್ಲಿಯವರೆಗೆ ವಿವರಿಸಲಾದ ಈ ಎಲ್ಲ ಸಂಗತಿಗಳನ್ನು ವಿಮರ್ಶಿಸಲಾಗಿ ಬಸವಣ್ಣನವರು ಶಾಲಿವಾಹನ ಶಕ ೧೦೮೯ ಸರ್ವಜಿತ ಸಂವತ್ಸರದ ಶ್ರಾವಣ ಶುದ್ಧ ಪಾಡ್ಯದಂದು, ಅಂದರೆ ಕ್ರಿ.ಶ. ೧೧೬೭ ಜುಲೈ ೧೯, ಬುಧವಾರ ದಿನದಂದು ಕೂಡಲಸಂಗಮ ಕ್ಷೇತ್ರದಲ್ಲಿ ಲಿಂಗೈಕ್ಯರಾದರೆಂದು ಊಹಿಸಲು ಯಾವ ಅಡ್ಡಿ ತೋರುವುದಿಲ್ಲ' (ಶ್ರೀ ಮಲ್ಲನಗೌಡಾ ಪಾಟೀಲ; ಶ್ರೀ ಬಸವೇಶ್ವರರ ಚರಿತ್ರೆಯ ಮೇಲೆ ಹೊಸ ಬೆಳಕು, ಪು.೧೩೯). ಬಿಜ್ಜಳನ ವಧೆಯ ಕಾಲ ೧೧೬೮ರ ಮಾರ್ಚ್ ಕೊನೆಯಲ್ಲಿ ಇಲ್ಲವೆ ಏಪ್ರಿಲ್ ಆರಂಭದಲ್ಲಿ ಎಂಬುದು ನಿರ್ವಿವಾದವಾಗಿ ನಿರ್ಧರಿತವಾದರೆ ಬಸವಣ್ಣನವರ ಲಿಂಗೈಕ್ಯ ದಿನವನ್ನು ಡಿಸೆಂಬರ್ ೧೧೬೭ಕ್ಕೆ ಹಿಂದೆ ಒಯ್ಯಲಾಗುವುದಿಲ್ಲವೆಂದು ಮಾತ್ರ ಇಲ್ಲಿ ಹೇಳಬಹುದು.

ಇದುವರೆಗಿನ ವಿವರಣೆಯಿಂದ ಬಿಜ್ಜಳನ ವಧೆಗೂ ಬಸವಣ್ಣನವರಿಗೂ ಯಾವ ಸಂಬಂಧವೂ ಇಲ್ಲವೆಂಬುದು ವಿದಿತವಾಗದಿರದು. ಆದರೂ ಅವರ ಮೇಲೆ ಬಿಜ್ಜಳವಧೆಗೆ ಕಾರಣರಾದರೆಂಬ ದೋಷಾರೋಪಣೆಯನ್ನು ಮಾಡದೆ ಬಿಟ್ಟಿಲ್ಲ ಇಂದಿಗೂ ಕೆಲವರು. ಮೂರು ಶತಮಾನಗಳ ತರುವಾಯ ಉದಿಸಿದ ಪುರಂದರದಾಸರ ಚರಿತ್ರೆಗೂ ಕಲಂಕ ಹಚ್ಚಿದರು ಕೀರ್ತನಕಾರರೊಬ್ಬರು : 'ಲೋಭಿಗಳಾದ ನಾಯಕರು, ಹೆಂಡತಿಯು ಬ್ರಾಹ್ಮಣನಿಗೆ ಮೂಗುತಿಯನ್ನು ದಾನವಾಗಿ ಕೊಟ್ಟುದಕ್ಕಾಗಿ, ಸಂತಪ್ತರಾಗಿ ಆಕೆಯನ್ನು ಕಂಬಕ್ಕೆ ಕಟ್ಟಿ ಹೊಡೆದರೆಂದೂ, ಅದರಿಂದ ಅವರ ಹೆಂಡತಿಯು ಸತ್ತು ಹೋಗಲು ಪಶ್ಚಾತ್ತಪಗೊಂಡ ನಾಯಕರು ವೈರಾಗ್ಯವನ್ನು ತಾಳಿ ಭಕ್ತರಾದರೆಂದೂ ಒಬ್ಬರು – ದಾಸ ಸಾಹಿತ್ಯದ ಅಭ್ಯಾಸವೇನೂ ಇಲ್ಲದವರು – ಎಲ್ಲಿಯೋ ಬರೆದರು. ಅದನ್ನು ಓದಿದ ಪುರಂದರದಾಸರ ಅಭಿಮಾನಗಳು ನೊಂದುಕೊಂಡರು. ಯಾರೋ ಕೀರ್ತನಕಾರರೊಬ್ಬರು ತಮ್ಮ ಹರಿಕಥೆಗಾಗಿ ರಚಿಸಿಕೊಂಡ ಅನಧಿಕೃತ ಪದ್ಯವೊಂದನ್ನು ಪ್ರಮಾಣವೆಂದು ತೆಗೆದುಕೊಂಡು, ಅದರಿಂದ

---

***. ಕಾ. ಜ್ಞಾ. ವ. ಪು. ೩೩, ೪೧, ಕಾ. ಜ್ಞಾ. ಸಂ. ಪು. ೮೧, ೮೨ ಶರಣಲೀಲಾಮೃತ ಇತ್ಯಾದಿ.**

ಹೊರಡಿಸಿದ ನಿರ್ಬಲ ಸಂಶೋಧನೆಯನ್ನು ಎತ್ತಿ ಹಿಡಿದು, ಸಂಪೂರ್ಣ ಅಸಂಭನೀಯ ಘಟನೆಯನ್ನು ಸತ್ಯವೆಂದು ಹೇಳುವವರಿಗೆ ಏನೆನ್ನಬೇಕು? ಇದರಂತೆಯೆ, ಇತ್ತೀಚೆಗೆ ಪುರಂದರದಾಸರ ಜೀವನ ಚರಿತ್ರೆಯನ್ನು ಬರೆಯಹೊರಟವರು ಯಾವ ಬಗೆಯ ವಿಚಾರ ವಿವೇಕವನ್ನು ತೋರಿಸದೆ, ತಳಬುಡವಿಲ್ಲದ, ಪುಕ್ಕಟೆ ಪುರಾಣಗಳನ್ನು ವಾಸ್ತವ ಪುರಾಣಗಳೆಂದು ಭಾವಿಸಿ, ಪುರಂದರದಾಸರ ಸತ್ಯ ಚರಿತ್ರಕ್ಕೆ ಅಪಚಾರವನ್ನು ಮಾಡಿದಂತೆ ಮಡಿದ್ದಾರೆ; (ಮಾಹಾತ್ಮ್ಯಜ್ಞಾನ, ಸಂಪಾದಕರು ಶ್ರೀ ಬೆಟಗೇರಿ ಕೃಷ್ಣಶರ್ಮರು ಮತ್ತು ಶ್ರೀ ಬೆಂಗೇರಿ ಹುಚ್ಚರಾಯರು; ಸಂಪಾದಕರ ಮಾತುಗಳುಪುಟ ೯)

ಪುರಂದರದಾಸರು ಪತ್ನೀಹಂತಕರೆಂಬ ಮೂರ್ಖ ಕಥೆಗೆ ಕಿರ್ತನಕಾರರು ಕಾರಣರಾದರೆ ಬಸಬಣ್ಣನವರು ಬಿಜ್ಜಳ ವಧೆಗೆ ಪ್ರೇರಕರಾದರೆಂಬ ಮೂಢ ಕಥೆಗೆ ಪುರಾಣಕಾರರು ಕಾರಣರಾದರು. ಪುರಾಣಿಕರ ಮನೆತನದಲ್ಲಿಯೇ ಹುಟ್ಟಿರುವ ನನಗೆ ಸಭಾರಂಜನೆಗಾಗಿಯೋ, ಕಥೆಯ ಕೌತುಕಾಂಶವನ್ನು ಹೆಚ್ಚಿಸಲೆಂದೋ, ತಮ್ಮ ವಯಯಕ್ತಿಕ ಒಲವು ನಿಲುವು ನೋಟಗಳನ್ನು ಸಮರ್ಥಿಸಲೋಸುಗವೋ ಪುರಾಣಕಾರರೂ ಕೀರ್ತನಕಾರರೂ ಕಥೆಯಲ್ಲಿ ಲೀಲಾಜಾಲವಾಗಿ ಮಾಡುವ ಮಾರ್ಪಾಟುಗಳು ವಿಷಯ ಚೆನ್ನಾಗಿ ಗೊತ್ತು. ಇಂತಹ ಕಟ್ಟು ಕಥೆಗಳನ್ನೇ ಆಧರಿಸಿ ಚರಿತ್ರೆ ಬರೆದರೆ ಅದರಲ್ಲಿ ವೈಪರೀತ್ಯಗಳೂ ಅನರ್ಥಗಳೂ ಅನಿವಾರ್ಯವಾಗುತ್ತವೆ. ಸೋಮನಾಥ ಬರೆದನೆಂದು ಭೀಮ, ಅವ ಬರೆದನೆಂದು ಮುಂದಿನವರು, ಧರಣಿ ಪಂಡಿತ ಬರೆದನೆಂದು ಭಂಡಾರಕರರು ಅವರು ಬರೆದರೆಂದು ಇನ್ನಿತರರು ಮುಕ್ಕಾಮಕ್ಕಿಯಾಗಿ ಬರೆದುಕೊಂಡು ಬಂದಿರುವ ಈ ತಳಬುಡವಿಲ್ಲದ ಕಥೆಯಲ್ಲಿ ಸತ್ಯಾಂಶವೆಷ್ಟಿದೆಂಬುದನ್ನು ನಿಷ್ಕರ್ಷಿಸಲು ಒಬ್ಬರಾದರೂ ಪ್ರಯತ್ನಿಸಬಾರದೆ? ಈ ದೇಶದಲ್ಲಿ ಅಂಧಾನುಕರಣೆ, ಅಂಧಾನುಸರಣೆ ಎಷ್ಟು ವ್ಯಾಪಕವಾಗಿವೆ. ಎಷ್ಟು ಆಳವಾಗಿ ಬೇರೂರಿವೆಯೆಂಬುದಕ್ಕೆ ಸಾಕ್ಷಿಯಿದು.

ಬಸವಣ್ಣನವರು ಬಯಲಾದ ಮೇಲೆ ಮುಂದೇನು ನಡೆಯಿತೆಂಬುದು ಈ ಉಪನ್ಯಾಸದ ವ್ಯಾಪ್ತಿಗೆ ಹೊರಗಿನ ವಿಷಯವಾದರೂ ಸಂಕ್ಷೇಪಿಸಿಯಾದರೂ ಅದರ ಕೆಲವು ವಿವರಗಳನ್ನಿಲ್ಲಿ ಒದಗಿಸಬೇಕೆಂದು ತೋರುತ್ತಿದೆ. ಕಪ್ಪಡಿ ಸಂಗಮಕ್ಕೆ ಹೋದ ಮೇಲೆ ಬಸವಣ್ಣನವರು ತಮ್ಮ ಧರ್ಮಪತ್ನಿ ನೀಲಾಂಬಿಕೆಯನ್ನು ಕರೆದು ತರಲು ಅಪ್ಪಣ್ಣನವರನ್ನು ಕಳಿಸುತ್ತಾರಂತೆ. ಸಂಗಡ ಕರೆದುಕೊಂಡು ಹೋಗಲಿಲ್ಲವೇಕೆ? ತಿಳಿಯದು. ಅಪ್ಪಣ್ಣ ಹೋಗಿ ಕರೆದಾಗ ಅವರಿತ್ತ ಉತ್ತರದಂತಿದೆ ಈ ವಚನ : 'ನಾವಲ್ಲಿದ್ದರೇನು, ಇಲ್ಲಿದ್ದರೇನು? ಬಸವನಲ್ಲಿ ಎಮಗೆ ತೆರಹಿಲ್ಲವಯ್ಯಾ ಅಪ್ಪಣ್ಣಾ, ನಾನಾರ ಸೇರುವೆನೆಂದು ಚಿಂತಿಸಲೇತಕ್ಕಯ್ಯಾ ಬಸವಾ? ನಾನಾರ ಹೊಂದುವೆನೆಂದು ಭ್ರಮೆಬಡಲೇತಕ್ಕಯ್ಯಾ ಬಸವಾ? ನಾನಾರ ಇರವನರಿವೆನೆಂದು ಪ್ರಳಾಪಿಸಲೇತಕ್ಕಯ್ಯಾ ಬಸವಾ? ಪರಿಣಾಮಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ ಬೆಳಗಿದ ಬಳಿಕ ಸಂಗಯ್ಯನ ಹಂಗು ನಿಮಗೇತಕ್ಕಯ್ಯಾ, ಬಸವಾ? ಇನ್ನೊಂದೆಡೆ ;

‘ಅಲ್ಲಿರ್ದ ಸಂಗಯ್ಯ ಇಲ್ಲಿಲ್ಲವೆ?’ ಎಂದು ಕೇಳಿದ ಈ ಧೀರೆ, ಪರಮಾರ್ಥ ಪಾರಾವರೆ ಸಂಗಮಕ್ಕೆ ಹೋಗಲು ಸಮ್ಮತಿಸಿರಲಿಲ್ಲವೆ? ಅಪ್ಪಣ್ಣನ ಆಗ್ರಹಕ್ಕೆ ಒಪ್ಪಿ ಹೊರಟು ತಂಗಡಗಿಯ ಹತ್ತಿರ ಬರುವಷ್ಟರಲ್ಲಿ ಸಂಗನಬಸವ ಸಂಗನ ಬೆರೆತನೆಂಬ ಸುದ್ದಿ ಬರಬೇಕೆ? ಆಕೆಯ ಸಮಾಧಿ ಪಡೆವ ಸೌಭಾಗ್ಯ ಈ ಗ್ರಾಮಕ್ಕಿದ್ದಿತೇನೊ!

ಬಿಜ್ಜಳನ ವಧೆಯಾದ ಮೇಲೆ ಹಿಂಸೆಗೊಳಗಾದ ಶಿವಶರಣರು ಚನ್ನಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣದಿಂದ ಚದುರುತ್ತಾರೆ ಯಾಕೆ? ಅದುವರೆಗೆ ಅವರಿಗೆ ಪ್ರಾಣಾಪಾಯದ ಅಂಜಿಕೆ ಇರಲಿಲ್ಲವೆ? – ಹರಳಯ್ಯ ಮಧುವಯ್ಯಗಳ ವಧೆಯಿಂದ ಉದ್ಭವಿಸಿದ್ದ ಉದ್ವೇಗವನ್ನು ಶಮನಗೊಳಿಸಲೆಂದು ಬಿಜ್ಜಳ ಬಸವಣ್ಣನವರ ಸ್ಥಾನದಲ್ಲಿ ಚನ್ನಬಸವಣ್ಣನವರನ್ನು ದಣ್ಣಾಯಕರನ್ನಾಗಿ ಮಾಡಿಕೊಂಡುದು ನಿಜವೆ? ಇದರಿಂದ ಸಂತೃಪ್ತರಾದ ಶರಣರು ಕಲ್ಯಾಣ ತೊರೆಯುವ ವಿಚಾರ ಬಿಟ್ಟು ಮತ್ತೆ ಮುಂದುವರಿಸಿದರೆ ತಮ್ಮ ಆಂದೋಲನವನ್ನು? ಒಳಸಂಚಿನಿಂದ ಬಿಜ್ಜಳನನ್ನು ಕೊಲ್ಲಿಸಲೆಂದೇ ನಿರ್ಧರಿಸಿದ್ದರಾದರೆ ಜಗದೇವ, ಮೊಲ್ಲೆಯಬೊಮ್ಮಣ್ಣರನ್ನಷ್ಟೇ ಅಲ್ಲಿ ಉಳಿಸಿ ಉಳಿದವರು ಉಪಾಯದಿಂದ ತೆರಳಿ ಸುರಕ್ಷಿತ ಸ್ಥಳಗಳನ್ನು ಸೇರಬಹುದಾಗಿದ್ದಿತಲ್ಲ? ಈ ಜಗದೇವ, ಮೊಲೆಯಬೊಮ್ಮಣ್ಣರಾರು? ಬಸವಣ್ಣನವರ ಅನುಯಾಯಿಗಳಾಗಿದ್ದವರೆ ಇಲ್ಲವೇ ಪರಡಿಪುರಶಾಸನದಲ್ಲಿ ಉಲ್ಲಿಖಿತನಾದ ಜಗದೇವ ದಣ್ಣಾಯಕ ಮತ್ತು ಕೊಂಜಾಪುರ ಶಾಸನದಲ್ಲಿ ‘ಬಿಜ್ಜಗ ಶಿರಚ್ಛೇದಕ’ ಎಂಬ ಪ್ರಶಸ್ತಿಯೊಡನೆ ಉಲ್ಲಿಖಿತನಾದ ಮಲ್ಲಿದೇವರೆ ಮತ್ತು ‘ಚಾಲುಕ್ಯ ರಾಜ್ಯಪ್ರತಿಷ್ಠಾಪಕ’ ಎಂಬ ಬಿರುದಾಂಕಿತನಾದ ತೊರಗಲ್ ವಂಶದ ಕುಮಾರ ಬೊಮ್ಮಯ್ಯರೆ? ಬಿಜ್ಜಳನು ಮಗ ಸೋವಿದೇವನನ್ನು ಉತ್ತರಾಧಿಕಾರಿಯನ್ನಾಗಿ ನಿಯಮಿಸಿದುದರಿಂದ ಸಿಡಿದೆದ್ದ ಮೊದಲಮಗನ ಮಗ ಕರ್ಣದೇವ ಕಸಪಯ್ಯಾದಿಗಳ ಸಹಾಯದಿಂದ ಈ ಕಗ್ಗೊಲೆಗೆ ಕಾರಣನಾಗಿ ತಪ್ಪನ್ನು ಸಂತಪ್ತ ಶರಣರೇ ಇದಕ್ಕೆ ಕಾರಣರೆಂದು ಅವರ ಮೇಲೆ ಹೊರಿಸಿದನೆ? ಇವನು ಸಿದ್ಧರಾಮನಿಗೆ ಮಂತ್ರಿಪದ ಸ್ವೀಕರಿಸುವಂತೆ ಮನವೊಲಿಸಲು ಅಮಾತ್ಯರ ಶಿಷ್ಟಮಂಡಳವನ್ನು ಅವನೆಡೆಗೆ ಕಳಿಸಿದುದೇಕೆ? ಬಿಜ್ಜಳನು ಚಾಲುಕ್ಯ ಚಕ್ರವರ್ತಿಯನ್ನು ಕೊಂದುದರಿಂದ ಉಂಟಾಗಿದ್ದ ಅಶಾಂತಿ ಅಸಂತೋಷಗಳನ್ನು ಬಸವಣ್ಣನವರ ಮೂಲಕ ಅಳಿಸಿಕೊಂಡಂತೆ ತಾನು ಕಸಪಯ್ಯಾದಿಗಳ ಮುಖಾಂತರ ಮಾಡಿಸಿದ್ದ ಬಿಜ್ಜಳವಧೆಯ ದುಷ್ಪರಿಣಾಮಗಳನ್ನು ಸಿದ್ಧರಾಮನ ಮೂಲಕ ಪರಿಹರಿಸಿಕೊಳ್ಳಲು ಪ್ರಯತ್ನಿಸಿದನೆ? ಗೌರಾಂಕನ ನವನಾಥ ಚರಿತೆಯಲ್ಲಿ ಹೇಳಿರುವಂತೆ ವ್ಯಾಳಿಸಿದ್ಧನನ್ನು ಬಿಜ್ಜಳನು ಕಾದ ಎಣ್ಣೆ ಕೊಪ್ಪರಿಗೆಯಲ್ಲಿ ಹಾಕಿ ಕೊಂದುದಕ್ಕೆ ಪ್ರತಿಯಾಗಿ ಸಿದ್ಧರು ಬಿಜ್ಜಳನ ಕೊಲೆಗೆ ಕಾರಣರಾದರೆ? ಯಾರೇ ಕಾರಣ್ಯಆಗಿರಲಿ, ಅಪವಾದ ಮಾತ್ರ ಶಿವಶರಣರ ಮೇಲೆ ಬಂದಿತು. ಸಂದೇಹದ ಲಾಭ (benefit of donet) ಸಹ ತೊಡದೆ, ಊರಲ್ಲಿ ಪ್ಲೇಗು ಕಾಲರಾಗಳಂಥ ರೋಗಗಳು ತಾಂಡವವನ್ನಾಡುತ್ತಿರುವಾಗ ಯಾರಾದರೂ ನೈಸರ್ಗಿಕ ಮರಣವನ್ನೇ ಹೊಂದಿದರೂ ಪ್ಲೇಗು ಕಾಲರಾಗಳಿಂದಲೇ ಸತ್ತರೆಂಬ ಸುದ್ದಿ ಹುಟ್ಟುವಂತೆ,

ವಿದ್ಯಾರ್ಥಿಗಳಿಂದ ಅಹಿಂಸಾತ್ಮಕವಾಗಿ ಪ್ರಾರಂಭವಾಗಿದ್ದರೂ ಒಂದು ಘಟ್ಟದಲ್ಲಿ ಹಿಂಸೆ ಹೆಡೆಯೆತ್ತಿ ಪೂತ್ಕರಿಸಿದಾಗ ಸಮಾಜಘಾತುಕ ಶಕ್ತಿಗಳು ಆ ಆಂದೋಲನದಲ್ಲಿ ಪ್ರವೇಶಿಸಿ ಮಾಡಬಾರದ ಅಕೃತ್ಯಗಳನ್ನೆಲ್ಲ ಮಾಡಿ ಅವುಗಳ ತಪ್ಪನ್ನು ನಿರಪರಾಧಿ ವಿದ್ಯಾರ್ಥಿಗಳ ಮೇಲೆ ಹೊರಿಸುವಂತೆ ಬಿಜ್ಜಳವಧೆಯ ಪಾಪವನ್ನು ಆ ಕೋಲಾಹಲಮಯ ಕಲ್ಯಾಣದಲ್ಲಿ ಶಿವಶರಣರ ತಲೆಗೆ ಕಟ್ಟಿದರೂ ಕಟ್ಟಿರಬಹುದು; ಆದಿಕವಿ ವಾಲ್ಮೀಕಿ ಹೇಳಿಯೇ ಇದ್ದಾನೆ:

> 'ಅಕುರ್ವನ್ತೋಽಪಿ ಪಾಪಾನಿ ಶುಚಯಃ ಪಾಪಸಂಶ್ರಯಾತ್ ।
> ಪರಪಾಪೈರ್ವಿನಶ್ಯಂತಿ ಮತ್ಸ್ಯಾ ನಾಗಹೃದೇ ಯಥಾ ॥
> (ಅರಣ್ಯಕಾಂಡ : ೩೮, ೨೬)

ಎಂದರೆ, ಪಾಪಿಗಳ ಸಹವಾಸದಲ್ಲಿದ್ದ ತೃಪ್ತಿಗಾಗಿ ಪಾಪ ಮಾಡದವರೂ ಪರಪಾಪ ದೋಷದಿಂದ ವಿನಷ್ಟರಾಗುತ್ತಾರೆ – ಸರ್ಪಭರಿತ ಸರಸಿಯಲ್ಲಿರುವ ಮತ್ಸ್ಯಗಳೂ ಸರ್ಪಹಾರಿಗಳಿಂದ ಸಂಹೃತವಾಗುವಂತೆ! ಬಸವಾದಿ ಪ್ರಮಥರ ಒಂದೇ ಒಂದು ಪ್ರಮಾದವೆಂದರೆ ಹಿಂಸೆ, ಅನ್ಯಾಯ, ದುರ್ಮಾರ್ಗಗಳಿಂದ ಸಾಮ್ರಾಟನಾಗಿದ್ದ ಬಿಜ್ಜಳನ ಸಹವಾಸದಲ್ಲಿದ್ದುದು, ಮಾವಿನ ಮರವನ್ನು ಕಡಿದುಹಾಕಿ ಬೇವಿನ ಮರವನ್ನು ಬೆಳೆಸಿದ್ದ ಬಿಜ್ಜಳ. ಅದಕೆಕ ಶರಣರು ಹಾಲೆರೆದು ಬೆಳೆಸಿದರೂ ಅದು ಕೊನೆಗೆ ಕೊಟ್ಟುದು ವಿಷವನ್ನೇ. 'ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ, ಸಕ್ಕರೆ ನೀರೆರೆದುದೆಲ್ಲ ವ್ಯರ್ಥವಾಯಿತು. ಕೊನೆಗೂ ಅನರ್ಥವಾಯಿತು. ತನ್ನ ಕ್ರೂರ ಕೃತ್ಯದಿಂದ ಬಿಜ್ಜಳನೂ ಸುಖಪಡಲಿಲ್ಲ; ಅವನ ಆಶ್ರಯದಲ್ಲಿದ್ದವರಿಗೂ ಸುಖ ಸಿಕ್ಕಲಿಲ್ಲ; ಅವನ ವಂಶಜರಿಗೂ ಸಾಮ್ರಜ್ಯ ದಕ್ಕಲಿಲ್ಲ. ಅದುವರೆಗೆ ಕರ್ನಾಟಕದ ಕೇಂದ್ರಶಕ್ತಿಯೆನಿಸಿದ್ದ ಚಾಲುಕ್ಯ ಸಾಮ್ರಾಜ್ಯದ ಪತನವೇನೋ ಆಯಿತು. ಆದರೆ ಆ ಕೇಂದ್ರಾಧಿಕಾರವನ್ನು ಮತ್ತೆ ಪ್ರಸ್ಥಾಪಿಸುವುದು ಬಿಜ್ಜಳನಿಂದ ಸಾಧ್ಯವಾಗಲಿಲ್ಲ. ಅನೇಕ ಸಾಮಂತರು ಅವನ ಚಕ್ರವರ್ತಿತ್ವವನ್ನು ಒಪ್ಪಲೇ ಇಲ್ಲ. ಸಾಲದುದಕ್ಕೆ ಸೈನಿಕ ಕ್ರಾಂತಿಯಿಂದ ಸಾಮ್ರಾಟ ನಾಗಿದ್ದ ಅವನೇ ಇನ್ನೊಂದು ಕ್ರಾಂತಿಗೆ ಬಲಿಯಾದ ! ಮುಂದೆ ಯಾದವರು, ಕಾಕತೀಯರು, ಹೊಯ್ಸಳರು, ಚಾಲುಕ್ಯರು ಒಬ್ಬರೊಬ್ಬರ ಶಕ್ತಿ ಮುರಿಯುವ, ಮಲಿಕ ಕಾಪೂರನ ಆಕ್ರಮಣಗಳ ನೋಟ. ಒಟ್ಟಿನಲ್ಲಿ, ವಿಜಯನಗರ ಸಾಮ್ರಾಜ್ಯ ಸ್ಥಾಪನೆಯವರೆಗೆ ಕರ್ನಾಟಕದ ಭಾಗ್ಯರವಿಗೆ ಗ್ರಹಣ. ಬಸವ ಮತದ ಮೇಲೂ ಅದರ ಪರಿಣಾಮ.

* * *

೨

# ಹೊಸ ಧರ್ಮದೃಷ್ಟಿ

ಮಾನವನಲ್ಲಿರುವ ಪಶ್ವಂಶಗಳನ್ನು ನೀತಿ ನಿಯಮಗಳಿಂದ ಶಮದಮಾದಿಗಳಿಂದ ನಿಯಂತ್ರಿಸಿ, ದೇವಾಂಶಗಳನ್ನು ಆತ್ಮಾನುಸಂಧಾನದಿಂದ ವಿಕಸಿತಗೊಳಿಸವುದೇ ಧರ್ಮ. ಆದರೆ, ಸಾಮಾನ್ಯವಾಗಿ ಧರ್ಮವೆಂಬ ಶಬ್ದವನ್ನು ಉಚ್ಚರಿಸಿದಾಕ್ಷಣ ನಮ್ಮ ಕಣ್ಣೆದುರು ಕಾಣುವವರು ದಕ್ಷಿಣೆ ಕೇಳುವ ಗುರುಗಳು, ಪೂಜಾರಿಗಳು, ಪುರೋಹಿತರು, ಮಠ–ಮಂದಿರ, ಯಜ್ಞಶಾಲೆ, ಹೋಮ–ಕುಂಡಾದಿಗಳು. ಜೀವ ದೇವರ ನಡುವಣ ಸಂಬಂಧ ಸುಲಿಗೆಯ ಸೂತ್ರವಾಗಿ ಹೋಗಿದೆ. ಧರ್ಮದ ಹೆಸರಿನಲ್ಲಿ ನಡೆದ ಶೋಷಕ ಸಂಸ್ಕಾರಾದಿಗಳಲ್ಲಿ ಬಡವರ ಕೈಗಳಲ್ಲಿ ಉಳಿಯುವ ಬಿಡಿ–ಕಾಸುಗಳು ಈ ಮಠ ಮಂದಿರಗಳಲ್ಲಿದ್ದು – ರಿಣಗೂಳು ತಿನ್ನುತ್ತ ಜಿಗಣೆಗಳಂತೆ ಜೀವಿಸುತ್ತಿರುವ ಗುರು–ಪೂಜಾರಿ, ಪುರೋಹಿತರಿಂದ ಲೀಲಾಜಾಲವಾಗಿ ಲೂಟಿಯಾಗುತ್ತವೆ. ಬೇರಾವ ಧರ್ಮದಲ್ಲಿಯೂ ಈ ಬಗೆಯ ಭಕ್ತರ ಶಾಸ್ತ್ರೀಯವಾದ ಸುಲಿಗೆ ನಡೆಯುವುದು ಅಷ್ಟಾಗಿ ಕಂಡುಬರುವುದಿಲ್ಲ. ಆದರೆ ಹಿಂದೂ ಧರ್ಮದಲ್ಲಿಯೋ ಹೆಜ್ಜೆ ಹೆಜ್ಜೆಗೆ ಲೂಟಿ ದಕ್ಷಿಣೆಯೆಂದು ಗುರು ಪೂಜಾರಿ ಪುರೋಹಿತರು, ದಾನವೆಂದು ಭಿಕ್ಷುಕರು, ಜಾತ್ರೆ, ಜಯಂತಿ–ಅಷ್ಟಮಿ–ನವಮಿಗಳೆಂದು ಸಾವಿರಾರು ಸೇರಿಸಿ ನೂರಾರು ಖರ್ಚು ಮಾಡಿ ಉಳಿದುದನ್ನು ಕಬಳಿಸುವ ಉತ್ಸವೋದ್ಯೋಗಿಗಳು ಒಬ್ಬರೆ ಇಬ್ಬರೆ ದುಡಿಯುವ ಒಬ್ಬೊಬ್ಬನಿಗೂ ದುಡಿಯದ ಒಬ್ಬೊಬ್ಬನು ಗಂಟುಬಿದ್ದಿರುವನೇನೋ ಎನ್ನುವಷ್ಟರ ಮಟ್ಟಿಗೆ ಸರ್ವವ್ಯಾಪಿಯಾಗಿ ನಡೆದಿದೆ. ಸುಲಿಗೆ – ಚರ್ಮ ಸುಲಿವವರೆಗೆ ಸುಲಿಗೆ!

ಬಸವಣ್ಣನವರ ಕಣ್ಣು ತಮ್ಮ ಕಾಲದಲ್ಲಿ ನಡೆದಿದ್ದ ಎಲ್ಲ ಬಗೆಯ ರಕ್ತಶೋಷಣೆಗಳನ್ನು ಕಂಡಂತೆ ಈ ಸುಲಿಗೆಯನ್ನು ಕಂಡಿತು. ಕಣ್ಣು ಕಂಡುದೆ ತಡ, ಕೈ ಮುಂದಾಯಿತು ಇದಕ್ಕೂ ತಡೆ ಹಾಕಲು, ಮೊದಲು 'ದೇವನೊಬ್ಬ ನಾಮ ಹಲವು' ಎಂದು ಸಾರಿ ಬಹುದೇವತಾ ಪೂಜೆಯ ಬುಡಕ್ಕೆ ಕೊಡಲಿ ಪೆಟ್ಟು ಕೊಟ್ಟಿತು. ಮುಂದೆ ಕಿರುಕುಳ ದೇವಿ–ದೇವತೆಗಳ ಹೆಸರಿನಲ್ಲಿ ನಡೆದಿದ್ದ ಜೀವ ಹಿಂಡುವ ಕೆಲಸ. ಅದನ್ನು ಹೋಗಲಾಡಿಸಲು ಬಸವಣ್ಣ ಮಾಡಿದ ಬೃಹತ್ ಪ್ರಯತ್ನಗಳ ವಿವರಣೆ ಬರುವುದು 'ಮೌಢ್ಯದ ಚಕ್ರವ್ಯೂಹ'ವೆಂಬ ಶೀರ್ಷಿಕೆಯ ಕೆಳಗೆ ಇಲ್ಲಿ ಒಂದೆ ವಚನವನ್ನು ಉದಾಹರಿಸಿ ಬಿಟ್ಟರೆ ಸಾಕೆಂದು ತೋರುತ್ತಿದೆ

– ‘ಹಾಳು ಮೊರಡಿಗಳಲ್ಲಿ, ಊರ ದಾರಿಗಳಲ್ಲಿ, ಕೆರೆ ಬಾವಿ ಹೂಗಿಡು ಮರಂಗಳಲ್ಲಿ, ಗ್ರಾಮ ಮಧ್ಯಗಳಲ್ಲಿ, ಚೌಪಥ ಪಟ್ಟಣ ಪ್ರದೇಶದಲ್ಲಿ, ಹಿರಿಯಾಲದ ಮರದಲ್ಲಿ ಮನೆಯ ಮಾಡಿ, ಕಱವೆಮ್ಮಯ, ಹಸುಗೂಸು, ಬಸುಱ ಬಾಣತಿ ಕುಮಾರಿ ಕೊಡಗೂಸೆಂಬವರ ಹಿಡಿದು ತಿಂಬ, ತಿರಿದುಂಬ ಮಾರಯ್ಯ ಬೀರಯ್ಯ ಕೇಚರ ಗಾವಿಲ ಅಂತರ ಬೆಂತರ ಕಾಳಯ್ಯ ಮಾಳಯ್ಯ ದೂಳಯ್ಯ ಕೇತಯ್ಯಗಳೆಂಬ ನೂರು ಮಡಕೆಗೆ ‘ನಮ್ಮ ಕೂಡಲ ಸಂಗಮದೇವ’ ಶರಣೆಂಬುದೊಂದು ದಡಿ ಸಾಲದೆ?’. (೫೫೭)

ಶರಣೆಂದರೆ ಸಾಕು – ಒಲಿವನಿವ; ಬಹು ಸುಲಭ! ಹಿಂದಿನವರು ಹೇಳಿದಂತೆ ಬಲಿ ಬೇಡುವವನಲ್ಲ, ಹಟಮಾರಿಯಲ್ಲ, ಕಾಡಿಸಿ ಪೀಡಿಸಿ ಸಂತಸ ಪಡುವವನಲ್ಲ, ಹಿಂದಿನ ಜನ್ಮದ ಪಾಪಕ್ಕೆ ಇಂದಿನ ಜನ್ಮದಲ್ಲಿ ಶಿಕ್ಷೆ ಪಡುವವನಲ್ಲ, ಗುಡಿಯಲ್ಲಿ ಕುಳಿತು ಒಡವೆ, ಎಡೆ, ದೇವದಾಸಿಯರ ನೃತ್ಯ, ನಗಾರಿ ಭೇರಿಗಳನ್ನು ಬೇಡುವವನಲ್ಲ ‘ನಂಬಿ ಕರೆ’ದರೆ ಸಾಕು ‘ಓ’ ಎಂಬ ಶಿವನಿವನು: ‘ತನ್ನನರಸಿ ಬಪ್ಪವರ ತಾನರಸಿಬಪ್ಪ’ ಕಪಿಲಸಿದ್ಧ ಮಲ್ಲಿಕಾರ್ಜುನನಿವನು; ಗುಡಿಗೆ ಹೋಗಿ ಕಲ್ಲೆದೆಯ ಪೂಜಾರಿಯಡಿಗಳಲ್ಲಿ ಕೆಡೆಯದಿರಿ; ಅಲ್ಲಿರುವ ಶಿವಲಿಂಗವೇ ಶರಣರ ಕ್ರಾಂತಿಯ ಫಲವಾಗಿ ನಿಮ್ಮ ಕರಸ್ಥಲವ ನಿಂಬುಗೊಂಡಿದೆ ಇಷ್ಟಲಿಂಗವಾಗಿ. ಅದು ಸಾಮಾಯವೆಂದು ಉಪೇಕ್ಷಿಸದಿರಿ. ಆ ಗುಡಿಯ ಲಿಂಗಕ್ಕಿಂತ ಈ ಕರಸ್ಥಲದ ಲಿಂಗದ ಕಲ್ಪನೆ ಅದ್ಭುತವಾದುದು – ‘ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ : ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ, ಬ್ರಹ್ಮಾಂಡದಿದ್ದತ್ತತ್ತ ನಿಮ್ಮ ಶ್ರೀಮಕುಟ, ಅಗಮ್ಯ, ಅಗೋಚರ, ಅಪ್ರತಿಮ ಲಿಂಗವೆ, ಕೂಡಲ ಸಂಗಮದೇವಯ್ಯಾ, ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯಾ!’ (೭೪೩) ಆದುದರಿಂದ ಇಷ್ಟವನ್ನೇ ಇಷ್ಟಪಟ್ಟು ಪೂಜಿಸಿರಿ. ಅದೂ ಸಾಧ್ಯವಿಲ್ಲದಿದ್ದರೆ ಆರಾದೊಡಾಗಲಿ ಶ್ರೀ ಮಹಾದೇವ ಎಂದು, ಏನೂ ಅರಿಯದಿದ್ದರೂ ಮುಗ್ಧ ಭಕ್ತಿಯಿಂದ ದಂದಣ ದತ್ತಣ ಎನ್ನಿ ಅದಕ್ಕೇ ಒಲಿವನವನು. ಗುಡಿಗುಂಡಾರಗಳು ಭಂಡವಾಳ ಉಳ್ಳವರ ವಿಲಾಸ ಸ್ಥಾನಗಳು, ಬಡವರ ಕೈ ಹಿಡಿವ ಸ್ಥಳಗಳಲ್ಲ (೧೭೬) ಕಾಸಿದ್ದವರಿಗಲ್ಲಿ ಪ್ರವೇಶ, ಸೌಕರ್ಯ ವಿಶೇಷ ಚಿಂತಿಸಬೇಡಿರಿ, ‘ಉಳ್ಳವರು ಶಿವಾಲಯವ ಮಾಡುವರು,’ ನೀವು ಶಿವಾಲಯವಾಗಿ ತೋರಿಸಿರಿ, ಆ ಸ್ಥಾವರ ಶಿವಾಲಯ ಬಿದ್ದುಹೋಗಬಹುದು; ನಿಮ್ಮ ಜಂಗಮ ಶಿವಾಲಯ – ಅವಿನಾಶಿ, ಜೀವಿ ಅಳಿಯುವುದರೊಳಗಾಗಿ ಇನ್ನೊಂದು ಜೀವಿಗೆ ಜನ್ಮವಿತ್ತೇ ಹೋಗುತ್ತಾನೆ. ಈ ಜಂಗಮ ದೇವಾಲಯಕ್ಕೆ ಅಳಿವಿಲ್ಲ, ಇದನ್ನೇ ನಂಬಿರಿ; ಇದರಲ್ಲಿಯೇ ಶಿವನ ಕಾಣಿರಿ. ‘ಹೊಲಬುಗೊಂಡಱಸಬೇಡ, ಖಿಲಿತು ತರಬೇಡ, ಒಲಿದೊಮ್ಮೆ ಶಿವಶರಣೆನ್ನಿರಯ್ಯ, ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ ಕೂಡಲ ಸಂಗಮದೇವ ಭಕ್ತಿಲಂಪಟನಾಗಿ!’ (೧೮೦).

ನೀನು ಪಾಪ ಮಾಡಿರುವಿಯೆಂದು ಪಾತಕಿಯೆಂದು ಸಾರಿ, ಪ್ರಾಯಶ್ಚಿತ್ತದಿಂದ ಶುದ್ಧಗೊಳಿಸುತ್ತೇವೆಂದು ಕರೆಯುತ್ತಿರುವರೇನು? ಅವರ ಮಾತಿಗೆ ಕಿವಿಗೊಡಬೇಡ,

ಎಚ್ಚರಿಕೆ, ಇವರು ಧರ್ಮದ ದರೋಡೆಗಾರರು,

'ಎಲವೋ, ಎಲವೋ, ಪಾಪಕರ್ಮದ ಮಾಡಿದವನೇ,
ಎಲವೋ ಎಲವೋ ಬ್ರಹ್ಮಹತ್ಯವ ಮಾಡಿದವನೇ,
ಒಮ್ಮೆ ಶರಣೆನ್ನೆಲವೋ!
ಒಮ್ಮೆ ಶರಣೆಂದರೆ ಪಾಪಕರ್ಮ ಓಡುವುವು,
ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು,
ಒರ್ವಂಗೆ ಶರಣೆನ್ನು – ನಮ್ಮ ಕೂಡಲ ಸಂಗಮದೇವಂಗೆ!.... (೬೨೦)

ಬಸವಣ್ಣನವರ ಧರ್ಮ 'ಉಳ್ಳವರ' ಧರ್ಮವಲ್ಲ, ಇಲ್ಲದವರ ಧರ್ಮ; ಸ್ಥಾವರದೇವಾಲಯಗಳ ಧರ್ಮವಲ್ಲ, ಜಂಗಮದೇವಾಲಯಗಳ ಧರ್ಮ; ನಿರ್ಜೀವಕ್ಕೆ ಜೀವ ಬಲಿಯಾಗುವ ಧರ್ಮವಲ್ಲ, ಜಂಗಮದೇವಾಲಯಗಳ ಧರ್ಮ; ನಿರ್ಜೀವಕ್ಕೆ ಜೀವ ಬಲಿಯಾಗುವ ಧರ್ಮವಲ್ಲ, ಜೀವಿ ಕರೆದರೆ ದೇವ 'ಓ' ಎಂದು ಓಡಿ ಬರುವ ಧರ್ಮ; ಪ್ರಾಯಶ್ಚಿತ್ತಗಳ ದುಬಾರಿ ಧರ್ಮವಲ್ಲ, ಪಶ್ಚಾತ್ತಾಪದ ಸರಳಧರ್ಮ 'ಅಯ್ಯೋ ಪಾಪಿ ಎನ್ನುವ ಧರ್ಮವಲ್ಲ', ಅಯ್ಯೋ ಪಾಪ, ಎನ್ನುವ ಧರ್ಮ; ಪಂಡಿತರ ಪುರೋಹಿತರ ಕಪಿಮುಷ್ಠಿಯಲ್ಲಿರುವ ಧರ್ಮವಲ್ಲ, ಕಾಯಕಯೋಗಿಗಳ ಬಾಳ ದೇಗುಲದಲ್ಲಿ ಬೆಳಗುವ ಧರ್ಮ; ಸತ್ತ ಮೇಲೆ ಸ್ವರ್ಗನರಕಗಳನ್ನು ತೋರಿಸುವ ಧರ್ಮವಲ್ಲ, 'ಅಯ್ಯಾ ಎಂದೊಡೆ ಸ್ವರ್ಗ, ಎಲವೋ ಎಂದೊಡೆ ನರಕ' 'ಆಚಾರವೇ ಸ್ವರ್ಗ ಅನಾಚಾರವೆ ನರಕ'ವೆಂದು ಸಾರಿ ಇದೇ ಲೋಕದಲ್ಲಿ ಸ್ವರ್ಗವನ್ನು ತೋರಿಸಬಲ್ಲ ಧರ್ಮ; ದೇವಲೋಕ ಮರ್ತ್ಯಲೋಕವೆಂಬ ಸೀಮೆಗಳ ರಚಿಸುವ ಧರ್ಮವಲ್ಲ, 'ಸತ್ಯ ನುಡಿವುದೇ ದೇವಲೋಕ. ಮಿಥ್ಯವನುಡಿವುದೇ ಮರ್ತ್ಯಲೋಕವೆಂದು ಘೋಷಿಸಿ ದೇವಲೋಕವನ್ನು ಮರ್ತ್ಯ ಲೋಕದಲ್ಲಿಯೇ ಮೂಡಿಸಬಲ್ಲ ಧರ್ಮ; ಜಗತ್ತು ಮಿಥ್ಯೆ ಮಾಯೆ, ದುಃಖದಾಗರ, ಭವದ ಸಾಗರ, ಕಂಬನಿಯ ಕಣಿವೆ, ಬಂಧನದ ಬಲೆಯೆನ್ನುವ ಧರ್ಮವಲ್ಲ.* 'ಮರ್ತ್ಯವೆಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ' ಎಂದು ಉಗ್ಘಡಿಸಿ ಈ ಜಗತ್ತಿನಲ್ಲಿಯ ಜೀವನಕ್ಕೆ ಮಹಾ ಮೌಲ್ಯವನಿತ್ತ ಧರ್ಮ. 'ಕಲ್ಲ ನಾಗರ ಕಂಡರೆ ಹಾಲನೆರೆಯೆಂಬ, ದಿಟನಾಗರ ಕಂಡರೆ ಕೊಲ್ಲೆಂಬ, ಉಣ್ಣುವ ಜಂಗಮ ಬಂದರೆ ನಡೆಯೆಂಬ, ಉಣ್ಣದಲಿಂಗಕ್ಕೆ ಬೋನವ ಹಿಡಿಯೆಂಬ' ಧರ್ಮವಲ್ಲ, 'ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು' 'ಜಂಗಮವಾಪ್ಯಾಯನವಾದರೆ ಲಿಂಗ ಸಂತುಷ್ಟಿ' (೧೯೭) ಎಂದು ಬೋಧಿಸಿ ಕಲ್ಲದೇವರಿಗಿಂತ ಜೀವಂತ ದೇಹಿಗಳಿಗೆ ಪ್ರಾಧಾನ್ಯ (೧೯೬) ವಿತ್ತ ಉದಾತ್ತ ಧರ್ಮ;

* 'ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲರಿಯ ಸತ್ತು ಬೆರಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ ಕೂಡಲಸಂಗಮದೇವಾ' (೯೨೩).

ಪೂಜೆಗೆ ಆ ಫಲವುಂಟು. ಈ ಲಾಭವುಂಟೆಂದು ವಂಚಿಸಿ ದೇವಪೂಜೆ ಮಾಡಹಚ್ಚಿದ ಧರ್ಮವಲ್ಲ, ಭಕ್ತಿಗೆ ಭಕ್ತಿಯೇ ಫಲ. ಅದಕ್ಕೆ ಫಲಬೇಡಿದರೆ ಕೂಲಿಬೇಡಿದಂತೆ 'ಚಂದ್ರನ ಶೈತ್ಯದಲ್ಲಿ ಬೆಳೆದ ಕಾಯಕ್ಕೆ ಬೆಳುದಿಂಗಳ ಬಯಸುವ ಹಂಗೇಕಯ್ಯಾ? ಶರಣರ ಸಂಗದಲ್ಲಿರ್ದು ಶಿವನ ಬೇಡುವ ಹಂಗೇಕಯ್ಯಾ? ಕೂಡಲ ಸಂಗನ ಶರಣರು ಬಂದು ತಮ್ಮವನೆಂದರೆ ಸಾಲದೆ ಅಯ್ಯಾ? (೮೪೨) ಎಂದು ಪ್ರಶ್ನಿಸಿ ಶಿವನನ್ನೇ ಬೇಡದಂತೆ ಮಾಡಿ, ಶಿವನಿಂದ ಅದನ್ನು ಕೊಡಿಸುವೆ, ಇದನ್ನು ಕೊಡಿಸುವರೆನೆಂಬ ಆಸೆ ಹಚ್ಚಿ ದುಡ್ಡು ದೋಚುತ್ತಿದ್ದವರ ಸುಲಿಗೆ ನಿಲ್ಲಿಸದ ಧರ್ಮ. ದೇವರ ಲೋಕದಲ್ಲಿ ಸ್ಥಳ ಸಿಕ್ಕಲು ಪುರೋಹಿತರ ಪರ್ಮಿಟ್ ಪಡೆಯಲು ಹಚ್ಚಿದ ಧರ್ಮವಲ್ಲ, 'ಲಿಂಗದಲ್ಲಿ ಸಮ್ಯಕ್ಕರು, ಲಿಂಗದಲ್ಲಿ ಸದರ್ಥರು, ಲಿಂಗದಲ್ಲಿ ಸೊಮ್ಮ ಸಂಬಂಧವರಿತ ಸ್ವಾಮಿಭೃತ್ಯರೆಲ್ಲರೂ, ನಿಮ್ಮ ಬೇಡೆ, ಅಂಜದಿರಿ! ಎನಗೆ ಮರ್ತ್ಯಲೋಕದ ಮಹಾಗಣಂಗಳುಂಟು, ಇದು ಕಾರಣ. ಕೂಡಲಸಂಗಮದೇವರ ಲೋಕವ ಹಂಚಿಕೊಳ್ಳಿ ನಿಮನಿಮಗೆ' ಎಂದು ಡಂಗುರ ಹೊಯ್ದಿದ ಧರ್ಮ; ಆಜ್ಞಾಪ್ರಧಾನ ಅಧಿಕಾರೀ (Authoritarian) ಧರ್ಮವಲ್ಲ, ಅನುಭವ ಪ್ರಧಾನ ಜನತಾಂತ್ರಿಕ ಧರ್ಮ; ಸ್ವಮುಕ್ತಸಾಧನ ಬೋಧಕ ವೈಯಕ್ತಿಕ ಧರ್ಮವಲ್ಲ, ಸ್ವಿವಮೋಚನೆಯೊಡನೆ ಸಾಮೂಹಿಕ ವಿಮೋಚನೆಯನ್ನು ಸಾಧಿಸಲು ಹಚ್ಚಿ ಸಮಷ್ಟಿ ಧರ್ಮ; ಪರೋಪ ಜೀವಿತ್ವವನ್ನು ಪೋಷಿಸುವ, ಪ್ರೋತ್ಸಾಹಿಸುವ ಧರ್ಮವಲ್ಲ, ಸ್ವಾವಲಂಬನವನ್ನು ಬೀಜಮಂತ್ರವನ್ನಾಗಿ ಮಾಡಿದ ವ್ಯಾವಹಾರಿಕ (Pragmatic)ಧರ್ಮ; ಕುಲ–ಹೊಲೆ–ಹೆಣ್ಣುಗಂಡು–ಕೀಳು–ಮೇಲುಗಳ ಜಾಲವನ್ನು ಹೆಣೆದ ಧರ್ಮವಲ್ಲ, ಕುಲ–ಲಿಂಗ–ವಯ ವೃತ್ತಿ ಜನಿತ ಎಲ್ಲ ಭೇದಗಳನ್ನು ನಿರ್ಮೂಲನಗೊಳಿಸಿ ಸಾಮಾಜಿಕ ಆರ್ಥಿಕ ಸಮಾನತೆಯನ್ನು ಸಾಧಿಸಿದ ಧರ್ಮ; ಯಜ್ಞ – ಯಾಗ – ಹೋಮ–ಹವನ–ಸೂತಕ–ಗೋತ್ರ, ಸೂತ್ರಾದಿಗಳ, ತೀರ್ಥ ಕ್ಷೇತ್ರಾದಿಗಳ ಜಂಜಡದ ಧರ್ಮವಲ್ಲ, ಕಾಯವೇ ಕೈಲಾಸ, ಜೀವನೇ ಶಿವನೆಂದು ನಂಬಿ ನಡೆಯ ಹಚ್ಚಿದ ಧರ್ಮ; ಕುಲ–ಪದವಿ–ಸಿರಿ–ಸಂಪದಗಳ ಹಮ್ಮು ಹಿಡಿಸಿ ಬಿಮ್ಮನೆ ಬಿರಿಯ ಹಚ್ಚಿ ಸೊಕ್ಕಿನಿಂದ ನುಡಿಯಲು ಕಲಿಸಿದ ಧರ್ಮವಲ್ಲ, 'ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು' ಎಂದು ಬೋಧಿಸಿ 'ನುಡಿಯೊಳಗಾಗಿ ನಡೆಯದಿದ್ದರೆ ಕೂಡಲ ಸಂಗಮದೇವನೆಂತೊಲಿವನಯ್ಯಾ?' ಎಂದು ಪ್ರಶ್ನಿಸಿದ ಧರ್ಮ; ನಾನು ಜ್ಞಾನ ನೀನುಜ್ಞಾನಿಯೆಂದು ವಾದಿಸ ಹೆಚ್ಚಿದ ಧರ್ಮವಲ್ಲ, 'ನಿಮ್ಮ ನರಿಯದ ಜ್ಞಾನವೆಲ್ಲಾ ಅಜ್ಞಾನ, (೭೯೮) ಎಂದು ಸಾರಿ ಹೇಳಿದ ಧರ್ಮ; ವಜ್ರಕಾಯ ಸಾಧಿಸಿ ಕಾಗೆ ಗೂಗೆಗಳಂತೆ ನೂರು ವರುಷ ಬದುಕಲು ಕಳಿಸಿದ ಧರ್ಮವಲ್ಲ; ಲೇಸೆನಿಸಿಕೊಂಡು ಮೂರು ದಿನ, ಒಂದು ದಿನ ಬದುಕಿದರೂ ಸಾಕು (೧೫೪) ಎಂಬುದನ್ನು ಎತ್ತಿ ಹಿಡಿದ ಧರ್ಮ; ಮಾಡಿದ ಒಳಿತಿಗೆ ಮುಂದೆ ಎಂದೋ ದೊರೆಯುವ ಫಲದ ಮುಂದಿನ ತೇದಿಯ ಚೆಕ್ಕು (Past dated cheque) ಕೊಡದೆ 'ಹೊಯ್ದರೆ ಹೊಯ್ಗಳು ಕಯ್ಯ ಮೇಲೆ; ಬಯ್ದರೆ ಬಯ್ಗಳು ಕಯ್ಯ ಮೇಲೆ; ಹಿಂದಣ ಜನನವೇನಾದೊಡಾಗಲಿ – ಇಂದಿನ ಭೋಗವು ಕಯ್ಯ ಮೇಲೆ, ಕೂಡಲ ಸಂಗಮದೇವಯ್ಯಾ' ನಿಮ್ಮ ಪೂಜಿಸಿದ ಫಲಕಯ್ಯಮೇಲೆ,

ಎಂದು ಸಾರಿ, ಪೂಜಿಸಿದುದಕ್ಕೆ ಪೂಜಿಸಿದುದೇ ಫಲವೆಂದು ತಿಳಿಸಿ, 'ಬೆರಣೆಯುಳ್ಳಲ್ಲಿ ಹೊತ್ತು ಹೋಗದ ಮುನ್ನ ಅಟ್ಟುಣ್ಣವೋ! ಮರಳಿ ಭವಕ್ಕೆ – ಬರೆ– ಬಾರದಿಹೆ, ಕರ್ತು ಕೂಡಲಸಂಗಂಗೆ ಶರಣೆನ್ನುವೊ ! (೧೬೭) ಎಂದು ತಿಳಿಸಿ ಹೇಳಿದ ಧರ್ಮ!

ದೇವನು 'ಉದಕದೊಳಗೆ ಬಯ್ಚಿಟ್ಟ ಬಯಕೆಯ ಕಿಚ್ಚಿನಂತೆ, ಸಸಿಯೊಳಗಣ ರಸದ ರುಚಿಯಂತೆ, ನನೆಯೊಳಗಣ ಪರಿಮಳದಂತೆ, ಕನ್ಯೆಯ ಸ್ನೇಹದಂತೆ', ಸರ್ವವ್ಯಾಪಿಯಾಗಿದ್ದು 'ಕರಿಯು ಕನ್ನಡಿಯೊಳಡಗಿದಂತೆ' ಭಕ್ತನೊಳಗ ಅಡಗಿರುತ್ತಾನೆ. ಆರಂಭದಲ್ಲಿ ದೇವ ಜೀವ ಬೇರೆ ಬೇರೆಯಾಗಿ ತೋರಿದರೂ ಅಂತ್ಯದಲ್ಲಿ ಇಬ್ಬರ ನಡುವಣ ಅಂತರದ ಅಂತ್ಯವಾಗುತ್ತದೆ. ಏನೆಂಬೆ ಏನೆಂಬೆ ಒಂದೆರಡಾದುದ? ಏನೆಂಬೆ ಏನೆಂಬೆ ಎರಡೊಂದಾದುದ? ಏನೆಂಬೆ ಏನೆಂಬೆ ಅವಿರಳ ಘನವ? ಷಟ್‌ಸ್ಥಳವಿದಕ್ಕೆ ದಾರಿ. ಇದೊಂದು ಸಾಧನ ಸೋಪಾನ; ಸರ್ವ ಸಿದ್ಧಾಂತ ಸಮನ್ವಯಕ್ರಮ ಸರ್ವಜೀವಿಗಳೂ ಅವರವರ ಸಿದ್ಧತೆಗನುಗುಣವಾಗಿ ಯಾವುದೇ ಸ್ಥಲದಲ್ಲಿ ನಿಂತು ಉಳಿದೈದು ಸ್ಥಲಗಳನ್ನು ಸಾಧಿಸುವ ಸಮಪಾಯ. ಆರು ಸ್ಥಲಗಳಲ್ಲಿ ಭಕ್ತ ಮಹೇಶ ಸ್ಥಲಗಳು ಭಕ್ತಿಯನ್ನೂ ದ್ವೈತವಾದವನ್ನೂ, ಪ್ರಸಾದಿ ಪ್ರಾಣಲಿಂಗಿ ಸ್ಥಲಗಳು ಜ್ಞನವನ್ನೂ ವಿಶಿಷ್ಟಾದ್ವೈತವನ್ನೂ; ಶರಣ ಮತ್ತು ಐಕ್ಯ ಸ್ಥಲಗಳು ವೈರಾಗ್ಯವನ್ನೂ, ಅದ್ವೈತವಾದವನ್ನೂ ಸೂಚಿಸುತ್ತವೆ. (ಕನ್ನಡ ನಾಡಿನ ಚರಿತ್ರೆ ಭಾಗ : ೧೨ ಪು – ೨೨೧) ಆಯಾ ಸ್ಥಳದಲ್ಲಿರುವವರಿಗೆ ಅರ್ಹತೆಗಳೇನಿರಬೇಕೆಂಬುದನ್ನು ನೋಡುವಾ:

ಭಕ್ತ : 'ಭಕ್ತನು ಶಾಂತನಾಗಿರಬೇಕು, ತನ್ನ ಕುರಿತು ಬಂದ ಠಾವಿನಲಿ ಸತ್ಯ ನಾಗಿರಬೇಕು;
ಭೂತಹಿತ ವಚನವ ನುಡಿಯಬೇಕು; ಲಿಂಗ ಜಂಗಮದಲ್ಲಿ
ಕುಂದು – ನಿಂದೆಗಳಿಲ್ಲದಿರಬೇಕು,
ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು;
ತನು–ಮನ–ಧನ ಗುರು–ಲಿಂಗ–ಜಂಗಮಕ್ಕೆ ಸಮರ್ಪಿಸಬೇಕು;
ಅಪಾತ್ರ ದಾನ ಗೆಯ್ಯದಿರಬೇಕು;
ಸಕಲ ಇಂದ್ರಿಯಂಗಳೂ ತನ್ನ ವಶಗತವಾಗಿರಬೇಕು,
ಇದೇ ಮೂಲದಲ್ಲಿ ಬೇಹ ಶೌಚ, ನೋಡಾ; ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ
ಎನಗಿದೆ ಸಾಧನವು ನೋಡಾ ಕೂಡಲಸಂಗಮದೇವಾ!'

(ಬ.ಹೆ.ವ.೪೬)

ಈ ವಚನವು ಚನ್ನಬಸವಣ್ಣನವರ ವಚನ ಸಂಗ್ರಹದಲ್ಲಿಯೂ ಸಿಕ್ಕುತ್ತಿದೆಯಾಗಿ ಅತ್ಯಧಿಕ ಅಧಿಕೃತ ವ್ಯಾಖ್ಯೆಯೆನಿಸುವುದು ಭಕ್ತಸ್ಥಲಕ್ಕೆ. ಇಂಥ ಭಕ್ತ ಸಿದ್ಧನಾದರೆ ಯಾರಿಗೆ ತಾನೆ ಮಾನ್ಯನಲ್ಲ ಅವನು?

ಮಹೇಶ : 'ಕುರಿವಿಂಡು ಕಬ್ಬಿನ ಉಲಿವ ತೋಂಟವ ಹೊಕ್ಕ – ತೆರನನರಿಯದೆ
ತನಿರಸದ ಹೊರಗಣೆಲೆಯನೆ ಮೇದುವು!
ನಿಮ್ಮನರಿವ ಮದಕರಿಯಲ್ಲದೆ ಕುರಿಬಲ್ಲುದೆ – ಕೂಡಲಸಂಗಮದೇವಾ?'
(೫೯೮)

ಕುರಿಯಾಗಿ ಹೊರಗಣೆಲೆಯನೆ ಮೆಯ್ಯದೆ, ಮದಕರಿಯಾಗಿ ಕಬ್ಬಿನ
ತನಿರಸವ ಸವಿವುದೇ ಮಹೇಶಸ್ಥಲ.

ಪ್ರಸಾದಿ : 'ಒಲ್ಲೆನೆಂಬುದು ವೈರಾಗ್ಯ; ಒಲಿವೆನೆಂಬು ಕಾಯಗುಣ.
ಆವ ಪದಾರ್ಥವಾದರೇನು? ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತವ
ಮಾಡಿ ಭೋಗಿಸುವುದೇ ಆಚಾರ.
ಕೂಡಲ ಸಂಗಮದೇವನೊಲಿಸ ಬಂದ ಪ್ರಸಾದ ಕಾಯವ
ಕೆಡಿಸಲಾಗದು'
(೭೭೪)

ಯಾಕೆ ಲಿಂಗಾರ್ಪಿತ ಮಾಡಿ ಭೋಗಿಸಬೇಕು? 'ಮರ ಗಿಡು ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು, ಪ್ರಾಣವ ಕೊಂದುಂಡು ಶರೀರವ ಹೊರೆವ ದೋಷಕ್ಕೆ ಇನ್ನಾವುದು ವಿಧಿಯಯ್ಯಾ? ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ ಜೀವಜಾಲ ಮೆಲ್ಲದೇ ಚರಾಚರವೆಲ್ಲವ? ಅದು ಕಾರಣ, ಕೂಡಲಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವಕೊಂಡು ನಿರ್ದೋಷಿಗಳಾಗಿ ಬದುಕಿದರು (ಬ.ಹೆ.ವ. ೫೧)

ಒಂದೇ ಇಂದ್ರಿಯವಿರಲಿ, ಐದು ಇಂದ್ರಿಯವಿರಲಿ – ಎಲ್ಲ ಜೀವಜಾಲಗಳೂ ಚರಾಚರಗಳನ್ನೇ ತಿಂದು, ಆಹಾರ ಸಂಪಾದನೆಯಲ್ಲಿ ಜೀವಗಳ ಕೊಂದು ಬದುಕಬೇಕು. ಎಂಥ ಕಠೋರ ಅಹಿಂಸೆಯನ್ನಾಚರಿಸಿದರೂ ಜೀವವಧೆ ತಪ್ಪದು. 'ಚರಜೀವವನು ತಿಂದು ಚರಿಸುವುದು ಜಗವರ್ಧ, ಚರಿಸದಿಹ ಜೀವವನು ತಿಂದು ಚರಿಸುವುದು ಇನ್ನರ್ಧ' (ಸರ್ವಜ್ಞ) ಆದುದರಿಂದ ಅನಿವಾರ್ಯವಾದ ಈ ಜೀವಹಿಂಸೆಯ ದೋಷ ಪರಿಹಾರಾರ್ಥವಾಗಿ ಲಿಂಗಾರ್ಪಣೆ, ಪ್ರಸಾದ ಸೇವನೆ ಪ್ರಸಾದ ಭಾವನೆಯಿಂದ ನಾನು ಗಳಸಿದುದೆಂಬ ಅಹಂಕಾರ ನಿರಸನವೂ ಸಾಧ್ಯವಾಗುತ್ತದೆ.

ಪ್ರಾಣಲಿಂಗಿ : 'ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ.
ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ,
ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ,
ಇಂತೀ ತ್ರಿವಿಧವೂ ನಿಮ್ಮದೆಂದರಿದ ಬಳಿಕ ಎನಗೆ ಬೇರೆ ವಿಚಾರವುಂಟೆ?
ಕೂಡಲಸಂಗಮದೇವಾ?' (೮೨೮)
'ಮಾಡುವಾತ ನಾನಲ್ಲಯ್ಯಾ, ನೀಡುವಾತ ನಾನಲ್ಲಯ್ಯ, ಬೇಡುವಾತ ನಾನಲ್ಲಯ್ಯಾ
ನಿಮ್ಮ ಕಾರುಣ್ಯವಿಲ್ಲದೆ, ಎಲೆ ದೇವಾ!
ಮನೆಯ ತೊತ್ತಲಸಿದರೆ ಒಡತಿ ಮಾಡಿಕೊಂಬಂತೆ
ನಿನಗೆ ನೀ ಮಾಡಿಕೋ, ಕೂಡಲಸಂಗಮದೇವಾ!' (೮೩೧)

ಈ ಸ್ಥಲದಲ್ಲಿ 'ಮಾಡುವಂತಿರಬೇಕು, ಮಾಡದಂತಿರಬೇಕು, ಮಾಡುವ ಕೆಲಸದಲ್ಲಿ ತಾನಿಲ್ಲದಿರಬೇಕು; ಎಂಬುದು ಮನದಟ್ಟಾಗುತ್ತದೆ. ಆಗದಿದ್ದರೆ, ಮಾಡಿದೆನೆಂಬುದು ಮನದಲ್ಲಿ ಹೊಳೆದು ಏಡಿಸಿ ಕಾಡುತ್ತಿದೆ ಶಿವನ ಡಂಗುರು.

ಶರಣ : 'ಐದು ಮಾನವ ಕಟ್ಟಿ ಒಂದು ಮಾನವ ಮಾಡು, ಕಂಡಾ. ಮದವಳಿಗೆ
ಇದು ನಮ್ಮ ಬಾಳುವೆ, ಮದವಳಿಗೆ; ಇದು ನಮ್ಮ ವಿಸ್ತಾರ, ಮದವಳಿಗೆ,
ಮದವಳಿದು ನಿಜವುಳಿದ ಬಳಿಕ ಅದು ಸತ್ಯ, ಕಾಣಾ
ಕೂಡಲಸಂಗಮದೇವಾ' (೮೬೭)

ಈ ವಚನದಲ್ಲಿ ಬರುವ ದ್ವಂದ್ವಾರ್ಥಗಳ ಸೊಗಸನ್ನೂ, ಶರಣಸ್ಥಲದ ಸೊಬಗನ್ನೂ ಸವಿದಷ್ಟೂ ಸಂತಸ.

ಐಕ್ಯ : 'ಅಂತರಂಗ ಬಹಿರಂಗ ಆತ್ಮಸಂಗ ಒಂದೇ, ಅಯ್ಯಾ,
ನಾದಬಿಂದು ಕಳಾತೀತ, ಆದಿಯಾಧಾರ ನೀನೇ, ಅಯ್ಯಾ,
ಆರೂಢಕೂಟದ ಸುಖವ ಕೂಡಲಸಂಗಯ್ಯಾ ತಾನೇ ಬಲ್ಲ!'

'ಕೂಡಿದಾಗಿನ ಸುದ್ದಿ ಆಡಲೂ ಬರುತಿರಲು ಕೂಡಿಕೆಯ ಪರವಶಕೆ ಅದುವೆ ಕೊರತೆ; ಕೂಡಿದ ಸುಖವ ಹೇಳಿದರೆ ಇನ್ನೂ ಕೂಡಿಲ್ಲವೆಂದೇ ಅರ್ಥ.

ಈ ಷಟ್‌ಸ್ಥಲದ ಸಾಧನೆ ನಿಧಾನವಾಗಿ ನಡೆಯಕೂಡದು;

> 'ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ ಶರಣನೈಕ್ಯನು
> ಮೆಲ್ಲ ಮೆಲ್ಲನೆ ಆದಹೆನೆಂಬನ್ನ ಬರ ನಾನೇನು ವಜ್ರದೇಹಿಯೆ?
> ನಾನೇನು ಅಮೃತವ ಸೇವಿಸಿದೆನೆ?
> ಆನು ಮರುಜೇವಣೆಯ ಕೊಂಡೆನೆ?
> ನುಡಿದ ನುಡಿಯೊಳಗೆ ಷಡುಸ್ಥಲ ಬಂದು
> ಎನ್ನಮನವ ನಿಂಬುಗೊಳ್ಳದಿದ್ದರೆ
> ಸುಡುವೆನೀ ತನುವ, ಕೂಡಲಸಂಗಮದೇವಾ.' (೮೯೬)

ಅಷ್ಟಾವರಣ ಪಂಚಾಚಾರಗಳೂ ಇವೆ. ಅವೆಲ್ಲ ಈ ಗುರಿಯ ಸಾಧನೆಗೆ ಸಹಕಾರಿಗಳು. ಗುರಿ, ದಾರಿ ಎರಡೂ ಮೇಲೆ ವಿವರಿತವಾಗಿವೆ. ಇಲ್ಲಿಯೂ ಆದ್ಯತೆ 'ಮೊದಲಿಲ್ಲ ಬೇಹ ಶೌಚ'ಕ್ಕೆ–ಅಂತರಂಗ ಬಹಿರಂಗ ಶುದ್ಧಿಗೆ. ಅದು ಶಾಂತಿ, ಸತ್ಯ, ಆತ್ಮೌಪಮ್ಯ, ತ್ರಿವಿಧದಾಸೋಹ, ಸತ್ಪಾತ್ರದಾನ, ಇಂದ್ರಿಯ ಸಂಯಮನ, ಭೂತ ಹಿತವಚನಗಳಿಂದ ಪ್ರಪ್ತವಾಗತಕ್ಕುದು. ಆ ಸಶುದ್ಧಿಯಿಲ್ಲದಿದ್ದರೆ ಈ ಷಟ್‌ಸ್ಥಲದ ಕಾಮಧೇನೂ ಕರೆಯದು: 'ಕರೆಯಬಹುದೆ ಕಾಮದೇನುವಶುದ್ಧಂಗೆ?' (೨೬೭) ಈ ಶುರ್ದಧಿ ನಿಜವಾದ ಶುದ್ಧಿಯಾಗಿರಬೇಕು– 'ಕೊಲುವ ಕೈಯೊಳು ಪೂಜೆ, ಮೆಲುವ ಬಾಯೊಳು ಮಂತ್ರ'ವಾಗಿರಬಾರದು; 'ಅಂಗದಿಚ್ಛೆಗೆ ಮದ್ಯಮಾಂಸವಕೊಂಡು ಕಂಗಳಿಚ್ಛೆಗೆ ಪರವಧುವ ನೆರೆದು ಲಿಂಗಲಾಂಛನ ಧಾರಿಯಾದ' (೧೦೬)ರೆ ಶುದ್ಧಿ ಸಾಧ್ಯವೆ?

> 'ಕೆಲಕ್ಕೆ ಶುದ್ಧನಾದೆನಲ್ಲದೆ, ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ?
> ಕೈಯ ಮುಟ್ಟಿ ಪೂಜಿಸುವರೆ, ಎನ್ನ ಕೈ ಶುದ್ಧವಿಲ್ಲವಯ್ಯಾ,
> ಮನಮುಟ್ಟಿ ಪೂಜಿಸುವರೆ, ಎನ್ನ ಮನಶುದ್ಧವಲ್ಲವಯ್ಯಾ,
> ಭಾವಶುದ್ಧವಾದೊಡೆ ಕೂಡಲಸಂಗಯ್ಯನು 'ಇತ್ತಬಾ' ಎಂದೆತ್ತಿ
> ಕೊಳ್ಳನೇಕಯ್ಯಾ?' (೨೮೩)

ಬಸವಣ್ಣ ಬೋಧಿಸಿದ ಧರ್ಮ ಮುಖ್ಯವಾಗಿ 'ಭಾವಶುದ್ಧಿ'ಯ ಧರ್ಮ; ತ್ರಿಕರಣ ಶುದ್ಧಿಯ ಧರ್ಮ, ಆ ಶುದ್ಧಿಯಿಲ್ಲದವನು ತೊರೆಯಲ್ಲಿ ಮಿಂದರೂ ಅಪವಿತ್ರ, ಧರ್ಮಕ್ಕೆ ಅಪಾತ್ರ; ಆ ಶುದ್ಧಿಯಿದ್ದವನು ತೊರೆಯಲ್ಲಿ ಮೀಯದಿದ್ದರೂ ಪಾವನ. 'ಡೋಹಾರ ಕಕ್ಕಯ್ಯನ್ನಾವ ತೊರೆಯಲ್ಲಿ ಮಿಂದ?' ತೊರೆ ಮುಖ್ಯವಲ್ಲ, ಅಶುದ್ಧಿಯ ತೊರೆಯುವುದು ಮುಖ್ಯ;

ತೊರೆಯ ಮೀವಣ್ಣಗಳಿರಾ, ತೊರೆಯಮೀವ ಸ್ವಾಮಿಗಳಿರಾ,
ತೊರೆಯಿಂ ಭೋ, ತೊರೆಯಿಂ ಭೋ,
ಪರನಾರಿಯ ಸಂಗವ ತೊರೆಯಿಂಭೋ,
ಪರಧನದಾಮಿಷ ತೊರೆಯಿಂಭೋ,
ಇವ ತೊರೆಯದೆ ಹೋಗಿ ತೊರೆಯ ಮಿಂದರೆ
ಬರುದೊರೆ ಹೋಹುದು, ಕೂಡಲಸಂಗಮದೇವಾ....(೬೪೪)

'ದೇವನೊಬ್ಬ ನಾಮ ಹಲವು' ದಯವೇ ಧರ್ಮದ ಮೂಲ; ದಯವಿರಬೇಕು ಸಕಲ ಪ್ರಾಣಿಗಳಲ್ಲಿ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವವರೆ ಕುಲಜರು, ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ, ಇತ್ಯಾದಿ ಸೂತ್ರಗಳಲ್ಲಿ ಈ ಹೊಸ ಧರ್ಮದೃಷ್ಟಿ ಸ್ಪಷ್ಟ, ಕೊನೆಯದಾಗಿ, 'ಹೇಂಗೆ ಮನ ಹಾಂಗೆ ನಿಮ್ಮ ಘನತಪ್ಪದು, ಕೂಡಲ ಸಂಗಮದೇವ (೬೪೮). ಈ ಹೊಸ ಧರ್ಮದೃಷ್ಟಿಯ ಪ್ರಭಾವ ಪರಿಣಾಮಗಳನ್ನು ಕುರಿತು ಹೇಳಿಕೆಯೊಂದಿದೆ.

The religious and social revolution Basava brought about can be compared with the religious and social protestantism brouhgt into christinity much later' I. M. Hondia. (Shri Basavesvara Commemoration Volume, Page 84).

# ೩

# ಅಸ್ಪೃಶ್ಯತೆಯ ಅಭಿಶಾಪ

ಬಸವಣ್ಣನವರು ಮಾಡಿದ ಅಸ್ಪೃಶ್ಯತಾ ನಿವಾರಣೆಯ ಕಾರ್ಯದ ಮಹತಿಯನ್ನು ಮನಗಾಣಬೇಕಾದರೆ ಅಂದು ಅಂತ್ಯಜರು, ಅಸ್ಪೃಶ್ಯರು, ಪಂಚಮರು ಮೊದಲಾದವರು ಅನುಭವಿಸುತ್ತಲಿದ್ದ ಯಾತನೆಗಳ, ಕ್ಲೇಶಗಳ, ಅನ್ಯಾಯಗಳ ಚಿತ್ರ ನಮ್ಮ ಮುಂದಿರಬೇಕು. ಅನೇಕ ಆಕರಗಳಿಂದ ವಿವರಗಳನ್ನು ಹೆಕ್ಕಿ ತೆಗೆದು ಆ ಚಿತ್ರ ಬರೆಯುವುದಕ್ಕಿಂತ ಇಂದು ನಮ್ಮ ಸ್ವಾತಂತ್ರ್ಯೋದಯದ ಮೂರು ದಶಕಗಳ ತರುವಾಯವೂ ಅವರು ಅನುಭವಿಸುತ್ತಲಿರುವ ಹಿಂಸೆಗಳ ಉಪಟಳಗಳ, ಉಪದ್ರವಗಳ, ವೇದನೆಗಳ, ವ್ಯಥೆಗಳ ಚಿತ್ರವನ್ನು ಕಂಡರೆ ಸಾಕೆನಿಸುತ್ತಿದೆ, ಅಂದಿನಿಂದ ಇಂದಿಗೆ ಬರುವುದಕ್ಕಿಂತ ಇಂದಿನಿಂದ ಹಿಂದಕ್ಕೆ ಹೋಗಿ ನೋಡೋಣ.

ಕನಿಷ್ಠ ಒಂದು ಶತಮಾನದಿಂದ ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿ ಪ್ರಬಲ ಪ್ರಯತ್ನಗಳು ನಡೆದಿವೆ; ಈ ದೇಶದಲ್ಲಿ. ಇದರಲ್ಲಿ ಅರ್ಧಶತಮಾನದ ಗಾಂಧೀಜಿಯವರ ಅಭೂತಪೂರ್ವ ಹರಿಜನೋದ್ಧಾರದ ಆಂದೋಲನವೂ ಸೇರಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿಯಂತೂ ಕೇಂದ್ರ ರಾಜ್ಯಪ್ರಭುತ್ವಗಳು ಅಸ್ಪೃಶ್ಯತಾ ನಿವಾರಣೆಗಾಗಿ ಶಾಸನಗಳನ್ನು ರಚಿಸಿವೆ, ಯೋಜನೆಗಳನ್ನು ರೂಪಿಸಿವೆ, 'ವಿದ್ಯಾಭ್ಯಾಸ ಸೌಕರ್ಯಗಳನ್ನು, ಉದ್ಯೋಗಾವಕಾಶಗಳನ್ನು ನೀಡುತ್ತಿವೆ ಹರಿಜನ–ಗಿರಿಜನರಿಗೆ, ಭಾರತದ ಸಂವಿಧಾನವೇ ಅಸ್ಪೃಶ್ಯತೆಯು ಅಪರಾಧವೆಂದು ಸಾರಿದೆ. ಅದರ ೧೭ನೆಯ ಕಟ್ಟಳೆ ಹೀಗಿದೆ ಳ "Untouchability is abolished and its practice in any form is forbidden. The enforcement of any disability advising out of untouchability shall be an offence punishable in accordance with law." ಇದೇ ಸಂವಿಧಾನದ ೧೫ನೆಯ ಕಟ್ಟಲೆಯ ಪ್ರಕಾರ ಸಂಪೂರ್ಣ ರಾಜ್ಯಾದಾಯದಿಂದ ಇಲ್ಲವೆ ಭಾಗಶಃ ರಾಜ್ಯದಾಯದಿಂದ ಕಟ್ಟಲ್ಪಟ್ಟು ಸಾರ್ವಜನಿಕರ ಉಪಯೋಗಕ್ಕಾಗಿ ನೀಡಲಾದ ಬಾವಿಗಳನ್ನು, ಕೆರೆಗಳನ್ನು, ಸ್ನಾನಘಟ್ಟಗಳನ್ನು, ರಸ್ತೆಗಳನ್ನು, ಸಾರ್ವಜನಿಕರ ಸ್ಥಳಗಳನ್ನು ಉಪಯೋಗಿಸುವ ಅಧಿಕಾರ, ಜಾತಿಮತ, ಪಂಥಪಂಗಡ, ಲಿಂಗ, ಜನ್ಮಸ್ಥಳಗಳ ತಾರತಮ್ಯವಿಲ್ಲದೆ ಎಲ್ಲರಿಗೂ ಇದೆ.

ಹೀಗಿದ್ದೂ ನಡೆದಿರುವುದೇನು? ಈ ದೇಶದಲ್ಲಿ ನೂರಕ್ಕೆ ಹದಿನೈದರಷ್ಟಿರುವ ಈ ಬಡವರು ಪಡಬಾರದ ಕಷ್ಟನಷ್ಟಗಳನ್ನು ಅನುಭವಿಸುತ್ತಲಿದ್ದಾರೆ ಇಂದಿಗೂ. ಇನ್ನೂ ಊರ ಹೊರಗಿನ ಕೇರಿಗಳಲ್ಲಿ ಹಾಳು-ಬೀಳು ಮನೆಗಳಲ್ಲಿಯೋ ಹರಕು-ಮುರುಕು ಗುಡಿಸಲುಗಳಲ್ಲಿಯೋ ಅವರ ವಾಸ, ಕೈಗೂಲಿಯೇ ಬಹುಸಂಖ್ಯಾಕರ ಜೀವನಾಧಾರ; ಈಗ ಜೀತಪದ್ಧತಿಯು ಮಾಯವಾಗುತ್ತಿದೆಯಾಗಿ, ಕಡ ಒತ್ತೆಯ, ಅಡವಿನ ಕರಾಳ ಪದ್ಧತಿ ಕಾಣದಾಗುತ್ತಿದೆಯಾಗಿ ಅವರಿಗೀಗ ಶತಶತಮಾನಗಳ ಈ ಶಾಸನಗಳಿಂದ ವಿಮುಕ್ತಿ ದೊರೆಯುತ್ತಿದೆಯೆಂದು ನಂದಿಸುವಂತಿಲ್ಲ. ಅಸ್ಪೃಶ್ಯತೆಯನ್ನು ಆಳವಾದ ತಗ್ಗು ತೋಡಿ ಹುಗಿದಿರುವೆವಾದರೂ ಅದು ಭೂತವಾಗಿ ಬಂದು ತನ್ನ ನಗ್ನ ನೃತ್ಯವನ್ನೂ ನಡೆಸಿದೆ.

The question now is  that the caste system has not disintegrated either under the impact of the constitutional provisions or under the impact of modern trends... While there has been a weakening of this trend, we cannot say that caste consideration are no longer there. Infact, they remain very much valid even today... A restrictive factor in the evolution of an intigrated security is the social philosophy of caste which remain unaffected by moderen ideas' 'Shri Jagjivaram' (Spirit of Indian Vol. Page 400-5.) ಕೆಲವೇ ದೃಷ್ಟಾಂತಗಳು ಸಾಕು ಇದರ ದೃಢೀಕರಣಕ್ಕೆ.

ಉತ್ತರ ಪ್ರದೇಶ ಸರಕಾರವು ಹರಿಜನ ಗಿರಿಜನ ದೂರುಗಳನ್ನು ಕೇಳಿ ಅವುಗಳನ್ನು ಪರಿಹರಿಸಲಿಕ್ಕಾಗಿಯೇ ಒಬ್ಬ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸರನ್ನು ನಿಯಮಿಸಿದೆ. ಅವರು ಇತ್ತೀಚೆಗೆ ಇತ್ತ ವಿವರಗಳ ಪ್ರಕಾರ ೧೯೭೫ರಲ್ಲಿ ಒಂದೇ ವರ್ಷದಲ್ಲಿ ಉತ್ತರ ಪ್ರದೇಶವೊಂದರಲ್ಲಿ ಹರಿಜನರ ಮೇಲೆ ಮೂರು ಸಾವಿರ ಅತ್ಯಾಚಾರಗಳು ನಡೆದುವು! ಈ ರಾಜ್ಯದ ಪ್ರತಾಪಗಡ ಜಿಲ್ಲೆಯ ರಾಯಪುರಭಟನಿ ಗ್ರಾಮದಲ್ಲಿ ೧೯೭೩ರಲ್ಲಿ ಸವರ್ಣ ಹಿಂದುಗಳ ಹರಿಜನರ ನಡುವೆ ನಡೆದ ಸಂಘರ್ಷ ಉಲ್ಲೇಖನೀಯ. ಈ ಗ್ರಾಮದಲ್ಲಿ ಹರಿಜನರು ಹೆಚ್ಚಾಗಿದ್ದು ಹೆಚ್ಚಾಗಿ ಕೂಲಿ ಕೆಲಸ ಮಾಡಿಯೇ ಜೀವಿಸುತ್ತಾರೆ. ಅಲ್ಲೊಂದು ಸಾರ್ವಜನಿಕ ಕೆರೆಯಿದ್ದು ಅಲ್ಲಿಯ ಠಾಕೂರರು ಅದು ತಮ್ಮ ಕೆರೆಯೆಂದು ವಾದಿಸಿ ಕಡಮೆ ಕುಲದವರಿಗಿದನ್ನು ಉಪಯೋಗಿಸಲು ಬಿಡುವುದಿಲ್ಲೆಂದು ಸಾಧಿಸಿದರು. ಹರಿಜನರು, ಇದು ಸಾರ್ವಜನಿಕ ಕೆರೆ, ಇದರ ಉಪಯೋಗ ಎಲ್ಲರಿಗಾಗಿಯೆಂದು ಮೊದಲ ಸಲ ಬಾಯಿ ಬಿಟ್ಟರು. ಅವರಿಗೆ ನಾಯಕನಾಗಿ ದೊರೆತಿದ್ದ ಪ್ರಾಥಮಿಕ ಶಾಲಾಶಿಕ್ಷಕ ಶ್ರೀ ಭೈಜನಾಥ ಯಾದವರಿಂದ ಸ್ಫೂರ್ತಿಪಡೆದು, ವ್ಯಾಜ್ಯ ಕೋರ್ಟಿಗೆ ಹೋಯಿತು. ಕೋರ್ಟಿನಲ್ಲಿ ಹರಿಜನರಂತೆ ನಿರ್ಣಯವಾಯಿತು. ಈ ಸೋಲಿನ ಸಂತಾಪವನ್ನಿನ್ನೂ ಮರೆತಿರಲಿಲ್ಲ ಠಾಕೂರರು. ಕೃಷಿಕಾರ್ಮಿಕರ ಕನಿಷ್ಠವೇತನ ಹೆಚ್ಚಬೇಕೆಂಬ ಬೇಡಿಕೆ

ಮಂಡಿಸಿದರು ಹರಿಜನರು. ಅದೊಂದೇ ಅವರ ಜೀವನಾಧಾರ. ಅವರು ಹೆಚ್ಚು ವೇತನ ಬೇಡಿದುದು ಹೆಚ್ಚುತ್ತಿದ್ದ ಬೆಲೆಗಳ ದೃಷ್ಟಿಯಿಂದ ನ್ಯಾಯವಾದುದೇ. ಆದರೆ ಹೊಲಗಳೆಲ್ಲ ಠಾಕೂರರವು. ಕೆರೆಯ ವಾಜ್ಯದಲ್ಲಾದ ಸೋಲಿನಿಂದ ಇನ್ನೂ ಹಲ್ಲುಕಡಿಯುತ್ತಿದ್ದ ಅವರನ್ನು ಈ ಹೆಚ್ಚಿನ ವೇತನದ ಬೇಡಿಕೆ ರೊಚ್ಚಿಗೆಬ್ಬಿಸಿತು. ಶ್ರೀ ಬೈಜನಾಥ ಯಾದವರು ಹರಿಜನರನ್ನುದ್ದೇಶಿಸಿ ಮಾತನಾಡಿ ಮರಳುತ್ತಿದ್ದಾಗ ಅವರ ಮೇಲೆ ಹಲ್ಲೆಯಾಗಿ ಅವರಿಗೆ ತೀವ್ರಗಾಯಗಳಾದುವು. ಅವರ ಅನುಯಾಯಿಗಳು ಧಾವಿಸಿ ಅವರನ್ನುಳಿಸಿ, ಮಂಚದ ಮೇಲೆ ಮಲಗಿಸಿ, ಅದನ್ನು ಹೊತ್ತುಕೊಂಡು ಪೋಲಿಸ ಠಾಣೆಗೆ ಹೋದರು!

ಇದೇ ರಾಜ್ಯದ ಬಂಡಾ ಜಿಲ್ಲೆಯಲ್ಲಿ ಇಬ್ಬರು ಹರಿಜನರನ್ನು ಯಮಸದನಕ್ಕೆ ಅಟ್ಟಲಾಯಿತು. ಕಾರಣ? ಅವರಲ್ಲೊಬ್ಬನಿಗೆ ಭೂಸುಧಾರಣಾ ಶಾಸನದನ್ವಯ ಹೆಚ್ಚುವರಿ ಭೂಮಿಯನ್ನು ಹಂಚಿ ಪಟ್ಟಾ ಕೊಡಲಾಗಿದ್ದಿತು. ಇದರಿಂದ ಅಲ್ಲಿಯ ಹರಿಜನರು ಎಷ್ಟು ಭಯಭೀತರಾದರೆಂದರೆ ಪ್ರಾಣಕ್ಕೆ ಸಂಚಕಾರ ತರುವ ಈ ಭೂಮಿ, ಈ ಪಟ್ಟಾಗಳೇ ನಮಗೆ ಬೇಡವೆಂದು ಬಿಟ್ಟರು! ತಮಿಳುನಾಡಿನ ಹಿಂದು ಹಳ್ಳಿಯಲ್ಲಿ ಹರಿಜನರು ಸ್ಮಶಾನಕ್ಕಾಗಿ ಭೂಮಿಯನ್ನು ಕೇಳಿದ ತಪ್ಪಿಗಾಗಿ ಎಂಥ ಅನಾಹುತ ನಡೆಯಿತು! ಸಣ್ಣದೊಂದು ಅಂತರ್ಯುದ್ಧವೇ ನಡೆಯಿತು! ಇದೇ ರಾಜ್ಯದ ತುಂಜಾವೂರು ಜಿಲ್ಲೆಯ ಕೀಯವೆನ್ಮನಿ ಹಳ್ಳಿಯಲ್ಲಿ ನಡೆದ ದುರಂತ ಕ್ರೌರ್ಯದ ಪರಮಾವಧಿಗೆ ಸಾಕ್ಷಿ. ಅಲ್ಲಿ ೪೨ ಹರಿಜನರೂ, ಅವರ ಹೆಂಗಳೆಯರೂ, ಮಕ್ಕಳೂ ಇದ್ದ ಮನೆಗೇ ಬೆಂಕಿ ಹಚ್ಚಲಾಯಿತು. ಆ ಬೆಂಕಿಯಲ್ಲಿ ಆ ನಾಲ್ವತ್ತೆರಡು ಜೀವಿಗಳೂ ಭಸ್ಮವಾದರು!

ಗುಜರಾತ ರಾಜ್ಯದ ಸುರೇಂದ್ರನಗರ ಜಿಲ್ಲೆಯ ರಾನಮಾಲ್ಪುರ ಗ್ರಾಮದಲ್ಲಿ ೧೯೭೪ರಲ್ಲಿ ನಡೆದ ದುರ್ಘಟನೆಯಿದು; ಅಲ್ಲಿ ಹರಿಜನರಿಗಾಗಿ ಪ್ರತ್ಯೇಕ ಬಾವಿಯಿದ್ದರೂ ಬೇಸಿಗೆಯಲ್ಲಿ ಅದು ಬತ್ತಿ ಹೋಗಿತ್ತು. ಆದುದರಿಂದ ಸರ್ವಸ್ರೀ ದೇವಜಿದಾಹ್ಯಾ ಮತ್ತು ಬಿಜಲ ಗೋವಿಂದರ ನೇತೃತ್ವದಲ್ಲಿ ಅಲ್ಲಿಯ ಹರಿಜನರು ಊರಬಾವಿಯಿಂದ ನೀರು ತೆಗೆದುಕೊಳ್ಳಲು ಅನುಮತಿ ಬೇಡಿದರು. ಸವರ್ಣ ಹಿಂದುಗಳು – ಹೆಚ್ಚಾಗಿ ಕಣಬಿ ಪಟೇಲರು ಸಮ್ಮತಿಸಲಿಲ್ಲ. ಪೋಲಿಸ್ ಅಧಿಕಾರಗಳ ಮಧ್ಯಪ್ರವೇಶದಿಂದ ಹರಿಜನರು ಬಾವಿಯ ಸಮೀಪಕ್ಕೆ ಬರದೆ ಬಾವಿಯ ನೀರು ಪಡೆದುಕೊಳ್ಳುವ ವ್ಯವಸ್ಥೆಯಾಯಿತು. ಕೊಳಾವಿಗಳ ಮೂಲಕ ದೋಣಿಗಳಿಗೆ ನೀರು ಸಾಗಿಸಿ ಆ ದೋಣಿಗಳಿಂದ ಅವರು ನೀರು ತೆಗೆದುಕೊಳ್ಳುವಂತೆ ಏರ್ಪಾಟು ಮಾಡಲಾಗಿದ್ದಿತು. ಅದೂ ಸವರ್ಣ ಹಿಂದೂ ಮಹಿಳೆಯರು ಬಾವಿಗೆ ಬಾರದ ಸಮಯದಲ್ಲಿ ಮುಂಜಾವಿಗೆ ಮೊದಲು, ಸಂಜೆಯಾದ ಮೇಲೆ – ಅವರು ನೀರು ತೆಗೆದುಕೊಳ್ಳತಕ್ಕದ್ದೆಂದು ಕಟ್ಟಳೆ ವಿಧಿಸಲಾಗಿದ್ದಿತು! ಕೆಲವು ಪಟೇಲರಿಗೆ ಇದೂ ಸಹನವಾಗಲಿಲ್ಲ! ಜೂನ್ ೨೨ಕ್ಕೆ ಶಸ್ತ್ರಧಾರಿಗಳಾದ ಮೂರುನೂರು ಜನರು, ಯುವಕ ಹಾಗೂ ಸಬಲ ಹರಿಜನರು ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ, ಹರಿಜನ ಕೇರಿಯ

ಮೇಲೆ ಹಲ್ಲೆಮಾಡಿ ಹರಿಜನ ಹೆಂಗಸರನ್ನು ಹೊಡೆದು ಅವರ ಗುಡಿಸಲುಗಳ ಲೂಟಿಮಾಡಿದರು; ಅಡಗಿ ಕುಳಿತರೂ ಬಿಡದೆ ದೇವಜಿ ದಹ್ಯಾ ಅವರನ್ನು ಈಟಿಯಿಂದ ಇರಿದುಕೊಂದರು, ಬಿಜಾಲ ಗೋವಿಂದರನ್ನು ಬಡಿದು ಸಾಯಿಸಿದರು!

ಮಹಾರಾಷ್ಟ್ರ ರಜ್ಯದ ಔರಂಗಾಬಾದ ಜಿಲ್ಲೆಯ ಕೋಲೇಗಾಂವ ಗ್ರಾಮದಲ್ಲಿ ಹರಿಜನರು ಬೌದ್ಧರಾಗಿದ್ದರೂ ಅವರಿಗೆ ಅಸ್ಪೃಶ್ಯತೆಯ ಅಭಿಶಾಪ ತಟ್ಟದಿರಲಿಲ್ಲ! ಅವರ ಕುಡಿಯುವ ನೀರಿನ ಬಾವಿಯು ಕಲುಷಿತವಾಗಿದ್ದಿತು. ಸವರ್ಣ ಹಿಂದುಗಳು ತಮ್ಮ ಬಾವಿಯಿಂದ ನೀರು ತೆಗೆದುಕೊಳ್ಳಲು ಬಿಡಲಿಲ್ಲ. ಕೊನೆಗೆ ತಮ್ಮ ಬಾವಿಯ ಕಲುಷಿತ ನೀರನ್ನೇ ಕುಡಿದು ಹನ್ನೆರಡು ಜನ ಹರಿಜನರು ಬುದ್ಧವ್ರತವನ್ನು ಆಶ್ರಯಿಸಿಯೂ ಮಡಿದರು; ಇದೇ ರಾಜ್ಯದ ಅಕೋಲಾ ಜಿಲ್ಲೆಯ ಹಳ್ಳಿಯೊಂದರಲ್ಲಿ ಇನ್ನೊಂದು ಹೃದಯವಿದ್ರಾವಕ ಘಟನೆ ನಡೆಯಿತು. ಗೋಪಾಲ ಗವಾಯ್ ಎಂಬ ನವಬುದ್ಧ ಮತೀಯರೊಬ್ಬರ ಹದಿನೈದು ವರ್ಷದ ಮಗಳು ಗರ್ಭಿಣಿಯಾದಳು. ಆ ಊರಿನ ಪಟೇಲರ ಮಗನೇ ಅದಕ್ಕೆ ಕಾರಣವೆಂಬುದು ಗೊತ್ತಾಗಲು, ಗೋಪಾಲ ಗವಾಯಿಯು ಪಟೇಲರ ಮಗ ತನ್ನ ಮಗಳನ್ನು ಮದುವೆಯಾಗಿ ಆಗಿದ್ದ ಅನಾಹುತವನ್ನು ಸರಿಪಡಿಸಲಿ ಎಂದು ಬೇಡಿಕೊಂಡ. ಅವನು ಈ ಬೇಡಿಕೆಯನ್ನು ಮಂಡಿಸಿದುದೇ ಮಹಾಪರಾಧವಾಯಿತು. ಒಂದು ರಾತ್ರಿ ಯಾರೋ ಹೊರಗೆ ಕೂಗುತ್ತಿರುವರೆಂದು ಗೋಪಾಲ ಗವಾಯಿ ಹೊರಬಂದ. ಹೊರಗಿದ್ದ ಪಟೇಲರ ಪುಂಡರು ದೊಣ್ಣೆಯಿಂದವನನ್ನು ಥಳಿಸಿ, ಅವನ ಕಣ್ಣುಗಳನ್ನು ಕಿತ್ತರು; ಅವನ ತಮ್ಮ ಧಾವಿಸಿ ಬರಲು ಅವನ ಕಣ್ಣುಗಳನ್ನೂ ಕಿತ್ತರು! ಎಂಟುನೂರು ವರ್ಷಗಳ ಹಿಂದೆ ಬಿಜ್ಜಳನು ಇದಕ್ಕಿಂತ ಬಲವಾದ ಕಾರಣಕ್ಕಾಗಿ ಹರಳಯ್ಯ – ಮಧುವರಸರ ಕಣ್ಣುಗಳನ್ನು ಕೀಳಿಸಿದುದು ಅದಾವ ಅಚ್ಚರಿ!

ಈಗ ಹಳ್ಳಿಗಳಲ್ಲಿ ಮಾತ್ರ ಇಂಥ ಅಪರಾಧಗಳು ನಡೆಯುತ್ತಿವೆ; ಪಟ್ಟಣಗಳಲ್ಲಿ ಇಲ್ಲ ಎನ್ನುವಂತಿಲ್ಲ. ಇವರು ಹರಿಜನರೆಂದು ಗೊತ್ತಾಗದಿದ್ದರೆ ಹೋಯಿತು, ಗೊತ್ತಾಯಿತೆಂದರೆ ಸಾಕು, ಸುಪ್ತಸ್ಪೃಶ್ಯಾಸ್ಪೃಶ್ಯ ಭಾವನೆ ಸಿಡಿದೇಳುತ್ತದೆ, ಎಷ್ಟು ರಕ್ತಗತವಾಗಿದೆಯೋ, ಅಸ್ಥಿಗತವಾಗಿದೆಯೋ ಈ ವ್ಯಾಧಿ ನಮ್ಮಲ್ಲಿ! ಗುಜರಾಥದ ರಾಜಧಾನಿ ಗಾಂಧೀನಗರದಲ್ಲಿ ನಡೆದ ಘಟನೆಯಿದು; ಹರಿಜನನೊಬ್ಬನನ್ನು ಮದುವೆಯಾಗಿದ್ದ ಬ್ರಾಹ್ಮಣ ಯುವತಿಯೊಬ್ಬಳನ್ನು ಸೇರಿಸಿಕೊಳ್ಳಲಾಗಿದ್ದಿತು. ಗರ್ಭಾನೃತ್ಯವೊಂದರಲ್ಲಿ ಅವಳೊಡನೆ ನರ್ತಿಸಲು ಉಳಿದ ಯುವತಿಯರು ಒಪ್ಪಲಿಲ್ಲವಾಗಿ ಅವಳನ್ನು ಬಿಟ್ಟೇ ಆ ಕಾರ್ಯಕ್ರಮ ನಡೆಸಬೇಕಾಯಿತು! ಪಂಜಾಬ ರಾಜ್ಯದ ಹೋಷಿಯಾರಪುರ ಜಿಲ್ಲೆಯ ಕಾಲೇಜೊಂದರಲ್ಲಿ ಲೆಕ್ಚರರ್ ಆಗಿದ್ದ ಚಾಟ ಸಿಖ್ಖ ಮಹಿಳೆಯೊಬ್ಬಳು ತನ್ನ ಸಹೋದ್ಯೋಗಿಯಾಗಿದ್ದ ಹರಿಜನ ಸಿಖ್ಖನೊಬ್ಬನನ್ನು ಮದುವೆಯಾದಳು. ಕಾಲೇಜಿನ ಅಧಿಕಾರಿಗಳ ಕೋಪ ಎಷ್ಟು ಉರಿದೆದ್ದಿತೆಂದರೆ ಅವರಿಬ್ಬರನ್ನೂ ಕೆಲಸದಿಂದ ತೆಗೆದು ಹಾಕಿದರು. ಲೋಕಸಭೆಯಲ್ಲಿ

ಈ ಬಗ್ಗೆ ಪ್ರಸ್ತಾಪ ಬಂದು ಸ್ವಯಂ ಪ್ರಧಾನಿಯವರೇ ತಕ್ಕುದನ್ನು ಮಾಡುವ ಆಶ್ವಾಸನವಿತ್ತ ಮೇಲೆ ಅವರಿಬ್ಬರನ್ನೂ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲಾಯಿತು!

ಈ ಸಾವಿರ ಹೆಡೆಯ ಸರ್ಪ ಉಗುಳುವ ವಿಷದಿಂದ ಕೋಟಿ ಕೋಟಿ ಜನ ಪರಿತಪಿಸುತ್ತಿರುವುದನ್ನು ನೋಡಿಯೇ ಗಾಂಧೀಜಿಯವರು ಉದ್ಗರಿಸಿದರು* : I would for rather than Hinduism died than that untouchability lived! 'If untouchability lives, Hinduism must die! 'We shall dig our own grave if we do not purge ourselves of this curse of untouchability'. 'The I more study the Hindu scriptures and the more I discuss them with Brahmins, the more I feel convinced that untouchability is the greatest blot upon Hinduism.' 'What crimes, for which we condemn the Government as Satanic, have not we been quilty of towards our untouchable brothern'.

ಅಸ್ಪೃಶ್ಯರು ಅಶುದ್ಧರೆ? ಯಾರು ಶುದ್ಧರು ಹಾಗಾದರೆ? ಹೃದಯದಲ್ಲಿ ಸ್ಪೃಶ್ಯಾಸ್ಪೃಶ್ಯ ಭಾವನೆಯನ್ನು ಇರಿಸಿಕೊಂಡವರೇ, ಈ ಪಾಪಪೂರಿತ ವಿಚಾರವನ್ನು ಇರಿಸಿಕೊಂಡವರೇ ಅಶುದ್ಧರು. ಆದುದರಿಂದ ಅವರ ಶುದ್ಧೀಕರಣ ಮೊದಲು ಆಗಬೇಕು ! 'The purification required is not of untoucables, but of the so called superior castes.' The removal of untouchability a question of the purification of Hinduism' ತಮ್ಮ ವಿಶ್ವವಿಶಾಲ ಹೃದಯದಿಂದ ಹೊರಡಿಸಿದರು ಈ ಮರೆಯಲಾಗದ ಮಾತನ್ನು ಮಹಾತ್ಮಾಜಿಯವರು: 'I would bend the knee before the poorest cavenger, the poorest untouchable in India, for having participated in crushing him for centuries. I would even take the dust of his feet'ಅವರ ಅಚಲ ನಿರ್ಧಾರವಿದು : Our struggle does not end so long there is a single human beeing considered untouchable on account of his birth'

ಒಬ್ಬನೇಕೆ, ಇನ್ನೂ ಕೋಟ್ಯಾನುಕೋಟಿ ಮಾನವರು ಇದೇ ದೇಶದಲ್ಲಿ ಅಸ್ಪೃಶ್ಯತೆಯಿಂದೊದಗುವ ಎಲ್ಲ ಕೊಟಲೆಗಳಿಗೆ, ಕೀಟಲೆಗಳಿಗೆ ಒಳಗಾಗಿ ಬದುಕಿದ್ದಾರೆ! ಆದುದರಿಂದ ಅಸ್ಪೃಶ್ಯತೆಯ ವಿರುದ್ಧ ಹೋರಾಟ ಇನ್ನೂ ಮುಗಿದಿಲ್ಲ. ಅದು ಇನ್ನಷ್ಟು ಬೃಹತ್ತರವಾಗಬೇಕಾಗಿದೆ; ಬಲವತ್ತರವಾಗಬೇಕಾಗಿದೆ; ಈ ದೇಶದಲ್ಲಿ ಒಬ್ಬ ಮಾನವನೂ ಇದರ ಕಲಂಕ ಹೊತ್ತಿರುವವರೆಗೆ ಸಾಗಬೇಕಾಗಿದೆ!

---

* "Untouchability is a hydra headed monster" Gandhiji.

ಇಂದೂ ಇಷ್ಟು ಭೀಕರಾಕಾರದಲ್ಲಿ, ಬೃಹತ್ ಪ್ರಮಾಣದಲ್ಲಿರುವ ಈ ಅಸ್ಪೃಶ್ಯತೆ ಎಂಟುನೂರು ವರ್ಷಗಳ ಹಿಂದೆ ಎಷ್ಟು ಭಯಾನಕ ಸ್ವರೂಪದ್ದಿರಬೇಕು? ಆಗಿನ ಅದರ ಕರಾಳ ಸ್ವರೂಪವನ್ನು ಊಹಿಸುವುದು ಕಷ್ಟ! ಅಂಥ ಕಾಲದಲ್ಲಿ ಒಬ್ಬ ಬಸವಮತೀಯನಾಗಿದ್ದ ಹರಿಜನರ ಮಗನೊಡನೆ ಒಬ್ಬ ಬಸವಾನುಯಾಯಿ ಬ್ರಾಹ್ಮಣನ ಮಗಳ ಮದುವೆ ಮಾಡಿದುದು ಎಂಥ ಕ್ರಾಂತಿಕಾರೀ ಘಟನೆ! ಹೀಗೆ ಮದುವೆಯಾದುದನ್ನು ಪಾಲ್ಕುರಿಕೆ ಸೋಮನಾಥಾದಿಗಳು ಹೇಳಿಲ್ಲ. ಇತ್ತೀಚಿನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ' 'ಶರಣಲೀಲಾಮೃತ'ಗಳು ಹೇಳುತ್ತಿವೆಯೆಂಬ ಆಕ್ಷೇಪವಿಲ್ಲದಿಲ್ಲ. ಬಿಜ್ಜಳನು ಹರಳಯ್ಯ ಮಧುವಯ್ಯಗಳ ಕಣ್ಣುಕೀಳಿಸಿದ. ಎಳಹೂಟೆ ಮಾಡಿಸಿದ ವಿಷಯವನ್ನಂತೂ ಹಿಂದಿನವರೂ ಹೇಳಿರುವಷ್ಟೆ? ಯಾವ ಅಪರಾಧಕ್ಕಾಗಿ ಈ ಕಠೋರ ಶಿಕ್ಷೆ ವಿಧಿಸಲಾಯಿತೆಂಬುದನ್ನವರು ಹೇಳಲಿಲ್ಲ. ಏನೊಂದೂ ಅಪರಾಧವಿಲ್ಲದೆ ಇಷ್ಟು ಕ್ರೂರನಾಗಿ ದಂಡಿಸಿದನೆಂಬುದು ಬಿಜ್ಜಳನ ಬಗ್ಗೆ ಹೇಳಲಾಗದ ಸಂಗತಿ. ಅವನೆಷ್ಟೇ ಮಹತ್ವಾಕಾಂಕ್ಷಿಯಾಗಿದ್ದರೂ. ವೈರಿದಮನದಲ್ಲಿ ಕ್ರೂರನಾಗಿದ್ದರೂ ನಿಷ್ಕಾರಣವಾಗಿ ಪ್ರಜೆಗಳ ಕಣ್ಣು ಕೀಳಿಸುವಷ್ಟು ನೀಚನೇನೂ ಅಲ್ಲ, ಆದುದರಿಂದ ದಂಡನೆಗೆ ಕಾರಣವಾದುದೇನೆಂಬುದನ್ನು ಕಂಡುಹಿಡಿಯಲು ತರುವಾಯದ ಬಸವಾನುಯಾಯಿಗಳು ಪ್ರಯತ್ನಿಸುತ್ತಲೇ ಬಂದಿರಬೇಕು. ಈ ಪ್ರಯತ್ನಗಳಿಗೆ ಯಾವಾಗ ಯಶಸ್ಸು ದೊರೆಯಿತೆಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲವಾದರೂ ಮೇಲ್ಕಾಣಿಸಿದ ಗ್ರಂಥಗಳು ರಚಿತವಾಗುವ ಹೊತ್ತಿಗೆ, ಅಥವಾ ಅದಕ್ಕೂ ಮೊದಲೆ, ಮೂಲ ಕಾರಣ ಗೊತ್ತಾಗಿರಬೇಕು. 'ಅಷ್ಟು ಸಮೀಪದವರಿಗೆ ಗೊತ್ತಾಗದ ವಿಷಯ ಇಷ್ಟು ದೂರದವರಿಗೆ ಗೊತ್ತಾಗಬಹುದೆ?' ಎಂಬ ಸಂದೇಹಕ್ಕೆ ಹೀಗೆ ಗೊತ್ತಾದ ಬೇರೆ ಉದಾಹರಣೆಗಳೇ ಉತ್ತರ. 'ಬಸವಜರ್ನಲ್' (ಸಂ.೧, ಸಂಚಿಕೆ ೩) ದಲ್ಲಿ ಬಂದಿರುವ 'ತ್ರೈಲೋಚನ ಮನೋಹರ ಮಾಣಿಕೇಶ್ವರ ಲಿಂಗ' ಎಂಬ ಮುದ್ರಿಕೆಯ ವಚನಗಳು ಎಂಬ ಡಾ. ಎಂ.ಎಂ. ಕಲಬುರ್ಗಿ ಅವರ ಲೇಖನ ಇಲ್ಲಿ ಗಮನಾರ್ಹವಾದುದು. ಈ ಮುದ್ರಿಕೆಯ ಒಂದೇ ವಚನ 'ವಿಶೇಷಾನುಭವ ಷಟ್ಸ್ಥಲ' 'ಲಿಂಗಚಿದಮೃತ ಬೋಧೆ'ಗಳಲ್ಲಿ ದೊರೆತಿದ್ದಿತು; ಈಗ ಅವರ ಶೋಧನೆಯ ಫಲವಾಗಿ ಕೇವಲ ಒಂದು ಶತಮಾನ ಹಿಂದೆ ಇದ್ದ ಕವಿಯೊಬ್ಬನಿಂದ ರಚಿತವಾದ 'ಬೊಮ್ಮಲಿಂಗ ಪುರಾಣ'ದಲ್ಲಿ ಈ ಅಂಕಿತದ ಇನ್ನೂ ಆರು ವಚನಗಳು ಸಿಕ್ಕಿವೆ! ನೂರಾರು ವರ್ಷಗಳಿಂದ ಯಾರಿಗೂ ಸಿಕ್ಕಿರದಿದ್ದ ಈ ವಚನಗಳು ಈ ಕವಿಗೆ ರೇವಣಯ್ಯ ಸ್ವಾಮಿಗಳಿಗೆ ಎಲ್ಲಿಂದ ದೊರೆತುವು? ತಿಳಿಯದು. ವಿಪ್ಲವ ಪ್ಲಾವಿತ ಆ ಕಾಲದಲ್ಲಿ ಯಾರು ಯಾರು ಬರೆದುದು ಎಲ್ಲೆಲ್ಲಿ ಚೆಲ್ಲಾಪಿಲ್ಲಿಯಾಗಿ ಚದುರಿಹೋಯಿತೋ, ಯಾವುದು ನಷ್ಟವಾಯಿತೋ, ಯಾವುದು ಇನ್ನೂ ಭಾವುಕರ ಜಗುಲಿಯ ಮೆಲೆ ಪೂಜೆಗೊಳ್ಳುತ್ತಿದೆಯೋ ಯಾರು ಹೇಳಬೇಕು? ಅಕ್ಕ ನಾಗಮ್ಮನ ಪತಿಯ ಹೆಸರು ಹರಿಹರಾದಿಗಳಿಗೆ ಗೊತ್ತಾಗದೆ ಸಿಂಗಿರಾಜನಿಗೆ ಮಾತ್ರ ಗೊತ್ತಾದುದನ್ನಿಲ್ಲಿ ನೆನೆಯಬೇಕು.

ಹರಳಯ್ಯ ಮಧುವಯ್ಯಗಳ ಮಕ್ಕಳ ಮದುವೆ ಆ ಕಾಲದ ಅದ್ಭುತ ಕ್ರಾಂತಿಯಾಗಿದ್ದ ಕಾರಣ ಅದಕ್ಕೆ ವಿಶೇಷ ಪ್ರಚಾರ ದೊರೆತು ಬಸವಣ್ಣನವರು ಮಾಡಿದ ಇತರ ಅಸ್ಪೃಶ್ಯತಾ ನಿವಾರಣೆಯ ಕಾರ್ಯಗಳತ್ತ ಹೆಚ್ಚಾದ ಗಮನ ಹರಿದಿಲ್ಲ. ಅವರು ಈ ದಿಶೆಯಲ್ಲಿ ಮಾಡಿದುದು ಅದೊಂದೇ ಅದ್ವಿತೀಯ ಕಾರ್ಯವೆಂಬ ಭಾವನೆ ಕೆಲವರಿಗೆ ಬಂದಿದ್ದರೂ ಅಚ್ಚರಿಯಲ್ಲ, ಆದರೆ ಬಸವಣ್ಣನವರು ಈ ದಿಶೆಯಲ್ಲಿ ಮಾಡಿದುದು ಇದೊಂದೇ ಕಾರ್ಯವಲ್ಲ. ಶಿವನಾಗಮಯ್ಯಗಳ ವಿಷಯ ಇದಾಗಲೇ ವಿವರಿತವಾಗಿದೆ. ಅದು ಬಿಜ್ಜಳ ಬಸವರ ಸಂಬಂಧಗಳು ವಿರಸಗೊಳ್ಳುವುದಕ್ಕೆ ನಾಂದಿಯಾಯಿತೆಂಬುದೂ ನಿರೂಪಿತವಾಗಿದೆ. ಇನ್ನಷ್ಟು ಘಟನೆಗಳ ಒಳಹೊಕ್ಕು ನೋಡಿ ಬಸವಣ್ಣನವರು ಮಾಡಿದ ಅಸ್ಪೃಶ್ಯೋದ್ಧಾರ ಕಾರ್ಯ ಕೆಲವು ಆಕಸ್ಮಿಕಗಳ ಸಂಗಮ ಮಾತ್ರವಲ್ಲ. ಅವರ ಜೀವನದ ಮಹೋದ್ದೇಶಗಳಲ್ಲಿ ಒಂದಾಗಿದ್ದಿತೆಂಬುದನ್ನು ಮನಗಾಣಿಸಿಕೊಳ್ಳೋಣ.

ಶಿವನಾಗಮಯ್ಯನಲ್ಲದೆ ಇನ್ನು ಮೂವರು ಅಂತ್ಯಜರಾಗಿ ಹುಟ್ಟಿ ಶರಣರಾದವರ ಬಗ್ಗೆ ಬಸವಣ್ಣನವರಿಗೆ ಭಕ್ತಿ ಬಹಳ; 'ಹಿರಿಯಯ್ಯ ಶ್ವಪಚಯ್ಯ, ಕಿರಿಯಯ್ಯ ಡೋಹಾರ ಕಕ್ಕಯ್ಯಾ, ಅಯ್ಯಗಳಯ್ಯನು ನಮ್ಮ ಮಾದಾರ ಚೆನ್ನಯ್ಯನು, ಕೂಡಲ ಸಂಗಮದೇವಾ, ನಿಮ್ಮ ಶರಣರೊಲಿದೆನ್ನ ಸಲಹುವರಾಗಿ' (೩೫೦) ಈ ವಚನದಲ್ಲಿ ಅವರು ಹೆಸರಿಸಲ್ಪಟ್ಟಿದ್ದಾರೆ. ಇವರಲ್ಲಿ ಮಾದಾರ ಚೆನ್ನಯ್ಯನ ಬಗೆಗಂತೂ ಭಾವ ನಿರ್ಭರರಾಗಿ, ಬಗೆತುಂಬಿ ಹಾಡುತ್ತಾರೆ ಬಸವಣ್ಣನವರು :

'ಹರನು ಮೂಲಿಗನಾಗಿ, ಪುರಾತರೊಳಗಾಗಿ,  
ಬಳಿ ಬಳಿಯಲು ಬಂದ ಮಾದಾರನ ಮಗ ನಾನಯ್ಯಾ,  
ಕಳದ ಹೊಲೆಯನೆಮ್ಮಯ್ಯಾ; ಜಾತಿ ಸೂತಕ'.  
ಮಾದಾರನ ಮಗ ನಾನಯ್ಯಾ! ಕೂಡಲಸಂಗಯ್ಯಾ,  
ಚೆನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪನಯ್ಯಾ ! (೩೪೭)

'ಹೊಕ್ಕಲ್ಲಿ ಹೊಕ್ಕು ನಿಮ್ಮೊಕ್ಕುದನುಂಬುವನು ಕುಲವೇನೋ  
ದೇವ ನೀನಿಲಿದವನ, ಸ್ವಾಮೀ ನೀ ಹಿಡಿದವನ ಕುಲವೇನೋ?  
ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ, ಕೂಡಲ  
ಸಂಗಮದೇವಾ! (೭೩೧)

'ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ'ನೆಂದು ಸಾರಿದ ಬಸವಣ್ಣನವರ 'ಭಕ್ತಿಪಕ್ಷ' ಎಷ್ಟು ಘನವಾದುದು! ಯಾರೋ, 'ಜಾತಿ ಸೂತಕ' ಎಂದು ಉದ್ಗರಿಸಿರಬಹುದು. ಅದಕ್ಕೆ 'ಜಾತಿವಿಡಿದು ಸೂತಕವನಱಸುವೆ; ಜ್ಯೋತಿವಿಡಿದು ಕತ್ತಲೆಯನಱಸುವೆ! ಇದೇಕೋ ಮರುಳ ಮಾನವಾ? ಜಾತಿಯಲ್ಲಿ ಅಧಿಕನೆಂಬೆ; ವಿಪ್ರಶತಕೋಟಿಗಳಿದ್ದಲ್ಲಿ ಫಲವೇನು?

ಭಕ್ತ ಶಿಖಾಮಣಿ' ಎಂಬುದು ವಚನ! ನಮ್ಮ ಕೂಡಲ ಸಂಗನ ಶರಣರ ಪಾದ ಪರುಷವ ನಂಬು, ಕೆಡಬೇಡ ಮಾನವಾ! ಎಂಬುದೇ ಉತ್ತರ. (೫೯೬)

'ಕೆಡಬೇಡ ಮಾನವಾ!' ಕುಲವನೆಚ್ಚಿ ಕೆಡಬೇಡ ಜಾತಿಸೂತಕಗಳ ನಂಬಿ ಕೆಡಬೇಡ; ಮನುಜಕೃತವಾದ ಮೇಲು ಕೀಳುಗಳು, ಸ್ಪೃಶ್ಯಾವಸ್ಪೃಶ್ಯಭಾವನೆಗಳು ದೇವಕೃತವೆಂದು ದುರ್ಭೋಧೆಗೆ ಕಿವಿಗೊಟ್ಟು ಕೆಡಬೇಡ! ಮೇಲ್ಮೆಯನ್ನು ನೀಡುವುದು ಕುಲವಲ್ಲ ಶಿವನ ಒಲವು. ಆ ವರ್ಣ ಈ ವರ್ಣ, ಆ ಕುಲ ಈ ಕುಲ, ಆ ಜಾತಿ ಈ ಜಾತಿಯವನೆಂದು ಕರೆದುಕೊಂಡು ಕೆಡಬೇಡ, ಭಕ್ತನಾಗಿ ಶರಣಸಮೂಹಕ್ಕೆ ಸೇರು! ಎಲ್ಲ ಕುಲಗಳೂ ಅಳಿದು, ತೊಳೆದು ಹೋಗುವುದಲ್ಲಿ! ತೊಳೆದು ಕೊಳ್ಳಲು ಹೊಳೆಗೆ ಹೋಗುವಿರೇಕೆ? ಬಾ ಅನುಭವ ಮಂಟಪಕ್ಕೆ, ಶರಣರ ಸನ್ನಿಧಿಗೆ! 'ಹಿಂಡಲೇಕೋ? ತೊಳೆಯಲೇಕೋ? ಮುಳುಗಿ ಮುಳುಗಿ ಮೂಗ ಹಿಡಿಯಲೇಕೋ? ಕೂಡಲಸಂಗನ ಶರಣರಲ್ಲಿ ಡೋಹರ ಕಕ್ಕಯ್ಯನಾವ ತೊಱೆಯಲ್ಲಿ ಮಿಂದ?..... (೫೮೯)

ನಿಜ, ಯಾವ ತೊರೆಯಲ್ಲಿ ಮಿಂದ, ಡೋಹರ ಕಕ್ಕಯ್ಯ? ಭಕ್ತಿಯ ತೊರೆಯಲ್ಲಿ ಅಲ್ಲವೆ? ಎಂಥ ಚೊಕ್ಕಶರಣ ಕಕ್ಕಯ್ಯ? 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊಱೆಯ ಹೊಱಿಸದಿರಯ್ಯಾ ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ!' ಎಂದು ಹಲಬುತ್ತಾರೆ ಬಸವಣ್ಣನವರು. ಕಕ್ಕಯ್ಯನ ಪ್ರಸಾದಕ್ಕೆ ಅಷ್ಟು ಮಹತ್ವ ಅವರ ದೃಷ್ಟಿಯಲ್ಲಿ. ಶರಣರೆಲ್ಲ ಕಕ್ಕಯ್ಯನ ಪ್ರಸಾದಕ್ಕೆ ಎಷ್ಟು ಶ್ರೇಷ್ಠತೆಯನ್ನು ಇತ್ತಿದ್ದರೆಂದರೆ ನಂದಿಯ ಪ್ರಸಾದದಿಂದ ಬಸವಣ್ಣ ಹುಟ್ಟಿದಂತೆ ಕಕ್ಕಯ್ಯನ ಪ್ರಸಾದದಿಂದ ಚೆನ್ನಬಸವಣ್ಣ ಹುಟ್ಟಿದನೆಂದು ಹಿಗ್ಗಿ ಹಾಡಿದರು. ಅನ್ಯರು ಆ ದೇವರ ಈ ದೇವರ ವರದಿಂದ ಕಾರಣಿಕ ಪುರುಷರು ಹುಟ್ಟಿದರೆಂದು ಹೇಳಿದರು ಶರಣರು ಕಕ್ಕಯ್ಯನಂತವರ ಪ್ರಸಾದದಿಂದ ಹುಟ್ಟಿದರೆಂದು ಹೇಳುತ್ತಾರೆ.

ಬಸವೋದಯವಾಗಿರದಿದ್ದರೆ ನಮಗೆ ಕಕ್ಕಯ್ಯ ಸಿಕ್ಕುತ್ತಿರಲಿಲ್ಲ. ಮಾಳವ ದೇಶದಲ್ಲಿ ಅಂತ್ಯಜನಾಗಿ ಹುಟ್ಟಿ, ಬಸವಣ್ಣನವರ ಆತ್ಮಶಕ್ತಿಯ ಎಳೆತಸೆಳೆತಗಳಿಗೆ ಸಿಕ್ಕು, ಕಲ್ಯಾಣಕ್ಕೆ ಬಂದು ಶ್ರೇಷ್ಠ ಶಿವಾನುಭಾವಿಯಾದ ಈತ ತನ್ನನ್ನು ಉನ್ನತಿಗೇರಿಸಿದವರಾರೆಂಬುದನ್ನು ಹೇಳಿಹೋಗಿದ್ದಾನೆ:

> 'ಕಷ್ಟ ಕುಲದಲ್ಲಿ ಹುಟ್ಟಿದ ಕರ್ಮವ ಕಳೆದು
> ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯ ಎನ್ನಕರಸ್ಥಳಕ್ಕೆ ಲಿಂಗವ!
> ಆ ಲಿಂಗ ಬಂದು ಸೋಂಕಲೊಡನೆ ಎನ್ನ ಸರ್ವಾಂಗದ
> ಅವಲೋಹವಳಿಯಿತ್ತಯ್ಯ!

ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ ।
ಎನ್ನ ಮನದಲ್ಲಿ ಜಂಗಮನ ನೆಲೆಗೊಳಿಸಿದ ।
ಎನ್ನ ಅರಿವಿನಲ್ಲಿ ಪ್ರಸಾದನ ನೆಲೆಗೊಳಿಸಿದ ।
ಇಂತೀ ತ್ರಿವಿಧ ಸ್ಥಾನವ ಶುದ್ಧವ ಮಾಡಿದ ಬಸವಣ್ಣನ ಕರುಣದಿಂದ.

ಬಸವಣ್ಣ ಕರುಣದಿಂದ 'ಮುಟ್ಟಿ ಪಾವನಮಾಡಿ ಕೊಟ್ಟ,' ಕಕ್ಕಯ್ಯನ ಕರಸ್ಥಲಕ್ಕೆ ಲಿಂಗವನ್ನು ದೂರದಿಂದ ತೂರಲಿಲ್ಲ. ಶಿವಭಕ್ತರಾದವರನ್ನು ಮಾತ್ರ ಬಸವಣ್ಣ ಸಮಾನರನ್ನಾಗಿ ಕಂಡ, ಎಲ್ಲರನ್ನಲ್ಲ – ಎಂದು ವಾದಿಸುವವರಿಗೆ ಕಕ್ಕಯ್ಯನೇ ಉತ್ತರ. ಅವನ 'ಅರಿವಿನಲ್ಲಿ ಪ್ರಸಾದವ' ನೆಲೆಗೊಳಿಸಿದ ಬಸವಣ್ಣ. ಆದುದರಿಂದ ಕಕ್ಕಯ್ಯನ ಪ್ರಸಾದವೆಂದರೆ ಅರಿವಿನ ಪ್ರಸಾದ. ಇಂತಹ ಪ್ರಸಾದದ ಪುಣ್ಯ ಫಲಿಸಿ ಶಿವಸ್ವಾಮಿ ನಾಗಾಂಬಿಕೆಯರಿಗೆ ಅರಿವಿನ ದೊರೆ ಚನ್ನಬಸವಣ್ಣನವರು ಮಗನಾಗಿ ಪುಟ್ಟಿದುದು ಏನಾಶ್ಚರ್ಯ? ಆಶ್ಚರ್ಯವಿಲ್ಲ, ಆಶ್ಚರ್ಯವಿದೆ: ಅವನ ಪ್ರಸಾದದ ಪ್ರಭಾವದ ಬಗ್ಗೆ ಆಶ್ಚರ್ಯವಿಲ್ಲ; ಆದರೆ ಎಲ್ಲರನ್ನೂ ಉಳಿದು ಕಕ್ಕಯ್ಯನ ಪ್ರಸಾದವನ್ನೇ ಕೊಡಿಸಿದುದರಲ್ಲಿ ಆಶ್ಚರ್ಯವಿದೆ. ಇದು ಕಕ್ಕಯ್ಯನ ಘನೋಜ್ವಲ ವ್ಯಕ್ತಿತ್ವಕ್ಕೆ ಸಂದ ಗೌರವವಷ್ಟೇ ಅಲ್ಲ, ಬಸವತತ್ತ್ವದ ವಿಜಯ ವೈಜಯಂತಿ!

'ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ, ಶಿವಧೀಕ್ಷೆಯಾದ ಬಳಿಕ
ಸಾಕ್ಷಾತು ಶಿವನೆಂದು ವಂದಿಸಿ, ಪೂಜಿಸಿ, ಪಾದೋದಕ ಪ್ರಸಾದವ
ಕೊಂಬುದೆ ಯೋಗ್ಯ!
ಹೀಗಲ್ಲದೆ, ಉದಾಸೀನವ ಮಾಡಿ ಬಿಡುವವರಿಗೆ ಪಂಚಮಹಾಪಾತಕ,
ನರಕ ಕಾಣಾ, ಕೂಡಲಸಂಗಮದೇವಾ!'

ಎಂದು ಘೋಷಿಸಿದ್ದರು ಬಸವಣ್ಣನವರು. ಅವರ ಘೋಷಣೆಯೂ ಮುನ್ನಿನ ಶೋಷಕರ ಘೋಷಣೆ – 'ಸರ್ವೇಜನಾಃ ಸುಖಿನೋಭವಂತು' ಇತ್ಯಾದಿಗಳಂತೆ ಘೊಷಣೆಗಳು ಘೋಷಣೆಯಾಗಿಯೇ ಉಳಿದಿದ್ದರೆ, ಅವರ ಭಕ್ತನಾಗುತ್ತಿರಲಿಲ್ಲ ನಾನು. ಅನೇಕ ಸಲ ಉದಾರ ಘೋಷಣೆಗಳು ಶೋಷಣೆಗೆ ರಕ್ಷೆಯಾಗಿ, ಗೋಮುಖವ್ಯಾಘ್ರಗಳಾಗಿ, ಪಯೋಮುಖ ವಿಷಕುಂಭಗಳಾಗಿ ಪರಿಣಮಿಸಿರುವುದನ್ನು ನೋಡಿದ್ದೇವೆ. ಬಸವ ಚರಿತ್ರೆಯಲ್ಲಿ ಮಾತ್ರ ನುಡಿದಂತೆ ನಡೆಯಲ್ಲ ನಡೆಯೇ ನುಡಿಯಾಗಿರುವುದನ್ನು ನೋಡುತ್ತಿದ್ದೇವೆ. ಹಿಂದಿನವರು ಹೀನಕುಲದವರೆಂದು ಹೀನಾಯವಾಗಿ ಕಂಡಿದ್ದ ಜನರೇ, ದಾಸೀಪುತ್ರ ವೇಶ್ಯಾಪುತ್ರರೂ ಸಹ ಬಸವಭಕ್ತರಾಗುತ್ತಲೆ ಮುಟ್ಟಲು ಮಾತ್ರವಲ್ಲ, ಸಹಭೋಜನಕ್ಕೆ ಮಾತ್ರವಲ್ಲ, ಶರೀರಸಂಭದಕ್ಕೆ ಮಾತ್ರವಲ್ಲ ವಂದನೆಗೂ ಪೂಜೆಗೂ ಪಾತ್ರರಾಗುತ್ತಾರೆ; ಇಷ್ಟೇ ಅಲ್ಲ, ಅವರ ಪಾದೋದಕ ಪ್ರಸಾದಗಳನ್ನು ಪಡೆದುಕೊಳ್ಳುವುದೂ ಯೋಗ್ಯವಾಗುತ್ತದೆ ಬಸವಮತದಲ್ಲಿ! ಈ ತತ್ತ್ವದ ಜಯಭೇರಿ ಕಕ್ಕಯ್ಯನ ಚರಿತ್ರೆ!

ಶ್ವಪಚಯ್ಯನ ಚರಿತ್ರೆಯೂ ಈ ತತ್ತ್ವದ ಜಯಘೋಷದಂತಿದೆ. 'ಹಿರಿಯಯ್ಯ ಶ್ವಪಚಯ್ಯ, ಕಿಱಿಯಯ್ಯ ಡೋಹಾರ ಕಕ್ಕಯ್ಯ', ನೆಂದಿರುವುದರಿಂದ ಇವರು ವಯಸ್ಸಿನಿಂದಲೂ ಹಿರಿಯರಾಗಿರಬೇಕು; ಬಸವ ಪೂರ್ವಕಾಲದವರಿರಬೇಕು.

'ಅಪ್ಪನು ಡೋಹಾರ ಕಕ್ಕಯ್ಯನಾಗಿ, ಮುತ್ತಯ್ಯ ಚೆನ್ನಯ್ಯನಾದರೆ
ಆನು ಬದುಕೆನ?
ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ ಭಕ್ತಿಯ
ಸದ್ಗುಣವನಾನಱಿವೆನಯ್ಯಾ' (೩೪೨)

ಎಂಬ ವಚನದಲ್ಲಿ 'ಶ್ವಪಚಯ್ಯನ ಸನ್ನಿಧಿ' ಎಂಬ ಶಬ್ದಗಳು ಬಂದಿರುವುದು ಗಮನೀಯವಾದುದು. ಅಣ್ಣನವರುಶ್ವಪಚಯ್ಯನನ್ನು ನೋಡಿದ ಗೌರವದೃಷ್ಟಿ ಇವುಗಳಿಂದ ವ್ಯಕ್ತವಾಗುತ್ತದೆ. ಸಾಮವೇದಿಯಂಥ ಪಂಡಿತ ಪ್ರಕಾಂಡನ, ಯೋಗಸಿದ್ಧ ವಿಪ್ರವರ್ಯನ ಅಹಂಕಾರ ನಿರಸನಮಾಡಿ ಅವನಿಗೆ ಭಕ್ತಿ ಮಾರ್ಗವನ್ನು ಬೋಧಿಸಿದ ಶ್ವಪಚಯ್ಯನ ಬಗ್ಗೆ ಬಸವಣ್ಣನವರಿಗೆ ಅತ್ಯಂತ ಗೌರವಭಾವವಿರುವುದು ಸಹಜವೇ ಆಗಿದೆ. ಈಗ ಅಸ್ಪೃಶ್ಯನಾಗಿ ಜನಿಸಿ ಶರಣನಾದ ಇನ್ನೊಬ್ಬ ಅನುಭಾವಿ ಉರಿಲಿಂಗ ಪೆದ್ದಿಗಳು ಒಪ್ಪಿಕೊಂಡಿರುವುದನ್ನು ಆಲಿಸೋಣ.

'ಇಂತೀ ನವ ವಿಧ ಲಿಂಗವು ಬಸವಣ್ಣನೇ
ಇಂತಿವನೆಲ್ಲವನೊಳಗೊಂಡು ಎನ್ನ ಕರಸ್ಥಲಕ್ಕೆ ಬಂದು
ಎನಗೆ ಪ್ರಸಾದವನಿಕ್ಕಿ ಸಲಹಿದನಯ್ಯಾ ಬಸವಣ್ಣನು!
ಇದು ಕಾರಣ ಅನವರತ ನಾನು ಬಸವಾ, ಬಸವಾ,
ಬಸವಯ್ಯಾ ಬಸವ ಗುರುವೇ ಬಸವಲಿಂಗವೇ, ಬಸವ ತಂದೆಯೇ,
ಬಸವಪ್ರಭುವೇ ನಮೋ ನಮೋ ಎನುತಿರ್ದೆನಯ್ಯಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. (ಬ.ಸ್ತೋ.ವ.ಪು.೪೦).

ಇದು ಮೇದಾರ ಕೇತಯ್ಯನವರ ವಕ್ತವ್ಯ : 'ಎನ್ನ ಚಿತ್ರಕ್ಕೆ ಆಚಾರಲಿಂಗವಾದಾತ ಬಸವಣ್ಣ: ಎನ್ನ ಬುದ್ಧಿಗೆ ಗುರುಲಿಂಗವಾದಾತ ಬಸವಣ್ಣ : ಎನ್ನ ಅಹಂಕಾರಕ್ಕೆ ಶಿವಲಿಂಗವಾದಾತ ಬಸವಣ್ಣ; ಎನ್ನ ಮನಕ್ಕೆ ಜಂಗಮಲಿಂಗವಾದಾತ ಬಸವಣ್ಣ; ಎನ್ನ ಜ್ಞಾನಕ್ಕೆ ಪ್ರಸಾದಲಿಂಗವಾದಾತ ಬಸವಣ್ಣ; ಎನ್ನ ಭಾವಕ್ಕೆ ಮಹಾಲಿಂಗವಾದಾತ ಬಸವಣ್ಣ; ಎನ್ನ ಸ್ಥೂಲತನುವಿಂಗೆ ಇಷ್ಟಲಿಂಗವಾದಾತ ಬಸವಣ್ಣ; ಎನ್ನ ಸೂಕ್ಷ್ಮ ತನುವಿಂಗೆ ಪ್ರಾಣಲಿಂಗವಾದಾತ ಬಸವಣ್ಣ; ಎನ್ನ ಕಾರಣ ತನುವಿಂಗೆ ಭಾವಲಿಂಗ ವಾದಾತ ಬಸವಣ್ಣ. ಇಂತೆಂದರಿದೆನಾಗಿ ಗೌರೇಶ್ವರಲಿಂಗದಲ್ಲಿ ಸುಖಿಯಾದೆನು!....

ಇನ್ನೂ ಉದಾಹರಿಸಬಹುದಾಗಲಿ, ಕಾಲಾವಕಾಶ – ಕಾಲಾವಕಾಶರಾಹಿತ್ಯ ನಿರ್ಬಂಧಿಸುತ್ತಿದೆ. ಇದುವರೆಗೆ ಉದಾಹರಿಸಿದ ವಚನಗಳಿಂದಲೇ ಅಲ್ಪಾವಧಿಯಲ್ಲಿ ಎಂಥ ಅದ್ಭುತ ಕ್ರಾಂತಿಯಾಯಿತೆಂದು ವಿಸ್ಮಯವುಂಟಾಗುತ್ತದೆ; ಬಸವಣ್ಣನ ಮೂರ್ತಿಸ್ವರೂಪ ಮೇರು ಸದೃಶವಾಗಿ ಬೆಳೆದು ಭಸ್ಮಗಿರಿಯಂತೆ ಬೆಳಗುತ್ತದೆ. ಅವರ ಮುಟ್ಟಿ ಪಾವನಗೊಳಿಸುತ್ತಲೇ ಮುಗಿಲೆತ್ತರಕ್ಕೆ ಬೆಳೆದ ಕಕ್ಕಯ್ಯಾದಿ ಶರಣರ ಸಿದ್ಧಿಯ ಬಗ್ಗೆ ಸೋಜಿಗ ಪಡಬೇಕೋ, ಅವರಲ್ಲಿದ್ದ ಸಾಧ್ಯತೆಗಳನ್ನು ಲೀಲಾಜಾಲವಾಗಿ ಗುರುತಿಸಿ, ಅವರ ವಿಕಾಸ ಐಂದ್ರಜಾಲಿಕವಾಗಿ ಎಂಬಂತೆ ವಿದ್ಯುದ್ವೇಗದಿಂದ ನಡೆಯಲು ಅನುವು ಮಾಡಿಕೊಟ್ಟ ಬಸವಣ್ಣನವರ ಬಗ್ಗೆ ಬೆರಗಾಗಬೇಕೋ ತಿಳಿಯದಾಗುತ್ತದೆ.

'ಜಾತಿಭೇದವಿಲ್ಲ, ಸೂತಕವಿಲ್ಲ, ಅಜಾತಂಗೆ ಕುಲವಿಲ್ಲ', '೪೧೭) ತಂದೆಗಿಲ್ಲದ ಜಾತಿಶೂತಕ–ಕುಲಹೊಲೆಗಳು ಮಕ್ಕಳಿಗೇಕೆ? ಎಲ್ಲಿಂದ ಬಂದವು ಇವು? ಇವುಗಳಿಗಾವ ಬೆಲೆಯಿದೆ? ಕೇಳಿ, ಮನದಲ್ಲೆ ತಾಳಿ :

> 'ನೆಲನೊಂದೆ ಹೊಲೆಗೇರಿ–ಶಿವಾಲಯಕ್ಕೆ;
> ಜಲವೊಂದೆ ಶೌಚ ಮಜ್ಜನಕ್ಕೆ:
> ಕುಲವೊಂದೆ ತನ್ನ ತಾನಱಿದವಂಗೆ:
> ಫಲವೊಂದೆ ಷಟ್ ದರುಶನ ಮುಕ್ತಿಗೆ:
> ನಿಲವೊಂದೇ ಕೂಡಲಸಂಗಮದೇವಾ, ನಿಮ್ಮನಱಿದವಂಗೆ' (೮೭೮)

'ಕುಲವನರಸುವರೆ ಭಕ್ತರಲ್ಲಿ ಜಾತಿಸಂಕರವಾದ ಬಳಿಕ?....' (೭೧೭) ವರ್ಣಸಂಕರ, ಜಾತಿಸಂಕರ ಇವುಗಳಿಗೆ ಜೋತುಬಿದ್ದವರಿಗೆ ಪಾಪವೆನಿಸಬಹುದು; ಬಸವಣ್ಣನ ಕಣ್ಣಿನಲ್ಲಿ ಅದು ಪುಣ್ಯ, ಯಾಕೆ? ಇವುಗಳ ಮೂಲ ವೈಚಾರಿಕತೆಯಲ್ಲಿ ಇಲ್ಲ. ಮೇಲರಿಮೆ, ಸುಲಿಗೆಯ ಆಸೆ, ಅಷ್ಟಮದಗಳಲ್ಲಿ ಇದೆ. 'ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರವಿಲ್ಲ'ವೆಂಬುದು ಯಾರಿಗೆ ಗೊತ್ತಿಲ್ಲ? 'ಜಲಬಿಂದುವಿನ ವ್ಯವಹಾರವೊಂದೇ, ಆಶೆಯಾಮಿಷ ಹರುಷ ವಿಷಯಾದಿಗಳೆಲ್ಲಾ ಒಂದೇ' ಎಂಬುದು ಯಾರಿಗೆ ಗೊತ್ತಿಲ್ಲ? ಎಲ್ಲರೂ ಇವನ್ನು ಓದಿ ತಿಳಿದಿದ್ದಾರೆ, ಕೇಳಿ ತಿಳಿದಿದ್ದಾರೆ. ಆದರೆ 'ಏನನೋದಿ, ಏನ ಕೇಳಿ ಏನು ಫಲ?' 'ಕುಲ–ಹೊಲೆ' ಎನ್ನುವ ಛಲ ಬಿಡಲಿಲ್ಲ. ಆಗಲೆ, 'ಕುಲಜನೆಂಬುದಕ್ಕಾವುದು ದೃಷ್ಟ? ಸಪ್ತಧಾತು ಸಮಂ ಪಿಂಡಂ! ಸಮಯೋನಿ ಸಮುದ್ಭವಂ'.

'ಆತ್ಮ ಜೀವಸಮಾಯುಕ್ತಂ, ವರ್ಣಾನಾಂ ಕಿಂ ಪ್ರಯೋಜನಂ?' ಹೌದು, ವರ್ಣಾನಾಂ ಕಿಂ ಪ್ರಯೋಜನಂ? ಎಂಟು ಶತಮಾನಗಳಿಂದ ಕೇಳಿದವರ ಕಿವಿಗಳಲ್ಲಿ ನಿನದಿಸುತ್ತಲಿದೆ ಈ ಪ್ರಶ್ನೆ. ಯಾರೇನು ಉತ್ತರ ಕೊಡುವರಿದಕ್ಕೆ? ಗುಣಕರ್ಮ ಗಳಿಗನುಗುಣವಾಗಿ

ವರ್ಣವ್ಯವಸ್ಥೆಯೆಂಬ ಭಗವದ್ಗೀತೆಯ ಉಕ್ತಿಯನ್ನು ಉದಾಹರಿಸುವಿರೇನು? ಅ.ನ. ಕೃಷ್ಣರಾಯರೆನ್ನುವುದನ್ನುಕೇಳಿ : 'ಭಗವಾನ್ ಶ್ರೀ ಕೃಷ್ಣನೇ ಗುಣಕರ್ಮಗಳಿಂದ ಜಾತಿ ನಿರ್ಣಯವಾಗಬೇಕೇ ವಿನಾ ಹುಟ್ಟಿನಿಂದಲ್ಲ ಎಂದು ಸಾರಿದ್ದ. ಆದರವನ ಮಾತು ಗ್ರಂಥದ ಗ್ರಂಥಿಯಾಗಿಯೇ ಉಳಿಯಿತು!.... (ಬಸವಣ್ಣನವರ ಅಮೃತವಾಣಿ, ಪು.೫೯) ಅಲ್ಲಿಂದೀಚೆಗೆ ಎಷ್ಟು ಮಂದಿ ಬ್ರಾಹ್ಮಣರನ್ನು ಅವರ ಗುಣಕರ್ಮಗಳು ಕನಿಷ್ಟವಾಗಿವೆಯೆಂದು ಶೂದ್ರವರ್ಣಕ್ಕೆ ಸೇರಿಸಲಾಗಿದೆ? ಎಷ್ಟು ಮಂದಿ ಶೂದ್ರರನ್ನು ಅವರ ಗುಣಕರ್ಮಗಳು ಶ್ರೇಷ್ಠವಾಗಿವೆಯೆಂದು ಬ್ರಾಹ್ಮಣವರ್ಣಕ್ಕೆ ಸೇರಿಸಲಾಗಿದೆ? ಈ ಗುಣಕರ್ಮಗಳ ನಿರ್ಣಯ ಮಾಡುವವರು ಯಾರು? ಈ ವ್ಯವಸ್ಥೆ ವ್ಯವಹಾರ್ಯವೆನಿಸಿದ್ದರೆ ನಾಲ್ಕು ವರ್ಗಗಳು ಒಡೆದು ನಾಲ್ಕು ಸಾವಿರ ಜಾತಿ–ಕುಲಗಳೇಕೆ ಹುಟ್ಟಿಕೊಂಡಿವೆ ಈ ಹಿಂದೂ ಸಮಾಜದಲ್ಲಿ? ಗುಣಗಳಲ್ಲಿ ಶ್ರೇಷ್ಠ ಕನಿಷ್ಠ ಇವೆಯೆಂದೊಪ್ಪಬಹುದಾದರೂ ಕರ್ಮದಲ್ಲಿಯೂ ಉಚ್ಚ ನೀಚಗಳೆಂಬ ವರ್ಗೀಕರಣ ಮಾಡಿಬಿಟ್ಟಿರಲ್ಲ! ಕನಿಷ್ಠ ಕರ್ಮಮಾಡುವವನು ಎಷ್ಟೇ ಗುಣಿಯಾಗಿದ್ದರೂ ಗುಣಕರ್ಮಗಳ ಮಾನದಂಡವನ್ನನುಸರಿಸಿ ಉಚ್ಚವರ್ಣದವನಾಗುವುದು ಹೇಗೆ ಸಾಧ್ಯ? ಜನ್ಮದಿಂದ ಮೇಲುಕೀಳು ಜಾತಿಗಳೆಂದುದು ಸಾಕಾಗದೆ, ಕರ್ಮದಲ್ಲಿಯೂ ಮೇಲು ಕೀಳಿನ ಕಾಳಕೂಟ ಬೆರೆಸಿ ಬಿಟ್ಟರಲ್ಲಿ! ಎಲ್ಲ ಕೆಲಸಗಳೂ ಜೀವನಕ್ಕೆ ಅಗತ್ಯವಾದುವುಗಳೇ, ಅವುಗಳಲ್ಲಿ ಯಾವುದೊಂದು ನಿಂತರೂ ಎಲ್ಲರಿಗೂ ಪೆಟ್ಟುತಗಲುತ್ತದೆ. ಕಾಸಿ ಕಮ್ಮಾರನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ. 'ಇವುಗಳಲ್ಲಿ ಯಾವುದು ನಿಂತರೆ ನಡೆಯುತ್ತದೆ ಇಲ್ಲಿ? ಎಲ್ಲವೂ ಜೀವನೋಪಯೋಗಿಯಾಗಿರುವಾಗ ಇವುಗಳನ್ನು ನಮಗಾಗಿ ಮಾಡುವವರು ಕೀಳರೆ? 'ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?' (೫೯೧)

'ವರ್ಣಾನಾಂ ಕಿಂ ಪ್ರಯೋಜನಂ?' 'ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ' ಒಂದೇ ವಚನದಲ್ಲಿ ಈ ಎರಡು ಮೂಲಭೂತ ಪ್ರಶ್ನೆಗಳನ್ನೆತ್ತಿ ಅಂದಿನ ವಿಷಮಸಮಾಜರಚನೆಯ ಮೂಲವವನೇ ಅಲುಗಿಸಿದ್ದಾರೆ ಬಸವಣ್ಣನವರು – 'ನೀ ಮುಂತಾಗಿ ಬಂದ ಭಕ್ತರ ನೀಯೆನ್ನದಿದ್ದರೆ ಅದೇ ದ್ರೋಹ!' (೭೧೮)ವೆಂದು ಉಗ್ಘಡಿಸಿದ್ದ ಬಸವಣ್ಣನವರು; 'ಆವಕುಲದವನಾದರೇನು? ಶಿವಲಿಂಗವಿದ್ದವನೆ ಕುಲಜನು; ಶಿವೇಜಾತಕುಲೇಧರ್ಮಃ ಪೂರ್ವಜನ್ಮ ವಿವರ್ಜಿತಃ। ಉಮಾ ಮಾತ ಪಿತಾ ರುದ್ರೋ! ಈಶ್ವರಃ ಕುಲಮೇವಚ!' ಎಂದುದಾಗಿ, ಒಕ್ಕುದ ಕೊಂಬೆನಿವರಲ್ಲಿ, ಕೂಸ ಕೊಡುವೆ, ಕೂಡಲಸಂಗಮದೇವಾ, ನಂಬುವೆ ನಿಮ್ಮ ಶರಣರನು (೭೧೭) ಎಂದು ಉದ್ಘೋಷಿಸಿದ್ದ ಬಸವಣ್ಣನವರು! 'ಹೊಲೆ' ಇದೆಯೆಂದು, 'ಕುಲ' ಇದೆಯೆಂದು ವಾದಕ್ಕಾಗಿ ಒಪ್ಪಿಕೊಳ್ಳೋಣ. ಆದರೆ, 'ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ? ಅಪವಿತ್ರ ನುಡಿಯ ನುಡಿವ ಸೂತಕವೇ ಪಾತಕ; (೭೬೯) 'ಅವರು ಪ್ರಾಣಿಗಳನ್ನು ತಿನ್ನುತ್ತಾರೆ. ಆದುದರಿಂದ ಹೊಲೆಯರು,' ಎಂದು ವಾದಿಸುವಿರೇನು? 'ಹೊಲೆಯೊಳಗೆ ಹುಟ್ಟಿ ಕುಲವನರಸುವ, ಎಲವೋ, ಮಾತಂಗಿಯ ಮಗ ನೀನು! ಸತ್ತುದನೆಳೆವನೆತ್ತಣದೊಲೆಯ? ಹೊತ್ತು ತಂದು ನೀವು

ಕೊಲುವಿರಿ: ಹಸಿವೆ ಹಿಂಗಿಸಲು ಸತ್ತ ಪ್ರಾಣಿಗಳ ಮಾಂಸ ತಿನ್ನುವವನು ಹೊಲೆಯನೋ ಬಾಯಿರುಚಿಗಾಗಿ, ಜಿಹ್ವಾ ಚಾಪಲ್ಯಕ್ಕಾಗಿ ಜೀವಂತ ಪ್ರಾಣಿಗಳನ್ನು ಕೊಂದುತಿನ್ನುವವನು ಹೊಲೆಯನೋ? ಇಲ್ಲಿದೆ ಹೊಲೆಯ ಮಾದಿಗರ ವೈಚಾರಿಕ ವ್ಯಾಖ್ಯೆ : ಕುಲಜ ಕುಲಹೀನರ ಮನೋಜ್ಞಮೀಮಾಂಸೆ:

'ಕೊಲುವನೇ ಮಾದಿಗ, ಹೊಲಸ ತಿಂಬವನೇ ಹೊಲೆಯ;
ಕುಲವೇನೋ ಆವಂದಿರ ಕುಲವೇನೊ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ
ಕೂಡಲಸಂಗನ ಶರಣರೇ ಕುಲಜರು!' (೫೯)

ಕೊಲ್ಲುವುದೆಂದರೆ ಬರಿ ದೈಹಿಕವಾಗಿ ಕೊಲ್ಲುವುದಲ್ಲ – ಅಳಲಿಸಿ, ಬಳಲಿಸಿ, ಸೊರಗಿಸಿ, ಸಾಯಿಸುವುದೂ ಕೊಲ್ಲುವುದೇ; ಯಾವುದೊಂದು ಕುಲದಲ್ಲಿ ಹುಟ್ಟಿದ ತಪ್ಪಿಗಾಗಿ ಆಯುಷ್ಯವೆಲ್ಲ ಅವರ ಅವಹೇಳನ ಮಾಡುವುದೂ, ಮಾನಹೀನರಗಿ ಅವರು ಬದುಕುವಂತೆ ಮಾಡುವುದೂ ಕೊಲ್ಲುವುದೇ; ಹಿಡಿ ಹಣವನ್ನು ಸಾಲವಾಗಿ ಕೊಟ್ಟು ಅದರ ಬಡ್ಡಿಯಲ್ಲಿ ಅವನನ್ನೂ ಅವನ ಮಕ್ಕಳನ್ನೂ ಮೊಮ್ಮಕ್ಕಳನ್ನೂ ಬಿಟ್ಟಿ ದುಡಿಸಿಕೊಳ್ಳುವುದೂ ಕೊಲ್ಲುವುದೇ; ಈ ರೀತಿ ಕೊಲ್ಲುವ ಎಲ್ಲರೂ ಮಾದಿಗರೇ; ಹೊಲಸೆಂದರೆ ಸತ್ತ ಪ್ರಾಣಿಗಳ ಮಾಂಸ ಮಾತ್ರವಲ್ಲ, ದುಡಿಯದೆ ಹೊಡೆವ ಮೃಷ್ಟಾನ್ನವೂ ಹೊಲಸೆ; ಅನ್ಯರ ದುಡಿಮೆಯ ಫಲವನ್ನು ದೋಚಿ ತಿನ್ನುವುದೂ ಹೊಲಸೇ; ಇಂಥ ಹೊಲಸು ತಿನ್ನುವವರೆಲ್ಲರೂ ಹೊಲೆಯರು. ತದ್ವಿರುದ್ಧವಾಗಿ, ತಾವು ದುಡಿಯುವುದಲ್ಲದೆ, ಸಕಲ ಜೀವಾತ್ಮರಿಗೆ ಲೇಸ ಬಯಸುವವರೆಲ್ಲ ಕುಲಜರು, ಶರಣರು:

ಈ ವ್ಯಾಖ್ಯೆ ಅತ್ಯಾಧುನಿಕವಾಯಿತು. ಇದಕ್ಕೆ ಪರಂಪರೆಯ ಬೆಂಬಲವಿದ್ದಿದ್ದರೆ ಚೆನ್ನಾಗಿದ್ದಿತು – ಎಂಬಿರೇನು? ಹಾಗಾದರೆ ಕೇಳಿ :

'ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ,
ಮಂಡೋದರಿ ಕಪ್ಪೆಯ ಮಗಳು!
ಕುಲವನರಸದಿರಿಂ ಭೋ, ಕುಲದಿಂದ ಮುನ್ನೇನಾದಿರಿಂ ಭೋ?
ಸಾಕ್ಷಾತ್ ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ,
ಕಶ್ಯಪ ಕಮ್ಮಾರ, ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆ
ನಾವಿದ, ಕಾಣಿಂ ಭೋ ನಮ್ಮ ಕೂಡಲಸಂಗನ ವಚನವಿಂತೆಂದುದು:
'ಶ್ವಪಚೋಪಿಯಾದರೇನು, ಶಿವಭಕ್ತನೇ ಕುಲಜನು' (೫೦)

ಗೋತ್ರಕರ್ತರೆ ಇಂತಿರುವಾಗ ಅವರ ಗೋತ್ರದವರೆಂದು ಹೇಳಿಕೊಂಡು ಉತ್ತಮ ಕುಲದವರೆಂಬ ಹಮ್ಮು ಬಿಮ್ಮು ತೋರುವುದು ಹಾಸ್ಯಾಸ್ಪದವಲ್ಲವೇ? ಈ ದೇಶದಲ್ಲಿ ಯಾವಲ್ಲಿಗೇ ಹೋಗಲಿ – 'ನಿಮ್ಮ' ಗೋತ್ರವಾವುದು? ನಿಮ್ಮ ಕುಲವಾವುದು? ನಿಮ್ಮ ಭಾಷೆ ಯಾವುದು? ಎಂದು ಕೇಳಿ ಅವರ ಬೆಲೆ ಕಟ್ಟುವವರೇ; ಮಾನವರನ್ನು ಮಾನವರನ್ನಾಗಿ ಕಾಣುವುದು ದೂರದಲ್ಲಿಯೇ ಉಳಿಯಿತು. ಕನಿಷ್ಠ ಒಂದೇ ಧರ್ಮಕ್ಕೆ ಸೇರಿದವರನ್ನಾದರೂ ಒಂದೇ ಎಂದು ಕಾಣುವ ಬುದ್ಧಿ ಬರಬಾರದೆ? ಎಲ್ಲರೂ ಒಂದಿಲ್ಲೊಂದು ಗೋತ್ರಕ್ಕೆ ಸೇರಲೇಬೇಕು? ಉತ್ತರದ ಕ್ಷೇತ್ರಗಳಿಗೆ ಹೋಗಿ; ಅಲ್ಲಿಯ ಪುರೋಹಿತಶಹಿಯ ವಹಿಗಳಲ್ಲಿ ಬರೆದಿದೆ ಎಲ್ಲರ ಗೋತ್ರ ಸೂತ್ರಗಳ ಸಮಾಚಾರ! ತಮ್ಮ ಗೋತ್ರ ಸೂತ್ರಫಳಾವುವೆಂಬುದು ತಿಳಿಯದೆ ಕಳವಳಕ್ಕೊಳಗಾಗಿದ್ದ ಅನಾಥರಾರೋ ಬಸವಣ್ಣನವರ ಕಣ್ಣಿಗೆ ಕಂಡಿರಬೇಕು, ಅವರ ಸಾಂತ್ವನಕ್ಕಾಗಿ ನುಡಿದಂತಿದೆ ಈ ವಚನ :

'ಗೋತ್ರ ನಾಮವ ಬೆಸಗೊಂಡರೆ
ಮಾತುನೊಂಕದೆ ಸುಮ್ಮನಿದ್ದಿರಿದೇನಯ್ಯಾ?
ತಲೆಯಕುತ್ತಿನೆಲನ ಬರೆಯುತ್ತಿದ್ದಿರಿದೇನಯ್ಯಾ?
ಗೋತ್ರ ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯನೆಂಬುದು
ಕೂಡಲಸಂಗಮದೇವಾ;.... (೭೪೪)

ಹೇಗಿದ್ದಾರೆ ಈ ಹೊಸ ಗೋತ್ರಕರ್ತರು? 'ನಭೂತೋನ ಭವಿಷ್ಯತಿ' ಎಂಬಂತೆ ಇದ್ದಾರೆ; ಬಸವಣ್ಣನವರು ರೂಪಿಸಿದ ಹೊಸ ಸಮಾಜಕ್ಕೆ ಇವರುಗೋತ್ರ ಕರ್ತರಾದುದೇ ಅದರ ಹಿರಿಮೆ, ಹೆಗ್ಗಳಿಕೆ, ಉಳಿದವರಿಗೆ ಮಾತ್ರ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯರ ಹೆಸರು ಹೇಳಹಚ್ಚಿ ತಾವು ಮಾತ್ರ ಮಾದರಸ ಮಾದಲಾಂಬಿಕೆಯರ ಮಗನೆನಿಸಿಕೊಂಡು ಮುಂದುವರಿದರೇನು ಬಸವಣ್ಣನವರು? ಇಲ್ಲ. ತಮ್ಮ ಈ ತಂದೆ ತಾಯಿಗಳ ಹೆಸರುಗಳನ್ನು ಅವರೆಲ್ಲಿಯೂ ಹೇಳಿಕೊಂಡಿಲ್ಲ. ಯಾರ ಹೆಸರುಗಳನ್ನು ಹೇಳಿದ್ದಾರೆ ಹಾಗಾದರೆ? 'ಅಪ್ಪನು ನಮ್ಮ ಮಾದರ ಚೆನ್ನಯ್ಯ; ಬೊಪ್ಪನು ನಮ್ಮ ಡೋಹರ ಕಕ್ಕಯ್ಯ; ಚಿಕ್ಕಯ್ಯನೆಮ್ಮಯ್ಯ ಕಾಣಯ್ಯಾ!' (೩೪೮) 'ಚೆನ್ನಯ್ಯನೆಮ್ಮಯ್ಯನು; ಚೆನ್ನಯ್ಯನ ಮಗನಾನು'. (೩೪೬) 'ಎಮ್ಮ ತಾಯಿ ನಿಂಬವ್ವೆ; ನೀರನೆರೆದುಂಬಳು; ಎಮ್ಮಯ್ಯ ಚೆನ್ನಯ್ಯ; ರಾಯ ಕಂಪಣವ ಹೊರುವ; ಎಮಗಾರೂ ಇಲ್ಲವೆಂದೆಂಬಿರಿ – ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು' (೩೫೧) 'ಕಕ್ಕಯ್ಯ ಹಿರಿಯಯ್ಯ ಚಿಕ್ಕಯ್ಯ ಚೆನ್ನಯ್ಯ ಎತ್ತಿ ಮುದ್ದಾಡಿ ಸಲಹಿದರೆನ್ನ;' (೩೫೨) 'ಅಯ್ಯಾ, ನಿಮ್ಮ ವಂಶಾವಳಿಯಲು ಒಬ್ಬ ತೊತ್ತಿನ ಮಗ ಹುಟ್ಟಿದ. ಆತನ ತೊತ್ತಿನ ಮಗ ನಾನಯ್ಯಾ; ಬಳಿದೊತ್ತು, ಬಳಗದೊತ್ತು, ವಂಸದೊತ್ತು ನಾನಯ್ಯಾ!' (೩೫೩)

ಇಷ್ಟೆಲ್ಲ ಹೇಳಿಯೂ ತೃಪ್ತರಾಗಲಿಲ್ಲ ಬಸವಣ್ಣನವರು. ಅಂದಿನ ಸಮಾಜದಲ್ಲಿ ಯಾರನ್ನು ಕೀಳರಿಗಿಂತ ಕೀಳರೆಂದು, ಕನಿಷ್ಠರಿಗಿಂತ ಕನಿಷ್ಠರೆಂದು ಕರೆದಿದ್ದರೋ ಅವರೊಡನೆ ತಮ್ಮನ್ನು ಸರಿಗಟ್ಟಿಕೊಳ್ಳಲು, ಸಮೀಕರಿಸಿಕೊಳ್ಳಲು (Equate) ಆತುರರಾಗಿದ್ದರು, ಕಾತರರಾಗಿದ್ದರು ಬಸವಣ್ಣನವರು, ಈ ಆತುರ ಕಾತರಗಳೇ ಪ್ರಪಂಚದ ಪ್ರವಾದಿಗಳ ಪೇರ್ನುಡಿಗಳಲ್ಲಿಯೇ ಪ್ರತಿಯಿಲ್ಲದ ಈ ವಚನ ವಜ್ರವಾಗಿ ಹೊರಬಿದ್ದಿವೆ:

'ಚೆನ್ನಯ್ಯನ ಮನೆಯ ದಾಸಿಯ ಮಗನು,
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲಿ ಬೆರಣಿಗೆ ಹೋಗಿ ಸಂಗವ ಮಾಡಿದರು,
ಇವರಿಬ್ಬರಿಗೆ ಹುಟ್ಟಿದ ಮಗ ನಾನು,
ಕೂಡಲಸಂಗಮದೇವನ ಸಾಕ್ಷಿಯಾಗಿ,' (೩೪೫)

ಇದನ್ನು ಕೇಳಿದ ಮೇಲೆಯೂ ಕೀಳರಿಮೆ ಉಳಿಯಬಲ್ಲುದೆ ಕೀಳರೆಂದೆನಿಸಿ–ಕೊಂಡಿದ್ದವರಲ್ಲಿ, ಕಡುಬಡವರಲ್ಲಿ, ಕಾಲಡಿಗೆ ಸಿಕ್ಕವರಲ್ಲಿ? ಎತ್ತರದ ಮೇಲೆ ಕುಳಿತು ಕೆಳಗಿನವರಿಗೆ ಮೇಲೇರಿ ಬನ್ನಿರೆಂಬ ಬರಡು ಬೋಧೆಗೈಯುವುದಕ್ಕಿಂತ ಅವರ ತಲಕ್ಕೆ (level) ತಾವೇ ಇಳಿದು ಅವರ ಕೈ ಹಿಡಿದು ಮೇಲೆತ್ತುವ ರೀತಿ ಬಸವಣ್ಣನವರದು. 'ಬಸವನ ರೀತಿ ರೀತಿ, ಬಟ್ಟೆ ಬಟ್ಟೆ;' ಆದುದರಿಂದಲೇ ಅವರ ಕಾರ್ಯಕ್ಷೇತ್ರ ಅರಮನೆ ಗುರುಮನೆಗಳೊಡನೆ ಕೊಳೆಗೇರಿಗಳ ಕುಟೀರಗಳನ್ನೂ ಆವರಿಸಿತು. ಇಲ್ಲದಿದ್ದರೆ ಅವರ ಈ ಪಣ ಒಣ ಮಾತಾಗಿ ಉಳಿಯುತ್ತಿತ್ತು:

'ದೇವ, ದೇವಾ, ಬಿನ್ನಪವನವಧಾರು;
ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರಾದವರನೆಲ್ಲರನೊಂದೇ ಎಂಬೆ;
ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೊಂದೇ ಎಂಬೆ;
ಹೀಗೆಂದು ನಂಬುವುದೆನ್ನ ಮನವು,
ಹೀಗೆಂದು ನುಡಿಯುವುದೆನ್ನ ಮನವು;
ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳರೆ,
ಹುಲುದೊಱೆ ಮೂಗ ಕೊಯಿ, ಕೂಡಲಸಂಗಮದೇವಾ;' (೭೧೦)

ಭಕ್ತರಾರು? 'ಭಾವಶುದ್ಧವಿಲ್ಲದವರಿಗೆಭಕ್ತ ನೆಲೆಗೊಳ್ಳದು' (೬೫೮) ಆದುದರಿಂದ ಭಾವಶುದ್ಧವಾದವ ಭಕ್ತ, ಭವಿಯಾರು? ಭಾವಶುದ್ಧವಿಲ್ಲದವರು. 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲ ಒಂದು ಕುಲ; 'ಹಾರುವ ಮೊದಲು ಶ್ವ ಪಚಕಡೆಯಾಗಿ

ಭವಿಯಾದವರು ಇನ್ನೊಂದು ಕುಲ. ಈ ಎರಡೇ ಕುಲಗಳು ಮನುಕುಲದಲ್ಲಿ– ಬಸವಣ್ಣನವರ ದೃಷ್ಟಿಯಲ್ಲಿ. ಈ ವರ್ಗೀಕರಣ ಕೇವಲ ತಾರ್ಕಿಕವಾದುದಲ್ಲ, ಹಾರ್ದಿಕವಾದುದು. 'ಹೀಗೆಂದು ನಂಬುವುದೆನ್ನ ಮನವು'! 'ನಂಬಿದುದು ಉಂಬಲ್ಲಿ, ಉಡುವಲ್ಲಿ, ಕೊಂಬಲ್ಲಿ, ಕೊಡುವಲ್ಲಿ ಕಾರ್ಯರೂಪಕ್ಕೆ ಬರಬೇಕು. ಹೀಗಲ್ಲದೆ, 'ಉಂಬಲ್ಲಿ ಉಡುವಲ್ಲಿ ಕ್ರಿಯಳಿಯಿತೆಂದರೆ, 'ಕೊಂಬಲ್ಲಿ ಕೊಡುವಲ್ಲಿ ಕುಲವನರಸಿ'ದರೆ, 'ಎಂತಯ್ಯ ಅವರ ಭಕ್ತರೆಂಬೆ?' (೬೨೯) 'ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸಿ'ದರೆ, 'ಎಂತಯ್ಯ ಅವರ ಭಕ್ತರೆಂಬೆ?' (೬೨೯) 'ಪಟ್ಟವ ಕಟ್ಟಿದ ಬಳಿಕ ಲಕ್ಷಣವನಱಸುವರೆ? ಲಿಂಗದೇವನ ಪೂಜಿಸಿ ಕುಲವನರಸುವರೆ?' (೧೩೮) ಲಿಂಗವ ಪೂಜಿಸಿಯೂ ಕುಲ ಉಳಿದರೆ ಅದೆಂಥಲಿಂಗ, ಅದೆಂಥಲಿಂಗಪೂಜೆ? 'ಹಿಂದಣ ಜನ್ಮದ ಚಿಹ್ನಬಿಡದನ್ನಕ್ಕ ನಿಮ್ಮುವ ಪೂಜಿಸಿ ಏವೆನಯ್ಯಾ?' (೨೬೧) 'ಕಬ್ಬುನ ಪರುಷವೇದಿಯಾದರೇನು ಕಬ್ಬುನ ಹೋಗದಡಾ ಪರುಷವದೇಕೋ? ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೋ ಕೂಡಲಸಂಗಮದೇವರ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೋ?' (೮೦೦) ಲಿಂಗ ಪೂಜಿಸುತ್ತಲೆ ಕೀಳ್ಮೆ ಕರಗಿ ಮೇಲ್ಮೆ ಬರಲೇಬೇಕು. 'ಎಂತಹನಾದರೇನು ಲಿಂಗ ಮುಟ್ಟದವನೇ ಕೀಳು ಜಾತಿ. ಕುಲವಹುದು ತಪ್ಪದು ಲಿಂಗ ಮುಟ್ಟಲೊಡನೆ ಹೊನ್ನಹುದು ತಪ್ಪದು ಪರುಷಮುಟ್ಟಲೊಡನೆ ಕೂಡಲಸಂಗಮದೇವನೊಲ್ಲ ಸರ್ವಸಂದೇಹಿಗಳ.' (೧೪೨) ಇನ್ನೂ ಸಂದೇಹ ಹರಿಯದೇ? ಲಿಂಗಪೂಜೆಗೆ ಶರಣಸಂಗಕೂಡಿದರೆ ಸಾಧ್ಯವಾಗದುದೂ ಉಂಟೆ? ಕೇಳಿ:

ಆರಾರ ಸಂಗವೇನೇನ ಮಾಡದಯ್ಯಾ?
ಕೀಡಿ ಕುಂಡಲಿಗನಾಗದೆ ಅಯ್ಯಾ?
ಚಂದನದ ಸನ್ನಿಧಿಯಲಿ ಪರಿಮಳತಾಗಿ
ಬೇವು ಬೊಬ್ಬುಳಿ ತಱಿಯ ಗಂಧಂಗಳಾಗವೆ?
ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ
ಕರ್ಮ ನಿರ್ಮಳವಾಗದಿಹುದೆ?....(೧೪೧)

ಕೀಡಿ ಕುಂಡಲಿಗನಾಗುತ್ತದೆ; ಅಮೀಬಾ ಅರಿವಿನ ಪ್ರಾಣಿಯಾಗುತ್ತದೆ; ಮಾನವನೇ ಮಾನವನಾಗಲಾರನೆ?' ಬ್ರಹ್ಮಂಗೆ ವಾಕ್ ಪುರುಷ, ನಮ್ಮ ವಿಷ್ಣುವಿಗೆ ನಯನಪುರುಷ, ರುದ್ರಂಗೆ ಹಸ್ತಪರುಷ, ಕೂಡಲಸಂಗನ ಶರಣರಿಗೆ ಪಾದವೇ ಪರುಷ; (೮೭೫) ಈ ಪರುಷಕ್ಕೆ ಸೋಂಕಿದ ಅವಲೋಹ ಹೊನ್ನಾಗಿಯೇ ತೀರುತ್ತದೆ. ಎಲೆ ಮಾನವಾ, ಕೇಳಿ ನಂಬಯ್ಯ, ನೋಡಿ ನಂಬಯ್ಯಾ ಎಲೆ ಮಾನವಾ!

'ತ್ವಚ್ಚಿಂತಯಾ ಮಹಾದೇವ, ತ್ವಯ್ಯೇವಾಸ್ಮಿನ ಸಂಶಯಃ
ಭ್ರಮದ್ಭ್ರಮರ ಚಿಂತಾಯಾಂ ಕೀಟೋಪಿ ಭ್ರಮರಾಯತೇ" :

ಕೂಡಲಸಂಗನ ಶರಣರ ಅನುಭವ ಇದರಿಂದ ಕಿಱುಕುಳವೆ, ಎಲೆ
ಮಾನವಾ? (ಬ.ಹೆ.ವ.೧೧೯)

ಉತ್ತರ ಕೊಡು ಎಲೆ ಮಾನವಾ – ಶರಣರ ಅನುಭವ ಕುಂಡಲಿಗನ ಶಕ್ತಿಗಿಂತ ಕಿರುಕುಳವೆ? ಕುಂಡಲನಿಯ ಶಕ್ತಿಕುಂಡಲಿಗನ ಶಕ್ತಿಗಿಂತ ಕಿರುಕುಳವೆ? ಮಾನವನನ್ನು ಮಾನವನನ್ನಾಗಿ ಮಾಡಲಾಗದಷ್ಟು ಕಿರುಕುಳವೆ? ಇದಕ್ಕೂ ಪರಂಪರೆಯ ಪುಷ್ಟೀಕರಣಬೇಕೇನು? ಸ್ಪಷ್ಟೀಕರಣ ಸಿದ್ಧವಿದೆ :

'ಸಂಕಲ್ಪ – ವಿಕಲ್ಪದ ಉದಯಾಸ್ತಮಾನಗಳಿಗೆ ದೂರವಾದ ಶಿವಶರಣರು
ಅಕುಲಜರೆಂದು ಗಳಹುತಿಪ್ಪರು ನೋಡಾ, ಈ ಮರುಳ ವಿಪ್ರರು;
ತಾವು ಮಾತಂಗಿಯ ಗರ್ಭಸಂಭವ ಜೇಷ್ಠಪುತ್ರರೆಂಬುದನಱಿಯದೆ
ನಮ್ಮ ಶಿವಭಕ್ತರನು ಅಂತಹಕುಲ ಇಂತಹ ಕುಲದವರೆಂದು
ನಿಂದಿಸಿ ನುಡಿವ... ನೀವು ಕೇಳಿ, ಭೋ;

ಅದೆಂತೆಂದೊಡೆ :

ಶ್ರೀನಾಥಪುರುಷಃ ಷಂಡಃ। ಚಂಡಾಲೋ ದ್ವಿಜವಂಶಜಃ ॥
ನ ಜಾತಿಭೇದೋ ಲಿಂಗಾರ್ಚನೆ । ಸರ್ವೇರುದ್ರಗಣಾಃಸ್ಮೃತಾಃ ॥
ಇಂತೇಂಬ ಪುರಾಣ ವಾಕ್ಯಗಳನಱಿಯಾ.
ನಮ್ಮ ಶಿವಭಕ್ತರನು ಹೊಲೆಯ, ಮಾದಿಗ, ಕಮ್ಮಾರ, ಕಂಚುಗಾರ,
ಅಕ್ಕಸಾಲೆ, ಕುಂಬಾರ,
ಅಗಸ, ನಾವಿಂದ, ಜೋಡು ಬೇಡನೆಂದು ನುಡಿವುತ್ತಿಪ್ಪಿರಿ.
ನಿಮ್ಮ ಉತ್ತಮ ಸತ್ಕುಲಂಗಳ ನಾವು ಎತ್ತಿ ನುಡಿಯಬಹುದೆ.
ಮಾರ್ಕಂಡೇಯ ಮಾದಿಗನೆಂದು, ಸಾಂಖ್ಯ ಸೌಪಚನೆಂದು, ಕಶ್ಯಪ –
ಕಮ್ಮಾರನೆಂದು, ರೋಮಜ ಕಂಚುಗಾರನೆಂದು, ಅಗಸ್ತ್ಯ ಕಬ್ಬಿಲನೆಂದು,
ವ್ಯಾಸಬೇಡನೆಂದು, ವಶಿಷ್ಠ ಡೊಂಬನೆಂದು, ದೂರ್ವಾಸ ಮಚ್ಚಿಗನೆಂದು,
ಕೌಂಡಿಲ್ಯ ನಾವಿದೆನೆಂದು,
ಅದೆಂತೆಂದೊಡೆ : ವಾಸಿಷ್ಠದಲ್ಲಿ :
ವಾಲ್ಮೀಕೀಚ ವಶಿಷ್ಠಾಶ್ಚಾಗಸ್ತ್ಯ ಮಾಂಡವ್ಯಗೌತಮಾಃ
ಪೂರ್ವಾಶ್ರಯೇ ಕನಿಷ್ಠಾಶ್ಚ ದೀಕ್ಷಯಾ ಸ್ವರ್ಗಗಾಮಿನಃ
ಎಂದುದಾಗಿ.
ಇದನರಿದೂ ಮರೆದಿರಿ ನಿಮ್ಮ ಕುಲವನು;
ಇನ್ನು ನಿಮ್ಮ ಕುಲದಲ್ಲಿ ಹಿರಿಯರುಳ್ಳರೆ ನೀವು ಹೇಳಿ, ಭೋ ।

ನಿಮ್ಮ ಗೋತ್ರವ ನೋಡಿ ನಿಮ್ಮ ಹಮ್ಮು ಬಿಡಿ, ಭೋ!
ಎಮ್ಮ ಶಿವಭಕ್ತರೇ ಕುಲಜರು;
ಇದ ನಂಬದಿರ್ದಡೆ ಓದಿ ನೋಡಿರಣ್ಣಾ ನಿಮ್ಮ ವೇದ ವರ್ಗಂಗಳೊಳಗೆ;

ಅದೆಂತೆಂದೊಡೆ : ಅಥರ್ವಣ ವೇದದಲ್ಲಿ;
'ಮಾತಂಗೀ ರೇಣುಕಾ ಗರ್ಭಸಂಭವಾದಿತಿ
ಕಾರುಣ್ಯ ಮೇಧಾವೀ ರುದ್ರಾಕ್ಷಿಣಾ ಲಿಂಗಧಾರಣಸ್ಯ
ಪ್ರಸಾದಂ ಸ್ವೀಕುರ್ವನ್ ಋಷಿಣಾಂ ವರ್ಣಶ್ರೇಷ್ಠೋ...' ಎಂಬುದಾಗಿ;

ಮತ್ತಂ ವಾಯವೀಯ ಸಂಹಿತಾಯಾಂ:
'ಬ್ರಾಹ್ಮಣೋಪಿ ದುರ್ಗುಣಃ ಸುಗುಣೋಪಿವಾ
ಭಸ್ಮರುದ್ರಾಕ್ಷ ಕಂಠೇವಾ ದೇಹೇವಾ ಸಃ ಶಿವಂ ವ್ರಜೇತ್' ಎಂಬುದಾಗಿ;
ಮತ್ತಂ ಶಿವರಹಸ್ಯದಲ್ಲಿ:
ಗ್ರಾಮಸ್ಯ ಮಲಿನಂ ತೋಯಂ ಯಥಾವೈ ಸಾಗರಂ ಗತಂ।
ಶಿವಸಂಸ್ಕಾರಸಂಪನ್ನೋ ಜಾತಿಭೇದಂ ನ ಕಾರಯೇತ್॥ ಎಂದುದಾಗಿ,
ಇವರೆಲ್ಲರ ವರ್ಣಗಳು ಲಿಂಗಾರಾಧನೆಯಿಂದ
ಮರೆಸಿ ಹೋದುವು ಕೇಳಿರಣ್ಣಾ;
ಇಂತಪ್ಪ ಋಷಿ ಜನಂಗಳೆಲ್ಲಾ ಶ್ರೀ ಗುರುವಿನ ಕಾರುಣ್ಯವಂ ಪಡೆದು...
ಉತ್ತಮ ವರ್ಣಶ್ರೇಷ್ಠರಾದರು ಕಾಣಿರೋ;
ಇದು ಕಾರಣ ನಮ್ಮ ಕೂಡಲಸಂಗಯ್ಯನನ್ನು ಅರಿದು ಪೂಜಿಸುವಾತನೆ
ಉತ್ತಮ ಸದ್ ಬ್ರಾಹ್ಮಣನು,
ಅರಿಯದನೀಗಳೆ ಕೆಟ್ಟ ಹೊಲೆಯ ಕಾಣಿರಣ್ಣಾ;' (ಬ. ಹೆ.ವ.೬೬)

ತಮ್ಮ ವೇದ ಪುರಾಣ ಶಾಸ್ತ್ರಾದಿಗಳ ಅಧ್ಯಯನ ಬಲದಿಂದ, ಸುತ್ತುಮುತ್ತಲಿನ ಸಮಾಜದ ಸೂಕ್ಷ್ಮ ನಿರೀಕಣ ಬಲದಿಂದ, ದೇವದತ್ತವಾದ ಬುದ್ಧಿ ತರ್ಕಗಳ ಬಲದಿಂದ, ಎಲ್ಲಕ್ಕೂ ಹೆಚ್ಚಾಗಿ ತಮ್ಮ ಅಪಾರವಾದ ಅಂತಃಕರಣ, ದೀನ ಬಂಧುತ್ವಗಳ ಬಲದಿಂದ ಹೊಲೆಯ, ಮಾದಿಗ, ಕಬ್ಬಿಲ, ಕಮ್ಮಾರ, ಕಂಚುಗಾರ, ಅಕ್ಕಸಾಲೆ, ಕುಂಬಾರ, ಅಗಸ, ನಾವಿಂದ, ಜೇಡ, ಬೇಡ ಇತ್ಯಾದಿ ದಲಿತ ದುರ್ಬಲ ವರ್ಣಗಳ, ವರ್ಗಗಳ ಪರವಾಗಿ ಪಾಷಂಡಿವಾದಿಗಳನ್ನೂ ನಿರುತ್ತರಗೊಳಿಸಬಲ್ಲ ಅಡಕಪತ್ರ (Brief)ವಿದನ್ನು ಸಿದ್ಧಗೊಳಿಸಿದ್ದಾರೆ. ಬಸವಣ್ಣನವರು. ಅವರ ದಿವ್ಯ ನ್ಯಾಯವಾದಿಯಾಗಿ; ಅವರ 'ಶ್ವಪಚೋಪಿಗಳಾಗಲಿ, ಕೂಡಲಸಂಗಯ್ಯ, ನೀವಿದ್ದವನೇ ಕುಲಜನು' (೭೧೪) ಎಂಬ ಅಚಲವಾದ ನಿಲವಿಗೆ ಸುಳಿವ ಶಾಸನದಂತಿದೆ ಈ ವಚನ; 'ವರ್ಣಾನಾಂ ಬ್ರಾಹ್ಮಣೋ

ಗುರು ಎಂಬುದು ಹುಸಿ, ವರ್ಣಾನಾಂ ಗುರು ನಮ್ಮ ಕೂಡಲಸಂಗನ ಶರಣರು' (೬೦೪) ಎಂಬ ಅವರ ಮನಗಾಣಿಕೆ (Conviction)ಗೆ ಮಣಿದರ್ಪಣದಂತಿದೆ ಈ ವಚನ!

ಈ ಮಾನವತಾವಾದದ ದುಂದುಭಿ ನಿನಾದಕ್ಕೆ 'ವೇದ ನಡನಡುಗಿತ್ತು, ಶಾಸ್ತ್ರ ಪಗಲೆ ಕೆಲಕ್ಕೆ ಸಾರಿದ್ದಿತ್ತಯ್ಯಾ; ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತ್ತಯ್ಯಾ; ಅಗಮ ಹೆರತೊಲಗ ಅಗಲಿ ಇದ್ದಿತ್ತಯ್ಯಾ; (೭೪೯) ಇಷ್ಟಾಗಿಯೂ ಬಸವಣ್ಣನನ್ನು ಮತ್ತೆ ಕೆಣಕಿದರೆ ತಮ್ಮ ಸ್ಥಿತಿಯೇನಾಗುವುದೆಂಬುದನ್ನು ಅವು ತಿಳಿದಿದ್ದುವು – ಈ ವಚನ ಕೇಳಿ :

'ವೇದಕ್ಕೆ ಬರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನಬಾರನೆತ್ತುವೆ, ಆಗಮದ ಮೂಗ ಕೊಯಿವೆ, ನೋಡಯ್ಯಾ;
ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚನ್ನಯ್ಯನ ಮನೆಯ ಮಗ ನಾನಯ್ಯಾ' (೭೧೬)

ಮಾದರ ಚೆನ್ನಯ್ಯ, ಮಾದರ ಧೂಳಯ್ಯ, ಶ್ವಪಚಯ್ಯ, ಡೋಹರ ಕಕ್ಕಯ್ಯ, ನಿಜಲಿಂಗ ಚಿಕ್ಕಯ್ಯ, ಶಿವನಾಗಮಯ್ಯ, ಉರಿಲಿಂಗಪೆದ್ದಿ ಮೊದಲಾದ ಅಸ್ಪೃಶ್ಯರನ್ನೇ ತನ್ನ ಆರಾಧ್ಯರನ್ನಾಗಿ ಮಾಡಿ ತೋರಿಸಿದ ಈ ಭಕ್ತ ಜನಭಾಗ್ಯ ಶುಭೋದಯ ಬಸವಣ್ಣ ಹಿಂದೂ ಸಮಾಜಕ್ಕೆ ಅಂಟಿಕೊಂಡಿದ್ದ ಅಸ್ಪೃಶ್ಯತೆಯ ಅಭಿಶಾಪವನ್ನು ತೊಡೆದು ಹಾಕಲು ಅದ್ಭುತವಾದ ಆಂದೋಲನವನ್ನು ಹೂಡಿ, ಅದು ಬೇಡಿದ ಬಲಿದಾನವನ್ನೂ ಕೊಟ್ಟ ದೇವಮಾನವ, ವರ್ಣವ್ಯವಸ್ಥೆಯನ್ನು ಈಗಿನಂತೆ ಇದ್ದಂತೆಯೇ ಉಳಿಸಿ, 'ಹೆಗ್ಗಣವನ್ನಿಟ್ಟು ನೆಲಗಟ್ಟು ಕಟ್ಟಿದಂತೆ,' ಮೇಲ್ಮೈ ಕ್ರಾಂತಿಯನ್ನು ಮಾಡಿ ಹೋದವನಲ್ಲ. ಎಲ್ಲಿ ಅವನು ಮಾಡಿದ ಅಮೂಲಾಗ್ರ ಪರಿವರ್ತನೆ, ಎಲ್ಲಿ ನಾಮ ಮಾತ್ರದ ಸಮಾನತೆಯ ಆತ್ಮವಂಚನೆ; ವರ್ಗಕಲಹದ ಹುಯಿಲೆಬ್ಬಿಸಿ, ವರ್ಣಕಲಹದ ಹುಯಿಲೆಬ್ಬಿಸಿ, ವರ್ಣವಿರೋಧಿಗಳ ಗಮನ ಬೇರೆ ಕಡೆ ತಿರುಗಿಸಿ, ವರ್ಣವ್ಯವಸ್ಥೆಯನ್ನು ಇದ್ದಂತೆಯೇ ಉಳಿಸಿಕೊಳ್ಳಲೂ ಕೆಲವೂ ಆಸಕ್ತರು, ಪಟ್ಟಭದ್ರ ಹಿತಗಳು ಪ್ರಯತ್ನಿಸುತ್ತಿದ್ದರೂ ಆಶ್ಚರ್ಯವಿಲ್ಲ. ಪ್ರಾರಂಭದಲ್ಲಿ ವಿವರಿಸಿದ ಘೋರ ಘಟನೆಗಳಿಂದ ಈ ಸಾಮಾಜಿಕ ಅನಿಷ್ಟದ, ಅಭಿಶಾಪದ ವಿಷವೃಕ್ಷದ ಬೇರುಗಳು ಎಷ್ಟು ದೂರದವರೆಗೆ ಹಬ್ಬಿವೆ, ಇದರ ಶಾಖೋಪಶಾಖೆಗಳು ಎಲ್ಲೆಡೆಗಳಲ್ಲೂ ಹೇಗೆ ಪ್ರಬಲ ಪಾಶಗಳಾಗಿ ಬಿಗಿದುಕೊಂಡಿವೆ, ಇದರ ವಿಷಫಲಗಳ ಸೇವನೆಯಿಂದ ಎಷ್ಟು ಕೋಟಿ ಜನರು ಜೀವನ್ಮೃತರಾಗಿದ್ದಾರೆ, ನಡೆವಣ ನುಡಿವೆಣಗಳಾಗಿದ್ದಾರೆ ಎಂಬುದರ ಕಲ್ಪನೆಯಾಗಿರಬಹುದು. ಇದರ ಸಮಗ್ರ ಸ್ವರೂಪವನ್ನು ಇದ್ದಕ್ಕಿದ್ದಂತೆ ಅರಿತುಕೊಂಡು, ಅದರ ಪರಿಹಾರಕ್ಕೆ ಊಟೋಪಚಾರಗಳಿಂದ ಮೊದಲ್ಗೊಂಡು ವಂದನೆ, ಪೂಜೆ, ಪಾದೋದಕ, ಪ್ರಸಾದಗಳವರೆಗೆ ವ್ಯಾಪಕವಾದ ವಿಮುಕ್ತಿಸೂತ್ರವನ್ನು ಕಂಡುಹಿಡಿದು,

ಅದನ್ನು ಕೆಚ್ಚೆದೆಯಿಂದ ಬರುವ ಪರಿಣಾಮಗಳಿಗೆ ಎದೆಗುಂದದೆ ಧೀರೋದಾರನಾಗಿ ಕಾರ್ಯರೂಪಕ್ಕೆ ತಂದು ಇಂದೂ, ಮಂದೂ ಈ ಕ್ಷೇತ್ರದಲ್ಲಿ ದುಡಿಯಬಯಸುವವರಿಗೆ ಧ್ರುವತಾರೆಯಾಗಿದ್ದಾನೆ ಬಸವಣ್ಣ. ಇದಕ್ಕೆ ಅವರಿವರ ಅರ್ಹತಾಪತ್ರವೇಕೆ, ನಮ್ಮ ಗ್ರಾಮಬಾಂಧವರಿತ್ತ ಪ್ರಮಾಣಪತ್ರವೇ ಸಾಕು:

'ವೇದವೆಂಬುದು ವಾದ ಭೆದ ಹುಟ್ಟಿಸಿ ಜಗಕೆ;
ದಾದುಯಾರಿಲ್ಲ ಹೇಳುದಕೆ – ಬಸವಣ್ಣ
ಭೇದ ಅಳುಕಿಸಿದ ಕುಲಕುಲಕೆ.'

## ೪

# ಸಮಾನತೆಯ ಸಮಗ್ರ ಕ್ರಾಂತಿ

ಅಸ್ಪೃಶ್ಯತೆಯ ಉತ್ಪಾದನೆ ಬಸವಣ್ಣನವರು ಕಟ್ಟಿದ ಸಮಾಜದ ಮಟ್ಟಿಗಾದರೂ ಆಗಿ, 'ಹೊಲೆಯ ಹೊಲಬಿಗನಾದರೆ ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯ.... ನಮ್ಮ ಕೂಡಲಸಂಗನ ಮಹಾಮನೆಯೊಳು ಮಾದಾರ ಚೆನ್ನಯ್ಯ ಹೊಲಬಿಗನಯ್ಯಾ' (೧೩೫) 'ದೂಷಕನವನೊಬ್ಬ ದೇಶವ ಕೊಟ್ಟರೆ ಅಸೆಮಾಡಿಯವನ ಹೊರೆಯಲಿರಬೇಡ; ಮಾದರ ಶಿವಭಕ್ತನಾದರೆ ಆತನ ಹೊರೆಯಲ್ಲಿ ಭೃತ್ಯನಾಗಿರ್ಪುದು ಕರಲೇಸಯ್ಯಾ, ತೊತ್ತಾಗಿರ್ಪುದು ಕರಲೇಸಯ್ಯಾ...' (೧೩೬) 'ಹೊಲೆಯ, ಮಾದಿಗ ಭಕ್ತನಾದರೆ ಆತನ ಮನೆಯ ಸೊಣಗಂಗೆ ಪಂಚಮಹಾವಾದ್ಯದಲ್ಲಿ ಸನ್ಮಾನವ ಮಾಸೆನೆ?' (೫೯೭) 'ನಿಮ್ಮ ನಂಬದವ ಹೊಲೆಯ (ಅದೆ) ಚತುರ್ವೇದಿಯಾದರೇನು? ಲಿಂಗವಿಲ್ಲದವನೇ ಹೊಲೆಯ; ಶ್ವಪಚನಾದರೇನು? ಲಿಂಗವಿದ್ದವನೇ ವಾರಣಾಸಿ; ಆತನ ನುಡಿಗಣವೇ ಲೇಸು; ಆತ ಜಗಕ್ಕೆ ಪಾವನ; ಆತನ ಪ್ರಸಾದವೆ ಅಮೃತ ಸೇವನೆ!' (೪೦೨) ಬಂದು ಬಲ್ಲಹ ಬಿಡಲು ಹೊಲೆಗೇರಿ ಎಂಬ ಹೆಸರೊಳವೆ, ಅಯ್ಯಾ?... ಚಾಂಡಾಲ ವಾಟಿಕಾಯಾವಾ। ಶಿವಭಕ್ತಃ ಸ್ಥಿತೋಯದಿ॥ ತಚ್ಛ್ರೇಣಿಃ ಶಿವಲೋಕಸ್ತು। ತದ್ ಗೃಹಂ ಶಿವಮಂದಿರಂ ॥ (೬೦೯) ಎನ್ನುವವರೆಗೆ ಯಶಸ್ವಿಯಾದ ಮೇಲೂ ಅಸಮಾನತೆಯ ಉರುಲು ಎಲ್ಲರಿಗೂ ತಪ್ಪಿತೆಂದಲ್ಲಿ ಅಸ್ಪೃಶ್ಯರೆಷ್ಟೇ ಯಾತನೆಗೀಡಾಗದಿದ್ದರೂ ಅವರಿಗಿಂತ ಬಹಳ ಸುಸ್ಥಿತಿಯಲ್ಲಿಲ್ಲದ ಬಹುಜನಸಮಾಜ – ಶೂದ್ರಸಮಾಜ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ದಾಸ್ಯ ತರಬಹುದಾದ ಎಲ್ಲ ದುರ್ಗತಿ, ದುಃಸ್ಥಿತಿಗಳಿಗೂ ಈಡಾಗಿದ್ದಿತು. ಅವರಿಗೂ ಸಮಾನತೆಯನ್ನು ನೀಡದೆ ಬಸವಣ್ಣನವರ ಸಮಾನತೆಯ ಕ್ರಾಂತಿಗೆ ಸಮಗ್ರತೆ ಬರುತ್ತಿರಲಿಲ್ಲ. ಆದುದರಿಂದ ತಮ್ಮ ಆಂದೋಲನದ ಧ್ಯೇಯ ವಾಕ್ಯವೇನೋ ಎಂಬಂತೆ ಅವರು ಉದ್ಘೋಷಿಸಿದರು :

'ಅವನಾದರೆನು, ಶ್ರೀ ಮಹಾದೇವನ ನೆನೆವವನ
ಬಾಯ ತಂಬುಲ ಮೆಲುವೆ, ಬೀಳುಡಿಗೆಯ ಹೊದೆವೆ
ಪಾದರಕ್ಷೆಯ ಕಾಯ್ದು ಬದುಕುವೆ – ಕೂಡಲಸಂಗಮದೇವಾ' (೪೬೩)

ಶ್ರೀ ಮಹಾದೇವನನ್ನು ನೆನೆವವರು ಯಾರೇ ಇರಲಿ – ಬಡವರಿರಲಿ, ಬಲ್ಲಿದಲಿರಲಿ, ಪಂಡಿತರಿರಲಿ, ಪಾಮರರಿರಲಿ, ಸ್ಪೃಶ್ಯರಿರಲಿ, ಅಸ್ಪೃಶ್ಯರಿರಲಿ, ಉದರ ನಿರ್ವಾಹಕ್ಕಾಗಿ ಯಾವುದೇ ವೃತ್ತಿಯನ್ನು ಕೈಕೊಂಡಿರಲಿ – ಅವರನ್ನು ನನಗೆ ಸರಿಯೆಂದಷ್ಟೇ ಅಲ್ಲ, ಪೂಜ್ಯರೆಂದು ಕಾಣುವೆ. ಯಾವ ಕಾರಣಕ್ಕಾಗಿಯೂ ಭಕ್ತರಲ್ಲಿ ಕುಲವರಸೆ ಇದು ಬಸವಣ್ಣನವರ ಅಭಯವಾಣಿ.

'ದೇವ ಸಹಿತಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡರೆ
ನಿಮ್ಮಾಣೆ, ನಿಮ್ಮ ಪುರಾತರಾಣೆ, ತಲೆದಂಡ, ತಲೆದಂಡ;
ಕೂಡಲಸಂಗಮದೇವಾ, ಭಕ್ತರ ಕುಲವನರಸಿದರೆ
ನಿಮ್ಮ ರಾಣಿವಾಸದಾಣೆ. (೪೫೨)

ಏಕೆ ಅರಸಬೇಕು ಕುಲವನ್ನು? ಆವಾವಭವಪದದಲ್ಲಿ ಶಿವನ ನಂಬಿದ ಶರಣರು ಎಂತಿದ್ದರೇನಯ್ಯಾ? (೭೯೧)... 'ಪಾತ್ರ ಅಪಾತ್ರವೆಂದು ಕಂಡರೆ ಶಿವನೆಂತು ಮೆಚ್ಚುವನು? ಜೀವ ಜೀವಾತ್ಮವ ಸರಿಯೆಂದು ಕಂಡರೆ ಸಮವೇದಿಸದಿಪ್ಪನೆ ಶಿವನು? ತನ್ನ ಮನದಲ್ಲಿ 'ಯತ್ರ ಜೀವಸ್ತತ್ರ ಶಿವ'ನೆಂದು ಸರ್ವ ಜೀವದಯಾಪಾರಿಯಾದಲ್ಲಿ ಕೂಡಲ ಸಂಗಮದೇವನು... ಎತ್ತಿಕೊಳ್ಳದಿಪ್ಪನೆ?' (೮೦೪)

'ಯತ್ರ ಜೀವಸ್ತತ್ರಶಿವ'ನೆಂಬುದಲರಲಿ ವಿಶ್ವಾಸವಿದ್ದುದೇ ಆದರೆ ಪಾತ್ರಾಪಾತ್ರವೆಂಬ ಗಜಬಜೆಗೀಡಾಗದೆ ಜೀವ ಜೀವಾತ್ಮವ ಸರಿಯೆಂದು ಕಂಡು ಸರ್ವಜೀವದಯಾ–ಪಾರಿಯಾಗಲೇಬೇಕು; ಇದು ಬಸವಣ್ಣನ ನಿಲವು; ಇದನ್ನು ಅನುಷ್ಠಾನಕ್ಕೆ ತರುವಲ್ಲಿ ಅಡ್ಡನಿಲ್ಲುವ ಯಾವ ಅಡ್ಡಿಗಳನ್ನೂ ಲೆಕ್ಕಿಸಲಿಲ್ಲ ಅವರು. ಅಡ್ಡಿಗಳ ಗುಡ್ಡಗಳನ್ನುಕಡ್ಡಿಯಂತೆ ಆಚೆ ಸರಿಸಿ ಕುಲ, ಕೆಲಸ, ಲಿಂಗ, ಸಿರಿ, ಪದವಿ ಇತ್ಯಾದಿಗಳಿಂದ ಉದ್ಭವಿಸಿದ್ದ ಕಡ್ಡಿಯಂತೆ ಆಚೆ ಸರಿಸಿ ಕುಲ, ಕೆಲಸ, ಲಿಂಗ, ಸಿರಿ ಪದವಿ ಇತ್ಯಾದಿಗಳಿಂದ ಉದ್ಭವಿಸಿದ್ದ ಅಸಮತೆಗಳನ್ನು, ಅನ್ಯಾಯಗಳನ್ನು ತೊಡೆದು ಸಮಾನತೆಯ ಸಮಗ್ರ ಕ್ರಾಂತಿಯನ್ನು ಸಾಧಿಸಿದರು ಬಸವಣ್ಣನವರು. ಕುಲದ ಬಗ್ಗೆ ಸಾಕಷ್ಟು ಹೇಳಿಯಾಗಿದೆ. ಕೆಲಸದ ಬಗ್ಗೆ ಬಸವಣ್ಣನವರ ನಿಲವೇನೆಂಬುದನ್ನು ನೋಡೋಣ :

'ಕೃಷಿಕೃತ್ಯ ಕಾಯಕವಾದೊಡೇನು?
ತನುಮನ ಬಳಲಿಸಿ ತಂದು ದಾಸೋಹವ ಮಾಡುವ
ಪರಮ ಸದ್‌ಭಕ್ತನ ಪಾದವ ತೋರಯ್ಯಾ ಎನಗೆ;
ಅದೆಂತೆನೆ, ಆತನ ತನುಶುದ್ಧ, ಆತನ ಮನಶುದ್ಧ,

ಆತನ ನಡೆ ಶುದ್ಧ, ನುಡಿಯೆಲ್ಲ ಪಾವನವು:
ಆತಂಗೆ ಉಪದೇಶವ ಮಾಡಿದಾತನೆ ಪರಮ ಸದ್ಗುರು.
ಅಂತಪ್ಪ ಸದ್‌ಭಕ್ತನ ಮನೆಯ ಕೈಲಾಸವೆಂದು ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್‌ಪಾವನ
ಇಂತಪ್ಪವರ ನಾನು ನೆರೆನಂಬಿ ನಮೋ ನಮಃ ಎಂಬೆನಯ್ಯಾ
ಕೂಡಲಸಂಗಮದೇವಾ' (ಬ. ಹೆ.ವ.೨೭)

ಇನ್ನು ಲಿಂಗಭೇದದ ಭ್ರಮೆಯ ನಿರಸನವಾಗಬೇಕು. ಭಾರತದಲ್ಲಿ ನಾರೀ ಜೀವನ ನಡೆದು ಬಂದ ದಾರಿ ಕಣ್ಣೀರಿನ ದಾರಿ; ಆಧುನಿಕ ಹಿಂದೀ ಕವಿಶ್ರೇಷ್ಠರಲ್ಲೊಬ್ಬರಾದ ಮೈಥಿಲಿ ಶರಣಗುಪ್ತರು ತಮ್ಮ ಯಶೋಧರ ಕಾವ್ಯದ ಆರಂಭದಲ್ಲಿಯೇ ಇದನ್ನು ಮನಂಬುಗುವಂತೆ ಚಿತ್ರಿಸಿದ್ದಾರೆ. 'ನಾರೀ ಜೀವನ ಹಾಯ್' 'ತುಮ್ಹಾರಿ ಯಹೀ ಕಹಾನಿ। ಆಂಚಲ್ ಮೇಂ ದೂಧ್, ಔರ, ಅಂಖೋಮೇಂ ಪಾನಿ। ಹಾಯ್ ನಾರೀ ಜೀವನವೆ, ನಿನ್ನ ಕಥೆ ಇಷ್ಟೆ, ಎದೆಯಲ್ಲಿ ಹಾಲು, ಕಣ್ಣಲ್ಲಿ ನೀರು' ಎಲ್ಲರಿಗೂ ಎದೆಹಾಲು ಉಣಿಸಿ ಬೆಳೆಸುವ ಸ್ತ್ರೀ ತಾನು ಮಾತ್ರ ಕಂಬನಿದುಂಬಿದ ಕಣ್ಣುಗಳೊಡನೆಯೇ ಜೀವಿಸಬೇಕು; ಇವನ್ನರಿತು ಇದಕ್ಕೆ ಅಭಿವ್ಯಕ್ತಿಯನ್ನಿತ್ತವರು ಆಧುನಿಕ ಹಿಂದೀ ಕವಿಗಳೊಬ್ಬರಾದರೆ ಸ್ತ್ರೀಯ ಬಗೆಗಿದ್ದ ಸನಾತನ ದೃಷ್ಟಿಕೋನದ ಕಠೋರ ಸತ್ಯವನ್ನು ಕಠೋರವಾಗಿಯೇ ಮಂಡಿಸಿದ ಅದೇ ಹಿಂದೀ ಭಷೆಯ ಇನ್ನೊಬ್ಬ ಕವಿವರ ತಲಸಿದಾಸ್, 'ಡೋಲಲ್, ಗಂವರ್ ಓರ್ ನಾರೀ। ಯಹ ಸಬ್ ತಾಡನ ಕೇ ಅಧಿಕಾರಿ – ಢೋಲು ಮೂರ್ಖ ಮತ್ತು ನಾರಿ – ಇವರು ತಾಡನಕ್ಕೆ ಮಾತ್ರ ಅಧಿಕಾರಿಗಳು : ಈ ತಾಡನಗಳನ್ನು ತಿಂದು ತಿಂದು ಸ್ವಯಂ ಸ್ತ್ರೀಯರಿಗೇ ಎಷ್ಟು ದಡ್ಡು ಬಿದ್ದಿದ್ದಿತು, ಎಷ್ಟು ಸ್ವರೂಪ ವಿಸ್ಮೃತಿಯಾಗಿದ್ದಿತೆಂದರೆ ಸ್ತ್ರೀಯಳೇ, ಆದ ಸಂಚಿ ಹೊನ್ನಮ್ಮನು ತನ್ನ 'ಹದಿಬದೆಯ ಧರ್ಮದಲ್ಲಿ' ಒಡೆಯನಿರಿಸಿದಂತಿರ್ಪುದಲ್ಲದೆ ಪೇಳೊಡವೆಗೆ ಬೇರಿರವುಂಟೆ? ಎಂದು ಕೇಳಿದಳು. ಹೆಣ್ಣು ಜೀವಿಯಲ್ಲ 'ಒಡವೆ'ಯೆಂಬುದೇ ಅವಳ ತಿಳಿವಳಿಕೆ. ಬಸವಣ್ಣನವರ ಸ್ತ್ರೀ ಸಮಾನತೆಯ ಕಹಳೆ ಮೊಳಗಿದ ನೂರಾರು ವರ್ಷಗಳ ತರುವಾಯ ಬಂದ ಈ ವಿದ್ಯಾವಿಭೂಷಿತ ಮಹಿಳೆಯೇ ಹೀಗೆ ಭಾವಿಸಿರುವಾಗ ಈ ದೇಶದ ನಿರಕ್ಷರರಾದ, ಕಡುಬಡವರಾದ ಹೆಂಗಳೆಯರ ಸ್ಥಿತಿಗತಿಗಳನ್ನು ಊಹಿಸಿಯೇ ತಿಳಿಯಬೇಕು. ಅಲ್ಲೊಬ್ಬ ಗಾರ್ಗಿ, ಇಲ್ಲೊಬ್ಬ ಮೈತ್ರೀಯಿ, ಆಗಾಗ ಒಬ್ಬ ಉಭಯ ಭಾರತಿಯಂತವರನ್ನು ಎತ್ತಿ ತೋರಿ ಭಾರತದಲ್ಲಿ ಮೊದಲಿನಿಂದಲೂ ಮಹಿಳೆಯರಿಗೆ ಮುನ್ನಡೆಯ ಸ್ಥಾನವಿದ್ದಿತೆಂದು ಹೇಳುವುದು ಸರಳೀಕರಣಕ್ಕೆ ಸಮೀಪವಾಗಬಹುದಲ್ಲದೆ ಸತ್ಯಕ್ಕೆ ಸಮೀಪವಾಗಲಾರದು.

ಈ ಹಿನ್ನೆಲೆಯಲ್ಲಿ, 'ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ? ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ

ಹಿಡಿಗೋಲ?' (ಜೇಡರದಾಸಿಮಯ್ಯ) 'ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ' (ಸಿದ್ಧರಾಮ) 'ಮೊಲೆ ಮುಡಿ ಬಂದರು ಹೆಣ್ಣೆಂಬರು; ಗಡ್ಡ ಮೀಸೆ ಬಂದರೆ ಗಂಡೆಂಬರು; ನಡುವೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ' (ಜೇಡರದಾಸಿಮಯ್ಯ ಮತ್ತು ಅಂಬಿಗರ ಚೌಡಯ್ಯ) 'ಪರವಧುವನ್ನು ಮಹಾದೇವಿಯೆಂಬೆ' (ಬಸವಣ್ಣ) 'ಅನ್ಯವಧುವೆಂಬುದು ನಿಮ್ಮ ರಾಣಿವಾಸ' 'ಮೊಲೆಯುಂಬ ಭಾವ ತಪ್ಪಿ ಅಪ್ಪಿದವರ ತಲೆಯಕೊಂಬ ಕೂಡಲ ಸಂಗಮದೇವ' ಛಲಬೇಕು ಶರಣಂಗೆ, ಪರಸತಿಯನೊಲ್ಲೆನೆಂಬ' 'ಒಂದಕ್ಕಂಜುವೆ, ಒಂದಕ್ಕಳಕುವೆ – ಪರಸ್ತ್ರೀ ಪರಧನವೆಂಬ ಜೂಬಿಂಗಂಜುವೆ' (ಬಸವಣ್ಣ) 'ಉಭಯ ದೃಷ್ಟಿ ಏಕದೃಷ್ಟಿಯಲ್ಲಿಕಾಂಬಂತೆ, ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು, ಸಂಗನ ಬಸವಣ್ಣ' (ಅಲ್ಲಮಪ್ರಭು), 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' (ಜೇಡರದಾಸಿಮಯ್ಯ) 'ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು? ಭಾವಿಸಲು ಗಂಡುರೂಪು' (ಅಕ್ಕಮಹಾದೇವಿ) 'ಸತಿ ಭಕ್ತೆಯಾದರೆ ಹೊಲೆಗಂಜಲಾಗದು; ಪತಿಭಕ್ತನಾದಡೆ ಕುಲಕ್ಕಂಜಲಾಗದು, ಸತಿಪತಿಯೆಂಬ ಅಂಗಸುಖ ಹಿಂಗಿ, ಲಿಂಗವೆ ಪತಿಯಾದ ಬಳಿಕ ಸತಿಗೆ ಪತಿಯುಂಟೆ? ಪತಿಗೆ ಸತಿಯುಂಟೆ'? (ಅಲ್ಲಮ ಪ್ರಭು) ಎಂಬ ಈ ಮಿಂಚಿನಮಾತುಗಳನ್ನು ಓದಿದಾಗ, ಇದುವರೆಗೆ ೩೨ ಶಿವ ಶರಣೆಯರ ವಚನಗಳು ಉಪಲಬ್ಧವಾಗಿ ಪ್ರಕಟವಾಗಿ ಓದಿದವರನ್ನು ವಿಸ್ಮಯಾಂಚಿತರನ್ನಾಗಿ ಮಾಡುತ್ತಿರುವುದನ್ನು ನೋಡಿದಾಗ, ಇನ್ನೂ ಶೋಧಿಸಿದರೆ ಇನ್ನಷ್ಟು ವಚನ ಕಾರ್ತಿಯರು ಬೆಳಕಿಗೆ ಬರಬಹುದೆಂಬುದನ್ನು ನೆನೆದಾಗ, ಇವರಲ್ಲಿ ಸಾಮಾನ್ಯ ಕುಟುಂಬಗಳ ಹೆಂಗಳೆಯರೇ ಹೆಚ್ಚಾಗಿರುವುದು ಕಂಡಾಗ ಮಹಿಳೆಯರಿಗೆ ಮನ್ನಣೆಯ ಸ್ಥಾನ ಸಿಕ್ಕಲು ಬಸವಣ್ಣನವರು ಮಾಡಿದ ಮಹಾಕಾರ್ಯದ ಪರಿಚಯವಾಗುತ್ತದೆ.

ಸಿರಿಗೆ ಸಲ್ಲುವ ಗೌರವವೆಷ್ಟು – ಅಂದೂ, ಇಂದೂ? ಅದಕ್ಕಾಗಿಯೇ, ಅದರ ಅಡಿಯಾಳಾಗಿಯೇ ನರಜನ್ಮವೆನ್ನುವ ಮಟ್ಟಿಗೆ ಕೆಲವರ ಸಿರಿಯ ಆರಾಧನೆ, ಸಂಪತ್ತಿನ ಉಪಾಸನೆ; ಬಸವಣ್ಣನವರಾದರೋ 'ನೆಲನಾಳ್ವನ ಹೆಣವೆಂದೊಡೆ ಒಂದಡಿಕೆಗೆ ಕೊಂಬವರಿಲ್ಲ ಕಾಣಾ' (೧೫೮) ಎಂಬುದನ್ನರಿತವರು 'ಎಲವದ ಮರ ಹೂತು ಫಲವಾದ ತೆರನಂತೆ, ಸಿರಿಯಾದರೇನು ಶಿವಭಕ್ತಿಯಿಲ್ಲದನ್ನಕ್ಕ? ಫಲವಾದರೇನು ಹಾವು ಮೆಕ್ಕೆಯ ಕಾಯಿ?' (೧೨೧) 'ಬಚ್ಚಲನೀರು ತಿಳಿದರೇನು? ಸಲ್ಲದ ಹೊನ್ನು ಮತ್ತೆಲ್ಲಿದ್ದರೇನು?' (೧೨೨) ಎಂದು ಕೇಳಿದವರು; 'ಧನವನಿರಿಸದಿರಾ, ಇರಿಸಿದರೆ ಭವಬಪ್ಪುದು ತಪ್ಪದು; ಕೂಡಲಸಂಗನ ಶರಣರಿಗೆ ಸವಿಸಲೇಬೇಕು' (೧೯) ಎಂದು ಸಾರಿದವರು ಸಿರಿಯ ಆಧಾರದ ಮೇಲೆ ಮೇಲ್ಮೆಯನ್ನು ನಿರ್ಧರಿಸುವ ನೀತಿಯನ್ನುತೃಪ್ತಿಯಾದರೂ ಅವರು ಒಪ್ಪಬಹುದೇ? ಒಪ್ಪಲಿಲ್ಲ ಅವರ ದೃಷ್ಟಿಯಲ್ಲಿ ಮನೆಯ ಸಿರಿವಂತಿಕೆಗಿಂತ ಮನದ ಸಿರಿವಂತಿಕೆ ಮೇಲಾದುದು. ಅದನ್ನು ಪಡೆದವರು ಸಿರಿವಂತರು; ಪಡೆಯದವರು ಅಷ್ಟೈಶ್ವರ್ಯ ಸಂಪನ್ನರಾಗಿದ್ದ್ಯೂ ದಟ್ಟದರಿದ್ರರು; 'ಮನೆ ನೋಡಾ, ಬಡವರು, ಮನ ನೋಡಾ ಘನ, ಸೋಂಕಿನಲ್ಲಿ ಸುಖಿ,

ಸರ್ವಾಂಗ ಕಲಿಗಳು : ಪಸಾರಕ್ಕನುವಿಲ್ಲ, ಬಂದ ತತ್ಕಾಲಕ್ಕುಂಟು. ಕೂಡಲಸಂಗನ ಶರಣರು ಸ್ವತಂತ್ರಧೀರರು.' (೩೨೫) ಹೀಗೇ ಸಿರಿಯ ಸೊಕ್ಕನ್ನೂ ಇಳಿಸಿ, 'ದೂಷಕನೊಬ್ಬ ದೇಶವಕೊಟ್ಟರೆ ಆಸೆ ಮಾಡಿ ಅವನ ಹೊರೆಯಲಿರಬೇಡ; ಮಾದರ ಶಿವಭಕ್ತನಾದರೆ ಆತನ ಹೊರೆಯಲ್ಲಿ ಭೃತ್ಯನಾಗಿದಪ್ಪುದು ಕರಲೇಸಯ್ಯ, ತೊತ್ತಾಗಿರ್ಪುದು ಕರಲೇಸಯ್ಯಾ' (೧೩೦) ಎಂದು ತೀರ್ಮಾನಿಸಿದರು, ಸಿರಿಯ ಮಧ್ಯದಲ್ಲಿದ್ದರೂ ಸಿರಿಯು ಸೆರೆಯಾಗದಂತೆ ಎಚ್ಚರಿಕೆ ವಹಿಸಿದ್ದರು ಬಸವಣ್ಣನವರು.

ವಿದ್ಯೆಯೂ ಅದು ಕೆಲವರಿಗೆ ಮೀಸಲಾಗಿದ್ದಾಗ ವಿಶೇಷವಾಗಿ ಮೇಲು ಕೀಳಿಗೆ ಕಾರಣವಾದುದುಂಟು. ಆ ಅಹಂಕಾರವನ್ನು ನೆಲಸಮಗೊಳಿಸಿದರು ಬಸವಣ್ಣನವರು, 'ಗೀತವ ಹಾಡಿದೊಡೇನು? ಶಾಸ್ತ್ರ ಪುರಾಣವ ಕೇಳಿದೊಡೇನು? ವೇದ ವೇದಾಂತನೋದಿದೊಡೇನು?.... ಭಕ್ತಿಯಿಲ್ಲದವರನೊಲ್ಲ, ಕೂಡಲಸಂಗಮದೇವ' (೧೮೮) 'ದ್ವೈತಾದ್ವೈತವನೋದಿ ಏನು ಮಾಡುವಿರಯ್ಯ?... ಬರಿಯ ಮಾತಿನ ಮಾಲೆಯಲೇನಹುದು?' (೧೯೧) 'ಮಹಾದಾನಿ ಕೂಡಲಸಂಗಯ್ಯನೊಲೆದು ಮಾದರ ಚನ್ನಯ್ಯನ ಮನೆಯಲುಂಡ, ವೇದವನೋದಿದವರು ಲಿಂಗವನೊಲಿಸಿ ತೋರಿರೋ' (೬೦೨) 'ಚತುರ್ವೇದಿಯಾದರೇನು ಲಿಂಗವಿಲ್ಲದವನೇ ಹೊಲೆಯ; ಶ್ವಪಚನಾದರೇನು ಲಿಂಗವಿದ್ದವನೇ ವಾರಣಾಸಿ; ಆತನ ನುಡಿಗಡಣವೆ ಲೇಸು; ಆತ ಜಗಕ್ಕೆ ಪಾವನ; ಆತನ ಪ್ರಸಾದವೆನಗಮೃತ ಸೇವನೆ; ನಮೇ ಪ್ರಿಯಶ್ಚತುರ್ವೇದಿ ಮದ್ ಭಕ್ತಃ ಶ್ವಪಚೋಪಿವಾ । ತಸ್ಮಾ ದೇವ ತತೋಗ್ರಾಹ್ಯಂ । ಸ ಚ ಪೂಜ್ಯೋ ಯಥಾಹ್ಯಹಂ। ಕೂಡಲಸಂಗಮದೇವನನರಘೆದು ಪೂಜಿಸಿದಾತ ಷಡುದರುಶನಕ್ಕಧಿಕ ಜಗಕ್ಕೆ ಪಾವನ ನೋಡಾ,' (೬೦೭) ಅಡ್ಡಾಡುವ ಗ್ರಂಥಭಂಡಾರಿಗಳಾಗಿ ಸಮಾಜಕ್ಕೆ ಭಾರವಾಗಿದ್ದ, ಪರೋಪಜೀವಿ (Parasite) ಗಳಾಗಿದ್ದ, ಆದರೂ ವೇದಶಾಸ್ತ್ರವಿದರೆಂಬ ಅಹಂಕಾರದಲ್ಲಿ ಉಬ್ಬಿ, ಪರಾನ್ನದಿಂದ ಕೊಬ್ಬಿ ತಾವು ಶ್ರೇಷ್ಠರೆಂಬ ಮಬ್ಬಿನಲ್ಲಿದ್ದ ಪುರೋಹಿತವರ್ಗಕ್ಕೆ, ವೈದಿಕ ವರ್ಗಕೆಕ ಈ ಕ್ರಾಂತಿ ಅಸಹನೀಯವೆನಿಸಿರಬೇಕು. ಆದರೂ ಎಲ್ಲ ಮದಗಳಂತೆ ವಿದ್ಯಾಮದವೂ ಅನಿಷ್ಟವಾದುದು ಸಮಾಜಕ್ಕೆ. ಸಮಾಜದ ಸರ್ವಾಂಗೀಣ – ಸರ್ವಂಕಷ ಪ್ರಗತಿಗೆ, ವ್ಯಕ್ತಿವಿಕಾಸ – ಸಮಷ್ಟಿ ವಿಕಾಸಗಳಿಗೆ. ಆದುದರಿಂದ ವಿದ್ಯೆಯ ಏಕಸ್ವಾಮ್ಯ (monopoly)ಏಕಾನುಭೋವನ್ನು, ತಜ್ಜನ್ಯ ಅಹಂಕಾರವನ್ನು ಶ್ರೇಷ್ಠ ಕನಿಷ್ಠಭಾವವನ್ನು ಅಳಿದು, ತೊಳೆದು ಸಮಾನತೆ ಸರ್ವಹಂತಗಳಲ್ಲಿಯೂ ಸ್ಥಾಪಿತವಾಗುವಂತೆ ಮಾಡಬೇಕು. ಬಸವಣ್ಣನವರು ಇದನ್ನೇ ಮಾಡಿದರು.

ಇನ್ನುಳಿದುದು ಪದವಿ. ಪದವಿಯಿರುವಲ್ಲಿ ಪ್ರತಿಷ್ಠೆ. ಆದುದರಿಂದ ಪದವಿಗಾಗಿ ಕಿತ್ತಾಟ, ಕಚ್ಚಾಟ, ಭಂಡಾಟ. ಇದರಿಂದ ಉಂಟಾಗಿದ್ದ ವಿಷಮತೆಯ ವಿಷವನ್ನು ಹಾಗೆಯೇ ಉಳಿಸಿದರೆ ಅದು ಸಮಾಜಪುರುಷನ ಅಂಗಾಂಗಳನ್ನೆಲ್ಲ ವ್ಯಾಪಿಸಿ ಮಾರಕವಾಗದಿರದೆಂದು ಬಗೆದು ಬಸವಣ್ಣನವರು ಇದರ ಮೋಹನಿರಸನಕ್ಕೂ ಮುಂದಾದರು, ತಮ್ಮದು ದಂಡನಾಥ

ಪದವಿ. ಆದರೂ ತಮಗೆ ಶರಣರ ತೊತ್ತುತನದ ಮಹಾಪದವಿಯೇ ಬೇಕೆಂದು, ಅದೇ ಸಾಕೆಂದು, ಅದರಂತೆ ಆಚರಿಸಿದರು. 'ಬ್ರಹ್ಮ ಪದವಿಯನೊಲ್ಲೆ; ವಿಷ್ಣುಪದವಿಯನೊಲ್ಲೆ; ರುದ್ರಪದವಿಯನೊಲ್ಲೆ; ಮತ್ತಾವ ಪದವಿಯನೊಲ್ಲೆನಯ್ಯಾ; ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನಱಿದಿಪ್ಪ ಮಹಾಪದವಿಯನೆ ಕರುಣಿಸಯ್ಯಾ;'(೩೬೦). 'ದಾಸಿಯ ವರ್ಗದಲ್ಲಿಪ್ಪೆನು ಶಿವಶರಣರ ಮನೆಯಲ್ಲಿ, ಅವರೊಕ್ಕುದನುಂಡು, ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ... ಕರ್ಮನಿರ್ಮಳವಾಯಿತ್ತು ಅವರ ತೊತ್ತಿನ ತೊತ್ತಿನ ಮರುದೊತ್ತಿನ ಮಗನೆಂದು ಕೂಡಲಸಂಗಮದೇವ ಇತ್ತಬಾಯೆಂದೆತ್ತಿಕೊಂಡನು' (೪೭೨). 'ಕಾಗೆ ವಿಷ್ಟಿಸುವ ಹೊನ್ನಕಳಸವಹುದಱಿಂದ ಒಡೆಯರು ಜೋಗೈಸುವ ಚಮ್ಮಾವುಗೆಯ ಮಾಡಯ್ಯ! ಅಯ್ಯಾ, ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯ; ಕರ್ಮಾವಲಂಬನಂ ಕೇಚಿತ್ । ಕೇಚಿತ್ ಜ್ಞಾನಾವಲಂಬನಂ ॥ ವಯಂತು ಶಿವಭಕ್ತಾನಾಂ। ಪಾದುದಕಸ್ಯವಾವಲಂಬನಂ ॥ ಕೂಡಲಸಂಗಮದೇವಾ, ನಿಮ್ಮ ಸೆರಗೊಡ್ಡಿ ಬೇಡುವಿದೊಂದೇ ವರವ ಕರುಣಿಸಯ್ಯಾ!' (೩೮೦).

ಇಂತಿದು ಬಸವಣ್ಣನವರು ಸಾಧಿಸಿದ ಸಮಾನತೆಯ ಸಮಗ್ರ ಕ್ರಾಂತಿಯ ಸ್ವರೂಪ. ಇದರ ಫಲವಾಗಿ ಯುಗ ಯುಗಗಳಿಂದ ದೇಶಕ್ಕೆ ದೊರೆಯದೆ, ಸಮಾಜಕ್ಕೆ ಸಿಕ್ಕದೆ, ವ್ಯರ್ಥವಾಗಿ ಅಪವ್ಯಯವಾಗಿ ಹೋಗುತ್ತಲಿದ್ದ ಶ್ರೀಸಾಮಾನ್ಯರ ಸುಪ್ತಶಕ್ತಿಗಳು ದೇಶ–ಸಮಾಜಗಳಿಗೆ ಲಭ್ಯವಾದುವು. ಈ ದೇಶ ಶತಶತಮಾನಗಳವರೆಗೆ ಪರಕೀಯರ ಆಕ್ರಮಣಗಳನ್ನೂ ಅವರ ಅವಮಾನಕಾರಕ ಆಳಿಕೆಯಲ್ಲಿ ಲಾಂಛನಾಸ್ಪದವಾದ ದಾಸ್ಯವನ್ನೂ ಸಹಿಸುವುದಕ್ಕೆ ದೇಶದ ಜನಶಕ್ತಿಯು ಬಹುಭಾಗದ ಅಮಾನುಷೀಕರಣ (de humanisation)ವೇ ಅಪಮೂಲ್ಯವನ (Devaluation) ಕಾರಣವಾಗಿದ್ದಿತೆಂಬುದು ಸ್ವಯಂ ಸ್ಪಷ್ಟ. ಆದಿಯಿಂದಲೂ ಒಬ್ಬನ ಮೇಲೆ ಭಾರ ಹಾಕಿ ಅವನು ಸಾಮ್ರಾಟನಾಗಿರಬಹುದು, ಜಗದ್ಗುರುವಾಗಿರಬಹುದು. ಪ್ರಧಾನಿಯಾಗಿರಬಹುದು. ಅವನಿಗೇ 'ಉಧೋ ಉಧೋ' ಎನ್ನುತ್ತ ಕೈಕಟ್ಟಿ ಕುಳಿತುಕೊಳ್ಳುವವರ ಸಮಾಜವಿದು. ಸ್ವಂತ ಚಿಂತನೆಯ ಅಭಾವದಿಂದ ಸ್ವಶಕ್ತಿ ವಿಕಸನದ ಅಭಾವದಿಂದ, ಸ್ವಪ್ರಯತ್ನ ಸಾಹಸಗಳ ಅಭಾವದಿಂದ ಮೇಲ್ವರ್ಗಗಳ ವ್ಯಕ್ತಿಗಳೇ ಉಸಿರಾಡಿಸುವ ಯಂತ್ರಗಳಾಗಿದ್ದಾಗ ಕೆಳಗಿನ ಜನರ ಸ್ಥಿತಿಯ ಬಗ್ಗೆ ಕೇಳಬೇಕೇನು? 'ಇದೊಂದು ತಲೆಕೆಳಗಾಗಿ ನಿಂತ ಇಜಿಪ್ತದ ಪಿರಾಮಿಡ್ಡು' ಎಂದು ಇಂತಹ ಸಮಾಜವನ್ನು ಯಾರೋ ಬಣ್ಣಿಸಿದ್ದಾರೆ. ಆ ಸಣ್ಣ ಬುಡಕುಸಿಯಿತೋ, ಸಮಗ್ರ ಸಮಾಜದ ಮಹಾಪತನ, ದೇಶದ ದುರ್ಗತಿ.

ಬಸವಣ್ಣನವರ ಕ್ರಾಂತಿಯ ಪರಿಣಾಮವಾಗಿ ಸಮಾಜಕ್ಕೆ ಮೊದಲಸಲ ನಿಡುಬುಡ (broad base) ದೊರೆಯಿತು. ಸಮಾಜದ ಬುಡ ಸಮಾಜದಷ್ಟೇ ವಿಸ್ತಾರವಾಯಿತು. ಒಬ್ಬಿಬ್ಬರ ಉತ್ಥಾನಪತನ ಎಲ್ಲರ ಉತ್ಥಾನಪತನವಾಗಿಪರಿಣಮಿಸುತ್ತಿದ್ದ ಅಸಹಾಯಕರ

ಪರಿಸ್ಥಿತಿ ಹೋಗಿ ಎಲ್ಲರೂ ಸ್ವಂತ ವಿಚಾರ, ಸ್ವಾನುಭವ, ಸ್ವಕಾಯಕ. ಸ್ವಸಾಧನೆಗಳಿಂದ ತಮ್ಮ ಆತ್ಯಂತಿಕ ವಿಕಾಸವನ್ನು ಸಾಧಿಸಿ, ಒಟ್ಟು ಸಮಾಜದ ಸಾಮರ್ಥ್ಯಕ್ಕೆ ಭದ್ರತೆಗೆ, ಸ್ವಯಂಪೂರ್ಣತೆಗೆ, ಸುವ್ಯವಸ್ಥೆಗೆ, ಸುಖಶಾಂತಿಗಳಿಗೆ ತಂತಮ್ಮ ಕಾಣಿಕೆ ಸಲ್ಲಿಸುವಂತಾಯಿತು. ವೈಯಕ್ತಿಕ ವಿಕಾಸಕ್ಕೆ ಪೂರ್ಣಾವಕಾಶವನ್ನು ನೀಡಿಯೂ ಸಾಮಾಜಿಕ ಅಖಂಡತೆ ಐಕಮತ್ಯ, ಸದೃಢತೆ ಸ್ಥಿರತೆಗಳನ್ನು ಸಾಧಿಸಿದುದು ಬಸವಣ್ಣನವರ ಕ್ರಾಂತಿಯ ವೈಶಿಷ್ಟ್ಯ. ಇದನ್ನವರು ತಮ್ಮ 'ಭಕ್ತಿಪಕ್ಷ'ದ ಮೂಲಕ ನಡೆಸಿದರೆಂದು ಹೇಳಬಹುದು,

'ಕಾಗೆಯೊಂದಗುಳ ಕಂಡರೆ ಕರೆಯದೆ ತನ್ನ ಬಳಗವನು?
ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ?
ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ ಹಾಗೆ ಕೋಳಿಯಿಂದ ಕರಕಷ್ಟ.
ಕೂಡಲಸಂಗಮದೇವಾ' (೪೩೨)

ಯಾರಿಗೆ ಏನು ದೊರೆತರೂ ಎಲ್ಲರೂ ಹಂಚಿಕೊಂಡು ಉಣ್ಣಬೇಕು. ಅನುಭಾವವನ್ನೂ ಹಂಚಿಕೊಂಡು ಬೆಳೆಯಬೇಕು. ಆಹಾರಾದಿಗಳನ್ನೂ ಹಂಚಿಕೊಂಡು ಬಾಳಬೇಕು. ಹರಿದು ತಿನ್ನುವವರ ಕಾಲ ಮುಗಿಯಲಿ, ಹಂಚಿ ಉಣ್ಣುವವರ ಕಾಲ ಬರಲಿ, ಅನುಭಾವ ಹಂಚಿಕೊಂಡಷ್ಟೂ ಹೆಚ್ಚುತ್ತದೆ. ಆಹಾರಾದಿಗಳು ಹಂಚಿ ಉಂಡಷ್ಟೂ ಹಿಗ್ಗು ಹೆಚ್ಚಿಸುತ್ತವೆ. ಭಕ್ತರು ಭಕ್ತರಿಗೆ ನೆರವಾಗಿ ನಿಲ್ಲಬೇಕು; 'ಭಕ್ತ ಭಕ್ತನ ಮನೆಗೆ ಬಂದರೆ ಭೃತ್ಯಾಚಾರಮಾಡಬೇಕು. ಕರ್ತನಾಗಿ ಕಾಲತೊಳೆಯಿಸಿಕೊಂಡರೆ ಹಿಂದೆ ಮಾಡಿದ ಭಕ್ತಿಗೆ ಹಾನಿ; ಲಕ್ಷ ಗಾವುದ ದಾರಿಯ ಹೋಗಿ ಭಕ್ತನು ಭಕ್ತನ ಕಾಣ್ಬುದು ಸದಾಚಾರ, ಅಲ್ಲಿ ಕೂಡಿ ದಾಸೋಹವ ಮಾಡಿದರೆ ಕೂಡಿಕೊಂಬನು, ನಮ್ಮ ಕೂಡಲಸಂಗಮದೇವನು' (೨೪೬) ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ, ಬಂದಭಕ್ತರನ್ನು ಮೃದುವಚನಗಳಿಂದ ಸ್ವಾಗತಿಸಬೇಕು, 'ಮೃದುವಚನಗಳೆ ಸಕಲ ಜಪಂಗಳಯ್ಯ; ಮೃದುವಚನಗಳೆ ಸಕಲತಪಂಗಳಯ್ಯ; ಸದುವಿನಯವೇ ಸದಾಶಿವನ ಒಲುಮೆಯಯ್ಯಾ ದೇವಲೋಕ, ಕ್ಷೇತ್ರ ತೀರ್ಥಗಳೆಂಬ ಭಕ್ತನಿರ್ದತಾಣವೇ ದೇವಲೋಕ; ಭಕ್ತನಂಗಳವೇ ವಾರಣಾಸಿ; ಕಾಯಕವೇ ಕೈಲಾಸ ಇದು ಸತ್ಯ, ಕೂಡಲ ಸಂಗಮದೇವಾ!' (೧೩೯), ಆದುದರಿಂದ 'ಕಟ್ಟಿದಿರಿನಲ್ಲಿ ಶಿವಭಕ್ತನ ಕಂಡು, ದೃಷ್ಟಿ ಯಾರೆ ಶರಣೆಂದೊಡೆ, ಹುಟ್ಟೇಳು ಜನ್ಮದ ಪಾಪ ಬಿಟ್ಟು ಹಿಂಗುವುದು ನೋಡಾ, ಮುಟ್ಟಿ ಚರಣಕೆರಗಿದೊಡೆ ತನುವೊಪ್ಪಿದಂತೆ ಅಹುದು, ಪರುಷ ಮುಟಿದಂತೆ' (೧೪೦) 'ಭಕ್ತನ ಮುಖದರ್ಪಣದಲ್ಲಿ ಲಿಂಗವ ಕಾಣಬಹುದು' (೧೪೫) ಭಕ್ತನ ಕಾಯವೇ ಕೈಲಾಸವೆಂದಮೇಲೆ ಭಕ್ತನ ಮುಖವೇ ಲಿಂಗವೆಂದುದು ಸಹಜವೆ; ಅದು ಲಿಂಗವೆಂದು ನಂಬಿದ ಬಳಿಕ ಅವನಾವ ಕುಲದವ, ಯಾವ ಕಾಯಕದವನೆಂಬ ಪ್ರಶ್ನೆಯೇ ಹುಟ್ಟುವುದಿಲ್ಲವಲ್ಲವೆ? ಸಮಾನತೆಯ ಸ್ಥಿರೀಕರಣಕ್ಕೆ ಬಸವಣ್ಣನವರ ಈ ಭಕ್ತಿ ಪಕ್ಷ ಬಲವಾದ ಸಾಧನವಾಯಿತು. ಬಸವಣ್ಣನವರ ಭಕ್ತಿಯ ಕಲ್ಪನೆ ಅನನ್ಯವಾದುದು ಅದು ಕ್ರಿಯಾರೂಪದ

ಸಮಾನತೆ (equality to action) ಅದು ಅಂಧಶ್ರದ್ಧೆಗಳ ಅಸ್ತಿಗಳನ್ನು ಕರಗಿಸಿ ಅರಗಿಸಿಕೊಂಡ ತಾಮ್ರಪರ್ಣಿ, ಕುಲಹೊಲೆಗಳನ್ನು ತೊಳೆದು ಕಳೆದ ಭಾಗೀರಥಿ: ಭಕ್ತಭಕ್ತರನ್ನು ಬೆಸೆದ ವಜ್ರದುಂಟು.

## ೫

# ಆರ್ಥಿಕ ಅಸ್ತಿವಾರ

ಸಮಾನತೆ ಮಂತ್ರ, ಭಕ್ತಿತಂತ್ರವಾದುದೇನೋ ಸರಿ; ಆದರೆ ಇವುಗಳಿಗೆ ಆರ್ಥಿಕ ಆಧಾರ, ಅಸ್ತಿವಾರಗಳಿಲ್ಲದಿದ್ದರೆ ಅವು ತಳಕ್ಕೆ, ಕೆಳಕ್ಕೆ ಕುಸಿಯದಿರವೆಂಬುದನ್ನರಿತ ಬಸವಣ್ಣನವರು ತಾವು ಕಟ್ಟಿದ ಸಮಾಜದ ಆರ್ಥಿಕ ಸ್ವಾವಲಂಬನಕ್ಕೆ ಸ್ವಪರಿಪೂರ್ಣತೆಗೆ ಆರಂಭದಿಂದಲೇ ಆದ್ಯಗಮನವಿತ್ತರು. 'ಆವ ನೇಮವಾದರೇನು? ಹೇಮವಿಲ್ಲದಂಗೈಸಬಹುದೆ?' (೪೩೮) ಸಾಧ್ಯವಿಲ್ಲ. ಹುಟ್ಟಿದ ಜೀವಿಗೆ ಬೇಡಿದವರಿಗೆ ಕೊಡಬೇಕೆಂಬ ಬಯಕೆ ಸ್ವಾಭಾವಿಕವಾದುದು. ಕೆಲವರಿಗೆ ಅದಿಲ್ಲದಿರಬಹುದು. ಅದು ಅಸ್ವಾಭಾವಿಕವಾದುದು ಅಷ್ಟೆ. ಆದರೆ ಯಾರೋ ಬೇಡಿದಾಗ, ಕೊಡಲು ಕೈಯೊಳೇನೂ ಇಲ್ಲದೆ ಚಡಪಡಿಸುವುದು ಎಂಥ ವೇದನೆಯ ವಿಷಯ! 'ಕೊಡಲಿಲ್ಲೆಂಬುದರಿಂದ ಸಾಯಲುಬಹುದು. ಸೈರಿಸಬಾರದು; ಬೇಡುವವರ ನೋಡಿ ನೋಡಿ, ಈಯಲಿಲ್ಲದವನ ಜೀವನವದೇತಕೋ, ಕೂಡಲಸಂಗಮದೇವಾ?' (೪೩೮) ಭಕ್ತರು ಭಗವಂತನನ್ನೂ ಬೇಡಬಾರದು. ಆದರೆ ಬೇಡಿದವರಿಗೆ ನೀಡುವ ಸ್ಥಿತಿಯಲ್ಲಿರಬೇಕು. ತಮ್ಮ ಜೀವನಯಾಪನೆಗಾಗಿ ಪರಾವಲಂಬಿಗಳಂತೂ ಆಗಲೇಕೂಡದು. ಅದು ಅಸಹ್ಯವಾದುದು,

'ಮಾಡುವ ನೀಡುವ ಭಕ್ತನ ಕಂಡರೆ
ನಿಧಿನಿಧಾನವ ಕಂಡಂತಾಯಿತ್ತು;
ಪಾದೋದಕ ಪ್ರಸಾದಜೀವಿಯ ಕಂಡರೆ
ಹೊಸ ಪ್ರಾಣ ಬಂದಂತಾಯಿತ್ತು;
ಅನ್ಯರ ಮನೆಗೆ ತನ್ನುದರವ ಹೊರೆಯದ ಅಚ್ಚ ಶರಣರ ಕಂಡರೆ
ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆನು! (೭೫೮)

ಅಣ್ಣನವರ ದೃಷ್ಟಿಯಲ್ಲಿ ಪರೋಪಜೀವನ (ಕಚಿಡಿಭಿಣುಠಟಿ) ಪಾಪ; ಸ್ವಾವಲಂಬನ ಪುಣ್ಯ, ಆದುದರಿಂದ ಎಚ್ಚರಿಸುತ್ತಾರೆ! 'ಭಕ್ತಿ ವಿಶೇಷನ ಮಾಡುವರೆ ಹತ್ತು ಬೆರಳುಗಳುಂಟು; ಹಾಸಿ ದುಡಿದರೆ ತನಗುಂಟು, ತನ್ನ ಪ್ರಮಥರಿಗುಂಟು' (೩೨೪) ಮತ್ತೇಕೆ ಪರಾವಲಂಬನ, ಪರೋಪಜೀವನ? ಮಾರಿತಂದೆಗಳನ್ನು ನೋಡಿರಿ, ರಾಜ್ಯ, ರಾಜ್ಯಕೋಶಗಳು

ಕಃಪದಾರ್ಥವೆಂದು ಕೊಸರಿ ಕೊಡಹಿ ಬಂದು ಕಟ್ಟಿಗೆ ಮಾರುವ ಕಾಯಕ ಕೈಕೊಂಡು ಕಲ್ಯಾಣದ ಭಕ್ತರಿಗೆಲ್ಲ ದಾರಿದೀಪವಾಗಿದ್ದಾರೆ. 'ಮಾರಿತಂದೆಗಳಂತೆ ಎನಗೇಕಹುದಯ್ಯ? ರತ್ನದ ಸಂಕಲೆಯನಿಕ್ಕಿ ಕಾಡಿಹೆ – ಕೂಡಲಸಂಗಮದೇವಾ ಶಿವಧೋ। ಶಿವಧೋ।....' (೩೨೪) ಎಲ್ಲರಿಗೂ ಎಂಥ ಸತ್ಯ ಶುದ್ಧ ಕಾಯಕವನ್ನು ಕೊಟ್ಟ ಕೂಡಲಸಂಗ – ನನಗೇಕೆ ಈ 'ರತ್ನದ ಸಂಕಲೆ' – ದಣ್ಣಾಯಕತ್ವವನ್ನಿಕ್ಕಿದ? 'ಹೊಲೆ ಹೊಲೆಯರ ಮನೆಯ ಹೊಕ್ಕಾದರೆಯೂ ಸಲೆ ಕೈಕೂಲಿಯ ಮಾಡಿಯಾದರೆಯೂ ನಿಮ್ಮ ನಿಲವಿಂಗೆ ನಿಲುವೆನಲ್ಲದೆ ಎನ್ನ ಒಡಲವಸರಕ್ಕೆ ಕುದಿದೆನಾದರೆ ತಲೆದುಡ' ಎಂದು ವಚನವಿತ್ತಿದ್ದೆ, ಆದರೂ ಈ ರತ್ನದ ಸಂಕಲೆ ತಪ್ಪಲಿಲ್ಲ! ಯಾವ ಅನರ್ಥಕ್ಕಾಗಿ ಇದು ನನ್ನನ್ನು ಕಟ್ಟಿ ಕುಟ್ಟಿತ್ತಿದೆಯೋ!

ಏನಾದರೂ ಆಗಲಿ, ಭಕ್ತರಿಗೆ ಬಡತನ ಬಾರದಿರಲಿ. ಅವರು ಬೇಡುವ ಕಾಡುವ ಭಕ್ತರಾಗದಿರಲಿ, 'ಮಾಡುವ ನೀಡುವ' ಭಕ್ತರಾಗಲಿ; 'ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆವ' ಪರಾಧೀನ, ಪರತಂತ್ರ, ಪರಾವಲಂಬಿ ಭಕ್ತರಾಗದಿರಲಿ, 'ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ'ರಾದ ಸ್ವತಂತ್ರ ಧೀರಶರಣರಾಗಲಿ; ಇದನ್ನು ಹೇಗೆ ಸಾದಿಸುವುದು? 'ಕಾಯಕವೇ ಕೈಲಾಸ'ವೆಂದು ನಂಬಿ ಸಾಧಿಸುವುದು; ಕಾಯಕ ಕ್ರಾಂತಿಯಿಂದ ಸಾಧಿಸುವುದು; ಪರಮೋಚ್ಚ ಸ್ಥಾನವನ್ನಿತ್ತು, ಮಾನವನ್ನಿತ್ತು ಸಾಧಿಸುವುದು. ಆದುದರಿಂದ ಕಾಯಕವಿಲ್ಲದವರಿಗೆ ಬಸವಸಮಾಜದಲ್ಲಿ ಸ್ಥಾನವಿಲ್ಲ. ಕಾಯಕ ಮಾಡದ ಯಾರಿಗೂ ಮಾನವಿಲ್ಲ! ಭಕ್ತನಿರಲಿ, ಗುರುವಿರಲಿ, ಜಂಗಮವಿರಲಿ – ಯಾರೇ ಇರಲಿ, ಕಾಯಕವಿಲ್ಲದೆ ಇರಕೂಡದು, ಬೇಡುವಬಾಯಿ, ಒಡ್ಡಿದ ಕೈಯಾಗಿ ಬರಕೂಡದು! ಕಾಯಕ ಲಿಂಗಪೂಜೆಗಿಂತ ಮಹತ್ವದ್ದು; ಗುರುದರುಶನಕ್ಕಿಂತ ಗುರುತರವಾದುದು; ಜಂಗಮದಾಸೋಹಕ್ಕಿಂತ ಪರತರವಾದುದು.

'ಕಾಯಕದಲ್ಲಿ ನಿರತನಾದರೆ, ಗುರುದರುಶನವಾದಡೂ ಮರೆಯಬೇಕು
ಲಿಂಗ ಪೂಜೆಯಾದಡೂ ಮರೆಯಬೇಕು;
ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು!
ಕಾಯಕವೇ ಕೈಲಾಸವಾದ ಕಾರಣ,
ಅಮರೇಶ್ವರ ಲಿಂಗವಾಯಿತ್ತಾದಡೂ
ಕಾಯಕದೊಳಗು !' (ಆಯ್ದಕ್ಕಿ ಮಾರಯ್ಯ)

'ಗುರುವಾದರೂ ಕಾಯಕದಿಂದವೆ ಜೀವನ್ಮುಕ್ತಿ;
ಲಿಂಗವಾದರೂ ಕಾಯಕದಿಂದವೆ ಶಿಲೆಯ ಕುರುಹು ಹರಿವುದು;
ಜಂಗಮವಾದರೂ ಕಾಯಕದಿಂದವೆ ತನ್ನ ವೇಷವ ಪಾಶ ಹರಿವುದು;
ಇದು ಚಂದೇಶ್ವರಲಿಂಗದ ಅರಿವು ಕೇಳಾ, ಪ್ರಭುವೆ!....'
(ನುಲಿಯ ಚಂದಯ್ಯ)

ಕಾಯಕವು ಉದರಂಭರಣೋಪಾಯ ಮಾತ್ರವಲ್ಲ; ತನ್ನನ್ನು ಆಶ್ರಯಿಸಿದವರ ಕಾಯದ ಗುಣಗಳನ್ನು ಕಳೆದುಮನದ ವಿಕಾರಗಳನ್ನು ಮಾಣಿಸಿ, ಆತ್ಮದ ಐಸಿರಿಯನ್ನೂ ಒದಗಿಸುವ ದಿವ್ಯ ಸಾಧನ, ಅದು ಜೀವನೋಪಾಯ, ಸ್ವಾವಲಂಬನ, ಆತ್ಮೋತ್ಕರ್ಷ, ದಾಸೋಹದ ಮೂಲಕ ಚರಸೇವೆ, ಧನದಲ್ಲಿ ಶುಚಿತ್ವ – ಪ್ರಾಣದಲ್ಲಿ ನಿರ್ಭಯತ್ವ, ಧೀರತೆ – ಸ್ವತಂತ್ರತೆಗಳ ಸಂಗಮ, ಬಸವಣ್ಣನು ಬೋಧಿಸಿದ ಭಕ್ತಿಯಲ್ಲಿ ಜ್ಞಾನ–ಕರ್ಮ–ಭಗವತ್ಪ್ರೇಮ–ಮಾನವಪ್ರೇಮ–ಸಾಮಾಜಿಕ ಹೊಣೆಗಾರಿಕೆ, ನೀತಿವಂತಿಕೆ ಎಲ್ಲ ಸೇರಿರುವಂತೆ ಬಸವಣ್ಣ ರೂಪಿಸಿದ ಕಾಯಕದಲ್ಲಿ ಭಕ್ತಿ ಮೊದಲ್ಗೊಂಡು ಜೀವನ್ಮುಕ್ತಿ ಸಾಧನೆಗೆ ಬೇಕಾಗುವ ಎಲ್ಲವೂ ಸೇರಿದೆ. ಕಾಯಕವೇ ಕಾಮಧೇನು; ಕಾಯಕವೆ ಕಲ್ಪವೃಕ್ಷ; ಕಾಯಕವೆ ಯೋಗ, ಕಾಯಕವೆ ಕೈಲಾಸ; ಭಕ್ತರಲ್ಲಿ ಕುಲ–ಹೊಲೆಗಳಿಲ್ಲದಂತೆ ಕಾಯಕದಲ್ಲಿ ಕೀಳುಮೇಲಿಲ್ಲ. ಮೇಲಿನ ಕೆಲಸ ಮಾಡುವವರಿಗಿಂತ ಕೆಳಗಿನ ಕೆಲಸ ಮಾಡುವವರಿಗೇ ಹೆಚ್ಚಿನ ಗೌರವ, ಅಧಿಕ ಆದರ ಕಾಯಕ ವ್ಯವಸ್ಥೆಯಲ್ಲಿ. ಅಂತೆಯೆ ಮಲಿನ ವಸ್ತ್ರಗಳನ್ನು ಮಡಿ ಮಾಡುವ ಮಡಿವಾಳಯ್ಯನಿಗೆ, ಕಟ್ಟಿಗೆ ಮಾರುವ ಮಾರಯ್ಯನಿಗೆ ದಂಡನಾಥ ಚೂಡಾಮಣಿ ಬಸವಣ್ಣನನ್ನೂ ಎಚ್ಚರಿಸಬಲ್ಲ ಬಲ್ಮೆ ಬಂದಿತು. ಕಾಯಕದ ಮಹತ್ತಿಗೆ ಅದು ತರುವ ಆದಾಯ ಮಾನದಂಡವಿಲ್ಲ – ಅದರ ಸತ್ಯ ಶುದ್ಧತೆ, ಪ್ರಾಮಾಣಿಕತೆ, ಪಾಪರಾಹಿತ್ಯ, ಆಶಾದೂರತ್ವ, 'ಕಂದಿಸಿ, ಕುಂದಿಸಿ, ಬಂಧಿಸಿ, ಬಳಲಿಸಿ ಮಾಡದ ಪಾವನತ್ವ ಕಾಡಿಬೇಡದ, ದುರ್ಮೋಹ – ದುರಭಿಮಾನ – ದುರಾಗ್ರಹಗಳಿಗೀಡಾದ ಔನ್ನತ್ಯಗಳು ಕಾರಣ, ಇದು ವೃತ್ತಿಯನ್ನು ತತ್ವಮಯ ಮಾಡಿದ, ದುಡಿತವನ್ನು ದೇವಪೂಜೆಯನ್ನಾಗಿ ಮಾರ್ಪಡಿಸಿದ, ಕರ್ಮ ನಿರ್ಮಳ ಮಾಡಿ ಧರ್ಮವನ್ನಾಗಿಸಿದ ಪವಾಡ! ಬೇರೆ ಮಾರ್ಗದಿಂದ ಬಂದ ಧನ, ಪಾಪಿಯ ಧನ 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್‌ಪಾತ್ರಕ್ಕೆ ಸಲ್ಲದಯ್ಯ, ನಾಯ ಹಾಲು ನಾಯಿಗಲ್ಲದೆ ಪಂಚಮೃತಕ್ಕೆ ಸಲ್ಲದಯ್ಯಾ! ನಮ್ಮ ಕೂಡಲಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥಕಂಸಯ್ಯಾ!' (೨೨೩)

'ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ! ಮಾನವೇತಿಹಾಸದ ಯಾವ ಯುಗದಲ್ಲೂ ಅರ್ಥದ ಅಭಾವವಿರಲಿಲ್ಲವೇನೊ. ಆದರೂ ಆ ಅರ್ಥ ಜನರಿಗೆ ಸಲ್ಲದೆ ವ್ಯರ್ಥವಾಗಿ ಹೋಯಿತು. ಇದರಲ್ಲಿ ಪರಾರ್ಥಕ್ಕಾಗಿಯೇ ಇರುವ ಅರ್ಥದ ತಪ್ಪಿಲ್ಲ; ಆ ಅರ್ಥವನ್ನು ಸ್ವಾರ್ಥಕ್ಕಾಗಿ ದುರುಪಯೋಗಿಸಿಕೊಂಡ ಮಾನವ ದುರಾಶೆಯ ತಪ್ಪಿದೆ. ಅರ್ಥ ಬೇಕು, ಅದು ಸತ್ಯ ಶುದ್ಧ ಕಾಯಕದಿಂದ, ಪಾಪರಹಿತ ರೀತಿಯಿಂದ ಬರಬೇಕು; ಮತ್ತು ಎಲ್ಲರಿಗಾಗಿ, ಉಳ್ಳವರಿಗಿಂತ ಹೆಚ್ಚಾಗಿ ಇಲ್ಲದವರಿಗಾಗಿ ಸಲ್ಲಬೇಕು. ಆಗ ಅರ್ಥದ ಸಾರ್ಥಕತೆ ಇಲ್ಲದಿದ್ದರೆ ಕಾಪಾಡುವ ಅರ್ಥವೇ ಕಾಡುವ ಶನಿಯಾಗುತ್ತದೆ. ಅದು ಹಾಗಾಗದಂತೆ ನೋಡಿಕೊಳ್ಳಬೇಕು ಹೇಗೆ? ಅದಕ್ಕೊಂದು ಘನ ಉದ್ದೇಶ, ಉದಾರ ಆದರ್ಶ ಜೋಡಿಸಿ ಕೇಳಿ:

'ನಾನು ಆರಂಬವ ಮಾಡುವೆನಯ್ಯಾ – ಗುರುಪೂಜೆಗೆಂದು;
ನಾನು ಬೆವಹಾರವ ಮಾಡುವೆನಯ್ಯಾ – ಲಿಂಗಾರ್ಚನೆಗೆಂದು;
ನಾನು ಪರಸೇವೆಯ ಮಾಡುವೆನಯ್ಯಾ – ಜಂಗಮದಾಸೋಹಕ್ಕೆಂದು;
ನಾನಾವಾವ ಕರ್ಮಗಳ ಮಾಡಿದರೆಯೂ
ನೀ ಕೊಟ್ಟ ದ್ರವ್ಯದ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು;
ನಿಮ್ಮ ಸೊಮ್ಮಿಂಗೆ ಸಲಿಸುವೆನು, ನಿಮ್ಮಾಣೆ –
ಕೂಡಲಸಂಗಮದೇವ!' (೭೦೮)

ಈ ಲೋಕೋತ್ತರ ವಚನದಲ್ಲಿ ಅಣ್ಣನ ಆಶೋತ್ತರಗಳು ಒಡಮೂಡಿವೆ; ಕಾಯಕ ಮಾಡಬೆಕು; ಅದನ್ನು ಹರಗುರು ಚರಸೇವೆಗಾಗಿ, ಮಾಡಬೇಕು: ಅದಕ್ಕೆ ಫಲ ಕೊಡುವವನು ಕೂಡಲಸಂಗಮನೆಂದು ನಂಬಬೇಕು; ಅತ್ಯಗತ್ಯಗಳಿಗಾಗಿ ಮಾತ್ರ ಮಿತವಾಗಿ ಬಳಸಿ ಉಳಿದುದನ್ನು 'ಶಿವನಸೊಮ್ಮಿ'ಗೆ ಸಲಿಸಬೇಕು. ಇದಿಲ್ಲದೆ 'ಈ ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ ಅಧರ್ಮದಲ್ಲಿ ಕೆಡಿಸುವ ಸುತನಂತೆ ಶಿವನ ಸೊಮ್ಮು ಶಿವಂಗೆ ಮಾಡದೆ, ಅನ್ಯಕ್ಕೆ ಮಾಡಿದೊಡೆ, ತನ್ನ ಭಕ್ತಿ ತನ್ನನೆ ಕೆಡಿಸುವುದು – ಕೂಡಲಸಂಗಮದೇವಾ' (೨೧೩) ಆದುದರಿಂದ : 'ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ, ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ ನಿಮ್ಮಾಣೆ, ನಿಮ್ಮ ಪುರಾತರಾಣೆ! ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ, ಕೂಡಲಸಂಗಮದೇವ!' (೪೩೫) 'ನೀನಿಕ್ಕಿದ ಬೀಯದಲ್ಲಿ ವಂಚನೆಯುಳ್ಳರೆ ಸಂಗಾ. ನಿಮ್ಮ ತೊತ್ತುತನಕ್ಕೆ ದೂರವಯ್ಯಾ ! ಕದ್ದು ತಿಂದರೆ ಕೈಹಿಡಿದೊಮ್ಮೆ ಬಡಿದು ತುಡುಗುಣಿತನವ ಬಿಡಿಸಯ್ಯಾ! (೪೩೩)

ತುಡುಗುಣಿತನವೆ, ನಿನ್ನ ವೇಷಗಳೆಷ್ಟು, ರೂಪಗಳೆಷ್ಟು, ನಾಟಕಗಳೆಷ್ಟು, ನಾಮಾಂಕಿತಗಳೆಷ್ಟು! ಎಷ್ಟು ಸರ್ವವ್ಯಾಪಿ ನೀನು, ಅರಮನೆಗಳಲ್ಲಿ ನೀನೇ, ಗುರುಮನೆಗಳಲ್ಲಿ ನೀನೇ, ಗುಡಿಗುಂಡಾರಗಳಲ್ಲಿ ನೀನೇ, ಮಹಡಿ ಚಾವಡಿಗಳಲ್ಲ ನೀನೇ, ನ್ಯಾಯಾಲಯಗಳಲ್ಲಿ ನೀನೇ, ಆಸ್ಪತ್ರೆಗಳಲ್ಲಿನೀನೇ – ಎಲ್ಲೆಲ್ಲೂ ನೀನೇ! ನಿನ್ನ ವಿರುದ್ಧ ಕತ್ತಿಯೆತ್ತಿದನಲ್ಲ ಈ ಬಸವಣ್ಣ, ಎಂಥ ಎಂಟೆದೆ ಅವನದು!

ಸ್ವಲ್ಪ ಕೂಲಂಕುಷವಾಗಿ ಪರಿಶೀಲಿಸಬೇಕಾದ ಪ್ರಶ್ನೆಯಿದು. 'ಏಕಮೇವತು ಶೂದ್ರಸ್ಯ ಪ್ರಭುಃ ಕರ್ಮ ಸಮಾರಿಶತ್। ಏತೇಷಾಮೇವ ವರ್ಣಾನಾಂ ಸುಷ್ರೂಷಾ ಮನಸೂಯಯಾ॥ ಮೂರು ವರ್ಣಗಳವರ – ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ – ಸೇವೆಯನ್ನು ಹಿಂದೆ ಮುಂದೆ ನೋಡದೇ ಮಾಡುವುದೇ ಶೂದ್ರರ ಕೆಲಸ' ಎಂದು ಸಾರಿದ ಮನು ದಾಸ ಪದ್ಧತಿಯ ಸಮರ್ಥಕನೂ ಅಹುದು; ಏಳು ಪ್ರಕಾರಗಳ ದಾಸರನ್ನವನು ಉಲ್ಲೇಖಿಸಿದ್ದಾನೆ. ಯುದ್ಧದಲ್ಲಿ ಬಂಧಿಯಾದವರು, (ಸ್ವಜಾಹತ) ಉಪಜೀವನಕ್ಕಾಗಿ ದಾಸತ್ವವನ್ನು ಸ್ವೀಕರಿಸಿದವರು,

(ಭಕ್ತ–ದಾಸ) ಒಡೆಯನ ಮನೆಯಲ್ಲಿ ದಾಸನಾಗಿಯೇ ಹುಟ್ಟಿದವನು (ಗ್ರಹಜಾ) ಕೊಳ್ಳಲ್ಪಟ್ಟವನು (ಕ್ರೀತ) ಕೊಡುಗೆಯಾಗಿ ಕೊಡಲ್ಪಟ್ಟವನು (ಪೈತ್ರುಕ) ದಂಡನೆಗೊಳಗಾಗಿ ದಾಸನಾದವನು (ದಂಡದಾಸ). ಇವನ ತರುವಾಯ ಬಂದ ನಾರದ ಇನ್ನೂ ಮುಂದೆ ಹೋಗಿ ಹದಿನೈದು ಪ್ರಕಾರದ ದಾಸರನ್ನು ಹೆಸರಿಸಿದ್ದಾನೆ: ಒಡೆಯನ* ಮನೆಯಲ್ಲಿ ಹುಟ್ಟಿದವ, ಕೊಳ್ಳಲ್ಪಟ್ಟವ, ದಾನವಾಗಿ ದೊರೆತವ, ಪಿತ್ರಾರ್ಜಿತವಾಗಿ ದೊರೆತವ, ಬರಗಾಲದಲ್ಲಿ ಸಾಕಲ್ಪಟ್ಟವನು. ಅಧಿಕೃತ ಒಡೆಯನಿಂದ ಒತ್ತೆ ಇಡಲ್ಪಟ್ಟವ. ಸಾಲ ಸೂಟು ಬಿಟ್ಟುದುದಕ್ಕಾಗಿ ದಾಸನಾದವ, ಒಡಂಬಡಿಕೆಯಂತೆ ದಾಸನಾದವ, ಉದರ ನಿರ್ವಾಹಕ್ಕಾಗಿ ದಾಸನಾದವ, ತನ್ನನ್ನು ತನೇ ಮಾರಿಕೊಂಡು ದಾಸನಾದವ, ಸ್ತ್ರೀದಾಸಿಯೊಡನೆ ದಾಸನಾಗಿ ಮಾರಲ್ಪಟ್ಟವ (ನಾರದ ಸ್ಮೃತಿ ೫–೨೬–೨) ಆಗಿದ್ದ ಈಗಲೂ ಇರುವ ಋಣದಾಸತೆಯ ಪ್ರಾಬಲ್ಯವನ್ನು ನೋಡಿದರೆ ಅಂದಿನ ಭೀಕರ ಬಡತನದ ಚಿತ್ರ ದೊರೆಯುತ್ತದೆ. ಮನುವಿನ ಮತದಂತೆ ಬ್ರಾಹ್ಮಣನೆಂದೂ ದಾಸನಾಗಲಾರ; ಇಷ್ಟೆ ಅಲ್ಲ, ಅವನಿಗೆ ತನ್ನ ದಾಸನ ಗಳಿಕೆಯನ್ನು ಅಪಹರಿಸುವ ಅಧಿಕಾರವೂ ಇದ್ದಿತು. ಯಾಕಂದರೆ ಶೂದ್ರ ಇಲ್ಲವೆ ದಾಸನಿಗೆ ತನ್ನದೇಂಬ ಸಂಪತ್ತನ್ನು ಇರಿಸಿಕೊಳ್ಳುವ ಅಧಿಕಾರವೆ ಇಲ್ಲ. * ಶ್ರೀ ಆರ್ ಕರ್ಮರು ತಮ್ಮ 'ಶೂದ್ರಾಜ್ ಇನ್ ಎನ್ಸಂಟ್ ಇಂಡಿಯಾ' (ಪು. ೧೦೮) ಎಂಬ ಪುಸ್ತಕದಲ್ಲಿ ಒಬ್ಬ ದಾಸಿಯ ವಿಷಯವಾಗಿ ಬರೆದಿದ್ದಾರೆ. ಅವಳು ತಾನು ಗಳಿಸುತ್ತಿದ್ದುದನ್ನು ತನ್ನ ಒಡೆಯನಿಗೆ ಕೊಡುತ್ತಿರಲಿಲ್ಲವೆಂಬ ಕಾರಣದಿಂದಲೇ ಅವಳಿಗೆ ಶಾರೀರಿಕ ದಂಡ ವಿಧಿಸಲಾಯಿತು! ಶ್ರೀ ಕೆ.ಎಸ್. ಶರಣರು 'ಲೇಬರ್ ಇನ್ ಎನ್ಸಂಟ್ ಇಂಡಿಯಾ' ಎಂಬ ಪುಸ್ತಕದಲ್ಲಿ (ಪು. ೨೬) ಧವಸಾಲೀ ಎಂಬ ಇನ್ನೊಬ್ಬ ದಾಸಿಯ ವ್ಯಥೆಯ ಕಥೆಯನ್ನು ವರ್ಣಿಸಿದ್ದಾರೆ. ಅವಳನ್ನು ನಿರ್ದಯತೆಯಿಂದ ಹೊಡೆಯಲಾಗುತ್ತಿತ್ತು. ಮತ್ತು ಬಾಡಿಗೆಯ ಮೇಲೆ ಅವಳನ್ನು ದಾಸವೃತ್ತಿಗಾಗಿ ಬೇರೆಯವರಿಗೆ ಕೊಡಲಾಗುತ್ತಿದ್ದಿತು. ಇಂದು ಕೂಡ ಜೀತ ಪದ್ಧತಿಯ ನಿರ್ಮೂಲನ ಕಾರ್ಯ ನಡೆದುದರ ಫಲವಾಗಿ ಎಂಥೆಂಥ ಹೃದಯವಿದ್ರಾವಕ ಪ್ರಕರಣಗಳು ಬಯಲಿಗೆ ಬಂದಿವೆ. ಅನ್ಯರ ಶ್ರಮದ ಉತ್ಪಾದನೆಯನ್ನು ಸ್ವಾಹಾ ಮಾಡಿ ಶ್ರೀಮಂತರಾಗಬೇಕೆಂಬ ಬಯಕೆ ಗ್ರೀಕ್ ರೋಮ ಸಾಮ್ರಾಜ್ಯಗಳಲ್ಲಿದ್ದಂತೆ ಇಲ್ಲಿಯ ಮೇಲಿನ ವರ್ಣದವರಿಗೂ ಇದ್ದಿತು. ಅದರ ಪರಿಣಾಮವಾಗಿ ದೇಶದಲ್ಲೆಲ್ಲ ದಾಸ ಪದ್ಧತಿ ಪ್ರಚಲಿತವಾಗಿ ದುರಾಶಾಪೀಡಿತ ಮಾನವನ ನಿರ್ಘೃಣತೆಯು, ಕ್ರೌರ್ಯದ, ಕರುಣಾಶೂನ್ಯತೆಯ ಸಾವಿರ ಸಾವಿರ ಉದಾಹರಣೆಗಳನ್ನು ಸೃಷ್ಟಿಸಿತು. ಶ್ರೀ ಆರ್. ಶರ್ಮಾರವರು ಮೇಲೆ ಹೇಳಿದ ತಮ್ಮ ಹೊತ್ತಗೆಯಲ್ಲಿ ಈ ಬಗ್ಗೆ ಮೈಕೂದಲ ನೆಟ್ಟಗಾಗಿಸುವ

---

* **'ಧ್ವಜಾಹೃತೋ ಭಕ್ತದಾಸೋಗೃಹಜಃ ಕ್ರೀತ ದತ್ರಿಮೋ।**
**ಪೈತ್ರಿಕೋ ದಂಡದಾಸಶ್ಚ ಸಪ್ತ್ಯೈತೇಃ ದಾಸಯೋನಯಂ॥' (ನಮುಸ್ಮೃತಿ ೮–೪೧೫)**

* **"ವಿಸ್ರಬ್ಧಂ ಬ್ರಾಹ್ಮಣಃ? ಶೂದ್ರಾದ್ರವ್ಯೋಪಾದನ ಮಾಚರೇತ್।**
**ಸಹಿತಸ್ಯಾಸ್ತ್ರಿ ಕಿಂಚಿತ್ಸ್ವಂ ಭರರ್ಥಹಾರ್ಯಧನಾಹಿಸಃ ॥ (ಅದೇ, ೪೧೭)**

ವಿಷಯಗಳನ್ನು ವಿರಿಸಿದ್ದಾರೆ, 'ಒಡೆಯನು ತನ್ನ ಗೃಹದಾಸ ಅಥವಾ ದೂತ ಅಥವಾ ಕೊಂಡ ದಾಸ, ತಾನಾಗಿ ಬಂದ ದಾಸನಿಗೆ ಅಲ್ಪ ಅಪರಾಧಗಳಿಗಾಗಿಯೂ ಅತ್ಯಂತ ಕಠಿಣ ಶಿಕ್ಷೆ ವಿಧಿಸುತ್ತಿದ್ದನು. ಉದಹರಣೆಗಗಿ. ಅವನನ್ನು ದಂಡಿಸುವುದು, ಅವನ ಕೇಶಗಳನ್ನು ಕೀಳಿಸುವುದು, ಮೈಮೆತ್ತಗಾಗುವಂತೆ ಹೊಡೆಯುವುದು, ಶೃಂಖಲೆಗಳಲ್ಲಿ ಬಂಧಿಸುವುದು, ಬಂದೀಖಾನೆಯಲ್ಲಿ ಬೀಸಾಡುವುದು, ಸರಪಳಿಗೆ ಕಟ್ಟುವುದು, ಕಟ್ಟಿ ಎಳೆಯುವುದು, ಅವನ ಕಣ್ಣು, ಹಲ್ಲು ಇಲ್ಲವೆ ನಾಲಗೆಗಳನ್ನು ಕೀಳಿಸುವುದು, ಅವನ ಕೈ, ಕಾಲು, ಕಿವಿ, ಮೂಗು, ತುಟಿಗಳನ್ನು ಕತ್ತರಿಸುವುದು, ಗಲ್ಲಿಗೇರಿಸುವುದು, ಅವನ ಚರ್ಮ ಸುಲಿಸಿಕೊಳ್ಳುವುದು, ಶೂಲಕ್ಕೇರಿಸಿದ ಅವನನ್ನು ಎಲ್ಲ ಕಡೆಗೂ ತಿರುಗಿಸುವುದು, ಅವನ ಮೈಯ ಮಾಂಸವನ್ನು ಹೆರಚಿಕೊಳ್ಳುವುದು, ಅವನ ಗಾಯಗಳಿಗೆ ಹುಳಿ ಹಿಂಡುವುದು, ಮೈಯೆಲ್ಲ ಪರಚಿಕೊಳ್ಳುವ ಮುಳ್ಳುಹುಲ್ಲಿನ ಮೇಲೆ ಮಲಗಿಸುವುದು, ಅವನನ್ನು ಸಿಂಹದ ಆಯಾಲಕಕ್ಕೆ, ಬಾಲಕ್ಕೆ ಕಟ್ಟುವುದು, ಉರಿಯುವ ಬೆಂಕಿಯಲ್ಲಿ ಅವನನ್ನು ಸುಡುವುದು, ಕಾಗೆ ಹದ್ದುಗಳಿಂದ ಅವನ ಮೈಮಾಂಸವನ್ನು ಅಗಿದು ತಿನ್ನಿಸುವುದು, ಅವನಿಗೆ ಆಹಾರ ನೀರುಗಳನ್ನು ನಿಲ್ಲಿಸಿಬಿಡುವುದು, ಆಜನ್ಮ ಕಾರಾಗೃಹದಲ್ಲಿರಿಸುವುದು, ಇವುಗಳಲ್ಲಿ ಯಾವುದೇ ಒಂದು ವಿಧದಿಂದ ಅವನನ್ನು ಮೃತ್ಯುವಿನ ಬಾಯಿಗೆ ನೂಕುವುದು – ಈ ಎಲ್ಲ ಅಧಿಕಾರಗಳೂ ಈ ದುರ್ದೈವಿ ದಾಸರ ಸ್ವಾಮಿಗಳಿಗೆ 'ಪ್ರಾಪ್ತವಾಗಿದ್ದವು!' ಈ ಚಿತ್ರಹಿಂಸೆಯನ್ನು ತಾಳಲಾರದೆ ಪಾರಾಗಿ ಓಡಿ ಹೋದ ದಾಸರು ಮತ್ತೆ ಸಿಕ್ಕರೆ ಅವರಿಗೆ ಭಯಂಕರವಾದ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಇವರಿಗಿಂತ ಸ್ವಲ್ಪ ಮೇಲೆನಿಸಿದ ನಾಲ್ಕು ಬಗೆಯ ಸೇವಕರ ವರ್ಗಗಳೂ ಇದ್ದವು.

ಹನ್ನೆರಡನೆಯ ಶತಮಾನದಲ್ಲಿ ಈ ನಾನಾ ಬಗೆಯ ದಾಸರ ದಾಸಿಯರ ಹೆಚ್ಚು – ಕಡಿಮೆ ಹೀಗೆಯೇ ಇದ್ದಿರಬಹುದೆಂಬುದಕ್ಕೆ ಇಂದಿಗೂ ಉಳಿದಿರುವ ಪ್ರತಿಬದ್ಧ ಶ್ರಮಿಕ ಪದ್ಧತಿ, ಋಣದಾಸತ್ವ ಇತ್ಯಾದಿಗಳು ಸಾಕ್ಷಿಯಾಗಿವೆ. ಇವರ ಒಡೆಯರಾದವರು ನಡೆಸುತ್ತಿದ್ದ ಅಮಾನುಷ ಕೃತ್ಯಗಳನ್ನು ಬಸವಣ್ಣನವರು ಕಂಡು ಅವರ ತುಡು ಗುಣಿತನವನ್ನು ತಡೆಯುವದು ಸಾಧ್ಯವಾಗಲಿ, ಬಿಡಲಿ, ಅವರ ಒಂಟಿ ಹಿಡಿತದಿಂದ ಈ ಹತಭಾಗ್ಯರನ್ನು ಪಾರು ಮಾಡಲು ಸಾಧ್ಯವಿದೆ ಎಂಬುದನ್ನು ತಮ್ಮ ಕಾಯಕ ವ್ಯವಸ್ಥೆಯಿಂದ ತೋರಿಸಿಕೊಟ್ಟರು. ಯಾಕೆಂದರೆ ಕಾಯಕದಲ್ಲಿ ಒಡೆಯ – ಊಳಿಗದವರೆಂಬ, ಮಾಲಿಕ – ನೌಕರರೆಂಬ ಸಂಬಂಧ (Employer - Employee relationship) ವೇ ಇಲ್ಲ. ಸ್ವದತ್ತವೃತ್ತಿ (Self employment)ಗೆ ಉಜ್ವಲ ಉದಾಹರಣೆ ಕಾಯಕ. ಚಾತುರ್ವರ್ಣ್ಯದಲ್ಲಿದ್ದು ಮೇಲಿನ ಮೂರು ವರ್ಣಗಳ ಅನುತ್ಪಾದಕ ಸೇವಾಕಾರ್ಯವನ್ನು ಮಾತ್ರ ಮಾಡುತ್ತ ಕೊನೆಯವರೆಗೂ ಸಮಾಜದಲ್ಲಿ ಅನುತ್ಪಾದಕರಾಗಿ ಉಳಿದು ಆಸ್ತಿಯ ಹಕ್ಕಿಲ್ಲದೆ, ಬೇರೆ ದಿಕ್ಕಿಲ್ಲದೆ, ಸಣ್ಣ ಪುಟ್ಟ ಉಳಿಕೆಗಳಿಗೂ ಉಳಿಗಾಲವಿಲ್ಲದೆ, ಹುಟ್ಟಿನಿಂದ ಸಾವಿನವರೆಗೆ ಗುಲಾಮರಾಗಿ ಬಾಳುತ್ತಿದ್ದವರು – ಅಲ್ಲಿ ಬದುಕಿರುತ್ತಿದ್ದವರು ಕಾಯಕವ್ಯವಸ್ಥೆಯನ್ನು ಅಂಗೀಕರಿಸಿ ಸ್ವತಂತ್ರರಾಗಿ

ಉತ್ಪಾದಕರಾಗಿ ತಾವು ದುಡಿದುದಕ್ಕೆ ತಾವೇ ಒಡೆಯರಾಗಿ ಗಳಿಸಿದುದರಲ್ಲಿ ತಮ್ಮ ಸರಳಜೀವಕ್ಕೆ ಬೇಕಾಗುವಷ್ಟನ್ನು ಮಾತ್ರ ಬಳಸಿ ಉಳಿಸಿದುದನ್ನು ಶಿವನ ಸೊಮ್ಮಿಗೆ ಸಲ್ಲಿಸಿ ಮಾನವರು ಮಾತ್ರವಲ್ಲ ಶರಣಾಗುವಂತಾದುದು ಎಂಥ ಅಪೂರ್ವ ಕ್ರಾಂತಿ ಈ ದೇಶದ ಇತಿಹಾಸದಲ್ಲಿ?

'ಶಿವನ ಸೊಮ್ಮೆಂ'ದು ಕರೆದರು ಬಸವಣ್ಣನವರು ಪ್ರತಿಯೊಬ್ಬ ಕಾಯಕ ಜೀವಿಯೂ ಉಳಿಸಿ ದಾಸೋಹಕ್ಕಾಗಿ ಅರ್ಪಿಸುತ್ತಿದ್ದ ಮಿಗುತಾಯ (Surplus) ಗಳ ಮೊತ್ತವನ್ನು ಅದು ಸಕಲ ಜೀವಾತ್ಮರ ಲೇಸಿಗೆ ಮೀಸಲು. ಯಾರಿಗೂ ತಮ್ಮ ಮಿಗುತಾಯವನ್ನು ತಾವೇ ಉಪಭೋಗಿಸುವ ಉಳಿಸಿಕೊಳ್ಳುವ ಅಧಿಕಾರವಿರಲಿಲ್ಲ. 'ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ, ಎನ್ನೊಡಲಿಂಗೆ, ಎನ್ನೊಡವೆಗೆ ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದರೆ ನಿನ್ನ ಮನಕ್ಕೆ ಮನವೇ ಸಾಕ್ಷಿ! ಸತ್ಯಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂದವಾಗದಿರಬೇಕು. ನೇಮದ ಕೂಲಿಯೆಂದಿನ ನಿತ್ಯ ನೇಮದಲ್ಲಿ ಸಂದಿರಬೇಕು. ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ, ತಾ ಮಾಡುವ ಸೇವೆ ನಷ್ಟವಯ್ಯಾ!' 'ಮತ್ತಂ, ಕಂದಿಸಿ, ಕುಂದಿಸಿ ಬಂಧಿಸಿ, ನೋಯಿಸಿ. ಕಂಡ ಕಂಡವರ ಬೇಡಿ ತಂದು, ಜಂಗಮಲಿಂಗಕ್ಕೆ ಮಾಡಿದೆನೆಂಬ ದಂದುಗದ ಮಾಟಕ್ಕೆ ಲಿಂಗನೈವೇದ್ಯ ಸಲ್ಲದು. ತನು ಕರಗಿ, ಮನ ಬಳಲಿ, ಬಂದತೆರದನುವನರಿದು ಸಂದಿಲ್ಲದೆ ಸಂಶಯವಿಲ್ಲದೆ, ಜಂಗಮಲಿಂಗಕ್ಕೆ ದಾಸೋಹವೆ ಮಾಟ, ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದೇ ಲಿಂಗಕ್ಕರ್ಪಿತವಲ್ಲದೆ ದುರಾಶೆಯಿಂದ ಬಂದುದು ಅನರ್ಪಿತ. ಇದು ಕಾರಣ ಸತ್ಯ ಶುದ್ಧಕಾಯಕದ ನಿತ್ಯ ದ್ರವ್ಯವಾದರೆ ಚಂದೇಶ್ವರ ಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯಾ!' (ನುಲಿಯ ಚಂದಯ್ಯ) ಶರಣರ ಲಿಂಗದೇವ ಸತ್ಯಶುದ್ಧಕಾಯಕದ ನಿತ್ಯದ್ರವ್ಯದ ನೈವೇದ್ಯ ಬೇಡುತ್ತಾನೆ ನಿನ್ನಿನ ಉಳಿಕೆಯ ತಂಗುಳ ನೈವೇದ್ಯವನ್ನಲ್ಲ; ಕಾಯಕದಿಂದ ಬಂದ ಕಾರೆಯ ಸೊಪ್ಪನ್ನಾದ್ರೂ ಸ್ವೀಕರಿಸುತ್ತಾನೆ – ಕಳ್ಳಹಣದಿಂದ ಬಂದ ಷೋಡಶೋಪಚಾರಂಗಳನಲ್ಲ. ಅಮೃತ ಎಡೆಯನ್ನಲ್ಲ, ಮಿಗುತಾಯವನ್ನು 'ಶಿವನ ಸೊಮ್ಮಿ'ಗೆ ಸಲ್ಲಿಸದಿದ್ದರೆ ಅದು ಕಳ್ಳಹಣವಾಗುತ್ತದೆ. ಸಲುಗೆಗೆ ಸಲ್ಲದ ಹಣವಾಗುತ್ತದೆ. 'ಭಾಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು. ಕಳ್ಳ ನಾಣ್ಯ ಸಲುಗೆಗೆ ಸಲ್ಲದು; ಕಳ್ಳನಾಣ್ಯವಸಲ್ಲಲೀಯರಯ್ಯಾ! ಭಕ್ತಿಯೆಂಬ ಭಾಂಡಕ್ಕೆ ಜಂಗಮವೇ ಸುಂಕಿಗ, ಕೂಡಲ ಸಂಗಮದೇವಾ; (೧೯೮). ಈ ಜಂಗಮವೆಂಬ ಸುಂಕಿಗನಿಗೆ ಸಲ್ಲಬೇಕಾದ ಸುಂಕ ಮಿಗುತಾಯ, ಮಿಕ್ಕಿದುದು, ಸಲ್ಲದಿದ್ದರೆ ಅದು ಕಳ್ಳನಾಣ್ಯವಾಗುತ್ತದೆ; ಕಳ್ಳಹಣವಾಗುತ್ತದೆ; ಶಿವಾಚಾರಕ್ಕೆ, ಲಿಂಗನೈವೇದ್ಯಕ್ಕೆ ಸಲ್ಲದ ಹಣವಾಗುತ್ತದೆ.

ಇಷ್ಟಾಗಿಯೂ 'ಉಂಡವನೇ ಜಾಣ' ಎಂಬ ಭೋಗಪ್ರಿಯರಿಗೆ ಬಸವಣ್ಣ ಎಚ್ಚರಿಸಿದ. 'ಉಂಡುದು ಬಂದಿತ್ತೆಂಬ ಸಂದೇಹಿ ಮಾನವಾ, ನೀ ಕೇಳಾ, ಉಂಡುದೇನಾಯಿತ್ತೆಂಬುದು ನಿನ್ನ ನೀ ತಿಳಿದು ನೋಡಾ! ಉಂಡುದು ಅಗಳೆ ಅಸ್ಯಯವಾಯಿತ್ತು! ಆವುಂಡುದನುಣಬಂದ

ಹಂದಿಯ ಬಾಳುವೆಯವರ ಕಂಡು ಆನುಮರುಗುವೆನಯ್ಯಾ ಕೂಡಲಸಂಗಮದೇವಾ!' (೨೦೦) ಮೇಲಾಗಿ, ಎಲ್ಲರೂ ಉಣ್ಣುವುದಾದರೂ ಎಷ್ಟು? ಮೋಳಿಗೆಯ ಮಾರಯ್ಯ ಹೇಳಿಯೇ ಇದ್ದಾನೆ. 'ಆನೆ, ಕುದುರೆ ಬಂಡಿ ಭಂಡಾರವಿದ್ದಡೇನೋ, ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು ಮಲಗುವುದರ್ಧಮಂಚ, ಈ ಹುರುಳಿಲ್ಲದ ಸಿರಿಯ ಮೆಚ್ಚಿ ಕೆಡಬೇಡ, ಮನುಜಾ'.

ಕೆಡಬೇಡವೆಂದರೆ ಬಿಡುತ್ತಾನೆಯೇ ಬೆಳ್ಳಿ ಬಂಗಾರಗಳೇ ಬಾಳಿನ ಸರ್ವಸ್ವವೆಂದು ನಂಬಿದ ಆಶಾಪಾಶಬದ್ಧವಿತ್ತವಿಮೂಢ ಮಾನವ? ಮಾಡಬಾರದ ಅಕೃತ್ಯಗಳನ್ನೆಲ್ಲ ದುರ್ವ್ಯವಹಾರಗಳನ್ನೆಲ್ಲ ಮಾಡಿ, ಪಡಬಾರದ ಕಷ್ಟನಷ್ಟಗಳನ್ನು ಅನುಭವಿಸಿ ತನಗೆ ಅಗತ್ಯವಿರುವುದಕ್ಕಿಂತಲೂ ನೂರು ಮಡಿ, ಸಾಸಿರಮಾಡಿ ಹೆಚ್ಚು ಗಳಿಸಿ ಹುಗಿದಿಡುತ್ತಾನೆ. ಅದರ ಮೇಲೆ ಸರ್ಪಕಾವಲು ಕೂರುತ್ತಾನೆ. ಇಂಥವರಿಗೆ ಬಸವಣ್ಣ ತಿಳಿ ಹೇಳಿದ್ದಾನೆ :

'ಆಯುಷ್ಯವುಂಟು ಪ್ರಳಯವಿಲ್ಲೆಂದು ಅರ್ಥವ ಮಡುಗುವಿರಿ:
ಆಯುಷ್ಯ ತೀರಿ ಪ್ರಳಯವು ಬಂದರೆ ಅರ್ಥವನುಂಬವರಿಲ್ಲ.
ನೆಲನನಗೆದು ಮಡುಗದಿರಾ! ನೆಲನುಂಗಿದೊಡುಗಳುವುದೆ?
ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ
ಹೆರರಿಗಿಕ್ಕಿ ಹೆಗ್ಗುರಿಯಾಗಬೇಡಾ, ಕೂಡಲಸಂಗಮನ ಶರಣರಿಗೊಡನೆ
ಸವೆಸುವುದು!'

ಧನಪಿಶಾಚಿ ಬಡಿದುಕೊಂಡವರಿಗೆ ಕಾಯಕದ ದಾರಿ ಹಿಡಿಸುವುದಿರಲಿ, ಅವರನ್ನು ನುಡಿಸುವುದೂ ಕಠಿಣವೆಂಬುದನ್ನು ಬಸವಣ್ಣನವರು ಅರಿತಿರದಿರಲಿಲ್ಲ. ಎಷ್ಟು ಹೇಳಿದರೂ – 'ಏನಿ ಬಂದಿರಿ, ಹದುಳವಿದ್ದಿರೆ? ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೆ? ಕುಳ್ಳಿರೆಂದರೆ ನೆಲ ಕುಳಿ ಹೋಹುದೆ? ಒಡನೆ ನುಡಿದರೆ ಸಿರ–ಹೊಟ್ಟೆಯೊಡೆವುದೆ? ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ, ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವನು?' (೨೪೧) ಎಂದು ಮುಂತಾಗಿ ಎಷ್ಟು ಹೇಳಿದರೂ ಕಿವಿಯಿದ್ದೂ ಕಿವುಡರಾಗುವ ಸಿರಿವಂತರಿಗೆ ಕೊನೆಯ ಎಚ್ಚರಿಕೆಯನ್ನು ಕೊಟ್ಟರು ಬಸವಣ್ಣನವರು : 'ಹಾವು ತಿಂದವರ ನುಡಿಸಬಹುದು ಗರಹೊಡೆದವರ ನುಡಿಸಬಹುದು, ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ! ಬಡತನವೆಂಬ ಮಂತ್ರವಾದಿ ಹೊಗಲು ಒಡನೆ ನುಡಿವರು, ಕೂಡಲಸಂಗಮದೇವಾ!' (೧೩೨)

ಬಸವಣ್ಣನವರು ಸಿರಿವಂತರಿಗೆ ಎಚ್ಚರಿಕೆ ನೀಡಿ, ಸಿರಿವಂತಿಕೆಯ ದುಷ್ಪರಿಣಾಮಗಳನ್ನು ತೋರಿ ತೃಪ್ತರಾದರು. ಅದಕ್ಕೆ ಕಾರಣವಾದ ವಿಷಮ ಅರ್ಥ ವ್ಯವಸ್ಥೆಯನ್ನು ಬುಡಮೇಲು ಮಾಡಲು ಯತ್ನಿಸಲಿಲ್ಲ; ಎನ್ನುವವರೂ ಇದ್ದಾರೆ. ಈ ವಿಷಮ ಅರ್ಥವ್ಯವಸ್ಥೆಗೆ ಸಿಕ್ಕಿ

ಪಶುಗಳಂತೆ ಆಗಿದ್ದವರನ್ನು ಬಂಧಮುಕ್ತಗೊಳಿಸಿ ಅವರು ಕಾಯಕ ವ್ಯವಸ್ಥೆಯಲ್ಲಿ ಸ್ವದತ್ತ ವೃತ್ತಿಗಳನ್ನು ಕೈಕೊಂಡು ಅವುಗಳ ಉತ್ಪಾದಕತೆಯಿಂದ ನಾಡಿಗೆ ಆದಾಯದಿಂದ ಉದರ ನಿರ್ವಾಹ ಮತ್ತು ದಾಸೋಹಕ್ಕೆ, ತತ್ವೀಕರಣದಿಂದ ಸ್ವಾತ್ಮೋನ್ನತಿಗೆ, ವೈವಿಧ್ಯದಿಂದ ಸಮಾಜದ ಸ್ವಪರಿಪೂರ್ಣತೆಗೆ, ಸ್ವಾವಲಂಬನಕ್ಕೆ, ಸ್ವಾಧೀನತೆಗೆ ಕಾರಣರಾಗುವಂತೆ ಹೇಗೆ ಹೋರಾಡಿದರೆಂಬುದನ್ನು ಹಿಂದೆ ವಿವರಿಸಿದೆ. ಇಲ್ಲಿ ಒಂದು ಮಾತನ್ನು ನೆನಪಿನಲ್ಲಿಡುವುದು ಮೇಲು. ಬಸವಣ್ಣನವರು ಮಾಡಿದ ಆರ್ಥಿಕ ಕ್ರಾಂತಿ ಮಾರ್ಕ್ಸ್ ಮಾಡಿದ ಕ್ರಾಂತಿಗೆ ಸಂವಾದಿಯಾದುದೆಂದೂ ಹೇಳುವವರಿದ್ದಾರೆ. ಆದರೆ ಮಾರ್ಕ್ಸ್‌ನ ಬಸವಣ್ಣನವರ ಕಾಲದಲ್ಲೇಕೆ, ಒಂದು ಶತಮಾನ ಹಿಂದೆ ಹುಟ್ಟಿದ್ದರೂ ಅವನು ಮಾರ್ಕ್ಸ್‌ವಾದದ ಜನಕನಾಗುತ್ತಿರಲಿಲ್ಲ. ಯಾಕಂದರೆ ಅವನ ಆರ್ಥಿಕ ಚಿಂತನೆಗೆ ಕಾರಣವಾದ ಅಂಶಗಳು (factors) ಆಗಿನ್ನೂ ಉದ್ಭವಿಸಿರಲಿಲ್ಲ. ಔದ್ಯೋಗಿಕ ಯಾಂತ್ರಿಕ ಕ್ರಾಂತಿ ಬಂದಿರಲಿಲ್ಲ. ಬಂಡವಾಳಶಾಹೀ ಸಮಾಜ ಬೃಹತ್ ಪ್ರಮಾಣದಲ್ಲಿ ಬೆಳೆದಿರಲಿಲ್ಲ; ಅದರ ದುಷ್ಪರಿಣಾಮಗಳು ಮೈದೋರಿರಲಿಲ್ಲ* ಆದುದರಿಂದ ಬಸವವಾದ ಮಾರ್ಕ್ಸ್‌ವಾದ ಎರಡೂ ಒಂದೇ ಆಗಿರುವುದು ಸಾಧ್ಯವಿಲ್ಲ. ಒಂದೇ ಅಲ್ಲ, ಆದರೆ ಎರಡೂ ವಾದಗಳಲ್ಲಿ ಕೆಲವು ಸಾಮಾನ್ಯ ಅಂಶಗಳು ಗೋಚರಿಸುತ್ತವೆ. ಇವುಗಳನ್ನು ವಿವರಿಸುವ ಮೊದಲು ನನ್ನ ನಿಲವನ್ನು ನಾನು ವಿಶದೀಕರಿಸಬೇಕು. ಬಸವವಾದದ ಕೆಲವು ವಿಚಾರಗಳು ಮಾರ್ಕ್ಸ್‌ವಾದದಲ್ಲಿವೆಯೆಂದು ಬಸವಣ್ಣ ನನಗೆ ಮಾನ್ಯನಾಗಿಲ್ಲ. ಬಸವಣ್ಣನವರ ವಿಚಾರಗಳು ಮಾರ್ಕ್ಸ್‌ನಲ್ಲಿಯೂ ಮೂಡಿ ನಿಂತಿವೆಯೆಂದು ಮಾರ್ಕ್ಸ್ ನನಗೆ ಮಾನ್ಯನಾಗಿದ್ದಾನೆ. ಬಸವಣ್ಣ ಹೇಳಿದ ಅನೇಕ ವಿಚಾರಗಳನ್ನು ಮಾರ್ಕ್ಸ್ ಹೇಳಿದ್ದಾನೆ. ಅಂತೆಯೇ ಮಾರ್ಕ್ಸ್ ಹೇಳದ ಅನೇಕ ವಿಷಯಗಳನ್ನು ಬಸವಣ್ಣನು ಹೇಳಿದ್ದಾನೆ. ಆದುದರಿಂದ ಇಬ್ಬರನ್ನೂ ಅವರವರ ವಿಚಾರಗಳಿಗಾಗಿಯೇ ಗೌರವಿಸಬೇಕು. ಒಬ್ಬೊಬ್ಬರ ಪ್ರತಿಬಿಂಬವೆಂದಲ್ಲ.

ಇಬ್ಬರಲ್ಲೂ ಸಮಾನವಾದ ಅತ್ಯಂತ ಮಹತ್ವದ ಅಂಶವೆಂದರೆ ಇಬ್ಬರೂ ಸ್ವಂತ ಆಸ್ತಿಯ ಸತ್ತ್ವ, ಹಕ್ಕುಗಳನ್ನು ಒಪ್ಪದವರು. ಎಲ್ಲರಿಂದಲೂ ಅವರವರ ಅಳವು ಅರ್ಹತೆಗೆ ಅನುಗುಣವಾಗಿ, ಎಲ್ಲರಿಗೂ ಅವರವರವ ನೈಜ ಅಗತ್ಯಗಳಿಗೆ ಗೈದ ಕೆಲಸಕ್ಕಲ್ಲ – ಅನುಗುಣವಾಗಿ ಎಂಬ ತತ್ತ್ವ, ಈ ಅಗತ್ಯಗಳನ್ನು ಪೂರೈಸಿದ ಮೇಲೆ ಉಳಿಯುವ ಮಿಗುತಾಯ ಸಮಾಜಕ್ಕಾಗಿ ಎಂಬ ತತ್ತ್ವ ಇಬ್ಬರಿಗೂ ಮಾನ್ಯವಿದೆ. ಆದರೆ ಈ ಮಿಗುತಾಯವನ್ನು ಯಾರಿಗೆ ಸಲ್ಲಿಸಬೇಕೆಂಬ ಬಗ್ಗೆ ಇಬ್ಬರ ಅಭಿಪ್ರಾಯ ಸಹಜವಾಗಿಯೇ ಬೇರೆಯಾಗಿದೆ.

---

*** ಕಾರಣ ೧೯ನೆಯ ಶತಮಾನಕ್ಕೆ ಪೂರ್ವದಲ್ಲಿ ಮಾರ್ಕ್ಸ್‌ನೇ ಹುಟ್ಟಿದ್ದರೂ ಮಾರ್ಕ್ಸ್‌ವಾದೀ ಸಮಾಜವಾದದ ಕಲ್ಪನೆಬರುವುದು ಸಾಧ್ಯವಿರಲಿಲ್ಲ. ಹೀಗಿರುವಾಗ ೧೨ನೆಯ ಶತಮಾನದ ಭಾರತದಲ್ಲಿ ಬಸವಣ್ಣನವರಿಗೆ ಆಧುನಿಕ ಸಮಾಜವಾದದ ಕಲ್ಪನೆ ಬಂದಿರಲು ಸಾಧ್ಯವಿಲ್ಲ. (ಶ್ರೀ ಪಿ.ಎಸ್. ಪಾಟೀಲರು : ಕ್ರಾಂತಿದೂತ ಬಸವಣ್ಣ ಪುಟ –೮೯)**

ಬಸವಣ್ಣನವರ ವಿಶ್ವಾಸ ಸಮಾಜದಲ್ಲಿ, ಮಾರ್ಕ್ಸ್‌ನ ವಿಶ್ವಾಸ ಸರಕಾರ (State) ಬಸವವಾದದ ಪ್ರಕಾರ ಹೆಚ್ಚುವರಿ ಹಣ 'ಶಿವನ ಸೊವಮ್ಮಾ'ಗಿ ಸವಾಜದ ಸ್ವಾಮಿತ್ವಕೊಳಪಡಬೇಕು. ಮಾರ್ಕ್ಸ್‌ವಾದದ ಪ್ರಕಾರ ಉತ್ಪಾದನ ಸಾಧನಗಳ ಸ್ವಾಮಿತ್ವದ ಸಮಾಜೀಕರಣವಾಗಿ ಅವು ಸರಕಾರದ ಅಂಕಿತಕ್ಕೆ ಒಳಪಡಬೇಕು. ರಾಜಸತ್ತೆಯ ಸಹಾಯವಿಲ್ಲದೆ ಬಸವವಾದ ಕೃತಿಗಿಳಿಯಬಹುದೆ> ಎಂಬ ಪ್ರಶ್ನೆಗೆ ಇದೆ ದೇಶದಲ್ಲಿ ರಾಜ ರಾಜಸತ್ತೆಗಳ ಮಧ್ಯಸ್ಥಿಕೆಯಿಲ್ಲದೆ ಸರಕಾರದ ಹಸ್ತಕ್ಷೇಪವಿಲ್ಲದೆ ಸಮಾಜವೇ ಪರಸ್ಪರ ಸಹಾಯ–ಸಹಕಾರ ತತ್ವದ ತಳಹದಿಯ ಮೇಲೆ ಈ ಕಾರ್ಯವನ್ನು ನಿರ್ವಹಿಸಿದ ಉದಾಹರಣೆಯಿದೆ ಎಂಬುದೇ ಉತ್ತರ. ಮಹಾಭಾರತದ ಶಾಂತಿ ಪರ್ವತದಲ್ಲಿ ಭೀಷ್ಮ ಹೀಗೆ ಹೇಳಿದ್ದಾನೆ : 'ಆ ಸಮಯಕ್ಕೆ ಕೃತಯುಗದಲ್ಲಿ ರಾಜ್ಯವೂ ಇರಲಿಲ್ಲ. ರಾಜನೂಇರಲಿಲ್ಲ. ದಂಡ ವಿಧಾನವೂ ಇರಲಿಲ್ಲ, ದಂಡ ವಿಧಿಸುವವನೂ ಇರಲಿಲ್ಲ. ಎಲ್ಲ ಮನುಷ್ಯರೂ ಧರ್ಮದ ಆಧಾರದ ಮೇಲೆ ಪರಸ್ಪರ ಸಂರಕ್ಷಣೆ ಮಾಡುತ್ತಿದ್ದರು.' ನವೈ ರಾಜ್ಯಂನ ರಾಜಾಸೀನ್ನಚ ದಂಡೋ ನ ದಂಡಿನಾಃ ಧರ್ಂಣೈವಪ್ರಜಾ ಸರ್ವಾರಕ್ಷಂತಿಸ್ಮ ಪರಸ್ಪರಮ್' ಮಾರ್ಕ್ಸ್‌ವಾದದ ಅಂತಿಮ ಉದ್ದೇಶವೂ ಇದೇ – ರಾಜ್ಯಸತ್ತೆ (ಸಂಸ್ಥೆ)ಯ ಕ್ರಮೇಣ ಬಾಡಿಹೋಗುವಿಕೆ (Withering away of the state) ಅದಕ್ಕೆ ಮೊದಲು ರಾಜಸತ್ತೆಗೆ ಶರಣು ಹೋಗಿರೆನ್ನುತ್ತದೆ ಮಾರ್ಕ್ಸ್‌ವಾದ, ಸಮಾಜಕ್ಕೆ ಶರಣು ಹೋಗಿರೆನ್ನುತ್ತದೆ ಬಸವವಾದ. ಬಸವವಾದ ಆರಂಭಿಕ ಧ್ಯೇಯವೇ ಮಾರ್ಕ್ಸ್‌ವಾದದ ಅಂತಿಮ ಧ್ಯೇಯ – ಒಂದು ಹಂತದಲ್ಲಿ ಸರಕಾರ, ರಾಜ್ಯಸಂಸ್ಥೆ (State) ಅಸ್ತಿತ್ವವಿಹೀನವಾಗುವುದು. ಆದರೆ ಮಾರ್ಕ್ಸ್‌ವಾದವನ್ನು ಅವಲಂಬಿಸಿ ಅಸ್ತಿತ್ವಕ್ಕೆ ಬಂದಿರುವ ರಾಜ್ಯಸಂಸ್ಥೆಗಳಲ್ಲಿಯೇ ಒಂದಾದರೂ ತನ್ನಿಂದ ತಾನೇ ಅಳಿಸಿಹೋಗಬಹುದೆಂಬ ನಂಬಿಕೆಗೆ ಇಂಬಿಲ್ಲವಾಗಿದೆ. ಅವುಗಳ ಆಯವ್ಯಯ ಪತ್ರಿಕೆಗಳಲ್ಲಿ ಸಿಂಹಪಾಲು ಸೈನ್ಯಕ್ಕೇ 'ಮೀಸಲಾಗುತ್ತಿರುವುದನ್ನು ನೋಡಿದಾಗ ಮಾರ್ಕ್ಸ್‌ವಾದವನ್ನು ಅವಲಂಬಿಸಿ ಅಸ್ತಿತ್ವಕ್ಕೆ ಬಂದಿರುವ ರಾಜ್ಯಸಂಸ್ಥೆಗಳಲ್ಲಿಯೇ ಒಂದಾದರೂ ತನ್ನಿಂದ ತಾನೇ ಅಳಿಸಿಹೋಗಬಹುದೆಂಬ ನಂಬಿಕೆಗೆ ಇಂಬಿಲ್ಲದಾಗಿದೆ. ಅವುಗಳ ಆಯವ್ಯಯ ಪತ್ರಿಕೆಗಳಲ್ಲಿ ಸಿಂಹಪಾಲು ಸೈನ್ಯಕ್ಕೇ 'ಮೀಸಲಾಗುತ್ತಿರುವುದನ್ನು ನೋಡಿದಾಗ ಮಾರ್ಕ್ಸ್‌ವಾದ ಫಲಕಾರಿಯಾಗಿ ರಾಜ್ಯಸಂಸ್ಥೆಯ ಅಗತ್ಯ ಉಳಿಯದಂತಹ ಸಮೃದ್ಧಿ ಪರಿಸ್ಥಿತಿ ಪ್ರಾಪ್ತವಾದ ಮೇಲೆ ಅದರ ವಿಸರ್ಜನೆಗೆ ಆಗಿನ ಸತ್ತಾಧಾರಿಗಳು ನಿರಾಕರಿಸಿದರೆ ಮಾರ್ಕ್ಸ್‌ವಾದದ ಅನುಯಾಯಿಗಳು ಅದನ್ನು ಬೆಂಬಲಿಸಿದ ಪ್ರಜೆಗಳು ಏನು ಮಾಡಬೇಕು? ಈ ಪ್ರಶ್ನೆಗೆ ಉತ್ತರ ಸ್ಪಷ್ಟವಿಲ್ಲ. 'ರಾಜಾ ಕಾಲಸ್ಯ ಕಾರಣಂ' ಎಂದರು ಹಿಂದಿನವರು; 'ರಾಜ್ಯ ಕಾಲಸ್ಯ ಕಾರಣಂ' ಎಂದಿತು ಮಾರ್ಕ್ಸ್‌ವಾದ; 'ಪ್ರಜಾ ಕಾಲಸ್ಯ ಕಾರಣಂ' ಎನ್ನುತ್ತಿದೆ ಬಸವವಾದ.

ಬಸವವಾದದಲ್ಲಿ ಇಂಥ ಪ್ರಶ್ನೆ ಉದ್ಭವಿಸುವುದಿಲ್ಲ. ಬೇರೆ ಪ್ರಸಂಗ ಬರುತ್ತದೆ. ಶಿವನ ಸೊಮ್ಮಿಗೆ ತಮ್ಮ ತಮ್ಮ ಮಿಗುತಾಯಗಳನ್ನು ಸಲ್ಲಿಸದಿದ್ದವರ ಮೇಲೆ ಯಾರು ಯಾವ

ಕ್ರಮವನ್ನು ಕೈಕೊಳ್ಳಬೇಕು? ಒಟ್ಟು ಸಮಾಜವೇ? ಸ್ಥಳಿಯ ಸಮಾಜವೇ? ಜಂಗಮರೆ? ಮಠಗಳೆ? ನೈತಿಕ ತಳಹದಿಯ ಮೇಲೆ ನಿಂತ ಈ ವ್ಯವಸ್ಥೆ ಜನರಲ್ಲಿ ನೀತಿ ಉಳಿದಿರುವವರೆಗೆ ಉಳಿದಿರುತ್ತದೆ. ಉಳಿಯದಾದಾಗ ಅಳಿಯುತ್ತದೆ. ಇದು ಅದರ ದುರ್ಬಲತೆಯೂ ಹೌದು; ಸಬಲತೆಯೂ ಹೌದು. ಮಾರ್ಕ್ಸ್‌ವಾದದ ಅಂತಿಮ ಉದ್ದೇಶವನ್ನು ಈಡೇರಿಸದ ರಾಜ್ಯಸಂಸ್ಥೆ ಯಾವುದೆ ಕಾರಣದಿಂದ ನಾಶಹೊಂದಿದರೆ ಮತ್ತೆ ಅದರ ಸ್ಥಳದಲ್ಲಿ ಅದೇ ಆರ್ಥಿಕ ಸಿದ್ಧಾಂತದ ಹೊಸ ವ್ಯವಸ್ಥೆ ಬರುವುದೋ ಇಲ್ಲವೆ ಅದಕ್ಕೆ ತೀರ ವಿರೋಧವಾದ (Diameterically opposite) ವ್ಯವಸ್ಥೆ ಬರುವುದೋ ಹೇಳಲಾಗದು. ಆದರೆ ಈ ನೀತಿಯ ತಳಹದಿಯ ಮೆಲೆ ನಿಂತ ವ್ಯವಸ್ಥೆ ಸಂಪೂರ್ಣ ಯಶಸ್ವಿಯಾಗದಿದ್ದರೂ ಅಲ್ಲಲ್ಲಿ ಉಳಿದು ಮತ್ತೆ ಮಹಾತ್ಮ ಗಾಂಧೀಜೀಯವರಂತಹ ನೀತಿಯ ನೇತಾರರು ಉದ್ಭವಿಸಿದಾಗ ಹೆಚ್ಚು ಯಶಸ್ವಿಯಾಗಬಹುದು. ಈ ದೃಷ್ಟಿಯಿಂದ ಬಸವಣ್ಣನವರು ಮಾರ್ಕ್ಸ್‌ನಿಗಿಂತ ಮಹಾತ್ಮಾ ಗಾಂಧೀಜಿಯವರಿಗೆ ಹೆಚ್ಚು ಹತ್ತಿರದವರಾಗುತ್ತಾರೆ. ಇಲ್ಲಿಯೂ ಎಲ್ಲ ವಿವರಗಳಲ್ಲಿ ಸಾದೃಶ್ಯವನ್ನು ಹುಡುಕ ಹೊರಡುವುದು ಹೆಡ್ಡತನವಾಗುತ್ತದೆ. ಒಟ್ಟಿನಲ್ಲಿ ಇಷ್ಟು ಹೇಳಬಹುದು. ಯಾರಿಬ್ಬರಲ್ಲಿಯೂ ಕಾಣದ ವಿಚಾರ ಸಾಮ್ಯ ಈ ಇಬ್ಬರಲ್ಲಿ ಕಾಣುತ್ತದೆ.

ಇನ್ನೂ ಒಂದೆರಡು ವಿಷಯಗಳನ್ನಿಲ್ಲಿ ಚರ್ಚಿಸುವುದು ಅಗತ್ಯವೆನಿಸುತ್ತಿದೆ. ಬಸವಣ್ಣನವರು ಮನಸ್ಸು ಮಾಡಿದ್ದರೆ ಬಡವರ, ಬಲಹೀನರ, ವಂಚಿತರ, ಶೋಷಿತರ ಸಂಘಟನೆ ಮಾಡಿ, ವರ್ಗಯುದ್ಧವನ್ನೇ ಸಾರಿ ವರ್ಣವ್ಯವಸ್ಥೆಯೊಡನೆ ವರ್ಗ ನಿರ್ಮೂಲನವನ್ನು ಮಾಡಬಹುದಾಗಿತ್ತ, ಎಂದು ಹೇಳುವವರಿದ್ದಾರೆ. ವರ್ಣ ಜನ್ಮಜಾತ, ವರ್ಗ ಶೋಷಣಜಾತವೆಂಬುದನ್ನೊಪ್ಪಿಯೂ ಇವೆರಡೂ ಆಗ ಅನ್ಯೋನ್ಯ ಪ್ರಭಾವವಿಲ್ಲದ ಅಂಕಣ (Watertight Compartments)ಗಳಾಗಿದ್ದುವೆಂದರು ಹೇಳುವಂತಿಲ್ಲ. ಹಿಂದೆ ವಿವರಿಸಿದಂತೆ ವರ್ಣಾಶ್ರಯ ವ್ಯವಸ್ಥೆಯಲ್ಲಿ ನಾಲ್ಕನೆಯ ವರ್ಣದವರಿಗೆ ಉಳಿದವರ ಸೇವೆಯೊಂದನ್ನುಳಿದು ಬೇರೇನನ್ನೂ ಮಾಡಲು ಸಾಧ್ಯವಿಲ್ಲದುದರಿಂದಲೇ, ಮನು–ನಾರದ–ಯಾಜ್ಞವಲ್ಕ್ಯ–ಕೌಟಿಲ್ಯಾದಿಗಳು ವರ್ಣವ್ಯವಸ್ಥೆಗೆ ಉಪಸಿದ್ಧಾಂತವಾಗಿ (Corollary)ದಾಸ ಪ್ರಥೆಗೆ ಪ್ರೋತ್ಸಾಹವಿತ್ತುದರಿಂದಲೇ ಉತ್ಪೀಡಿತ ವರ್ಗಗಳಿಲ್ಲಿಉದಿಸಿದವು. ಆದುದರಿಂದ ಬಸವಣ್ಣನವರು ಸಾಮಾಜಿಕವಾಗಿ ವರ್ಣವ್ಯವಸ್ಥೆಯ ವಿಧ್ವಂಸನಕ್ಕೆ ಆರ್ಥಿಕವಾಗಿ ಕಾಯಕಗಳ ಮೂಲಕ ಈ ವರ್ಗಗಳ ಆರ್ಥಿಕ ದಾಸ್ಯವಿಮೋಚನೆಗೆ ಹೋರಾಡಿದರು. ಈ ಹೋರಾಟದ ಫಲವಾಗಿ ಕನಿಷ್ಟ ಅವರ ಅನುಯಾಯಿಗಳಲ್ಲಿ ವರ್ಣ–ವರ್ಗಗಳ ವಿಷ ಉಳಿಯದ್ದರಿಂದಲೇ ವರ್ಗಸಮರದ ಅನಿವಾರ್ಯತೆಗೆ ಅಸ್ಪದವಿಲ್ಲದಾಯಿತು. ಈ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲವರಾಗಿದ್ದ ಲಿಂಗೈಕ್ಯ ಪ್ರೊ. ಶಿ.ಶಿ. ಬಸವನಾಳರು ಹೇಳಿರುವುದು ಬಹು ಮಟ್ಟಿಗೆ ಸಮರ್ಪಕವಾದುದಾಗಿದೆ: 'ವೀರಶೈವನಾದವನು ತನಗೆ ಯಾವುದಾದರೊಂದು ಉಚಿತವೆಂದು ತೋರಿದ ಸತ್ಯಶುದ್ಧ ಕಾಯಕವನ್ನು ಮಾಡುತ್ತ ದಿನಂಪ್ರತಿ ಅದರಿಂದ

ಬಂದ ಹಣವನ್ನು ಜಂಗಮಕ್ಕೆ ಸಲ್ಲಿಸಿ, ಒಕ್ಕುಮಿಕ್ಕುದುದನ್ನು ಪ್ರಸಾದವೆಂದು ಸ್ವೀಕರಿಸಿ ತಾನು ತನ್ನ ಕುಟುಂಬದವರೊಡನೆ ಜೀವನವನ್ನು ಸಾಗಿಸಬೇಕೆಂದೂ, ಹೆಣ್ಣಾಗಲಿ ಗಂಡೇ ಆಗಲಿ ಕಾಯಕವನ್ನೇ ಮಾಡಿ ಗುರುಲಿಂಗ ಜಂಗಮಾರಾಧನೆ ಮಾಡಬೇಕೆಂದೂ ಈ ನೂತನ ಸಮಾಜದ ಕಟ್ಟಾಗಿದ್ದುದರಿಂದ ಅಸಂಖ್ಯ ಜನರ ಒಂದು ಹೊಸ ಸಮಾಜವೇ ರಾಜ್ಯ ಮಧ್ಯದಲ್ಲಿ ಹಠಾತ್ತಾಗಿ ನಿರ್ಮಾಣವಾಗಿದ್ದರಿಂದ ಬಿಜ್ಜಳನ ರಾಜ್ಯದಲ್ಲಿ ಆರ್ಥಿಕವಿಪ್ಲವ (Economic crisis) ವಾಗಲು ಎಡೆಯಿರಲಿಲ್ಲ. (ಬಸವಣ್ಣನವರ ವಚನಗಳು. ಗ್ರಂಥಾಲಯ ಸಂಸ್ಕರಣ ಶ್ರೀ ಬಸವಣ್ಣನವರ ಜೀವನ ಚರಿತೆ ಪು: ೧೪).

ಮೇಲಾಗಿ ರಷ್ಯಾದಂಥ ದೇಶಗಳಲ್ಲಿ ಅನಿವಾರ್ಯವೆನಿಸಿದ ವರ್ಗ–ಸಮರಕ್ಕೂ ಕೇವಲ ಕೃಷಿ ಪ್ರಧಾನವಾದ ಭಾರತ ದೇಶದಲ್ಲಿ ಈಗೀಗ ಅನಿವಾರ್ಯವೆನಿಸುತ್ತಿರುವ ವರ್ಗಸಂಘರ್ಷಕ್ಕೂ ಮಹದಂತರವಿದೆ. ಇಲ್ಲಿ ಬಡವರ ವರ್ಗ ಬಹುಮಟ್ಟಿಗೆ ಲಕ್ಷಾವಧಿಹಳ್ಳಿಗಳಲ್ಲಿ ಚೆದುರಿ ಚೆಲ್ಲಾಪಿಲ್ಲಿಯಾಗಿ ಹೋಗಿದೆ. ಕಾರಖಾನೆಗಳಲ್ಲಿ ಗಣಿಗಳಲ್ಲಿ, ಸಣ್ಣ ದೊಡ್ಡ ಪ್ರಮಾಣದ ಉದ್ಯೋಗಗಳಲ್ಲಿರುವ ಸಂಘಟಿತ ಶ್ರಮಿಕರ ಸಂಖ್ಯೆ ಸಣ್ಣದು. ಸ್ವಾತಂತ್ರ್ಯೋದಯ ಕಾಲಕ್ಕೆ ನೂರಕ್ಕೆ ಎರಡು – ಮೂರರಷ್ಟು ಮಾತ್ರವಿದ್ದ ಅವರ ಸಂಖ್ಯೆ ಕಳೆದ ಮೂರು ದಶಕಗಳಲ್ಲಿ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳನ್ನು ಉದ್ಯಮಾಭಿವೃದ್ಧಿಯಲ್ಲಿ ತೊಡಗಿಸಿದ ಮೇಲೆ ನೂರಕ್ಕೆ ಹದಿಮೂರರಷ್ಟಾಗಿದೆಯೆಂದು
ಉದ್ಯಮಾಭಿವೃದ್ಧಿಯಲ್ಲಿ ತೊಡಗಿಸಿದ ಮೇಲೆ ನೂರಕ್ಕೆ ಹದಿಮೂರರಷ್ಟಾಗಿದೆಯೆಂದು
ಹೇಳುತ್ತಾರೆ. ೧೯೬೦ ರಿಂದ ೧೯೭೦ರ ವರೆಗಿನ ಕೇವಲ ಹತ್ತು ವರ್ಷಗಳ ಅವಧಿಯಲ್ಲಿ ಈ ದೇಶದ ಜನಸಂಖ್ಯೆ ನೂರಕ್ಕೆ ಐವತ್ತರಷ್ಟು ಹೆಚ್ಚಿರುವುದನ್ನು ಗಮನಿಸಿದರೆ ಈ ಸಂಘಟಿತ ಕಾರ್ಮಿಕ ಸಂಖ್ಯೆಯಲ್ಲಿನ ಹೆಚ್ಚುಗೆ ಅಗಣ್ಯವೆಂದೇ ಹೇಳಬೇಕು. ಇದಕ್ಕೆದುರಾಗಿ ತಲಾ ಒಂದು ಎಕರೆಗಿಂತ ಕಡಮೆ ಭೂಮಿಯ ಒಡೆಯರಾದ. ಪ್ರತಿಶತ ೪೨ರಷ್ಟಿರುವ ಸಣ್ಣ ಹಿಡಿವಳಿದಾರರೂ ಸುಮಾರು ನಾಲ್ಕು ಕೋಟಿ ಐವತ್ತು ಲಕ್ಷ ಕೃಷಿ ಕಾರ್ಮಿಕರೂ ಅಸಂಘಟಿತ ಗ್ರಾಮೀಣ ರಂಗಕ್ಕೆ ಸೇರಿದವರಾಗಿದ್ದಾರೆ. ಇವರ ಸಂಘಟನೆಗಾಗಿ ಅಲ್ಲಲ್ಲಿ ಪ್ರಯತ್ನ ನಡೆದಿದ್ದರೂ ವರ್ಗಸಮರದ ಸಿದ್ಧಾಂತದನ್ವಯ ಇವರನ್ನು ಸಂಘಟಿಸುವವೆನ್ನುವುದ ಅವ್ಯವಹಾರ್ಯವಾದ ಉತೋಪಿಯಾ (utopla) ಎನಿಸುತ್ತದೆ. ಆದುದರಿಂದ ಭಾರತದಂತೆಯೇ ಕೃಷಿ ಪ್ರಧಾನ ಬೃಹದ್ರಾಷ್ಟ್ರವಾದ ಚೀನದಲ್ಲಿ ಹೇಗೆ ಹಳ್ಳಿಗಳ ಹಿನ್ನೆಲೆಯ ಈ ವರ್ಗ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಿರುವರೆಂಬುದನ್ನು ನೋಡುವುದು ಉಪಯುಕ್ತ. ಈ ಬಗ್ಗೆ ಮಾವೋ–ತ್ಸೆ–ತುಂಗ್ ಹೇಳಿರುವುದ ಹೀಗಿದೆ :

'The leading bodies in co-operatives must establish the dominant position of the poor peasants and the new lower middle peasants and the upper middle peasants whether old or new as a supplementary fora.

Only thus can unity between the poor and the middle peasants be obtained and the co-operation be consolidated, production be expanded and the Socialist transformation of the entire country side be correctly accomplished' (quoted in Development with Social Justice by Dr. D.M. Nandjundappa).

ಇದು ಕೋವಿಯ ಕೊಳಾಯಿಯಿಂದಲೇ ಶಕ್ತಿಸಾಮರ್ಥ್ಯ ಪಡೆದ ಸರ್ವಾಧಿಕಾರಿಯೊಬ್ಬರ ಅಭಿಪ್ರಾಯ. ಇದರ ಮಥನ ಮಾಡಿ ನೋಡಿದಾಗ ಸಂಘರ್ಷಕ್ಕಿಂತ ಸಹಕಾರ ಸಂಘಗಳಲ್ಲಿ ಬಡ ಹಾಗೂ ಮಧ್ಯಮ ವರ್ಗದ ಬೇಸಯಗಾರರಿಗೆ ಮೇಲುಗೈ ಮಾಡಿಕೊಡುವುದರ ಮೂಲಕ ಗ್ರಾಮಾಂತರ ಪ್ರದೇಶಗಳ ಸಮಾಜವಾದೀಯ ಪರಿವರ್ತನೆ ಸರಿಯಾಗಿ ಆಗುವುದೆಂಬ ವಿಶ್ವಾಸ ವ್ಯಕ್ತವಾಗುತ್ತದೆ. ಬಸವವಾದ ಗಾಂಧೀವಾದಗಳು ಈ ಮಾರ್ಗವನ್ನು ನಿರೋಧಿಸಲಿಕ್ಕಿಲ್ಲ. ಈ ಒಂದು ಅಂಶದಲ್ಲಿ ಈ ಮೂರರಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಒಮ್ಮತ ಸಾಧ್ಯ. ಆದುದರಿಂದ ಭಾರತೀಯ ಸನ್ನಿವೇಶದಲ್ಲಿ ವರ್ಗಯುದ್ಧದ ಕೂಗು ಜಿಜ್ಞಾಸೆಯ ವಿಷಯವಾಗಬಹುದಾಗಲಿ ವಸ್ತು ಸ್ಥಿತಿವಾಚಕ ವಿಷಯವಾಗಲಾರದು.

ಕಾಯಕಜೀವಿಗಳ ಮೇಲೆ ಜಂಗಮ ವರ್ಗದ ಪೋಷಣೆಯ ಭಾರ ಹೇರಿ ಕಾಯಕ ತತ್ವದ ಪ್ರಯೋಜಕತೆಯನ್ನು ಸಾರಗುಂದಿಸಲಾಯಿತೆಂಬುದು ಇನ್ನೊಂದು ವಾದವಿದೆ. ಜಂಗಮರದೆಂಬ ಜನ್ಮಜಾತವರ್ಗವಿದೆಯೆಂಬುದರ ಅಂಗೀಕಾರದಲ್ಲಿ ಇದರ ಉಗಮ, ಉದಯವಿರುವಂತೆ ತೋರುತ್ತಿದೆ. ಇದು ನಿಜವಲ್ಲ. ಜನ್ಮದಿಂದಲೇ ಜಂಗಮರಾಗುವರೆಂಬ ಭಾವನೆ ಬಸವಮತದಲ್ಲಿಲ್ಲ. ಬೇರೆಲ್ಲಿಯಾದರೂ ಇರಬಹುದು. 'ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರೆರೆದರೆ ಮೇಲೆ ಪಲ್ಲವಿಸಿತ್ತ ನೋಡಾ! ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದರೆ ಮುಂದೆ ಸಕಲ ಪಡಿಪದಾರ್ಥವನೀವನವನು!' ಎಂದವರು ನಂಬಿದುದು ನಿಜ. ಆದರೆ ಅವರೇ 'ಲಿಂಗದಲ್ಲಿ ಕಠಿಣವುಂಟೆ? ಜಂಗಮದಲ್ಲಿ ಕುಲವುಂಟೆ? (೨೮೫) ಎಂದು ಕೇಳಿ, ಕುಲವುಂಟೆ ಜಂಗಮವಿದ್ದೆಡೆಯಲ್ಲಿ? (೭೬೯) ಎಂದು ಪ್ರಶ್ನಿಸಿ ಉಟ್ಟುತೊಟ್ಟು ಪೂಜ್ಯನಾಗಿ ಬಂದ ಜಂಗಮ ವಿಶೇಷವೆಂದು, ಕಂತೆ ಬೊಂತೆಯ ಜಂಗಮ ಬಂದರೆ ಹೀನವೆಂದು ಕಂಡೆನಾದರೆ ಪಂಚಮಹಾಪಾತಕ!' (೪೧೧) 'ಉತ್ತಮ ಮಧ್ಯಮ ಕನಿಷ್ಠವೆಂದು ಬಂದ ಜಂಗಮವೆಂದೆನಾದರೆ ನೊಂದೆನಯ್ಯಾ ಬೆಂದೆನಯ್ಯಾ' (೪೦೦) ಎಂದು ಹೇಳಿ ಎಲ್ಲ ಕಡೆಯಲ್ಲಿಯೂ ಸ್ಥಾವರಕ್ಕೆದುರಾಗಿ ಜಂಗಮ ಪದಪ್ರಯೋಗ ಮಾಡಿ, ಹೆಚ್ಚಾಗಿ ಜಂಗಮಕ್ಕೆ ನಪುಂಸಕ ಲಿಂಗವನ್ನೇ ಉಪಯೋಗಿಸಿ ಜಾತಿ ಜನ್ಯ ಜಂಗಮವರ್ಗದ ಕಲ್ಪನೆಗೆ ಬುಡವೇ ಇಲ್ಲದಂತೆ ಮಾಡಿದ್ದಾರೆ. ಇನ್ನೂ ಸ್ಪಷ್ಟವಾಗಿ ಷಣ್ಮುಖ ಶಿವಯೋಗಿಗಳು ಸಾರಿದ್ದಾರೆ: 'ಜಂಗಮಕ್ಕೆ ಮಾತಾಪಿತರಿಲ್ಲ; ಜಂಗಮಕ್ಕೆ ಜಾತಿ ಬಂಧುಗಳಿಲ್ಲ; ಜಂಗಮಕ್ಕೆ ನಾಮರೂಪಗಳಿಲ್ಲ; ಜಂಗಮಕ್ಕೆ ಸೀಮೆ ಸಂಗಗಳಿಲ್ಲ; ಜಂಗಮಕ್ಕೆ

ಕುಲಗೋತ್ರಗಳಿಲ್ಲ; ಜಂಗಮಕ್ಕೆ ಮಲ ಮಾಯೆಗಳಿಲ್ಲ ನೋಡಾ ಅಖಂಡೇಶ್ವರಾ!' [ವಚನಸಾಹಿತ್ಯ ಸಂಗ್ರಹ – ಸಂಪಾದಕರು ಪ್ರೊ. ಸಂ.ಶಿ. ಭೂಸನೂರಮಠರು (೧೮೫)]. ಇಂತಿದು ಜನ್ಮಜಾತ ಜಂಗಮ ವರ್ಗಕಲ್ಪನೆಯ ನಿರಸನ. ಇನ್ನು ಅವರು ಕಾಯಕಜೀವಿಗಳಿಗೆ ಹೊರೆಯಾದರೆಂಬುದರ ವಿಮರ್ಶೆ: ಗುರುವಾಗಲಿ ಜಂಗಮನಾಗಲಿ – ಯಾರೇ ಆಗಲಿ, ಕಾಯಕವಿಲ್ಲದೆ ಇರಕೂಡದೆಂಬ ಕಟ್ಟಿದ್ದಾಗ ಯಾರು ಯಾರಿಗೆ ಭಾರ. ಯಾರು ಯಾರಿಗೆ ಹೊರೆ? ಅತಿಥಿ ಸತ್ಕಾರವೂ ಅನಾವಶ್ಯಕ ಭಾರವೆನ್ನುವವರಿದ್ದರೂ ಇರಬಹುದು. ಇಂದು ಅವರು ಇಲ್ಲಿಗೆ ಬಂದರೆ ನಾಳೆ ಇವರು ಅಲ್ಲಿಗೆ ಹೋಗುತ್ತಾರೆ. ಬಂದಾಗ ದಾಸೋಹ ನಡೆಯುತ್ತದೆ. ಮನೆಮನೆಗಳಲ್ಲಿ ಸಾಮೂಹಿಕವಾಗಿ ದಾಸೋಹ ನಡೆಯುತ್ತದೆ ಮಠ ಮಠಗಳಲ್ಲಿ. ತುಮಕೂರು ಜಿಲ್ಲೆಗೆ ಬರ ಬಂದಾಗ ಸಿದ್ಧಗಂಗೆಯ ಶ್ರೀಮಠದಲ್ಲಿ ಮೂರು ತಿಂಗಳ ಕಾಲ ನಿತ್ಯ ಸಹಸ್ರಾರು ಹಳ್ಳಿಗರಿಗೆ ದಾಸೋಹ ನಡೆಯಿತು. ಯಾರ ಪುಣ್ಯ ಸ್ಮರಣೆಗಾಗಿ ಈ ವ್ಯಾಖ್ಯಾನ ಮಾಲೆ ನಡೆಯುತ್ತಿದೆಯೋ ಆ ಮಹಾಶಿವಯೋಗಿ ಮೃತ್ಯುಂಜಯ ಮಹಾಸ್ವಾಮಿಗಳವರ ಶ್ರೀಮಠದಲ್ಲಿ ಇದುವರೆಗೆ ಎಷ್ಟು ಲಕ್ಷಜನರಿಗೆ ದಾಸೋಹ ನಡೆದಿದೆ? ಲೆಕ್ಕವಿಡುವವರಾರು? ಸರಕಾರದ ಕಂದಾಯ ಕೊಡುವಲ್ಲಿ ತಡಮಾಡಬಹುದು ಶ್ರೀಮಠದ ಸರ್ವಜಾತಿಕುಲಗಳ ಭಕ್ತರು ದಾಸೋಹಕ್ಕೆ ತಮ್ಮ ಕಾಣಿಕೆಯನ್ನು ತಾವೇ ತಪ್ಪದೆ ತಂದು ಸಲ್ಲಿಸುತ್ತಾರೆ. ಬಸವಣ್ಣನ 'ಶಿವನಸೊಮ್ಮಿ'ನ ತತ್ತ್ವ ಇನ್ನೂ ಅಲ್ಲಲ್ಲಿ ಜೀವಂತವಿದೆಯೆಂಬುದಕ್ಕೆ ಉಜ್ವಲ ಉದಾಹರಣೆಯಿದು.

'ದಾನಪದ್ಧತಿಯೂ ಇದನ್ನು ಮಾಡಿದೆಯಲ್ಲ?' ಎಂದು ಯಾರಾದರೂ ಕೇಳಿದರೆ 'ದಾನ ದಾಸೋಹ' ಒಂದೇ ಅಲ್ಲವೆಂಬುದೇ ಉತ್ತರ. 'ದಾನಂ ಸಮವಿಭಾಗ', ಎಂಬ ವ್ಯಾಪಕ ವ್ಯಾಖ್ಯೆಯನ್ನು ಮುಂದೆ ಮಾಡಿ ದಾನಪದ್ಧತಿಗೆ ಸಮರ್ಥನೆ ನೀಡಬಹುದಾಗಲಿ ಬಸವಣ್ಣನವರ ದೃಷ್ಟಿಯಲ್ಲಿ ಕೊಳ್ಳುವವನನ್ನು ಕುಳ್ಳವಾಗಿಸುವ (ಬಲಿಯನ್ನು ಬೇಡಿದ ವಾಮನನ್ನು ಕುಳ್ಳನಾದಂತೆ) ದಾನಪದ್ಧತಿಗಿಂತ, ಕೊಟ್ಟವನಲ್ಲಿ ಹಮ್ಮು ಹುಟ್ಟಿಸುವ ದಾನದ ರೀತಿಗಿಂತ ಕೊಡುವ ಕೊಳ್ಳುವವರಿಬ್ಬರಲ್ಲಿಯೂ ಸಮಾನತೆಯನ್ನು ಉಳಿಸಿ ಬೆಳೆಸುವ ದಾಸೋಹ ಗ್ರಾಹ್ಯವಾದುದು. 'ಬಲಿಯ ಭೂಮಿ, ಕರ್ಣನ ಕವಚ, ಖಚರನ ಆಸ್ತಿ, ಶಿಬಿಯ ಮಾಂಸ ವೃಥಾ ಹೋಯಿತ್ತಲ್ಲಾ. 'ಶಿವಭಕ್ತಿಯತಿಕ್ರಮ್ಯ ಯದ್‌ದಾನಂಚ ವಿಧೀಯತೆ ನಿಷ್ಫಲಂ ತು ಭವೇತ್ ದಾನಂ ರೌರವಂ ನರಕಂ ವ್ರಜೇತ್' ಇಂತೆಂದುದಾಗಿ 'ಕೀರ್ತಿವಾರ್ತೆಗೆ ಮಾಡಿದವನ ಧನವು ವೃಥಾ 'ಹೋಯಿತ್ತಲ್ಲಾ!' (೨೨೪) 'ಹತ್ತುಮತ್ತರ ಭೂಮಿ, ಬತ್ತುವ ಹಯನು, ನಂದಾದೀವಿಗೆಯ ನಡೆಸಿಹೆನೆಂಬವರ ಮುಖವ ನೋಡಲಾಗದು. ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕುವಂತೆ, ಎನ್ನಿಂದಲೆ ಆಯಿತ್ತು, ಎನ್ನಿಂದಲೇ ಹೋಯಿತ್ತು ಎಂಬವನ ಬಾಯಲ್ಲಿ... ಹುಡಿ...' (೨೨೫) ಆದುದರಿಂದ ಶಿವನ ಸೊಮ್ಮಿಗೆ ಸಲ್ಲಿಸುವ ಶಿವಭಕ್ತಿಯುಕ್ತ ದಾಸೋಹಾಚಾರವೇ ಮೇಲು.

'ಬಸವಣ್ಣನವರು ಧರ್ಮದ ಚೌಕಟ್ಟನ್ನು ಬಿಟ್ಟು ಹೊರಗೆ ಬಾರದ ಕಾರಣ ಅವರ ಕ್ರಾಂತಿ ಕೊನೆಗೂ ಶುಷ್ಕ ಅನುಭಾವದಲ್ಲಿ ಮುಕ್ತಾಯಗೊಂಡಿತು.' ಎಂಬುದು ಇನ್ನೊಂದು ದಾದ, ಅವರು ಧರ್ಮನಾಶಮಾಡಿ ವೈಜ್ಞಾನಿಕ ಭೌತಿಕವಾದದ ಅಧ್ವರ್ಯಗಳಾಗ– ಬಹುದಾಗಿತ್ತೆಂಬುದು ಈ ವಾದದ ಆಶಯ. ಮಾರ್ಕ್ಸ್ ಧರ್ಮದ ಬಗ್ಗೆ ಹೇಳಿದುದನ್ನು ಪೂರ್ಣ ಓದದೆ ಮಾರ್ಕ್ಸ್‌ನಿಗೆ ಅವನ ಅನುಯಾಯಿಗಳೇ ಅನ್ಯಾಯಮಾಡಿದ್ದಾರೆ. ಧರ್ಮವು ತನ್ನ ವಿಕಾಸದ ಒಂದು ವಿಶೇಷ ಅವಸ್ಥೆಯಲ್ಲಿ ಸಾಮಾಜಿಕ ಗುಣವನ್ನು ಪಡೆದುಕೊಳ್ಳುವುದೆಂಬುದೂ, ಆಗ ಇತಿಹಾಸದ ಆರ್ಥಿಕ ಹಾಗೂ ಸಾಮಾಜಿಕ ಗುಣಮಹತ್ವಗಳನ್ನು ಪಡೆದು ರೂಪಾಂತರಗೊಂಡುದು ಹೀಗೆಯೇ ಎಂದು ಹೇಳಬೇಕು. ಇದಲ್ಲದೆ, ಧರ್ಮವು ವಾಸ್ತವಿಕ ಪೀಡೆಗಳ ಅಭಿವ್ಯಕ್ತಿಯ ಕುರುಹೂ ಆಗಿದೆ. ಇದನ್ನರಿತೆ ಮಾರ್ಕ್ಸ್ 'ಧರ್ಮವು ಪೀಡಿತ ಪ್ರಾಣಿಗಳ ಆಕ್ರೋಶನ ಈ ಹೃದಯಹೀನ ಜಗತ್ತಿನ ಹೃದಯವದು. ಆತ್ಮಹೀನ ಪರಿಸ್ಥಿತಿಗಳ ಮತ್ತು ವಾಸ್ತವಿಕ ಪೀಡೆಗಳ ವಿರುದ್ಧ ಪ್ರತಿಭಟನೆಯ ಅಭಿವ್ಯಕ್ತಿಯ ಆತ್ಮ ಅದಾಗಿರುವಂತೆಯೇ, ಇದು ಜನತೆಗೆ ಆಫೀಮು ಇದ್ದಾಂತೆ' (Marx; contribution ot the crytinue of Aegel's philosophy of Right) ಇದರಲ್ಲಿ ಕೊನೆಯ ವಾಕ್ಯವೊಂದನ್ನೇ ಓದಿ ಧರ್ಮಧ್ವಂಸವೇ ದಾರಿಯೆಂಬ ತೀರ್ಮಾನಕ್ಕೆ ಬಂದರೆ ಮಾರ್ಕ್ಸ್‌ನಿಗೇ ಅಪಚಾರ ಮಾಡಿದಂತೆ, ಧರ್ಮವು ಒಂದೆಡೆ ಮಾನವನ ಶೋಕಾಕುಲ ಅವಸ್ಥೆಯ ಅಭಿವ್ಯಕ್ತಿಯಾಗಿದ್ದಂತೆ ಇನ್ನೊಂದೆಡೆ ಅದರ ವಿರುದ್ಧ ವಿಕ್ಷೋಭೆಯೂ ಆಗಿದೆ. ಇದು ಅಂತರ್ವಿರೋಧವಲ್ಲ – ಧರ್ಮದ ದ್ವಿಮುಖ ಕ್ರಿಯೆಯ ವಿಶ್ಲೇಷಣೆ. ಮೊದಲನೆಯದರಲ್ಲಿ ಅಸಮರ್ಥತೆಯ, ಉತ್ಪೀಡನೆಯ ಬಗ್ಗೆ ಸಹನೆ, ದುಃಖ – ದೀನತೆಗಳಿಗೆ ಸಮಾಜದ ಆತ್ಮಹೀನ ಪರಿಸ್ಥಿತಿಗಳಿಗೆ ತನ್ನನ್ನು ಹೊಂದಿಸಿಕೊಳ್ಳುವ ಹಂಬಲ ಕಂಡುಬಂದರೆ ಎರಡನೆಯದರಲ್ಲಿ ಸಾಮಾಜಿಕ ಅಸಮಾನತೆಗಳನ್ನು, ಅನ್ಯಾಯಗಳನ್ನು ಕೊನೆಗಾಣಿಸಬೇಕೆಂಬ ಅಭಿಲಾಷೆ ವ್ಯಕ್ತವಾಗುತ್ತದೆ. ಆದುದರಿಂದ ಬಸವಣ್ಣನವರು ಧರ್ಮದ ಈ ವಿಪುಲ ಸಾಧ್ಯತೆಗಳನ್ನು ಸಂಪೂರ್ಣ ಉಪಯೋಗಿಸಿಕೊಳ್ಳಲು ಹೆಣಗಿದರೇ ಹೊರತು ಆಧ್ಯಾತ್ಮದ ಜಾರುದಾರಿಯಿಂದ ಪಲಾಯನ ಮಂತ್ರವನ್ನು ಜಪಿಸುತ್ತ ಪಾರಾಗಿ ಹೋಗಲಿಲ್ಲ.

ಭಾರತದ ಅಂದಿನ ಪರಿಸ್ಥಿತಿಯಲ್ಲಿ ಬಸವಣ್ಣನವರು ವಹಿಸಿದ ಪಾತ್ರದ ಯಥಾರ್ಥಚಿತ್ರಣ ಇಲ್ಲಿದೆ : It is no exaggeration topay that the message of Basava is like a reservive into which all previous thoughts flowed in and from which all later thoughts flowed out. What attracts us most to him are those teachings of his in which he anticipated the greatest of modern thinkers - KarlMarx and Mahatma Ganchi : Prof. K.S. Srikantan.

೬

# ಮೌಢ್ಯದ ಚಕ್ರವ್ಯೂಹ

ಆದಿಮಾನವನ ಅಂಧವಿಶ್ವಾಸಗಳನ್ನು, ಮೂಢ ರೂಢಿಗಳನ್ನು, ಕುರುಡು ಕಂದಾಚಾರಗಳನ್ನು, ಬರದು ಭಾವುಕತೆಗಳನ್ನು, ನಿರರ್ಥಕ ನೇಮ ವ್ರತಗೀತೆಗಳನ್ನು ಹೇಗಾದರೂ ಅರ್ಥಮಾಡಿಕೊಳ್ಳಬಹುದು. ಆದರೆ ಅರಿವಿನ ಆರಾಧಕನೆಂದು ಕರೆದುಕೊಳ್ಳುವ ಆಧುನಿಕ ಮಾನವನ ಮೂರ್ಖ ವಿಶ್ವಾಸವನ್ನೇ ಓದಿಸುವವರೂ ಕೂಡ ಬೆಕ್ಕು ಅಡ್ಡ ಬಂದಾಗ ಗಕ್ಕನೆ ನಿಂತಾಗ, ರಾಹುಕಾಲವನ್ನು ನೋಡಿಯೇ ಮನೆಯಿಂದ ಹೊರಟಾಗ, ಪವಾಡ ಪುರುಷರೆಂದು ನಟಿಸುವವರು ನೀಡುವ 'ಮಂಕುಬೂದಿ'ಗಾಗಿ ನೂರಾರು ಮೈಲುಗಳ ಪ್ರವಾಸ ಕೈಕೊಂಡಾಗ, ವೇದಿಕೆಯ ಮೇಲೆ ಹರಿಜನರನ್ನು ಮುಟ್ಟಿ ಮನೆಗೆ ಬಂದು ಸ್ನಾನ ಮಾಡಿದಾಗ, ದೂರದ ಹಳ್ಳಿಯಲ್ಲಿ ಹತ್ತುಗಡೆಯವರೊಬ್ಬರು ಸತ್ತ ಸುದ್ದಿಯನ್ನು ಡಿಳ್ಳಿಗೆ ತಂದ ತಂತಿ ಮುಟ್ಟುತ್ತಲೆ ತಂತಿಯೊಡನೆಯೇ ಸೂತಕ ಬಂದಿತೆಂದು ಭಾವಿಸಿ ಮುಟಟಬೇಡಿರೆಂದು ಮೂರು ಮೊಳ ಹಾರಿದಾಗ, 'ರಾಶಿ, ಕೂಟ, ಋಣ ಸಂಬಂಧ' ಸರಿಹೋಗಲಿಲ್ಲವೆಂದು ಮೆಚ್ಚಿದ ಹುಡುಗೆಯನ್ನೇ ಮದುವೆಯಾಗಲು ನಿರಾಕರಿಸದಾಗ, ಸ್ವತಂತ್ರ ಮತಿಗೆ ಹೇಗೆನ್ನಿಸುತ್ತದೆ? ಇವು ಅಪರೂಪವಾದ ಉದಾಹರಣೆಗಳೇನಲ್ಲ ನಮ್ಮ ದೇಶದಲ್ಲಿ. ಸುತ್ತು ಮುತ್ತು ಕಣ್ಣಾಡಸಿದರೆ ಸಾವಿರ ಸಾವಿರ ಸಿಕ್ಕುತ್ತಿವೆ ಇಂಥ ಪ್ರಜ್ಞಾಶೂನ್ಯ ಆಚರಣೆಗಳು, ನಂಬಿಕೆಗಳು, ವಾಡಿಕೆಗಳು, ಮತ ಪ್ರಕ್ರಿಯೆಗಳು, ಮಡಿ-ಮೈಲಿಗಳು, ಪದ್ಧತಿಗಳು, ರೂಢಿಗಳು, ಶಕುನಗಳು ಇನ್ನೂ ಏನೇನೋ!

ಆದಿಮಾನವನ ಹಸಿ ಹಸಿ ನಂಬಿಕೆಗಳಿಗೆ ಬದಲಾಗಿ ನಾಗರಿಕತೆಯ ಬಿಸಿ ಬಿಸಿ ನಂಬಿಕೆಗಳು ಬಂದಿರಬಹುದು; ಆದರೆ ಮೂಲ ಒಂದೇ, ಪರಿಣಾಮ ಒಂದೇ! ಮಾನವನ ವೈಚಾರಿಕತೆಯನ್ನು ಕುಂಠಿತಗೊಳಿಸಿ, ವಿಚಾರಕ್ಕೆ ಬದಲಾಗಿ ಕುರುಡು ವಿಶ್ವಾಸಕೆಕ ಪ್ರೇರೇಪಿಸುವುದು ಭೂತ ಪೂಜೆಯಾದರೇನು ಭವಿಷ್ಯಕಥನವಾದರೇನು? ಅಲ್ಲಿ ೧೩ ಅಶುಭ ಸಂಖ್ಯೆ, ಇಲ್ಲಿ ೭ ಶುಭ ಸಂಖ್ಯೆ; ಅಲ್ಲೊಂದು ಅದೃಷ್ಟಸಂಖ್ಯೆಯೆಂದು ಅಂಗೀಕೃತವಾದರೆ ಇಲ್ಲಿ ಇನ್ನೊಂದು; ಅಲ್ಲಿ ಕರಿ ಬೆಕ್ಕು ಅಡ್ಡ ಬಂದರೆ ಅಮಂಗಳ, ಇಲ್ಲಿ ಯಾವ ಬೆಕ್ಕು ಅಡ್ಡ ಬಂದರೂ ಅಮಂಗಳ; ಅಲ್ಲಿ ಗರುಡಶಿಲೆಯ ಉಂಗುರ ಮಂಗಲಕರ; ಇಲ್ಲಿ ನೀಲ ಪುಷ್ಪರಾಗಗಳ ಉಂಗುರಗಳು ಮಂಗಲಕರ; ಒಂದೆ, ಎರಡೇ – ಎಷ್ಟೊಂದು

ಅಂಥ ವಿಶ್ವಾಸಗಳು ಈ ವಿಜ್ಞಾನಯುಗದಲ್ಲಿಯೂ ತಾಯಿತ ಕಟ್ಟಿಕೊಳ್ಳುವವರಾರೊ, ಹಚ್ಚೆ ಚುಚ್ಚಿಸಿಕೊಳ್ಳುವವರಾರೊ, ಶಾಂತಿ ಮಾಡಿಸುವವರಾರೊ ಶುದ್ಧೀಕರಣಗೈಸುವವರಾರೊ, ಜ್ಯೋತಿಷಿಗಳನ್ನು, ಹಸ್ತಾಮುದ್ರಿಕ ಹೇಳುವವರನ್ನು, ಭವಿಷ್ಯ ಹೇಳುವವರನ್ನು, ರಮಲ ವಿದ್ಯಾಪರಿಣಿತರನ್ನು, ಶಕುನ ಹೇಳುವವರನ್ನು ಕಸಿಗೆ ಅರ್ಥಕಟ್ಟುವವರನ್ನು, ಸಂಖ್ಯಾಶಾತ್ರಿಗಳನ್ನು, ವೇಶಾಳಿಗಳನ್ನು, ಮಾಂತ್ರಿಕರನ್ನು, ತಂತ್ರಿಗಳನ್ನು, ಮಣಿ–ವೀಕ್ಷಕರನ್ನು, ಪವಾಡ ಪುರುಷರೆಂಬ ಬಡಾಯಿ ಕೊಚ್ಚಿಕೊಳ್ಳುವವರನ್ನು ದುಂಬಾಲಬಿದ್ದು ಕೇಳುವವರಾರೋ! ನಾ ನೀನೆಂಬ ನಾಮಾಂಕಿತ ವ್ಯಕ್ತಿಗಳನ್ನೂ ಬಿಟ್ಟಿಲ್ಲ ಈ ಪೊಳ್ಳು ಪರಿಪಾಠಗಳು. ಟೊಳ್ಳು ರೂಢಿಗಳು, ಜೊಳ್ಳು ನಂಬಿಕೆಗಳು, ಹೊಳ್ಳು ಮೂಢಾಚರಣೆಗಳು, ಭ್ರಮೆಗಳು, ಭ್ರಾಂತಿಗಳು, ಹುಚ್ಚು ಗೀಳುಗಳು ನ್ಯೂನತೆಗಳು, ಶಾಸ್ತ್ರಾಂಧತೆಗಳು, ತಪ್ಪು ತಿಳಿವಳಿಕೆಗಳು! ಧರ್ಮನಿರಪೇಕ್ಷ ದೇಶಗಳಲ್ಲಿ ಧಾರ್ಮಿಕ ಮೂಲಕ ಮೂಢ ವಿಶ್ವಾಸಗಳಿಗೆ ಬದಲಾಗಿ ಇನ್ನಾವುದೋ ಇರಬಹುದು.* ಅಂತೂ ಇವೆ, ಎಲ್ಲೆಡೆಯಲ್ಲಿಯೂ ಹೆಚ್ಚು ಕಡಿಮೆ ಪ್ರಮಾಣದಲ್ಲಿವೆ ಈ ಅಫೀಮಿನ ಅವತಾರಗಳು. ಈ ದೇಶದಲ್ಲಿ, ಅದೂ ಹಿಂದೂ ಸಮಾಜದಲ್ಲಿಯಂತೂ ಇವುಗಳದೇ ಸ್ವರಾಜ್ಯ; ಇವುಗಳದೇ ಸಾಮ್ರಾಜ್ಯ.

ಇಂದಿನ ಹಾಡೇ ಹೀಗಿರುವಾಗ ಎಂಟುನೂರು ವರ್ಷಗಳ ಹಿಂದಿನವರ ಪಾಡು ಹೇಗಿರಬೇಡ? ಇವುಗಳು ಅಜ್ಞಯುಗದ ಅವಶೇಷಮಾತ್ರವಾಗಿ ಉಳಿದಿರಲಿಲ್ಲ, ಅಜ್ಞರನ್ನು ಅನವರತ ಅಜ್ಞಾನದಲ್ಲಿಯೇ ಇರಿಸಿ ಅವರನ್ನು ಪಶುಗಳಂತೆ ದುಡಿಸಿಕೊಂಡ ತಮ್ಮ ಬೊಜ್ಜು ಬೆಳೆಸಿಕೊಂಡಿದ್ದವರಿಗೆ, ಮುಂದೆ ಬೆಳೆಸಿಕೊಳ್ಳುತ್ತಲೇ ಹೋಗಬೇಕೆಂಬ ಬುದ್ಧಿ? ಯಿದ್ದವರಿಗೆ ಅನುಕೂಲವಾದ, ಉಪಯುಕ್ತವಾದ ಅಸ್ತ್ರಗಳಾಗಿಯೂ ಇದ್ದುವೆಂಬುದನ್ನು ನೆನೆದಾಗ ಇವುಗಳ ಉಚ್ಚಾಟನೆಗಾಗಿ ಪ್ರಯತ್ನಿಸುವುದು ಅದೆಂಥ ಕೃತಜ್ಞತಾಶೂನ್ಯ–ಕಾರ್ಯವಾಗಿತ್ತೆಂಬುದರ ಕಲ್ಪನೆ ಬಾರದಿರದು. 'ದಾರಿದ್ರ್ಯಕ್ಕೆ ದೇವರೇ ಕಾರಣ; ದಾರಿದ್ರ್ಯ ನಿವಾರಣೆಗಾಗಿ ಯತ್ನಿಸುವುದು ದೇವರಿಚ್ಛೆಗೆ ವಿರೋಧವಾಗಿ ವರ್ತಿಸಿದಂತೆ; ಪೂರ್ವಜನ್ಮದ ಪಾಪದ ಫಲವನ್ನು ಈ ಜನ್ಮದಲ್ಲಿ ಅನುಭವಸುವುದಲ್ಲದೆ ಮೇಲಿನವರ ಸೇವೆಯನ್ನು ಪ್ರತಿಫಲಾಪೇಕ್ಷೆಯಿಲ್ಲದೆ ಮನಃಪೂರ್ವಕವಾಗಿ ಮಾಡಿದರೆ ಮುಂದಿನ ಜನ್ಮದಲ್ಲಿ ಒಳ್ಳೆಯದನ್ನು ಕಾಣುವಿಪ; ಆದುದರಿಂದ ಇದ್ದುದರಲ್ಲಿಯೇ ಬಿದ್ದು ಒದ್ದಾಡು!' ಎಂಬ ಬೋಧೆಯ ಜೊತೆಗೆ ಈ ಕುರುಡುನಂಬಿಕೆಗಳನ್ನು, ಭ್ರಾಮಕ ವಾಡಿಕೆಗಳನ್ನು, ಪುರಾಣಗಳ ಅಡಗೂಲಜ್ಜಿ

---

*** ಉದಾಹರಣೆಗಾಗಿ ರಷ್ಯಾದ ಕವಿ ಯೆತುಷೇನೋ (Yethusheno)ನು ಒಂದು ಸಂಜೆ ರಾಬರ್ಟ್ ಕೆನಡಿಗೆ ಸ್ವಸ್ತಿಪಾನ ಮಾಡಿ ರಷ್ಯಾದ ಪದ್ಧತಿಯಂತೆ ತನ್ನ ಬರಿದಾದ ಪಾನಬಟ್ಟಲನ್ನು ನೆಲಕ್ಕೆಸೆದನಂತೆ. ಆದರೆ ಅದು ಒಡೆದು ಚೂರು ಚೂರಾಗದಿರಲು ಅದೊಂದು ಮುಂಬರುವ ಅನಿಷ್ಟವನ್ನು ಸೂಚಿಸಿದ ಅಪಶಕುನವೆಂದು ಭಾವಿಸಲಾಯಿತಂತೆ. ಮುಂದೆ ಒಂದೇ ವಾರದಲ್ಲಿ ರಾಬರ್ಟ್ ಕೆನಡಿಯ' ಕೊಲೆಯಾಗಲು ಈ ವಿಲಕ್ಷಣ ವಿಶ್ವಾಸಕೆಕ ಅತುಲ ಪುಷ್ಟಿ ದೊರೆಯಿತಂತೆ.**

ಕತೆಗಳಲ್ಲಿ, ಅನಂತ ದೇವಿ ದೇವತೆಗಳಲ್ಲಿ ಅಂತ್ರ ತಂತ್ರ ಮಂತ್ರಗಳಲ್ಲಿ ಶ್ರದ್ಧೆಯನ್ನು ಇನ್ನೂ ಆಳವಾಗಿ ಬೆಳೆಸಿ ಇವುಗಳ ಜೇಡಜಾಲದಲ್ಲಿ ಸಿಕ್ಕ ಈ ನೊಣಗಳು ಎಂದೆಂದೂ ಇವುಗಳಿಂದ ಬಿಡುಗಡೆ ಪಡೆಯದಂತೆ ಮಾಡಿದ್ದರು. ಅಂದಿನ ತುಡುಗುಣಿಗಳು, 'ಕಾಟುಗ, ಕೆತ್ತುಗ, ಪೋಲುಗರು' ಅವರಿಗೆ ಶೋಷಕರೆಂಬುದು ಇಂದಿನ ಹೆಸರು; 'ತುಡುಗುಣಿ'ಗಳೆಂಬುದು ಬಸವಣ್ಣನಿಟ್ಟ ಹೆಸರು; 'ಪಟ್ಟಭದ್ರಹಿತ'ಗಳೆಂಬುದು ಇಂದಿನ ಹೆಸರು, 'ಕಾಟುಗ, ಕೆತ್ತುಗ, ಪೋಲುಗ'ರೆಂಬುವು ಬಸವಣ್ಣ ಕೊಟ್ಟ ಹೆಸರು.

ಅರಿವಿನ ಜನ್ಮಕ್ಕೆ ಬಂದೂ ಬಹುಜನರನ್ನು ಮರವೆಯ ಪಶುಗಳನ್ನಾಗಿ ಮಾಡುವ ಈ ಸಾಮಾಜಿಕ ಅನಿಷ್ಟಗಳ, ಅರಿಷ್ಟಗಳ, ಅವಲಕ್ಷಣಗಳ ಮೂಲೋತ್ಪಾಟನವಾಗಲೇ–ಬೇಕೆಂದರು ಬಸವಣ್ಣನವರು. ಮೇಲ್ವರ್ಗದವರ ಶೋಷಣೆ, ಕೆಳವರ್ಗದವರ ಅಜ್ಞತೆಗಳ ವಿರುದ್ಧ ಒಮ್ಮೆಗೇ ಯುದ್ಧ ಸಾರಿದ್ದ ಅವರು ತಮ್ಮ ದ್ವಿಮುಖ ಅಂದೋಲನವನ್ನು ಧಾರ್ಮಿಕ ದಂಡಯಾತ್ರೆಯೆಂಬಂತೆ ನಡೆಸಿ* ಯುಗಪ್ರವರ್ತಕರಾದರು. ಶ್ರೀಸಾಮಾನ್ಯರ ಮೂಢರೂಢಿ ಪರಿಪಾಠ ಪ್ರತಿಕ್ರಿಯೆಗಳನ್ನು ಕೇವಲ ಖಂಡಿಸಿ ಸಂತೃಪ್ತರಾಗದೆ ಅವರಿಗೆ ಸುಕರವೂ ಸುಯುಕ್ತಿಕವೂ ಆದ ಪ್ರತಿನಿಧಾನ (Substitute)ವನ್ನೂ ಕಲ್ಪಿಸಿಕೊಟ್ಟು ಅವರ ಅವಸ್ಥಾಂತರ ಸುಲಭವಾಗುವಂತೆಸಗಿದರು.

'ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ
ಗ್ರಹಣ ಸಂಕ್ರಾಂತಿಯಿಂದ ವೆಗ್ಗಳ
ಏಕಾದಶಿ ವ್ಯತಿಪಾತದಿಂದ ವೆಗ್ಗಳ
ಸೂಕ್ಷ್ಮ ಶಿವಪಥವರಿದವಂತೆ – ಹೋಮನೇಮ ಜಪತಪದಿಂದ ವೆಗ್ಗಳ
ಕೂಡಲಸಂಗಮದೇವ, ನಿಮ್ಮ ಮಾಣದೆ ನೆನೆವಂಗೆ!' (೬೧೧)

ಒಂದೇಟಿಗೆ ಎಷ್ಟೊಂದು ಶುಷ್ಕ ಸಂಪ್ರದಾಯಗಳು ಋಕ್ಷ ರೀತಿನೀತಿಗಳು ಉರುಳಿಹೋದುವು! ಇವೆಲ್ಲವನ್ನು ಉಳಿದು ದೇವನೊಬ್ಬನನ್ನು ಮಾಣದೆ ನೆನೆವುದು ಎಷ್ಟು ಸುಲಭ ಮಾರ್ಗ. ವಿವೇಕಸಮ್ಮತ ಮಾರ್ಗ! ಇನ್ನೂ ಕೇಳಿ:

---

* **"ಅಟ್ಟಾಟಿಕೆಯ ಮಾತನಾಡಲದೇಕೋ? ಮುಟ್ಟಿಬಂದುದಕ್ಕಂಜಲದೇಕೊ?**
**ಕಾದಿದಲ್ಲದೆ ಮಾಣೆನು; ಓಡಿದರೆ ಭಂಗ ಹಿಂಗದಾಗಿ,**
**ಕೂಡಲಸಂಗಮದೇವಾ, ಎನ್ನ ಭಂಗ ನಿಮ್ಮದಾಗಿ!" (೬೨೬)**
**"ರಣದಲ್ಲಿ ತಲೆಹದು ಅಟ್ಟೆ ನೆಲಕ್ಕೆ ಬಿದ್ದು ಬೊಬ್ಬಿಡಲದಕ್ಕೆ ಒಲಿವ**
**ಕೂಡಲಸಂಗಮದೇವ" (೬೬೩)**

'ಅಶ್ವಮೇಧಯಾಗವಂತಿರಲಿ, ಅಜಪೆಯುಪದೇಶ ಸಮಾಧಿ
ಯಂತಿರಲಿ, ಹೋ
ಹೋಮ-ನೇಮ-ಗಾಯತ್ರಿಯ ಜಪವಂತಿರಲೀ ಹೋ!
ಜನಮೋಹನ ಮಂತ್ರವಂತಿರಲಿ ಹೋ!
ಕೂಡಲಸಂಗನ ಶರಣರ ನುಡಿಗಡಣೆ ಎಲ್ಲಕ್ಕೂ ಅಧಿಕ, ನೋಡಾ!'

ನಿಮಗೆ ತಿಳಿಯದ ಭಾಷೆಯಲ್ಲಿರುವ ಗ್ರಂಥಗಳನ್ನು ನಂಬಿ, ನಿಧಾನವನ್ನು ಕಾಯ್ವ ಬೆಂತರಗಳಂತೆ ಅವುಗಳ ಸುತ್ತು ಸರ್ಪಕಾವಲನಿರಿಸಿ, ಅವುಗಳಿಗಿರುವ ಜ್ಞಾನವನ್ನು ಬಿತ್ತರಿಸದೆ ಅವುಗಳಲ್ಲಿ ಸೇರಿಕೊಂಡಿರುವ ಯಜ್ಞ, ಯಾಗ, ಹೋಮ, ಹವನ, ಜಪ, ತಪ, ನೇಮ, ಮಂತ್ರ, ತಂತ್ರಗಳ ಮಾಯಾಬಾಜಾರದಲ್ಲಿ ಮರುಳುಗೊಳಿಸಿ ನಿಮ್ಮನ್ನು ಸುಲಿದು ತಿನ್ನುವವರ ಮುಂದೆ 'ಉಘೋ, ಶಿವಘೋ' ಎಂದು ಕೈ ಜೋಡಿಸಿ ಕುಳಿತಿರುವುದಕ್ಕಿಂತ ನಿಮಗೆ ತಿಳಿಯುವ ಭಾಷೆಯಲ್ಲಿಯೇ, ನಿಮ್ಮ ತಯ್ನುಡಿಯಾದ ಕನ್ನಡದಲ್ಲಿಯೇ ಕಾಯಕಯೋಗಿಗಳು ಉಸುರಿದ ವಚನಗಳಿವೆ; ಅವುಗಳನ್ನು ಓದಿ, ಕೇಳಿ, ತಿಳಿದುಕೊಂಡರೂ ಅಕು, ನಿಮ್ಮ ಬದುಕು ಬಂಗಾರವಾಗುತ್ತದೆ. ಹುಟ್ಟಿದ ನಾಡಿಗೆ ಸಿಂಗಾರವಾಗುತ್ತದೆ. ಎಂಬ ಈ ಅಳ್ತಿಯ, ಆತ್ಮೀಯತೆಯಮ, ಅಂತಃಕರಣದ ನುಡಿ ಅದೆಷ್ಟು ಆಪ್ಯಾಯಮಾನವಾಗಿರಬೇಡ ಅಂದಿನ ಭ್ರಾಂತಿ-ಬಂಧಿತರಿಗೆ, ದೀನ ದಲಿತರಿಗೆ? ಇನ್ನೂ ಕೇಳಿ:

'ಮಾರಿ ಮಸಣಿಯೆಂಬುದು ಬೇಱಿಲ್ಲ ಕಾಣಿರೋ!
ಮಾರಿಯೆಂಬುದೇನು?
ಕಂಗಳು ತಪ್ಪಿನೋಡಿದರೆ ಮಾರಿ, ನಾಲಗೆ ತಪ್ಪಿ ನುಡಿದರೆ ಮಾರಿ,
ನಮ್ಮ ಕೂಡಲಸಂಗಮದೇವರ ನೆನಹ ಮಱೆದರೆ ಮಾರಿ!

ಭೀಕರಾಕಾರದ ಮಾರಿ ಮಸಣೆರ ಗೊಡವೆ ಬಿಡಿಸಿ 'ಕಂಗಳು ತಪ್ಪಿ ನೋಡ'ದಿರೆ, 'ನಾಲಗೆ ತಪ್ಪಿ ನುಡಿಯ'ದಿರೆ ಮಾರಿಯೇ ಇಲ್ಲವೆಂದು ಸಾರಿದ ಬಸವಣ್ಣನವರ ಬೋಧನೆಯ ರೀತಿ ಅಸದೃಶವಾದುದೆಂದೇ ಹೇಳಬೇಕು. ಇಲ್ಲಿ ಜನಮನದ ಹತ್ತಿರಕ್ಕೆ. ಅವರಿಗೆ ಅರ್ಥವಾಗುವ ರೀತಿಯಲ್ಲಿ, ವೈಚಾರಿಕತೆ ಸುಳಿದಿದೆ. ಅವರ ಮನದ ಮೊಗ್ಗುಗಳನ್ನು ಅರಳಿಸುವ ಸುಳಿಗಾಳಿಯಾಗಿ - ಉದುರಿಸುವ ಬಿರುಗಾಳಿಯಾಗಿ ಅಲ್ಲ. ಇದೂ ಕೂಡ ಮಾನವಪ್ರೇಮ ಸ್ನಿಗ್ಧ ವೈಚಾರಿಕತೆಯಲ್ಲವೆನ್ನುವವರಿಗೆ ಬಹುಶಃ 'ಕಂಗಳು ತಪ್ಪಿ ನೋಡು'ವುದೂ, 'ನಾಲಗೆ ತಪ್ಪಿ ನುಡಿ'ಯುವುದೂ ಮುಂದುವರಿಯುವುದೂ ಬೇಕಾಗಿದೆಯೆಂದು ಭಾವಿಸಬೇಕೆ? ಕೆಲವರಿಗಂತೂ ತಾವು ಹುಟ್ಟಿ ಬರುವವರೆಗೆ ಕನ್ನಡದಲ್ಲಿ ವಿಚಾರ ಸಾಹಿತ್ಯವೇ ಹುಟ್ಟಿರಲಿಲ್ಲವೆಂಬ ಭ್ರಾಂತಿ. ಇದೊಂದು ರಮಣೀಯ ರೂಪಕ:

ಪಂಚಬ್ರಹ್ಮವ ಕೆಡಿಸಿತ್ತು ; ಪ್ರಣವಮಂತ್ರನೀಡಾಡಿತ್ತಲ್ಲಾ;
ಕರ್ಮಂಗಳನೆ ಕಳೆಯಿತ್ತು; ಕ್ರೀಗಳನೆ ಮೀಱುತ್ತಲ್ಲಾ;
ಆಗಮದ ಹಲ್ಲನೆ ಕಳೆಯಿತ್ತು ಕೂಡಲಸಂಗಯ್ಯನ ಭಕ್ತಿಗಜ, ಹೋ!

**ಬಸವಣ್ಣನ ಭಕ್ತಗಜ ಹೊಕ್ಕಡೆಗಳಲ್ಲೆಲ್ಲ ಹಳೆಯ ಕೊಳೆತ ಶ್ರದ್ಧೆ–ವಿಶ್ವಾಸಗಳ ಕತ್ತಲೆ ಮನೆಗಳು ಕಳಚಿಬಿದ್ದುವು; ಮೌಢ್ಯದ ಪತಾಕೆಗಳು ಮುರಿದುಬಿದ್ದವು; ಶೋಷಣೆಯ ಕೋಟೆಬಾಗಿಲುಗಳು ಸೀಳಿ ಉರುಳಿದುವು; ಧರ್ಮದ ದಳ್ಳಾಳಿಗಳು, ಕರ್ಮದ ಕಾರ್ಯಭಾರಿಗಳು ಮಠಮಂದಿರಗಳ ಮೈಗಳ್ಳರು ಕಂಬಿಕಿತ್ತೋಡಿದರು! ಸೂತಕಗಳ ಸಮಾಚಾರವನ್ನಷ್ಟು ತಕ್ಕೊಳ್ಳಭೇಡವೆ?**

ಕಿವಿಯ ಸೂತಕ ಹೋಯಿತ್ತು – ಸದ್‍ಗುರು ವಚನದಿಂದೆ:
ಕಣ್ಗಳ ಸೂತಕ ಹೋಯಿತ್ತು – ಸದ್ಭಕ್ತರ ಕಂಡೆನಾಗಿ;
ಕಾಯದ ಸೂತಕ ಹೋಯಿತ್ತು – ನಿಮ್ಮ ಚರಣವ ಮುಟ್ಟಿದೆನಾಗಿ;
ಬಾಯಿ ಸೂತಕ ಹೋಯಿತ್ತು – ನಿಮ್ಮೊಕ್ಕುದ ಕೊಂಡೆನಾಗಿ;
ನಾನಾ ಸೂತಕ ಹೋಯಿತ್ತು – ನಿಮ್ಮ ಶರಣರನುಭಾವಿಯಾಗಿ;
ಕೂಡಲಸಂಗಮದೇವ, ಕೇಳಯ್ಯಾ,
ಎನ್ನಮನದಸೂತಕ ಹೋಯಿತ್ತು – ನೀವಿಲ್ಲದಿಲ್ಲೆಂದಱಿದೆನಾಗಿ!'

(೭೮೦)

ಪರಂಪರಾಗತ ಪಂಚಸೂತಕಗಳನ್ನು 'ನಾನಾ ಸೂತಕ' ಎಂಬ ಪದಗಳಲ್ಲಿ ಅಡಗಿಸಿ, ಅವುಗಳ ನಿವಾರಣೆಗೆ ಶರಣರ ಅನುಭಾವದ ಅನುಭವಸಿದ್ಧ ಔಷಧವನ್ನಿತ್ತು, ಕುರುಡು ಪರಂಪರೆ ಕಂಡಿರದ ಹೊಸ ಸೂತಕಗಳನ್ನೂ ಕಂಡುಹಿಡಿದು, ಅವುಗಳಿಗೂ ಮದ್ದನಿತ್ತಿದ್ದಾನೆ ಮಾಹಿಮಾಪುರುಷ ಬಸವಣ್ಣ. ಕಿವಿಯ ಸೂತಕ, ಕಣ್ಗಳ ಸೂತಕ, ಕಾಯದ ಸೂತಕ, ಬಾಯ ಸೂತಕ, ಮನದ ಸೂತಕ ಈ ಪಂಚಸೂತಕಗಳು ಆ ಪಂಚಸೂತಕಗಳಿಗಿಂತ ಗಂಡಾಂತರಕಾರಿಯಾದುವುಗಳು. ತೊಳೆದುಕೊಂಡರೆ ಹೋಗಬಹುದು ಆ ಸೂತಕಗಳು. ಆದರೆ ಈ ಸೂಕ್ಷ್ಮಸೂತಕಗಳಿಗೆ ಗುರುವಚನ, ಸದ್ಭಕ್ತಸಂದರ್ಶನ, ಶಿವಚರಣಸ್ಪರ್ಶನ, ಪ್ರಸಾದಸೇವನ, ಶಿವಜ್ಞನಿಗಳೇ ನಿವಾರಣೋಪಾಯಗಳು. ಅಣ್ಣನ ಕಣ್ಣು ಎಷ್ಟು ಸೂಕ್ಷ್ಮವಾಗಿ ಜೀವಿಯ ಅಂತರಂಗ ಬಹಿರಂಗಗಳನ್ನು ದೃಢಕ್ಕರಿಸಿದ್ದಿತು. ಪರಿಶೀಲಿಸಿದ್ದಿತೆಂಬುದಕ್ಕೆ ನಿದರ್ಶನ ಈ ವಚನ. ವ್ಯಕ್ತಿಯ ಅಂತರಂಗ ಶುರ್ಧಿ ಬಹಿರಂಗ ಶುದ್ಧಿಗಳನ್ನು ಸಾಧಿಸುವುದರ ಮೂಲಕ ಸಮಾಜದ ಕೊಳೆ–ಕಶ್ಮಲಗಳನ್ನೆಲ್ಲ ತೊಳೆದುಬಿಡಬಹುದೆಂಬ ಬಸವಣ್ಣನವರ ವಿಚಾರಪ್ರಣಾಲಿಗೆ ಕನ್ನಡಿ ಹಿಡಿದಿದೆ ಈ ವಚನ.

ಇನ್ನು ಸೋಮವಾರ, ಮಂಗಳವಾರವೆಂದು ಮಾಡುವ ಭಕ್ತನ ಬಗ್ಗೆ ಬಸವಣ್ಣನವರು ಏನು ಹೇಳಿದ್ದಾರೆ? 'ದಿನ ಶ್ರೇಷ್ಠವೊ. ಲಿಂಗ ಶ್ರೇಷ್ಠವೊ?' ಎಂದು ಕೇಳಿದ್ದಾರೆ. ಆ ದಿನವೆ ಘನವೆಂದು ಆ ದಿನವೆ ದೈವವೆಂದು ಮಾಡುವನಾಗಿ ಆತ ದಿನದ ಭಕ್ತನು ಎಂದು ವಿಡಂಬಿಸಿದ್ದಾರೆ. ಇದು ಕಾರಣ ದಿನವಾರಂಗಳು ಶ್ರೇಷ್ಠವೆಂದು ಏಕಭುಕ್ತೋಪವಾಸಗಳ ಮಾಡುವ ಭಕ್ತಂಗೆ ಕುಂಭೀಪಾತಕ, ನಾಯಕನರಕ ತಪ್ಪದು ಎಂದು ಎಚ್ಚರಿಸಿದ್ದಾರೆ (ಬ.ಹೆ.ವ. ೧೦೫) ಕೊನೆಗೆ,

'ಅಂದು ಇಂದು ಮತ್ತೊಂದೆನಬೇಡ,
ದಿನವಿಂದೇ ಶಿವಶರಣನೆಂಬವಂತೆ;
ದಿನವಿಂದೇ ಹರಶರಣೆಂಬವಂಗೆ;
ದಿನವಿಂದೇ ನಮ್ಮ ಕೂಡಲಸಂಗನ ಮಾಣದೆ ನೆನೆವಂಗೆ' (೧೭೪)

ಎಂದು ತಿಳಿ ಹೇಳಿದ್ದರೆ. ಇನ್ನೂ ಸಂದೇಹ ಕಾಡುತ್ತಿದೆಯೆ? ಕೇಳು:
'ಎಮ್ಮವರು ಬೆಸಗೊಂಡರೆ ಶುಭಲಗ್ನವೆನ್ನಿರಯ್ಯಾ;
ರಾಶಿ, ಕೂಟ, ಋಣಸಂಬಂಧವುಂಟೆಂದು ಹೇಳಿರಯ್ಯಾ;
ಚಂದ್ರ ಬಲ ತಾರಾಬಲವುಂಟೆಂದು ಹೇಳಿರಯ್ಯಾ;
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯಾ;
ಕೂಡಲಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ!'

ಮಂತ್ರ ತಂತ್ರಗಳ ಮಾತೆತ್ತುವಿಯಾ?
'ಭಯಂಕರ ಭ್ರಮೆಗೊಂಡಿತ್ತು ಮಂತ್ರ ತಂತ್ರಾ' (೮೧)
'ನಿಮ್ಮ ನಾಮವೆನಗೆ ಮಂತ್ರ, ಶಿವನಾಮವೆನಗೆ ತಂತ್ರ' (೭೬)
'ಓಂ ನಮಃಶಿವಾಯ ಎಂಬುದೇ ಮಂತ್ರ
ಓಂ ನಮಃಶಿವಾಯ ಎಂಬುದೇ ತಂತ್ರ' (೭೭)

ವಶ್ಯಗಳ ವಿಷಯ ಪ್ರಸ್ತಾಪಿಸುವಿಯಾ?
'ವಶ್ಯವ ಬಲ್ಲೆವೆಂದೆಂಬಿರಯ್ಯಾ
ಬುದ್ಧಿಯನಱಿಯದ ಮನುಜರು ಕೇಳಿರಯ್ಯಾ,
ವಶ್ಯಾವುದೆಂದಱಿಯದೆ
ಮರುಳಗೊಂಬಿರೆಲೆ ಗಾವಿಲ ಮನುಜರಿರಾ!
'ಓಂ ನಮಃಶಿವಾಯ' ಎಂಬ ಮಂತ್ರ ಸರ್ವಜನವಶ್ಯ
ಕೂಡಲಸಂಗಮದೇವಾ!' (೭೮)

ಶಕುನದ ಸುದ್ದಿ ಎತ್ತುವಿಯಾ?

'ಶಕುನವೆಂದೆಂಬೆ, ಅಪಶಕುನವೆಂದೆಂಬೆ....
ನೀ ಹೋಹಾಗಳಕ್ಕೆ! ನೀ ಬಾಹಾಗಳಕ್ಕೆ!
ಅಕ್ಕೆ ಬಾರದ ಮುನ್ನ ಪೂಜಿಸು ಕೂಡಲಸಂಗಮದೇವನ' (೧೬೭)

ಒಟ್ಟಿನಲ್ಲಿ, ಬಸವನ ದಿಟ್ಟಿಗೆ ಬಿದ್ದ ವಿವೇಕ ವಿರಹಿತ ಆಚರಣೆಗಳೆಲ್ಲವೂ ಅರಿವಿನ ಒರೆಗಲ್ಲಿಗೆ ಗುರಿಯಾದವು. ಜಳ್ಳುತೂರಿ ಗಟ್ಟಿ ಕಾಳು ಉಳಿಸಿಕೊಳ್ಳುವ ಹೊಸ ಬೀಜಗಳ ಬಿತ್ತಿ ಹೊಸ ಪಯಿರು ಬೆಳೆವ, ಕಳೆ ಕಿತ್ತು ಬೆಳೆ ಉಳಿಸಿಕೊಳ್ಳುವ, ಬೆಳೆದುದನ್ನು ಭಕ್ತರ ಬಳಗಕ್ಕೆ ಸಲ್ಲಿಸುವ ಕಾರ್ಯ ಕಲ್ಯಾಣದಲ್ಲಿ ಅಭೂತಪೂರ್ವವಾಗಿ ಸಾಗಿ ಸಮಾಜದ ಸರ್ವತೋಮುಖವಾದ ಸಂಸ್ಕರಣ ನಡೆಯಿತು. ಮೇಲಿನವರ ಅಹಂಕಾರ ಕೆಳಗಿನವರ ಅಜ್ಞಾನ – ಎರಡಕ್ಕೂ ಭಕ್ತಿಗಜ ಢಿಕ್ಕಿ ಹೊಡೆಯಿತು; ಎರಡೂ ಕಾಲು ಕಿತ್ತವು.

ಇನ್ನೂ ನೋಡಿ ಈ ಅಭಾಸವನ್ನು :

'ಹಾವಾಡಿಗನು ಮುಕೊರತಿಯು ತನ್ನ ಕೈಯಲ್ಲಿ ಹಾವು
ಮಗನ ಮದುವೆಗೆ ಶಕುನವ ನೋಡ ಹೋಹಾಗ
ಇದಿರಲ್ಲೊಬ್ಬ ಮೂಕೊರತಿಯ ಹಾವಾಡಿಗ ಕಂಡು
ಶಕುನಹೊಲ್ಲೆಂಬ ಚದುರನ ನೋಡಾ!
ತನ್ನ ಸತಿ ಮೂಕೊರತಿ! ತನ್ನ ಕೈಯಲ್ಲಿ ಹಾವು
ತಾನು ಮೂಕೊರೆಯ!' (೧೦೫)

ಹರಕೆ ಗಿರಕೆಗಳ ಹೆಸರೆತ್ತುವಿಯಾ?

'ಹರಸಿ ಮಾಡುವುದು ಹರಕೆಯ ದಂಡು
ನೆರಹಿಮಾಡುವುದು ಡಂಭಿನ ಭಕ್ತಿ?
ಹರಸಬೇಡ ನೆರಹಬೇಡ,
ಬಂದ ಭರವನರಿದರೆ ಕೂಡಿಕೊಂಡಿಪ್ಪ
ನಮ್ಮ ಕೂಡಲಸಂಗಮದೇವ' (೨೨೮)

# ೭

# ಸಾಂಸ್ಕೃತಿಕ ಕ್ರಾಂತಿ

ಧಾರ್ಮಿಕ ಕ್ರಾಂತಿ, ರಾಜ್ಯಕ್ರಾಂತಿ, ಆರ್ಥಿಕ ಕ್ರಾಂತಿ – ಯಾವ ಕ್ರಾಂತಿಯೇ ಇರಲಿ, ಅದು ತನು ಉತ್ಪಾದಿಸುವ ವಿದ್ವೇಷದಲ್ಲಿ ವಿಧ್ವಂಸವಾಗದಿರಬೇಕಾದರೆ, ಪ್ರತಿ ಕ್ರಾಂತಿಗೆ ಆಸ್ಪದವಿತ್ತು ಘೋರ ಘರ್ಷಣೆ ರಕ್ತಪಾತಗಳಿಗೆ ಕಾರಣವಾಗದಿರಬೇಕಾದರೆ, ಅದು ಪ್ರೇರಿಸಿದ ಪರಿವರ್ತನೆಗಳು ಬಲುಮೆಯ ಬಾಹ್ಯಾರೋಪಿತ ಪರಿವರ್ತನೆಗಳಾಗಿ, ಉಳಿದು ಕಾಲಕ್ರಮದಲ್ಲಿ ಒಲುಮೆಯ ಹಿಡಿತದ ಬಿಗಿ ಸಡಿಲುತ್ತಲೆ ಕಳಚಿ ಹೋಗದೆ ಸ್ವಸಂತೋಷದಿಂದ ಸ್ವೀಕೃತವಾದ ಪರಿವರ್ತನೆಗಳಾಗಿ, ಹೊಸ ಪರಂಪರೆಯಾಗಿ, ರಕ್ತಪಾತವಿಲ್ಲದೆ ರಕ್ತಗತವಾಗಿ, ನಿತ್ಯಜೀವನದ ಮಗ್ಗದ ಹಾಸು–ಹೊಕ್ಕುಗಳಾಗಬೇಕಾದರೆ, ಅದಕ್ಕೆ ಪೂರಕವಾಗಿ, ತಾರಕವಾಗಿ ಸಾಂಸ್ಕೃತಿಕ ಕ್ರಾಂತಿಯೊಂದು ಅದರೊಡನೆಯೆ ಸಹಕಾಲಿಕವಗಿ ನಡೆಯಬೇಕಾಗುತ್ತವೆ. ಕ್ರಾಂತಿಗೆ ಒಳಪಟ್ಟ ಜನಸಮೂಹದ ಮನೋಭೂಮಿಕೆ ಕ್ರಾಂತಿಯ ಬೀಜಾರೋಪಣೆಗೆ ಹದಗೊಂಡಿರದಿದ್ದರೆ ಬಿತ್ತಿದ ಬೀಜ, ಹಾಕಿದ ಗೊಬ್ಬರ, ಮಾಡಿದ ಶ್ರಮ – ಎಲ್ಲ ವ್ಯರ್ಥವಾಗುತ್ತದೆ. ಈ ದೃಷ್ಟಿಯಿಂದ ಸಾಂಸ್ಕೃತಿಕ ಕ್ರಾಂತಿಗೆ ಆದ್ಯತೆ ಅನಿವಾರ್ಯವೆನಿಸುತ್ತದೆ. ಈ ದೇಶದಲ್ಲಿಯೂ ಇಂದಿಲ್ಲ ನಾಳೆ ಹರಿಜನ–ಗಿರಿಜನರಿಂದ ಹಾರುವರವರೆಗೆ ಎಲ್ಲರನ್ನೂ ಒಂದೇ ಅಪ್ಪುಗೆಗೆ ಒಳಪಡಿಸಿ, ಇವರೆಲ್ಲರಲ್ಲಿರುವ ಅಂತಸ್ತಿನ ಭೇದಗಳನ್ನೂ, ವೈಚಾರಿಕ ವೈಷಮ್ಯ ವೈಲಕ್ಷಣ್ಯಗಳನ್ನೂ, ಆಚಾರ ಮೌಢ್ಯಗಳನ್ನೂ, ಹಂತ ಹಂತಗಳಲ್ಲಿರುವ ಅಂತರಗಳನ್ನೂ, ಅಸಮ ಅಭಿವೃದ್ಧಿಯ ವಿಷಮತೆಗಳನ್ನೂ, ನಡೆವಳಿಕೆ ನಂಬಿಕೆಗಳ ವ್ಯತ್ಯಾಸಗಳನ್ನೂ ಸಂಪೂರ್ಣವಾಗಿ ಅಳಿಸದಿದ್ದರೂ ಸಹ್ಯವೆನಿಸುವಷ್ಟಾದರೂ ಇಳಿಸಿ, ಸೌಹಾರ್ದ್ರವನ್ನು ಬೆಳೆಸುವಂಥ ಸಾಂಸ್ಕೃತಿಕ ಕ್ರಾಂತಿಯೊಂದು ನಡೆಯಲೇಬೇಕಾಗುತ್ತದೆ. ಇಂಥದೊಂದು ಕ್ರಾಂತಿಗೆ ಬಸವಣ್ಣನು ಮಾಡಿದ ಸಾಂಸ್ಕೃತಿಕ ಕ್ರಾಂತಿ ತೋರುಬೆರಳು, ದಾರಿದೀಪವಾಗುತ್ತದೆ.

ಬಸವಣ್ಣನ ಸಾಂಸ್ಕೃತಿಕ ಕ್ರಾಂತಿಯ ಪ್ರಥಮ ಸೂತ್ರವೇ ಮಾತೃಭಾಷೆಯ ಮಾಧ್ಯಮದ ಅಂಗೀಕಾರ; ಮತ್ತು ಅದರ ಮೂಲಕ ಶ್ರೀಸಾಮಾನ್ಯರಿಗೂ ವಿಚಾರ ವಿನಿಮಯ, ವಿಚಾರಮಂಥನ, ಸ್ವತಂತ್ರ ಚಿಂತನಗಳ ವರಪ್ರಧಾನ. ಧರ್ಮದ ವಿಚಾರವಿರಲಿ, ಆತ್ಮಶ್ರೀವಿಕಾಸದ ವಿಚಾರವಿರಲಿ, ನಿತ್ಯದ ನಡೆವಳಿಕೆಯ ವಿಚಾರವಿರಲಿ, ಸಾಮಾಜಿಕ ಸಂಬಂಧಗಳ ವಿಷಯವಿರಲಿ – ಎಲ್ಲವನ್ನೂ ಜನರಾಡುವ ನುಡಿಯಲ್ಲಿಯೇ, ಅವರ

ಆಡುಮಾತುಗಳಲ್ಲಿಯೇ ಅಭಿವ್ಯಕ್ತಗೊಳಿಸುವುದು ಸಾಧ್ಯವಿದೆಯೆಂಬ ಶ್ರದ್ಧೆಯಿಂದ ಮುಂದುವರಿದು ಆ ನುಡಿಯಲ್ಲಿ ಹೊಸ ಹೊಸ ಸಾಧ್ಯತೆಗಳನ್ನು ಸೃಷ್ಟಿಸುವುದು, ಅದಕ್ಕೆ ಹೊಸ ಹೊಸ ಆಯಾಮಗಳನ್ನು ಹುಟ್ಟಿಸಿಕೊಡುವುದು, ಅದಕ್ಕೆ ಜನಸಾಮಾನ್ಯದ ಜಾಯಮಾನವನ್ನಿತ್ತು, ಹೊಸ ನುಡಿಗಟ್ಟುಗಳಿಂದ, ಹೋಲಿಕೆಗಳಿಂದ, ಬಳಕೆ ಬಳಕುಗಳಿಂದ ಕಾಕು–ಕೊಂಕು, ಬನಿ – ಬಣಿತೆ, ಭಂಗಿ–ಸಿಂಗರಗಳಿಂದ ಅದನ್ನು ಸಿರಿವಂತಗೊಳಿಸುವುದು ಈ ಕ್ರಾಂತಿಗೆ ಬೇಕಾದ ಮೊಗೆಗುದ್ದಲಿಯ ಮೊದಲ ಕೆಲಸ (Spade work), ಅನ್ಯ ಭಾಷಾಮಾಧ್ಯಮ ಸಾಮಾನ್ಯರನ್ನು ಅಜ್ಞಾನದಲ್ಲಿಯೋ, ಬೌದ್ಧಿಕ ಗುಲಾಮಗಿರಿಯಲ್ಲಿಯೋ, ಕೀಳರಿಮೆಯ ಕಗ್ಗವಿಯಲ್ಲಿಯೋ ಉಳಿಸುವ ಅಪಾಯಕಾರೀ ಉಪಾಯ; ಆದುದರಿಂದ ಸ್ವಭಾಷೆಗೆ ಹಿಂದಿರುಗುದು, ಅದರಲ್ಲಿಯೇ ಸಾಮಾನ್ಯ ಜನರೊಡನೆ ಸಂಸರ್ಗ ಪಡೆಯುವುದು, ಸಂಪರ್ಕವಿರಿಸಿಕೊಳ್ಳುವುದು, ವಿಚಾರಗಳ ಆದಾನ – ಪ್ರದಾನ ನಡೆಸುವುದು, ವಿಚಾರಗಳ ಏಕಮಾರ್ಗೀಯ ಸಂಚಾರವನ್ನು ತಪ್ಪಿಸಿ ದ್ವಿಮಾರ್ಗೀಯ ಸಂಚಾರಕ್ಕೆ ಅನುಕೂಲತೆಗಳನ್ನು ಕಲ್ಪಿಸುವುದು, ಆಲೋಚನೆಗಳ ಅಡ್ಡ ಪರಾಗಾಧಾನ (Cross pollination) ಮಾಡಿಸುವುದು, ಅನುಭವಗಳ ವಿನಿಮಯದಿಂದ ಅನುಭವಾಮೃತವನ್ನು ಉತ್ಪಾದಿಸುವುದು – ಮೊಟ್ಟ ಮೊದಲು ನಡೆಯಬೇಕಾದ ಮಹತ್ವದ ಕಾರ್ಯ ಯಾಕೆ?

'ಮರಮರ ಮಥನದಿಂದ ಅಗ್ನಿ ಹುಟ್ಟಿ ಆ ಮರನೆಲ್ಲವ ಸುಡುದಿಪ್ಪುದೆ?' (೮೮೨) ಅಂತೆಯೇ ಆತ್ಮ ಆತ್ಮ ಮಥನಿಸಿದಾಗ ಜ್ಞಾನಾಗ್ನಿ ಹುಟ್ಟಿ ಅದರಲ್ಲಿ ಹೊಲ್ಲವಾದುದೆಲ್ಲ ಸುಟ್ಟು ಸರ್ವರ ಸ್ವಾನುಭವ ಕ್ಷೀರಮತನೋದ್ಭೂತ ನವದರ್ಶನದ ನವನೀತ ಹುಟುತ್ತದೆ. ಈ ದೃಷ್ಟಿಯಿಂದ ಬಸವಣ್ಣ ಆರಂಭಿಸಿದ. 'ಅನುಭವ ಮಂಟಪ' ವಿಚಾರ ಸ್ವಾತಂತ್ರ್ಯದ ವಿಜಯಧ್ವಜ; ಸಾಂಸ್ಕೃತಿಕ ಕ್ರಾಂತಿಯ ಸಂಕೇತ, ಶ್ರೀಸಾಮಾನ್ಯರ ಶುಭೋದಯದ ಶ್ರೀಕಾರ, ಸಮಾನತೆಯ ಝೇಂಕಾರ. ಈ ಅನುಭವ ಮಂಟಪದ ಐತಿಹಾಸಿಕತೆಯನ್ನು ಪ್ರಶ್ನಿಸಿದುದೂ ಆಗಿದೆ; ಅದನ್ನು ಸ್ವೀಕರಿಸಿದುದೂ ಆಗಿದೆ. ಆದರೂ ನೀಲಮ್ಮನವರ ವಚನದಲ್ಲಿ ಬರುವ ಈ ಸುಸ್ಪಷ್ಟ ಉಲ್ಲೇಖ ಈ ವಾದಕ್ಕೆ ಇತಿಶ್ರೀಗೊಳಿಸಲು ಸಾಕೆಂದು ತೋರುತ್ತಿದೆ. 'ಚನ್ನಬಸವನೆಂಬ ಪ್ರಸಾದಿಯ ಪಡೆದು, ಅನುಭವ ಮಂಟಪವನುಮಾಡಿ, ಅನುಭವ ಮೂರ್ತಿಯಾದ ನಮ್ಮ ಬಸವಯ್ಯನು, ಅರಿವ ಸಂಪಾದಿಸಿ, ಆಚಾರವನಂಗಗೊಳಿಸಿ, ಏಳುನೂರೆಪ್ಪತ್ತು ಅಮರಗಿಣಂಗಳ ಅನುಭವ ಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು' (ಶಿವಶರಣೆಯರ ವಚನಗಳು ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ ಪುಟ ೧೯೩). ಸ್ತ್ರೀ ಪುರುಷರೆನ್ನದೆ, ಹಿರಿಯ ಕಿರಿಯರೆನ್ನದೆ, 'ಮರಹಿಂದೆ ಹಿರಿದು ಕಿರಿದುಂಟಲ್ಲದೆ ಅರುಹಿಂಗೆ ಹಿರಿದು ಕಿರಿದಿಲ್ಲ'ವೆಂದು ಉದ್ಘೋಷಿಸಿ ಸರ್ವರಿಗೂ ಪ್ರೋತ್ಸಾಹವನ್ನೂ, ಮನನೋಯಿಸದ ಮಾರ್ಗದರ್ಶನವನ್ನೂ ಇತ್ತ ಅನುಭವ ಮಂಟಪ ಈ ದೇಶದ ಇತಿಹಾಸದಲ್ಲಿ ಮಾತ್ರವಲ್ಲ, ವಿಶ್ವೇತಿಹಾಸದಲ್ಲಿಯೇ ಅನುಪಮವಾದುದು. ಅದಕ್ಕೆ ಹೆಗಲೆಣೆಗಳಾಗಬಲ್ಲ ಉದಾಹರಣೆಗಳು ಎಲ್ಲೋ ಒಂದೆರಡು,

ಇದರಲ್ಲಿ ಉದಿಸಿಬಂದ ವಚನಸಾಹಿತ್ಯ ಅನೇಕ ದೃಷ್ಟಿಗಳಿಂದ ಅದ್ವಿತೀಯವಾದುದು. ಮೊದಲನೆಯದಾಗಿ ಇದು ಸಮಷ್ಟಿ ಸಾಹಿತ್ಯ, ಎರಡನೆದಾಗಿ ಇದು ಸಾಮಾನ್ಯ ಅಸಮಾನ್ಯರಿಬ್ಬರಿಗೂ ಸೇರಿಯೇ ಪರಸ್ಪರ ಗೌರವಾದರಗಳೊಡನೆ ಚರ್ಚಿಸಿ ಉಸುರಿದ ಸಾಹಿತ್ಯ; ಮೂರನೆಯದಾಗಿ ಇದು ಗದ್ಯಪದ್ಯಗಳ ನಡುವಿನ ಭೇದವನ್ನೇ ಮರೆಸುವ, ಗದ್ಯತೆ, ಪದ್ಯತೆ, ಗೇಯತೆಗಳ ಹೃದಯಂಗಮಸಂಗಮವಾದ ಸಾಹಿತ್ಯ; ನಾಲ್ಕನೆಯದಾಗಿ ಇದು ವರ್ಣಮುಕ್ತರ, ವರ್ಗಮುಕ್ತರ, ಅಷ್ಟಮದ ಮುಕ್ತರ ಸಾಹಿತ್ಯ. ಐದನೆಯದಾಗಿ ಧಾರ್ಮಿಕ ಲೌಕಿಕ ವಿಷಯಗಳೆಲ್ಲವನ್ನೂ ಒಳಗೊಂಡ, ವ್ಯಷ್ಟಿಯ ವ್ಯಕ್ತಿತ್ವ ವಿಕಾಸಕ್ಕೆ ಅವಕಾಶನೀಡಿಯೂ ಸಮಷ್ಟಿಯ ಒಟ್ಟು ಹಿತಕ್ಕೆ ವ್ಯಷ್ಟಿಯನ್ನು ಅಧೀನ ಮಾಡಿದವರ, ಅನಿರ್ಬಂಧ ಚಿಂತನ ಸ್ವಾತಂತ್ರ್ಯವನ್ನು ಪಡೆದೂ ಉಳಿದವರ ಅನುಭವದ ಒರೆಗಲ್ಲಿಗೆ ಸ್ವಂತಚಿಂತನೆಯನ್ನು ಒಳಪಡಿಸಲು ಅಳುಕದವರ ಸಾಹಿತ್ಯ; ಆರನೆಯದಾಗಿ ಇದು ಆಡುನುಡಿಯಲ್ಲಿಯೇ ಗೂಢಕ್ಕಿಂತ ಗೂಢವಾದ ವಿಷಯಗಳನ್ನು ಗಾಢಕ್ಕಿಂತ ಗಾಢವಾದ ಅನುಭವ – ಆಲೋಚನೆಗಳನ್ನು ಅಭಿವ್ಯಕ್ತಿಗೊಳಿಸಿದ ಸಾಹಿತ್ಯ; ಏಳನೆಯದಾಗಿ ಇದು ವಿಪುಲ ವಿಷಯ ವೈವಿಧ್ಯದಿಂದ, ನಿರೂಪಣಾ ರೀತಿಗಳಿಂದ, ವಾಕ್ಯರಚನಾ ವಿನ್ಯಾಸಗಳಿಂದ, ವೈಯಕ್ತಿಕ ಅಭಿರುಚಿ ವಿಲಾಸಗಳಿಂದ, ಹೊಸ ವಿಚಾರಗಳ ವೈಖರಿಯಿಂದ ಓದಿದ ಸಲಕ್ಕೊಮ್ಮೆ ಯಾವುದೋ ಹೊಸ ಅರ್ಥದ ಸೆಳಕು ಬಳುಕು – ಬೆಳಕುಗಳನ್ನು ಬೀರುವ ಸಾಹಿತ್ಯ; ಎಂಟನೆಯದಾಗಿ, ಇದು ಸಾಹಿತ್ಯಿಕ ವಾಚಕರ ನಡುವಿದ್ದ ಮಧ್ಯಗಾರರನ್ನು ಮಾಯಗೊಳಿಸಿದ ಸಾಹಿತ್ಯ; ಒಂಬತ್ತನೆಯದಾಗಿ ಇದು 'ಅಲ್ಪದಲ್ಲಿ ಕಲ್ಪವನ್ನು ಕೆತ್ತಿದ ಶಿಲ್ಪ;' ಹನಿಯಲ್ಲಿ ಕಡಲನ್ನು ಹಿಡಿದಿಟ್ಟ ಪವಾಡ; ಮಾತನ್ನು ಜ್ಯೋತಿಯಾಗಿಸಿದ, ಜ್ಯೋತಿರ್ಲಿಂಗವಾಗಿಸಿದ ಮಾಂತ್ರಿಕತೆ'.

ವಚನ ಸಾಹಿತ್ಯದ ಉಗಮ ಬಸವಣ್ಣನವರಿಗಿಂತ ಸ್ವಲ್ಪ ಮೊದಲೇ ಆಗಿದೆಯಾದರೂ ಅದು ತನ್ನ ಪರಮೋನ್ನತಿಯನ್ನು ಪಡೆದುದು ಬಸವ ವಚನಗಳಲ್ಲಿಯೇ. 'ವಚನ ಸಾಹಿತ್ಯದಲ್ಲಿ ಒಟ್ಟಾರೆ ಕಂಡುಬರುವ ಮುಖ್ಯ ಹಾಗೂ ವಿಶೇಷ ಲಕ್ಷಣಗಳನ್ನೆಲ್ಲ ಒಂದೆಡೆ ಕಾಣಬೇಕೆಂದರೆ, ಅವೆಲ್ಲ ಸಮಗ್ರವಾಗಿ ಗೋಚರವಾಗುವುದು ಬಸವಣ್ಣನವರ ವಚನಗಳಲ್ಲಿಯೆ. ಬಸವಣ್ಣನವರ ವಚನಗಳಲ್ಲಿ ಮಿಡಿಯುವ ಅವರ ವಾಣಿ ಅಮೃತವಾಣಿ : ಅಧರಕ್ಕೂ ಸಿಹಿ, ಉದರಕ್ಕೂ ಸಿಹಿ ; ರಸಪಾರಿವಾಕವೆಂದು ಅಮೃತ, ಶಾಶ್ವತ ಸಾಹಿತ್ಯವೆಂದೂ ಅಮೃತ! ಅಂತೆಯೆ ವಚನ ವಾಙ್ಮಯದಲ್ಲಿ ಬಸವಣ್ಣನವರ ವಚನಗಳಿಗೆ ಮೊದಲೆಡೆ ಮೀಸಲಾಗಿದ್ದರೆ ಅದೇನೂ ಅರಿದಲ್ಲ.' (ಲಿಂ. ಶಿ.ಶಿ. ಬಸವನಾಳರು ಬಸವಣ್ಣನವರ ವಚನಗಳ ಪ್ರಸ್ತಾವನೆಯಲ್ಲಿ – ಪು. ೧೧).

'ಬಸವನ ಮಾತೆ ಮಾತು!' ಅವರ ನುಡಿಗಳು ಲಿಂಗವಶದಿಂದ ಬಂದ ನುಡಿಗಳು; ಮುತ್ತಿನ ಹಾರದಂತೆ, ರತ್ನದ ಶಲಾಕೆಯಂತೆ, ಮಾಣಿಕ್ಯದ ದೀಪ್ತಿಯಂತೆ ಇರುವ ನುಡಿಗಳು;

ಕೇಳಿ, ಲಿಂಗ ಮೆಚ್ಚಿ ಅಹುದಹುದೆನ್ನುವಂತಹ ನುಡಿಗಳು. ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆನೆಂದು ಹೇಳಿರುವರಾದರೂ ಸಂಗಯ್ಯನೇ ಉರದಲೊತ್ತಿ ಬಾರಿಸಿ ಬತ್ತೀಸರಾಗಗಳನ್ನು ಹಾಡಲೆಂದು ಅವರು ತಮ್ಮ ಕಾಯವನ್ನೇ ದಂಡಿಗೆ, ಶಿರವನ್ನೇ ಸೋರೆ, ನರವನ್ನೇ ತಂತಿ, ಬೆರಳನ್ನೇ ಕಡ್ಡಿ ಮಾಡಿ ಅವನ ವೀಣೆ ಯಾಗದಿರಲಿಲ್ಲ. ಈ ದಿವ್ಯ ವೀಣೆಯನ್ನು ಸಂಗಮಿೀಟಿದಾಗ ಹೊರಟ ಸಂಗೀತ ಸಂಗನೂ ಹಿಂದೆ ಕೇಳಿರದಿದ್ದ ಸಂಗೀತ!

ಭಕ್ತನ ಉತ್ಕಟ ಭಾವ, ಹೋರಾಟಗಾರನ ಧೀರತನ, ಪ್ರವಾದಿಯ – ಪರಮ ಸತ್ಯದ ನೇರವಾದ ಸಂಪರ್ಕ ಪಡೆದ ಪ್ರವಾದಿಯ ಪ್ರಾಸಾದಿಕತೆ, ಅನುಭಾವಿಯ ಅತೀಂದ್ರಿಯಾನುಭವ, ಜನತೆಯ ಬಾಳಿನ ನೋವು, ನಲಿವುಗಳೊಡನೆ, ನಗೆಧಗೆಗಳೊಡನೆ, ಆಶೆ ನಿರಾಶೆಗಳೊಡನೆ ತಾದಾತ್ಮ್ಯ ಪಡೆದಿದ್ದ, 'ಶಿವಭಕ್ತರ ನೋವೇಲಿಂಗದ ನೋವೆಂದು ನಂಬಿದ್ದ, ಅವರು ನೊಂದರೆ ಆನು ಬೆಂದೆನಯ್ಯಾ!' ಎಂದು ಭಾವಿಸಿದ್ದ ಜನನಾಯಕನ ಸೀಮೆಯರಿಯದ ಸಹಾನುಭೂತಿ, ಮಾನವತಾವಾದಿಯ ಅನಂತ ಅನುಕಂಪೆ–ಅಂತಃಕರಣ, ಸಾಧಕನ ಅಂತರಂಗದ ತುಮುಲ, ಸಿದ್ಧನ ಶಿವದೃಷ್ಟಿಯ ಭವ್ಯದಿವ್ಯ ಕಾಣ್ಕೆ, ಸಾಮಾನ್ಯರ ಸಾಧಾರಣ ಜೀವನದಿಂದಲೇ ಪಡೆದ ಸಾಮತಿಗಳು, ಉಪಮೆ ರೂಪಕಗಳು, ಹಿಡಿನುಡಿಗಳು, ಗಾದೆಗಳು, ಜಾಣ್ನುಡಿಗಳು. ನಾಣ್ಣುಡಿಗಳು, ನೀಡಿದ ಸಹಜ ರಮ್ಯತೆ, ಅಕೃತಕ ಅಂದ ಚೆಂದಗಳು – ಎಲ್ಲವೂ ಏಕೀಭವಿಸಿವೆ ಬಸವಣ್ಣನವರ ವಚನಗಳಲ್ಲಿ, ವಿಸ್ಮಯಕರ ರಾಸಾಯನಿಕ ಮಿಶ್ರಣವಾಗಿ ಭೌತಿಕ ಮಿಶ್ರಣವಾಗಿ ಅಲ್ಲ.

ಬಸವಣ್ಣನವರ ವಚನಗಳ ಅಂಕಿತದಲ್ಲಿಯೇ ಅವುಗಳ ವೈಶಿಷ್ಟ್ಯದ ಸೂಚನೆಯಿದೆ. ಸಕೃದ್ದರ್ಶನಕ್ಕೆ 'ಕೂಡಲ' ಮತ್ತು 'ಸಂಗಮ' ಎರಡೂ ಏಕಾರ್ಥವನ್ನೀವ ಪದಗಳಾದರೂ ಅವುಗಳಲ್ಲಿ ಅಂತರವಿದೆ. 'ಕೂಡಲ' ಎಂದರೆ ಕೂಡಿಕೊಳ್ಳುವಿಕೆ ಮಾತ್ರ; ಸಂಗಮವೆಂದರೆ ಕೂಡಿ ಹರಿಯುವುದು. ಮೊದಲು ಮಾನಸದಲ್ಲಿ ಅದರ ಎಲ್ಲ ಸ್ತರಗಳಲ್ಲಿ ಎಲ್ಲ ಬಗೆಯ ಪ್ರಜ್ಞೆಗಳು, ಅನುಭವಗಳು, ಆಲೋಚನೆಗಳು ಕೂಡಿ ಒಂದಾಗಬೇಕು; ಆಮೇಲೆ ಅವೆಲ್ಲವುಗಳೂ ಸಮ್ಮಿಳಿತ ಪ್ರವಾಹವಾಗಿ ಹರಿಯಬೇಕು. ಆಗ ಅದು ಸಾಹಿತ್ಯತೀರ್ಥ – ಉಗಮದಲ್ಲಿ, ಸಂಗಮ ಸ್ಥಾನದಲ್ಲಿ ಮಾತ್ರವಲ್ಲ ಉದ್ದಕ್ಕೂ ತೀರ್ಥ ಗಂಗೆ ಕಾವೇರಿಗಳಂತೆ.

'ಬಸವಣ್ಣನವರ ವಚನಗಳಲ್ಲಿ ಏನೇನು ಕೂಡಿವೆ?' ಎಂಬ ಪ್ರಶ್ನೆಗೆ 'ಏನೇನು ಕೂಡಿಲ್ಲ?' ಎಂಬ ಮರುಪ್ರಶ್ನೆಯೇ ಉತ್ತರ. ಪ್ರಶ್ನೆಯೇ ಉತ್ತರವಾಗುವ ವಚನಗಳನ್ನೂ ಅವರು ನಮಗೆ ನೀಡಿದ್ದಾರೆ. ಬಸವಣ್ಣನವರ ವಚನಗಳ ಬಗ್ಗೆ ಎಲ್ಲರೂ ತಮತಮಗೆ ಇಷ್ಟವಾದ ವಿಷಯಗಳನ್ನು ಆಧರಿಸಿ ಪ್ರಶ್ನೆ ಕೇಳಲಿ – ಅವರಿಗೆ ಸಮರ್ಪಕ ಸಂತೃಪ್ತಿಕಾರಕ ಉತ್ತರ ಸತ್ಯವಾಗಿ ಸಿಕ್ಕುತ್ತದೆ ಅವರ ವಚನಗಳಲ್ಲಿ. ನಿಮಗೆ ಉದ್ವೇಗ ಜನಕ ವಚನಗಳು ಬೇಕೆ?

ಚೇತನದಾಯಕ ವಚನಗಳು ಬೇಕೆ? ಆನಂದಮಯ ವಚನಗಳು ಬೇಕೆ? ರಹಸ್ಯಮಯ ವಚನಗಳು ಬೇಕೆ? ಸಾಮಾಜಿಕ ಪ್ರಜ್ಞೆಯ ವಚನಗಳು ಬೇಕೆ? ವ್ಯಕ್ತಿನಿಷ್ಠ – ವಸ್ತುನಿಷ್ಠ ವಚನಗಳು ಬೇಕೆ? ಕಿರಿದರಲ್ಲಿ ಹಿರಿದಾದ ಅರ್ಥವನ್ನು ಸೆರೆಹಿಡಿದ ವಚನಗಳು ಬೇಕೆ? ರಸಪ್ರಜ್ಞೆ ನೀತಿಪ್ರಜ್ಞೆಗಳು ಓತಪ್ರೋತವಾಗಿ ಬೆರೆದ, ಹರಿದ ವಚನಗಳು ಬೇಕೆ? ಸಾಧನೆ–ಬೋಧನೆಗಳು ಕಲೆಯಾಗಿ ಬೆಳಗಿದ ವಚನಗಳು ಬೇಕೆ? ಸಂಸ್ಕೃತದ ಕಸುವನ್ನು ಕನ್ನಡಕ್ಕೆ ಕಸಿ ಮಾಡಿಕೊಂಡ ವಚನಗಳು ಬೇಕೆ? ಕನ್ನಡ ನುಡಿಯ ಸಾಧ್ಯತೆಯ ಪರಾಕಾಷ್ಠೆಯನ್ನು ಎತ್ತಿ ತೋರುವ ವಚನಗಳು ಬೇಕೆ? ಗೇಯತೆ, ನಾಟಕೀಯತೆ, ವ್ಯಂಗ್ಯ, ವಿಡಂಬನೆ, ಕಟಕಿ, ಪ್ರತಿಮೆ, ಪ್ರತೀಕ, ಸಂವಾದ, ದೃಷ್ಟಾಂತ, ನುಡಿಚಿತ್ರ, ಶ್ಲೇಷೆ, ಹೋಲಿಕೆಗಳಿಂದ ಕೂಡಿದ ವಚನಗಳು ಬೇಕೆ? ಲೋಕಶಿಕ್ಷಣ, ಸಮಾಜಸಂಸ್ಕರಣ, ಆತ್ಮವಿಕಾಸ ಪಥದರ್ಶನ, ಚಿತ್ತವೃತ್ತಿಗಳ ಜೀವನವೃತ್ತಿಗಳ ಉದಾತ್ತೀಕರಣ. ವಿಶ್ವಕುಟುಂಬತ್ವದ ವಿಕಸನ, ವಿಶ್ವಮಾನವನ ನಿರ್ಮಾಣ, ದಿವ್ಯತೆಯ ಅವತರಣಗಳನ್ನು ತೆರೆದು ತೋರಿಸುವ ವಚನಗಳು ಬೇಕೆ? ನವುರಾದ ನಗೆ, ತಿಳಿಯಾದ ಬಗೆ, ಘನವಾದ ಜೀವನ ಗೌರವ ಜೀವಿಗಳ ಗೌರವ, ಸತ್ಯತ್ರಯಗಳ ಸಂಗಮ, ಮಾನವೀಯ ಮೌಲ್ಯಗಳ ಚಿತ್ರಣಗಳುಳ್ಳ ವಚನಗಳು ಬೇಕೆ? ಯಾರು ಏನು ಬೇಡಿದರೂ ದೊರೆಯುವುದು ಬಸವಣ್ಣನವರ ವಚನಗಳಲ್ಲಿ.

ಇವೆಲ್ಲಕ್ಕೆ ಉದಾಹರಣೆಗಳನ್ನು, ವಾಕ್ಯವೇಷ್ಟನಗಳನ್ನು ಉದಾಹರಿಸುತ್ತ ಹೋದರೆ ಅದೇ ಒಂದು ಉಪನ್ಯಾಸ ಅಲ್ಲ, ಮಹಾಪ್ರಬಂಧವಾದೀತು. ಆದರೆ ಅರುಂಧತೀ ದರ್ಶನವೆಂಬಂತೆ ಕೆಲವು ವಚನಗಳನ್ನಾದರೂ ಉದ್ಧರಿಸದಿದ್ದರೆ ಹೇಗೆ? 'ಅವರ ನುಡಿದರೆ ಮುತ್ತಿನ ಹಾರದಂತಿರಬೇಕು' ಎಂಬ ವಚನವನ್ನು 'ಶ್ರೀ ಎಂ. ಅಕಬರ ಅಲಿಯವರು ವಿವೇಚಿಸಿ, ನುಡಿ ನುಡಿಮುತ್ತಾಗಿ ಮುತ್ತಿನ ನಯ – ನುಣ್ಪು, ಬಿಳುಪು – ಬಿಣ್ಪುಗಳನ್ನು ಪಡೆಯಬೇಕು. ಮುಂದೆ ಕೆಂಬಣ್ಣದ ಕಿರಣತೀಡಿ, ಮಂಗಳದ ಪ್ರಭೆ ಹರಡಿ, ಮಾಣಿಕ್ಯದ ದೀಪ್ತಿಯನ್ನು ಹೊಂದಬೇಕು; ಮಾತಿನ ಮರೆಯ ಮನದ ಹೊಲಬು ಹೊಗರುಗಳನ್ನು ಹೊಮ್ಮಿಸುವ ಸ್ಫಟಿಕದ ಪಾರದರ್ಶಕತೆಯನ್ನೂ ಮೈಗೂಡಿಸಿಕೊಳ್ಳಬೇಕು ಇತ್ಯಾದಿ ಅರ್ಥಸಂಪತ್ತಿಯನ್ನು ಉಕ್ಕಿಸಿದ್ದಾರೆ. (ಬಸವ ಪರುಷ – ಪುಟ ೨೬೨). ಒಂದು ರೀತಿಯಲ್ಲಿ ವಚನಸಾಹಿತ್ಯದ ಜೀವ–ಜೀವಾಳವೇ ಇಲ್ಲಿ ಪ್ರತಿಮಿತವಾಗಿದೆಯೆಂದೂ ತೀರ್ಮಾನಿಸಿದ್ದಾರೆ.* ಏನು ಹೇಳಿದರೂ ಎಷ್ಟು ಹೇಳಿದರೂ ವಚನಸಾಹಿತ್ಯದ ಬಗೆಗೆ, ಅದರಲ್ಲೂ ಬಸವಣ್ಣನವರ ವಚನಗಳ ಬಗೆಗೆ ಎಲ್ಲವನ್ನೂ ಹೇಳಿದಂತಾಗುವುದಿಲ್ಲ. ಯುಗಯುಗಗಳವರೆಗೆ ಹೇಳುತ್ತ ಹೋದರೂ ಅವುಗಳ ಬಗ್ಗೆ ಕೊನೆಯ ಮಾತನ್ನೂ ಹೇಳುವುದು ಸಾಧ್ಯವಾಗುವುದಿಲ್ಲ. ಆದುದರಿಂದ ಎಲ್ಲ ಅಳತೆಕೋಲು, ಒರೆಗಲ್ಲುಗಳನ್ನು

---

*** ಖ್ಯಾತ ಕವಿ ಕಣವಿಯವರೂ ಈ ವಚನದ ಅರ್ಥಸ್ಫುರಣೆಯನ್ನು ವಿಶದೀಕರಿಸಿದ್ದಾರೆ. ನೋಡಿ; ಶ್ರೀ ಬಸವೇಶ್ವರ ಪು. ೧೫೫**

ಆಚೆ ಇರಿಸಿ ಅಣ್ಣನವರೇ ನಮ್ಮ ಮುಂದಿರಿಸಿದ ಮಾನದಂಡವೊಂದರಿಂದ ಆರಿಸೋಣ ಕೆಲವು ವಚನಗಳನ್ನು. 'ಹತ್ತು ಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು – ಮುಟ್ಟುವ ತೆರನನರಿಯದನ್ನೆಕ್ಕ?' (892) ಎಂಬುದೇ ಆ ಮಾನದಂಡ. ಆಡಿದ ಮಾತಿಗೆ ಮುಟ್ಟುವ ತೆರ ಬರಬೇಕಾದರೆ ಅದು ನುಡಿಮುತ್ತಾಗಬೇಕು; ನುಡಿಮುತ್ತು ಹುಟ್ಟಬೇಕಾದರೆ, ಸಮುದ್ರದೊಳಗಣ 'ಸಿಂಪಿನಂತೆ ಬಾಯಬಿಡು'ತ್ತಿರಬೇಕು; (55) ಈ ಉತ್ಕಟತೆ ಉತ್ಕಂಠಿತತೆಯಿಲ್ಲದೆ ಭಾವಕ್ಕೆ ತೀವ್ರತೆಯಿಲ್ಲ, ಅನುಭವಕ್ಕೆ ಪ್ರಾಮಾಣಿಕತೆ, ಮೊನಚು ಇಲ್ಲ; ಇವಿಲ್ಲದೆ ಹೊರಟ ಬರವಣಿಗೆ **'ಓಡಿನೊಳಗಗೆಯ ಹೊಯಿದಂತೆ'** 'ಕೆಳಯಿಂಕೆ ಬೇರೂರದು, ಮೇಲೆ ಫಲವಾಗದು' (593) ಬಸವನ ಮಾತು ಹಸನ ಮಾಡಿ ಹರಗಿ ದಹೊಲದಲ್ಲಿ ರಸವಬಿತ್ತಿದಂತೆ – ಕಸವನ್ನಲ್ಲ ಮುಟ್ಟುವ ತೆರನನ್ನರಿತ ಅವರ ವಚನಗಳ ಸೊಬಗೆ ಸೊಬಗು, ಸೊಗಸೆ ಸೊಗಸು, ಸವಿಯೆ ಸವಿ! 'ಕೆರೆ ಹಳ್ಳ ಬಾವಿಗಳು ಮೈದೆಗೆದರೆ ಗುಳ್ಳೆ, ಗೊರಟೆ ಚಿಪ್ಪುಗಳು ಕಾಣಬಹುದು; ವಾರಿಧಿ ಮೈದೆಗೆದರೆ ರತ್ನಂಗಳು ಕಾಣಬಹುದು; ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ ಲಿಂಗವ ಕಾಣಬಹುದು' (861) ಎಂದು ಅವರೇ ಹೇಳಿಲ್ಲವೆ? ಬಸವಣ್ಣನವರು ಮನದೆರೆದು ಮಾತನಾಡಿದರೆ ಏನನ್ನು ಕಾಣಬಹುದು. ಏನನ್ನು ಕಾಣಲಿಕ್ಕಿಲ್ಲ ಈ ಮಾತಿನ ಸರಳತೆ, ಭಾವದ ತೀವ್ರತೆ, ರೂಪಕದ ರಮ್ಯತೆ, ವಿಚಾರದ ನವ್ಯತೆಗಳ ರಸಾಯನದಂತರುವ ವಚನದ ಮೋಡಿಗೆ ಮರುಳಾಗದಿರುವುದು ಹೇಗೆ ಸಾಧ್ಯ?

> 'ಬಡಪಶು ಪಂಕದಲ್ಲಿ ಬಿದ್ದೊಡೆ ಕಾಲಬಡಿವುದಲ್ಲದೆ ಬೇರೆ ಗತಿಯುಂಟೆ?
> ಶಿವಶಿವಾ ! ಹೋದಹೆ ಹೋದಹೆನಯ್ಯಾ! ನಿಮ್ಮ ಮನದತ್ತಲೆನ್ನ
> ತೆಗೆಯಯ್ಯಾ
> ಪಶು ನಾನು; ಪಶುಪತಿ ನೀನು!
> ತುಡುಗುಣಿಯೆಂದು ಎನ್ನ ಹಿಡಿದು ಬಡಿಯದ ಮುನ್ನ
> ಒಡೆಯ ನಿಮ್ಮ ಬಯ್ಯದಂತೆ ಮಾಡು, ಕೂಡಲಸಂಗಮದೇವಾ!' (೫೩)

ಈ ವಚನದಲ್ಲಿ ಬಳಕೆಯಾಗಿರುವ ಒಂದೊಂದು ಮಾತಿನ ಔಚಿತ್ಯವನ್ನೂ ನಿಧಾನವಾಗಿ ಗುರುತಿಸಿ ಆನಂದಿಸಬೇಕು, ಒಟ್ಟು ರೂಪಕದ ಸ್ವಾರಸ್ಯವನ್ನು ಗ್ರಹಿಸಿ ಹರ್ಷಿಸಬೇಕು; ವಿಚಾರ ನಾವಿನ್ಯದ ಸೊಬಗನ್ನು ಅರಿತು ಹಿಗ್ಗಬೇಕು. ಇದರಂಥೆಯೇ 'ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೊ' (೯೭) 'ಎದೆ ಬಿರಿವನ್ನಕ್ಕ, ಮನದಣಿವನ್ನಕ್ಕ, ನಾಲಗೆ ನಲಿನಲಿದೋಲಾಡುವನ್ನಕ್ಕ ನಿಮ್ಮ ನಾಮಾಮೃತವ ತಂದೆರೆಸು ಕಂಡಯ್ಯ, ಎನಗೆನ್ನ ತಂದೆ! ಬಿರಿಮುಗುಳಂದದಿ ಎನ್ನ ಹೃದಯ ನಿಮ್ಮ ಶ್ರೀಚರಣದ ಮೇಲೆ ಬಿದ್ದರಳುಗೆ!'

(೪೮೬) 'ಕಾಯದ ಕಳವಳಕ್ಕಂಜಿ ಕಾಯಯ್ಯಾ ಎನ್ನನು; ಜೀವನೋಪಾಯಕ್ಕಂಜಿ ಈಯಯ್ಯಾ, ಎನ್ನೆನು; ಯದ್‌ಭಾವಂ ತದ್‌ಭವತಿ: ಉರಿ ಬರಲಿ, ಸಿರಿ ಬರಲಿ – ಬೇಕು ಬೇಡೆನ್ನೆನಯ್ಯಾ! ಆ ನಿಮ್ಮ ಹಾರೆನು, ಮಾನವರ ಬೇಡೆನು; ಆಣೆ, ನಿಮ್ಮಾಣೆ, ಕೂಡಲಸಂಗಮದೇವಾ' (೬೯೫) ಇತ್ಯಾದಿ ವಚನಗಳನ್ನು ಇದೇ ಪ್ರಕಾರ ಬಿಡಿಬಿಡಿಯಾಗಿ ಆಸ್ವಾದಿಸಿ. ಇಡಿಯಾಗಿ ನೋಡಿ ಆನಂದಿಸಬೇಕು. ಈ ಎರಡು ವಚನಗಳಲ್ಲಿ ಅಭಿವ್ಯಕ್ತವಾಗಿರುವ ಭಾವದ ಉತ್ಕಟತೆ, ಸಂವಾದ ಸೌಂದರ್ಯ, ನಾಟಕೀಯತೆಗಳನ್ನು ನೋಡಿ ನಲಿಯದವರಾರು?

'ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು ಎಲೆ ಹೋತೇ, ಅಳು ಕಂಡಾ!
ವೇದವನೋದಿದವರ ಮುಂದೆ ಅಳು ಕಂಡಾ!
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ!
ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವಾ! (೫೬೪)

'ಬಸವ ಬಾರ್‍ಯ ಮರ್ತ್ಯದೊಳಗೆ ಭಕ್ತರುಂಟೆ? ಹೇಳಯ್ಯಾ!
ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ,
ಮತ್ತಾರೂ ಇಲ್ಲಯ್ಯಾ!
ನಾನೊಬ್ಬನೆ ಭಕ್ತನು; ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ
ಜಂಗಮಲಿಂಗ, ನೀನೆ, ಅಯ್ಯಾ – ಕೂಡಲಸಂಗಮದೇವಾ!' (೮೯೩)

ಬಸವಣ್ಣನವರ ವಚನಗಳ ಸಾಹಿತ್ಯ ಮೌಲ್ಯ, ಕಾವ್ಯಸೌಂದರ್ಯ, ವಿಚಾರವೈಭವ, ಉಕ್ತಿವಿಲಾಸಗಳ ಬಗ್ಗೆ ಬರೆಯುತ್ತ ಹೋದರೆ ಅವರ ಎಲ್ಲ ವಚನಗಳನ್ನೂ ಉದ್ಧರಿಸಬೇಕಾಗುತ್ತದೆ. ಯಾಕಂದರೆ ಒಂದಿಲ್ಲೊಂದು ದೃಷ್ಟಿಯಿಂದ ಅಮೂಲ್ಯವೆನಿಸದ ಅವರ ವಚನವಾವುದು? ಅವರ ಒಂದೊಂದು ವಚನಕ್ಕೆ ಅನೇಕರು ಅನೇಕ ವಿಧವಾದ ಅರ್ಥ ಹೇಳಿರುವುದೂ ಇಂದಿಗೂ ಅವರ ಒಂದಿಲ್ಲೊಂದು ವಚನಕ್ಕೆ ಅನಿರೀಕ್ಷಿತ ವಲಯಗಳಿಂದ ಹೊಸ ಅರ್ಥ, ಮಹತ್ವ, ಗುರುತ್ವ ದೊರೆಯುತ್ತಿರುವುದೂ ಅವರ ವಚನಗಳ ಸಾರ್ವಕಾಲಿಕ ಸಾರ್ವದೇಶಿಕ ಮೌಲ್ಯಮಯತೆಗೆ ಸಾಕ್ಷಿ. ಇತ್ತೀಚಿನ ಒಂದು ನಿದರ್ಶನವನ್ನು ನೋಡಿ : 'The following few lines from Basavanna, mediaeval saint poet from Karnataka, would bring out the anguish and the undaunted optimism of man as depicted in Indian Literature :

Like a harlot's on
I scan the face of every man

For signs of fatherhood,
Father, show Thyself!

How much relevance this anguish and this optimish have in the modern predicament of Man is something worth beeing looked into more deeply.' (Prof. Vidya Niwas Misra on the Spirit of India, Vol. II, Page 150).

ಇನ್ನು ಸಾಮಾನ್ಯವಾಗಿ ವಚನಸಾಹಿತ್ಯವು, ವಿಶೇಷವಾಗಿ ಬಸವಣ್ಣನವರ ವಚನಗಳು ಸಾಧಿಸಿದ ಸಾಂಸ್ಕೃತಿಕ ಕ್ರಾಂತಿಯ ಸ್ವರೂಪವಾವುದೆಂಬುದನ್ನಷ್ಟು ನೋಡೋಣ. ಸಂಸ್ಕೃತಿಗಿರುವ ಸಾವಿರ ವ್ಯಾಖ್ಯೆಗಳ ಸಾರವನ್ನು ಹೀರಿ ಹೀಗೆ ಅದರ ಅಂತರಾರ್ಥವನ್ನು ಸಂಗ್ರಹಿಸಬಹುದು. ತನ್ನಲ್ಲಿ ಸಮ್ಮಿಳನವನ್ನು, ಸಾಮರಸ್ಯವನ್ನು ಸಾಧಿಸಿ, ತನ್ನ ಸುತ್ತುಮುತ್ತಲಿನ ಜನ ಮತ್ತುಜಗತ್ತಿನೊಡನೆಯೂ ಸಮನ್ವಯ ನಯವನ್ನು ಸಂಪಾದಿಸುವುದೇ ಸಂಸ್ಕೃತಿ. ತನ್ನಲ್ಲಿ ತರಬೇಕಾದ ಹೊಂದಿಕೆ, ತಾಳಮೇಳ ಸುಲಭ ಸಾಧ್ಯವಾದುದೇನೂ ಅಲ್ಲ. ಅದು ಬರಿ ಓದಿನಿಂದಾಗಲೀ, ವಾದದಿಂದಾಗಲೀ ಬಾಹ್ಯಾ ಡಂಬರಗಳಿಂದಾಗಲೀ, ಡಾಂಭಿಕ ಆಚರಣೆಗಳಿಂದಾಗಲೀ ದೊರೆವ ದೇಣಿಗೆಯಲ್ಲ; ಅಂತರ್‌ವಿಕಾಸದ, ತ್ರಿಕರಣ ತ್ರಿವೇಣಿಯ, ನಡೆನುಡಿಗಳ ಹತ್ತು ಗಡೆಯ ಮಧುರ ಫಲ. 'ಎರದೆಲೆಯಂತೆ ಒಳಗೊಂದು ಹೊರಗೊಂದಾದರೆ, ಉಡುವಿನ ನಾಲಗೆಯಂತೆ ಎರಡಾದರೆ' (೧೦೨) ದೊರೆಯದು ಅದು; 'ತನ್ನ ಭಿನ್ನವನರಿಯದೆ ಅನ್ಯರನೆಂಬ ಕುನ್ನಿ 'ತನಕ್ಕೆ (೧೦೫) ಸಿಕ್ಕದದು; 'ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ' ಬದುಕಿದರೆ ದಕ್ಕದದು; (೧೦೯) 'ಮನದಲ್ಲಿ ಲೇಸಿಲ್ಲದೆ ಮೇಲೆ ಹೂಸಿದರೆ' (೧೧೪) ನಿಲಕದದು; 'ಕೆಡುವಡಲನೆಚ್ಚಿ, ಕಡುಹುಸಿಯನೆ ಹುಸಿದು, ಒಡಲಹೊರೆವವಿಗೆ' (೧೩೦) ಸಿಲುಕದದು; 'ಸರ್ವಭೂತಾತ್ಮನೆಂಬ ಮಾತಿನ ಮಾತಿನಲ್ಲಿ' (೨೦೪) ಪ್ರಾಪ್ತವಾಗದದು; 'ಧನಕ್ಕೆ ಮನವನ್ನೋ ಮನಕ್ಕೆ ಧನವನ್ನೋ ಒಡ್ಡಿದವರಿಗೆ (೨೧೬) ವಶವಾಗದದು; 'ಓಡಲಾರದ ಮೃಗವು ಸೊಣಗಂಗೆ ಮಾಂಸವಕೊಡುವಂತೆ' (೨೩೦) ಮಾಡುವವರಿಗೆ ಕೈಗೂಡದದು; 'ಕಂಬಳಿಯಲ್ಲಿ ಕಣಕವ ನಾದು'ವವರಿಗೆ (೨೬೦) ಸಾಧಿಸದದು; 'ಬೆರಣಿಯನಾಯಲಲ್ಲದೆ ಅಟ್ಟುಣ್ಣಲು ತೆರಹಿಲ್ಲ' (೨೭೦)ದವರಿಗೆ ತಲೆದೋರದದು; 'ಹಾವತೋರಿ ಹವಿಯಬೇಡು' (೨೮೨)ವವರಿಗೆ ಸಲ್ಲದದು; ಎಲ್ಲಕ್ಕಿಂತ ಹೆಚ್ಚಾಗಿ, ಎನ್ನ ಮನದಲೊಂದು, ಹೃದಯಲೊಂದು, ವಚನದಲೊಂದು ನೋಡಾ! (೨೦೯) ಎಂಬ ಸ್ಥಿತಿ ಇರುವವರೆಗೆ, 'ಊಸರವಳ್ಳಿಯಂತೆ' ಬಾವುಲ ಬಾಳುವೆಯ ತೆರನಂತೆ' (೨೯೨) ಇರವು ಆಗಿರುವವರೆಗೆ, 'ಶರಣರ ಸಕಲರತಿಗೆ ಸಲ್ಲದನ್ನಕ್ಕ, (೩೧೦) 'ತನು–ಮನ–ಧನವ ನಿವೇದಿಸ' (೩೧೫)ದವರೆಗೆ ಬರದದು.

ಮನದಲ್ಲೊಂದು ಹೃದಯದಲ್ಲೊಂದು, ವಚನದಲ್ಲೊಂದು ಇರುವುದು ತನ್ನ ಭಿನ್ನತನ. (Split personality) ಈ ಒಳಸೀಳಿಕೆ, ಅಂತರಂಗದ ಸಿಗಿತ, ಬಿರುಕು ಮೊದಲು ಮಾಯವಾಗಿ ಮನ – ಹರದಯ–ವಚನಗಳಲ್ಲಿ ಹೊಂದಿಕೆ ಸಿದ್ಧಿಸಬೇಕು. ಆ ಸಿದ್ಧಿಯಲ್ಲಿ ಸಂಸ್ಕೃತಿಯ ಉದಯ. ಆಮೇಲ ಶರಣರ ಸಕಲರತಿ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ, ಲೇಸನೇ ಎಸಗುವ ಸಕಲರತಿಯನ್ನು ಸಾಧಿಸಿಕೊಳ್ಳಬೇಕು. ಆಗ ಸಂಸ್ಕೃತಿಯಿಂದ ಅಭ್ಯುದಯ. ಆಗ ಒಳಗಿನ ಸಾಮರಸ್ಯ, ಹೊರಗಿನ ಹೊಂದಿಕೆ. ದೃಷ್ಟಿ ಹಿತ ಸಮಷ್ಟಿ ಹಿತಗಳ ಸಮನ್ವಯ – ಸಾಂಸ್ಕೃತಿಕ ಕ್ರಾಂತಿ! ಇದು ಬರಿ ಸಾಹಿತ್ಯ ಕಲೆಗಳ ವಿಕಸನವಲ್ಲ, ಸೌಂದರ್ಯಶೋಧ ಆನಂದ ಬೋಧಗಳಲ್ಲ ಮನೋರಂಜನಸಾಧನಗಳಲ್ಲ, ಊಟ, ಉಡುಪು – ವಾಹನ, ವಿವಾದಾದಿಗಳಲ್ಲ, ಒಪ್ಪ, ನಯನಾಜೂಕುಗಳಲ್ಲ, ಶುಷ್ಕ ಅಕ್ಷರ ಪ್ರಸಾರವಲ್ಲ, ಸಾಮೂಹಿಕ ಪರ್ವಉತ್ಸವಾದಿಗಳಲ್ಲ ಇದು ಅಂತರಂಗ ಶುದ್ಧಿ ಬಹಿರಂಗಶುದ್ಧಿಗಳಿಂದ ಅಂತರ್ಬಾಹ್ಯ ಸಾಮರಸ್ಯವನ್ನು ಸಾಧಿಸಿ ತನ್ನ ಅನ್ಯರ ಆತ್ಯಂತಿಕ ವಿಕಾಸವನ್ನು ಸಾಧಿಸುವ ಮಹಾಮಣಿಹ! ಅಮೃತೋತ್ಪಾದನೋದ್ಯಮ! ಮಾನವನ ಮೇಲ್ಮಟ್ಟದ ಅಗತ್ಯಗಳಾದ ಬೆಳವಣಿಗೆ, ಆತ್ಮ ಸಾಧನೆ (Self actulization) ದೈಹಿಕ ಮಾನಸಿಕ ಆರೋಘ್ಯ ಸಂಪಾದನೆ, ಅನನ್ಯತೆ ಮತ್ತು ಸ್ವಾಯತ್ತತೆಗಳ (Identity and autonomy) ಆರ್ಜನೆ, ಅತ್ಯುನ್ನತೆ (Excellence)ಯ ಅಳವಡಿಕೆಗಳು ಎಲ್ಲ ಮಾನವರಲ್ಲಿಯೂ ಸಹಜವಾಗಿ ಸ್ವಾಭಾವಿಕವಾಗಿ ಇರುವ ಬಯಕೆಗಳೇ. ಆದರೆ ವಿಷಾದದ ವಿಷಯವೆಂದರೆ ಪ್ರಾಣಿಗಳ ಪ್ರಸ್ಫುರಣ (lustinets)ಗಳಂತೆ ಇವುಗಳಲ್ಲಿ ಅದಮ್ಯತೆ ಇರುವದಿಲ್ಲ. ಈ ಹೆಬ್ಬಯಕೆಗಳನ್ನು ಹತ್ತಿಕ್ಕಿ ಅವನನ್ನು ಒತ್ತೆಯಾಳನ್ನಾಗಿ ಮಾಡಿಕೊಳ್ಳುವವರಿದ್ದರೆ ಆ ಬಯಕೆಗಳೆಲ್ಲ ಮರುಭೂಮಿಯ ಮೃಗಜಲವಾಗಿಬಿಡುತ್ತವೆ. ಆ ಬಯಕೆಗಳು ಪುನಃಶ್ಚೇತನಗೊಳ್ಳುವಂತೆ ಮಾಡುವುದೇ ಈ ಸಂಸ್ಕೃತಿಯ ಆಧಾರದ ಆಂದೋಲನದ ಮುಖ್ಯ ಮಣಿಹ. ಬಸವಣ್ಣನವರಿದಕ್ಕೆ ಮುಂದಾದರು. 'ಭಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ; ಯುಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ; ಸಾರಿಶರಣನೆನಿಸುವೆನಯ್ಯಾ ಮೆಲ್ಲಮೆಲ್ಲನೆ, ಕೂಡಲಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯಾ!' (೮೯೨) ಎಂದು ಸಾರಿ ಬಳಿಗೆ ಬಂದ ಎಲ್ಲರಲ್ಲಿ ಬೃಹಧ್ಯೇಯಗಳ ಹೆಜ್ಜೆಡರನ್ನು ಹೊತ್ತಿಸಿದರು.

ಸಪ್ತಶೀಲಗಳನ್ನು, ಸಪ್ತಮಹಾವ್ರತಗಳನ್ನು ಸಪ್ತಸುವರ್ಣಸೂತ್ರಗಳನ್ನೂ ಬೋಧಿಸುವ ಬಸವಣ್ಣನವರ ಪ್ರಸಿದ್ಧ ವಚನವೊಂದನಿಲ್ಲಿ ಕೂಲಂಕಷವಾಗಿ ಅರಿಯಲು ಯತ್ನಿಸೋಣ : 'ಕಳಬೇಡ!' ಬೇರೆ ಪ್ರವಾದಿಗಳು 'ಕೊಲ್ಲಬೇಡ' ಎಂಬುದಕ್ಕೆ ಪ್ರಥಮ ಸ್ಥಾನಕೊಟ್ಟರೆ ಬಸವಣ್ಣನವರು 'ಕಳಬೇಡ' ಎಂಬುದಕ್ಕೆ ಮೊದಲ ಸ್ಥಾನವಿತ್ತಿದ್ದಾರೆ. ಏಕೆ? ಅನ್ಯರ ವಸ್ತುವನ್ನುಕದಿಯುವುದೊಂದೇ ಕಳ್ಳತನವಲ್ಲ. ಮೈಗಳ್ಳತನವೂ ಮಹಾ ಕಳ್ಳತನವೆ! ತನಗೆ ಅತ್ಯಗತ್ಯವಾಗಿರುವುದಕ್ಕಿಂತ ಹೆಚ್ಚು ಉಳಿಸಿಕೊಳ್ಳುವುದೂ ಕಳ್ಳತನವೇ; ಹೀಗೆಯೇ ಕೃತಿಚೌರ್ಯವೆಂಬುದಿದೆ. ಕೀರ್ತಿಚೌರ್ಯವೆಂಬುದಿದೆ; ಚೌರ್ಯಸಹಸ್ರಮುಖಿಯಾಗಿದೆ.

ಆ ಸಹಸ್ರಮುಖಗಳಲ್ಲಿ ಭೀಕರವಾದುದು ತನ್ನ ಭಿನ್ನತ್ವವನ್ನು, ದೋಷ ದುರ್ಗುಣಗಳನ್ನು, ಅರಕೆಗಳನ್ನು ಕುಂದು ಕೊರತೆಗಳನ್ನು ಮುಚ್ಚಿಟ್ಟು ಕೊಳ್ಳುವ, ಅಪರಾಧಗಳನ್ನು ಬಚ್ಚಿಟ್ಟುಕೊಳ್ಳುವ ಕಳ್ಳತನ! ಇಂಥ ಕಳ್ಳತನವಿರುವಲ್ಲಿ ಸಂಸ್ಕೃತಿಸಾಧ್ಯವೆ?

'ಕೊಲ್ಲಬೇಡ!' ಜೀವಿಯ ಕೊಲೆ ಜೀವಿಯ ಕೊಲೆಮಾತ್ರವಲ್ಲ, ಅದು ಧರ್ಮದ ಮೂಲವಾದ ದಯೆಯ ಕೊಲೆ. ಈಚೆಗೆ ಚಾರಿತ್ರ್ಯವಧೆ, ತೇಜೋವಧೆ (Character Assasination) ಇತ್ಯಾದಿಗಳು ಹೇರಳವಾಗಿ, ಹುಲಿಸಾಗಿ ಬೆಳೆಯುತ್ತಿವೆ. ಆದರೆ 'ಕೊಂಡವರುಳಿದರೆ ಕೂಡಲಸಂಗಮದೇವಾ?' (೧೨೯) ವಿರೋಧವನ್ನು ಅಳಿಸುವುದಕ್ಕೆ, ಭಿನ್ನಾಭಿಪ್ರಾಯಗಳನ್ನು ಕೊನೆಗಾಣಿಸುವುದಕ್ಕೆ ಕೊಲ್ಲುವುದೇ ಮಾರ್ಗವಾಗಿರಬಹುದು ಅಸಂಸ್ಕೃತಿಗೆ, ಆದರೆ ಅದು ಸಂಸ್ಕೃತಿಯ ಮಾರ್ಗವಾಗಲಾರದು. ಅದು ಎರಡೇಣಿನ ಖಡ್ಗ; ಅದಕ್ಕೆ ಕೊಲ್ಲುವವನೂ, ಕೊಲ್ಲಲ್ಪಡುವವನಾಗಿ ಇಬ್ಬರೂ ಆಹುತಿಯಾಗುವರು. ಆದುದರಿಂದ 'ಕೊಲ್ಲಬೇಡ' 'ಹುಸಿಯ ನುಡಿಯಲು ಬೇಡ!' ಹುಸಿಯಿರುವಲ್ಲಿ ಸಂಸ್ಕೃತಿ ಇರಲಾರದು. ಹುಸಿಯೆಂಬುದೇ ಹೊಲೆ, ಬೇರೆ ಹೊಲೆಯಿಲ್ಲ. ಅದು ಆತ್ಮವಂಚನೆ; ಮನ, ಹೃದಯ ಒಪ್ಪದಿರುವುದನ್ನು ವಚನದಲ್ಲಿರಿಸುವ ವಂಚಕತನ. ಆದುದರಿಂದ 'ಹುಸಿಯ ನುಡಿಯಲು ಬೇಡ', 'ಮುನಿಯಬೇಡ', 'ಕೋಪವೆಂಬುದು ಕೀಳು ಪಾಪದಾ ನೆಲೆಗಟ್ಟು!', 'ಕ್ರೋಧಾದ್ಭವತಿ ಸಮ್ಮೋಹಃ' ಇತ್ಯಾದಿ ಗೀತೋಕ್ತಿ ನೆನಪಿರಲಿ, ಮೇಲಾಗಿ, 'ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ? ತನಗಾದ ಆಗೇನು? ಅವರಿಗಾದ ಚೇಗೇನು? ತನುವಿನ ಕೋಪ ತನ್ನ ಹಿರಿಯತನದ ಕೇಡು! ಮನದ ಕೋಪ ತನ್ನರುಹಿನ ಕೇಡು! ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡುವುದೆ ಕೂಡಲಸಂಗಮದೇವಾ!' (೨೪೮) 'ಅನ್ಯರಿಗೆ ಅಸಹ್ಯಪಡಬೇಡ!' ಇದು ಯೋಚಿಸಿದಷ್ಟೂ ಮಹತ್ವದ್ದಾಗಿ ತೋರುವ ಸೂತ್ರ. ನಾವು ಅನ್ಯರಿಗೆ ಅಸಹ್ಯಪಟ್ಟರೆ ಅವರು ನಮಗೆ ಅಸಹ್ಯಪಡುತ್ತಾರೆ. ಸುತ್ತಲೂ ಅಸಹ್ಯತೆಯ ಜ್ವಾಲೆ ಹರಡುತ್ತದೆ. ಅದರಲ್ಲಿ ಎಲ್ಲರೂ ಭಸ್ಮವಾಗಬೇಕಾಗಿ ಬರುತ್ತದೆ. ಒಲಿದು ಒಲಿಸಿಕೊಳ್ಳುವ ದಾರಿ ಇದೆಯಲ್ಲ? ಅದನ್ನೇಕೆ ತುಳಿಯಲು ಒಲ್ಲೆನ್ನುವಿರಿ? ಒಲವು ಇಬ್ಬರಿಗೂ ಅಮೃತವಾಗುತ್ತದೆ. ಅಸಹನೆ ಇಬ್ಬರಿಗೂ ವಿಷಯವಾಗುತ್ತದೆ. ಅಸಹನೆ ಅಸಭ್ಯತೆಯ ದಾರಿ, ಒಲವು ಸಂಸ್ಕೃತಿಯ ದಾರಿ, 'ತನ್ನ ಬಣ್ಣಿಸಬೇಡ!' 'ಎನಗಿಂತ ಕಿರಿಯರಿಲ್ಲ'ವೆಂಬುದೇ ಸೂತ್ರವಾಗಿರಲಿ. 'ತಾನೊಬ್ಬನೇ ಭಕ್ತನು; ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ ಜಂಗಮ ಲಿಂಗ ನೀನೇ ಅಯ್ಯ!' ಎಂಬುದೇ ಜೀವನ ಸೂತ್ರವಾಗಿರಲಿ! ಸ್ವಪ್ರಶಂಸೆ ಸಂಸ್ಕೃತಿಯ ವೈರಿ, ಅಧೋಗತಿಯ ದಾರಿ! ಆದುದರಿಂದ 'ತನ್ನ ಬಣ್ಣಿಸಬೇಡ!' ಇನ್ನುಳಿದುದು 'ಇದಿರ ಹಳಿಯಲು ಬೇಡ!' ಇದರ ಮಹತ್ವವನ್ನು ಎಷ್ಟು ಒತ್ತಿ ಹೇಳಿದರೂ ಕಡಮೆಯೇ! ಬಿನ್ನಾಭಿಪ್ರಾಯವನ್ನೂ ಮನ್ನಿಸುವುದು ಪ್ರಜಾಪ್ರಭುತ್ವದ ಅಡಿಗಲ್ಲು; ಸುಸಂಸ್ಕೃತ ಜೀವನದ ತಳಹದಿ. ಅಂತೆಯೇ ವಿಶ್ವವಿಖ್ಯಾತ ವಿಚಾರವಾದಿ ವಾಲ್ಟೇರ್ ನುಡಿದ : 'I dont agree with a word you say but will defend to the death your right to say it.'

ಭಿನ್ನಾಭಿಪ್ರಾಯ ವೈರಕ್ಕೆ ಕಾರಣವಾಗಲೇಬೇಕೆಂದಿದ್ದರೆ ನಾನೂ ನನ್ನ ಪತ್ನಿಯೂ ಬದ್ಧವೈರಿಗಳಾಗಬೇಕಿತ್ತೆಂದರು ಬಾಪೂಜಿ, ಆದರೂ, ಎಲ್ಲರೂ ತಾನು ಹೇಳಿದುದೆಲ್ಲ ಸತ್ಯವೆಂದು ಒಪ್ಪಬೇಕು, ನಂಬಬೇಕು, ಅದರಂತೆ ಆಚರಿಸಬೇಕೆಂಬ ಛಲ ಎಷ್ಟು ವ್ಯಾಪಕವಾದುದು? ಇನ್ನೊಬ್ಬರ ವಿಚಾರಗಳಷ್ಟೇ ಅಲ್ಲ, ಅವರ ಆಚಾರಗಳೂ, ಅವರ ಸಮಗ್ರ ಜೀವನವೂ ತಮ್ಮ ವಿಚಾರಗಳಿಗೆ ಅನುಗುಣವಾಗಿಯೇ ರೂಪಿತವಾಗಬೇಕೆಂಬ ಹಟದಿಂದ ನಡೆದ ಧಾರ್ಮಿಕ ದಂಡಯಾತ್ರೆಗಳೆಷ್ಟು, ವಿಚಾರಪ್ರಣಾಲಿ ಪ್ರೇರಿತ ಸಮರಗಳೆಷ್ಟು, ವೈಯಕ್ತಿಕ ವಿರಸಗಳೆಷ್ಟು! ಆದುದರಿಂದ 'ಇದಿರ ಹಳಿಯಲು ಬೇಡ'.

ಈ ಸಪ್ತ ಸೂತ್ರಗಳಲ್ಲಿ ಮೊದಲಿನ ನಾಲ್ಕು ಅಂತರಂಗಶುದ್ಧಿಯನ್ನೂ, ಕೊನೆಯ ಮೂರು ಬಹಿರಂಗಶುದ್ಧಿಯನ್ನೂ ನೀಡುತ್ತವೆ. ಆಗ ನರ ಸುಸಂಸ್ಕೃತ ಮಾನವನಾಗುತ್ತಾನೆ. ತನ್ನ ಬದುಕನ್ನೂ ಹಸನ ಮಾಡಿಕೊಂಡು ತನ್ನ ನೆರೆಹೊರೆಯವರ, ಸಕಲ ಜೀವಿಗಳ ಲೇಸಿಗೂ ಅಣಿಯಾಗುತ್ತಾನೆ. ಯಾರಾದರೂ ಜರಿದರೂ, 'ಕಾಣದ ಠಾವಿನಲ್ಲಿ ಜರಿದರೆಂದರೆ, ಕೇಳಿ ಪರಿಣಾಮಿಸಬೇಕು. ಅದೇನು ಕಾರಣ? ಕೊಳ್ಳದೆ ಕೊಡದೆ ಅವರಿಗೆ ಸಂತೋಷವಹುದಾಗಿ!' (೨೫೦) ಎಂದು ನುಡಿಯಲು ಸಮರ್ಥನಾಗುತ್ತಾನೆ. 'ಕಾಡಿ ಕೆಡಿಸುವ * ವಚನ ಘಾತಕ; ವಚನದೋಷಗಳನ್ನು ಅಹಮ್ಮೆಂಬ ಅಹಂಕಾರ' (೨೫೨)ವನ್ನು ಅಳಿಸಿಕೊಳ್ಳಲು ಶಕ್ತನಾಗುತ್ತಾನೆ; ಅಮೃತದ ಕೆಚ್ಚು ಬೆಳೆದಾಗ 'ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬಳ್ಳುಕನ ಮಾಡಿ ಬೆಳುಗಾರನಂತೆ ಮಾಡಿ' (೨೫೩) ಕೊಳ್ಳಲು ಬಲ್ಲವನಾಗುತ್ತಾನೆ. 'ಧೃತಿಗೆಟ್ಟು ಅನ್ಯರ ಬೇಡದಂತೆ ಮತಿಗೆಟ್ಟು ಪರರ ಹೊಗಳದಂತೆ, ಪರಸತಿಯರ ರತಿಗೆ ಮನ ಹಾರದಂತೆ, ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ' (೨೬೩–೨೬೪) ಬದುಕಲು ಕಲಿಯುತ್ತಾನೆ; ಆಡಿ ಅಳುಪುವ, ಲೇಸಮಾಡಿ ಮರುಗುವ, ಬೇಡಿದವರಿಗೆಲ್ಲೆನ್ನುವ (೨೭೮) ಬುದ್ಧಿ ಹೋಗಿ, ಹೃದಯದ ಕತ್ತರಿ, ತುದಿನಾಲಿಗೆ ಬೆಲ್ಲೆಂಬೊ (೨೭೯) ನೀತಿ ಹೋಗಿ, 'ಹೊರಗಣ ಬಣ್ಣ ಒಳಗಣ ಸಣಬು' (೨೮೦) – ಈ ನೀತಿ ಹೋಗಿ, 'ಲೋಕೋಪಚಾರಕ್ಕೆ ಮಾಡುವ ಮನದಲ್ಲಿ ಎರಡುಳ್ಳ' (೨೮೧) ಗುಣ ಹೋಗಿ, 'ಹಾವ ತೋರಿ ಹವಿಯ ಬೇಡುವ' (೨೮೨) ನಟನೆ ಹೋಗಿ, ಲೌಕಿಕರ ಕಂಡು ಆಡುವ, ತಾರ್ಕಿಕರ ಕಂಡು ಹಾಡುವ, ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆ, ಬಾವುಲಬಾಳುವೆಯಂತೆ (೨೮೬–೨೮೭) ಇಪ್ಪ ಮನ ಹೋಗಿ; ಮಸಿಯ ಹೂಸಿ ನೇರಿಲಹಣ್ಣ ಮಾರುವ ಬಸುರ ಬಾಳುವೆ. ಕಾಲ ಸಾಲ ದಾರಿದ್ರ್ಯಕ್ಕಂಜಿ ದೇವರ ಮೊರೆಹೋಗುವ ಉದರ ಪೋಷಕತನ (೨೯೩) ಹೋಗಿ, ಕೋಟಿಯ ಲಾಭ ಕೆಡಿಸುವ ಕಾಣೆಯ ಲೋಭ (೨೯೫) ಹೋಗಿ ಹೊರಹಂಚಿ ಒಳ ಬೊಳ್ಳೆತನ (೩೦೫) ಲಿಂಗವ

*** We are all thieves in a way if we possess anything that we dont require for our immediate use, thieve it from others - Mahatma Gandhi.**

ತೋರಿ ಉದರವ ಹೊರೆವ ಭಂಗಗಾರತನ (೩೦೬) ಮಾತಿನ ಒಳಲಿಟ್ಟೆತನ (೩೦೭) ಹೋಗಿ ಸತ್‌ಕ್ರಿಯೆಯಿಂದ ಭಕ್ತನೆನಿಸುವ (೩೧೮) ಬಲ ಬರುತ್ತದೆ; ಅಡಿಗಡಿಗೆ ಎನ್ನ ಜಡಿದು ನೋಡದಿರಯ್ಯಾ; ಬಡವನೆಂದೆನ್ನ ಕಾಡದಿರಯ್ಯಾ; ಎನಗೊಡೆಯರುಂಟು, ಕೂಡಲಸಂಗನ ಶರಣರು; (೩೨೩) ಎಂದು ಹೇಳುವ ಎಂಟೆರ್ದೆ ಬರುತ್ತದೆ. 'ಡಂಬೂ ಡಳುಹು' (೩೩೯) ಹೋಗಿ, 'ಅರಸರ ಮನೆಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯಾ!' (೩೫೫) ಎಂಬುದು ಅಳವಡುತ್ತದೆ. : 'ಮೇಲಾಗಲೊಲ್ಲೆನು ಕೀಳಾಗಲಲ್ಲದೆ; ಕೀಳಿಂಗಲ್ಲದೆ ಹಯನ ಕರೆವುದೆ?' (೩೫೯) ಎಂಬ ಅರಿವು ತಲೆದೋರುತ್ತದೆ; 'ತನು ಮೀಸಲು, ಮನ ಮೀಸಲು, ನಯನ ಮೀಸಲು' (೩೭೩) ಅಪ್ಪ ಬಗೆ ಕರತಲಾಮಲಕವಾಗುತ್ತದೆ;' ಅನಂತಕೋಟಿ ಸನ್ಮಾನವ ಮಾಡಿದರೇನು? ನಿಮಿಷದುದಾಸೀನ ಕೆಡಿಸಿತ್ತು!' (೩೮೨) ಎಂಬುದು ವೇದ್ಯವಾಗುತ್ತದೆ; ಆನು ಮಾಡಿದೆನೆಂದು ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಗದೆ, (೩೮೩) 'ಹೊಗಳಿಕೆಯ ಹೊನ್ನಶೂಲ' (೩೮೬-೮೭) ದಿಂದ ಗಾಯಗೊಳ್ಳುತ್ತದೆ, ಕೂಡಲ ಸಂಗಮದೇವಾ, ನಿಮ್ಮ ಹಂಗೇನು? ಹರಿಯೇನು? (೩೯೦) ಎಂಬ ಭಾವ ಮಾಗಿ, 'ನಿನ್ನವರ ಸುಳುಹು ನೀನೆಂದೇ ಭಾವಿಸಿ ತೊತ್ತು -ಭೃತ್ಯನಾಗಿಪ್ಪೆನಯ್ಯಾ!' (೩೯೬) ಎಂದು ಸಾರುವ ಸನ್ಮತಿ ಬರುತ್ತದೆ; 'ಆತ್ಮಸ್ತುತಿ, ಪರನಿಂದೆಯ ಕೇಳಿಸದಿರಯ್ಯಾ' (೪೦೭) ಎಂಬ ಕೋರಿಕೆ, 'ಶಿವಭಕ್ತರ ನೋವೇ ಅದು ಲಿಂಗದ ನೋವು' (೪೦೬) 'ಅವರ ಸುಖವೆನ್ನಸುಖ; ಅವರ ದುಃಖವೆನ್ನದುಃಖ' (೪೦೭) ಎಂಬ ನಂಬಿಕೆ, 'ಆರಾಧನೆಯ ಮಾಡಿದರೆ ಅಮೃತದ ಬೆಳಸು, ವಿರೋಧಿಸಿದಡೆ ವಿಷದ ಬೆಳಸು,' (೪೨೧) ಎಂಬ ತಿಳಿವಳಿಕೆ, ಭಕ್ತಿಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ; ನಡೆಯೊಳಗೆ ನುಡಿಯ ಪೂರೈಸುವ - ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ; ಒಂದು ಜವೆ ಕೊರತೆಯಾದರೆ ಎನ್ನನದ್ದಿ ನೀನದ್ದಾ ಹೋಗು' (೪೪೦) ಎಂದುಸುರುವ ಎದೆಗಾರಿಕೆ ಬರುತ್ತದೆ; ವಿದ್ಯೆ, ಗುಣ, ಜ್ಞಾನ, ಧರ್ಮ, ಆಚಾರ, ಶೀಲಂಗಳ - ಶರಣರು ಸಾಧಿಸಿದ ಸಾಧನೆಯನೇ ಸಾಧಿಸುವುದು, (೬೧೩) ಎಂಬ ತಿಳಿವು ತಲೆದೋರುತ್ತದೆ.

ಇದು ಸಾಧನೆಗಳಲ್ಲಿ ಸಾಧನೆ : ವಿದ್ಯೆ, ಗುಣ, ಜ್ಞಾನ, ಧರ್ಮ, ಆಚಾರ, ಶೀಲಗಳ ಸಾಧನೆ. ಇವುಗಳಲ್ಲಿ ಒಂದೊಂದು ಶಬ್ದಕ್ಕೆ ಬ್ರಹ್ಮಾಂಡದಷ್ಟು ಅರ್ಥ. ಇವುಗಳನ್ನುಳಿದು ಇನ್ನೇನು ಸಾಧನೀಯ ಇಲ್ಲಿ? ಇವೆಲ್ಲವುಗಳ ಸಾಧನೆಯ ಸಾರಸರ್ವಸ್ವ ಫಲವೇ ಸಂಸ್ಕೃತಿ, ಉನ್ನತಮಟ್ಟದ ಸಂಸ್ಕೃತಿ. ಈ ಸಂಸ್ಕೃತಿಯ ಪಾವನ ಪ್ರವಾಹವನ್ನು ಊರೂರಿಗೂ, ಕೇರಿ ಕೇರಿಗೂ, ಮನೆ ಮನೆಗೂ, ಗುಡಿಸಲು ಗುಡಿಸಲಿಗೂ ಹರಿಸಿ ಒಂದು ಸಾಂಸ್ಕೃತಿಕ ಕ್ರಾಂತಿಯನ್ನೇ ತಂದರು ಬಸವಣ್ಣನವರು. ಈ ಕ್ರಾಂತಿಗೆ ಒಳಗಾದ ಯಾರೂ ಹಕ್ಕಿಗಾಗಿ ಹೋರಾಡುವವರಲ್ಲ - ತಮ್ಮ ಕಾಯಕವನ್ನು ಮಾತ್ರ ತ್ರಿಕರಣ ಶುದ್ಧಿಯಿಂದ ಮಾಡಿ ಅದರಿಂದ ತಮ್ಮ ಪೋಷಣೆ, ಶರಣ ದಾಸೋಹ ಮಾಡುವವರು; ಅದಕ್ಕೆ ಅಂತಿಂಥ

ಪ್ರತಿಫಲ ಹೋಗಲಿ, ಕೈಲಾಸವನ್ನೂ ಬೇಡದವರು; ಭಕ್ತಕಾಯದಲ್ಲಿಯೇ ಕೈಲಾಸವನ್ನು ಕಂಡವರು; ಕಾಯಕವೇ ಕೈಲಾಸವೆಂದು ನಂಬಿದವರು. ಸಾಧ್ಯವು ಶುದ್ಧವಾಗಿರುವುದರ ಜೊತೆಗೆ ಸಾಧನವೂ ಶುದ್ಧವಾಗಿರಬೇಕೆಂದು ಸಾರಿದವರು; ಇಲ್ಲಿಯೂ ಲೇಸು, ಅಲ್ಲಿಯೂ ಲೇಸು – ಕೂಡಿರೇ, ನಮ್ಮ ಕೂಡಲಸಂಗನ ಶರಣರಿಗೆ ! (೬೨೩) ಎಂದು ಬೋಧಿಸಿದವರು; ಕೋಪಿ ಮಜ್ಜನಕ್ಕೆರೆದರೆ ರಕ್ತದ ಧಾರೆ! ಪಾಪಿ ಹೂವನೇರಿಸಲು ಮಸೆದಾಯುಧದ ಗಾಯ! (೬೫೧) ಎಂದು ಎಚ್ಚರಿಸಿದವರು; 'ಶಿವಭಕ್ತನಾಗಿ ತನ್ನ ಹಿಡಿದಹನೆಂದು ಹೋದರೆ ನುಗ್ಗು ಮಾಡುವ, ನುಸಿಯ ಮಾಡುವ, ಮಣ್ಣು ಮಾಡುವ, ಮಸಿಯ ಮಾಡುವ – ಕಡೆಗೆ ತನ್ನಂತೆ ಮಾಡುವ!' (೬೮೫) ಎಂದು ಅಭಯವನ್ನಿತ್ತವರು; 'ಜ್ಞಾನದ ಬಲದಿಂದ ಅಜ್ಞಾನದ ಕೇಡು, ಜ್ಯೋತಿಯ ಬಲದಿಂದ ತಮಂಧದ ಕೇಡು, ಶರಣರ ಅನುಭಾವದಿಂದ ಮನದ ಕೇಡು! (೮೪೧) ಎಂಬುದನ್ನು ಮನಗಾಣಿಸಿಕೊಂಡವರು; 'ಉಂಬ ಬಟ್ಟಲು ಬೇರೆ ಕಂಚಲ್ಲ; ನೋಡುವ ದರ್ಪಣ ಬೇರೆ ಕಂಚಲ್ಲ; ಭಾಂಡ ಒಂದೆ, ಭಾಜನ ಒಂದೆ, ಬೆಳಗೆ ಕನ್ನಡಿಯೆನಿಸಿತ್ತಯ್ಯಾ! ಅರಿದಡೆ ಶರಣ, ಮರೆದಡೆ ಮಾನವ' (೮೬೦) ಎಂದು ನಂಬಿ ಬೆಳಗಿಕೊಂಡು ಕನ್ನಡಿಯಾದವರು, ಅರಿದು ಶರಣರಾದವರು!

ಮುಕ್ತ ಬುದ್ಧಿ, ಮುಕ್ತ ಮನ, ಮುಕ್ತ ಹೃದಯಗಳ ಈ ಮುಕ್ತಾತ್ಮರು ರೂಪಿಸಿದ, ರೂಢಿಸಿದ ಸಂಸ್ಕೃತಿ ಅಂತ್ಯಜರನ್ನು, ಪಂಚಮರನ್ನು, ವಂಚಿತರನ್ನು, ಶೋಷಿತರನ್ನು, ದೀನ–ದುರ್ಬಲರನ್ನು ಮಾತ್ರವೇ ಆಕರ್ಷಿಸಿತೆಂದು ಹೇಳಲಾಗದು. ಪ್ರತ್ಯಕ್ಷವಾಗಿ ಬಸವಮತವನ್ನು ಸೇರದಿದ್ದರೂ, ಶರಣಸಂಸ್ಕೃತಿಯ ತಾರಕಶಕ್ತಿಗೆ ಒಳಗಾಗಿ ತಮ್ಮ ಬದುಕಿಗೊಂದು ಅರ್ಥ ತಂದುಕೊಂಡವರು, ನೆಮ್ಮದಿ ತಂದುಕೊಂಡವರು. ಕೋಟಿ ಕೋಟಿ ಜನ ಕನ್ನಡ ನಾಡಿನ ಹಳ್ಳಿಗಳಲ್ಲಿ ಅಂದಿನಿಂದ ಇಂದಿನವರೆಗೆ ಕೇಂದ್ರಾಪಗಾಮೀ ಶಕ್ತಿಗಳಿಗೆ ಹೆಸರಾಗಿದ್ದ ಈ ದೇಶದಲ್ಲಿ ಈ ಜನತೆಯ ಸಂಸ್ಕೃತಿ ಕೇಂದ್ರಾಭಿಗಾಮೀ ಶಕ್ತಿಯಾಗಿ ಪರಿಣಮಿಸಿತು. ಬಿದ್ದವರ, ಬದ್ಧರ ಮನಗಳನ್ನು ಗೆದ್ದ ಈ ಸಂಸ್ಕೃತಿಯೇ ಮುಸಲ್ಮಾನ ಸಮಾಜದ ಮನವನ್ನೂ ಗೆದ್ದ ನಿದರ್ಶನಗಳೂ ಈ ನಾಡಿನಲ್ಲಿ ಸಾಕಷ್ಟಿವೆ. ಇಂದಿಗೆ ಸುಮಾರು ಐದುನೂರು ವರ್ಷಗಳ ಹಿಂದೆ ಕಲಬುರಗಿ, ತರುವಾಯ ಬಿದರೆಗಳಲ್ಲಿ ರಾಜ್ಯವಾಳಿದ ದಯಾಳು ದೊರೆ ಸುಲ್ತಾನ ಅಹಮದ್‌ಷಾಹನಿಗೆ ಮುಸಲ್ಮಾನರು 'ವಲಿ'ಯೆಂದು ಕರೆದರು. ಹಿಂದುಗಳು 'ಅಲ್ಲಮಪ್ರಭು' ಎಂದು ಕರೆದರು. ಬಿದರೆಯಿಂದ ಪಶ್ಚಿಮಕ್ಕೆ ಎರಡು ಮೈಲಿ ದೂರದಲ್ಲಿರುವ ಅಷ್ಟೂರೆಯಲ್ಲಿ ಇವನ ಗೋರಿಯಿದ್ದು ಇದರ ಗುಮ್ಮಟದ ಬಾಗಿಲಿನ ಮೇಲೆ ಊರ್ದೂ ಲಿಪಿಯಲ್ಲಿ 'ಅಲ್ಲಮಪ್ರಭು' ಎಂದೂ ಬರೆದಿದೆ. ಈ ಪುಣ್ಯಪುರುಷನ ಗೋರಿಗಳು ಬೇರೆ ಅನೇಕ ಕಡೆಗಳಲ್ಲಿಯೂ ಇದ್ದು ಅವುಗಳನ್ನು 'ಚೆಲ್ಲಾ'ಗಳೆಂದು ಕರೆಯುತ್ತಾರೆ. ಅವುಗಳಲ್ಲಿ ಲಿಂಗಾಯತರೇ 'ಮುತವಲ್ಲಿ'ಗಳು; ಹಿಂದೂ ಮುಸಲ್ಮಾನರಿಬ್ಬರೂ ಶಿಷ್ಯರು! ಇವುಗಳನ್ನು 'ಸುಲ್ತಾನಬಾಷಾ ದರ್ಗಾ'ಗಳೆಂದು

ಮುಸಲ್ಮಾನರೂ, 'ಅಲ್ಲಮಪ್ರಭು' ಎಂದು ಹಿಂದುಗಳೂ ಕರೆಯುತ್ತಾರೆ. ಕಲಬುರಗಿ ಜಿಲ್ಲೆಯ ಅಳಂದ ತಾಲೂಕಿನ ಮಾಡಿಯಾಳ, ಬಸಳಂದ, ಹೆಬ್ಬಿ, ವಾಗ್ಧರಿ ಗ್ರಾಮಗಳಲ್ಲಿ ಈ ಚೆಲ್ಲಾಗಳಿದ್ದು ಇಲ್ಲಿ ನಡೆಯುವ ವಾರ್ಷಿಕ ಸಮಾರಂಭಗಳಿಗೆ ಹಿಂದುಗಳು ಜಾತ್ರೆಯೆಂದೂ ಮುಸಲ್ಮಾನರು 'ಉರುಸ್' ಎಂದೂ ಕರೆಯುತ್ತಾರೆ. ಹಿಂದೂಗಳು ಪೂಜೆ, ನೈವೇದ್ಯ ಸಲ್ಲಿಸುತ್ತಾರೆ; ಮುಸಲ್ಮಾನರು ಸಂದಲ್, ಚಿರಾಗನ್, ಜಿಯಾರತ್ ಗಂಧ, ದೀಪ, ದರ್ಶನ ಅರ್ಪಿಸುತ್ತಾರೆ. ಇದರಂತೆಯೇ ಸಾವಳಗಿ, ಕೊಡೇಕಲ್, ಶಿರಹಟ್ಟಿ ಮೊದಲಾದ ಸ್ಥಳಗಳಲ್ಲಿ ಹಿಂದೂ ಮುಸಲ್ಮಾನರಿಬ್ಬರೂ ಕೂಡಿ ನಡೆದುಕೊಳ್ಳುವ ಮಂದಿರ-ಮಠಗಳಿವೆ. ಕಲಬುರಗಿಯಲ್ಲಿಯೇ ಹಿಂದುಗಳು ಭಕ್ತರಾಗಿರುವ ಹಜರತ್ ಬಂದೇನವಾಜರ ದರ್ಗಾ ಮತ್ತು ಮುಸಲ್ಮಾನರು ಭಕ್ತರಾಗಿರುವ ಶರಣಬಸವೇಶ್ವರ ದೇವಾಲಯಗಳಿವೆ. ಶಿಶುನಾಳಿನಲ್ಲಿ ಷರೀಫ್‌ಸಾಹೇಬರ ಸಮಾಧಿಗೆ ಶಿವಯೋಗಿ ಷರೀಫ್‌ಸಾಹೇಬರ ಗದ್ದಿಗೆಯೆಂದು ಹಿಂದೂಗಳೂ, ಸೂಫಿ ಷರೀಪ್‌ಸಾಹೇಬರ ಗೋರಿಯೆಂದು ಮುಸಲ್ಮಾನರೂ ನಡೆದುಕೊಳ್ಳುತ್ತಿಲ್ಲವೆ? ನನಗೆ ಗೊತ್ತಿಲ್ಲದಿರಬಹುದಾದ ಬೇರೆ ಸ್ಥಳಗಳನ್ನೂ ಸೇರಿಸಿದರೆ ಶರಣಸಂಸ್ಕೃತಿ ಹಿಂದೂ-ಮುಸ್ಲಿಂ ಮೈತ್ರಿಗೆ, ಸಹಜೀವನಕ್ಕೆ ಅದೆಷ್ಟು ಸಹಕಾರಿಯಾಗಿದೆಯೆಂಬುದು ವೇದ್ಯವಾಗದಿರದು.

ಅಂತ್ಯಜರಿರಲಿ, ಅನ್ಯಧರ್ಮೀಯರೇ ಇರಲಿ – ಭಾರತದಲ್ಲಿ ಭಾವೈಕ್ಯ ಸಾಧನೆಗೆ ಈ ಸಾಂಸ್ಕೃತಿಕ ಕ್ರಾಂತಿ ನೀಡಿದ ಕಾಣಿಕೆಯೇನೆಂಬುದನ್ನು ಕಂಡುಕೊಂಡು ಆ ಮಾರ್ಗವಾಗಿ ಪ್ರಯತ್ನಿಸಿದರೆ ಮಾತ್ರ ಎಲ್ಲರಲ್ಲಿ ಭಾವೈಕ್ಯ ಬರಲು ಸಾಧ್ಯ! ಎಲ್ಲರಿಗೆ ಸಮಾನಾವಕಾಶ, ಸಮಾನ ಗೌರವ, ಸಮಾನಾಧಿಕಾರ, ಸಮಬಾಳು – ಸಮಪಾಲುಗಳನ್ನು ಒಪ್ಪದ ಯಾವ ಮಾರ್ಗದಿಂದಲೂ ಇದು ಸಾಧ್ಯವಿಲ್ಲ. ಇಂಥದೊಂದು ವಿಶಾಲ ದೃಷ್ಟಿಯ, ಉದಾರಭಾವದ, ದೂರದರ್ಶಿತ್ವದ, ವಿಶ್ವಕುಟುಂಬಿತ್ವದ, ಮಾನವತಾ ತತ್ತ್ವದ, ಸ್ವಾವಲಂಬನ ಸೂತ್ರದ, ಶ್ರಮಗೌರವ – ಗುಣಗೌರವ – ಜೀವನಗೌರವ ಮಹತ್ವದ, ಸಮನ್ವಯ ಸಾಮರಸ್ಯಗಳ, ಸ್ನೇಹ-ಸಹಾನುಭೂತಿಗಳ, ಸಮಾನತೆ ಸೋದರತೆಗಳ ಸಕಲರತಿಯ ಸಂಸ್ಕೃತಿಯ ರಕ್ತರಹಿತ ಕ್ರಾಂತಿಯನ್ನು ತಂದು ಈ ದೇಶದ ಮುಖ್ಯ ಮುಖ್ಯ ಸಮಸ್ಯೆಯೊಂದಕ್ಕೆ ಪರಿಹಾರವನ್ನು ಸೂಚಿಸಿದ ಶರಣರಿಗೆ – ಅದರೆ ಏಕೈಕನಾಯಕ ಬಸವಣ್ಣನವರಿಗೆ ಭಾರತೀಯರೆಲ್ಲರ ಅಭಿವಂದನೆಗಳು ಸಲ್ಲಬೇಕು.

ಬಸವಣ್ಣನವರು ಮಾನವಾಧಿಕ್ಯದ, ಮಾನವಪಾರಮ್ಯದ ಮಹಾಪ್ರವಾದಿಗಳು, ಮಾನವನು ಪಾಪಾತ್ಮ, ಕ್ಷುದ್ರ, ದಾಸ, ಹೀನ, ದೀನ, ಕರ್ಮದ ಕೈಗೊಂಬೆ, ವಿಧಿಯ ಅಡಿಯಾಳು, ಕಾಲದ ಕಾಲಕಸ, ಅನುವಂಶಿಕತೆ, ಪರಿಸರಗಳ ಪಡಿಯಚ್ಚು, ಪರಿಸ್ಥಿತಿಯ ಗುಲಾಮ, ಸಮಷ್ಠಿಯಜ್ಞದ ಪಶು, ಬಲಿಷ್ಠರ ಹಬ್ಬಕ್ಕೆ ತಂದ ಹರಕೆಯ ಕುರಿ ಇತ್ಯಾದಿ ಮಾತುಗಳು ಮನುಕುಲದ ಮಾನ ಕಳೆವ ಮಾತುಗಳೆಂದು ನಂಬಿದವರು. 'ಹೇಂಗೆ ನಿಮ್ಮ ಮನ

ಹಾಂಗೆ ನಿಮ್ಮ ಘನ'ವೆಂಬ ಸಂದೇಶ ಸಾರಿದ ಅವರು ಮನದ ಮೂಲಕ್ಕೆ ಇಳಿದು, ಮನದ ಮೂಲಕವೇ ಘನಮನಕ್ಕೇರುವ ದಾರಿತೋರಿಸಿದರು. ಎಂಥ ಪತಿತನೂ ಮನಸ್ಸು ಮಾಡಿದರೆ ಮಹೋನ್ನತಿ ಪಡೆಯಬಲ್ಲ. ಅವನು ತನ್ನದೇ ಆದ ಮನದ ಮಹತ್ವವನ್ನರಿತುಕೊಳ್ಳಬೇಕು ಅಷ್ಟೆ.

'ಕರಿ ಘನ, ಅಂಕುಶ ಕಿರಿದೆನ್ನಬಹುದೇ? ಬಾರದಯ್ಯಾ!
ಗಿರಿ ಘನ, ವಜ್ರ ಕಿರಿದೆನ್ನಬಹುದೇ? ಬಾರದಯ್ಯಾ!
ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೇ? ಬಾರದಯ್ಯಾ!
ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೇ?
ಬಾರದಯ್ಯಾ, ಕೂಡಲಸಂಗಮದೇವಾ!' (೬)

ಹೌದು 'ಮರಹು ಘನ!' ಸ್ವರೂಪವಿಸ್ಮೃತಿಯೆನ್ನಿ, ಮರಹೆನ್ನಿ, ಮಚ್ಚೆನ್ನಿ ಮಾಯೆಯೆನ್ನಿ, ಮೋಹವೆನ್ನಿ, ಭ್ರಮೆಯೆನ್ನಿ – ತನ್ನ ತನುವಿನಲ್ಲಿಯೇ ಇರುವ ಮನದ ಮಹಾದ್ಭುತ ಶಕ್ತಿಯನ್ನು ಜಾಗೃತಗೊಳಿಸಿಕೊಳ್ಳದೆ ಅರಿವಿನ ತಿರುಳಾಗುವುದರ ಬದಲು ಮರವೆಯ ಮರಳಾಗುತ್ತಾನೆ ಮಾನವ; ಅರಿದು ಶರಣನಾಗಬೇಕಿದ್ದಾತನು ಮರೆದು ಮಾನವನಾಗುತ್ತಾನೆ. ಮರಹು ಮುಸುಕಿ ಮಂಜುಗಟ್ಟಿ ಮರವಟ್ಟ ಮನ 'ನೆನೆವ ಮನವಾದರೆ' ತಕ್ಷಣ ಹೇಳಬಹುದು; 'ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನ ಬಹುದೆ? ಬಾರದಯ್ಯಾ!' ಎಂದು.

ಮನದ ಮಹತಿಯನ್ನು ಬಗೆ ಬಗೆಯಾಗಿ ಬಿತ್ತರಿಸಿದ್ದಾರೆ ಬಸವಣ್ಣನವರು; ಮನದ ಮಹತಿಯೊಡನೆ ಮಾನವನ ಮಹತಿಯನ್ನೂ ಬಾನೆತ್ತರಕ್ಕೆ ಏರಿಸಿದ್ದಾರೆ:

'ಸಮುದ್ರ ಘನವೆಂಬೆನೆ? ಧರೆಯ ಮೇಲಡಗಿತ್ತು;
ಧರೆ ಘನವೆಂಬೆನೆ? ನಾಗೇಂದ್ರನ ಫಣಾಮಣಿಯ ಮೇಲಡಗಿತ್ತು;
ನಾಗೇಂದ್ರ ಘನವೆಂಬೆನೆ? ಪಾರ್ವತಿಯ ಕಿರುಕುಣಿಕೆಯ
ಮುದ್ರಿಕೆಯಾಯಿತ್ತು;
ಅಂತಹ ಪಾರ್ವತಿ ಘನವೆಂಬೆನೆ? ಮಹೇಶ್ವರನ ಅರ್ಧಾಂಗಿಯಾದಳು:
ಅಂತಹ ಪರಮೇಶ್ವರನ ಘನವೆಂಬೆನೆ?
ನಮ್ಮ ಕೂಡಲಸಂಗನ ಶರಣರ
ಮನದ ಕೊನೆಯ ಮೊನೆಯ ಮೇಲಡಗಿದನು!' (೭೬)

ಸಕಲ ಬ್ರಹ್ಮಾಂಡಗಳನ್ನೂ, ಇವುಗಳಾಚೆ ಮೋರೆ ಚಾಚುತ್ತಲೇ ಇರುವ ವಿಶ್ವವಿಶ್ವಾಲೀಕಗಳನ್ನೂ ಒಳಗೊಂಡ ಆ ಪರಾತ್ಪರ ವಸ್ತುವನ್ನು ಮನದಲ್ಲಿ ಅಲ್ಲ, 'ಮನದ

ಕೊನೆಯ ಮೊನೆಯ ಮೇಲೆ' ಅಡಗಿಸಬಲ್ಲ ಅರಿದ ಶರಣ! ಮಾನವನ ಮೇಲ್ಮೆಯಿರುವುದೇ ಇಲ್ಲಿ, ಇದರಲ್ಲಿ. ಜಗದಾದಿಯಿಂದಲೂ ಜೀವಾತ್ಮನೆಷ್ಟು ವಿಕಾಸ ಹೊಂದುತ್ತ ಬಂದಿರುವನೋ ಪರಮಾತ್ಮನೂ ಅಷ್ಟೇ ದೊಡ್ಡವನಾಗುತ್ತ ಬಂದಿದ್ದಾನೆ. ಜೀವಿಯ ಜ್ಞಾನವೆಷ್ಟೋ, ದೃಷ್ಟಿಯೆಷ್ಟೋ ಅಷ್ಟೇ ಅವನ ದೇವನ ಕಲ್ಪನೆ ತಾನೆ? ತನ್ನ ತಿಳಿವಿನ ಹರಹಿಗಿಂತ, ತನ್ನಪರಮೋಚ್ಚವಾದ ಕಾಣ್ಕೆಗಿಂತ, ತನ್ನ ಭೂಮತಮವಾದ ಕಲ್ಪನೆಗಿಂತ ದೊಡ್ಡ ದೇವನನ್ನು ಜೀವಿ ಊಹಿಸುವನಾದರೂ ಹೇಗೆ? ಬಸವಣ್ಣನವರೇ 'ಮಡಕೆ ದೈವ, ಮರದೈವ'ವೆಂಬ ಅಲ್ಪ ಕಲ್ಪನೆಯನ್ನು ಕುದುರಿಸಲಿಲ್ಲವೆ? ಹಾಗವರು ಕುದುರಿಸದಿದ್ದರೆ? ಮಾತಿ ಮಸಣಿಗಳ – ಮಡಕೆ ಮರಗಳ' ಕಲ್ಪನೆಯೇ ಮುಂದುವರಿಯುತ್ತಿತ್ತು. ಅವರಿದನ್ನು ಮಾಡಲು ಸಮರ್ಥರಾದುದು ಹೇಗೆ?

'ನಿನ್ನ ನಾನರಿಯದ ಮುನ್ನ ನೀನೆಲ್ಲಿದ್ದೆ?
ಎನ್ನೊಳಗಿದ್ದು ನಿನ್ನ ತೊರಲಿಕೆ ನೀನೇ ರೂಪಾದೆ' (೮೨೨)

ಎಂಬುದನ್ನು ಅರಿತು ಅನುಭವಿಸಿದರೆಂದೇ,

'ಕಾಳಿಯ ಕಣ್‌ಕಾಣ (ಕಂಕಾಣ)ದಿಂದ ಮುನ್ನ,
ತ್ರಿಪುರ ಸಂಹಾರದಿಂದ ಮುನ್ನ,
ಹರಿ ವಿರಂಚಿಗಳಿಂದ ಮುನ್ನ, ಉಮೆಯ ಕಲ್ಯಾಣದಿಂದ ಮುನ್ನ,
ಮುನ್ನ, ಮುನ್ನ, ಮುನ್ನ –
ಅಂದಿಂಗೆಳೆಯ ನೀನು ಹಳೆಯ ನಾನು,
ಮಹದಾನಿ ಕೂಡಲಸಂಗಮದೇವಾ!'

ಎಂದು ಸಾರಲು ಸಮರ್ಥರಾದರು. ಪೌರಾಣಿಕ ಕಥೆಗಳ ಪೂರ್ವದ ಶಿವ ಇನ್ನೂ 'ಮರ–ಮಡಕೆ'ಗಳ ರೂಪದಲ್ಲಿ ಪೂಜೆಗೊಳ್ಳುತ್ತಲಿದ್ದಾಗಲೂ, ಭೂತಪ್ರೇತಗಳು ಸರ್ಪಗಿರ್ಪಗಳ ರೂಪದಲ್ಲಿ ಪೂಜೆಗೊಳ್ಳುತ್ತಿದ್ದಾಗಲೂ, ಅದಕ್ಕೂ ಪೂರ್ವದಲ್ಲಿಯೂ ಮನುಷ್ಯ ಮನುಷ್ಯ ರೂಪದಲ್ಲಿಯೇ ಇದ್ದ. ಆದರೆ ಅವನಲ್ಲಿನ್ನೂ, 'ನೆನೆವ ಮನ' ಎಚ್ಚತ್ತಿರಲಿಲ್ಲ! ಆದರೂ ಅವನು ದೇವಕಲ್ಪನೆಯ ಉದಯಕ್ಕಿಂತ ಹಳೆಯ; ಅವನಿಂದಲೇ ದೇವರ ಕಲ್ಪನೆ ಕಾಡುರೂಪದಲ್ಲಿಯೇ ಆಗಲಿ ಆರಂಭಗೊಂಡ ಕಾರಣ ದೇವ ಜೀವಿಗಿಂತ ಎಳೆಯ! 'ಎನಗೆ ಗುರುವಿನ ಪ್ರಸಾದ, ನಿನಗೆ ಚೆನ್ನನ ಪ್ರಸಾದ; ಎನಗೆಯೂ ನಿನಗೆಯೂ ಸಮಯಾಚಾರ ಸರಿ! ಕೂಡಲಸಂಗಮದೇವಾ, ನೀನೆನಗೆ ಚಿಕ್ಕ ತಮ್ಮ!' (೯೦೪) ಈ ದೃಷ್ಟಿಯಿಂದಲೂ ಎಳೆಯ ನೀನು, ಹಳೆಯ ನಾನು!

ಒಮ್ಮೆ ಮಲಗಿದ್ದ ಮನ ಜಾಗೃತವಾಯಿತೋ – ಅದರ ಶಕ್ತಿಗೆ ಸೀಮೆಯೆಲ್ಲಿ?

**ಅದರ ಅನೇಕ ಸ್ತರಗಳಲ್ಲಿ ಅವಿತ ಅಗಾಧ ಶಕ್ತಿಗಳನ್ನು ವಿಹಿತ ಸಾಧನಗಳಿಂದ ಸಾಕ್ಷಾತ್ಕರಿಸಿಕೊಂಡಾಗ ಅಲ್ಪಮಾನವನೇ ಮಹಾಶಕ್ತಿಯಾಗಿ ಗರ್ಜಿಸುತ್ತಾನೆ:**

'ಜಂಭೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಯ್ಯಾ
ಎರಡಾಳಿನ ಭಾಷೆಯ,
ಕೊಲುವೆನೆಂಬ ಭಾಷೆ ದೇವನದು;
ಗೆಲುವೆನೆಂಬ ಭಾಷೆ ಭಕ್ತನದು!
ಸತ್ಯವೆಂಬ ಕೂರಲಗನೆ ಕ(ತ?) ಳೆದುಕೊಂಡು
ಸದ್‌ಭಕ್ತರು ಗೆದ್ದರು, ಕಾಣಾ, ಕೂಡಲಸಂಗಮದೇವಾ!' (೬೭೭)

ಶಸ್ತ್ರದಿಂದ ಕೊಲುವುದೇ ಕೊಲುವುದೇನಲ್ಲ; ಮರವೆಯಿಂದ ಕೊಲುವುದೂ ಕೊಲುವುದೇ! ಮರವೆಯೇ ಮರಣ, ಅರಿವೇ ಜೀವನ, ಯುಗಯುಗಗಳವರೆಗೆ ಮರವೆಯಲ್ಲಿದ್ದು ಇದ್ದೂ ಇಲ್ಲದಂತಿದ್ದ ಮನುಜನಲ್ಲಿ 'ನೆನವ ಮನ' ಜಾಗೃತವಾದಾಗ ಜಗದೀಶನಿಗೂ ದಿಗಿಲುಂಟಾಗಿರಬೇಕು. ಯಾವ ದಿಗಿಲು? ಮಾನವನಿಗೀಗ 'ಭ್ರಾಂತಳಿದು ಆವನಿಂದುದಾಗಿ' (೯೧೭) ಅವನಿನ್ನು ತಾನು ಹೇಳಿದಂತೆ ನಾನು ಕೇಳುವಂತೆ ಮಾಡದೆ ಬಿಡಲಾರನೆನ್ನುವ ದಿಗಿಲು, 'ಆನು ಘಳಿಸಿದ ಒಮ್ಮನಕ್ಕೆ ಅಗಲದೆ ಮೋಹಿತನಾದ. ಕೂಡಲಸಂಗಮದೇವನಂತಪ್ಪ ಮಗ ಹುಟ್ಟಿರೆ, ಇದ್ದನಯ್ಯಾ ಕಾಯ ಮಾತೆಯಾಗಿ, ಜೀವ ಪಿತನಾಗಿ ನಾನಿರಿಸಿದಂತೆ!' (೯೧೪)

'ತಂದೆ ನೀನು, ತಾಯಿ ನೀನು' ಎಂದ ಭಕ್ತನೀಗ 'ಕೂಡಲಸಂಗಮದೇವನಂತಪ್ಪ ಮಗಹುಟ್ಟಿ ನಾನಿರಿಸಿದಂತೆ ಇದ್ದ'ನೆಂದು ಉಗ್ಘಡಿಸುತ್ತಿದ್ದಾನೆ! ಇದೆಂಥ ವಿಸ್ಮಯ! ಮುಂದೆ, 'ಮಗನ ತೂಗಿರೋ ಭಕ್ತರು', 'ಲಾಲಿ ಲಾಲಿಯು ಪರಬ್ರಹ್ಮದ ಶಿಶುವೆ!' ಎಂದು ಹಾಡುವವರೂ ಹುಟ್ಟಿದರು! ಈ ಕಲ್ಪನೆಯಂತೂ ಅಂದಿಂಗೆಳೆಯ ನೀನು, ಹಳೆಯ ನಾನು! ಮೊದಲು ತಂದೆಯಾಗಿ, ಆ ಮೇಲೆ ಗಂಡನಾಗಿ, ತಮ್ಮನಾಗಿ ಈಗ ಮಗನಾಗಿರುವ ಕೂಡಲಸಂಗಯ್ಯನಿಗೆ ಮುಂದಿನ ಮಜಲು ಯಾವುದೆಂದು ದಿಗಿಲಾಗದಿರುವುದೆ? ದಿಗಿಲುಗೊಂಡೇ, ಜನಿತಕ್ಕೆ ತಾಯಾಗಿ ಹೆತ್ತ, ಮೋಹಕ್ಕೆ ಮಗಳಾಗಿ ಹುಟ್ಟಿದ, ಕೂಟಕ್ಕೆ ಸ್ತ್ರೀಯಾಗಿ ಕೂಡಿದ ಮಾಯೆ' (೧೫) ಯನ್ನು, ನಾನೊಂದು ನೆನೆದೊಡೆ ತಾನೊಂದು ನೆನೆವ, ನಾನಿತ್ತಲೆಳೆದೊಡೆ ತಾನತ್ತಲೆಳೆವ, ತಾ ಬೇರೆ ಅಳಲಿಸಿ ಕಾಡುವ, ಬಳಲಿಸಿ ಕಾಡುವ, ಕೂಡಲಸಂಗನ ಕೂಡಿಹೆನೆಂದೊಡೆ ಮುಂದುಗೆಡಿಸುವ' (೧೪) ಮಾಯೆಯನ್ನು ಮುಂದೆ ಬಿಡುತ್ತಾನೆ. ಆದರೇನು? 'ನೆನೆವ ಮನ' ಜಾಗೃತವಿರುವಾಗ ಅದರ ಆಟ ಸಾಗುವುದೆ?

'ಜಗವ ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ;
ನಿನ್ನ ಸುತ್ತಿಪ್ಪುದು ಎನ್ನ ಮನ, ನೋಡಯ್ಯಾ!
ನೀನು ಜಗಕ್ಕೆ ಬಲ್ಲಿದನು; ಆನು ನಿನಗೆ ಬಲ್ಲಿದನು, ಕಂಡಯ್ಯಾ;
ಕರಿಯು ಕನ್ನಡಿಯೊಳಡಗಿದಂತಯ್ಯ,
ಎನ್ನೊಳಗೆ ನೀನಡಗಿದೆ, ಕೂಡಲಸಂಗಮದೇವಾ!'(೯೦೩)

ಮನಕ್ಕೆ ಈ ಮಹಾದ್ಭುತ ಶಕ್ತಿ ಸುಮ್ಮನೆ ದೊರಕುವುದೆ? ದೊರಕಿದ ಶಕ್ತಿಯೂ ಆವಾಗಲೂ ಎಚ್ಚರವಿದ್ದು ಕಾಯ್ದುಕೊಳ್ಳದಿದ್ದರೆ ಉಳಿಯುವುದೆ?

'ಹಂಜರ ಬಲ್ಲಿತ್ತೆಂದು ಅಂಜದೆ ಓದುವ ಗಿಳಿಯೇ,
ಎಂದೆಂದೂ ಅಳಿಯೆನೆಂದು ಗುಡಿಗಟ್ಟಿದೆಯಲ್ಲಾ!
ನಿನ್ನ ಮನದಲ್ಲಿ ಮಾಯಾಮಂಜರ ಕೊಲುವರೆ
ನಿನ್ನ ಹಂಜರ ಕಾವುದೆ, ಕೂಡಲಸಂಗಮದೇವನಲ್ಲದೆ?' (೧೬೩)

ಪಂಜರದ ಒಳಗೇ ಮಂಜರವಿದೆ! ಎಚ್ಚರಿಕೆ? ಕುಂಡಲಿನೀ ಶಕ್ತಿಯಾಗಿ ಮನವೇ ಬರಿಯ ವಿಷಸರ್ಪವಾಗಿ ಕಚ್ಚಿಲೂಬಹುದು:

ಮನವೇ ಸರ್ಪ, ತನುವೇ ಹೇಳಿಗೆ;
ಹಾವಿನೊಡತಣ ಹುದುವಾಳಿಗೆ!
ಇನ್ನಾವಾಗ ಕೊಂದಹುದೆಂದರಿಯೆ,
ಇನ್ನಾವಾಗ ತಿಂದಹುದೆಂದರಿಯೆ!
ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲೊಡೆ ಅದೇ ಗಾರುಡ,
ಕೂಡಲಸಂಗಮದೇವಾ. (೧೬೦)

ಈ ಗಾರುಡ ನಿನ್ನದಾಗಿರಲಿ. ಬರಿಯ ಮನ ಸರ್ಪ, 'ನೆನೆವ ಮನ' ಗರುಡ ಗಾರುಡ ಇದನರಿ. ಇದ ಮರೆತರೆ ಸರ್ಪ ಕಚ್ಚುವುದು, ಯಾವಾಗ ಎಂಬೆಯಾ? 'ಇನ್ನಾವಾಗ ಎಂದರಿಯೆ!' ಮೈಮರೆಸಿ ಕಚ್ಚುವ ಸರ್ಪವಿದು. ಆದುದರಿಂದ ಸದಾ ಜಾಗರೂಕನಾಗಿರು. ಅನವರತ ಎಚ್ಚರವಾಗಿರುವುದೇ ಇದಕ್ಕೆ ನೀನು ತೆರಬೇಕಾದ ಸುಂಕ ಕುಡಿಸಬೇಕಾದ ಹಾಲು.

ಮನ ಹಾವು ಮಾತ್ರವಲ್ಲ, 'ಕೊಂಬಿನ ಮೇಲಣ ಮರ್ಕಟ,' (೩೨) ಒಳಗೆ ಹುಳು ತುಂಬಿರುವ 'ಅತ್ತಿಯ ಹಣ್ಣು' (೨೯) 'ಚಿತ್ತರಟ್ಟೆಯ ಕಾಯಿ,' (೨೮) 'ನಿಧಾನವನೊಲ್ಲದೆ

ಓಲಗ ಮೆಚ್ಚುವ – ನಾರಿವಾಣವ ಮೆಚ್ಚದ ನಾಯಕ,; (೩೧) 'ತನ್ನ ವಿಚಾರಿಸಲೊಲ್ಲದ ಇದಿರ ವಿಚಾರಿಸ ಹೋಹ' (೩೮) ಹಟಮಾರಿ; (ತನ್ನಿಚ್ಚೆಯ ನುಡಿದರೆ ಮೆಚ್ಚುವ ಇದಿರಿಚ್ಚೆಯ ನುಡಿದರೆ ಮೆಚ್ಚದ (೩೯) ಮೆಚ್ಚು; 'ಗತಿಗೆಡಿಸುವ, ಮತಿಗೆಡಿಸುವ' (೪೯) ಬೆಂದ ಮನ; ಎಲ್ಲಕ್ಕಿಂತ ಹೆಚ್ಚಾಗಿ ಕಂದೊಡೆ ಮುನ್ನಿನ ಸ್ವಭಾವವ ಬಿಡದ ಸೊಣಗ:

'ಅಂದಣವನೇರಿದ ಸೊಣಗನಂತೆ ಕಂಡೊಡೆ ಬಿಡದು ಮುನ್ನಿನ
ಸ್ವಭಾವವನು!
ಸುಡು! ಸುಡು!! ಮನವಿದು ವಿಷಯಕ್ಕೆ ಹರಿವುದು;
ಮೃಡ, ನಿಮ್ಮನನುದಿನ ನೆನೆಯಲೀಯದು!
ಎನ್ನೊಡೆಯ ಕೂಡಲಸಂಗಮದೇವಾ,
ನಿಮ್ಮ ಚರಣವ ನೆನೆವಂತೆ ಕರುಣಿಸು,
ಸೆರಗೊಡ್ಡಿ ಬೇಡುವೆ, ನಿಮ್ಮ ಧರ್ಮ!' (೩೪)

ಮನದ ಮಹೌದಾತ್ಯವನ್ನು ಕಂಡು ಬಸವಣ್ಣನವರೇ ಅದರ ಕರಾಳರೂಪವನ್ನೂ ಕಾಣದಿರಲಿಲ್ಲ. ಅದರ ದೌರ್ಬಲ್ಯಗಳನ್ನು ಅರಿತರೆಂದೇ ಅದರ ಭೂರಿ ಬಲವನ್ನರಿಯಲು ಸಮರ್ಥರಾಗಿದ್ದಾರೆ. ಇನ್ನೂ ಒಂದು ಸೊಗಸು: ಅದರ ದುರ್ಬಲತೆ ಸಬಲತೆಗಳು ಸಿದ್ಧವಾದವುಗಳಲ್ಲ. ಉನ್ನತಿಯಿಂದ – ಅಂದಣದಿಂದ ಅವನತಿಗೆ ಕಟುಕರಂಗಡಿಗೆ ಎರಗುವ ಸ್ವಭಾವವುಳ್ಳ ಅದೇ ಅವನತಿಯಿಂದ – ಸೊಣಗತನದಿಂದ ಉನ್ನತಿಗೆ – ತಿಳಿವಿನ ಗಿಳಿತನಕ್ಕೇರುವ ಸ್ವಭಾವವುಳ್ಳುದೂ ಆಗಿದೆ. ಅದು ಅಧೋಗತಿ ಗೆಳೆಯದಂತೆ, ಉನ್ನತಿಗೆ ಒಯ್ಯುವಂತೆ ಮಾಡುವ ಉಪಾಯವಾವುದು? ಮನವನ್ನು 'ನೆನೆವ ಮನ'ವನ್ನಾಗಿ ಮಾಡುವುದು 'ಕೂಡಲಸಂಗನ ಚರಣವ ನೆನೆವ ಮನವನ್ನಾಗಿ ಮಾಡುವುದು.

'ಒಂದು ಮೊಲಕ್ಕೆ ನಾಯನೊಂಬತ್ತ ಬಿಟ್ಟಂತೆ
ಎನ್ನ ಬಿಡು, ತನ್ನ ಬಿಡೆಂಬುದು ಕಾಯವಿಕಾರ;
ಎನ್ನ ಬಿಡು, ತನ್ನ ಬಿಡೆಂಬುದು ಮನೋವಿಕಾರ;
ಕರಣೇಂದ್ರಿಯಂಗಳೆಂಬ ಸೊಣಗ ಮುಟ್ಟದ ಮುನ್ನ
ಮನ ನಿಮ್ಮನೆಯ್ದುವುದೇ, ಕೂಡಲಸಂಗಮದೇವಾ?' (೩೬)

ಮನದ ಸೊಣಗಕ್ಕೆ ಸಹಾಯಕವಾಗಿ ಕರಣೇಂದ್ರಿಯಂಗಳೆಂಬ ಸೊಣಗಗಳೂ ಬಂದು ಕೂಡಿಕೊಳ್ಳುತ್ತವೆ. 'ನಯಿತನ' (೩೫)ಕ್ಕೆ ನಾಯಿತನದ ನೆರವು ಸಿಕ್ಕುತ್ತದೆ. ದಿಕ್ಕೆಡುವ ಸನ್ನಿವೇಶವಿದು. ಆದರೂ ಭಯಬೇಡ – ಇವುಗಳತ್ತ ಹರಿವ ಮನವನ್ನು ಸಂಗನತ್ತ ಹರಿಸಿದರೆ ಸಾಕು. ಇವುಗಳನ್ನು ನೆನೆವ ಮನ ಅವನ ನೆನೆವ ಮನವಾದರೆ ತೀರಿತು.

'ವಿಕಳನಾದೆನು ಪಂಚೇಂದ್ರಿಯ ಧಾತುವಿನಿಂದ;
ಮತಿಗೆಟ್ಟೆನು ಮನದ ವಿಕಾರದಿಂದ:
ಧೃತಿಗೆಟ್ಟೆನು ಕಾಯವಿಕಾರದಿಂದ
ಶರಣುವೊಕ್ಕೆನು, ಕೂಡಲಸಂಗಮದೇವಯ್ಯಾ.' (೪೩)

ಈ ಶರಣಾಗತಿ ಏಕಮುಖೀಯ ಸಮರ್ಪಣ ಮಾತ್ರವಲ್ಲ – ದ್ವಿಮುಖಿಯ ಸ್ವೀಕರಣ ಮತ್ತು ಸಮರ್ಪಣ; ಜೀವಿಯಲ್ಲಿ ದೇವ, ದೇವನಲ್ಲಿ ಜೀವಿ ಲೀನವಾಗುವ ಲೀಲೆ. ಎನ್ನೊಳಗೆ ನೀನು ಪ್ರವೇಶ, ನಿನ್ನೊಳಗೆ ನಾನು ಪ್ರವೇಶ (ಉರಿಲಿಂಗ ಪೆದ್ದಿ) ಹೇಗೆ?

'ವಚನದಲ್ಲಿ ನಿಮ್ಮ ನಾಮಾಮೃತ ತುಂಬಿ,
ನಯನದಲ್ಲಿ ನಿಮ್ಮ ಮೂರುತಿ ತುಂಬಿ,
ಮನದಲ್ಲಿ ನಿಮ್ಮ ನೆನಹು ತುಂಬಿ,
ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ
ಕೂಡಲಸಂಗಮದೇವಾ
ನಿಮ್ಮ ಚರಣಕಮಲದಲಾನು ತುಂಬಿ!' (೪೯೨)

ಮೊದಲು ಸಂಗನನ್ನು ಇಂಗಿಸಿಕೋ ಮಾತಿನಲ್ಲಿ, ನಯನದಲ್ಲಿ, ಕಿವಿಯಲ್ಲಿ, ಮನದಲ್ಲಿ; ಆ ಮೇಲೆ ನಿನಗೆ ಅವನಡಿಗಳಲ್ಲಿ ಎಡೆ ಪಡೆವ ಅರ್ಹತೆ ದೊರೆಯುತ್ತದೆ; ತನ್ನಲ್ಲಿ ಸಂಗನ ನೆನಹು ತುಂಬಿಕೊಂಡ ಮನ ನಿನ್ನನ್ನೇ ಅವನ ಅಡಿದಾವರೆಯಲ್ಲಿ ತುಂಬಿಸಲು ಶಕ್ತವಾಗುತ್ತದೆ. 'ನೆನವ ಮನ'ದ ಘನತೆಯೆನಿತು!

'ಎನಗೆ ನಿಮ್ಮ ನೆನಹಾದಾಗಲೆ ಉದಯ;
ಎನಗೆ ನಿಮ್ಮ ಮರಹಾದಾಗಲೆ ಅಸ್ತಮಾನ!
ಎನಗೆ ನಿಮ್ಮ ನೆನಹವೆ ಜೀವನ;
ಎನಗೆ ನಿಮ್ಮ ನೆನಹವೆ ಪ್ರಾಣ, ಕಾಣಾ, ತಂದೇ, ಸ್ವಾಮಿ!
ವದನದಲ್ಲಿ ಷಡಕ್ಷರಿಯ ಒರೆಯಯ್ಯ – ಕೂಡಲಸಂಗಮದೇವಾ!'
(೪೯೯)

ಯಾರಾದರಾಗಲಿ, ಅವರು ನಮ್ಮ ನೆನೆಪಿನಲ್ಲಿರುವಾಗ ನಮಗೆ ಎಷ್ಟು ಹತ್ತಿರಕ್ಕೆ ಹತ್ತಿರವಾಗಿರುತ್ತಾರೆ. ಮರೆತಾಗ ಎಷ್ಟು ಜ್ಯೋತಿವರ್ಷಗಳಷ್ಟು ದೂರವಾಗಿ ಬಿಡುತ್ತಾರೆ? ಸಂಗನು ನೆನಪಿನಲ್ಲಿದ್ದಾಗ ಈ ಮನ ಸಂಗನ ಮನ; ಅವನನ್ನು ಮರೆತಾಗ ಈ ಮನ ಮನುಜನ ಮನ! ಹೃದಯದಲ್ಲಿ ಅವನ ಚರಣದುಂಡಿಗೆ ಒತ್ತಿರುವಾಗ, ವದನದಲ್ಲಿ

ಷಡಕ್ಷರಿ ಬರೆದಾಗ ಅವನು ಮರೆದ ಮನುಜನಲ್ಲ. ಅರಿದ ಶರಣ. ಆದುದರಿಂದರಿಂದಲೇ ಎನಗೆ ನಿಮ್ಮ ನೆನಹಾದಾಗಲೆ ಉದಯ, ಮರಹಾದಾಗಲೆ ಅಸ್ತಮಾನ! ನಿಮ್ಮ ನೆನಹವೇ ಜೀವನ, ಪ್ರಾಣ!

ಇದು ಅಳವಡಲು ತನ್ನ ಹಂಬಲ – ಹಾರೈಕೆ, ಶಿವನೊಲವು, ಶರಣರ ಸಂಗ ಇವು ಮೂರೂ ಮುಪ್ಪುರಿಯಾಗಿ ಸೇರಬೇಕು:

'ಕಾಯ ವಿಕಾರ ಕಾಡಿಹುದಯ್ಯಾ;
ಮನೋವಿಕಾರ ಕೂಡಿಹುದಯ್ಯಾ;
ಇಂದ್ರಿಯ ವಿಕಾರ ಸುಳಿವುದಯ್ಯಾ!
ಸುಳಿವಿನೊಳಗೆ ಸುಳಿಯುತ್ತಲಿದ್ದೇನೆ : ಸಿಲುಕಿಸದಿರಯ್ಯಾ!
ಅನ್ಯಚಿತ್ತವಿರಸದಿರಯ್ಯಾ ನಿಮ್ಮ ಚಿತ್ತವಿರಿಸಯ್ಯಾ!
ಅನುಪಮ ಸುಖಸಾರಾಯ ಶರಣದಲ್ಲಿ
ಕೂಡಲಸಂಗಮದೇವಯ್ಯಾ, ಇದನೆ ಬೇಡುವೆನಯ್ಯಾ!' (೪೮)

ತನ್ನ ಚಿತ್ತ ಅವನ ಚಿತ್ತವಾಗಬೇಕೆಂಬ ಸಾಧಕನ ಹಂಬಲ, ಶಿವನೊಲುಮೆಯಿಲ್ಲದೆ ಅದು ಸಾಧಿಸದೆಂಬ ಅರಿವು. ಶರಣರ ಸಂಗವೂ ಈ ಸಾಧನೆಗೆ ಅನಿವಾರ್ಯವೆಂಬ ಎಚ್ಚರ. ಈ ಮೂರರ ತ್ರಿವೇಣೀ ಸಂಗಮ ಈ ವಚನ. 'ಕೂಡಲಸಂಗಮ ದೇವ ಕೊಂಬ ಹಿಡಿದೆತ್ತುವನ್ನಕ್ಕ ಕೆಸರಲ್ಲಿ ಬಿದ್ದ ಪಶುವಿನಂತೆ ಬಾಯಬಿಡುತ್ತಿರುವುದು,' (೫೨) 'ಕೂಡಲಸಂಗ ಬಾಳುಬಾಳೆಂಬಕ್ಕ ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ ಅಂಬೇ, ಅಂಬೇ ಎಂದು ಕರೆಯುತ್ತಿರುವುದು, ಒರಲುತ್ತಿರುವುದ,' (೫೫) ಅವನು, 'ಒಳಕ್ಕೊಳ್ಳುವವರೆ ಸಮುದ್ರದೊಳಗಣ ಸಿಂಪಿನಂತೆ ಬಾಯಬಿಡುತ್ತಿರುವುದು' (೫೫) ಅಯ್ಯಾ, ಅಯ್ಯಾ ಎಂದು ಕರೆಯುತ್ತಿರುವುದು. ಒರಲುತ್ತಿರುವುದು, ಓ ಎನ್ನಲಾಗದೇ, ಅಯ್ಯಾ ಎಂದು ಆಗಳೂ ಕರೆಯುತ್ತಿರುವುದು' (೫೬) ಸಾಧಕನ ಹಾತೊರೆವ ಒಳಗಿನ ಹಾರೈಕೆಯಾದರೆ,

'ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ, ಪರಲೋಕ ದೂರನ?
ಎನಗಾಗಿ ಮತ್ತೊಂದು ತರುಮರನಿಲ್ಲವೆ?
ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ;
ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ'
(೬೨)]
'ನೀನಿಲೊದರೆ ಕೊರಡು ಕೊನರುವುದಯ್ಯ,
ನೀನೊಲಿದರೆ ಬರಡು ಹಯನಹುದಯ್ಯಾ' (೬೬)

'ಮೇರುಗುಣವನರಸುವುದೆ ಕಾಗೆಯಲ್ಲಿ, ಪರುಷ
ಗುಣವನರಸುವುದೆ ಕಬ್ಬುನದಲ್ಲಿ?
ಸರ್ವಗುಣಸಂಪನ್ನ ಲಿಂಗವೇ, ನೀನೆನ್ನಲ್ಲಿ ಅವಗುಣವ
ನರಸುವುದೇ?' (೬೭)
'ಬೆರಣಿಯನಾಯಲಲ್ಲದೆ ಅಟ್ಟುಣ್ಣಲು ತೆರಹಿಲ್ಲವೆನಗೆ!
ನೀ ಕರುಣಿಸು!' (೨೭೦)
'ಅನುದಿನ ನಿಮ್ಮ ನೆನೆಯಲು ಭಕ್ತಿಯಿಲ್ಲವಯ್ಯಾ–
ಕರುಣೀ ಕೃಪೆಮಾಡಯ್ಯಾ' (೨೮೮)
'ಕಾದಿ ಗೆಲಿಸಯ್ಯಾ, ಎನ್ನನು' (೨೯೯)
'ಉಂಡುಟ್ಟು ಕೊಟ್ಟರೆ ಮುಯ್ಯಿಗೆ ಮುಯ್ಯೆನಿಸಿತ್ತು;
ಎನಗೆ ಕೊಟ್ಟರೆ ಧರ್ಮ!' (೩೧೯)
'ಇವರೆಲ್ಲರು ತಮತಮಗೆ ಮಾಡಿ ಹಡೆದರು ಸಮ್ಯಕ್ ಪದವಿಯನು
ನಾನೇನನೂ ಅರಿಯದ ಭಕ್ತಿಯ ಬಡವಂಗೆ ಕರುಣಿಸು!' (೩೨೦)

ಇತ್ಯಾದಿಗಳು ಶಿವನ ಕರುಣೆ ಕಿರಿಣಿಸಿದರೆ ಮಾತ್ರ ಹಂಬಲ ಹಣ್ಣುವುದೆಂಬುದಕ್ಕೆ ನಿದರ್ಶನಗಳು.

ಈ ಏಕಾಂತ ಸಾಧನೆ ಲೋಕಾಂತಿಕವಾಗದೆ ಅದಕ್ಕೆ ಸಿದ್ಧಿಯಿಲ್ಲ. ಏಕಾಂತದಲ್ಲಿ ಯಾವ ಅಗ್ನಿಪರೀಕ್ಷೆಯೂ ಇಲ್ಲ. ಯಾರೊಡನೂ ಸಂಪರ್ಕವಿಲ್ಲವಾಗಿ ಯಾರೊಡನೂ ವೈರವಿಲ್ಲ, ದ್ವೇಷವಿಲ್ಲ, ಸ್ನೇಹಸಂಬಂಧವಿಲ್ಲ, ಸ್ಪರ್ಧೆಯಿಲ್ಲ, ಈರ್ಷೆಯಿಲ್ಲ! 'ಹೆಣ್ಣು ಹೊನ್ನು ಮಣ್ಣು ತೋರಿ ಟಿಂಬಕನಾಡಿಸುವ, ಟೀವಕ ಟಿಂಬಕನಾಡಿಸುವ ಮಾಯೆ' (೧೮)ಯಿಂದ ದೂರವಿದ್ದು ಅವುಗಳಿಗೆ ಒಳಗಾಗಲಿಲ್ಲವೆಂಬುದು ಅದಾವ ಮಹತಿ, ಘನತೆ; ಇವುಗಳ ಮಧ್ಯದಲ್ಲಿದ್ದೇ ಗೆದ್ದರೆ ಘನತೆ, ಒಲವು, ಸ್ನೇಹ, ಸಾತ್ವಿಕತೆ, ಸಹಕಾರಗಳಂತೆಯೇ ದ್ವೇಷ, ದೋಷ, ನಿಂದೆ, ಮೋಸಾರೋಪಣೆ, ಹಿಂಸೆ, ಹುಸಿ, ತಾಮಸಾದಿಗಳನ್ನೂ ಎದುರಿಸಿ ಅದಿರದಿರುವುದು ಎದೆಗಾರಿಕೆಗಳಲ್ಲಿ ಎದೆಗಾರಿಕೆ, ಹೆಚ್ಚುಗೆಗಳಲ್ಲಿ ಹೆಚ್ಚುಗೆ, ಆದುದರಿಂದಲೇ ಬಸವಣ್ಣನವರು ಆಚರಿಸಿದ ಸಾಧನೆ ತ್ರಿಮುಖ ಸಾಧನೆ ಇಲ್ಲಿ ಮೂರನೆಯ ಮುಖ – ಭಕ್ತಸಮೂಹದ ಮುಖಕ್ಕೇ ಮಹತ್ವ ಹೆಚ್ಚು. ಸಾಧನೆ ಸಮೂಹದಲ್ಲಿ ಸಿಕ್ಕಿ, ಅದರ ಒರೆಗಲ್ಲಿಗೆ ತಿಕ್ಕಿ, ಶುಭಾಶುಭಗಳೆರಡನ್ನೂ ಒಕ್ಕಿ, ಸ್ತುತಿ ನಿಂದೆಗಳನ್ನೂ ಮಿಕ್ಕಿ ಮೀರಿ ಮೇಲೇರಿದಾಗಲೇ ಸಿದ್ಧಿಯ ಶ್ರೀಗಿರಿಯ ಆರೋಹಣ.

'ಕಟ್ಟಿದಿರಿನಲ್ಲಿ ಶಿವಭಕ್ತನು ಕಂಡು, ದೃಷ್ಟಿಯಾಗೆ ಶರಣೆಂದೊಡೆ
ಹುಟ್ಟೇಳು ಜನ್ಮದ ಪಾಪ ಬಿಟ್ಟು ಹಿಂಗುವುದು ನೋಡಾ!

ಮುಟ್ಟಿ ಚರಣಕೆರಗಿದೊಡೆ ತನುವೊಪ್ಪಿದಂತೇ ಅಹುದು,
ಪರುಷ ಮುಟ್ಟಿದಂತೆ!
ಕರ್ತೃ ಕೂಡಲಸಂಗನ ಶರಣರ ಸಂಗವು
ಮತ್ತೆ ಭವಮಾಲೆಗೆ ಹೊದ್ದಲೀಯದು ನೋಡಾ!' (೧೪೦)

ಆದುದರಿಂದಲೇ, 'ಮತ್ತೊಂದು ಕಾಣದಂತೆ, ಮತ್ತೊಂದ ಕೇಳದಂತೆ, ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ, ಇರಿಸಯ್ಯಾ, ಕೂಡಲಸಂಗಮದೇವಾ!' (೨೭೪) 'ನಿಮ್ಮಚ್ಚ ಶರಣರ ಒಕ್ಕುದ ಮಿಕ್ಕುದನಚ್ಚಿಸು, ಮುಚ್ಚಿಸು ಕೂಡಲಸಂಗಮದೇವಾ!' (೨೬೫) 'ಕೋಟ್ಯಾನುಕೋಟಿ ಜಪವನು ಮಾಡಿ ಕೋಟಲೆಗೊಳ್ಳಲದೇಕೆ ಮನವೆ? ಕಿಂಚಿತು ಗೀತವೊಂದನಂತ ಕೋಟಿ ಜಪ! ಜಪವೆಂಬುದೇಕೆ ಮನವೆ? ಕೂಡಲಸಂಗನ ಶರಣರ ಕಂಡು, ಆಡಿ, ಹಾಡಿ, ಬದುಕು–ಮನವೇ!' (೨೭೫)

ಸಮಷ್ಟಿ–ಜೀವನ–ವಿಕಾಸಕ್ಕೆ ವ್ಯಷ್ಟಿಯೇ ಸಂಚಾಲಕ ಶಕ್ತಿಯೆಂಬುದನ್ನು ಬಸವಣ್ಣನವರು ಮರೆತಿರಲಿಲ್ಲ. ವ್ಯಕ್ತಿ ಸಮಾಜದ ಮೂಲ ಘಟಕ. ವ್ಯಕ್ತಿವ್ಯಕ್ತಿಗಳಲ್ಲಿಯ ಅಂತಶ್ಶಕ್ತಿ ವಿಕಸಿತವಾಗದೆ ಸಮಾಜದ ವಿಕಾಸ ಅಶಕ್ಯವೇ ಸರಿ. ಆದುದರಿಂದಲೇ, 'ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ; ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ! ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ, ಕೂಡಲಸಂಗಮದೇವ!' (೧೨೪) ಎಂದು ಎಚ್ಚರಿಸಿದರು; 'ಪರಚಿಂತೆ ಎನಗೇಕಯ್ಯಾ? ನಮ್ಮ ಚಿಂತೆ ನಮಗೆ ಸಾಲದೆ?' ಕೂಡಲಸಂಗಯ್ಯ ಒಲಿದಾನೊ, ಒಲಿಯನೊ ಎಂಬ ಚಿಂತೆ ಹಾಸಲುಂಟು, ಹೊದೆಯಲುಂಟು. (೫೨೦) ಎಂದು ಉದ್ಗರಿಸಿದರು. ಇದು ವೈಯಕ್ತಿಕ ಸಾಧನೆಗೆ ಸಲ್ಲಬೇಕಾದ ಪ್ರಾಥಮಿಕತೆ, ವ್ಯಕ್ತಿ ವ್ಯಕ್ತಿಯ ತನು–ಮನಗಳ ಸಾಂತ್ವನದಿಂದ – ಶಾಂತ ತನುವಿನಲ್ಲಿಯೇ ಶಾಂತ ಮನ ತಾನೆ? ಶಾಂತ ಮನದಿಂದಲೇ ಶಾಂತ ತನು ತಾನೆ? – ಸಂಗನನ್ನೊಲಿಸುವ ನಿರಂತರ ಚಿಂತೆಯಿಂದ ಪಡೆಯಬೇಕಾದ ಮೂಲ ಸಿದ್ಧತೆಗೆ ಸಲ್ಲಬೇಕಾದ ಪ್ರಾಧಾನ್ಯ. ಆದರೆ ವ್ಯಕ್ತಿಯ ವ್ಯಕ್ತಿತ್ವಕ್ಕೆ ಸಮಾಜವೇ ಸಾಣೆ! ವೈಯಕ್ತಿಕವಾಗಿ ಬಂಧಕವೆನಿಸುವುದೇನಿದ್ದರೂ ಸಾಮೂಹಿಕ ಸಾಧನಕ್ರಮದಲ್ಲದು ಕ್ರತುಶಕ್ತಿಯಾಗಿ ಮಾರ್ಪಡುವುದು. ಕರ್ಮ ಮೀಮಾಂಸೆಯನ್ನೇ ಕೈಗೆತ್ತಿಕೊಳ್ಳೋಣ. ಬಿತ್ತಿನಂತೆ ಬಿತ್ತಿದಂತೆ ಬೆಳೆಯೆಂಬ ನಂಬಿಕೆಯ ಮೇಲೆ ನಿಂತಿದೆ ಇದು. ಹೋದ ಜನ್ಮದಲ್ಲಿ ಮಾಡಿದ ಕರ್ಮದಂತೆ ಈ ಜನ್ಮದಲ್ಲಿ ಫಲ–ಶುಭಾಶುಭ ಫಲ – ಅನುಭವಿಸಲೇಬೇಕು; ಇದರಿಂದ ಬಿಡುಗಡೆಯಿಲ್ಲವೆಂಬುದಿದರ ಸಾರ. ಇತ್ತೋ ಇಲ್ಲವೋ ಖಚಿತವಾಗಿ ಹೇಳಲಗದ ಪೂರ್ವಜನ್ಮವೊಂದರ ಪೂರ್ವಭಾವನೆ – ಅನುಮತಿ (Presumption)ಯ ಮೇಲೆ ಮತ್ತು ಒಬ್ಬನ ಕರ್ಮದ ಹೊಣೆ ಪೂರ್ಣವಾಗಿ ಅವನದೇ – ಅವನ ಸುತ್ತು ಮುತ್ತು ಬದುಕಿದ, ಅವನಿಗೆ ತಿಳಿದೋ ತಿಳಿಯದೆಯೋ, ಬೇಕಾಗಿಯೋ ಬೇಡವಾಗಿಯೋ ಆ

ಕರ್ಮವನ್ನು ಮಾಡಹಚ್ಚಿದ ಇತರರದು ಎಷ್ಟೂ ಅಲ್ಲ – ಎಂಬ ಪೂರ್ವಗ್ರಹಿಕೆಯ ಮೇಲೆ ಈ ವಾದ ಆಧರಿತವಾಗಿದೆ. ವಿಚಾರಿಸಿ ನೋಡಿದರೆ ಜನ್ಮದಿಂದ ಜನ್ಮಕ ಹೋಗುವ ಈ ಕರ್ಮದ ಜಮಾ – ಖರ್ಚಿನ ವಾದ ಚರ್ಚಾಸ್ಪದವಾದುದು – ಅಂತಿಮ ಸಿದ್ಧಾಂತಹ ಹಂತಕ್ಕೆ ವೈಜ್ಞಾನಿಕವಾಗಿ ತಲುಪಿಲ್ಲ. ಅಲ್ಲದೆ, ವ್ಯಕ್ತಿ ಮಾಡುವಕರ್ಮದ ಹೊಣೆಯೆಲ್ಲ ಸಂಪೂರ್ಣವಾಗಿ ಅವನದೇ ಅಲ್ಲ, ಅವನು ಹುಟ್ಟಿದ ಕುಟುಂಬ, ಬೆಳೆದ ಪರಿಸರ, ಒಡನಾಡಿದ ಜನರು, ಒಪ್ಪಿದ ಧರ್ಮ, ಓದಿದ ಹೊತ್ತಗೆಗಳು, ಸಿಕ್ಕಿದ ಕೆಲಸ, ಕೇಳಿದ ಸುದ್ದಿಗಳು – ಇನ್ನೂ ಏನೇನೋ ಸೇರಿ ಅವನ ಕರ್ಮವನ್ನು ರೂಪಿಸುತ್ತವೆ. ಇದಕ್ಕೆ ಅವನೊಬ್ಬನೇ ಹೇಗೆ ಹೊಣೆಗಾರನಾಗುತ್ತಾನೆ? ವಿಶಾಲಾರ್ಥದಲ್ಲಿ ಓರ್ವನ ಕರ್ಮಕ್ಕೆ ಸರ್ವರೂ ಸ್ವಲ್ಪಿಲ್ಲ ಸ್ವಲ್ಪು ಹೊಣೆಗಾರರಾಗುತ್ತಾರೆ. ಹೀಗಿದ್ದು ಆ ಒಬ್ಬನನ್ನೇ ಆ ಕರ್ಮದ ಫಲಕ್ಕೆ ಬಾಧ್ಯನನ್ನಾಗಿ ಮಾಡುವುದು ಯಾವ ನ್ಯಾಯ? ಆ ಕರ್ಮ ಅವಾಂಛನೀಯವೆಂದಾದರೆ ಅದರ ಅಸ್ತಿತ್ವವೇ ಉಳಿಯದಂತೆ ಸಾಮೂಹಿಕ ವ್ಯವಸ್ಥೆಯಾಗಬೇಕು; ಸಾಮಾಜಿಕ ಪರಿವರ್ತನೆಯಾಗಬೇಕು. ಎಲ್ಲರೂ ಸೇರಿ ಇದನ್ನು ಮಾಡಿದಾಗ ಆ ಕರ್ಮವೇ ತೊಡೆದು, ತೊಳೆದು ಹೋಗುತ್ತದೆ; ಅದರೊಡನೆ ಅದರ ಫಲವೂ ಹೋಗುತ್ತದೆ ಬಸವಣ್ಣನವರು ಸಮುದಾಯ ಸಾಧನೆಯನ್ನು ನೋಡಿದುದು ಈ ದೃಷ್ಟಿಯಿಂದ; ಶರಣರ ಸಂಗಕ್ಕೆ ಮಹತ್ವವಿತ್ತುದು ಈ ಅರ್ಥದಲ್ಲಿ 'ಆಸತ್ತೆನಲಸಿದೆನೆಂದೊಡೆ ಮಾಣದು. ಬೇಸತ್ತೆ ಬೆಂಬಿದ್ದೆನೆಂದೊಡೆ ಮಾಣದು; ಏವೆನೇವೆನೆಂದೊಡೆ ಮಾಣದು – ಕಾಯದ ಕರ್ಮದ ಫಲಭೋಗವು! ಕೂಡಲಸಂಗನ ಶರಣರು ಬಂದು – 'ಹೋ, ಹೋ, ಅಂಜದಿರೆಂದೊಡಾನು ಬದುಕುವೆನು.' (೧೯) ಶರಣರು ಬದುಕಿಸುವ ಬಗೆಯೇ ಬೇರೆ. ಅವರು ಬರದಿದ್ದಕ್ಕೆ ಏನು ಮಾಡುವುದು? 'ದಾಸಿಯ ವರ್ಗದಲ್ಲಿಪ್ಪೆನು ಶಿವಶರಣರ ಮನೆಯಲ್ಲಿ; ಅವರೊಕ್ಕುದನುಂಡು, ಮಿಕ್ಕುದ ಕಾಯ್ದುಕೊಂಡಿಪ್ಪ ಕಾರಣ ಕಾಲ ಮುಟ್ಟಲಮ್ಮವು; ಕಲ್ಪಿತ ತೊಡೆಯಿತ್ತು; ಎನ್ನ ಭವಬಂಧನ ಹಿಂಗಿತ್ತು; ಕರ್ಮನಿರ್ಮಳವಾಯಿತ್ತು.' (೪೭೨)

'ಆರಾರ ಸಂಗವೇನೇನ ಮಾಡದಿಯ್ಯಾ?
ಕೀಡಿ ಕುಂಡಲಿಗನಾಗದೆ ಅಯ್ಯಾ?
ಚಂದನದ ಸನ್ನಿಧಿಯಲಿ ಪರಿಮಳ ತಾಗಿ
ಬೇವು ಬೊಬ್ಬುಳಿ ತಱಗೆಲೆಯು ಗಂಧಂಗಳಾಗವೆ?
ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ
ಕರ್ಮ ನಿರ್ಮಳಗಾಗದಿಹುದೆ?' (೧೪೧)

ಶರಣ ಸನ್ನಿಧಿ ಚಂದನದ ಸನ್ನಿಧಿಯಂತೆ, ಚಂದನದ ಪ್ರಭಾವಕ್ಕೆ ಒಳಗಾದ ಬೇವು ಬೊಬ್ಬುಳಿಗೂ ಸುಗಂಧಿತವಾಗುವಂತೆ, ಶರಣಸಂಗಕ್ಕೆ ಸೇರಿದವನ ಕರ್ಮವೂ ನಿರ್ಮಳವಾಗುತ್ತದೆ, ಸದ್ಧರ್ಮವಾಗುತ್ತದೆ, ಇದು ಒಬ್ಬನ ಹೋರಾಟಕ್ಕೆ ಎಲ್ಲರ ನೆರವಿನ ವರವನ್ನು ದೊರಕಿಸಿದ ದಾರಿ.

'ಕರ್ಮವೆಂಬ ಅಂಕದೊಡನೆ ತೊಡರಿದೆ!
ಬಿನ್ನಪವನವಧಾರು – ನಿಮ್ಮಾಳಿನ ಭಾಷೆಯ;
ಕಡೆಗಳಕ್ಕೆ ನೂಂಕುವೆ, ಕೆಡಹುವೆನಂಕವ.
ಕರೆದರೋ ಎನಿಸಿದರೆ ನಿಮ್ಮಾಳಲ್ಲಾ!
ಶಿವಶರಣೆಂಬ ದಂಡೆಯ ಹೂಡಿ
ಗಣ–ಮೇಳಾಪವೆಂಬಲಗಿನಿಂದಿರಿವೆ – ಕೂಡಲಸಂಗಮದೇವಾ!'

(೬೯)

'ಶಿವಶರಣೆಂ'ಬ ವೈಯಕ್ತಿಕ ಸಾಧನೆ–ದಂಡೆ–ಗೆ 'ಗಣಮೇಳಾಪ'ವೆಂಬ ಅಲಗಿನ ನೆರವು! ಕರ್ಮವೆಂಬ ಅಂಕವನ್ನು ಕಡೆಗಳಿಕ್ಕೆ ನೂಂಕುವುದೇನಚ್ಚರಿ? 'ಶರಣ'ರೊಡನೆ ಶ್ರವವ ಮಾಡಿ ಮಾಱುಗೋಲ ಬಿಡುವೆನಯ್ಯಾ! (೭೦೨) ಈ ಮಾರುಗೋಲು ಹುಸಿಯಾದರೂ ಇನ್ನೊಂದು ಪಾಶುಪತಾಸ್ತ್ರವಿದೆ:

'ಪಂಡಿತನಾಗಲಿ, ಮೂರ್ಖನಾಗಲಿ, ಸಂಚಿತಕರ್ಮ ಉಂಡಲ್ಲದೆ ಬಿಡದು,
ಪ್ರಾರಬ್ಧ ಕರ್ಮ ಭೋಗಿಸಿದಲ್ಲದೆ
ಹೋಗದೆಂದು ಶ್ರುತಿಸಾರುತ್ತೈದಾವೆ ನೋಡಾ.
ತಾನಾವ ಲೋಕದೊಳಗಿದ್ದರೆಯೂ ಬಿಡದು!
ಕರ್ಮಫಲಗೂಡಿ ಕೂಡಲಸಂಗಮದೇವಂಗೆ
ಆತ್ಮನೈವೇದ್ಯವ ಮಾಡಿದವನೆ ಧನ್ಯ!' (೭೭೩)

ಸಾಮಾಜಿಕ ಪರಿವರ್ತನೆ ಸಾಧ್ಯ. 'ಗಣಮೇಳಾಪ' ಸಾಧನವದಕ್ಕೆ, ಅದನ್ನು ಸಾದಿಸಬೇಕು. ಅದು ಸಾಧ್ಯವಾಗುವುದು ಒಟ್ಟು ಸಮುದಾಯದ ನಿಷ್ಠೆ, ಶ್ರಮ, ಹೋರಾಟಗಳನ್ನು ಅವಲಂಬಿಸಿದೆ. ಇದು ಒದಗಿ, ಸಾಮಾಜಿಕ ಕ್ರಾಂತಿಯಾಗಿ, ಕರ್ಮದ ಕಂತೆಗೆ ಬುಡವೇ ಇಲ್ಲದಂತಾದರಂತೂ ಸರಿಯೆ. ಆಗದಿದ್ದರೂ ವ್ಯಕ್ತಿಲಬ್ಧ ಉಪಾಯವೊಂದಿದೆ. ಅದೆ ಆತ್ಮನೈವೇದ್ಯವ ಮಾಡಿ ನಿರ್ಬಧ್ಧನಾಗುವ, ಶುದ್ಧ ನಾಗುವ, ಸಿದ್ಧನಾಗುವ ಉಪಾಯ. ಹಿಂದಣ ಜನ್ಮದ ದಂದುಗವನ್ನು ಬಿಡು; ಈ ಜನ್ಮವನ್ನು ನಂಬಿ ಹಿಡಿ! ಹಿಂದೆ ನೀನೇನಾಗಿ ಹುಟ್ಟಿದ್ದೆ, ಯಾವ ಯಾವ ಕರ್ಮ ಮಾಡಿದ್ದೆಯೆಂಬುದು ಮುಖ್ಯವಲ್ಲ; ಈ ಜನ್ಮದಲ್ಲಿ ಏನು ಮಾಡುತ್ತಿದೆಯೆಂಬುದು ಮುಖ್ಯ.

'ಹೊಯ್ದರೆ ಹೊಯ್ಗಳು ಕಯ್ಯಮೇಲೆ;
ಬಯ್ದರೆ ಬಯ್ಗಳು ಕಯ್ಯಮೇಲೆ;
ಹಿಂದಣ ಜನನವೇನಾದೊಡಾಗಲಿ

ಇಂದಿನ ಭೋಗವು ಕಯ್ಯ ಮೇಲೆ;
ಕೂಡಲಸಂಗಮದೇವಯ್ಯ,
ನಿಮ್ಮ ಪೂಜಿಸಿದ ಫಲ ಕಯ್ಯಮೇಲೆ,' (೧೦೦)

'ಈ ಕಯ್ಯಲೆ ಸುಖವು; ಈ ಕಯ್ಯಲೇ ದುಃಖವು!' (ಬ.ಹೆ.ವ. ೧೧೧) ಏಕಯ್ಯ ಬಂದೆ ಬಳಲುವೆ? ನೂಕಾಚೆ ಈ ಕಗ್ಗ ಕಂತೆಗಳನ್ನು, ಅಂತೆಯೆ ಬೆಂತರಗಳನ್ನು, ಜೊಂಕು ಶಂಕೆಗಳನ್ನು! ಆಲಿಸು ಈ ಚೈತನ್ಯದಾಯಕ ಸಂದೇಶವನ್ನು!

'ಸುಖ ಬಂದರೆ ಪುಣ್ಯದ ಫಲವೆನ್ನನು;
ದುಃಖ ಬಂದರೆ ಪಾಪದ ಫಲವೆನ್ನನು;
ನೀ ಮಾಡಿದೊಡಾಯಿತ್ತೆಂದೆನ್ನನು;
ಕರ್ಮಕ್ಕೆ ಕರ್ತುವೆ ಕಡೆಯೆಂದೆನ್ನೆನು;
ಉದಾಶೀನವಿಡಿದು ಶರಣೆನ್ನೆನು;
ಕೂಡಲಸಂಗಮದೇವಾ, ನೀ ಮಾಡಿದುಪದೇಶವು ಎನಗೀ ಪರಿಯಲಿ;
ಸಂಸಾರವ ಸವೆಯೆ ಬಳಸುವೆನು!' (೬೯೪)

ಸಂಸಾರ ಸಂನ್ಯಾಸಕ್ಕಿಂತ ಗೌಣವಾದುದೇನಲ್ಲ; 'ತೋಱವೆಱ'ಕ್ಕಿಂತ 'ಮನೆಯ' ಕೀಳವಾದುದೇನಲ್ಲ. ತಿರುವಳ್ಳುವರು 'ಇಲ್ಲಾ ನೆನ್ಪಾನ್ ಇಯಲ್ಬುಡ್ಯೆಯ ಮೂವರ್‌ಕ್ಕುಮ್‌ನಲ್ಲಾ ನಿನ್ನ ದುಣ್ಯೆ – ಮನೆಬಾಳ್ವ (ಸಂಸಾರಿ)ನೆಂಬುವನು ತಮ್ಮ ನೆಲೆದಿನ್ನುಳಿದ ಮೂವರಿಗೂ ಸನ್ಮಾರ್ಗದಲ್ಲಿ ನಿಂದ ನೆರವು.' ಎಂದೂ, 'ತಮ್ಮವರು ಕೊರೆದರ್ಗೆ, ತುತ್ತಿಲ್ಲದರ್ಗೆ, ಸತ್ತರ್ಗೆ ಇವುಗಳಲ್ಲ ಮನೆಬಾಳ್ವನೆಂಬವನೆ ನೆರವು; ಎಂದೂ ಸಾರಿ ಧರ್ಮಮಾರ್ಗದಲಿ ಮನೆ ಬಾಳ್ವೆ ನಡೆಸಿದರೆ ಹೊರಮಾರ್ಗದಲ್ಲಿ ಹೋಗಿ ಪಡೆವುದೇನು?' ಎಂದು ಕೇಳಿದ್ದಾನೆ; 'ಸನ್ಮಾರ್ಗದಲ್ಲಿ ನಡೆಸಿ ಧರ್ಮಮಾರ್ಗವ ಬಿಡದೆ ನಡೆವವನ ಮನೆಬಾಳ್ವೆ ತಾಪಸರಿಗಿಂತ ಮಿಗೆ ತಾಳ್ಮೆಯುಳ್ಳದ್ದು' ಎಂದು ತೀರ್ಮಾನಿಸಿದ್ದಾನೆ: 'ಭೂಮಿಯಿರಲಿ ಬಾಳಬೇಕಾದಂತೆ ಬಾಳ್ವವನು ಸ್ವರ್ಗದಲಿ ವಾಸಿಸುವ ದೇವರಲಿ ಗಣಿಸಲ್ಪಡುವನು,' ಎಂದು ತೀರ್ಪು ಕೊಟ್ಟಿದ್ದಾನೆ. (ತಿರುಕ್ಕುಱಳ್ ಶ್ರೀ ಎಲ್. ಗುಂಡಪ್ಪನವರ ಅನುವಾದ) 'The householder is in the centre of life and society, It is a worship for him to acquire and spend wealth nobly, for the householder who struggle to become rich by good means and for good purposes is doing pracically the same this for the attainment of salvation as the anchorite does in his all when he is praying for in them we see only the different aspects of the same virtue of self-surrender and self-sacrifice prompted by the

feeling of devotion ot God and to all that is His. 'Swami Vivekanand.' ಆದುದರಿಂದ ಸಂಸಾರ ಬಸವಣ್ಣನವರ ದೃಷ್ಟಿಯಲ್ಲಿ ಸ್ವೀಕರಣೀಯವಷ್ಟೇ ಅಲ್ಲ – ಅದನ್ನುಳಿದು ಇಂದ್ರಿಯನಿಗ್ರಹ ಮಾಡುವುದೇ ತಪ್ಪು ದಾರಿ!

> 'ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವುದು ದೋಷಂಗಳು;
> ಮುಂದೆ ಬಂದು ಕಾಡುವುವು ಪಂಚೇಂದ್ರಿಯಗಳು:
> ಸತಿ ಪತಿ ರತಿ ಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು?
> ಸತಿ ಪತಿ ರತಿ ಸುಖಭೋಗೋಪಭೋಗವಿಳಾಸವ ಬಿಟ್ಟನೆ
> ಸಿಂಧುಬಲ್ಲಾಳನು?
> ನಿಮ್ಮ ಮುಟ್ಟಿ ಪರಧನ – ಪರಸತಿಯರಿಗೆಳೆಸಿದರೆ
> ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವಾ!' (೬೪೦)
> 'ಗರಿ ತೋರೆ ಗಂಡಂರೆಂಬವರ ಕಾಣೆ, ನಿರಿ ಸೋಂಕಲು ಮುನಿಯಿಲ್ಲ
> ನೋಡಯ್ಯಾ' (೧೧೨)

ಆದುದರಿಂದ, 'ಪರವಧುವನು ಮಹಾದೇವಿ'ಯೆಂದು ಕಾಣುತ್ತ ಸ್ವಸತಿಯಲ್ಲಿ ರತಿ ಸುಖವನನುಭವಿಸುವುದು ಕರಲೇಸು. ಸ್ತ್ರೀ ಪುರುಷರಿಬ್ಬರೂ ಪರಸ್ಪರ ಪೂರಕರಾಗಿ, ಒಬ್ಬರೊಬ್ಬರಿಗೆ ಪ್ರೇರಕರಾಗಿ, ತಾರಕರಾಗಿ ಹುಟ್ಟುವರೆಂಬುದನ್ನರಿತ ಬಸವಣ್ಣನವರು ಸಂಸಾರದಿಂದಲೇ ಸದ್ಗತಿ ಸಾಧಿಸುವುದಕ್ಕೆ ವಿಶೇಷ ಮಹತ್ವವನ್ನಿತ್ತರು. ಸಂಸಾರವು ಅವನ ಮದಕರಿಯೂ ಸಾಮಾನ್ಯ ಕುರಿಯೂ ಸುಲಭವಾಗಿ ನಡೆಯಬಲ್ಲ ನೇರ ದಾರಿ. ನೇರ್ಪಿನ ದಾರಿಯೆಂಬುದನ್ನು ಮನಗಾಣಿಸಿಕೊಡಲು ತಾವೇ ಮದುವೆಯಾದರು – ಒಂದಲ್ಲ ಎರಡು ಮದುವೆಯಾದರು. ಮೊದಲನೆಯ ಮದುವೆ ಬಲದೇವನ ಮಗಳಾದ ಗಂಗಾದೇವಿಯೊಡನೆ; ಎರಡನೆಯ ಮದುವೆ ಸಿಂಗಿರಾಜ ಪುರಾಣಕಾರ, ಶಿವತತ್ವ ಚಿಂತಾಮಣಿಕಾರ, ವೀರಶೈವಾಮೃತ ಪುರಾಣಕಾರರ ಅಭಿಮತದಂತೆ ಸಿದ್ಧರಸನ ಮಗಳು – ಬಸವಣ್ಣನವರೇ' ಎನ್ನ ಸತಿ ನೀಲಲೋಚನೆ ಪೃಥ್ವಿಗಗ್ಗಳ ಚೆಲುವೆ' ಎಂದು ಹೆಮ್ಮೆಯಿಂದ ಹೇಳಿಕೊಂಡ ನೀಲಲೋಚನೆಯೊಡನೆ, 'ಮಾಯಿದೇವಿ'ಯೆಂಬುವ ಜನ್ಮನಾಮವಿದ್ದಿತೋ ಏನೋ – ಹರಿಹರ ಭೀಮರು ಮಾಯಿದೇವಿಯೆಂದು ಕರೆದಿದ್ದಾರೆ.

ಸಾಂಸಾರಿಕ ಜೀವನದಲ್ಲಿ ಮಾತ್ರ ಬಸವಣ್ಣನವರು ಅದೃಷ್ಟಶಾಲಿಗಳೆಂದೇ ಹೇಳಬೆಕು. ಅದರಂತೆ ಅವರ ಅಕ್ಕ ಮತ್ತು ಸತಿಯರಿಬ್ಬರೂ ವಚನ ರಚಿಸಿದವರು – ಮೇಲ್ಮಟ್ಟದ ವಚನಗಳನ್ನು ರಚಿಸಿದವರು. ಸಿಕ್ಕಿರುವ ಅಕ್ಕನಾಗಮ್ಮನ ೧೨ ವಚನಗಳೂ, ಗಂಗಾಂಬಿಕೆಯ ೮ ವಚನಗಳೂ, ನೀಲಾಂಬಿಕೆಯ ೧೨೫ ವಚನಗಳೂ ಅಂದು ಹೆಣ್ಣುಮಕ್ಕಳಿಗೆ ಸಿಕ್ಕ ಮನ್ನಣೆಯ ಸ್ಥಾನದ ಪ್ರತೀಕ ಮಾತ್ರವಲ್ಲ. ಅವರು ಬಸವಣ್ಣನಿಗೆ ನೀಡಿರಬಹುದಾದ ಸವಿ

ಬೆಳಕುಗಳ ದ್ಯೋತಕವಾಗಿಯೂ ಮೆರೆಯುತ್ತಿವೆ. ಬಸವಣ್ಣನವರ ಮಹಾಮಣಿಹದ ಯಶಸ್ಸಿಗೆ ಇವರದೂ ಹಿರಿದಾದ ಕಾಣಿಕೆ. ಮೂರು ಮಗಮಗಿಸುವ ಹೂಗಳ ಮಧ್ಯದಲ್ಲಿ ಬಸವಣ್ಣನೆಂಬ ಹಣ್ಣು ಬಿಟ್ಟಿತು. ಅದರಲ್ಲಿ ಎರಡು ಹೂಗಳಿಂದ – ಗಂಗಾಂಬಿಕೆ ನೀಲಾಂಬಿಕೆಯರೆಂಬ ಹೂಗಳಿಂದ – ಸತೀತ್ವದ ಅನುಬಂಧ ಸುಗಂಧ ಸೂಸುತ್ತಿದ್ದಿತು; ಮೂರನೆಯ ಹೂವಿನಿಂದ –ನಾಗಲಾಂಬಿಕೆಯ ಹೂವಿನಿಂದ – ಅಕ್ಕನ ಅಕ್ಕರತೆಯ ಮಕರಂದ ತೊಟ್ಟಿಕ್ಕುತ್ತಿದ್ದಿತು. ಗಂಗಾಂಬೆ ನೀಲಾಂಬೆಯರು ಬಸವಣ್ಣನ ಒಲವಿನ ಹೊನಲಿಗೆ ಎರಡು ದಂಡೆಗಳಾಗಿದ್ದರೆ ಅಕ್ಕ ನಾಗಾಂಬೆ ಆ ಹೊನಲಿಗೆ ತಾಯಿ ಮರಳಿನಂತಿದ್ದಳು. ಈ ಮೂವರಲ್ಲಿ ಒಬ್ಬೊಬ್ಬರಿಗೂ ಒಂದೊಂದು ಮಧುರವ್ಯಕ್ತಿತ್ವವಿದೆ. (ಶರಣ ಚರಿತಾಮೃತ ; ಪು. ೧೮೩)

ಇಂಥ ಸಂಸಾರದಿಂದ ದೊರೆಯದಿದ್ದರೆ ಇನ್ನು ಯಾತರಿಂದ ದೊರೆಯುವುದು ಸ್ವಾತ್ಮೋನ್ನತಿ, ಸಕಲ ಸದ್ಗತಿಗಳು? ಬಸವಣ್ಣ ಭಕ್ತಿಭಾಂಡಾರಿಯಾಗಿ, ಮಾನವತೆಯ ಪ್ರವಾದಿಯಾಗಿ, ದೀನ ದಲಿತರ ಉದ್ಧಾರಕನಾಗಿ, ಸಾಮಾಜಿಕ ಆರ್ಥಿಕ, ಸಾಂಸ್ಕೃತಿಕ ಕ್ರಾಂತಿಯ ನೇತಾರನಾಗಿ ಮಾಡಿದ ಮಾರ್ಗದರ್ಶನವನ್ನೇ ಆದರ್ಶ ಸಂಸಾರಿಯಾಗಿಯೂ ಮಾಡಿದ್ದಾನೆ. ಪ್ರತಿಯಿಲ್ಲದ ಪತಿಯಾಗಿ, ಮೋಹವಿಲ್ಲದ ಪಿತನಾಗಿ, ತನಿವಗೆಯ ತಮ್ಮನಾಗಿ, ಮಮತೆ ಉಕ್ಕುವ ಮಾವನಾಗಿ– ಇವುಗಳನ್ನು ಮೀರಿ ವಿಶ್ವಕುಟುಂಬಿಯಾಗಿ ಎಂಥ ಮನಂಬುಗುವ ಮಾದರಿಯನ್ನು ನಮ್ಮ ಮುಂದಿರಿಸಿ ಹೋಗಿದ್ದಾರೆ! ಕೊನೆಗೆ, ಶರಣಸತಿ–ಲಿಂಗಪತಿ ಭಾವದಲ್ಲಿ ಸಂಗನಿಗೆ ಅದೆಂಥ ಅನುಪಮ ಸತಿಯಾಗಿ ಶೋಭಿಸಿದ್ದಾರೆ! ನಿಜವಾಗಿಯೂ ಅವರು 'ಸಂಸಾರದ ಸವಿಯ ಬಳಸಿ'ದರು. 'ಕಬ್ಬಿನ ಹೊರಗಣೆಲೆಯನೆ ಕುರಿಗಳೋಪಾದಿಯಲಿ ಮೋದಕವ ಮೆಲಕಿರುವುತಲ್ಪ ಸುಖಕ್ಕೆ ಸೋಲದೆ, ಕಬ್ಬಿನೊಳು ರಸವ ಭಕ್ತಿಯ ತೆರನ ತಿಳಿದು ಗಜದಂತೆ ನೆರೆ ಸವಿದರು (ಚಾಮರಸನ ಕ್ಷಮೆ ಕೋರಿ) ಹಿಂದೊಮ್ಮೆ ಅವರೇ 'ಚಂದ್ರಮನಂತೆ ಕಳೆ ಸಮನಿಸಿತ್ತೆ ನಗೆಃ ಸಂಸಾರವೆಂಬ ರಾಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ! ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು; ಇನ್ನೆಂದಿಗೆ ಮೋಕ್ಷವಹುದೋ ಕೂಡಲಸಂಗಮದೇವಾ'? (೯) ಎಂದು ಕೇಳಿದುದುಂಟು; 'ಅಕಟಕಟಾ, ಸಂಸಾರಕ್ಕಾಸತ್ತೆ,' (೧೦) 'ನಾನಾ ವರ್ಣದ ಸಂಸಾರ ಹಾವು–ಹಾವಡಿಗನ ಸ್ನೇಹದಂತೆ' (೧೨) 'ಇಂದಿಂಗೆಂತು, ನಾಳಿಂಗೆಂತು ಬಂದೊಡಲ ಹೊರೆಯ ಹೋಯಿತ್ತೆನ್ನ ಸಂಸಾರ! (೧೭) 'ಸಂಸಾರವೆಂಬ ಸರ್ಪ ಮುಟ್ಟಲು, ಪಂಚೇಂದ್ರಿಯ ವಿಷಯವೆಂಬ ವಿಷದಿಂದೆ ಆನು ಮುಂದುಗೆಟ್ಟೆನಯ್ಯಾ, ಆನು ಹೊರಳಿ ಬೀಳುತ್ತಿರ್ದೆನಯ್ಯಾ!' (೨೦) ೧ಎಂದೋ ಸಂಸಾರದ ದಂದುಗ ಹಿಂಗುವುದು?' (೨೨) ಎಂದು ಹಲುಬಿದ್ದುದು ನಿಜ. ಆದರೆ ಅವರೇ ಬಹು ಬೇಗ 'ಅಚ್ಚಿಗವೇಕಯ್ಯ ಸಂಸಾರದೊಳಗೆ? ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವುದು; ಬೇಗ ಬೇಗ ಅರ್ಚನೆ ಪೂಜನೆಯ ಮಾಡುವುದು; ಕೂಡಲಸಂಗನ ಕೂಡುವುದು (೧೭೩) ಎಂದು ತಮ್ಮನ್ನು ತಾವೇ ಎಚ್ಚರಿಸಿಕೊಂಡರು; 'ನಿಮ್ಮ ನೆನಹ ಮತಿ ಮರೆದಿರ್ದೊಡೆ ಪಾಪ ತನುವನಂಡಲೆವುದ ಮಾಣ್ಬುದೆ? ಕೂಡಲಸಂಗಯ್ಯನ

ನೆನೆದರೆ ಪಾಪ ಉರಿಗೊಡ್ಡಿದರಗಿನಂತೆ ಕರಗುವುದಯ್ಯಾ!' (೧೭೮) ಎಂಬುದನ್ನರಿತುಕೊಂಡರು; 'ಮನವೆ ನಿನ್ನ ಜನ್ಮದ ಪರಿಭವವ ಮರೆದೆಯಲ್ಲ ಮನವೆ! ಕೂಡಲಸಂಗಮದೇವರ ಬಿಡದೆ ಬೆಂಬತ್ತು, ಕಂಡಾ, ಮನವೇ!' (೨೭೬) ಎಂದು ಮನಕ್ಕೆ ತಿಳಿಹೇಳಿಕೊಂಡರು; 'ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ; ಅಂಬುಜಕೆ ಭಾನುವಿನ ಉದಯದ ಚಿಂತೆ; ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ; ಎನಗೆ ನಮ್ಮಕೂಡಲಸಂಗಮದೇವರ ನೆನೆವುದೆ ಚಿಂತೆ' (೩೬೪) 'ಸೂರ್ಯನುದಯ ತಾವರೆಗೆ ಜೀವಾಳ, ಚಂದ್ರಮನುದಯ ನೆಯ್ದಿಲಿಗೆ ಜೀವಾಳ, ಕೂಪರ ತಾವಿನಲ್ಲಿ ಕೂಟ ಜೀವಾಳ; ಒಲಿದ ತಾವಿನಲ್ಲಿ ನೋಟ ಜೀವಾಳವಯ್ಯಾ! ಕೂಡಲಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯಾ!' (೩೬೬) ಎಂಬ ಸ್ಥಿತಿಗೆ ಮುಟ್ಟಿದರು. ಅಲ್ಲಿಂದ ಮುಂದೆ ಇನ್ನೂ ಹಲವು ಮಧ್ಯದ ಅವಸ್ಥೆಗಳನ್ನು ದಾಟಿ 'ಕಣ್ಗಳು ತುಂಬಿದ ಬಳಿಕ ನೋಡಲಿಲ್ಲ; ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ; ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ; ಮನ ತುಂಬಿದ ಬಳಿಕ ನೆನೆಯಲಿಲ್ಲ ಮಹಂತ ಕೂಡಲಸಂಗಮದೇವನ' ಎಂಬ ಕೊನೆಯ ಸಿದ್ಧಿಗೆ ತಲುಪಿದರು. ಅದೇ ಕೂಡಲಸಂಗನ ಕೂಡುವ ತವಕ, ಅದೇ ನೆನೆವ ಮನ, ಅದೇ ಶರಣಸಂಗ (೮೫೨) ಸಂಸಾರವನ್ನು ಸಸಾರಗೊಳಿಸಿದುವು, ಸಂಸಾರವನ್ನು ಸದ್ಗತಿಯ ಸುಗಮ ಮಾರ್ಗವನ್ನಾಗಿಸಿದುವು; ಸಂಸಾರದಲ್ಲಿದ್ದುಕೊಂಡೇ ಕರಣತನವನ್ನು ನಡೆಯುವ ಪರಿಯನ್ನು ಪರಿಣಾಮಕಾರಿಯಾಗಿ ಪ್ರದರ್ಶಿಸಿದುವು.

ಇವುಗಳಲ್ಲಿ ಸದ್ಭಕ್ತಸಂಗಕ್ಕಿತ್ತ ಮಹತ್ವದ ಸ್ಥಾನ ಬಸವಣ್ಣನವರ ಮಾನವನ ಮೇಲ್ಮೆಯ ಪರಿಕಲ್ಪನೆಗೆ ಅನುಗುಣವಾಗಿಯೇ ಇದೆ. ಈ ಪರಿಕಲ್ಪನೆಯ ಇನ್ನೊಂದು ಅನುಗತ ಅಮೃತಫಲ ಸ್ಥಾವರಕ್ಕಿಂತ ಜಂಗಕ್ಕೆ ಇತ್ತ ಅಗ್ರಮಾನ್ಯತೆ. ಇದಾಗಲೇ ಈ ಬಗ್ಗೆ ಸೂಚ್ಯವಾಗಿ ಹೇಳಿರುವುದನ್ನು ಇಲ್ಲಿ ವಿಶದವಾಗಿ ವಿವರಿಸುವುದು ಅವಶ್ಯಕ. ಸ್ಥಾವರ ಲಿಂಗಪೂಜೆ ಪ್ರಿಯವಾದುದು ಬಹುಜನರಿಗೆ ಯಾಕೆ?

'ಆಡುತ್ತ ಹಾಡುತ್ತ ಭಕ್ತಿಯ ಮಾಡಬಹುದು ಲಿಂಗಕ್ಕೆ;
ಅದು ಬೇಡದು, ಬೆಸಗೊಳ್ಳದು
ತಂದೊಮ್ಮೆ ನೀಡಬಹುದು.
ಕಾಡುವ ಬೇಡುವ ಜಂಗಮ ಬಂದರೆ,
ನೀಡಲು ಬಾರದು, ಕೂಡಲಸಂಗಮದೇವಾ!' (೧೯೩)

ಒಡೆದ ಕಾಯಿ, ಹಿಡಿದ ಎಡೆ ಹಿಂದಿರುಗಿ ಬಂದು ತಮಗೇ ತಲುಪುವ ಈ ಸ್ಥಾವರದ ಪೂಜೆ ಸಹಜವಾಗಿಯೇ ಪ್ರಿಯವಾಗಿರಬೇಕು ಉಪಚಾರದ ಭಕ್ತರಿಗೆ, ಆದರೆ ಬಸವಣ್ಣನವರ ದೃಷ್ಟಿಯೇ ಬೇರೆ:

'ಅಯ್ಯಾ ನೀನೆಂದರೆ ಎಂಬೆನು;
ನಿನ್ನ ಹಂಗೇನು ಹರಿಯೇನು?
ನಿನ್ನ ಮುಖದಲ್ಲಿ ಒಂದಗುಳು ಸವೆಯದು!
ನಿನ್ನ ಪ್ರಸಾದವ ಕೊಂಡೆನ್ನ ಭವಕ್ಕೆ ಬೀಜವಾಯಿತ್ತು!
ಜಂಗಮವೆ ಲಿಂಗವೆಂದು ಒಕ್ಕುದ ಕೊಂಡರೆ
ಎನ್ನ ಭವಂ ನಾಸ್ತಿಯಾಯಿತ್ತು. ಕೂಡಲಸಂಗಮದೇವಾ!(೮೪೦)

ನೀಡಿದ ನೈವೇದ್ಯದ ಒಂದಗುಳನ್ನೂ ಉಣ್ಣಲಾರದ ಈ ಕೂಡಲಸಂಗನ ಹಂಗೇನು, ಹರಿಯೇನು? ದೇವರ ನೈವೇದ್ಯವೆಂದು ನಾವೇ ಅದೆಲ್ಲವನ್ನುಂಡರೆ, ಅದು ಭವಕ್ಕೆ ಬೀಜವಾಗದೆ? ಉಣ್ಣುವ ಜಂಗಮಕ್ಕೆ ನೀಡಿ ಒಕ್ಕುದ ಕೊಂಡರೆ ಮಾತ್ರ 'ಭವಂ ನಾಸ್ತಿ'ಯಾದೀತು! ಆದುದರಿಂದ. 'ಜಂಗಮನೆ ಲಿಂಗವೆನಗೆ, ಜಂಗಮನೆ ಪ್ರಾಣವೆನಗೆ. ಕೂಡಲಸಂಗಮದೇವಯ್ಯಾ, ನಿನಗೆಯೂ ನನಗೆಯೂ ಜಂಗಮ ಪ್ರಸಾದವೇ ಪ್ರಾಣ!' (೮೨೯)

ಈ 'ಜಂಗಮ' ಜಾತಿವಾಚಕವಲ್ಲವೆಂದು ಹಿಂದೆ ವಿವರಿಸಿದೆ. ಬಸವಣ್ಣನವರು ಜಂಗಮ ಪದವನ್ನು ಅಷ್ಟಾವರಣಗಳಲ್ಲಿ ಬರುವ 'ಜಂಗಮಕ್ಕೆ' ಸಂವಾದಿಯಾಗಿಯೂ ಉಪಯೋಗಿಸಿದ್ದಾರೆ ಅಲ್ಲಲ್ಲಿ; 'ಗುರುವಿನ ಗುರು ಜಂಗಮನಿಂತೆಂದುದು ಕೂಡಲ ಸಂಗಯ್ಯನ ವಚನ.' (೪೨೪) ಆದರೆ ಈ ಪದವನ್ನು ಸ್ಥಾವರಕ್ಕೆದುರಾಗಿ ಜೀವಿ ಎಂಬರ್ಥದಲ್ಲಿ ಉಪಯೋಗಿಸಿರುವುದೇ ಹೆಚ್ಚು. ಈ ಅರ್ಥವೇ ಅವರಿಗೆ ಮೆಚ್ಚು.

'ಎರೆದರೆ ನೆನೆಯದು, ಮರೆದರೆ ಬಾಡದು;
ಹುರುಳಿಲ್ಲ, ಹುರುಳಿಲ್ಲ ಲಿಂಗಾರ್ಚನೆ;
ಕೂಡಲಸಂಗಮದೇವಯ್ಯಾ, ಜಂಗಮಕ್ಕೆರೆದರೆ
ಸ್ಥಾವರ ನೆನೆಯಿತ್ತು,' (೧೯೬)

'ಜಂಗಮಕ್ಕೆರೆದರೆ ಸ್ಥಾವರವೆಂತು ನೆನೆಯುವುದು? ಎಂದು ಕೇಳುವಿರಾ? ಬಸವಣ್ಣನವರ ಉತ್ತರ ಸಿದ್ಧವಿದೆ: 'ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ; ಲಿಂಗದ ಬಾಯಿ ಜಂಗಮ!' (೪೨೦) ಇನ್ನೂ ವಿವರವಾಗಿ ವರ್ಣಿಸಬೇಕೆ?

'ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯ;
ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯ;

ಜಂಗಮವಾಪ್ಯಾಯನವಾದರೆ ಲಿಂಗ ಸಂತುಷ್ಟಿಯಹುದಯ್ಯ;
ವೃಕ್ಷಸ್ಯ ವದನು ಭೂಮಿಃ। ಸ್ಥಾವರಸ್ಯತು ಜಂಗಮಂ॥...

ಇದು ಕಾರಣ ಕೂಡಲಸಂಗಮದೇವರಲ್ಲಿ ಜಂಗಮವಾಪ್ಯಾಯನವಾದರೆ ಲಿಂಗ ಸಂತುಷ್ಟಿ.' (೧೯೭)

ದೇವನಿಗೆ ಬಾಯಿಯಿಲ್ಲ. ಜೀವಿಯ ಬಾಯಿಯೇ ದೇವನ ಬಾಯಿ. ಅದರ ಮೂಲಕವೇ ಅವನ ಊಟ; ಅದರ ಮೂಲಕವೇ ಅವನ ಸೃಷ್ಟಿಯ ಆಟ. ದೇವನ ದಿವ್ಯೋದ್ದೇಶಸಾಧನೆಗೂ ಜೀವಿಗಳೆ ಸಹಕಾರಿಗಳು. ಜೀವಿಗೆ ದೇವನ ಅಗತ್ಯವಿರುವಷ್ಟೇ ದೇವನಿಗೂ ಜೀವಿಯ ಅವಶ್ಯಕತೆಯಿದೆ. ಆದುದರಿಂದ ಜೀವಯ ಸಂತೃಪ್ತಿಯಾದರೆ ದೇವನಿಗೂಸಂತೃಪ್ತಿ. 'ಕೂಡಲಸಂಗಮದೇವಾ, ಎನಗೆಯೂ ನಿನಗೆಯೂ ಜಂಗಮಪ್ರಸಾದವೇ ಪ್ರಾಣ'ವೇಂದು ಬಸವಣ್ಣ ಘೋಷಿಸಿರುವುದು ಈ ಅರ್ಥದಲ್ಲಿಯೇ, ಇಷ್ಟೇ ಅಲ್ಲ ಕೂಡಲಸಂಗ ಅಡ್ಡಾಡದ ಲಿಂಗವಾದರೆ ಜಂಗಮ ನಡೆದಾಡುವ ಲಿಂಗ;

'ಹಿಡಿವೆಡೆಯನೆ ಕಾಸಿ, ಹಿಡಿವ ಕೈ ಬೆಂದು,
ಮಿಡುಮಿಡನೆ ಮಿಡುಕುವ ಮರುಳ ಮಾನವನೇ,
ಬಡವರೆಂದೆನಬೇಡಾ ಲಾಂಛನಧರಿಯನು;
ಕಂಡು ಸ್ನೇಹದಿಂದವರ ಪೂಜೆಯ ಮಾಡುವುದು,
ನಿಜವಡಗಿದ ರೂಪು, ನಿರ್ವಯಲ ಸ್ಥಾನ –
ನಡೆಲಿಂಗ, ಜಂಗಮ; ಕೂಡಲಸಂಗಮದೇವ!' (೪೧೫)

ಇನ್ನೂ ಸ್ಪಷ್ಟವಾಗಿ ಬೇಕೆ? ಕೇಳಿ : 'ಲಿಂಗದಲಿ ದಿಟವನರಸುವರೆ ಜಂಗಮವ ನೆರೆನಂಬುವುದು; ನಡೆಲಿಂಗ, ನುಡಿಲಿಂಗ. ಮುಖಲಿಂಗವೆಂದೇ ನಂಬೋ!.... ಅಧರ ತಾಗಿದ ರುಚಿಯು ಉದರ ತಾಗಿದ ಸುಖವ ಉಂಬ, ಉಡುವ, ಕೂಡಲಸಂಗಮದೇವ ಜಂಗಮ ಮುಖದಲ್ಲಿ!' (೪೨೭)

ನಡೆಯದ ಲಿಂಗಕ್ಕೆ ಗುಡಿಗುಂಡಾರ ಕಟ್ಟುವೆ; ಈ ನಡೆಯುವ ಲಿಂಗಕ್ಕೆ, ನುಡಿವ ಲಿಂಗಕ್ಕೆ, ಉಣಬಡಿಸಲೂ ಹಿಂದೆಗೆಯುವೆ, ಹಿಂದೇಟು ಹಾಕುವೆ; ಏನಿದು ಮರುಳು ಮಾನವಾ! 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ'ವೆಂಬುದನ್ನು ಮರೆಯದಿರು, 'ಕಂಗಳಿಲ್ಲದ ನೋಟ, ಲಿಂಗವಿಲ್ಲದ ಮಾಟ, ಜಂಗಮವಿಲ್ಲದ ಊಟ, ಪ್ರಸಾದವಿಲ್ಲದೆ ಪರ ಹಿಂಗಿತ್ತು. ಶಿವಲೋಕವಿನ್ನೆಲ್ಲಿಹುದೋ?[' (ಬ.ಹೆ.ವ. ೧೮೮) ಪಾತಕಹಿಂಗಿ ಪರಕೆ ಪರವಾದುದು ದೊರೆಯಬೇಕಾದರೆ ಜಂಗಮ–ಶರಣ–ಸದ್ಭಕ್ತನಿಗೆ ಶರಣುವೊಗು, 'ಭಕ್ತಂ ಶರಣಂ ಗಚ್ಛಾಮಿ' ಎನ್ನು!

'ಪಾತಕ ಮಹಾಪಾತಕವ ಮಾಡಿದವನು
ಸದ್ಭಕ್ತರ ಮನೆಗೆ ಹೋಗಿ,
ಅವರೊಕ್ಕ ಪ್ರಸಾದವನಾಯ್ದುಂಡರೆ
ಸಕಲ ಬ್ರಹ್ಮಹತ್ಯಾದಿ ಪಾತಕ ಪರಿಹಾರವು –
ಒಮ್ಮೆ ಬೇಡಿಕೊಂಡುಂಡರೆ!
ಪಾತಕೇಷ ಮನಃಪ್ರಪ್ರೇ । ಶಿವಭಕ್ತಗೃಹಂ ವ್ರಜೇತ್।
ಯಾಚಯೇದನ್ನಮಮೃತಂ । ತದೇಲಾಭೇ ಜಲಂ ಪಿಬೇತ್ ॥
ಇದು ಕಾರಣ ಕೂಡಲಸಂಗಮದೇವಾ,
ನಿಮ್ಮ ಸದ್ಭಕ್ತರಿಗೆ ನಮೋ ನಮೋ ಎಂಬೆನು' (೪೬೯)

ಇದಕ್ಕಿಂತ ಹೆಚ್ಚಿನ ಸುಖ, ಸದ್ಭಕ್ತರ ಪ್ರಸಾದ ಸೇವನೆಗಿಂತ ಹೆಚ್ಚಿನ ಸುಖ ಇನ್ನಾವುದಿದೆ? ಇದರ ಮುಂದೆ ಕೈಲಾಸ ಗ್ಯಿಲಾಸಗಳು ಕಃಪದಾರ್ಥ!

'ಸಂಗಯ್ಯ ಬಾಯೆಂದು ಕರೆವೆ ನೀನೆನ್ನುವಂ
ಪಿಂಗಲೀಯದು ಶರಣಗೋಷ್ಠಿ ಕೇಳೆನ್ನುವಂ
ಶರಣರೊಕ್ಕುದರ ಸವಿಕೈಲಾಸದೊಳಗುಂಟೆ?
ಶರಣಸಂಗದ ಸುಖಂ ಕೈಲಾಸದೊಳಗುಂಟೆ? (ಬ.ರಾ.ದೇ.ರ.ಸ್ಥಲ ೧೩)

ಶರಣಗೋಷ್ಠಿ – ಶರಣಸಂಗ, ಶರಣರೊಕ್ಕಿದರ ಸವಿ, ಸದ್ಭಕ್ತರೊಕ್ಕ ಪ್ರಸಾದ ಇವೇ ಸಂಸಾರಸಾರಸರ್ವಸ್ವಫಲ – ಜೀವನದ ಸಾರ್ಥಕತೆಯ ಸತ್ಫಲ, ಬಸವಣ್ಣನವರ ದೃಷ್ಟಿಯಲ್ಲಿ:

'ಕರ್ತರು ನಿಮ್ಮ ಗಣಂಗಳು ಎನ್ನ ತೊತ್ತುಮಾಡಿ ಸಲಹಿದ ಸುಖವು
ಸಾಲೋಕ್ಯ, ಸಾಮೀಪ್ಯ ಸಾರೂಪ್ಯ, ಸಾಯುಜ್ಯದಂತುಟಲ್ಲಾ –
ಕೇಳಿರಯ್ಯಾ, ಕೂಡಲಸಂಗನ ಶರಣರು
ತಮ್ಮ ಒಕ್ಕುದನಿಕ್ಕಿಸಲಹುವ ಸುಖವು!' (೪೨೪)

ಈ ಸುಖ ಪಡೆದವರು ಬೇಡುವರೆ ಶಿವನ ಯಾತಕ್ಕಾದರೂ? 'ಓಡದಿರು, ಓಡದಿರು ನಿನ್ನ ಬೇಡುವವ ನಾನಲ್ಲ; ಶಿವನೇ ನೋಡುವೆ ಕಣ್ಣತುಂಬ; ಆಡಿ ಪಾಡಿ ನಲಿದಾಡುವೆ!' (೧೧೭) ಶಿವನೊಲುಮೆಯಿಂದ ಇದಿಷ್ಟನ್ನೇ ನಿರೀಕ್ಷಿಸುವುದು. ಇದಕ್ಕೆ ಪೂರಕವಾಗಿ ಶರಣಸಂಗವಿದೆ, ಸದ್ಭಕ್ತರೊಕ್ಕಪ್ರಸಾದವಿದೆ, ಕರ್ತನು ತೊತ್ತು ಮಾಡಿ ಸಲಹುವ ಸುಖವಿದೆ. ಇನ್ನೇನು ಬೇಕು?

ಆದರೂ, 'ಕಲ್ಲನಾಗರ ಕಂಡರೆ ಹಾಲನೆರೆಯೆಂಬ, ದಿಟನಾಗರ ಕಂಡರೆ ಕೊಲ್ಲೆಂಬ ಉಂಬ ಜಂಗಮ ಬಂದರೆ ನಡೆಯೆಂಬ. ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬ' (೧೯೪) ಕುರುಡು ಬರಡು ಭಕ್ತಿಗೇ ಮರುಳಾಗಿದೆ ಜನ. ಇದು ಅವರ ತಪ್ಪಲ್ಲ. ವೇದಾಧ್ಯಯನದ ವಿದ್ಯಾರ್ಜನೆಯ ಅಧಿಕಾರ ಅವರಿಗಿಲ್ಲದಂತೆ ಮಾಡಿ, ಮಿದುಳಿಗೆ ಮೌಢ್ಯದ ಮಜ್ಜನ ಮಾಡಿಸುವ, ಮೇಲ್ವರ್ಗದವರ ಪಾರಮ್ಯ ಪರಮಾಧಿಕಾರಗಳನ್ನು ಸ್ಥಿರೀಕರಿಸಲು ಸಾಧನವಾದ ಪುರಾಣಗಳನ್ನೋ ಆಖ್ಯಾನ ಅಖ್ಯಾಯಿಕೆಗಳನ್ನೋ ಹರಿಕಥೆಗಳನ್ನೋ ಅಡಗೂಲಜ್ಜಿಯ ಕಥೆಗಳನ್ನೋ ಕಟ್ಟಿ ಮುಂಜಾವಿನಿಂದ ಸಂಜೆಯವರೆಗೆ ಅವುಗಳೆ ಅವರ ಕಿವಿಗಳಲ್ಲಿ ಬೀಳುತ್ತಿರುವಂತೆ ಯೋಜಿಸಿ, ಅವರು ತಮ್ಮ ಸ್ವಂತ ಅಸ್ತಿತ್ವ, ವ್ಯಕ್ತಿತ್ವಗಳನ್ನೇ ಕಳೆದುಕೊಳ್ಳುವಂತೆ ಮಾಡಿದವರ ತಪ್ಪಿದು. ಭರತಮುನಿ ಹೇಳಿದುದಿದು;

'ನ ವೇದ ವ್ಯವಹಾರೋಯಂ ಸಂಶ್ರಾವ್ಯ ಃ ಶೂದ್ರಜಾತಿಷು।
ತಸ್ಮಾದ್ ಸೃಜಾಪರಂ ವೇದಂ ಪಂಚಮಂ ಸಾರ್ವವರ್ಣಿಕಂ'
(ಅಧ್ಯಾಯ ೧, ಶ್ಲೋಕ ೧೨)

ವೇದಗಳನ್ನು ಓದಕೂಡದಷ್ಟೇ ಅಲ್ಲ, ಕೇಳಲೂ ಕೂಡದಂತೆ ಶೂದ್ರರು! ಇದನ್ನು ಹೇಳಿದವರಾರು? ಪರಮಾತ್ಮನೇ – ಭರತಮುನಿಗೆ! ಈ ಕಾರಣಕ್ಕಾಗಿಯೇ ಐದನೆಯ ವೇದವಾದ 'ನಾಟಕ'ವನ್ನು ಅಸಾರ್ವವರ್ಣಿಕವಾದ ನಾಟಕವನ್ನು ಸೃಜಿಸೆಂದು ಆಜ್ಞಾಪಿಸಿದಂತೆ ಈ ನಾಟಕವೂ ಮೇಲ್ವರ್ಗದವರ ತುತ್ತಾಗಿ, ತೊತ್ತಾಗಿ, ಸೊತ್ತಾಗಿ ಶ್ರೀಸಾಮಾನ್ಯರು ಪುರಾಣಗಳನ್ನೊ, ಭೂತಾರಾಧನೆಯನ್ನೋ ಅಂಧವಿಶ್ವಾಸಗಳನ್ನೋ ಆಧರಿಸಿ ರಚಿತವಾದ ಆಟಗಳ ನೋಟದಲ್ಲಿ ಕಾಲ ಕಳೆದು ಇನ್ನಷ್ಟು ಅಜ್ಞರಾಗಬೇಕಾಯಿತು; ಇನ್ನಷ್ಟು ಮಬ್ಬು ಮುಸುಕಿದವರಾಗಬೇಕಾಯಿತು!

ಇಂಥವರನ್ನೇ ಭಕ್ತರನ್ನಾಗಿ ಮಾಡಿ ಅವರಿಗೆರಗಿದರೆ ಪಾತಕ ಪರಿಹಾರ, ಅವರೊಕ್ಕುದಕೊಂಡರೆ ಕೈಲಾಸವನ್ನೇ ಕಡೆಗಣಿಸುವ ಸವಿ, ಸುಖ; ಅವರ ಸಂಗದ ಸೌಭಾಗ್ಯ ಸಿಕ್ಕರೆ ಶಿವನನ್ನು ಬೇಡುವುದು ತಪ್ಪುವುದು; ಅವರ ಮನೆಯ ಊಳಿಗ ಮಾಡಿದರೆ ಕಾಲ, ಕಾಲ, ಕಲ್ಪಿತ, ಕರ್ಮಗಳು ಕದ್ದೋಡುವುವು; ಅವರ ಆಪ್ಯಾಯನವಾದರೆ ಲಿಂಗಕ್ಕಾಪ್ಯಾಯನ; ಅವರಿಗೆರೆದರೆ ಸ್ಥಾವರ ಲಿಂಗ ನೆನೆವುದು; ಅವರೇ ಲಿಂಗದ ಬಾಯಿಯೆಂದು ಸಾರಿ ಪರಿತ್ಯಕ್ತ ಪದಹತರನ್ನೇ ಪ್ರಮಥ ಪದವಿಗೇರಿಸಿ, ಮಾನವ್ಯದ ಮೇಲ್ಮೆಯ ಬಾವುಟವನ್ನು ಹಾರಿಸಿದ ಬಸವನ ಸಂದೇಶ 'ಮೊದಲು ಮಾನವ–ಆಮೇಲೆ ಎಲ್ಲ' ಎಂಬ ಸಂದೇಶ! ಜಡವನ್ನು ಪೂಜಿಸಿ ಪೂಜಿಸಿ ಜಡವಾಗಿ ಹೋಗಿದ್ದ ಸಾಮಾನ್ಯರ ಸಮಾಜಕ್ಕೆ ಈ ಜೀವಿಯ ಪಾರಮ್ಯದ ಸಂದೇಶ ಸಂಕೀವಿನೀ ಸಂದೇಶ – ಮೃತ ಸಂಜೀವಿನೀ ಸಂದೇಶವಾಗಿ ಪರಿಣಮಿಸಿತು.

ಜೀವಿ ಜೀವಿಯ ಜೀವನವೂ ಒಂದು ಬೆಳೆಭೂಮಿ. ಆದರೆ ಅದು ಬೆಳೆಯಲಾಗದಷ್ಟು ಅದರಲ್ಲಿ ಪ್ರಳಯದ ಕಸ ಹುಟ್ಟಿದೆ. ಇದರಲ್ಲಿ ಆ ಭೂಮಿಯದೇನು ತಪ್ಪು? ಕಸ ಬೆಳೆಸಿದವರ, ಬೆಳೆಯಗೊಟ್ಟವರ ತಪ್ಪು. ಕಸ ಕಿತ್ತು ತೆಗೆ; ಬೆಳೆಯಗೊಡು ಈ ಭೂಮಿಯನ್ನು:

'ಬೆಳೆ ಭೂಮಿಯೊಳೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು, ಎಚ್ಚರಲೀಯದು!
ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ, ಲಿಂಗತಂದೆ;
ಸುಳಿದೆಗೆದು ಬೆಳೆವೆನು, ಕೂಡಲಸಂಗಮದೇವಾ!' (೫೦)

ಅವಗುಣವೆ ಕಸ, ಅವಗುಣವೆಂದರೇನು? ಬೆಳೆವುದು ಭೂಮಿಗುಣ; ಅದು ಬೆಳೆಯದಂತೆ ಮಾಡುವುದೇನಿದೆಯೋ ಅದೆಲ್ಲ ಅವಗುಣ; ಬೆಳಕಾಗುವುದು ಉರಿಯ ಗುಣ; ಅದು ಜ್ಯೋತಿಯಾಗಿ ಬೆಳಕಾಗದಂತೆ ಮಾಡುವುದೇನೇನಿದೆಯೋ ಅದೆಲ್ಲ ಅವಗುಣ. ಈ ಅವಗುಣವೆಂಬ ಕಸವ ಕಿತ್ತು ಕಿಚ್ಚಿಗಿಟ್ಟರೆ ಸುಳಿದೆಗೆದು ಬೆಳೆಯದ ಬಾಳಾವುದು?

ಈ ಕಸವ ಕೀಳುವವರಾರು? ಎಲ್ಲರೂ ಅನ್ಯರಲ್ಲಿ ಅವಗುಣವನ್ನೂ ತಮ್ಮಲ್ಲಿ ಸದ್ಗುಣವನ್ನೂ ಕಾಣುವವರೇ!

'ಗಿಳಿಯೋದಿ ಫಲವೇನು?
ಬೆಕ್ಕು ಬಹುದ ಹೇಳಲರಿಯದು!
ಜಗವೆಲ್ಲ ಕಾಂಬ ಕಣ್ಣು
ತನ್ನ ಕೊಂಬ ಕೊಯಿಲೆಯ ಕಾಣಲರಿಯದು!
ಇದಿರ ಗುಣವ ಬಲ್ಲೆವೆಂಬರು;
ತಮ್ಮ ಗುಣವ ತಾವರಿಯರು, ಕೂಡಲಸಂಗಮದೇವಾ!' (೧೨೩)

ಈ ವಚನದ ಎರಡನೆಯ ಸಾಲಿನಲ್ಲಿನ ಹೋಲಿಕೆಯ ಸೊಗಸು ಸವಿದಷ್ಟೂ ಹೆಚ್ಚುವ ಸೊಗಸು. ಇದು ಅತ್ಯಂತ ವಾಸ್ತವಚಿತ್ರ ಮಾನವನದು. ಎಲ್ಲರೂ ತಮ್ಮ ತಮ್ಮ ಅವಗುಣಗಳನ್ನು ಅರಿಯುದಿರುವುದರಿಂದಲೇ, ಅರಿತರೂ ಅವು ಅವಗುಣಗಳಲ್ಲವೆಂದು ಸಮರ್ಥಿಸಿಕೊಳ್ಳುವುದರಿಂದಲೇ ಸುಳಿದೆಗೆದು ಬೆಳೆಯಬೇಕದ ಬಾಳಭೂಮಿ ಕಳೆ ಕಸಗಳಿಂದ ತುಂಬಿಬಿಡುತ್ತದೆ! 'ಅರತವಡಗದು, ಕ್ರೋಧ ತೊಲಗದು, ಕ್ರೂರ ಕುಭಾಷೆ ಕುಹಕ ಬಿಡದನ್ನಕ್ಕ ನೀನೆತ್ತಲು ಶಿವನೆತ್ತಲು? ಹೋಗತ್ತ ಮರುಳೇ!' (೧೩೧) 'ಅಸನ ಕುಂದದು, ವ್ಯಸನ ಮಾಣದು, ಅರತವಡಗದು, ಬೆವಹಾರವುಡುಗದು, ಮಜ್ಜನಕ್ಕೆರೆವೆನಯ್ಯಾ – ಕಾಯವಿಕಾರಿ ನಾನು, ಜೀವವಿಕಾರಿ ನಾನು!' (೨೫೯) 'ಕುದುರನೇಸು ತೊಳೆದರೆಯೂ ಕೆಸರು ಮಾಣ್ಬುದೆ?

ಎನ್ನ ಕಾಯದೊಳುಳ್ಳವ ಗುಣಂಗಳ ಕಳೆದು ಕೃಪೆಯ ಮಾಡಯ್ಯಾ!' (೨೬೦) 'ಎನ್ನ ಮನದ ಅವಗುಣವ ಕಳೆದು ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು ಕೂಡಲಸಂಗಮದೇವಾ!' (೨೬೧) 'ದುರ್ವ್ಯಸನಿ, ದುರಾಚಾರಿಯೆಂದೆನಿಸದಿರಯ್ಯಾ ಎನ್ನ!' (೨೬೨) 'ಆಸೆಯಾಮಿಷ, ತಾಮಸ, ಹುಸಿ, ವಿಷಯ, ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ – ಇವನೆನ್ನ ನಾಲಗೆಯ ಮೇಲಿಂದತ್ತ ತೆಗೆದು ಕಳೆಯಯ್ಯಾ! ಅದೇಕೆಂದೊಡೆ ನಿಮ್ಮತ್ತಲೆನ್ನ ಬರಲೀಯವು! ' (೪೬) 'ಸತ್ವ ರಜ ತನು ಕ್ರೋಧ ಬಿಡದನ್ನಕ್ಕ ಆತ್ಮಸ್ತುತಿ ಪರನಿಂದೆಯ ಬಿಡದನ್ನಕ್ಕ... ಅರಿಷಡ್ವರ್ಗ ದಶವಾಯು ಬೆರಸಿಕರ್ಪ ಕಳಂಕವಪ್ಪ ತನು ಬಿಡದೆ... ಶರಣಸಜ್ಜನಿಕೆ, ಸಮಯಾಚಾರ, ನಿಜವ್ರತವು ದುರಾಚಾರಿಗಳಿಗಳವಡದು....' (೮೫೫) 'ಹಲಬರ ನುಂಗಿದ ಹಾವಿಂಗೆ ತಲೆಬಾಲವಿಲ್ಲ ನೋಡಾ! ಕೊಲುವುದು ತ್ರೈಜಗವೆಲ್ಲವ' (೮೫೬) 'ಕೂಡಲಸಂಗಮದೇವಾ, ಎನ್ನವಗುಣವ ನೋಡದೆ ಶಿವರಾತ್ರೆಯ ಸಂಕಣ್ಣಗಳಿಗೆ ಕರುಣಿಸಿದಂತೆ ಎನಗೆ ಕೃಪೆಮಾಡಯ್ಯ!' (೮೮೮) ಈ ಅವಗುಣದ ಕಸ ಕಿತ್ತೆಸೆಯದೆ ಏನನೇರಿ ತಿರುಗಿದರೇನು, ಏನಹೂಸಿ ಮೆರೆದರೇನು?

'ಆನೆಯನೇರಿಕೊಂಡು ಹೋದಿರೆ ನೀವು;
ಕುದುರೆಯನೇರಿಕೊಂಡು ಹೋದಿರೆ ನೀವು;
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ, ಅಣ್ಣಾ!
ಸತ್ಯದ ನಿಲವನರಿಯದೆ ಹೋದಿರಲ್ಲಾ!
ಸದ್ಗುಣವೆಂಬ ಫಲವ ಬಿತ್ತಿ ಬೆಳೆಯದೆ ಹೋದಿರಲ್ಲಾ!
ಅಹಂಕಾರವೆಂಬಸದ ಮದಗಜವೇರಿ,
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ!
ನಮ್ಮ ಕೂಡಲಸಂಗಮದೇವರನರಿಯದೆ
ನರಕಕ್ಕೆ ಭಾಜನವಾದಿರಲ್ಲ!' (೬೩೯)

ಅವಗುಣದ ಕಸ ಕಳೆದು ಸದ್ಗುಣದ ಫಲಬಿತ್ತಿ ಬೆಳೆಯಬೇಕು; ಸುಬುದ್ಧಿ–ಯೆಂಬುದಕವನೆರೆಯಬೇಕು (೫೧) ಸತ್ಯದ ನಿಲವನರಿಯಬೇಕು ಹೇಗೆ? ಅದೇ ದಾರಿಯಿಂದ: ಒಳಗಿನ ತವಕ, ಸಂಗನ ಕರುಣೆ, ಸದ್ಭಕ್ತರ ಸಂಗದಿಂದ.

'ಅಭ್ಯಾಸವೆನ್ನ ವರ್ತಿಸಿತ್ತಯ್ಯಾ: ಭಕ್ತಿಸಾಧ್ಯವಾಗದು
ನಾನೇವೆನಯ್ಯಾ?
ಆ ನಿಮ್ಮ ಮನಬೊಗುವನ್ನಕ್ಕ, ನೀವೆನ್ನ ಮನಬೊಗುವನ್ನಕ್ಕ
ಕಾಯಗುಣಂಗಳ ಕಳೆದವರಿಗೆ ಶರಣೆಂಬೆ!' (೫೦೨)

ಈ ವಚನದಲ್ಲಿ ಜೀವಿಯ ಅಂತರಂದ ಅತೃಪ್ತಿ, ಶಿವನ ಮನದಲ್ಲಿ ತಾನು ಪ್ರವೇಶಿಸಬೇಕೆಂಬ, ತನ್ನ ಮನದಲ್ಲಿ ಶಿವನು ಪ್ರವೇಶಿಸಬೇಕೆಂಬ ತವಕ ಶಿವನೊಲಿವನೆಂಬ ನಂಬಿಕೆ. ಅದುವರೆಗೆ ಕಾಯಗುಣಂಗಳ ಕಳೆದವರಿಗೆ ಶರಣೆನ್ನಬೇಕೆಂಬ ಬುದ್ಧಿ ಎಲ್ಲ ಅವಿತಿವೆ. 'ನೀನೊಲಿಯಿತ್ತೇ ಪುಣ್ಯ, ನೀನೊಲ್ಲುದುದೇ ಪಾಪ, ಕಂಡಯ್ಯಾ!' (೫೦೭) ಎಂದು ದೃಢವಾಗಿ ನಂಬಿದಾಗ ಅವನೊಲವೂ ದೊರೆಯುತ್ತದೆ:

'ಹಸಿವು ತೃಷೆ ನಿದ್ರೆ ವಿಷಯಂಗಳ ಮರೆದೆ : ನೀವು ಕಾರಣ;
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳ ಮರೆದೆ:
ನೀವು ಕಾರಣ;
ಪಂಚೇಂದ್ರಿಯ, ಸಪ್ತಧಾತು, ಅಷ್ಟಮದಂಗಳ ಮರೆದೆ; ನೀವು ಕಾರಣ;
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರಿಗೆ ಆಪ್ಯಾಯನವಾದರೆ ನಿನಗೆ ತೃಪ್ತಿಯಾಯಿತ್ತು!' (೮೨೭)

ಸಂಗನ ಕರುಣವಾದರೂ ಶರಣರಿಗೆ ಆಪ್ಯಾಯನವಾಗದೆ ತೃಪ್ತಿಯಿಲ್ಲ ಬಸವಣ್ಣನವರಿಗೆ,ಯಾಕೆ?

'ಮುನ್ನೂರರುವತ್ತು ನಕ್ಷತ್ರಕ್ಕೆ ಬಾಯಿಬಿಟ್ಟು ಕೊಂಡಿಪ್ಪುದೆ ಸಿಂಪು?
ಅದು ಸ್ವಾತಿಗಲ್ಲದೆ ಬಾಯ್ದೆರೆಯದು – ಕೇಳು, ಕೇಳಾ ತಂದೆ!
ಎಲ್ಲವಕ್ಕೆ ಬಾಯ ಬಿಟ್ಟರೆ ತಾನೆಲ್ಲಿಯ ಮುತ್ತುಪ್ಪುದೊ?
ಪರಮಂಗಲ್ಲದೆ ಹರುಷತಿಕೆಯಿಲ್ಲೆಂದು
ಕರಣಾದಿಗುಣಂಗಳ ಮರೆದರು
ಇದು ಕಾರಣ, ಕೂಡಲಸಂಗನ ಶರಣರು ಸಪ್ತವ್ಯಸನಿಗಳಲ್ಲಾಗಿ' (೮೦೯)

ಅವರಾರೇ ಇರಲಿ, ಎಂತೇ ಇರಲಿ – ಅವರ ಆಪ್ಯಾಯನವೆ ಒರೆಗಲ್ಲು;
ಆವಾವ ಭಾವದಲ್ಲಿ ಶಿವನ ನಂಬಿದ ಶರಣರು ಎಂತಿದ್ದರೇನಯ್ಯಾ?
ಆವಾವ ಭಾವದಲ್ಲಿ ಶಿವನ ನಂಬಿದ ಮಹಿಮರು ಎಂತಿದ್ದರೇನಯ್ಯಾ?
ಸುಚರಿತ್ರರು ಎಂತಿರ್ದರೇನಯ್ಯಾ?
ಅವಲೋಹನ ಕಳೆವ ಪರುಷ ಎಂತಿದ್ದರೇನಯ್ಯಾ?
ಕೂಡಲಸಂಗನ ಶರಣರು, ರಸದ ವಾರುಧಿಗಳು,
ಎಂತಿರ್ದರೇನಯ್ಯಾ? (೭೯೧)

'ಸುಚರಿತ್ರರು, ರಸದವಾರುಧಿಗಳು, ಅವಲೋಹವ ಕಳೆವ ಪರುಷಗಳು' ಯಾರಾದರೇನು, ಎಂತಿದ್ದರೇನು? ಅವರ ಮೆಚ್ಚುಗೆ ಮುಖ್ಯವಾದುದು. ಇಲ್ಲಿಯೂ ಮಾನವನ ಮೇಲ್ಮೆಯ ಮಂಗಳವಾದ್ಯ ಮೊಳಗುತ್ತಿದೆ. ದೇವನೊಲಿದನೆಂದು ಜೀವಿಗಳ ಕಡೆಗಣಿಸುವಂತಿಲ್ಲ. ಅವರಲ್ಲಿ ಸದ್ಭಕ್ತರೆನಿಸಿದವರ ಮೆಚ್ಚಿಗೆ. ಆಪ್ಯಾಯನ ಒಪ್ಪಿಗೆ ದೇವನೊಲುಮೆಗಿಂತ ಅಧಿಕ ಮೌಲಿಕವಾದುದು. ಇದಕ್ಕೆ ಕಾರಣವೂ ಇದೆ:

'ಕೂಪವರಿಗೆ ಹೇಳುವೆನು ಕುಳಸ್ಥಳಂಗಳೆಲ್ಲವನು :
ಕೂರದವರಿಗೆ ಹೇಳಿ ನಾನೇವೆನು ಶಿವನೆ?
ಕರಲ ಭೂಮಿಯಲ್ಲಿ ಕರೆದ ವೃಷ್ಟಿಯ ತೆರನಂತೆ
ಅವರೆತ್ತಬಲ್ಲರು ಎನ್ನ ಸುಖ – ದುಃಖವ?
ಅಂಗತವಿಲ್ಲದ ಸಂಗವು ಅಳಲಿಲ್ಲದ ಹುಯ್ಯಲಂತೆ!
ಇದು ಕಾರಣ, ಕೂಡಲಸಂಗಮದೇವಾ
ನಿಮ್ಮ ಶರಣರಿಗಲ್ಲದೆ ಬಾಯ್‌ದೆರೆಯೆನು' (೪೫೫)

ಕೂರದವರಿಗೆ ಹೇಳಿ 'ಕರಲ ಭೂಮಿಯಲ್ಲಿ ಕರೆದ ಮಳೆಯಾಗುವುದೇಕೆ?' ಅಳಲಿಲ್ಲದ ಹುಯ್ಯಲಿಂದಾವ ಪ್ರಯೋಜನ?

'ಬಂಜೆ ಬೇನೆಯನರಿಯದಂತೆ
ಒಬ್ಬರೊಂದ ನುಡಿವಿರಿ ಕೇಳಿರಯ್ಯಾ;
ಎನ್ನಾಯುಷ್ಯ ಭವಿಷ್ಯ ಎನ್ನ ಭಕ್ತರು, ಕಂಡಯ್ಯ;
ಎನ್ನಾಯುಷ್ಯ ಭವಿಷ್ಯ ಎನ್ನ ಪ್ರಮಥರು ಕಂಡಯ್ಯ ;
ಕೂಡಲಸಂಗನ ಶರಣರು ಮುಖಲಿಂಗಿಗಳಯ್ಯಾ' (೪೦೯)

ಗುಡಿಯಲಿಂಗದ – ಸ್ಥಾವರದ, ಹಂಗು ಬಿಡಿಸಿ, ನುಡಿಲಿಂಗ, ನಡೆಲಿಂಗ, ಮುಖಗಳಾದ ಸದ್ಭಕ್ತರ ಸಂಗ ಹಿಡಿಸಿದ ಬಸವಣ್ಣ ಇಲ್ಲಿ ಇನ್ನೊಂದು ವಿಶೇಷದತ್ತ ನಮ್ಮ ಚಿತ್ತವನ್ನೆಳೆಯುತ್ತಾನೆ. ಬೇನೆಯನರಿಯದ ಬಂಜೆಯಂತಿರುವವರು, ಕೂಪರಲ್ಲದವರು ಭಕ್ತರಾಗಲಾರರು. ಅಂಗತವಿಲ್ಲದ ಸಂಗ ಅಳಲಿಲ್ಲದ ಹುಯ್ಯಲಂತೆ, ಕೃತಕತೆ, ಕಪಟ, ಬೂಟಾಟಿಕೆ, ಪರಸ್ಪರಾನುಕಂಪೆಯೇ ಭಕ್ತಜೀವನದ ಹೆಗ್ಗುರುತು. ಅದಿಲ್ಲದಿದ್ದರೆ ಭಕ್ತಸಂಗ. ಅಂಗತವಿಲ್ಲದ ಸಂಗ, ಉಳಿದ ಭಕ್ತರಲ್ಲಿ ರಕ್ತಿಯಿಲ್ಲದವ, ಅವರ ನೋವನರಿಯದವನ ಭಕ್ತನೇ ಅಲ್ಲ:

'ತನುವ ನೋಯಿಸಿ, ಮನವ ಬಳಲಿಸಿ,
ನಿಮ್ಮ ಪಾದವಿಡಿದವರೊಳರೆ?

ಈ ನುಡಿ ಸುಡದಿಹುದೆ?
ಕೂಡಲಸಂಗಮದೇವಾ,
ಶಿವಭಕ್ತರ ನೋವೇ ಅದು ಲಿಂಗದ ನೋವು' (೪೦೬)

ಶಿವಭಕ್ತರ ನೋವೇ ಲಿಂಗದ ನೋವೆಂದು ಎಲ್ಲ ಶಿವಭಕ್ತರೂ ಅರಿದು ಆಚರಿಸಬೇಕು. ಇದರಂತೆ ನುಡಿಯಲರಿಯದೆ ನಡೆಯಲರಿಯದೆ ಕೇವಲ ಲಿಂಗವ ಪೂಜಿಸಿ ಫಲವಿಲ್ಲ:

'ನಡೆಯಲರಿಯದೆ, ನುಡಿಯಲರಿಯದೆ,
ಲಿಂಗವ ಪೂಜಿಸಿ ಫಲವೇನು?
ಅವರ ಸುಖವೆನ್ನ ಸುಖ; ಅವರ ದುಃಖವೆನ್ನ ದುಃಖ;
ಕೂಡಲಸಂಗನ ಶರಣರ ಮನ ನೊಂದರೆ ಆನು ಬೆಂದೆನಯ್ಯಾ'
(೪೦೯)

ಗುಡಿಯಲಿಂದ – ಸ್ಥಾವರದ, ಹಂಗು ಬಿಡಿಸಿ, ನುಡಿಲಿಂಗ, ನಡೆಲಿಂಗ, ಮುಖಗಳಾದ ಸದ್ಭಕ್ತರ ಸಂಗ ಹಿಡಿಸಿದ ಬಸವಣ್ಣ ಇಲ್ಲಿ ಇನ್ನೊಂದು ವಿಶೇಷದತ್ತ ನಮ್ಮ ಚಿತ್ತವನ್ನೆಳೆಯುತ್ತಾನೆ. ಬೇನೆಯನರಿಯದ ಬಂಜೆಯಂತಿರುವವರು, ಕೂಪರಲ್ಲದವರು ಭಕ್ತರಾಗಲಾರರು. ಅಂಗತವಿಲ್ಲದ ಸಂಗ ಅಳಲಿಲ್ಲದ ಹುಯ್ಯಲಂತೆ, ಕೃತಕತೆ, ಕಪಟ, ಬೂಟಾಟಿಕೆ, ಪರಸ್ಪರಾನುಕಂಪೆಯೇ ಭಕ್ತಜೀವನದ ಹೆಗ್ಗುರುತು. ಅದಿಲ್ಲದಿದ್ದರೆ ಭಕ್ತಸಂಗ, ಅಂಗತವಿಲ್ಲದ ಸಂಗ, ಉಳಿದ ಭಕ್ತರಲ್ಲಿ ರಕ್ತಿಯಿರಲ್ಲದವ, ಅವರ ನೋವನರಿಯದವ ಭಕ್ತನೇ ಅಲ್ಲ;

'ತನುವ ನೋಯಿಸಿ, ಮನವ ಬಳಲಿಸಿ,
ನಿಮ್ಮ ಪಾದವಿಡಿದವರೊಳರೆ?
ಈ ನುಡಿ ಸುಡದಿಹುದೆ?
ಕೂಡಲಸಂಗಮದೇವಾ,
ಶಿವಭಕ್ತರ ನೋವೇ ಅದು ಲಿಂಗದ ನೋವು' (೪೦೬)

ಶಿವಭಕ್ತರ ನೋವೇ ಲಿಂಗದ ನೋವೆಂದು ಎಲ್ಲ ಶಿವಭಕ್ತರೂ ಅರಿದು ಆಚರಿಸಬೇಕು. ಇದರಂತೆ ನುಡಿಯಲರಿಯದೆ ನಡೆಯಲರಿಯದೆ ಕೇವಲ ಲಿಂಗವ ಪೂಜಿಸಿ ಫಲವಿಲ್ಲ:

'ನಡೆಯಲರಿಯದೆ, ನುಡಿಯಲರಿಯದೆ,
ಲಿಂಗವ ಪೂಜಿಸಿ ಫಲವೇನು?
ಅವರ ಸುಖವೆನ್ನ ಸುಖ ಅವರ ದುಃಖವೆನ್ನ ದುಃಖ;

ಕೂಡಲಸಂಗನ ಶರಣರ ಮನ ನೊಂದರೆ ಆನು ಬೆಂದೆನಯ್ಯಾ'
(೪೦೯)

'ಗಣ ಮೇಳಾಪ'ದಲ್ಲಿ, ಸದ್ಭಕ್ತರ ಸಂಗದಲ್ಲಿ 'ಅವಲೋಹವ ಕಳೆ ಪರುಷ'ದ ಗುಣ 'ಗಿರಿಗಳ ಮೇಲೆ ಹಲವು ತರುಮರಾದಿಗಳಿದ್ದು ಸಿರಿಗಂಧದ ಸನ್ನಿಧಿಯಲು ಪರಿಮಳವಾಗವೆ? (೧೫೧) ಎಂಬ ಪರಿಮಳಮೀವ ಚಂದನದ ಗುಣ ಬರಬೇಕಾದರೆ ಈ ಪರಸ್ಪರ ಪ್ರೀತಿಯ ಚುಂಬಕದಿಂದ ಮಾತ್ರ ಸಾಧ್ಯ. ಇದಕ್ಕೆ ಬಸವಣ್ಣನವರೇ ಉಜ್ವಲ ಉದಾಹರಣೆಯಾಗಿ ಬೆಳಗಿದರು. ಬೋಧಿಸುವವರೇ ಮೊದಲು ಸಾಧಿಸದಿದ್ದರೆ ಹೇಗೆ? ಬೋಧೆಯಲ್ಲಿ ಅಗಾಧ ಆಕರ್ಷಣೆ, ಪ್ರಚಂಡ ಪ್ರಭಾವ ಬರುವುದು ಬೋಧಕನೆ ಅದರಂತೆ ಮೊದಲು ಆಚರಿಸಿ ತೋರಿದಾಗ. ಆಗ ಎಲ್ಲ ಅಧಿಕಾರಗಳಿಗೂ, ಹಿರಿದಾದ, ಎಲ್ಲ ಅಧಿಕಾರಗಳಿಗೂ ತಳಹದಿಯಾಗಬೇಕಾದ ನೈತಿಕ ಅಧಿಕಾರ ದೊರೆಯುತ್ತದೆ ಅವನಿಗೆ. ನೈತಿಕ ಅಧಿಕಾರ ಪಡೆದವನು ಪಾಮರನಾಗಿದ್ದರೂ ಅವನು ಹೇಳಿದುದನ್ನು ಜೀವಿಗಳೂ ಕೇಳುತ್ತಾರೆ. ದೇವನೂ ಕೇಳುತ್ತಾನೆ; ಅದಿಲ್ಲದವನು ಪಂಡಿತನಿದ್ದರೂ, ಸಾಮ್ರಾಟನಿದ್ದರೂ, ಸರ್ವಾಧಿಕಾರಿಯಾಗಿದ್ದರೂ ಅವನ ಮಾತಿಗೆ ದುಗ್ಗಾಣಿಯ ಬೆಲೆಯಿಲ್ಲದಾಗುತ್ತದೆ. ಅನ್ಯರಿಗೆ ಬೋಧಿಸುವವನು 'ತನ್ನಲ್ಲಿ ಈ ಅನ್ಯೆತಿಕ ಅಧಿಕಾರವಿದೆಯೆ?' ಎಂದು ತನ್ನನ್ನೇ ಮೊದಲು ಪ್ರಶ್ನಿಸಿಕೊಳ್ಳಬೇಕು. ಶ್ರೇಷ್ಠರಾಚರಿಸಿದಂತೆ ಕನಿಷ್ಠರಾಚರಣೆ ಇಷ್ಟೇ ಅಲ್ಲ, ಸೂರ್ಯನಲ್ಲಿ ಸಾವಿರ ಸಾವಿರ ಕೋಟಿ ದಾರಿ ಉಷ್ಣಾಂಶವಿರುವಾಗ ನಮ್ಮಲ್ಲಿ ೯೮ ಡಿಗ್ರಿಯಾದರೂ ಇರುತ್ತದೆ: ಅಲ್ಲಿಯೇ ೯೮ ಡಿಗ್ರಿಗಳಿಗಿಳಿದರೆ ನಮ್ಮ ಗತಿ? ಮೇಲಿರುವವರಲ್ಲಿ ಮೇಲ್ಮಟ್ಟದ ನೈತಿಕ ಅಧಿಕಾರವಿದ್ದರೆ ಕೆಳಗಿನವರಲ್ಲಿ ಸ್ವಲ್ಪವಾದರೂ ಉಳಿದಿರುತ್ತದೆ. ಅಧಿಕಾರದ ಅಂತಸ್ತು ಮೇಲೇರುತ್ತ ಹೋದಂತೆ ನೈತಿಕ ಮಟ್ಟವೂ ಮೇಲೇರಬೇಕು. ಇಲ್ಲದಿದ್ದರೆ ಅನಾಹುತ.

ಇದನ್ನರಿತ ಬಸವಣ್ಣನವರು ತಮ್ಮ ತತ್ವಗಳಿಗೆ ತಾವೇ ಜೀವಂತ ಜ್ವಲಂತ ಉದಾಹರಣೆಯಾಗಲು ಹಗಲಿರುಳು ಹೆಣಗಿದರು.

'ತಮತಮಗೆಲ್ಲ ನೊಸಲ ಕಣ್ಣವರು, ತಮತಮಗೆಲ್ಲ ನಂದಿವಾಹನರು,
ತಮತಮಗೆಲ್ಲಾ ಖಟ್ವಾಂಗ ಕಪಾಲ ತ್ರಿಶೂಲಧರರು :
ದೇವರಾರು ಭಕ್ತರಾರು ಹೇಳಿರಯ್ಯಾ!
ಕೂಡಲಸಂಗಮದೇವಾ, ನಿಮ್ಮ ಶರಣರು ಸ್ವತಂತ್ರರು,
ಎನ್ನ ಬಚ್ಚ ಬರಿಯ ಬಸವನೆನಿಸಯ್ಯಾ' (೮೧೮)

ಎಂದೂ,

'ಎನಗೆ ನಾನೇ ಹಗೆ ನೋಡಯ್ಯ : ಎನಗೆ ನಾನೇ ಕಳೆ ನೋಡಯ್ಯ!
ನಿಮ್ಮ ಸದ್ಭಕ್ತರೊಡನೆ ವಿರೋಧಮಾಡಿದೊಡೆ

ಎನ್ನ ಕೊಲುವುದಾಗಿ –
ನಿಮ್ಮ ಪುರಾತನರಿಗಂಜಿ ಬೆಸಗೊಂಡೊಡೆ ಎನ್ನ ಕಯ್ವುದಾಗಿ,
ಅನ್ಯ ಹಗೆಯೆಲ್ಲಿ, ಕಳೆಯೆಲ್ಲಿ?
ಬಾಗಿದ ತಲೆಯ ಮುಗಿದ ಕೈಯಾಗಿರಿಸು
ಕೂಡಲಸಂಗಮದೇವಾ' (ಬ.ಹೆ.ವ. ೮೮)

ಎಂದೂ ಬೇಡಿಕೊಂಡರು : 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು ನಂಬಿ ನಡೆದರು:

'ಹೊಯಿದವರೆನ್ನ ಹೊರೆದವರೆಂಬೆನು;
ಬಯಿದವರೆನ್ನ ಬಂಧುಗಳೆಂಬೆನು;
ನಿಂದಿಸಿದವರೆನ್ನ ತಾಯಿತಂದೆಗಳೆಂಬೆ;
ಆಳಿಗೊಂಡವರೆನ್ನ ಆಳ್ದರೆಂಬೆ;
ಜರಿದವರೆನ್ನ ಜನ್ಮ ಬಂಧುಗಳೆಂಬೆ;
ಕೊಂಡಾಡಿದವರೆನ್ನ ಹೊನ್ನಶೂಲದಲ್ಲಿಕ್ಕಿದವರು
ಕೂಡಲಸಂಗಮದೇವಾ' (ಬ.ಹೆ.ವ.೭೩)

ಎಂದು ಸಾರಿ ಅದರಂತೆ ಆಚರಿಸಿತೋರಿದರು : 'ಮರದ ನೆಳಲಲಿದ್ದು ತನ್ನ ನೆಳಲನರಸ ಬಹುದೆ?' (೩೩೫) ಎಂದು ಕೇಳಿ ತೆರೆಮರೆಯಲ್ಲಿದ್ದೇ ತನಿಗಂಪು ಸೂಸಿದರು; 'ಮಾವಿನ ಕಾಯಿಯೊಳಗೊಂದು ಎಕ್ಕೆಯಕಾಯಿ ನಾನಯ್ಯ' (೩೩೨) ಎಂದು ಒಪ್ಪಿ 'ಹಾವತೋರಿ ಹವಿಯ ಬೇಡುವ' (೩೩೧) ವಿಕ್ರುತವೇಷಧಾರಿ ತಾವೆಂದು ತೋಡಿಕೊಂಡರು, 'ಜಂಗಮ ವೆನ್ನ ವರೆನ್ನ ವರೆಂಬವರ ಕೆರಹ ಹೊತ್ತಿರಿಸೆನ್ನನು, ಕೂಡಲಸಂಗಮದೇವಾ' (೩೬೨) ಎಂದು ಕೇಳಿಕೊಂಡರು, 'ಬೆಳೆಯದ ಮುನ್ನವೆ ಕೊಯ್ವರೆ?' (೩೮೫) 'ಕೂಡಲಸಂಗಮದೇವಾ, ನೀನೆನಗೊಳ್ಳಿದನಾದರೆ ಎನ್ನ ಹೊಗಳತೆಗಡ್ಡಬಾರಾ, ಧರ್ಮಿ' (೩೮೬) ಎಂದು ಕೋರಿದರು:

"ಭಕ್ತದೇಹಿಕ ದೇವನಪ್ಪ ದೇವನು ಸದ್ಭಕ್ತರ ಬಳಿಯಲು ಬಪ್ಪನಾಗಿ,
ಆಳ್ದನು ಬರಲು ಆಳು ಮಂಚದ ಮೇಲಿಪ್ಪುದು ಗುಣವೆ ಹೇಳಾ.
ಕೂಡಲಸಂಗಮದೇವರು–
ಜಂಗಮರೂಪಾಗಿ ಸಂಗಯ್ಯ ಬಂದಾನೆಂದು
ಎಂದೆಂದೂ ನಾನು ಮಂಚವನೇರದ ಭಾಷೆ" (೪೯೫).

ಎಂದು ಭಾಷೆಕೊಟ್ಟರು : ಇನ್ನೂ ಅನೇಕ ಭಾಷೆಗಳನ್ನು ತೊಟ್ಟರು : 'ಜಂಗಮದ ಸನ್ನಿಧಿಯಲ್ಲಿ ನಾನು ವಾಹನವನೇರಲಮ್ಮೆ : (ಶಿವನಾಗಮಯ್ಯನ ಸನ್ನಿಧಿಯಲ್ಲಿ ಮೇಲೆ

ಏರಿದ್ದಂತೆ) ಜಂಗಮ ಬರಲಾಸನದಲ್ಲಿರಲಮ್ಮೆ ; ಜಂಗಮದ ಮುಂದೆ ದಿಟ್ಟತನದಲ್ಲಿ ಬೆರೆತು ನಿಂದಿರಲಮ್ಮೆ; ನಿನ್ನವರ ಸುಳುಹು ನೀನೆಂದೇ ಭಾವಿಸಿ ತೊತ್ತು ಭೃತ್ಯನಾಗಿಪ್ಪೆನಯ್ಯಾ, ಕೂಡಲಸಂಗಮದೇವಾ' (೩೬) ಬಸವಣ್ಣ ಎಷ್ಟು ಎಚ್ಚರದಿಂದ ವರ್ತಿಸುತ್ತಿದ್ದನೆಂಬುದಕೆ ಅತ್ಯಂತ ಮಾನವೀಯವಾದ ಉದಾಹರಣೆಗಯೊಂದಿಲ್ಲಿದೆ; ನೀಲಾಂಬಿಕೆಯೋ ಗಂಗಾಂಬಿಕೆಯೋ ಗೊತ್ತಿಲ್ಲ. ಇಬ್ಬರಲ್ಲಿ ಒಬ್ಬಳು ಹಗರಣ ಪಂಕ್ತಿಯ ನಡುವೆ ಕುಳಿತಿದ್ದ ಬಸವಂಗೆ ಪತಿಯೆಂಬ ಮೋಹದಿಂದ ಮಿಗಿಲಾಗಿ ದೇವಾನ್ನ ಬಡಿಸುತ್ತಾಳೆ. ಬಸವನೇನು ಮಾಡುತ್ತಾನೆ?

'ಹರಗಣಪಂಕ್ತಿಯ ನಡುವೆ ಕುಳ್ಳಿರ್ದು
ನಾನು ಒಡೆಯತನದ ನಾಯತೇಜವ ಹೊತ್ತುಕೊಂಡು
ಮಡದಿಯೆನ್ನಗಲೊಳಗೆ ಸಕಲದೇವಾನ್ನವ
ಒಡೆಯರಿಂದಲೂ ಮಿಗಿಲಾಗಿಕ್ಕಲು
ತೆಗೆದಿರಿಸಿದೆನು' (೪೩೯)

ಎಂಥ ಮಹಾನುಭಾವ ಬಸವ! 'ನೀನಿಕ್ಕಿದ ಬೀಯದಲ್ಲಿ ವಂಚನೆಯುಳ್ಳರೆ ಸಂಗಾ, ನಿಮ್ಮ ತೊತ್ತುತನಕ್ಕೆ ದೂರವಯ್ಯಾ; ಕದ್ದುತಿಂದರೆ ಕೈಹಿಡಿದೊಮ್ಮೆ ಬಡಿದು ತುಡುಗುಣಿತನವ ಬಿಡಿಸಯ್ಯಾ' (೪೩೩) ಎಂದು ಬೇಡಿಕೊಂಡ ಬಸವ ಸಂಗೆ ಹಿಡಿದು ಬಡಿವ ಮುನ್ನವೆ ತುಡುಗುಣಿತನವನ್ನು ತೊಡೆದುಕೊಂಡ. ಎಲ್ಲರಿಗೆ ಸಮನಾಗಿ ಸಲ್ಲದುದನ್ನು ತಿಂದರೆ ತುಡುಗುಣಿತನವದು : ಎಲ್ಲರಿಗೆ ಸಮನಾಗಿ ಸಲ್ಲದುದನ್ನು ತಿಂದರೆ ತುಡುಗುಣಿತನವದು: ಎಲ್ಲರಿಗೆ ಸಮಪಾಲು ಸಲ್ಲಿಸದೆ ತಿಂದರೆ ತುಡುಗುಣಿತನವದು. ಇಂತ ಸೊಣಗತನಕ್ಕೆ ಸೂಕೆರತನಕ್ಕೆ ಎಡೆಗೊಡುವರೆ ಬಸವಣ್ಣನವರು?

ಈ ದಾರಿ ತುಳಿಯುವುದರಿಂದ ಬಡತನ ಬಂದೀತೆಂಬ ಭಯ ಕಾಡುತ್ತಿದೆಯೆ. 'ನಮ್ಮ ಕೂಡಲಸಂಗನ ಶರಣರಿಗೆ ಮಾಡಿ ಮಾಡಿ ಧನ ಸವೆದು ಬಡವಾದರೆ ಆ ಭಕ್ತನು ಆ ಲಿಂಗಕ್ಕೆ ಪೂಜೆಯಹನು' (೧೫೦) ಅಂಥ ಭಕ್ತ ಮಾಡುವ ಪೂಜೆಯಷ್ಟೇ ಪೂಜೆಯಲ್ಲ. ಆ ಭಕ್ತನೇ ಪೂಜೆಲಿಂಗಕ್ಕೆ; ಅವನೇ ಜಾಣರಲ್ಲಿ ಜಾಣ; ಗೀತವ ಬಲ್ಲಾತ ಜಾಣನಲ್ಲ; ಮಾತ ಬಲ್ಲಾತ ಜಾಣನಲ್ಲ; ಜಾಣನು, ಜಾಣನು, ಆತ ಜಾಣನು – ಲಿಂಗವ ನೆರೆನಂಬಿದಾಗ; ಜಾಣನು: ಜಂಗಮಕ್ಕೆ ಸವೆಸುವಾತ – ಆತ ಜಾಣನು; ಯಾಕೆ> 'ಜವನ ಬಾಯಲು ಬಾಲವ ಕೊಯ್ದು ಹೋದಾತ – ಆತ ಜಾಣನು, ಕೂಡಲಸಂಗಮದೇವಾ' (೧೫೩) ಹೀಗೆ ನಿಜಭಕ್ತನಾಗಿ ತಾನೇ ಲಿಂಗಕ್ಕೆ ಪೂಜೆಯಾಗದೇ ಬಾಹ್ಯಾಡಂಬರಕ್ಕಾಗಿ, ಡಂಭಕ್ಕಾಗಿ ಮಾಡುವ ಪೂಜೆಯೆಂದರೆ 'ಹಾಗದ ಕೆರಹ ಹೊರಗೆ ಕಳೆದು ದೇಗುಲಕ್ಕೆ ಹೋಗಿ ದೇವರಿಗೆ ನಮಸ್ಕಾರವ ಮಾಡುವಂತೆ ತನ್ನ ಕೆರಹಿನ ಧ್ಯಾನವಲ್ಲದೆ ದೇವರ ಧ್ಯಾನವಿಲ್ಲಾ;'

(೧೯೯) 'ಹಲವು ಮಣಿಯ ಕಟ್ಟಿ ಕುಣಿಕುಣಿದಾಡಿ, ಹಲವು ಪರಿಯಲಿ ವಿಭೂತಿಯ ಹೂಸಿ, ಗಣಾಡಂಬರದ ನಡುವೆ ನಲಿನಲಿದಾಡಿ, ಉಂಡು, ತಾಂಬೂಲಗೊಂಡು ಹೋದುದಲ್ಲ! ಇದು 'ತನು–ಮನ–ಧನವ ಸಮರ್ಪಿಸಿದವರ ಎಂತೊಲಿವನಯ್ಯಾ ಕೂಡಲಸಂಗಮದೇವಾ? (೨೦೫) 'ಬಂದ ಸಮಯವನರಿತು ಇದ್ದುದ ವಂಚಿಸದಿದ್ದರೆ ಕೂಡಲಸಂಗಮದೇವನೊಲಿದು ಸಲಹುವ' (೨೧೫) 'ತನು–ಮನ–ಧನವನುವಾದರೆ ಕೂಡಲಸಂಗಮದೇವನೊಲಿವ' (೨೧೬) 'ಅರ್ಥಪ್ರಾಣಾಭಿಮಾನದಲ್ಲಿ ವಂಚನೆಯಿಲ್ಲದ ಭಕ್ತಿ ಸಮಯಾಚಾರ' (೨೧೭) 'ಇದ್ದುದ ವಂಚನೆಯ ಮಾಡದಿದ್ದರೆ ಅದುನೇಮ' (೨೩೧) ವಂಚನೆಯಿಲ್ಲದ ಭಕ್ತಿ ವಂಚಿತರಿಗೆ ವರದಾನ, 'ವಿಭವಕ್ಕೆ ಮಾಡಿದವನ ಭಕ್ತಿ ಇರುಳು ಸತ್ತಿಗೆಯ ಮೇಲೆ ಹಿಡಿಸಿಕೊಂಡಂತೆ! (೨೨೭) ಆದುದರಿಂದ.

'ಆಡಿ ಅಳುಪದಿರಾ, ಲೇಸ ಮಾಡಿ ಮರುಗದಿರಾ, ಎಲೇ ಮನವೇ;
ಕೂಡಿ ತಪ್ಪದಿರಾ, ಬೇಡಿದವರಿಗಿಲ್ಲೆನ್ನದಿರು, ಕಂಡಾ ಮನವೇ:
ನಾಡ ಮಾತು ಬೇಡ, ಸೆರಗೊಡ್ಡಿ ಬೇಡು ಕೂಡಲಸಂಗನ ಶರಣರ.'
(೨೭೮)

ಇದನ್ನು 'ಮನಕ್ಕೆ ಮನವೇ ಸಾಕ್ಷಿ' (೩೧೧)ಯಾಗಿ ಆಚರಿಸಬೇಕು. ಆಗ ಮಾತ್ರ ನಿಜಾಚರಣೆಯೋ ಮಿಥ್ಯಾಚರಣೆಯೋ – ಎಂಬುದರ ಪರೀಕ್ಷೆ. ನೋಡಿದವರಿಗೆಂತು ಗೊತ್ತಾಗುತ್ತದೆ ಒಳಗಿನ ರಣರಂಗ? ಮನಕೆಕ ಮನವೇ ಸಾಕ್ಷಿಯಾದಾಗ ಮಾತ್ರ. 'ತನು–ಮನ–ಧನದಲ್ಲಿ ಮಾಟ–ಕೂಟವೆಂದರಿಯದ ತಪ್ಪೆನ್ನದು, ತಪ್ಪೆನ್ನದು, (೩೧೪) ಎಂಬುದರ ಅರಿವಾಗುತ್ತದೆ: ಎನ್ನ ತಪ್ಪು ಅನಂತ ಕೋಟಿ : ನಿಮ್ಮ ಸೈರಣೆಗೆ ಲೆಕ್ಕವಿಲ್ಲಾ ಇನ್ನು ತಪ್ಪಿದೆನಾದರೆ ನಿಮ್ಮ ಪಾದವೇ ದಿಬ್ಯ ; ಕೂಡಲಸಂಗಮದೇವಯ್ಯಾ' ನಿಮ್ಮ ಪ್ರಮಥರ ಮುಂದೆ ಕಿನ್ನರಿ ಬೊಮ್ಮಣ್ಣನೇ ಸಾಕ್ಷಿ; (೩೨೨) ಎಂದು ಅರಿಕೆ ಮಾಡಿಕೊಳ್ಳಲು ಸಾಧ್ಯವಾಗುತ್ತದೆ : ಮಡಿವಳ ಮಾಚಯ್ಯನೇ ತೋರಲಿ ಮೋಳಿಗೆಯ ಮಾರಯ್ಯನೇ ತೋರಲಿ, ಅಲ್ಲಮಪ್ರಭುಗಳೆ ತೋರಲಿ – ತಪ್ಪನ್ನು ತಕ್ಷಣ ಒಪ್ಪಿಕೊಂಡು ಒಪ್ಪನ್ನು ಅಪ್ಪಿ 'ಸುಳಿದೆಗೆದು ಬೆಳೆಯುವುದು ಸಾಧ್ಯವಾಗುತ್ತದೆ' 'ಅಡಿಗಡಿಗೆ ಎನ ಮನವ ಜಡಿದು ನೋಡದಿರಯ್ಯಾ; ಬಡವನೆಂದೆನ್ನ ಕಾಡದಿರಯ್ಯಾ; ಎನಗೆ ಒಡೆಯರುಂಟು, ಕೂಡಲಸಂಗನ ಶರಣರು.' (೩೨೩) ಎಂದು ಸಾರುವುದು ಸಾಧ್ಯವಾಗುತ್ತದೆ.

'ಎನಗೊಡೆಯರುಂಟು ಕೂಡಲಸಂಗನ ಶರಣರು.' ಎಷ್ಟು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಬಸವಣ್ಣನವರಿದನ್ನು, ಅದೆಂಥ ಒಡೆಯರವರು?

'ಭಕ್ತಿಯಿಲ್ಲದ ಬಡವನಾನಯ್ಯಾ;
ಕಕ್ಕಯ್ಯನ ಮನೆಯಲು ಬೇಡಿದೆ; ಚೆನ್ನಯ್ಯನ ಮನೆಯಲು ಬೇಡಿದೆ;

ದಾಸಯ್ಯನ ಮನೆಯಲೂ ಬೇಡಿದೆ;
ಎಲ್ಲಾ ಪುರಾತನರು ನೆರೆದು ಭಕ್ತಿ ಭಿಕ್ಷವನಿಕ್ಕಿದರೆ
ಎನ್ನ ಪಾತ್ರೆ ತುಂಬಿತ್ತು, ಕೂಡಲಸಂಗಮದೇವಾ?' (೩೪೯)

ಇದು ಮತ್ತೆ ಮಾನವನ ಮೇಲ್ಮೆಯ ನಂದೀಧ್ವಜ; ಸಂಗನೊಡನೆ ಸಂಗರಕ್ಕೂ ಸಿದ್ಧ ಬಸವಣ್ಣನವರು; ಆದರೆ ಶರಣರೊಡನೆ ಸರಸವಾಡಲೂ ಸಿದ್ಧರಿಲ್ಲ. ಅವರ ಧೋರಣೆಯನ್ನೆಲ್ಲಾ ಒಂದೇ ವಾಕ್ಯದಲ್ಲಿ ಅಡಗಿಸಿಟ್ಟಿದ್ದಾರೆ ಅವರು : 'ಕೂಡಲ ಸಂಗಮ ದೇವಾ; ನಿನಗೆ ವೀರನಪ್ಪೆ, ನಿಮ್ಮ ಶರಣರಿಗೆ ವಧುವಪ್ಪೆ' (೭೦೩) 'ನಾನಾರ ಹಂಗಿನವನಲ್ಲ, ನಿಮ್ಮ ಶರಣರ ಹಂಗಿನವನಯ್ಯಾ ಕೂಡಲಸಂಗಮದೇವಾ' (೪೫೦) ಎಂದು ಘೋಷಿಸಿದ ಬಸವಣ್ಣನವರು ಶರಣರಿಗೆ ವಧುವಾಗಿ–ಎಂದರೆ ವಧುವಿನಂತೆ ಮಾರ್ದವ ಮಾಧುರ್ಯಗಳೊಂದಿಗೆ ಅವರ ಸೇವಿಸಿದುದು ಅವರ ಜೀವನದುದ್ದಕ್ಕೂ ಎದ್ದು ಕಾಣುತ್ತಿದೆ. ಅವರು ವೀರನಾಗಿ ಸಂಗನಸೇವಿಸಿದುದೆಂತು?

'ಅಯ್ಯಾ ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದೊಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ' ಎಂದು ಆಣೆಯಿಟ್ಟುಕೊಂಡಿರುವ ಮತ್ತು,

'ಅಯ್ಯಾ ನಿಮ್ಮ ಶರಣರ ಮರ್ತ್ಯಕ್ಕೆ ತಂದೆಯಾಗಿ
ನೆನೆನೆನೆದು ಸುಖಿಯಾಗಿಯಾನು ಬದುಕಿದೆನಯ್ಯಾ
ಅದೇನು ಕಾರಣ ತಂದೆಯೆಂದರಿಯೆನಯ್ಯಾ;
ಎನ್ನ ಕಾರಣತಂದೆಯೆಂದರಿದೆನಯ್ಯಾ
ಅರಿದರಿದು ನಿಮ್ಮ ಶರಣನು ಆಚರಿಸುವಾಚರಣೆಯಕಂಡು
ಕಣ್ದೆರೆದೆನಯ್ಯಾ ಕೂಡಲಸಂಗಮದೇವಾ.'

ಎಂದು ಹೇಳಿರುವ ಅವರು ಮತ್ತೆಲ್ಲಿಯೋ ಇರುವುದಕ್ಕಿಂತ ಈ ಮರ್ತ್ಯದಲ್ಲಿಯೇ ಶಿವಭಕ್ತನಾಗಿ ಹುಟ್ಟಿ ಬಂದು, ಶರಣನು ಆಚರಿಸುವ ಆಚರಣೆಯ ಕಂಡು ಕಣ್ದೆರೆದು. ನೆನೆನನೆದು ಸುಖಿಯಾಗಿ ಬದುಕುವುದನ್ನೇ ಬಯಸಿದರು. ಆದುದರಿಂದ, ಸಂಗನೊಡನೆ ಸರಸವಾಡಬಲ್ಲರವರು, ಸಲಿಗೆದೋರಬಹುದವರು, 'ಕಲೆಯ ಕೈದುವಿನಂತೆ' (೭೬೨) ಯೂ ನಡಿಸಬಲ್ಲರವರು. ಆದರೆ ಶರಣರೇ ಗತಿಮತಿಯೆಂದು ನಂಬಿದರಾಗಿ ಅವರೊಡನೆ ಸರಸಸಲ್ಲದೆಂದು ವಧುವಿನಂತೆಯೇ ಅವರೊಡನೆ ನಡೆದುಕೊಂಡರು.

ಕೂಡಲಸಂಗಮನೊಡನೆ? ವಧುವಿನಂತೆಯೂ ನಡೆದುಕೊಂಡಿದ್ದಾರೆ; ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು, ಬತ್ತಿಯನಿಕ್ಕಿ ಬರುವ ಹಾರುತ್ತಿದ್ದೆ ನೆಲಗವ್ವಾ :

ತರಗೆಲೆ ಗಿರಿಕೆಂದರೆ ಹೊರಗನಾಲಿಸುವೆ:' (೩೭೪) ಇದು ಶರಣರ ಬರವ ಕಾಯ್ದ ಪರಿಯಾದರೆ, 'ಎನ್ನಗಂಡ ಬರಬೇಕೆಂದು, ಎನ್ನಂತರಂಗವೆಂಬ ಮನೆಯತೆರವು ಮಾಡಿ, ಅಷ್ಟದಳವೆಂಬ ಓವರಿಯೊಳಗೆ ನಿಜವಾಸವೆಂಬ ಹಾಸಿಗೆಯ ಹಾಸಿ.... ಪಶ್ಚಿಮದ್ವಾರವೆಂಬ ಬಾಗಿಲತೆರೆದು ಕಂಗಳೇ ಪ್ರಾಣವಾಗಿ ಹಾರುತಿರ್ದೆನಯ್ಯಾ' (ಬ.ಹೆ.ವ.೧೭) ಇದು ಕೂಡಲಸಂಗನ ದಾರಿಯ ಕಾಯ್ದ ರೀತಿ. ಆದರೆ ಯಾವಾಗಲೂ ಇದೇ ರೀತಿಯೇ ರೀತಿಯೇನಲ್ಲ ಸಂಗನನೊಲಿಸಲು ಮಾರಾಂತು ನಿಲ್ಲುವ ಮಾರ್ಗ (Confrontation)ವೂ ಇದೆ;

'ನೀನಿರಿಸಿದ ಮನದಲ್ಲಿ ನಾನಂಜೆನಯ್ಯಾ,
ಮನವು ಮಹಾಘನಕ್ಕೆ ಶರಣಗತಿವೊಕ್ಕುದಾಗಿ;
ನೀನಿರಿಸಿದ ಧನದಲ್ಲಿ ನಾನಂಜೆನಯ್ಯಾ –
ಧನವು ಸತಿ ಸುತ ಮಾತಾ ಪಿತರಿಗೆ ಹೋಗದಾಗಿ;
ನೀನಿರಿಸಿದ ತನುವಿನಲ್ಲಿ ನಾನಂಜೆನಯ್ಯಾ,
ತನುವು ಸರ್ವಾರ್ಪಿತದಲ್ಲಿನಿಯತಪ್ರಸಾದ ಭೋಗಿಯಾಗಿ;
ಇದು ಕಾರಣ, ವೀರಧೀರ ಸಮಗ್ರಾಹಕನಾಗಿ
ನಿಮಗಾನಂಜೆ, ಕೂಡಲಸಂಗಮದೇವ.' (೭೨೯)

'ನಿಮ್ಮ ಅಂಕೆಗೆ, ಝುಂಕೆಗೆ ಶಂಕಿಸಿದೆನಾದರೆ ಎನ್ನ ಲೆಂಕತನಕ್ಕೆ ಹಾನಿ' ಎಂದು ಎದೆತಟ್ಟಿ ಹೇಳಿದ ಬಸವಣ್ಣನವರು ಹೆತ್ತ ತಂದೆಗೆದುರಾಗಿ ನಿಂತಂತೆ ಜಗದ ತಂದೆಗೂ ಮಾರೊಡ್ಡಿ ನಿಲ್ಲುತ್ತಾರೆ :

'ಮುನಿದೆಯಾದೊಡೆ ಒಮ್ಮೆ ಜರೆದೊಡೆ ಸಾಲದೇ?
ಅಕಟಕಟಾ, ಮದನಂಗೆ ಮಾರುಗುಡುವರೇ?
ಹಗೆಗೆ ಮಾರುಗೊಟ್ಟು ನಿನ್ನವರನೊಪ್ಪಿಸುವರೇ
ಕೂಡಲಸಂಗಮದೇವಾ' (೪೪)

ನಿನ್ನವರನ್ನೇ ವೈರಿಗಳಿಗೆ ಒಪ್ಪಿಸುವವನು ನೀನೆಂಥ ದೇವ? ಹೀಗೆ ಮಾಡುವುದಿದ್ದರೆ ಹುಟ್ಟಿಸಿದೆಯಾದರೂ ಏತಕ್ಕೆ? ಇಹಲೋಕ ದುಃಖಿಯಾಗಿ, ಪರಲೋಕ ದೂರನಾಗಿ ಗೋಳಿಡಲೆಂದೆ? ತರುಮರವಾಗಿ ಹುಟ್ಟಿಸಬಹುದಿತ್ತಲ್ಲ? (೬೪)

'ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಇಳಿಯಬಿಟ್ಟೊಡೆ
ನಿಮ್ಮ ನಗುವಯ್ಯಾ;
ಶಿವಬಟ್ಟೆಯೊಳೆನ್ನನು ಇರಿಸಯ್ಯಾ... ಬಟ್ಟೆಯ ತೋರಯ್ಯಾ;

ಹುಯ್ಯಲಿಟ್ಟೆನು – ಗಣಂಗಳು ಕೇಳಿರಯ್ಯಾ,
ಕೂಡಲಸಂಗಮದೇವನನ್ನು ಕಾಡಿಹನಯ್ಯಾ' (೬೩).

ಕಾಡಿದವರ ವಿರುದ್ಧ ಮಗು ತಾಯಿಗೆ ದೂರು ಹೇಳುವಂತೆ ಕಾಡುವ ದೇವನ ವಿರುದ್ಧ ಗಣಂಗಳಿಗೆ ದೂರು ಹೇಳುತ್ತಿದ್ದಾರೆ ಬಸವಣ್ಣನವರು.

'ಎಂತಕ್ಕೆ ನಾ ನಿಮ್ಮ ದೇವರೆಂದರಿದೆನು?
ಇಂತಾಗಿ ನೀವೆನ್ನ ನಾರೆಂದರಿಯಿರಿ!....
ಕೂಡಲಸಂಗಮದೇವಾ, ಕೇಳಯ್ಯಾ,
ಕೋಟಿ ಕೋಟಿ ವರ್ಷಕೋಟಲೆಗೊಂಡೆನಯ್ಯಾ!" (೨೬೮)

ನಾನಿನ್ನನರಿದಮೇಲು, ನೀನೆನ್ನನರಿದಿರಬೇಕೆ? ಕೋಟಿ ಕೋಟಿ ವರ್ಷಗಳಿಂದ ಕೋಟಲೆಗೊಳ್ಳುತ್ತಿರುವುದನ್ನು ಕಡೆಗಣಿಸಬೇಕೆ? ಕೋಟಲೆಗಳನ್ನು ಕೊಟ್ಟವನು ಅವುಗಳೊಡನೆ ಕಾದಿ ಗೆಲಿಸುವ ಅಭಯಪ್ರಧಾನವನ್ನೂ ಮಾಡಬೇಕು. ಕಾದಿಗೆಲಿಸದಿದ್ದರೆ ಯಾರಿಗೆ ಭಂಗ?

'ಅಂಕ ಓಡಿದರೆ ತೆತ್ತಿಗಂಗೆ ಭಂಗವಯ್ಯಾ!
ಕಾದಿ ಗೆಲಿಸಯ್ಯಾ ಎನ್ನನು,
ಕಾದಿ ಗೆಲಿಸಯ್ಯಾ, ಕೂಡಲಸಂಗಮದೇವಾ!.... (೨೯)

ಕಾದಿ ಗೆಲಿಸುವುದಿಲ್ಲವೆ? ಆಗಲಿ, ನಾನೇ ಕಾದುವೆನು; ಕಾದಿದಲ್ಲದೆ ಮಾಣೆನು :

'ಅಟ್ಟುಟಿಕೆಯ ಮಾತನಾಡಲದೇಕೊ?
ಮುಟ್ಟಿಬಂದುದಕ್ಕಂಜಲದೇಕೊ? (ಶಿವನಾಗಮಯ್ಯನನ್ನೆ?)
ಕಾದಿದಲ್ಲದೆ ಮಾಣೆನು; ಓಡಿದರೆ ಭಂಗಹಿಂಗದಾಗಿ,
ಕೂಡಲಸಂಗಮದೇವಾ, ಎನ್ನ ಭಂಗ ನಿಮ್ಮದಾಗಿ!' (೭೨೬)

'ಕಾದಿದರೆ ಬಾಧೆಗಳು ಬಹಳ' ಎಂದು ವಿಗರ್ವಿಸುತ್ತಿಹೆಯೇನು? ಏನದೊಡಾಗಲಿ, ಕಾದಿ ಗೆಲಿವುದು ನನ್ನದಾಗಲಿ!

'ಎನಿಸೆನಿಸೆಂದೊಡೆ ಧೃತಿಗೆಡೆನಯ್ಯಾ;
ಎಲುದೋರಿದರೆ, ನರ ಹರಿದರೆ, ಕರುಳು ಕುಪ್ಪಳಿಸಿದರೆ
ನಾ ಧೃತಿಗೆಡೆನಯ್ಯಾ;
ಸಿರ ಹರಿದು ಅಟ್ಟೆ ನೆಲಕ್ಕೆ ಬಿದ್ದರೆ
ನಾಲಗೆ ಕೂಡಲಸಂಗಾ, ಶರಣೆನ್ನುತ್ತಿದ್ದೀತಯ್ಯಾ!' (೯೧)

ಇಷ್ಟೇ ಅಲ್ಲ, ಒಣಗಿಸಿ ಎನ್ನ ಘಣಘಣಲನೆ ಮಾಡಿದರೆಯೂ, ಎನ್ನ ಹೆಣನ ಮೇಲೆ ಕಂಚಿಟ್ಟುಂಡರೆಯೂ ಹರಣವುಳ್ಳನನ್ನಕ್ಕ ನಿಮ್ ಚರಣವ ನೆನೆವುದ ಮಾಣೆ!' (೯೨) 'ಮರಣವೆ ಮಹಾನವಮಿ' ನನಗೆ (೯೮) ಆದುದರಿಂದ.

'ಅರ್ಥವನರ್ಥವ ಮಾಡಿ ಕೋಳಾಹಳಂಗೆಯ್ಯುತ್ತಿರಲಿ;
ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತ್ತಿರಲಿ;
ಮುಟ್ಟುವ ಸ್ತ್ರೀಯ ಕಣ್ಣಮುಂದೆ
ಅಭಿಮಾನಗೊಂಡು ನೆರೆಯುತ್ತಿರಲಿ;
ಇಂತೀ ತ್ರಿವಿಧವು ಹೊರಗಣವು.
ಇನ್ನೆನ್ನಂಗದ ಮೇಲೆ ಬರಲಿ,
ಹಿಡಿಗಂಡಂಗೊಯ್ಯಲಿ, ಇಕ್ಕುವ ಸೂಲ ಪ್ರಾಪ್ತಿಸಲಿ,
ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ;
ಮತ್ತೆಯೂ ಲಿಂಗಾರಾಧನೆಯ ಮಾಡುವೆ;
ಜಂಗಮಾರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆನು!
ಇಂತಪ್ಪ ಭಾಷೆ ಕಿಂಚಿತ್ತು ಹುಸಿಯಾದರೆ
ನೀನಂದೆ ಮೂಗಕೊಯಿ, ಕೂಡಲಸಂಗಮದೇವಾ!' (೭೦೬)

ಕೂಡಲಸಂಗನೂ ಕಂಪಿಸಿರಬೇಕು. ಈ ಕಲಿತನದ ಫಲದ ಭಾಷೆಯನ್ನು ಕೇಳಿ ಕೇಳಿ ಕಲಾಲುಕಿತ್ತನೇನೋ!

'ಕಟ್ಟಿದೆ ಒರೆಯ, ಬಿಟ್ಟೆ ಜನ್ನಿಗೆಯರ,
ಮುಟ್ಟಿ ಬಂದಿರಿದರೆ ಓಸರಿಸುವನಲ್ಲ,
ಓಡದಿರು, ಓಡದಿರು!
ನಿಮ್ಮ ಶರಣರ ಮನೆಯ ಬಿರುದಿನ ಅಂಕಕಾರ –
ಓಡದಿರು ಓಡದಿರು, ಎಲೆ ಎಲೆ ದೇವಾ –
ಎಲೆ ಎಲೆ ಸ್ವಾಮೀ ಎಲೆ ಎಲೆ ಹಂದೇ!
ಕೂಡಲಸಂಗಮದೇವಾ' (೭೦೦)

ಕೊನೆಗೂ ಓಡಿ ಹೋದನೇನೋ ಕೂಡಲಸಂಗ. ಇಲ್ಲದಿದ್ದರೆ ಈ ವಚನಕ್ಕೆ ಅರ್ಥವೇನು?

'ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಯ್ಯಾ
ಎರಡಾಳಿನ ಭಾಷೆಯ –
ಕೊಲುವೆನೆಂಬ ಭಾಷೆ ದೇವನದು;
ಗೆಲುವೆನೆಂಬ ಭಾಷೆ ಭಕ್ತನದು!

ಸತ್ಯವೆಂಬ ಕೂರಲಗನೆ ತಳೆದುಕೊಂಡು
ಸದ್‌ಭಕ್ತರು ಗೆದ್ದರು, ಕಾಣಾ, ಕೂಡಲಸಂಗಮದೇವಾ' (೬೭೭)

ಬಸವನ ವಿಸ್ತಾರವಾದ ಭಾವಪ್ರಪಂಚವನ್ನೆಲ್ಲ ವಿಶಾಲವಾದ ವಿಚಾರಪ್ರಪಂಚವನ್ನೆಲ್ಲ ಸುತ್ತಿ ಹೊರಟ ಸ್ಥಳಕ್ಕೇ ಹಿಂದಿರುಗಿದ್ದೇವೆ – ಭಕ್ತಾಧಿಕ್ಯದ ಮೂಲ ಮನೋಭೂಮಿಕೆಗೇ ಮರಳಿದ್ದೇವೆ. ಗೆಲುವೆನೆಂಬ ಭಾಷೆ ಭಕ್ತನದು; ಕೊನೆಗೆ ಗೆಲ್ಲುವವನು ಭಕ್ತನೇ; ಅಂದರೆ ಎಂಥ ಭಕ್ತ?

'ಬಸವ ಬಾರೈ, ಮರ್ತ್ಯಲೋಕದೊಳಗೆ ಭಕ್ತರುಂಟೆ? ಹೇಳಯ್ಯಾ;
ಮತ್ತಾರೂ ಇಲ್ಲಯ್ಯಾ, ಮತ್ತಾರೂ ಇಲ್ಲಯ್ಯಾ,
ಮತ್ತಾರೂ ಇಲ್ಲಯ್ಯಾ!
ನಾನೊಬ್ಬನೆ ಭಕ್ತನು, ಮರ್ತ್ಯಲೋಕದೊಳಗಣ ಭಕ್ತರೆಲ್ಲರೂ
ಜಂಗಮಲಿಂಗ, ನೀನೆ, ಅಯ್ಯಾ – ಕೂಡಲಸಂಗಮದೇವಾ!' (೮೯೩)

ಮರ್ತ್ಯಲೋಕದ ಭಕ್ತರೆಲ್ಲ ಈಶ್ವರಸ್ವರೂಪವೆಂದೂ ತಾನು ಅವರೆಲ್ಲರ ಭಕ್ತನೆಂದೂ ತಿಳಿದು ಅದರಂತೆ ಆಚರಿಸುವ ಭಕ್ತ ಮಾತ್ರ ಗೆಲುವೆನೆನ್ನಬಲ್ಲ, ಗೆಲ್ಲಬಲ್ಲ! ಬಸವಣ್ಣನವರು ಇದೊಂದೇ ವಚನವನ್ನುಳಿಸಿ ಹೋಗಿದ್ದರೂ ಅವರ ಬಾನೆತ್ತರದ ವ್ಯಕ್ತಿತ್ವಕ್ಕೆ ವ್ಯತ್ಯಯ ಬರುತ್ತಿರಲಿಲ್ಲ.

ಇನ್ನು 'ಬಸವಣ್ಣನವರ ಸಂದೇಶವೇನು?' ಎಂಬ ಪ್ರಶ್ನೆಗೆ ಏನುತ್ತರ ಕೊಡುವುದು? ಅವರ ದಿವ್ಯ ಜೀವನವೇ ಅವರ ಸಂದೇಶವೆಂದು ಒಂದು ವಾಕ್ಯದಲ್ಲಿ ಹೇಳಬಹುದು. ಮಹಾಪುರುಷರ ಜೀವನ ನೀರ್ಗಲ್ಲ ಗುಡ್ಡದಂತೆಂದು ಹೇಳುತ್ತಾರೆ. ಹೊರಗೆ ತೋರುವುದಕ್ಕಿಂತ ಹೆಚ್ಚಾಗಿ ಅದು ಒಳಗೆ ಅಡಗಿರುತ್ತದೆ. ಬಸವಣ್ಣನವರ ಒಳಬಾಳಿನ ಅನೇಕ ಅದ್ಭುತ ಘಟನೆಗಳು ನಮಗೆ ಸಿಕ್ಕಿಲ್ಲ. ಸಿಕ್ಕುವಂತಿಲ್ಲ. ಆದರೂ ಬಾಲ್ಯದಿಂದ ಕೊನೆಯ ಗಳಿಗೆಯವರೆಗಿನ ಅವರ ಬಾಳು ಅಮರ ಸಂದೇಶದಂತಿದೆ. ತಮ್ಮ ಸಮಗ್ರ ಜೀವನವೇ ಜಗದ ಜೀವಿಗಳಿಗೆ ಚೈತನ್ಯದಾಯಕ ಸಂದೇಶವೆನಿಸಿದಂತೆ ಬದುಕಿದವರು ಮನುಕುಲದ ಚರಿತ್ರೆಯಲ್ಲಿಯೇ ಬಹಳ ಜನರಿಲ್ಲ. ಅವರಲ್ಲಿ ಬಹು ಮುಖಸಾಧನೆ ಸಿದ್ಧಿಗಳಿಂದ ಎದ್ದು ಕಾಣುವ ನಾಲ್ಕಾರು ಜನರಲ್ಲಿ ಬಸವಣ್ಣನವರೊಬ್ಬರೆಂದು ಧಾರಾಳವಾಗಿ ಹೇಳಬಹುದು.

ಅವರ ಜೀವನವೇ ಸಂದೇಶವೆಂಬುದು ಸರಿಯೇ; ಅವರ ಜೀವನದ ಮುಖ್ಯ ಸಂದೇಶವಾವುದೆಂದು ಕೇಳಿದರೆ ಕೊಲುವೆನೆಂಬ ದೈವಕ್ಕೆ ಗೆಲುವೆನೆಂದು ಉತ್ತರ ಕೊಡಬಲ್ಲ

ಸದ್‌ಭಕ್ತರ ಸಮಾಜದ ನಿರ್ಮಾಣವೇ ಆ ಸಂದೇಶವೆಂದು ಹೇಳಬಹುದು. ಬಸವಣ್ಣನವರು 'ಭಕ್ತೋಹಂ' ಎಂಬುದರಲ್ಲಿಯೇ ಧನ್ಯತೆಯನ್ನು ಕಂಡವರು; 'ಭಕ್ತಂ ಶರಣಂ ಗಚ್ಛಾಮಿ' ಎನ್ನುವುದರಲ್ಲಿಯೇ ಕೃತಕೃತ್ಯತೆಯನ್ನು ಕಂಡವರು; 'ಭಕ್ತಂ ಶರಣಂ ಗಚ್ಛಾಮಿ' ಎನ್ನುವುದರಲ್ಲಿಯೇ ಕೃತಕೃತ್ಯತೆಯನ್ನು ಕಂಡುಕೊಂಡವರು. ಆದುದರಿಂದ ಅವರ ಕನಸಿನ ಸಮಾಜವೆಂದರೆ ದೇವರ ಮುಂದೆ ಅಡ್ಡ ಬಿದ್ದು ಅಂಗಲಾಚಿ ಬೇಡದ, ಪರೋಪಜೀವಿಗಳಾಗಿ ಭೂಮಿಗೆ ಭಾರವಾಗದ, ಜಲ–ಗೋತ್ರ–ವರ್ಣ–ಲಿಂಗ–ವಯ– ಉದ್ಯೋಗ–ಭಾಷೆ–ವೇಷಾದಿಗಳ ಆಧಾರದ ಮೇಲೆ ಮೇಲು ಕೀಳುಗಳನ್ನು ಕಲ್ಪಿಸಿ ಅವುಗಳ ಬಲೆಯಲ್ಲಿ ಸಿಲುಕಿ ಒದ್ದಾಡದ, ಅನಾಮಿಕರಿಗೆ ಅಂಗೈ ತೋರಿಸಿ, ಜನ್ಮಕುಂಡಲಿ ತೋರಿಸಿ ಭವಿಷ್ಯ ಕೇಳಿ ಪೆಚ್ಚಾಗದ, ಕಲ್ಲುದೇವರು ಕಲ್ಲುಗುಡಿಗಳಿಗಾಗಿ ಕೈಬರಿದುಮಾಡಿಕೊಂಡು ನಡೆಲಿಂಗ–ನುಡಿಲಿಂಗಗಳಿಗಿಲ್ಲೆನ್ನದ, ಮಂಕುಬೂದಿ ಕೊಟ್ಟು ಮರುಳುಗೊಳಿಸುವ ಪವಾಡೋಪಜೀವಿಗಳ ಒಂಟೆ ಹಿಡಿತಕ್ಕೆ ಸಿಕ್ಕದ, ಕಾಯಕವನ್ನುಳಿದು ಮೂಗು ಹಿಡಿದು ನಾಮ ಜಪಿಸುತ್ತಲೋ ಮಣಿಯನೆಣಿಸುತ್ತಲೋ, ಕಟ್ಟುಕತೆಗಳನ್ನು ಕೇಳುತ್ತಲೋ ಕಾಲ ಕಳೆಯದ, ಸ್ವಂತ ಚಿಂತನೆಗಂಜದ, ದೈವಪ್ರಕೋಪಕ್ಕೆ ಅಳುಕದ, ದೌಷ್ಟ್ಯದ, ದೌರ್ಜನ್ಯದ. ಮೌಢ್ಯದ ಮುಂದೆ ಮೊಂಡ ಮೊರದ, ಎಲ್ಲರೂ ತನಗಾಗಿ ಎನ್ನದ ಸದ್‌ಭಕ್ತರ ಸಮಾಜ!

ಆ ಸಮಾಜಕ್ಕೆ ಪ್ರೇರಕ–ಧಾರಕಶಕ್ತಿಗಳಾವುವೆಂಬುದನ್ನು ಅವರ ಮಾತುಗಳಲ್ಲಿಯೇ ಹೀಗೆ ಸಂಗ್ರಹಿಸಿ ಹೇಳಬಹುದು; 'ದೇವನೊಬ್ಬ ನಾಮ ಹಲವು' (೬೧೫); ಆದರೆ 'ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ' (೬೧೮); ಆದುದರಿಂದ ಯಾವುದೊಂದು ನಾಮವನ್ನು ನಂಬಿದರೂ ಅದರಲ್ಲಿಯೇ ಏಕನಿಷ್ಠೆ ಬೇಕು; ಅವನನೊಲಿಸಲು ಸದ್ಭಕ್ತಿಯೊಂದೇ ಸಾಕು – ಉಳಿದೆಲ್ಲವನ್ನೂ ಬೇಂಕಿಗೆ ಹಾಕು; ಏನೂ ಗೊತ್ತಿಲ್ಲದಿದ್ದರೂ ನಂಬಿ ಕರೆದರೆ ಸಾಕು 'ಓ' ಎನ್ನುವನವನು; 'ದಂದಣದತ್ತಣ' ಎಂದರೂ ಒಲಿವನವನು (೧೭೬); ಪಶ್ಚಾತ್ತಾಪದಗ್ಧನಾಗಿ ಒಮ್ಮೆ ಮೋಕ್ಷವನ್ನೋ ಬೇಡಿಕೊಳ್ಳುವುದೇ ಬೇಡ –ಮೃಡನಾದೊಡಾಗಲಿ ಕಡಗಿ ಬೇಡದ ಭಾಷೆಯನ್ನು ತೊಡು; ಬೇಡಲೇಕೆ ಕಾಡಲೇಕೆ ಶಿವನ? ಸದ್ಭಕ್ತರ ಸಂಗವಿಲ್ಲದೆ ಸುಖಿಯಾಗಿರಲು? 'ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯಾ? ನಗುವುದು, ನುಡಿವುದು ಶಿವಭಕ್ತರೊಡನೆ' (೨೪೨) ಈ ಜಗತ್ತಿನಲ್ಲಿ ಭಕ್ತರೊಡನೆ ಬದುಕುವುದೇ, ಭಾಗ್ಯವೇ ಭಾಗ್ಯಗಳಲ್ಲಿ ಭಾಗ್ಯ. ಯಾಕೆಂದರೆ ಈ ಜಗತ್ತು ಮಾಯೆಯಲ್ಲ, ಮಿಥ್ಯೆಯಲ್ಲ – ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ, ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು; (೧೫೫) ಇಲ್ಲಿ ಭಕ್ತಿಪಕ್ಷವನ್ನಾಶ್ರಯಿಸಿ ಹುದುವಾಳ ಬೇಕು! ಲೇಸನಿಸಿಕೊಂಡು ಐದು ದಿನ ಬದುಕಿದರೂ ಸಾಕು; (೧೫೪) ಭಕ್ತಿ ಪಕ್ಷವೆಂದರೆ ಹಂಚಿ ಉಣ್ಣುವುದು – 'ಕಾಗೆಯೊಂದಗುಳ ಕಂಡರೆ ತನ್ನ ಬಳಗವೆಲ್ಲವ ಕರೆವಂತೆ, ಕೋಳಿಯೊಂದು ಕುಟುಕ ಕಂಡೆರೆ ತನ್ನ ಕುಲವನ್ನೆಲ್ಲ ಕರೆಯುವಂತೆ (೪೩೭) ತನಗೆ ದೊರೆತುದನ್ನು ಎಲ್ಲರೊಡನೆ ಹಂಚಿಕೊಂಡು ಉಣ್ಣುವ ಜೀವನವಿಧಾನವದು; ತನಗೆ ದೊರೆತುದು ತಾನೇ ದುಡಿದುದಾಗಿರಬೇಕು – ಸತ್ಯಶುದ್ಧ

ಕಾಯಕದಿಂದಲೇ ಬಂದುದಾಗಿರಬೇಕು; ಅದರಲ್ಲಿ ತನಗೆ ಅಗತ್ಯವಿದ್ದುದನ್ನು ಮಾತ್ರ ತನು ಸೇವಿಸಿ ಉಳಿದುದನ್ನು 'ಶಿವನ ಸೊಮ್ಮಿ'ಗೆ ಸಲ್ಲಿಸಬೇಕು. ತನ್ಮೂಲಕ ದಾಸೋಹ – ಜೀವಿಗಳಿಗೆ ದಾಸೋಹ ನಡೆಯಬೇಕು. ಯಾಕೆಂದರೆ ಸ್ಥಾವರಕ್ಕಿಂತ ಜಂಗಮ, ಜಡಕ್ಕಿಂತ ಜೀವಿ ಶ್ರೇಷ್ಠ ; ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ (೮೪೨). ಭಕ್ತರು ಭಕ್ತರನ್ನು ಕಂಡರೆ ಕೈ ಮುಗಿಯಬೇಕು, ಮೃದುವಚನಗಳನ್ನಾಡಬೇಕು. ಮೃದುವನಚಗಳೇ ಸಕಲ ಜಪತಪಗಳು; (೨೪೪) 'ಏನು ಬಂದಿರಿ, ಹದುಳವಿದ್ದಿರೆ?' ಎಂದರೆ ನಿಮ್ಮ ಮೈಸಿರಿ ಹಾರಿಹೋಹುದಿಲ್ಲ, ಕುಳ್ಳಿರೆಂದರೆ ನೆಲ ಕುಳಿಹೋಹುದಿಲ್ಲ. ಒಡನೆ ನುಡಿದರೆ ಸಿರಹೊಟ್ಟೆಯೊಡೆವುದಿಲ್ಲ. ಕೊಡಲಿಲ್ಲದಿದ್ದರೊಂದು ಗುಣವಾದರೂ ಇರಬೇಕು; (೨೪೧) ಭಕ್ತರು ಶಿವಭಕ್ತರ ನೋವೇ ಅದು ಲಿಂಗದ ನೋವೆಂದು ಭಾವಿಸಿ ಅವರು ನೊಂದರೆ ನಾವು ಬೆಂದೆವೆಂದು ನಂಬಿ ನಡೆಯಬೇಕು; (೪೦೬, ೪೦೮) ಭಕ್ತರಲ್ಲಿ ಬಡವ ಬಲ್ಲಿದರೆಂಬ ಭೇದ ಮಾಡಬಾರದು – 'ಕುದುರೆ ಸತ್ತಿಗೆಯವರ ಕಂಡರೆ ಹೊರಳಿ ಬಿದ್ದು ಕಾಲ ಹಿಡಿದು ಬಡ ಭಕ್ತರು ಬಂದರೆ ಎಡೆಯಿಲ್ಲ, ಅತ್ತಸನ್ನಿ' (೪೧೩) ಎನ್ನಕೂಡದು; ಭಕ್ತರ ಕಾಯಕವಾವುದೆಂದು ಕೇಳಬಾರದು, ಭಕ್ತರಲ್ಲಿ ಕುಲವನರಸಬಾರದು; (೪೫೨) ಭಕ್ತರು ಕಿರುಕುಳ ದೈವಗಳನ್ನು, ತಿಥಿ–ವಾರ–ಶಕುನ–ಮಂತ್ರ–ತಂತ್ರ – ಮೋಡಿ–ವಶೀಕರಣ–ತೀರ್ಥ–ಕ್ಷೇತ್ರ–ಯಜ್ಞ–ಯಾಗ–ಹೋಮ–ಹವನ–ಸೂತಕ–ಗೋತ್ರ–ಸೂತ್ರ–ಪೂಜಾರಿ–ಪುರೋಹಿತ–ಮೂಢರೂಢಿ–ಅಂಧವಿಶ್ವಾಸ–ಪರಾವಲಂಬನ ಇತ್ಯಾದಿಗಳನ್ನು ತೊರೆದು ಅಂತರಂಗ–ಬಹಿರಂಗ ಶುದ್ಧಿಗಳಿಂದಲೇ, ಅಂತ ರಂಗದ ತವಕ, ಹಾರೈಕೆ, ಹಂಬಲಗಳಿಂದಲೇ ಶಿವನನೊಲಿಸಬೇಕು – ಶರಣರ ಸಂಗವನ್ನೇ ಆಶ್ರಯಿಸಬೆಕು. ಬಾಳಿನ ಬೆಳೆಭೂಮಿಯಲ್ಲಿ ಹುಟ್ಟುವ ಅವಗುಣವೆಂಬ ಪ್ರಳಯದ ಕಸವನ್ನು ಕಿತ್ತೆಸೆದು ಸುಳಿದೆಗೆದು ಬೆಳೆಯಬೇಕು; ಬೇರೆಯವರಿಗೂ ಬೆಳೆಯಗೊಡಬೇಕು; ಬದುಕಬೇಕು. ಬದುಕಿಸಬೇಕು; ಒಲಿಯಬೇಕು. ಒಲಿಸಿಕೊಳ್ಳಬೇಕು; ಮರೆದು ಮಾನವರಾಗದೆ ಅರಿದು ಶರಣರಾಗಬೇಕು; ಒಲಿಯೇಕು, ಒಲಿಸಿಕೊಳ್ಳಬೇಕು; ಮರೆದು ಮಾನವರಾಗದೆ ಅರಿದು ಶರಣರಾಗಬೇಕು; ಏನಾದರೂ ಇಲ್ಲಿಯೇ – ಈ ಜಗತ್ತಿನಲ್ಲಿಯೇ, ಈ ಜನ್ಮದಲ್ಲಿಯೇ ಆಗಬೇಕು; ಸತ್ತ ಮೇಲೆ ಸ್ವರ್ಗವೆಂದರೆ ಕಬ್ಬಿನ ಸೋಗೆಯ ಮೆಲಿದಂತೆ; ಸ್ವರ್ಗನರಕಗಳೂ ಬೇರಿಲ್ಲ, ದೂರಿಲ್ಲ; 'ಅಯ್ಯಾ' ಎಂದರೆ ಸ್ವರ್ಗ, 'ಎಲವೋ' ಎಂದರೆ ನರಕ; ಆಚಾರವೆ ಸ್ವರ್ಗ, ಅನಾಚಾರವೇ ನರಕ; ದೇವಲೋಕ ಮರ್ತ್ಯಲೋಕವೆಂಬ ವಿಭೇದವೂ ತಪ್ಪು! ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ, ಕಾಯಕವೇ ಕೈಲಾಸ; ಆದುದರಿಂದ ಇಲ್ಲಿಯೇ ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನುವಂತೆ ನುಡಿಯುತ್ತ, ನುಡಿಗೆ ತಕ್ಕಂತೆ ನಡೆಯುತ್ತ, ನಡೆಯೇ ನುಡಿಯಾಗುತ್ತ, ಸಕಲ ಜೀವಾತ್ಮರಿಗೆ ಲೇಸನೇ ಬಯಸುತ್ತ, ಲೇಸನೇ ಬೇಡುತ್ತ, ಲೇಸನೇ ಮಾಡುತ್ತ ಬದುಕಬೇಕು; ಇಲ್ಲಿಯೇ ಭಕ್ತಸಂಗಸುಖ ಪಡೆಯಬೇಕು; ಮರ ಮರ ಮಥಿಸಿ ಅಗ್ನಿ ಹುಟ್ಟುವಂತೆ ಆತ್ಮ ಆತ್ಮ ಮಥಿಸಿ ಅನುಭವ ಹುಟ್ಟಿಸಿ ಅದನ್ನೂ ಹಂಚಿಕೊಂಡು ಉಣ್ಣಬೇಕು; ಈ ಅಮೃತೋತ್ಪಾದನೆಯಲ್ಲಿ ಸ್ತ್ರೀ

ಪುರುಷರಿಬ್ಬರೂ ಲಿಂಗಭೇದವಿಲ್ಲದೆ ಸಮಾನಸ್ಕಂಧರಾಗಿ ಪಾಲುಗೊಳ್ಳಬೇಕು; ಅವರಿಬ್ಬರ ಆಚರಣೆಯೂ ಸಮಾನವಾಗಿರಬೇಕು – ಗಂಡ ಶಿವಲಿಂಗ ಭಕ್ತ, ಹೆಂಡತಿ ಮಾರಿಮಸಣಿಯ ಭಕ್ತೆಯಾಗಬಾರದು; ಅವರಿಬ್ಬರೂಒಂದಾಗಿ ಮಾಡುವ ಭಕ್ತಿಯೇ ಶಿವನಿಗೆ ಹಿತವೆನಿಸುವುದು; ಹಿಂದಿನ ಕುಲ – ಹೊಲೆಗಳ ಗಲಭೆಯೇನೇ ಇರಲಿ, ಒಮ್ಮೆ ಒಬ್ಬನು ಶಿವಭಕ್ತಿಯನ್ನು ಸ್ವೀಕರಿಸಿದನೆಂದರೆ ಅವನ ಪೂರ್ವವಳಿದು ಅವನು ಪುನರ್ಜಾತನಾಗುತ್ತಾನೆ; ಅವನ ಮುನ್ನಿನ ಕುಲಗೋತ್ರಗಳೆಲ್ಲ ಸುಟ್ಟು ಭಸ್ಮವಾಗಿ ಹೋಗುತ್ತವೆ. ಆದುದರಿಂದ ಆ ಮೇಲೆ ಅವನ ಕುಲಕಾಯಕಗಳನ್ನು ಉಂಬಲ್ಲಿ ಉಡುವಲ್ಲ;ಇ, ಕೊಂಬಲ್ಲಿ ಕೊಡುವಲ್ಲಿ ಗಣಿಸಲೇಕೂಡದು; ಸಮಾನತೆ ಸಕ್ರಿಯ ಸಮಾನತೆ ಯಾಗಬೇಕು; ಸೋದತೆ ಸಕ್ರಿಯ ಸೋದರತೆಯಾಗಬೇಕು; ಭಕ್ತಿ ಸಕ್ರಿಯ ಭಕ್ತಿಯಾಗಬೇಕು; ದೇವನೂ ಭಕ್ತದೇಹಿಕದೇವನೆಂಬುದನ್ನು ಮರೆಯಬಾರದು; ದೇವನಿಗೂ ಮಾನವನೇ ಬಾಯಿ, ಮಾನವನೇ ಕೈಕಾಲುಗಳು; ಆದುದರಿಂದ ಮಾನವಪ್ರೇಮವೇ ದೇವಪೂಜೆಯಾಗಬೇಕು – ದಯವೇ – ಸಕಲ ಪ್ರಾಣಿಗಳಲ್ಲು ದಯೆಯೇ ಧರ್ಮದ ಮೂಲವಾಗಬೇಕು 'ವಿದ್ಯೆ, ಗುಣ, ಜ್ಞಾನ, ಧರ್ಮ, ಆಚಾರ, ಶೀಲಂಗಳ' ಸಾಧನೆಯೇ ಜೀವನದ ಗುರಿಯಾಗಬೇಕು; ಇಂದ್ರಿಯ ನಿಗ್ರಹ ಮಾಡಲೇಬೇಕಿಲ್ಲ – ವಿವಾಹವಾಗಿ ಸುಖ ಬಂದರೆ ಪುಣ್ಯದ ಫಲವೆನ್ನದೆ, ದುಃಖ ಬಂದರೆ ಪಾಪದ ಫಲವೆನ್ನದೆ, ನೀ ಮಾಡಿದೊಡಾಯಿತ್ತೆನ್ನದೆ. ಕರ್ಮಕ್ಕೆ ಕರ್ತುವೆ ಕಡೆಯೆನ್ನದೆ, ಉದಾಶೀನವಿಡಿದು ಶರಣೆನ್ನದೆ, ಕಾಣಿಯ ಲಾಭಕ್ಕಾಗಿ ಕೋಟಿಯ ಲಾಭ ಕಳೆದುಕೊಳ್ಳದೆ, ಬೆರಣೆಯನಾಯುವುದರಲ್ಲಿಯೇ ಹೊತ್ತುಗಳೆದು ಅಟ್ಟುಣ್ಣದೆ ಹೋಗದೆ, ಸಂಸಾರವ ಸವೆಯೆ ಬಳಸಬೇಕು; ಒಳಗಿನ ಹಂಬಲ, ಶಿವನೊಲುಮೆ ಶರಣರ ಸಂಗಗಳಿಂದ, ಶರಣರ ಅನುಭವದಿಂಥ ಸಂಸಾರದಲ್ಲಿದ್ದೂ ಸಕಲ ರತಿಯನ್ನು ಸಾಧಿಸಬೇಕು; ಅಂದು, ಇಂದು, ಮತ್ತೊಂದೆನ್ನದೆ ದಿನವಿಂದೇ ಶಿವಶರಣೆಂಬುವಂಗೆ, ಈ ಕೈಯಲೆ ದುಃಖವು, ಈ ಕೈಯಲೆ ಸುಖವು, ಹಿಂದಿನ ಜನನವೇನಾದೊಡಾಗಲಿ, ಇಂದಿನ ಭೋಗವು ಕೈಯ ಮೇಲೆ, ಎಂದು ನಂಬಿ ತನ್ನ ಮನ–ನಯನ–ವಚನ ಕಿವಿಗಳಲ್ಲೆಲ್ಲ ಕುಡಲಸಂಗನ ನಾಮ, ರೂಪ, ನೆನಹು ಕೀರುತಿಗಳನ್ನು ತಂಬಿಕೊಂಡು ಕೊನೆಗೆ ತಾನೇ ಅವನ ಚರಣ ಕಮಲದ ತುಂಬಿಯಾಗಬೇಕು; ಬಿರುಮುಗುಳಂತೆ ಅವರ ಚರಣದ ಮೇಲೆ ಬಿದ್ದರಳಬೇಕು; ನಿಷ್ಪತ್ತಿಯೆಂಬ ಹಣ್ಣಾಗಬೇಕು; ಬಿರುಮುಗುಳಂತೆ ಅವರ ಚರಣದ ಮೇಲೆ ಬಿದ್ದರಳಬೇಕು; ನಿಷ್ಪತ್ತಿಯೆಂಬ ಹಣ್ಣಾಗಬೇಕು; ಅದು ತೊಟ್ಟು ಬಿಟ್ಟು ಕಳಚಿಬೀಳುವಲ್ಲಿ ತನಗೆ ಬೇಕೆಂದು ಸಂಗದನ್ನೆತ್ತಿಕೊಳ್ಳಬೇಕು.

# ೮

# ಹಿನ್ನೋಟ – ಮುನ್ನೋಟ

ಇಂತಿದು ಬಸವಣ್ಣನವರ ಜೀವನ–ಸಾಧನೆ ಸಂದೇಶಗಳ ಸಂಕ್ಷಿಪ್ತ ಸಮೀಕ್ಷೆ. ಇದರಲ್ಲಿ ಬುದ್ಧಿ –ಮನ, ಹೃದಯ – ವಚನಗಳನ್ನು ಬೆಳಗುವುದೇನಿದ್ದರೂ ಅದು ಬಸವನದು; ತದ್ವಿರುದ್ಧವಾದುದೇನಿದ್ದರೂ ಅದು ನನ್ನದು; ಅದನ್ನು ಬಲ್ಲವರು ತೋರಿ ತಿದ್ದಿಸುವುದು ನನ್ನಿಂದ. ಇದು ಸಮರ್ಪಕ ಸಮೀಕ್ಷೆಯೆಂದು ನನಗನಿಸಿಲ್ಲ. ನನಗಿಂತ ದೊಡ್ಡವರು – ಅರಿವು ಅನುಭವ ಆಲೋಚನೆಗಳಲ್ಲಿ ದೊಡ್ಡವರು – ವ್ಯಾಪಕ – ಸಮರ್ಪಕ ಸಮೀಕ್ಷೆಯನ್ನು ಕೈಕೊಳ್ಳಲು ಇದು ಕಚಕುಳಿಯಾದರೆ ಸಾಕು. ನಾನಷ್ಟರಲ್ಲಿಯೇ ಧನ್ಯ.

ಮತ್ತೆ ಬಸವನ ಕ್ರಾಂತಿಯ ಪರಿಣಾಮದ, ಪ್ರಭಾವ ವಲಯದ, ಫಲದ ಬಗ್ಗೆ ಪ್ರಸ್ತಾಪಿಸಬೇಕಾಗುತ್ತದೆ – ಇತ್ತೀಚೆಗೆ ಅಲ್ಲಲ್ಲಿ ಅಪಸ್ವರಗಳು ಕೇಳತೊಡಗಿರುವುದರಿಂದ. ಅವರ ಕ್ರಾಂತಿ ವಿಫಲವಾಯಿತೆಂಬ ಬೀಸು ಹೇಳಿಕೆಗಳೂ (Sweeping statements) ಕೇಳದಿಲ್ಲ. ಇಂದಿನ ಬಸವಾನುಯಾಯಿಗಳ ಒಳಪಂಗಡಗಳ ಜಗಳ. ಬಸವಮತ ವಿರೋಧಿ ವರ್ತನೆ, ಮತ್ತೆ ಮರುಕಳಿಸಿದ ಮೂಢ ವಿಶ್ವಾಸಗಳು, ಕರಗುತ್ತಿರುವ ಸಂಖ್ಯೆಯನ್ನನುಲಕ್ಷಿಸಿ ಈ ಬಿರುಸು – ನುಡಿಯನ್ನವರು ಆಡುತ್ತಿರುವರೆಂದು ಒಪ್ಪಿಯೂ ಅನುಯಾಯಿಗಳ ನಡತೆಯ ಮಾನದಂಡದಿಂದ ಪ್ರವಾದಿಗಳ ಬೆಲೆ ಕಟ್ಟುವುದು ಸಾಧ್ಯವಲ್ಲವೆಂದು ಬಿನ್ನವಿಸದಿರಲಾರೆ.ಹಾಗೆ ಕಟ್ಟಿದರೆ ನಮ್ಮ ಕಣ್ಮುಂದೆಯೇ ಜೀವಿಸಿ ಜಗದ್ವಂದ್ಯರಾಗಿ ಹೋದ ಗಾಂಧೀಜಿಯವರ ಕ್ರಾಂತಿಗೂ ಬೆಲೆಯಿಲ್ಲದಂತಾಗುತ್ತದೆ. ಸಾವಿರಾರು ವರ್ಷಗಳ ಹಿಂದಿನ ಪ್ರವಾದಿಗಳ ಪಾಡೇನು? ಇಂದಿನ ಬಸವಾನುಯಾಯಿಗಳಲ್ಲಿ ಬಸವನು ನಿರ್ಮೂಲಗೊಳಿಸಿದ್ದ ಸಾಮಾಜಿಕ ದೋಷ–ದುರ್ಗುಣಗಳೆಲ್ಲ ಹೊಡಮರಳಿಬಂದು ಹೆಡೆಯತ್ತಿ ನಿಂತಿವೆ. ನಿಜ, ಆದರೆ ಒಂದು ಅಂಸ ಗಮನೀಯ, ಅವರ ಒಳಪಂಗಡಗಳ ಕಚ್ಚಾಟ ಕಿತ್ತಾಡಗಳೇನೇ ಇರಲಿ ಎಲ್ಲರೂ ಸಾಮಾನ್ಯವಾಗಿ ಬಸವನನ್ನೇ ತಮ್ಮ ಏಕೈಕ ಕಾಯಕ, ಗುರು, ಮಂತ್ರ – ಎಲ್ಲ ಎಂದು ಒಪ್ಪುತ್ತಾರೆ. ಹೀಗೆ ಒಪ್ಪಿದ ಅವರು ಮತ್ತೆ ಅವನ ತತ್ತ್ವಗಳನ್ನು ಅಪ್ಪಿದರೆ ಮತ್ತೆ ಬಸವನಿಗೆ ತಕ್ಕ ಅನುಯಾಯಿಗಳಾಗುತ್ತರೆ. ಹೀಗಾಗುವಂತೆ ಇಂದಿನವರು ಯತ್ನಿಸದಿದ್ದರೆ ಅದು ಬಸವನ ತಪ್ಪಲ್ಲ. ಈಗಲೂ ಕಾಲ ಮೀರಿಲ್ಲ.

ಇನ್ನು ಸಂಖ್ಯೆಯ ವಿಷಯ. ಅಶೋಕನಂಥ ಸಾಮ್ರಾಟರ ಘೋಷಣೆ ಪ್ರೋತ್ಸಾಹ, ಪ್ರಚಾರ ದೊರೆತೂ ಭಾರತದಲ್ಲಿ ಉಳಿದಿರುವ ಬುದ್ಧಮತೀಯರ ಸಂಖ್ಯೆಗೆ ಹೋಲಿಸಿದಾಗ, ರಾಜಾಶ್ರಯಕ್ಕೆ ಪ್ರತಿಯಾಗಿ ರಾಜವಿರೋಧವನ್ನೇ ಪಡೆದು ಚಿತ್ರಹಿಂಸೆಗೊಳಗಾದ, ಸಾಲದುದಕ್ಕೆ ಆಸೇತು ಹಿಮಾಚಲ ಭದ್ರವಾಗಿ ಬೇರು ಬಿಟ್ಟಿರುವ ವರ್ಣವಾದಿಗಳ ಬದ್ಧ ವೈರಕ್ಕೆ ಈಡಾದ ಬಸವಮತೀಯರ ಸಂಖ್ಯೆ ಈ ದೇಶದಲ್ಲಿ ಗಣನೀಯವೆಂದೇ ಹೇಳಬೇಕು. ಮತ್ತೆ ವಿಜಯನಗರ ಸಾಮ್ರಜ್ಯದ ಕಾಲದಲ್ಲಿ ಮತ್ತೆ ದಂಡನಾಥರಿಂದಲೇ ಪ್ರೋತ್ಸಾಹ ಪಡೆದ ಈ ಮತ ತಾತ್ಕಾಲಿಕವಾಗಿ ಉಚ್ಛ್ರಾಯ ಸ್ಥಿತಿಗೇರಿದರೂ ವಿಜಯನಗರದ ಪತನಾನಂತರ ಎಲ್ಲ ಕನ್ನಡಿಗರೊಡನೆ ಇವರಿಗೂ ಗ್ರಹಣ ಹಿಡಿಯಿತು. ಏಕೀಕರಣಪೂರ್ವದ ಕನ್ನಡಿಗರಂತೆ ಇವರೂ ಹರಿದುಹಂಚಿ ಚೆಲ್ಲಾಪಿಲ್ಲಿಯಾಗಿ ಅನಾಥರಾಗಿಹೋಗಿದ್ದರಾಗಿ ಸಹಜವಾಗಿಯೇ ಅವರ ಸಂಖ್ಯೆ ಕರಗಿತು; ಇಂದಿಗೂ ಕರಗುತ್ತಿದೆ; ಅವರೊಳಕ್ಕೆ ನುಗ್ಗಿ ಬಂದಿರುವ ಅವಿವೇಕಗಳಿಂದ, ಆದರೆ ಸಂತಸ ಸಂಗತಿಯೆಂದರೆ ಈ ಪರಂಪರಾಗತ ಅನುಯಾಯಿಗಳ ಸಂಖ್ಯೆ ಕರಗುತ್ತಿದ್ದರೂ ಈ ಪರಂಪರೆಗೆ, ಸಂಪ್ರದಾಯಕ್ಕೆ ವಿಧ್ಯುಕ್ತವಾಗಿ ಸೇರದಿದ್ದರೂ ಬಸವಣ್ಣನವರ ನವಮಾನವ ನಿರ್ಮಾಪಕ ತತ್ತ್ವಗಳಿಗೆ ಮನಸೋತು ಅವರ ಅನುಯಾಯಿಗಳೋ ಅಭಿಮಾನಿಗಳೋ ಆಗುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಇದು ಇನ್ನೂ ಹೆಚ್ಚುತ್ತ ಹೋಗುವುದರಲ್ಲಿ ಸಂದೇಹವಿಲ್ಲ. ಅವರ ಪರಂಪರಾಗತ ಅನುಯಾಯಿಗಳು ಅವರ ಬೋಧಗಳಿಗನುಗುಣವಾಗಿಯೇ ಬದುಕಿದ್ದರೆ ಈ ಸಂಖ್ಯೆ ತ್ವರಿತ ವೇಗದೊಡನೆ ಹೆಚ್ಚುತ್ತಿತ್ತು. ಆದರೆ ದುರ್ದೈವದಿಂದ ಅವರಲ್ಲೀಗ ಕುಲ, ಪಂಗಡ, ನಿಜೋಚ್ಚಭಾವಗಳು, ಮೇಲು ಕೀಳುಗಳು ಹುಟ್ಟಿಕೊಂಡು ಬಸವತತ್ವಗಳಿಗೆ ಅಪಚಾರವೆಸಗಿವೆ. ಇವುಗಳು ನಿರ್ಮೂಲವಾದಷ್ಟು ಬಸವಣ್ಣನತ್ತ ಭುವನದ ದೃಷ್ಟಿ ಹೆಚ್ಚು ಹೆಚ್ಚಾಗಿ ಹೊರಳುತ್ತ ಹೋಗುತ್ತದೆ. ಪರಂಪರಾಗತ ಬಸವಾನುಯಾಯಿಗಳು ತತ್ತ್ವಗಳಂತೆ ನಡೆಯಲಿ ಬಿಡಲಿ, ಹಾಗೆ ನಡೆಯಲು ಸಿದ್ಧರಾಗಿ, ಅವುಗಳಂತೆ ಚಾಚೂ ತಪ್ಪದೆ ನಡೆದು ತೋರಿಸಬಲ್ಲ ಒಂದು ಸಾವಿರ ಯುವಕರು ಸಿದ್ಧರಾದರೂ ಅದ್ಭುತ ಪರಿವರ್ತನೆ ಸಾಧ್ಯವಿದೆ. ಇನ್ನೂಒಂದು ಮಾತು; ಕರ್ನಾಟಕದಲ್ಲಿಯೇ ಹುಟ್ಟಿದ ಈ ಧರ್ಮ ಜಗತ್ತಿನಲ್ಲೆಲ ವ್ಯಾಪಿಸಿ ಜಾಗತಿಕ ಧರ್ಮಗಳಲ್ಲೊಂದಾಗುವುದು ಸಾಧ್ಯವಿತ್ತು; ಆಗಿದ್ದರೆ ಕರ್ನಾಟಕದ ಕೀರ್ತಿ ದಿಗಂತ ವಿಶ್ರಾಂತವಾಗುತ್ತಿತ್ತು; ಹಾಗಾಗದಿದ್ದುದು ದುರದೃಷ್ಟಕರವೆನ್ನುತ್ತಾರೆ ಕನ್ನಡದ ಅಚ್ಚಾಳು, ಹೆಚ್ಚಾಳು ದೇ. ಜವರೇಗೌಡರು ಹಿಂದೂ ಧರ್ಮಕ್ಕೆ ದೊರಕದ ಈ ಹೆಗ್ಗಳಿಕೆ ಬಸವಮತಕ್ಕೆ ದೊರೆಯುವುದೆಂತು; ಯಾವ ವರ್ಣಾಂಧತೆ, ವರ್ಣಾಂಧಕಾರಗಳು ಹಿಂದೂ ಧರ್ಮವು ಜಾಗತಿಕ ಧರ್ಮವಾಗುವುದನ್ನು ತಪ್ಪಿಸಿದವೊ ಅವೇ ಬಸವಮತವೂ ಜಗದ್ವ್ಯಾಪಿಯಾಗುವುದಕ್ಕೂ ಅಡ್ಡ ಬಂದುವು! ಸ್ವಾಮಿ ವಿವೇಕಾನಂದರಂಥವರು ಮೊದಲಿನಿಂದಲೂ ಹಿಂದೂ ಧರ್ಮದಲ್ಲಿ ಹುಟ್ಟಿಬಂದಿದ್ದರೆ ಈ ಧರ್ಮವೂ ಜಗತ್ತಿನ ಅನೇಕ ದೇಶಗಳ ಪ್ರಮುಖ ಧರ್ಮವಾಗಿ ನಮ್ಮ ಒಂಟಿತನ ತಪ್ಪುತ್ತಿತ್ತು. ದುರ್ದೈವದಿಂದ ಹಾಗಾಗಲಿಲ್ಲ. ಈ ದೇಶದ ಧೀಮಂತ ಧುರೀಣರಲ್ಲೊಬ್ಬರೂ ವಿಚಾರವಾದಿಗಳೂ ಆದ

ಡಾ. ಬಿ.ಆರ್. ಅಂಬೇಡಕರರೂ ಈ ಬಗ್ಗೆ ವ್ಯಸನವ್ಯಕ್ತಪಡಿಸಿದ್ದಾರೆ. 'ಇಂದು ಪಾಂಡಿತ್ಯವೆಲ್ಲ ಬ್ರಾಹ್ಮಣರ ಸೊತ್ತಾಗಿದೆ. ಆದರೆ, ದುರದೃಷ್ಟವಶಾತ್ ಯಾವೊಬ್ಬ ಬ್ರಾಹ್ಮಣ ವಿಚಾರಶೀಲನೂ ವಾಲ್ಟೇರ್‌ನ ಪಾತ್ರವನ್ನು ವಹಿಸಲು ಮುಂದಾಗಿಲ್ಲ. ಮುಂದೆಯಾದರೂ ಇಂಥ ವಿಚಾರಶೀಲರು ಬ್ರಾಹ್ಮಣರಲ್ಲಿ ತಲೆದೋರುವುದು ಸಂದೇಹಾಸ್ಪದ.' ಇದಕ್ಕೆ ಅವರು ಕೊಡುವ ಕಾರಣ; 'ಬ್ರಾಹ್ಮಣ ವಿಚಾರವಾದಿಯು ವಸ್ತುತಃ ಕೇವಲ ಪಂಡಿತ; ವಿಚಾರವಾದಿಯಲ್ಲ. ಪಂಡಿತನು ತನ್ನ ವರ್ಗದ ಅರಿವುಳ್ಳವನು; ತನ್ನ ವರ್ಗದ ಹಿತಬಯಸುವವನು. ವಿಚಾರವಾದಿಯು ಎಲ್ಲ ಶೃಂಖಲೆಗಳನ್ನು ಹರಿದೊಗೆದು, ವರ್ಗಪ್ರಜ್ಞೆಗೆ ಬಲಿಯಾಗದೆ ವರ್ತಿಸಬಲ್ಲನು. ಬ್ರಾಹ್ಮಣರು ಕೇವಲ ಪಂಡಿತರಷ್ಟೇ ಆಗಿದ್ದುದರಿಂದಲೇ ವಾಲ್ಟೇರ್‌ನಂತಹ ವಿಚಾರಕ್ರಾಂತಿಯ ವ್ಯಕ್ತಿಗಳವರಲ್ಲಿ ತಲೆಯೆತ್ತಲಿಲ್ಲ. (ಅಸ್ಪೃಶ್ಯರು : ಮೂಲ ಲೇಖಕರು, ಡಾ. ಬಿ. ಆರ್. ಅಂಬೇಡಕರರು; ಅನುವಾದಕರು, ಶ್ರೀ ಕುಮಾರ ವೆಂಕಣ್ಣನವರು).

ಬ್ರಾಹ್ಮಣರಲ್ಲಿಯೂ ಒಬ್ಬ ವಾಲ್ಟೇರ್ ಹುಟ್ಟಿದ; ವಾಲ್ಟೇರನಂತೆ ವಿಚಾರಕ್ರಾಂತಿಯನ್ನಷ್ಟೇ ಮಾಡಿ ಹೋಗದೆ ಅದರ ಆಧಾರದ ಮೇಲೆ ಹೊಸ ಸಮಾಜವೊಂದನ್ನು ಕಟ್ಟಿ ತೋರಿಸಿದ ಕಡುಗಲಿ ಹುಟ್ಟಿದ ಬಸವನ ರೂಪದಲ್ಲಿ. ಅವನ ಬಗ್ಗೆ ಅಂಬೇಡಕರರಂಥವರಿಗೂ ತಿಳಸಿ ಹೇಳಲಾಗದ ಹೇಡಿಗಳ ಮಧ್ಯದಲ್ಲಿ ಸಿಕ್ಕಿಬಿದ್ದ. ಬ್ರಾಹ್ಮಣೀಯ ಬೌದ್ಧಿಕತೆಗೆ ಅಂಟಿದ್ದ ಮೇಲ್ಕಾಣಿಸಿದ ಕಲಂಕವನ್ನು ಕಳೆದವನೆಂದು ಬ್ರಾಹ್ಮಣೀಯ ಬೌದ್ಧಿಕತೆಗೆ ಅಂಟಿದ್ದ ಮೇಲ್ಕಾಣಿಸಿದ ಕಲಂಕವನ್ನು ಕಳೆದವನೆಂದು ಬ್ರಾಹ್ಮಣರಾದರೂ ಬಸವನನ್ನು ಎತ್ತಿ ಹಿಡಿಯಬೇಕಿತ್ತು. ಆದರೆ ಅವನು ವರ್ಣವಿರೋಧಿ, ವರ್ಗವಿರೋಧಿಯೆಂದು ಬ್ರಾಹ್ಮಣ್ಯವೂ ಬಸವನನ್ನು ಬಹಿಷ್ಕರಿಸಿತು. ಆದ ಅಪಾರ ಹಾನಿ ಬಸವಾನುಯಾಯಿಗಳಿಗೆ ಮಾತ್ರವಲ್ಲ. ಬ್ರಾಹ್ಮಣರಿಗೆ ಮಾತ್ರವಲ್ಲ, ಹಿಂದೂ ಧರ್ಮಕ್ಕೆ, ಭರತಖಂಡಕ್ಕೆ ಆಯಿತು! ಸುದೈವದ ಸಂಗತಿಯೆಂದರೆ. ಈಗ ವಿವೇಕಶೀಲ ಬ್ರಾಹ್ಮಣರೇ ಬಸವ ವಿಚಾರ ಪ್ರಸಾರಕ್ಕೆ ಮುಂದಾಗಿದ್ದಾರೆ. 'ಬಸವನನ್ನು ಮೀರಿಸಿದ, ಕೊನೆಗೆ ಆತನಿಗೆ ಸರಿಸಮಾನನಾದರೂ ಆದ ಮಹಾವಿಭೂತಿಯು ಬೇರೆ ಇರುವನೆಂದು ನಾನು ಧೈರ್ಯವಾಗಿ ಹೇಳಲಾರೆ'ನೆಂದರು ಬೆನಗಲ್ ರಮರಾಯರು; 'ಬಸವನ ಸಮಾನರು ಯಾರು ಎಂದರೆ ಅವರೇ ಎಂದುಹೇಳಬೇಕಾಗುತ್ತದೆ'ಯೆಂದರು. ಅನ.ನ. ಕೃಷ್ಣರಾಯರು. ಇನ್ನೂ ಅನೇಕರು ಬಗೆಬಗೆಯಾಗಿ ಬಣ್ಣಿಸಿದ್ದಾರೆ ಬಸವನನ್ನು. ಈಗೀಗ ವಿದೇಶಗಳಲ್ಲಿಯೂ ಬಸವನ ಬಗ್ಗೆ ಆಸಕ್ತಿ ಅರಳಿದೆ, ಕುತೂಹಲ ಕೆರಳಿದೆ. ಇನ್ನು ಬಸವ ಕನ್ನಡ ನಾಡಿನ ಎಲ್ಲೆಗಳಲ್ಲಿಯೇ ಉಳಿಯಲಾರ. ಭಾರತದಲ್ಲೆಲ್ಲ ಬೆಳಕಾಗಿ, ಜಗತ್ತಿನಲ್ಲಿಯೂ ಅವನು ಝುಗಝುಗಿಸದಿರಲಾರ! ಅವನಿಗೆ ನಾನು ಸಲ್ಲಿಸುತ್ತಿರುವ ಈ ಅಲ್ಪ ಸೇವೆಗೆ ವಿಶ್ವಕವಿಗಳೂ ವಿಶ್ವಮಾನವರೂ ಆದ ಕ್ರಾಂತದರ್ಶಿ ಕುವೆಂಪು ಅವರ ಕೆಚ್ಚು ತುಂಬಿದ ಕವನದೊಂದಿಗೆ ಮಂಗಳ ಹಾಡುವೆ :

ಕಾರ್ತಿಕದ ಕತ್ತಲು ಆಕಾಶದೀಪವಾಗಿ
ನೀ ಬಂದೆ,
ಬಟ್ಟೆಗೆಟ್ಟವರಿಗೊಂದು ದೊಂದಿದಿಕ್ಕಾಗಿ
ಎಂಟು ಶತಮಾನಗಳ ಹಿಂದೆ,
ಅಗ್ನಿ ಖಡ್ಗವನಾಂತ ಓ ಅಧ್ಯಾತ್ಮ ಕ್ರಾಂತಿವೀರ
ದೇವದಯೆಯೊಂದು ಹೇ ಧೀರಾವತಾರ,
ಶ್ರೀ ಬಸವೇಶ್ವರಾ!

ಜಾತಿ ಪದ್ಧತಿಯ ಹೋಮಕೂಪಕ್ಕೆ
ಬಿದ್ದು, ವೈದಿಕರ ಯಜ್ಞತಪಕ್ಕೆ
ಬಲಿವೋದ ದಲಿತ ಜೀವರನೆತ್ತಿ ಮತಿ ವಿಚಾರಕ್ಕೆ
ಕಾಯಕದ ದಿವ್ಯ ತತ್ತ್ವದಾ ಸುಕ್ಷೇಮ ಧರ್ಮನಾಕಕ್ಕೆ
ನಡೆಸಿದ ಮಹಾತ್ಮನೆ ನಿನಗೆ ನಮೋ ನಮಃ!

ಇಂದಿಗೂ ನಾವು ನಿನ್ನೆತ್ತರಕೆ ಏಳಲಾರದೆ ಅಯ್ಯೊ
ಮತದ ಉಸುಬಿಗೆ ಸಿಲುಕಿ ತತ್ತರಿಸುತಿಹವಯ್ಯ!
ಬಾರಯ್ಯ, ಕೈ ಹಿಡಿದೆತ್ತಿ ಬದುಕಿಸು ನಮ್ಮ ಸೆಳೆದು
ವರ್ಣಾಶ್ರಮಹೆಸರ ಹೊಲೆಗೆಸರ ವಂಚನೆಯ ಹೊಂಡದಿಂದ!

ಭಕ್ತಿಗಂಗೆಯ ನೆರೆದು
ಭಾಗವತಶಕ್ತಿಯಂ ಕರೆದು
ಮತಮೌಢ್ಯದ ಜ್ಞಾನ ಪಂಕವನು ತೊಳೆದು
ಶುಚಿಗೊಳಿಸು ವಿಜ್ಞಾನವೇದಾಂತ ತೀರ್ಥದಿಂದೆ!

* * * * *

# ಅಲ್ಲಮಪ್ರಭು

**ಉದಯಾಸ್ತಮಾನವೆಂಬೆರಡಳಿದ ಶಿವಯೋಗಿ**
**ಸದಮಲದ ಬೆಳಗಿನಾಬೆಳಗಿನೊಳಗೆ।**
**ಪದಫಲವನೊದೆದು ನಿಜದಲ್ಲಿ ನಿರ್ವಯಲಾದ**
**ಚಿದ್ರೂಪ ಚಿನ್ಮಯನು ಚಿತ್ಪ್ರಕಾಶ ॥**

ಇದು ಅಲ್ಲಮ ಪ್ರಭುದೇವರು ನಿರೂಪಿಸಿರುವ ಪರಮಯೋಗ ಮಂತ್ರ ಗೋಪ್ಯದ ಪದ್ಯವೊಂದು. ಇದಕ್ಕೆ ಅವರೇ ಉಜ್ವಲ ಉದಾಹರಣೆಯಾಗಿ ಉಳಿದಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿ, ಕನ್ನಡ ನಾಡಿನ ಕಲ್ಯಾಣ ನಗರದಲ್ಲಿ ಕನ್ನಡ ನುಡಿಯ ಮಾಧ್ಯಮದ ಮೂಲಕ ನಡೆದ ಬಹುಮುಖಿಯಾದ ಬೃಹತ್ ಕ್ರಾಂತಿಯಲ್ಲಿ ಭಾಗವಹಿಸಿದ್ದ ಭವ್ಯಾತ್ಮರಲ್ಲಿ ಬಸವಣ್ಣನವರನ್ನು ಭಾಸ್ಕರನಿಗೂ, ಚೆನ್ನಬಸವಣ್ಣನವರನ್ನು ಚಂದ್ರನಿಗೂ, ಉಳಿದ ಶಿವಶರಣ ಶಿವಶರಣೆಯನ್ನು ಇನ್ನುಳಿದ ಗ್ರಹತಾರೆಗಳಿಗೂ, ಅಲ್ಲಮಪ್ರಭುದೇವರನ್ನು ಅವರೆಲ್ಲರಿಗೂ ಆಶ್ರಯವೆನಿಸಿದ ಆಕಾಶಕ್ಕೂ ಹೋಲಿಸಲಾಗಿದೆ. ಅಲ್ಲಮ ಪ್ರಭುವಿಗೆ ಆಕಾಶವೇ ತಕ್ಕ ಉಪಮೆ, ಅವರು ವ್ಯೋಮಮೂರುತಿ ಬಯಲಿಗೆ ಎಂದೇ ಸಂಸ್ತುತರಾಗಿದ್ದಾರೆ. ಆಕಾಶದ ಗುಣಗಳು ಅಳವಟ್ಟ ಶರೀರ, ಆಕಾಶದ ಅನಂತತೆಯನ್ನು ನೆನಪಿಗೆ ತರುವ ಅರಿವ, ಅನುಭಾವ, ಆಕಾಶದಂತೆ ಆಶ್ರಯಸ್ಥಾನವಾಗಿದ್ದೂ, ಅಲಿಪ್ತವಾಗಿ ಉಳಿದ ಸರ್ವತಂತ್ರ ಸ್ವತಂತ್ರತೆ ಇವುಗಳಿಂದ ಅವರು ಅಂದು ಅನುಭವ ಮಂಟಪದ ಅಧ್ಯಕ್ಷರಾದರು; ಇಂದಿಗೂ ಅಚ್ಚ ಅರಿವು, ನಿಚ್ಚಳ ಕಾಣ್ಕೆ, ಉಚ್ಚ ಅನುಭಾವಗಳ ಅನ್ವೇಷಕರಿಗೆ ದಾರಿತೋರುವ ಧ್ರುವತಾರೆಯಾಗಿ ರಾರಾಜಿಸುತ್ತಿದ್ದಾರೆ; ಎಂದೆಂದಿಗೂ ದಿಕ್ಸೂಚಿಯಾಗಿ ಉಳಿಯುವರು ರೂಢಿ ಸಂಪ್ರದಾಯಗಳ ಮೂಢ ವಿಶ್ವಾಸಗಳ, ಮಠಪೀಠಗಳ ಹಂಗಿಗೊಳಗಾಗದೆ ಬೆಳಗಿನೊಳಗಣ ಬೆಳಗಿನಲ್ಲಿ ಎರೆಯಬೇಕೆನ್ನುವವರಿಗೆ. ಯಾರ ಹಂಗೂ ಹೊದ್ದದಂತೆ ಉಳಯಬೇಕು. ಬೆಳೆಯಬೇಕು, ಬೆಳಗಬೇಕು ಎಂದು ಬಯಸಿದುದು ಮಾತ್ರವಲ್ಲ, ಅದರಂತೆ ಆಚರಿಸಿ ಅಮರರಾದರು ಅವರು.

ಪುಣ್ಯ ಪಾಪ ಇಲ್ಲವಾಗಿ ಮನದ ಹಂಗಿಲ್ಲ;
ಬಂದುದನುಂಬನಾಗಿ ಮಾನವರ ಹಂಗಿಲ್ಲ ;
ಭವಗೆಟ್ಟನಾಗಿ ದೈವದ ಹಂಗಿಲ್ಲ;
ಸತ್ಯಜ್ಞಾನಾನಂದವೇ ತಾನಾಗಿ ಇನ್ನಾರ ಹಂಗೂ ಇಲ್ಲ;
ಇನ್ನಾರ ಹಂಗೂ ಇಲ್ಲದಾತ ಗುಹೇಶ್ವರನಲ್ಲಯ್ಯನೊಬ್ಬನೇ!

* * *

# ಅಗ್ನಿ ಪರೀಕ್ಷೆ

ಯಾರ ಹಂಗಿಗೂ ಒಳಗಾಗದೆಯೆ ಉಳಿದು, ಸತ್ಯಜ್ಞಾನಾನಂದವೇ ತಾನಾದ ಅಲ್ಲಮಪ್ರಭುದೇವರು ತಮ್ಮ ತಯಿ ತಂದೆಗಳ, ಹುಟ್ಟೂರಿನ, ಬಾಲ್ಯ ಯೌವನಗಳಲ್ಲಿ ನಡೆದ ಘಟನೆಗಳ ವಿವರಗಳನ್ನು ಉಳಿಸುವ, ತಿಳಿಸುವ, ಗೋಜಿಗೆ, ಗೊಡವೆಗೆ ಹೋಗುವರೆ? ತಮ್ಮ ಹಿಂದಿನ ಜನ್ಮಗಳ ವಿವರಗಳನ್ನು ಸೂಚಿಸಿರುವರಾಗಲಿ ಅಂದಿನ ಜನ್ಮದ ಸಂಗತಿಗಳನ್ನು ತಿಳಿಸಿಲ್ಲ. ಅವರ ಬಾಲ್ಯ ಯೌವನಗಳ ಬಗೆಗೆ ದೊರೆತಿರುವಷ್ಟು ವಿವರಗಳೂ ವಾದಗ್ರಸ್ಥವಾಗಿವೆ; ಅವರ ಸಾಧಕಾವಸ್ಥೆಯ ಘಟನೆಗಳಮತೂ ಸಿಕ್ಕುವುದೇ ಇಲ್ಲ; ಅವರ ಸಿದ್ಧಾವಸ್ಥೆಯ ಸಂಗತಿಗಳು ತಕ್ಕಮಟ್ಟಿಗೆ ದೊರೆಯುತ್ತಿವೆ; ಅವರ ಕೊನೆಯ ದಿನಗಳ ವಿಷಯ ಮತ್ತೆ ಮಸಕು ಮಸಕು! ಅವರ ಬಗ್ಗೆ ಸಾಕಷ್ಟು ಪ್ರಾಚೀನ ಕೃತಿಗಳಿಲ್ಲವೆಂತಲ್ಲ. ಬೇಕದಷ್ಟಿವೆ. ಆದರೆ ಅವುಗಳಿಂದ ತಿಳಿದಿರುಷ್ಟು ವಿಷಯಗಳ ಬಗೆಗೇ ಸಂದಿಗ್ಧತೆಗಳು ಸೃಷ್ಟಿಗೊಂಡುವಾಗಲಿ ಹೊಸ ಸಂಗತಿಗಳು ಹೊರಬಿದ್ದಿಲ್ಲ. ಆದರೂ ದೊರೆತಿರುವಷ್ಟು ವಿವರಗಳಿಂದಲೇ ಅವರ ಅದ್ಭುತ ಮೂರ್ತಿಸ್ವರೂಪದ ಕಲ್ಪನೆಯಾಗದಿರದು.

ಇಂದಿನ ಶಿವಮೊಗ್ಗೆ ಜಿಲ್ಲೆಯ, ಶಿಕಾರಿಪುರ ತಾಲೂಕಿನ, ಬಳ್ಳಿಗಾವೆಯೆಂಬ ಹಳ್ಳಿ,ಹಿಂದೆ ಹಿರಿದಾದ ಸಂಸ್ಕೃತಿ ಕೇಂದ್ರ. ಹನ್ನೆರಡನೆಯ ಶತಮಾನದಲ್ಲಿಯೂ ಅದರ ಮಹತ್ವ ಸಾಕಷ್ಟು ಉಳಿದಿರಬೇಕು. ಈ ಹಿರಿಮೆ ಗರಿಮೆಗಳ ಪುರದಲ್ಲಿ ಅಲ್ಲಿಯ ನಾಗವಾಸಾಧಿಪತಿಯ ಮಗನಾಗಿ ಅಲ್ಲಮ ಪ್ರಭುರಾಯ ಹುಟ್ಟಿದನೆಂದು ಹರಿಹರ ಹೇಳುತ್ತಾನೆ, ಅವನು ಹೇಳಿರುವ ಬಳ್ಳಿಗಾವೆ ಶಿಕಾರಿಪುರ ತಾಲೂಕಿನ ಬಳ್ಳಿಗಾವೆಯೇ ಇರಬಹುದು. ಆದರೆ ಬನವಸೆಯ ಬಳಿ ಇದ್ದ ಬಳ್ಳಿಗಾವೆಯಲ್ಲಿ ಸುಜ್ಞಾನಿದೇವಿ ನಿರಹಂಕಾರರಿಗೆ ಸುತನಾಗಿ ಜನಿಸಿದನೆಂದು ಚಾಮರಸ ಹೇಳುತ್ತಾನೆ, ಒಟ್ಟಿನಲ್ಲಿ ಹುಟ್ಟೂರಿನ ಹೆಸರಿನ ಬಗ್ಗೆ ಇವರಿಬ್ಬರಲ್ಲಿ ಭಿನ್ನಾಬಿಪ್ರಾಯವಿಲ್ಲ. ಅಂತೆಯೇ, ಆತ ಕುಶಾಗ್ರಮತಿಯಾಗಿದ್ದನೆಂಬ ಬಗ್ಗೆ, ಸುಂದರಾಂಗನಾಗಿದ್ದನೆಂಬ ಬಗ್ಗೆ, ಮೃದಂಗವಾದನ ಪಾರಮಗತನಾಗಿದ್ದನೆಂಬ ಬಗ್ಗೆ, ದಿವ್ಯ ತೇಜೋಮೂರುತಿಯಾಗಿದ್ದನೆಂಬ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ, ಭಿನ್ನಾಭಿಪ್ರಾಯವಿರುವುದು ಒಂದೇ ವಿಷಯದ ಬಗ್ಗೆ:ಹರಿಹರನ ಹೇಳಿಕೆಯಂತೆ ಅವನು ಅದೇ ಊರಿನ ಧನದತ್ತನ ಮಗಳಾದ ಕಾಮಲತೆಯನ್ನು ಗೊಗ್ಗೇಶ್ವರ ದೇವಾಲಯದಲ್ಲಿ ಸಂಧಿಸಿ, ಮೋಹಿಸಿ, ಅವಳೊಡನೆಕೆಲಕಾಲ ಸಂಸಾರ ಸುಖವನ್ನು ಅನುಭವಿಸಿ, ಅವಳು

ಅಕಾಲಮರಣಕ್ಕೆ ತುತ್ತಾಗಲು ವಿರಹ ವಿಹ್ವಲನಾಗಿ, ಮರುಳನಂತೆ ನೇಲಗೀರಿ ಅನಿಮಿಷಯ್ಯನಿದ್ದ ದೇವಾಲಯವನ್ನು ಕಂಡನೆ. ಇಲ್ಲವೆ ಚಾಮರಸನ ಹೇಳಿಕೆಯಂತೆ ಬನವಸೆಯ ಭೂಪಾಲ ಪುತ್ರಿ ಮಾಯೆಯನ್ನೇ ಮಾಯೆಗೊಳಗಾಗಿಸುವಂತೆ ಮಧುಕೇಶ್ವರ ದೇವಾಯದಲ್ಲಿ ಮೃದಂಗ ನುಡಿಸಿ, ಕೆಲವು ದಿನ ಅವಳ ನಾಟ್ಯಾಚಾರ್ಯತನವನ್ನೂ ನಟಿಸಿ, ಅವಳ ಮೋಹ ಮೆರೆ ಮೇರಿ ಹರಿಯಲೆಳಿಸಿದಾಗ ಅವಳ ಅರಮನೆಯನ್ನು ತೊರೆದು, ಗೊಗ್ಗಯ್ಯನ ತೋಟದಲ್ಲಿ ಗೊಗ್ಗಯ್ಯನಿಗೆ 'ತನುವ ತೋಟವ ಮಾಡಿ, ಮನವ ಗುದ್ದಲಿ ಮಾಡಿ, ಭ್ರಾಂತಿಯ ಬೇರ ಅಗಿದು ಕಳೆವ, ಒಡೆದು ಸಂಸಾರದ ಹೆಂಟೆಯ ಬಗಿದು ಬ್ರಹ್ಮ ಬೀಜವ ಬಿತ್ತುವ' ಅಂತರಂಗ ಕೃಷಿಯ ವಿಧಾನವನ್ನು ವಿವರಿಸಿ, ನಿದರ್ಶನಕ್ಕಾಗಿ ತಾನೇ ಅನಿಮಿಷ ಯೋಗಿಯಿದ್ದ ದೇಗುಲವನ್ನು ಅಗಿದು ತೋರಿದನೆ?

ಅಲ್ಲಮ ಪ್ರಭುದೇವರ ಕೆಲವು ವಚನಗಳ ಆಧಾರದಿಂದ ಅವರ ಬಗ್ಗೆ ಇತರರು ಬರೆದಿರುವುದರ ಆಧಾರದಿಂದ ಈ ಎರಡೂ ರೀತಿಯಲ್ಲಿ ಕಥೆ ಕಟ್ಟಬಹುದಾಗಿದೆ. ಹೇಗೆ ಕಥೆ ಕಟ್ಟಿದರೂ ಅವರ ಬಾನೆತ್ತರದ ವ್ಯಕ್ತಿತ್ವಕ್ಕೆ ಕುಂದಿಲ್ಲ. ಇಷ್ಟು ಮಾತ್ರ ಸ್ಪಷ್ಟ; 'ಬಿರುಗಾಳಿ ಬೀಸಿ ಮರ ಮುರಿವಂತೆ ಸುಳುಹ ಸುಳಿಯದೆ ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಸುಳಿವ' ಮೊದಲು ಸ್ವಯಂ ಪ್ರಭುದೇವರೇ ಬಿರುಗಾಳಿಯೊಂದಕ್ಕೆ ಸಿಕ್ಕಿದ್ದರೂ ಸಿಕ್ಕಿರಬಹುದು! ಸಿಕ್ಕಿದ್ದರೇನಾಯಿತು, 'ಮುರಿಯಲಿಲ್ಲ ಮರ' ಈ ಅರಿವಿನ, ಅನುಭಾವದ ಮರ! ಅದು ಎತ್ತರಕ್ಕೆ ಬೆಳೆಯಿತು, ಅಗಲಕ್ಕೆ ಹರಡಿತು, ಅಮೃತ ಫಲಗಳನ್ನು ನೀಡಿತು! ಒಮ್ಮೆ ಮೆಲ್ಲಲು ಇಲ್ಲವಾಗುವ ಫಲಗಳಲ್ಲ. ಲಕ್ಷಲಕ್ಷ ಮುಮುಕ್ಷು ಪಕ್ಷಿಗಳು ಸವಿದರೂ ಸವೆಯದ ಅಮೃತಫಲಗಳವು!

ಹರಿಹರನು ಚಿತ್ರಿಸಿರುವ ಕಾಮಲತೆ ಅಂಥಿಂಥವಳಲ್ಲ;
"ರತಿಗಿತಿಯ ರಂಬೆಗಿಂಬೆಯ ಮಾತು ಬೇಡಿಲ್ಲ;
ಮತಿಗಿತಿಗೆ ಪೊಗಳ್ವಗಿಗಳ್ವಾಸೆಗಳು ಪುಗವಿಲ್ಲಿ!"

ಎಂದು ಅವಳ ಅನ್ಯಾಸದೃಶವಾದ ರೂಪದ ವರ್ಣನೆಯನ್ನು ಅನ್ಯಾಸದೃಶವಾಗಿಯೇ ಮಾಡಿದ್ದಾನೆ ಹರಿಹರ. ಏರಿಕೆಯ ಯೌವನದಲ್ಲಿದ್ದಾಗ ಅಲ್ಲಮ ಪ್ರಭು ಅವಳನ್ನು ನೋಡಿ ಮೋಹಿಸಿದನೆಂದು ಹೇಳಿದರೆ ಅವಳು ಒಮ್ಮೆಗೆ ಇಲ್ಲವಾಗಲು ಅವನು ಮರುಳುಗೊಂಡವನಂತಾದನೆಂದು ಬಣ್ಣಿಸಿದರೆ ನಮಗೆ ಅಚ್ಚರಿಯೆನಿಸುವುದಿಲ್ಲ, ಆದರೆ ಹರಿಹರನೇ ಮುಂದೆ,

"ಕಾಮಲತೆಗೊಲಿದಿರ್ದನೆಂಬುದದು ಪುಸಿ ನೋಡ!
ಪ್ರೇಮವದು ಶಿವಲಿಂಗ ಪೂಜೆ ಇದಿರಂ ನೋಡ!"

ಎಂದು ಬರೆದಾಗ ವಿಸ್ಮಯವಾಗದಿರಲು ಸಾಧ್ಯವಿಲ್ಲ, ಹರಿಹರನ ಈ ಹೇಳಿಕೆಗೆ

ಅಲ್ಲಮಪ್ರಭುವಿನ ಈ ವಚನವನ್ನು ಹೊಂದಿಸಿ ಓದಿದಾಗ ಏನೆನಿಸುತ್ತದೆ?

"ಎಸೆಯದಿರು, ಎಸೆಯದಿರು ಕಾಮಾ
ನಿನ್ನ ಬಾಣ ಹುಸಿಯಲೇಕೋ?
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ
ಇವು ಸಾಲವೆ ನಿನಗೆ?
ಗುಹೇಶ್ವರಲಿಂಗದ ವಿರಹದಲ್ಲಿ ಬೆಂದವರ
ಮರಳಿ ಸುಡಲುಂಟೆ, ಮರುಳು ಕಾಮಾ?"

ಕಾಮಲತೆಗೆ ಮರುಳಾಗಿದ್ದವನು ಕಾಮನನ್ನೇ ಮರುಳನೆಂದು ಕರೆಯುವುದನ್ನು ಕಂಡಾಗ ಏನೆನಿಸುತ್ತದೆ? ಇನ್ನೇನಿಸುತ್ತದೆ – ಅವರವರ ಮನೋಧರ್ಮಕ್ಕೆ ಅನುಗುಣವಾಗಿ ಅವರವರಿಗೆ ಎನಿಸುತ್ತದೆ.

ಅಲ್ಲಮಪ್ರಭುದೇವರು ಕಾಮಲತೆಯನ್ನೋ, ಅವಳಷ್ಟೇ ಲೋಕೋತ್ತರ ಲಾವಣ್ಯವತಿಯಾಗಿ ವರ್ಣಿತಳಾಗಿರುವ ಮಾಯೆಯನ್ನೋ ಒಲಿದಿರಲಿ, ಒಲಿಯದಿರಲಿ ಒಮ್ಮೆ ಮೋಹದ ಅದ್ಭುತವಾದ ಅಗ್ನಿಪರೀಕ್ಷೆಗೆ ಒಳಗಾಗಿ, ಅಷ್ಟೇ ಅದ್ಭುತವಾದ ಆತ್ಮಿಕ ವಿಜಯವನ್ನು ಪಡೆದರೆಂಬುದು ನಿರ್ವಿವಾದ.

# ಅಜ್ಞಾತಸಾಧನೆ

ಅಲ್ಲಿಂದ ಮುಂದೆ ಅವರ ಅಗಾಧವಾದ ಅಜ್ಞಾತ ಸಾಧನೆ ಮುಂದುವರಿಯುತ್ತದೆ. ಅದರ ವಿವರಗಳು ಸಿಕ್ಕಿದ್ದರೆ ಸಾಧಕರಿಗೊಂದು ತವನಿಧಿ ಸಿಕ್ಕಂತಾಗುತ್ತಿದ್ದಿತು, ಆದರೂ ಅಲ್ಲೊಂದು ಇಲ್ಲೊಂದು ವಚನಗಳಲ್ಲಿ ಅವರ ಅದ್ಭುತ ಸಾಧನೆಯ ಚಿತ್ರಗಳು ನಮಗೆ ದೊರೆಯುತ್ತಿವೆ. ಇವುಗಳ ಆಧಾರದಿಂದ ಅವರ ಸಾಧನೆಯ ಸಾಹಸಯಾತ್ರೆಯ ಸ್ವರೂಪವನ್ನು ನಾವು ಗ್ರಹಿಸಿಕೊಳ್ಳಬಹುದಾಗಿದೆ, ಹರಿಹರನೂ ತನ್ನ ಪ್ರಭುದೇವರ ರಗಳೆಯಲ್ಲಿ ಇದರ ಸ್ಪಷ್ಟ ಸೂಚನೆಯನ್ನಿತ್ತಿದ್ದಾನೆ,

> "ಕೆಯ್ಯ ಶಿವಲಿಂಗದೊಳು ನಟ್ಟ ನೋಟಂ ಮೆಱೆಯೆ
> ಮೆಯ್ಯ ಕೋಮಲತೆ ನಳನಳಿಸಿ ನಯಮಂ ಕಱೆಯೆ
> ಮಿಗೆ ಬಳ್ಳಿವರಿದ ಕರ ಪದನಖಂ ಲತೆಯಾಗೆ
> ಸೊಗಯಿಸುವ ಹಸ್ತರಾಗಂ ಸುಪಲ್ಲವವಾಗೆ
> ಕರತಳದ ಶಿವಲಿಂಗವಂದಮೃತಫಲವಾಗೆ

'ಕಲ್ಪತರುವಿನ ತೆಱದೊಳಿರ್ದ' ಶಿವಯೋಗಿ ಅನಿಮಿಷಯ್ಯನ ಕರತಳದ ಲಿಂಗ ತನ್ನ ಕರತಳಕ್ಕೆ ಬರುತ್ತಲೆ ಅಲ್ಲಮನಲ್ಲಿ ಆಮೂಲಾಗ್ರ ಪರಿವರ್ತನೆ ತಲೆದೋರಿತು, ಆಮೇಲೆ ಎಂಥ ಪರಿವರ್ತನೆ?

> ಪೋಗುತಿರ್ದಂ ಲಿಂಗವೆತ್ತತ್ತಲೊಯ್ದತ್ತ
> ಆಗುತಿರ್ದುದು ಪುರಜನಕೆ ಕೌತುಕವಿತ್ತ
> ..................................................................
> "ಅಂಗೈಯ್ಯೊಳಮೃತಫಲಮಂ ಪಡೆದನಲ್ಲಮಂ
> ಲಿಂಗದ ನಿಜವನೊಚ್ಚ ತಂಗೊಂಡನಲ್ಲಮಂ
> ಸಾಧನ ಚತುಷ್ಟಯದ ಹಂಗಿಲ್ಲದಲ್ಲಮಂ
> ಬೋಧೆಯಕ್ಕರವಱಿದು ನಿಜನಾದನಲ್ಲಮಂ
> ಪೊರೆಯ ಮಾಯೆಗೆ ಮುಸಿತನಾದನಿಂತಲ್ಲಮಂ

ಬೆರಸಿದ ಗುಣತ್ರಯಕೆ ಬೇರಾದನಲ್ಲಮಂ
ದೇಹಾದಿ ಕರಣಮಂ ಮೀಜೆರ್ದನಲ್ಲಮಂ
ಮೋಹವಜಿತುದು ತಾನು ತಾನದನಲ್ಲಮಂ
ಕತರತಳಾಮಳಕವಾದುದು ತತ್ವವೀತಂಗೆ
ಪರಮ ಶಿವಯೋಗ ನಿಜವಾದುದಿಂದೀತಂಗೆ
ಶಶಿರವಿಗಳಂತೆ ಪರಬ್ರಹ್ಮವಾದಂ ನೋಡ!"

ಈ ಬಾನೆತ್ತರದ ವ್ಯಕ್ತಿತ್ವವನ್ನು ಊಹಿಸಿಕೊಳ್ಳುವುದೂ ಕಷ್ಟದ ಕೆಲಸವೇ. ಇದಕ್ಕೂ ಅಸಾಮಾನ್ಯ ಊಹಾಶಕ್ತಿ ಬೇಕು, ಕಲ್ಪಕ ಶಕ್ತಿಬೇಕು ಹರಿಹರನಂತೆ,

'ಹೋಗುತಿರ್ದಂ! ಎಲ್ಲಿಗೆ? ಲಿಂಗ ವೆತ್ತತ್ತಲೊಯ್ದತ್ತತ್ತ!
ದಾರಿಯಾವುದನ್ನು ಹಿಡಿದ?"
"ನಡೆದುದೇ ಬಟ್ಟೆಯಾದುದು ಶಿವನ ಮದಕರಿಗೆ!"
ನುಡಿದನೇನನ್ನು? "ನುಡಿದುದೇ ವೇದವಾದುದು ಲಿಂಗವಂತಂಗೆ"

ಅಲ್ಲಮನು ಸಾಧನ ಚತುಷ್ಟಯದ ಹಂಗಿಲ್ಲದೆ ಹೊರಟನೆಂಬ ಹರಿಹರನ ಹೇಳಿಕೆ ಮನನೀಯವಾದುದು. ಅನಿಮಿಷನ ದರ್ಶನ ಅಂಥ ಅದ್ಭುತ ಪರಿವರ್ತನೆಯನ್ನು ಮಾಡಬಿಟ್ಟಿತೆ ಅವನಲ್ಲಿ? ಚಾಮರಸಾದಿಗಳು ಹೇಳುವಂತೆ ಪ್ರಭು ಸಿದ್ಧಪುರುಷನಾಗಿಯೇ ಜನ್ಮತಾಳಿದನೆಂದು ಹರಿಹರ ಹೇಳುವುದಿಲ್ಲ, ಅನಿಮಿಷ ಶಿವಯೋಗಿಯನ್ನು ಕಾಣುವವರೆಗೆ ಅವನೊಬ್ಬ ಕಾಮತಪ್ತ ವಿರಹಿ. ಅನಿಮಿಷನ ದರ್ಶನವಾಗಿ ಅವನ ಕರದಿಷ್ಟಲಿಂಗ ಇವನ ಕೈಸೇರುತ್ತಲೇ ಎಂಥ ಅನುಪಮ ಪರಿವರ್ತನೆ? ಸಾಧನ ಚತುಷ್ಟಯದ ಹಂಗನ್ನೂ ಹೊದ್ದಲೀಯದಂಥ ಪರಿವರ್ತನೆ! ಇದಕ್ಕೆ ಅಲ್ಲಮನ ವಚನಗಳಲ್ಲಿಯೂ ಆಧಾರ ಸಿಕ್ಕುತ್ತದೆ;

"ಕಾಣಬಾರದ ಲಿಂಗವು ಕರಸ್ಥಲಕ್ಕೆ ಬಂದಡೆ
ಎನಗಿದು ಸೋಜಿಗ, ಎನಗಿದು ಸೋಜಿಗ!
ಅಹುದೆನಲಮ್ಮೆನು ಅಲ್ಲೆನಲಮ್ಮೆನು
ಗುಹೇಶ್ವರಲಿಂಗವು ನಿರಾಳ ನಿರಾಕಾರ ಬಯಲು ಆಕಾರವಾದಡೆ!"
ಎಂದು ಉದ್ಗರಿಸಿದ ಅಲ್ಲಮ ತನ್ನ ಬೆರಗಿಗೆ ಬಾಯನಿತ್ತು ಹೇಳುತ್ತಾನೆ;
"ಎತ್ತಣ ಮಾಮರ, ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ?
ಬೆಟ್ಟದ ನೆಲ್ಲಿಕಾಯಿ, ಸಮುದ್ರದೊಳಗಣ ಉಪ್ಪು

ಎತ್ತಣಿಂದೆತ್ತ ಸಂಬಂಧವಯ್ಯಾ?
ಗುಹೇಶ್ವರಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ?"

ಬಯಲು ಆಕಾರವಾಗಿ ಮತ್ತೆ ನಿರಾಕಾರವಾಗುವ ರಹಸ್ಯ ಇಷ್ಟಲಿಂಗ ಪೂಜೆಯಲ್ಲಿ ಅಡಗಿದೆ. ಬಯಲ ಮೂರ್ತಿಯ ಮಾಡುವುದೂ, ಬಯಲು ಮೂರ್ತಿಯ ಅಮೂರ್ತಿಯ ಮಾಡುವುದೂ ಶರಣರ ಸಾಧನೆಯ ಸಾರ. ಅಲ್ಲಮನಿಗೂ "ಕಸ್ತುರಿಯ ಮೃಗ ಬಂದು ಸುಳಿಯಿತ್ತಯ್ಯ; ಸಕಲ ವಿಸ್ತಾರದ ರೂಹು ಬಂದು ನಿಂದಿತ್ತಯ್ಯ... ಗುಹೇಶ್ವರ ಲಿಂಗದಲ್ಲಿ ಹಿಂದಣ ಹುಟ್ಟರತು ಹೋದುದ ಕಂಡೆನಯ್ಯಾ!" ಎಂಬ ಅನಿರ್ವಚನೀಯವಾದ ಅನುಭವಾಯಿತು. ಅವನ ಹಿಂದಣ ಹುಟ್ಟು ಅರತುಹೋಗಿ ಅವನಿಗೆ ಹೊಸ ಹುಟ್ಟು ದೊರೆಯಿತು. "ಕಾಣಬಾರದ ಗುರುವು ಕಂಗೆ ಗೋಚರವಾದರೆ ಹೇಳಲಿಲ್ಲದ ಬಿನ್ನಪ, ಮುಟ್ಟಲಿಲ್ಲದ ಹಸ್ತಮಸ್ತಕ ಸಂಯೋಗ ಹೊಸಲಿಲ್ಲದ ವಿಭೂತಿಯಪಟ್ಟ, ಕೇಳಲಿಲ್ಲದ ಕರ್ಣ್ಮಂತ್ರ ತುಂಬಿ ತುಳುಕದ ಕಲಶಾಭಿಷೇಕ, ಆಗಮವಿಲ್ಲದ ದೀಕ್ಷೆ, ಪೂಜೆಗೆ ಬಾರದ ಲಿಂಗ, ಸಂಗವಿಲ್ಲದ ಸಂಬಂಧ ಸ್ವಯನಪ್ಪ ಅನುಗ್ರಹ ಅನುಗೊಂಡುದನ್ನು ನೆನೆನೆನೆದು ನನೆಕೊನೆವೋಯಿತವನ ಮನ,

"ಅಂಗೈಯ್ಯೊಳಮೃತಫಳಮಂ ಪಡೆದನಲ್ಲಮಂ
ಲಿಂಗದ ನಿಜವನೊಚ್ಚ ತಂಗೊಂಡನಲ್ಲಮಂ
ದೇಹಾದಿ ಕರಣಮಂ ಮೀರಿರ್ದನಲ್ಲಮಂ
ಮೋಹವರತುಂ ತಾನೆ ತಾನಾದನಲ್ಲಮಂ!"

ಹರಿಹರನ ಈ ನಾಲ್ಕು ಸಾಲುಗಳು ಹೊಸ ಹುಟ್ಟನ್ನು ಪಡೆದ ಅಲ್ಲಮನ ಅದ್ಭುತ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತವೆ, ಅಂಗೈಯೊಳಮೃತ ಫಲಮಂ ಪಡೆದ ಮೇಲೆ ಸಾಧನ ಚತುಷ್ಟಯದ ಹಂಗೇಕೆ? ಇದೊ, ಕೇಳಿ:

"ಅಮೃತಸಾಗರದೊಳಗಿದ್ದು ಆಕಳ ಚಿಂತೆಯೇಕೆ?
ಮೇರುಮಂದಿರದೊಳಗಿದ್ದು ಜರಗ ತೊಳೆವ ಚಿಂತೆಯೇಕೆ?
ಶ್ರೀ ಗುರುವಿನೊಳಗಿದ್ದು ತತ್ತ್ವದ್ಯದ ಚಿಂತೆಯೇಕೆ?
ಪ್ರಸಾದೊಳಗಿದ್ದು ಮುಕ್ತಿಯ ಚಿಂತೆಯೇಕೆ?
ಕರಸ್ಥಲದೊಳಗೆ ಲಿಂಗವಿದ್ದ ಬಳಿಕ ಮತ್ತಿನ್ನಾವ ಚಿಂತೆಯೇಕೆ ಹೇಳಾ,
ಗುಹೇಶ್ವರಾ?"

ಮತ್ತಾವ ಚಿಂತೆಯ ಅಗತ್ಯವೂ ಇಲ್ಲ. ಕುರುಹುವಿಡಿದು ಕುರುಹು ಗೆಡುವ ಪರಿಯನ್ನು ಗುರಿತಿಸಿದ್ದ ಅಲ್ಲಮ ಕಂಡುದ ಹಿಡಿದೇ ಕಾಣದುದನ್ನು ಕಾಣಲು ಅಣಿಯಾದ:

"ಕಂಡುದ ಹಿಡಿಯಲೊಲ್ಲದೆ ಕಾಣದುದನರಸಿ ಹಿಡಿದಹೆನೆಂದರೆ
ಸಿಕ್ಕದೆಂಬ ಬಳಲಿಕೆಯ ನೋಡಾ!
ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ
ಕಾಣದುದ ಕಾಣಬಹುದು ಗುಹೇಶ್ವರ!"

'ಅಂತೆಯೇ... ಲಿಂಗಕ್ಕೆ ನೋಟದೊಳೆ ಮಜ್ಜನಕ್ಕೆರೆದು, ಅರಳ್ದಕ್ಷಿಯೆಂಬ ಪೂವಿಂದ ಪೂಜಿಸಿ, ನರುಸುಯ್ಯ ಕಂಪಿಂದೆ ನವಧೂಪಮಂ ಕೊಟ್ಟು, ನೆರೆಮನದ ಬೆಳಗಿನಾರತಿಯೆತ್ತಿ ಪೊಡಮಟ್ಟು ನಿಟ್ಟೆಯಿಂ ನೇಹಮುಮನಾರೋಗಿಸಲ್ ಕೊಟ್ಟು ಕಟ್ಟಕ್ಕರಚಲಿತಾನಂದಮಂ ಮುಂದಿಟ್ಟು, ಸಕಳಸುಖಮಂ ಕಣ್ಗಳಿಂಬೆ ಕೈಗೂಡುತುಂ ಸಕಳ ಭೋಗಂಗಳಂ ನೋಟದಿಂದ ನೀಡುತುಂ ಅಲ್ಲಮ ಅರ್ಚನಾಲೋಲನಾದ 'ತರುನಿಕಾಯದ ಕೋಟರಂಗಳಲ್ಲಿ ಗಿರಿಕುಳದ ಗಹ್ವರಂಗಗಳಲ್ಲಿ, ನಿರ್ಮಳಿನ ಪುಳಿನಸ್ಥಳಗಳಲ್ಲಿ, ಚಂದ್ರಕಾಂತದ ಶಿಲೆಯ ತಂಪಿನಲ್ಲಿ ಪರಿಮಳದ ಚಂದನದ ತರುಗಳಲ್ಲಿ, ಮಾಮರನ ಮಾಧವಿಯ ಮಂಟಪಗಳಲ್ಲಿ, ತಾವರೆಯ ತಣ್ಣೆಳಲ ತಿಳಿಗೊಳಗಳಲ್ಲಿ, ಮಲ್ಲಿಗೆಯ ಮಲತಿಯ ಪೊದರುಗಳಲ್ಲಿ, ಮೊಲ್ಲೆ ಇರುವಂತಿಗೆಯ ಮೊತ್ತಗಳಲ್ಲಿ.

ಶಿವಭಾವ ಬಲಿಯಿತು. ಶಿವದೃಷ್ಟಿ ದೊರೆಯಿತು, ಸರ್ವಶಿವಮಯತೆ
ಅಳವಟ್ಟಿತು.
"ಶಿವನ ನೋಳ್ಪಂತೆಲ್ಲಮಂ ನೋಳ್ಪನಲ್ಲಮಂ
ಭವನೊಳಗಿರುತ್ತೆಲ್ಲರೊಳಗಿರ್ಪನಲ್ಲಮಂ
ಎಲ್ಲಿರ್ದನಲ್ಲಿಯೆ ವಸಂತಮಾಸಂ ನೋಡ
ಎಲ್ಲಿರ್ದನಲ್ಲಿ ದಿವ್ಯಕ್ಷೇತ್ರಮುಂ ನೋಡ!"
ಈ ಪರಮೋಚ್ಚಸ್ಥಿತಿ ಪ್ರತಿಬಿಂಬತವಾಗಿದೆ ಅವನ ಈ ವಚನದಲ್ಲಿ:
"ಕಂಡುದೆಲ್ಲ ಪಾವನ, ಕೇಳಿತ್ತೆಲ್ಲ ಪರಮಬೋಧೆ
ಮುಟ್ಟಿತ್ತೆಲ್ಲ ಪರುಷದ ಸೋಂಕು
ಒಡನೆ ನುಡಿದವರೆಲ್ಲರು ಸದ್ಯೋನ್ಮುಕ್ತರು,
ಸುಳಿದ ಸುಳುಹೆಲ್ಲ ಜಗತ್ಪಾವನ
ಮೆಟ್ಟಿದ ಧರೆಯೆಲ್ಲವು ಅವಿಮುಕ್ತಕ್ಷೇತ್ರ
ಸೋಂಕಿದ ಜಲವೆಲ್ಲವೂ ಪುಣ್ಯತೀರ್ಥಂಗಳು

ಶರಣೆಂದು ಭಕ್ತಿಯ ಮಾಡಿದವರೆಲ್ಲರೂ ಸಾಯುಜ್ಯರು
ಗುಹೇಶ್ವರ, ನಿಮ್ಮ ಸುಳುಹಿನ ಸೊಗಸ ಉಪಮಿಸಬಾರದು!"

ಈ ಸ್ಥಿತಿ ಅವನಿಗೆ ಹುಟ್ಟಿನೊಡನೆಯೇ ಬಂದುದೆಂದು ಹೇಳುತ್ತಾನೆ ಚಾಮರಸ. ಪ್ರಭುವಿನ ವಚನಗಳಲ್ಲಿ ಬಸವಣ್ಣನವರ ವಚನಗಳಲ್ಲಿರುವಂತೆ ಸಾಧಕಾವಸ್ಥೆಯ ತುಮುಲದ, ತಳಮಳದ ಹಲವು ಹೊಯ್ದಾಟಗಳ ವಚನಗಳು ಇಲ್ಲದಿರುವುದು ಚಾಮರಸನ ಈ ನಿಲುವಿಗೆ ಪುಷ್ಟಿಯನ್ನೀಯುವಂತೆ ತೋರುವುದಾದರೂ ಪ್ರಭುವಿನ ಸಾಧಕಾವಸ್ಥೆಯೇ ಇಲ್ಲವೆಂದು ಹೇಳಲಾಗದು.

ಅಲ್ಲೊಂದು ಇಲ್ಲೊಂದು ಅಪರೂಪದ ವಚನಗಳು ಅಲ್ಲಮನು ಎಂಥ ಅಗ್ನಿದಿವ್ಯಗಳನ್ನು ಎದುರಿಸಬೇಕಾಯಿತೆಂಬುದನ್ನು ಸೂಚಿಸುತ್ತಿವೆ.

"ಅಂಗದ ಕೊನೆಯ ಮೇಲಣ ಕೋಡಗ ಕೊಂಬಿಂಗೆ ಹಾಱಿತ್ತು ಅಯ್ಯ!
ಒಂದು ಸೋಜಿಗ; ಕೈಯ ನೀಡಲು ಮೈಯೆಲ್ಲವ ನುಂಗಿತ್ತು!"
"ಕಂಗಳ ಮುಂದಣ ಕತ್ತಲೆಯಿದೇನೋ? ಮನದ ಮುಂದಣ
ಮರಣವಿದೇನೋ?
ಒಳಗಣ ರಣರಂಗ, ಹೊಱಗಣ ಶೃಂಗಾರ, ಬಳಕೆಗೆ ಬಂದ
ಬಟ್ಟೆಯಿದೇನೋ?"
"ಬಂದುದನೆಲ್ಲವ ನುಂಗಿ, ಬಾರದುದನೆಲ್ಲವ ಹಿಂಗಿ
ಆರಿಗಿಲ್ಲದವಸ್ಥೆ ಎನಗಾಯಿತ್ತು;
ಆ ಅವಸ್ಥೆ ಅಱಿತು ನೀನು ನನೆಂದಱಿದೆ !"
"ಉಗುಳ ನುಂಗಿ ಹಸಿವ ಕಳೆದು, ತೆವರ ಮಲಗಿ ನಿದ್ರೆಗೆಯ್ದೆನಲ್ಲಾ!
ನೋಡಿ ನೋಡಿ ಸುಖಂಬಡೆದೆನಯ್ಯಾ!
ನಿಮ್ಮ ವಿರಹದಲ್ಲಿ ಕಂಗಳೆ ಕರುವಾಗಿದ್ದೆನಯ್ಯಾ!"

"ತನುವಿನ ಕೊಱತೆಗೆ ಸುಳಿಸುಳಿದು, ಮನದ ಕೊಱತೆಗೆ ನೆನೆನೆನೆದು
ಭಾವದ ಕೊಱತೆಗೆ ತಿಳಿತಿಳಿದು, ಶಬ್ದದ ಕೊಱತೆಗೆ ಉಲಿಉಲಿದು,
ಗುಹೇಶ್ವರನೆಂಬ ಲಿಂಗ ಮನದಲ್ಲಿ ನೆಲೆಗೊಳ್ಳದಾಗಿ"
ಅಱಸಿ ಅಱಸಿ ಹಾಹಾ ಎನುತಿದ್ದೆನು
ಬೆದಕಿ ಬೆದಕಿ ಬೆದಬೆದ ಬೇವುತಿದ್ದೆನು!

ಹೀಗೆ ಹಲವು ಕಡೆಗಳಲ್ಲಿ ಅಲ್ಲಮನ ಅಂತರಂಗದ ರಣರಂಗದ ಚಿತ್ರಗಳು ಮೂಡಿವೆ, ಇವುಗಳಿಂದ ಅವನ ಸಾಧಕಾಂಗದ ಪ್ರತಿಯೊಂದು ಹಂತದ ಚಿತ್ರವೂ ನಮಗೆ ನೋಡಲು ಸಿಕ್ಕುವುದಿಲ್ಲವಾದರೂ ಮಾಯೆ ಅಗ್ನಿಪರೀಕ್ಷೆಯಿಂದಲೇ ಆರಂಭವಾದ ಅವನ ದಿವ್ಯಜೀವನ ಮುಂದೆಯೂ ಹಲವು ಕಠೋರ ಪರೀಕ್ಷೆಗಳಿಗೆ ಒಳಗಾಗಿರಬೇಕೆಂಬ ಅನುಮಾನ ಹುಟ್ಟುತ್ತದೆ.

ಪ್ರಭು ಯಾರು ಯಾರನ್ನು ಕಂಡು ಅವರನ್ನು ಯಾವ ರೀತಿಯಲ್ಲಿ ತಿದ್ದಿದನೆಂಬುದು ಅವನ ವಚನಗಳಿಂದ ಕ್ವಚಿತ್ತಾಗಿ ಅವನನ್ನು ಕುರಿತ ಕೃತಿಗಳಿಂದ ವಿವರವಾಗಿ ತಿಳಿಯುತ್ತದೆ. ಆದರೆ ಇವರಷ್ಟೇ ಅವನ ನೇರ ಸಂಪರ್ಕಕ್ಕೆ ಬಂದಿರಲಾರರು. ಬಂದಿರಬಹುದಾದವರೂ ಈ ಅನುಭಾವ ಗೊಮ್ಮಟನಿಂದ ಅಪೂರ್ವವಾದ ಮಾರ್ಗದರ್ಶನವನ್ನು ಪಡೆದಿರಬೇಕು. ಇದಕ್ಕೂ ಮಹತ್ವದ್ದು ಅವನು ಅವಲೋಕಿಸಿರಬಹುದಾದ ಗ್ರಂಥಗಳು, ಪರೀಕ್ಷಿಸಿರಬಹುದಾದ ಪಂಥಗಳು, ಕೈಕೊಂಡಿರಬಹುದಾದ ಯೋಗಸಾಧನೆಗಳು, ಎದುರಿಸಿರಬಹುದಾದ ವೈಚಾರಿಕ ಗೊಂದಲಗಳು, ಸಾಧಿಸಿದ ಹಂತಹಂತದ ಆತ್ಮೋನ್ನತಿ ಇವೆಲ್ಲವುಗಳಿಗೆ ಎರವಾಗಿದ್ದೇವೆ ನಾವು. ಆದರೆ ಅವನ ವಚನಗಳಿಂದ ಅವನೆಂಥ ಜ್ಞಾನಮೇರು, ಅನುಭಾವ ಗೌರೀಶಂಕರ, ಪ್ರಚಂಡ ಪ್ರತಿಭಾಶಾಲಿಯೆಂಬುದು ನಮಗೆ ವೇದ್ಯವಾಗುತ್ತದೆ.

ಅವನ ಬಹುದೊಡ್ಡ ಗುಣವೆಂದರೆ ತಾನು ನಡೆಸಿದ ಸಂವಾದಗಳನ್ನು ಅತ್ಯುನ್ನತ ವೈಚಾರಿಕ ನೆಲೆಯಲ್ಲಿಯೇ ನಡೆಸಿದುದು, ಯಾವ ಮತದ, ಯಾವ ವ್ಯಕ್ತಿಯ ದೂಷಣೆಯನ್ನು ಮಾಡದೆ ಅವರವರ ಅರಕೆಗಳನ್ನು ಅವರಿಗೆ ನೋವಾಗದಂತೆಯೇ ತುಂಬಿಕೊಟ್ಟುದು. ತನಗೆ ವೀರಶೈವ ಮಾರ್ಗದಲ್ಲಿ ಶಿವಯೋಗದಲ್ಲಿ ನಿಷ್ಠೆಯಿದ್ದರೂ ಕಾಮನ ಸುಟ್ಟು, ಹೋಮವನುರುಹಿ, ತ್ರಿಪುರ ಸಂಹಾರದ ಶೀಲಬಲ್ಲಡೆ, ಯೋಗಿಯಾದಡೇನು? ಭೋಗಿಯಾದಡೇನು? ಶೈವನಾದಡೇನು? ಸನ್ಯಾಸಿಯಾದಡೇನು? ಅಶನವ ತೊಱೆದಾತ, ವ್ಯಸನವ ಮಱೆದಾತ ಗುಹೇಶ್ವರಲಿಂಗದಲ್ಲಿ ಅವರ ಹಿರಿಯರೆಂಬೆನು! ಎಂಬ ಉದಾರ ದೃಷ್ಟಿಯನ್ನಿಟ್ಟುಕೊಂಡುದು; ಅವನ ಪ್ರಥಮ ಶಿಷ್ಯನಾದ ಗೊಗ್ಗಯ್ಯನಿಂದ ಚಾಮರಸ ನುಡಿಸಿರುವಂತೆ ದೀನ ಮನದವನಂತೆ ಕಂಡ ನಿಧಾನವನು, ತಾನೊಬ್ಬನುಂಬನೆ, ದಾನಿ ಲೇಸೈ ನಿನ್ನ ಪರಿ ನೀಂ ಕಂಡ ಶಿವಪಥವ ಮಾನವರಿಗರುಹೆಂಬ ಮಹದಭಿಮಾನಿ ನೀನೇ ಜಗದಗುರುವೆನಿಸಿಕೊಂಡವನು ಅಂತೆಯೇ "ಇಳೆಯ ಭಕ್ತರ ಪಾವನವ ಮಾಡಲಿಕೆ ತಾನೇ ಕುರುಹು ವಿಡಿದಗ್ಗಳೆಯತನದಲಿ ನಡೆದನಲ್ಲಮ!"

ಗೊಗ್ಗಯ್ಯನಿಗೆ ಅವನು ಬೋಧಿಸಿದ ರೀತಿಯೇ ಅಲ್ಲಮನ ರೀತಿ, ಮಾನವ ಬಹಿರ್ವ್ಯಾಪಾರಗಳಲ್ಲಿ ಮಗ್ನನಾಗಿ ಅಂತರಂಗದ ಮನೆಯ ಹಾಳುಗೆಡವಬಾರದು, ಬಹಿರಂಗದ ಕ್ರಿಯೆಗಳೊಡನೆ ಅಂತರಂಗದ ಸಾಧನೆಯೂ ಸಾಗಬೇಕು. ಗೊಗ್ಗಯ್ಯನ ಕಾಯಕ ತೋಟಗಾರಿಕೆ. ಆ ಹೊರಗಿನ ತೋಟಗಾರಿಕೆಯೊಡನೆ ಒಳಗಿನ ತೋಟಗಾರಿಕೆ–

ಯೊಂದನ್ನೂ ಮಾಡಬೇಕು, ಅದೆಂಥದು?

ಇಂಥದು:

"ತನುವ ತೋಟವ ಮಾಡಿ, ಮನವ ಗುದ್ದಲಿ ಮಾಡಿ ಅಗೆದುಕಳೆದೆನಯ್ಯ
ಭ್ರಾಂತಿನ ಬೇರ! ಒಡೆದು, ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯ
ಬ್ರಹ್ಮಬೀಜವ!
ಅಖಂಡಮಂಡಲವೆಂಬ ಬಾವಿ, ಪವನವೆರಾಟಾಳ ಸುಷುಮ್ನ
ನಾಳದಿಂದುದಕವತಿದ್ದಿ
ಬಡವಗಳೈವರು ಹಸಗೆಡಿಸಿಹವೆಂದು ಸಮತೆ ಸೈರಣೆಯ ಬೇಲಿಯನಿಕ್ಕಿ
ಆವಾಗಳು ಈ ತೋಟದೊಳಗೆ ಜಾಗರವಿದ್ದು
ಈ ಸಸಿಯ ಸಲಹಿದೆ ಕಾಣಾ, ಗುಹೇಶ್ವರಾ!"

ಪ್ರಭುವಿನ ಪೂರ್ಣತೆಯ ಪಯಣ ಪ್ರಾರಂಭವಾಯಿತು. ಅಡಕವೆಂಬ ಗ್ರಾಮ ಎದುರಾಯಿತು. ಅಲ್ಲಿದ್ದ ಮಹಾಶರಣ ಅಜಗಣ್ಣ ಬಯಲ ಬೆರೆಸಿ ಕೆಲವೇ ದಿನಗಳು ಕಳೆದಿದ್ದುವು. ಅಲ್ಲಿಗೆ ಹತ್ತಿರದಲ್ಲಿದ್ದ ಮೊಸರೂರಿನಿಂದ ತಂಗಿ ಮುಕ್ತಾಯಿ ಅಣ್ಣನ್ನ ಲಿಂಗೈಕ್ಯವಾರ್ತೆ ಕೇಳಿ ಅಡಕಕ್ಕೆ ಆಗಮಿಸಿದ್ದಳು. ಅಜಗಣ್ಣ ಅವಳಿಗೆ ಅಣ್ಣ ಮಾತ್ರನಾಗಿರಲಿಲ್ಲ, ಮಾರ್ಗದರ್ಶಕ ಗುರುವೂ ಆಗಿದ್ದ. ಆದುದರಿಂದ ಅಣ್ಣನ ಅಗಲಿಕೆ ಆಕೆಗೆ ದುಸ್ಸಹವಾಗಿದ್ದಿತು. ಪರಿಪರಿಯಿಂದ ಪ್ರಲಾಪಿಸುತ್ತಿದ್ದ ಅವಳನ್ನು ಕಂಡು ಪ್ರಭುವಿನ ಕರುಳು ಕರಗಿತು, ಅವಳಿಗೆ ಸಲ್ಲಲಿತ ಲಿಂಗಾನುಭಾವದ ಬೆಲ್ಲವನು ತಿನಕಲಿಸಿ ನಿಜಸುಖದಲ್ಲಿ ನಿಲುಸುವೆನೆನುತ ಅವಳ ಬಳಿಗೆ ಸುಳಿದನು.

"ಎನ್ನ ಕಣ್ಣ ಕಟ್ಟಿ ಕನ್ನಡಿಯ ತೋರಿತ್ತು ಅಜಗಣ್ಣ ನಿನ್ನ ಯೋಗ!
ನಿಮ್ಮ ನುಡಿಗಳೆಲ್ಲವು ಪ್ರತಿಬಿಂಬಗಳಾದುವೆ, ಅಣ್ಣಾ?
ಕೊಡನೊಳಗಣ ಜ್ಯೋತಿಯ ಅಡಗಿಸಲರಿಯದೆ
ಮಿಗೆವರಿದಂತಾದೆಯೋ ಅಜಗಣ್ಣ!
ನಾನೆಂತು ಬದುಕುವೆನಣ್ಣಾ!" ಎಂದು ಅಲ್ಪರಿಯುತ್ತಲಿದ್ದ ಅವಳಿಗೆ,

ಎಂತು ಬದುಕುವೆನಣ್ಣಾ! ಎಂದು ಹಲುಬುತ್ತಿದ್ದ ಅವಳಿಗೆ ಬದುಕುವುದೆಂತು? ಎಂಬುದನ್ನು ತಿಳಿಸಿದನು

ಅದು ಹೀಗೆ:

"ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು
ಕಂಗಳ ಮುತ್ತ ಪವಣಿಸುವಾಕೆ ನೀನಾರು ಹೇಳಾ?
ಅರಿವಿನೊಳಗಣ ಮರಹಿದೇನು ಹೇಳಾ!"

ಎಂದು ಮಾತಿಗೆ ಮೊದಲು ಮಾಡಿದನು. ಮುಕ್ತಾಯಿಯೂ ಸಾಮಾನ್ಯಳಲ್ಲ, ಸಾಧನೆಯ ಶಿಖರವನ್ನೇರಿದ್ದ ಪರಮಶರಣೆ, ಉತ್ತರವಿತ್ತಳು:

"ಆರೆಂದು ಕುರುಹ ಬೆಸಗೊಳಲು ಏನೆಂದು ಹೇಳುವೆನಯ್ಯಾ?
ಕಾಯದೊಳಗೆ ಮಾಯವಿಲ್ಲ; ಭಾವದೊಳಗೆ ಭ್ರಮೆಯಿಲ್ಲ;
ಕರೆದು ಬೆಸಗೊಂಬರೆ ಕುರುಹಿಲ್ಲ!
ತಲೆಯಳಿದು ನೆಲೆಗಟ್ಟು ಬೆಳಗುವ ಜ್ಯೋತಿ
ಎನ್ನ ಅಜಗಣ್ಣ ತಂದೆಯ ಬೆನ್ನ ಬಳಿಯವಳಾನಯ್ಯ!
ನೀನಾರು ಹೇಳಯ್ಯ?"

ಎಂಥ ಪರಿಚಯ! ಮುಂದಿನ ಪ್ರಶ್ನೋತ್ತರಗಳೆಂತಿರಬೇಡ? ಮೈ ಕೂದಲೆಲ್ಲ ಕಿವಿಯಾಗಿ ಕೇಳೋಣ:

"ಶರಣು ಶರಣಾರ್ಥಿ ಎಲೆ ತಾಯೆ ನಾ ನಿಮ್ಮ ಭಾವನಲ್ಲಯ್ಯನು;
ನೀನೆನಗೆ ನಗೆವೆಣ್ಣು. ಕಳವಳದ ಕಂದೆರವಿದೇನು ಹೇಳಾ?
ಮದವಳಿದು ಮಹವನೊಡಗೂಡಿದ
ಎನ್ನ ಅಜಗಣ್ಣ ನನಗಲಿದ ದುಃಖ ಪ್ರಭುವೆ!"
"ಅರಿವತಿರು. ಮರಹುಗೆಟ್ಟು ತನ್ನ ಲಿ ತಾನು ಸನ್ನಿಹಿತನಾದವಂಗೆ
ದುಃಖಿಸುವರೆ ಹೇಳಾ, ಶೋಕಿಸುವರೆ ಹೇಳಾ!"
"ಎಂತು ಮರೆವೆನಯ್ಯ ಎನ್ನ ಅಜಗಣ್ಣ ತಂದೆಯನು?"
"ಕಂಡೆ, ಕಾಣೆ, ಕೂಡಿದೆ, ಅಗಲಿದೆನೆಂಬುದು ಭ್ರಾಂತಿ ತಾಯೆ!"
"ಅಜಗಣ್ಣ ಎನ್ನ ಮತಿಗೆ ಮರವೆಯ ಮಾಡಿ ಹೋದ ಪ್ರಭುವೆ!"

"ಒಮ್ಮೆ ಕಂಡೆ, ಒಮ್ಮೆ ಕಾಣೆ, ಒಮ್ಮೆ ಕೂಡಿದೆ, ಒಮ್ಮೆ ಅಗಲಿದೆ ಎಂದರೆ ಕರ್ಮ ಬೆಂಬತ್ತಿ ಬಿಡದು!

ನಿನ್ನೊಳಗೆ ನಿನ್ನ ತಿಳಿದು ನೋಡಲು ಭಿನ್ನ ಉಂಟೆ?"
"ಹೋಹ ಬಟ್ಟೆಯನರಿಯದನ್ನಕ್ಕರ ತಾನಾಗಬಾರದು, ಪ್ರಭುವೆ!"
"ಮನವೆ ಮನೆ ಮಾಡಿಕೊಂಡಿಪ್ಪ ಲಿಂಗದ ಅನುವನರಿಯ ಬಲ್ಲರೆ
ಗುಹೇಶ್ವರಲಿಂಗ ದೂರವಿಲ್ಲ, ತಾಯೆ!"
"ಅಜಗಣ್ಣನೆಂಬ ಗುರುವಿಲ್ಲದೆ ಆರೂಢಿಯ ಕೂಟ ಸಮನಿಸದು,
ಪ್ರಭುವೆ!"

"ನಿನಗೆ ನೀನೆ ಗುರುವಲ್ಲದೆ ನಿನ್ನಿಂದಧಿಕಮಪ್ಪ ಗುರು ಉಂಟೆ ತಾಯೆ?"
"ಗುರು ತಾನಾದರೂ ಗುರುವಿಡಿದಿರಬೇಕು, ಪ್ರಭುವೆ!"
"ಸಹಜ ಸಂಬಂಧಕ್ಕೆ ಗುರುವಲ್ಲದೆ ಅಸಹಜಕ್ಕೆ ಗುರು ಉಂಟೆ ತಾಯೆ?"
"ನೆರೆಯರಿತು ಮರೆಯ ಬಲ್ಲರೆ ಎನ್ನ ಅಜಗಣ್ಣನಂತೆ
ಶಬ್ದಮುಗ್ಧವಾಗಿರಬೇಕಲ್ಲದೆ"
"ಶಬ್ದ ಸಂದಣಿಯ ಮಾತು ಸಮಯವಲ್ಲ ನೋಡಾ, ಪ್ರಭುವೆ!"
"ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ತ್ವ
ತಾಳೋಷ್ಟಸಂಪುಟವೆಂಬುದೇ ನಾದಬಿಂದುಕಳಾತೀತ!
ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ, ತಾಯೆ!"
"ನಡೆದು ನಡೆದು ಕಂಡವರು ನುಡಿದು ನುಡಿದು ಹೇಳುತ್ತಿಹರೆ?
ನುಡಿದು ನುಡಿದು ಹೇಳುವನ್ನಕ್ಕರ ನುಡಿದುದೆಲ್ಲ ಹುಸಿಯೆಂಬೆನು"
"ತನ್ನ ತಾನಱಿದಡೆ ನುಡಿಯೆಲ್ಲಾ ಪರತತ್ತ್ವ ನೋಡಾ!
ತನ್ನ ತಾ ಮಱೆದಡೆ ನುಡಿಯೆಲ್ಲಾ ಮಾಯೆ ನೋಡಾ!
ಅಱಿದು ಮಱೆದ ಶಿವಯೋಗಿಯ ಶಬುದವೆಲ್ಲ ಉಪದೇಶವಲ್ಲದೆ ಭಿನ್ನ
ಉಂಟೆ?"
"ನುಡಿಯ ಹಂಗಿನ್ನೂ ನಿಮಗೆ ಹಿಂಗದು; ನಡೆಯನೆಂತು ಪರರಿಗೆ
ಹೇಳುವಿರಿ?"
"ಶರಣ ನಡೆದರೆ ನಿರ್ಗಮನಿ, ನುಡಿದರೆ ನಿಶ್ಯಬ್ದ ತಾಯೆ!"
"ಕೈಯದು ಕುರುಹು, ಬಾಯದು ಬೊಬ್ಬೆ, ಉಲಿಯದಿರೋ ಭಾವಾ
ಉಲಿಯದಿರೋ!"

"ಅರಿವುಗೆಟ್ಟು ಮರಹಳಿದು ಭಾವ ಭ್ರಾಂತು ನಿಭ್ರಾಂತರಾದವರ ಕೈಯಲ್ಲಿ ಕುರುಹನರಸುವರೆ ತಾಯೆ?."

"ನುಡಿಯೆನೆಂಬಲ್ಲಿಯೆ ನುಡಿಯಿದೆ; ನಡೆಯೆನೆಂಬಲ್ಲಿಯೆ ನಡೆಯಿದೆ; ಭಾವಿಸೆನೆಂಬಲ್ಲಿಯೆ ಭಾವವಿದೆ;"

"ಅರಿದು ಮರೆದೆನೆಂಬಲ್ಲಿಯೆ ಅರಿವು ಮರವೆಯಿದೆ!
ಅರಿದು ಮರೆದ ಪರಿಯೆಂತು ಹೇಳಾ?"
"ತನ್ನಲ್ಲಿ ತಾನು ತದ್‌ಗತಮಾಗಿಪ್ಪ ಶಿವಯೋಗಿಗೆ ಭಿನ್ನವಿಲ್ಲ ನೋಡಾ!"

"ಸಿಡಿಲು ಹೊಯಿದ ಬಾವಿಗೆ ಸೋಪಾನವೇಕೋ? ತನ್ನಲ್ಲಿ ತಾನು ತದ್‌ಗತವಾದ ಬಳಿಕ

ಬೊಮ್ಮ ಪರಬೊಮ್ಮವಾದೆನೆಂಬುದಿಲ್ಲ ಪ್ರಭುವೆ."
"ನುಡಿಯಿಂದ ನಡೆಗೆಟ್ಟಿತ್ತು ; ನಡೆಯಿಂದ ನುಡಿಗೆಟ್ಟಿತ್ತು;
ಭಾವದ ಗುಸುಟು ಅದು ತಾನೆ ನಾಚಿ ಮಾದುದು ನೋಡಾ!
ಗುಹೇಶ್ವರನೆಂಬ ಅರಿವು ಸಿನೆ ಬಂಜೆಯಾದುದಲ್ಲಾ!"
"ಅಹುದಹುದು, ಶಿವಶರಣರ ಮಹಿಮೆಯ ಆರಿಗೆಯೂ ಕಾಣಬಾರದು,
ಅರಿವಡೆ ಮತಿಯಿಲ್ಲ, ನೆನೆವರೆ ಮನವಿಲ್ಲ. ನಿನ್ನ ಅಜಗಣ್ಣ ತಂದೆಯ
ನೊಳಕೊಂಡಿಪ್ಪ
ನಿಮ್ಮ ಮಹಿಮೆಗೆ ನಮೋ ನಮೋ ಎನ್ನುತಿರ್ದೆನು!"
ಕೊನೆಗೂ ಪ್ರಭುವಿನ ಪರಂಜ್ಯೋತಿತ್ವವನ್ನು ಒಪ್ಪಿಕೊಂಡಳು ಮುಕ್ತಾಯಿ.

"ದೇವ ನಿಮವರುಗಳ ಪರಿಯನು
ನೀವೆ ಬಲ್ಲಿರಿ; ಹಾವಿನಡಿಯನು
ಹಾವುಗಳು ನೆರೆ ಬಲ್ಲವಲ್ಲವೆ ನಮಗೆ ಗೋಚರವೆ?
ಭಾವಿಸುವುದೊಡೆಮಗಿನ್ನು ಗತಿಮತಿ
ಯಾವುದೆಂದೆನುತಲ್ಲಮಮಪ್ರಭು
ದೇವರಿಗೆ ಮುಕ್ತಾಯಿ ಬಿನ್ನೈಸಿದಳು ಭಕ್ತಿಯಲಿ ॥ (ಪ್ರ. ಲಿಂ. ಲೀ)"

ಪರಮ ಪ್ರೀತರಾಗಿ ಪ್ರಭುದೇವರು ಹೇಳಿದರು: "ಅಕ್ಕಾ ನಿನ್ನ ಹೆಸರಿಗೆ ತಕ್ಕ ಬಯಕೆಯಿದು. ಹರಿಗೋಲನ್ನು ಆಶ್ರಯಿಸಿ ತೊರೆಯನ್ನು ದಾಟುವವರಂತೆ, ಹೊರಗೆ ಮಾಡುವ ಮಾವೆಲ್ಲವ ಮರೆದು ಅಂತರ ಮಾರ್ಗವೊಂದನ್ನೆ ಲಿಂಗವನ್ನರಿಯಬೇಕೆನ್ನುವವರು ಆಶ್ರಯಿಸಬೇಕು. ಶಿಶುಗಳಿಗೆ ಮೊದಲು ತಾಯಿ ಹಾಲೇ ಜೀವನವೆನಿಸಿದರೂ ಬರಬರುತ ಹಸುವಿನ ಹಾಲನ್ನೂ, ಆಮೇಲೆ ಮೆತ್ತನೆಯ ಅನ್ನವನ್ನೂ ಕೊಟ್ಟ ಬೆಳಸುವಂತೆ, ನೀನೂ ಮೆಲ್ಲಮೆಲ್ಲನೆ ಹೊರಗನ್ನು ಮರೆದು ನಿರಾಳದಲ್ಲಿ ನಿಲುವದನ್ನು ಕಲಿಯಬೇಕು. ಆಗ ನಿತ್ಯಾನಂದ ನಿನ್ನದಾಗುವುದು."

ಅದೇ ಉಪದೇಶ ಇಲ್ಲಿಯೂ ಹೊರಗಿನೊಡನೆ ಒಳಗನ್ನೂ ಸಂಸ್ಕರಿಸಿಕೊಳ್ಳಬೇಕು; ಹೊರಗಿನ ಮಾಟದೊಡನೆ ಒಳಗಿನ ಕೂಟವನ್ನೂ ಸಾಧಿಸಿಕೊಳ್ಳಬೇಕು. ಇದು ಪ್ರಬು ಬೋಧೆಯ ಹುರುಳು ತಿರುಳೂ. ಮುಕ್ತಾಯಿಗೆ ಇದನ್ನೇ ಹೇಳಿದರೂ ಆನುಷಂಗಿಕವಾಗಿ ಇಲ್ಲಿ ಗುರುತತ್ತ್ವ ಬಿತ್ತರಗೊಂಡಿದೆ, 'ಅರಿವೆ ಗುರು' ಎಂಬುದೇ ಆ ಮಹಾತತ್ತ್ವ. ಇನ್ನು ಲಿಂಗತ್ತ್ವದ ತಲ ಸ್ಪರ್ಶಿಯಾದ ಚರ್ಚೆ ನಡೆಯಬೆಕು. ಅದು ನಡೆಯಿತು ಸೊನ್ನಲಾಪುರ ಕಲ್ಯಾಣಗಳಲ್ಲಿ ಅದನ್ನರಿತುಕೊಳ್ಳೋಣ.

ಸಿದ್ಧರಾಮ ಸೊನ್ನಲಿಗೆಯನ್ನೇ ಅಭಿನವ ಶ್ರೀಶೈಲವನ್ನಾಗಿ ಪರಿವರ್ತಿಸಿದ್ದ ಮಹಾಯೋಗಿ, ಸಾಕಾರದೊಳು ನಿಷ್ಠೆ, ಭೂತಂಗಳೊಳು ಅನುಕಂಪೆ ಅವನ ಜೀವನ ಸೂತ್ರವಾಗಿದ್ದಿತು. ಅದರಂತೆ ಕೆರೆ ದೇಗುಲಗಳನ್ನು ಕಟ್ಟಿಸುತ್ತ, ದುಃಖಿತಪ್ತರ ಅರ್ತಿನಾಶನ ಮಾಡುತ್ತ ಸಾರ್ಥಕ ಜೀವನ ನಡೆಸಿದ್ದನಾತ. ಹೆಂಗಳೆಯರ ಈ ಹಾಡು ಆತನ ಪ್ರಸಿದ್ಧಿಗೆತ್ತಿದ ಆರತಿ:

"ಬೀದಿ ಬೀದಿಗೆ ಗುಡಿಯ ಹಾದಿ ಹಾದಿಗೆ ಕೆರೆಯ
ಸಾಧಿಸಿದ ಕಟ್ಟಿ ಸಿದ್ಧರಾಮ! ಸೊನ್ನಾಲಿಗೆ
ಸಾಧು ಸಿದ್ಧನಿಗೆ ಮನೆಯಾಯ್ತು!"

ಅಲ್ಲಮಪ್ರಭು ಅಲ್ಲಿಗೆ ಹೋದ. ಏಕೆ ಹೋದ? 'ನೂಲ ಸಂಕಲೆ ಗಡಿದು, ಕನಕದ ಕೋಳವನು ಕಾಲಿಂಗೆ ಕೀಲಿಪ ಮತಿಗೆ ಮರುಗಿ, ಚಿಕ್ಕ ಸಂಸಾರವನು ಸಡಿಲಿಸಿ ಹೊಕ್ಕನಲ್ಲಾ ಹಿರಿಯ ಸಂಸಾರವನು ಎಂಬ ಮರುಕ ತಲೆದೋರಿ ಹೋದ. ಸೊನ್ನಲಿಗೆಯ ಕೆರೆಯ ಕೆಲಸ ಭರದಿಂದ ಸಾಗಿದ್ದಿತು. ಅಲ್ಲಮ ಕೆರೆಯ ಕೆಲಸದಲ್ಲಿ ನಿರತರಾಗಿದ್ದ. ಒಡ್ಡರನ್ನು ಕೆಣಕಲೆಂದೇ' ಎಲ್ಲಿಹನು ನಿಮ್ಮ ಒಡ್ಡರಾಮಯ್ಯ? ಎಂದು ವ್ಯಂಗ್ಯ ಸ್ವರದಲ್ಲಿ ಕೇಳಿದ, ಸಿದ್ಧರಾಮನನ್ನು ಶಿವನೆಂದೇ ನಂಬಿದ್ದ ಒಡ್ಡರು ಕೆರಳಿ ಸಿದ್ಧರಾಮನನ್ನು ಕರೆತಂದರು. ಸಿದ್ಧರಾಮನ ಸಿಟ್ಟಿನ ಬೆಂಕಿಯನ್ನು ಅಲ್ಲಮನ ಅಮೃತಸ್ಮಿತ ಆರಿಸಿಬಿಟ್ಟಿತು. ಅಲ್ಲಮ ನಗುನಗುತ್ತಲೇ ನುಡಿದ:

"ಅನ್ನವನಿಕ್ಕಿ, ನನ್ನಿಯ ನುಡಿದು ಅರವಟ್ಟಿಗೆಯನಿಕ್ಕಿ
ಕೆರೆಯ ಕಟ್ಟಿಸಿದರೆ ಮರಣದಿಂದ ಮೇಲೆ ಸ್ವರ್ಗ ಉಚಿಟಲ್ಲದ
ಶಿವನ ನಿಜವು ಸಾಧ್ಯವಾಗದು. ಗುಹೇಶ್ವರನ ಅರಿದ ಶರಣಂಗೆ ಆವ ಫಲವೂ ಇಲ್ಲ!"

ಸಿದ್ಧರಾಮ ಸ್ತೈವೆರಗಾದ "ತಾನು ಮಾಡುತಿರುವ ಜನಹಿತ ಕಾರ್ಯಗಳೆಲ್ಲ ನಿರರ್ಥಕವೆ? ಜನಮಂಗಲ ರತಿಯಿಂದ, ಜನ ಕಲ್ಯಾಣೇಚ್ಛೆಯಿಂದ ಮಾಡುವ ಕಾರ್ಯಗಳೆಲ್ಲವೂ ಫಲಾಪೇಕ್ಷೆಯಿಂದ ಮಾಡುವ ಕಾಮ್ಯಕರ್ಮಗಳೆ? ಹಾಗಾದರೆ ಸರಿಯಾದ ದಾರಿ ಯಾವುದು? ಎಂದು ಉಮ್ಮಳಿಸಿದ,

ಅಲ್ಲಮನ ದೃಷ್ಟಿಯಲ್ಲಿಯೂ ಲೋಕಹಿತ ಕಾರ್ಯಗಳು ಅನಿಷ್ಟವೇನಲ್ಲ. ಆದರೆ ಅವುಗಳಲ್ಲಿಯೇ ಅಸಕ್ತನಾಗಿ, ಅವುಗಳಿಗಿಂತಲೂ  ಮೇಲಾದ ಅಂತರಂಗದ ವಿಕಾಸವನ್ನು ಉಪೇಕ್ಷಿಸುವುದು ಅನಿಷ್ಟ. ಹೊರಗೆ ಕೆರೆ ಕಟ್ಟುವುದು ಎಷ್ಟು ಅಗತ್ಯವೋ ಅಷ್ಟೇ, ಅದೇಕೆ,

ಅದಕ್ಕೂ ಹೆಚ್ಚು ಅಗತ್ಯವಾದುದು ಒಳಗಿನ ಕೆರೆ. ಆ ಕೆರೆ ಎಂಥದೆಂಬುದನ್ನು ಅಲ್ಲಮನೇ ಅನನ್ಯವಾಗಿ ಬಣ್ಣಿಸಿದ್ದಾನೆ.

"ತನುವೆಂಬ ಏರಿಗೆ ಮನವೆಂಬ ಕಟ್ಟೆ
ಆಚಾರವೆಂಬ ಸೋಪಾನ ಪರಮಾನಂದವೆಂಬ ಜಲವ ತುಂಬಿ
ಕೆರೆಯ ಕಟ್ಟಬಲ್ಲವರನಾರನೂ ಕಾಣೆ!"
ನಾ ಕಟ್ಟಿದ ಕೆರೆ ಸ್ಥಿರವಾಯಿತ್ತು, ಗುಹೇಶ್ವರಾ ನಿಮ್ಮಾಣೆ!

ಸಿದ್ಧರಾಮನ ನಿಷ್ಠೆಯ ಗಂಡಭೇರುಂಡಕ್ಕಿದ್ದ ಎರಡು ಮುಖಗಳಲ್ಲಿ ಒಂದು ಮುಖದ 'ಭೂತಂಗಳೊಳನುಕಂಪೆಯ' ಸ್ವರೂಪ ತಿಳಿಯಿತು ಸಿದ್ಧರಾಮನಿಗೆ ಅದರ ಎರಡನೆಯ ಮುಖವಾದ ಸಾಕಾರ ನಿಷ್ಠೆಯ ಬಗ್ಗೆ ಎನ ಹೇಳುವನೀ ಮಹಾನುಭಾವ ಎಂದು ತಿಳಿದುಕೊಳ್ಳಲು ಹೃದಯ ಹಾತೊರೆಯಿತು, ಈ ಮುಖಕ್ಕೂ ಏಟು ಹಾಕಿದ ಅಲ್ಲಮ.

"ದೇಹದೊಳಗೆ ದೇವಾಲಯವಿದ್ದು ಮತ್ತೆ ಬೇರೆ ದೇವಾಲಯವೇಕೆ?
ಗುಹೇಶ್ವರಾ, ನೀನು ಕಲ್ಲಾದರೆ ನಾನೇನಪ್ಪೆನಯ್ಯಾ?"
ಕಲ್ಲ ಮನೆಯ ಮಾಡಿ, ಕಲ್ಲದೇವರ ಮಾಡಿ ಕಲ್ಲು ಕಲ್ಲಮೇಲೆ
ಕೆಎಡದರೆ ದೇವರೆತ್ತ ಹೋದರೋ?
"ಲಿಂಗ ಪ್ರತಿಷ್ಠೆ ಮಾಡಿದವಂಗೆ ನಾಯಕ ನರಕ, ಗುಹೇಶ್ವರಾ!"
ಸಿದ್ಧರಾಮನ ಅರಿವಿನ ಕಣ್ಣು ಅರೆದರೆಯಿತುಪ;
"ಅಣುವಿನೊಳಗೆ ಅಣುವಾಗಿಪ್ಪಿರಿ ಎಲೆ ದೇವಾ ನೀವು
ಮನದೊಳಗೆ ಘನವಾಗಿದ್ದಿರಿ, ಎಲೆ ದೇವಾ!
ಜಗದೊಳಗೆಲ್ಲಿಯೂ ನೀವಿಲ್ಲದೆಡೆಯುಂಟೆ!
ಎಂಬತ್ತು ಲಕ್ಷ ಶಿವಾಲಯಗಳ ನೀವು ಮಾಡಿ ಒಳಗಿಪ್ಪುದ ಕಂಡು
ಮಾಡಿದೆನ್ನಲ್ಲದೆ

ಕಪಿಲಸಿದ್ಧ ಮಲ್ಲಿನಾಥಯ್ಯ, ಎನಗೆ ಬೇರೆ ಸ್ವತಂತ್ರ ಉಂಟೆಂದು ಅರಿಯೆನು ಎಂದು ಒಪ್ಪಿ,

"ಸಕಲ ಲಿಂಗವ ಹಿಡಿದು ಅಗಲದೆ ನಡೆಯೆಂದಿರಾಗಿ ನಡೆವುತ್ತಿದೆನು,
ಲಿಂಗ ಪ್ರತಿಷ್ಠೆಯ ಮಾಡೆಂದು ಎನಗೆ ನಿರೂಪಿಸುತಿದ್ದ ಕಾರಣ
ಮಾಡುತ್ತಿದ್ದೆನಲ್ಲದೆ
ಎನಗೆ ಬೇರೆ ಸ್ವತಂತ್ರ ಉಂಟೆ?

ಹಿಂದೆ ನೀನು ಕೊಟ್ಟ ನಿರೂಪ ನಿಮಗೆ ಹುಸಿಯಾದರೆ
ಇನ್ನು ಮುಂದೆ ಸ್ವಯವಪ್ಪಂತೆ ನಡೆಸಾ, ಕಪಿಲಸಿದ್ಧ ಮಲ್ಲಿನಾಥಯ್ಯ
ಎಂದು ಕೋರಿದನು.

ಪ್ರಭು ಉತ್ತರಿಸಿದ:
"ಕೆರೆ ದೇಗುಲಂಗಳೆಲ್ಲವೂ ಹಿಂದಣ ಅಡಿದಜ್ಜೆ ಗೊಳಗು;
ಕರ್ಮಕಾಂಡ ಯೋಗಂಗಳೆಲ್ಲವೂ ಭವದ ತೆಕ್ಕೆಗೆ ಒಳಗು;

ಹಿಂದಣ ಮುಂದಣ ಸಂದನಳಿದು ಗುಹೇಶ್ವರಲಿಂಗದಲ್ಲಿ ಸಂದಿರಬೇಕು ಸಿದ್ಧರಾಮಯ್ಯ!"

ಸಿದ್ಧರಾಮನ ಸಂದೇಹವಳಿಯಲಿಲ್ಲ;
"ಕೃಷಿ ಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೊ?
ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೊ?
ಬೇಯದೆ ಅಶನವನುಂಬ ಠಾವಾವುದು?" ಎಂದು ಕೇಳಿದ.

ಅದಕ್ಕೆ ಅಲ್ಲಮನ ಉತ್ತರ:
"ಕರ್ಮವೇ ಪ್ರಾಣವೆಂದು ಮಾಡುವಾಗ ಜ್ಞಾನವನರಿವ ನೆಲೆ
ಶುದ್ಧವಿನ್ನಾವುದು?
ಸಾವನ್ನಕ್ಕ ಸಾಧನೆಯ ಮಾಡಿ ಕಾದುವ ಠಾವಿನ್ನಾವುದು?
ಅರಿದುದನತಿಗಳೆದು, ಮೇಲರಿದುದ ಕರಿಗೊಳುತ್ತ
ತುಪ್ಪವ ನೀಡಿದ ತಂಡುಲದಂತೆ ಕಾಯದೆ ಶುದ್ಧವಾಗಿರಬೇಕು–
ಗುಹೇಶ್ವರಲಿಂಗವನರಿವುದಕ್ಕೆ, ಸಿದ್ಧರಾಮಯ್ಯ"

ಸಿದ್ಧರಾಮ ಮತ್ತೊಂದು ಮುಖ ಹುಟ್ಟಿಸಿದ ವಾದಕ್ಕೆ; ಯಾವುದು ಕರ್ಮ, ಯಾವುದು ಅಕರ್ಮ? ಉಸಿರಾಡಿಸುವುದೂ ಕರ್ಮ, ಅಷ್ಟೇಕೆ ಅಲ್ಲಮನ ಇಷ್ಟಲಿಂಗ ಪೂಜೆಯೂ ಕರ್ಮವಲ್ಲವೆ?

"ಕೈಯಲ್ಲಿ ಹಿಡಿದು ಕಾಂಬುದು ಕರ್ಮಪೂಜೆಯಲ್ಲವೆ?
ಮನದಲ್ಲಿ ನೆನೆದು ಮಾಡುವುದೆಲ್ಲವುದು ಕಾಯದ ಕರ್ಮವಲ್ಲವೆ?
ಭಾವ ಶುದ್ಧವನರಿವ ಪರಿ ಇನ್ನಾವುದು ಹೇಳಾ?"

ಇದಕ್ಕೆ ಅಲ್ಲಮನ ಉತ್ತರ:
“ಚಿನ್ನವ ನೊರೆಯಬಹುದಲ್ಲದೆ ಬಣ್ಣವನೊರೆಯಬಹುದೆ?
ಹೂವ ಮುಡಿಯಬಹುದಲ್ಲದೆ ಗಂಧವ ಮುಡಿಯಬಹುದೆ?
ಕರ್ಮವ ಮಾಡಬಹುದಲ್ಲದೆ ವಸ್ತುವನರಿಯಬಹುದೆ?
ಗುಹೇಶ್ವರನೆನಬಹುದಲ್ಲದೆ ಲಿಂಗವು ತಾನಾಗಬಾರದು– ಸಿದ್ಧರಾಮಯ್ಯ!”

ಸಿದ್ಧರಾಮನಿಗಿದು ಸೋಜಿಗವೆನಿಸಿತು, ಬಣ್ಣವನೊರೆಯದಿರು, ಚಿನ್ನವನೊರೆ; ಗಂಧವ ಮುಡಿಯಲಾಗದು, ಹೂವ ಮುಡಿ ಇದು ಸಾಕಾರ ನಿಷ್ಠೆಗೇ ಕರೆ ಕೊಟ್ಟಂತಿದೆಯಲ್ಲ ಕೇಳಿಯೇ ಬಿಟ್ಟ;

“ಕಾಯವೇ ಪೀಠಿಕೆ, ಪ್ರಾಣವೇ ಲಿಂಗವಾಗಿರಲೂ ಬೇರೆ ಕುರುಹೇಕಯ್ಯ?
ಕುರುಹುವಿಡಿದು ಕೂಡುವ ನಿರವಯಲುಂಟೆ ಜಗದೊಳಗೆ?
ನಷ್ಟವ ಕೈಯಲ್ಲಿ ಹಿಡಿದು ದೃಷ್ಟವ ಕಂಡಿಹೆನೆಂದರೆ
ಕಪಿಲಸಿದ್ಧ ಮಲ್ಲಿನಾಥಯ್ಯನು ಸಾಧ್ಯವಹ ಪರಿಯ ಹೇಳಾ!”

ಅಲ್ಲಮನಿಗೆ ಸಿದ್ಧರಾಮನ ಸಂಶಯ ಅರ್ಥವಾಯಿತು ಸ್ಥಾವರಲಿಂಗ, ಇಷ್ಟಲಿಂಗ ಒಂದೇ ಎಂಬ ಭ್ರಮೆ ಆ ಸಂಶಯಕ್ಕೆ ಕಾರಣವೆಂಬುದು ವೇದ್ಯವಾಯಿತು, ಉಸುರಿದನಾಗ:

“ಇಷ್ಟಲಿಂಗದ ಪ್ರಾಣ ಲಿಂಗದ ಭೇದವನಾರು ಬಲ್ಲರು ಹೇಳಾ?
ಅಂತರಂಗವೆಂಬ ಶಬ್ದಕ್ಕೆ ಬಹಿರಂಗ ಮುಂದುಗೊಂಡಿಪ್ಪುದು
ಮನವನೆಡೆಗೊಂಡ ಲಿಂಗದರಿವು ವಿಚಾರವ್ಯಾಕುಳಕ್ಕೊಳಗಾಗ
ಬಾರದೆಂದು”
“ಮನಭಾವ ಜ್ಞಾನ ನೋಟವ ತಂದು ಕರಸ್ಥಲದಲ್ಲಿ ನಿಕ್ಷೇಪಿಸಿ
ಅಂತರಂಗ ಬಹಿರಂಗವೆಂಬುದನರಿಯದೆ ಅನಿಮಿಷನಾಗಿಪ್ಪನಾ ಶರಣನು
ಪ್ರಾಣಲಿಂಗದ ಪ್ರಸನ್ನ ಮುಖವ ನೋಡಿ ಪರಿಣಾಮಿಸಲೋಸುಗ
ಕರತೇಜವೆಂಬ ದರ್ಪಣವ ಹಿಡಿದು ಇರ್ಪನು ನೋಡಯ್ಯ!
ಗುಹೇಶ್ವರಲಿಂಗದಲ್ಲಿ ನಿಜವನೆಯ್ದಿ ಹೆನೆಂದರೆ–
ಕುರುಹುವಿಡಿದು ಕುರುಹುಗೆಡಬೇಕು ಸಿದ್ಧರಾಮಯ್ಯ!”

ಸಿದ್ಧರಾಮನ ಸಂಶಯ ಮೇಘ ಕರಗಿಹೋಯಿತು; ಕುರುಹುವಿಡಿದು ಕುರುಹುಗೆಡುವ ಬಗೆಯ ಬಗ್ಗೆ ಇನ್ನೂ ತಿಳಿಯಲು ತವಕಿಸಿತು ಅವನ ಮನ,

"ಅಯ್ಯಾ, ನಿಮ್ಮಾ ಕರಸ್ಥಲದ ಘನವನುಪಮಿಸಬಲ್ಲವರಿಲ್ಲವಯ್ಯಾ!
ನಿಮ್ಮ ಮಹಿಮೆಯನರಿವರೆ ನಾನೇತರೊಳಗಯ್ಯ!
ಆ ಇಷ್ಟಲಿಂಗದೊಳಗೆ ಮುಟ್ಟದ ಶರಣನೊಳಗೆ ಹುಟ್ಟಿದ
ಕರಸ್ಥಲವೆಷ್ಟೆಂಬುದ ತಿಳಿಸಿ ಎನ್ನನುಳುಹಿಕೊಳ್ಳಾ, ಕಪಿಲಸಿದ್ಧ
ಮಲ್ಲಿಕಾರ್ಜುನ"

ಎಂದು ಕೋರಿದ. ಅದಕ್ಕೆ ಪ್ರಭುದೇವರು, ಷಡುಸ್ಥಲದಂತುವ ಸಂಧಿಸಿ ಒಂದು ಮಾಡಿಕೊಂಡಿಪ್ಪ ಕರಸ್ಥಲದನುವನು ಗುಹೇಶ್ವರನ ಶರಣ ಸಂಗನಬಸವಣ್ಣ ಬಲ್ಲ, ಬೆಸಗೊಂಬ ಬಾರಾ ಎಂದು ಕರೆದ, ಸಿದ್ಧರಾಮನಿಗೂ ಬಸವಣ್ಣನನ್ನು ಯಾವಾಗ ಕಂಡೇನೆಂಬ ಹಂಬಲವಿದ್ದಿತು, ಇಬ್ಬರೂ ಕಲ್ಯಾಣವನ್ನು ಸೇರಿದರು. ಅಲ್ಲಿ ಇಷ್ಟಲಿಂಗದ ಬಗ್ಗೆ ಇನ್ನೂ ಆಳವಾದ ಚರ್ಚೆ ನಡೆಯಿತು. ವಿಷಯ ನಿಷ್ಕರ್ಷೆ ಸರಿಯಾಗಿ ಆಗಲೆಂದು ಅಲ್ಲಮಪ್ರಭುಗಳೇ ಆರಂಭಿಸಿದರು ಆ ಚರ್ಚೆಯನ್ನು ಸಿದ್ಧರಾಮ ಲಿಂಗಧಾರಿಯಾಗಬಯಸಿದಾಗ;

"ನಿಮ್ಮನರಿದ ಶರಣಂಗೆ ಶಿವಪೂಜೆಯ ಮಾಡುವ ದಂದುಗವದೇಕೊ?
ಒಲುಮೆಯ ಕೂಟಕ್ಕೆ ಹಾಸಿನ ಹಂಗೇಕೊ?
ಮಿಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೊ?
ಗುಹೇಶ್ವರಲಿಂಗವು ಪ್ರಾಣವಾಗಿಪ್ಪ ಸಿದ್ಧರಾಮಯ್ಯಂಗೆ
ಕುರುಹು ಮುನ್ನೇಕೊ, ಚೆನ್ನಬಸವಣ್ಣಾ?"
ಇದಲ್ಲದೆ, "ಆಕಾಶವನಡರುವಂಗೆ ಅಟ್ಟ ಗೋಲ ಹಂಗೇಕೋ?
ಸಮುದ್ರವ ದಾಟುವಂಗೆ ಹರಿಗೋಲ ಹಂಗೇಕೋ?
ಸೀಮೆಯ ಮೀರಿದ ನಿಸ್ಸೀಮಂಗೆ ಸೀಮೆಯ ಹಂಗೇಕೊ?
ಗುಹೇಶ್ವರಲಿಂಗದಲ್ಲಿ ನಿಸ್ಸೀಮ ಸಿದ್ಧರಾಮಂಗೆ
ಲಿಂಗವೆಂದರೇನು ಹೇಳಾ, ಚೆನ್ನಬಸವಣ್ಣಾ?"

ಸಿದ್ಧರಾಮನಿಗೆ ಲಿಂಗಧಾರಣ ಮಾಡಬೇಕಾಗಿದ್ದ ಚೆನ್ನಬಸವಣ್ಣನಿಗೇ ಈ ಪ್ರಶ್ನೆಗಳನ್ನು ಹಾಕಿದರು ಪ್ರಭುದೇವರು. ಗುರುವಾಗಲಿದ್ದ ಚೆನ್ನ ಬಸವಣ್ಣನ ಯೋಗ್ಯತೆ ಶಿಷ್ಯನಾಗಲಿದ್ದ ಸಿದ್ಧರಾಮನಿಗೆ ಗೊತ್ತಾಗಲೆಂದು ಇರಬೇಕು ಈ ಪರೀಕ್ಷೆ. ಚೆನ್ನಬಸವಣ್ಣನೇನು ಸಾಮಾನ್ಯನೆ? ಪಾದರಸದಂಥ ಪ್ರತಿಭೆಯ ಪರಮಜ್ಞಾನಿಯವನು ಸರಿಯಾದ ಉತ್ತರವಿತ್ತ;

"ಆಕಾಶದಲ್ಲಾಡುವ ಪಟಕ್ಕಾದರೂ ಮೂಲಸೂತ್ರವಿರಬೇಕು;
ಕಲಿಯಾದಡು ಕೈದುವಿಲ್ಲದೆಯಾಗದು! ಭೂಮಿ ಇಲ್ಲದೆ ಬಂಡಿ ನಡೆವುದೆ?
ಅಂಗಕ್ಕೆ ಲಿಂಗಸಂಗವಿಲ್ಲದೆ ನಿಸ್ಸಂಗವಾಗಬಾರದು.

ಕೂಡಲ ಚೆನ್ನಸಂಗಯ್ಯನಲ್ಲಿ ಸಂಗವಿಲ್ಲದೆ ನಿಸ್ಸಂಗಿಯೆಂದು ನುಡಿಯ ಬಹುದೆ, ಪ್ರಭುವೆ?"

ಅಷ್ಟಕ್ಕೂ ಬಿಡಲಿಲ್ಲ ಪ್ರಭುದೇವರು, ನಿರ್ದೇಹಿಯಾದ ಮೇಲೆ ದೇಹಕ್ಕಾವ ಬೆಲೆಯೆಂದು ಕೇಳಿದರು. ಅದಕ್ಕೂ ಮಿಂಚಿನಂತೆ ಮೂಡಿಬಂದಿತು ಚೆನ್ನಬಸವಣ್ಣನ ಉತ್ತರ:

"ತಿಳಿದುಪ್ಪ ಗಟ್ಟಿದುಪ್ಪಂಕೆ ಭೇದ ಉಂಟೆ?
ದೀಪಕ್ಕೆ ದೀಪ್ತಿಗೆ ಭಿನ್ನ ಉಂಟೆ?
ಆತ್ಮಕ್ಕೆಯೂ ದೇಹಕ್ಕೆಯೂ ಸಂದುಂಟೆ?
ಕ್ಷೀರಕ್ಕೆಯೂ ಸ್ವಾದುವಿಂಗೆಯೂ ಭಿನ್ನ ಉಂಟೆ?
ಇದು ಕಾರಣ ಸಾಕಾರವೆ ನಿರಾಕಾರವೆಂದರಿದು
ಅಂಗಲಿಂಗ ಸಂಬಂಧವಿಲ್ಲದವರ ಸಂಗ ಭಂಗವೆಂದು
ಕೂಡಲ ಚೆನ್ನಸಂಗನ ಶರಣರು ಮೆಚ್ಚರಯ್ಯ, ಪ್ರಭುವೆ!"

ಪ್ರಭುದೇವರಿದನ್ನು ಒಪ್ಪಿದರು, ನುಡಿದರು:

"ಎಳ್ಳಿಂಗೆ ಪರಿಮಳವ ಕಟ್ಟಿದಲ್ಲದೆ ಎಣ್ಣೆಗೆ ಪರಿಮಳ ವೇಧಿಸದು; ದೇಹದಲ್ಲಿ ಇಷ್ಟ ಲಿಂಗ ಸ್ಥಾಪಿಸಿದಲ್ಲದೆ ಪ್ರಾಣಲಿಂಗ ಸಮಬಂಧವಾಗದು, ಇದು ಕಾರಣ ಗುಹೇಶ್ವರಲಿಂಗದಲ್ಲಿ ಇಷ್ಟ ಲಿಂಗ ಸಂಬಂಧಿಯಾದಲ್ಲದೆ ಪ್ರಾಣಲಿಂಗ ಸಂಬಂಧಿಯಾಗಬಾರದು ಕಾಣಾ, ಸಿದ್ಧರಾಮಯ್ಯ."

ಮುಕ್ತಾಯಿಯ ಪ್ರಸಂಗದಲ್ಲಿ ಗುರುತತ್ತ್ವ ನಿರ್ಣಯವಾಯಿತು ಸಿದ್ಧರಾಮನ ಪ್ರಸಂಗದಲ್ಲಿ ಲಿಂಗತತ್ತ್ವ ನಿರ್ಣಯವಾಯಿತು. ಇನ್ನುಳಿಯಿತು ಜಂಗಮತತ್ತ್ವ. ಪ್ರಭುದೇವರ ಪೂರ್ಣ ಜೀವನವೆಲ್ಲ ಈ ಜಂಗಮತತ್ತ್ವಕ್ಕೆ ಬರೆದ ಭಾಷ್ಯದಂತಿದೆ.

ಬಸವಣ್ಣನವರ ಮಹಾಮನೆಯ ಮುಂದೆ ನಿಂತಾಗಲೇ ಪ್ರಾರಂಭವಾಯಿತು ಜಂಗಮತತ್ತ್ವದ ಬಗ್ಗೆ ಜಿಜ್ಞಾಸೆ. ಸಿದ್ಧರಾಮನೊಡನೆ ನಿಂತಿದ್ದ ಪ್ರಭುದೇವರನ್ನು ನೋಡಿ ಹಡಪದ ಅಪ್ಪಣ್ಣಗಳು ಓಡಿಹೋಗಿ, "ಮೃಡನ ದೃಶ್ಯಾದೃಶ್ಯ ರೂಪುಗಳೊಡೆಯರಿಬ್ಬರು" ಬಂದಿರುವರೆಂದು ಬಸವಣ್ಣನವರಿಗೆ ಬಿನ್ನವಿಸಿಕೊಂಡರು. ಲಿಂಗಾರ್ಚನೆಯ ಪರಮಸುಖದಲ್ಲಿ ಮೈಮರೆತಿದ್ದ ಬಸವಣ್ಣನವರು ಲಿಂಗಪೂಜೆಯನ್ನು ನಿಲ್ಲಿಸಲಾಗದೆ, ಎನ್ನಕಾಯವೆ ಭಕ್ತ, ಪ್ರಾಣವೆ ಜಂಗಮವಾದ ಬಳಿಕ ಅಲ್ಲಿ ಇಲ್ಲಿ ಭೇದವಿಲ್ಲವೆಂದು ಬಗೆದು ಆ ಜಂಗಮನೊಡಗೊಂಡು ಬನ್ನಿರೆಂದು ಹಡಪದ ಅಪ್ಪಣ್ಣನವರನ್ನು ಹಿಂದಿರುಗಿ ಕಳುಹಿಸಿದರು. ತಮ್ಮ ಸ್ವಯಜಂಗಮಾಚರಣೆಯನ್ನು ಅಪೂರ್ವವಾಗಿ ಆಚರಿಸಿ ಆಗ

ಚರಜಂಗಮಾಚರಣೆಗಾಗಿ ಹೊರಟಿದ್ದ ಅಲ್ಲಮಪ್ರಭುಗಳು ಮುಕ್ತಾಯಿ ಸಿದ್ಧರಾಮರಂತೆ ಬಸವಣ್ಣನವರನ್ನೂ ಒರೆದೊರೆದು ಅವರನ್ನು ಅಪರಂಜಿಯನ್ನಾಗಿ ಮಾಡಲು ಮನದಂದು, ಆನಾಗದ ಮುನ್ನವೆ ತಾನಾದೆನೆಂಬವರಲ್ಲಿಗೆ ಗುಹೇಶ್ವರಲಿಂಗವು ಅಡಿಯಿಡುವನಲ್ಲ ಎಂದು ಹೇಳಿ ಅಪ್ಪಣ್ಣನವರನ್ನು ಹಿಂದಿರುಗಿಸಿ ಬಿಟ್ಟರು, ಒಡಲ ಕಕ್ಕುಲತೆಗೆ ಅಶನವನುಂಡು, ವ್ಯಸನದ ಕಕ್ಕುಲತೆಗೆ ಹಣವ ಬೇಡಿ, ಕೊಟ್ಟೊಡೆ ಕೊಂಡಾಡಿ, ಕೊಡದಿರ್ದಡೆ ದೂರಿಕೊಂಡು ಹೋಹ ಜಂಗಮರೆ ಅವರು? ನಿಮ್ಮಲ್ಲಿ ಭಕ್ತಿಯುಂಟು, ತಮ್ಮಲ್ಲಿ ಭಕ್ತಿಯುಂಟು, ಎಮ್ಮಲ್ಲಿ ಭಕ್ತಿಯುಂಟು ಎಂಬ ಮಾತಿನ ಮಾಲೆಗೆ ಮೆಚ್ಚುವವರೆ ಅವರು? ಬಂದವರಾರೆಂದರಿಯದೆ, ನಿಂದ ನಿಲವನರಿಯದೆ, ಕೆಮ್ಮನೆ ಅಹಂಕಾರವ ಹೊತ್ತುಕೊಂಡು ಇಪ್ಪವರಿಗೆ ನಮ್ಮ ಗುಹೇಶ್ವರಲಿಂಗನೊಲ್ಲ ನೋಡಾ! ಎಂದು ನಿಷ್ಠುರವಾಗಿ ನುಡಿದು ಕಳಿಸಿದರು.

ಅಷ್ಟರಲ್ಲಿ ಚಿತ್ಕಳಾಸ್ವರೂಪ ಚೆನ್ನಬಸವಣ್ಣನವರು ಬಂದು ನಡೆದ ಪ್ರಮಾದವನ್ನರಿತು ಬಸವಣ್ಣನವರ ಬಳಿಗೆ ಧಾವಿಸಿದರು. "ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ ಸಂಗಮನಾಥನೆಂದು ನಂಬಿದ ನಂಬಿಕೆಯೂ ಬಂದ ಶರಣರ ನಿಲುವನ್ನರಿಯದಿದ್ದರೆ ತಪ್ಪಿತ್ತು ನೋಡಾ, ಗುರುವೆ, ಸಂಗನಾಥ ಮನೆಗೆ ಲಿಂಗವಿಡಿದು ಬಂದರೆ ಧಿಮ್ಮನೆ ಇದಿರೆದ್ದು ವಂದಿಸಬೇಕು, ನೋಡಯ್ಯ! ಕೂಡಲ ಚೆನ್ನಸಮಗನ ಶರಣರು ಪ್ರಭುದೇವರು, ಸಿದ್ಧರಾಮಯ್ಯ ದೇವರು ಬಂದು ಬಾಗಿಲ್ಲಲಿರಲು ಕಣ್ಣರಿಯದಿದ್ದರೂ ಕರುಳರಿಯಬೇಡಾ ಸಂಗನ ಬಸವಣ್ಣಾ?" ಎಂದು ಎಚ್ಚರಿಸಿದರು.

'ಅನಂತ ಕೋಟಿ ಸನ್ಮಾನವ ಮಾಡಿದಡೇನು ಒಂದು ನಿಮಿಷದ ಉದಾಸೀನ ಕೆಡಿಸಿತು! ಎಂಬುದರ ಅರಿವಾಯಿತು ಬಸವಣ್ಣನವರಿಗೆ 'ಹಮ್ಮದಂ ಬೋಗಿ, ನಡನಡುಗಿ, ಭಯಾರ್ಣವದೊಳ್ ಮುಳುಂಗಿ,ಕಂಗಳ ಬಾಷ್ಪವಿನೊಳ್ ಮುಂದುಗಾಣದೆ, ಇನ್ನೇವೆನಿನ್ನೇವೆ, ಕೆಮ್ಮನೆ ಕೆಟ್ಟೆನು! ನಿಮ್ಮ ಶರಣರು ಬಂದು ಬಾಗಿಲೊಳಿರಲು ಧಿಮ್ಮನೆ ಇದಿರೆದ್ದು ವಂದಿಸಲರಿಯದೆ ಕೆಟ್ಟ ಕೇಡನೇನೆಂದುಪಮಿಸುವೆನು?' ಎಂದು ಓಡಿಹೋಗಿ ಪ್ರಭುವಿಗೆ ಪೊಡಮಟ್ಟು ನುಡಿದರು; ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲವಯ್ಯ! ಇನ್ನು ತಪ್ಪಿದೆನಾದರೆ ನಿಮ್ಮ ಪಾದವೆ ದಿವ್ಯ! ಕೂಡಲ ಸಂಗಮದೇವಯ್ಯ ನಿಮ್ಮ ಪ್ರಮಥದ ಮುಂದೆ ಕಿನ್ನರಿ ಬೊಮ್ಮಣ್ಣಗಳ ಪಾದವೆ ಸಾಕ್ಷಿ!

ಪ್ರಭುದೇವರು ಪಡಿನುಡಿದರು; 'ಜಂಗಮವೆ ಹೊರಗಿರಲು ಒಳಗೆ ಲಿಂಗಾರ್ಚನೆ ಯಾವುದಯ್ಯಾ? ಪ್ರಾಣವ ಹೊರಗಿರಿಸಿ ಎಡೆಯಾಡುವ ದೇಹವುಂಟೆ? ಶರಣರು ಬಂದು ಬಾಗಿಲಲ್ಲಿ ನಿಂದಿರಲು ತನ್ನ ತಾ ಮರೆವವರ ಕಂಡಡೆ...' ಬಸವಣ್ಣನವರು ಪ್ರಭುವಿನ ಮಾತು ಮುಗಿವ ಮುನ್ನವೆ ಒಪ್ಪಿ ಕೊಂಡುಬಿಟ್ಟರು; 'ಮುನ್ನೂರರವತ್ತು ದಿನ ಸ್ರವವಮಾಡಿ ಕಳನೇರಿ ಕೈಮರೆದಂತಾಯಿತ್ತೆನ್ನ ಭಕ್ತಿ!... ಜಂಗಮಲಿಂಗವಾಗಿ ಬಂದು

ನೀವಿರುತ್ತಿರಲು ಸ್ಥಾವರಕ್ಕೆ ಮೆಚ್ಚಿ ಮರುಳಾದೆನು! ಎನ್ನ ತಪ್ಪನೆಣಿಸಿಹೆನೆಂದರೆ ಕಡೆಯಿಲ್ಲ! ನಾನು ಮರವೆಯ ಮರುಳು, ನೀನು ಅರಿವಿನ ತಿರುಳು; ನಾನು ರಂಜಕ, ನೀ ನಿರಂಜನ; ನಾನು ಪಶು, ನೀನು ಪಶುಪತಿ! ಭ್ರಮಿಸಿದೆನು ನಾನೆನ್ನ ಮದದಲಿ ಕ್ಷಮಿಸುವುದು ನೀ ನಿನ್ನ ಗುಣದಲಿ!'

ಸ್ಥಾವರಕ್ಕಿಂತ ಜಂಗಮ ಮೇಲು ಎಂಬುದು ಬಸವಣ್ಣನವರಿಗೆ ವೇದ್ಯವಾದುದನ್ನು ಕಂಡು ಪ್ರಭುದೇವರಿಗೆ ಸಂತಸವಾಯಿತು. ಆದರೂ ವಿಷಯ ಮಂಥನವನ್ನು ಮುಂದುವರಿಸಿದರವರು; 'ತನುವಿನಲ್ಲಿ ತನು ಸವೆಯದು ಮನದಲ್ಲಿ ಮನ ಸವೆಯದು; ಧನದಲ್ಲಿ ಧನ ಸವೆಯದು ಭಕ್ತಿಯುಕ್ತಿಯ ಮಾತು ನಿನಗೇಕೆ, ಹೇಳಾ ಬಸವಾ! ಮಾಟ ಕೂಟವೆಂಬ ಕೀರ್ತಿಗೆ ಸಿಲುಕಿ ಜಂಗಮವೆ ಲಿಂಗವೆಂಬುದ ಮರೆದೆಯಲ್ಲ ಬಸವಣ್ಣ? ಗುಹೇಶ್ವರನ ಶರಣರಿಗೆ ತ್ರಿಕರಣವನೊಪ್ಪಿಸಿದಲ್ಲದೆ ಭಕ್ತನಾಗಬಾರದು ಕಾಣಾ, ಬಸವಣ್ಣಾ!'

ಪ್ರಭುದೇವರು ಬೀಸಿದ ಜಾಲದಲ್ಲಿ ಸಿಲುಕಿಕೊಂಡರು ಬಸವಣ್ಣನವರು, ಬಿನ್ನವಿಸಿಕೊಂಡರವರು;

"ತನುವ ಬೇಡಿದಡೀವೆ; ಮನವ ಬೇಡಿದಡೀವೆ; ಧನವ ಬೇಡಿದಡೀವೆ ನಿಮ್ಮ ಶರಣರಿಗೆ! ಎನಗೆ ಬೇಕೆಂಬ ಭಾವ ಮನದಲ್ಲಿ ಹೊಳೆದರೆ ಘನಮಹಿಮ, ನಿಮ್ಮ ಪಾದದಾಣೆ! ಮನ ವಚನ ಕಾಯದಲ್ಲಿ ನೀವಲ್ಲದೆ ಮತ್ತೊಂದನರಿದರೆ ಕೂಡಲಸಂಗಮದೇವಾ ಭವ ಘೋರದಲ್ಲಿಕ್ಕಯ್ಯ!"

ಇದಕ್ಕೂ ಬಂದಿತು ಪ್ರಭುದೇವರ ಮರು ಪ್ರಶ್ನೆ; "ಮೇರುಗಿರಿಗಳೆಲ್ಲವು ಪ್ರಮಥದೊಡವೆ; ರಜತ ಗಿರಿಗಳೆಲ್ಲವು ಪುರಾತನರೊಡನವೆ; ಚತುರ್ದಶ ಭುವನವೆಲ್ಲವು ಲಿಂಗದೊಡವೆ; ಪೃಥ್ವಿಯೆಂಬುದು ಕರ್ತಾರನ ಕಮ್ಮಟ, ಅಚ್ಚಿನ ಮೊಳೆ, ಬಾಣಸದ ಮನೆ; ತನುಮನ ಧನಂಗಳೆಲ್ಲವೂ ನಮ್ಮ ಗುಹೇಶ್ವರ ಲಿಂಗದ ಸೊಮ್ಮು! ನೀನೇನ ಕೊಟ್ಟು ಭಕ್ತನಾದೆ ಹೇಳಾ, ಬಸವಣ್ಣಾ?"

ಬಸವಣ್ಣನವರು ನಿರುತ್ತರರಾದರು "ಅನಿತ್ಯವನು ನಿತ್ಯಕ್ಕರ್ಪಿಸಿ ಭಕ್ತಾನಾದನೆಂದರೆ ಅದು ಅಜ್ಞಾನ ನೋಡಾ!" ಈ ಮಾತಿಗೆ ಮರುಮಾತೆಲ್ಲಿ? ಬಸವ ಬಿನ್ನಪ ಸದುವಿನಯದ ಉಸಿರಾಗಿ ಹೊರಬಿದ್ದಿತು; "ಎಳ್ಳಿಲ್ಲದ ಗಾಣವನಾಡಿದ ಎತ್ತಿನಮತಾಯಿತ್ತೆನ್ನ ಭಕ್ತಿ! ಕೂಡಲಸಂಗಮದೇವಾ, ನಾನು ಮಾಡಿದೆನೆಂಬ ಕಿಚ್ಚು ಎನ್ನನೆ ಸುಟ್ಟಿತ್ತು! ಇನ್ನು ಸಾಲದೆ, ಹೇಳಾ?"

ಸಾಲದೆಂದು ಹೇಗೆ ಹೇಳಿಯಾನು ಪ್ರಭುದೇವರು? ಚರಜಂಗಮನ ಕಾರ್ಯ ಸಾಧಕರ ಸೂಕ್ಷ್ಮಾತಿಸೂಕ್ಷ್ಮ ದೋಷಗಳನ್ನು ದೂರೀಕರಿಸುವುದು ಅರಕೆಗಳನ್ನು ತುಂಬುವುದು, ಕೊರತೆಗಳನ್ನು ಸರಿಪಡಿಸುವುದು ಅದಿರನ್ನು ಅಪರಂಜಿಯನ್ನಾಗಿ ಮಾಡುವುದು. ಬಸವಣ್ಣನನ್ನು ಬಿಗಿದಪ್ಪಿದುವು ಅಲ್ಲಮನ ಅಮೃತಕರಗಳು ಗಂಗಾಸಲಿಲದಂತೆ ಹರಿದು ಬಂದಿತು ಈ ವಚನ ಅವನ ಶ್ರೀ ಮುಖದಿಂದ;

"ಸೂಳೆ ಹಲಬರನುರುಳಿದಳೆಂದು ನಿಂದಿಸುವರಿಲ್ಲ, ಕೇಳಾ!
ಪತಿವ್ರತೆ ತನ್ನ ಪುರುಷನಲ್ಲದೆ ಮತ್ತೊಬ್ಬನ ಮುಖವ ನೋಡಿದರೆ
ಅವಳ ಚಾಂಡಾಲಗಿತ್ತಿಯೆಂಬುದು ಲೋಕವೆಲ್ಲವು!
ಕೀರ್ತಿ ವಾರ್ತೆಗೆ ಮಾಡುವ ಭಕ್ತ ತಪ್ಪಿದರೆ ಅದ ಮನಕ್ಕೆ ತರಲಿಲ್ಲ;
ಸಜ್ಜನ ಸದ್ಭಕ್ತನೆಡಹಿದರೆ ಅದ ಸೈರಿಸಬಾರದು, ಕೇಳಾ!
ನಮ್ಮ ಗುಹೇಶ್ವರಲಿಂಗಕ್ಕೆ ಆದಿಯಿಂದತ್ತ ನೀನೇ ಭಕ್ತನಾದ ಕಾರಣ
ಮನನೊಂದಿತ್ತು ಕಾಣಾ, ಸಂಗನ ಬಸವಣ್ಣಾ!"

ಬಸವಣ್ಣ ಮನುಕುಲೋದ್ಧಾರಕ್ಕಾಗಿ ಮೈವೆತ್ತು ಬಂದಿದ್ದ ಮಹಾ ಮಾನವನೆಂಬುದನ್ನು ಪ್ರಭು ಎಂದೋ ಗುರುತಿಸಿದ್ದ, ಆತನ ಆತ್ಮಶಕ್ತಿಯಿಂದಲೇ ಕಲ್ಯಾಣವೆಂಬ ಪ್ರಣತಿಯಲ್ಲಿ ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಬತ್ತಿಗೆ ಬಸವಣ್ಣನೆಂಬ ಜ್ಯೋತಿ ಮುಟ್ಟಿ ತೊಳಗ ಬೆಳಗುತ್ತಲಿದ್ದಿತು ಶಿವನ ಪ್ರಕಾಶ, ಆತನ ಮಹಮಣಿಹಕ್ಕೆ ಸೂಕ್ಷ್ಮ ದೋಷವೊಂದು ವಿಘ್ನವಾಗಿ ಪರಿಣಮಿಸಬಾರದೆಂದು ಅಲ್ಲಮ ಆ ಸಣ್ಣ ದೋಷವನ್ನು ಸರಿಪಡಿಸಿದ, ಬಸವಣ್ಣನ ಬೆಳಕು ಮೊದಲಿಗಿಂತ ದೇದೀಪ್ಯಮಾನವಾಯಿತು. ಕಲ್ಯಾನಕ್ಕೆ ಬಂದ ಕಾಯ ಪೂರೈಸಿತು. ಮುಂದಕ್ಕೆನಡೆದ ಪರಂಜ್ಯೋತಿ ಪ್ರಬುದೇವ ಅಷ್ಟರಲ್ಲಿ ಸುಜ್ಞಾನೋದಯವನ್ನು ಉಂಟುಮಾಡಲೆಂದು ಸಾಧಕರಿಗೆ ಸರಿಯಾದ ದಾರಿ ತೋರಿಸಲೆಂದು ಅರಿದೆವೆಂಬ ಗರುವದಿಂದಿದ್ದವರ ಮರವೆಯನ್ನು ಅಳಿಸಲೆಂದು, ಅರಿವಿನೊಳಗಣ ಮರವೆಯ ಪರೆ ಹರಿಯಲೆಂದು.

ಉದ್ದೇಶ ಇದಾಗಿದ್ದುದರಿಂದಬಿರುಗಾಳಿ ಬೀಸಿ ಮರ ಮುರಿವಂತಹ ಸುಳಿಹು ಸುಳಿಯದೆ ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಸುಳಿದನಾ ಪೂರ್ಣದರ್ಶನಿ, 'ನೆಟ್ಟನೆ ಜಂಗಮವಾಗಿ 'ಸುಳಿದ', ಅಲ್ಪಜ್ಞಾನ ಮಾರ್ಗವ ಹೊಳ್ಳು ಮಾಡಿ ವಿಶುದ್ಧ ಪೂರ್ಣಜ್ಞಾನ ಮಾರ್ಗದಲಿ ಸುಖವ ಬಯಸಲು ಬಲ್ಲ ಭಕ್ತರಿಗೆ ಅರಿವು ತೋರಿಸುತ್ತ ಸುಳಿದ; ಹಾಳೂ ಬಿದ್ದಿಹ ಅಂತರಂಗವ ಅಂತರ್ಮಾರ್ಗದೋಜೆಯಿಂದ ತುಂಬುತ್ತ ಸುಳಿದ ಹೃದಯ ಸ್ಥಳದ ಮತಿ ಮಾನಸ ಸರೋವರ ತಿಳಿದು ಅಲ್ಲಿ ಅಧ್ಯಾತ್ಮದ ಅರವಿಂದವು ಅರಳುವಂತೆ ಮಾಡುತ್ತ ಸುಳಿದ; ಹುಸಿಯ ಮಾಯೆಯ ಹುಸಿಸುತ್ತ ಸುಳಿದ

ತನುಮನೋವಾಯುಗಳ ಸಂಚಲನವನಲನಲಿಸಲೆ ಸುಡುವ ಸುಮತಿಯ ಜೀವ ಪರಮರನು ಅನುಗೊಳಿಸಿ ನಿರ್ವಯಲ ಮಾಡುವ ನೆನಹಿನುಪದೇಶವ ನೀಡುತ್ತ ಸುಳಿದ; ಧರಣಿಯೊಳಗೆ ಆರಾರು ಅದಾವಾಚರಣೆಗಳನ್ನು ಆಚರಿಸುತಿಹರೊ ಆ ಪರಿಯಲಿ ಅವರವರಿಗೆ ಯಥೋಚಿತ ಸುಪ್ರಸನ್ನತೆಯ ಕರುಣಿಸುವೆನೆಂದೆನುತ ಸಚರಾಚರರಿಗುಪಕಾರಾರ್ಥವಾಗಿಯೆ 'ಲೀಲೆಯಲ್ಲಿ ಸುಳಿದ ಆವ ಪರಿಗಳಲಾರ ಬುದ್ಧಿಯ ಭಾವವಿಹುದವರವರಿಗೆ ಆ ಪರಿಭಾವವನು ಶುದ್ಧೈಸಿ ಸಮ್ಯಗ್‌ಜ್ಞಾನ ಜ್ಯೋತಿಯ ತೀವಿ ಸುಖಿಗಳ ಮಾಡುತ್ತ ಸುಳಿದ;' ಬೆಸಲಾದ ಮನಮಾಣಿಕವ ತಮ್ಮ ಶರೀರ ಶರಧಿಯಲಿ ಸಾಧಿಸಿಯೆ, ಶಿವ ಸಾಣೆಯಲಿ ಸಲೆ ತೇದು, ಮಿಗೆ ಸುಜ್ಞಾನ ಕಾಂತಿಯನೆಯ್ದಿ ಸುತ್ತ ಸುಳಿದ; ಮತ್ತು 'ತಾನೆ ತನ್ನಯ ಕರುಣದಿಂದಲಿ ಮಾನವರ ಮಾನದಂಧ ಕಾರಕೆ ಭಾನುವಾಗುತ್ತ ಸುಳಿದ!'

ಸುಳಿಯುತ್ತ ಸುಳಿಯುತ್ತ ಶ್ರೀಶೈಲವನ್ನು ತಲುಪಿದ. ಸಿದ್ಧರ ಕೇಂದ್ರವಾಗ ಶ್ರೀಶೈಲ. ಆ ಸಿದ್ಧರ ದೃಷ್ಟಿ ಸಿದ್ಧಿಗಳ ಮೇಲೆ! ಅಣಿಮಾದಿ ಅಷ್ಟ ಸಿದ್ಧಿಗಳೇ ಅವರ ಗುರಿಗಮ್ಯಗಳಾಗಿದ್ದುವು, ಅವರಿಗೆಲ್ಲ ಅಧ್ಯಕ್ಷ ಗೋರಕ್ಷ. ಪ್ರಭುದೇವರನ್ನು ಕಂಡು ಪ್ರಶ್ನಿಸಿದನವ; ಆವ ಕಡೆಯಿಂಬಿಜಯ ಮಾಡಿದಿರಿ? ಆವ ಕಾರಣ ಬಂದ ಬರವು? ಪ್ರಭುವಿನ ಉತ್ತರ ಪ್ರಬುವಿನದೇ! 'ಒಡಲಿನಾಸೆಗೆ ಕುದಿದು ಕೋಟಲೆಬಿಡುವವರ ಕಳವಳವ ಕಳಚಲು ನಡೆದು ಬಂದವರಾವೆಲೈ!'

ತಾನು ಹಠಯೋಗ ಸಾಧನೆಯ ಬಲದಿಂದ ವಜ್ರದೇಹಿಯಾಗಿರುವುದನ್ನು ಕುರಿತು ಆಡಿದ ಕಟಕಿ ಆ ಉತ್ತರವೆಂದು ತಿಳಿದ ಗೋರಕ್ಷ ಸಾಮರ್ಥ್ಯ ಪರೀಕ್ಷೆಯಾಗಿ ಹೋಗಲೆಂದು ನಿರ್ಧರಿಸಿದ, ಕೈದುವೊಂದನ್ನು ಪ್ರಭುವಿನ ಕೈಗಿತ್ತು 'ಏಳೇಳು, ಹಿಡಿಹಿಡಿ, ಹೊಯ್ದು ನೋಡಾ ನೀನು ನಿನ್ನಾಪನಿತು ಸತ್ವದಲಿ!' ಎಂದು ಆಹ್ವಾನಿಸಿದ. ಪ್ರಭು ಆ ಖಡ್ಗದಿಂದ ಗೋರಕ್ಷನ ವಜ್ರಶರೀರಕ್ಕೆ ಅಪ್ಪಳಿದ. ಖಡ್ಗ ಖಡಿಲೆಂದಿತು. ಆದರೆ ಗೋರಕ್ಷನ ಮೈಕೂದಲೂ ಕೊಂಕಾಗಲಿಲ್ಲ. ಗೆಲುವಿನ ನಗೆ ನಕ್ಕ ಗೋರಕ್ಷ, ಮನದಲ್ಲಿಯೇ ನಕ್ಕ ಪ್ರಭು. ಹಿಡಿದುಕೋ ಖಂಡೆಯವನಾದೊಡೆ ಹೊಡೆದು ನೋಡೆಮ್ಮವನು ಎಂದು ಕರೆಯಿತ್ತ. ತನ್ನ ಸಾಮರ್ಥ್ಯವನ್ನೆಲ್ಲ ಬಳಸಿ ಖಡ್ಗದಿಂದ ಅಲ್ಲಮನ ದೇಹಕ್ಕೆ ಹೊಯ್ದ ಗೋರಕ್ಷ ಖಡ್ಗ ಖಣಿಲೆನಲಿಲ್ಲ; ಮೈಗಾಯಗೊಳ್ಳಲಿಲ್ಲ. ಬಯಲ ಭೇದಿಸಿದಂತಾಯಿತು ಗೋರಕ್ಷಕನಿಗೆ ಆಶ್ಚರ್ಯವೇ ಆಶ್ಚರ್ಯ. ತನ್ನ ವಜ್ರದೇಹ ಆ ವ್ಯೋಮ ಕಾಯದ ಮುಂದೆ ಕ್ಷುಲ್ಲಕನಾಗಿ ಕಂಡಿತವನಿಗೆ. ಅದರ ರಹಸ್ಯವನ್ನು ತಿಳಿಸಲು ಕೇಳಿಕೊಂಡನವನು ಎಲು ತೊಗಲು ಮಲ ಮೂತ್ರ ನೆತ್ತರ ಕೊಳಚೆಯಾಗಿಹ ಹೇಸಿಕೆಯ ಒಡಲನ್ನು ವ್ರಜದಂತೆ ಗಟ್ಟಿಗೊಳಿಸಿಕೊಂಡಲ್ಲಿ ಆತ್ಮಲಾಭವಿಲ್ಲ ಕಾಯ ಬಲಿದರೆ ಮಾಯೆ ಬಲಿವುದು; ಮಾಯೆ ಬಲಿದರೆ ಛಾಯೆ ಬಲಿವುದು; ಕಾಯಮಾಯಾಛಾಯೆ ಬಲಿದರೆ ಸಿದ್ಧನವನಲ್ಲ, ಕಾಯಮಾಯಾಛಾಯದಾಗಿನ ದಾಯವನು ಕಳೆದುಳಿದನಾದಡೆ ರಾಯನಾತನು ಸಿದ್ಧರಲಿ, ಗೋರಕ್ಷ ಕೇಳೆಂದ.

ಗೋರಕ್ಷನಿಗೆ ಜ್ಞಾನೋದಯವಾಯಿತು, ನೋಡಿದರೆ ಮದಮತ್ಸರಗಳೆದ್ದೋಡಿದುವು! ಕರುಣದಲಿ ಗುರು ಮಾತಾಡಿದೊಡೆ ಮಗ್ಗಿದುದು ಮನಸಿನ ಮರವೆ ನಿಮಿಷದಲಿ! ನೀಡಿ ಕೈ ಮುಟ್ಟಿದೊಡೆ ಕಾಯದ ಖೋಡಿ ಹೋಯಿತು! ವಿಮಲ ತನುಮನ ಮೂಡಿತಾ ಪ್ರಭುಲಿಂಗಲೀಲೆಯಲಿ! ಗೋರಕ್ಷ ಪ್ರಭುವಿನ ಶಿಷ್ಯನಾದ, ಶರಣನಾದ, ಪರಮ ಪದವಿಯನ್ನು ಪಡೆದ.*

ಅಲ್ಲಿಂದ ಮುಂದೆ ನಿಬಿಡಾರಣ್ಯದಲ್ಲಿ ಲೋಕಾನುಗ್ರಹ ಕಾರ್ಯದ ಮುಂದುವರಿಕೆ, ಪ್ರಭುವಿನ ಕಣ್ಣಿಗೆ ಬಿದ್ದನೊಬ್ಬ ಬೇಡ, ಕೊಲುವುದನೆ ಸಲೆಕೊಂದು ಹಸಿವಿನ ಹೊಲೆಯನಳಿಯದೆ... ನಾನಾ ಪ್ರಕಾರದ ಜೀವಜಾಲವನ್ನು ಅಳಿದು ಹೊಟ್ಟೆಯ ಹೊರೆದು ದುರ್ಗತಿಗಿಳಿವ ಅವನನ್ನು ಕಂಡು ಪ್ರಭು ತನ್ನ ಕರುಣದ ಸಿದ್ಧರಸದಿಂದ ಆ ಕಾರ್ಬೊನನ್ನನ್ನು ಹೊನ್ನಾಗಿಸಿದನು. ವನ್ಯಮೃಗಗಳ ಬೇಟೆಯನ್ನು ಬಿಡಿಸಿ ಅಂತರಂಗದ ಅಹಂಕಾರಾದಿಗಳ ಮೃಗಗಳ ಬೇಟೆಯಾಡಲು ಕಲಿಸಿದನು ಆ ಬೇಡನಿಗೆ. ಕಾಡಿನಲ್ಲಿರುವ ಖಗ ಮೃಗಗಳನ್ನುಳಿದು ಮೈಗಾಡಿನಲ್ಲಿರುವ ಖಗ ಮೃಗಗಳನ್ನು ಸುಜ್ಞಾನಾಗ್ನಿಯಲ್ಲಿ ಕುದಿಸಿ ಸೇವಿಸಲು ಕಲಿಸಿದನು ಆ ಬೇಡನಿಗೆ.

ಮುಂದೆ ಹೋಗುತ್ತಿರಲು ಮರವೆಯ ಹಲವು ಪರಿಗಳಿಗೆ ಗುರಿಯಾಗಿ ಹೋಗುತ್ತಲಿದ್ದ ಜನರು ಕಂಡು, ಅವರಲಿ ಕಾಮಿನಿಯರಿಗೆ ಸೋತು ಕಾಮನ ಸೀಮೆಯಲಿ ಸಲೆ ಸತ್ತು ಹುಟ್ಟುವ ಕಾಮಿಗಳಿಗೆ ಕುಂಡಲೀ ಶಕ್ತಿಯ ಮಹಾರತಿಯನ್ನು ಲಿಸಿದನು; ರಸದ ಸಿದ್ಧಿಯ ವ್ಯವಸನದಲಿದ್ದವರಿತೆ ಅಂತ ರಂಗದ ಬಿಂದುವೆಂಬ ರಸವ ಕಟ್ಟಿ ಭಯಂಗಳ ವರ್ಜಿಸುವುದನ್ನು ಕಲಿಸಿದನು; "ನಾರು ಸೀರೆಗೆ ಮರಗಳನು, ಆಹಾರದಾಶೆಗೆ ಕಂದ ಮೂಲವ, ನೀರ ತೃಷೆಗನವರತ ನಾನಾ ನದಿ ಸರೋವರವ ಹಾರಕೊಂಡಿಹ ಘೋರತರ ಸಂಸಾರದಲ್ಲಿದ್ದ

---

*** ಅಲ್ಲಮನು ಗೋರಖನಾಥನಿಗೆ ಉಪದೇಶ ಮಾಡಿದ ಬಗ್ಗೆ ಕೆಲವು ಅನುಮಾನಗಳಿವೆ. ಅನಿಮಿಷಯ್ಯನೇ ಮತ್ಸ್ಯೇಂದ್ರ; ಇವನು ಮೊದಲು ಸಿದ್ಧ ಸಂಪ್ರದಾಯಕ್ಕೆ ಸೇರಿದ್ದು ಗೋರಖನಾಥನ ಗುರುವಾಗಿದ್ದನೆಂದು ಕೆಲವರು ಹೇಳುತ್ತಾರೆ. ಗೋರಖನಾಥನು ಉಡುಪಿಯ ಬಳಿ ಜನ್ಮ ತಾಳಿದ್ದನೆಂದು ಹೇಳುವುದೂ ಉಂಟು; ಅವನು ಪೇಷಾವರಿನಲ್ಲಿ ಹುಟ್ಟಿದನೆಂದು ಹೇಳುವುದೂ ಉಂಟು; ಅವನು ರೇವಣಸಿದ್ಧನಿಂದ ಮೊದಲೇ ದೀಕ್ಷೆಯನ್ನು ಪಡೆದಿದ್ದನೆಂದೂ ಇವನು ಕೊಲ್ಲಾಪುರದವನೆಂದೂ ಶ್ರೀ ಪರ್ವತವಾಗಲಿ, ಉಡುಪಿಯಾಗಲಿ ಅವನ ಜನ್ಮಸ್ಥಳವಲ್ಲವೆಂದೂ ಹೇಳುವುದುಂಟು. ಅಲ್ಲಮಪ್ರಭುಗಳು ಶ್ರೀ ಪರ್ವತದ ಗೋರಕ್ಷನಿಗೆ ಹೇಳಲಾಗಿದೆ. ಈ ಬಗ್ಗೆ ಕೊನೆಯ ನಿರ್ಣಯ ಇನ್ನೂ ಆಗಿಲ್ಲ. ಗೋರಕ್ಷನಾಥನು ಮೊದಲು ಸಿದ್ಧ ಸಂಪ್ರದಾಯವನಿದ್ದು ಆಮೇಲೆ ಶೈವ ಧರ್ಮದ ಪ್ರಭಾವದಿಂದ ಪರಿವರ್ತಿತನದನೆಂಬ ವಿಷಯವನ್ನು ಉತ್ತರದ ವಿದ್ವಾಂಸರೂ ಒಪ್ಪುತ್ತಾರೆ. (ನೋಡಿ ಕಬೀರವಾಣಿ; ಪುಟ ೯೮–ಸಂ. ಡಾ. ಪಾರಸನಾಥ ತಿವಾರಿ) ಆ ಶೈವ ಧರ್ಮದ ಪ್ರಭಾವ ಯಾರಿಂದ ಆಯಿತೆಂಬುದು ಸಂಶೋಧಿಸಬೇಕಾದ ಸಂಗತಿ.**

ಮುನಿಗಳಿಗೆ" ಸಂದ ಮಾಯಾಪಾಶದಾಶಾಬಂಧನಂಗಳ ಬಿಡಿಸಿ ಪರಮಾನಂದ ಸುಖಿಗಳ ಮಾಡುವೆನು ನಾನೆನುತ" ಗುರು ಬಂದ.

"ಅದರೊಳಗೆ ಕೆಲಕೆಲರು ಯಜ್ಞದ ವಿಧಿಯ ವಿರಚಿಸುತಿರಲು ಕಾಣುತ, ಅದರಲೇನುಂಟಕಟ ಬಂಧನ ಮೋಕ್ಷವಾದುಪುದೆ? ಇದಿರಲಿದಿರಿಟ್ಟಾವ ಕರ್ಮವನೊದಗಿ ಮಾಡಲು ದುಃಖವಲ್ಲದೆ ಸದಮಲ ಸ್ವಾತಂತ್ರ್ಯ ಸುಖವಿಲ್ಲೆಂದು ಗುರುರಾಯ ಅವರಿಗೆ ಪಶು ಮಾರ್ಗಕ್ಕೆ ಪ್ರತಿಯಾಗಿ ಆತ್ಮಯಾಗದ ವಿಧಿ ವಿಧಾನವನ್ನು ಬೋಧಿಸಿದ.

"ಲೇಪಿಸಿದಹಂಕಾರವೇ ಪಶು, ಯೂಪ ಕಂಭವೆ ಮನಸು, ಪವನ ಸ್ಥಾಪಿತವೆ ಬಂಧಿಸುವ ಪಾಶ, ವಿವೇಕವೇ ಶಸ್ತ್ರ, ವ್ಯಾಪಿಸಿದ ಸುಜ್ಞಾನವಹ್ನಿ, ಸದಾ ಪುನೀತಮಯಾತ್ಮನಧ್ವರಿ–ಯೀಪರಿಯನರುಹಿಸಿದನಾ ಪ್ರಭು ಪರಮ ಮುನಿಗಳಿಗೆ."

ಹೀಗೆ, 'ಯಾಗಕೆ ಆತ್ಮ ಯಾಗವ, ಅನುರತಿಗೆ ನಿಜರತಿಯ, ದೇವಾರ್ಚನೆಗೆ ಹೃದಯವನು, ಉಪನಯನಕೆ ನಿಜ ನಿರೀಕ್ಷಣೆಯ ಎನಿತು ಬಾಹ್ಯದ ಕರ್ಮಭಕ್ತಿಗಳು ಅನಿತನು ಅಂತರ್ಮಾರ್ಗದಲಿ ಸೂಚನೆಯ ಮಾಡಿದ ಅಲ್ಲಮಪ್ರಭು ಪರಮ ಮುನಿಗಳಿಗೆ.'

ಆಡಿ ಕೆಲರಿಗೆ, ಕರುಣದಲಿ ಮಾತಾಡಿ ಕೆಲರಿಗೆ, ನುಡಿಸಿ ಕೆಲರಿಗೆ, ನೋಡಿ ಕೆಲರಿಗೆ ಜರೆದು ಕೆಲರಿಗೆ, ಜಡಿದು ಕೆಲಬರಿಗೆ, ಹಾಡಿ ಕೆಲರಿಗೆ, ಹರಸಿ ಕೆಲರಿಗೆ ನಿತ್ಯ ಸುಖವನು ಕೂಡಲೆಂದೇ ಸುಳಿಯತೊಡಗಿದ್ದ ಅಲ್ಲಮಪ್ರಭು, ಇನ್ನೂ ಯಾವ ಯಾವ ಸ್ಥಳಕ್ಕೆ ಹೋದ, ಯಾರು ಯಾರನ್ನು ಸಂಧಿಸಿದ, ಯಾರನ್ನು ಉದ್ಧರಿಸಿದ ಎಂಬ ವಿವರಗಳು ನಮಗೆ ಸಿಕ್ಕಲಾರವೆಂದೇ ತೋರುತ್ತಿದೆ. ಯಾಕೆಂದರೆ ಅವುಗಳನ್ನು ಬರೆದಿಡುವ ಬಾಸ್ವೆಲ್ ಅವರೊಡನೆ ಇದ್ದಿಲ್ಲ. ಏಕಾಂಗಿಯಾಗಿಯೇ ಅವರು ಭಾರತದ ಉದ್ದಗಲಗಳಲ್ಲಿ ಸಂಚರಿಸಿದರೆಂದು ತೋರುತ್ತಿದೆ. ಪ್ರೊ. ಎಲ್.ಬಸವರಾಜು ಅವರು ಅವರ ಯಾತ್ರಾ ಪಥವನ್ನು ಬಳ್ಳಿಗಾವಿ ಬನವಸೆ ರಾಮೇಶ್ವರ, ಕೊಡಗುರಾಜ್ಯ ಮತ್ತೆ ಬಳ್ಳೀಗಾವಿ, ಅಡಕ, ಸೊನ್ನಲಾಪುರ, ಕಲ್ಯಾಣ, ಕಾಶಿ, ಕೇದಾರ, ಗಯಾ, ನೇಪಾಳ, ಹಿಮಾಲಯ, ಹಿಮಾಲಯದ ಆ ಕಡೆ ಶ್ರೀಶೈಲ ಮತ್ತೆ ಕಲ್ಯಾಣ, ಮತ್ತೆ ಶ್ರೀಶೈಲ ಕದಳಿ ಎಂಬುದಾಗಿ ಗುರುತಿಸಿದ್ದಾರೆ. ಹನ್ನೆರಡು ವರ್ಷ ನಡೆದಿದೆ ಈ ಭಾರತ ಯಾತ್ರೆ, ಅನುಭಾವದ ಚೈತ್ರಯಾತ್ರೆ. ಕೊನೆಗೆ ಅವರು ತಲುಪಿದ ತೀರ್ಮಾನ ಇದು:

"ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷ ಗಂಗೆಯ ಮಿಂದಡಿಲ್ಲ
ತುಟ್ಟ ತುದಿಯಮೇರುಗಿರಿಯ ಮುಟ್ಟಿ ಕೂಗಿದಡಿಲ್ಲ
ನಿತ್ಯ ನೇಮದಿಂದ ತನುವ ಮುಟ್ಟಿ ಕೊಂಡೊಡಿಲ್ಲ

ನಿಚ್ಚಕ್ಕೆ ನಿಚ್ಚ ನೆನೆವ ಮನವ, ಅಂದಂದಿಂಗೆ ಅತ್ತಲಿತ್ತ ಹರಿವ ಮನವ
ಚಿತ್ತದಲ್ಲಿ ನಿಲ್ಲಿಸ ಬಲ್ಲಡೆ ಬಚ್ಚ ಬರಿಯ ಬೆಳಗು ಗುಹೇಶ್ವರಲಿಂಗವು!"

ಈ ಸುದೀರ್ಘ ಯಾತ್ರೆಯಲ್ಲಿ ಜಲವಿಲ್ಲದ ಕೆಜೆ, ಫಲವಿಲ್ಲದ ಬನ, ಭಕ್ತನಿಲ್ಲದ ಗ್ರಾಮಗಳನ್ನೂ ಅವರು ನೋಡಿರಬೇಕು; ಅಲ್ಲಿ ಶಿವನಿಲ್ಲವೆಂಬುದನ್ನೂ ಕಂಡುಕೊಂಡಿರಬೇಕು. ಪ್ರೇತಜನಾರಣ್ಯವಾಗಿ ತೋರಿದ ಪತ್ತನಗಳೆಷ್ಟೋ ಅಂತೂ ಕಲ್ಯಾಣಕ್ಕೆ ಹಿಂದಿರುಗಿದರು. ಕಲ್ಯಾಣವೂ ಅವರಿಗಾಗಿ ಕಾದಿತ್ತು, ಅನುಭವ ಮಂಟಪವೆಂಬ ಮಹದರಿವಿನ ಅಂಬರ ಪೀಠ ಅವರಿಗಾಗಿ ಸಿದ್ಧವಾಗಿದ್ದಿತು, ಅದರ ವೈಶಿಷ್ಟ್ಯವನ್ನು ಹಡಪದ ಅಪ್ಪಣ್ಣ ವಚನದಿಂದಲೆ ಅರಿಯಬೇಕೀಗ:

"ಅಂಗದ ಪ್ರಕೃತಿ ಲಿಂಗದಲ್ಲಿ ಅಳಿದು, ಮನದ ಪ್ರಕೃತಿ ಅರಿವಿನಲ್ಲಿ ತಿಳಿದು, ಜೀವನಭ್ರಾಂತಿ ನಿಶ್ಚಿಂತದಲ್ಲಿ ಅಳಿದು, ನಿಃಶೂನ್ಯ ನಿರಾಮಯವಾದ ನಿವಾಸಕ್ಕೆ ಸದಾಚಾರವೆಂಬ ಕೆಸರಗಲ್ಲನಿಕ್ಕಿ, ಸರ್ವಾಚಾರ ಸಂಪತ್ತೆಂಬ ಹೂಗಲ್ಲ ಮುಟ್ಟಿ, ಅಂತಃಕರಣ ಚತುಷ್ಟಯದ ನಾಲ್ಕು ಕಂಬವ ನಿಲಿಸಿ, ಜ್ಞಾತೃವೆಂಬ ಭಿತ್ತಿಯಮೇಲೆ ಜ್ಞಾನವೆಂಬ ಶಿಖರಿಯನನುಗೊಳಿಸಿ, ಜ್ಞೇಯವೆಂಬ ಹೊನ್ನ ಕಲಶವಂ ಶೃಂಗಾಖುಮಂ ಮಾಡಿ, ಬ್ರಹ್ಮರಂಧ್ರದ ಊರ್ಧ್ವದ್ವಾರವೆಂಬ ನಿಜದ್ವಾರಮಂ ಮಾಡಿ, ನಿರ್ವಹಯಲಿನಲಿ ನೆಲೆಗೊಳಿಸಿ, ಬಸವಪ್ರಿಯ ಕೂಡಲ ಚೆನ್ನಸಂಗನ ಪ್ರಭುದೇವರ ಬರವಿಂಗೆ ಶೂನ್ಯಸಿಂಹಾಸನವ ರಚಿಸಿ ಬರವ ಹಾರುತ್ತಿರ್ದ ನಮ್ಮ ಪರಮಗುರು ಸಂಗನ ಬಸವಣ್ಣನು!"

ಪ್ರಭುವಿನ ಪುನರಾಗಮನ ಬಸವಾದಿ ಪ್ರಮಥರೆಲ್ಲರಿಗೆ ಹಿಗ್ಗಿನ ಸುಗ್ಗಿ ಬಂದಂತೆನಿಸಿತು. ಬಸವಣ್ಣ ಶೂನ್ಯಸಿಂಹಾಸನವನ್ನೇರಲು ಪ್ರಭುದೇವರನ್ನು ಪ್ರಾರ್ಥಿಸಿಕೊಂಡ. ಕಡೆಯಿಲ್ಲದ ದೇಶವ ತಿರುಗಿದೆನು. ಹವಣಿಲ್ಲದ ಕಂಥೆಯ ತೊಟ್ಟೆನು. ಹಸಿವಿಲ್ಲದ ಕಪ್ಪರವ ಹಿಡಿದು ಭಕ್ತಿ ಭಿಕ್ಷವ ಬೇಡಬಂದೆ. ಗುಹೇಶ್ವರ ಹಸಿದನು ಉಣಲಿಕ್ಕೇಳಾ, ಸಂಗನ ಬಸವಣ್ಣ ಎಂದು ಉತ್ತರಿಸಿದ ಪ್ರಭು.

ಪ್ರಭುವಿನ ಆರೋಗಣೆಯ ಪವಾಡ ನಮ್ಮನ್ನಿಲ್ಲಿ ತಡೆಯಬೇಕಿಲ್ಲ, ಪ್ರಭುವಿನ ಶೂನ್ಯಸಿಂಹಾಸನಾರೋಹಣ ಮುಖ್ಯ. ಅದು ಬಸವಣ್ಣನ ಬಹುಮುಖಿ ಕ್ರಾಂತಿಗೋಪುರದ ರತ್ನಕಲಶ! ಏರಿದನು ಶೂನ್ಯ ಸಿಂಹಾಸನವನಾ ಪ್ರಭು, ಏರಿದುದು ಗಗನಕ್ಕೆ ಶರಣಧರ್ಮ ಪತಾಕೆ!

"ಕುಂಡಲಿಯನಂಡೆಲೆದು ರವಿಶಶಿ। ಮಂಡಲಂಗಳ ಮೀಟಿ ಕಾಮದ ।
ಕಂಡಿಗಳ ಕೀಲಿಸಿ ಸುಷುಮ್ನಾನಾಳದೊಳಗಡಜಿ !

ಮಂಡಿಸಿದನಾ ಶೂನ್ಯ ಪೀಠದ । ಮಂಡೆಯೊಳು ತೊಳತೊಳಗಿ
ಬೆಳಗಿಯ –
ಖಂಡ ತೇಜೋಮೂರ್ತಿಯಲ್ಲಮಲಿಂಗ ಲೀಲೆಯಲಿ !"

(ಪ್ರ. ಲಿಂ. ಲೀ. ೨೨–೫೦)

"ಆದಿ ಮಧ್ಯಾಂತಂಗಳಿಲ್ಲದ ।
ವೇದಶಾಸ್ತ್ರಂಗಳಿಗೆ ನಿಲುಕದ ।
ನಾದ ಬಿಂದುಗಳೆಂಬ ಸಂಪುಟದೊಳಗೆ ಸಮನಿಸಿದ ।
ಆದಿರುಸವಾತ್ಮ ತ್ರಯಂಗಳ ।
ಹದಿಯಲಿ ಹಂಗಿಲ್ಲದನುಪಮ ।
ವಾದ ಘನಗುರು ಮೂರ್ತಿಗೊಂಡನು ಶೂನ್ಯಪೀಠದಲಿ ॥"

(ಅದೇ ೫೩)

# ಅನುಭವ ಮಂಟಪದಲ್ಲಿ

ಅನುಭವ ಮಂಟಪದ ಅಧ್ಯಕ್ಷನಾಗಿ ಅಲ್ಲಮಪ್ರಭು ನಿರ್ವಹಿಸಿದ ಪಾತ್ರ ಅದ್ಭುತವಾದುದು, ನಾಲ್ಕು ಶೂನ್ಯ ಸಂಪಾಧನೆಗಳು ಇದಕ್ಕೆ ಸಾಕ್ಷಿ. ಅವುಗಳಲ್ಲಿ ಅಲ್ಲಮನ ವ್ಯಕ್ತಿತ್ವ ಜಗದಗಲ, ಮುಗಿಲಗಲವಾಗಿ ಬೆಳೆದು ನಿಂತಿದೆ. ಬಸವಣ್ಣನ ಮಹಾಮನೆಯಲ್ಲಿ ಯಾರಿಗೂ ತೋರದಂತಿದ್ದ ಮರುಳ ಶಂಕರದೇವ ಅಲ್ಲಮನು ಆಗಮಿಸುತ್ತಲೆ ಪ್ರಕಟವಾದಂತೆ, ಅಲ್ಲಮಪ್ರಭುವಿನ ಅಧ್ಯಕ್ಷತೆಯಲ್ಲಿ ನಡೆದ ಅನುಭವ ಮಂಟಪದ ಚರ್ಚೆಗಳಲ್ಲಿ ಶರಣಧರ್ಮದ ರಹಸ್ಯಗಳೆಲ್ಲ ಪ್ರಕಟವಾದುವು, ಆ ಚರ್ಚೆಗಳೆಲ್ಲವನ್ನೂ ಈ ಪುಸ್ತಿಕೆಯಲ್ಲಿ ಸಂಗ್ರಹಿಸಲಾಗದು. ಆಸಕ್ತರು ಅವುಗಳನ್ನೇ ಆಶ್ರಯಿಸಬೇಕು. ಮಾದರಿಗಾಗಿ ಶರಣಸತಿ–ಲಿಂಗಪತಿ ತತ್ತ್ವದ ತಿರುಳನ್ನೂ, ಅಕ್ಕಮಹಾದೇವಿಯ ಮಹೋಜ್ವಲ ವ್ಯಕ್ತಿತ್ವವನ್ನೂ ನಿತಾಂತ ಸುಂದರವಾಗಿ ನಿರೂಪಿಸುವ ಅಕ್ಕ ಮಹಾದೇವಿಯ ಸಂಪಾದನೆಯೊಂದನ್ನಿಲ್ಲಿ ಅವಲೋಕಿಸಬಹುದು.

ಅನುಭವ ಮಂಟಪ್ಪಕ್ಕೆ ಅಕ್ಕ ಆಗಮಿಸುತ್ತಲೆ ಶರಣರ ಸಂತಸದ ಕಡಲು ಉಕ್ಕೇರಿತು. ಆದರೆ ಅಲ್ಲಮಪ್ರಭುಗಳು ತಮ್ಮ ರತ್ನಪರೀಕ್ಷೆಯ ಕಾಯಕವನ್ನು ಯಾರೇ ಇರಲಿ ಬಿಟ್ಟುಕೊಡುವವರಲ್ಲ. ಅಕ್ಕಮಹಾದೆವಿಯನ್ನು ಒರೆದೊರೆದು ನೋಡಿದರು. ಕೇಳಿದರು:

"ಉದಯಮದದ ಯೌವನವನೊಳಕೊಂಡ ಸತಿ ನೀನು ಇತ್ತಲೇಕೆ
ಬಂದೆಯವ್ವಾ?
ನಿನ್ನ ಪತಿಯ ಕುರುಹ ಹೇಳಿದರೆ ಬಂದು ಕುಳ್ಳಿರು ; ಅಲ್ಲದಿರೆ
ತೊಲಗು ತಾಯೆ!
ನಮ್ಮ ಗುಹೇಶ್ವರನ ಶರಣರಲ್ಲಿ ಸಂಗಸುಖ ಸನ್ನಿಹಿತವ ಬಯಸುವರೆ
ನಿನ್ನ ಪತಿ ಯಾರೆಂದು ಹೇಳಾ, ಎಲೆ ಅವ್ವಾ!"

ಇನ್ನಾರಾದರೂ ಅಧೀರರಿದ್ದಿದ್ದರೆ ಅಪ್ರತಿಭರಾಗುತ್ತಿದ್ದರು ಈ ಪ್ರಶ್ನೆ ಕೇಳಿ. ಆದರೆ ಹೆಣ್ಣಿನ ಕುಲಕ್ಕೇ ಹೆಮ್ಮೆ ಹುಟ್ಟಿಸಿದ ಅಕ್ಕ ಅಧೀರಳಾಗಲಿಲ್ಲ, ತಕ್ಕ ಉತ್ತರವನ್ನೇ ಇತ್ತಳು:

"ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜದ್ರ ಕಂಭ
ಪವಳದ ಚಪ್ಪರವನಿಕ್ಕಿ ಮದುವೆಯ ಮಾಡಿದರು, ಎಮ್ಮವರೆನ್ನ

ಮದುವೆಯ ಮಾಡಿದರು–
ಕಂಕಣ ಕೈದಾರ ಸ್ಥಿರಸೇವೆಯನಿಕ್ಕಿ
ಚೆನ್ನಮಲ್ಲಿಕಾರ್ಜುನನೆಂಬ ಗಂಡನಗೆನ್ನ ಮದುವೆಯ ಮಾಡಿದರು
...................................................................................................
ಕೂಡಲಿಲ್ಲದ ಘನವ ಕೂಡುವ ಪರಿ ಎಂತವ್ವ?
ಹೇಳಿದರೆ ಅದಕ್ಕದೆ ಕೊರತೆ ! ಗುಹೇಶ್ವರಲಿಂಗವ ಬೇರು ಮಾಡಿ
ಬೆರೆಸುವ ಪರಿ ಎಂತು ಹೇಳಾ?"

"ಗಟ್ಟಿದುಪ್ಪ ತಿಳಿದುಪ್ಪಕ್ಕೆ ಹಂಗುಂಟೆ ಅಯ್ಯಾ?
ದೀಪಕ್ಕೆ ದೀಪ್ತಿಗೆ ಭೇದ ಉಂಟೆ, ಅಯ್ಯಾ?
ಅಂಗಕ್ಕೆ ಆತ್ಮಕ್ಕೆ ಭಿನ್ನ ಉಂಟೆ, ಅಯ್ಯಾ?
ಎನ್ನಂಗವನು ಶ್ರೀಗುರು ಮಂತ್ರವ ಮಾಡಿ ತೋರಿದನಾಗಿ
ಸಾವಯ ನಿರವಯಕ್ಕೆ ಭಿನ್ನವಿಲ್ಲವಯ್ಯಾ!
ಚೆನ್ನಮಲ್ಲಿಕಾರ್ಜುನ ದೇವರ ಬೆರಸಿ ಮತಿಗೆಟ್ಟವಳ
ಏತಕ್ಕೆ ನುಡಿಸುವಿರಯ್ಯಾ, ಪ್ರಭುವೆ?
ನಾ ಸತ್ತೆನೆಂದು ಹೆಣ ಕೂಗಿದುದುಂಟೆ?
ಬೈಚಿಟ್ಟ ಬಯಕೆ ಕರೆದುದುಂಟೆ?
ಹೆಪ್ಪಿಟ್ಟ ಹಾಲು ಸಿಹಿಯಪ್ಪುದೆ?
ಈ ಮಾತು ಒಪ್ಪವಲ್ಲ, ಗುಹೇಶ್ವರಲಿಂಗಕ್ಕೆ!"
"ಸತ್ತ ಹೆಣ ಕೂಗಿದುದುಂಟು;
ಬೈಚಿಟ್ಟ ಬಯಕೆ ಕರೆದುದುಂಟು;
ಹೆಪ್ಪಿಟ್ಟ ಹಾಲು ಸಿಹಿಯಾದುದುಂಟು;
ಇದ ನಿಶ್ಚೈಸಿ ನೋಡಿ, ಚೆನ್ನಮಲ್ಲಿಕಾರ್ಜುನ ದೇವರಲ್ಲಿ!

"ಇದು ಎನಗೆ ಆಶ್ಚರ್ಯ ! ಹೇಳವ್ವಾ, ಕಾಯವಿಲ್ಲದ ಸುಖವ
ಜೀವವಿಲ್ಲದ ಭವವ ಆ ಠಾವ ಹೇಳಾ, ಗುಹೇಶ್ವರಲಿಂಗಕ್ಕೆ!
ಮರೆದೊರಗಿ ಕನಸ ಕಂಡು ಹೇಳುವಲ್ಲಿ ಸತ್ತ ಹೆಣ ಎದ್ದಿತ್ತು;
ತನ್ನ ಋಣ ನಿಧಾನ ಎದ್ದು ಕರೆಯಿತ್ತು; ಹೆಪ್ಪಿಟ್ಟ ಹಾಲು ಗಟ್ಟಿ
ತುಪ್ಪವಾಗಿ ಸಿಹಿಯಾಯಿತ್ತು!
ಇದಕ್ಕೆ ತಪ್ಪಸಾಧಿಸಲೇಕೆ, ಚೆನ್ನಮಲ್ಲಿಕಾರ್ಜುನ ದೇವರ
ದೇವನಣ್ಣಗಳಿರಾ?"
"ಇದು ಲೇಸಾಯಿತ್ತು!"

ತಪ್ಪು ಸಾಧಿಸುವ ಸ್ವಭಾವವೇ ಅಲ್ಲ ಅಲ್ಲಮನದು. ಒಬ್ಬೊಬ್ಬರ ಅಂತರಂಗ ದೀಧಿತಿ ಸಂವಾದದಿಂದ ಹೊರಬೀಳಬೇಕು; ಉಳಿದವರಿಗೆ ಉಪಯೋಗವಾಗಬೇಕು ಇದು ಅಲ್ಲಮನ ಮಾರ್ಗ 'ಅಲ್ಲಮಪ್ರಭು ಸಂಪ್ರದಾಯದ ಸಲ್ಲಲಿತ ಸನ್ಮಾರ್ಗ, 'ಸೂನ್ಯಸಂಪಾದನೆಗಳ ಎಲ್ಲ ಸಂಪಾದನೆಗಳಲ್ಲಿಯೂ ಇದೇ ಹಿರಿಯಗುಣ ಎದ್ದು ಕಾಣುತ್ತದೆ, 'ನಿಂದಿಸಿದವಗೆ ಹಗೆಯಿಲ್ಲ, ಹೊಗಳಿದವಗೆ ಕೆಳೆಯಿಲ್ಲ'ವೆಂಬ ಸೂತ್ರವನ್ನು ಹಿಡಿದಿದ್ದ ಅವನು ತಾನು ನೋಡಿದ ಸಸಿಗಳೆಲ್ಲ ಕಲ್ಪಲತೆಗಳಾಗಿ, ಕಲ್ಪವೃಕ್ಷಗಳಾಗಿ ಬೆಳೆಯಲೆಂದು ಬಯಸಿದ, ಅವುಗಳ ಸುತ್ತು ಬೆಳೆದ ಕಳೆಯನ್ನು ಕಿತ್ತೊಗೆದ; ಅರಿವಿನ, ಅನುಭಾವದ ನೀರೆರೆದು ಅವುಗಳನ್ನು ಬೆಳೆಸಿದ, 'ಸತ್ಯವ ನುಡಿಯದೆ, ಸದಾಚಾರದಲ್ಲಿ ನಡೆಯದೆ, ಸದ್ಭಕ್ತಿಯ ಹಿಡಿಯದೆ, ನಿಜಮುಕ್ತಿ ಪಡೆಯದೆ, ಸತ್ಕ್ರಿಯೆ ವಶವಾಗದೆ, ಸಮ್ಯಕ್ ಜ್ಞಾನವ ಮುಟ್ಟದೆ, ಆಚಾರವನರಿಯದೆ, ವಿಭವವಳಿಯದೆ, ಕೋಪ ಮುರಿಯದೆ, ತಾಪವುಡುಗದೆ ಬರಿದೆ ಭಕ್ತರಾದೆವೆಂದು ಬೆಬ್ಬನೆ ಬೆರೆವವರ, ಹುಸಿಯನೆ ಕೊಯ್ದು, ಹುಸಿಯನೆ ಪೂಜಿಸಿ, ಗಸಣೆಗೊಳಗಾಗುವವರ, ಸುಮ್ಮನೆ ಅರಿದೆವು ಅರಿದೆವು ಎನ್ನುವವರ ಕೈಹಿಡಿದು ನಿಲ್ಲಿಸಿ ಅವರವರ ತಪ್ಪು ಅವರಿಗೆ ತೋರಿಸುತ್ತಿದ್ದ ಅಲ್ಲಮ ಸಾಕ್ರೇಟೀಸನಂತೆ ಎಲ್ಲರನ್ನೂ ಪರೀಕ್ಷಿಸಿದರೂ ಯಾರನ್ನೂ ಕಡೆಗಣಿಸಲಿಲ್ಲ. 'ಲೋಲತೆಯಲಿ ಸಮಸ್ತ ಜಾತಿಯ ಜಾಲವನು, ಸರ್ವರನು ಕರುಣದಿ ಪಾಲಸುತಲಿರುತಿರ್ದ' ಆ ಮಹಿಮನ ಹೃದಯ ಆಕಾಶದಷ್ಟು ವಿಶಾಲ. ಅಲ್ಲಿ ಎಲ್ಲರಿಗೂ ಸ್ಥಾನವಿತ್ತು, ಆದರೆ ಅಲ್ಪತೆಗೆ ಮಾತ್ರ ಇರಲಿಲ್ಲ.

'ಜಂಗಮೋಪದೇಶ ಶಸ್ತ್ರವೈದ್ಯ'ವೆಂದು ಹೇಳಲಾಗಿದೆ. ಶಸ್ತ್ರವೈದ್ಯ ಲಿಂಗದ ಅನಿಷ್ಟ ಭಾಗಗಳ ಮೇಲೆ ಮಾತ್ರ. ಹಾಗೆಯೇ ಈ ಚರಜಂಗಮನ ಶಸ್ತ್ರವೈಧ್ಯವೂ ನಡೆನುಡಿಗಳ ಅನಿಷ್ಟಾಂಶಗಳ ಮೇಲೆ ಮಾತ್ರ, ಮೂಲದಲ್ಲಿ ಅವನು ಮಾನವಪ್ರೇಮಿಯೋ, ಆ ಪ್ರೇಮದಿಂದ ಪ್ರೇರಿತನಾಗಿಯೆ ಮಾನವರ ಓರೆ ಕೋರೆಗಳನ್ನು, ಕುಂದು ಕೊರತೆಗಳನ್ನು ತಿದ್ದಿದನಾತ, ಇಲ್ಲದಿದ್ದರೆ ಇಂಥ ವಚನ ಬರುತ್ತಿದ್ದಿತೇ ಅವನ ಬಾಯಿಂದ?

> "ಮುನಿಯದಿರಿ, ಮುನಿಯದಿರಿ ನಿಮಗೊಂದು ಯುಕ್ತಿಯ ಹೇಳುವೆನು
> ಅದೆಂತೆಂದೊಡೆ ನೀವೆನ್ನ ವಂಶೀಭೂತರಾದ ಕಾರಣ ನಿಮ್ಮ ಹೆಚ್ಚು
> ಕುಂದು ಎನ್ನದಾಗಿ,
> ನಿಮ್ಮ ಆಸ್ತಿನಾಸ್ತಿ ಎನ್ನದಾಗಿ, ನಿಮ್ಮ ಹಾನಿವೃದ್ಧಿ ಎನ್ನದಾಗಿ,
> ಹಾವು ಹಿಡಿವವರು ಬೇಲಿಯ ಹೊಗದೆ ಹೋಹರೇ ಅಯ್ಯ?
> ವ್ಯಾಧನು ಸೂಸಲ ಚೆಲ್ಲಿ, ಜಂತ್ರವ ಹಣ್ಣಿ, ಅಡಿಗಲ್ಲನೊಡ್ಡಿ ಹೋದ ಬಳಿಕ
> ಸೂಸಲ ಕಂಪಿಂಗೆ ಹೆಗ್ಗಣ ಬಿದ್ದಂತೆ ಬಿದದರಲ್ಲ ಮಾಯದ ಬಲೆಯಲ್ಲಿ!

ಕೋಪವೆಂಬ ರಾಡನೊಡ್ಡಿ, ತಾಪವೆಂಬ ಅಡಿಗಲ್ಲನಿರಿಸಿ, ಹುಸಿ ಎಂಬ ಮೀಟುಗಣೆಯ ಜಂತ್ರಿಸಿ

ಹೊನ್ನು ಹೆಣ್ಣು ಮಣ್ಣೆಂಬ ಸೂಸಲ ಚೆಲ್ಲಿ ಕೆಡಹಿದನಲ್ಲಾ ನಿಃಕರುಣಿ ಮುಕ್ಕಣ್ಣ ವ್ಯಾಧನು!

> ಹೊನ್ನು ಮಣ್ಣು ಹೆಣ್ಣಿನಿನಾಶೆಯ ಬಿಟ್ಟು, ಕೋಪತಾಪವಂ ಬಿಟ್ಟು,
> ಭ್ರಾಂತಿ ಭ್ರಮೆಯಂ ಬಿಟ್ಟು ಜಂಗಮವಾಗಬೇಕು ಕೇಳಿರೋ
> ಮರುಳುಗಳಿರಾ!

ಇಂತೀ ಕಡುಲೋಭದ ರುಚಿಯ ಹಿಂಗಿ ಜಂಗಮವಾದಲ್ಲದೆ ಭವ ಹಿಂಗದು ಕಾಣಾ, ಗುಹೇಶ್ವರಾ!"

ಅವನ ದಾಳಿಯೇನಿದ್ದರೂ ದಾಂಭಿಕತೆಯ ಮೇಲೆ, ಅಹಂಮನ್ಯತೆಯ ಆಷಾಢಭೂತಿತ್ವದ ಮೇಲೆ, ಅಲ್ಪತನದ ಮೇಲೆ, ಇಷ್ಟಲಿಂಗಕ್ಕೆ ತೋರಿ ಮೃಷ್ಟಾನ್ನ ಹೊಡೆವವರ ಮೇಲೆ, ಅನಾಚಾರಗಳ ಮೇಲೆ, ಅಂಧ ಶ್ರದ್ಧೆಗಳ ಮೇಲೆ, ಬಸವಣ್ಣನವರ ಮಹಾಮನೆಗೆ ನಿಜಭಕ್ತರೊಡನೆ ಕಪಟ ಭಕ್ತರೂ ಬರುತ್ತಿದ್ದರೆಂದು ತೋರುತ್ತಿದೆ, ಬಸವಣ್ಣನವರಾದರೋ 'ಆರಾರ ಮನದಲ್ಲಿ ಏನೇನಿಹುದೆಂದರಿಯೆ; ಒಳ್ಳಿಹರೆಂದೆನಲಮ್ಮೆ; ಹೊಲ್ಲಹರೆಂದೆನಹಲಮ್ಮೆ ಶಿವಭಕ್ತರಾದ ಕಾರಣ' ಎಂದು ಹೇಳಿ ತಮಗಾಗಿ, ಲಾಂಛನವ ಕಂಡು ನಂಬುವೆ; ಅವರಂತರಂಗವ ನೀವೇ ಬಲ್ಲಿರಿ ಎಂಬ ದಾರಿಯನ್ನು ಆಯ್ದುಕೊಂಡುಬಿಟ್ಟಿದ್ದರು. ಆದರೆ ಅಲ್ಲಮಪ್ರಭುಗಳ ದಾರಿ ಸತ್ಯನಿಷ್ಠುರತೆಯ ದಾರಿ ಅಂಗಜೀವಿಗಳೆಲ್ಲ ಅಶನಕ್ಕೆ ನೆರೆದು ಲಿಂಗವಾರ್ತೆಯ ನುಡಿವರಯ್ಯಾ! ಕಾಯಜೀವಿಗಳೆಲ್ಲ ಕಳವಳಿಸಿ ನುಡಿವರಯ್ಯ! ಮನಬಂದ ಪರಿಯಲ್ಲಿ ನುಡಿವವರಿಗೆ, ಗುಹೇಶ್ವರಲಿಂಗ ನಿಮಗೆಲ್ಲಿಯದೋ? ಎಂದು ಖಂಡಿತವಾದಿಯಾಗಿ ಕೇಳುತ್ತಿದದರು, ಅಂತೆಯೇ ಅತ್ಯರನ್ನು, ಸಾತ್ವಿಕರನ್ನು, ಶರಣರನ್ನು, ಎತ್ತಿ ಹಿಡಿಯುತ್ತಿದ್ದರು, "ಕುಲಮದ, ಛಲಮದ, ವಿದ್ಯಾಮದದವರ ತೋರದಿರಾ! ಅವರ ಆರೂಢ ಪದವಿಯನೆನಗೆ ತೋರದಿರಾ! ಅವರ ಗರ್ವಗಂಭೀರತನವನೆನಗೆ ತೊರಿದಿರಾ! ಶಮೆದಮೆಯುಳಿದು ದಶಮುಖನಿಂದ ಲಿಂಗದಲ್ಲಿ ಲೀಯವಾದವರನಲ್ಲದೆ ಎನಗೆ, ತೋರದಿರಾ!" ಎಂದು ಗುಹೇಶ್ವರನನ್ನು ಬೇಡಿಕೊಳ್ಳುತ್ತಿದ್ದರು. ಇಷ್ಟಾಗಿಯೂ ಅಂಥವರು ತೋರಿದರೆ ಅವರ ತಪ್ಪನ್ನವರಿಗೆ ತೋರದೆ ಬಿಡುತ್ತಿರಲಿಲ್ಲ. ಪ್ರಭು ಅವರೂ ತನ್ನ ವಂಶೀಭೂತರೆಂಬ ಭಾವನೆಯಿಂದ, ಅವರ ತೀಕ್ಷಣದೃಷ್ಟಿಗೆ ಯಾವ ಕಪಟಾಚರಣೆಯೂ ಕಾಣದೆ ಉಳಿಯುತ್ತಿರಲಿಲ್ಲ, ಯಾವ ಸದಾಚರಣೆಯೂ ತೋರದೆ ಉಳಿಯುತ್ತಿರಲಿಲ್ಲ. ಆತ ನಿಜವನರಿದ ನಿಶ್ಚಿಂತ, ಮರಣವ ಗೆಲಿದ ಮಹಂತ, ಘನವ ಕಂಡು ಮಹಿಮ,

ಪರವನೊಳಕೊಂಡ ಪರಿಣಾಮಿ, ಬಯಲ ಬೆರಸಿದ ಭರಿತ, ನಿರಾಳವ ನೊಳಕೊಂಡ ಸಹಜ! ಆತ ಸಲಹಿದ ಸಸಿಗಳು ದೊಡ್ಡವಾಗಿ ಕಲ್ಪವೃಕ್ಷಗಳ ತೋಟ ಸಿದ್ಧವಾಯಿತು. ಆದರೆ ಆ ತೋಟವೂ ಹಾಳಾಗದಿರಲಿಲ್ಲ, "ತೋಟವ ಬಿತ್ತಿದರೆಮ್ಮವರು, ಕಳಹ ಕೊಟ್ಟರು ಜವನನವರ!... ಗುಹೇಶ್ವರನಿಕ್ಕಿದ ಕಿಚ್ಚು ಹೊತ್ತಿಕ್ಕಲುಂಟು, ಅಟ್ಟುಣಲಿಕ್ಕಿಲ್ಲ!" ಎಂದು ಅವರೇ ಉದ್ಗರಿಸಿದ್ದಾರೆ!

ತಮ್ಮ ಕೊನೆಯ ಸಂದೇಶವನ್ನಿಂತು ಬೆಸಸುತ್ತಾರೆ; "ಸಾವನ್ನಕ್ಕ ಸರವ ಮಾಡಿದರೆ ಇನ್ನು ಕಾದುವ ದಿನವಾವುದು? ಬಾಳುವನ್ನಕ್ಕರ ಭಜಿಸುತ್ತಿದ್ದರೆ ತಾನಹ ದಿನವಾವುದು? ಅರ್ಥವುಳ್ಳನ್ನಕ್ಕರ ಅರಿವುತ್ತಿದ್ದರೆ ನಿಜವ ನೈದುವ ದಿನವಾವುದು? ಕಾಯಕ್ಕೆ ಬಂದು ಕಾರ್ಯ ಕೈಸಾರಿದ ಬಳಿಕ ಇನ್ನು ಮರ್ತ್ಯಲೋಕದ ಹಂಗೇಕೆ? ತನಿರಸ ತುಂಬಿದ ಅಮೃತಫಲ ಒಮ್ಮೆಗೆ ತೊಟ್ಟುಬಿಡುವುದು, ನೋಡಿರೆ ದೃಷ್ಟಾಂತವ! ಬಸವಣ್ಣ ಚೆನ್ನಬಸವಣ್ಣ ಮೊದಲಾದ ಪ್ರಮಥರು ಗುಹೇಶ್ವರಲಿಂಗದಲ್ಲಿ ನಿಜವನೈದಿ ನಿಶ್ಚಿಂತರಾಗಿರಯ್ಯ!" ಇದಲ್ಲದೆ,

"ಅವಧಿಯಳಿಯಿತ್ತು; ವ್ಯವಧಾನ ಉಳಿಯಿತ್ತು, ನಿಜವು ನಿಜದೊಡಗೂಡಿತ್ತು ಕೇಳಾ ಬಸವಣ್ಣ, ಕಲಿಯುಗದಲ್ಲಿ ಮುಂದೆ ಇರಬಾರದು ನಿಜ ಶರಣರಿಗೆ, ನಡೆ ನೀನು ಕಪ್ಪಡಿಯ ಸಂಗಯ್ಯನಲ್ಲಿ, ಉಳುಮೆಯಲ್ಲಿ ನಿಜವನೆಯ್ದು ನಡೆ ಚೆನ್ನಬಸವಣ್ಣ. ಮಹವನೊಡಗೂಡು ಮಡಿವಾಳಯ್ಯ, ಸೊಡ್ಡಳ ಬಾಚರಸರು ಮೊದಲಾಧ ಪ್ರಮಥರೆಲ್ಲರು ನಿಜವನೈದುವುದು... ನಮಗೆ ಕದಳಿಯಲ್ಲಿ ಹೊಕ್ಕು ನಿಜದಲ್ಲಿ ಒಡಗೂಡುವ ಪರಿಣಾಮ!"

ಚರಜಂಗಮ ಪರವಂಗಮನಾಗಿ ಕದಳಿಯಲ್ಲಿ ಅಡಗಿದ. ಹೋಗುವ ಮುನ್ನ, "ಬಸವ ಮಾಡಿದೊಡಾಯ್ತು ಗುರುನೆಲೆ! ಬಸವ ಮಾಡಿದೊಡಾಯ್ತು ಲಿಂಗವು! ಬಸವ ಮಾಡಿದೊಡಾಯ್ತು ಜಂಗಮವರಿವ ಮಹಿಮಂಗೆ,"

"ಬಸವನಿಂದಧ್ಯಾತ್ಮವೇ ಪಸರಿಸಿತು ಲೋಕದೊಳಂತು ಕಾರಣ ಬಸವನೇ ಪರದೈವ" ವೆಂದು ಹೇಳಿ ತನ್ನ ಬಗ್ಗೆ ಹೀಗೆ ಹೇಳಿಕೊಂಡ ಆ ಮಹಾತ್ಮ:

"ಆವ ಜಾತಿಯಾದಡೂ ಆಗಲಿ, ಪುರಾತನರ ಚಾರಿತ್ರದಲ್ಲಿ ನಡೆದು,
ಗುರುಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನಮಂ ಕೊಟ್ಟು
ಅಹಂಕಾರವಳಿದಿಹಂತಹ ಮಹಾತ್ಮರ
ಬಾಯ ತಂಬುಲವ ಮೆಲುವೆ, ಬೀಳುಡಿಗೆಯ ಹೊದೆವೆ
ಅವರ ಪಾದರಕ್ಷೆಗಳೆರಡನೂ ಮಂಡೆಯ ಮೇಲೆ ಹೊತ್ತುಕೊಂಡು
ಬದುಕುವೆನಯ್ಯಾ!

ಆ ಗಣಂಗಳ ದಾಸನ ದಾಸ ನಾನು ಜನ್ಮಜನ್ಮದ್ಲಿ ಆಗುವೆ ಕಾಣಾ,
ಗುಹೇಶ್ವರಾ!"

ಈ ಮಹಿಮನನ್ನು ಬೇರೆಯವರ ಮಾತುಗಳಲ್ಲಿ ಬಣ್ಣಿಸುವುದೇ ಬಿರಿ, ಅವನ ಈ ಮಾತುಗಳನ್ನೇ ಅವನಿಗೆ ತಿರುಗಿಸಿ ತೃಪ್ತರಾಗೋಣ:

"ಹರಿವ ನದಿಗೆ ಮೈಯೆಲ್ಲ ಕಾಲು;
ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ;
ಬೀಸುವ ಗಾಳಿಗೆ ಮೈಯೆಲ್ಲ ಕೈ;
ಇದು ಕಾರಣ, ಗುಹೇಶ್ವರ
ನಿನ್ನ ಶರಣಂಗೆ ಸರ್ವಾಂಗವೆಲ್ಲ ಲಿಂಗಮಯ್ಯವಯ್ಯ!"

ಅಲ್ಲಮಪ್ರಭು ಸರ್ವಾಂಗಲಿಂಗವಾಗಿ ಆ ಮೊದಲೇ ತನ್ನ ಮಗಳು ಮಹಾದೇವಿ ಸೇರಿದ್ದ ಕದಳೀ ವನವನ್ನು ಸೇರಿದ; ಬಯಲಿಗನೇ ಆಗಿದ್ದ ಅವನು ಬುಲನ್ನು ಬೆರಸಿದ; ಅವನ ಬೆಳಕಿನ ಬಾಳು ಸಾಧಕರಿಗೆ ದಾರಿ ದೀಪವಾಯಿತು; ಅವನು ಬಿಟ್ಟು ಹೋದ ವಚನಗಳು ಮುಮುಕ್ಷುಗಳಿಗೆ ಅಕ್ಷಯನಿಧಿಗಳಾಗಿ ಉಳಿದಿರುವುವು.

# ಪ್ರಭುವಿನ ಪ್ರಬೋಧೆ

ಅಲ್ಲಮನ ಸೊಲ್ಲುಗಳು ಮಾನವರನ್ನೇಕೆ ದೇವನನ್ನೂ ಬೆಕ್ಕಸ ಬೆರಗಿಗೆ ಈಡಾಗಿಸುತ್ತವೆ. ದೇವರಿಗೆ ಇನ್ನಾರು ಈ ಸವಾಲು ಹಾಕಿಯಾರು? 'ನಾ ದೇವನಲ್ಲದೇ ನೀ ದೇವನಾದರೆ ಎನ್ನನೇಕೆ ಸಲಹೆ? ಆರೈದು ಒಂದು ಕುಡಿತೆ ನೀರನೆರೆವೆ; ಹಸಿದಾಗ ಒಂದು ತುತ್ತು ಓಗರವನ್ನಿಕ್ಕುವೆ ನಾ ದೇವ ಕಾಣಾ, ಗುಹೇಶ್ವರಾ!'

ಇಂಥ ಆತ್ಮಪ್ರತ್ಯಯ, ಇದೆಂಥ ಧೈರ್ಯ?

"ಹಿಂದಣ ಕವಿಗಳೆನ್ನ ತೊತ್ತಿನ ಮಕ್ಕಳು; ಮುಂದಣ ಕವಿಗಳೆನ್ನ ಕರುಣದ ಕಂದಗಳು; ಆಕಾಶದ ಕವಿಗಳೆನ್ನ ತೊಟ್ಟಿಲ ಕೂಸುಗಳು! ಹರಿಬ್ರಹ್ಮರೆನ್ನ ಕಕ್ಷಿಕುಳ! ನೀ ಮಾವ, ನಾಣಲಿಯ ಗುಹೇಶ್ವರಾ!"

ಲಿಂಗ ದೇವನನ್ನೇ ಹೀಗೆ ಕೇಳಿದವರುಂಟೆ?
"ಎನ್ನ ಕರಸ್ಥಳದೊಳಗಿದ್ದು ಎನ್ನೊಡನೆ ನುಡಿಯೆ;
ಅಯ್ಯಾ, ನಿನ್ನ ಹಲ್ಲ ಕಳೆದರೆ ಒಡೆಯರುಂಟೆ?"

ಇಂಥ ಕೆಚ್ಚು, ಇಂಥ ಭರವಸೆಯ ನುಡಿಗಳು ಇನ್ನೆಲ್ಲಿ?
"ಸಚರಾಚರ ಒಂದು ಕಿಂಚಿತ್ ; ಚತುರ್ಯುಗವೆಂಬುದೊಂದು ಕಿಂಚಿತ್;
ಅಪ್ಪುದೆಂಬುದೊಂದು ಕಿಂಚಿತ್; ಆಘದೆಂಬುದೊಂದು ಕಿಂಚಿತ್;
ತಾನು ಶುದ್ಧನಾದ ಶರಣಂಗೆ ಗುಹೇಶ್ವರನೆಂಬುದೊಂದು ಕಿಂಚಿತ್ !"
ಎಂಥ ಕಸುವಿದೆ, ಉಕ್ಕು ಇದೆ ಈ ಮಾತುಗಳಲ್ಲಿ?

"ಹರಿ ಹೊಲಬನರಿಯ; ಬ್ರಹ್ಮ ಮುಂದನರಿಯ;
ರುದ್ರಲೆಕ್ಕವ ಮರೆದು ಜಪವನೆಣಿಸುವ;
ಈಶ್ವರ ಪವನಯೋಗದಲ್ಲಿ ಮಗ್ನನಾದ;
ಸದಾಶಿವನು ಭಾವದಲ್ಲಿ ಭ್ರಮಿತನಾದ !"
"ಒಂದೊಡಲೊಳಗಣ ಬಾಲಕರೈವರು ನಿಮ್ಮನೆತ್ತ ಬಲ್ಲರು ಗುಹೇಶ್ವರಾ?"

"ದೇವಲೋಕದವರೆಲ್ಲರು ವ್ರತಗೇಡಿಗಳೆಂಬೆ;
ಮರ್ತ್ಯಲೋಕದವರ ಭಕ್ತದ್ರೋಹಿಗಳೆಂಬೆ;
ದೇವ ಸಂಭ್ರಮ ಗಣಪದವಿಯ ಪಡೆದವರೆಲ್ಲ ಕುಂಭಕರ್ಣನಂತೆ
ಅತಿನಿದ್ರಿತರೆಂಬೆ;
ಅನಂತಶೀಲರ ಕಂಡರೆ ಕೈಕೂಲಿಕಾರರೆಂಬೆ – ಗುಹೇಶ್ವರ ಲಿಂಗೈಕಯವ
ನರಿಯರಾಗಿ!"

'ಮಾತಿನ ಮೊದಲನರಿತ' ಅಲ್ಲಮನ ಮಾತುಗಳು ಸಿಡಿಲಿನಂತೆ ಘುಡು ಘುಡಿಸಬಲ್ಲವು; ಮಿಂಚಿನಂತೆ ಕಣ್ಣು ಕೋರೈಸಬಲ್ಲುವು; ಕಾಮನ ಬಿಲ್ಲಿನಂತೆ ರಮಣೀಯವಾಗಿ ತೋರಬಲ್ಲುವು; ಮುತ್ತಿನ ಮಳೆಯಂತೆ ಥಳಥಳಿಸ ಬಲ್ಲುವು; ಜಲಪಾತದಂತೆ ಜಿಗಿಯಬಲ್ಲುವು; ಕಾಳ್ಪುರದಂತೆ ಭೋರೆಂದು ಹರಿಯಬಲ್ಲುವು; ಕಾಲುವೆಗಳಂತೆ ಜುಳುಜುಳು ಹರಿಯಬಲ್ಲುವು, ಅವುಗಳ ವೈವಿಧ್ಯ ಆಶ್ಚರ್ಯಕರ; ಅವುಗಳ ಗಾಡಿ ಮೋಡಿಗಳು ವಿಸ್ಮಯಕರ!

ಇದು ಸೃಷ್ಟಿ ರಹಸ್ಯವನ್ನು ಬಯಲುಗೊಳಿಸಿದ ಬೆಡಗು;
"ಮರದೊಳಗಣ ಪತ್ರ ಫಲಂಗಳೂ ಮರಕಾಲವಶದಲ್ಲಿ ತೋರುವಂತೆ
ಹರನೊಳಗಣ ಪ್ರಕೃತಿ ಸ್ವಭಾವಂಗಳು ಹರಭಾವದಿಚ್ಛೆಗೆ ತೋರುವುವ!
ಲೀಲೆಯಾದೊಡೆ ಉಮಾಪತಿ, ಲೀಲೆ ತಪ್ಪಿದರೆ ಸ್ವಯಂಭು ಗುಹೇಶ್ವರಾ!"

ಆ ಅಗಮ್ಯ, ಅಗೋಚರ ಸ್ವಯಂಭುಲಿಂಗಕ್ಕೆ ಇದು ಪೂಜೆ:
"ಗಗನವೇ ಗುಂಡಿಗೆ, ಆಕಾಶವೇ ಅಗ್ಗವಣಿ, ಚಂದ್ರಸೂರ್ಯರಿಬ್ಬರು
ಪುಷ್ಪ
ಬ್ರಹ್ಮಧೂಪ, ವಿಷ್ಣುದೀಪ, ರುದ್ರನೋಗರ ಸುಯಿಧಾನ ನೋಡಾ;
ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ!"

ಇನ್ನೊಂದು ಪೂಜಾ ಚಿತ್ರವಿದು:
"ಆಯತವಾಯಿತು ಅನುಭಾವ, ಸ್ವಾಯತವಾಯಿತು ಶಿವಜ್ಞಾನ,
ಸಮಾಧಾನವಾಯಿತು ಸದಾಚಾರ, ಇಂತೀ ತ್ರಿವಿಧವು ಏಕಾರ್ಥವಾಗಿ,
ಅರಿವಿನ ಹೃದಯ ಕಣ್ದೆರೆದು ಅನಂತ ಲೋಕಾಲೋಕದ
ಅಸಂಖ್ಯಾತ ಮಹಾಗಣಂಗಳೆಲ್ಲರೂ ಲಿಂಗಭಾವದಲ್ಲಿ ಭರಿತರಾಗಿ
ಗಗನ ಸಿದ್ಧಾಂತದಿಂದ ಉಪದೇಶಕ್ಕೆ ಬಂದು, ಭಕ್ತಿರಾಜ್ಯವನೆ ಹೊಕ್ಕು
ನಿಜಲಿಂಗಸುಕ್ಷೇತ್ರವನೆ ಕಂಡು, ಅಮೃತ ಸರೋವರದೊಳಗಣ ವಿವೇಕ

ವೃಕ್ಷ ಪಲ್ಲವಿಸಲು
ವಿರಕ್ತಿ ಎಂಬ ಪುಷ್ಪ ವಿಕಸಿತವಾಗಲು ಪರಮಾನಂದ ಮಠದೊಳಗೆ
ಪರಿಣಾಮ ಪಶ್ಚಿಮ ಜ್ಯೋತಿಯ ಬೆಳಗಿನಲ್ಲಿ ಪರುಷ ಸಿಂಹಾಸನವನಿಕ್ಕಿ
ಪ್ರಾಣಲಿಂಗ ಮೂರ್ತಗೊಂಡಿರಲು, ದಕ್ಷಿಣವ ದಾಂಟಿ, ಉತ್ತರಾಬ್ಧಿಯಲ್ಲಿ
ನಿಂದು,

ಅಖಂಡ ಪರಿಪೂರ್ಣ ಪೂಜೆಯ ಮಾಡುವವರಿಗೆ ನಮೋ ನಮೋ ಎಂಬೆ ಗುಹೇಶ್ವರ.''

ಈ ನಿಜವಾದ ಪೂಜೆಗೆದುರಾಗಿ ಈ ಹುಸಿ ಪೂಜೆಯ ಚಿತ್ರ:
``ಹಿಡಿವ ಕೈಯ ಮೇಲೆ ಕತ್ತಲೆಯಯ್ಯ;
ನೋಡುವ ಕಂಗಳ ಮೇಲೆ ಕತ್ತಲೆಯಯ್ಯ;
ನೆನೆವ ಮನದ ಮೇಲೆ ಕತ್ತಲೆಯಯ್ಯ;
ಕತ್ತಲೆಯೆಂಬುದು ಇತ್ತಲೆಯಯ್ಯ–
ಗುಹೇಶ್ವರನೆಂಬುದು ಅತ್ತಲೆಯಯ್ಯ!''

ನಿಜವಾದ ಪೂಜೆ ನಿಷ್ಫಲವಾಗಬೇಕೆ? ಆದರೆ ಅದಕ್ಕೆ ಮಹತ್ವವೆಲ್ಲಿ?
``ಮೇರುವ ಸಾಗಿದ ಕಾಗೆ ಹೊಂಬಣ್ಣವಾಗದಿದ್ದರೆ
ಆ ಮೇರುವಿಂದತ್ತಣ ಹುಲುಮೊರಡಿ ಸಾಲದೆ, ದೇವಾ?
ನಿಮ್ಮ ಪೂಜಿಸಿ ಧಾವತಿಗೊಂಬಡೆ ಆ ಧಾವತಿಯಿಂದ ಮುನ್ನಿನ
ವಿಧಿಯೇ ಸಾಲದೆ?
ಗುಹೇಶ್ವರಾ, ನಿಮ್ಮ ಪೂಜಿಸಿ ಸಾವೊಡೆ ನಿಮ್ಮಿಂದ ಹೊರಗಣ ಜವನೆ
ಸಾಲದೆ?''
ಮೇಲಾಗಿ, ಪೂಜಿಸಿದ ಫಲ ಯಾರಿಗೆ?
``ಮಜ್ಜನಕ್ಕೆರೆದು ಫಲವ ಬೇಡುವರಯ್ಯ–ತಮಗೆಲ್ಲಿಯದೋ ಆ ಫಲವು
ಸೀತಾಳಕ್ಕಲ್ಲದೆ?

ಪತ್ರೆ ಪುಷ್ಪದಿ ಪೂಜಿಸಿ ಫಲವ ಬೇಡುವರಯ್ಯ ತಮಗೆಲ್ಲಿಯದೋ ಆ ಫಲ ಗಿಡಗಳಿಗಲ್ಲದೆ?

ಸುಯಿಧಾನವರ್ಪಿಸಿ ಪ್ರಸಾದದ ಫಲವ ಬೇಡುವರು–
ತಮಗೆಲ್ಲಿಯದೋ ಆ ಫಲ ಹದಿನೆಂಟು ಧಾನ್ಯಕ್ಕಲ್ಲದೆ?

ಲಿಂಗದೊಡನೆಯ ಲಿಂಗಕ್ಕೆ ಕೊಟ್ಟು ಫಲವ ಬೇಡುವ
ಸರ್ವ ಅನ್ಯಾಯಿಗಳನೇನೆಂಬೆ, ಗುಹೇಶ್ವರಾ?"

ಇನ್ನೂ ಕೇಳಿ:
"ಅಗ್ಗವಣಿ, ಪತ್ರೆ, ಪುಷ್ಪ, ಧೂಪ, ದೀಪ, ನಿವಾಳೆಯಲ್ಲಿ ಪೂಜಿಸಿ
ಬಳಲುತ್ತಿದ್ದಾರೆ!
ಏನೆಂದರಿಯರು, ಎಂತೆಂದರಿಯರು ಜನ ಮರುಳೋ ಜಾತ್ರೆ
ಮರುಳೋ ಎಂಬಂತೆ
ಎಲ್ಲರೂ ಪೂಜಿಸಿ, ಏನನೂ ಕಾಣದೆ ಲಯಕ್ಕೊಳಗಾಗಿ ಹೋದರು,
ಗುಹೇಶ್ವರಾ!"

ಇದು ಪೂಜೆಯ ತಪ್ಪಲ್ಲ, ಪೂಜೆಯ ನಟನೆ ಮಾಡುವ ವೇಷ ಡಂಭಕರ ತಪ್ಪು;
"ಕಳ್ಳಗಂಜಿ ಕಾಡಹೊಕ್ಕರೆ ಹುಲಿ ತಿಂಬುದ ಮಾಂಬುದೆ?
ಹುಲಿಗಂಜಿ ಹುತ್ತವ ಹೊಕ್ಕರೆ ಸರ್ಪ ತಿಂಬುದ ಮಾಂಬುದೆ?
ಕಾಲಕ್ಕಂಜಿ ಭಕ್ತನಾದಡೆ ಕರ್ಮ ತಿಂಬುದ ಮಾಂಬುದೆ?
ಮೃತ್ಯುವಿನ ಬಾಯಿ ತುತ್ತಾದ ವೇಷ ಡಂಭಕರನೇನೆಂಬೆ, ಗುಹೇಶ್ವರಾ?"

ಲಿಂಗವನರಿದು ನೆನೆವುದ ಮರೆಯುವ ಈ ಸ್ಥಿತಿ ನಿಜವಾದ ಪೂಜೆ:
"ಕರ್ಪೂರದ ಗಿರಿಯ ಉರಿಯು ಹಿಡಿದಡೆ ಇದ್ದಿಲುಂಟೆ?
ಮಂಜಿನ ಶಿವಾಲಯಕ್ಕೆ ಬಿಸಿಲ ಕಳಶವುಂಟೆ?
ಕೆಂಡದ ಗಿರಿಯನರಗಿನ ಬಾಣದಲ್ಲೆಚ್ಚಡೆ ಮರಳಿ ಬಾಣವನಱಸಲುಂಟೆ?
ಗುಹೇಶ್ವರ ಲಿಂಗವನಱಿದು ಮರಳಿ ನೆನೆಯಲುಂಟೆ?"

ಲಿಂಗವನರಿವುದೇ ಮುಖ್ಯವಾದುದು:
"ಲಿಂಗವನಱಿಯದೆ ಏನನಱಿದಡೆಯೂ ಫಲವಿಲ್ಲ;
ಲಿಂಗವನಱಿದು ಬಳಿಕ ಮತ್ತೇನನಱಿದಡೆಯೂ ಫಲವಿಲ್ಲ;
ಸರ್ವಕಾರಣ ಲಿಂಗವೆಂದುದಾಗಿ ಲಿಂಗವನೆ ಅಱಿದೆ;
ಅಱಿದಱಿದು ಲಿಂಗ ಸಂಗವನೆ ಮಾಡುವೆ,
ಸಂಗಸುಖದೊಳಗೋಲಾಡುವೆ, ಗುಹೇಶ್ವರ!"
ಇದು ಪ್ರಾಣಲಿಂಗ ಪೂಜೆಯ ವೈಭವ;
"ಎನ್ನ ಹೃದಯ ಕಮಲದಲ್ಲಿ ಮೂರ್ತಿಗೊಂಡಿಪ್ಪ
ಎನ್ನ ಪ್ರಾಣೇಶ್ವರಂಗೆ ಎನ್ನ ಕ್ಷಮೆಯೇ ಅಭಿಷೇಕ

ಎನ್ನ ಪರಮ ವೈರಾಗ್ಯವೆ ಪುಷ್ಪದ ಮಾಲೆ
ಎನ್ನ ಸಮಾಧಿ ಸಂಪತ್ತೇ ಗಂಧ, ಎನ್ನ ನಿರಹಂಕಾರವೇ ಅಕ್ಷತೆ
ಎನ್ನ ಸದ್ವಿವೇಕವೇ ವಸ್ತ್ರ, ಎನ್ನ ಸತ್ಯವೇ ದಿವ್ಯಾಭರಣ
ಎನ್ನ ವಿಶ್ವಾಸವೇ ಧೂಪ, ಎನ್ನ ದಿವ್ಯಜ್ಞಾನವೇ ದೀಪ
ಎನ್ನ ನಿಭ್ರಾಂತಿಯೇ ನೈವೇದ್ಯ, ಎನ್ನ ನಿರ್ವಿಷಯವೇ ತಾಂಬೂಲ
ಎನ್ನ ಮೌನವೇ ಘಂಟೆ, ಎನ್ನ ನಿರ್ವಿಕಲ್ಪನೆಯೇ ಪ್ರದಕ್ಷಿಣೆ,

ಎನ್ನ ಶುದ್ಧಿಯೇ ನಮಸ್ಕಾರ, ಎನ್ನ ಅಂತಃಕರಣದಿಂದ ಮಾಡುವ ಸೇವೆಯೇ ಉಪಚಾರಂಗಳು!

ಈ ಪರಿಯಲ್ಲಿ ಎಮ್ಮ ಗುಹೇಶ್ವರಲಿಂಗಕ್ಕೆ ಪ್ರಾಣ ಪೂಜೆಯ ಮಾಡಿ ಬಾಹ್ಯಕ್ರೀಯ ಮಱೆದೆನು ಕಾಣಾ ಸಂಗನ, ಬಸವಣ್ಣಾ!"

ಇಂಥ ಪೂಜೆಯ ಮಾಡಿ ಮಹಾಂತನಾದ ಪ್ರಭು ಈ ವಚನವನ್ನು ಉಸುರಿರುವುದು ಸಹಜವೇ ಸರಿ;

"ಇಹಲೋಕ ಪರಲೋಕ ತಾನಿದ್ದಲ್ಲಿ;
ಗಗನ ಮೇರು ಮಂದಿರ ತಾನಿದ್ದಲ್ಲಿ;
ಸಕಲ ಭುವನ ತಾನಿದ್ದಲ್ಲಿ;
ಸತ್ಯ ನಿತ್ಯ ನಿರಂಜನ ತತ್ವ ತಾನಿದ್ದಲ್ಲಿ;
ಉತ್ತರೋತ್ತರ ಛತ್ರವಳೆಯ ತಾನಿದ್ದಲ್ಲಿ;
ಚಂದ್ರ ಸೂರ್ಯ ತಾರಾ ಮಂಡಲ ತಾನಿದ್ದಲ್ಲಿ;
ಅಂತರ ಮಹದಂತರ ತಾನಿದ್ದಲ್ಲಿ;
ಸ್ವತಂತ್ರ ಗುಹೇಶ್ವರಲಿಂಗ ತಾನಿದ್ದಲ್ಲಿ!"

ಇದಕ್ಕಿಂತ ದೊಡ್ಡ ದೇವಲೋಕ, ಪರಮ ಪದವಿ, ಮುಕ್ತಿ ಮುಂತಾದವು ಇನ್ನಿಲ್ಲ, ಈ ಸ್ಥಿತಿಯನ್ನು ಬದುಕಿರುವಾಗಲೇ ಈ ಲೋಕದಲ್ಲಿರುವಾಗಲೇ ಪಡೆಯುವುದೇ ಗುರಿಗಳಲ್ಲಿ ಗುರಿ;

ಸತ್ತು ಹುಟ್ಟಿ ಕೆಟ್ಟವರೆಲ್ಲರೂ
ದೇವಲೋಕಕ್ಕೆ ಹೋದರೆಂಬ ಬಾಲಭಾಷೆಯ ಕೇಳಲಾಗದು!
ಸಾಯದ ಮುನ್ನ ಸ್ವಯವನರಿದೊಡೆ ದೇವನೊಲಿವ, ಗುಹೇಶ್ವರ!"

ಇದನ್ನು ಸಾಧಿಸಲು ಪೂಜೆ, ಆಚಾರ, ಧರ್ಮ, ವ್ರತ ನೇಮಾದಿಗಳ ಅಗತ್ಯವಿಲ್ಲ. ದಾಂಭಿಕ ಭಕ್ತಿ, ದಾಂಭಿಕ ಪೂಜೆಗಳನ್ನು ಕುರಿತ ವಚನಗಳು ಇದಾಗಲೇ ಉದಾಹೃತವಾಗಿವೆ. ಉಳಿದವುಗಳ ಸ್ವರಪವನ್ನಷ್ಟು ಪ್ರಭುವಿನ ಮಾತುಗಳಿಂದ ತಿಳಿದುಕೊಳ್ಳೋಣ:

ನೇಮ:
"ಹಾಲನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ;
ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ;
ಅಗ್ಗವಣಿಯ ನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ;
ಪುಷ್ಪದ ನೇಮವ ಹಿಡಿದಾತ ತುಂಬಿಯಾಗಿ ಹುಟ್ಟುವ!
ಇವು ಷಡ್‌ಸ್ಥಲಕ್ಕೆ ಹೊರಗು, ಭಕ್ತಿನಿಷ್ಠೆಯಿಲ್ಲದವರ ಮೆಚ್ಚ ಗುಹೇಶ್ವರ!"

ವ್ರತ–ಶೀಲ:
"ನದಿಯ ಜಲ, ಕೂಪಜಲ, ತಟಾಕ ಜಲವೆಂದು
ಹಿರಿದು ಕಿಱಿದಾದುದನಱಿಯರು ಬೇಱೆ ಮತ್ತೊಂದು
ಭಾಷೆ ವ್ರತ ನೇಮಂಗಳ ಹಿಡಿವ ಶಿಲಸಂಬಂಧಿಗಳು
ಜಾತ್ಯಂಧಕರು ನಿಮ್ಮ ನೆತ್ತ ಬಲ್ಲರು, ಗುಹೇಶ್ವರ."

ಆದುದರಿಂದ–
"ಭಕ್ತಿಯೆಂಬುದು ಯುಕ್ತಿಯೊಳಗು;
ಪೂಜೆಯೆಂಬುದು ನಿರ್ಮಾಲ್ಯಯ್ದೊಳಗು;
ಪ್ರಸದವೆಂಬುದು ಓಗರದೊಳಗು;
ಆಚಾಱುವೆಂಬುದು ಅನಾಚಾಱುದೊಳಗು;
ಧರ್ಮವೆಂಬುದು ಅಧರ್ಮ್ದೊಳಗು;
ಸುಖವೆಂಬುದು ದುಃಖದೊಳಗು;
ವ್ರತವೆಂಬುದು ವೈರಾಗ್ಯದೊಳಗು;
ನೇಮವೆಂಬುದು ಉದ್ಯೋಗದೊಳಗು;
ಆಶೇಯೆಂಬುದು ಹಿಂಸೆಯೊಳಗು;
ಇವಾವಂಗಳಲು ಇಲ್ಲದೆ, ಗುಹೇಶ್ವರಾ
ನಿಮ ಶರಣ ಸುಖಿಯಾಗಿದ್ದನು."
ಇಂಥ ಶರಣನಿಗೆ–
"ಮಠವೇಕೋ ಪರ್ವತವೇಕೋ
ಜನವೇಕೋ, ನಿರ್ಜನವೇಕೋ ಚಿತ್ತ ಸಮಾಧಾನವುಳ್ಳ ಶರಣಂಗೆ?

ಮತ್ತೆ ಹೊರಗಣ ಚಿಂತೆ ಧ್ಯಾನ ಮೌನ, ಜಪತಪವೇಕೋ
ತನ್ನ ತಾನಱಿದ ಶರಣಂಗೆ, ಗುಹೇಶ್ವರ?"
ಅಂತೆಯೇ ಅಲ್ಲಮನ ಉಪದೇಶವಿದು:
"ನಿಮ್ಮಲ್ಲಿ ನೀವು ತಿಳಿದು ನೋಡಿರೇ! ಅನ್ಯವಿಲ್ಲ ಕಾಣಿರಣ್ಣ!
ಅಱಿವು ನಿಮ್ಮಲ್ಲಿಯೇ ತದ್ಗತವಾಗಿಯದೆ!
ಅನ್ಯಭಾವವ ನೆನೆಯದೆ ತನ್ನೊಳಗೆ ತಾನೆಚ್ಚ ಱಿಬಲ್ಲಡೆ
ತನ್ನಲ್ಲಿಯೆ ತನ್ಮಯ ಗುಹೇಶ್ವರಲಿಂಗವು"
"ಇಲ್ಲವೆಯ ಮೇಲೊಂದು ಉಂಟೆಂಬ ಪರಿಭಾವ!
ಅಲ್ಲಿ ಇಲ್ಲಿ ಎನ್ನದೆ ತಾನೆ ನಿಂದಿತ್ತು ನೋಡಾ
ತನ್ನಲ್ಲಿಯ ಪ್ರಕೃತಿಯ ತಾನೆ ಹಿಂಗಿಸಲು ಅಲ್ಲಿಯೆ ಸುಜ್ಞಾನ
ಉದಯಿಸಿತ್ತು!
ಎಲ್ಲಾ ಎಡೆಯಲ್ಲಿಯು ನಿಂದ ನಿಜಪದವ, ಗುಹೇಶ್ವರ, ನಿಮ್ಮ
ಶರಣಬಲ್ಲ!"

ಯಾವಾಗಲೂ ಪರಮಾನುಭಾವದ ಪರಮೋಚ್ಚ ಶಿಖರದಲ್ಲಿಯೇ ವಿಹರಿಸುವುದಿಲ್ಲ ಪೂರ್ಣಯೋಗಿ, ಪೂರ್ಣಜ್ಞಾನಿ, ಪೂರ್ಣದರ್ಶನಿ ಪ್ರಭುದೇವ, ಶ್ರೀಸಾಮಾನ್ಯರ ಸಲುವಾಗಿ ಒಮ್ಮೊಮ್ಮೆ ಕೆಳಗಿಳಿದು ಬಂದೂ ದರ್ಶನವೀಯುತ್ತಾನೆ, ಆಗ ಆತನ ವಚನಗಳು ಸೀಯಾಳದಂತೆ ಸುಲಿದ ಬಾಳೆಯ ಹಣ್ಣಿನಂತೆ ಇಳಿಸಿದುಷ್ಣದ ಹಾಲಿನಂತೆ ಕಳೆದ ಸಿಗುರಿನ ಕಬ್ಬಿನಂತೆ

ಈ ಮನ ಮೆಚ್ಚುವ ವಿಡಂಬನೆ:
"ಸಂಸಾರವೆಂಬ ಹೆಣಬಿದ್ದಿರೆ ತಿನಬಂದ ನಾಯ ಜಗಳವ ನೋಡಿರೆ!
ನಾಯ ಜಗಳವ ನೋಡಿ ಹೆಣವೆದ್ದು ನಗುತ್ತಿದೆ!
ಗುಹೇಶ್ವರನೆಂಬ ಲಿಂಗ ಅಲ್ಲಿಲ್ಲ ಕಾಣಿರೆ!"

ತುಂಬಿದ ಬಂಡಿಯ ಚಿತ್ರ ಯಾರು ನೋಡಿಲ್ಲ? ಈ ಬಂಡಿಯ ಚಿತ್ರ ಮಾತ್ರ ಹೊಸದು:

"ಕಾಲುಗಳೆರಡು ಗಾಲಿ ಕಂಡಯ್ಯ; ದೇಹವೆಂಬುದು ತುಂಬಿದ ಬಂಡಿ
ಕಂಡಯ್ಯ;
ಬಂಡಿಯ ಹೊಡೆವವರೈವರು ಮಾನಿಸರು; ಒಬ್ಬರಿಗೊಬ್ಬರು
ಸಮವಿಲ್ಲವಯ್ಯ!
ಅದರಿಚ್ಛೆಯನರಿದು ಹೊಡೆಯದಿದ್ದರೆ ಅದರಚ್ಚು ಮುರಿಯಿತ್ತು
ಗುಹೇಶ್ವರ!"

ಈ ಐವರ ಪ್ರತಾಪ ಸಣ್ಣದಲ್ಲ;
“ಕರಿಯು ಸ್ಪರ್ಶನೇಂದ್ರಿಯದಿಂದ ಬಂಧನವಡೆದಳಿಯಿತ್ತು;
ಪತಂಗನು ರೂಪೇಂದ್ರಿಯದಿಂದ ಬಂಧನವಡೆದಳಿಯಿತ್ತು;
ಭೃಂಗನು ಗಂಧೇಂದ್ರಿಯದಿಂದ ಬಂಧನವಡೆದಳಿಯಿತ್ತು;
ಕುರಂಗನು ಶಬ್ದೇಂದ್ರಿಯದಿಂದ ಬಂಧನವಡೆದಳಿಯಿತ್ತು;
ಮತ್ಸ್ಯವು ರಸನೇಂದ್ರಿಯದಿಂದ ಬಂದನವಡೆದಳಿಯಿತ್ತು;

ಇಂತೀ ಒಂದೊಂದು ಇಂದ್ರಿಯೋದ್ರೇಕದಿಂದ ಒಂದೊಂದು ಪ್ರಾಣಿಯ ಪ್ರಳಯವಾಯಿತ್ತು!

ಪಂಚೇಂದ್ರಿಯಂಗಳ ಒಂದು ಘಟದಲ್ಲಿ ತಾಳಿದ ಮನುಷ್ಯ ಪ್ರಾಣಿಗಳಿಗೆ
ಮಱೆವೆ ಎಡೆಗೊಂಡು, ದೇಹ ಮೋಹ ಭ್ರಾಂತು ಮುಸಕಿ
ಮಾಯೆಯ ಬಾಯ ತುತ್ತಹುದು ಚೋದ್ಯವೇನು ಹೇಳಾ ಗುಹೇಶ್ವರಾ?”

ಈ ಐದು ಇಂದ್ರಿಯಗಳನ್ನು ಕಟ್ಟಿಹಾಕುವುದು ಉಪಾಯವಲ್ಲ;
“ಕಂಗಳೇಕೆ ನೋಡಬೇಡ ಎಂದೆಡೆ ಮಾಣವು;
ಶ್ರೋತ್ರಂಗಳೇಕೆ ಆಲಿಸಬೇಡ ಎಂದಡೆ ಮಾಣವು;
ಜಿಹ್ವೆಯೇಕೆ ವಾಸಿಸಬೇಡ ಎಂದೆಡೆ ಮಾಣವು;
ತ್ವಕ್ಕೇಕೆ ಸೋಂಕಬೇಡ ಎಂದಡೆ ಮಾಣವು!
ಈ ಭೇದವನಱಿದು ನುಡಿಸಲು ಸಮಧಾತುವಾಯಿತ್ತು
ಗುಹೇಶ್ವರಲಿಂಗಕ್ಕೆ ಒಲಿದ ಕಾರಣ, ಅಭಿಮಾನದ ಲಜ್ಜೆ ಬೇಸತ್ತು
ಹೋಯಿತ್ತು!”

ಲಿಂಗವನ್ನು ಒಲಿವುದೇ ಉಪಾಯ, ಇಂದ್ರಿಯಗಳ ವಶಪಡಿಸಿಕೊಳ್ಳಲು
ಕಡೆಗಣಿಸುವುದಲ್ಲ;
“ಪಂಚೇಂದ್ರಿಯ ಸಪ್ತಧಾತುವನತಿಗಳೆದಲ್ಲಿ ಫಲವೇನೋ?
ಕಾಮ ಕ್ರೋಧ ಮೋಹ ಮದ ಮತ್ಸರ ವಿಷಯವನತಿಗಳೆದಲ್ಲಿ
ಫಲವೇನೋ?
ಇವೆಲ್ಲವ ಕೊಂದ ಪಾಪ ನಿಮ್ಮ ತಾಗುವುದು, ಗುಹೇಶ್ವರ!”

ಅದುದರಿಂದ ಒಡಲುಗೊಂಡಿರುವತನಕ ಇವು ಬಿಡಲಾಗದ ಬೀಗರಿದ್ದಂತೆ, ಈ ಬೀಗರನ್ನು ಸಮಾಧಾನವಾಗಿರಿಸಕೊಂಡಿರಬೇಕು, ಮತ್ತು ಒಡಲಿಗೆ ಮಾಡುವ ಉಪಚಾರವನ್ನು ಒಡಲಿಗೂ ಮಾಡುತ್ತಿರಬೇಕು;

"ಎಣ್ಣೆ ಬೇಱೆ, ಬತ್ತಿ ಬೇಱೆ – ಎರಡೂ ಕೂಡ ಸೊಡರಾಯಿತ್ತು;
ಪುಣ್ಯ ಬೇಱೆ, ಪಾಪ ಬೇಱೆ – ಎರಡೂ ಕೂಡಿ ಒಡಲಾಯಿತ್ತು
ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು!
ಕಾಯ ಗುಣವಳಿದು, ಮಾಯಾ ಜ್ಯೋತಿ ವಾಯುವ ಕೂಡದ ಮುನ್ನ
ಭಕ್ತಿಯ ಮಾಡಬಲ್ಲಾತನೇ ದೇವ, ಗುಹೇಶ್ವರಾ!"
ಅಲ್ಲಮಪ್ರಭು ಅರಿವಿನ ಹಿಮಗಿರಿಯನ್ನೇರಿ ಭಕ್ತಿಯ ಭಾಗೀರಥಿಯಾಗಿ
ಹರಿದವರು;
"ಅದ್ವೈತವ ನುಡಿದು ಅಹಂಕಾರಿಯಾಧೆನಯ್ಯ!
ಬ್ರಹ್ಮವ ನುಡಿದು ಭ್ರಮಿತನಾದೆನಯ್ಯ!
ಶೂನ್ಯವ ನುಡಿದು ಸುಖ ದುಃಖಕ್ಕೆ ಗುರಿಯಾದೆನಯ್ಯ!
ಗುಹೇಶ್ವರ ನಿಮ್ಮ ಶರಣ ಸಂಗನ ಬಸವಣ್ಣನ ಸಾನ್ನಿಧ್ಯದಿಂದಾನು
ಸದಭಕ್ತನಾದೆನಯ್ಯ!"

ಅಂತೆಯೇ ಈ ಸೂತ್ರವನ್ನು ನಮಗಿತ್ತರು:
"ಕಾಯಕ್ಕೆ ಮಜ್ಜನ ಪ್ರಾಣಕ್ಕೆ ಓಗರ–
ಇವ ಮಾಡಲೇಬೇಕು
ಸುಳಿವ ಸುಳುಹುಳ್ಳನ್ನಕ್ಕ ಮಾಡಲೇಬೇಕು
ಗುಹೇಶ್ವರನೆಂಬ ಆತ್ಮವನುಳ್ಳನ್ನಕ್ಕರ ಭಕ್ತಿಯ ಮಾಡಲೇಬೇಕು"
ಇದೆಷ್ಟು ಸುಲಭವಾದ ಸೂತ್ರ:
"ಮುಂದು ಜಾವದಲೆದ್ದು, ಲಿಂಗದಂಘ್ರಿಯ ಮುಟ್ಟಿ
ಸುಪ್ರಭಾತ ಸಮಯದಲ್ಲಿ ಶಿವಭಕ್ತರ ಮುಖವ ನೋಡುವುದು!
ಹುಟ್ಟಿದುದಕ್ಕಿದೆ ಸಫಲ ನೋಡಾ!
ಸತ್ಯವಚನವಿಂತೆಂದುದು, ಇವಿಲ್ಲದವರ ನಾನೊಲ್ಲೆ"

ಇಷ್ಟು ಸುಲಭವಾದ ಸಾಧನೆಯನ್ನು ಬಿಟ್ಟು ವೇದಾಗಮ ಪುರಾಣ ಶಾಸ್ತ್ರಗಳ ಬೆನ್ನು ಹತ್ತುವುದು ವಿಫಲಾಯಾಸ. ವ್ಯರ್ಥ ಪರಿಶ್ರಮ;

"ಆಗಮ ಪುರುಷರಿರಾ ನಿಮ್ಮ ಆಗಮ ವಾಯವಾಗಿ ಹೋಯಿತ್ತಲ್ಲಾ!

ವಿದ್ಯಾ ಪುರುಷರಿರಾ ನಿಮ್ಮ ವಿದ್ಯೆ ಅವಿದ್ಯೆಯಾಗಿ ಹೋದಲ್ಲಿ ಬಱೆ ಮುಖರಾಗಿದದಿರಲ್ಲಾ!

ವೇದ ಪುರುಷರಿರಾ ನಿಮ್ಮ ವೇದ ಹೊಲಬುದಪ್ಪಿ ಹೋದಲ್ಲಿ ವೇದವೆ ದೈವವೆಂದು ಕೆಟ್ಟಿರಲ್ಲಾ!

ಪುರಾಣ ಪುರುಷರಿರಾ, ನಿಮ್ಮ ಪುರಾಣ ವಿಚಾರಭ್ರಷ್ಟವಾಗಿ ಹೋದಲ್ಲಿ ನೀವು ಒಡನೆ ಭ್ರಷ್ಟರಾಗಿ ಹೋದಿರಲ್ಲಾ!

ಶಾಸ್ತ್ರ ಪುರುಷರಿರಾ, ನಿಮ್ಮ ಶಾಸ್ತ್ರ ಮಹಾಪಥದ ಹೊನಲಲ್ಲಿ ಹೋದಲ್ಲಿ
ಭಕ್ತದೇಹಿಕ ದೇವನೆಂದಱಿಯದೆ ಕೆಟ್ಟಿರಲ್ಲಾ!
ಯತ್ರಜೀವಸ್ತತ್ರ ಮಾಹೇಶ್ವರನೆಂದು ಹೇಳಿತ್ತು ಮುನ್ನ
ಅಂತು ಭಕ್ತ ನಿತ್ಯ ಸನ್ನಿಹಿತ, ಗುಹೇಶ್ವರ ನಿಮ್ಮ ಶರಣ!"

ಭಕ್ತಿ ಸುಲಭವಾದರೂ ಭಕ್ತನಾಗುವುದು ಸುಲಭವಲ್ಲ;
"ಭಕ್ತ ಭಕ್ತನೆಂಬರು!
ಪೃಥ್ವಿಯ ಪೂರ್ವಾಶ್ರಯವ ಕಳೆಯದನ್ನಕ್ಕ
ಅಪ್ಪುವಿನ ಪೂರ್ವಾಶ್ರಯವ ಕಳೆಯದನ್ನಕ್ಕ
ತೇಜದ ಪೂರ್ವಾಶ್ರಯವ ಕಳೆಯದನ್ನಕ್ಕ
ವಾಯುವಿನ ಪೂರ್ವಾಶ್ರಯವ ಕಳೆಯದನ್ನಕ್ಕ
ಆಕಾಶದ ಪೂರ್ವಾಶ್ರಯವ ಕಳೆಯದನ್ನಕ್ಕ
ಸೋಮಸೂರ್ಯರ ಪೂರ್ವಾಶ್ರಯವ ಕಳೆದಯನ್ನಕ್ಕ
ಆತ್ಮನ ಪೂರ್ವಾಶ್ರಯವ ಕಳೆಯದನ್ನಕ್ಕ

ಭಕ್ತರೆಂದು ಲಿಂಗನ ಪೂಜಿಸುವವರ ಕಂಡು ನಾನು ಬೆಱಗಾದೆನು ಗುಹೇಶ್ವರ!"

ಶರಣರ ಭಕ್ತಿ ಕಲ್ಪನೆಯಲ್ಲಿ ಜ್ಞಾನ–ಕರ್ಮ–ಪ್ರೇಮಗಳ ಸಂಗಮವಿದೆ ಈ ವಿವಿಧ ಭಕ್ತಿಯನ್ನು ಸಾಧಿಸುವುದು ಸುಲಭವಲ್ಲ, ಅತಿಬೌದ್ಧಿಕತೆಯ ಅರಕೆಯನ್ನು ಅರಿತಿದ್ದ ಅಲ್ಲಮಪ್ರಭು,

"ವೇದ ವೇಧಿಸಲಱಿಯದೆ ಕೆಟ್ಟುವು; ಶಾಸ್ತ್ರ ಸಾಧಿಸಲಱಿಯದೆ ಕೆಟ್ಟುವು;
ಪುರಾಣ ಪೂರೈಸಲರಿಯದೆ ಕೆಟ್ಟುವು; ಹಿರಿಯರು ತಮ್ಮ ತಾವಱಿಯದೆ
ಕೆಟ್ಟರು!
ತಮ್ಮ ಬುದ್ಧಿ ತಮ್ಮನೆ ತಿಂದಿತ್ತು! ನಿಮ್ಮನೆತ್ತ ಬಲ್ಲರು, ಗುಹೇಶ್ವರಾ!"

ಇಂತೆಯೇ ಬಲುಮೆಯ ಅತಿಭಾವುಕತೆಯೂ ವರ್ಜ್ಯ;
"ಒತ್ತಿ ಹಣ್ಣಮಾಡಿದಡೆ ಅದೆತ್ತಣ ರುಚಿಯಪ್ಪುದೋ?
ಕಾಮಿಸಿ, ಕಲ್ಪಿಸಿ, ಭಾವಿಸಿದಡೆ ಅದೇ ಭಂಗ!
ಭಾವಿಸುವ ಭಾವನೆಗಿಂತ ಸಾವುದೇ ಲೇಸು, ಗುಹೇಶ್ವರ!"

ಈ ಎರಡೂ ಅತಿಗಳನ್ನುಳಿದು ಹಿತವಾದ ಭಕ್ತಿಯಲ್ಲಿ ಪರಮಗಮ್ಯವನ್ನು ಪಡೆದ ಪ್ರಭುದೇವ;

"ಮನದ ಕೊನೆಯ ಮೊನೆಯ ಮೇಲೆ ನೆನೆದ ನೆನಹು
ಜನನ ಮರಣವ ನಿಲ್ಲಿಸಿತ್ತು;
ಜ್ಞಾನ ಜ್ಯೋತಿಯ ಉದಯ ಭಾನುಕೋಟಿಯ ಮೀಱೆ
ಸ್ವಾನುಭಾವದ ಉದಯ ಜ್ಞಾನಶೂನ್ಯದಲಡಗಿದ ಘನವನೇನೆಂಬೆ,
ಗುಹೇಶ್ವರಾ!"

ಅಲ್ಲಮಪ್ರಭುವೆ ಏನೆಂಬೆನೆಂದಿರುವಾಗ ನಾವೇನೆಂದು ಹೇಳಬಲ್ಲೆವು ಈ ಸ್ಥಿತಿಯನ್ನು? ಅದು ಅನಭವೈಕವೇದ್ಯವೆಂದು ಹೇಳಿ ಪಾರಾಗಬಹುದು ಅಷ್ಟೆ!

ಎಲ್ಲ ಯೋಗಗಳನ್ನು ಕರತಲಾಮಲಕ ಮಾಡಿಕೊಂಡಿದ್ದ ಪ್ರಭುದೇವ ಮೇಲ್ಕಾಣಿಸಿದ ಭಕ್ತಿಪರಿಕಲ್ಪನೆಯಿಂದ ಪ್ರಭಾವಿತನಾಗಿಯೋ ಏನೋ ನವೀನ ಯೋಗವೊಂದನ್ನು ನಮ್ಮ ಮುಂದಿರಿಸಿ ಹೋಗಿದ್ದಾನೆ:

"ಅಷ್ಟಾಂಗಯೋಗದಲ್ಲಿ ಯಮನಿಯಮಾಸನ ಪ್ರಾಣಾಯಾಮ
ಪ್ರತ್ಯಾಹಾರ ಧ್ಯಾನಧಾರಣ ಸಮಾಧಿಯೆಂದು
ಎರಡು ಯೋಗ ಉಂಟು ಅಲ್ಲಿ;
ಅಳಿದು ಕೂಡುವುದೊಂದು ಯೋಗ
ಅಳಿಯದೇ ಕೂಡುವುದೊಂದು ಯೋಗ

ಈ ಎರಡು ಯೋಗದೊಳಗೆ ಅಳಿಯದೆ ಕೂಡುವ ಯೋಗವರಿದು ಕಾಣಾ, ಗುಹೇಶ್ವರಾ!"

ಅಲ್ಲಮನ ಆಲೋಚನೆಗಳೇ ಆಶ್ಚರ್ಯಕರವಾದವುಗಳು, ಕೆಲವನ್ನು ನೋಡೋಣ. ಇದು ಭವಿತನವನ್ನು ಕುರಿತ ವಿಚಾರ;

"ಭವಿಯ ಕಳೆದೆವೆಂಬ ಮರುಳು ಜನಂಗಳು ನೀವು ಕೇಳಿರೆ!
ಭವಿಯಲ್ಲವೇ ನಿಮ್ಮ ತನುಮನಗುಣಾದಿಗಳು?
ಭವಿಯಲ್ಲವೇ ನಿಮ್ಮ ಪ್ರಾಣಗುಣಾದಿಗಳು?
ಇವರೆಲ್ಲರೂ ಭವಿಗಳ ಹಿಡಿದು ಭವಭಾರಿಗಳಾದರು;
ನಾನು ಭವಿಯ ಪೂಜಿಸಿ ಭವಂನಾಸಿತಯಾದೆನು, ಗುಹೇಶ್ವರಾ!

ಇದು ಮದ್ಯಮಾಂಸಗಳ ಮೀಮಾಂಸೆ;
"ಮದ್ಯಮಾಂಸಗಳ ಮುಟ್ಟೆನೆಂದೆಂಬಿರಿ. ನೀವು ಕೇಳಿರೆ;
ಮದ್ಯವಲ್ಲವೇನು ಅಷ್ಟಮದಂಗಳು?
ಮಾಂಸವಲ್ಲವೇನು ಸಂಸಾರಸಂಗವು?
ಈ ಉಭಯವನತಿಳೆದಾತನೆ ಗುಹೇಶ್ವರಲಿಂಗದಲ್ಲಿ ಲಿಂಗೈಕ್ಯನು."

ಇದು ತೀರ ಸಾಮನ್ಯವಾದ, ಆದರೂ ನಾವು ಗಮನಿಸದ ಮೈಥುನ ಕ್ರಿಯೆ ;
"ಬಾಯೆ ಭಗವಾಗಿ, ಕೈಯೆ ಇಂದ್ರಿಯವಾಗಿ,
ಹಾಕುವ ತುತ್ತುಗಳೆಲ್ಲಾ ಬಿಂದು ಕಾಣಿರೋ!
ಪ್ರಥಮ ವಿಷಯವಿಂತಿರಲು, ಗುಹೇಶ್ವರ, ಏಕೋ ಅದ್ವೈತ?"
ಇದು ಹುಸಿ ಲಿಂಗಧಾರಿಗಳ ಗೇಲಿ:

"ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು? ಹಸಿವು ಹೋಹುದೆ?
ಅಂಗದ ಮೇಲೆ ಲಿಂಗಸ್ವಾಯತವಾದರೇನು? ಭಕ್ತನಾಗಬಲ್ಲನೆ?
ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಿದಡೆ ಆ ಕಲ್ಲು ಲಿಂಗವೆ?
ಆ ಮೆಳೆ ಭಕ್ತನೆ? ಇಟ್ಟಾತ ಗುರುವೆ?
ಇಂತಪ್ಪವರ ಕಂಡರೆ ನಾಚುವೆನಯ್ಯ ಗುಹೇಶ್ವರ!"

ಅಹಿಂಸೆಯ ಅಂತರಾರ್ಥ:
"ಜೀವನ ತಪ್ಪಿಸಿ ಜೀವಿಸಬಾರದಾರಿಗೆಯೂ
ಅಹಿಂಸಾ ಪರಮೋಧರ್ಮ ಎಂಬ ಶ್ರಾವಕರ ನಾನಾರನೂ ಕಾಣೆ!
ಪೃಥ್ವೀ ಬೀಜಂ ತಥಾ ಮಾಂಸಂ ಅಪ್‌ದ್ರವ್ಯಂ ಭಕ್ತಯೇತ್
ಇಂತೆಂದುದಾಗಿ ಲಿಂಗಾರ್ಪಿತ ಶುದ್ಧ; ಮಿಕ್ಕುದು ಜೀವಮಯ ಗುಹೇಶ್ವರ!"
ನಿರಾಳಲಿಂಗದ ನಿಜ;
"ಒಡಲೊಳಗಿದ್ದು, ಒಡಲಿಂಗಾಧಾರವಾಗಿ, ಒಡಲ ಸೋಂಕದೆ,
ಒಡಲ ಬೆಳಗುವ ಪರಿಯ ನೋಡಾ!
ಬೆಳಗಿಂಗೆ ಬೆಳಗಾಗಿ ಬೆಳಗುವ ಪರಿಯ ನೋಡಾ!
ಪರಮ ಚೈತನ್ಯ ನಿರಾಳ ಗುಹೇಶ್ವರ ಲಿಂಗವು ನೋಡಾ!"
ಇದು ಶೀಲದ ಸ್ವರೂಪ ದರ್ಶನ:

"ಸುಖವನಱಿಯದ ಹೆಣ್ಣು ಸೂಳೆಯಾದಳು;
ಲಿಂಗವನಱಿಯದಾತ ಶೀಲವಂತನಾದ !
ಸುಖವಿಲ್ಲ ಸೂಳೆಗೆ, ಪಥವಿಲ್ಲ ಶೀಲಕ್ಕೆ
ಮಾಡಲಾಗದು ನೇಮವ, ನೋಡಲಾಗದು ಶೀಲವ,
ಸತ್ಯ ಸಹಜವೇ ಸತ್‌ಶೀಲ ಗುಹೇಶ್ವರನಱಿಯಬಲ್ಲವಂಗೆ"
ಇದು ಆಕಾರ ನಿರಾಕಾರಗಳ ವ್ಯಾಖ್ಯೆ:

"ಆಕಾರ ನಿರಾಕಾರವೆಂಬೆರಡೂ ಸ್ವರೂಪಂಗಳು ; ಒಂದು ಆಹ್ವಾನ, ಒಂದು ವಿಸರ್ಜನ!

ಒಂದು ವ್ಯಾಕುಳ, ಒಂದು ನಿರಾಕುಳ
ಉಭಯಕುಳರಹಿತ, ಗುಹೇಶ್ವರ, ನಿಮ್ಮ ಶರಣ!"

ಇನ್ನೂ ಉದಾಹರಿಸಬಹುದು ಇಂಥ ನವೋನವ ವಿಚಾರಗಳನ್ನು. ಈಗ ಅಲ್ಲಮನ ವಾಕ್ಯಮಾಣಿಕ್ಯಗಳನ್ನಷ್ಟು ನೋಡೋಣ. ಈ ವಾಕ್ಯಗಳ ಅರ್ಥ ದೀಪ್ತಿ ಅಪೂರ್ವ;

"ಬಯಲ ಬಿತ್ತಲು ಇಲ್ಲ, ಬೆಳೆಯಲೂ ಇಲ್ಲ. ಒಕ್ಕಲೂ ಇಲ್ಲ, ತೂರಲೂ ಇಲ್ಲ."
"ಹೊರಗನೆ ಕೊಯ್ದು, ಹೊರಗನೆ ಪೂಜಿಸಿ, ಹೊರಗಾಗಿ ಹೋಯಿತ್ತು ತ್ರಿಜಗವೆಲ್ಲ!"
"ತಂದೆ ತಾಯಿಯಿಲ್ಲದ ಕಂದಾ, ನಿನ್ನಿಂದ ನೀನೇ ಹುಟ್ಟಿ ಬೆಳೆದೆಯಲ್ಲ!"

"ಒಂದು ಇಲ್ಲದ ಬಿಂದುವ, ತಂದೆಯಿಲ್ಲದ ಕಂದನ, ಮಾತೆಯಿಲ್ಲದ ಜಾತನ, ಗಮನವಿಲ್ಲದ ಗಮ್ಯನ"
"ತನ್ನ ತಾನರಿದವಂಗೆ ಇದಿರೆಂಬುದಿಲ್ಲ"
"ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು"
"ಒಲವಿನ ಕೂಟಕ್ಕೆ ಹಾಸಿನ ಹಂಗೇಕೆ"

"ರೂಪನೆ ಕಂಡರು, ನಿರೂಪವನೆ ಕಾಣರು; ಆಚಾರವನೆ ಕಂಡರು, ವಿಚಾರವನೆ ಕಾಣರು;
ಗುಹೇಶ್ವರಾ ನಿಮ್ಮ ಕುರುಹನೇ ಕಂಡರು, ಕೂಡಲರಿಯದೆ ಕೆಟ್ಟರು!"
"ಹೊನ್ನ ತೂಗಿದ ತ್ರಾಸು ಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ?"

"ಕೊಟ್ಟ ಕುದುರೆಯನೇರದೆ ಮತ್ತೊಂದು ಬಯಸುವವರು ವೀರರೂ
ಅಲ್ಲ ಧೀರರೂ ಅಲ್ಲ"
"ನಾಮವಿಲ್ಲದ ದೇವರಿಗೆ ನೇಮವೆಲ್ಲಿಯದೊ?"
"ಅರಿಯದಿರೆರಡು ಅರಿದಡೊಂದೆ"
"ಕ್ಷಣವಾದಡೆಯೂ ಆಗಲಿ, ನಿಜದ ನೆನಹೇ ಸಾಕು"
"ಆಶೆಯೆಂಬ ಕೂಸನೆತ್ತಲು ರೋಷವೆಂಬ ತಾಯಿ ಮುಂದಿಪ್ಪಳಯ್ಯ!"
"ಮಾತೆಯೆಂಬುದು ಜ್ಯೋತಿರ್ಲಿಂಗ"
"ಬೆಟ್ಟಕ್ಕೆ ಚಳಿಯಾದಡೆ ಏನ ಹೊದ್ದಿಸುವಿರಯ್ಯಾ?"
ಬಯಲು ಬತ್ತಲೆ ಇರ್ದರೆ ಏನ ಉಡಿಸುವಿರಯ್ಯಾ?
"ಅಱಿದಱಿದು ಅರಿವು ಬಂಜೆಯಾಯಿತ್ತು"
"ಅಮರತೆಯ ಹೊಲಬನರಿಯದೆ ಜಗವೆಲ್ಲ ಬರಡಾಯ್ತು"
"ಸಾಸವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖನೋಡಾ!"
"ಅಗ್ನಿಗೆ ತಂಪುಂಟೆ? ವಿಷಕ್ಕೆ ರುಚಿಯುಂಟೆ!"
"ಓಡಿನೊಳಗುಂಟೆ ಕನ್ನಡಿಯ ನೋಟ?"
"ಕಾಡುಗಿಚ್ಚಿನ ಕೈಯಲ್ಲಿ ಕರಡವ ಕೋಯಿಸುವಂತೆ"
"ತಲೆಯಲಟ್ಟುಂಬುದ ಒಲೆಯಲಟ್ಟುಂಬರು"
"ಹುಟ್ಟಿದ ನೆಲೆಯ ತೃಷ್ಣೆ ಬಿಡದವರಿಗೆ ಲಿಂಗಾನುಭವದ ಮಾತೇಕೋ?"
"ಇಲ್ಲದ ಇಲ್ಲವೆಯೆಲ್ಲಿಂದ ಬಪ್ಪುದೋ?"
"ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ ನುಡಿಯಲಾಗದು"
"ಅಱಿಯಬಾರದ ಘನವನಱಿದವರು ಅಱಿಯದಂತಿಪ್ಪರು"
"ಕಂಗಳ ಕರುಳ ಕೊಯ್ದವರ ಮನದ ತಿರುಳ ಹುರಿದವರ"
ಮಾತಿನ ಮೊದಲ ಬಲ್ಲವರ ನೆನೆಗೊಮ್ಮೆ ತೋರಾ
"ಅಪರಿಮಿತ ಕತ್ತಲೆಯೊಳಗೆ ವಿಪರೀತದ ಬೆಳಗನಿಕ್ಕಿದವರಾರೊ?"

ಒಂದೊಂದು ವಾಕ್ಯವೂ ಒಂದೊಂದು ಅರಿವಿನ ಅಭ್ರದ ಕೋಲ್ಮಿಂಚು, ಒಟ್ಟಿನಲ್ಲಿ ಹೇಳುವುದಾದರೆ ಅಲ್ಲಮಪ್ರಭು ಅಲ್ಲಮಪ್ರಭುವೇ ಇನ್ನಾರೊಡನೆಯೂ ಹೋಲಿಸಲಾಗದು ಅವರನ್ನು.

# ಅನುಬಂಧ – ೧

ಪ್ರಭುವಿನ ಪ್ರಾರಂಭಿಕ ಜೀವನದ ಬಗ್ಗೆ ಬರೆದ ಕವಿಗಳಲ್ಲಿ ಒಮ್ಮತವಿಲ್ಲದ ಕಾರಣ ಆಸಕ್ತರು ಮಾತ್ರ ಇದನ್ನೋದಲೆಂದು ಅನುಬಂಧ–೧ರಲ್ಲಿ ಕೊಟ್ಟಿದೆ. ಉಳಿದವರು ಅಲ್ಲಮಪ್ರಭುವಿನ ಅನುಭಾವ ಪ್ರಪಂಚಕ್ಕೆ ನೇರವಾಗಿ ಪಯಣಿಸಬಹುದು.

ಮೊದಲು ಪ್ರಭುದೇವರ ಬಗ್ಗೆ ಬರೆದವ ಹರಿಹರ. ಅವನು ಚಿತ್ರಿಸಿದ್ದನ್ನು ಮೊದಲು ನೋಡೋಣ. ಅವನ ಪ್ರಕಾರ ಬಳ್ಳಿಗಾವೆಯ ನಾಗವಾಸ ಪತಿಯೆನಿಸಿದ್ದ ಸಲ್ಲಲಿತನಾಯಕನ ಸತಿಯ ಬಸುರಿನಿಂದ ಬರುತ್ತಾನೆ ಪ್ರಭು ದೇವ, 'ಶಿವಪದಕ್ಕೆ ಪೊಸ ತೊಡವೆನಿಸಿ, ಭಕ್ತಿವಾರಿಧಿಗೆ ವಿಧುವೆನಿಸಿ' ಬೆಳೆಯುತ್ತಾನೆ. ಎಳೆಯನಾಗಿದ್ದಾಗಲೇ ಮೃದಂಗ ವಾದನ ಕಲೆ ಅವನಿಗೆ ಕರತಲಾಮಲಕವಾಗುತ್ತದೆ. ಕಲೆಯು ಪರಿಣತಿ ಪಡೆಯುವಷ್ಟರಲ್ಲಿ ಅವನಲ್ಲಿ ನವಯೌವನೋದಯವಾಗುತ್ತದೆ. ಜನ್ಮತಃ ಸ್ಫುರದ್ರೂಪಿಯಾಗಿದ್ದ ಅವನ ಚೆಲುವು ಇಮ್ಮಡಿಸುತ್ತದೆ.

ಎಂದಿನಂತೆ ಒಂದು ದಿನ ಅವನು ಆ ಊರಿನ ಗೊಗ್ಗೇಶ್ವರನ ಗುಡಿಗೆ ಹೋಗಿ ತನ್ನ ಮೃದಂಗ ಸೇವೆಯನ್ನು ಸಲ್ಲಿಸುತ್ತಿರುತ್ತಾನೆ, ಆಗ ಆ ಪುರದ ಧನದತ್ತನ ಮಗಳು ಕಾಮಲತೆ ರೂಪಿನೂಳು ರತಿದೇವಿಗೆ ಮಿಗಿಲೆನಿಸಿದ್ದ ಕಾಮಲತೆ ಏರುಂಜವ್ವನದ ಕಡುಗೆಡಗಿ ಕಾಮಲತೆ ಭೂತೇಶ ವಂದನೆಯ ನೇಮದಂತೆ ಅಲ್ಲಿಗೆ ಬರುತ್ತಾಳೆ. ಇಬ್ಬರ ದೃಷ್ಟಿಗಳೂ ಸಂಗಮಿಸಿ, ಅನುರಾಗ ಅಂಕುರಿಸಿ. ಮನಮನೆ ಬೆರೆತು ಮದುವೆಯಾಗುತ್ತಾರೆ, ಕೆಲದಿನ ಸೀಮಾತೀತವಾದ ಸುಖವನ್ನು ಅನುಭವಿಸುತ್ತಾರೆ.

ಆದರೆ ಕಾಲದ ಕ್ರೂರಲೀಲೆ ಅವರ ಸುಖಕ್ಕೆ ತೆರೆಯೆಳೆಯುತ್ತದೆ. ಇದ್ದಕ್ಕಿದ್ದಂತೆ ಮಹಾಜ್ವರ ಪೀಡಿತಳಾಗಿ ಕಾಮಲತೆ ಕಾಲವಶಳಾಗುತ್ತಾಳೆ. ಅಲ್ಲಮನ ಮೇಲೆ ಸಿಡಿಲೆರಗಿದಂತಾಗುತ್ತದೆ. ಅಪಾರವಾದ ದುಃಖ ದುಮ್ಮಾನಗಳ ದಳ್ಳುರಿಯಲ್ಲಿ ಬೆಂದು ಮರುಳನಂತೆ ಮನಬಂದ ಕಡೆ ತಿರುಗತೊಡಗುತ್ತಾನೆ. ತಿರುಗುತ್ತ ಒಂದು ತೋಟಕ್ಕೆ ಬರುತ್ತಾನೆ.

> "ಹೊರಗಣ ಪುರದ ಕಣಗಿಲೆಯ ತೋಟಕ್ಕೈತಂದು
> ಕುಳ್ಳಿರ್ದು ಚಿಂತೆಯೊಳಗಾಳುತುಂ ಮುಳುಗುತುಂ
> ತಳ್ಳಂಕದಿಂದ ಕೆಲನಂ ನೋಡಿ ಸುಯ್ಯುತುಂ
> ತಲೆವಾಗಿ ಕಣ್ಣ ನೀರ್ ಕರೆಯೆ ಚಿಂತಿಸುತಂದು
> ನೆಲನಂ ಬರೆಯೆ ಬರೆದ ಹಜ್ಜೆಯೊಳಗೊಂದು"

ಮಿನುಮಿನುಗಿ ಹೊಳೆಹೊಳೆದು ನಸುವೆಳಗುದೋರುತುಂ ಅವನ ಬೆರಗಿಗೆ ಗರಿ ಮೂಡಿಸುತ್ತದೆ. ತಾನು ಕೆದರಿದ ನೆಲವನ್ನು ನೆಟ್ಟ ನೋಟದಿಂದ ದೃಷ್ಟಿಸುತ್ತಾನವನು, ಅವನ ಅಚ್ಚರಿ ಇನ್ನೂ ಹೆಚ್ಚುತ್ತದೆ, ಅಲ್ಲಿ ಅವನು ಕಂಡುದಿದು;

"ಹರಹರ ಶಿಜ್ಞಾನದಂಕುರಂ ತೋರ್ಪಂತೆ
ಪರಮಮುಕ್ತ್ಯಂಗನೆಯ ಕಳಶ ಕುಚ ತೋರ್ಪಂತೆ
ಹೊನ್ನ ಕಳಶ ತೋರಲತಿ ಕೌತುಕಂಬಟ್ಟು
ತನ್ನೊಳಾವನಿತನಗೆದಗೆಯಲಾರದೆ ಬಿಟ್ಟು"

ಹರಿದು ಬಂದಾಪುರದ ನೃಪತಿಗರುಪಲ್ "ಅರಸನೂ ಬೆರಗಾಗಿ ಆಸ್ಥಳಕ್ಕೆ ಬರುತ್ತಾನೆ. ಅವನ ಕುತೂಹಲಕ್ಕೂ ಕಚಗುಳಿಯಿಟ್ಟಂತಾಗಿ ಪರಿ ಜನಕ್ಕೆ ನೆಲವನ್ನಗೆಯಲು ಆಜ್ಞೆ ನೀಡುತ್ತಾನೆ. ಕೆಳುವುದೇನು ಸಾಸಿರ ಕೈಗಳು, ಸಾಸಿರ ಹಾಗೆ ಗುದ್ದಲಿಗಳು ಅಗೆತಕ್ಕೆ ತೊಡಗುತ್ತವೆ. ವೃಷಭಾಂಕಿತ ಶಿವಾಲಯವೊಂದು ಬಯಲಿಗೆ ಬರುತ್ತದೆ. ಅರಸನಿಗೆ ರೋಮಾಂಚನ. ಆ ಶಿವಾಲಯವನ್ನು ಪ್ರವೇಶಿಸಿ ಅಲ್ಲಿರುವುದೇನೆಂಬುದನ್ನು ತಿಳಿದು ಬರುವ ಸಾಹಸಿಯನ್ನು ಅರಸುತ್ತಾನೆ ಅರಸ. ಒಬ್ಬರೂ ಮುಂದೆ ಬರುವುದಿಲ್ಲ. ಆ ಸಾಹಸಕಾರ್ಯವನ್ನು ಸ್ವೀಕರಿಸುವುದಿಲ್ಲ. ಕಾಮಲತೆ ಅಳಿದ ಮೇಲೆ ಬದುಕಿನಲ್ಲಿ ಆಸಕ್ತಿಯನ್ನೇ ಕಳೆದುಕೊಂಡಿದ್ದ ಅಲ್ಲಮ ಇನ್ನೇನು ಸತಿ ಕಾಮಲತೆಯಿಲ್ಲ ಇನ್ನೇಕೆ ದೇಹದ ದುರಾಶೆ ತೆಗೆತೆಗೆಯೆಂದು ಶಿವಾಲಯ ಪ್ರವೇಶಕ್ಕೆ ಸಿದ್ಧನಾಗುತ್ತಾನೆ. ಪುರಜನರೂ ಪರಿಜನರೂ ಬೆಕ್ಕಸ ಬೆರಗಾಗುತ್ತಾರೆ.

ಭಸಿತಧರಿಸಿ, ಭೀತಿಯಿಲ್ಲದೆ, ಶಿವನೆ ಶರಣೆನ್ನುತ್ತ ಅಲ್ಲಮನು ಮುಚ್ಚಿದ್ದ ಕದವನ್ನು ಭೋಂಕನೆ ತೆರೆದು ಶಿವಾಲಯದ ಒಳಹೊಕ್ಕು ನಿಲ್ಲುತ್ತಾನೆ, ಮುಂದೆ ಮಹಾಲಿಂಗವೊಂದು ಕಾಣುತ್ತದೆ, ಅದಕ್ಕೆ ಎರಗಿ ಮಗ್ಗುಲಿಗೆ ತಿರುಗುತ್ತಾನೆ, ಅಲ್ಲಿ ಅವನು ಕಂಡ ನೋಟ ಅವನ ಮೈ ಜುಮ್ಮೆನ್ನಿಸುತ್ತದೆ. ಎಂಥ ದೇದೀಪ್ಯಮಾನ ದಿವ್ಯಮೂರ್ತಿಯದು ಸಮಾಧಿಸ್ಥ ಶಿವಮೂರ್ತಿ!

"ತೊಲಗದಲುಗದ ಲಿಂಗ ನಿಜಸಿದ್ಧನೊಪ್ಪಿರಲು
ಬತ್ತಿಯಿಲ್ಲದ, ಎಣ್ಣೆಯಿಲ್ಲದ ದೀಪ್ತಿ ಬೆಳಬೆಳಗೆ
ಸುತ್ತಲುಂ ಶಿವಕಳೆಯ ತಂಬೆಳಗು ಬೆಳಬೆಳಗೆ
ತಿಳಿದ ನಿರ್ಮಲ ತತ್ವದಚ್ಚ ಬೆಳಗಿನೊಳಂದು
ತಳತಳಸಿ ನಳನಳಿಸಿ ಬೆಳೆದ ಬೆಳಗಿನೊಳಂದು
ಕೀಲಿಸಿದ ಪದ್ಮಾಸನಂ ಪುಲಿದೊವಲ್ ತನುವ
ನಾಲಿಂಗಿಸಿದ ಭಸಿತಮಳಸೂತ್ರಂ ಮೆರೆವ

ಬೆಳಪ ಕಣ್ ಸುಲಿಪಲ್ಲು ಹೊಲೆವ ಮುಖಮಂಡಲಂ
ಇಳಿದ ಜಡೆ ರುದ್ರಾಕ್ಷಿ ಮಾಲೆ ಫಣಿಕುಂಡಲಂ
.....................................................................
ಅರಳ್ದ ನಯನದ್ವಯಂ ವಿಕಸಿತ ಕುಸುಮಾಗೆ
ಕರತಳದ ಶಿವಲಿಂಗವಮ್ಮತರಸ ಫಲಮಾಗೆ
ಕಲ್ಪತರುವಿನ ತೆರದೊಳಿರ್ದನಾ ಶಿವಯೋಗಿ!"

ಪುಲಕಿತನಾದ ಪ್ರಭುದೇವ ಅಲ್ಲಮ ಪ್ರಭುದೇವ. ಹರುಷ ಮೀರಿ, ಸಾತ್ವಿಕರಸ ತಲೆದೋರಿ, ಸನ್ನಿಧಿ ಗುಣ ಶಿವಜ್ಞಾನಮಂ ಪುಟ್ಟಿಸಲ್, ತನ್ನೊಳಗೆ ಶಿವನ ತತ್ವದ ಘನಂವೇಷ್ಟಿಸಲ್ ಪೊಗಳಲ್ಕೆ ತೊಡಗಿದಂ ಶಿವ ಸಿದ್ಧಯೋಗಿಯಂ! ಈ ಹೊಗಳಿಕೆಯಲ್ಲಿ ಅಲ್ಲಮನ ಹೃದಯಪಲ್ಲಟವೂ ಮನೋಜ್ಞವಾಗಿ ಮೂಡಿಬಂದಿದೆ;

"ದೇವ ನಿರ್ಮಳ ನಿತ್ಯ ನಿರುಪಮ ಮಹಾಯೋಗಿ
ದೇವ ನಿಷ್ಕಳ ನಿಜಾನಂದ ಪರಶಿವಯೋಗಿ
ಶಿವನನೊಚ್ಚಮಾಗಿ ಕೈಕೊಂಡ ಮೃಡಯೋಗಿ
ಭವನ ಮೂರ್ತಿಗೆ ಸೋಲ್ತು ಕಣ್ಣಿಟ್ಟಚಲಯೋಗಿ
ನೋಟದೊಳು ಲಿಂಗಮಂ ಸೆರೆಗೈಯ್ದ ಶಿವಯೋಗಿ
ಕೂಟದೊಳ್ ಕಣ್ಣೆ ತನುವಾದ ಬೆಡಗಿನ ಯೋಗಿ!"

ಅನಿಮಿಷ ಶಿವಯೋಗಿಯ ಶರೀರವೆಲ್ಲ ಗಳಿತವಾಗಿ ಲಿಂಗದೊಳು ನೆಟ್ಟ ಅನಿಮಿಷ ದೃಷ್ಟಿಯೆ ಅವನ ಶರೀರ ಸಮಸ್ತವಾಗಿದ್ದುದನ್ನು ಗಮನಿಸಿದ ಅಲ್ಲಮ ಮೊದಲಿನ ಅಲ್ಲಮನಾಗಿ ಉಳಿಯಲಿಲ್ಲ. ಕಾಮಲತೆ ಹೋಗಿ ವಿರತಿಲತೆಯಲ್ಲಿ ದಾಂಗುಡಿಯಿಡುತ್ತದೆ. ಆ ಮಹಾಗುರುವಿನ ಅನುಗ್ರಹ ದೊರೆತರೆ ಸಾಕು, ಇನ್ನೇನೂ ಬೇಡವೆಂದೆನಿಸುತ್ತದೆ. ಅನಿಮಿಷನ ಅಂತಃಕರಣ ಕರಗುತ್ತದೆ. ತಕ್ಕ ಶಿಷ್ಯ ದೊರೆತನೆಂಬ ಸಂಭ್ರಮ ಬೇರೆ. ಕರ ಜೋಡಿಸಿ ಅನನ್ಯ ಭಕ್ತಿಯೊಡನೆ ಕುಳಿತಿದ್ದ ಪರಮ ಶಿಷ್ಯ ಅಲ್ಲಮನಲ್ಲಿ ಆ ಪರಮಗುರು ತನ್ನ ದೃಷ್ಟಿ, ಧ್ಯಾನ, ಸ್ಪರ್ಶಗಳನ್ನು ಏಕಕಾಲದಲ್ಲಯೆ ಪ್ರಯೋಗಿಸಿ ಶಕ್ತಿ ಪಾತವನ್ನು ಮಾಡುತ್ತಾನೆ, ಆಗ–

"ಇಳುಪಿದಂತಾಯ್ತು ಶಿವಲಿಂಗವಾತನ ಕರದಿ!
ನೋಟದಿಂದಂಗೈಯಲಿಕ್ಕಿದಂ ಲಿಂಗಮಂ
ಕೂಟದಚ್ಚಳಿಯದಸುವೆರಸಿ ಲಿಂಗಮಂ

ಲಿಂಗದೊಡನೆಯೆ ಕೂಡಿ ಹೋದುದಾತನ ಜೀವ!" ಲಿಂಗವೆ ತಾನಾಗಿದ್ದ ಅನಿಮಿಷನ ಜರ್ಜರಿತಾಂಗ ಅವನ ಇಷ್ಟಲಿಂಗದೊಡನೆ ಅಲ್ಲಮನ ಅಂಗವನ್ನು ಸೇರಿತೆಂದು ಹರಿಹರ ಹೇಳುತ್ತಾನೆ. ಹರಿಹರನ ಅಂತದೃಷ್ಟಿ ಇದನ್ನು ಕಂಡಿರಬೇಕು. ಅನಿಮಿಷನ ಅಖಂಡ ಲಿಂಗಾರಾಧನೆಯ ಅಮೃತ ಫಲ ಅವನ ಲಿಂಗದಲ್ಲಿ ನ್ಯಸ್ತವಾಗಿದ್ದು ಆ ಲಿಂಗದೊಡನೆ ಅಲ್ಲಮನ ಅಂಗವನ್ನು ಸೇರಿತೆಂದು ಹೇಳಬಹುದು.

ಇಲ್ಲಿಂದ ಮುಂದೆ ನಡೆದ ಘಟನೆಗಳ ಬಗ್ಗೆ ವಾದವಿವಾದಗಳಿಲ್ಲ, ಆದರೆ ಈ ಕಾಮಲತೆಯ ಪ್ರಸಂಗ ಮುಂದಿನ ಕೆಲವರಿಗೆ ನುಂಗಲಾರದ ತುತ್ತಾಯಿತು, ಇದನ್ನು ಅಲ್ಲಗಳೆದವರಲ್ಲಿ ಚಾಮರಸ ಮೊದಲಿಗ. ಬಲ್ಲಿದ ಹರಿಹರನು ಹೆಣೆದ ಕಾಮಲತೆಯ ಕಥೆ ಚಾಮರಸನಿಗೆ ಗೊತ್ತಿದ್ದಿತೆಂಬಲ್ಲಿ ಅನುಮಾನವಿಲ್ಲ, ಅದರ ಮೇಲೆ ಈ ಪ್ರಚ್ಛನ್ನ ದಾಳಿಯನ್ನು ಅವಲೋಕಿಸಿ;

"ಲಲಿತ ನಿರ್ಮಲ ಚಂದ್ರಕಾಂತದ
ಶಿಲೆಯ ಹತ್ತಿರೆ ಲತೆಯ ದಾವಾ
ನಲನು ಕೊಳಲಾ ಜ್ವಾಲೆಯಾ ಶಿಲೆಯೊಳಗೆ ತೋರ್ಪಂತೆ
ತಿಳಿಯಲರಿಯದ ಜನಕೆ ಮಾಯೆಯ
ತಳಿತ ಕಾಮಜ್ವಾಲೆಯಲ್ಲಮ–
ನೊಳಗೆ ಪ್ರತಿಬಿಂಬಿಸಿದುದಾತನೆ ಕಾಮಿಯೆಂಬಂತೆ"

ಅಲ್ಲಮಪ್ರಭು ಸಂಪ್ರದಾಯದ ಸಲ್ಲಲಿತ ಸನ್ಮಾರ್ಗವನ್ನು ತೋರಿಸಲೆಂದೇ ಪ್ರಭುಲಿಂಗಲೀಲೆಯನ್ನು ಬರೆದ. ಚಾಮರಸ ಪ್ರಭುವಿನ ಪ್ರಾರಂಭದ ಅಗ್ನಿದಿವ್ಯವನ್ನು ವರ್ಣಿಸಿರುವುದು ಹೀಗಿದೆ:

ಇಂದಿನ ಶಿವಮೊಗ್ಗ ಜಿಲ್ಲೆಯ, ಶಿಕಾರಿಪುರ ತಾಲೂಕಿನ ಬಳ್ಳಿಗಾವೆ ಗ್ರಾಮದ ನಿರಹಂಕಾರಿ ಸುಜ್ಞಾನಿಯರ ಮಗನಾಗಿ ಹುಟ್ಟಿದ ಅಲ್ಲಮಪ್ರಭು. ಬಾಲ್ಯ ಬರುವಷ್ಟರಲ್ಲಿಯೇ ವಿದ್ಯೆಯ ವಾರಿಧಿಯಾದನಾತ, 'ಒಡನೆ ಅಂಬೆಗಾಲಿಕ್ಕೆ ಸದ್ಧರ್ಮ ಪೆರ್ಚಿತ್ತು; ದಡದಡಿಪ ದಟ್ಟಡಿಯನಿಕ್ಕೆ ಭೂಕಾಂತೆ ಸಂತೋಷವೇರಿದಳು; ನಡೆಗಲಿಯಲು ಮೃಢಭಕ್ತಿ ವರ್ಧಿಸಿತು; ನುಡಿಗಲಿಯಲು ಜ್ಞಾನಲತೆ ಪರ್ಬಿ ಪಸರಿಸಿತು, ಕಡು ಬುದ್ಧಿಗಲಿಯೆ ಪಂಚಾಚಾರ ಪರಶಿವನ ನೈಷ್ಠೆ ಸಂಪೂರ್ಣಮಾಯ್ತು! 'ಅವನು' ಗಳಿಗೆ ಸಂಖ್ಯೆಗೆ ನುಡಿಯ ಕಲಿತನು; ಗಳಿಗೆ ಸಂಖ್ಯೆಗೆ ನಡೆಯ ಕಲಿತನು; ಗಳಿಗೆ ಸಂಖ್ಯೆಗೆ ಬಳೆದನವರ ಮನೊರಥದ ಕೂಡ...ಆತನೋದದೆ ವೇದಶಾಸ್ತ್ರ ಸಮೇವಾತನ ನಾಲಗೆಯ ತುದಿಗಾತು ಬೆಸನನು ಬೇಡುತ್ತಿದ್ದವು!

ಹರೆಯ ಕಾಲಿಟ್ಟಿತು, 'ಧರಣಿಯೊಳು ಚೆಲುವಿಂಗೆ ತಾನೇ ಬಿರುದ ಕಟ್ಟಿದನೆಂಬ ಸೊಬಗಿನ' ಅಲ್ಲಮ ಮಾಯಾ ಕೋಲಾಹಲನೆನಿಸಲೆಂದೇ ಹುಟ್ಟಿದವ. ಅವನೇನು ಮಾಯೆಯ ಪ್ರತಾಪವನ್ನು ಅರಿಯದವನಲ್ಲ. ಅವನ ಎರಡು ವಚನಗಳು ಮಾಯೆಯ ಶಕ್ತಿಯನ್ನು ವರ್ಣಿಸಿವೆ.

"ಬ್ರಹ್ಮ ಘನವೆಂಬೆನೆ? ಬ್ರಹ್ಮನನು ನುಂಗಿತ್ತು ಮಾಯೆ!
ವಿಷ್ಣು ಘನವೆಂಬೆನೆ? ವಿಷ್ಣುವನು ನುಂಗಿತ್ತು ಮಾಯೆ!
ರುದ್ರ ಘನವೆಂಬೆನೆ? ರುದ್ರನನು ನುಂಗಿತ್ತು ಮಾಯೆ!
ತಾ ಘನವೆಂಬೆನೆ? ತನ್ನನೂ ನುಂಗಿತ್ತು ಮಾಯೆ!
ಇಂತು ಸರ್ವವು ನಿನ್ನ ಮಾಯೆ!
ಒಬ್ಬರನೊಬ್ಬರನೊಳಕೊಂಡಿತ್ತೆ ಹೇಳಾ, ಗುಹೇಶ್ವರಾ?"
"ದೇವರನೆಲ್ಲರ ಹೊಡೆತಂದು ದೇವಿಯರೊಳು ಕೂಡಿತ್ತು ಮಾಯೆ!
ಹರಹರಾ, ಮಾಯೆ ಇದ್ದೆಡೆಯ ನೋಡಾ!
ಶಿವಶಿವಾ, ಮಾಯೆ ಇದ್ದೆಡೆಯ ನೋಡಾ!
ಎರಡೆಂಬತ್ತು ಕೋಟಿ ಪ್ರಮಥ ಗಣಂಗಳು
ಅಂಗಾಲ ಕಣ್ಣುಳ್ಳವರು, ಮೈಯೆಲಾ ಕಣ್ಣುಳ್ಳವರು
ನಂದಿವಾಹನರುದ್ರರು ಇವರೆಲ್ಲರು
ಮಾಯೆಯ ಕಾಲುಗಾಹಿನ ಸರಮಾಲೆ ಕಾಣಾ, ಗುಹೇಶ್ವರಾ!"

ಇಂಥ ಮಾಯೆಯನ್ನು ಮೀರಿ ನಿಂತಿದ್ದ ಅಲ್ಲಮ. ಅವನ ಶಕ್ತಿ ಪರೀಕ್ಷೆಗಾಗಿಯೇ, ಅವನನ್ನು ಸೋಲಿಸುವೆನೆಂದು ಪಣತೊಟ್ಟಿದ್ದ ಪಾರ್ವತಿಯ ತಾಮಸ ಕಳೆ ಬೆಳುವಲದ ರಾಜಧಾನಿ ಬನವಸೆಯಲ್ಲಿ ಮಮಕಾರ ಭೂಪಾಲ ಮತ್ತು ಮೋಹಿನಿದೇವಿಯರಿಗೆ ಮಗಳಾಗಿ ಹುಟ್ಟಿದ್ದಿತು. ಹೆಸರು ಮಾಯೆ, ಹೆಸರಿಗೆ ತಕ್ಕಂತೆ ಮಹಾಮಾಯೆ! 'ಬೆತ್ತ ಬಿದಿರಿಡಿದಿರ್ದ ತರುಲತೆ ಹುತ್ತ ಬೆಳೆದ ಸಮಾಧಿವಂತರು ಚಿತ್ತ ಸಂಚಲವಾಗಿ ನೆನಹಿನ ನೇಮ ನೆಲೆಗೆಡಲು ಎತ್ತಳಿಂದೀ ಮಾಯೆ ಹುಟ್ಟಿತೆನುತ್ತ ಚಿಂತಾಕ್ರಾಂತ'ರಾದರಂತೆ' ಸಿಸುವ ನೀಡಿದ ಕಣ್ಣೆ ಮಾಯವೆ ಮುಸುಕುತ್ತಿದ್ದಿತಂತೆ.

ಅತ್ತ ಅಲ್ಲಮನಿಗೂ ಹರೆಯ ಬಂದಿತ್ತ; ಇತ್ತ ಮಾಯೆಗೂ ನವ ಯೌವನ ಬಂದಿತ್ತು, ಹೊತ್ತು ಕಾದಿತ್ತು ಸತ್ವ ಪರೀಕ್ಷೆಗೆ, ಒಮ್ಮೆ ಮಾಯೆ ಮಧುಕೇಶ್ವರನ ಪೂಜೆ ಮಾಡಿ ಸಂಗೀತ ಸೇವೆಯನ್ನು ಸಲ್ಲಿಸಿ ನೃತ್ಯಾಂಜಲಿಯಲ್ಲಿ ನಿರತಳಾದಳು. 'ಬಳಿಕಲೊಯ್ಯನೆ ಚರಣ ಚಾರಣ ಚಳತೆಯಲಿ, ನಿಜ ಹಸ್ತ ವಿಸ್ತರದಳತೆಯಲಿ, ಝಳಪಿಸುವ ಬೆರಳಿನಲುಳಿಯ ಹವಣನಲಿ, ಘಲ ಘಲಿಸುವಂದುಗೆಯ ಕಂಕಣಗಳಝುಣತ್ಕಾರದಲಿ ಮಾಯಾಲಲನೆ

ರಂಗಂ ಬೊಕ್ಕು ನಿಂದಳು ನಿಜದ ನಿರುಗೆಯಲಿ' ಅಲ್ಲದೆ 'ತಾಳದಲಿ ತರಹರಿಸಿ, ಮೆಲ್ಲನೆ ಮೇಳದಲಿ ಮೈನಿಗುರಿ, ಕರಸಂಚಾಳಿಯಲಿ ಚಳವಳಿಸಿ, ತಿರುಪಿನ ಮಡುವಿನಲಿ ಮಣಿದು, ತೋಳ ಮೈಯಲಿ ತೊನೆದ ನೋಟದ ಢಾಳದಲಿ ಧವಳಿಸಿಯೆ ವಿನುತ ಮರಾಳಗತಿಯಲಿ ಗಮಕಿಸುತ..... ಕಾಮಿನಿಯೊ ತಾ ಭರತಸಂಭವ ಭೂಮಿಯೋ' ಎಂಬಂತೆ ಮಾಯಾದೇವಿ ಮೋಹಿಸಿ ಪಾತ್ರವಾಡಿದಳು.

ಆಗ ಸಂಗಿಯಂತಿರೆ ನಟಿಸಿ ತಾ ನಿಸ್ಸಂಗಿಯಾಗಿಹ ಪರಿಯನು 'ಆ ಅಂಗನೆಗೆ ತಿಳಿಸಲೆಂದು ಬಂದನಲ್ಲಿಗೆ ಅಲ್ಲಮಪ್ರಭು'. 'ಕಂಗಳಲಿ ನಡೆ ನಡಿದೊಡೆ ಹೆರೆ ಹಿಂಗಬಾರದ ಚೆಲುವ ಮುಖದ, ಸುರಂಗ ಸೂಸುವ ದಂತ ಪಂಕ್ತಿಯ ತೊಳಪ ಕಣ್ಣುಗಳ, ಸರ್ವಾಂಗ ಭಂಗಿಯ ಸೌಮ್ಯತೆಯ, ಧರಿಸಿ ಬಂದನವನು; ನಾನಾ ಪರಿಯ ವಹಣಿಗಳಿಂದ, ತಾಳ ಮೇಳ ಸದ್ಗತಿಯಿಂದ, ಉದ್ಘಡಣೆಯ ಗಡಾವಣೆಯಿಂದ, ಕೇಳುವರೆಲ್ಲ ಬೆರಗಾಗೆ ಹಲವಂದದಲಿ ಮದ್ದಳೆಯ ಬಾರಿಸಿದನು.'

'ಕಾರ ಮುಗಿಲಿನ ಗರ್ಜನೆಯ ಕಿವಿಯಾರೆ ಕೇಳುವ ಸೋಗೆ'ಯಂತಾಯಿತು ಮಾಯೆಯ ಸ್ಥಿತಿ, ಸಖಿಯನ್ನು ಕಳಿಸಿ ಕರೆಸಿಕೊಂಡಳು ಅಲ್ಲಮನನ್ನು, ಅವನನ್ನು ನೋಡುತ್ತ ರಂಗಮಂಟಪ ಅನಂಗ ಮಂಟಪವಾಯಿತು ಅವಳ ಪಾಲಿಗೆ. 'ಮೊಳೆತುವಾಕ್ಷಣ ಕಾಮಬಾಣದ ಹಿಳುಕುಗಳು! ಹಿರಿದಾಗಿ ಚಿತ್ತಜನಳವಿಯಲಿ ಸಿಕ್ಕಿದಳು ಮಾಯೆ ಮಹಾನುರಾಗದಲಿ!' ಅವಳ ಅವಸ್ಥೆಯನ್ನು ಕಂಡ ಅವಳ ಸಖಿಯರು ತಮ್ಮ ಚಾತುರ್ಯವನ್ನೆಲ್ಲ ಬಳಸಿ ಮಮಕಾರ ಭೂಪಾಲನು ಅಲ್ಲಮನನ್ನು ಮಾಯಾದೇವಿಯ ನಾಟ್ಯಾಚಾರ್ಯನನ್ನಾಗಿ ನಿಯಮಿಸುವಂತೆ ಮಾಡಿದರು. ಮಾಯೆ ಹಿಗ್ಗಿದಳು.

ಆದರೆ ಅವಳ ಹಿಗ್ಗು ಸಿಗ್ಗಾಗಲು ತಡವಾಗಲಿಲ್ಲ, ಮಾಯೆಯ ಸಖಿಯರು 'ಬೇಟದಲಿ ಕೋಟಲೆಗೊಳ್ಳುತ್ತಲಿದ್ದ' ಮಾಯೆಯ ದುಃಸ್ಥಿತಿಗೆ ಮರುಗಿ ಉಪಾಯದಿಂದ ಮಾಯೆ ಅಲ್ಲಮರನ್ನು ಏಕಾಂತದಲ್ಲಿ ಕೂಡಿಸಿದರು 'ತಮವ ತರಣಿಯನೊಂದು ಮಾಡುವೆವೆಂಬ ಭಾವಭ್ರಮಿತ ಬುದ್ಧಿಯಲಿ! ಆದರೆ 'ದೇವ ಮಾನವ ದಾನವರುಗಳ ಡಾವಣಿಯ ದನವಾಗಿ ಕಟ್ಟಿ' ಬಲ್ಲೆನೆಂಬ ಮಾಯೆ ತನ್ನ ಎಲ್ಲ ಸಮ್ಮೋಹಕತೆಯನ್ನು ಸೂಖುಎಮಾಡಿದರೂ ಅವಳ ವಶವಾಗಲಿಲ್ಲ ಅಲ್ಲಮ, ಕಾತರವನ್ನು ತಾಳಲಾರದೆ ಅವಳು ಮೇಲೆ ಬಿದ್ದು ಅಲ್ಲಮಮನ್ನು ಅಪ್ಪಿದಳು. ಆದರೆ 'ಜಗವನೇಡಿಸಿ ಕಾಡುವಾ ಮಾಯೆಗೆ ನವೀನವೆನಿಪ್ಪ ಮಾಯಾವಿಗನು ತಾನಾಗಿ' ಅವಳ ಅಪ್ಪುಗೆಗೆ ಒಳಗಾಗದೆ ಉಳಿದನು. 'ಬಯಲ ಚಪ್ಪರಿವಂತೆ ಚುಂಬನ, ಬಯಲನಪ್ಪುವವೊಲು ಸಮಪ್ಪಿಕೆ, ಬಯಲನೀಕ್ಷಿಸುವಂತೆ ನೋಟದ, ಕೂಟದನುಭವಣೆ!' ಮಾಯೆ ಮೂರ್ಛಿತಳಾದಳು!

ಸಖಿಯರು ಸಾವಿರ ಪ್ರಯತ್ನಗಳನ್ನು ಮಾಡಿದರು ಅಲ್ಲಮನನ್ನೊಲಿಸಲು, ಎಲ್ಲವೂ ವ್ಯರ್ಥವಾದುವು. ಮಾಯೆಯ ಸ್ಥಿತಿ ಇನ್ನಷ್ಟು ಚಿಂತಾಜನಕವಾಯಿತು. ತನ್ನ ಆಜ್ಞೆಯಂತೆ ಅಲ್ಲಮನನ್ನು ಸೋಲಿಸಲು ಹೋಗಿದ್ದ ತನ್ನ ತಾಮಸ ಕಳೆ–ಮಾಯೆ ತಾನೇ ಅಲ್ಲಮನ ಮೋಹದಲ್ಲಿ ತಲ್ಲಣಿಸುತ್ತಿರುವುದನ್ನು ಕಂಡು ಅವಳಿಗೆ ತಿಳಿ ಹೇಳಲು ವಿಮಲೆಯನ್ನು ಕಳಿಸಿದಳು ಪಾರ್ವತಿ. ವಿಮಲೆ ಇಳಿದುಬಂದು ಮಾಯೆಯನ್ನು ಕಂಡು ಅವಳಿಗೆ 'ತಾಯಿ ನಿಯಮಿಸಿ ಕಳಿಸಿದ್ದ ಕಾರ್ಯವೆತ್ತ, ನೀನು ನಡೆಸಿರುವ ಕಾರ್ಯವೆತ್ತ!' ಎಂದು ಜಡಿದು ನುಡಿದಳು, ಬಳಿಕ ಮಾಯಾಂಗನೆಯ ಮನಸಿಗೆ ತಿಳಿವು ತಿಣ್ಣನೆ ತಿಟ್ಟವಿಟ್ಟಿತು. ಹೊಳಹು ಹೊಮ್ಮಿತು, ತನ್ನ ಪೂರ್ವದ ಕಥನ ಕಾರಣದ ಬೆಳವಿಗೆಗೆ ಬೆದೆಯಾಯ್ತು, ನೆನಹಿನ ನೆಳಲು ಮಿಂಚಿದುದೊಳಗೊಳಗೆ!

ಪಶ್ಚಾತ್ತಾಪದಗ್ಧಳಾದ ಮಾಯೆಗೆ ವಿಮಲೆ ಸಂತೈಸುವ ಸ್ವರದಲ್ಲಿ ಹೇಳಿದಳು ಇನ್ನೂ ಕಾಲ ಕೈ ಮೀರಿ ಹೋಗಿಲ್ಲ ಮಾಯೆ, ಈಗಲಾದರೂ ಮದ್ದಳೆಯ ಅಲ್ಲಮನನ್ನು ಗೆದ್ದು ತಾಯಿಯ ಪಣವನ್ನು ಗೆಲ್ಲಿಸು!

ಮದ್ದಳೆಯ ಅಲ್ಲಮ, ಆ ಹೆಸರು ಕಿವಿಗೆ ತಾಗುತ್ತಲೆ ಮಾಯೆಯ ಮೋಹದಾಹಗಳು ಮರುಕಳಿಸಿದವು. 'ಅವನಿದ್ದೆಡೆಗೆ ನನ್ನನ್ನು ಕರೆದೊಯ್ಯುವಿಯಾ ವಿಮಳೆ? ಬೇಗ ಕರೆದೊಯ್ಯಿ ಸಖಿ!'

'ಕರೆದೊಯ್ಯುವೆ ಆದೆರ ಅವನನ್ನು ನೀನು ಸೋಲಿಸುವುದಕ್ಕಾಗಿ ನೀನೇ ಅವನಿಗೆ ಸೋಲಲಿಕ್ಕಲ್ಲ!'

"ಅವನೇ ನನಗೆ ಸೋಲಲಿ ನಾನೇ ಅವನಿಗೆ ಸೋಲಲಿ ನಮ್ಮಿಬ್ಬರ ಸಮಾಗಮವಾದರೆ ಸಾಕು, ಮಾತೆಯ ಶಪಥ ಸಫಲವಾಗುವುದು, ಅಲ್ಲವೆ ವಿಮಲೆ?"

"ಒಪ್ಪಿದೆ, ನಡೆ ಅಲ್ಲಮನೆಡೆಗೆ."

ಅಡವಿ ಅಡವಿ ಅಲೆದು ಅಲ್ಲಮನನ್ನು ಕಂಡರವರು ವಿಮಳೆ ಮುಂದಾಗಿ ಮಾತಿಗೆ ಮೊದಲು ಮಾಡಿದಳು;

ವಿಮೆಲ: "ಪ್ರಭುವೆ ಈಸುದಿನ ಮಾಯಾದೇವಿಗೆ ಆಸೆದೋರಿ ಈಗ ಗಾಸಿಗೊಳಿಸುವುದು ತರವೆ?"

ಅಲ್ಲಮ : "ಆರು ಮೊದಲಲಿ ಬಯಸ ಹೇಳಿದರು? ಆರು ಕಾಣುಕ ಕರೆಸ ಹೇಳಿದರು? ಯಾರ ಬಾರದ ಬಯಸಿ ಕಾಮಿಸಿ ಬಳಲ ಹೇಳಿದರು?"

ಮಾಯೆ : "ಧೂರ್ತ, ಈಶ ಸೇವೆಯಲ್ಲಿದ್ದ ಮುಗುದೆಗೆ ಬೀಸಿ ಜಾಲವ ಬಲೆಗೆ ಸಿಲುಕಿಸಿ ಮೋಸ ಗೊಳಿಸಿದವರಾರು?"

ಅಲ್ಲಮ : "ಮಾಯೆ, ಧೂರ್ತರಾರೆಂಬುದನು ಸಕಲ ಸಾಧಕ ಸಿದ್ಧ ಮುನಿಗಳ ಕೇಳಿ ನೋಡು!"

ಮಾಯೆ: "ಬಲ್ಲೆ ನಿನ್ನಯ ವಿರತಿಗಿರತಿಯ ಅಲ್ಲಮ! ನೆನಪಿರಲಿ, ನಾನು ಮೂಜಗವ ಸುತ್ತಿರುವ ಮಾಯೆ! ಹರಿಯೆದೆಯ ಮೆಟ್ಟಿದೆನು! ಶಂಕರನ ಅರ್ಧಾಂಗವನು ತುಳಿದಿಹೆನು! ಬ್ರಹ್ಮನ ಬಾಯ ಮುದ್ರಿಸಿಹೆನು! ಸುರನರೋಗರಗೆಂಬ ಮರವೆಯ ಮರುಳತಂಡವನೆನ್ನ ತೊತ್ತಿತರ ಶರಣು ಹೊಗಸಿಹೆನು! ಕಾನನದ ಮರುಳರನ್ನೇನ ಕೇಳುವೆ?"

ಅಲ್ಲಮ : "ಬರಿ ಮಾತನಾಡುವಿಯ ಮಾಯೆ! ಹರಿಹರ ಬ್ರಹ್ಮಾದಿಗಳನ್ನು ಆಡಿಸುವೆ. ರೋರಾಡಿ ಕಾಡುವನೆಂಬೆ. ನಿನ್ನನ್ನು ಯಾರು ನಾನಾ ರೀತಿಯಲಿ ಆಡಿಸುತ್ತಲಿಹರು ಬಲ್ಲೆಯಾ?"

ಮಾಯೆ : (ಮೆತ್ತಗಾಗಿ) "ಯಾರು ಯಾರನ್ನು ಆಡಿಸುವರೆಂಬ ವಿಚಾರವಂತಿರಲಿ ಪ್ರಿಯಕರ, ಕೃಪಾಕರನಾಗಿ ಮಾಯೆಯ ಮನದಾಸೆಯನ್ನು ಈಡೇರಿಸು."

ಅಲ್ಲಮ : "ಸುಮ್ಮನೆ ಕಾಡಿ ಬೇಡಿ ಬಾಡದಿರು ಮಾಯೆ; ಬಂದ ಹಾದಿಯಿಂದ ಹಿಂದಿರುಗುವುದೆ ಹಿತಕರ ನಿನಗೆ."

ಮಾಯೆ : "ನಿನ್ನ ಸನ್ನಿಧಿಯಲ್ಲಿದ್ದು ನಿನ್ನಿಂದ ಶಿವತತ್ತ್ವಾನುಭವವನ್ನು ತಿಳಿದು, ನಾನೂ ಶಿವನ ಸನ್ನಿಧಿಯನ್ನು ಸೇರಬೇಕೆಂಬ ಸದಿಚ್ಛೆಯಿಂದ ಬಂದಿರುವೆ ಸ್ವಾಮಿ, ಸ್ವೀಕರಿಸು–ನಿರಾಕರಿಸದಿರು!"

ಅಲ್ಲಮ : "ಚಿನ್ನವೊಂದೇ ಅಕ್ಕಸಾಲೆಯಲ್ಲಿ ಆಭರಣವಾಗಬಲ್ಲದು ಮಾಯೆ, ಮಿಕ್ಕ ಧಾತುವಲ್ಲ."

ವಿಮಲೆ : (ಮಧ್ಯದಲ್ಲಿ ಪ್ರವೇಶಿಸಿ) "ನಿನ್ನ ಪಾದದ ಪರುಷ ಸ್ಪರ್ಶದಿಂದ ಮಾಯೆಯೆಂಬ ಲೋಹವೂ ಸುವರ್ಣವಾಗದೆ ಸ್ವಾಮಿ? ಅವಳಲ್ಲಿ ಹುರುಳಿಲ್ಲದಿರಬಹುದು ನಿನ್ನಲ್ಲಿ ಕರುಣವೂ ಇಲ್ಲವೆ? ನಿನ್ನ ಕರುಣವೇ ಅವಳ ಹರಣ ಪ್ರಭುವೆ!"

ಅಲ್ಲಮ : "ಲೋಹವಾದರೂ ಇದ್ದರೆ ಪರುಷ ಮುಟ್ಟಿ ಚಿನ್ನವಾಗಬಹುದು, ವಿಮಳೆ ಪರುಷದ ಸೋಂಕಿನಿಂದ ಹಳೆ ಹಂಚೆಲ್ಲಿಯಾದರೂ ಹೊನ್ನಾಗಬಹುದೆ?"

ಮಾಯೆ : "ಹಾಯ್ ವಿಧಿಯೆ, ಇನ್ನೂ ಏನೇನ ಕೇಳಿಸುವಿ ನನಗೆ? ನಾನು ಕಬ್ಬುನಕ್ಕಿಂತಲೂ ಕೀಳೆ? ಹಳೆ ಹಂಚೆ? ಇಷ್ಟು ಮಾನಹೀನಳಾದ ಮೇಲೂ ಮರಣ ಬರಲಿಲ್ಲವಲ್ಲ, ನನಗೆ! ಮರಣಕ್ಕೂ ಕರುಣೆ ಬರಲಿಲ್ಲವೆ ನನ್ನ ಮೇಲೆ?"

ವಿಮಳೆ : "ನೀನು ಮುಟ್ಟಿದ ಮಣ್ಣೂ ಚಿನ್ನವಾದೀತು, ಪ್ರಭುವೆ! ಮನಸು ಬಂದೋಪಾದಿಯಲ್ಲಿ ಕಾದು ರಕ್ಷಿಸಿವಳ. ಮಾಯೆಯ ಸಂಗಕ್ಕೇಕೆ ಅಂಜುವೆ? ನೀನು ನಿರಂಜನನಲ್ಲವೆ? ನಿರಂಜನನು ಮಾಯೆಗಂಜುವನೆ?"

ಅಲ್ಲಮ : "ನೀನೂ ಭ್ರಮಿತಳಾಗಿ ನುಡಿದರೆ ಹೇಗೆ ವಿಮಳೆ? ಕೂಡಬಲ್ಲ ವಸ್ತುಗಳಿದ್ದರೆ ಅವು ತಾವಾಗಿಯೇ ಕೂಡಿಕೊಳ್ಳುತ್ತವೆ. ಇದು ನಿಸರ್ಗದ ನಿಯಮ, ತರಣಿ ತಮಗಳೆಂದಾದರೂ ಒಂದಾಗುವುವೆ? ಹೋಗಿರಿನ್ನು, ನಾನು ಹೊರಟೆ!"

ಅಲ್ಲಮನನ್ನು ತನ್ನ ಬಾಹುಗಳಲ್ಲಿ ಬಂಧಿಸಲು ಕೊನೆಯ ಪ್ರಯತ್ನ ಮಾಡುತ್ತಾಳೆ ಮಾಯೆ, ಆದರೆ ಬಯಲನ್ನು ಬಂದಿಸಬಲ್ಲವರಾರು? ಅದಾಗಲೇ ಬಯಲಿಗನಾಗಿದ್ದ ಅಲ್ಲಮ ಅಟ್ಟಹಾಸದಿಂದ ಉಗ್ಘಡಿಸುತ್ತಾನೆ; "ಬ್ರಹ್ಮ ವಿಷ್ಣುಗಳ ಮಾಯೆ ತೊತ್ತಳದುಳಿವಂದು, ದೇವದಾನವರ ಮಾಯೆ ಅಗಿದಗಿದು ತಿಂಬಂದು, ರುದ್ರಗಣ, ಪ್ರಮಥ ಗಣಗಳೆಂಬವರ ಮಾಯೆ ಮರುಳ್ಮಾಡಿ ಕಾಡುವಂದು, ನೊಸಲ ಕಣ್ಣು, ಪಂಚಮುಖ, ದಶಮುಖದವರಿಗೆ ಮಾಯೆ ಅರ್ಧಾಂಗಿಯಾದಂದು, ಅಷ್ಟಾಶೀತಿ ಸಹಸ್ರ ಋಷಿಯರುಗಳ ಮಾಯೆ ತಪೋಮದದಲಿ ಕೆಡಹುವಂದು ನಾನು ಮಾಯಾ ಕೋಳಾಹಳನಾಗಿರ್ದ ಕಾಣಾ, ಗುಹೇಶ್ವರಾ!"

ತಾನೊಬ್ಬನೇ ನಿರ್ಮಾಯನಾಗಿ ತೃಪ್ತನಾಗಲಿಲ್ಲ ಅಲ್ಲಮ. 'ತನ್ನ ಕಟಾಕ್ಷ ಕಾಂತಿಯಲಿ ಹಿಂಗಿಸುವೆನೆಲ್ಲರ ಮನೋಮಯದಂಗೊಳ ಹೊರಗಿಡದ ತಮದ ತರಂಗಗಳನು' ಎಂದು ಜಗದ್ಧಿತಾರ್ತವಾಗಿ ಹೊರಡುತ್ತಾನೆ. ಅವನು ಸಂಧಿಸಿದ ಮೊದಲ ಭಕ್ತನೇ ಗೊಗ್ಗಯ್ಯ. ಅವನ ಬಹಿರಂಗದ ಬೇಸಾಯಕ್ಕೆ ಅಂತರಂಗದ ಆರಂಭವನ್ನು ಜೋಡಿಸಬೇಕೆಂಬುದೇ ಪ್ರಭುವಿನ ಪರಮೋದ್ದೇಶ, ಅಂತೆಯೇ ಗೊಗ್ಗಯ್ಯನಿಗೆ ತಿಳಿಸಿ ಹೇಳಿದ ; ಆವ ಬೇಸಾಯವನು ಮಾಡಲು ಜೀವವಧೆಗಳು ತಪ್ಪವು. ಅದರಲಿ ದೇವನೊಲಿವನೆ? ನೋವು ನಿಲುವುದೆ? ಸಾವು ಹಿಂಗುವುದೆ? ಧಾವತಿಯೆ ಕಡೆ ತನಕ ತಪ್ಪದು. ಇದಾವುದೂ ಅಲ್ಲದ ಮತವು ಇಲ್ಲಿ ಭಕ್ತಿಯ ಮಾಡುತಲಿ ಕಡೆಯಲ್ಲಿ ಕೈಲಾಸವನು ಹೊಕ್ಕೊಡೆ ಎಲ್ಲಿಹವು ಬಿಡು ನೋವು ಸಾವುಗಳೆಂಬ ಸಂಕಟವು. ಜೀವವಣುಮಾತ್ರವನು ನೋಯಿಸಿ ಭಕ್ತಿಯಲಿ ಕೈಲಾಸಪುರದೊಳಗೆ ಭವನ ಬಸುರೊಳಗಿರ್ದೊಡೆಯು ಸಂಭವಿಸುವುದು ಕಡುಸಾವು ನೋವುಗಳು! ಕೊಂದವಗೆ ಕೊಲೆ ತಪ್ಪದು! ಬಂಧನಪ್ರದ ಬಾಹ್ಯಕರ್ಮಗಳು ಒಂದುಗೂಡಿದೊಡೆ ಅವರಿಗೆ ಸಂದ ನಿಜಸುಖವಿಲ್ಲ, ಗೊಗ್ಗಯ್ಯ!"

ಗೊಗ್ಗಯ್ಯನಿಗೆ ಏನೂ ತೋಚದಾಯಿತು. 'ಪ್ರಭುವೆ ನಾನರಿಯೆನ್ಯೆ; ನೀ ಬಲ್ಲೆ ನಿನ್ನಯ ಮನದ ಹರಿವನು, ಸಲ್ಲದು ಉಳಿದರಿಗೆ' ಎಂದು ಬಿನ್ನವಿಸಿಕೊಳ್ಳುವನು.

ಏನಾದರೊಂದು ದೃಷ್ಟಾಂತ ತೋರದೆ ಗೊಗ್ಗಯ್ಯನಿಗೆ ತತ್ತ್ವದ ತಿಳಿವಾಗದೆಂದು ತಿಳಿದು ಅಲ್ಲಮನು ಗೊಗ್ಗಯ್ಯನು ಅಗುಳಿ ಕಿತ್ತ ಹೆಂಟೆಯ ಕೆಳಗೆ ಹೊಲೆವ ಹೊಂಗಳಸವೊಂದನ್ನು ತೋರಿದನು. ಗೊಗ್ಗಯ್ಯನಿಗೆ ಪರಮಾಶ್ಚರ್ಯವಾಯಿತು. ಇಬ್ಬರೂ ಅಗೆಯುತ್ತ ಹೋಗಲು ಒಳಗೆ ಒಂದು ದೇಗುಲವಿದ್ದುದು ಕಂಡುಬಂದಿತು. ಅಲ್ಲೊಬ್ಬ ಶಿವಯೋಗಿ ಇಷ್ಟಲಿಂಗದಲ್ಲಿ ಅನಿಮಿಷ ದೃಷ್ಟಿ ನೆಟ್ಟು ಕುಳಿತಿದ್ದ, ಪ್ರಭು ಅದನ್ನು ಗೊಗ್ಗಯ್ಯನಿಗೆ ತೋರಿ, 'ಇದು ಕಣಾ ಶಿವಲಿಂಗ ಭಕ್ತಿಯ ಸಾಧಿಸುವ ಪರಿ' ಎಂದು ತಿಳಿಸಿದ.

ಅಲ್ಲಮನ ಜೀವನದಲ್ಲಿ ಅದ್ಭುತ ಪರಿವರ್ತನೆ ತರುವುದಕ್ಕಾಗಿ ಹರಿಹರ ಉಪಯೋಗಿಸಿಕೊಂಡ ಭೂಗತ ದೇವಾಲಯ ಇಲ್ಲಿ ಗೊಗ್ಗಯ್ಯನಿಗೆ ತನ್ನ ತತ್ತ್ವ ತಿಳಿಸಲು ದೃಷ್ಟಾಂತ ಮಾತ್ರವಾಗಿ ಪರಿಣಮಿಸಿದೆ ಅಲ್ಲಮನಿಗೆ, ಎರಡರಲ್ಲಿರುವ ಅಂತರ ಅಜಗಜಾಂತರ! ಇನ್ನೂ ಒಂದು ಕೌತುಕ ಕಾದಿದೆಯಿಲ್ಲಿ, ಗೊಗ್ಗಯ್ಯನಿಗೆ ದೃಷ್ಟಾಂತ ಮಾತ್ರವಾಗಿದ್ದ ಅನಿಮಿಷಾರ್ಯ ಅಲ್ಲಮನನ್ನೇ ಶಿಷ್ಯನಾಗಿಸಿಕೊಳ್ಳುತ್ತಾನೆ, ಅಲ್ಲಮನೇ ಗುರುವೆ ಕರುಣಿಸು, ಭಕ್ತಿ ಭಾವದ ಕರುವೆ ಕರುಣಿಸು, ಲಿಂಗನಿಷ್ಠೆಯ ಗರುವ ಕರುಣಿಸು ಕರುಣಿಸೆನುತನಿಮಿಷನ ಕೊಂಡಾಡಿ ತಾನು ನರನೆಂಬುದು ದಿಟ, ಅದರ ಬಳಕೆಯ ಪರಿಯನಂಗೀಕರಿಸಿ ಪರರಿಗೆ ನಟಿಸುತಿರ್ದನೆಂದು ಚಾಮರಸ ಬರೆಯುತ್ತಾನೆ. ಹರಿಹರನು ಕಾಮಲತೆ ಕಾಲವಾದ ತರುಣದಲ್ಲಿಯೇ ಅನಿಮಿಷಯ್ಯನ ಪ್ರಸಂಗವನ್ನು ತಂದರೆ, ಚಾಮರಸ ಪ್ರಭು ಮಾಯೆಯನ್ನು ಜಯಿಸಿದ ಮೇಲೆ ಬಸವಾದಿ ಪ್ರಮಥರು ಧರೆಗಿಳಿದುದನ್ನು, ಬಸವಾದಿ ಪ್ರಮಥರು ಜನಿಸಿದುದನ್ನು, ಮಹಾದೇವಿಯಕ್ಕನ ಪ್ರಾರಂಭಿಕ ಜೀವನವನ್ನು ಬಣ್ಣಿಸಿ ಅಲ್ಲಮನನ್ನು ಅನಿಮಿಷನೆಡೆಗೆ ಅದೂ ಗೊಗ್ಗಯ್ಯನಿಗೆ ದೃಷ್ಟಾಂತ ನೀಡುವ ನೆಪದಲ್ಲಿ ತರುತ್ತಾನೆ, ಆದರೂ ನಟನೆಗಾಗಿಯಾದರೂ ಅಲ್ಲಮ ಅನಿಮಿಷನ ಶಿಷ್ಯನಾಗುತ್ತಾನೆ, 'ಹತ್ತೆ ಬಂದಿರೆ ಸೂಜಿಗಲ್ಲನು ಹತ್ತಿ ಮೋಹಿಪ ಸೂಜಿಯಂತಿರೆ' ಅನಿಮಿಷನ ಕೈಯ ಲಿಂಗ ಅಲ್ಲಮನ ಕೈಗೆ ಬಂದು 'ಅಲ್ಲಮನೆ ಸೂಜಿಗಲ್ಲು, ಅನಿಮಿಷನ ಲಿಂಗವೆ ಸೂಜಿ' ಎಂಬ ಸಲ್ಲದ ಸಾಮತಿಯನ್ನು ಬಳಸುತ್ತಾನೆ ಚಾಮರಸ. 'ಸಾರೆಯಲಿ ಶಿವಲಿಂಗ ಭಕ್ತಿಯ ದಾರಿಯನು ನಾನನಿಮಿಷನ ಸಾಕಾರದಲಿ ಕಂಡರಿದೆ ನೀಗಳು ನಿನ್ನ ಕತದಿಂದೆ' ಎಂದು ಗೊಗ್ಗಯ್ಯನಿಂದ ಹೇಳಿಸುತ್ತಾನೆ. ಇಲ್ಲಿ ತೇಪೆಯ ಕೆಲಸ ನಡೆದಿದೆಯೆಂದೆನಿಸುತ್ತಿದೆ.

ಕಾಮಲತೆಯ ಕತೆಯ ಬಗ್ಗೆ ವಿರೋಧ ಅದು ಅಲ್ಲಮನ ಘನತೆ ಗೌರವಗಳಿಗೆ ಕುಂದನ್ನುಂಟುಮಾಡುವುದೆಂಬ ಕಾರಣದಿಂದಿರಬೇಕು, ಆದರೆ ಚಾಮರಸ, ಅದೃಶ್ಯಕವಿಗಳಂತ ಕವಿಗಳೂ, ಶೂನ್ಯಸಂಪಾದನಾಕಾರರೂ ವಿರೋಧಿಸಿದರೂ ಈ ಕತೆಯನ್ನು ಸಂಪೂರ್ಣವಾಗಿ ಅಳಿಸಿಹಾಕಲು ಸಾಧ್ಯವಾಗಿಲ್ಲ. ಅದು ಪ್ರಭುದೇವರ ಟೀಕಿನ ವಚನಗಳ ಪೀಠಿಕೆಯ ಅಂತ್ಯದಲ್ಲಿ ನುಸುಳಿಕೊಂಡಿದೆ; ಶಿವಗಣ ಪ್ರಸಾದಿ ಮಹಾದೇವಯ್ಯಗಳ ಶೂನ್ಯಸಂಪಾದನೆಯ ಪೀಠಿಕಾಗದ್ಯದ ಕೊನೆಯಲ್ಲಿ ಇದು ಕಾಣಿಸಿಕೊಳ್ಳುತ್ತದೆ; ಶಾಂತಲಿಂಗ

ದೇಶಿಕನ ಭೈರವೇಶ್ವರ ಕಾವ್ಯ ಕಥಾ ಸೂತ್ರರತ್ನಾಕರದಲ್ಲಿಯೂ ಉಲ್ಲೇಖಿತವಾಗುತ್ತದೆ. ಈ ಭಾಗಗಳು ಪ್ರಕ್ಷಿಪ್ತವೆಂದು ಹೇಳಬಹುದಾದರೂ ಅವುಗಳನ್ನಲ್ಲಿ ಸೇರಿಸಿದವರಿಗೆ ಹರಿಹರನ ಕಥೆ ಹಿಡಿಸಿತ್ತೆಂದೇ ಅರ್ಥವಾಗುತ್ತದೆ. ಕಾಮಲತೆಯು ಸುಟ್ಟರೂ ನಷ್ಟವಾಗದ ಕಾಮದಸಂಕೇತವಾಗಿ ಅವರಿಗೆ ತೋರಿರಬೇಕು. ಹದಿನೆಂಟನೆಯ ಶತಮಾನದ ಶಂಕರ ಕವಿಯಂತೂ ತನ್ನ ಚೋರ ಬಸವ ಚರಿತ್ರೆಯಲ್ಲಿ ಪ್ರಭುದೇವರು ಪದ್ಮಿನಿಯೆಂಬ ಹೆಂಡತಿಯೊಡನೆ ರಾಜ್ಯವಾಳುತ್ತಿದ್ದರೆಂದು ಹೇಳುತ್ತಾನೆ!

ಬಸವಾದಿ ಪ್ರಮಥರು ಹೆಣ್ಣಿನ ಬಗ್ಗೆ ತಾಳಿದ್ದ ಉದಾರ ದೃಷ್ಟಿ ನೂರೊಂದು ವಿರತರ ಕಾಲಕ್ಕೆ ಮಾಯವಾಗಿ ಹೆಣ್ಣು ಮಾಯೆಯೆಂಬ ದೃಷ್ಟಿ ಮತ್ತೆ ಮರುಕಳಿಸಿತೆಂದು ತೋರುತ್ತಿದೆ. ಪ್ರಭುದೇವರೇ ಹೆಣ್ಣು ಮಾಯೆಯಲ್ಲ ಎಂದು ಹೇಳಿದ್ದರೂ ಅವರ ಚರಿತ್ರೆಯಲ್ಲಿಯೇ ಹೆಣ್ಣು ಮಾಯೆಯೆಂಬ ಪ್ರತಿಪಾದನೆ ನಡೆದಿರುವುದು ವಿರೋಧಾಭಾಸವೇ ಸರಿ, ಮನದ ಮುಂದಣ ಆಸೆಯೇ ಮಾಯೆ ಎಂಬ ಪ್ರಭುವಿನ ವಾಣಿಯನ್ನು ಚಾಮರಸ ಒಪ್ಪಿಕೊಂಡಂತಿದೆ. ಈ ಪದ್ಯ ನೋಡಿ:

"ಆಸೆಯೆಂಬುದು ತಾನೆ ಮಾಯಾ
ಪಾಶವದು ಮುಸುಕಿದಡೆ ತಾನೇ
ಕ್ಲೇಶವಿಂತಿವು ಬಗೆಗೆ ಬಲಿಯಲು ತಾನೆ ಭವಬಂಧ!
ದೋಷ ದುರಿತದ ಪುಂಜವದು ಕೀ
ನಾಶಗೊಡ್ಡಿದ ಹರಕೆಗುರಿಯೀ
ಯಾಶೆಯೊಂದಳಿದವನೆ ನಿತ್ಯನು ಬಸವಕೇಳೆಂದ ‖"
(ಪ್ರಭುಲಿಂಗಲೀಲೆ – ಗತಿ ೨೪ ಪದ್ಯ ೧೨)

ಒಂದೇ ವಚನದ ಕೊನೆಯ ಭಾಗವನ್ನೊಪ್ಪಿಕೊಂಡು ಅದರ ಒದಲಿನ ಮೂರು ಸಾಲುಗಳನ್ನು ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ ಎಂದು ಸಾರುವ ಸಾಲುಗಳನ್ನು ಒಪ್ಪಿಕೊಳ್ಳದಿರುವುದನ್ನು ಒಪ್ಪಿಕೊಳ್ಳುವುದು ಹೇಗೆ?

# ಅನುಬಂಧ – ೨

## ಅಲ್ಲಮನ ಆಯ್ದ ವಚನಗಳು

ಶಿಲೆಯೊಳಗಣ ಪಾವನಕನಂತೆ, ಉದಕದೊಳಗಣ ಪ್ರತಿಬಿಂಬದಂತೆ ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಯಬ್ದದಂತೆ ಗುಹೇಶ್ವರ, ನಿಮ್ಮ ಶರಣ ಸಂಬಂಧ.

ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ? ಬೀಜದೊಳಗಣ ವೃಕ್ಷ ಉಲಿಯಬಲ್ಲುದೆ? ತೋರಲಿಲ್ಲಾಗಿ ಬೀರಲಿಲ್ಲಾರಿಗೆಯು ಗುಹೆಶ್ವರ, ನಿಮ್ಮ ನಿಲವನನುಭವಸುಖಿ ಬಲ್ಲ.

ಎನ್ನ ನಾನರಿಯದಂದು ಮುನ್ನ ನೀನೇನಾಗಿದ್ದೆ ಹೇಳಾ? ಮುನ್ನ ನೀ ಬಾಯ ಮುಚ್ಚಿಕೊಂಡಿದ್ದೆಯೆಂಬುದ ನಾ ನಿನ್ನ ಕಣ್ಣಿದ ಕಂಡೆನು, ಎನ್ನ ನಾನರಿದ ಬಳಿಕ ಇನ್ನು ನೀ ಬಾಯ್ದೆರೆದು ಮಾತನಾಡಿದರೆ, ಅದನೆನ್ನ ಕಣ್ಣಿಂದ ಕಂಡು ನಾಚಿದೆ ನೋಡಾ! ಎನ್ನ ಕಾಬ ನಿನಗೆ, ನಿನ್ನ ಕಾಬ ಎನಗೆ ಸಂಚದ ನೋಟ ಒಂದೆ ನೋಡಾ! ಗುಹೇಶ್ವರ, ನಿನ್ನ ಬೆಡಗಿನ ಬಿನ್ನಾಣವನರಿದೆ ನೋಡಾ.

ಕಾಲುಗಳೆರಡೂ ಗಾಲಿ ಕಂಡಯ್ಯ; ದೇಹವೆಂಬುದೊಂದು ತುಂಬಿದ ಬಂಡಿ ಕಂಡಯ್ಯ; ಬಂಡಿಯ ಹೊಡೆವವರೈವರು ಮಾನಿಸರು; ಒಬ್ಬರಿಗೊಬ್ಬರು ಸಮವಿಲ್ಲಯ್ಯ; ಅದರಿಚ್ಛೆಯನರಿದು ಹೊಡೆಯದಿದ್ದರೆ ಅದರಚ್ಚು ಮುರಿಯಿತ್ತು ಗುಹೇಶ್ವರ.

ಸಂಸಾರವೆಂಬ ಹೆಣ ಬಿದ್ದಿರೆ ತಿನ ಬಂದ ನಾಯ ಜಗಳವ ನೋಡಿರೆ; ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿದೆ! ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೇ!

ಹಳ್ಳದೊಳಗೊಂದು ಹುಳ್ಳಿ., ಬುರುತ್ತಿರಲು ನೊರೆತೆರೆಗಳು ತಾಗಿದವಲ್ಲಾ! ಸಂಸಾರವೆಂಬ ಸಾಗರದೊಳಗೆ ಸುಖ ದುಃಖಂಗಳು ತಾಗಿದವಲ್ಲಾ! ಇದಕ್ಕಿದು ಮೂರ್ತಿಯಾದ ಕಾರಣ, ಪ್ರಳಯವಾಯಿತ್ತು ಗುಹೇಶ್ವರ,

ಕಂಡುದ ಹಿಡಿಯಲೊಲ್ಲದೆ, ಕಾಣದುದನರಿಸಿ ಹಿಡಿದಹೆನೆಂದೆ ಸಿಕ್ಕದೆಂಬ ಬಳಲಿಕೆಯ ನೋಡಾ! ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ, ಕಾಣದುದು ಕಾಣಬಹುದು ಗುಹೇಶ್ವರ.

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದೆ, ಆಗಲಿ ಮಹಾಪ್ರಸಾದವೆಂದನಯ್ಯಾ; ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ, ಆಗಲಿ ಮಹಾಪ್ರಸಾದವಂದೆನಯ್ಯ; ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದರೆ ಆಗಲಿ ಮಹಾ ಪ್ರಸಾದವೆಂದನಯ್ಯ; ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ, ಆಗಲಿ ಮಹಾಪ್ರಸದವೆಂದನಯ್ಯ; ಗುಹೇಶ್ವರ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆನು!

ಎತ್ತಣ ಮಾಮರ? ಎತ್ತಣ ಕೋಗಿಲೆ? ಎತ್ತಣಿಂದೆತ್ತ ಸಂಬಂಧವಯ್ಯ? ಬೆಟ್ಟದ ನೆಲ್ಲಿಯಕಾಯಿ, ಸಮುದ್ರದೊಳಗಣ ಉಪ್ಪು ಎತ್ತಣಿಂದೆತ್ತ ಸಂಬಂಧವಯ್ಯ? ಗುಹೇಶ್ವರಲಿಂಗಕ್ಕೆಯು ಎನಗೆಯೂ ಎತ್ತಣಿಂದೆತ್ತ ಸಂಬಂಧವಯ್ಯ?

ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಬತ್ತವಿಲ್ಲದಿದ್ದರೆ ಆ ಬೆವಸಾಯದ ಘೋರವೇತಕಯ್ಯ? ಕ್ರಯವಿಕ್ರಯವ ಮಾಡಿ ಮನೆಯ ಸಂಚು ನಡೆಯದನ್ನಕ್ಕ ಆ ಕ್ರಯವಿಕ್ರಯದ ಘೋರವೇತಕಯ್ಯ? ಒಡೆಯನನೋಲೈಸಿ ತನುವಿಂಗೆ ಅಷ್ಟಭೋಗವ ಪಡೆಯದಿದ್ದರೆ ಆ ಓಲಗದ ಘೋರವೇತಕಯ್ಯ? ಭಕ್ತನಾಗಿ ಭವಂ ನಾಸ್ತಿಯಾಗದಿದ್ದರೆ ಆ ಉಪದೇಶವ ಕೊಟ್ಟ ಗುರು, ಕೊಂಡ ಶಿಷ್ಯ. ಇವರಿಬ್ಬರ ಮನೆಯಲ್ಲಿ ಮಾರಿ ಹೋಗಲಿ! ಗುಹೇಶ್ವರಲಿಂಗವತ್ತಲೆ ಹೋಗಲಿ!

ಎಣ್ಣೆ ಬೇರೆ, ಬತ್ತಿ ಬೇರೆ, ಎರಡೂ ಕೂಡಿ ಸೊಡರಾಯಿತ್ತು; ಪುಣ್ಯ ಬೇರೆ, ಪಾಪ ಬೇರೆ; ಎರಡೂ ಕೂಡಿ ಒಡಲಾಯಿತ್ತು. ಮಿಗ ಬಾರದು, ಮಿಗದಿರಬಾರದು, ಒಡಲಿಚ್ಛೆಯ ಸಲಿಸದೆ ನಿಮಿಷವಿರಬಾರದು, ಕಾಯಗುಣವಳಿದು, ಮಾಯಾಜ್ಯೋತಿ ವಾಯುವ ಕೂಡದ ಮುನ್ನ, ಭಕ್ತಿಯ ಮಾಡಬಲ್ಲಾತನೇ ದೇವ, ಗುಹೇಶ್ವರ.

ಹೊನ್ನುಮಾಯೆಯೆಂಬರು, ಹೊನ್ನು ಮಾಯಯಲ್ಲ; ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ; ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ, ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರ.

ಕಳ್ಳಗಂಜಿ ಕಾಡ ಹೊಕ್ಕಡೆ, ಹುಲಿ ತಿಂಬುದ ಮಾಬುದೆ? ಹುಲಿಗಂಜಿ ಹುತ್ತವ ಹೊಕ್ಕಡೆ, ಸರ್ಪ ತಿಂಬುದ ಮಾಬುದೆ? ಕಾಲಕ್ಕಂಜಿ ಭಕ್ತನಾದಡೆ, ಕರ್ಮ ತಿಂಬುದ ಮಾಬುದೆ? ಇಂತೀ ಮೃತ್ಯುವಿನ ಬಾಯ ತುತ್ತಾದ ವೇಷಡಂಬಕರನೇನೆಂಬೆ, ಗುಹೇಶ್ವರ?

ಪ್ರಣತೆಯೂ ಇದೆ, ಬತ್ತಿಯೂ ಇದೆ, ಜ್ಯೋತಿಯು ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೋ? ಗುರುವಿದೆ, ಲಿಂಗವಿದೆ, ಶಿಷ್ಯನ ಸುಜ್ಞಾನವಂಕುರಿಸದನ್ನಕ್ಕರ ಭಕ್ತಿಯೆಲ್ಲಿಯದೋ? ಸೋಹಮೆಂಬುದ ಕೇಳೀ ದಾಸೋಹವ ಮಾಡಿದಿದ್ದರೆ ಅತಿಗಳೆದನು, ಗುಹೇಶ್ವರ.

ಕಾಯಕ್ಕೆ ಮಜ್ಜನ, ಪ್ರಾಣಕ್ಕೆ ಓಗರ, ಇವ ಮಾಡಲೇಬೇಕು ಸುಳಿವ ಸುಳ್ಳುಹುಳ್ಳನ್ನಕ್ಕ ಇವ ಮಾಡಲೇ ಬೇಕು, ಗುಹೇಶ್ವರನೆಂಬ ಆತ್ಮನುಳ್ಳನ್ನಕ್ಕರ ಭಕ್ತಿಯ ಮಾಡಲೇಬೇಕು.

ಅದ್ವೈತವ ನುಡಿದು ಅಹಂಕಾರಿಯಾದೆನಯ್ಯಾ! ಬ್ರಹ್ಮನ ನುಡಿದು ಭ್ರಮಿತನಾದೆನಯ್ಯಾ! ಶೂನ್ಯವ ನುಡಿದು ಸುಖದುಃಖಕ್ಕೆ ಗುರಿಯಾದೆನಯ್ಯ! ಗುಹೇಶ್ವರ ನಿಮ್ಮ ಶರಣ ಸಂಗನಬಸವಣ್ಣನ ಸಾನ್ನಿಧ್ಯದಿಂದಾನು ಸದ್ಭಕ್ತನಾದೆನಯ್ಯ!

ಮುಂದು ಜಾವದಲೆದ್ದು, ಲಿಂಗದಂಘ್ರಿಯ ಮುಟ್ಟಿ, ಸುಪ್ರಭಾತ ಸಮಯದಲ್ಲಿ ಶಿವಭಕ್ತರ ಮುಖವ ನೋಡುವುದು, ಹುಟ್ಟಿದುದಕ್ಕಿದೆ ಸಫಲ ನೋಡಾ! ಸತ್ಯವಚನವಿಂತೆಂದುದು. ಇವಿಲ್ಲದವರ ನಾನೊಲ್ಲೆ, ಗುಹೇಶ್ವರ.

ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ, ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ. ಗುಹೇಶ್ವರ ನಿಮಗಾಗಿ ಸತ್ತವನಾರವನು ಕಾಣೆ.

ಅಮೃತ ಸಾಗರದೊಳಿಗಿದ್ದು ಆಕಳ ಚಿಂತೆಯೇಕೆ? ಮೇರು ಮಂದಿರದೊಳಗಿದ್ದು ಜರಗ ತೊಳೆವ ಚಿಂತೆಯೇಕೆ? ಶ್ರೀಗುರುವಿನೊಳಗಿದ್ದು ತತ್ತ್ವದ್ಯದ ಚಿಂತೆಯೇಕೆ? ಪ್ರಸಾದದೊಳಗಿದ್ದು ಮುಕ್ತಿಯ ಚಿಂತೆಯೇಕೆ? ಕರಸ್ಥಲದೊಳಗೆ ಲಿಂಗವಿದ್ದ ಬಳಿಕ ಮತ್ತಿನ್ನಾವ ಚಿಂತೆಯೇಕೆ ಹೇಳಾ ಗುಹೇಶ್ವರಾ?

ಆಸೆಯೆಂಬ ಕೂಸನೆತ್ತಲು. ರೋಷವೆಂಬ ತಾಯಿ ಮುಂದೆ ಬಂದಿಪ್ಪಳು ನೋಡಾ! ಇಂತೆರಡಿಲ್ಲದ ಕೂಸನೆತ್ತಬಲ್ಲಡೆ, ಆತನೇ ಲಿಂಗೈಕ್ಯನ ಗುಹೇಶ್ವರ.

ಬೆಟ್ಟಕ್ಕೆ ಚಳಿಯಾದಡೆ ಏನ ಹೊದಿಸುವರಯ್ಯ? ಬಯಲು ಬತ್ತಲೆಯಿದ್ದರೆ ಏನನುಡಿಸುವಯ್ಯ? ಭಕ್ತನು ಭವಿಯಾದಡೆ ಏನನುಪಮಿಸುವೆನಯ್ಯ, ಗುಹೇಶ್ವರ?

ಹಾಲ ನೇಮವ ಹಿಡಿದಾತ ಬೆಕ್ಕಾಗಿ ಹುಟ್ಟುವ, ಕಡಲೆಯ ನೇಮವ ಹಿಡಿದಾತ ಕುದುರೆಯಾಗಿ ಹುಟ್ಟುವ, ಅಗ್ಘಣಿಯ ನೇಮವ ಹಿಡಿದಾತ ಕಪ್ಪೆಯಾಗಿ ಹುಟ್ಟುವ; ಪುಷ್ಪದ

ನೇಮವ ಹಿಡಿದಾತ ತುಂಬಿಯಾಗಿ ಹುಟ್ಟುವ! ಇವು ಷಟ್ಸ್ಥಲಕ್ಕೆ ಹೊರಗ, ಭಕ್ತಿನಿಷ್ಠೆಯಿಲ್ಲದವರ ಕಂಡರೆ ಮೆಚ್ಚ ಗುಹೇಶ್ವರ.

ಕೊಟ್ಟ ಕುದುರೆಯನೇರಲರಿಯದೆ. ಮತ್ತೊಂದು ಕುದುರೆಯ ಬಸಯವುವರು ವೀರರೂ ಅಲ್ಲ, ಧೀರರೂ ಅಲ್ಲ. ಇದು ಕಾರಣ ನೆರೆ ಮೂರು ಲೋಕವೆಲ್ಲವು ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ! ಗುಹೇಶ್ವರ ನೆಂಬ ಲಿಂಗವನರೆತ್ತ ಬಲ್ಲರೋ?

ದೇಶ ಗುರಿಯಾಗಿ ಲಯವಾಗಿ ಹೋದವರ ಕಂಡೆ; ತಮಂಧ ಗುರಿಯಾಗಿ ಲಯವಾಗಿ ಹೋದವರ ಕಂಡೆ; ಕಾಮ ಗುರಿಯಾಗಿ ಬೆಂದು ಹೋದವರ ಕಂಡೆ; ನೀ ಗುರಿಯಾಗಿ ಹೋದವರನಾರನೂ ಕಾಣೆ, ಗುಹೇಶ್ವರ!

ಮರನೊಳಗಣ ಪತ್ರಫಲಂಗಳು ಮರಕಾಲವಶದಲ್ಲಿ ತೋರುವಂತೆ, ಹರನೊಳಗಣ ಪ್ರಕೃತಿಸ್ವಭಾವಂಗಳು ಹರಭಾವದಿಚ್ಛೆಗೆ ತೋರುವವು, ಲೀಲೆಯಾದಡುಮಾಪತಿ, ಲೀಲೆ ತಪ್ಪಿದಡೆ ಸ್ವಯಂಭು, ಗುಹೇಶ್ವರ!

ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು? ಹಸಿವು ಹೋಹದೆ? ಅಂಗದ ಮೇಲೆ ಲಿಂಗಸ್ವಾಯತವಾದರೇನು? ಭಕ್ತನಾಗಬಲ್ಲನೆ? ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಿದಡೆ ಆ ಕಲ್ಲು ಲಿಂಗವೇ? ಆ ಮೆಳೆ ಭಕ್ತನೆ? ಇಟ್ಟಾತ ಗುರುವೆ? ಇಂತಪ್ಪವರ ಕಂಡಡೆ ನಾಚುವೆನಯ್ಯ ಗುಹೇಶ್ವರ.

ಕಲ್ಲು ದೇವರೆಂದು ಪೂಜಿಸುವರು. ಆಗದು ಕಾಣಿರೋ, ಅಗಡಿಗರಾದಿರಲ್ಲಾ. ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯ ಕೊಡುವಂತೆ, ಗುಹೇಶ್ವರ.

ಹಿಡಿವ ಕೈಯ ಮೇಲೆ ಕತ್ತಲೆಯಯ್ಯ; ನೋಡುವ ಕಂಗಳ ಮೇಲೆ ಕತ್ತಲೆಯಯ್ಯ; ನೆನೆವ ಮನದ ಮೇಲೆ ಕತ್ತಲೆಯಯ್ಯ; ಕತ್ತಲೆಯೆಂಬುದು ಇತ್ತಲೆಯಯ್ಯ, ಗುಹೇಶ್ವರನೆಂಬುದು ಅತ್ತಲೆಯಯ್ಯ!

ಅಷ್ಟಾಂಗಯೋಗದಲ್ಲಿ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣಸಮಾಧಿಯೆಂದು. ಎರಡು ಯೋಗ ಉಂಟು ಅಲ್ಲಿ; ಅಳಿದು ಕೂಡುವುದೊಂದು ಯೋಗ, ಅಳಿಯದೇ ಕೊಡುವುದೊಂದು ಯೋಗ, ಈ ಎರಡು ಯೋಗದೊಳಗೆ ಅಳಿಯದೆ ಕೂಡುವ ಯೋಗವರಿದು ಕಾಣಾ, ಗುಹೇಶ್ವರ.

ನೆನೆನೆನೆಯೆಂದಡೆ ಏನ ನೆನೆನವೆನಯ್ಯ? ಎನ್ನ ಕಾಯವೇ ಕೈಲಾಸವಾಯಿತ್ತು; ತನುವೆ ಸೆಜ್ಜೆಯಾಯಿತ್ತು. ನೆನೆವಡೆ ದೇವನುಂಟೆ? ನೋಡುವಡೆ ಭಕ್ತನುಂಟೆ? ಗುಹೇಶ್ವರಲಿಂಗ ಲೀಯವಾಯಿತ್ತು.

ಕಾಮನ ಸುಟ್ಟು, ಹೋಮನನುರುಹಿ, ತ್ರಿಪುರ ಸಂಹಾರದ ಕೀಲ ಬಲ್ಲಡೆ, ಯೋಗಿಯಾದಡೇನು? ಭೋಗಿಯಾದಡೇನು? ಶೈವನಾದಡೇನು? ಸನ್ಯಾಸಿಯಾದಡೇನು? ಅಶನವ ತೊರೆದಾತ, ವ್ಯಸನವ ಮರೆದಾತ, ಗುಹೇಶ್ವರ ಲಿಂಗದಲ್ಲಿ ಅವರ ಹಿರಿಯರೆಂಬೆನು.

ಸುತ್ತಿಸುತ್ತಿ ಬಂದಡಿಲ್ಲ, ಲಕ್ಷಗಂಗೆಯ ಮಿಂದಡಿಲ್ಲ. ತುಟ್ಟ ತುದಿಯ ಮೇರುಗಿರಿದು ಮೆಟ್ಟಿ ಕೂಗಿದಡಿಲ್ಲ. ನಿತ್ಯ ನೇಮದಿಂದ ತನುವ ಮುಟ್ಟಿಕೊಂಡಡಿಲ್ಲ. ನಿಚ್ಚಕ್ಕೆ ನಿಚ್ಚ ನೆನೆವ ಮನವ, ಅಂದಂದಿಂಗೆ ಅತ್ತಲಿತ್ತ ಹರಿವ ಮನವ, ಚಿತ್ತದಲ್ಲಿ ನಿಸಲ್ಲಬಲ್ಲಡೆ, ಬಚ್ಚ ಬರಿಯ ಬೆಳಗು ಗುಹೇಶ್ವರ ಲಿಂಗವು.

ಅರಿದೆವರಿದೆವಂಬಿರಿ; ಅರಿದ ಪರಿಯೆಂತು ಹೇಳಿರೆ? ಅರಿದವರಿರದೆವೆಂಬರೆ? ಅರಿಯಬಾರದ ಘನವನರಿದವರು ಅರಿಯದಂತಿಪ್ಪರು, ಗುಹೇಶ್ವರ.

ಇಹಲೋಕ ಪರಲೋಕ ತಾನಿದ್ದಲ್ಲಿ; ಗಗನಮೇರುಮಂದಿರ ತಾನಿದ್ದಲ್ಲಿ; ಸಕಲಭುವನ ತಾನಿದ್ದಲ್ಲಿ; ಸತ್ಯನಿತ್ಯ ನಿರಂಜನಶಿವತತ್ವ ತಾನಿದ್ದಲ್ಲಿ; ಉತ್ತರೋತ್ತರ ಚತುರ್ವಳಯ ತಾನಿದ್ದಲ್ಲಿ; ಚಂದ್ರಸೀರ್ಯತಾರಾ ಮಂಡಲ ತಾನಿದ್ದಲ್ಲಿ; ಅಂತರ ಮಹದಂತರ ತಾನಿದ್ದಲ್ಲಿ; ಸ್ವತಂತ್ರ ಗುಹೇಶ್ವರ ಲಿಂಗ ತಾನಿದ್ದಲ್ಲಿ.

ಗಗನವೇ ಗುಂಡಿಗೆ ಆಕಾಶವೇ ಅಗ್ಘವಣಿ; ಚಂದ್ರ ಸೂರ್ಯರಿಬ್ಬರೂ ಪುಷ್ಪ ನೋಡಾ! ಬ್ರಹ್ಮ ಧೂಪ, ವಿಷ್ಣು ದೀಪ, ರುದ್ರನೋಗರ ಸುಯಿಧಾನ ನೋಡಾ ! ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ!

ಕಂಗಳ ಕರುಳ ಕೊಯ್ದವರ ಮನದ ತಿರುಳ ಹುರಿದವರ, ಮಾತಿನ ಮೊದಲ ಬಲ್ಲವರನೆನಗೊಮ್ಮೆ ತೋರಾ, ಗುಹೇಶ್ವರ.

ಒಂದು ಇಲ್ಲದ ಬಿಂದುವ, ತಂದೆಯಿಲ್ಲದ ಕಂದನ, ಮಾತೆಯಿಲ್ಲದ ಕಂದನ, ಮಾತೆಯಿಲ್ಲದ ಜಾತನ, ಗಮನವಿಲ್ಲದ ಗಮ್ಯನ, ಮೂವರರಿಯದ ಮುಗ್ಧನ ತಾವ ತೋರಿಸು, ಗುಹೇಶ್ವರ.

ಆಶೇಯೆಂಬ ಶೂಲದ ಮೇಲೆ ವೇಷವೆಂಬ ಹೆಣನ ಕುಳ್ಳಿರಿಸಿ, ಧರೆಯ ಮೇಲುಳ್ಳ ಹಿರಿಯರು ಹೇಂಗೆ ಸವೆದೆರು ನೋಡಾ! ಆಶೆಯ ಮುಂದಿಟ್ಟುಕೊಂಡು ಸಉಳಿವ ಹಿರಿಯರ ಕಂಡು ಹೇಸಿಕೆಯಾಗಿತ್ತು ಗುಹೇಶ್ವರ!

ಸತ್ತು ಹುಟ್ಟಿ, ಕೆಟ್ಟವರೆಲ್ಲರೂ ದೇವಲೋಕಕ್ಕೆ ಹೋದರೆಂಬ ಬಾಲ ಭಾಷೆಯ ಕೇಳಲಾಗದು. ಸಾಯದ ಮುನ್ನ ಸ್ವಯವನರಿದಡೆ ದೇವ ನೊಲಿವ ನಮ್ಮ ಗುಹೇಶ್ವರ.

ನಿಜವನರಿದ ನಿಶ್ಚಿಂತನೆ ಮರಣವ ಗೆಲಿದ ಮಹಂತನೆ ಘನವ ಕಂಡ ಮಹಿಮನೆ, ಪರವನೊಳಕೊಂಡ ಪರಿಣಾಮಿಯೆ, ಬಯಲಲೊದಗಿದ ಭರಿತನೆ, ಗುಹೇಶ್ವರಲಿಂಗ ನಿರಾಳವನೊಳಕೊಂಡ ಸಹಜನೆ!

ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯಯ್ಯ! ಬಯಲ ಜೀವನ, ಬಯಲ ಭಾವನೆಯ ಬಯಲು ಬಯಲಾಗಿ ಬಯಲಾಯಿತ್ತಯ್ಯ ! ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು, ನಾ ನಿಮ್ಮ ನಂಬಿ ಬಯಲಾದೆ, ಗುಹೇಶ್ವರ!

ಕರ್ಪೂರದ ಗಿರಿಯ ಉರಿಯ ಹಿಡಿದಡೆ ಇದ್ದಿಲುಂಟೆ? ಮಂಜಿನ ಶಿವಾಲಯಕ್ಕೆ ಬಿಸಿಲ ಕಳಶವುಂಟೆ? ಕೆಂಡದ ಗಿರಿಯ ನರಗಿನ ಬಾಣದ ಲೆಚ್ಚಡೆ ಮರಳಿ ಬಾಣವನರಸಲುಂಟೆ? ಗುಹೇಶ್ವರನೆಂಬ ಲಿಂಗವನರಿದು ಮರಳಿ ನೆನೆಯಲುಂಟೆ?

ಕರಿಯು ಸ್ಪರ್ಶನೇಂದ್ರಿಯದಿಂದ ಬಂಧನವಡೆದಳಿಯಿತ್ತು; ಪತಂಗನು ರೂಪೇಂದ್ರಿಯದಿಂದ ಬಂಧನವಡೆದಳಿಯಿತ್ತು; ಭೃಂಗನು ಗಂಧೇಂದ್ರಿಯದಿಂದ ಬಂಧನವಡೆದೆಳೆಯಿತ್ತು; ಕುರಂಗನು ಶಬ್ದೇಂದ್ರಿಯದಿಂದ ಬಂಧನವಡೆದಳಿಯಿತ್ತು; ಮತ್ಸ್ಯವು ರಸನೇಂದ್ರಿಯದಿಂದ ಬಂಧನ ವಡೆದಳಿಯಿತ್ತು! ಇಂತೀ ಒಂದೊಂದು ಇಂದ್ರಿಯೋದ್ರೇಕದಿಂದ ಒಂದೊಂದು ಪ್ರಾಣಿಯ ಪ್ರಳಯವಾಯಿತ್ತು. ಪಂಚೇಂದ್ರಿಯಗಳ ಒಂದೊಂದು ಘಟದಲ್ಲಿ ತಾಳಿಹ ಮನುಷ್ಯ ಪ್ರಾಣಿಗಳಿಗೆ ಮರವೆ ಎಡೆಗೊಂಡು, ದೇಹ ಮೋಹ ಭ್ರಾಂತು ಮುಸುಕಿ, ಮಾಯೆಯ ಬಾಯ ತುತ್ತಹುದು ಚೋದ್ಯವೇನು ಹೇಳಾ, ಗುಹೇಶ್ವರ?

ಆವ ಜಾತಿಯಲ್ಲಾದರೂ ಆಗಲಿ ಪುರಾತನರ ಚಾರಿತ್ರದಲ್ಲಿ ನಡೆದು, ಗುರುಲಿಂಗ ಜಂಗಮಕ್ಕೆ ಅರ್ಥಪ್ರಾಣಾಭಿಮಾನವಂ ಕೊಟ್ಟು ಅಹಂ ಕಾರವಳಿದಂಥಾ ಪುರಾತನರ ಬಾಯ ತುಂಬಲವ ಮೆಲುವೆ, ಬೀಳುಡುಗೆಯ ಹೊದೆವೆ, ಆತನ ಪಾದರಕ್ಷೆಗಳೆರಡನೂ

ಮಂಡೆಯ ಮೇಲೆ ಹೊತ್ತುಕೊಂಡು ಬದುಕುವೆನಯ್ಯ! ಆ ಗಣಂಗಳ ದಾಸನ ದಾಸ ನಾನು ಜನ್ಮ ಜನ್ಮದಲ್ಲಿ ಆಗುವೆ ಕಾಣಾ, ಗುಹೇಶ್ವರ!

ಎಲೆ ಮನವೆ, ನೀ ನಿನ್ನ ನಿಜವ ತಿಳಿವಡೆ ಆ ನಿನ್ನ ನಿಜವ ಹೇಳುವೆ ಕೇಳು; ಅದು ಕೇವಲ ಜ್ಯೋತಿ, ಅದು ವರ್ಣಾತೀತ. ನೀನದ ನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು, ಅದೀಗ ನಿನ್ನ ಪರಿಪೂರ್ಣತ್ವದ ನೆಲೆ. ಆ ನಿನ್ನ ನಿಜವ ನಿಶ್ಚೈಸಿ ನಿರ್ಗಮಾನಿಯಾದಲ್ಲಿ, ಅದೇ ನಿನ್ನ ಸಮ್ಯ ಜ್ಞಾನದ ತೋರಿಕೆ.

ಹರಿವ ನದಿಗೆ ಮೈಯೆಲ್ಲ ಕಾಲು, ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ, ಬೀಸುವ ಗಾಳಿಗೆ ಮೈಯೆಲ್ಲ ಕೈ. ಇದು ಕಾರಣ, ಗುಹೇಶ್ವರ, ನಿಮ್ಮ ಶರಣಂಗೆ ಸರ್ವಾಂಗವೆಲ್ಲ ಲಿಂಗಮಯವಯ್ಯ.

ಕಂಡುದೆಲ್ಲ ಪಾವನ, ಕೇಳಿತ್ತೆಲ್ಲ ಪರಮಬೋಧೆ. ಮುಟ್ಟಿತೆಲ್ಲ ಪರುಷದ ಸೋಂಕು, ಒಡನೆ ನುಡಿದವರೆಲ್ರೂ ಸದ್ಯೋನ್ಮುಕ್ತರು, ಸುಳಿದ ಸುಳುಹೆಲ್ಲ ಜಗತ್ಪಾವನ, ಮೆಟ್ಟಿದ ಧರೆಯೆಲ್ಲವೂ ಅವಿಮುಕ್ತಿ ಕ್ಷೇತ್ರ, ಸೋಂಕಿದ ಜಲವೆಲ್ಲವೂ ಪುಣ್ಯತೀರ್ಥಂಗಳು. ಶರಣೆಂದು ಭಕ್ತಿಯ ಮಾಡಿದವರೆಲ್ಲರೂ ಸಾಯುಜ್ಯರು! ಗುಹೇಶ್ವರನ ಶರಣರ ಸುಳುಹಿನ ಸೊಗಸುನುಪಮಿಸಬಾರದು.

ತನುವ ತೋಟವ ಮಾಡಿ, ಮನವ ಗುದ್ದಲಿ ಮಾಡಿ, ಅಗೆದು ಕಳೆದೆನಯ್ಯ ಭ್ರಾಂತಿನ ಬೇರ ಒಡೆದು. ಸಂಸಾರದ ಹೆಂಟೆಯ ಬಗಿದು ಬಿತ್ತಿದೆನಯ್ಯ ಬ್ರಹ್ಮಬೀಜವ. ಅಖಂಡ ಮಂಡಲವೆಂಬ ಭಾವಿ, ಪವನವೆ ರಾಟಾಳ, ಸುಷುಮ್ನ ನಾಳದಿಂದಲೆ ಉದಕವ ತಿದ್ದಿ, ಬಸವಗಳೈವರು ಹಸಗೆಡಿಸಿಹರೆಂದು ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ. ಅವಾಗಳೂ ಈ ತೋಟದೊಳಗೆ ಜಾಗರವಿದ್ದು ಈ ಸಸಿಯ ಸಲುಹಿದೆ ಕಾಣಾ. ಗುಹೇಶ್ವರ.

ಒಡಲೊಳಗಿದ್ದು, ಒಡಲಿಂಗಾಧಾರವಾಗಿ, ಒಡಲ ಸೋಂಕದೆ ಒಡಲ ಬೆಳಗುವ ಪರಿಯ ನೋಡಾ! ಬೆಳಗಿಂಗೆ ಬೆಳಗಾಗಿ ಬೆಳುಗವ ಪರಿಯ ನೋಡಾ! ಪರಮಚೈತನ್ಯ ನಿರಾಳ ಗುಹೇಶ್ವರಲಿಂಗವು ನೋಡಾ.

ಮಣಿಯನೆಣಿಸಿ ಕಾಲವ ಕಳೆಯಬೇಡ. ಕಣಿಯ ಪೂಜಿಸಿ ಕಾಲವ ಕಳೆಯಬೇಡಾ. ಕ್ಷಣವಾದರೆಯೂ ಆಗಲಿ ನಿಜದ ನೆನಹೇ ಸಾಕು. ಕ್ಷಣಾರ್ಧವಾದಡೆಯೂ ಆಗಲಿ ನಿಜದ ನೆನಹೇ ಸಾಕು. ಬೆಂಕಿಯೊಳಗುಳ್ಳ ಗುಣ ಬಿಸಿನೀರಲುಂಟೇ ಗುಹೇಶ್ವರ?

ಕುಂಡಲಿಗನ ಕೀಟಕನಂತೆ ಮೈ ಮಣ್ಣಾಗದಂತೆ ಇದ್ದೆಯಲ್ಲ ಬಸವಣ್ಣ; ಜಲದೊಳಗಣ ತಾವರೆಯಂತೆ ಹೊದ್ದಿ ಹೊದ್ದದಂತೆ ಇದ್ದೆಯಲ್ಲ ಬಸವಣ್ಣ; ಜಲದಿಂದಾದ ಮೌಕ್ತಿಕದಂತೆ ಜಲವು ತಾನಾಗದಂತಿದ್ದೆಯಲ್ಲ ಬಸವಣ್ಣ; ಗುಹೇಶ್ವರಲಿಂಗದಾಣತಿವಿಡಿದು ತನುಗುಣಮತ್ತರಾಗಿದದ ಐಶ್ವರ್ಯಾಂಧಕರ ಮತವನೇನ ಮಾಡಬಂದೆಯ್ಯೆ ಸಂಗನ ಬಸವಣ್ಣ?

ಕಂಡೆನೆಂಬುದ ಕಂಗೆ ಮರವೆ; ಕಾಣೆನೆಂಬು ಮನದ ಮರವೆ; ಕೂಡಿದೆನೆಂಬುದು ಅರಿವಿನ ಮರವೆ; ಅಗಲಿದೆನೆಂಬುದು ಮರಹಿನ ಮರವೆ; ಇಂತು ಕಡೆ. ಕಾಣೆ, ಕೂಡಿದೆನಗಲಿದೆನೆಂಬ ಭ್ರಾಂತಿಸೂತಕವ ತಿಳಿದು ನೋಡಲು ಗುಹೇಶ್ವರನೆಂಬ ಲಿಂಗವನಗಲಲೆಡೆಯಿಲ್ಲ ಕೇಳಾ. ಎಲೆ ತಾಯೆ.

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆರೆದುಗಿ ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು ತೊಳ ಬೆಳಗುತ್ತಿರ್ದುದಯ್ಯ ಶಿವನ ಪ್ರಕಾಶ! ಆ ಬೆಳಗಿನೊಳಗೊಪ್ಪುತಿರ್ದರಯ್ಯ ಅಸಂಖ್ಯಾತ ಭಕ್ತಮಹಾಗಣಂಗಳು. ಶಿವಭಕ್ತರಿರ್ದ ಕ್ಷೇತ್ರ ಅವಿಮುಕ್ತಕ್ಷೇತ್ರವೆಂಬುದು ಹುಸಿಯೇ? ಶಿವಭಕ್ತರಿರ್ದ ದೇಶವು ಪಾವನವೆಂಬುದು ಹುಸಿಯೇ? ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ ಸಂಗನಬಸವಣ್ಣನ ಕಂಡು ಬದುಕಿದೆ ಕಾಣಾ ಸಿದ್ಧರಾಮಯ್ಯ.

ನೋಟವೇ ಕೂಟ, ಕೂಟವೇ ಪ್ರಾಣ, ಪ್ರಾಣವೇ ಏಕ, ಏಕವೇ ಸಮರಸ, ಸಮರಸವೇ ಲಿಂಗ, ಲಿಂಗವೆ ಪರಿಪೂರ್ಣ, ಪರಿಪೂರ್ಣವೆ ಪರಬ್ರಹ್ಮ. ಪರಬ್ರಹ್ಮವೇ ತಾನು. ಇಂತೀ ನಿಜವ ಗುಹೇಶ್ವರ ಬಲ್ಲನಲ್ಲದೆ ಕಣ್ಣುಗೆಟ್ಟಣ್ಣಗಳೆತ್ತ ಬಲ್ಲರು ನೋಡೈ.

* * * * *

# ಸಿದ್ಧರಾಮ

# ಸಿದ್ಧರಾಮ

ತನ್ನ ನಿಷ್ಠೆಯಿಂದ ಶ್ರೀಶೈಲದ ಮಲ್ಲಯ್ಯನನ್ನು ಒಲಿಸಿಕೊಂಡ ಬಲ ಭಕ್ತ. ಇವನಿಂದ ಸೊನ್ನಲಾಪುರವೇ ಅಭಿನವ ಶ್ರೀಶೈಲವಾಯಿತು. ಬಸವಣ್ಣನವರ ಬಳಗವನ್ನು ಸೇರಿ ಶೂನ್ಯ ಸಿಂಹಾಸನಕ್ಕೆ ಜಗದ್ಗುರುಗಳಾದರು ಸಿದ್ಧರಾಮರು. ಅತಿ ಶ್ರೇಷ್ಠ ವಚನಕಾರರಲ್ಲಿ ಒಬ್ಬರು.

# ಸಿದ್ಧರಾಮ

ಸಂಕ್ರಮಣದ ಸಮಯದಲ್ಲಿ ಸೊನ್ನಲಿಗೆ ಸಡಗರವನ್ನು ನೋಡಬೇಕು. ಆಗ ಶಿವಯೋಗೀಶ್ವರ ಸಿದ್ಧರಾಮೇಶ್ವರರ ಜಾತ್ರೆ ಜರುಗುತ್ತದೆ.ನೂರು ಸಾವಿರಕ್ಕೂ ಮಿಕ್ಕಿ ಜನರು ಸೇರುತ್ತಾರೆ. ಎಂಟು ನೂರು ವರ್ಷಗಳಿಂದಲೂ ನಡೆದು ಬಂದಿರುವ ಈ ಜಾತ್ರೆಯ ಬಗ್ಗೆ ಜನರ ಉತ್ಸಾಹ ಕುಗ್ಗಿಲ್ಲ; ಹಿಗ್ಗುತ್ತಲೇ ನಡೆದಿದೆ. ಸಿದ್ಧರಾಮನ ಸತ್ಕೀರ್ತಿಯೂ ಮಸುಳಿಸಿಲ್ಲ, ಪಸರಿಸುತ್ತಲೇ ನಡೆದಿದೆ.

**ಈಗಲೇ ಗುಟ್ಟು ರಟ್ಟಾಗಲಿ:**

ಸಿದ್ಧರಾಮ ಹುಟ್ಟಿದ ಮೇಲೆ ಅವನ ಹಿರಿಮೆಯನ್ನು ಗುರುತಿಸಿದುದು ಹಿರಿದಲ್ಲ. ಅವನು ಹುಟ್ಟುವ ಮೊದಲೇ ಅವನ ಗರಿಮೆಯನ್ನು ಗುರುತಿಸಿದರೊಬ್ಬ ಮಹಾಗುರು. ಅವರೇ ರೇವಣಸಿದ್ಧೇಶ್ವರರು. ಗುರುತಿಸಿದ ಸ್ಥಳ ಅರಮನೆಯಲ್ಲ, ಗುರುಮನೆಯಲ್ಲ– ಗೌಡನ ಮನೆ. ಇಂದು ನಗರವಾಗಿ ಹಿಂದೆ ಸಣ್ಣ ಹಳ್ಳಿಯಾಗಿದ್ದ ಸೊನ್ನಲಾಪುರದ ಮುದ್ದುಗೌಡನ ಮನೆ, ಸತಿ ಸುಗ್ಗಲೆಯ ಮನೆ. ಮುದ್ದುಗೌಡ ಸುಗ್ಗಲೆಯರಾಗ ಹರೆಯದ ಗಂಡಹೆಂಡಿರೂ ಅಲ್ಲ–ಸಂತಾನದ ಚಿಂತೆಯಲ್ಲಿಯೇ ಕೊರಗಿ ಸೊರಗಿ ಮುಪ್ಪನ್ನು ಅಪ್ಪಿದ್ದ, ಸಂತಾನದ ಆಸೆಯನ್ನೇ ತೊರೆದುಬಿಟ್ಟಿದ್ದ ವೃದ್ಧ ದಂಪತಿಗಳು. ಆ ವಯಸ್ಸಿನಲ್ಲಿ ಅವರಿಗೆ ಜಗವನ್ನು ಬೆಳಗುವ ಮಗನೊಬ್ಬ ಹುಟ್ಟುವನೆಂದು ಅವರಿವರು ಹೇಳಿದ್ದರೆ ನಗಬೇಕು ಕೈ ತಟ್ಟಿ ಜನರು. ಆದರೆ ಹೇಳಿದವರು ಅವರಿವರಲ್ಲ – ಶ್ರೀ ಗುರು ರೇವಣಸಿದ್ಧೇಶ್ವರರು.

ಹೇಳಿದ ಬಗೆಯೂ ಬೆರಗುಗೊಳಿಸುವಂತಹದು. ಸೊನ್ನಲಿಗೆಯ ಸೀಮೆಗೆ ಶಿಷ್ಯಪರಿವಾರದೊಡನೆ ಬಂದರವರು ಒಂದು ದಿನ. ಸೊನ್ನಲಿಗೆಯನ್ನು ಕಾಣುತ್ತಲೇ ಪಲ್ಲಕ್ಕಿಯಿಂದ ಇಳಿದರು; ಅಡಿಗಳಲ್ಲಿದ್ದ ಆವುಗೆಗಳನ್ನು ಬಿಟ್ಟು ಸೊನ್ನಲಾಪುರಕ್ಕೆ ಮಣಿದರು, ಬರಿಗಾಲಿನಿಂದಲೇ ಮುಂದೆ ನಡೆದರು. ನೆರೆದ ಜನರಿಗೆ, ಹಿಂಬಾಲಿಸಿದ ಶಿಷ್ಯರಿಗೆ ಸೋಜಿಗ. ಯಾರೋ ಕೇಳಿಯೇಬಿಟ್ಟರು: "ಗುರುವರ, ಇಲ್ಲೆಲ್ಲಿಯೂ ಲಿಂಗವಿದ್ದಂತಿಲ್ಲ, ತೀರ್ಥವಿಲ್ಲ, ಕ್ಷೇತ್ರವಿಲ್ಲ. ತಾವೀ ತಾಣಕ್ಕೆ ಮಣಿದು, ಆವುಗೆಗಳನ್ನುಳಿದು ಪಾದಚಾರಿಗಳಾಗಿ ಈ ಊರನ್ನು ಪ್ರವೇಶಿಸುತ್ತಿರುವುದರ ಗುಟ್ಟಾವುದು?"

ಗುರು ರೇವಣ್ಣರು ನಿಶ್ಚಯದ ಸ್ವರದಲ್ಲಿಯೇ ಉತ್ತರಿಸಿದರು: "ಈಗಲೇ ಗುಟ್ಟು ರಟ್ಟಾಗಿಬಿಡಲಿ. ಬಹು ಬೇಗನೆ ಈ ಸಣ್ಣ ಹಳ್ಳೀ ಸೊನ್ನಲಿಗೆ ಲಿಂಗದ ಬೀಡಾಗಿ. ಪುಣ್ಯದ ಪುಂಜವಾಗಿ, ಮುಕ್ತಿ ಕ್ಷೇತ್ರವಾಗಿ, ಧರ್ಮದ ದಾನಿಯಾಗಿ ಧರೆಯಲ್ಲಿ ಮೆರೆಯುವುದು. ಇದಕ್ಕೆ ಕಾರಣನಾಗುವ ಕಾರಣಿಕ ಪುರುಷನೊಬ್ಬನು ಇಲ್ಲಿ ಉದಿಸುವನು."

> "ಈ ಊರ ರಾಣಿ ಚಮಲದೇವಿಯರ ಉದರದಲ್ಲಿ ಉದಿಸುವನೆ ಗುರುದೇವ?"
> "ಇಲ್ಲ, ಗೌಡಿತಿ ಸುಗ್ಗಲದೇವಿಯ ಪುಣ್ಯಗರ್ಭದಲ್ಲಿ ಉದಿಸುವನು."
> ಎಲ್ಲರೂ ಮೂಕವಿಸ್ಮಿತರಾದರು. ಮರುಮಾತಾಡದೆ ಗುರುಗಳನ್ನು ಹಿಂಬಾಲಿಸಿದನು.

## ನಿನ್ನ ಪುಣ್ಯ

ಎರಗಿದವರನ್ನು ಹರಸುತ್ತ ಗುರು ರೇವಣರು ಮುದ್ದುಗೌಡನ ಮನೆಬಾಗಿಲಿಗೆ ಬಂದರು. ಮುದ್ದುಗೌಡ ಸುಗ್ಗಲೆಯರಿಗೆ ಸಾಸಿವೆಯ ಮೇಲೆ ಸಾಗರವನ್ನಿರಿಸಿದಂತಾಯಿತು. ಗುರುಗಳಿಗೆ ಮಣಿದರು. ಕುಣಿದರು. ಗುರುಗಳೂ ಸುಗ್ಗಲೆಯ ಪುಣ್ಯೋದರಕ್ಕೆ ಮಣಿದರು. ಬೆಕ್ಕಸ ಬೆರಗಾದ ಸತಿಪತಿಗಳಿಗೆ ಆಶೀರ್ವದಿಸುತ್ತ ನುಡಿದರು: "ಮಾತಾಯಿ, ಸೊನ್ನಲಿಗೆಯನ್ನು ಅಭಿನವ ಶ್ರೀಶೈಲವನ್ನಾಗಿ ಮಾಡಲು, ಇದರ ಕೀರ್ತಿಯನ್ನು ದಶದಿಕ್ಕುಗಳಿಗೆ ಹರಡಲು ಹುಟ್ಟಲಿರುವ ಕಾರಣಿಕ ಶಿವಯೋಗಿ ನಿನ್ನ ಪಾವನಗರ್ಭದಿಂದ ಉದಿಸಲಿರುವುದು ನಿನ್ನ ಪುಣ್ಯ. ಆದುದರಿಂದ ನಿನ್ನ ಪವಿತ್ರವಾದ ಉದರಕ್ಕೆ ಮಣಿದೆವು! ಈ ಮುಪ್ಪಿನ ವಯಸ್ಸಿನಲ್ಲಿ ಮಗನಾಗುವನೇ ಎಂದು ಸಂಶಯಪಡಬೇಡ. ಸಮತೆ, ಸತ್ವ, ತೃಪ್ತಿ, ದಯೆ, ಭಕ್ತಿ, ಜ್ಞಾನ, ವೈರಾಗ್ಯಾದಿ ಸರ್ವ ಸದ್ಗುಣಗಳೇ ರೂಪಾದ, ಸುಖ–ದುಃಖ, ಶೀತ–ಉಷ್ಣ, ಹಗೆ–ಕಳೆ, ಹಸಿವು–ತಣಿವು, ಹರುಷ–ವಿಷಾದ ಹೀಗೆ ಒಂದಕ್ಕೊಂದು ವಿರೋಧವಾದ ಅನುಭವಗಳನ್ನು ಮೀರಿರುವ ಮಹಾತ್ಮನೊಬ್ಬನು ನಿನಗೆ ಮಗನಾಗಿ, ನಿನ್ನ ಮನೆಯನ್ನಷ್ಟೆ ಅಲ್ಲ, ಮಹಿಯನ್ನೂ ಬೆಳಗುವನು."

ಹುಸಿ ಬೀಳಲಿಲ್ಲ ಶ್ರೀ ಗುರು ರೇವಣರ ಹೇಳಿಕೆ. ಹಸುವಿನ ಹಾಲಿಗಿಂತಲೂ ಬೆಳ್ಳಿಗಿಂತಲೂ ಬೆಳ್ಳಗಿದ್ದ ಹುಣ್ಣಿಮೆಯ ಬೆಳದಿಂಗಳು ಹರಡಿದ್ದಾಗ ತಂದೆತಾಯಿಗಳಿಗೆ, ಊರವರಿಗೆ ಹರುಷದ ಹಾಲ್ಗಡಲಾಗಿ ಹುಟ್ಟಿದ ಕಾರಣಿಕ ಕುಮಾರ ಸುಗ್ಗಲೆಯ ಹೊಟ್ಟೆಯಿಂದ. ರೇವಣ ಸಿದ್ಧೇಶ್ವರರು ಹುಟ್ಟುವ ಮಗನಿಗೆ "ಸಿದ್ಧರಾಮ" ಎಂಬ ಹೆಸರಿಡಲು ಹೇಳಿಹೋಗಿದ್ದರೂ ಕುಲದೇವರಾಗಿದ್ದ ಧೂಳಿಮಹಾಕಾಳನ ಹೆಸರನ್ನೆ ಇಟ್ಟರು ತಂದೆತಾಯಿಗಳು. ಕುರುಡು ನಂಬಿಕೆ ಗೆದ್ದರೂ ಅದರ ಗೆಲವು ಗಟ್ಟಿಯಾಗಿ ನಿಲ್ಲಲಿಲ್ಲ. ಧೂಳಿಮಹಾಕಾಳ ಎಂದು ಕರೆದರೆ ಕೇಳಿಯೂ ಕೇಳಿಸದಂತೆ ಮೌನವಾಗಿರುತ್ತಿದ್ದಿತು ಆ

ಕೂಸು; "ಸಿದ್ಧರಾಮಾ" ಎಂದು ಕರೆದರೆ ಮಾತ್ರ ಹೊಳೆಯುವ ಕಣ್ಣುಗಳನ್ನು ಅರಳಿಸಿ ನೋಡುತ್ತಿದ್ದಿತು. ಯಾರು ಏನೆಂದೇ ಕರೆಯಲಿ, 'ಸಿದ್ಧರಾಮ' ಎಂಬ ಹೆಸರೇ ಸ್ಥಿರವಾಯಿತು.

**ಎಲ್ಲರಂಥವನಲ್ಲ ಈ ಕಂದ:**

ಕೊನೆಗೂ ತನಯನೊಬ್ಬನನ್ನು ಪಡೆದೆವು. ಅದೂ ಮುಪ್ಪಿನ ಕಾಲದಲ್ಲಿ ಪಡೆದೆವು ಎಂಬ ತಂದೆತಾಯಿಗಳ ಆನಂದ ಬಹಳ ದಿನ ಉಳಿಯಲಿಲ್ಲ. ಹುಟ್ಟಿದ ಕೂಸು ಎವೆಯಿಕ್ಕದೆ, ಕೈಕಾಲು ಅಲುಗಿಸದೆ, ಹಸಿದು ಹಾಲು ಕುಡಿಯದೆ, ಆಕಳಿಸದೆ, ಅಳದೆ, ನಗದೆ ಮಲಗಿದುದನ್ನು ಕಂಡಾಗಲೇ ಹೌಹಾರಿದ್ದ ಸುಗ್ಗಲೆ ದಿನಗಳೆದಂತೆ ಮಂಕುಮರಿಯಂತಿದ್ದ ತನ್ನ ಕಂದನನ್ನು ನೋಡಿ ಕಳಕಳಿಸಿದಳು, ತಳಮಳಿಸಿದಳು: "ಇದೆಂಥ ಮೊದ್ದು ಮಗುವನ್ನು ಕೊಟ್ಟೆ ತಂದೆ! ಇಂಥ ಮಗುವನ್ನು ನೋಡಿ ನೋಡಿ ಚಡಪಡಿಸುವುದಕ್ಕಿಂತಲೂ ಮಗುವಿಲ್ಲದ ದುಃಖವನ್ನು ಸಹಿಸಿಕೊಳ್ಳುವುದೇ ಸುಲಭವಾಗಿದ್ದಿತಲ್ಲ! ಬೈಗಾಗುತ್ತದೆ ಬೆಳಗಾಗುತ್ತದೆ; ಆದರೆ ಈ ಮಗು ತಂದೆತಾಯಿಗಳ ಗುರುತು ಕೂಡ ಹಿಡಿಯದೆ ಬೊಂಬೆಯಂತೆ ಬೆಳೆಯುತ್ತಿದೆಯಲ್ಲ! ಮಾತು ಕಲಿಯುವುದಿರಲಿ, ನಮ್ಮ ಪ್ರೀತಿಯನ್ನೂ ತಿಳಿಯದವನಾಗಿರುವನಲ್ಲ!"

ಉರಿಯುವ ಗಾಯಕ್ಕೆ ಬರೆ ಎಳೆದಂತೆ ಊರವರ ಅಣಕ ಬೇರೆ. ಹುಚ್ಚನೆಂದು ಕೆಲವು, ಮಂಕು ಎಂದು ಕೆಲವರು ಕರೆದಾಗ ತಾಯಿಯ ಕರುಳಲ್ಲಿ ಕಾದೆಣ್ಣೆಯನ್ನು ಹುಯ್ದಂತಾಗುತ್ತಿತ್ತು! ಮೂರು ವರ್ಷಗಳು ಕಳೆದುವು, ಐದು ವರ್ಷಗಳು ಕಳೆದುವು – ಮಾತಿಲ್ಲ, ಕತೆಯಿಲ್ಲ, ಬೇಕಿಲ್ಲ, ಬೇಡವಿಲ್ಲ. ಮೌನಕ್ಕೆ ಮೈಮೂಡಿದಂತಿದ್ದ ಆ ಮಗ.

**ಲಿಂಗಪೂಜೆ:**

ಮನೆಯಲ್ಲುಳಿಸಿ ನೆರೆಹೊರೆಯವರ ಕೊಂಕುನುಡಿಗಳನ್ನು ಕೇಳುವುದಕ್ಕಿಂತ ಹೊಲಕ್ಕಾದರೂ ಕರೆದೊಯ್ದರೆ ನೆರೆಹೊಲಗಳ ಬಾಲಕರೊಡನೆ ಕೆಳೆ ಬೆಳೆಸಿ ಎಲ್ಲರಂತೆ ಆದಾನೆಂದು ಬಗೆದು ಹೊಲಕ್ಕೆ ಮುದ್ದುಗೌಡ ಕರೆದೊಯ್ದು ಸಿದ್ಧರಾಮನನ್ನು ಅಲ್ಲ, ಮುಗ್ಧರಾಮನನ್ನು. ನೆರೆ ಹೊರೆಯ ಬಾಲಕರು ಸೇರಿದರು. ಆಟಕ್ಕೆ ಕರೆದರು, ಓಟಕ್ಕೆ ಕರೆದರು – ಸಿದ್ಧರಮನನ್ನು. ಅವನು ಪಿಟ್ಟೆನ್ನಲಿಲ್ಲ. ಅವನನ್ನು ನಗಿಸಲು ಯತ್ನಿಸಿದರು. ವಿಫಲರಾದರು; ಅಳಿಸಲು ಪ್ರಯತ್ನಿಸಿದರು, ಅದರಲ್ಲಿಯೂ ಸೋತರು! ಸಾಕಾಗಿ ಅವನನ್ನು ಅಲ್ಲಿಯೇ ಬಿಟ್ಟು ತಂತಮ್ಮ ಆಟಗಳಲ್ಲಿ ಮಗ್ನರಾದರು. ಇದನ್ನೆಲ್ಲ ನಿಂತು ನೋಡುತ್ತಿದ್ದ ಮುದ್ದುಗೌಡನಿಗೆ ಹೊಟ್ಟೆಯಲ್ಲಿ ಕಸಿವಿಸಿಯಾಯಿತು. ಅದರ ಒತ್ತಡವನ್ನು ತಾಳಲಾಗದೆ ಅವನೂ ಅಲ್ಲಿಂದ ಹೊರಟುಹೋದ. ಸಿದ್ಧರಾಮನೊಬ್ಬನೇ ಉಳಿದ. ಒಬ್ಬನೇ ಉಳಿದುದಕ್ಕಾಗಿ ಹಿಗ್ಗಿದ.

ಏನು ತಿಳಿಯಿತೋ, ಅಲ್ಲಿಂದ ಹೊರಟ. ಅತ್ತಿತ್ತ ಸುತ್ತಿ ನವಣೆಯ ಹೊಲದ ಮಧ್ಯಕ್ಕೆ ಬಂದಾಗ ಅಲ್ಲೊಂದು ಶಿವಲಿಂಗವನ್ನು ಕಂಡ; ಹತ್ತಿರದಲ್ಲಿಯೇ ಹಳ್ಳದ ನೀರು ಹರಿಯುತ್ತಿರುವುದನ್ನು ನೋಡಿದ. ಎಂದಿಲ್ಲದ ಆನಂದ ಉಕ್ಕಿಬಂದಿತು ಅವನಲ್ಲಿ. ಬೊಗಸೆ ನೀರಿನಿಂದ ಅಭಿಷೇಕ ಮಾಡಿದ ಲಿಂಗಕ್ಕೆ; ಕಾಡುಹೂಗಳನ್ನು ಧರಿಸಿದ ಅದಕ್ಕೆ; ತಂದ ಬುತ್ತಿಯನ್ನು ನೈವೇದ್ಯಮಾಡಿ, ಮಣಿದ ಲಿಂಗಕ್ಕೆ. ಕುಣಿದ, ಲಿಂಗದ ಸುತ್ತಲೂ. ಆಮೇಲೆ ಲಿಂಗದ ಮುಂದೆ ಕುಳಿತುಬಿಟ್ಟ – ಮುಗಿದ ಕೈ, ನಟ್ಟ ನೋಟವಾಗಿ, ಹೊತ್ತು ಹೋದುದೇ ತಿಳಿಯಲಿಲ್ಲ–ಆ ಬಾಲಕನಿಗೆ!

ನವಣೆಯ ತೆನೆಗಳಿಗೆ ಬಂಗಾರದ ನೀರು ಕುಡಿಸುತ್ತ ಸಂಜೆ ಬಂದಿತು. ಇನ್ನೇನು ಸೂರ್ಯಾಸ್ತವಾಗಬೇಕು. ಮನೆಗೆ ಮರಳುವ ಹೊತ್ತಾಯಿತೆಂದು ಉಳಿದ ಬಾಲಕರೆಲ್ಲ ಲಗುಬಗೆಯಿಂದ ಬಂದು ನೋಡಿದರು. ಧೂಳಿ ಮಹಾಕಾಳ ತನ್ನ ಸ್ಥಳದಲ್ಲಿರಲಿಲ್ಲ. ಹೌಹಾರಿದರವರು, ಹುಡುಕಿದರು ಹತ್ತೂ ಕಡೆಗೆ. ಕೊನೆಗೆ ಶಿವಲಿಂಗದೆದುರು ಶಿಲೆಯ ಮೂರ್ತಿಯಂತೆ ಕುಳಿತಿದ್ದ ಚಿಕ್ಕಗೌಡನನ್ನು ಕಂಡರು. ಕರೆದರು, ಕೂಗಿದರು, ಕಿರುಚಿದರು. ಫಲ ದೊರೆಯಲಿಲ್ಲ. ಕೊನೆಗೆ ಅವನ ಭುಜ ಹಿಡಿದು ಅಲ್ಲಾಡಿಸಿ ಕೇಳಿದರು, "ನಮ್ಮೊಡನೆ ಬರುವಿರೋ, ಊರಿಗೆ ಹೋಗಿ ದೊಡ್ಡಗೌಡರನ್ನೇ ಕಳಿಸಬೇಕೋ, ಹೇಳಿ ಚಿಕ್ಕಗೌಡರೆ!"

ಸಮಾಧಿಯಿಂದ ಎಚ್ಚೆತ್ತಂತೆ ಎಚ್ಚೆತ್ತ ಸಿದ್ಧರಾಮ. ತಂದಿದ್ದ ಬುತ್ತಿ ನೈವೇದ್ಯವಾಗಿದ್ದಿತಷ್ಟೆ? ಅದನ್ನು ಅವರೆಲ್ಲರಿಗೂ ಹಂಚಿದ. ಅವರಿಗೂ ಹಸಿವೆಯಾಗಿದ್ದಿತು. ತಿಂದು ಬಾಯಿ ಚಪ್ಪರಿಸಿದರವರು. ಇದನ್ನು ನೋಡಿ ಆನಂದಿಸಿದ ಸಿದ್ಧರಾಮ. ಮೊದಲ ಸಲ ಅವನ ಪ್ರಫುಲ್ಲ ವದನವನ್ನು ನೋಡಿ ನಲಿದರು ಉಳಿದ ಬಾಲಕರು. ಕೇಕೆ ಹಾಕುತ್ತ ಮನೆಗೆ ಮರಳಿದರು.

ಮೆಲ್ಲಗೆ ದನ ಕಾಯುವ ಕೆಲಸಕ್ಕೆ ನಿಯಮಿಸಿದ ಸಿದ್ಧರಾಮನನ್ನು ಮುದ್ದುಗೌಡ. ವೈದ್ಯ ಹೇಳಿದುದೂ ಹಾಲು ಅನ್ನ, ರೋಗಿ ಬಯಸಿದುದೂ ಹಾಲು ಅನ್ನ ಎಂಬಂತಾಯಿತು. ನಿತ್ಯವೂ ತಾಯಿ ತರತರದ ಬುತ್ತಿ ಕಟ್ಟಿಕೊಡುವಳು; ಯಾಂತ್ರಿಕವಾಗಿ ಅದನ್ನು ಕೊಂಡು ದನ ಕಾಯಲು ಹೊರಡುವನು ಸಿದ್ಧರಾಮ. ಅಲ್ಲಿ ಯಥಾಪ್ರಕಾರ ಶಿವಲಿಂಗಪೂಜೆ, ಧ್ಯಾನ, ಗೆಳೆಯರಿಗೆ ಬುತ್ತಿ ಹಂಚುವುದು, ಗೋಧೂಳಿ ಸಮಯಕ್ಕೆ ಎಲ್ಲರೊಡನೆ ದನಗಳನ್ನು ಹೊಡೆದುಕೊಂಡು ಮನೆಗೆ ಮರಳುವುದು.

ಹೀಗೆಯೇ ದಿನ ಮಾಸಗಳು ಉರುಳುತ್ತವೆ, ಋತು ಬಂದು ಋತು ತೆರಳುತ್ತದೆ. ಸಿದ್ಧರಾಮನ ಸಾಧನೆ ಸದ್ದಿಲ್ಲದೆ, ಗದ್ದಲವಿಲ್ಲದೆ ಸಾಗುತ್ತದೆ. ತಂದೆತಾಯಿಗಳಲ್ಲಿ ಕಂಗಳಲ್ಲಿ,

ಊರವರ ಕಂಗಳಲ್ಲಿ, ಸಂಗಡಿಗರ ಕಂಗಳಲ್ಲಿ ಅವನಿನ್ನೂ ಧೂಳಿಮಹಾಕಾಳ, ಮೂಕ ಮಹಾಕಾಳ, ಮರುಳ ಮಹಾಕಾಳ; ಆದರೆ ನಿಜಸ್ಥಿತಿಯಲ್ಲಿ ಅವನು ಬಾಲ್ಯದ ಮರೆಯ ಬ್ರಹ್ಮ. ಅವನಿಗಿರಲಿಲ್ಲ – ಲೋಕದಂತೆ ನಡೆವ ಬಂಧ. ಎಲ್ಲರಂತಿರಲಿಲ್ಲ ಆ ಕಂದ– ಎಲ್ಲರಂತೆ ಬೆಳೆಯಲೂ ಇಲ್ಲ ಆ ಕಂದ!

## ಮಲ್ಲಯ್ಯ ಬಂದ:

ಒಂದು ಸಂಜೆ. ಎಂದಿನಂತಿರಲಿಲ್ಲ ಆ ಸಂಜೆ. ಆ ಸಂಜೆಯ ರಂಜಿಸುವ ಹೊಂಬಿಸಿಲಿನಲ್ಲಿ ತಂದೆ ಬಿತ್ತಿ ಬೆಳೆಸಿದ್ದ ನವಣೆಯ ಹೊಲ ನಯನಮೋಹಕವಾಗಿ ತೋರಿತು ಸಿದ್ಧರಾಮನಿಗೆ. ಮೇಲೆ ನೋಡೆ ಹಕ್ಕಿಗಳ ಸಾಲು. ಕೆಳಗೆ ತೆನೆಗಳ ಸಾಲು–ಹೊಂದೆನೆಗಳ ಸಾಲು. ಅದೊಂದು ಪರವಶತೆ ಆವರಿಸಿತು ಅವನನ್ನು. ಆಗ ಆಗಮಿಸಿದರು ಒಬ್ಬ ಜಂಗಮ ಮೂರ್ತಿಗಳು. ತೇಜಸ್ವಿ ಮುಖಮುದ್ರೆ, ಹೊಳೆಹೊಳೆವ ಕಣ್ಣುಗಳು, ಹಣೆಯ ಮೇಲೆ ಒಪ್ಪುವ ವಿಭೂತಿ, ಕೊರಳಲ್ಲಿ ರುದ್ರಾಕ್ಷಿಮಾಲೆ, ಕೈಯಲ್ಲಿ ತಂಬೂರಿ, ಕಾಲಲ್ಲಿ ಆವುಗೆ, ಮೈತುಂಬ ಕಾಷಯ ವಸನ. "ಸಿದ್ಧರಾಮಾ!" ಎಂದು ಕೂಗಿದರು. ಮೊದಲೇ ಅವರ ಮೂರ್ತಿಸ್ವರೂಪಕ್ಕೆ ಮಾರುಹೋಗಿದ್ದ ಸಿದ್ಧರಾಮ ತನ್ನ ಹೆಸರುಗೊಂಡು ಕರೆದುದನ್ನು ಕೇಳಿದಾಗಂತೂ ಕರಗಿಹೋದ. ಓಡಿ ಹೋಗಿ ಅವರ ಅಡಿಗಳಿಗೆ ಎರಗಿದ. ಹಿಡಿದೆತ್ತಿ ಹರಸಿದರು ಆ ಜಂಗಮಪುಂಗವರು. ಅವರ ಅಮೃತ ಹಸ್ತಗಳ ಪಾವನ ಸ್ಪರ್ಶದಿಂದ ಸಿದ್ಧರಾಮನ ಶರೀರವೆಲ್ಲ ಪುಲಕಿತವಾಯಿತು. "ಏಳು ಮಗು!" ಎಂಬ ಮಾತು ಅವನ ಮನದಲ್ಲಿ ಮಿಂಚಿನ ಸಂಚಾರ ಮಾಡಿಸಿತು.

ಸಿದ್ಧರಾಮ ತನ್ನ ಕಂಬಳಿ ಹಾಸಿದ. ಅವರನ್ನು ಅದರ ಮೇಲೆ ಕುಳ್ಳಿರಿಸಿ ನವಣೆಯ ತೆನೆಗಳನ್ನು ತಂದು ಹೊಸೆದು ರಸರಸವಾದ ಬೆಳಸಿಯನ್ನು ಸೇವಿಸಲಿತ್ತ. ಪ್ರೀತಿಯಿಂದಲೇ ಸವಿದರು ಅವನ್ನು ಜಂಗಮೂರ್ತಿಗಳು. ಆದರೆ ಬರಿ ಬೆಳಸಿಯಿಂದ ಅವರ ಹಸಿವೆ ಹಿಂಗಿದಂತೆ ತೋರಲಿಲ್ಲ. "ಮನೆಗೆ ಹೋಗಿ ಮಜ್ಜಿಗೆ ಅಂಬಲಿ ತರುವೆಯಾ?" ಎಂದು ಕೇಳಿದರು. ಸಿದ್ಧರಾಮ ಸಂತಸದಿಂದಲೇ ನುಡಿದ – "ಓ ತರುತ್ತೇನೆ". ಆದರೆ ತಾನು ತಿರುಗಿ ಬರುವವರೆಗೆ ಅವರಲ್ಲಿ ಇರುವರೋ ಇಲ್ಲವೋ ಎಂಬ ಸಂಶಯ ಸುಳಿದು ಅಳುಕುತ್ತ ಕೇಳಿದ:

"ತಮ್ಮ ಹೆಸರೇನು?"
"ಮಲ್ಲಯ್ಯ"
"ತಾವಿರುವುದೆಲ್ಲಿ?"
"ಶ್ರೀಶೈಲದಲ್ಲಿ"

"ಶ್ರೀಶೈಲ" ಎಂಬ ಶಬ್ದ ಕೇಳುತ್ತಲೇ ಮುಗ್ಧನಾದ ಸಿದ್ಧರಾಮ. ಆಹೆಸರಿನಲ್ಲಿಯೇ ಯಾವುದೋ ಮೋಡಿ ಇರುವಂತೆನಿಸಿತು ಅವನಿಗೆ. ಕೇಳಿದ:

"ನಾನೂ ಅಲ್ಲಿಗೆ ಬರಲೆ?"
"ಅಗತ್ಯವಾಗಿ. ಆದರೆ ಮೊದಲು ಅಂಬಲಿ ಮಜ್ಜಿಗೆ ತರುವುದಿಲ್ಲವೆ?"
"ತರುತ್ತೇನೆ; ಆದರೆ ನಾನು ಬರುವವರೆಗೆ ನೀವು ಇಲ್ಲಿಯೇ ಇರುವಿರಷ್ಟೆ?"
"ಇದರಲ್ಲಿ ಸಂಶಯವೆ ನಿನಗೆ?"
ಆದರೂ ಅನುಮಾನಿಸುತ್ತಲೇ ಹೊರಳಿ ಹೊರಳಿ ನೋಡುತ್ತಲೇ ಹೋದ ಸಿದ್ಧರಾಮ.

ಸುಗ್ಗವ್ವೆಗೆ ಹಿಡಿಸಲಾರದಷ್ಟು ಹಿಗ್ಗು–ಒಮ್ಮೆಯಾದರೂ ತನ್ನ ಮಗ ತಾನಾಗಿಯೇ ಅಂಬಲಿ ಮಜ್ಜಿಗೆ ಬೇಡಿದುದನ್ನು ನೋಡಿ, ತನ್ನ ಕಿವಿಗಳನ್ನು ತಾನೇ ನಂಬದಾದಳು. ಸಿದ್ಧರಾಮನಿಗೆ ಅವಸರವೋ ಅವಸರ. "ಬೇಗ ಕೊಡಮ್ಮ, ಈಗಲೇ ಕೊಡಮ್ಮ!" ಎಂದು ಒತ್ತಾಯ ಮಾಡಿದ. ತಾಯಿಗೆ ಇದಕ್ಕಿಂತ ಆನಂದದ ಕೆಲಸ ಇನ್ನಾವುದಿದ್ದೀತು? ಅವಳೂ ಅವಸರವಸರವಾಗಿ ನಕ್ಷತ್ರದಂತಹ ಅನ್ನ ಮಾಡಿ ಬೆಳದಿಂಗಳಿನಂತಹ ಮೊಸರು ಕಲಿಸಿ ಬುತ್ತಿ ಮಾಡಿ, "ಕಂದ ಕೋ" ಎಂದು ಕೈಗಿತ್ತಳು. ಕೊಂಡವನೇ ಬಿಟ್ಟಬಾಣದಂತೆ ಓಡಿದ ಸಿದ್ಧರಾಮ. ನೋಡನೋಡುವಷ್ಟರಲ್ಲಿ ತಂದೆಯ ನವಣೆಯ ಹೊಲವನ್ನು ತಲುಪಿದ. ಮಲ್ಲಯ್ಯನು ಕುಳಿತಿದ್ದ ಸ್ಥಳಕ್ಕೆ ಧಾವಿಸಿದ. ಅಲ್ಲಿ ಹಾಸಿದ್ದ ಕಂಬಳಿಯೊಂದನ್ನೇ ಕಂಡು ಅಧೀರನಾದ. ಅಲ್ಲಿಲ್ಲ ಮಲ್ಲಯ್ಯ! ಸುತ್ತೆಲ್ಲ ಸುತ್ತಿ ಸುಳಿದು ನೋಡಿದ. ಇಲ್ಲ, ಮಲ್ಲಯ್ಯ ಅಲ್ಲೆಲ್ಲಿಯೂ ಇಲ್ಲ! ಅವನ ಎದೆಯ ಆಳದಿಂದ ಅಳಲಿನ ಉದ್ಗಾರವಾಗಿ ಒಂದೇ ಒಂದು ಶಬ್ದ ಹೊರಬಿದ್ದಿತು – "ಮಲ್ಲಯ್ಯ!"

**ಎಲ್ಲಿರುವೆ ಮಲ್ಲಯ್ಯ?:**

ಆಗ ತಾನೆ ಹಬ್ಬುತ್ತಲಿದ್ದ ಇರುಳ ಮಬ್ಬಿನಲ್ಲಿ "ಮಲ್ಲಯ್ಯ" ಎಂಬ ಅವನ ಕರುಳಿನ ಕೂಗು ಕೂಗಳತೆಯನ್ನೂ ಮೀರಿ ಸಾಗಿಹೋಯಿತು. ಆದರೆ ಅದಕ್ಕೆ ಯಾರು ಉತ್ತರ ಕೊಡಬೇಕು? ಮರಗಳ ಮರ್ಮರ ಸ್ವರ, ಬೆಳೆಗಳ ಸರಸರ ಸದ್ದು, ಗಾಳಿಯ ಸುಯ್ ದನಿಗಳನ್ನುಳಿದು ನರನ ಸ್ವರ ಎಲ್ಲಿಯೂ ಕೇಳಿಸಲಿಲ್ಲ. ಆದರೂ ಎದೆಗೆಡಲಿಲ್ಲ – ಅವನು. ಮಲ್ಲಯ್ಯನನ್ನು ಹುಡುಗಕಲೇಬೇಕೆಂಬ ಅವನ ಛಲ ಇನ್ನಷ್ಟು ಬಲವಾಯಿತು ಆ ಕರಾಳ ಕತ್ತಲೆಯಲ್ಲಿ. "ಮಲ್ಲಯ್ಯ, ಮಲ್ಲಯ್ಯ" ಎಂದು ಕೂಗುತ್ತ ಕಣ್ಣರಿಯದಿದ್ದರೂ ಕರುಳು ಕರೆದತ್ತ ಹೊರಟೇಬಿಟ್ಟ ಆ ದಿಟ್ಟ.

ಇತ್ತ ಅಡವಿಯಲ್ಲಿ ಸಿದ್ಧರಾಮನ "ಮಲ್ಲಯ್ಯ, ಮಲ್ಲಯ್ಯ" ಎಂಬ ಕರೆ, ಮೊರೆ, ಅತ್ತ ಊರಲ್ಲಿ, ತದನಂತರ ಹೊಲದಲ್ಲಿ ಅವನ ತಂದೆತಾಯಿಗಳ "ಸಿದ್ಧರಾಮಾ, ಸಿದ್ಧರಾಮಾ" ಎಂಬ ಕೂಗು. ಅಂದು ಗಾಳಿಯ ಅಲೆಗಳೆಲ್ಲ ಮಲ್ಲಯ್ಯ, ಸಿದ್ದರಾಮ ಎಂಬ ಸೊಲ್ಲುಗಳನ್ನೇ ಪ್ರತಿಧ್ವನಿಸಿದುವು. ಸಿದ್ಧರಾಮನ ಕೈಗೆ ಮಲ್ಲಯ್ಯ ಸಿಕ್ಕಲಿಲ್ಲ, ಅವನ ತಂದೆತಾಯಿಗಳ ಕೈಗೆ ಸಿದ್ಧರಾಮ ಸಿಕ್ಕಲಿಲ್ಲ.

## ಮಲ್ಲಯ್ಯನ ಶ್ರೀಶೈಲಕ್ಕೆ:

ಎಷ್ಟು ಹೊತ್ತು ನಡೆದನೋ ಸಿದ್ಧರಾಮ ಎಷ್ಟು ದೂರ ನಡೆದನೋ ಸಿದ್ಧರಾಮ! ಕೊನೆಗೊಮ್ಮೆ ಕಾಡಿನ ಕರ್ಕಶ ಸ್ವರಗಳಿಗೆ ಪ್ರತಿಯಾಗಿ ಮಾನವರ ಸಂತಸ ಕೊಡುವ ಸ್ವರವನ್ನು ಕೇಳಿದವನು:

"ಉಘೇ, ಉಘೇ,ಉಘೇ! ಪರ್ವತ ಮಲ್ಲಯ್ಯಾ ಉಘೇ ಉಘೇ ಉಘೇ."

ಒಬ್ಬಿಬ್ಬರ ಸ್ವರವಲ್ಲ ಅದು – ಅನೇಕರ ಸಾಮೂಹಿಕ ಸ್ವರ. ಸಿದ್ಧರಾಮನಿಗೆ ಸುತ್ತಲು ಕವಿದ ಕತ್ತಲೆಯಲ್ಲಿ ಝುಗ್ಗನೆ ಬೆಳಕು ಬಿದ್ದಂತೆನಿಸಿತು. ಮಾನವರ ಸ್ವರ, ಅದೂ ಪರ್ವತ ಮಲ್ಲಯ್ಯನನ್ನು ಕುರಿತ ಸ್ವರ ಹೊಸ ಚೈತನ್ಯ ನರ್ತಿಸಿತು– ಅವನ ನರನರಗಳಲ್ಲಿ! ಧ್ವನಿಯ ದಿಕ್ಕಿಗೇ ನಡೆದ: ಮಲ್ಲಯ್ಯನ ಭಕ್ತರು 'ಉಘೇ ಉಘೇ' ಎಂದು ಉದ್ಘೋಷಿಸುತ್ತ ನಡೆದಿದ್ದರು. ಸಿದ್ಧರಾಮ ಸೇರಿಕೊಂಡ ಅವರನ್ನು; ಆತುರತೆಯಿಂದ ಕಾತರತೆಯಿಂದ ಕೇಳಿದ:

"ನೀವು ಶ್ರೀಗಿರಿಗೆ ಹೊರಟಿರುವಿರಾ?"
"ಹೌದು."
"ಮಲ್ಲಯ್ಯನ ಶ್ರೀಗಿರಿಗೆ?"
"ಹೌದು, ಮಲ್ಲಯ್ಯನ ಶ್ರೀಗಿರಿಗೇ ಹೊರಟಿದ್ದೇವೆ."
"ನಾನೂ ನಿಮ್ಮ ಸಂಗಡ ಬರಲೆ?"
"ನಿನಗೆ ತಂದೆತಾಯಿಗಳಿಲ್ಲವೇನಪ್ಪ?"
"ಮಲ್ಲಯ್ಯನೇ ತಂದೆ, ತಾಯಿ, ಬಂಧು, ಬಳಗ ನನಗೆ!"

ಏಳೆಂಟು ವರ್ಷಗಳ ಎಳೆಯ ಬಾಲಕನ ಈ ಅಳವಿಗೆ ನಿಲುಕದ ಭಕ್ತಿಯನ್ನು ನೋಡಿ ಬೆರಗಾದರು ಆ ಭಕ್ತರು. ಸಿದ್ಧರಾಮನನ್ನು ಪರಿಷೆಯಲ್ಲಿ ಸೇರಿಸಿಕೊಳ್ಳಲು ಸಮ್ಮತಿಸಿದರು.ಮುಂದುವರಿಯಿತು ಪರಿಷೆ.

ಹಲವು ಹಗಲುಗಳು, ಇರುಳುಗಳು ಕಳೆದುವು. ಪರಿಷೆಯವರೊಡನೆ ಸಿದ್ಧರಾಮ ನಡೆದೇ ನಡೆದ. ನಡೆದಷ್ಟೂ ಶ್ರೀಶೈಲವನ್ನು, ಶ್ರೀಶೈಲದ ಮಲ್ಲಯ್ಯನನ್ನು ಕಾಣುವ ಅವನ ತವಕ ಹೆಚ್ಚುತ್ತಲೇ ಹೋಯಿತು. ಯಾವಾಗ ಓ, ಇನ್ನೂ ಯಾವಾಗ ಮಲ್ಲಯ್ಯನನ್ನು ಕಾಣುವುದು? ನನ್ನನ್ನು ತೊರೆದು ಇದಾಗಲೇ ಇಷ್ಟು ದೂರ ಹೋಗಿಬಿಟ್ಟನೇ ಆ ಮಲ್ಲಯ್ಯ? ಇರುವೆನೆಂದು ಹೇಳಿ ತೊರೆದು ಹೋಗುವುದು ಸರಿಯೆ? ಅವನು ಸಿಕ್ಕಲಿ, "ನಾನೇನು ತಪ್ಪು ಮಾಡಿದೆನೆಂದು ನೀನೆನ್ನ ಬಿಟ್ಟು ಬಂದೆ ಎಂದು ಕೇಳಿಯೇಬಿಡುವೆ!"

ಒಂದು ಸಂಜೆ ಮುಂದೆ ಮಲೆಯ ಸಾಲು ಕಾಣಿಸಿತು ಸಿದ್ಧರಾಮನಿಗೆ. ಸಂಜೆಯ ಹೊಂಬಿಸಿಲಿನಲ್ಲಿ ಬಹಳ ಸುಂದರವಾಗಿ ಕಾಣಿಸಿತು ಆ ಗಿರಿರಾಜ ಅವನಿಗೆ. ಅವನ ಕುತೂಹಲ ಕೆರಳಿತು. ಕೇಳಿಯೇಬಿಟ್ಟ;

"ಇದಾವ ಪರ್ವತ?"
"ಇದೇ ಮಲ್ಲಯ್ಯನ ಪರ್ವತ, ಇದೇ ಶ್ರೀಶೈಲ!"

"ಶ್ರೀಶೈಲ" "ಮಲ್ಲಯ್ಯ" ಎಂಬ ಶಬ್ದಗಳು ಕಿವಿಗೆ ಬೀಳುತ್ತಲೇ ರೋಮಾಂಚಿತನಾದ ಸಿದ್ಧರಾಮ. ಕಣ್ಣರಳಿಸಿ ನೋಡಿದ ಆ ಮಲೆಯ ಮಾಲೆಯನ್ನು. ಕೈಮುಗಿದ ಆ ಪರ್ವತಶ್ರೇಣಿಗೆ. ಅಲ್ಲಿಗೆ ಅವನ ಆಯಾಸವೆಲ್ಲ ಮಾಯವಾಯಿತು. ಉತ್ಸಾಹ ಉಕ್ಕಿ ಬಂದಿತು. ಸ್ವಲ್ಪ ಹೊತ್ತಿನಲ್ಲಿ ಶಿಖರವೊಂದು ಕಾಣಿಸಿತು. ಪರಿಷೆಯ ಭಕ್ತರೆಲ್ಲ ಕೈಮುಗಿದರು ಅದಕ್ಕೆ. ಮತ್ತೆ ಸಿದ್ಧರಾಮನ ಕುತೂಹಲ ಕೆರಳಿತು. ಕೇಳಿದ:

"ಇದಾವ ಶಿಖರ?"
"ಇದು ಮಲ್ಲಯ್ಯನ ಗುಡಿಯ ಗೋಪುರ."
"ನನ್ನ ಮಲ್ಲಯ್ಯ ಇಂಥ ದೊಡ್ಡ ಗುರಿಯಲ್ಲಿರುವನೆ?"

"ಸಾಮಾನ್ಯನಲ್ಲ ನಿನ್ನ ಮಲ್ಲಯ್ಯ ತಮ್ಮಾ. ಆತನು ಎಲ್ಲರ ಸ್ವಾಮಿ, ಪೊಡವಿಗೆ ಒಡೆಯ."

ತಾನೊಲಿದ ಮಲ್ಲಯ್ಯ ಅಸಾಮಾನ್ಯನೆಂಬುದು ತಿಳಿದು ಸಿದ್ಧರಾಮನಿಗೆ ಅವನನ್ನು ನೋಡುವ ತವಕ ಇನ್ನೂ ತೀವ್ರವಾಯಿತು. ಸರಸರನೆ ಮೆಟ್ಟಿಲುಗಳನ್ನು ಏರಿದ; ಮಲೆಯ ತಲೆಯನ್ನು ಮುಟ್ಟಿದ; ಗಿರಿ ಮಲ್ಲಿಕಾರ್ಜುನನ ಗುಡಿಯನ್ನು ತಲುಪಿದ.

## ಕೊನೆಗೂ ಮೋಸವಾಯಿತು!

ಗುಡಿಯ ಒಳಗೂ ಹೊರಗೂ ಅಲೆದ ಸಿದ್ಧರಾಮ ಮಲ್ಲಯ್ಯನನ್ನು ಕಾಣಲು. ಅವನ ಮಲ್ಲಯ್ಯ ಅಲ್ಲಿರಲಿಲ್ಲ. ಪರಿಷೆಯಲ್ಲಿ ಬಂದಿದ್ದ ಜನರು ಗರ್ಭಗುಡಿಯತ್ತ ಹೊರಟರು. ಸಿದ್ಧರಾಮ ಅವರನ್ನು ಹಿಂಬಾಲಿಸಿದ. ಮಲ್ಲಯ್ಯನೆಲ್ಲಿ? ಮಲ್ಲಯ್ಯನೆಲ್ಲಿ? ಎಂಬ ಅವನ ಪಲ್ಲವಿ ಸಾಗಿಯೇ ಇದಿದತು. ಒಬ್ಬ ವೃದ್ಧ ಭಕ್ತ ಈ ಶುದ್ಧ ಹೃದಯದ ಬಾಲಕನ ಭಕ್ತಿಗೆ ಬೆರಗಾಗಿ, ಮಲ್ಲಿಕಾರ್ಜುನ ಲಿಂಗದ ಮುಂದೆಯೇ ತಂದು ನಿಲ್ಲಿಸಿದ ಸಿದ್ಧರಾಮನನ್ನು. ಈತನೇ ಮಲ್ಲಯ್ಯ, ಎಲ್ಲರ ತಂದೆ, ಎಲ್ಲ ಲೋಕಗಳ ಸ್ವಾಮಿ, ನಮಸ್ಕರಿಸು. ಏನು ಬೇಕೋ ಅದನ್ನು ಬೇಡಿಕೋ ಎಂದು ತಿಳಿಸಿಹೇಳಿದ. ಸಿದ್ಧರಾಮ ಶಿವಲಿಂಗವನ್ನು ನೋಡಿದ. ನೋಡಿ ಬಾಡಿದ. "ಈತನು ಮಲ್ಲಯ್ಯನೇ? ಛೀ ನಾನು ನವಣೆಯ ಹೊಲದಲ್ಲಿ ಕಂಡ ತೇಜೋಮೂರ್ತಿ ಮಲ್ಲಯ್ಯನೆಲ್ಲಿ? ಮಾತಾಡುವ ಪ್ರೀತಿ ಮಾಡುವ ಮಲ್ಲಯ್ಯನೆಲ್ಲಿ? ಈ ಮಾತಾಡದ ಶಿಲಾಮುರ್ತಿಯಲ್ಲಿ? ಈ ಮಾತಾಡದ, ಮೈದಡವಿ ಪ್ರೀತಿಮಾಡದ ಮೂರ್ತಿಯನ್ನು ನೋಡಲು ನಾನಿಷ್ಟು ದೂರ ಕಲ್ಲುಮುಳ್ಳು ತುಳಿಯುತ್ತ ನಡೆದುಬಂದೆನೆ? ಕೊನೆಗೂ ಮೋಸವಾಯಿತು! ಇವರ ದಾರಿ ಇವರಿಗೆ, ನನ್ನ ದಾರಿ ನನಗೆ!"

ಸಿದ್ಧರಾಮ ಒಮ್ಮೆಗೆ ಹೊರಟುಬಿಟ್ಟ. ಯಾತ್ರಿಕರೆಲ್ಲ ನಿಬ್ಬೆರಗಾಗಿ ನೋಡುತ್ತಲಿರಲು ಕಾಡಿನಲ್ಲಿ ಕಾಣದಾಗಿ ಬಿಟ್ಟ. ಮತ್ತೆ "ಮಲ್ಲಯ್ಯ ಮಲ್ಲಯ್ಯ" ಎಂಬ ಅವನ ಸೊಲ್ಲು ಗಾಳಿಯಲ್ಲಿ ಸುತ್ತಿ, ತರುಲತೆಗಳನ್ನು ತಾಕಿ, ದರಿ ಕಂದರಗಳಲ್ಲಿ ಪ್ರತಿಧ್ವನಿಸಿತು. ಇಷ್ಟಾದರೂ ಎಲ್ಲಿಯೂ ಮಲ್ಲಯ್ಯನ ಸುಳುವಿಲ್ಲ!

ಸಿದ್ಧರಾಮನ ಉದ್ವೇಗ ಹೆಜ್ಜೆ ಹೆಜ್ಜೆಗೆ ಹೆಚ್ಚುತ್ತಲೇ ಇದ್ದಿತು. ಎಲ್ಲಿಗೆ ಹೊರಟಿರುವೆನೆಂಬ ಅರಿವೂ ಅವನಿಗಿರಲಿಲ್ಲ, ಪರಿವೆಯೂ ಅವನಿಗಿರಲಿಲ್ಲ. ಎಲ್ಲಿಯೋ ಗಕ್ಕನೆ ನಿಂತು ನೋಡಿದಾಗ ಕೆಳಗೆ ಭೈರವನ ತೆರೆದ ಬಾಯಿಯಂತಹ ಕಮ್ಮರಿಯೊಂದು ಕಾಣಿಸಿತು. ಸತ್ವಪರೀಕ್ಷೆಗೆ ಸ್ಥಳವಿದೇ ಎಂದು ತೀರ್ಮಾನಿಸಿದ ಸಿದ್ಧರಾಮ. ತೀರ್ಮಾನಿಸುವುದೇ ತಡ, ಕಣ್ಮುಚ್ಚಿ ಕಮ್ಮರಿಯೊಳಗೆ ಹಾರಿಬಿಟ್ಟ ಸಿದ್ಧರಾಮ, ಮಲ್ಲಯ್ಯ ಮಲ್ಲಯ್ಯ ಎಂದು ಜಪಿಸುತ್ತ. ಅಯ್ಯೋ! ಎಂದು ಹುಯ್ಯಲಿಡುವರಾರೂ ಇರಲಿಲ್ಲ ಅಲ್ಲಿ. ನೆಲ, ಗಾಳಿ, ಬೆಳಕು, ನೀರು, ಬಯಲುಗಳೇ ಗೋಳಾಡಿದುವು!

## ನಿನ್ನ ಜೊತೆಗೆ ಬರುತ್ತೇನೆ:

ಸಿದ್ದರಾಮ ಕಣ್ದೆರೆದಾಗ ತಾನು ಮಲ್ಲಯ್ಯನ ತೊಡೆಗಳ ಮೇಲೆ ಮಲಗಿರುವುದನ್ನು ಕಂಡ! ಪ್ರೀತಿಯಿಂದ ಅವನ ಮೈ ಸವರುತ್ತಲಿದ್ದಿತು ಮಲ್ಲಯ್ಯನ ಅಮೃತಹಸ್ತ! ಸಿದ್ಧರಾಮ ತನ್ನ ಕಣ್ಣುಗಳನ್ನು ನಂಬುವುದೇ ನಂಬದಿಹುದೇ ಎಂಬ ದಂದುಗದಲ್ಲಿ ಸಿಲುಕಿದಂತಿದ್ದಿತು. ಮಲ್ಲಯ್ಯನದನ್ನು ನೋಡಿ ನಕ್ಕ. ಆತನ ನಗೆಯ ಬೆಳಗಿನಲ್ಲಿ ಸಿದ್ಧರಾಮನ ಸಂಶಯದ

ಛಾಯೆ ಮಾಯವಾಯಿತು. "ಕೊನೆಗೊಮ್ಮೆ ಕಂಡೆಯಾ" ಎಂದು ಅವಚಿಕೊಂಡ ಮಲ್ಲಯ್ಯನನ್ನು ಮುಂದೆ ಮಾತುಗಳೇ ಹೊರಡಲಿಲ್ಲ.

ಎಷ್ಟು ಹೊತ್ತು ಹಾಗೆಯೇ ವಾತ್ಸಲ್ಯದ ವಿಮಲ ಸರಸಿಯಲ್ಲ ಈಸುತ್ತಲಿದ್ದನೋ ಸಿದ್ಧರಾಮ! ಮೌನವನ್ನು ಮುರಿದು ಮಲ್ಲಯ್ಯನೆಂದ; "ಏಳು ಮಗು!"

ಮತ್ತೆ ಅ ಸ್ವರ, ಆ ಕರೆ– "ಏಳು ಮಗು!" ಮತ್ತೆ ರೋಮಾಂಚಿತನದ ಸಿದ್ಧರಾಮ. ಆದರೆ ಅವನ ಉಲ್ಲಾಸ ಕರಗಿ ನಿರಾಶೆಯಾಗುವಂತೆ ನುಡಿದ ಮಲ್ಲಯ್ಯ; "ಇನ್ನು ನೀನು ನಿನ್ನ ಮನೆಗೆ ಮರಳಬೇಕು ಮಗು!"

ರೇಗಿ ಉತ್ತರವಿತ್ತ ಸಿದ್ಧರಾಮ; "ಮತ್ತೆ ನಿನ್ನ ಗತ್ತು ತೋರದಿರು! ನಿನ್ನನ್ನುಳಿದು ಇನ್ನೆಲ್ಲಿಗೂ ಹೋಗೆ ನಾನು. ಹೋದ ಸಲ ತಪ್ಪಿಸಿಕೊಂಡಂತೆ ಈ ಸಲ ತಪ್ಪಿಸಿಕೊಳ್ಳಲಾರೆ ನೀನು!"

"ಹಾಗೆನ್ನದಿರು ಸಿದ್ಧರಾಮಾ, ನಿನ್ನ ತಂದೆತಾಯಿಗಳು ಮರಮರನೆ ಮರುಗುತ್ತಲಿದ್ದಾರೆ. ನೀನು ಹೋಗಿ ಅವರ ದುಃಖವನ್ನು ದೂರ ಮಾಡಬೇಕು!"

"ಮತ್ತೆ ಮತ್ತೆ ಆ ತಂದೆತಾಯಿಗಳ ಹೆಸರೆತ್ತಿ ಕೊಸರಿಕೊಳ್ಳಲು ಹವಣಿಸದಿರು. ನೀನೇ ನನ್ನ ತಂದೆ, ತಾಯಿ, ಬಂಧು, ಬಳಗವೆಂದು ನಂಬಿ ಬಂದಿರುವ ನನ್ನನ್ನು ಕರೆದುಕೋ ನಿನ್ನ ಬಳಿಗೆ!"

"ನಿನ್ನ ನಿಷ್ಠೆಯನ್ನು ಮೆಚ್ಚಿದೆ ಮಗು; ಆದರೆ ಈ ಕಾಡಿನಲ್ಲಿ ನನ್ನೊಡನೆ ಕಲ್ಲು ಮರದಂತೆ ಬಾಳಲು ನೀನು ಹುಟ್ಟಿಲ್ಲ. ನಿನ್ನಿಂದ ಜನರ ಕಲ್ಯಾಣವಾಗಬೇಕಾಗಿದೆ; ಈ ಶ್ರೀಶೈಲಕ್ಕೆ ಬರಲಾಗದ ಭಕ್ತರಿಗಾಗಿ ಸೊನ್ನಲಾಪುರವನ್ನೇ ನೀನು ಅಭಿನವ ಶ್ರೀಶೈಲವನ್ನಾಗಿ ಮಾರ್ಪಡಿಸಬೇಕಾಗಿದೆ. ಹೋಗು, ಸೊನ್ನಲಾಪುರಕ್ಕೆ ಹೋಗು; ಅಲ್ಲಿ ಜನಕಲ್ಯಾಣ ಕಾರ್ಯಗಳನ್ನು ಪ್ರಾರಂಭಿಸು; ಅದನ್ನು ಎರಡನೆಯ ಶ್ರೀಶೈಲವನ್ನಾಗಿ ಕಟ್ಟು!"

"ನೀನಿಲ್ಲದೆ ಸೊನ್ನಲಾಪುರ ಶ್ರೀಶೈಲವಾಗಬಲ್ಲುದೆ? ನೀನು ಬಂದರೆ
ನಾನು ಹೋಗುವೆ."
"ಬರುವೆ, ಆದರೆ ಈ ರೂಪದಲ್ಲಿ ಅಲ್ಲ."
"ಯಾವ ರೂಪದಲ್ಲಿ ಬರುವಿ?"
"ಬಿರುಗಾಳಿ ಬೀಸಲು, ಮಂದಾರ ಮರದಡಿಯಲ್ಲಿ ಲಿಂಗವಾಗಿ

ತೋರಿಸುವೆನು."

"ನಿಜವಾಗಿ ಲಿಂಗರೂಪದಲ್ಲಿ ಬರುವಿಯಾ? ಬರದಿದ್ದರೆ?"

ನಿಜವಾಗಿ ಬರುವೆ ಮಗು. ಸಂಶಯಪಡಬೇಡ. ತಡ ಮಾಡಬೇಡ; ನಡೆ ನಿನ್ನ ಕಾರ್ಯಕ್ಷೇತ್ರಕ್ಕೆ!

**ಸಾಧಕರ ಆಶ್ರಮ:**

ಸಿದ್ಧರಾಮನ ಮಲ್ಲಯ್ಯನಿಗೆ ಮಣಿದು ಮರಳಿದ ಸೊನ್ನಲಿಗೆಗೆ. ಸಿದ್ಧರಾಮ ಮನೆಗೆ ಮರಳಿದಾಗ ಸುಗ್ಗಲೆಗೆ ಹೋದ ಜೀವ ಹಿಂದಿರುಗಿದಂತಾಯಿತು; ಮುದ್ದುಗೌಡನಿಗೆ ಕಳೆದ ನವನಿಧಿ ಕೈಸೇರಿದಂತಾಯಿತು. ಆದರೆ ಅವನ ಕಾವಿಯ ಬಟ್ಟೆ, ಅವನ ತೇಜಸ್ಸು ತುಳುಕುವ ಮುಖಮುದ್ರೆ, ಅವನ ಧ್ಯಾನಮಯ ದಿನಚರಿ, ಅವನ ಪೂಜೆಯ ಪರಿಗಳನ್ನು ಕಂಡ ಅವರಿಗೆ ಅವನು ಸನ್ಯಾಸಿಯಾಗುವನೆಂಬ ಭಯ ಹುಟ್ಟಿತು. ಅವನ ಮದುವೆ ಮಾಡಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದುವು. ಸಿದ್ಧರಾಮ ಮನೆಬಿಟ್ಟ. ಶ್ರೀಮಲ್ಲಿಕಾರ್ಜುನನೇ ತಂದೆ, ತಾಯಿ, ಗುರು, ಗುರಿಯೆಂದು ನಂಬಿದ್ದ ಅವನು ತಂದೆತಾಯಿಗಳನ್ನು ತೊರೆದುದು ಸ್ವಾಭಾವಿಕವೇ. ತಂದೆತಾಯಿಗಳು ಗೋಳಿಟ್ಟರು. ಅದೇ ಊರಲ್ಲಿ ಆಶ್ರಮವಾಸಿಯಾಗಿ ಇರುವೆನೆಂದು ಸಮಾಧಾನ ಹೇಳಿ, ಹೊರಬಿದ್ದ ಸಿದ್ಧರಾಮ. ದೊಡ್ಡಪ್ಪನ ಮಗ ಬೊಮ್ಮಯ್ಯ ಹಿಂಬಾಲಿಸಿದ.

**ಸಕಲ ಜೀವಾತ್ಮರ ಸೇವೆ:**

ಸಿದ್ಧರಾಮನ ಆಶ್ರಮ ಸಾಧಕರ ಆಶ್ರಮವಯಿತು. ಅದರ ಕೀರ್ತಿ ಕುಸುರಿಯ ಕಂಪಿನಂತೆ ಸುತ್ತ ಹರಡತೊಡಗಿತು. ರಾಣಿ ಚಮಲದೇವಿ ಕನಸು ಕಂಡಳು. ಕನಸಿನಲ್ಲಿ ಸಿದ್ಧರಾಮನ ಸರ್ವೋದ್ಧಾರ ಕಾರ್ಯಕ್ಕೆ ಭೂಮಿಯನ್ನು ನೀಡಲು ಪ್ರೇರಣೆ ದೊರೆಯಿತು. ಸಿದ್ಧರಾಮನ ಆಶ್ರಮಕ್ಕೆ ಹೋಗಿ ಭೂದಾನವಿತ್ತಳಾಕೆ. ಆಶ್ವಾಸನವಿತ್ತಂತೆ ಮಂದಾರ ಮರದ ಕೆಳಗೆ ಶಿವಲಿಂಗವಾಗಿ ಮೂಡಿದ್ದ ಮಲ್ಲಯ್ಯ, ಅವನಿಗಾಗಿ ಶಿವಾಲಯವೊಂದನ್ನು ಕಟ್ಟುವ ಸದಿಚ್ಛೆ ಉದಿಸಿತು ಸಿದ್ಧರಾಮನಲ್ಲಿ. ಬೊಮ್ಮಯ್ಯನಿಗೆ ಆ ಇಚ್ಛೆಯನ್ನು ತಿಳಿಸಲು, ಗಾಬರಿಗೊಂಡ ಬೊಮ್ಮಯ್ಯ. ಬರಿಗೈಯಿಂದ ಭವ್ಯ ದೇವಾಲಯವನ್ನು ಕಟ್ಟುವುದು ಹೇಗೆ? ಎಂದು ಶಂಕಿಸಿದ. ಶಿವನ ಕಾರ್ಯಕ್ಕೆ ಶಿವನೇ ನೆರವಾಗುವನು ಎಂದು ಸಿದ್ಧರಾಮ ನಿರ್ಧಾರದಿಂದ ನುಡಿದ. ತಾನೇ ಗುದ್ದಲಿ ಎತ್ತಿ ಮುಂದಾದ. ಅವನ ಎರಡು ಕೈಗಳಿಗೆ ಸಾವಿರ ಕೈಗಳು ಕೂಡಿದುವು. ಅಗೆತದಲ್ಲಿ ಹೊನ್ನಿನ ಕೊಪ್ಪರಿಗೆಯೂ ಕೈಸೇರಿತು. ನೋಡುವವರು ನೋಡುತ್ತಲೇ ನಿಂತರು; ಮಾಡುವವರು ಮಲ್ಲಯ್ಯನ ಗುಡಿಯನ್ನು ಕಟ್ಟಿ ನಿಲ್ಲಿಸಿದರು! ಭಕ್ತ ಜನಕ್ಕೆ ಭಾಗ್ಯದ ಬಾಗಿಲು ತೆರೆದಂತಾಯಿತು. ಸಾವಿರ ಸಾವಿರ ಸಂಖ್ಯೆಯಲ್ಲಿ ಭಕ್ತರು ಬರತೊಡಗಿದರು ಮಲ್ಲಿಕಾರ್ಜುನನ ದರ್ಶನಕ್ಕೆ ಸುಗ್ಗವ್ವೆ ಮುದ್ದುಗೌಡರೂ ಬಂದು ದರ್ಶನ ಹೊಂದಿ ಧನ್ಯರಾಗಿ ಹೋದರು.

ದೇವಾಲಯವನ್ನು ಕಟ್ಟಿ ಕೈಕಟ್ಟಿ ಕುಳಿತುಕೊಳ್ಳಲಿಲ್ಲ ಸಿದ್ಧರಾಮ. ಅವನ ಧ್ಯೇಯಕ್ಕೆ ಎರಡು ಮುಖಗಳು; ಮೊದಲನೆಯ ಮುಖ ಮಲ್ಲಿಕಾರ್ಜುನನ ಸಾಕಾರ ರೂಪದಲ್ಲಿ ನಿಷ್ಠೆ; ಎರಡನೆಯದು ಸರ್ವ ಜೀವಿಗಳಲ್ಲಿ ಅನುಕಂಪ. ಆದುದರಿಮದ ಮಲ್ಲಿಕಾರ್ಜುನನ ಪೂಜೆಯ ಜೊತೆಗೆ ಸಕಲ ಜೀವಾತ್ಮರ ಸೇವೆಯನ್ನೂ ಕೈಗೊಂಡನವನು. ಒಂದೇ ಸಲಕ್ಕೆ ಒಂದು ಸಾವಿರ ಬಡಜನರ ಮದುವೆ ಮಾಡಿಸಿದನು. ಬಿಲೇಶ ಬೊಮ್ಮಯ್ಯನೆಂಬವನು ತನ್ನ ದಾಯಾದಿಗಳ ಒಡವೆಗಳನ್ನು ಅಪಹರಿಸಿ ಸನ್ಯಾಸಿಯ ಸೋಗು ಹಾಕಿ, ಸಿದ್ಧರಾಮನ ಸನ್ನಿಧಿಯನ್ನು ಸೇರಿ, ದಾಯಾದಿಗಳು ಅಲ್ಲಿಗೇ ಅರಸಿಕೊಂಡು ಬರಲು ಅಲ್ಲಿಂದ ಕಣ್ಮರೆಯಾಗಲು, ಅವನು ದಾಯಾದಿಗಳಿಗೆ ಆ ಒಡವೆಗಳ ಬೆಲೆಯನ್ನು ತಾನು ಕೊಟ್ಟು, ತನ್ನ ಅಸೀಮವಾದ ಕರುಣಮಮತೆಯನ್ನು ಮೆರೆದನು. ಆಶ್ರಮದ ಹಸುಗಳಿಗೆ ತನೇ ಮೇವು ಹಾಕಿ ಸಾಕಿ, ಬೆಂಕಿಯಲ್ಲಿ ಸುಟ್ಟು ಕೊಂಡು ಸತ್ತ ತಾಯಿಗಾಗಿ ಬೆಕ್ಕಿನ ಮರಿಗಳು ಗೋಳಿಡುತ್ತಿದ್ದುದನ್ನು ಕಂಡು ಕರುಳು ಕರಗಿ, ಆ ಸುಟ್ಟು ಸತ್ತ ಬೆಕ್ಕಿಗೆ ಜೀವದಾನ ಮಾಡಿ ಸರ್ವಜೀವಿಗಳಲ್ಲಿ ತನ್ನ ದಯೆಯನ್ನು ತೋರಿದನು. ಬೊಮ್ಮಿಸೆಟ್ಟಿಯ ಸತಿ ಕಾಳವ್ವೆ ಪತಿಯಂತೆಯೇ ಭಕ್ತಳಾಗಿದ್ದು ಮನೆಯಲ್ಲಿ ಗಣಾರಾಧನೆ ಮಾಡಿದ ದಿನವೇ ಅವಳಿಗೆ ನಾಗರಹಾವು ಕಚ್ಚಲು ತೀರ್ಥವನ್ನು ಕಳಿಸಿ ವಿಷ ಇಳಿಸಿ ತನ್ನ ಭಕ್ತವಾತ್ಸಲ್ಯವನ್ನು ಬೀರಿದನು. ಕ್ಷುದ್ರ ಸಿದ್ಧರಿಗೆ ಗುರುವಾಗಿದ್ದ ವಿದ್ಯಾಸಮುದ್ರನು ಸಿದ್ಧರಾಮನನ್ನು ಸೋಲಿಸಲು ಬಂದು ತಾನೇ ಸೋಲಲು ಅವನನ್ನು ಕ್ಷಮಿಸಿ ಸನ್ಮಾರ್ಗ ತೋರಿಸಿ ತನ್ನ ಕ್ಷಮಾಶೀಲತೆಯನ್ನು ಬೆಳಗಿದನು. ಹೀಗೆ ಬಳಿಗೆ ಬಂದವರನ್ನು ಭಕ್ತರನ್ನಾಗಿ, ಮುಕ್ತಾತ್ಮರನ್ನಾಗಿ ಮಾಡುತ್ತ ಅವರ ತನುಮನಗಳ ಜಾಡ್ಯವನ್ನು ಕಳೆಯುತ್ತ, ಅವರ ದುಃಖಗಳನ್ನು ಪರಿಹರಿಸುತ್ತ, ಕ್ಲೇಶ-ಕಷ್ಟ-ಕಂಟಕಗಳನ್ನು ದೂರೀಕರಿಸುತ್ತ, ಅವರನ್ನು ದಿವ್ಯತೆಯ ದಾರಿಯ ದಾರಿಕಾರರನ್ನಾಗಿ ಮಾಡುತ್ತ ನಡೆದ ಸಿದ್ಧರಾಮ.

ಒಮ್ಮೆ, ಮಡಿದ ಮಗನಿಗಾಗಿ ಗೋಗರೆಯುತ್ತ ತಾಯಿಯೊಬ್ಬಳು ಸಿದ್ಧರಾಮನ ಸನ್ನಿಧಿಗೆ ಅಳುತ್ತ ಬಂದಳು. ಅವಳ ಗಂಡ ತೀರಿಹೋದ ಒಂದು ವಾರದೊಳಗಾಗಿಯೇ ಇದ್ದೊಬ್ಬ ಮಗನೂ ಮಡಿದು ಹೋಗಿದ್ದ; ಅವಳಿಗೆ ಆಗ ಯಾರ ಆಶ್ರಯವೂ ಉಳಿದಿರಲಿಲ್ಲ. ಮರದ ಆಸರೆ ತಪ್ಪಿ ಬಿರುಗಾಳಿಗೆ ಸಿಕ್ಕಿದ್ದ ಬಳ್ಳಿಯಂತೆ ಆಗಿದ್ದಿತು ಅವಳ ಪಾಡು! ಸುಟ್ಟು ಸತ್ತ ಬೆಕ್ಕಿಗೆ ಪ್ರಾಣದಾನ ಮಾಡಿದಂತೆ ತನ್ನ ಮಗನಿಗೂ ಜೀವದಾನ ನೀಡಬೇಕೆಂದು ಮೊರೆಹೊಕ್ಕಳು ಸಿದ್ಧನಲ್ಲಿ. ಸಿದ್ಧರಾಮನು ಆ ತಾಯಿಯನ್ನು ಸಂತೈಸಿದ ರೀತಿ ಅವನ ವ್ಯಕ್ತಿತ್ವದ ಎತ್ತರ, ಆತ್ಮದ ಬಿತ್ತರಗಳನ್ನು ಚಿತ್ರಿಸುತ್ತದೆ: "ತಾಯೆ, ಮಡಿದ ಗಂಡನಿಗಾಗಿ, ಮಗನಿಗಾಗಿ ನೀನು ಶೋಕಿಸುತ್ತಿರುವೆ ಏಕೆ! ಇನ್ನೂ ನಿನ್ನ ಮನದ ಮುಂದಣ ಆಸೆ ತೀರಿಲ್ಲ. ಅದು ತೀರುವಂತಹದೂ ಅಲ್ಲ. ಎಂದು ತೀರಬೇಕು ಅದು? ಇನ್ನೂ ಸಾವಿರ ವರ್ಷಗಳ ಆಯುಷ್ಯವನ್ನು ಕೊಟ್ಟರೂ ತೀರುವುದೆ ಅದು? ಒಮ್ಮಿಲ್ಲೊಮ್ಮೆ ಮನದ ಮುಂದಣ ಆಸೆ ಮುಗಿಯಲೇಬೇಕು - ನೂರು ವರ್ಷಕ್ಕಾಗಲಿ ಮೂರು ವರ್ಷಕ್ಕಾಗಲಿ

ಮುಗಿಯಲೇಬೇಕು. ಅದು ಬೇಗ ಮುಗಿದಾಗ ಬಳಲಲೇಕೆ?" ಆ ತಾಯಿ ಅಳುತ್ತ ಬಂದವಳು ನೆಮ್ಮದಿ ತಾಳಿ ಧೈರ್ಯವಾಗಿ ಬಾಳಲು ನಿರ್ಧರಿಸಿದಳು.

ಸಿದ್ಧರಾಮನ ಸರ್ವಜೀವ ದಯಾಪರತೆಗೆ ಮತ್ತೊಂದು ಮುಖ ಮೂಡಿತು. ಆನರಿಗೇ ಜಲ ಸೌಕರ್ಯ ಕಡಿಮೆಯಿದ್ದ ಅಲ್ಲಿ ಪಶು, ಪಕ್ಷಿ, ಕ್ರಿಮಿ, ಕೀಟಾದಿ ಸಕಲ ಜೀವರಾಶಿಗಳ ಬಾಯಾರಿಕೆಯನ್ನೂ ಕಳೆವ ಕೆರೆಯೊಂದನ್ನು ಕಟ್ಟಿಸಲು ಮನಸ್ಸು ಮಾಡಿದ ಸಿದ್ಧರಾಮ. ಮತ್ತೆ ಗುದ್ದಲಿಯನ್ನು ಎತ್ತಿತು ಅವನ ಶ್ರೀಭುಜ. ಮತ್ತೆ ಸಾವಿರಾರು ಭುಜಗಳು ಹಾರೆಗುದ್ದಲಿಗಳನ್ನು ಹಿಡಿದು ಕೂಡಿ ದುಡಿಯಲು, ಕೂಡಿ ಪಡೆಯಲು ಸನ್ನದ್ಧವಾದುವು. ಸಾಮೂಹಿಕ ಶ್ರಮಯಜ್ಞ ಪ್ರಾರಂಭವಾಯಿತು. ಕೆರೆಯ ಕಾರ್ಯ ಭರದಿಂದ ಸಾಗಿತು. ಊರ ಹೆಂಗಳೆಯರು ಕುಟ್ಟುತ್ತ ಬೀಸುತ್ತ ಹಾಡಿದರು:

"ಹಾದಿ ಹಾದಿಗೆ ಗುಡಿಯ ಬೀದಿ ಬೀದಿಗೆ ಕೆರೆಯ
ಸಾಧಿಸಿದ ಕಟ್ಟಿ ಸಿದ್ಧರಾಮ–ಸೊನ್ನಲಿಗೆ
ಸಾಧು ಸಿದ್ಧನಿಗೆ ಮನೆಯಾಯ್ತು!"
ಸೊನ್ನಲಿಗೆ ಸಾಧು ಸಿದ್ಧನಿಗಷ್ಟೇ ಮನೆಯಾಗಲಿಲ್ಲ.

ಶ್ರೀಶೈಲ ಮಲ್ಲಿಕಾರ್ಜುನನಿಗೂ ಮನೆಯಾಯಿತು, ಮಹಾ ಮನೆಯಾಯಿತು. ಶ್ರೀಶೈಲಕ್ಕೆ ಹೋಗಿ ಮಲ್ಲಿಕಾರ್ಜುನನ ದರ್ಶನ ಪಡೆವ ಅನುಕೂಲತೆಯಿಲ್ಲದ ಅಸಂಖ್ಯ ಶ್ರೀಸಾಮಾನ್ಯರಿಗಾಗಿ ಸೊನ್ನಲಿಗೆ ಅಭಿನವ ಶ್ರೀಶೈಲವಾಯಿತು.

**ಇತ್ತ ಕಡೆಗೂ ಲಕ್ಷ್ಯ ಕೊಡು:**

ಹಮ್ಮು ಯಾರನ್ನೂ ಬಿಡುವುದಿಲ್ಲವೆಂದು ತೋರುತ್ತದೆ. ಎಂತೆಂಥ ಸಿದ್ಧಪುರುಷರನ್ನೂ ಅದು ಒಮ್ಮೆಯಾದರೂ ಆವರಿಸುತ್ತದೆ. ಮಲ್ಲಿಕಾರ್ಜುನನಿತ್ತ ಉರಿಗಣ್ಣು, ಕೈಗೊಂಡ ದೇವಾಲಯ ನಿರ್ಮಾಣ ಮತ್ತು ಕೆರೆ ಕಟ್ಟಿಸುವ ಕಾರ್ಯಗಳಲ್ಲಿ ದೊರೆತ ಯಶಸ್ಸು, ಪವಾಡಗಳನ್ನು ಮೆರೆದ ಹಿರಿಮೆ, ದಿನವೂ ಸಾವಿರಾರು ಜನರು ಬಂದು ಮಾಡುತ್ತಲಿದ್ದ ಸ್ತುತಿ, ನಿತ್ಯವೂ ನೂರಾರು ಹಳ್ಳಿಗಳಿಗೆ ಹರಡುತ್ತಲಿದ್ದ ಕೀರ್ತಿ – ಇವೆಲ್ಲ ಕರ್ಮ ಯೋಗಿ ಸಿದ್ಧರಾಮನಿಗೂ ಸಲ್ಲದ ಹಮ್ಮನ್ನು ಹುಟ್ಟಿಸಿರಬೇಕು.

ಸಾಧಕರೆಲ್ಲಿಯೇ ಇರಲಿ, ಅವರನ್ನು ಕಂಡು, ಅವರವರ ಅರಕೆಗಳನ್ನು ತೆರೆದು ತೋರಿಸಿ, ತಿದ್ದಿ ಸದ್ಬುದ್ಧಿಯನ್ನು ನೀಡಲೆಂದೇ ಹೊರಟಿದ್ದ ಅಲ್ಲಮಪ್ರಬು ಎಂಬ ಮಹಾಮಹಿಮ. ಸಿದ್ಧರಾಮನನ್ನು ತಿದ್ದುವುದು ಅಗತ್ಯವೆಂದು ತೋರಿತವನಿಗೆ. ಸೊನ್ನಲಿಗೆಗೆ ಹೋದ; ಕೆರೆ ಕಟ್ಟುತ್ತಲಿದ್ದ ಕೆಲಸದವರಿಗೆ ಕಾಣಿಸಿಕೊಂಡು; "ಒಡ್ಡ ರಾಮಯ್ಯನೆಲ್ಲಿ?"

ಎಂದು ಕೇಳಿದ. ಅವರು ರೇಗಿದರು. ಅವನನ್ನು ಹಿಡಿದು ಹೊಳೆಯಲೆಳಸಿದರು. ಆದರೆ ಬಯಲಿಗನೆನಿಸಿದ್ದ ಅಲ್ಲಮಪ್ರಭು ಅವನ ಕೈಗೆ ಸಿಕ್ಕಲಿಲ್ಲ. ಅವರಿಗೆ ಆಶ್ಚರ್ಯವಾಯಿತು. ಒಡೆಯನನ್ನು ಕರೆದರು. ಸಿದ್ಧರಾಮನು ಬಂದು ನಡೆದುದನ್ನು ಕೇಳಿ ಸಿಡಿದೆದ್ದ. ಉರಿಗಣ್ಣನ್ನು ತೆರೆದನಂತೆ. ಅದರಿಂದ ಹೊರಟ ಅಗ್ನಿ ಅಲ್ಲಮನ ಅಂಗುಷ್ಠವನ್ನು ಸೇರಿ ಶಾಂತವಾಯಿತಂತೆ.

ಸಿದ್ಧರಾಮ ಬೆರಗಾದ. ಅದುವರೆಗೆ ಪರಾಭವವೆಂಬುದನ್ನು ಅವನು ಕಂಡಿರಲಿಲ್ಲ. ಅಂದು ಅದೆಂತಹ ಸೋಲನ್ನು ಅನುಭವಿಸಿದವನು! ಎದುರಿಗಿರುವವನು ಅಸಾಮಾನ್ಯನೆಂಬುದು ಅವನಿಗೆ ಖಚಿತವಾಯಿತು. ಮಣಿದು ಮನ್ನಿಸುವುದೆಂದು ಬಿನ್ನವಿಸಿಕೊಂಡ. ಅಲ್ಲಮ ನಗುತ್ತ ನುಡಿದ: "ಸಿದ್ಧರಾಮಯ್ಯ, ನೀನು ಮನೆ ಬಿಟ್ಟು ಮಠ ಕಟ್ಟಿಕೊಂಡರೂ ಸಂಸಾರ ನಿನ್ನ ಬೆನ್ನು ಬಿಡಲಿಲ್ಲ; ಚಿಕ್ಕ ಸಮಸಾರವನ್ನು ಬಿಟ್ಟು ಈ ದೊಡ್ಡ ಸಂಸಾರವನ್ನು ಕಟ್ಟಿಕೊಂಡು ಅದರಲ್ಲಿಯೇ ಸಿಲುಕಿ ತೊಳಲುತ್ತಿರುವೆ. ಇದು ಸರಿಯಲ್ಲವೆಂದು ತೋರಲು ಬಂದೆ ನಾನು. ನನ್ನನ್ನು ಅಲ್ಲಮನೆಂದು ಕರೆಯುತ್ತಾರೆ."

ಸಿದ್ಧರಾಮ ಪೇಚಿನಲ್ಲಿ ಸಿಕ್ಕ. ತಾನು ಮಾಡುತ್ತಲಿದ್ದ ಪುಣ್ಯಕಾರ್ಯಗಳೂ ಕೇವಲ ಕರ್ಮ ಮಾತ್ರವೆ? ಜನಸೇವೆಯೂ ಸಂಸಾರವೆ ದಾರಿ ಯಾವುದು ಹಾಗಾದರೆ?" ತನ್ನ ಸಂದೇಹವನ್ನು ಅಲ್ಲಮನಿಗೆ ಅರುಹಿದ. ಅಲ್ಲಮ ಉತ್ತರವಿತ್ತ; "ನೀನು ಮಾಡುತ್ತಲಿರುವ ಲೋಕೋಪಕಾರಕ ಕಾರ್ಯಗಳು ತಪ್ಪೇನಿಲ್ಲ; ಆದರೆ ಅವುಗಳಲ್ಲಿಯೇ ಪೂರ್ಣಮಗ್ನನಾಗಿ ಅವುಗಳಿಗಿಂತಲೂ ಮೇಲಾದ ಅಂತರಂಗದ ಪ್ರಪಂಚವನ್ನು ಅಲಕ್ಷಿಸುವುದು ತಪ್ಪು. ಹೊರಗೆ ಕಲ್ಲುಮಣ್ಣಗಳಿಂದ ಕೆರೆ ಕಟ್ಟುವುದು ಎಷ್ಟು ಅಗತ್ಯವಾದುದೋ, ಅಷ್ಟೇ ತನುವೆಂಬ ಏರಿಗೆ ಮನವೆಂಬ ಕಟ್ಟೆಯ ಕಟ್ಟಿ, ಆಚಾರವೆಮಬ ಸೋಪಾನ ರಚಿಸಿ ಪರಮಾನಂದ ಜಲವ ತುಂಬುವುದೂ ಅಗತ್ಯವಾದುದು. ಅಂತೆಯೇ, ಹೊರಗೆ ಕಲ್ಲುಗಾರೆಗಳಿಂದ ದೇವಾಲಯ ಕಟ್ಟುವುದಕ್ಕಿಂತಲೂ ದೇಹವೆಂಬ ದೇವಾಲಯವನ್ನೇ ಜೀವವೆಂಬ ದೇವನಿಗಾಗಿ ಸರಿಪಡಿಸಿ ಸಿಂಗರಿಸುವುದು ಹೆಚ್ಚು ಮಹತ್ವದ್ದು. ಇನ್ನು ಇತ್ತ ಕಡೆಗೂ ನೀನು ಲಕ್ಷ್ಯವೀಯಬೇಕೆಂಬುದನ್ನು ನಿನಗೆ ತಿಳಿಸಲೆಮದೇ ಬಂದೆ."

**ಕರ್ಮಯೋಗದಿಂದ ಶಿವಯೋಗಕ್ಕೆ:**

ಸಿದ್ಧರಾಮನಿಗೆ ಹೊಸ ಪ್ರಪಂಚವೊಂದು ತನ್ನ ಕಣ್ಣ ಮುಂದೆ ಕಂಗೊಳಿಸಿದ ಅನುಭವವಾಯಿತು. ಆ ಪ್ರಪಂಚದ ಪೂರ್ಣ ಪರಿಚಯ ಮಾಡಿಕೊಡಲು ಅಲ್ಲಮಪ್ರಭುವನ್ನು ಪ್ರಾರ್ಥಿಸಿಕೊಂಡ. ಅದಕ್ಕೆ ಪ್ರಭುದೇವ ಕಲ್ಯಾಣದ ಬಸವಣ್ಣನಿಂದಲೇ ಪರಿಚಯ ಮಾಡಿಕೊಳ್ಳುವುದೆಂದು ಸಲಹೆಯಿತ್ತ. ಇಬ್ಬರೂ ಸೊನ್ನಲಿಗೆಯಿಂದ ಕಲ್ಯಾಣಕ್ಕೆ ಹೊರಟರು.

ಬಸವಣ್ಣನ ಮಹಾಮನೆಯ ಅಂಗಳಕ್ಕೆ ಆಗಮಿಸಿದಾಗ ಸಿದ್ಧರಾಮ ಉದ್ಗರಿಸಿದ; "ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಮನೆಯ ಕಟ್ಟಿದರೆ ಮರ್ತ್ಯಲೋಕವೆಲ್ಲವು ಭಕ್ತಿ ಸಾಮ್ರಜ್ಯವಾಯಿತುತ್ತು! ಕಪಿಲಸಿದ್ಧ ಮಲ್ಲಿನಾಥಾ, ನಿಮ್ಮ ಬಸವಣ್ಣನ ಮಹಾಮನೆಗೆ ನಮೋ ನಮೋ ಎಂದು ಬದುಕಿದೆನು!"

ಬಸವಣ್ಣ, ಚೆನ್ನಬಸವಣ್ಣನವರಿಗೆ, ಉಳಿದೆಲ್ಲ ಶಿವಶರಣರಿಗೆ ಪ್ರಭುದೇವರ ಮತ್ತು ಸಿದ್ಧರಾಮಯ್ಯನ ಆಗಮನದಿಂದ ಮಾತಿನಲ್ಲಿ ಹೇಳಲಾಗದಷ್ಟು ಆನಂದವಾಯಿತು. ಅವರೊಡನೆ ಕೆಲವು ದಿನಗಳನ್ನು ಕಳೆಯುವಷ್ಟರಲ್ಲಿಯೇ ಸಿದ್ಧರಾಮನ ಸಂದೇಹಗಳು ಒಂದೊಂದಾಗಿ ಮಾಯವಾಗಿದ್ದುವು. ಅನುಭವ ಮಂಪಟದ ಅರಿವಿನ, ಅನುಭವದ ಅಮೃತವನ್ನು ಉತ್ಪಾದಿಸುವ ಉದ್ಯಮದಲ್ಲಿ ಆತನೂ ಪಾಲ್ಗೊಂಡ. ಸುದೀರ್ಘ ಚರ್ಚೆಯಾದ ಮೇಲೆ ಇಷ್ಟಲಿಂಗೋಪಾಸನೆ ಅಗತ್ಯವಾದುದೆಂದು ಅವನಿಗೆ ಮನವರಿಕೆಯಾಯಿತು. ಚೆನ್ನಬಸವಣ್ಣ ಅವನಿಗೆ ಗುರುವಾಗಿ ಇಷ್ಟಲಿಂಗವನ್ನು ಅನುಗ್ರಹಿಸಿದ. ಸಿದ್ಧರಾಮಯ್ಯ, ಕರ್ಮಯೋಗದಿಂದ ಶಿವಯೋಗಕ್ಕೆ ತಲುಪಿ ಶಿವಯೋಗದ ತುತ್ತತುದಿಯನ್ನೇರಿದ; ಶಿವಯೋಗ ಸಾರ್ವಭೌಮನಾದ.

**ಶಿವಯೋಗದಿಂದ ವಚನಯಾಗಕ್ಕೆ:**

ಶಿವಯೋಗ ಸಾಧನೆಯೊಡನೆ ಹಿಂದೆ ಹೊರಗಿನ ಕೆರೆಯನ್ನು ಕಟ್ಟಿದುದಕ್ಕೆ ಪೂರಕವಾಗಿ ಒಳಗಿನ ಕೆರೆಯನ್ನೂ ಕಟ್ಟಿದ ಸಿದ್ಧರಾಮ. ತನುವೆಂಬ ಏರಿಗೆ ಮನವೆಂಬ ಕಟ್ಟೆ ಸಿದ್ಧವಾಯಿತು; ಆಚಾರವೆಂಬ ಸೋಪಾನವೂ ಸಿದ್ಧವಾಯಿತು; ಅದರಲ್ಲಿ ಪರಮಾನಂದ ಜಲವೂ ತುಂಬಿ ನಿಂತಿತು. ಎಂಥ ಪರಮಾನಂದ ಜಲವದು? ಹಿಂದೆ ಕೆರೆ ಬಾವಿ ಹೂದೋಟ ಚವಕ ಛತ್ರಂಗಳ ಮಾಡಿದಾಗ ಉಂಟಾಗಿದ್ದ ಲೋಕಾನುಭವ, ಈಗ ಶಿವಯೋಗ ಸಾಧನೆಯಿಂದ ದೊರೆತಿದ್ದ ಶಿವಾನುಭವ – ಎರಡೂ ಸೇರಿ ಹುಟ್ಟಿದ್ದ ಪರಮಾನಂದ ಜಲವದು. ಹಿಂದೆ ಕಟ್ಟಿದ್ದ ಹೊರಗಿನ ಕೆರೆಯ ನೀರನ್ನು ಕುಡಿದು ಕಿಮಿಕೀಟಕಾದಿ ಸರ್ವಜೀವಿಗಳೂ ಬಾಯಾರಿಕೆಯನ್ನು ಕಳೆದುಕೊಳ್ಳುತ್ತಿರುವಂತೆ ಈ ಒಳಗಿನ ಕೆರೆಯ ಪರಮಾನಂದದ ನೀರನ್ನು ಕುಡಿದು ಜೀವಾತ್ಮರು ಸಿದ್ಧರಾಮನಿಗೆ. ಅನುಭವ ಮಂಟಪದ. ಕಮ್ಮಟದಲ್ಲಿ ನಿತ್ಯ ವಚನ ನಾಣ್ಯಗಳು ಸಿದ್ಧವಾಗಿ ಹೊರಬೀಳುತ್ತಲಿದ್ದಾಗ ಸಿದ್ಧರಾಮನೂ ಸಹಸ್ರಾವಧಿ ವಚನಗಳನ್ನು ಉಸುರಿದ. ಆದರೆ ವಚನವು ರಚನೆಯಲ್ಲ, ಅದು ಮಾತಿಗೆ ಮೀರಿದುದನ್ನು ಮಾತಿನಲ್ಲಿ ಅಡಗಿಸುವ ದಿವ್ಯ ಕಲೆಯೆಂಬುದನ್ನವನು ಅರಿತಿದ್ದ.

**ವಾಕ್ಯ ಮಾಣಿಕ್ಯಗಳು:**

ಅವನ ಜೀವನದ ಘಟನೆಗಳಲ್ಲಿ ಒಡಮೂಡಿರುವ ಅವನ ವ್ಯಕ್ತಿತ್ವಕ್ಕಿಂತ ನೂರ್ಮಡಿ ಉಜ್ವಲವಾದ ವ್ಯಕ್ತಿತ್ವ ಅವನ ವಚನಗಳಲ್ಲಿ ಪಡಿಮೂಡಿದೆ–ಇಲ್ಲಿ ನೋಡಿ:

"ಮಾಡಿದರು ಮಾಡಿದರು ತಮ್ಮ ಹಿತಕ್ಕಲ್ಲದೆ ಮತ್ತಾರ ಹಿತಕ್ಕಲ್ಲ
ನೋಡಯ್ಯಾ;
ನೋಡಿದರು ನೋಡಿದರು ತಮ್ಮ ಹಿತಕ್ಕಲ್ಲದೆ ಮತ್ತಾರ ಹಿತಕ್ಕಲ್ಲ
ನೋಡಯ್ಯಾ;
ತನ್ನ ಬಿಟ್ಟನ್ಯಹಿತನ ನೋಡಿದರೆ ಕೂಡಿಕೊಂಬ ಕಪಿಲಸಿದ್ಧ
ಮಲ್ಲಯ್ಯನವರ"
"ಒಬ್ಬರ ಮನವ ನೋಯಿಸಿ, ಒಬ್ಬರ ಮನೆಯ ಘಾತವ ಮಾಡಿ
ಗಂಗೆಯ ಮುಳುಗಿದರೇನಾಗುವುದಯ್ಯಾ?
ಚಂದ್ರನು ಗಂಗೆಯ ತಡಿಯಲ್ಲಿದ್ದಡೇನು – ಕಲಂಕ ಬಿಡದಾಯಿತ್ತಯ್ಯಾ!
ಅದು ಕಾರಣ, ಮನವ ನೋಯಿಸದವನೆ, ಒಬ್ಬರ
ಘಾತವ ಮಾಡದವನೆ ಪರಮಪಾವನ!
ಆರೇನೆಂದರೂ ಓರಂತಿಪ್ಪುದೇ ಸಮತೆ; ಆರು
ಜರೆದರೂ ಅವರೆನ್ನ ಮನದ
ಕಾಳಿಕೆಯ ಕಳೆದರೆಂಬುದೇ ಸಮತೆ; ಆರು
ಸ್ತೋತ್ರ ಮಾಡಿದರೂ ಅವರೆನ್ನ ಜನ್ಮದ
ಹಗೆಗಳೆಂಬುದೇ ಸಮತೆ;... ಮನವಚನ ಕಾಯದಲ್ಲಿ
ಅಹಿತವಿಲ್ಲದೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ
ನಿಮ್ಮವರ ನೀವೆಂಬುದೇ ಸಮತೆ.

ಇಂಥ ರತ್ನದಂಥ ವಚನಗಳಿರಲಿ, ಅವುಗಳಲ್ಲಿ ಮಿನುಗುವ ವಾಕ್ಯ ಮಾಣಿಕ್ಯಗಳನ್ನು ನೆನಪಿಟ್ಟರೂ ಸಾಕು–ಜೀವನ ಪಾವನವಾಗುತ್ತದೆ.

ಯೋಗಿಗೆ ಕೋಪವೇ ಮಾಯೆ, ರೋಗಿಗೆ
ಅಪಥ್ಯವೇ ಮಾಯೆ, ಜ್ಞಾನಿಗೆ ಮಿಥ್ಯವೇ ಮಾಯೆ,
ಅರಿದೆನೆಂಬುವಂಗೆ ನಾನು ನೀನು ಎಂಬುದೇ ಮಾಯೆ
ನಿಮ್ಮವರ ನೋವೆ ಎನ್ನ ನೋವು ನೋಡಾ
ಶುಭಕ್ಕೆ ವಿಘ್ನವಲ್ಲದೆ ಅಶುಭಕ್ಕೆ ವಿಘ್ನವೆ?
ಸುಗಂಧದೆಣ್ಣೆ–ನೀರಡಿಕೆಗೆ ಕುಡಿಯಬಹುದೆ?

ಬಂಗಾರದ ಸಲಾಕೆ–ಎದೆಯಲ್ಲಿ ಒತ್ತಬಹುದೆ?
ಮನಸ್ಸಿನ ಕಲ್ಮಷವಳಿದುದೆ ಮಹಾಸ್ನಾನ
ಅವನ ಎಲ್ಲ ವಚನಗಳ ಸಾರಸರ್ವಸ್ವವನ್ನು ಅವನೇ ಒಂದೆಡೆಗೆ ಹೋಗೆ ಹಿಡಿದಿಟ್ಟಿದ್ದಾನೆ:
ಅರುವತ್ತೆಂಟು ಸಹಸ್ರ ವಚನಗಳ ಹಾಡಿ ಹಾಡಿ
ಸೋತಿತೆನ್ನ ಮನ ನೋಡಯ್ಯಾ!
ಹಾಡುವುದೊಂದೆ ವಚನ, ನೋಡುವುದೊಂದೆ ವಚನ;
ವಿಷಯ ಬಿಟ್ಟು ನಿರ್ವಿಷಯವಾಗುವುದೊಂದೇ ವಚನ!

ಒಟ್ಟಿನಲ್ಲಿ ಅತಿಶ್ರೇಷ್ಠ ವಚನಕಾರರಲ್ಲಿ ಒಬ್ಬ ಸಿದ್ಧರಾಮ. ವಚನಗಳನ್ನಲ್ಲದೆ "ಬಸವಸ್ತೋತ್ರ ತ್ರಿವಿಧಿ," "ಮಿಶ್ರ ಸ್ತೋತ್ರ ತ್ರಿವಿಧಿ," "ಅಷ್ಟಾವರಣ ಸ್ತೋತ್ರ ತ್ರಿವಿಧಿ"ಗಳನ್ನೂ ಅವನು ರಚಿಸಿದ್ದಾನೆ. ಆಧ್ಯಾತ್ಮ ಲೋಕದಲ್ಲಿ ಅಮರನಾಗಿರುವಂತೆ ಸಾಹಿತ್ಯ ಪ್ರಪಂಚದಲ್ಲಿಯೂ ಅಜರನಾಗಿದ್ದಾನೆ.

## ಮತ್ತೆ ಸೊನ್ನಲಿಗೆಗೆ – ಲಿಂಗಸಮಾಧಿಗೆ

ಸೊನ್ನಲಿಗೆಯ ಸೆಳೆತ, ಕೇದಾರ ಗುರು – ಬೊಮ್ಮಯ್ಯ – ಹಾವಿನಹಾಳ ಕಲ್ಲಯ್ಯ ಮೊದಲಾದ ಶಿಷ್ಯರ ಭಕ್ತಿಯ ಎಳೆತ ಬಲವಾಗಿರಬೇಕು. ಬಸವಾದಿ ಪ್ರಮಥರು ಬಿಡುವ ಮೊದಲೇ ಕಲ್ಯಾಣವನ್ನು ಬಿಟ್ಟು ಸೊನ್ನಲಿಗೆಗೆ ಹಿಂದಿರುಗಿರುವಂತಿದೆ ಸಿದ್ಧರಾಮ; ಅಲ್ಲಿ ಮತ್ತೆ ಮಾನವೋದ್ಧರಣ ಕಾರ್ಯಗಳನ್ನು ಮುಂದುವರಿಸಿದಂತಿದೆ. ಬಿಜ್ಜಳನ ತಮ್ಮ ಕರ್ಣದೇವ ತನಗೆ ಪಟ್ಟಗಟ್ಟಲು ಸಿದ್ಧರಾಮೇಶ್ವರರೇ ಬರಬೇಕೆಂಬುದು ಕೋರಿ ಮೊದಲು ಪರಿವಾರದವರನ್ನೂ, ಅನಂತರ ಸೊಡ್ಡಳ ಬಾಚರಸರನ್ನೂ ಕಳಿಸಿದನಂತೆ; ಶಿವಯೋಗೀಶ್ವರ ಸಿದ್ಧರಾಮೇಶ್ವರರು ಹೋಗಲಿಲ್ಲವಂತೆ. ಶೂನ್ಯಸಿಂಹಾಸನಕ್ಕೆ ಅವರು ಮೂರನೆಯ ಜಗದ್ಗುರುಗಳಾದರಂತೆ.

ಅಂತೂ ಕೊನೆಯವರೆಗೂ ಮಹಿಮಾಶಾಲಿಯಾಗಿಯೇ ಬಾಳಿದ ಆ ಮಹಾ ಶಿವಯೋಗಿ ಲಿಂಗಸಮಾಧಿಯನ್ನು ಪ್ರವೇಶಿಸುವ ಮೊದಲೂ ಮಹಿಮೆಯನ್ನು ಮೆರೆದ. ಶಿಷ್ಯರೆಲ್ಲರನ್ನೂ ಕರೆದ. ತಾನು ಸಮಾಧಿಸ್ಥನಾಗುವ ವಿಷಯವನ್ನು ಒರೆದ. ಶಿಷ್ಯರು ಶೋಕವಿಹ್ವಲರಾಗಲು ಅವರನ್ನು ಸಂತೈಸಿದ – ನೆನೆದವರ ಮನದಲ್ಲಿರುವ ತಾನು ಸದೇಹವಾಗಿದ್ದರೇನು, ಸಮಾಧಿಯಲ್ಲಿದ್ದರೇನು – ಎಲ್ಲ ಒಂದೇ ಎಂದು ತಿಳಿಸಿ ಹೇಳಿದ. ಅವನಿಗಾಗಿ ಸಮಾಧಿ ಸಿದ್ಧವಾಯಿತು. ಸಮಾಧಿಯನ್ನು ಕರ್ನಾಟಕದ ಒಳಗಿನಿಂದಲೂ ಹೊರಗಿನಿಂದಲೂ ಲೆಕ್ಕವಿಲ್ಲದಷ್ಟು ಭಕ್ತರು ಬಂದರು. ಅವರೆಲ್ಲರಿಗೆ ಶುಭವನ್ನು ಕೋರಿದ ಸಿದ್ಧರಾಮ, ಶರಣ ಧರ್ಮದ ಸಾರವನ್ನು ಬೀರಿದ; ಅವರ ಜಯಕಾರ ಧ್ವನಿ ಬಾನಿಗೇರುತ್ತಿರಲು ಲಿಂಗಸಮಾಧಿಯನ್ನು ಸೇರಿದ!

ಇಂದಿಗೂ ಅಸಂಖ್ಯಾತರಿಂದ ಅವನಿಗೆ ಪೂಜೆ ಪ್ರಾರ್ಥನೆ ಸಲ್ಲುತ್ತಿವೆ – ನಿತ್ಯವೂ ಅವನ ಗುಡಿಯಲ್ಲಿ. ಅದಕ್ಕಿಂತ ಹೆಚ್ಚಾಗಿ ಕನ್ನಡನಾಡಿನ ಲಕ್ಷ ಲಕ್ಷ ಮನೆಗಳಲ್ಲಿ ಅವನ ವಚನಗಳನ್ನು ಓದುವ, ಅವನ ಸ್ತೋತ್ರಗಳನ್ನು ಪಠಿಸುವ, ಅವನ ಚರಿತ್ರೆಯನ್ನು ವಾಚಿಸುವ, ಅವನ ಕೀರ್ತಿಯನ್ನು ಕೇಳುವ ಅಗಣಿತ ಆಸ್ತಿಕರಿಂದ ಅವನಿಗೆ ಮೌನವಾಗಿ ಮಾನಸಪೂಜೆ ಸಲ್ಲುತ್ತಿದೆ. ಅವನೀಗ ಶರಣಧರ್ಮದ ದಿವ್ಯ ಜ್ಯೋತಿ ಮಾತ್ರವಲ್ಲ, ಕನ್ನಡ ಕುಲದೀಪಕರಲ್ಲಿ, ಭಾರತದ ಮಹಾವಿಭೂತಿಗಳಲ್ಲಿ ಒಬ್ಬ.

* * * * *

# ಮಹಾದೇವಿ

# ೧

# ಮಹಾದೇವಿಯ ಮಹಾಜೀವನ

ಇಂದಿಗೂ ಮಹಾದೇವಿಯಕ್ಕ ಮಹದ್ವಕ್ತಿ ಮಾತ್ರವಲ್ಲ; ಭಕ್ತಿ–ಜ್ಞಾನ–ವಿರಕ್ತಿ ಜನಿತ ಆತ್ಮಶಕ್ತಿ ಮಾತ್ರವಲ್ಲ; ಮಹಿಳಾ ವಿಮುಕ್ತಿಯ ಆಂದೋಲನದ ಪ್ರಥಮ ನಿದರ್ಶನ ಮಾತ್ರವಲ್ಲ; ವಚನಸಾಹಿತ್ಯ ಶ್ರೀಗಿರಿಯ ಸಮುನ್ನತಶಿಖರ ಮಾತ್ರವಲ್ಲ; ಅವಳೊಂದು ಸಮುಜ್ವಲ ಜೀವನದರ್ಶನದ ಸಜೀವ ಸಮಕ್ಷಮತೆ, ಸಾನ್ನಿಧ್ಯ! ಈ ಸಮ್ಮುಕತೆಯ ದೈವೀಕರಣ ಕ್ಷಕಿರಣ ಪ್ರಸರಣದ ಪ್ರಭಾವಕ್ಕೆ ಒಳಗಾಗದ ಕನ್ನಡಿಗರಿಲ್ಲ, ಕಲಿತವರಿರಲಿ, ಕಲಿಯದವರಿರಲಿ, ಅಕ್ಕನ ಸಮುಪಸ್ಥಿತಿಯ ಸಮ್ಮೋಹಕತೆಯಿಂದ ಆಕರ್ಷಿತರಾಗಲೇ ಬೇಕು; ಆಗುತ್ತಲಿದ್ದಾರೆ. ಅಂತೆಯೇ ಹೆಸರರಿಯದ ಹಳ್ಳಿಯ ಹಾಡುಗಬ್ಬಿಗರಿಂದ ಹರಿಹರಾದಿ ಮಹಾಕವಿಗಳ ವರೆಗೆ, ಆಂಗ್ಲವಿದ್ಯಾಭೂಷಿತರಿಂದ ಸಂಸ್ಕೃತಪಾಂಡಿತ್ಯದ ಗೌರೀಶಂಕರವನ್ನೇರಿದ್ದ ಗೌರೀಶಂಕರಮಹಾಸ್ವಾಮಿಗಳ ವರೆಗೆ ಎಲ್ಲರೂ ಆಕೆಯ ಬಗೆಗೆ ಹಾಡುಕಟ್ಟಿದ್ದಾರೆ; ಕಾವ್ಯ–ನಾಟಕ–ಚರಿತ್ರೆ ಪ್ರಬಂಧಗಳನ್ನು ಬರೆದಿದ್ದಾರೆ; ಪ್ರವಚನ ಗೈದಿದ್ದಾರೆ; ಶಿವಕಥೆ ಹೇಳಿದ್ದಾರೆ; ಲಾವಣಿ ಹಾಡಿದ್ದಾರೆ. ವರುಷ ವರುಷವೂ ಅಕ್ಕನನ್ನು ಕುರಿತ ಸಾಹಿತ್ಯಕ್ಕೆ ಉಕ್ಕು ಬರುತ್ತಿರುವುದೆ ಆಕೆಯ ಆಕೆಯ ಅಮೋಘ, ಅನುಮಪಮ ವ್ಯಕ್ತಿತ್ವಕ್ಕೆ ಸಾಕ್ಷಿ.

ಇಂಥದೊಂದು ವ್ಯಕ್ತಿತ್ವದ ವಿಕಸನ ತಕ್ಕ ಪ್ರದೇಶ ಪರಿಸರಗಳಲ್ಲಿಯೇ ಆಗಿರಬೇಕಲ್ಲವೆ? ಮಲೆಯ ನಾಡೆನಗೆ ತಾಯಿಮನೆ; ಕಾಡು ದೇವರ ಬೀಡು, ಎಂದು ಹಾಡಿ ಹೊಗಳಿಸಿಕೊಂಡು 'ಮಲೆನಾಡಿಗೇ' ಕಿರೀಟಪ್ರಾಯವಾದುದು, ಬನವಸೆಯ ಪನ್ನಿರ್ಛಾಸಿರದ ಪ್ರಾಂತಕ್ಕೆ ಸೇರಿದ ಬಳ್ಳಿಯಗಾವೆಯ ನಾಡು. ಬಳ್ಳಿಗಾವಿ ಈ ನಾಡಿನ ಒಂದು ಪ್ರಾಚೀನ ಶೈವಕೇಂದ್ರ. ಮರಿಕಲ್ಯಾಣವೆಂದು ಹೆಸರಾಗಿದ್ದ ಈ ಬಳ್ಳಿಗಾವೆಯ ಸನಿಹದಲ್ಲಿಯೇ ಸೃಷ್ಟಿಸೌಂದರ್ಯದ ಮಡಿಲಿನಲ್ಲಿ ಮಲಗಿರುವ ಉಡುತಡಿಯೆಂಬ ಗ್ರಾಮವಿದೆ. ಇದು ಹಿಂದೆ ಒಂದು ರಾಜಧಾನಿ. ಇಂದು ಅಲ್ಲಿ ದೊರೆಯುವ ಅವಶೇಷಗಳ ಆಧಾರದಿಂದ ಇದು ಹಿಂದೆ ರಾಜಧಾನಿಯಾಗಿದ್ದಿರಬಹುದೆಂದು ಹೇಳಬಹುದಾಗಿದೆ. ಇಲ್ಲಿ ಅಕ್ಕ ಉದಿಸಿದಾಗ ಇದಕ್ಕೆ ಕೌಶಿಕನು ದೊರೆಯಾಗಿದ್ದು, ಯಾವ ಕೌಶಿಕನೆಂಬುದು ಖಚಿತವಾಗಿಲ್ಲ. ಪ್ರಸಿದ್ಧನಾದ ಕಸಪಯ್ಯನೇ ಕೌಶಿಕಾಗಿರಬಹುದೆಂದು ಡಾ. ಎಂ. ಚಿದಾನಂದಮೂರ್ತಿಯವರು ತರ್ಕಿಸಿದ್ದಾರೆ.[೧] ಕೌಶಿಕನ ಅರಮನೆಯಿದ್ದ

ಸ್ಥಳವೆಂದು ಈಗಲೂ ಅಲ್ಲಿ ಒಂದು ಅವಶೇಷವನ್ನು ತೋರಿಸುತ್ತಾರೆ. ಪರದೇಶಿ ಮಲ್ಲಪ್ಪನ ಗುಡಿಯೂ ಇದೆ. ಈ ಕಾರಣಗಳಿಂದ ಕಲಬುರಗಿ ತಾಲೂಕಿನ ಮಹಾಗಾವಿಗಿಂತ ಈ ಉಡುತಡಿಯೇ ಅಕ್ಕನ ಜನ್ಮಸ್ಥಳವಾಗಿರುವ ಸಂಭವ ಹೆಚ್ಚೆಂದು ವಿದ್ವಾಂಶರು ತೀರ್ಮಾನಿಸಿದ್ದಾರೆ. ಪಿಡುಪರ್ತಿ ಸೋಮನಾಥನು ಹೇಳಿರುವಂತೆ ಉದತಡಿ ಎಂಬ (ಉದಕದ, ಎಂದರೆ ಜಲಾಶಯದ ಸನಿಹದ ಸ್ಥಳವೆಂಬ ಅರ್ಥದ) ಮೊದಲಿನ ಹೆಸರು ಮುಂದೆ ಉಡುತಡಿಯೆಂದು ರೂಪಾಂತರ ಹೊಂದಿದುದು ನಿಜವಾದರೆ ಶಿರಾಳಕೊಪ್ಪಕ್ಕೆ ಮೂರು ಮೈಲಿ ದೂರದಲ್ಲಿರುವ ಈ ಉಡುತಡಿಯೇ ಅಕ್ಕನ ಹುಟ್ಟೂರೆಂಬ ವಾದಕ್ಕೇ ಇನ್ನೂ ಪುಷ್ಟಿದೊರೆಯುತ್ತದೆ. ಯಾಕೆಂದರೆ ಇಂದಿಗೂ ಇಲ್ಲಿ ಸುಂದರ ಸರಿಸಿಯೊಂದಿದೆ. ಅಕ್ಕ ವಿದ್ಯಾಭ್ಯಾಸ ಮಾಡಿದ ಮಠವನ್ನು ಈಗಲೂ ಗುರುವಾಡಿಮಠವೆಂದು ಅಲ್ಲಿ ಕರೆಯುವರಂತೆ. ಇದಲ್ಲದೆ, ಹರಿಹರ, ಪಾಲ್ಕುರಿಕೆ ಸೋಮನಾಥ, ಚಾಮರಸ, ಸಿದ್ಧನಂಜೇಶ, ಘನಮಠದ ಶಿವಯೋಗಿಗಳು ಅಕ್ಕನನ್ನು ಉಡುತಡಿಯ ಮಹದೇವಿಯೆಂದೇ ಕರೆದಿದ್ದಾರೆ.

ಒಟ್ಟಿನಲ್ಲಿ ಉಡುತಡಿಗೆ ಅಕ್ಕನ ಹುಟ್ಟೂರಾಗುವ ಹೆಮ್ಮೆ ಹಿರಿಮೆಗಳು ದೊರೆತವು. ಅಲ್ಲಿ ಸದ್ಭಕ್ತಿ ಸಂಪನ್ನ ಕುಟುಂಬದಲ್ಲಿ ಹುಟ್ಟಿದಳಾಕೆ. ಅವಳ ತಂದೆ ತಾಯಿ ಹೆಸರಿನ ಬಗ್ಗೆ ಹಿಂದಿನ ಕೃತಿಗಳಲ್ಲಿ ಒಮ್ಮತವಿಲ್ಲ. ಅನೇಕ ಶರಣ ಶರಣೆಯರ ಬಗ್ಗೆ ರಗಳೆಗಳನ್ನು ಬರೆಯುವ ಅವಸರದಲ್ಲಿದ್ದ ಹರಿಹರ 'ಶಿವಭಕ್ತ ಶಿವಭಕ್ತೆ'ಯರೆಂದು ಕರೆದು ಮುಂದೆ ಸಾಗುತ್ತಾನೆ. ಹೀಗೆ ಹೆಸರರಿಯದವರಿಗೆ ಹರಿಹರನು ಶಿವಭಕ್ತ ಶಿವಭಕ್ತೆಯರೆಂದು ಹೆಸರಿತ್ತುದು ಹೊಸದೇನಲ್ಲ. 'ಅಕಾಯಚರಿತ್ರ'ರಾದ ಶರಣರ ಅಂತರಂಗದ ಅರಳಿಕೆಯ ಚಿತ್ರಣವೇ ಮುಖ್ಯವಾದುದು, ಬಹಿರ್ಘಟನೆಗಳ ಬಿತ್ತರಿಕೆಯಲ್ಲ ಎಂದು ಬಗೆದಿರಬೇಕು. ಸ್ವಯಂ ಸಾಧಕವರೇಣ್ಯನಾಗಿದ್ದ ಆ ಮಹಾಕವಿ.

ಅಕ್ಕನ ಬಗೆಗೆ ಬರೆದ ಮಿಕ್ಕ ಕೃತಿಕಾರರಲ್ಲಿ ಚಾಮರಸ, ಎಳಂದೂರ ಹರೀಶ್ವರ, ಚೆನ್ನಬಸವಾಂಕರು ಅಕ್ಕನ ತಂದೆ ತಾಯಿಗಳ ಹೆಸರು ನಿರ್ಮಲ, ಸುಮತಿಯೆಂದೂ, ರಾಚಕವಿಯು ಓಂಕಾರಸೆಟ್ಟಿ, ಲಿಂಗಮ್ಮ ಎಂದೂ ಪಿಡುಪರ್ತಿ ಬಸವ ಮತ್ತು ಬಲ ಪಾಪಾಂಬಾ ಕವಿಗಳು ವಿಮಲ ಕುಟಿಲಾಲ ಎಂದೂ ಹೇಳಿದ್ದಾರೆ. ಹೆಚ್ಚಿನವರು ಹೇಳಿರುವ ನಿರ್ಮಲ ಸುಮತಿಯರೆಂಬ ಹೆಸರುಗಳೇ ಈಗಿನ ಮಟ್ಟಿಗೆ ಅಂಗೀಕೃತವಾದ ಅಭಿಧಾನಗಳಾಗಿವೆ. ವಿಮಲ ನಿರ್ಮಲ ಎರಡೂ ಏಕಾರ್ಥ ನಿರ್ದೇಶಕ ಶಬ್ದಗಳಾಗಿರುವ

---

೧. ಕರ್ನಾಟಕ ಭಾರತಿ – ಸಂಪುಟ: ೮ ಸಂಚಿಕೆ :೨.

೨. ನೋಡಿ: ಹರಿಹರನ ಮಹಾದೇವಿಯಕ್ಕನ ರಗಳೆ, ಮೊದಲ ಕೊನೆಯ ಪದ್ಯಗಳು; ಪಂಡಿತಾರಾಧ್ಯ ಚರಿತ್ರೆ, ಆ. ೨, ಪದ್ಯ ೮೮; ಗುರುರಾಜ ಚಾರಿರ ಸಂ. ೯, ಪದ್ಯ ೮೮; ಪ್ರಭುಲಿಂಗ ಲೀಲೆ, ಗತಿ ೯, ಪದ್ಯ, ೨; ಭಕ್ತಿಸುಧಾಸಾರ, ಪದ ೨೩೯; ತೆಲುಗು ಕವಿ ಪಿಡುಪರ್ತಿ ಬಸವನೂ ಉಡುತಡಿಯೆಂದೇ ಹೇಳಿದ್ದಾನೆ.

ಕಾರಣ ತಂದೆಯ ಹೆಸರಂತೂ ನಿರ್ಮಲವೆಂದಿದ್ದುದೇ ಖಚಿತವೆನಿಸುತ್ತಿದೆ; ಆದರೆ ತಾಯಿಯ ಹೆಸರು ಮಾತ್ರ ಸುಮತಿ, ಲಿಂಗಮ್ಮ, ಕುಟಿಲಾಲ ಎಂಬ ಪರಸ್ಪರ ಸಂಬಂಧವಿಲ್ಲದ ಮೂರು ಅಭಿಧಾನಗಳಿಗೆ ಎಡೆಗೊಟ್ಟು ಬಿಡಿಸಲಾಗದ ಒಗಟಾಗಿ ಉಳಿದಿದೆ. ಸುಮತಿ ಎಂಬುದನ್ನೇ ಬಹುಜನರ ಮತಿ ಒಪ್ಪಿದೆಯಾಗಿ ಅದನ್ನೇ ಅಂಗೀಕರಿಸಿ ಮುಂದೆ ಸಾಗುವುದು ವಿಹಿತವೆನಿಸುತ್ತಿದೆ.

ಹೆಸರೇನೇ ಇರಲಿ, ಹೆಸರಾದ ಭಕ್ತರವರು; ಶಿವಾಚಾರದ ಸಾಧಕರವರು; ಗುರು–ಲಿಂಗ–ಜಂಗಮ–ರೂಪೀ ಶಿವತತ್ತ್ವದ ಆರಾಧಕರವರು. ಇಂಥವರಿಗೆ ಬೇಗ ಮಕ್ಕಳಾಗದಿರುವುದೂ, ಅವರ ನೋಂಪಿಯಿಂದ ಪ್ರೀತರಾದ ಶಿವನೋ ಪಾರ್ವತಿಯೋ ಅವರಿಗೆ ಪುತ್ರ ಇಲ್ಲವೆ ಪುತ್ರಿಯ ವರವೀಯುವುದೂ ಅವರ ಅಂಶವೇ ಆ ಮಹಿಮರ ಉದರದಲ್ಲಿ ಗರ್ಭವಾಗಿ ಮೂಡಿ, ಕಾರಣಿಕ ಶಿಶುವಾಗಿ ಬೆಳೆದು, ಆ ಕಾಲದ ಪುಣ್ಯ ಹಣ್ಣಿದಂತೆ ಶರಣಸಂತಾನೋದಯವಾಗುವುದೂ ಅನೇಕ ಕಾವ್ಯಗಳಲ್ಲಿ ಕೇಳಿಬಂದ ಮಾತುಗಳೇ ಆಗಿವೆ. ಅಕ್ಕಮಹಾದೇವಿಯ ಜನನದ ವಿಷಯದಲ್ಲಿಯೂ ಈ ಮಾತುಗಳು ಸುಮಾರಾಗಿ ಆಕೆಯ ಬಗೆಗಿರುವ ಎಲ್ಲ ಕೃತಿಗಳಲ್ಲಿಯೂ ಮೂಡಿನಿಂತಿವೆ. "ಗಿರಿಜಾತೆಯಾಜ್ಞೆಯಿಂದಂ ನರಲೋಕಕ್ಕಿಳಿದು ಬಂದು ಭಕ್ತಿಯ ಪುಣ್ಯೋದರಗತ ವಿಶುದ್ಧ ವಿಭ್ರಮ ಗುರುತರ ಮುಖವಾದ ಗರ್ಭವೆಂದು ಹರಿಹರನೇ ಬಣ್ಣಿಸಲಿ, ನಿನ್ನ ನಿರ್ಮಳ ಸಾತ್ವಿಕದ ಸಂಪನ್ನ ಕಳೆಯನು ಕಳುಹಿ ಧರೆಯೊಳು ಚೆನ್ನೆಯಾಗಿರೆ ಜನಿಸಿ ನೆಜೆ ನಿಷ್ಕಾಮಭಕ್ತಿಯಲಿ" ಎಂದು ಚಾಮರಸನೇ ಬಿತ್ತರಿಸಲಿ, "ಹರನ ಮುಡಿವೆಣ್ಣಿಳೆಯ ಪೊರೆಯಲ್ ಇಳಿವಂತೆ ಇಳಿದಳಿಳೆಗೆ ತದ್ರುದ್ರಕನ್ಯೆ" ಎಂದು ಚೆನ್ನಬಸವಾಂಕನೇ ಬರೆಯಲಿ, "ಮೃಡನರಸಿಯಂಶವೇ ಧರಣಿಯೊಳಗೊಪ್ಪುತಿರ್ಪುಡುತಡಿಯೆನಿಪ್ಪ ಪಟ್ಟಣದಲ್ಲಿ ಜನಿಸಲ್" ಎಂದು ವಿರೂಪಾಕ್ಷ ಪಂಡಿತರೇ ವಿವರಿಸಲಿ ಎಲ್ಲರೂ ಪಾರ್ವತಿಯ ಅಂಶವೇ ಸುಮತಿಯ ಪುಣ್ಯೋದರದಲ್ಲಿ ಸಿಂಪಿನೊಳಗಣ ಮುತ್ತಿನಂತೆ ಬೆಳೆದು ಮಹಾದೇವಿಯಾಗಿ ಮೈದೋರಿತೆಂಬ ಕಲ್ಪನೆಯನ್ನೇ ಕಲ್ಪಲತೆಯಾಗಿ ಬೆಳೆಸಿದ್ದಾರೆ.

ಪುಣ್ಯಕ್ಕೆ ಅಕ್ಕನ ಹೆಸರಿನ ಬಗ್ಗೆ ವಾದವಿವಾದಗಳಿಲ್ಲ; ಇಲ್ಲವೆನ್ನಲೂ ಬರುವಂತಿಲ್ಲ. ಪಂಡಿತಾರಾಧ್ಯ ರಚಿತ ಸಂಸ್ಕೃತ ಗಣಸಹಸ್ರ ನಾಮಾವಳಿಯಲ್ಲಿ 'ಉಡುತಡಿಯ ಮಹಾದೇವಿ ತಥೈವ ಕಮಲವ್ವಾ' ಎಂದು ಉಕ್ತವಾಗಿದೆ. ಇದರಿಂದ ಮಹಾದೇವಿಯಕ್ಕನಿಗೆ ಕಮಲವ್ವನೆಂಬ ಇನ್ನೊಂದು ಹೆಸರು ಇದ್ದಿತೆಂದು ಕೆಲವರು ತರ್ಕಿಸಲು ಆಸ್ಪದ ದೊರೆತಿದೆ. ಆದರೆ ಈ ತೊಡಕನ್ನು ಬಿಡಿಸಿದ್ದಾರೆ ಡಾ. ಆರ್.ಸಿ.ಹಿರೇಮಠರು, ಅಕ್ಕಗಳ ವಚನಗಳಿಗೆ ಬರೆದ ತಮ್ಮ ಪ್ರಸ್ತಾವನೆಯಲ್ಲಿ ಪಾಲ್ಕುರಿಕೆ ಸೋಮನಾಥಕೃತ ಕನ್ನಡ ಗಣಸಹಸ್ರ ನಾಮಾವಳಿ ಮತ್ತು ಪಂಡಿತಾರಾಧ್ಯ ವಿರಚಿತ ಸಂಸ್ಕೃತ ಗಣಸಹಸ್ರ ನಾಮಾವಳಿ ಎರಡರಲ್ಲೂ ಅಮರಗಣಗಳ ಸಂಖ್ಯೆ ೨೩೬. ಆದರೆ ಸಂಸ್ಕೃತ ಗಣಸಹಸ್ರನಾಮಾವಳಿಯಲ್ಲಿ ಮಹಾದೇವಿ

ಕಮಲವ್ವಾ ಈ ಎರಡೂ ಓರ್ವರ ಹೆಸರೆಂದು ಹಿಡಿದರೆ ಈ ಸಂಖ್ಯೆ ಕಡಿಮೆಯಾಗುತ್ತದೆ. ಎರಡೂ ಈರ್ವರ ಹೆಸರುಗಳೆಂದು ಹಿಡಿದರೆ ಸಂಖ್ಯೆ ಸರಿ ಹೋಗುತ್ತದೆ. ಆದುದರಿಂದ ಕಮಲವ್ವನಿಂದ ಮಹಾದೇವಿ ಬೇರೆಯಾಗಿದ್ದು ಹರಿಹರನು, "ತಾತಂ, ಪ್ರೀತಿ ಮಿಗೆ ಪಾರ್ವತಿಯ ಹೆಸರಿಟ್ಟು ಮಹಾದೇವಿ ಎಂದು ಕರೆದು ಮೂರು ಸೂಳ್ ಕಿವಿಯೊಳ್ ಕರೆದುಂ" ಎಂದು ಮಹಾದೇವಿಯಕ್ಕನ ರಗಳೆಯ ಸ್ಥಲ ೨ರಲ್ಲಿ ಹೇಳಿದುದು ಸ್ಥಿರಪಡುತ್ತದೆ.

ಬಾಲಲೀಲೆಯ ಬಣ್ಣನೆಗೆ ಬರವೆಲ್ಲಿ ಕನ್ನಡ ಕಾವ್ಯಗಳಲ್ಲಿ? ಆದರೂ ಹರಿಹರನು ಮಾಡಿರುವ ಮಹಾದೇವಿಯ ಬಾಲಲೀಲೆಯ ಬಿತ್ತರಿಕೆ ಮನೋಜ್ಞವಾದುದು. ಕೆಲವು ಸಾಲುಗಳನ್ನಾದರೂ ಸವಿಯದೆ ಮುಂದುವರಿಯುವುದು ಸೂಕ್ತವೆನಿಸದು: "ತಾಯ ಮಗ್ಗುಲ ತಂಪಿನೊಳಂ ಮೊಲೆವಾಲಿನಿಂಪಿನೊಳಂ ತೊಟ್ಟಿಲ ತೂಕದೊಳಂ ರಾಗಿಸುವರ ಜೋಗುಳದೊಳಂ ಸಾಗಿಸುವರ ಸೋಗಿಲೊಳು ಎತ್ತಿಕೊಂಬರರ್ತಿಯೊಳು ಮುಟ್ಟುವರ ಮೋಹದೊಳಂ ಸೋಂಕುವರ ಸುಖದೊಳಂ ತಕ್ಕೈಸುವರಪ್ಪಿನೊಳಂ....ಉತ್ಪಲದೊಳು ಸಿಲ್ಕಿದ ಪೆಣ್ಮುಂಬಿ ಜಿನುಂಗುವಂತೊಮ್ಮೊಮ್ಮೆಯಳುತ್ತಂ ಕಮಲಕುಟ್ಮಳವಲರ್ವಂತೆ ನಗುತ್ತಂ ಕುಮುದಂ ಮುಗಿವಂತೆ ಕಣ್ಮುಚ್ಚುತಂ ಶಿವಭಕ್ತಿಯ ಮುಚ್ಚಳಂದೆಱೆವಂತೆ ಕಣ್ದೆಱೆವುತ್ತಂ ಮಂದಾನಿಲನ ಸೋಂಕಿಗೆಳೆವಳ್ಳಿಯಲುಗುವಂತೆ ತೋಳಾಡಿಸುತ್ತಂ ಜೀವರತ್ನವೇಳ್ವಂತೆ ಅಂಬಳಿಕ್ಕುತಂ ನಿಷ್ಠೆ ನಿಮಿರ್ವಂತೆ ನಿಂದಿರುತ್ತಂ ಸುಖ ಸುಳಿವಂತೆ ನಡೆಗಲಿವುತ್ತಂ ವೀಣೆ ದನಿಗೊಡುವಂತೆ ನುಡಿಗಲಿವುತ್ತಂ....ಶಶಿಕಳೆಯಂತೆ ದಿನದಿನಕ್ಕೆ ಕಳೆಯೇಱೆ ನಳನಳಿಸಿ ಬೆಳೆಯುತ್ತಾಳೆ.

ಈ ಬಾಲಲೀಲೆಯ ಬಣ್ಣನೆಯೇನೋ ಸರಿ. ಆದರೆ ಮುಂದೆ ಬಾಲ್ಯದಿಂದ ಯೌವನೋದಯದವರೆಗಿನ ಬೆಳವಣಿಗೆಯನ್ನು "ಈ ತೆಱದೊಳೊಂದೆರಡು ನಾಲ್ಕೈದು ಪತ್ತು ವತ್ಸರಂ ನೆಱೆದ ನೇಮದ ಕಾಮಿನಿಗೆ ಭಸಿತದ ಭಾಮಿನಿಗೆ ರುದ್ರಾಕ್ಷಿಯ ರುದ್ರ ಕನ್ನಿಕೆಗೆ ತನುವಿನ ಬಾಲ್ಯಂ ಸಡಿಲ್ದು ಯೌವನಂ ಮೆಲ್ಲನಾಲಿಂಗಿಸುವಲ್ಲಿ" ಎಂದು ಮುಗಿಸಿ ಬಿಡುತ್ತಾನೆ! ಪುಣ್ಯಕ್ಕೆ ಆ ಪುರದ ಸರ್ವಗುಣಸಂಪನ್ನರಪ್ಪ ಶೈವಾಗಮಾಚಾರ್ಯರಿಂ ಗುರುಕಾರುಣ್ಯಮಂ ಮಾಡಿಸಿದುದನ್ನೂ, ಅಕ್ಕ ಸಾಹಿತ್ಯನಿಧಿಯೂ ಸಕಳಕಳಾಕೋವಿದೆಯೀ ಆದಳೆಂಬುದನ್ನೂ ಉಲ್ಲೇಖಿಸುತ್ತಾನೆ. ಆ ಶೈವಾಗಮಾಚಾರ್ಯರ ಹೆಸರೇನು? ಹರಿಹರ ಹೇಳಿಲ್ಲ. ಅಂತಸ್ಥ ಆಧಾರಗಳಿಂದ ಗುರುಲಿಂಗದೇವರೆಂಬುದು ಅಕ್ಕನ ಗುರುವಿನ ಹೆಸರಿರಬೇಕೆಂದು ಲಿಂ. ಶಿವಸುತರೂ ಇನ್ನೂ ಕೆಲವರೂ ಊಹಿಸಿದ್ದಾರೆ. ಇದೇನೇ ಇರಲಿ, ಓರ್ವ ಗುರುಗಳ ಕರುಣದಿಂದ ಅಕ್ಕನು ಲಿಂಗಪ್ರಾಣಿ, ಸದಾಸನ್ನಿಹಿತ ಚರಿತೆ, ಭಕ್ತಿಭರಿತೆ, ಶಿವಜ್ಞಾನಸಂಪನ್ನೆಯಾದುದು ನಿಸ್ಸಂದೇಹ. ಅಕ್ಕನ ಅನನುಕರಣೀಯ ಕನ್ನಡ ರೂಪಗೊಂಡುದು ಉಡುತಡಿಯಲ್ಲಿಯೆ? ಕಲ್ಯಾಣದಲ್ಲಿಯೆ? ಆಕೆ ಕನ್ನಡ ನುಡಿಯನ್ನು ಕರತಲಾಮಲಕ ಮಾಡಿಕೊಂಡುದು ಉಡುತಡಿಯಲ್ಲಿಯೇ ಇರಬೇಕು.

ಬಾಲ್ಯ ಯೌವನಗಳ ನಡುವಣ ದಿನಗಳಲ್ಲಿ ವಿದ್ಯಾಭ್ಯಾಸವನ್ನಲ್ಲದೆ ಇನ್ನೇನನ್ನು ಸಾಧಿಸತ್ತಲಿದ್ದಳು ಅಕ್ಕ ಮಹಾದೇವಿ? ಊಹೆಯ ಊರುಗೋಲನ್ನು ಹಿಡಿದು ಅಕ್ಕನ ವಚನೋದ್ಯಾನದಲ್ಲಿ ವಿಹರಿಸಿದಾಗ ಅಲ್ಲೊಂದು ಸುಳಿವು ಸಿಕ್ಕುವುದು.

"ಹಿಂಡನಗಲಿ ಹಿಡಿವಡೆದ ಕುಂಜರ
ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ;
ಬಂಧನಕ್ಕೆ ಬಂದ ಗಿಳಿ
ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ;
ಕಂದಾ ನೀನಿತ್ತ ಬಾ ಎಂದು
ನೀವು ನಿಮ್ಮಂದವ ತೋಱಯ್ಯಾ, ಚೆನ್ನಮಲ್ಲಿಕಾರ್ಜುನಾ!"

ಇದೊಂದು ಹೆರವತನ (Alienation)ದ ಹದಯಂಗಮ ಚಿತ್ರ. ಇದರ ಅನುಭವ ಉಡುತಡಿಯಲ್ಲಿಯೇ ಆಗಿರಬೇಕು, ಅಕ್ಕನಿಗೆ. ಆದರೆ ಎಷ್ಟನೆಯ ವರ್ಷದಲ್ಲಿ ಆಗಿರಬಹುದೆಂಬುದು ಕುತೂಹಲವನ್ನು ಕೆರಳಿಸುವ ಪ್ರಶ್ನೆಯೇ ಸರಿ. ಪ್ರಜ್ಞಾಪ್ರಭಾತದಲ್ಲಿಯೇ ಆಗಿರಬೇಕು. ಇಲ್ಲದಿರೆ ಈ ವಚನಕ್ಕೆ ಬೇರಾವ ಆಧಾರ ತೋರಬಹುದು?

"ಅಕ್ಕ ಕೇಳೌ, ಅಕ್ಕಯ್ಯ ನಾನೊಂದು ಕನಸ ಕಂಡೆ
ಅಕ್ಕಿ ಅಡಕಿ ಓಲೆ ತೆಂಗಿನಕಾಯ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವಾ!
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈ ಹಿಡಿದೆನು;
ಚೆನ್ನಮಲ್ಲಿಕಾರ್ಜುನನ ಕಂಡು ಕಣ್ದೆಱೆದೆನು !"

ಕನ್ಯೆಯ ಜೀವನದಲ್ಲಿ ತನ್ನ ಭಾವೀಪತಿ ಎಂಥವನಿರಬೇಕೆಂದು ಮನಸಿನಲ್ಲಿ ಮೆಲುಕು ಹಾಕುವ, ಕನಸು ಕಾಣುವ ಕಾಲವೊಂದು ಬರುತ್ತದೆ. ಆ ಕಾಲಕ್ಕಾಗಲೇ ಅಕ್ಕನು–

"ಎನ್ನ ಮನವ ಮಾಱುಗೊಂಡನವ್ವಾ
ಎನ್ನ ತನುವ ಸೂಱೆಗೊಂಡನವ್ವಾ
ಎನ್ನ ಸುಖವನಪ್ಪುಗೊಂಡನವ್ವಾ
ಎನ್ನ ಇರವನಿಂಬುಗೊಂಡನವ್ವಾ
ಚೆನ್ನಮಲ್ಲಿಕಾರ್ಜುನ ಒಲುಮೆಯವಳಾನು"

ಎಂದು ಸಾರುವ ಸ್ಥಿತಿಗೆ ಮುಟ್ಟಿರಬೇಕು. ಚೆನ್ನಮಲ್ಲಿಕಾರ್ಜುನನ ಸಗುಣೋಪಸನೆಗೆ ಸೇರಬಹುದಾದ ವಚನಗಳೆಲ್ಲ ಅಕ್ಕನು ಅನುಭವ ಮಂಟಪದಲ್ಲಿ ಪಾದಾರ್ಪಣ ಮಾಡುವ ಮುನ್ನಿನವು; ನಿರ್ಗುಣೋಪಾಸನೆಗೆ ಸಂಬಂಧಿಸಿದ ವಚನಗಳು ಆಮೇಲಿನವು ಇರಬೇಕು ಎಂದು ತೀರ್ಮಾನಿಸಲು ತೊಡಕೊಂದಿದೆ:

"ಹೊಳೆವ ಕೆಂಜಡೆಗಳ ಮಣಿಮುಕುಟದ
ಒಪ್ಪುವ ಸುಲಿಪಲ್ಗಳ ನಗೆಮೊಗದ
ಕಂಗಳ ಕಾಂತಿಯ
ಈರೇಳು ಭುವನದ ಬೆಳಗುವ ದಿವ್ಯಸ್ವರೂಪನ ಕಂಡೆ ನಾನು!
ಕಂಡೆನ್ನ ಕಂಗಳ ಬಱ ಹಿಂಗಿತ್ತೆನಗೆ
ಗಂಡ ಗಂಡರೆಲ್ಲರ ಹೆಂಡಿರಾಗಿ ಆಳುವ
ಗರುವನ ಕಂಡೆ ನಾನು !
ಜಗದಾದಿಶಕ್ತಿಯೊಳು ಬೆರಸಿ ಮಾತನಾಡುವ
ಪರಮಗುರು ಚೆನ್ನಮಲ್ಲಿಕಾರ್ಜುನನ
ನಿಲವ ಕಂಡು ಬದುಕಿದೆನು!"

ಈ ಐಕ್ಯಸ್ಥಲದ ವಚನವನ್ನೋದಿದಾಗ ಅಕ್ಕನು ಉದ್ದಕ್ಕೂ ಸಾಕಾರದಿಂದ ನಿರಾಕಾರಕ್ಕೆ, ನಿರಾಕಾರದಿಂದ ಸಾಕಾರಕ್ಕೆ ಲೀಲಾಜಾಲವಾಗಿ ವಿಹರಿಸುತ್ತಿದ್ದಳೆಂಬುದು ವೇದ್ಯವಾಗುತ್ತದೆ. ತ್ರಿವಿಧಲಿಂಗಪೂಜೆಯ ಪರಮರಹಸ್ಯವೇ ಇದಾಗಿದೆ. 'ಎನ್ನ ಕರ ತುಂಬ, ಎನ್ನ ಮನ ತುಂಬ, ಎನ್ನ ಭಾವ ತುಂಬ, ಮತ್ತಿಲ್ಲದೆ ನಿನ್ನ ಕೂಟದ ಸವಿಗಲೆಯನೆಂತು ಕಾಣುವೆನಯ್ಯಾ?' ಎಂದು ಅಕ್ಕನೆ ಹಾಡಿಲ್ಲವೆ?

ಮಾತಾಪಿತರ, ಸಖಿಯರ ಮಧ್ಯದಲ್ಲಿಯೂ ಅಕ್ಕನಿಗೆ ದೊರೆತುದು ಏಕಾಕಿತನದ ಅನುಭವ! ಆತ್ಮಸಂಗಾತಕ್ಕೆ ಮಲ್ಲಿಕಾರ್ಜುನನಿದ್ದರೂ ಬಾಹ್ಯಜೀವನದಲ್ಲಿ ಸಮಾನ ಧರ್ಮಿಗಳ ಅಭಾವ ಸಜವಾಗಿಯೇ ಸಂಕ್ಲೇಶಕರವಾಗಿ ಪರಿಣಮಿಸಿರಬೇಕು, ಅಕ್ಕನಿಗೆ. ಲೌಕಿಕ ಮೌಲ್ಯಗಳ ಪರಿಸರದಲ್ಲಿದ್ದ ಅಕ್ಕನಿಗೆ ತನ್ನ ಅಲೌಕಿಕ ಮೌಲ್ಯವನ್ನು–ಸರ್ವಾತ್ಮನಾದ ಶರ್ವನಿಗೆ ಸ್ವಾತ್ಮಸಮರ್ಪಣೆಯ ಮೌಲ್ಯವನ್ನು–ಸಮರ್ಥಿಸಿಕೊಳ್ಳಬೇಕಾಗಿ ಬಂದಿತು. ಅನುರೂಪ ವರನ ಕರವಿಡಿದು ಸಾಂಸಾರಿಕ ಜೀವನವನ್ನು ಸಾಗಿಸುವುದೇ ಸ್ತ್ರೀಯಾಗಿ ಹುಟ್ಟಿದುದರ ಗುರುಗಮ್ಯವೆಂದು ವಾದಿಸಿದ ಓರಗೆಯವರಿಗೆ ಉತ್ತರವೆನೋ ಈ ವಚನ:

"ಗಿರಿಯಲ್ಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದೆ ನವಿಲು?
ಕೊಳಕ್ಕಲ್ಲದೆ ಕಿಱುವಳ್ಳಕ್ಕೆಳಸುವುದೆ ಹಂಸೆ?

ಮಾಮರ ತಳಿತಲ್ಲದೆ ಸರಗೈವುದೆ ಕೋಗಿಲೆ?
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ?
ಎನ್ನ ದೇವ ಚೆನ್ನಮಲ್ಲಿಕಾರ್ಜುನಂಗಲ್ಲದೆ
ಅನ್ಯಕ್ಕೆಳಸುವುದೆ ಎನ್ನ ಮನ?
ಪೇಳಿರೆ, ಕೆಳದಿಯರಿರಾ?"

ಇದು ಮಹಾದೇವಿಯ ಮಹತೊ ಮಹೀಯಾನ್ ಬಯಕೆ, ಹಾರೈಕೆ. ಹಾರೈಸಿದಳು, ಹಾರೈಸಿದಳು, ಹಾರೈಸಿದಳು, ಇದನ್ನೇ ಮಹದಾದರ್ಶದ ಮಹಾದೇವಿ. ಬೇರೇನನ್ನಾದರೂ ಬಯಸಿದರೆ ಹೇಗೆ ಅತ್ಯುನ್ನತ ಆದರ್ಶ ಈಡೇರಿತು?

"ಕಂಗಳಲ್ಲಿ ಕಾಂಬೆನೆಂದು ಕತ್ತಲೆಯ ಹೊಕ್ಕೊಡೆಂತಹುದಯ್ಯ?
ಬೆಟ್ಟದ ತುದಿಯ ಮೆಟ್ಟಲೆಂದು
ಹಳ್ಳಕೊಳ್ಳಂಗಳಲ್ಲಿ ಇಳಿದೊಡೆಂತಹುದಯ್ಯಾ?
ನೀನಿಕ್ಕಿದ ಸಯಿದಾನವನೊಲ್ಲದೆ
ಬೇರೆ ಬಯಸಿದೊಡೆಂತಹುದಯ್ಯ!
ಚೆನ್ನಮಲ್ಲಿಕಾರ್ಜುನನ ಘನವನರಿಯಲೆಂದು
ಕಿರುಕುಳಕ್ಕೆ ಸಂದೊಡೆಂತಹುದಯ್ಯಾ?"

ಕಿರುಕುಳಕ್ಕೆ ಸಲ್ಲಲೆಂದು ಹುಟ್ಟಿರಲೇ ಇಲ್ಲ ಮಹಾದೇವಿ. ಎಲ್ಲೆಲ್ಲಿಯೂ ನಲ್ಲರನಲ್ಲ ಚೆನ್ನಮಲ್ಲಿಕಾರ್ಜುನನ್ನೇ ಅರಸಿ, ಹಗಲಿರುಳು ಅವನ ವಿಶ್ವಪೂಜೆಯಲ್ಲಿಯೇ ತಲ್ಲೀನಳಾಗಿದ್ದಳಾಕೆ.

"ದೃಶ್ಯವಾದ ರವಿಯ ಬೆಳಗು, ಅಕಾಶದ ವಿಸ್ತೀರ್ಣ
ವಾಯುವಿನ ಚಲನೆ, ತರುಗುಲ್ಮಲತಾದಿಗಳಲ್ಲಿಯ ತಳಿರು ಪುಷ್ಪ
ಷಡುವರ್ಣಂಗಳೆಲ್ಲ ಹಗಲಿನ ಪೂಜೆ;
ಚಂದ್ರಪ್ರಕಾಶ, ನಕ್ಷತ್ರ, ಅಗ್ನಿ,
ವಿದ್ಯುದ್ ಆದಿಗಳು ದೀಪ್ತಿಮಯವೆನಿಸಿಪ್ಪವುಗಳೆಲ್ಲ
ಇರುಳಿನ ಪೂಜೆ!
ಹಗಲಿರುವು ನಿನ್ನ ಪೂಜೆಯಲ್ಲಿ ಎನ್ನ ಮರೆದಿಪ್ಪೆನಯ್ಯ
ಚೆನ್ನಮಲ್ಲಿಕಾರ್ಜುನ"

ಚೆಲುವಿನ ಬೀಡಾದ ಮಲೆನಾಡಿನ ಚೇತೋಹಾರಿ ನಿಸರ್ಗದಲ್ಲಿ ಕಣ್ದೆರೆದ ಮಹಾದೇವಿಯ ಮಹಾಚೇತನ ನೆಲಮುಗಿಲುಗಳ ಅಗಲ ಎತ್ತರಗಳಿಗೆ ವಿಸ್ತರಿಸಿ,

ಅವುಗಳೊಡನೆ ಅರ್ಥಪೂರ್ಣ ಮೈತ್ರಿ ಪಡೆದು, ಅಂತರಂಗದ ಅನಂತ ವಿಕಸನಕ್ಕಾಗಿ ಹಾತೊರೆಯುತ್ತಿದ್ದುದಕ್ಕೆ ನಿದರ್ಶನ ಈ ವಚನ. ಇದರಲ್ಲಿ ಅಭಿವ್ಯಕ್ತವಾಗಿರುವ ನಿಸರ್ಗ ಪ್ರಜ್ಞೆ, ಭೂವ್ಯೋಮವ್ಯಾಪಿಯಾದ ಬೃಹದ್ದರ್ಶನ, ವಿಶ್ವಪೂಜೆಯ ಪರಿಕಲ್ಪನೆಗಳು ಮುಂದೆ ಪರಿಪೂರ್ಣವಾಗಿ ಪ್ರಕಾಶಿಸಿವೆ. ಶ್ರೀ ಶೈಲಮಾರ್ಗದಲ್ಲಿ ಉಸಿರಿರಬಹುದಾದ ಈ ವಚನದಲ್ಲಿ.

"ವನವೆಲ್ಲ ನೀವೆ
ವನದೊಳಗಣ ದೇವತರುವೆಲ್ಲ ನೀವೆ
ತರುವಿನೊಳಗಾಡುವ ಖಗಮೃಗವೆಲ್ಲ ನೀವೆ
ಚೆನ್ನಮಲ್ಲಿಕಾರ್ಜುನ, ಸರ್ವಭರಿತನಾಗಿ
ಎನಗೆ ಉಖದೋರ!"

ಹೋಲಿಕೆಗಳನ್ನು, ಸಾದೃಶ್ಯ–ಸಾಮತಿಗಳನ್ನು ಒದಗಿಸಲು ಮಾತ್ರ ಉಳಿದ ವಚನಕಾರರಲ್ಲಿ ಕಂಡೂ ಕಾಣದಂತೆ ಕಾಣಿಸಿಕೊಳ್ಳುವ ಪ್ರಕೃತಿ ಅಕ್ಕನ ವಚನಗಳಲ್ಲಿ ಯಥೇಷ್ಟವಾಗಿ ಮೈದೋರಿರುವುದು ಅಕ್ಕನು ಹುಟ್ಟಿ ಬೆಳೆದ ಸುಂದರ ಪ್ರದೇಶಕ್ಕೆ ಸಂದ ಮನ್ನಣೆಯಾಗಿರುವಂತೆ, ಅಕ್ಕನ ಭೂಮಾನುಭೂತಿಗೂ ಸಾಕ್ಷಿಯಾಗಿದೆ. ಇಂಥ ಚೇತನ ಕಿರುಕುಳಕ್ಕೆ ಸಲ್ಲಬಹುದೆಂದು ಭಾವಿಸಿದವರೇ ಭ್ರಾಂತರೆಂಬುದು ಬಹು ಬೇಗನೆ ಸಿದ್ಧವಾಯಿತು–ಅಕ್ಕನ ಮದುವೆಯ ಪ್ರಸಂಗದಲ್ಲಿ.

ಅಕ್ಕನೇನೋ ಅರ್ಪಿಸಿಕೊಂಡು ಬಿಟ್ಟಿದ್ದಳು, ತನ್ನ ಆದರ್ಶಪತಿಗೆ ತನ್ನನ್ನು. ಆದರೆ ಅದನ್ನು ಅಷ್ಟು ಸುಲಭವಾಗಿ ಒಪ್ಪುವುದೆ ರಾಗದ್ವೇಷ ಮಿಶ್ರಿತ ಸಮಾಜ? ಇತ್ತ ಒಂದು ಹೆಣ್ಣು ಹುಟ್ಟುತ್ತಲೇ ಅದಕ್ಕಾಗಿ ಒಂದು ಗಂಡು ಎಲ್ಲಿಯೋ ಇದಾಗಲೇ ಹುಟ್ಟಿರಲೇಬೇಕೆಂದು ನಂಬಿದ್ದ ಸಮಾಜ, ದೇವನೊಡನೆ ನನ್ನ ಮದುವೆಯಾಗಿ ಹೋಗಿದೆಯೆಂದು ಮಹಾದೇವಿ ಹೇಳಿದಾಕ್ಷಣ ಅದನ್ನು ಅಂಗೀಕರಿಸಿ ಬಿಟ್ಟೀತೆ? ಕಾಣದ ದೇವನೊಡನೆ ಕಾಣುವ ಕನ್ಯೆಯ ಮದುವೆ ಎಲ್ಲಾದರೂ ಉಂಟೆ?

ಸಾಲದುದಕ್ಕೆ ಸೌಂದರ್ಯನಿಧಿಯಂತಿದ್ದಳು ಅಕ್ಕಮಹಾದೇವಿ. ಅದೆಂಥ ರೂಪಾತಿಶಯ ಅಕ್ಕನದು ಎಂಬುದನ್ನರಿಯಲು ನಾವು ಮತ್ತೆ ಹರಿಹರನಿಗೆ ಮೊರೆ ಹೋಗಬೇಕು: 'ಅಕ್ಕನ ಸಾಹಿತ್ಯಭೂಷಣರೆನಿಪ ತಾಯ್ತಂದೆಗಳಿಗೆ' ಈ ಕನ್ನೆಯ ವಯಸ್ಸಂಧಿಯತ್ಯಾಶ್ಚರ್ಯವು, ಅತಿ ನವೀನವು... ಇದಾವ ದೇವರ ಚಿತ್ತಮಂ ಸೂರೆ ಗೊಳಿಸಲಿರ್ದಪುದೆಂದು ನೋಡಿ ನೋಡಿ ನೋಡಲಮ್ಮದೆ... ಗಗನಾಂಗನೆ ಶರತ್ಕಾಲದ ಮುಗಿಲ ಮಱೆಯೊಳ್ ಚಂದ್ರಕಳೆಯಂ ಸಲಹುವಂತೆ ಧವಳಾರದಿಂದ ಅಗಲಲೀಯದೆ ಸಲಹುತ್ತಿದ್ದರಂತೆ. ಆದರೂ ಅಗ್ನಿಪರೀಕ್ಷೆಯ ಕಾಲ ಬಂದೇ ಬಿಟ್ಟಿತು.

“ಇಂತು, ಉತ್ತರೋತ್ತರ ಲಾವಣ್ಯರಸಭರಿತ ಸೌಕುಮಾರಾವಯವಂಗಳಿಂ ವಿಳಾಸಂದಳೆದು ತುಳುಂಕದ ಸುಮ್ಮಾನದ ಸುಖದಂತೆ, ಮೀಸಲಳಿಯದ ಮನೋರಥದಂತೆ, ಬಾಸಣಿಸಿದಮೃತದಂತೆ, ಮುದ್ರಿಸಿದ ಪುಣ್ಯದಂತೆ, ಮೂಡಿದ ಭಕ್ತಿಯಂತೆ, ಕೂಡಿದ ಪೂಜೆಯಂತೆ.... ವಸಂತನ ವಶೀಕರಣದಂತೆ ವನಲಕ್ಷ್ಮಿಯ ಸೌಭಾಗ್ಯದಂತೆ, ಮಲಯಾನಿಲನ ಮದದಂತೆ ಇದ್ದಮಹಾದೇವಿ ವಸಂತಮಾಸದಲ್ಲಿ ಒಂದು ದಿವಸ ತನ್ನ ನಿಳಯದ ವೇದಿಕಾಸ್ತಂಭಗಳ ನಡುವೆ ಇಕ್ಕಿರ್ದ ಹೊನ್ನ ಹಂಗುಳಿಗೆಯ ಮೇಲೆ ಕುಳ್ಳಿರ್ದು ಸಖಿಯರಿಂದ ಓಲೈಸಿಕೊಳ್ಳುತ್ತ ಇದ್ದಳು.

ಕರ್ಮಧರ್ಮ ಸಂಯೋಗದಿಂದ ಅದೇ ಸಮಯಕ್ಕೆ ವೈಹಾಳಿಯಿಂದ ಹಿಂದಿರುಗಿದ ಊರ ದೊರೆ ಕೌಶಿಕ ಆ ಮಾರ್ಗವಾಗಿ ಬಂದು, ಮಹಾದೇವಿಯಂ ಕಾಣತಂ ಸೋಲದನಾವಂ, ನಿಲ್ವನಾವಂ, ಮದವಳಿಯದವನಾವಂ, ವಿರಾಜಿಪ್ಪನಾವಂ? ಎಂಬ ನೆಗಳ್ತೆಯನ್ನು ಪಡೆದಿದ್ದ ಮಹಾದೇವಿಯನ್ನು ನೋಡಿದ. ನೋಡಿ ಮಿಗೆ ನೋಡಿ ನಡೆ ನೋಡಿ, ನೆಟ್ಟೆ ನೋಡುತಿರೆ–ನೋಡಿದೊಡೆ ನೋಡ ನೋಡಲ್ ಚಿತ್ರವಾಗುತಿರೆ ನೋಡಿದ. ತನ್ನ ಮೇಲಣ ನೋಟವೆಂದಱಿದು ಮಹಾದೇವಿ... ಅರಸ ಕೌಶಿಕನ ಮನವಂಕೊಂಡು ಪೋಪಂತೆ... ನಿಳೀಯದೊಳಗಂ ಪೊಕ್ಕಳು.

ಮಹಾದೇವಿ ಕೌಶಿಕರ ಮದುವೆ ಆಯಿತೆ, ಇಲ್ಲವೆ ಎಂಬುದು ಇದುವರೆಗೂ ಇತ್ಯರ್ಥವಾಗದೆ ಉಳಿದಿರುವ ಪ್ರಶ್ನೆಯಾಗಿದೆ, ಸಮಸ್ಯೆಯಾಗಿದೆ. ಪಾಚೀನರಲ್ಲಿ ಹರಿಹರನು ತನ್ನ ಮಹಾದೇವಿಯಕ್ಕನ ರಗಳೆ (ಸ್ಥಲ : ೪ ಚರಣ : ೮೮–೧೧೦)ಯಲ್ಲಿಯೂ, ಚೆನ್ನಬಸವಾಂಕನು ತನ್ನ ಮಹಾದೇವಿಯಕ್ಕನ ಪುರಾಣ (ಸ್ಥಲ ೨೩)ದಲ್ಲಿಯೂ, ಕೆಂಚವೀರಣ್ಣೊಡೆಯರು ತಮ್ಮ ಶೂನ್ಯಸಂಪಾದನೆ (ಮೈ, ಓ. ಲೈ. ಕೆ. ಎ. ೧೦೬ ಪು. ೧೯೨) ಯಲ್ಲಿಯೂ ಮದುವೆಯಾಗಿದ್ದಿತೆಂದು ಹೇಳಿದ್ದಾರೆ. ಮದುವೆಯಾಗಿರಲಿಲ್ಲವೆಂದು ಹೇಳಿರುವವರು ಚಾಮರಸ (ಪ್ರಭುಲಿಂಗಲೀಲೆ: ಗತಿ ೧೦) ವಿರೂಪಾಕ್ಷ ಪಂಡಿತ (ಚೆನ್ನಬಸವ ಪುರಾಣ ಸಂ.೫೭; ಪ. ೬೩) ಎಳಂದೂರ ಹರೀಶ್ವರ (ಪ್ರಭುದೇವರ ಪುರಾಣ ಸಂ, ೮; ಪ. ೬೪–೬೫), ಗುಬ್ಬಿಯ ಮಲ್ಲಣಾರ್ಯ (ಗಣಭಾಷಿತರತ್ನಮಾಲೆ) ಹಲಗೆಯ ದೇವರು (ಶೂನ್ಯಸಂಪಾದನೆ) ಗೂಳೂರ ಸಿದ್ಧವೀರಣ್ಣೊಡೆಯರು (ಶೂನ್ಯ ಸಂಪಾದನೆ) ಮೊದಲಾದವರು.

ಇದು ಸ್ಥೂಲವಾದ ವರ್ಗೀಕರಣ. ಇವರ ವಿವರಗಳಲ್ಲಿ ಅಭಿಪ್ರಾಯ ಭೇದಗಳಿಲ್ಲದಿಲ್ಲ. ಉದಾರಹಣೆಗೆ ಹರಿಹರನ ಪ್ರಕಾರ ಅರಸ ಕೌಶಿಕನು ಆಗ್ರಹ ಪಡಿಸುತ್ತಲೇ ಮಹಾದೇವಿಯ ತಂದೆ ತಾಯಿಗಳು ಕೌಶಿಕನನ್ನು ಮದುವೆಯಾಗೆಂದು ಮಗಳಿಗೆ ಹೇಳುತ್ತಾರೆ; ಆದರೆ ಚೆನ್ನಬಸವಾಂಕನ ಪ್ರಕಾರ ತಂದೆ ತಾಯಿಗಳು ಇದಕ್ಕೆ ಒಪ್ಪುವುದಿಲ್ಲ. ಹರಿಹರನು ಹೇಳಿರುವಂತೆ

ಮಹಾದೇವಿ ಮದುವೆಗೆ ಒಪ್ಪದಾಗಲು ಕೆರಳಿದ ಕೌಶಿಕ ಮಹಾದೇವಿಯ ಮಾತಾಪಿತೃಗಳಿಗೆ ಮರಣದಂಡನೆಯನ್ನು ವಿಧಿಸುತ್ತಾನೆ. ಚೆನ್ನಬಸವಾಂಕನು ಮಗಳನ್ನು ಕೊಡಲು ಒಪ್ಪದ ಮಹಾದೇವಿಯ ತಂದೆ ತಾಯಿಗಳನ್ನು ಕೌಶಿಕ ಹಿಂಸಿಸಲು ಆರಂಭಿಸಿದನೆಂದು ಹೇಳುತ್ತಾನೆ. ಹರಿಹರನು ಬರೆದಿರುವಂತೆ ಶಿವಭಕ್ತರನ್ನೂ ತಂದೆ ತಾಯಿಗಳನ್ನೂ ರಕ್ಷಿಸುವುದು ತನ್ನ ಕರ್ತವ್ಯವೆಂಬ ದೃಷ್ಟಿಯಿಂದ ಮಹಾದೇವಿ ಮೂರು ಕರಾರುಗಳೊಡನೆ ಮದುವೆಗೆ ಒಪ್ಪುತ್ತಾಳೆ; ಚೆನ್ನಬಸವಾಂಕ ಬಿತ್ತರಿಸುವಂತೆ ತಂದೆ ತಾಯಿಗಳಿಗೆ ಒದಗುತ್ತಲಿದ್ದ ಹಿಂಸೆಯನ್ನು ತಪ್ಪಿಸಲು ಅರಸನಿಂದ ಲಿಖಿತ ಅಭಿವಚನ ಪಡೆದು ಮಹಾದೇವಿ ಮದುವೆಗೆ ಸಮ್ಮತಿಸುತ್ತಾಳೆ. ಹರಿಹರನ ಪ್ರಕಾರ ಮದುವೆಯಾದ ಮೇಲೆ ಮಹಾದೇವಿ ಕೌಶಿಕರಲ್ಲಿ ವಿಷಮ ಸಂಸಾರ ನಡೆದು ಆತನು ಮೂರೂ ಕರಾರುಗಳನ್ನು ಮುರಿಯುತ್ತಲೇ ಮಹಾದೇವಿ ಆತನನ್ನು ತೊರೆಯುವಳು; ಚೆನ್ನಬಸವಾಂಕನ ಪ್ರಕಾರ ಮದುವೆಯಾದ ಮೇಲೆ ಸಕಲರಾಜ್ಯ ಸೂತ್ರಗಳು ಮಹಾದೇವಿಯ ಕೈಗೆ ಬರುವುವು; ಅಕ್ಕನು ಅರಮನೆಯಲ್ಲಿ ರತಿಸುಖಕ್ಕೆ ಆಸ್ಪದವೀಯದೆ ಇರುವಳು; ಅರಸನು ಮೂರು ತಪ್ಪುಗಳನ್ನು ಮಾಡುತ್ತಲೇ ಅವನನ್ನು ತ್ಯಜಿಸುವಳು.

ಇನ್ನು ಮದುವೆಯಾಗಲಿಲ್ಲವೆಂದು ಹೇಳಿರುವವರಲ್ಲಿರುವ ವಿವರ ವಿಭಿನ್ನತೆಗಳನ್ನು ಗಮನಿಸಬೇಕು. ಚಾಮರಸನ ಪ್ರಕಾರ ಕೌಶಿಕ ಸ್ವತಃ ಮಹಾದೇವಿಯಕ್ಕನ ಮನೆಗೆ ಬಂದು, "ನಿನ್ನ ಬಯಕೆಯನ್ನು ಸಲಿಸುವೆನು; ನಿನ್ನ ಒಪ್ಪಿಗೆಯಿಲ್ಲದೆ ಅರಸೊತ್ತಿಗೆಯ ಅಧಿಕಾರ ಬಲದಿಂದ ಬಲಾತ್ಕಾರವಾವುದನ್ನು ಮಾಡೆನು. ಇದು ಸತ್ಯ" ಎಂದು ಪ್ರಮಾಣ ಮಾಡಿ ಹೇಳುತ್ತಾನೆ. ಅದಕ್ಕೆ ಮಹಾದೇವಿ, "ನಾನು ಹೇಳಿದ ಯಾವುದೇ ಮಾತನ್ನು ಕೇಳದಾಕ್ಷಣ ನಿನ್ನನ್ನು ತೊರೆದು ಹೋಗುವವಳು" ಎಂದು ಹೇಳುತ್ತಾಳೆ. ಇದಕ್ಕೆ ಕೌಶಿಕ ಒಪ್ಪುತ್ತಾನೆ. ಆಗ ಮಹಾದೇವಿ ಹೆಗ್ಗಡತಿಯರೊಡನೆ ಅರಮನೆಗೆ ಹೋಗುತ್ತಾಳೆ. ಮದುವೆಯ ಮಾತೇ ಇಲ್ಲ. ಅಲ್ಲಿ ಏಕಾಂತದಲ್ಲಿದ್ದಾಗ ಕೌಶಿಕ ಕಾಮಾತುರನಾಗಿ ಮಹಾದೇವಿಯನ್ನು ಆಲಂಗಿಸ ಹೋಗುತ್ತಾನೆ. ಮಹಾದೇವಿ ಸರಿದು ನಿಂತು "ನೀನು ವಚನವಿತ್ತಂತೆ ಮೊದಲು ನನ್ನ ಬಯಕೆಯನ್ನು ಸಲಿಸು; ಆ ಮೇಲೆ ನನ್ನನ್ನು ಮುಟ್ಟು" ಎನ್ನುತ್ತಾಳೆ. ಕೌಶಿಕನೂ ಸರಿದು ನಿಂತು ಬಯಕೆ ಯಾವುದೆಂದು ಕೇಳುತ್ತಾನೆ. "ನೀನು ಶಿವಭಕ್ತನಾದರೆ ನಿನ್ನೊಡನೆ ಮದುವೆ; ಇಲ್ಲದಿದ್ದರೆ ಸಾಧ್ಯವಿಲ್ಲವೆನ್ನುತ್ತಾಳೆ ಮಹಾದೇವಿ. ಇದಕ್ಕೆ" ನಮಗೆ ಶಿವಭಕ್ತಿಯನು ಮಾಡುವ ಸಮಯವಳವಡದು "ಎಂದು ಕೌಶಿಕ ಕಟ್ಟುನಿಟ್ಟಾಗಿ ಹೇಳುತ್ತಾನೆ;" ಹಾಗಾದರೆ ನಮಗೆ ನಿಮ್ಮಯ ಸಂಗವಳವಡದು ಎಂದು ಮಹಾದೇವಿ ಅಷ್ಟೇ ನಿಷ್ಠುರವಾಗಿ ನುಡಿಯುತ್ತಾಳೆ; ತನ್ನ ದಾರಿ ಹಿಡಿಯುತ್ತಾಳೆ.

ಎಳಂದೂರ ಹರೀಶ್ವರನ ಪ್ರಭುದೇವರ ಪುರಾಣದಲ್ಲಿ ಹೆಚ್ಚು ಕಡಿಮೆ ಇಷ್ಟೇ ವಿವರಗಳಿವೆ. ವಿರೂಪಾಕ್ಷಪಂಡಿತನ ಚೆನ್ನಬಸವ ಪುರಾಣದಿಂದ ಕೌಶಿಕಂ ಪಿಡಿ ದೊಡೊಲ್ಲದೆ 'ಧಿಕ್ಕರಿಸಿ ಕೌಶಿಕನ' ಎಂಬ ವಿವರಗಳು ದೊರೆಯುತ್ತವೆ. ಶಿವಗಣಪ್ರಸಾದಿ ಮಹಾಧೇವಯ್ಯಗಳ,

ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆಗಳಲಿ ಮಹಾಧೇವಿ ಭವಿಯ ಸಂಗವನ್ನು ತೊರೆದು ಲಿಂಗಂಸಂಗಿಯಾದ ಅಂಶ ಮಾತ್ರ ವ್ಯಕ್ತವಾಗಿದೆ. ಅದೇ ಗೂಳೂರು ಸಿದ್ಧವೀರಣಾರ್ಯನ ಶೂನ್ಯಸಂಪಾದನೆಯಲ್ಲಿ, 'ಲಿಂಗಧಾರಣಾವಾಗಲೊಲ್ಲೆನೆಂದ ಭವಿಯಂ ಸೋಂಕದೆ, ಅಂಗಸಂಗಮಂ ತೊಱೆದು ಲಿಂಗಸಂಗದೊಳು ಅವಿರಳ ಸಂಗಿಯಾಗಿ' ಎಂದು ಉಲ್ಲೇಖಿತವಾಗಿದೆ.

ಪ್ರಾಚೀನರಂತೆ ಅರ್ವಾಚೀನ ವಿದ್ವಾಂಸರಲ್ಲಿಯೂ ಮಹಾದೇವಿಯ ಮದುವೆಯ ವಿಷಯದಲ್ಲಿ ಮತಭೇದಗಳಿವೆ. ಈ ಮತಭೇದಗಳಿಗೆ ಅಕ್ಕನ ವಚನಗಳಲ್ಲಿಯೂ ಅಂತಸ್ಥ ಆಧಾರಗಳು ಸಿಕ್ಕುತ್ತಿವೆ:

"ಎಮ್ಮೆಗೊಂದು ಚಿಂತೆ ಸಮ್ಮಗಾಱಗೊಂದು ಚಿಂತೆ;
ಧರ್ಮಿಗೊಂದು ಚಿಂತೆ ಕರ್ಮಿಗೊಂದು ಚಿಂತೆ;
ಎನಗೆ ಎನ್ನ ಚಿಂತೆ, ತನಗೆ ತನ್ನ ಕಾಮದ ಚಿಂತೆ!
ಒಲ್ಲೆ ಹೋಗು, ಸೆಱಗ ಬಿಡು ಮರುಳೆ!
ಎನಗೆ ಚೆನ್ನಮಲ್ಲಿಕಾರ್ಜುನದೇವರು
ಒಲಿಯರೊ ಒಲಿವರೊ ಎಂಬ ಚಿಂತೆ!"

"ಒಳಗಣ ಗಂಡನವ್ವಾ, ಹೊರಗಣ ಮಿಂಡನವ್ವಾ
ಎರಡನೂ ನಡೆಸಲು ಬಾರದವ್ವಾ;"

ಇಂಥ ಒಂದೆರಡು ವಚನಗಳಲ್ಲಿ ಮದುವೆಯಾಗಿದ್ದಿತೆಂದು ತರ್ಕಿಸಲು ಆಸ್ಪದ ದೊರೆಯುತ್ತಿದ್ದರೆ,

"ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆನವ್ವ;
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗಾನೊಲಿದೆನವ್ವ;
ಭವವಿಲ್ಲದ ಭಯವಿಲ್ಲದ ಚೆಲುವಂಗಾನೊಲಿದೆ;
ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವಂಗಾನೊಲಿದೆ!
ಇದು ಕಾರಣ, ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ;"
"ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ?...
ಎನ್ನ ಗಂಡ ಚೆನ್ನಮಲ್ಲಿಕಾರ್ಜುನದೇವರಲ್ಲದೆ

ಮಿಕ್ಕಿನ ಗಂಡರೆಲ್ಲ ಮುಗಿಲ ಮರೆಯ ಬೊಂಬೆಯಂತೆ"

ಇಂಥ ಹಲವಾರು ವಚನಗಳಲ್ಲಿ ತನ್ನ ತಾಯಿಗೇ ಹೇಳಿರಬಹುದಾದ ಕೆಳಗಣ ವಚನದಲ್ಲಿ ಮದುವೆಯಾಗಿರದೆಂಬ ತೀರ್ಪಿಗೆ ಬರಲು ಆಧಾರ ಸಿಕ್ಕುತ್ತದೆ.

"ಮನ ಮನ ತಾರ್ಕಣೆಯ ಕಂಡು ಅನುಭವಿಸಲು,
ನೆನಹೆ ಮನವಹುದಲ್ಲದೆ ಅದು ಹವಣಿಲ್ಲಿ ನಿಲುವುದೆ?
ಎಲೆ ಅವ್ವಾ, ನೀನು ಮರುಳಲ್ಯೆ!
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಗೊಲಿದು ಸಲೆ ಮಾರುಹೋದೆನು
ನಿನ್ನ ತಾಯಿತನವನೊಲ್ಲೆ, ಹೋಗಾ!"

ಮದುವೆಯಾಗಿದ್ದರೂ ಮಹಾದೇವಿಯ ಮೇಲ್ಮೆಗೆ ಕುಂದಿಲ್ಲ; ಮದುವೆಯಾಗದಿದ್ದರೂ ಆಕೆಯ ಗರಿಮೆಗೆ ಕೊರತೆಯಿಲ್ಲ. ಒಂದು ಗಮನಿಸಬೇಕಾದ ಅಂಶವಿದೆ:

"ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ
ಕಾಡುವುದು,
ಸ್ತ್ರೀಯ ಮುಂದೆ ಎಮಾಯೆ ಪುರುಷನೆಂಬ ಅಭಿಮಾನವಾಗಿ
ಕಾಡುವುದು;"

ಎಂದು ಸಾರಿದ್ದಾಳೆ, ಅಕ್ಕಮಹಾದೇವಿ. ಉಡುತಡಿಯಲ್ಲಿ ಹುಟ್ಟಿದ ಅಕ್ಕಮಹಾದೇವಿಯ ಮುಂದೆ ಮಾಯೆ, ಕೌಶಿಕನೆಂಬ ಪುರುಷನ ಅಭಿಮಾನವಾಗಿ ಕಾಡಿತು; ಸನಿಹದ ಬಳ್ಳಿ ಗಾವೆಯಲ್ಲಿ ಹುಟ್ಟಿದ ಅಲ್ಲಮಪ್ರಭುವಿನ ಮುಂದೆ ಮಾಯೆ ಕಾಮಲತೆ ಮಾಯಾದೇವಿ ಎಂಬ ಸ್ತ್ರೀಯ ಅಭಿಮಾನವಾಗಿ ಕಾಡಿತು. ಇಬ್ಬರೂ ಈ ಮಾಯೆಗೆ ವಶರಾಗದೆ ಮಾಯಾ ಕೋಲಾಹಲರಾದರು. ಇದು ಲೋಕದವರಿಗೆ ವಿಚಿತ್ರವೆನಿಸಿರಬಹುದು. ಇದಕ್ಕೆ ಅಕ್ಕನ ಈ ವಚನದಲ್ಲಿಯೇ ಉತ್ತರ ಸಿದ್ಧವಿದೆ:

"ಲೋಕವೆಂಬ ಮಾಯೆಗೆ ಶರಣಚಾರಿತ್ರ್ಯ ಮರುಳಾಗಿ ತೋರುವದು.
ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ!"

ಹುಟ್ಟೂರನ್ನು, ಹುಟ್ಟಿದ ಮನೆಯನ್ನು, ಹೆತ್ತ ತಾಯಿತಂದೆಗಳನ್ನು, ಕೈಸಾರಿ ಬಂದಿದ್ದ ಕೌಶಿಕನ ಸಿರಿಸಂಪದಗಳನ್ನು, ಸರ್ವವನ್ನು ತೊರೆದು ಎತ್ತ ಹೊರಟಳು ಅಕ್ಕಮಹಾದೇವಿ? ನೇರವಾಗಿ ಶ್ರೀಗಿರಿಯತ್ತ ಹೊರಟಳೆಂದು ಹೇಳುತ್ತಾನೆ, ಹರಿಹರ. ಕಲ್ಯಾಣದ, ಅನುಭವ

ಮಂಟಪದ, ಅಲ್ಲಿ ನಡೆದ ಅಲ್ಲಮ–ಅಕ್ಕರ ಸಂವಾದ ಪ್ರಸ್ತಾಪವನ್ನೇ ಮಾಡುವುದಿಲ್ಲ ಅವನು. ಬಹುಶಃ ಇನ್ನೊಂದು ರಗಳೆಯ ರಚನೆಯನ್ನು ಆರಂಭಿಸಲು ಆತುರನಾಗಿದ್ದ ಅವನು ಅಕ್ಕನನ್ನು ಉಡುತಡಿಯಿಂದ ಒಮ್ಮೆಗೇ ಶ್ರೀಗಿರಿಗೆ ಕಳಿಸಿಬಿಡುತ್ತಾನೆ. ಅತ್ತ ಅಕ್ಕಮಹಾದೇವಿ ಹೊರಟು ಹೋಗಲು ಇತ್ತ ಕೌಶಿಕ ಕಾಮನೂಳಿಗವನ್ನು ಸಹಿಸಲು ಸಮರ್ಥನಾಗದೆ ಭಕ್ತನ ಹುಸಿವೇಷವನ್ನು ಧರಿಸಿ ನಾಲ್ಕು ಜನ ತನ್ನಂಥ ಭಕ್ತರೊಡನೆ ಶ್ರೀಗಿರಿಯಲ್ಲಿ ಮಹಾದೇವಿಯನ್ನು ಕಂಡು, ಭಕ್ತನಾದೆಂಬ ಮಹಾದೇವಿ ಕರುಣಿಪುದೆನಗೆ, ಯುಕ್ತಿಯಿಲ್ಲದ ಕಿಂಕರಂಗೆ ಕರುಣಿಪುದೆನಗೆ ಎಂದು ಅಂಗಲಾಚಿ ಬೇಡಿಕೊಳ್ಳುತ್ತಾನೆ. ಅದಕ್ಕೆ ಅಕ್ಕಮಹಾದೇವಿ, "ಎಲೆಲೆ ಕೌಶಿಕ ಹೋಗು, ನೀನೇಕೆ ನಾನೇಕೆ... ತಮವೆತ್ತ ಬೆಳಗೆತ್ತ, ಶಿಖಿಯೆತ್ತ ತಂಪೆತ್ತ?" ಎಂದು ನುಡಿದು ಚೆನ್ನಮಲ್ಲಿಕಾರ್ಜುನ ಧ್ಯಾನದಲ್ಲಿ ಲೀನಳಾಗಿಬಿಡುತ್ತಾಳೆ.

ಇನ್ನುಳಿದವರೆಲ್ಲ ಅಕ್ಕನು ಕಲ್ಯಾಣಕ್ಕೆ ಹೋದುದನ್ನು ಉಲ್ಲೇಖಿಸಿದ್ದಾರೆ. ಹರಿಹರ ಚಾಮರಸಾದಿಗಳಲ್ಲಿ ಸಮಾನಾಂಶವೆಂದರೆ ಅಕ್ಕನು ದಿಗಂಬರಾವಸ್ಥೆಯಲ್ಲಿ ಉಡುತಡಿಯಿಂದ ಹೊರಬಿದ್ದುದು. ಪುರುಷರ ದಿಗಂಬರತ್ವ ಈ ದೇಶಕ್ಕೆ ಹೊಸದೇನಲ್ಲವಾದರೂ ಓರ್ವ ಮಹಿಳೆಯು, ಅದೂ ಯುವಾವಸ್ಥೆಯಲ್ಲಿದ್ದ ಮಹಿಳೆಯು ದಿಗಂಬರತ್ವ ಅಭೂತಪೂರ್ವವಾದುದು; ಇಂದಿಗೂ ಶಿಷ್ಟಾಚಾರವಿದೂರವಾದುದೆಂದು ಎನಿಸುವಂಥದು. ಸಂಪ್ರದಾಯ ಶರಣರಲ್ಲಿ ಪ್ರತಿಭಟನೆಯನ್ನು ಪುಟಿಸುವಂಥದು. ಅಕ್ಕನ ದಿಗಂಬರತ್ವಕ್ಕೆ ಅವಳ ವಚನಗಳಲ್ಲಿ, ಯೋಗಾಂಗತ್ರಿವಿಧಿಯಲ್ಲಿ ಅಸಂದಿಗ್ಧವಾದ ಆಧಾರಗಳು ಸಿಕ್ಕುತ್ತಿವೆಯಾಇಗ ಅದು ಕವಿಕಲ್ಪನೆಯೆನ್ನಲೂ ಬರುವಂತಿಲ್ಲ. ದಿಗಂಭರವೇ ದಿವ್ಯಾಂಬರವೆನಗೆ ಎಂದು ನಿರ್ಭಯವಾಗಿ, ನಿಸ್ಸಂಕೋಚವಾಗಿ ಸಾರಿದ ಅಕ್ಕನ ಕ್ರಾಂತಿಕಾರೀ ಮನೋಧರ್ಮಕ್ಕೆ ಮೂಲಾಧಾರವಾವುದು? ಇಲ್ಲಿ ಈ ವಚನ ಗಮನೀಯ:

"ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ,
ಗಂಡು ಗಂಡಾದಡೆ ಹೆಣ್ಣಿನ ಸೂತಕ.
ಮನದ ಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ?
ಅಯ್ಯಾ, ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ!
ಎನ್ನ ದೇವ ಚೆನ್ನಮಲ್ಲಿಕಾರ್ಜುನನೆಂಬ ಗರುವಂಗೆ
ಜಗವೆಲ್ಲ ಹೆಣ್ಣು ನೋಡಾ, ಅಯ್ಯಾ!"

ಆದಮ್ ಈವ್‌ರಿಂದ ಇಂದಿನವರೆಗೆ ನಾವೆಲ್ಲ ಮೊದಲಿಲ್ಲದ ಸೂತಕಕ್ಕೆ ಮರುಳಾದವರೇ! ಸಭ್ಯತೆ ತನ್ನ ಮೂಲಕ್ಕೇ ಅಸಭ್ಯತೆಯನ್ನು ಆರೋಪಿಸುವುದು ಅರಿದೇನಲ್ಲ. ಇದಂತಿರಲಿ, ಶರಣಸತಿ ಲಿಂಗಪತಿ ತತ್ತ್ವವನ್ನು ಅಂಗೀಕರಿಸಿದವರಲ್ಲಾದರೂ ಈ ಗಂಡು

ಹೆಣ್ಣಿನ ಮೊದಲಿಲ್ಲದ ಸೂತಕ ಇರಬಾರದಷ್ಟೇ? ನೆನಪಿರಲಿ; ಎನ್ನದೇವ ಚೆನ್ನಮಲ್ಲಿಕಾರ್ಜುನನೆಂಬ ದೇವಂಗೆ ಜಗವೆಲ್ಲ ಹೆಣ್ಣು ನೋಡಾ ಅಯ್ಯಾ! ಮೇಲಾಗಿ

"ಮರೆಯ ನೂಲು ಸರಿಯೆ
ನಾಚುವುದು ನೋಡಾ ಗಂಡು ಹೆಣ್ಣೆಂಬ ಜಾತಿ!
ಪ್ರಾಣದೊಡೆಯ ನೀ ಜಗದಲ್ಲಿ
ತೆರಹಿಲ್ಲದಿಪ್ಪೊಡೆ ನಾಚಲೆಡೆಯುಂಟೆ, ಹೇಳಾ!
ಚೆನ್ನಮಲ್ಲಿಕಾರ್ಜುನ ಜಗವೆಲ್ಲ ಕಣ್ಣಾಗಿ ನೋಡುತ್ತಿರೆ
ಮುಚ್ಚಿ ಮರೆಯಿಸುವೆನೆಂತು ಹೇಳಾ, ಅಯ್ಯಾ?"

ಇದೂ ಅಲ್ಲದೆ,

"ಕಂಗಳ ಕಳೆದು ಕರುಳ ಕಿತ್ತು ಕಾಮವ ಮೂಗಕೊಯ್ದು
ಭಂಗದ ಬಟ್ಟೆಯ ಭವಗೆಲಿದವಳಿಗಂಗವೆಲ್ಲಿಯದು ಹೇಳಾ!"
ಕೆಂಡದ ಶವದಂತೆ, ಸೂತ್ರ ತಪ್ಪಿದ ಬೊಂಬೆಯಂತೆ
ಜಲವರತ ತಟಾಕದಂತೆ ಬೆಂದ ನುಲಿಯಂತೆ
ಮತ್ತೆ ಹಿಂದಣಂಗವುಂಟೆ ಅಣ್ಣಾ
ಚೆನ್ನಮಲ್ಲಿಕಾರ್ಜುನನಂತವೆ ಆಶ್ರಯವಾದವಳಿಗೆ?

ಅಕ್ಕನ ಏರುಜವ್ವನದಲ್ಲಿಯೇ ಇವೆಲ್ಲ ವಚನಗಳು ರಚಿತವಾಗಿರದಿರಬಹುದು. ಆದರೆ ಈ ವಚನಗಳಲ್ಲಿ ವ್ಯಕ್ತವಾದ ವಿಚಾರಗಳು ಅಕ್ಕನು ಯಾವ ಸತ್ವದಿಂದಾಗಿದ್ದ ವ್ಯಕ್ತಿಯೆಂಬುದನ್ನು ಎತ್ತಿತೋರಿಸುತ್ತಿವೆ. ಮಲ್ಲಿಕಾರ್ಜುನನನ್ನೇ ಪತಿಯಾಗಿ ಸ್ವೀಕರಿಸುವ ನಿರ್ಧಾರ, ಕೌಶಿಕನಂಥ ದೊರೆಯನ್ನೇ ನಿರಾಕರಿಸುವ ನಿರ್ಧಾರ, ತಂದೆ ತಾಯಿ ಬಂಧು ಬಳಗವನ್ನು ತೊರೆವ ನಿರ್ಧಾರ, ದಿಗಂಬರವನ್ನೇ ದಿವ್ಯಾಂಬರವನ್ನಾಗಿ ಮಾಡಿಕೊಳ್ಳುವ ನಿರ್ಧಾರ– ಮಾನವೇತಿಹಾಸದಲ್ಲಿಯೇ ಅದ್ಭುತವೆನಿಸುವ ಇವೆಲ್ಲ ನಿರ್ಧಾರಗಳನ್ನು ಕೈಕೊಳ್ಳುವಾಗ ಅಕ್ಕನಲ್ಲಿದ್ದಿರಬಹುದಾದ ಈ ಉಕ್ಕಿನಂತಹ ಗಟ್ಟಿತನ ಮುಂದೆ ಸಮಾಧಾನದ ಸುವರ್ಣವಾದುದನ್ನು ಕಾಣುತ್ತೇವೆ.

"ಬೆಟ್ಟದ ಮೇಲೊಂದು ಮನೆ ಮಾಡಿ
ಮೃಗಗಳಿಗಂಜಿದಡೆಂತಯ್ಯಾ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದಡೆಂತಯ್ಯಾ?
ಸಂತೆಯೊಳಗೊಂದು ಮನೆಯ ಮಾಡಿ

ಶಬ್ದಕ್ಕೆ ನಾಚಿದಡೆಂತಯ್ಯಾ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯಾ
ಲೋಕದೊಳಗೆ ಹುಟ್ಟಿದ್ದ ಬಳಿಕ
ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ
ಸಮಾಧಾನಿಯಾಗಿರಬೇಕು!"

ಸ್ತುತಿಯ ಆಶೆ, ನಿಂದೆಯ ಭಯ ಅಲ್ಲವಾದುದನ್ನು, ಹೊಲ್ಲವಾದುದನ್ನು ಮಾಡಿಸುವುದಲ್ಲವೆ? ಒಳ್ಳೆಯದನ್ನು ಮಾಡಬೇಕೆಂಬ ಮನೋನಿರ್ಧಾರವನ್ನೂ ಸಡಲಿಸುತ್ತದೆ. ಇವೆರಡನ್ನೂ ಮೀರಿದ ಸಮಾಧಾನದ ಸ್ಥಿತಿಗೇರಿದಳು ಅಕ್ಕ. ಆದರೂ ಜನರ ಬಿರುನುಡಿಗಳನ್ನು ತಡೆವರಾರು? ಕೀಳ್ನುಡಿಗಳನ್ನು ಕೇಳಿ ಕೇಳಿ ಒಮ್ಮೆಯೂ ಕಂಗೆಡದವರಾರು? ಅದೂ ದುಷ್ಟರನ್ನುಳಿದು ಶಿಷ್ಟರನ್ನೇ ನಿಂದೆಗೆ, ಕೀಳ್ನುಡಿಗಳಿಗೆ, ಮಿಥ್ಯಾರೋಪಗಳಿಗೆ ನಿರ್ನಿಮಿತ್ತ ದೂಷಣೆಗೆ, ಚಾರಿತ್ರ್ಯವಧೆಗೆ ಗುರಿಮಾಡಿದಾಗ ಎಳ್ಳಷ್ಟೂ ಅಳುಕದಿರುವುದು ಹೇಗೆ? ಒಮ್ಮೊಮ್ಮೆ ಒಳ್ಳೆಯತನ ತೋರಿ ತೊಂದರೆಗೆ ಈಡಾಗುವುದಕ್ಕಿಂತ ದುರ್ಜನರೊಡನೆ ದುರ್ಜನರಾಗಿದ್ದು ಸುಖಪಡಬಾರದೇಕೆ? ಎಂಬ ವಿಚಾರವು ಸುಳಿದು ಹೋಗದಿರದು. ಎಂಥವರ ಅಂತರಂಗದಲ್ಲಿಯ ಅಂಥ ಅಗ್ನಿ ಪರೀಕ್ಷೆಗೆ ಒಳಗಾದಾಗಲೂ ಅಕ್ಕ ತನ್ನ ಮನವನ್ನು ಸಂತೈಸಿಕೊಂಡ ರೀತಿ ಸಂತಕುಲಕ್ಕೇ ಶೋಭಾಯಮಾನವಾದುದು; ಸನ್ಯಾಸಿ ವರ್ಗದಲ್ಲಿಯೂ ಅಪೂರ್ವವಾದುದು;

ಹೆದರದಿರು ಮನವೆ, ಬೆದರದಿರು ತನುವೆ,
ನಿಜವನರಿತು ನಿಶ್ಚಿಂತನಾಗಿರು!
ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ;
ಎಲವದ ಮರನ ಇಡುವರೊಬ್ಬರ ಕಾಣೆ!
ಭಕ್ತಿಯುಳ್ಳವರ ಬೈವರೊಂದು ಕೋಟಿ,
ಭಕ್ತಿಯಿಲ್ಲದವರ ಬೈವರೊಬ್ಬರ ಕಾಣೆ!
ನಿಮ್ಮ ಶರಣರ ನುಡಿಯೆ ಎನಗೆ ಗತಿ, ಸೋಪಾನ ಚೆನ್ನಮಲ್ಲಿಕಾರ್ಜುನಾ!

ಇದು ಈ ಪ್ರಪಂಚದ ರೀತಿ, ಲೋಕದವರ ನೀತಿ; ದುರ್ಜನರಿಗೆ ಮೊದಲು ವಂದಿಸಿ ಸಜ್ಜನರನ್ನು ನಿಂದಿಸುವುದು: ಏನೇನೂ ಮಾಡದವರ ಬಗ್ಗೆ ಮೌನವಹಿಸಿ, ಲೇಸನ್ನೇ ಮಾಡುವವರಲ್ಲಿ ಹುಳುಕು ಹುಡುಕುವುದು. ಈ ನಿಷ್ಕಾರಣ ನಿಂದೆಗೆ, ವಿವೇಕ ಶೂನ್ಯ ದೋಷಾರೋಪಣೆಗೆ, ತಿಳಿಗೆಟ್ಟ ತೇಜೋವಧೆಗೆ ಗುರಿಯಾಗುವ ಲಕ್ಷಲಕ್ಷ ಲೇಸಿಗರಿಗೆಲ್ಲ ಸಾಂತ್ವನದ ಸಂದೇಶ ಅಕ್ಕನ ಈ ಅನುಪಮ ವಚನ.

ಇದನ್ನು ಬೋಧಿಸಿ ತೃಪ್ತಳಾಗಲಿಲ್ಲ, ಸಾಧಿಸಿ ತೋರಿದಳು ಅಕ್ಕ, ಕಲ್ಯಾಣದತ್ತ ಪ್ರಯಾಣ ಮುಂದುವರಿದಾಗ ಕಾಮುಕರ ಉಪಟಳವು ಉಂಟಾಗಿರಬೇಕು. ಆದರೆ ನಾಮದಲ್ಲಿ ಹೆಂಗೂಸಾಗಿದ್ದರೂ ಭಾವಿಸಲು ಗಂಡುರೂಪಾಗಿದ್ದ ಗಂಡೆದೆಯ ಅಕ್ಕ ಅಧೀರಳಾಗಲಿಲ್ಲ; ಪಾಪದೃಷ್ಟಿ ಬೀರಿದವರ ಸೊಲ್ಲಡಗುವಂತೆ ಗುಡುಗಿದಳು:

"ನೋಡುವ ಕಂಗಳಿಗೆ ರೂಪಿಂಬಾಗಿರಲು
ನೀವು ಮನ ನಾಚದೆ ಬಂದಿರಣ್ಣ!
ಕೇಳೀದ ಸ್ತೋತ್ರ ಸೊಗಸಿಗೆ ನೀವು ಮರುಳಾಗಿ ಬಂದಿರಣ್ಣ!
ನಾರಿಯೆಂಬ ರೂಪಿಂಗೆ ನೀವು ಒಲಿದು ಬಂದಿರಣ್ಣ!
ಮೂತ್ರಬಿಂದು ಒಸರುವ ನಾಳವೆಂದು
ಕಂಗಾಣದೆ ಮುಂದುಗೆಟ್ಟು ಬಂದಿರಣ್ಣ!
ಬುದ್ಧಿಗೇಡಿತನದಿಂದ ಪರಮಾರ್ಥದ ಸುಖವ
ಹೋಗಲಾಡಿಸಿಕೊಂಡು
ಇದಾವ ಕಾರಣವೆಂದರಿಯದೆ
ನೀವು ನರಕ ಹೇತುವೆಂದರಿದೂ ಮನ ಹೇಸದೆ ಬಂದಿರಣ್ಣ!
ಚೆನ್ನಮಲ್ಲಿಕಾರ್ಜುನನಲ್ಲದೆ
ಮಿಕ್ಕಿಹ ಪುರುಷರೆನಗೆ ಸಹೋದರರು–
ಛೀ ಹೋಗಾ ಮರುಳೇ!"

ಅರಮನೆಯ ಕೌಶಿಕನಿಂದ ಕಾಡಿನ ಕಾಕಪೋಕರವರೆಗೆ ಕಾಮುಕರಿಗೆಲ್ಲ ಒಂದೇ ಚಾಟಿಯೇಟು ಅಕ್ಕನದು; ಛಿ, ಹೋಗಾ ಮುರಳೆ! ಕೊನೆಗೆ ಕಲ್ಯಾಣದ ಹೊರವಲಯದಲ್ಲಿ ಕಿನ್ನರಿ ಬ್ರಹ್ಮಯ್ಯನಿಗೂ ಇದೇ ಅವಸ್ಥೆಯೊದಗಿತೆಂದು ಕೆಂಚ ವೀರಣ್ಣೊಡೆಯರ ಶೂನ್ಯಸಂಪಾದನೆ ಸೂಚಿಸುತ್ತಿದೆ. ಬೇರೆ ಶೂನ್ಯಸಂಪಾದನೆಗಳಲ್ಲಿ 'ಚೆನ್ನಮಲ್ಲಿಕಾರ್ಜುನ ಕಾಮನ ಕೊಂದು ಮನಸಿಜನಾಗುಳುಹಿದರೆ ಮನಸಿಜನ ತಲೆಯ ಬರೆಹವ ತೊಡೆದೆನು' ಎಂದು ಆತ್ಮವಿಶ್ವಾಸದೊಡನೆ ಸಾರಿದ ಅಕ್ಕನು ಕಾಮಸಂಹಾರಿ ಎಂಬುದ ಸಕಲಪ್ರಮಥರಿಗೆ ಪ್ರತ್ಯಕ್ಷವ ತೋರಿಸಬೇಕೆಂದು ಪ್ರಭುದೇವರೇ ಕಿನ್ನರಯ್ಯಗಳನ್ನು ಒಪ್ಪಿಸಿ ಕಳುಹಿಸಿದರೆಂದು ಹೇಳಲಾಗಿದೆ. ಹರಿಹರನಾದರೋ "ಬಂದ ಕಿನ್ನರಿ ಬೊಮ್ಮತಂದೆಯಂ ಕಾಣುತಂ, ಬಂದಂದಿನುಚಿತಕ್ಕೆ ಗೀತವಂ ಪಾಡುತಂ" ಎಂದು ಹೇಳಿ ಅವರಿಬ್ಬರ ಭೇಟಿ ಆಕಸ್ಮಿಕವಾದುದೆಂದು ಸಂಕೇತಿಸುತ್ತಾನೆ. ಒಟ್ಟಿನಲ್ಲಿ ಹೇಳುವುದಾದರೆ, ಉಡುತಡಿಯಿಂದ ಕಲ್ಯಾಣದವರೆಗಿನ ಸುದೀರ್ಘ ವಿಘ್ನಮಯ ಪ್ರಯಾಣದಲ್ಲಿ ಅಕ್ಕನು ತೋರಿದ ಧೈರ್ಯ ಸ್ಥೈರ್ಯಗಳು, ದೌರ್ಜನ್ಯದಮನ ದುಷ್ಟಸಮ್ಮರ್ದನ ಶಕ್ತಿಗಳು, ಅಚಲನಿಷ್ಠೆ ಶ್ರಮಸಹಿಷ್ಣುತೆಗಳು ಅನಿರ್ವಚನೀಯವಾದುವುಗಳು, ಅಪ್ರತಿಮವಾದುವುಗಳು!

ಕೊನೆಗೊಮ್ಮೆ ಕಲ್ಯಾಣದ ಮುಂದೆ ನಿಂತಾಗ,

"ಕಲ್ಯಾಣ ಕೈಲಾಸವೆಂಬ ನುಡಿ ಹಸನಾಯಿತ್ತು!
ಒಳಗೂ ಕಲ್ಯಾಣ, ಹೊರಗೂ ಕಲ್ಯಾಣ!
ಇದರಂತುವನಾರು ಬಲ್ಲರಯ್ಯ?
ನಿಮ್ಮ ಸತ್ಯಶರಣರ ಸುಳುಹು ತೋರುತ್ತಿದೆಯಯ್ಯ!
ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ ತವಕವೆನಗಾಯಿತ್ತು ಕೇಳಾ
ಚೆನ್ನಮಲ್ಲಿಕಾರ್ಜುನಾ"

ಎಂಬ ಉದ್ಗಾರ ಅಕ್ಕನ ಮುಖದಿಂದ ತಾನೆ ತಾನಾಗಿ ಹೊರಹೊಮ್ಮಿತು. ತಡಮಾಡದೆ ಒಳಗೆ ಪ್ರವೇಶಿಸಿ ಪ್ರಮಥನಾಯಕ ಬಸವಣ್ಣನವರನ್ನು ಕಾಣುವ ಆತುರ ಕಾತರಗಳು ಉಕ್ಕುತ್ತಲಿದ್ದರೂ ವಿವೇಕ ಎಚ್ಚರಿಸುತ್ತಲಿತ್ತು;

"ಕಲ್ಯಾಣವೆಂಬುದಿನ್ನಾರಿಗೂ ಹೋಗಬಾರದು ಅಸಾಧ್ಯವಯ್ಯ
ಆಶೆ ಆಮಿಷವನಳಿದವಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು!
ಒಳಗು ಹೊರಗು ಶುದ್ಧವಾದಂಗಲ್ಲದೆ ಕಲ್ಯಾಣವ ಹೋಗಬಾರದು!
ಒಳಗು ತಿಳಿದು, ಚೆನ್ನಮಲ್ಲಿಕಾರ್ಜುನಂಗೊಲಿದು,
ಉಭಯ ಲಜ್ಜೆಯನಳಿದೆನಾಗಿ
ಕಲ್ಯಾಣದ ಕಂಡು ನಮೋ ನಮೋ ಎನುತಿರ್ದೆನು?"

ಕಲ್ಯಾಣದ ಬಗ್ಗೆ ಎಂಥ ಅನುಪಮ ಪರಿಕಲ್ಪನೆಯಿದು! ಅಕ್ಕನ ಒಂದೊಂದು ವಾಕ್ಯಕ್ಕೂ ತಲೆಬಾಗಿಸಬೇಕೆನ್ನಿಸುತ್ತದೆ! ಅದೊಂದು ಹೊಸತನ, ಅದೊಂದು ಅಚ್ಚತನ, ಅದೊಂದು ತಾಜಾತನ ಅಕ್ಕನ ವಾಕ್ಯಗಳಲ್ಲಿ ಮಿಂಚುತ್ತಿವೆ.

"ಉಭಯ ಲಜ್ಜೆಯನಳಿ"ದೇ ಬಂದಿದ್ದರೂ, ಕಿನ್ನರಿ ಬೊಮ್ಮಯ್ಯನ ವಾಗ್ವಾದದಲ್ಲಿ ಉತ್ತೀರ್ಣಳಾಗಿ ಬಂದಿದ್ದರೂ ಪ್ರಭುದೇವರ ಪರೀಕ್ಷೆಗೆ ಒಳಗಾಗುವುದು ಅಕ್ಕನಿಗೆ ತಪ್ಪಲಿಲ್ಲ. ಅನುಭವಮಂಟಪದಲ್ಲಿ ಅಕ್ಕನು ಈ ಅಗ್ನಿ ಪರೀಕ್ಷೆಯಲ್ಲಿಯೂ ಆಶ್ಚರ್ಯಕರವಾದ ರೀತಿಯಲ್ಲಿ ತೇರ್ಗಡೆ ಹೊಂದಿ ಅಪರಂಜಿಯಾಗಿ ಹೊಳೆದಳೆಂಬುದನ್ನು ಉಲ್ಲೇಖಿಸಿದರೆ ಸಾಕೆನ್ನಿಸುತ್ತಿದೆ. ಈ ಅಗ್ನಿದಿವ್ಯದಲ್ಲಿ ಜಯಶಾಲಿಯಾದಾಗ ಅನುಭವಮಂಟಪಕ್ಕೆ ಅನುಭವಮಂಟಪವೇ ಅಕ್ಕನನ್ನು ಒಕ್ಕೊರಲಿನಿಂದ ಕೊಂಡಾಡಿತು.

ಅಣ್ಣನ ಅರಮನೆಯಲ್ಲಿ "ಅವ್ವ ನೀಲವ್ವನ ಮೋಹದ ಮಗಳು, ಅಪ್ಪ ಬಸವಣ್ಣನ ಸುಚಿತ್ತದ ಪುತ್ಥಳಿ, ನಿಃಕಳಂಕ ಸದ್ಗುರು ಪ್ರಭುದೇವರ ಸತ್ಯದ ಸೊಸೆ, ಚಿಕ್ಕಯ್ಯ ಪ್ರಿಯ

ಸಿದ್ಧಲಿಂಗನೊಡಹುಟ್ಟಿದಾಕೆ, ಚೆನ್ನಮಲ್ಲಿಕಾರ್ಜುನನ ಅರ್ಧಾಂಗಿ" ಅಕ್ಕಮಹಾದೇವಿಯ ಲಿಂಗಪತಿತ್ವದ ಶರಣ ಸತಿತ್ವದ ಸಾಧನೆ ಅನನುಕರಣೀಯವಾದ ರೀತಿಯಲ್ಲಿ ಸಾಗಿತು; ಇಷ್ಟಲಿಂಗವೇ ಪತಿಯೆಂಬ ಅರಿವು ಕರಿಗೊಂಡು ಹಿಗ್ಗಿ ಹಾಡಿದಳು:

"ಅಯ್ಯಾ, ದೂರದಲ್ಲಿರ್ದಿಹೆಯೆಂದು ಬಾಯಾರಿ ಬಳಲುತ್ತಿದ್ದೆನಯ್ಯ
ನಾನು!
ಅಯ್ಯಾ, ಸಾರಿ ಬಂದು ನೀನೆನ್ನ ಕರಸ್ಥಲದಲ್ಲಿ ಮೂರ್ತಗೊಂಡರೆ
ಇನ್ನು ಆ ರತಿಯೆಲ್ಲವು ಲಿಂಗ!
ಆಲಿ ನಿಮ್ಮಲ್ಲಿ ನಟ್ಟುವು ನೋಡಯ್ಯ!
ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮನೆನ್ನ ಕರಸ್ಥಳದಲ್ಲಿ ನೋಡಿನೋಡಿ
ಕಂಗಳೇ ಪ್ರಾಣವಾಗಿದ್ದೆನಯ್ಯಾ!"

ಅಲ್ಲಿಂದ ಮುಂದೆ, "ಅಂಗೈಯೊಳಗಣ ಲಿಂಗವ ಪೂಜಿಸುತ್ತ... ಕಂಗಳ ನೋಟ, ಕರುವಿಟ್ಟ ಭಾವ, ಹಿಂಗದ ಮೋಹ. ತೆರಹಿಲ್ಲದಿರ್ದ.... ಪೂಜೆ ಅನುವಾಯಿತ್ತು." ಅಕ್ಕನಿಗೆ. ಲಿಂಗಪತಿಯೀಗ ಅತ್ಯಂತ ಸಮೀಪದಲ್ಲಿ; ತನ್ನ ಕರದಲ್ಲಿಯೇ ಆದರೂ ಎಷ್ಟು ದೂರ ಇನ್ನೂ! ಇದನ್ನು ಸಹಿಸುವುದು ಹೇಗೆ? ಆ ಮೊದಲು ಮಲ್ಲಿಕಾರ್ಜುನ ದೂರದಲ್ಲಿರುವನೆಂಬ ಕಾರಣವಾದರೂ ಇದ್ದಿತು, ಅಗಲಿಕೆಯನ್ನ ತಾಳಿಕೊಳ್ಳಲು, ಈಗ?

"ತಾನು ದಂಡು ಮಂಡಲಕ್ಕೆ ಹೋದನೆಂದರೆ
ನಾನು ಸುಮ್ಮನಿಹೆನು;
ತಾನೆನ್ನ ಕೈಯೊಳಗಿದ್ದು
ಎನ್ನ ಮನದೊಳಗಿದ್ದು
ನುಡಿಯದಿದ್ದರಾನು ಎಂತು ಸೈರಿಸುವೆನವ್ವ?"

ಎಂದು ಅಲ್ಪರಿಯುತ್ತಲಿದ್ದಾಳೆ, ಅಕ್ಕ. ಇದಕ್ಕೆ ಲಿಂಗಪತಿ ಓಗೊಡದಿರಲು ತನ್ನ ಅಂತರಂಗವನ್ನೇ ಶೋಧಿಸಿಕೊಳ್ಳುತ್ತಾಳೆ: ತನ್ನ ಒಳಗನ್ನೇ ಅಗ್ನಿ ಪರೀಕ್ಷೆಗೆ ಒಳಪಡಿಸಿಕೊಳ್ಳುತ್ತಾಳೆ; ತನ್ನ ಅರಕೆಗಳನ್ನು ಗುರುತಿಸಿ ಉದ್ಗರಿಸುತ್ತಾಳೆ:

"ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು;
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನಿನು;
ಹದುಳಿಗರಲ್ಲವದರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು;
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು;
ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯ ನೀನು;

ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನಿನು;
ತ್ರಿಕರಣಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು;
ಹೃದಯಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯ ನೀನು:
ಎನ್ನಲ್ಲಿ ಏನುಂಟೆಂದು
ಕರಸ್ಥಲವನಿಂಬುಗೊಂಡೆ ಹೇಳಾ, ಚೆನ್ನಮಲ್ಲಿಕಾರ್ಜುನಾ?"

ಆಗ, ಹರಿಹರನು ಬಣ್ಣಿಸಿರುವಂತೆ "ಗುರುವೆ ಬಾರ, ಪರವೆ ಬಾರ, ವರವೆ ಬಾರ, ದೇವ ದೇವ ಬಾರ, ಫಲವೆ, ಫಲದ ರಸವೆ, ರಸದ ಸವಿಯ ಸುಖವೆ ಬಾರ" ಎಂದು ಪರಿಪರಿಯಿಂದ ಕರೆದಾಗಲೂ ಮಲ್ಲಿಕಾರ್ಜುನ ಮೌನವಾಗಿದ್ದುದರ ಗುಟ್ಟು ತಿಳಿಯುತ್ತದೆ, ಅಕ್ಕನಿಗೆ. ಅವಳ ಆತ್ಮನಿವೇದನ ಹೊರಹೊಮ್ಮುತ್ತದೆ:

"ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯಾ?
ನೀನು ಬಹಿರಂಗವ್ಯವಹಾರದೂರಸ್ಥನು:
ಅಂತರಂಗದಲ್ಲಿ ಧ್ಯಾನವ ಮಾಡಿ ಒಲಿಸುವೆನೆ ಅಯ್ಯಾ?
ನೀನು ವಾಙ್ಮನಕ್ಕತೀತನು!
ಜಪಸ್ತೋತ್ರದಿಂದ ಒಲಿಸುವೆನೆ ಅಯ್ಯಾ?
ನೀನು ನಾದಾತೀತನು?
ಭಾವಜ್ಞಾನದಿಂದೊಲಿಸುವೆನೆ ಅಯ್ಯಾ?
ನೀನು ಮತಿಗತೀತನು!
ಹೃದಯಕಮಲ ಮಧ್ಯದಲ್ಲಿ ಇಂಬಿಟ್ಟುಕೊಂಬೆನೆ ಅಯ್ಯಾ?
ನೀನು ಸರ್ವಾಂಗಪರಿಪೂರ್ಣನು!
ಅಯ್ಯಾ, ನಿನ್ನ ಒಲಿಸಲೆನ್ನಳವಲ್ಲ–
ನೀ ಒಲಿವುದೆ ಸುಖವಯ್ಯ, ಚೆನ್ನಮಲ್ಲಿಕಾರ್ಜುನಯ್ಯಾ!"

'ನೀ ಒಲಿವುದೆ ಸುಖವಯ್ಯ' ಎಂದುದೇನೋ ಸರಿ; ಆದರೆ ಇಲ್ಲಿಯೂ ಸಕಾಮ ಭಕ್ತಿಯ ಸೆಳಕು ಇಣುಕುತ್ತಿದೆಯಲ್ಲ?

"ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆನು;
ಗಿಡುಗಿಡುದಪ್ಪದೆ ಬೇಡಿದೆನೆನ್ನಂಗಕ್ಕೆಂದು;
ಅವು ನೀಡಿದವು ತಮ್ಮ ಲಿಂಗಕ್ಕೆಂದು
ಆನು ಬೇಡಿ ಭವಿಯಾದೆನು
ಅವು ನೀಡಿ ಭಕ್ತರಾದವು!
ಇನ್ನೂ ಬೇಡಿದೆನಾದರೆ, ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮಾಣೆ!"

ಎಂದು ಉಡುತಡಿಯಿಂದ ಕಲ್ಯಾಣಕ್ಕೆ ಬರುವಾಗಲೋ, ಕಲ್ಯಾಣದಿಂದ ಶ್ರೀಗಿರಿಗೆ ತೆರಳುವಾಗಲೋ ಹಾಡಿದ ಸಕಾಮಭಕ್ತಿಗೆ ಮನಸೋಲ ಬಲ್ಲಳೆ? ಇಲ್ಲ!

"ಅಯ್ಯ, ನೀ ಕೇಳಿದರೆ ಕೇಳು, ಕೇಳದಿದ್ದರೆ ಮಾಣು
ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ!
ಅಯ್ಯಾ, ನೀ ಮೆಚ್ಚಿದರೆ ಮೆಚ್ಚು, ಮೆಚ್ಚದಿದ್ದರೆ ಮಾಣು
ನಾ ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯ!
ಅಯ್ಯಾ, ನೀ ನೋಡಿದರೆ ನೋಡು ನೋಡದಿದ್ದರೆ ಮಾಣು
ನಾ ನಿನ್ನ ನೋಡಿ, ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ!
ಚೆನ್ನಮಲ್ಲಿಕಾರ್ಜುನಯ್ಯಾ
ನಾ ನಿಮ್ಮ ಪೂಜಿಸಿ ಹರುಷದಲೋಲಾಡುವೆನಯ್ಯಾ!"

ಇಲ್ಲಿಂದ ಮುಂದೆ:

"ನಚ್ಚುಗೆ ಮನ ನಿಮ್ಮಲ್ಲಿ, ಮೆಚ್ಚುಗೆ ಮನ ನಿಮ್ಮಲ್ಲಿ!
ಸಲ್ಲುಗೆ ಮನ ನಿಮ್ಮಲ್ಲಿ, ಸೋಲುಗೆ ಮನ ನಿಮ್ಮಲಿ;
ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ
ಕರಗುಗೆ ಮನ ನಿಮ್ಮಲ್ಲಿ ಕೊರಗುಗೆ ಮನ ನಿಮ್ಮಲ್ಲಿ!
ಎನ್ನ ಪಂಚೇಂದ್ರಿಯಂಗಳು
ಕಬ್ಬುನ ಉಂಡ ನೀರಿನಂತೆ
ನಿಮ್ಮಲ್ಲಿ ಬೆರಸುಗೆ, ಚೆನ್ನಮಲ್ಲಿಕಾರ್ಜುನಯ್ಯಾ!"

ಇನ್ನೂ ಮುಂದುವರಿದು,

"ತನು ನಿಮ್ಮ ರೂಪಾದ ಬಳಿಕ ನಾನಾರಿಗೆ ಮಾಡುವೆ?
ಮನ ನಿಮ್ಮ ರೂಪಾದ ಬಳಿಕ ನಾನಾರ ನೆನೆವೆ?
ಪ್ರಾಣ ನಿಮ್ಮ ರೂಪಾದ ಬಳಿಕ ನಾನಾರನಾರಾಧಿಸುವೆ?
ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ನಾನಾರನರಿವೆ?
ಚೆನ್ನಮಲ್ಲಿಕಾರ್ಜುನಾ,
ನಿಮ್ಮಲ್ಲಿ ನೀವಾಗಿ ನಿಮ್ಮಿಂದ ನಿಮ್ಮ ಮರೆದೆನಯ್ಯಾ!"

ಇಲ್ಲಿಗೆ 'ಚೆನ್ನಮಲ್ಲಿಕಾರ್ಜುನ ಬಂದಾನೆಂದು ಬಟ್ಟೆಗಳ ನೋಡಿ ಬಾಯಾರುವ,' 'ತಡವಾದೊಡೆ ಬಡವಾಗುವ', 'ಬಾರದಿರ್ದಡೆ ಕರಗಿ ಕೊರಗುವ', 'ಬೆರೆಸುವರೆ ಬೇಗ ತೋರಾ, ಹೊರ ಹಾಕದಿರಯ್ಯಾ', 'ಎನ್ನುವ', 'ಆಲಿಸೆನ್ನ ಬಿನ್ನಪವ', 'ಲಾಲಿಸೆನ್ನ ಬಿನ್ನಪವ',

ಏಕೆನ್ನ ಮೊರೆಯ ಕೇಳೆ? ಎಂದು ಅಳಲುವ, 'ಬಲ್ಲಿದನ ಹಗೆಗಹ ಎಗೆವನ್ನಬರ ಬಡವನ ಹರಣ ಹೋದ ತೆರನಂತಾಯಿತ್ತು ನೀ ಕಾಡಿ ನೋಡುವನ್ನಬರ! ಎನಗಿದು ವಿಧಿಯೇ ಹೇಳಾ ತಂದೆ!' ಎಂದು ಪ್ರಶ್ನಿಸುವ ಅವಸ್ಥೆ ಮುಗಿದುದು; ಸೆಜ್ಜೆಯುಪ್ಪರಿಸಿ ಶಿವಲಿಂಗ ಕರಸ್ಥಲಕ್ಕೆ ಬರೆ, ಪ್ರಜ್ವಲಿಸಿ ತೊಳತೊಳಗಿ ಬೆಳಗುತ್ತಿಹ ಕಾಂತಿಯಲಿ ಒಜ್ಜರಿಸಿ, ತನುಮನ ದೃಷ್ಟಿ ನಟ್ಟು ಲಿಂಗದಲ್ಲಿ ಒಜ್ಜರಿಸುವ ಶಿವಸುಖದೊಳೋಲಾಡುತ್ತ ಸಜ್ಜನ ಸದ್ಭಕ್ತಿ ರತಿಯೊಡನೆ ಕೂಡಾಡಿ ಲಜ್ಜೆಗೆಟ್ಟು ನಿಮ್ಮ ನೆರೆವೆ ಚೆನ್ನಮಲ್ಲಿಕಾರ್ಜುನಾ! ಎಂಬ ಆತ್ಮ ವಿಶ್ವಾಸದ ಅವಸ್ಥೆ ಸಮನಿಸಿದುದು; ಇನ್ನು ತನ್ನ ಚರಮಗಮ್ಯಸ್ಥಾನಕ್ಕೆ ಹೊರಡಬಹುದೆಂಬ ಭಾವನೆ ಕುಡಿಯೊಡೆದುದು. 'ಪರಮಸುಖ ಪರಿಣಾಮ ಮನ ಮೇರೆದಪ್ಪಿ ನಾನು ನಿಜವನ್ನೈದುವ ಠಾವ ಹೇಳಾ ಮಲ್ಲಿಕಾರ್ಜುನಯ್ಯಾ?' ಎಂದು ಪ್ರಭುದೇವರನ್ನು ಕೇಳಿಯೇ ಬಿಟ್ಟಳು, ಅಕ್ಕ. ಇನ್ನು ಅಕ್ಕನನ್ನು ತಡೆಯಲಾಗದೆಂಬುದನ್ನರಿತಿದ್ದ ಪ್ರಭುದೇವರು ಉತ್ತರಿಸಿದರು– "ನಾನೀಯೆಂಬುಭಯ ಸಂಗವಳಿದು ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ ತುಟ್ಟ ತುದಿಯ ಮೆಟ್ಟಿ ನೋಡಲು ಬಟ್ಟ ಬಯಲು ಕಾಣಬಹುದು ನೋಡಾ! ಆ ಬಯಲ ಬೆರಸುವರೆ ತ್ರಿಕೂಟಗಿರಿಯೊಳೊಂದು ಕಾಣಬಾರದ ಕದಳಿಯುಂಟು ನೋಡಾ! ಕದಳಿಯ ತಳದಲ್ಲಿ ಒಳಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ! ನಡೆಯಲ್ಲಿಗೆ ತಾಯೆ, ಗುಹೇಶ್ವರಲಿಂಗದಲ್ಲಿ ಪರಮಪದವಿ ನಿನಗೆ ಸ್ವಯವಹುದು ನೋಡಾ!"

'ಶ್ರೀಶೈಲ "ತ್ರಿಕೂಟ" ಕದಳಿ' ಎಂಬ ಪದಗಳು ಕಿವಿಗಳಿಗೆ ತಾಗುತ್ತಲೂ ರೋಮಾಂಚಿತಳಾದಳು, ಅಕ್ಕಮಹಾದೇವಿ. ಆಪಾವನ ರಮಣೀಯ ಸ್ಥಾನಗಳ ಸೆಳೆತ ಅದಮ್ಯವಾಯಿತು. ಕದಳಿಯ ಕರೆ, ತ್ವರೆತ್ವರೆ ಅಕ್ಕನ ಅಂಗದ ಕಣ ಕಣಗಳಲ್ಲಿ, ಅಕ್ಕನ ಇರವಿನ ಚಣ ಚಣಗಳಲ್ಲಿ ನಿನದಿಸತೊಡಗಿತು, ಕದಳಿಯ ಕರೆಯ ಸ್ವರ! ಅಕ್ಕನಿನ್ನು ಹೊರಡಲೇಬೇಕು; ಹೊರಟು ನಿಂತಳು. ಅಡ್ಡನಿಲ್ಲಲು ಮನಸ್ಸಿದ್ದರೂ ಮಾರ್ಗವಿರಲಿಲ್ಲ ಶರಣರಿಗೆ. ಪ್ರಭುದೇವರೇ ಅನುಮಿತಯಿತ್ತ ಮೇಲೆ ಯಾರೇನ ಮಾಡಬಹುದಾಗಿದ್ದೀತು?

ಅದೊಂದು ಅತ್ಯಂತ ಹೃದಯಸ್ಪರ್ಶಿಯಾದ ಸನ್ನಿವೇಶ–ಅಕ್ಕನು ಕಲ್ಯಾಣ ತೊರೆದು ಹೊರಟಿದ್ದ ಸನ್ನಿವೇಶ. ಉಡುತಡಿಯನ್ನು ತೊರೆದು ಹೊರಟಾಗ ತಂದೆ ತಾಯಿಯರಿಗೆ ಗೆಳತಿಯರಿಗೆ ನೈಜ ದುಃಖ. ಕೌಶಿಕನಿಗೆ ಕಾಮುಕ ಸಹಜ ವ್ಯಥೆಯಾಗಿದ್ದಿತು. ಈಗ ಕಲ್ಯಾಣದ ಶರಣ ಶರಣೆಯರೆಲ್ಲ ಕಂಬನಿದುಂಬಿದ ಕಣ್ಣುಗಳೊಡನೆ ನಿಂತು ಅಕ್ಕನ ನಿರ್ಗಮನವನ್ನು ಬೆಕ್ಕಸ ಬೆರಗಾಗಿ ನೋಡುತ್ತಲಿದ್ದರು. ಯಾರೂ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಅಕ್ಕನಿಗೂ ದುಃಖ ಉಕ್ಕಿ ಬಂದಿದ್ದಿತು. ಅಯ್ಯ, ನಿಮ್ಮ ಮಹಂತರ ಕೂಡಿದ ಸುಖವನುಪಮೆಗೆ ತರಬಾರದಯ್ಯ! ಅಯ್ಯ, ನಿಮ್ಮ ಮಹಂತರ ಕೂಡಿಯಗಲುವ

ಧಾವತಿಯಿಂದ ಸಾವುದೇ ಕರಲೇಸು ಕಂಡಯ್ಯ! ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ನಿಜವನರುಹಿದ ಮಹಿಮರನಗಲಿ ನಿಲಲಾರೆನಯ್ಯಾ ಎಂದು ಹುಯಿಲಿಡುತ್ತ ಎಂದಿಗೂ ಮರೆಯಲಾಗದ ಎರಡೂ ವಚನಗಳನ್ನು ಉಸುರಿಸಿದಳು:

ಒಡಲಿಲ್ಲದ, ನುಡಿಯಿಲ್ಲದ, ಕಡೆಯಿಲ್ಲದ
ನಲ್ಲನನ ಒಡಗೂಡಿ ಸುಖಿಯಾದೆ ಕೇಳಿರಯ್ಯ!
ಭಾಷೆ ಪೈಸರವಿಲ್ಲ ಓಸರಿಸೆನನ್ಯಕ್ಕೆ
ಆಸೆ ಮಾಡೆನು ಮತ್ತೆ ಭಿನ್ನ ಸುಖಕ್ಕೆ!
ಆರಳಿದು ಮೂರಾಗಿ, ಮೂರಳಿದು ಎರಡಾಗಿ,
ಎರಡಳಿದು ಒಂದಾಗಿ ನಿಂದೆನಯ್ಯಾ!
ಬಸವಣ್ಣ ಒದಲಾದ ಶರಣರಿಗೆ ಶರಣಾರ್ಥಿ!
ಪ್ರಭುವಿನಿಂದ ಕೃತಕೃತ್ಯಳಾದೆನು ನಾನು!
ಮರೆಯಲಾಗದು ನಾನು ನಿಮ್ಮ ಶಿಶುವೆಂದು!
ಚೆನ್ನಮಲ್ಲಿಕಾರ್ಜುನನನ ಬೆರಸೆಂದು
ಎನ್ನ ಹರಿಸುತ್ತಿಹುದು!

ಸುತ್ತು ವ್ಯಾಪಿಸಿದ್ಧ ನೀರವತೆಯನ್ನು ಕಲಕುತ್ತಿದ್ದುವು, ಕಣ್ಣೀರ ಹನಿಗಳು ಮಾತ್ರ! ಯಾರು ಮಾತನಾಡಬೇಕು ಆಗ? ಮಾತಾಳಿಯನ್ನು ಮೂಕನನ್ನಾಗಿ ಮಾಡುವ, ಸ್ತಂಭಿಭೂತರನ್ನಾಗಿ ಮಾಡುವ ಸನ್ನಿವೇಶವದು. ಅಕ್ಕನೇ ಆತ್ಮಚರಿತ್ರೆ ಒರೆವಂತೆ ನುಡಿದಳು:

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ
ಬೆಳೆದೆನು ಅಸಂಖ್ಯಾತರ ಕರುಣದೊಳಗೆ;
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ!
ಇಂತಪ್ಪ ತ್ರಿವಿಧಾಮೃತವ ದಣಿಯಲೆರೆದು ಸಲಹಿದರೆನ್ನ
ವಿವಾಹವ ಮಾಡಿದಿರಿ; ಸಯವಪ್ಪ ಗಂಡಂಗೆ ಕೊಟ್ಟಿರಿ;
ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ
ಬಸವಣ್ಣ ಮೆಚ್ಚಲು ಒಗತನವ ಮಾಡುವೆ;
ಚೆನ್ನಮಲ್ಲಿಕಾರ್ಜುನನನ ಕೈವಿಡಿದು
ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು!
ಅವಧರಿಸಿ, ನಿಮ್ಮಡಿಗಳೆಲ್ಲರೂ ಬಿಜಯಂಗೈವುದು ಶರಣಾರ್ಥಿ!

ಅಕ್ಕನು ಕಲ್ಯಾಣದ ಎಳೆತ ಶ್ರೀಗಿರಿಯ ಸೆಳೆತಗಳಿಗೆ ಸಿಕ್ಕಿ ಒಂದೊಂದೆ ಭಾರವಾದ ಹೆಜ್ಜೆಗಳನ್ನಿಡುತ್ತ ಹೊರಡಲು, ಅದುವರೆಗೆ ಅದುಮಿ ಹಿಡಿದಿದ್ದ ಶರಣ ಶರಣೆಯರ ಕಣ್ಣೀರ ಧಾರೆ ಹೊರಚಿಮ್ಮಿತು. ಅಕ್ಕನು ಕಾಣುವವರೆಗೂ ಹುಬ್ಬುಗೈಯಾಗಿ ನಿಂತಿದ ಅವರು, ಅಕ್ಕನು ಕಾಣದಾದ ಮೇಲೆ ಬಿಕ್ಕುತ್ತ ಹಿಂದಿರುಗಿದರು. ಅವರ ನೆನಪಿನ ವನದಲ್ಲಿ ಭ್ರಮರಗೀತೆಯಾಗಿ ಅಕ್ಕನ ಆಶ್ವಾಸನ ಮಂಜುಳವಾಗಿ ಗುಂಜಿಸುತ್ತಲಿತ್ತು; ನಿಮ್ಮ ಮಂಡೆಗೆ ಹೂವ ತಹನೆಲ್ಲದೆ ಹುಲ್ಲತಾರೆನು! ಹೂವ ತಹೆ..... ಹುಲ್ಲ ತಾರೆನು.... ಹೂವ ತಹೆ.... ಹುಲ್ಲತಾರೆನು...

ಶ್ರೀಶೈಲದ ಹಾದಿಯಲಿ ಪುಳಕಗಳ ಬೆಳೆಯನ್ನು ಒಕ್ಕುತ್ತ ಅಕ್ಕ ಹೊರಟಿದ್ದಾಳೆ ಅವಸರವಸರವಾಗಿ ಅದೇಕೆ ಇಷ್ಟೊಂದು ಅವಸರ?

ಹಸಿವೇ ನೀನು ನಿಲ್ಲು ನಿಲ್ಲು; ತೃಷೆಯೇ ನೀನು ನಿಲ್ಲು ನಿಲ್ಲು;
ನಿದ್ರೆಯೇ ನೀನು ನಿಲ್ಲು ನಿಲ್ಲು;
ಕಾಮವೇ ನೀನು ನಿಲ್ಲು ನಿಲ್ಲು; ಕ್ರೋಧವೇ ನೀನು ನಿಲ್ಲು ನಿಲ್ಲು;
ಮೋಹವೇ ನೀನು ನಿಲ್ಲು ನಿಲ್ಲು; ಲೋಭವೇ ನೀನು ನಿಲ್ಲು ನಿಲ್ಲು;
ಮದವೇ ನೀನು ನಿಲ್ಲು ನಿಲ್ಲು; ಮತ್ಸರವೇ ನೀನು ನಿಲ್ಲು ನಿಲ್ಲು;
ಸಚರಾಚರವೇ ನೀನು ನಿಲ್ಲು ನಿಲ್ಲು!
ನಾನು ಚೆನ್ನಮಲ್ಲಿಕಾರ್ಜುನದೇವರ
ಅವಸರದ ಓಲೆಯನೊಯ್ಯುತ್ತಲಿದ್ದೇನೆ! ಶರಣಾರ್ಥಿ!

ಅಲ್ಲಿ ಶರಣ ಶರಣೆಯರಿಗೆ ಶರಣಾರ್ಥಿ; ಇಲ್ಲಿ ಅರಿಷಡ್ವರ್ಗಗಳಿಗೆ, ಸಚರಾಚರಕ್ಕೇ ಶರಣಾರ್ಥಿ ಯಾರನ್ನು ನೋಡಲೂ, ನುಡಿಸಲೂ ಸಮಯವಿಲ್ಲ. ಅವರಸರದ ಓಲೆ ಅಷ್ಟು ಮಹತ್ವದ್ದು, ಅದು ಅಂತಿಮ ಸಮರ್ಪಣೆಯ ಓಲೆ! ಅದು ಆದಷ್ಟು ಬೇಗ ಮುಟ್ಟಬೇಕು ಮಲ್ಲಿಕಾರ್ಜುನನಿಗೆ! ಆದಷ್ಟು ಬೇಗ ಅದು ಅಂಗೀಕೃತವಾಗಬೇಕು!

ಮತ್ತೆ ದಾರಿಯಲ್ಲಿ ಅಗ್ನಿ ದಿವ್ಯಗಳು! ಆದರೆ ಅಕ್ಕನ ಕೆಚ್ಚು ಅದ್ರಿಯಂತೆ ಅವಿಚಲ! ಅದ್ರಿಯೂ ಭೂಕಂಪವೋ ಜ್ವಾಲಾಮುಖಿಯೇ ಅಲುಗಿಸಿದಾಗ ಅಲ್ಲಾಡಬಹುದು. ಅಕ್ಕನ ಧೃತಿ ಅದ್ರಿಗಿಂತ ಅಚಲ. ವಜ್ರಕ್ಕಿಂತ ಅಚ್ಛಿನ್ನ! ಈ ವಚನಗಳನ್ನೋದಿ ಅಕ್ಕನಿಗೆ ಒದಗಿರಬಹುದಾದ ಅಗ್ನಿ ಪರೀಕ್ಷೆಗಳ ಸಂದರ್ಭಗಳನ್ನು ಊಹಿಸಿಕೊಳ್ಳಬಹುದು.

ಆರೂ ಇಲ್ಲದವಳೆಂದು ಅಳಿಗೊಳಲು ಬೇಡ ಕಂಡಯ್ಯ!
ಏನ ಮಾಡಿದಡೆಯೂ ನಾನು ಅಂಜುವಳಲ್ಲ!

ತರಗೆಲೆಯ ಮೆಲಿದು ನಾನಿಹೆನು
ಸುರಗಿಯ ಮೇಲೊರಗಿ ನಾನಿಹೆನು!
ಚೆನ್ನಮಲ್ಲಿಕಾರ್ಜುನಯ್ಯ ಕರ ಕೇಡನೊಡ್ಡಿದಡೆ
ಒಡಲನು ಪ್ರಾಣವನು ನಿಮಗರ್ಪಿಸಿ ಶುದ್ಧಳಹೆನು!

ಕಿಡಿ ಕಿಡಿ ಕೆದರಿದಡೆ ಏನಗೆ ಹಸಿವು ತೃಷೆಯಡಗಿತ್ತೆಂಬೆನು!
ಮುಗಿಲು ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂಬೆನು!
ಗಿರಿ ಮೇಲೆ ಬಿದ್ದಡೆ ಎನಗೆ ಪುಷ್ಪವೆಂಬೆನು!
ಚೆನ್ನಮಲ್ಲಿಕಾರ್ಜುನಯ್ಯ
ಶಿರ ಹರಿದು ಬಿದ್ದಡೆ ಪ್ರಾಣ ನಿಮಗರ್ಪಿತವೆಂಬೆನು!

ಸರ್ವಾರ್ಪಣಕ್ಕೆ ಸಿದ್ಧಳಾಗಿಯೇ ಹೊರಟಿದ್ದ ಅಕ್ಕ ಮಾನವರ ಕೀಟಲೆ ಕೋಟಲೆಗಳಿಗೆ, ಪ್ರಕೃತಿಯ ವಿಕ್ಷೋಭೆಗಳಿಗೆ ಅಂಜುವಳೆ, ಅಳುಕುವಳೆ? ಭುವಿ ಬೆರಗಾಗುವ ರೀತಿಯಲ್ಲಿ ಸಂಕಷ್ಟಮಯ ಪ್ರಯಾಣವನ್ನು ಮುಂದುವರಿಸಿದಳು.

ಈಗ ಅಕ್ಕ ಶ್ರೀಗಿರಿಯ ಸೋಪಾನಗಳನ್ನು ಏರುತ್ತಲಿದ್ದಾಳೆ. ಅಲ್ಲಿ ವನವೆಲ್ಲ ಕಲ್ಪತರು, ಬಿಡವೆಲ್ಲ ಮರುಜೇವಣಿ, ಶಿಲೆಗಳೆಲ್ಲ ಪರುಷ, ನೆಲವೆಲ್ಲ ಅವಿಮುಕ್ತ ಕ್ಷೇತ್ರ, ಜಲವೆಲ್ಲ ನಿರ್ಜರಾಮೃತ, ಮೃಗವೆಲ್ಲ ಪುರಷಾಮೃಗ, ಎಡಹುವ ಹರಳೆಲ್ಲ ಚಿಂತಾಮಣಿ, ಅಕ್ಕನ ಕಂಗಳಿಗೆ! ಇಂಥ ಚೆನ್ನಮಲ್ಲಿಕಾರ್ಜುನಯ್ಯನ ನಚ್ಚಿನ ಗಿರಿಯ ಸುತ್ತಿನೋಡುತ ಬಂದು ಕದಳಿಯ ಬನವನ್ನು ಕಾಣುತ್ತಾಳೆ–ಮೂಲದದ್ವಾರದ ಬೇರೆ ಮೆಟ್ಟಿ ಭೂಮಂಡಲವನೇರಿದ, ಆಚಾರದ ಬೇರ ಹಿಡಿದು ಐಕ್ಯದ ತುದಿಗೇರಿದ, ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನೇರಿದ ಮಲ್ಲಿಕಾರ್ಜುನನ ಮನದನ್ನೆ ಮಹಾದೇವಿಯಕ್ಕ! ಅಕ್ಕನ ಶ್ರೀಗಿರಿಯ ಆರೋಹಣ ಮಾನವನ ಊರ್ಧ್ವಗಾಮೀ ಅಭಿಲಾಷೆಯ ಪರಮಪ್ರತೀಕವಾಗಿ ನಿಲ್ಲುವ ಮಹದ್ಘಟನೆ!

ಕದಳಿಯ ವನವನ್ನು ಕಾಣುತ್ತಲೆ ತನ್ನನ್ನೇ ಮರೆತು ಬಿಟ್ಟಳು ಮಹಾದೇವಿ, ಕದಳಿ ಎಂಬುದು ಎಂಥ ಅದ್ಭುತ ಸಂಕೇತವಾಗಿ ಕಾಣಿಸಿತು ಅಕ್ಕನಿಗೆ!

ಕದಳಿಯೆಂಬುದು ತನು,
ಕದಳಿಯೆಂಬುದು ಮನ,
ಕದಳಿಯೆಂಬುದು ವಿಷಯಂಗಳು!
ಕದಳಿಯೆಂಬುದು ಭವಘೋರಾರಣ್ಯ!
ಕದಳಿಯೆಂಬುದ ಗೆದ್ದು, ತವೆ ಬದುಕಿ ಬಂದು

ಕದಳಿಯ ಬನದಲ್ಲಿ ಭವಹರನ ಕಂಡೆನು!
ಭವಗೆಟ್ಟು ಬಂದ ಮಗಳೆಂದು
ಕರುಣದಿಂ ತೆಗೆದು ಬಿಗಿಯಪ್ಪಿದರೆ
ಚೆನ್ನಮಲ್ಲಿಕಾರ್ಜುನನ
ಹೃದಯಕಮಲದಲ್ಲಿ ಅಡಗಿದೆನು!

ತನುಮನಗಳ, ವಿಷಯಗಳ, ಭವಘೋರಾರಣ್ಯದ ಕದಳಿಯನ್ನು ಗೆದ್ದು ಕದಳಿಯ ವನದಲ್ಲಿ ಭವನಹರನ ಬೆರೆದಳು. ಬಸವಣ್ಣನಭಕ್ತಿ, ಚನ್ನಬಸವಣ್ಣನ ಜ್ಞಾನ, ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ ಜಂಗಮಸ್ಥಲ, ಅಜಗಣ್ಣನ ಐಕ್ಯಸ್ಥಲ, ನಿಜಗುಣನ ಆರೂಢ ಸ್ಥಲ, ಸಿದ್ಧರಾಮಯ್ಯನ ಸಮಾಧಿಸ್ಥಲ–ಇಂತಿವರ ಕರುಣಪ್ರಸಾದವನ್ನು ಪಡೆದು ಪಾವನಕೆ ಪಾವನಗಳಾಗಿದ್ದ ಅಕ್ಕಮಹಾದೇವಿ! ಈ ಪರಮಗತಿಯನ್ನು ಸುಲಭವಾಗಿ ಸಂಪಾದಿಸಲಿಲ್ಲ ಅಕ್ಕ;

ಬಸವಣ್ಣನ ಮನೆಯ ಮಗಳಾಗಿ ಬದುಕಿದೆನಾಗಿ
ತನ್ನ ಕರುಣ ಭಕ್ತಿಪ್ರಸಾದವ ಕೊಟ್ಟನು!
ಚನ್ನಬಸವಣ್ಣನ ತೊತ್ತಿನ ಮಗಳಾದ ಕಾರಣ
ಒಕ್ಕ ಪ್ರಸಾದವ ಕೊಟ್ಟನು!
ಪ್ರಭುದೇವರ ತೊತ್ತಿನ ತೊತ್ತಿನ ಮರುದೊತ್ತಿನ ಮಗಳಾದ ಕಾರಣ
ಜ್ಞಾನಪ್ರಸಾದವ ಕೊಟ್ಟನು!
ಸಿದ್ಧರಾಮಯ್ಯನ ಶಿಶುಮಗಳಾದ ಕಾರಣ
ಪ್ರಾಣಪ್ರಸಾದವ ಸಿದ್ಧಿಸಿ ಕೊಟ್ಟನು!
ಮಡಿವಾಳಯ್ಯನ ಮನೆಮಗಳಾದ ಕಾರಣ
ನಿರ್ಮಳಪ್ರಸಾದವ ನಿಶ್ಚಯಿಸಿ ಕೊಟ್ಟನು!
ಇಂತೀ ಅಸಂಖ್ಯಾತಗಣಂಗಳೆಲ್ಲರೂ
ತಮ್ಮ ಕರುಣದ ಕಂದನೆಂದು ತಲೆದಡವಿದ ಕಾರಣ
ಚೆನ್ನಮಲ್ಲಿಕಾರ್ಜುನಯ್ಯನ ಶ್ರೀಪಾದಕ್ಕೆ ಯೋಗ್ಯಳಾದೆನು!

ಈ ವಚನದಲ್ಲಿ ಅಕ್ಕನ ವಿನಯಶ್ರೀ ವಿರಾಜಿಸುತ್ತಿರುವಂತೆ ಇನ್ನೊಂದು ವಿಸ್ಮಯಕರ ಅಂಶವೂ ಎದ್ದು ಕಾಣುತ್ತಿದೆ. ಶರಣರದು ವ್ಯಷ್ಟಿ–ಸಮಷ್ಟಿ ಸಮನ್ವಯದ ಅಪೂರ್ವ ಪ್ರಯೋಗ. ಅವರ ಸಮಷ್ಟಿಚೇತನ ವ್ಯಷ್ಟಿ ಜೀವನವನ್ನು ಪ್ರಭಾವಿಸಿದಂತೆ ವ್ಯಷ್ಟಿ ಚೇತನ ತನ್ನ ವಿಶಿಷ್ಟ ವಿಕಾಸವನ್ನು ಅಷ್ಟೇ ಪ್ರಭಾವಶಾಲಿ ರೀತಿಯಲ್ಲಿ ರೂಪಿಸಿಕೊಂಡಿತು. ಒಬ್ಬೊಬ್ಬ ಶರಣರದೂ ಒಂದೊಂದು ವಿಶೇಷ ಕ್ಷೇತ್ರ. ಭಕ್ತಿ, ಜ್ಞಾನ, ವೈರಾಗ್ಯ, ಕಾಯಕ, ಪ್ರಸಾದ, ದಾಸೋಹ–ಇತ್ಯಾದಿ ಕ್ಷೇತ್ರಗಳಲ್ಲಿ ಎಲ್ಲರೂ ತಮ್ಮ ತಮ್ಮ ಒಲವು ಪ್ರವೃತ್ತಿಗಳಿಗನುಗುಣವಾಗಿ

ಒಂದೊಂದು ಕ್ಷೇತ್ರವನ್ನು ಆಯ್ದುಕೊಂಡು ಅದರಲ್ಲಿ ಅತ್ಯುನ್ನತಿಯನ್ನು ಪಡೆದು ಪ್ರಸಿದ್ಧರಾದರು.

ಆದರೆ ಭಕ್ತಿ–ಜ್ಞಾನ–ವೈರಾಗ್ಯಗಳೆಲ್ಲದರಲ್ಲೂ ಸಮಾನ ಸಿದ್ಧಿಯನ್ನು ಸಾಧಿಸಿದವರು ವಿರಳ. ಆ ವಿರಳರಲ್ಲಿ ಅಗ್ರಗಣ್ಯಳು ಅಕ್ಕಮಹಾದೇವಿ. ಅಂತೆಯೇ ಪ್ರಭುದೇವರು ಸಹ ಕಾಮದ ಲಜ್ಜೆಯ ಕಲ್ಪಿತವ ಕಳೆದು, ಜೀವದ ಲಜ್ಜೆಯ ಮೋಹವಳಿದು, ಮನದ ಲಜ್ಜೆಯ ನೆನಹ ಸುಟ್ಟು, ಭಾವದ ಕೂಟ ಬತ್ತಲೆಯೆಂದರಿದು. ನಾಮವಿಲ್ಲದ ಸೀಮೆಯಿಲ್ಲದ ನಿಜಭಕ್ತಿಯೇ ನಿಜಶಕ್ತಿಯಾಗಿ, ಅಂತರಂಗದ ಪ್ರಭೆ ಬಹಿರಂಗವೆಲ್ಲ ತಾನೆಯಾಗಿದ್ದ, ತನುಗುಣ ನಾಸ್ತಿಯಾಗಿ ಲಿಂಗಸಂಗಿಯಾಗಿದ್ದ, ಮನಗುಣ ನಾಸ್ತಿಯಾಗಿ ಅರಿವು ಸಂಗಿಯಾಗಿದ್ದ ಭಾವಗುಣ ನಾಸ್ತಿಯಾಗಿ ಮಹಾಪ್ರಭೆ ತಾನಾಗಿದ್ದ ತಾನಿದೆರೆಂಬೆರಡಳಿದು ಗುಹೇಶ್ವರಲಿಂಗದಲ್ಲಿ ಸ್ವಯಲಿಂಗವಾಗಿದ್ದ ಅಕ್ಕನ ನಿಲವನ್ನು ನೋಡಿ ಅಚ್ಚರಿಗೊಂಡು ಉದ್ಗರಿಸಿದರು:

ಅಂಗೈಯ ಲಿಂಗದಲ್ಲಿ
ಕಂಗಳ ನೋಟವೆ ಸ್ವಯವಾದ
ಇರವ ನೋಡಾ!
ತನ್ನ ಸ್ವಾನುಭಾವದ ಉದಯದಿಂದ
ತನ್ನ ತಾನರಿದ
ನಿಜಶಕ್ತಿಯ ನೋಡಾ!
ಭಿನ್ನವಿಲ್ಲದರಿವು ಮನ್ನಣೆಯ ಮಮಕಾರವ
ಮೀರಿದ ಭಾವ ತನ್ನಿಂದ ತಾನಾದಳು!
ನಮ್ಮ ಗುಹೇಶ್ವರಲಿಂಗದಲ್ಲಿ
ಮಹಾದೇವಿಯಕ್ಕನ ನಿಲುವಿಂಗೆ
ನಮೋ ನಮೋ ಎನುತಿರ್ದೆನು ಕಾಣಾ
ಚೆನ್ನಬಸವಣ್ಣಾ!

ಪ್ರಭುದೇವರ ಈ ಪ್ರಶಸ್ತಿ ಪತ್ರಿಕೆಗೆ ಅಂಕಿತ ಹಾಕದವರಾರು?

# ೨

# ಅಸಾಮಾನ್ಯ ಸಾಧನೆಗಳು

ಪ್ರಾತಃಸ್ಮರಣೀಯರಾದ ದಿ. ಎಂ.ಆರ್.ಶ್ರೀನಿವಾಸಮೂರ್ತಿಗಳವರು ಮಹಾದೇವಿಯಕ್ಕನ ಮೂದೆರನಾದ ಸಾಧನೆಯನ್ನು ಉಲ್ಲೇಖಿಸಿದ್ದಾರೆ. ಹೆಣ್ಣಿನ ಸ್ವಾತಂತ್ರ್ಯ ಸಾಧನೆ, ಹೆಣ್ಣಿನ ಗೌರವಸಾಧನೆ ಹಾಗೂ ಹೆಣ್ಣಿನ ಪರಮಾರ್ಥಸಾಧನೆ – ಇವೇ ಆ ಮೂರು ಸಾಧನೆಗಳು.[೧] ಇವುಗಳಲ್ಲಿ ಒಂದೊಂದೂ ಮಹತ್ತರವಾದ ಸಾಧನೆಯೆಂಬುದು ಈ ದೇಶದ ಚರಿತ್ರೆಯನ್ನು ಬಲ್ಲವರಿಗೆ ಒಡೆದು ಕಾಣುವ ವಿಷಯ. ಆದರೂ ಅಲ್ಪ ವಿವರಣೆ ಅಗತ್ಯವೆನಿಸದಿರದು.

ಈ ದೇಶದಲ್ಲಿ ಏಕೆ? ಯಾವ ದೇಶದಲ್ಲಿಯೂ ಹೆಣ್ಣಿಗೆ ಸ್ವಾತಂತ್ರ್ಯ ಸುಲಭವಾಗಿ ಸಿಕ್ಕಿಲ್ಲ; ಸಿಕ್ಕಲ್ಲಿಯೂ ಸರಿಯಾಗಿ ದಕ್ಕಿಲ್ಲ. ಇನ್ನೂ ಪುರುಷಪ್ರಧಾನವಾಗಿಯೇ ಉಳಿದಿರುವ ಮಾನವ ಸಮಾಜದಲ್ಲಿ ಹೆಣ್ಣಿಗೆ ಸ್ವಾತಂತ್ರ್ಯ ಅನಗತ್ಯವಾದುದೆಂಬ ಅಭಿಪ್ರಾಯವೇ ಬಹುಜನರಲ್ಲಿ ಉಳಿದಿರುವುದು ಆಶ್ಚರ್ಯವೇನಲ್ಲ. ಪ್ರವಾದಿಗಳು ಪುಟ್ಟಿದುದು ಹೆಣ್ಣಿನ ಹೊಟ್ಟೆಯಲ್ಲಿಯೇ, ಆದರೂ ಅವರ ಕಾವ್ಯಗಳಲ್ಲಿ ಹೆಣ್ಣಿಗೆ ಅಸಮಾನ ಮಾನ! ಅದಮ್ ಅಧಃಪಾತಕ್ಕೆ ಈವ್ಹ್ ಕಾರಣಳಾದಳೆಂಬ ಕಟ್ಟುಕತೆಯೇ ಕಾರಣವಾಗಿ ಹೆಣ್ಣು ಪತನಹೇತುವೆಂಬ ಭ್ರಮೆ ಪುರುಷವರ್ಗವನ್ನು ಆವರಿಸಿತು.[೨]

ಎಂಥೆಂಥವರೂ ತಾವು ಬಂದ ಬಸಿರನ್ನು ಉಂಡ ಮೊಲೆಯನ್ನು ಹೇಯವೆಂದು ಹಳಿದಿದ್ದಾರೆ; ಪ್ಲೇಟೋನಂತೆ–ನಾನು ಹೆಣ್ಣಾಗಿ ಹುಟ್ಟಲಿಲ್ಲ, ಗಂಡಾಗಿ ಹುಟ್ಟಿದೆನಲ್ಲ. ಇದಕ್ಕಾಗಿ ದೇವರಿಗೆ ಧನ್ಯವಾದಗಳು! ಎಂದು ಪುರುಷಪಾರಮ್ಯವನ್ನು ಪ್ರತಿ ಪಾದಿಸಿದ್ದಾರೆ; ಮಹಿಳೆ ಎಲ್ಲ ದುರ್ಗುಣಗಳ, ಎಲ್ಲ ದೌರ್ಬಲ್ಯಗಳ, ಎಲ್ಲ ಅನಾಹುತಗಳ ಪ್ರತಿರೂಪವೆನ್ನುವಂತೆ ಚಿತ್ರಿಸಿದಾರೆ. ಯಾವುದೇ ಅನಾಹುತ ಘಟಿಸಿದರೂ ಅದರ ಮೂಲದಲ್ಲಿ ಮಹಿಳೆಯೊಬ್ಬಳು ಇದ್ದೇ ತೀರಬೇಕೆಂಬ ತೀರ್ಮಾನಕ್ಕೆ ಬಂದಿದ್ದಾರೆ; ಫ್ರೆಂಚ್ ಭಾಷೆಯಲ್ಲಿರುವ ಈ ಅರ್ಥದ

---

೧. ಮಹಾದೇವಿಯಕ್ಕನ ಜೀವನಚರಿತ್ರೆ ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪರಮಾರ್ಥಸಾಧನೆಯ ಒಂದು ಮಹಾಪ್ರಕರಣ ಎಂ.ಆರ್.ಶ್ರೀ.

೨. When Eve brought woe to all mankind old Adam called his woe-man

ಗಾದೆ ಪ್ರಸಿದ್ಧವಾಗಿಯೇ ಇದೆ. ಸ್ತ್ರೀರೂಪದೀಪವನ್ನು ಮುತ್ತಿಟ್ಟು ಪುರುಷಪತಂಗಗಳು ಮೋರೆ ಸುಟ್ಟುಕೊಂಡರೂ ತಪ್ಪು ಪತಂಗದಲ್ಲ ದೀಪದ್ದು ಎಂಬ ಹಾಸ್ಯಾಸ್ಪದ ನಿರ್ಣಯವನ್ನು ನೀಡಿದ್ದಾರೆ; ಅವಳು ಜೀವನದ ಯಾವ ಘಟ್ಟದಲ್ಲಿಯೂ ಸ್ವಾತಂತ್ರ್ಯಕ್ಕೆ ಅರ್ಹಳಲ್ಲವೆಂಬ ತೀರ್ಪು ಕೊಟ್ಟಿದ್ದಾರೆ.

ಯಾಕೆ? ಅವಳು ಪಾಪಯೋನಿಜರ ವೈಶ್ಯರ, ಶೂದ್ರರ ಸಾಲಿನಲ್ಲಿ ನಿಲ್ಲಬೇಕಾದವಳು. ಲೋಕಮಾನ್ಯ ಭಗವದ್ಗೀತೆಯಲ್ಲಿಯೇ ಈ ಅರ್ಥದ ಶ್ಲೋಕವೊಂದಿರುವುದು ಶೋಚನೀಯ.

ಮಾ ಹಿ ಪಾರ್ಥ ವ್ಯಪಾಶ್ರಿತ್ಯ
ಯೇऽಪಿ ಸ್ಯುಃ ಪಾಪಯೋನಯಃ ।
ಸ್ತ್ರೀಯೋ ವೈಶ್ಯಾಸ್ತಥಾ ಶೂದ್ರಾಃ
ತೇಪಿ ಯಾಂತಿ ಪರಾಂ ಗತಿಮ್ ॥ (ಅಧ್ಯಾಯ ೯, ಶ್ಲೋಕ ೩೨)

ಇದು ಪ್ರಕ್ಷಿಪ್ತಶ್ಲೋಕವೆಂದು ಯಾರಾದರೂ ಘೋಷಿಸಿದರೆ ಪರಮಸಂತೋಷದ ಸಂಗತಿಯಾದೀತು. ಆದರೆ ಅಂದಿನ ಸರ್ವಮಾನ್ಯ ವಿಚಾರ ಪ್ರಣಾಲಿಯನ್ನೇ ಪ್ರಜ್ಞಾ ಪರಿಸರವನ್ನೇ ಇದು ಪ್ರತಿನಿಧಿಸುತ್ತಿದೆಯಾಗಿ, ಇಂದಿಗೂ ಈ ವಿಚಾರಧಾರೆ ಬಲವಾಗಿಯೇ ಬೇರೂರಿದೆಯಾಗಿ ಪ್ರಕ್ಷಿಪ್ತವೆನಲೂ ಬರುವಂತಿಲ್ಲವೇನೋ.[೧]

ಇಲ್ಲಿ ಸ್ತ್ರೀಯರನ್ನು ಶೂದ್ರರ ಸಾಲಿನಲ್ಲಿ ನಿಲ್ಲಿಸಿರುವುದೇನೂ ಅರಿದಲ್ಲ; ಆಶ್ಚರ್ಯವಲ್ಲ. ನಮ್ಮ ಧರ್ಮಶಾಸ್ತ್ರಗಳೆಲ್ಲ ಸ್ತ್ರೀ ಯಾವ ವರ್ಣದವಳೇ ಇರಲಿ, ಅವಳು ಶೂದ್ರಳೇ ಎಂದು ಏಕಕಂಠದಿಂದ ಸಾರಿವೆ.[೨] ಪುರುಷರ ಬಗೆಗೆ ಬರೆಯುವಾಗ ಅವರ ವರ್ಣ ಸ್ಥಾನಮಾನಾದಿಗಳನ್ನು ಕುರಿತು ವಿವರವಾಗಿ ಬರೆದಿರುವರಾಗಲಿ ಹೆಣ್ಣಿನ ಮಾತು ಬಂದಾಗ ಯಾವ ವಿವರಣೆಯ ಅಗತ್ಯವೂ ತೋರಿಲ್ಲ. ಯಾಕೆಂದರೆ ಹೆಣ್ಣು ಹುಟ್ಟಿನಿಂದಲೇ ಶೂದ್ರ. ಪರಾಶರಸ್ಮೃತಿಯ ಪ್ರಕಾರ ಸ್ತ್ರೀ ಮತ್ತು ಶೂದ್ರರ ಕೊಲೆಗೆ ಒಂದೇ ವಿಧವಾದ ಶಿಕ್ಷೆ! ಅವರಿಬ್ಬರಲ್ಲಿ ಯಾವ ಭೇದವೂ ಇಲ್ಲ!

---

೧. ಈ ಶ್ಲೋಕ ಪ್ರಕ್ಷಿಪ್ತವಾಗಿರಬಾರದೇಕೆಂಬ ಸಂಶಯ ಸುಳಿಯಲು ಕಾರಣ, ಗೀತೆಯ ದಶಮಾಧ್ಯಾಯದಲ್ಲಿ ಬರುವ ಈ ಶ್ಲೋಕಾರ್ಧ, ಕೀರ್ತಿಃ ಶ್ರೀರ್ವಾಕ್ ಚ ನಾರೀಣಾಂ । ಸ್ಮೃತಿರ್ಮೇಧಾ ಧೃತಿಃ ಕ್ಷಮಾ ॥೩೪॥ ಸ್ತ್ರೀಯರಲ್ಲಿರುವ ಕೀರ್ತಿ, ಮಾಂಗಲ್ಯ, ಮಾತಿನ ಮಾಧುರ್ಯ, ಜ್ಞಪ್ತಿ, ಧಾರಣ, ಸಹನೆ, ಧೈರ್ಯ ಇವೆಲ್ಲವೂ ನಾನು ಎಂದು ಪರಮಾತ್ಮನೇ ಹೇಳಿರುವಾಗ ಅವಳನ್ನು ಪಾಪಯೋನಿಜರ, ಶೂದ್ರರ ಸಾಲಿನಲ್ಲಿ ನಿಲ್ಲಿಸಿರುವ ಶ್ಲೋಕ ಪ್ರಕ್ಷಿಪ್ತವೆನಿಸದೆ?

೨. ಉದಾಹರಣೆಗೆ ಮನುಸ್ಮೃತಿ: XI 153.

೩. ನೋಡಿ. Light on Early Indian Society and Economy (p.23 by R.S.Sharan)

ಇದಕ್ಕೂ ಅವಮಾನಕಾರಕವಾದುದೆಂದರೆ ಸ್ತ್ರೀ ಜೀವಿಯೇ ಅಲ್ಲ, ಒಂದು ಒಡವೆ, ಆಸ್ತಿ ಎಂದು ವಾದಿಸಿದುದು. ಅವಳು ಗಂಡಸಿನ ಆಸ್ತಿಯ ಒಂದು ಭಾಗ ಮಾತ್ರ. ಚಿನ್ನ, ಬೆಳ್ಳಿ, ಭೂಮಿ, ಹಸು, ಕರುಗಳಂಗೆ ಅವಳೂ ಅವನ ಐಶ್ವರ್ಯದ ಒಂದು ಅಂಶ!

ಅಂತೆಯೇ ಅವಳನ್ನು ಇತರ ಬೆಲೆಯುಳ್ಳ ವಸ್ತುಗಳಂತೆ ಒತ್ತೆಯಿಡಬಹುದು. ಬಡ್ಡಿ ಎಷ್ಟು? ಅವಳ ಬೆಲೆಯ ಎಪ್ಪತ್ತರಲ್ಲಿ ಒಂದು ಪಾಲು (ಅಗ್ನಿ ಪುರಾಣ ಖ ೨೫೩, ೬೨–೬೪) ಈ ಬೆಲೆಯನ್ನು ನಿರ್ಧರಿಸುವುದು ಹೇಗೆ? ನಿರ್ಧರಿಸುವವರು ಯಾರು? ಗೊತ್ತಿಲ್ಲ!

ಅಂತೂ ಒಡಲುವಿಡಿದ ಜೀವಿಯಲ್ಲ, ಒಡವೆ ಅವಳು! ಈ ವಿಚಾರ ಪುರುಷ ಪ್ರೇರಿತವಾದುದಾದರೂ ಇದರ ಪ್ರತಿಪಾದನೆಯ ಪೌನಃಪುಣ್ಯದಿಂದ ಸ್ತ್ರೀಯರೂ ಇದನ್ನು ಅಕ್ಷರಶಃ ಅಂಗೀಕರಿಸಿಬಿಟ್ಟರು! ಹದಿಬದೆಯ ಧರ್ಮವನ್ನು ಬಿತ್ತರಿಸಿರುವ ಸಂಚಿಯ ಹೊನ್ನಮ್ಮ ಹೇಳಿರುವುದು ಇದಕ್ಕೆ ಸಾಕ್ಷಿ: ಒಡೆಯನಿರಿಸಿದಂತಿರ್ಪುದಲ್ಲದೆ ಪೇಳೊಡವೆಗೆ ಬೇರಿರವುಂಟೆ? ಇಲ್ಲ, ಒಡವೆಗೆ ಒಡೆಯನಿಂದ ಭಿನ್ನವಾದ ಅಸ್ತಿತ್ವವೇ ಇಲ್ಲ. ಒಡೆಯನು ಇರಿಸಿದಲ್ಲಿ ಇರಿಸಿದಂತೆ ಇರುವುದು ಒಡವೆಯ ಕರ್ತವ್ಯ!

ಹೆಣ್ಣಿನ ಬಗೆಗೆ ಹೆಣ್ಣೇ ಒಪ್ಪಿಕೊಂಡಿದ್ದ ಮೂಲ ದೃಷ್ಟಿಕೋನವೇ ಇದಾಗಿರುವಾಗ ಆಕೆ ಸಮಾನತೆ, ಸ್ವಾತಂತ್ರ್ಯ, ಸಮುನ್ನತ ಸ್ಥಾನಮಾನಗಳು, ಸಮಾನಾವಕಾಶಗಳು, ಹೆಚ್ಚಿನ ಹೊಣೆಗಾರಿಕೆಗಳು ಇತ್ಯಾದಿಗಳನ್ನು ಕೇಳುವ ಪ್ರಶ್ನೆಯಾದರೂ ಎಲ್ಲಿ ಉದ್ಭವಿಸುತ್ತದೆ? ಒಂದು ವೇಳೆ ಉದ್ಭವಿಸಿದರೂ ಅದನ್ನು ಮೊಳಕೆಯಿರುವಾಗಲೇ ಮುರಿದೊಗೆಯಲು ಧರ್ಮಗ್ರಂಥಗಳೂ, ಧರ್ಮಶಾಸ್ತ್ರಗಳೂ, ಪುರಾಣಾದಿಗಳೂ ಸಜ್ಜಾಗಿಯೇ ಇವೆ! ಮಹಾಭಾರತದ ಶಾಂತಿಪರ್ವದಲ್ಲಿ ಹೇಳಿರುವಂತೆ ಅರಸನು ಆಪ್ತಾಲೋಚನೆ ನಡೆಸುವ ಸ್ಥಳಕ್ಕೆ ನಿಷಿದ್ಧರಾದವರೆಂದರೆ ಕುಳ್ಳರು, ಗೂನಿನವರು, ಬಡಕಲು ದೇಹದವರು, ಕುಂಟರು, ಕುರುಡರು, ತಿಳೀಗೇಡಿಗಳು, ಷಂಡರು ಮತ್ತು ಹೆಂಗಳೆಯರು! ಎಂಥವರ ಸಾಲಿನಲ್ಲಿ ಅಂಗನೆಯರನ್ನು ಸೇರಿಸಲಾಗಿದೆಯೆಂಬುದನ್ನು ನೋಡಿದರೆ ಹೆಣ್ಣಿನ ಹೀನದೀನ ಸ್ಥಿತಿಯ ಬಗ್ಗೆ ಹೆಚ್ಚಿನ ವಿವರಣೆ ಬೇಕಿಲ್ಲವೆನಿಸುತ್ತದೆ. ಸಮಾಜದಲ್ಲಿ ಯಾವುದೇ ಸ್ಥಾನಕ್ಕೆ ಅಧಿಕಾರಕ್ಕೆ, ಹೊಣೇಗಾರಿಕೆಗೆ ಅರ್ಹರಾಗುವುದು ಅದಂತಿರಲಿ, ಅಂಥ ವಿಷಯಗಳ ಚರ್ಚೆ ನಡೆವಲ್ಲಿ ಇವರು ಇರಲೂ ಕೂಡದೆಂಬ ಈ ನಿಷೇಧಾಜ್ಞೆಯನ್ನು ಮನು, ಶುಕ್ರ, ಚಾಣಕ್ಯರೂ ಎತ್ತಿಹಿಡಿದಿದ್ದಾರೆ!

ಮಾತಿನಲ್ಲಿ ಮಾತೃದೇವೋಭವವೆಂದು ಉದ್ಘೋಷಿಸುತ್ತ, ನಾರಿಯರು ಪೂಜೆಗೊಳ್ಳುವಲ್ಲಿ ದೇವತೆಗಳು ಸಂಚರಿಸುವರೆಂದು ಸಾರುತ್ತ, ಸ್ತ್ರೀ ಆದಿಶಕ್ತಿಪರಮೇಶ್ವರಿಯ ಪ್ರತೀಕವೆಂದು ಪ್ರಸಾರಗೊಳಿಸುತ್ತ ನಿತ್ಯಜೀವನದಲ್ಲಿ ಆಕೆಯನ್ನು ನರಕದಲ್ಲಿರಿಸಿದ ನಮ್ಮವರ

ನ್ಯಾಯಬುದ್ಧಿಗೆ ಏನೆನ್ನಬೇಕೋ ತಿಳಿಯದು. ಊರೂರಿಗೆ ದೇವಿಯ ದೇಗುಲಗಳು ತ್ರಿಮೂರ್ತಿಗಳಿಗೂ ತಿರುಗಿ ಬಿದ್ದ ಅಸುರ ಸಂಹಾರಕ್ಕೆ ಕೊನೆಗೆ ದೇವಿಯ ಮೊರೆ ಹೊಗುವ ಕಥೆ ಹೇಳುವ ಪುರಾಣಗಳು, ಜನನಿ ಹಾಗೂ ಜನ್ಮ ಭೂಮಿಗಳು ಸ್ವರ್ಗಕ್ಕಿಂತ ಶ್ರೇಷ್ಠವೆಂಬ ಉಕ್ತಿಗಳು; ಅದರೆ ವ್ಯವಹಾರದಲ್ಲಿ ಆಕೆ ಯಾವ ಸ್ಥಾನಕ್ಕೂ, ಯಾವ ಮಾನಕ್ಕೂ ಯಾವ ಕಾರ್ಯಕ್ಕೂ ಅರ್ಹಳಲ್ಲವೆನ್ನುವ ಪ್ರತಿಬಂಧಗಳು! ಅವಳು ಸುಳ್ಳಿನ ಅಪರಾವತಾರ; ಆದುದರಿಂದ ಅವಳು ಸಾಕ್ಷಿ ನೀಡಲೂ ಅನರ್ಹಳು ಎಂದು ಸಾರಿದರು ಯಾಜ್ಞವಲ್ಕ್ಯ ವಶಿಷ್ಠರು. ಧರ್ಮದಾನಿ ಬುದ್ಧ ಸಹ ಹೆಂಗಸರಿಗೆ ಯಾವುದೇ ಅಧಿಕಾರಗಳನ್ನು, ಜವಾಬ್ದಾರಿಗಳನ್ನು ಕೊಡಕೂಡದೆಂಬುದಕ್ಕೆ ಈ ಕಾರಣಗಳನ್ನು ಹೇಳಿದ: ಹೆಂಗಸರು ಬೇಗ ರೇಗುತ್ತಾರೆ. ಆನಂದ; ಹೆಂಗಸರು ವಿಕಾರಮಯರು ಆನಂದ; ಹೆಂಗಸರು ಮತ್ಸರಗ್ರಸ್ಥರು, ಆನಂದ; ಹೆಂಗಸರು ಮೂಢಮತಿಗಳು, ಆನಂದ. ಇದೇ ಕಾರಣಕ್ಕಾಗಿ ಆನಂದ ಅವರಿಗೆ ಸಾರ್ವಜನಿಕ ಸಮಾರೋಹಗಳಲ್ಲಿ ಸ್ಥಾನವಿಲ್ಲ; ಅವರು ವ್ಯಾಪಾರೋದ್ಯೋಗಗಳನ್ನು ಮಾಡುವುದಿಲ್ಲ. ಯಾವುದೇ ವೃತ್ತಿಯಿಂದ ಅವರು ತಮ್ಮ ಉಪಜೀವನವನ್ನು ನಿರ್ವಹಿಸುವುದಿಲ್ಲ.[೧] ಒಂದು ಜಾತಕಥೆಯಲ್ಲಿ ಬೋಧಿಸತ್ವನಿಂದ ಹೇಳಿಸಲಾಗಿದೆ; ಹೆಂಗಸು ಆಳುವ ದೇಶ ಅಗೌರವಕ್ಕೆ ಒಳಗಾದ ದೇಶ. ಹೆಂಗಸಿನ ಪ್ರಾಬಲ್ಯವನ್ನು ಒಪ್ಪುವ ಗಂಡಸರು ಗೌರವಗೇಡಿಗಳು. ಇನ್ನೂ ಮುಂದೆ ಹೋಗಿ ಬುದ್ಧ ನುಡಿಯುತ್ತಾನೆ: ಅವಕಾಶ, ಏಕಾಂತತೆಗಳು ದೊರೆತರೆ, ಸರಿಯಾದ ಪ್ರಣಯಿ ಸಿಕ್ಕಿದೆ ಎಲ್ಲ ಹೆಂಗಸರು ಪಥಭ್ರಷ್ಟರಾಗುತ್ತಾರೆ; ಅನ್ಯರಿಗೆ, ಅಂಗವಿಕಲರಿಗೆ ಸಹ ವಶರಾಗುತ್ತಾರೆ.[೨]

ದಯಾಮಯ ಬುದ್ಧನೇ ಇಷ್ಟು ನಿರ್ದಯನಾಗಿ ನುಡಿದ ಮೇಲೆ ಉಳಿದವರ ಪಾಡೇನು? ಒಳ್ಳೆಯ ಕುಟುಂಬದವರಿರಲಿ, ಸುಂದರಿಯರಾಗಿರಲಿ, ವಿವಾಹಿತರೇ ಆಗಿರಲಿ, ಹೆಂಗಸರು ನೀತಿ ನಡತೆಗಳನ್ನು ಮೀರಿ ನಡೆಯಲು ಹೇಸುವುದಿಲ್ಲ... ಮೊದಲ ಅವಕಾಶ ದೊರೆಯುತ್ತಲೇ ಅವರು ಅನ್ಯರ ಹಾಸಿಗೆಯಲ್ಲಿ ಪಾಲುಗೊಳ್ಳಲು ತಮ್ಮ ಹಣವಂತ ಹಾಗೂ ರೂಪವಂತ ಗಂಡಂದಿರನ್ನು ತೊರೆಯುತ್ತಾರೆ! ಗಂಡಸರು ಅವರನ್ನು ಕೆಲವು ಮುಖಸ್ತುತಿಯ ಮಾತುಗಳೊಡನೆ ಸಂಧಿಸಿದರೆ ಸಾಕು, ಅವರು ಕೂಡಲೇ ಉನ್ಮತ್ತರಾಗುತ್ತಾರೆ ಎಂದು ಪ್ರಮಾಣ ಪತ್ರವಿತ್ತಿತು ಮಹಾಭಾರತ.[೩] ಹೆಂಗಸರು ಎಲ್ಲಿಯವರೆಗೆ ಗರತಿಯರಾಗಿ ಉಳಿಯುತ್ತಾರೆ? ಎಲ್ಲಿಯವರೆಗೆ ನಿರ್ಜನಸ್ಥಳವೊಂದು ದೊರೆಯುವುದಿಲ್ಲವೋ, ಪರಪುರಷನ ಸಹವಾಸ ಸಿಕ್ಕುವುದಿಲ್ಲವೋ ಅಲ್ಲಿಯವರೆಗೆ. ಆದುದರಿಂದ ಕುಲೀನಸ್ತ್ರೀಯರು ಯಾವಾಗಲೂ ಸಖಿಯರಿಂದ ರಕ್ಷಿಸಲ್ಪಡಬೇಕು ಎಂದು ಶಿಫಾರಸಿನ ಪತ್ರವಿತ್ತಿತು ಶಿವಪುರಾಣ! ಇದನ್ನು

೧. Sullavaga x. 1. 6

೨. Quoted in the Milindapantha:

೩. ಅನುಶಾಸನಪರ್ವ

ಯಾರ ಬಾಯಿಂದ ಹೇಳಿಸಲಾಗಿದೆ? ಪ್ರತಿಯೊಬ್ಬರ ವಿವಾಹಕಾಲದಲ್ಲಿ ಅರುಂಧತೀದರ್ಶನ ಮಾಡಿಸುವರಲ್ಲ-ಆ ಅರುಂಧತಿಯ ಬಾಯಿಂದ!

ಇನ್ನೂ ವಿಪರ್ಯಾಸದ ಸಂಗತಿಯೆಂದರೆ ಸ್ತ್ರೀರೂಪಿಣಿಯೂ, ಜಗದ್ಧಾತ್ರಿಯೂ ಆದ ದೇವಿಯ ಪುರಾಣದಲ್ಲಿಯೇ ಸ್ತ್ರೀಯರ ಬಗ್ಗೆ ಅಸಹ್ಯವೂ ಅವಹೇಳನಾತ್ಮಕವೂ ಆದ ಹೇಳಿಕೆಗಳು ಹೇರಳವಾಗಿವೆ:

ಸ್ತ್ರೀಯರು ಮಿತ್ರರೂ ಅಲ್ಲ, ಶತ್ರುಗಳೂ ಅಲ್ಲ. ಅವರು ನಿರಂತರವಾಗಿ ಪರಪುರುಷರನ್ನು ಬಯಸುತ್ತಿರುತ್ತಾರೆ. ಒಳ್ಳೆಯ ವಸ್ತ್ರವಿಭೂಷಿತನಾದ ಯಾವನೇ ಪುರುಷನಿರಲಿ, ಅವನನ್ನು ಕಾಮಿಸುತ್ತಾರೆ; ಆದರೆ ತಾವು ಬಯಸಿದುದನ್ನು ಪಡೆಯಲೆಂದು ಅವರು ಪಾತಿವ್ರತ್ಯದ ಪ್ರದರ್ಶನ ಮಾಡುತ್ತಾರೆ! ಬಹಿರಂಗದಲ್ಲಿ ಸ್ತ್ರೀಯರು ಬಹಳ ಶಾಲೀನರು. ಆದರೆ ತಮ್ಮ ಪ್ರಿಯಕರನು ಗುಪ್ತಸ್ಥಾನದಲ್ಲಿ ಸಿಕ್ಕನೆಂದರೆ ಅವನೊಡನೆ ಹರಿದು ತಿನ್ನುವ ರೀತಿಯಲ್ಲಿ ರಮಿಸುತ್ತಾರೆ. ಅವರು ತಮ್ಮ ಮಕ್ಕಳಿಗಿಂತ ತಮ್ಮ ಕಾಮಪಿಪಾಸೆಯನ್ನು ತೃಪ್ತಗೊಳಿಸುವವರನ್ನು ಹೆಚ್ಚು ಪ್ರೀತಿಸುತ್ತಾರೆ!

ಹೆಂಗಸರು ಜಿಗಣೆಗಳಂತೆ ಸದಾ ಗಂಡಸರ ರಕ್ತವನ್ನು ಹೀರುತ್ತಿರುತ್ತಾರೆ! ಗಂಡಸು ತನ್ನಪ್ರಿಯತಮೆಯೆಂದು ಯಾರನ್ನು ತಿಳೀದಿರುವನೋ ಆ ಹೆಂಗಸೇ ರತಿಕೇಳಿಯ ಮೂಲಕ ಅವನ ಪೌರುಷ ಹರಣ ಮಾಡುವುದಲ್ಲದೆ ಅವನ ಮನವನ್ನೂ, ಧನವನ್ನೂ ಅವನ ಎಲ್ಲವನ್ನೂ ಅಪಹರಿಸುತ್ತಾಳೆ. ಆದುದರಿಂದ ಹೆಂಗಸಿಗಿಂತ ಹೆಚ್ಚಿನ ಸುಲಿಗೆಗಾರರು ಯಾರಾದರೂ ಇರುವರೆ?

ಇದಕ್ಕಿಂತ ಹೆಚ್ಚಿನ ಹೀನಾಯಮಾನವಾದ ಹೆಣ್ಣಿನ ಚಿತ್ರಣ ಇನ್ನಾವುದಾದರೂ ಇದೆಯೆ? ಇಂಥ ವಿಚಾರಗಳ ಪರಿಸರದಲ್ಲಿ ಬೆಳೆದ ಯಾರೂ ತನ್ನ ತಾಯಿಯಾಗಿಯೋ, ಸತಿಯಾಗಿಯೋ, ಅಕ್ಕತಂಗಿಯಾಗಿಯೋ, ಮಗಳಾಇಗಯೋ ತನ್ನ ಬಾಳಿಗೆ ಬೆಳಕನ್ನೂ, ಸವಿಯನ್ನೂ, ಸೌಂದರ್ಯವನ್ನೂ, ಸಾರ್ಥಕತೆಯನ್ನೂ ತಂದುಕೊಡುವ ಹೆಣ್ಣಿನ ಈ ಹೀನಾಯವಾದ ಪರಿಕಲ್ಪನೆಯ ವಿರುದ್ಧ ಚಕಾರ ಶಬ್ದವನ್ನಾದರೂ ಎತ್ತುವ ಗೊಡೆವೆಗೇ ಹೋಗಲಿಲ್ಲ. ತುಲಸೀದಾಸರಂಥ ಸಂತಕವಿಗಳು ಸಹ ಡೋಲ್, ಗಂವರ್, ಔರ್ ನಾರೀ! ಯಹ ಸಬ್ ತಾಡನಕೇ ಅಧಿಕಾರಿ, (ಢೋಲು,ಮೂರ್ಖ ಮತ್ತು ನಾರಿ ಇವರು ತಾಡನಕ್ಕೆ ಮಾತ್ರ ಅಧಿಕಾರಿ!) ಎಂದು ಸಂಕೋಚವಿಲ್ಲದೆ ಹೇಳಬೇಕಾಯಿತು.

ಹಾಗಾದರೆ ದಾರಿಯಾವುದು ದಿಕ್ಕಾವುದು ನಾರಿಯರಿಗೆ? ಮದುವೆಯಾಗುವ ವರೆಗೆ ತಂದೆತಾಯಿಗಳ ಸೇವೆ, ಆಮೇಲೆ ಗಂಡನ ಸೇವೆ, ಅವನೇನಾದರೂ ಮೊದಲೇ ತೀರಿದರೆ

ಮಕ್ಕಳ ಮರ್ಜಿಕಾಯ್ದುಕೊಂಡು ಹೇಗೋ ಬದುಕುವುದು! ವರ್ಣವ್ಯವಸ್ಥೆಯಲ್ಲಿ ಬ್ರಾಹ್ಮಣರಿಗೆ ವೇದಾಧ್ಯಯನ, ಕ್ಷತ್ರಿಯರಿಗೆ ಯುದ್ಧ, ವೈಶ್ಯರಿಗೆ ಧನಾರ್ಜನೆಗಳು ಸ್ವಧರ್ಮಗಳು; ಆದರೆ ಶೂದ್ರನಿಗೆ ಈ ಮೂವರ ಸೇವೆಯೇ ಸ್ವಧರ್ಮ![೧] ಅಂತೆಯೇ ಹೆಂಗಸಿಗೂ ತನ್ನ ಮೂವರು ರಕ್ಷಕರ ಪಿತಾ ಪತಿ, ಸುತರ ಸೇವೆಯೇ ಸ್ವಧರ್ಮ! ಇಲ್ಲಿಯೂ ಸ್ತ್ರೀಗೆ ಶೂದ್ರರಲ್ಲಿ ಸಮಾನತೆ!

ಗಂಡನೆಂಥವನೇ ಇರಲಿ–ಕುರೂಪಿಯಾಗಿರಲಿ, ನೀತಿಹೀನನಾಗಿರಲಿ, ರೋಗಿಯಾಗಿರಲಿ, ಅಂಗವಿಕಲನಾಗಿರಲಿ, ಕುಡುಕನಿರಲಿ, ಕೆಡುಕನಿರಲಿ–ಹೆಂಡತಿ ಮಾತ್ರ ಅವನನ್ನು ದೇವರೆಂದೇ ತಿಳಿದು ಆರಾಧಿಸಬೇಕು; ಸೇವಿಸಬೇಕು; ಶುಶ್ರೂಷಿಸಬೇಕು. ಅವನ ಬಯಕೆ ಬೇಡಿಕೆಗಳು ಅದೆಷ್ಟೇ ಅಸಹ್ಯವಾಗಿರಲಿ, ಅನೀತಿಯವಾಗಿರಲಿ, ಅವುಗಳನ್ನವಳು ಈಡೇರಿಸಿಕೊಡಬೇಕು! ಆದರ್ಶಸತಿ ಹೇಗಿರಬೇಕೆಂಬ ಬಗ್ಗೆ ಹಲವು ಪುರಾಣಗಳಲ್ಲಿ ಉಕ್ತವಾಗಿರುವ ಕಥೆಯೊಂದಿದೆ: ಕುಷ್ಠರೋಗಿಯೊಬ್ಬನ ಹೆಂಡತಿ ತನ್ನ ರೋಗಿಷ್ಠ ಗಂಡನ ಆಜ್ಞೆಯಂತೆ ಅವನನ್ನು ನಗುನಗುತ್ತಲೇ ತನ್ನ ತೋಳುಗಳಲ್ಲಿ ಎತ್ತಿಕೊಂಡು ವೇಶ್ಯಾವಾಟಿಕೆಗೆ ತಲುಪಿಸುತ್ತಾಳೆ! ಎಂಥ ಆದರ್ಶ! ಎಂಥ ಪತಿವ್ರತಾಧರ್ಮ! ಇದಕ್ಕೆ ವೇದೋಕ್ತಿಯ ಬೆಂಬಲ ಬೇರೆ:

"ಧರ್ಮಕ್ಕನುಗುಣವಾಗಿರಲಿ, ಧರ್ಮಕ್ಕೆ ವಿರುದ್ಧವಾದುದೇ ಆಗಿರಲಿ ಗಂಡ ಹೇಳಿದುದೇನಿದ್ದರೂ ಹೆಂಡತಿಯಾದವಳು ಅದನ್ನು ಮಾಡಲೇಬೇಕು!"

ತಕ್ಕಮಟ್ಟಿಗೆ ವಿಶದವಾಗಿಯೇ ಭಾರತೀಯ ನಾರಿಯ ದುಃಸ್ಥಿತಿಯನ್ನು ದುರ್ಗತಿಯನ್ನು ವಿವರಿಸಲು ಕಾರಣವಿಷ್ಟೇ; ಈ ಹಿನ್ನೆಲೆಯಲ್ಲಿ ನೋಡಿದಾಗಲೇ ಅಕ್ಕನ ಸಾಧನೆಗಳ ಮಹತ್ವ ಮನದಟ್ಟಾಗಬಲ್ಲುದು. ಈಗ ಇವೆಲ್ಲ ಅಂಗೀಕೃತ ಅಂಶಗಳಾಗಿಬಿಟ್ಟಿವೆ. ಈಗಲೂ ಸಂಪ್ರದಾಯ ಶರಣರ, ಪಟ್ಟಭದ್ರಹಿತಗಳ ಕಪಿಮುಷ್ಠಿಯಲ್ಲಿದ್ದ ಬಹು ಜನರು ಇವುಗಳನ್ನು ಅಂಗೀಕರಿಸಿಲ್ಲವಾದರೂ ಇವುಗಳ ವಿಷಯದಲ್ಲಿ ಉಗ್ರವಾಗಿ ವಿರೋಧಿಸುತ್ತಲೂ ಇಲ್ಲ. ಆದುದರಿಂದ ಇಂದಿನವರಾದ ನಾವು ಹಿಂದೆ ನಡೆದ ಯಾವುದೇ ಕ್ರಾಂತಿಯನ್ನು, ಇದೇನು ಎಂದು ಪ್ರಶ್ನಿಸುವ ಚಪಲ ತೋರುತ್ತೇವೆ. ಯಾವುದೇ ಕ್ರಾಂತಿಯನ್ನು, ಪರಿವರ್ತನೆಯನ್ನು, ಹೊಸಹುಟ್ಟನ್ನು ಅದು ನಡೆದ ಕಾಲ, ದೇಶ, ಪರಿಸ್ಥಿತಿ, ಪರಿಸರಗಳ ಸಂದರ್ಭ, ಸನ್ನಿವೇಶಗಳ ಬೆಳಕಿನಲ್ಲಿಯೇ ನೋಡಿ ಬೆಲೆಕಟ್ಟಬೇಕಾದುದು ನ್ಯಾಯವಾದುದು; ಇಂದಿನ ಕನ್ನಡಿಯಲ್ಲಿ ಅಂದಿನ ಮುಖ ನೋಡುವುದು ನ್ಯಾಯವಲ್ಲ.

---

೧. ಏಕಮೇವ ತು ಶೂದ್ರಸ್ಥ ಪ್ರಭುಃ ಕರ್ಮ ಸಮಾದಿಶತ್ । ಏತೇಷಾಮೇವ ವರ್ಣಾನಾಂ ಶುಶ್ರೂಷಾಮನಸೂಯಾಯಾ – ಮನುಸ್ಮೃತಿ

ಅಕ್ಕಮಹಾದೇವಿ ಹೆಣ್ಣಿನ ಬಗೆಗೆ ಆಗ ಇದ್ದ ಎಲ್ಲ ಬಂಧನಗಳ, ತುಚ್ಛೀಕರಣ ಅವಹೇಳನಗಳ ವಾರಸುದಾರಳಾಗಿಯೇ ಹುಟ್ಟಿದಳು. ಆದರೆ ಸುದೈವದಿಂದ ಆಕೆ ಪ್ರಾಪ್ತವಯಸ್ಕಳಾಗುವ ಹೊತ್ತಿಗೆ ದೂರದ ಕಲ್ಯಾಣದಲ್ಲಿ ಬಸವಣ್ಣನ ಸಮಗ್ರ ಕ್ರಾಂತಿಯ ಅಂಗವಾಗಿ ಮಹಿಳೆಗೆ ಮನ್ನಣೆಯ ಸ್ಥಾನ ದೊರೆಯ ತೊಡಗಿದ್ದಿತು. "ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ? ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಪ್ರಾಣದಲ್ಲಿ ಹಿಡಿಗೋಲ?" "ಮೊಲೆ ಮುಡಿ ಬಂದರೆ ಹೆಣ್ಣೆಂಬರು ಗಡ್ಡ ಮೀಸೆ ಬಂದರೆ ಗಂಡೆಂಬರು; ನಡುವೆ ಸುಳಿವಾತ್ಮನು ಗಂಡೂ ಅಲ್ಲ. ಹೆಣ್ಣೂ ಅಲ್ಲ" "ಸತಿಪತಿಗಳೊಂದಾಗ  ಭಕ್ತಿಹಿತವಪ್ಪುದು ಶಿವಂಗೆ ಗಂಡನುಳ್ಳಮ್ಮನ ಗೌರಿಯೆಂದು ತಿಳಿದರೆ ಭೂಮಂಡಲಕ್ಕೆ ಅರಸಾಗಿ ಹುಟ್ಟುವನು" ಎಂದು ಜೇಡರದಾಸಿಮಯ್ಯನೂ, "ಪರವಧುವ ಮಹಾದೇವಿಯೆಂಬೆ" "ಅನ್ಯವಧುವೆಂಬುದು ನಿಮ್ಮ ರಾಣಿವಾಸ ಮೊಲೆಯುಂಬ ಭಾವತಪ್ಪಿ ಅಪ್ಪಿದವರ ತಲೆಯ ಕೊಂಬ ಕೂಡಲ ಸಂಗಮದೇವ" ಎಂದು ಬಸವಣ್ಣನವರೂ "ಉಭಯದೃಷ್ಟಿ ಏಕದೃಷ್ಟಿಯಲ್ಲಿ ಕಾಂಬಂತೆ, ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರಲಿಂಗಕ್ಕೆ ಅರ್ಪಿತವಾಯಿತು" "ಸತಿ ಭಕ್ತೆಯಾದರೆ ಹೊಲೆಗಂಜಲಾಗದು: ಪತಿ ಭಕ್ತನಾದಡೆ ಕುಲಕ್ಕಂಜಲಾಗದು! ಸತಿಪತಿಯೆಂಬ ಅಂಗಸುಖ ಹಿಂಗಿ, ಲಿಂಗವೇ ಪತಿಯಾದ ಬಳಿಕ ಸತಿಗೆ ಪತಿಯುಂಟೆ? ಪತಿಗೆ ಸತಿಯುಂಟೆ" ಎಂದು ಅಲ್ಲಮಪ್ರಭುಗಳೂ, "ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ. ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ" ಎಂದು ಸಿದ್ಧರಾಮೇಶ್ವರರೂ "ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ; ಕಾಸೆ ಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ; ಅದು ಜಗದ ಹಾಹೆ; ಬಲ್ಲವರ ನೀತಿಯಲ್ಲ. ಏತರ ಹಣ್ಣಾದರೂ ಮಧುರವೆ ಕಾರಣ; ಅಂದವಿಲ್ಲದೆ ಕುಸುಮಕ್ಕೆ ವಾಸನೆಯೆ ಕಾರಣ, ಇದರಂದವ ನೀನೆ ಬಲ್ಲೆ" ಎಂದು ಸತ್ಯಕ್ಕನೂ "ಮೊಲೆ ಮುಡಿ ಬಂದರೆ ಹೆಣ್ಣೆಂಬರು; ಮೀಸೆ ಕಾಸೆ ಬಂದರೆ ಗಂಡೆಂಬರು, ಈ ಉಭಯದ ಜ್ಞಾನ ಹೆಣ್ಣೋ ಗಂಡೋ?" ಎಂದು ಗೊಗ್ಗವ್ವೆಯೂ, "ಕೂಟಕ್ಕೆ ಸತಿಪತಿಯೆಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ?" ಎಂದು ಆಯ್ದಕ್ಕಿ ಲಕ್ಕಮ್ಮನೂ "ಬಸವನ ಅನುಭವದಿಂದ ವಿವರ ತಿಳಿದು ವಿಚಾರಪತ್ನಿಯಾದೆನಯ್ಯಾ, ಸಂಗಯ್ಯಾ" ಎಂದು ನೀಲಮ್ಮನೂ ಇತರರೂ ಸಾರಿ ಹೆಣ್ಣುಗಂಡಿನ ಮಧ್ಯದ ಅಡ್ಡಗೋಡೆಯನ್ನು ಕೆಡವಿ ಮಹಿಳಾಸ್ವಾತಂತ್ರ್ಯ ಯುಗದ ಮಂಗಳಗೀತೆಯನ್ನು ಹಾಡಿದ್ದರು.[೧]

---

೧. "ಅವಳು ಪುರುಷನಿಗೆ ಸಮಾನವೆಂದು ಸಾರಿ, ಧಾರ್ಮಿಕವೆ ಆಗಲಿ, ಸಾಮಾಜಿಕವೇ ಆಗಲಿ, ಎಲ್ಲ ಸ್ಥಾನಮಾನಗಳಿಗೂ ಅವಳು ಅರ್ಹಳೆಂದು ಡಂಗುರಿಸಿ, ಸ್ವಾತಂತ್ರ್ಯವನ್ನು ಘೋಷಿಸಿದ ಪ್ರಥಮಕ ಕೀರ್ತಿ ಪ್ರಾಯಶಃ ಇಡೀ ಜಗತ್ತಿನಲ್ಲಿಯೇ ಬಸವಣ್ಣನವರಿಗೆ ಸಲ್ಲಬೇಕಾಗಿದೆ. ಮೊಟ್ಟಮೊದಲನೆಯದಾಗಿ ಅವಳಿಗೆ ವಿಚಾರಸ್ವಾತಂತ್ರ್ಯವನ್ನು ಕರುಣಿಸಿದ ವ್ಯಕ್ತಿಯೂ ಅವರೇ. ಅನುಭವಮಂಟಪದಲ್ಲಿ ಪುರುಷರಿಗೆ ಸರಿ ಸಮನಾಗಿ ಕುಳಿತು, ಧಾರ್ಮಿಕ ಚರ್ಚೆಯಲ್ಲಿ ಭಾಗವಹಿಸಿದ, ಅಂತೆಯೇ ಸಾಹಿತ್ಯ ಕ್ಷೇತ್ರದಲ್ಲಿ ಪಾಲ್ಗೊಂಡ ಮಹಿಳೆಯರ ಸಂಖ್ಯೆಯೇ ಮೇಲಿನ ಮಾತಿಗೆ ಸಾಕ್ಷಿಯಾಗಿದೆ." ಡಾ. ದೇ.ಜ.ಗೌ: ಬಸವಸಂಹಿತೆ.

ದೂರದ, ಬಹುದೂರದ ಕಲ್ಯಾಣದಲ್ಲಿ, ಸಂಪರ್ಕ ಹಾಗೂ ಸಂಚಾರ ಸಾಧನಗಳು ವಿರಳವಾಗಿದ್ದ ಕಾಲದಲ್ಲಿ ನಿನದಿಸಿದ ಸ್ವಾತಂತ್ರ್ಯದ ಕಹಳೆಯ ಮೊಳಗು ಉಡುತಡಿಯಲ್ಲಿ ಹೇಗೆ ಕೇಳಿಸಿತೋ ಗೊತ್ತಿಲ್ಲ. ಬಳ್ಳಿಗಾವೆಯ ಅಲ್ಲಮನಿಗೆ ಕೇಳಿಸಿದಂತೆ ಉಡುತಡಿಯ ಅಕ್ಕನಿಗೂ ಕೇಳಿಸಿರಬೇಕು. ಕೇಳಿಸದಿದ್ದರೂ ಇದು ಆ ಯುಗದ ಒಳದನಿಯಾಗಿ ವಾತಾವರಣದಲ್ಲೆಲ್ಲ ಹರಡಿರಬೇಕು: ಇಲ್ಲವೆ ಅಕ್ಕನ ಅಂತಃಸತ್ವವೆ ಅಂತಹದಾಗಿರಬೇಕು. ಅಂತೂ ಭಾರತೀಯ ನಾರಿಲೋಕದ ಬಿಡುಗಡೆಯ ಬೆಳ್ಳಿಚುಕ್ಕೆಯಾಗಿ ಅಂತಹದಾಗಿರಬೇಕು. ಅಂತೂ ಭಾರತೀಯ ನಾರಿಲೋಕದ ಬಿಡುಗಡೆಯ ಬೆಳ್ಳಿಚುಕ್ಕೆಯಾಗಿ ಹೊಳೆದಳು ಅಕ್ಕ; ತ್ರಿವಿಧ ಸಾಧನೆಯಿಂದ–ಹೆಣ್ಣಿನ ಸ್ವಾತಂತ್ರ್ಯ ಸಾಧನೆ, ಗೌರವಸಾಧನೆ, ಪರಮಾರ್ಥ ಸಾಧನೆಯಿಂದ–ತ್ರಿವಿಕ್ರಮತೆಯನ್ನು ತೋರಿದಳು ಅಕ್ಕ!

ಸ್ತ್ರೀಯರ ಸ್ವಾತಂತ್ರ್ಯದ ಸತ್ವಪರೀಕ್ಷೆಯಾಗುವುದು ಅವರ ಮದುವೆಯ ಪ್ರಸಂಗದಲ್ಲಿ ತಂದೆತಾಯಿಗಳು ಯಾರಿಗೂ ಗಂಟಿಟ್ಟರೂ ಅದನ್ನು ಒಪ್ಪಲೇಬೇಕಿದ್ದ ಕಾಲದಲ್ಲಿ ಯಾರೊಡನೆ ವಿಚಾರಪತ್ನಿಯಾಗಿ ಬಾಳುವುದು ಸಾಧ್ಯವಿಲ್ಲವೆಂದು ಕಂಡು ಬಂದಿತೋ ಆ ಕೌಶಿಕನನ್ನು ಹರಿಹರಾದಿಗಳು ಹೇಳಿದಂತೆ ಕರಾರು ಹಾಕಿ ಒಪ್ಪಿದುದಾಗಲಿ, ಚಾಮರಸಾದಿಗಳು ಹೇಳಿದಂತೆ ನಿಷ್ಠುರವಾಗಿ ನಿರಕರಿಸಿದುದಾಗಲಿ ಮಹಿಳಾ ಸ್ವಾತಂತ್ರ್ಯದ ನಾಂದಿಯೇ ಸರಿ. ಒಮ್ಮೆ ಒಬ್ಬನನ್ನು ಮದುವೆಯಾದ ಮೇಲೆ ಸಾಯುವವರೆಗೆ ಅವನೊಡನೆ ಬದುಕಲೇಬೇಕೆಂಬ ವಿಧಿಯಿದ್ದ ಕಾಲದಲ್ಲಿ ಕರಾರುಗಳನ್ನು ಮುರಿದ ಕೌಶಿಕನನ್ನು ತೊರೆದು ಹೊರಟ್ಟಿದ್ದುದು ಆ ಸ್ವಾತಂತ್ರ್ಯದ ಸ್ಥಿರೀಕರಣವೇ ಹೌದು. ಹಾಗೆ ತೊರೆದು ಹೊರಟಿದ್ದಾಗ ತಂದೆ ತಾಯಿ ಬಂಧು ಬಳಗ ತಡೆದಿರಲು ಸಾಕು. ಆಗ ನಿನ್ನ ತಾಯಿತನವನೊಲ್ಲೆ ಹೋಗೇ! ಎನ್ನವುಷ್ಠರ ಮಟ್ಟಿಗೆ ಧ್ಯೇಯರತಿಯನ್ನು. ಧೀರ ಧೃತಿಯನ್ನು ತೋರಿದುದು ಆ ಸ್ವಾತಂತ್ರ್ಯದ ವಿಸ್ತರಣವೆಂದೇ ಹೇಳಬೇಕು. ಪುರುಷಯತಿಗಳು ದಿಗಂಬರರಾಗಿರಬಹುದಾದರೆ ಮಹಿಳೆಯರೇಕೆ ಇರಬಾರದೆಂದು ಯೋಚಿಸಿ ದಿಗಂಬರವನ್ನೇ ದಿವ್ಯಾಂಬರವನ್ನಾಗಿ ಮಾಡಿಕೊಂಡುದು ಈ ಸ್ವಾತಂತ್ರ್ಯದ ಪರಾಕಾಷ್ಠೆಯೇ ಸರಿ; ಇಹಕ್ಕೊಬ್ಬ ಗಂಡ ಪರಕ್ಕೊಬ್ಬ ಗಂಡ ಬೇಕಿಲ್ಲವೆಂದು ನಿರ್ಧರಿಸಿ ಮಲ್ಲಿಕಾರ್ಜುನನನ್ನೇ ಇಹಪರದ ಪತಿಯೆಂದು ಲಿಂಗಪತಿಯೆಂದು ಅಂಗೀಕರಿಸಿ ಅವನ ಆರಾಧನೆಯಲ್ಲಿಯೇ ಪರಮಗತಿಯನ್ನು ಪಡೆದುದು ಅದರ ಪರಿಪೂರ್ಣತೆಯೇ ಎನ್ನಬೇಕು.

ಇವುಗಳಲ್ಲಿ ಒಂದೊಂದೂ ಇಂದಿನ ವಿದ್ಯಾವತಿಯರಾದ ಯುವತಿಯರಿಗೂ ಮೈನಡುಕ ಹುಟ್ಟಿಸುವಂಥದು. ಅಕ್ಕ ತಾನು ಹುಟ್ಟಿದ ಕಾಲಕ್ಕಿಂತ ಎಂಟುನೂರು ವರ್ಷಗಳಲ್ಲ, ಸಹಸ್ರ ಸಹಸ್ರ ವರ್ಷ ಮುಂದಿದ್ದಾಳೆ? ಹದಿಹರೆಯದ ಹುಡುಗಿಯೊಬ್ಬಳು ಸಂಪ್ರದಾಯಬದ್ಧ ಸಮಾಜದ ವಿರುದ್ಧ ಸಿಡಿದು ನಿಲ್ಲುವ ಸಾಹಸವನ್ನು ತೋರುವುದಲ್ಲದೆ ಮನೆಮಾರುಗಳನ್ನು, ಮಾತಾಪಿತೃಗಳನ್ನು, ಇಜ್ಜೋಡಿನ ಮದುವೆಯ ಬೇಡಿಗಳನ್ನು, ಸಭ್ಯತೆಯು ಬೇಡುವ

ಉಡಿಗೆ ತೊಡಿಗೆಗಳನ್ನು ತೊರೆದು ಹೊರಡುವುದು ಮೈನವಿರೆಬ್ಬಿಸುವಂಥ ಅಪೂರ್ವ ಘಟನೆಗಳು! ಲಿಂಗಪತಿಗಾಗಿ ಸರ್ವಸ್ವವನ್ನು ತೊರೆಯುವುದಂತೂ ಅದ್ಭುತವಾದ ಘಟನೆ. ಆ ಆದರ್ಶಪತಿಗಾಗಿ ಉಡುತಡಿಯಿಂದ ಕಲ್ಯಾಣಕ್ಕೆ, ಕಲ್ಯಾಣದಿಂದ ಶ್ರೀಶೈಲದ ಕದಳಿಯ ವನಕ್ಕೆ ಏಕಾಂಗವೀರಳಾಗಿ, ಅಸಹಾಯಶೂರಳಾಗಿ ನಿಂದಕರನ್ನು, ಕಾಮುಕರನ್ನು, ಕಾಡುಮೃಗಗಳನ್ನು ಹಸಿವೆ ತೃಷೆಗಳನ್ನು, ಅಡೆತಡೆಗಳನ್ನು, ಅಪಾಯ ಗಂಡಾಂತರಗಳನ್ನು ಎದುರಿಸುತ್ತ ಪ್ರಯಾಣ ಮಾಡಿದುದಂತೂ ನ ಭೂತೋ ನ ಭವಿಷ್ಯತಿ ಎನ್ನುವಂತಹ ಘಟನೆ!

ಮೇಲಿನ ಘಟನೆಗಳು ಅಕ್ಕನ ಸ್ವಾತಂತ್ರ್ಯ ಸಂಪಾದನೆಯ ಸುವರ್ಣಸಂಪುಟಕ್ಕೆ ಸಾಮಗ್ರಿಯಾದರೆ ಅನುಭವ ಮಂಟಪದಲ್ಲಿ ಅಲ್ಲಮಪ್ರಭು ಒಡ್ಡಿದ ಅಗ್ನಿ ಪರೀಕ್ಷೆಯಲ್ಲಿ ಜಯಶಾಲಿಯಾದುದು ಆಕೆಯ ನಾರೀಗೌರವಸಂಪಾದನೆಯ ಮಹಾಕೃತಿಯ ವಸ್ತು. ಎಲ್ಲ ದುರ್ಗುಣಗಳ ತವರುಮನೆ, ಎಲ್ಲ ದೌರ್ಬಲ್ಯಗಳ ಜನ್ಮಭೂಮಿ, ಎಲ್ಲ ಪ್ರಲೋಭನೆಗಳ ಉಗಮಸ್ಥಾನ, ಎಲ್ಲ ದುಷ್ಕೃತ್ಯಗಳಿಗೆ ಮೂಲಕಾರಣವೆಂದೆನಿಸಿದ್ದ ವನಿತೆ ಮನಸ್ಸು ಮಾಡಿದರೆ ನಾನೀನೆಂಬ ಅರಿವಿನ ದೊರೆಗಳ ಅನುಭಾವದ ಅರಸರ, ಅತ್ಯುನ್ನತ ಯೋಗಿಗಳ ಪ್ರಖರ ಪರೀಕ್ಷೆಯಲ್ಲಿಯೂ ಯಶಸ್ವಿಯಾಗಬಲ್ಲಳೆಂಬುದಕ್ಕೆ ಶೂನ್ಯ ಸಂಪಾದನೆಯಲ್ಲಿ ಬರುವ ಅಕ್ಕಗಳ ಸಂಪಾದನೆ ಸಾಕ್ಷಿ!

ಈ ಚಿದ್ವಿಲಾಸಪೂರ್ಣ ಅಲ್ಲಮ–ಅಕ್ಕಮಹಾದೇವಿಯರ ಸಂವಾದವನ್ನು ಇಡಿಯಾಗಿಯೇ ಉದ್ಧರಿಸಬೇಕು. ಅದನ್ನು ಸಂಗ್ರಹಿಸುವ ಪ್ರಯತ್ನ ವ್ಯರ್ಥಪರಿಶ್ರಮ. ಮೇಲಾಗಿ, ಮೂಲಕ್ಕೆ ಅಪಚಾರವೆಸಗದ ರೀತಿಯಲ್ಲಿ ಅದನ್ನು ಸಂಗ್ರಹಿಸುವುದೂ ಅಸಾಧ್ಯ. ಪ್ರಭು ಉದ್ದೇಶಪೂರ್ವಕವಾಗಿಯೇ ಲೌಕಿಕದಲ್ಲಿ ಅಕ್ಕನ ಬಗೆಗೆ ಹುಟ್ಟಿರಬಹುದಾದ ತಪ್ಪು ಕಲ್ಪನೆಗಳು ಕರಗಿ ಹೋಗುವ ರೀತಿಯಲ್ಲಿ, ಅಕ್ಕನ ಅಂತರಂಗದ ಉಜ್ವಲತೆ, ಅರಿವಿನ ಹಿರಿಮೆ, ಅನುಭಾವದ ಅತ್ಯುನ್ನತಿಗಳು ಸ್ಫುಟವಾಗಿ ಪ್ರಕಟಗೊಳ್ಳುವ ರೀತಿಯಲ್ಲಿ ಈ ಪರೀಕ್ಷೆಯನ್ನು ನಡೆಸಿರುವ ಕಾರಣ ಈ ಸಂವಾದ ಅಕ್ಕನ ಬಾನೆತ್ತರದ ವ್ಯಕ್ತಿತ್ವದ ನೈಜಚಿತ್ರಣದ ದೃಷ್ಟಿಯಿಂದಲೂ ಸಂಗ್ರಹಾತೀತವಾದುದು.

ಪ್ರಭುವಿನ ಪ್ರಾರಂಭದ ಪ್ರಶ್ನೆಯೇ ಎಂಥವರನ್ನೂ ಅಪ್ರತಿಭರನ್ನಾಗಿ ಮಾಡುವ ಪ್ರಶ್ನೆ:

"ಉದಮದದ ಯೌವನವನೊಳಕೊಂಡ ಸತಿ ನೀನು
ಇತ್ತಲೇಕೆ ಬಂದೆಯವ್ವಾ?
ನಿನ್ನ ಪತಿಯ ಕುರುಹ ಹೇಳಿದರೆ ಬಂದು ಕುಳ್ಳಿರು;
ಅಲ್ಲದಿರೆ ತೊಲಗು ತಾಯೆ!

ನಮ್ಮ ಗುಹೇಶ್ವರನ ಶರಣರಲ್ಲಿ ಸಂಗಸುಖಸನ್ನಿಹಿತವ ಬಯಸುವರೆ
ನಿನ್ನ ಪತಿ ಯಾರೆಂಬುದು ಹೇಳಾ, ಎಲೆ ಅವ್ವಾ!"

ಈ ಕಂಗೆಡಿಸುವ ಪ್ರಶ್ನೆಗೆ ಅಧೀರಳಾಗದೇ ಉತ್ತರವಿತ್ತಳು ಅಕ್ಕ:
"ಹರನೇ ನೀನೆನಗೆ ಗಂಡನಾಗಬೇಕೆಂದು
ಅನಂತಕಾಲ ತಪಸ್ಸಿದ್ದೆ ನೋಡಾ!
ಹಸೆಯ ಮೇಲಣ ಮಾತು ಬೆಸಗೊಳಲಟ್ಟಿದಡೆ
ಶಶಿಧರನ ಹತ್ತಿರಕೆ ಕಳುಹಿಸಿದರೆಮ್ಮವರು
ಭಸ್ಮವನೆ ಹೂಸಿ, ಕಂಕಣವನೆ ಕಟ್ಟಿದರು–
ಚೆನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು."

ಹರನಿಗೇ ನರಪುತ್ರಿಯರನು ಧಾರೆಯೆರೆದರೆ? ಯಾರು?
"ಗುರುವೇ ತೆತ್ತಿಗನಾದ,
ಲಿಂಗವೇ ಮದುವಣಿಗನಾದ,
ನಾನೆ ಮದುವಳಿಗೆಯಾದೆನು
ಈ ಭುವನವೆಲ್ಲವರಿಯಲು
ಅಸಂಖ್ಯಾತರೆನಗೆ ತಾಯಿ ತಂದೆಗಳು
ಕೊಟ್ಟರು ಸಾಧೃಶ್ಯವಪ್ಪ ವರನ ನೋಡಿ
ಇದು ಕಾರಣ, ಚೆನ್ನಮಲ್ಲಿಕಾರ್ಜುನನೆ ಗಂಡನೆನಗೆ;
ಮಿಕ್ಕಿನ ಲೋಕದವರೆನಗೆ ಸಂಬಂಧವಿಲ್ಲವಯ್ಯಾ, ಪ್ರಭುವೆ!"

ಈ ಅಪೂರ್ವ ವಿವಾಹ ಅಪೂರ್ವವಾಗಿಯೇ ಜರುಗಿರಬಹುದಲ್ಲವೆ?
"ಪಚ್ಚೆಯ ನೆಲಗಟ್ಟು ಕನಕದ ತೋರಣ
ವಜ್ರದ ಕಂಭ, ಹವಳದ ಚಪ್ಪರವನಿಕ್ಕಿ
ಮದುವೆಯ ಮಾಡಿದರು–
ಎಮ್ಮವರೆನ್ನ ಮದುವೆಯ ಮಾಡಿದರು
ಕಂಕಣ ಕೈದಾರ ಸ್ಥಿರ ಸೇಸೆಯನಿಕ್ಕಿ
ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು!"

ಇದೇನೋ ಸರಿ, ಆದರೆ–
"ತಪ್ಪ ಹೊರಿಸಿ ಹೊರಟಿಹೆಯೆಂಬುದು ಸತ್ಯವೆ?
ತನು ಸೀರೆಯನುಳಿದು ನಿರ್ವಾಣವಾದಲ್ಲಿ

ಮನದ ಭ್ರಾಂತು ನಿಶ್ಚಯವಾಗದು.
ಕೇಶವೆಂಬ ಸೀರೆ ಅಂಗಕ್ಕೆ ಮರೆಯಾಯಿತ್ತು
ಅಪಮಾನವೆಂತು ಹರಿಯಿತು?
ಅದು ಗುಹೇಶ್ವರ ಲಿಂಗಕ್ಕೆ ಸಲ್ಲದ ವೇಷ!"

ಅಕ್ಕನ ಚೊಕ್ಕ ಚಿನ್ನದಂತಹ ಉತ್ತರವಿದಕ್ಕೆ;
"ಕಾಯ ಕರ್ರನೆ ಕಂದಿದಡೇನಯ್ಯಾ?
ಕಾಯ ಮಿರ್ರನೆ ಮಿಂಚಿನದಡೇನಯ್ಯಾ?
ಅಂತರಂಗ ಶುದ್ಧವಾದ ಬಳಿಕ
ಚೆನ್ನಮಲ್ಲಿಕಾರ್ಜುನಯ್ಯಾ,
ನೀನೊಲಿದ ಕಾಯವು ಹೇಗಿದ್ದಡೇನಯ್ಯಾ?"

ಪ್ರಭುದೇವರ ಪಾಟೀ ಸವಾಲು:
"ದೇವನೊಲಿದ ನೀನೊಲಿದೆಯೆಂಬುದು ಅದಾವುದಕ್ಕ?
ಭಾವಶುದ್ಧವಾಧಲ್ಲಿ ಸೀರೆಯನುಳಿದು ಕೂದಲ ಮರಸಲೇತಕ್ಕೆ?
ಅದು ಅಂತರಂಗದ ನಾಚಿಕೆ ಬಾಹ್ಯದಲ್ಲಿ ತೋರಿತ್ತು!
ಅದು ಗುಹೇಶ್ವರಲಿಂಗಕ್ಕೆ ಒಪ್ಪದ ಮಾತು!"

ಇದಕ್ಕೆ ಮಹಾದೇವಿಯಕ್ಕನ ಮಾರ್ಮಿಕ ಉತ್ತರ:
"ಫಲ ಒಳಗೆ ಪಕ್ವವಾಗಿಯಲ್ಲದೆ ಹೊರಗಣ ಸಿಪ್ಪೆ ಒಪ್ಪಗೆಡದು
ಕಾಮನ ಮುದ್ರೆಯ ಕಂಡು ನಿಮಗೆ ನೋವಾದೀತೆಂದು
ಆ ಭಾವದಿಂದ ಮುಚ್ಚಿದೆ!
ಇದಕ್ಕೆ ನೋವೇಕೆ? ಕಾಡದಿರಣ್ಣಾ
ಚೆನ್ನಮಲ್ಲಿಕಾರ್ಜುನದೇವನ ಒಳಗಾದವಳ!"

ಅಕ್ಕನ ಉತ್ತರದಿಂದಲೇ ಇರುಕಿಗೆ ಸಿಕ್ಕಿಸುವ ಇನ್ನೊಂದು ಪ್ರಶ್ನೆ:
"ನೀ ದೇವರೊಳಗೋ ದೇವರು ನಿನ್ನೊಳಗೋ ಎಂಬ ಠಾವನರಿಯೆ.
ಸಿಪ್ಪೆ ಒಪ್ಪಗೆಟ್ಟಾಗ ಹಣ್ಣಿನ ರಸ ಕೊಳಕಾಯಿತ್ತು!
ಅದು ಗುಹೇಶ್ವರನಿಗೆ ಅರ್ಪಿತವಾಗದು!"

ಬೆಕ್ಕಸಗೊಳಿಸುವ ಪ್ರಶ್ನೆಯಿದಕ್ಕೆ ಅಕ್ಕನು ಲೀಲಾಜಾಲವಾಗಿಯೇ ಉತ್ತರವಿತ್ತಳು– ಕೇಳಿದ ಪ್ರಭುದೇವರೂ, ಸುತ್ತಣ ಶರಣ ಶರಣೆಯರೂ ಬೆರಗಾಗುವಂತೆ:

ಗುಣದೋಷವ ಸಂಪಾದನೆಯ ಮಾಡುವನ್ನಕ್ಕ
ಕಾಮದ ಒಡಲು, ಕ್ರೋಧದ ಗೊತ್ತು, ಲೋಭದ ಇಕ್ಕೆ,
ಮೋಹದ ಮಂದಿರ, ಮದದ ಆವರಣ, ಮತ್ಸರದ ಹೊದಿಕೆ !
ಆ ಭಾವವರತಲ್ಲದೆ ಚೆನ್ನಮಲ್ಲಿಕಾರ್ಜುನನ ಕೇಳುವುದಕಿಂಬಿಲ್ಲ!

ಕ್ರೋಧಾದಿಗಳೆಲ್ಲ ಕಾಮದ ಬಳ್ಳಿಯ ಕುಡಿಗಳೇ! ಮೊದಲು ಕಾಮ ಬಯಸುತ್ತದೆ: ಬಯಸಿದುದನ್ನು ಬೇಡುತ್ತದೆ. ಬಯಸಿದುದು ಸಿಕ್ಕರೆ ಇನ್ನಷ್ಟು ಬಯಸುತ್ತದೆ; ಬಯಸಿದುದು ಸಿಕ್ಕದಿದ್ದರೆ ಕ್ರೋಧ ಕಿಡಿಗೆದರುತ್ತದೆ; ಸಿಕ್ಕುತ್ತ ಹೋದಂತೆ ಲೋಭ ಹೆಚ್ಚುತ್ತ ಹೋಗುತ್ತದೆ: ಸಿಕ್ಕುದು ತನ್ನದೆಂಬ ಮೋಹ, ತನಗಿದ್ದುದು ಇನ್ನಾರಿಗೂ ಇಲ್ಲವೆಂಬ ಮದ, ತನಗಿದ್ದುದು ಅನ್ಯರಿಗೂ ದೊರೆತರೆ ಮತ್ಸರ–ಹೀಗೆ ಗರಿಗೆದರುತ್ತದೆ ಈ ಗರಗಸವಳ್ಳಿ! ಇಂಥ ಶನಿಸಂತಾನದ ತಾಯಿಯಾದ ಕಾಮದ ಬಲೆಯಿಂದ ತಪ್ಪಿಸಿಕೊಳ್ಳುವುದು ಸುಲಭಸಾಧ್ಯವೆ? ಪ್ರಭುದೇವರಿದನ್ನು ಸುಲಭವಾಗಿ ಒಪ್ಪುವರೆ? ಕೇಳಿಯೇ ಬಿಟ್ಟರು:

"ಕಾಮದಿಂದ ಕಂಡ, ಕ್ರೋಧದಿಂದ ಅಸ್ತಿ, ಲೋಭದಿಂದ
ಸಕಲವಿಷಯಗಳು!
ಮೋಹದಿಂದ ನೋಡಿಹೆನೆಂಬುದೆಲ್ಲವು ಕಾಮನ ಬಲೆಯೊಳಗು!
ಕಾಮನ ಗೆದ್ದ ಠಾವಾವುದು ಹೇಳಾ ಗುಹೇಶ್ವರಲಿಂಗಕ್ಕೆ?

ಇದಕ್ಕೆ ಅಕ್ಕನ ಉತ್ತರ ಅವರಿವರಾದರೆ ನಿರುತ್ತರರಾಗುವಂಥ ಉತ್ತರ:
"ಕೆಂಡದ ಶವದಂತೆ, ಸೂತ್ರ ತಪ್ಪಿದ ಗೊಂಬೆಯಂತೆ
ಜಲವರತ ತಟಾಕದಂತೆ, ಬೆಂದ ನುಲಿಯಂತೆ
ಮತ್ತೆ ಹಿಂದಣಂಗ ಉಂಟೆ, ಅಣ್ಣಾ
ಚೆನ್ನಮಲ್ಲಿಕಾರ್ಜುನನಂಗವೆ ಆಶ್ರಯವಾದವಳಿಗೆ?"

ಅಂಗವೇ ಕಾಮದ ರಂಗ. ಅಂಗ ಲಿಂಗವಾದ ಬಳಿಕ ಕಾಮಕ್ಕೆಲ್ಲಿ ಸ್ಥಳ ಅಲ್ಲಿ? ಸಕೃದ್ದರ್ಶನಕ್ಕೆ ಸಮರ್ಪಕ ಉತ್ತರವೇ ಇದು. ಇನ್ನೊಬ್ಬರಾಗಿದ್ದರೆ ವಾದವನಿಲ್ಲಿಗೆ ನಿಲ್ಲಿಸಿ ಬಿಡುತ್ತಿದ್ದರೇನೋ. ಆದರೆ ಪ್ರಭುದೇವರು ಬಿಡುವರೇ? ಇಂಥ ಉತ್ತರದಲ್ಲಿಯೂ ಎಂಥ ಪ್ರಶ್ನೆಯನ್ನು ರೂಪಿಸಿರುವರು ನೋಡಿ:

"ರೂಪಿಂಗೆ ಕೇಡುಂಟು, ನಿರೂಪಿಂಗೆ ಕೇಡಿಲ್ಲ!
ರೂಪ ನಿರೂಪವನೊಡಗೂಡುವ ಪರಿ ಎಂತು ಹೇಳಾ?
ಅಸಂಬಂಧ ಸಂಬಂಧವಾಗಿ ಇದೆ!

ದೇಹ ಇಂದ್ರಿಯವೆಂಬ ಜಾತಿ ಸೂತಕವಿರಲು
ಗುಹೇಶ್ವರಲಿಂಗವ ಮುಟ್ಟಬಾರದು ಕೇಳವ್ವಾ!"
ರೂಪು ನಿರೂಪವನೊಡಗೂಡುವ ಪರಿ ಎಂತು? ಮೂಲಭೂತ ಪ್ರಶ್ನೆಯಿದು!"

ಇದಕ್ಕೆ ಇಷ್ಟೇ ಮೂಲಭೂತವಾದ ಉತ್ತರವನ್ನಿತ್ತಿದ್ದಾಳೆ, ಅಕ್ಕಮಹಾದೇವಿ:
"ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲರೆ
ಹಾವಿನ ಸಂಗವೆ ಲೇಸು ಕಂಡಯ್ಯಾ;
ಕಾಯದ ಸಂಗವ ವಿವರಿಸಬಲ್ಲರೆ
ಕಾಯದ ಸಂಗವೆ ಲೇಸು ಕಂಡಯ್ಯ!
ತಾಯಿ ರಕ್ಕಸಿಯಾದಂತೆ ಕಾಯವಿಕಾರವು!
ಚೆನ್ನಮಲ್ಲಿಕಾರ್ಜುನಯ್ಯಾ,
ನೋನೊಲಿದವರ ಕಾಯಗೊಂಡಿದ್ದರೆನಬೇಡ!"

ಇದೇನೋ ಸರಿ, ಕಾಯದ ಸಂಗವ ವಿವರಿಸಬಲ್ಲರೆ ಕಾಯದ ಸಂಗವೇ ಲೇಸು! ಆದರೆ ತನುಗುಣವ ವಿವರಿಸುವುದೇನು ಹುಡುಗಾಟವೆ?
"ತನುಗುಣವ ವಿವರಿಸಿಹೆನೆಂದರೆ ಮನಶುದ್ಧವಾಗಬೇಕು;
ಮನದ ಗುಣವ ವಿವರಿಸಿಹೆನೆಂದರೆ ಇಂದ್ರಿಯ ಶುದ್ಧವಾಗಬೇಕು;
ತನು ಮನ ಇಂದ್ರಿಯಂಗಳು ಶುದ್ಧ ಸುಯಿದಾನಿಯಾಗಿ
ಲಿಂಗಮುಖಕ್ಕೆ ವೇದ್ಯವಾದಲ್ಲದೆ
ಗುಹೇಶ್ವರನ ಬೆಸಗೊಳಬಾರದು ಕೇಳಾ, ತಾಯೆ!"

ಮೊದಲೇ ಸಿದ್ಧವಿತ್ತೇನೊ ಮಹಾದೇವಿಯಕ್ಕನ ಉತ್ತರ! ಕೂಡಲೆ ಉತ್ತರಿಸುತ್ತಾಳೆ;
ತನು ಶುದ್ಧವಾಗಿತ್ತು ಶಿವಭಕ್ತರೊಕ್ಕುದ ಕೊಂಡು; ಎನ್ನ
ಮನ ಶುದ್ಧವಾಗಿತ್ತು ಅಸಂಖ್ಯಾತರ ನೆನೆದು; ಎನ್ನ
ಕಂಗಳು ಶುದ್ಧವಾಗಿತ್ತು ಸಕಲಪುರಾತನರ ನೋಡಿ; ಎನ್ನ
ಶ್ರೋತ್ರ ಶುದ್ಧವಾಗಿತ್ತು ಅವರ ಕೀರ್ತಿಯ ಕೇಳಿ! ಎನ್ನ
ಘ್ರಾಣ ಶುದ್ಧವಾಗಿತ್ತು ನಿಮ್ಮ ಪಾದಾರ್ಪಿತ ಪರಿಮಳ ವಾಸಿಸಿ, ಎನ್ನ
ಜಿಹ್ವೆ ಶುದ್ಧವಾಗಿತ್ತು ನಿಮ್ಮ ಶರಣರೊಕ್ಕುದ ಕೊಂಡೆನಾಗಿ;
ಭಾವನೆಯೆನಗಿದು ಜೀವನವು ಕೇಳಾ, ಲಿಂಗತಂದೆ!
ನೆಟ್ಟನೆ ನಿಮ್ಮುವ ಮನಮುಟ್ಟಿ ಪೂಜಿಸಿ ಭವಗೆಟ್ಟೆನು ಕಾಣಾ
ಚೆನ್ನಮಲ್ಲಿಕಾರ್ಜುನಾ!"

ಇನ್ನೂ ಕೇಳುವುದಿದೆ, ಪ್ರಭುದೇವರಿಗೆ:

"ಕೂಡಲಿಲ್ಲದ ಘನವ ಕೂಡುವ ಪರಿ ಎಂತವ್ವ?
ಹೇಳಿದರೆ ಅದಕ್ಕದೆ ಕೊರತೆ!
ಗುಹೇಶ್ವರಲಿಂಗವ ಬೇರೆಮಾಡಿ
ಬೆರೆಸುವ ಪರಿ ಎಂತು ಹೇಳಾ?"

ಇದಕ್ಕೂ ಉತ್ತರ ಸಿದ್ಧವಿದೆ ಅಕ್ಕನದು:

"ಗಟ್ಟಿದುಪ್ಪ ತಿಳಿದುಪ್ಪಕ್ಕೆ ಹಂಗುಂಟೆ, ಅಯ್ಯಾ?
ದೀಪಕ್ಕೆ ದೀಪ್ತಿಗೆ ಭೇದ ಉಂಟೆ, ಅಯ್ಯಾ?
ಅಂಗಕ್ಕೆ ಆತ್ಮಕ್ಕೆ ಭಿನ್ನ ಉಂಟೆ, ಅಯ್ಯಾ?
ಎನ್ನಂಗವನು ಶ್ರೀಗುರು ಮಂತ್ರವ ಮಾಡಿ ತೋರಿದನಾಗಿ
ಸಾವಯ ನಿರವಯಕ್ಕೆ ಭಿನ್ನವಿಲ್ಲವಯ್ಯಾ;
ಚೆನ್ನಮಲ್ಲಿಕಾರ್ಜುನದೇವರ ಬೆರಸಿ ಮತಿಗೆಟ್ಟವಳ
ಏತಕ್ಕೆ ನುಡಿಸುವಿರಯ್ಯ, ಪ್ರಭುವೆ?"

ಇಲ್ಲಿಯೂ ಇನ್ನೊಂದು ಪ್ರಶ್ನೆಗೆ ಎಳೆ ಸಿಕ್ಕಿತು, ಪ್ರಧುದೇವರಿಗೆ. ಬೆರಸಿ ಮತಿಗೆಟ್ಟುದೇ ನಿಜವಾದರೆ ಈ ಮಾತಿನ ಮಾಲೆಯೇಕೆ? ಬೆರಸಿಲ್ಲವೆಂಬುದಕ್ಕೆ ಪುರಾವೆಯಾಗದೆ ಇದು?

"ನಾ ಸತ್ತೆನೆಂದು ಹೆಣ ಕೂಗಿದುದುಂಟೆ?
ಬೈಚಿಟ್ಟ ಬಯಕೆ ಕರೆದುದುಂಟೆ?
ಹೆಪ್ಪಿಟ್ಟ ಹಾಲು ಸಿಹಿಯಪ್ಪುದೆ?
ಈ ಮಾತು ಒಪ್ಪವಲ್ಲ, ಗುಹೇಶ್ವರಲಿಂಗಕ್ಕೆ!"

ಪ್ರಭು 'ಒಪ್ಪವಲ್ಲ' ಎಂದಾಕ್ಷಣ ಒಪ್ಪುವಳೆ ಅಕ್ಕ? ಹೇಗೆ ಅದು ಒಪ್ಪವಾದುದೆಂಬುದನ್ನು ಸಿದ್ಧಮಾಡಿಯೇ ತೋರಿಸಿದಳು:

"ಸತ್ತ ಹೆಣ ಕೂಗಿದುದುಂಟು;
ಬೈಚಿಟ್ಟ ಬಯಕೆ ಕರೆದುದುಂಟು;
ಹೆಪ್ಪಿಟ್ಟ ಹಾಲು ಸಿಹಿಯಾದುದುಂಟು;
ಇದ ನಿಶ್ಚೈಸಿ ನೋಡಿ, ಚೆನ್ನಮಲ್ಲಿಕಾರ್ಜುನ ದೇವರಲ್ಲಿ!"
"ಇದು ಎನಗೆ ಆಶ್ಚರ್ಯ!
ಹೇಳವ್ವಾ, ಕಾಯವಿಲ್ಲದ ಸುಖವ, ಜೀವವಿಲ್ಲದ ಭವವ
ಅದಾವ ಹೇಳಾ, ಗುಹೇಶ್ವರ ಲಿಂಗಕ್ಕೆ!"

ಮರೆದೊರಗಿ ಕನಸ ಕಂಡು ಹೇಳುವಲ್ಲಿ
ಸತ್ತ ಹೆಣ ಎದ್ದಿತ್ತು;
ತನ್ನ ಋಣ ನಿಧಾನ ಎದ್ದು ಕರೆಯಿತ್ತು;
ಹೆಪ್ಪಿಟ್ಟ ಹಾಲು ಗಟ್ಟಿತುಪ್ಪವಾಗಿ ಸಿಹಿಯಾಗಿತ್ತು
ಇದಕ್ಕೆ ತಪ್ಪಸಾಧಿಸಲೇಕೆ
ಚೆನ್ನಮಲ್ಲಿಕಾರ್ಜುನದೇವರ ದೇವನಣ್ಣಗಳಿರಾ?
"ಇದು ಲೇಸಾಯಿತ್ತು!...."

ಅಬ್ಬಾ, ಈ ಒಂದು ಒಪ್ಪಿಗೆಯ ಉಕ್ತಿಗಾಗಿ ಎಂಥ ಕಠಿಣ ಕಠೋರ ಪರೀಕ್ಷೆಯನ್ನು ಎದುರಿಸಬೇಕಾಯಿತು ಅಕ್ಕಮಹಾದೇವಿ! ಇದು ಲೇಸಾಯಿತ್ತು! ಎಂಬ ವಾಕ್ಯ ಪ್ರಭುದೇವರ ಶ್ರೀಮುಖದಿಂದ ಹೊರಟಾಗ ಅದುವರೆಗೆ ಉಸಿರುಗಟ್ಟುವಂತಿದ್ದ ಅನುಭವಮಂಪಟದ ವಾತಾವರಣದಲ್ಲಿ ಒಮ್ಮೆಗೆ ಮಲಯಜದ ಅಲೆಗಳು ಸುಳಿದಂತಾಗಿರಬೇಕು. ಅಕ್ಕನ ಧನ್ಯತೆಯ ಅನುಭವವಂತೂ ಸರಿಯೆ, ನೆರೆದ ಶರಣ ಶರಣೆಯರಿಗೂ ಹಿಂದೆ ಕೇಳದ, ಮುಂದೆ ಮರೆಯದ ಅಮರಸಂವಾದವೊಂದನ್ನು ಕೇಳಿ, ಕೃತಾರ್ಥತೆಯ ಅನುಭವ ಉಂಟಾಗಿರಬೇಕು; ಶರಣೆಯರಿಗಂತೂ ಹೆಮ್ಮೆ, ಹಿಗ್ಗು, ಹಿರಿಮೆಗಳ ತ್ರಿವಿಧಾನುಭವವು ಉಂಟಾಗಿರಬೇಕು.

ನಿಜಕ್ಕೂ ಇದೊಂದು ಸಂವಾದ ಮಾತ್ರವಲ್ಲ, ಹೆಣ್ಣಿನ ಗೌರವಗಂಗೆಯ ಪುಣ್ಯ ಪ್ರವಾಹ. ಇದು ಮುಗಿಯುತ್ತಿದ್ದಂತೆ ಶರಣ ಶರಣೆಯರು ಅಕ್ಕನ ಮೇಲೆ ಮೆಚ್ಚುಗೆಯ ಅಚ್ಚಮಲ್ಲಿಗೆಗಳ ಮಳೆಗರೆದರು.

"ಅಜಕಲ್ಪಕೋಟಿ ವರುಷದವರೆಲ್ಲರೂ ಹಿರಿಯರೆ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ?
ನಡು ಮುರಿದು, ಗುಡುಗೂರಿ, ತಲೆ ನಡುಗಿ, ನೆರೆ ತೆರೆ ಹೆಚ್ಚಿ, ಮತಿಗೆಟ್ಟು
ಒಂದನಾಡ ಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೆ?
ಅನುವನರಿದು, ಘನವ ಬೆರಸಿ, ಹಿರಿದು ಕಿರಿದೆಂಬ ಭೇದವ ಮರೆದು
ಕೂಡಲಚೆನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತ್ತು!"

ಎಂದು ಚೆನ್ನಬಸವಣ್ಣನವರು ಬಣ್ಣಿಸಿದರು.

"ಅಹುದಹುದು; ಮತ್ತೇನು? ಮರಹಿಂಗೆ ಹಿರಿದು ಕಿರಿದುಂಟಲ್ಲದೆ
ಅರಿವಿಂಗೆ ಹಿರಿದು ಕಿರಿದುಂಟೆ, ಹೇಳಯ್ಯಾ?
ಸಾವಂಗೆ ಭಯ ಉಂಟಲ್ಲದೆ ಅಜಾತಂಗೆ ಭಯ ಉಂಟೆ, ಹೇಳಯ್ಯಾ?

ಕಪಿಲಸಿದ್ಧ ಮಲ್ಲಿನಾಥನಲ್ಲಿ
ಮಹಾದೇವಿಯಕ್ಕನ ನಿಲವಿಂಗೆ
ಶರಣೆಂದು ಶುದ್ಧನಾದೆನು ಕಾಣಾ, ಚೆನ್ನಬಸವಣ್ಣಾ"

ಎಂದು ಸಿದ್ಧರಾಮಯ್ಯನವರು ಕೀರ್ತಿಸಿದರು.

"ಹೆಂಗೂಸಿನಂಗವ ನೋಡಿರೆ, ಪುರಾತನರು!
ಬಾಲತನದಂಗವ ನೀಡಿರೆ, ಪುರಾತನರು!
ಬ್ರಹ್ಮವನಾಚರಿಸಿ ತನ್ನ ಮರೆದಿಪ್ಪುದ ನೋಡಿರೆ, ಲಿಂಗವಂತರು!
ತನ್ನಲ್ಲಿ ತಾನೇ ನಿಶ್ಚಯವಾಗಿ
ಭಾಷೆ ಬೀಸರವೋಗದೆ ಇಪ್ಪ ಇರವು
ಕೂಡಲಸಂಗಮದೇವರಲ್ಲಿ ಮಹಾದೇವಿಯಕ್ಕಂಗಾಯಿತ್ತು!"

ಎಂದು ಬಸವಣ್ಣನವರು ಕೈವಾರಿಸಿದರು! ಪ್ರಭುದೇವರಾದಿಯಾಗಿ ಎಲ್ಲ ಶರಣ ಶರಣೆಯರೂ ಕೊಂಡಾಡಿದರು.

ನತಮಸ್ತಕಳಾಗಿ ನುಡಿದಳು ಅಕ್ಕಮಹಾದೇವಿ; "ಎನಗೇಕಯ್ಯಾ? ನಾ ಪ್ರಪಂಚಿನ ಪುತ್ಥಳಿ! ಬೆರಳು ತಾಳಹಣ್ಣ ಹಿಸುಕಿದರೆ ಮೆಲಲುಂಟೆ?... ಎನ್ನ ಭಕ್ತಿ ಬಸವಣ್ಣನ ಧರ್ಮ; ಎನ್ನ ಜ್ಞಾನ ಪ್ರಭುದೇವರ ಧರ್ಮ; ಎನ್ನ ಪರಿಣಾಮ ಚೆನ್ನಬಸವಣ್ಣನ ಧರ್ಮ. ಈ ಮೂವರೂ ಒಂದೊಂದ ಕೊಟ್ಟರೆನಗೆ ಮೂರು ಭಾವವಾಯಿತ್ತು. ಆ ಮೂರನೂ ನಿಮ್ಮಲ್ಲಿ ಸಮರ್ಪಿಸಿದ ಬಳಿಕ ಎನಗಾವ ಜಂಜಡವಿಲ್ಲ. ಚೆನ್ನಮಲ್ಲಿಕಾರ್ಜುನನ ನೆನಹಿನಲ್ಲಿ ನಿಮ್ಮ ಕರುಣದ ಶಿಶು ನಾನು!"

ಅಕ್ಕನ ವಿನಯಶ್ರೀ ಅವಳ ಆತ್ಮ ಶ್ರೀಗಿರಿಯ ಶಿಖರವಾಗಿ ಶೋಭಿಸಿತು; ನಾರಿಯ ಗೌರವ ಸಂಪಾದನೆಯ ಸಾಧನೆ ಸಿದ್ಧಿ ಶ್ರೀರೋಹಣಗಿರಿಯನ್ನೇರಿತು; ಬಸವಣ್ಣನ ಮಹಾನಾಯಕತ್ವದಲ್ಲಿ ಪ್ರಾರಂಭವಾಗಿದ್ದ ವನಿತಾವಿಮೋಚನೆಯ ಆಂದೋಲನಕ್ಕೆ ಯಶಸ್ಸಿನ ವರದಾನ ದೊರೆಯಿತು; ಮಹಿಳಾ ಸ್ವಾತಂತ್ರ್ಯ ಹಾಗೂ ನಾರೀ ಗೌರವಗಳು ಗಗನಕುಸುಮಗಳಾಗಿ ಉಳಿಯದೆ ಮನೆಮನೆಗಳಲ್ಲಿ ಮಂದಾರವಾಗಿ ಅರಳಿದವು.

ಇನ್ನುಳಿದುದು ಅಕ್ಕನ ಪರಮಾರ್ಥ ಸಾಧನೆಯ ಪಕ್ಷಿಪ್ರೇಕ್ಷಣ. ಅಕ್ಕ ತನಗಾಗಿ ಆರಿಸಿಕೊಂಡ ಪರಮಾರ್ಥಪಥ ಸತಿಪತಿಭಾವದ ಪಥ. ಅದರ ರಹಸ್ಯ ಇಂತಿದೆ:

"ಅಂಗವ ಲಿಂಗಮುಖಕ್ಕೆ ಅರ್ಪಿಸಿ ಅಂಗ ಅನಂಗವಾಯಿತ್ತು
ಮನವ ಅರಿವಿಂಗರ್ಪಿಸಿ ಮನ ಲಯವಾಯಿತ್ತು;

ಭಾವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು;
ಅಂಗ ಮನ ಭಾವವಳಿದ ಕಾರಣ ಕಾಯ ಅಕಾಯವಾಯಿತ್ತು;
ಎನ್ನ ಅಕಾಯಸುಖವ ಲಿಂಗ ಭೋಗಿಸುವನಾಗಿ
ಶರಣಸತಿ-ಲಿಂಗಪತಿಯಾದೆನು!
ಇದು ಕಾರಣ, ಚೆನ್ನಮಲ್ಲಿಕಾರ್ಜುನಯ್ಯನೆಂಬ ಗಂಡನ
ಒಳಹೊಕ್ಕು ಬೆರಸಿದೆನು!"

ಅಂಗ-ಮನ-ಭಾವ ಬಯಲಾಗಿ ಕಾಯ ಅಕಾಯವಾಗಬೇಕು! ಅಕಾಯಸುಖವ ಲಿಂಗಭೋಗಿಸಬೇಕು; ಹಿಂದಣಂಗ ಇಲ್ಲೆನಿಸಿ ಚೆನ್ನಮಲ್ಲಿಕಾರ್ಜುನನಂಗವೆ ಆಶ್ರಯವಾಗಬೇಕು. ಒಟ್ಟಿನಲ್ಲಿ ರೂಪು ನಿರೂಪಾಗಿ ಸಾವಯಕ್ಕೆ ನಿರವಯಕ್ಕೆ ಭೇದವಿಲ್ಲದಂತಾಗಿ, ಅಂಗವೇ ಲಿಂಗವಾಗಬೇಕು; ಶರಣಸತಿ ಲಿಂಗಪತಿಯನ್ನು ಒಳಹೊಕ್ಕು ಬೆರಸಬೇಕು. ಇದರ ಹಾದಿ ಹೀಗೆ:

"ಅಂಗ ಲಿಂಗವ ವೇಧಿಸಿ
ಅಂಗ ಲಿಂಗದೊಳಗಾಯಿತ್ತು!
ಮನ ಲಿಂಗವ ವೇಧಿಸಿ
ಮನ ಲಿಂಗದೊಳಗಾಯಿತ್ತು!
ಭಾವ ಲಿಂಗವ ವೇಧಿಸಿ
ಭಾವ ಲಿಂಗದೊಳಗಾಯಿತ್ತು!
ಚೆನ್ನಮಲ್ಲಿಕಾರ್ಜುನ
ನಿಮ್ಮ ಒಲುಮೆಯ ಸಂಗದಲ್ಲಿರ್ದು
ಸ್ವಯಲಿಂಗಿಯಾದೆನು!"

ಯಾವುದಕ್ಕೆ ಯಾವ ಲಿಂಗವೇಧಿಸಬೇಕು?
"ಅಂಗ ಕ್ರಿಯಾಲಿಂಗವ ವೇಧಿಸಿ
ಅಂಗ ಲಿಂಗದೊಳಗಾಯಿತು;
ಮನ ಅರಿವ ಬೆರಸಿ ಜಂಗಮಸೇವೆಯ ಮಾಡಿ
ಮನ ಜಂಗಮಲಿಂಗದೊಳಗಾಯಿತು;
ಭಾವ ಗುರುಲಿಂಗದೊಳಗೆ ಬೆರಸಿ, ಮಹಾಪ್ರಸಾದವ ಭೋಗಿಸಿ
ಭಾವ ಗುರುಲಿಂಗದೊಳಗಾಯಿತು;
ಚೆನ್ನಮಲ್ಲಿಕಾರ್ಜುನ, ನಿಮ್ಮ ಒಲುಮೆಯಿಂದ
ಸಂದಳಿದು ಸ್ವಯಲಿಂಗವಾದೆನಯ್ಯ, ಪ್ರಭುವೆ!"

ಇನ್ನೂ ವಿಶದೀಕರಣ ಬೇಕೆ?

"ಅಂಗದೊಳಗೆ ಅಂಗವಾಗಿ ಅಂಗ ಲಿಂಗೈಕ್ಯವ ಮಾಡಿದೆ;
ಮನದೊಳಗೆ ಮನವಾಗಿ ಮನ ಲಿಂಗೈಕ್ಯವ ಮಾಡಿದೆ;
ಭಾವದೊಳಗೆ ಭಾವವಾಗಿ ಭಾವ ಲಿಂಗೈಕ್ಯವ ಮಾಡಿದೆ;
ಅರಿವಿನೊಳಗೆ ಅರಿವಾಗಿ ಜ್ಞಾನ ಲಿಂಗೈಕ್ಯವ ಮಾಡಿದೆ;
ಕ್ರೀಗಳೆಲ್ಲವ ನಿಲಿಸಿ ಕ್ರಿಯಾತೀತವಾಗಿ
ನಿವೃತ್ತಿ ಲಿಂಗೈಕ್ಯವ ಮಾಡಿದೆ;
ನಾನೆಂಬುದ ನಿಲ್ಲಿಸಿ, ನೀನೆಂಬುದ ಕೆಡಿಸಿ
ಉಭಯ ಲಿಂಗೈಕ್ಯವ ಮಾಡಿದೆ!
ಚೆನ್ನಮಲ್ಲಿಕಾರ್ಜುನನೊಳಗೆ ನಾನಳಿದೆನಾಗಿ
ಲಿಂಗವೆಂಬ ಘನವು ಎನ್ನಲ್ಲಿ ಅಳಿಯಿತ್ತು ಕಾಣಾ ಬಸವಣ್ಣ!"

ಇದೊಂದು ಅಪ್ರತಿಮ ಪರಮಾರ್ಥಸಾಧನೆ. ತನ್ನ ಅಂಗ ತನ್ನ ಪಾಲಿಗೆ ನಿರಂಗವಾಗಿ, ಅವನಿಗೆ ಅಂಗವಾಗುವಂತೆಸಗುವ ಸಾಧನೆ ಸಾಮಾನ್ಯವಾದುದಲ್ಲ. ಇದು ಹೇಗೆ ಸಾಧ್ಯವೆನ್ನುವಿರಾ? ಕೇಳಿ:

"ಭಾವಿಸಿ ನೋಡಿದೊಡೆ ಅಂಗವಾಯಿತ್ತು;
ಅಂಗಗುಣವಳಿದ ಬಳಿಕ ನಿನಗಂಗವಾದೆ!
ಭಿನ್ನರುಚಿಯ ಬಿಟ್ಟು ಲಿಂಗರುಚಿಯಾದ ಬಳಿಕ
ಚೆನ್ನಮಲ್ಲಿಕಾರ್ಜುನನ ಕೊಂಡು ಸಾವ ಭಾಷೆ!"

ದೇಹಭಾವ ಉಳಿದಿರುವವರೆಗೆ ಮಾತ್ರ ದೇಹ; ದೇಹಭಾವವೇ ಇಲ್ಲವಾದಾಗ ಎಲ್ಲಿಯ ದೇಹ? ತನು–ಮನ–ಭಾವಗಳೆಲ್ಲ ಲಿಂಗಕ್ಕೆ ಅರ್ಪಿತವಾಗಿ ಲಿಂಗವಾಗಿರುವಾಗ, ಶರಣಸತಿಯ ಅಂಗಭೋಗಗಳನ್ನೆಲ್ಲ ಲಿಂಗವೇ ಭೋಗಿಸುವುದು ಅಳವಟ್ಟಾಗ, ಶರಣ ಸತಿಯು ಮಹಾಘನಲಿಂಗವು ತನಗನನ್ಯ ಪರಿಪೂರ್ಣವೆಂಬುದನ್ನು ಸ್ವಾನುಭವದ ದಿಕ್ಕಿನಿಂದ ಕಂಡುಕೊಂಡಾಗ, ಅಂಗಗುಣಗಳೆಲ್ಲ ಅಳಿದು ಶರಣಸತಿಯಂಗವೆ ಲಿಂಗಪತಿಯ ಅಂಗವಾಗಿ ಬಿಟ್ಟಾಗ ಲಿಂಗಾಂಗಸಂಯೋಗವೆಂಬುದೂ ಭಿನ್ನಭಾವನೆಯೇ ಸರಿ. ಅಂಗ ಭಾವವು ಅಳಿದು ಲಿಂಗವೆ ತಾನಾದಾಗ ಅರಿಯುವುದೆಂಬ ಮತ್ತು ಅರುಹಿಸಿಕೊಂಡಬುದೆಂಬ ಎಡೂ ಅಳಿದು ಹೋಗುವುದಾಗಿ ಆಗ ನಡೆವೆ ಲಿಂಗದ ಕೂಡೆ, ನುಡಿವೆ ಲಿಂಗದ ಕೂಡೆ? ಎಡೆವಿಡದೆ ಬರ್ಪ ವಿಷಯಾದಿ ಭೋಗವನೂಡುವೆ ಲಿಂಗಮುಖಗಳ್ಗೆ ಎಂಬುದೂ ಮಾಯವಾಗಿ,

"ಲಿಂಗಾಂಗಸಂಗ ಸಮರಸಸುಖದಲ್ಲಿ ಮನವೇದ್ಯವಾಯಿತು!
ನಿಮ್ಮ ಶರಣರ ಅನುಭಾವ ಸಂಗದಿಂದ

ಎನ್ನ ತನು–ಮನ–ಪ್ರಾಣಪದಾರ್ಥವ
ಗುರು–ಲಿಂಗ–ಜಂಗಮಕಿತ್ತು
ಶುದ್ಧ–ಸಿದ್ಧ–ಪ್ರಸಿದ್ಧ ಪ್ರಸಾದಿಯಾದೆನು!
ಆ ಮಹಾಪ್ರಸಾದದ ರೂಪ–ರುಚಿ–ತೃಪ್ತಿಯ
ಇಷ್ಟ–ಪ್ರಾಣ–ಭಾವಲಿಂಗಗಳಲ್ಲಿ ಸಾವಧಾನದಿಂದರ್ಪಿಸಿ
ಮಹಾಘನಪ್ರಸಾದಿಯಾದೆನು!
ಇಂತೂ ಸರ್ವಾಚಾರಸಂಪತ್ತು ಎನ್ನ ತನು ಮನ ವೇದ್ಯವಾಯಿತು.
ಇನ್ನೆಲ್ಲಿಯಯ್ಯ ಎನಗೆ ನಿಮ್ಮಲ್ಲಿ ನಿರವಯವು?
ಇನ್ನೆಲ್ಲಿಯಯ್ಯ ನಿಮ್ಮಲ್ಲಿ ಕೂಡುವುದು?"

ಎಂದು ಕೇಳುವಂತಾಗುತ್ತದೆ. ಈ ಸರ್ವಾಚಾರ ಸಂಪತ್ತು ಶೂನ್ಯಾಶೂನ್ಯ ಸ್ಥಿತಿಯ ಸಂಪಾದನೆ, ಚೆನ್ನಮಲ್ಲಿಕಾರ್ಜುನನೊಡನೆ ಅಭಿನ್ನತೆಯ ಸಿದ್ಧಿ, ಅಕ್ಕನ ಅಸದೃಶವಾದ ಪರಮಾರ್ಥಸಾಧನೆ, ಚೆನ್ನಮಲ್ಲಿಕಾರ್ಜುನನ ಕೊಂದು (ಕೊಂಡು?) ಸಾವ ಭಾಷೆಯನ್ನು ತೊಟ್ಟಿದ್ದ ಅಕ್ಕ ಅದನ್ನು ಪೂರೈಸಿ ಪರಮಾರ್ಥದ ಪ್ರಪಂಚದಲ್ಲಿಯೇ ತನ್ನದೊಂದು ಹೊಸ ವಿಕ್ರಮವನ್ನು ಮೆರೆದಳು. ಯಾವ ಧಾರ್ಮಿಕಾಚಾರ ವಿಚಾರಗಳಿಗೂ ಅನರ್ಹಳೆಂದೆನಿಸಿದ್ದ ಹೆಣ್ಣಿನ ಜನ್ಮವನ್ನೇ ತೊಟ್ಟು, ಸಾವಿರಾರು ವರ್ಷಗಳಿಂದ ಈ ವಿಷಯಗಳಲ್ಲಿ ಮುಂಚೂಣಿಯಲ್ಲಿದ್ದ ಪುರುಷರ ಗರ್ವಭಂಗವಾಗುವ ರೀತಿಯಲ್ಲಿ ಪರಮಾರ್ಥಸಾಧನೆ ಮಾಡಿ ಅಧ್ಯಾತ್ಮಲೋಕದಲ್ಲಿ ಅಜರಾಮರ ಸ್ಥಾನವನ್ನು ಪಡೆದಳು.

ಶ್ರೀ ಎಂ.ಆರ್.ಶ್ರೀ. ಅವರು ಉಲ್ಲೇಖಿಸಿದ ಅಕ್ಕನ ಈ ಮೂರು ಮಹಾಸಾಧನೆಗಳ ಜೊತೆಗೆ ಇನ್ನೊಂದು ಮಹತ್ಸಾಧನೆಯನ್ನೂ ಉಲ್ಲೇಖಿಸಲಬೇಕು. ಅದು ಆಕೆಯ ಸಾಹಿತ್ಯಕ ಸಾಧನೆ. ಇದೂ ಆಕೆಯ ಅಸಾಧಾರಣ ಸಾಧನೆಯೆಂಬುದು ನಿರ್ವಿವಾದವಾದುದು. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇದುವರೆಗೆ ಅಕ್ಕನ ಎತ್ತರ ಬಿತ್ತರಗಳನ್ನು ಸಾಧಿಸಿದ ಮಹಿಳೆಯೆಂದರೆ ಅವಳೊಬ್ಬಳೇ. ಇಷ್ಟೇ ಅಲ್ಲ, ಕೃತಿ ವೈವಿಧ್ಯ ಛಂದೋವೈವಿಧ್ಯಗಳ ದೃಷ್ಟಿಯಿಂದಲೂ ಅಕ್ಕನದು ಅದ್ಭುತ ಸಾಧನೆ. ಒಂದೊಂದೂ ಒಂದು ರತ್ನದಂತಿರುವ ಮುನ್ನೂರನಾಲ್ವತ್ತು (ಇನ್ನೂ ಹೆಚ್ಚಿವೆಯೆ? ಇರಬಹುದು!) ವಚನಗಳು, ಎಂದೆಂದಿಗೂ ಹಸಿರಾಗಿ ಉಳಿಯುವ 'ಯೋಗಾಂಗ ತಿವಿಧಿ', ಶ್ರೇಷ್ಠ ಶ್ರೇಣಿಯ ಸೃಷ್ಟಿಯ ವಚನ ಹಾಗೂ 'ಸ್ವರವಚನಗಳು' ಅಕ್ಕ ನಮಗೆ ಬಿಟ್ಟು ಹೋಗಿರುವ ಅಮೂಲ್ಯ ಆಸ್ತಿ. ಕರ್ನಾಟಕ ಕವಿಚರಿತ್ರೆಕಾರರು ಉಲ್ಲೇಖಿಸಿರುವ 'ಅಕ್ಕಗಳ ಪೀಠಿಕೆ' ಉಪಲಬ್ಧವಿಲ್ಲ. ಅದು ದೊರೆತರೆ ಈ ಆಸ್ತಿಯ ಅಮೂಲ್ಯತೆ ಇನ್ನೂ ಹೆಚ್ಚೀತು. ಕಾಲುಶತಮಾನಕ್ಕೂ ಕಡಿಮೆ ಕಾಲ ಬದುಕಿದ ಅಕ್ಕನಿಂದ ಇಷ್ಟೊಂದು ಶ್ರೇಷ್ಠತಮ ಸಾಹಿತ್ಯದ ಸೃಷ್ಟಿಯಾಗಿರುವುದು ಸೋಜಿಗಗಳಲ್ಲಿ ಸೋಜಿಗ 'ಅದೂ ಅಂತಿಂಥ ಸಾಹಿತ್ಯವಲ್ಲ, ವೈಶಿಷ್ಟ್ಯಪೂರ್ಣ, ವೈಶಿಷ್ಟ್ಯಪೂರ್ಣ ಸಾಹಿತ್ಯ!'

ಅಕ್ಕನ ಸಾಹಿತ್ಯವನದಲ್ಲಿ ವಿಹರಿಸುವ ಮೊದಲು ಅವಳ ಪೂರ್ವಸಿದ್ಧತೆ ಯಾವ ಬಗೆಯದೆಂಬುದನ್ನಿಷ್ಟು ನೋಡಬೇಕು. ಹೆಣ್ಣಿಗೆ ಹುಟ್ಟಿದೊಡನೆಯೇ ಬರುವ ಸೌಂದರ್ಯ ದೃಷ್ಟಿಗೆ ಪೋಷಕವಾಗಿ ಮಲೆನಾಡಿನ ಪ್ರಕೃತಿ ಸೌಂದರ್ಯದ ಸಾನ್ನಿಧ್ಯ ದೊರೆಯಿತು. ಅಕ್ಕನಿಗೆ. ಕನ್ನಡ ನುಡಿಯ ಬೆಡಗು ಬಿನ್ನಾಣಗಳು ಕರತಲಾಮಲಕವಾದುವು ಆಕೆಗೆ. ಚಿಕ್ಕಂದಿನಲ್ಲಿ ಗುರುಲಿಂಗದೇವನು, ಆಮೇಲೆ ಪ್ರಭುದೇವರು ಗುರುಗಳಾಗಿ ದೊರೆತರು; ನೀಲಮ್ಮ ತಾಯಿಯಾಗಿ, ಬಸವಣ್ಣ ತಂದೆಯಾಗಿ, ಅಸಂಖ್ಯಾತ ಶರಣ ಶರಣೆಯರು ಬಂಧು ಬಳಗವಾಗಿ ಲಭಿಸಿದರು; ಆತ್ಮಸಂಗಾತಕ್ಕೆ ಚೆನ್ನಮಲ್ಲಿಕಾರ್ಜುನ ಸಿಕ್ಕು ಸತಿಪತಿಭಾವದ ಪಥದದಲ್ಲಿ ಆಕೆಗೆ ಆಧ್ಯಾತ್ಮಿಕ ವಿರಹದ ನೂರು ಮುಖಗಳ ಪರಿಚಯ ಮಾಡಿಕೊಟ್ಟ; ಉಡುತಡಿಯಿಂದ ಕಲ್ಯಾಣದ ವರೆಗೆ ಕಲ್ಯಾಣದಿಂದ ಕದಳಿಯ ವನದವರೆಗೆ ಕೈಕೊಂಡ ಪ್ರವಾಸದಲ್ಲಿ ಪಶುಪಕ್ಷಿ ವಲ್ಲಿ ವೃಕ್ಷಗಳಿಂದ ಸುಜನ ಕುಜನರ ವರೆಗೆ ಚರಾಚರ ಸೃಷ್ಟಿಯ ಶ್ರೀಕರತೆ ಭೀಕರತೆಗಳೆರಡರ ವಿರಾಡ್ರೂಪ ದರ್ಶನವಾಯಿತವಳಿಗೆ; ಸ್ತುತಿನಿಂದೆಗಳನ್ನು ಹಿಗ್ಗು ಕುಗ್ಗುಗಳಿಲ್ಲದೆ ಸ್ವೀಕರಿಸುವ ಸಮತೆ, ಸ್ತಿಮಿತತೆ, ಸಮಾಧಾನಿತ್ವಗಳು ಅವಳವಾದುವು; ನಾಮದಲ್ಲಿ ಹೆಂಗೂಸಾದರೇನು, ಭಾವಿಸಲು ಗಂಡುರೂಪು ಎನ್ನುವ ಗಂಡುತನ, ಎಲ್ಲಿ ಹೋದರೂ ಕಲಿಗೆ ಭಯವಿಲ್ಲ, "ಹಂದೆಗೆ ಸುಖವಿಲ್ಲ ಕೇಳಿರಣ್ಣ! ಎಂದು ಸಾರುವ, "ಕಳನೇರಿ ಇಳಿವುದು ವೀರಂಗೆ ಮತವಲ್ಲ, ಶಿವಶರಣಂಗೆ ಹಿಮ್ಮೆಟ್ಟುವುದು ಪಥವಲ್ಲ ಎಂದು ಘೋಷಿಸುವ ಕೆಚ್ಚೆದೆ ಅಳವಟ್ಟುವು, "ಅಘಟಿತ–ಘಟಿತನ ಒಲವಿನ ಶಿಶು ಕಟ್ಟಿದೆನು ಜಗಕ್ಕೆ ಬಿರುದನು! ಕಾಮ–ಕ್ರೋಧ–ಲೋಭ–ಮೋಹ–ಮದ–ಮತ್ಸರಂಗಳಿಗೆ ಇಕ್ಕಿದೆನು ಕಾಲಲ್ಲಿ ತೊಡರನು! ಗುರುಕೃಪೆಯೆಂಬ ತಿಗುರನಿಕ್ಕಿ, ಮಹಾ ಶರಣೆಂಬ ತಿಲಕವನಿಕ್ಕಿ, ಶಿವಶರಣೆಂಬ ಅಲಗಕೊಂಡು ನಿನ್ನ ಕೊಲುವೆ, ಗೆಲುವೆ! ಬಿಡಿಬಿಡು ಕರ್ಮವೇ, ನಿನ್ನ ಕೊಲ್ಲದೆ ಮಾಣೆನು! ಕೆಡಹಿಸಿಕೊಳ್ಳದೆನ್ನ ನುಡಿ ಕೇಳಾ. ಕೆಡದ ಶಿವಶರಣೆಂಬ ಅಲಗನೆ ಕೊಂಡು ನಿನ್ನ ಕೊಲುವೆ, ಗೆಲುವೆ ನಾನು! ಬ್ರಹ್ಮಪಾಶವೆಂಬ ಕಳನನೆ ಸವರಿ, ವಿಷ್ಣುಮಾಯೆಯೆಂಬ ಎಡಗೋಲ ನೂಕಿ, ಎನ್ನೊಡೆಯ ಚೆನ್ನಮಲ್ಲಿಕಾರ್ಜುನಯ್ಯ, ತಲೆದೂಗಲಿ ಕಾದುವೆ ನಾನು ಎಂದು ಉಗ್ಘಡಿಸುವ ಕಲಿತನ ಕೈಸಾರಿತು. ಹೀಗೆ ಸತಿಭಾವದ ಕುಸುಮ ಕೋಮಲತೆ, ವೀರವಿರತಿಯ ವಜ್ರ ಕಠೋರತೆಗಳೆರಡೂ ಹಾಸು ಹೊಕ್ಕಾಗಿ ಹೆಣೆದು ಕೊಂಡಿವೆ, ಅಕ್ಕನ ಸಾಹಿತ್ಯದಲ್ಲಿ! ಜೀವನದ ಋಜುತೆ ವಕ್ರತೆಗಳೆರಡನ್ನೂ ಜೀವಿಗಳ ಮಾನವೀಯತೆ ದಾನವತೆಗಳೆರಡನ್ನೂ ನಿಸರ್ಗದ ಶಂಕರತೆ ಭಯಂಕರತೆಗಳೆರಡನ್ನೂ ಕಣ್ಣಾರೆ ಕಂಡಿದ್ದ ಅಕ್ಕ ಎಳೆಬಾಳೆ ಸುಳಿಯಂಥ ಕೋಮಲತೆಯನ್ನೂ ಕುಸುರಿಬಲ್ಲಳು, ಕಠಣತಮತೆಯನ್ನೂ ಕಂಡರಿಸಬಲ್ಲಳು.

ಸತಿಪತಿಭಾವದ ವಚನಗಳನ್ನು ಬರೆದಿರುವವರಲ್ಲಿ ಬಸವಣ್ಣ, ಉರಿಲಿಂಗದೇವರು ಗಜೇಶ ಮಸಣಯ್ಯಾದಿಗಳು ಅಗ್ರಗಣ್ಯರು, ಆದರೆ ಅವರು ಎಷ್ಟೆಂದರೂ ಪುರುಷರು. ಶರಣಸತಿತ್ವದ ಸಾಧನೆಯಲ್ಲಿ ಹೆಣ್ಣುಹೃದಯವನ್ನು ಹುಟ್ಟಿಸಿಕೊಂಡು ಹೆಣ್ಣಿನ ಭಾವನೆಗಳಿಗೆ

ಬಣ್ಣನೆಯ ಬಣ್ಣವಿತ್ತವರು. ಆದರೆ ಅಕ್ಕನ ಸತಿಪತಿಭಾವ ಸಹಜಸುಂದರವಾದುದು; ಅಪ್ರಯತ್ನಿತವಾದುದು; ಸ್ವತಃ ಸ್ಫೂರ್ತವಾದುದು; ಅದಮ್ಯವಾದುದು. ಅಂತೆಯೇ ಆಕೆಯ ಸತಿಪತಿಭಾವದ ವಚನಗಳಲ್ಲಿ ಅನನುಕರಣೀಯವಾದ ಹೃದ್ಯತೆಯಿದೆ. ಅನನ್ಯತೆಯಿದೆ, ಅನುಮಪತೆಯಿದೆ. ಈ ಭಾವಕ್ಕೆ ಆಕೆಯ ಸಂವೇದನಾಶೀಲ ಹೃದಯ ಸಂಪೂರ್ಣವಾಗಿ ಸ್ಪಂದಿಸಿರುವುದರಿಂದ, ಅಕೃತಕವಾಗಿ ಅನಿಬದ್ಧವಾಗಿ ಅನಿರುದ್ಧವಾಗಿ ಸ್ಪಂದಿಸಿರುವುದರಿಂದ ಈ ವಚನಗಳಿಗೆ ಎಲ್ಲಿಲ್ಲದ ವಿಶೇಷತೆ, ವಿನೂತನತೆ, ಅಪೂರ್ವತೆಗಳು ಒದಗಿವೆ.

"ಅರಿಸಿನವನೆ ಮಿಂದು, ಹೊಂದೊಡಿಗೆಯನೆ ತೊಟ್ಟು,
ದೇವಾಂಗವನುಟ್ಟು ಪುರುಷ ಬಾರಾ, ಪುಣ್ಯರತ್ನವೇ ಬಾರಾ!
ನಿನ್ನ ಬರವೆನ್ನುಸವಿನ ಬರವು ಬಾರಯ್ಯಾ!
ಚೆನ್ನಮಲ್ಲಿಕಾರ್ಜುನಯ್ಯಾ ಬಂದಾನೆಂದು
ಬಟ್ಟೆಗಳ ನೋಡಿ ಬಾಯಾರುತ್ತಿಹೆನು!
ಕಳವಳದ ಮನವು ತಲೆಕೆಳಗಾದುದವ್ವ!
ಸುಳಿದು ಬೀಸುವ ಗಾಳಿ ಉರಿಯಾಯಿತವ್ವ!
ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ!
ಹೊಳಲಸುಂಕಿಗನಂತೆ ತೊಳಲುತ್ತಿದ್ದೆನವ್ವ!
ತಿಳುಹೌ ಬುದ್ಧಿಯ ! ಹೇಳಿ ಕರೆತಾರೆಲೆಗವ್ವ!
ಚೆನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವ!"
"ಎರೆಯಂತೆ ಕರಕರಗಿ, ಮಳಲಂತೆ ಜರಿಜರಿದು,
ಕನಸಿನಲಿ ಕಳವಳಿಸಿ ಆನು ಬೆರಗಾದೆ!
ಅವುಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ!
ಆಪತ್ತಿಗೆ ಸಖಿಯರ ನಾನಾರುವನು ಕಾಣೆ!
ಅರಸಿ ಕಾಣದ ತನುವ, ಬೆರಸಿ ಕೂಡದ ಸುಖವ
ಎನಗೆ ನೀ ಕರುಣಿಸು, ಚೆನ್ನಮಲ್ಲಿಕಾರ್ಜುನ!

ಇಂಥ ಭಾವ ಅಪೂರ್ವವೇನಲ್ಲವಾದರೂ ಇಲ್ಲಿನ ಭಾಷಾಸೌಂದರ್ಯ, ಅನುಪ್ರಾಸಗಳ ಅನುರಣನಕ್ಷಮತೆ, 'ಬಟ್ಟೆಗಳ ನೋಡಿ ಬಾಯಾರುವೆ' ಎಂಬು ಪದಪುಂಜದಲ್ಲಿರುವ ಚಿತ್ರಕತೆ, 'ಹೊಳಲ ಸುಂಕಿಗನ ಹೊಸ ಹೋಲಿಕೆ', ಎರೆಯಂತೆ ಕರಕರಗಿ, ಮಳಲಂತೆ ಜರಿಜರಿದು ಎಂಬಲ್ಲಿಯ ಸಾಮತಿಯ ಸಮುಚಿತತೆ, ಅರಸಿ ಕಾಣದ ತನುವ, ಬೆರಸಿ ಕೂಡದ ಸುಖವ ಎಂಬಲ್ಲಿಯ ಅನುಭಾವಸೂಕ್ಷ್ಮತೆಗಳು ಈ ವಚನಗಳ ಮೇಲೆ ವಿಶೇಷತೆಯ, ಅತಿಶಯತೆಯ ಮುದ್ರೆಯೊತ್ತಿವೆ.

ಇದರಂತೆಯೇ, ಅಕ್ಕನು ತನ್ನಿನಿಯ ತನ್ನ 'ಮನವ ಮಾರುಗೊಂಡುದನ್ನೂ, ತನುವ ಸೂರೆಗೊಂಡುದನ್ನೂ, ಸುಖವನೊಪ್ಪುಗೊಂಡುದನ್ನೂ, ಇರವನಿಂಬುಗೊಂಡುದನ್ನೂ' ಬಣ್ಣಿಸವಾಗ, ಹಗಲಿನ ಕೂಟಕ್ಕೆ ಹೋರಿ ಬೆಂಡಾದುದನ್ನೂ, ಕನಸಿನಲ್ಲಿ ಮನಸಂಗವಾಗಿ ಮನಸಿನಲ್ಲಿ ಮೈಮರೆದು ಸಂಗವಾಗಿರ್ದುದನ್ನೂ, ಚೆನ್ನಮಲ್ಲಿಕಾರ್ಜುನನೊಪ್ಪಚ್ಚಿ ಕೂಡಿ ಕಣ್ತೆರದುದನ್ನೂ, ಕನಸು ಕಂಡು, ಕನಸಿನಲ್ಲಿ ಚಿಕ್ಕ ಚಿಕ್ಕ ಜಡೆಯ, ಸುಲಪಲ್ಲಗೊರವ ಬಂದು ನೆರೆದುದನ್ನೂ, ವಿರಹದುರಿ ಹೆಚ್ಚಾದಾಗ ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದುದನ್ನೂ ಏರಿಲ್ಲದ ಘಾಯದಲ್ಲಿ ನೊಂದುದನ್ನೂ 'ಬಿತ್ತರಿಸುವಾಗ' ಹಗಲು ನಾಲ್ಕು ಜಾವ ಅವನ ಕಳವಳದಲ್ಲಿಪ್ಪುದನ್ನೂ, ಇರುಳು ನಾಲ್ಕು ಜಾವ ಅವನ ವಿಕಳಾವಸ್ಥೆಯಲ್ಲಿಪ್ಪುದನ್ನೂ ಅವನ ಒಲುಮೆ ನಟ್ಟು ಹಸಿವು–ತೃಷೆ–ನಿದ್ರೆಯ ಮರೆದುದನ್ನೂ ಒರೆಯುವಾಗ, ಬಂದನೆಂದು ಬಟ್ಟೆಯ ನೋಡಿ, ಬಾರದಿದ್ದರೆ ಕರಗಿ ಕೊರಗಿದುದನ್ನೂ, ತಡವಾದರೆ ಬಡವಾದುದನ್ನೂ, ಚೆನ್ನಮಲ್ಲಿಕಾರ್ಜುನನು ಒಂದಿರುಳು ಆಗಲಿದರೆ ತೆಕ್ಕೆ ಸಡಲಿದ ಜಕ್ಕವಕ್ಕಿಯಂತಾದುದನ್ನೂ ಉಸಿರುವಾಗ, "ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದುದನ್ನೂ ಕೇಳುತ್ತ ಕೇಳುತ್ತಮೈಮರೆದೊರಗಿದುದನ್ನ ಹಾಸಿದ ಹಾಸಿಗೆಯ ಹಂಗಿಲ್ಲದ ಹೋದುದನ್ನೂ, ಕೊಡುವ ಕೂಟವ ಏನೆಂದರಿಯದೆ" ಮರೆದುದನ್ನೂ ಹೇಳುವಾಗ "ಕಾಮಿಸಿ ಕಲ್ಪಿಸಿ ಕಂದಿ ಕುಂದಿದುದನ್ನೂ, ಮೋಹಿಸಿ ಮುದ್ದಿಸಿ ಮರುಳಾದುದನ್ನೂ ತೆರೆಯದೆ ತೊರೆಯದೆ ನಲಿದು ನಂಬುದುದನ್ನೂ ಇಷ್ಟಾಗಿಯೂ ಅವನು "ಒಲ್ಲದೊಡೆ ಆನೇವೆನವವ!" ಎಂಬ ವ್ಯಾಕುಲವನ್ನೂ ವಿವರಿಸಿದಾಗ ಅಲ್ಲಲ್ಲಿ ಪೂರ್ವ ಪರಿಚಿತ ಸ್ವರ ಕೇಳಿದಂತೆನಿಸಬಹುದಾದರೂ ಎಲ್ಲೆಲ್ಲಿಯೂ ಚೆಲ್ಲವರಿದಿರುವ ಅಕ್ಕಮಹಾದೇವಿತನ ಇವುಗಳಿಗೆಲ್ಲ ಹೊಸ ಹೊಗರನ್ನು ನೀಡಿದೆಯೆಂದು ನಿರ್ಭಯವಾಗಿ ಹೇಳಬಹುದು.

ಅದೇ ಈ ಕೆಳಗಣ ವಚನಗಳಿಗೆ ಬಂದಾಗ ಅಕ್ಕನ ಸ್ವೋಪಜ್ಞತೆಯ ಹಕ್ಕಿ ಗರಿಗೆದರಿ ಹಾರುತ್ತಿರುವುದನ್ನು ಕಾಣುತ್ತೇವೆ.

"ಬಂಜೆ ಬೇನೆಯನರಿವಳೆ?
ಬಲದಾಯಿ ಮದ್ದ ಬಲ್ಲಳೆ!
ನೊಂದ ನೋವ ನೋಯದವರೆತ್ತ ಬಲ್ಲರು?
ಚೆನ್ನಮಲ್ಲಿಕಾರ್ಜುನನಿರಿದಲಗು ಒಡಲಲ್ಲಿ ಮುರಿದು
ಹೊರಳುವೆನ್ನಳಲನು ನೀವೆತ್ತ ಬಲ್ಲಿರೇ ಎಲೆ ತಾಯಿಗಳಿರಾ!"
"ಬಲ್ಲಿದನ ಹಗೆಯವ ತೆಗೆವನ್ನಬರ
ಬಡವನ ಹರಣ ಹೋದ ತೆರನಂತಾಯಿತ್ತು
ನೀ ಕಾಡಿ ಕಾಡಿ ನೋಡುವನ್ನಬರ!
ಎನಗಿದು ವಿಧಿಯೇ, ಹೇಳಾ?

ತೂರುವಾರುವನ್ನಬರ ಒಮ್ಮೆ ಗಾಳಿಗೆ
ಹಾರಿಹೋದ ತೆರನಂತಾಯಿತ್ತು!
ಎನಗೆ ನೀನಾವ ಪರಿಯಲ್ಲಿ ಕರುಣಿಸುವೆಯ್ಯಯ್ಯಾ
ಚೆನ್ನಮಲ್ಲಿಕಾರ್ಜುನ?"
"ಮಚ್ಚು ಅಚ್ಚುಗವಾಗಿ ಒಪ್ಪಿದ ಪರಿಯ ನೋಡಾ!
ಎಚ್ಚಡೆ ಗರಿದೋರದಂತೆ ನಡವೇಕು!
ಅಪ್ಪಿದರೆ ಆಸ್ತಿಗಳು ನುಗ್ಗು ನುರಿಯಾಗಬೇಕು!
ಬೆಚ್ಚಡೆ ಬೆಸುಗೆಯನರಿಯದಂತಿರಬೇಕು!
ಮಚ್ಚು ಒಪ್ಪಿತ್ತು ಚೆನ್ನಮಲ್ಲಿಕಾರ್ಜುನಯ್ಯನ ಸ್ನೇಹ!"

ಇಂಥ ವಿರಳ ವಿಚನಗಳ ಅವಿರಳ ಕಾಂತಿಯಿಂದ ಸಂತೃಪ್ತರಾಗಿ ಮುಂದುವರಿದಾಗ, ನೂರು ಚಾರುಭಾವಗೀತೆಗಳ ಸತ್ವಸಾರವನ್ನೊಳಕೊಂಡಿರುವಂತೆ ತೋರುವ ಕೆಳಗಣ ವಚನಗಳು ಕಂಗೊಳಿಸಿ ಮೂಕವಿಸ್ಮಿತರನ್ನಾಗಿ ಮಾಡುತ್ತವೆ; ನಮ್ಮನ್ನು

"ಒಮ್ಮೆ ಕಾಮನ ಕಾಲ ಹಿಡಿವೆ;
ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ!
ಸುಡಲೀ ವಿರಹದವ!
ನಾನಾರಿಗೆ ಧೃತಿಗೆಡುವೆ?
ಚೆನ್ನಮಲ್ಲಿಕಾರ್ಜುನದೇವನೆನ್ನನೊಲ್ಲದ ಕಾರಣ
ಎಲ್ಲರಿಗೆ ಹಂಗಿತಿಯಾದೆನವ್ವಾ!"
"ಲೇಸು ಹಾಸು, ನೋಟವಾಭರಣ,
ಆಲಿಂಗನ ವಸ್ತ್ರ, ಚುಂಬನವಾರೋಗಣೆ
ಲಲ್ಲೆವಾತು ತಾಂಬೂಲ, ಲವಲವಿಕೆಯೇ ಅನುಲೇಪನವೆನಗೆ!
ಚೆನ್ನಮಲ್ಲಿಕಾರ್ಜುನನ ಕೂಟ ಪರಮಸುಖವವ್ವಾ!"

ತೋಡಿದಷ್ಟೂ ಅರ್ಥ ಚಿಮ್ಮುವ, ಧ್ಯಾನಿಸಿದಷ್ಟೂ ಭಾವಹೊಮ್ಮುವ ವಚನಗಳಿವು. ಅಂತೆಯೇ, "ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೇ? ನೀವು ಕಾಣಿರೇ? ಸರೋವರದೊಳಗಾಡುವ ಹಂಸೆಗಳಿರಾ, ನೀವು ಕಾಣಿರೇ, ನೀವು ಕಾಣಿರೇ? ಸರವೆತ್ತಿಪಾಡುವ ಕೋಗಿಲೆಗಳಿರಾ, ನೀವು ಕಾಣಿರೇ? ನೀವು ಕಾಣಿರೇ? ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೇ? ನೀವು ಕಾಣಿರೇ? ಗಿರಿಗಹ್ವರದೊಳ ಗಾಡುವ ನವಿಲುಗಳಿರಾ, ನೀವು ಕಾಣಿರೇ? ಚೆನ್ನಮಲ್ಲಿಕಾರ್ಜುನ ದೇವನೆಲ್ಲಿದ್ದಾನೆಂಬುದ ಬಲ್ಲಡೆ ನೀವು ಹೇಳಿರೇ!" ಎಂಬ ವಚನದಲ್ಲಿ ಅತ್ಯುತ್ಕಟತೆಯೊಂದನ್ನುಳಿದರೆ ಭಾವ ಹಳೆಯದೆಂದು ಹೇಳಬಹುದಾದರೂ ಕೆಳಗಣ ವಚನಕ್ಕೆ ಪ್ರತಿಯೆಲ್ಲಿ?

"ವನವೆಲ್ಲ ನೀವೆ;
ವನದೊಳಗಣ ದೇವತರುವೆಲ್ಲ ನೀವೆ;
ತರುವಿನೊಳಗಾಡುವ ಖಗಮೃಗವೆಲ್ಲ ನೀವೆ!
ಚೆನ್ನಮಲ್ಲಿಕಾರ್ಜುನ
ಸರ್ವಭರಿತನಾಗಿ ಎನಗೇಕೆ ಮುಖದೋರೆ?"

ಅಕ್ಕನ ಶರಣಸತಿತ್ವ ಸಾಧನೆ ಹೊಳೆವ ಕೆಂಜಡೆಗಳ ಮೇಲೆ ಎಳವೆಳುದಿಂಗಳು ಫಣಿಮಣಿ ಕರ್ಣಕುಂಡಲದವನಿಂದ ಪ್ರಾರಂಭಿಸಿ ಗಂಡ ಗಂಡರನೆಲ್ಲ ಹೆಂಡ ಹೆಂಡರಾಗಿ ಆಳುವ ಗರುವನ ವರೆಗೆ ತನ್ನ ಚೆನ್ನಮಲ್ಲಿಕಾರ್ಜುನನ ವಿವಿಧ ರೂಪಗಳನ್ನು ಕಂಡು ಕೊನೆಗೆ ಈ ವಿಶ್ವದರ್ಶನದಲ್ಲಿ ಕೃತಾರ್ಥವಾಗಿದೆ.

ಅಕ್ಕನ ಉಕ್ಕಿನ ವಚನಗಳು ಕೆಲವು ಇದಾಗಲೇ ಉದಾಹೃಥವಾಗಿವೆ. ಇನ್ನೂ ಒಂದೆರಡನ್ನು ಉದ್ಧರಿಸಬಹುದು.

"ಆಳುತನದ ಮಾತನೇರಿಸಿ ನುಡಿದಡೆ
ಆಗಳೆ ಕಟ್ಟಿದೆನು ಗಂಡುಗಚ್ಚೆಯ!
ತಿಗುರನೇರಿಸಿ ತಿಲಕವನಿಟ್ಟು
ಕೈದುವ ಕೊಂಡು ಕಳನೇರಿದ ಬಳಿಕ
ಕಟ್ಟಿದ ನಿರಿ ಸಡಲಿದಡೆ ಇನ್ನು ನಿಮ್ಮಾಣೆ ಕಾಣಾ
ಚೆನ್ನಮಲ್ಲಿಕಾರ್ಜುನಾ!"
"ಮುಂಗೈಯಲ್ಲಿ ವೀರಗಂಕಣವಿಕ್ಕಿ
ಮುಂಗಾಲಲ್ಲಿ ತೊಡವು ಬಾವುಲಿಯ ಕಟ್ಟಿದೆ!
ಗಂಡುಡುಗೆಯನುಟ್ಟೆನೆಂಬ ಮಾತಿನ ಬಿರಿದ ನುಂಗಿದೆನು!
ಚೆನ್ನಮಲ್ಲಿಕಾರ್ಜುನಾ
ನಿಮ್ಮಾಣೆಗೆ ಊಣೆಯುವ ತಂದೆನಾದಡೆ
ನಿಮ್ಮ ತೊತ್ತಿನ ಮಗಳಲ್ಲಯ್ಯಾ!"
"ಕಾಮನ ತಲೆಯ ಕೊರೆದು, ಕಾಲನ ಕಣ್ಣ ಕಳೆದು
ಸೋಮಸೂರ್ಯರ ಹುರಿದು ಹುಡಿಮಾಡಿ ತಿಂಬವಳಿಂಗೆ
ನಾಮವನಿಡಬಲ್ಲವರಾರು ಹೇಳಿರೆ!
ಕೊಂದಡೆ ಶರಣೆಂಬುದ ಮಾಣೆ!
ಶಿರ ಹರಿದು ಬಿದ್ದರೆ ಪ್ರಾಣ ನಿಮಗರ್ಪಿತವೆಂಬೆನು!"

ಈ ವೀರೋಕ್ತಿಗಳನ್ನು ಓದಿದಾಗ ವಿರಹಿಣಿಯಾಗಿ ವಿಲಾಪಿಸುವ ಅಕ್ಕ ಒಮ್ಮೆಗೆ ಕಲಿಯಾಗಿ ಆರ್ಭಟಿಸುವಂತೆ ಕಾಣುತ್ತಾಳೆ. ಅಕ್ಕನ ಸಾಹಿತ್ಯಕ್ಕಿರುವುದು ಇವೆರಡೇ ಮುಖಗಳೆಂದು ಯಾರೂ ತಿಳಿಯಬಾರದು; ತಿಳಿಯಲಾರರು! ಅದರ ಪ್ರಮುಖ ಲಕ್ಷಣಗಳೆಂಬ ದೃಷ್ಟಿಯಿಂದ ಇವುಗಳ ವಿಶದ ವಿವೇಚನೆ ನಡೆಯಿತು; ಅಷ್ಟೆ. ಅಭ್ಯಾಸಿಗಳಿಗೆ ಅಕ್ಷಯ ಪಾತ್ರೆಯಂತೆ ಅಕ್ಕನ ಸಾಹಿತ್ಯ. ಅದರ ಸ್ವಾರಸ್ಯ ಮುಗಿವ ಮಾತೇ ಇಲ್ಲ. ಇಲ್ಲಿ ನೋಡಿ, ಅಹಿಂಸಾತತ್ವ ಬೋಧೆಯಂಥ ಶುಷ್ಕ ವಿಷಯವನ್ನು ಹೇಗೆ ಪರಿಣಾಮರಮಣೀಯವಾಗಿಸಿದ್ದಾಳೆ, ಅಕ್ಕ;

"ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ
ಹಲವು ಪ್ರಾಣಿಗಳ ಕೊಂದು ನಲಿನಲಿದಾಡುವ!
ತನ್ನಜ ಮನೆಯಲೊಂದು ಶಿಶು ಸತ್ತಡೆ
ಅದಕ್ಕೆ ಮರುಗುವಂತೆ ಅವಕೇಕೆ ಮರುಗ?
ಅದೆಂತೆಂದಡೆ:"
"ಸ್ವಾತ್ಮಾನಮಿತರಂ ಚೇತಿ ಭಿನ್ನಂತು ನೈವ ದೃಶ್ಯತಾಂ!
ಸರ್ವಂ ಚಿಚ್ಜ್ಯೋತಿರೇವೇತಿ ಯಃ ಪಶ್ಯತಿ ಸ ಪಶ್ಯತಿ
ಎಂದುದಾಗಿ ಜಾಲಗಾರನ ದುಃಖ ಜಗಕೆಲ್ಲ ನಗೆಗೆಡೆ!
ಇದು ಕಾರಣ, ಚೆನ್ನಮಲ್ಲಿಕಾರ್ಜುನನ ಭಕ್ತನಾಗಿರ್ದು
ಜೀವಹಿಂಸೆಯ ಮಾಡುವ ಮಾದಿಗರನೇನೆಂಬೆನಯ್ಯಾ?"

ಮೊದಲು ಜಲದ ಶಿಶು ಮನೆಯ ಶಿಶು ಬೇರಿಲ್ಲವೆಂಬುದ ಬಿತ್ತರಿಸಿ ಮನೆಯ ಶಿಶುವಿಗಾಗಿ ಅಳುವ ಪಿತೃಹೃದಯ ಜಲದ ಶಿಶುಗಳಿಗಾಗಿಯೂ ಮರುಗಬೇಕೆಂಬುದನ್ನು ಮನಂಬುಗುವಂತೆ ನಿರೂಪಿಸಿ, ಶಾಸ್ತ್ರಾಧಾರಬೇಕೆನ್ನುವವರಿಗೆ ಅದನ್ನು ಆಮೇಲೆ ಒದಗಿಸಿ, ಜೀವಹಿಂಸೆ ಮಾಡುವವರೇ–ಮಾಡುವವರೆಲ್ಲ–ಮಾದಿಗರೆಂದು ಘೋಷಿಸಿ, ಬಸವಣ್ಣನವರ ಕೊಲ್ಲುವನೇ ಮಾದಿಗನೆಂಬ ಸೂತ್ರವನ್ನು ಸಮರ್ಥಿಸಿ, ಅಹಿಂಸೆ ಎಂಬ ಶಬ್ದವನ್ನೇ ತರದೆ ಅಹಿಂಸೆಯ ತತ್ತ್ವವನ್ನು ಎತ್ತಿಹಿಡಿದಿರುವ ಅಕ್ಕನ ಈ ವಚನ ಆಕೆಯ ಇನ್ನೊಂದು ಹೆಚ್ಚಳದ ದ್ಯೋತಕ!

ಸೂತ್ರಾತ್ಮಕ ವಚನಗಳೂ ಇವೆ. ಅವುಗಳ ಸೊಬಗನ್ನು ಸ್ವಲ್ಪ ಸವಿಯಬಹುದು.

"ಭಾನುವಿನಂತಿಪ್ಪುದು ಜ್ಞಾನ; ಭಾನುಕಿರಣದಂತಿಪ್ಪುದು ಭಕಿತ.
ಭಾನುವನುಳಿದು ಕಿರಣಂಗಳಿಲ್ಲ, ಕಿರಣಂಗಳನುಳಿದು ಭಾನುವಿಲ್ಲ.
ಜ್ಞಾನವಿಲ್ಲದ ಭಕ್ತಿ, ಭಕ್ತಿಯಿಲ್ಲದ ಜ್ಞಾನವೆಂತಿಪ್ಪುದು,
ಚೆನ್ನಮಲ್ಲಿಕಾರ್ಜುನಾ?"

"ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೆ ಬೀಜ.
ಎನಗುಳ್ಳುದೊಂದು ಮನ
ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ
ಎನಗೆ ಭವವುಂಟೆ, ಚೆನ್ನಮಲ್ಲಿಕಾರ್ಜುನಾ?"

ಇನ್ನು ಅಕ್ಕನ ವಚನಗಳಲ್ಲಿ ಸೂರೆಯಾಗಿರುವ ಸಾರೋಕ್ತಿಗಳ, ಸಾದೃಶ್ಯಗಳ ಸವಿಯನ್ನು ಅನುಭವಿಸಬಹುದು.

"ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯ!
ನಿನ್ನನರಿಯದ ಮುಕ್ತಿಯೇ ನರಕ ಕಂಡಯ್ಯ!"

"ರತ್ನದ ಸಂಕೋಲೆಯಾದರೆ ತೊಡರಲ್ಲವೆ?
ಮುತ್ತಿನ ಬಲೆಯಾದರೆ ಬಂಧನವಲ್ಲವೆ?"
"ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯ?"
"ಕಟಿಹಾದ ಬಿದಿರಿನಲ್ಲಿ ಮರಳಿ ಕಳಲೆ ಮೂಡಬಲ್ಲುದೇ?"
"ಪಂಚೇಂದ್ರಿಯಂಗಳೊಳಗೆ ಒಂದಕ್ಕೆ ಪ್ರಿಯನಾದರೆ ಸಾಲದೆ?"

"ಹುಸಿಯೆಂಬುದೇ ಹೊಲೆ, ಹುಸಿಯನಾಡಿ ಲಿಂಗವ ಪೂಜಿಸಿದರೆ ಹೊಳ್ಳಬಿತ್ತಿ ಫಲವನರಸುವಂತೆ! "

"ತನ್ನವರೆಂದರೆ ಮನ್ನಿಸುವನೆ ಶಿವನು?"
"ಮರೀಚಿಕಾಜಲದೊಳಡಗಿದ ಪ್ರಾಣಿ ವ್ಯಾಧನ ಬಲೆಗೊಳಗಹುದೆ?
"ಕಲ್ಲ ಹೊತ್ತು ಕಡಲೊಳಗೆ ಮುಳುಗಿದಡೆ ಎಡರಿಂಗೆ ಕಡೆಯುಂಟೆ?"
"ತೆರಣಿಯ ಹುಳು ತನ್ನಸ್ನೇಹದಿಂದ ಮನೆಯ ಮಾಡಿ
ತನ್ನ ನೂಲು ತನ್ನನೆ ಸುತ್ತಿ ಸಾವಂತೆ."
"ಅರಲಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ
ಬರಲಗೊಂಡ ಸಸಿಗೆ ಮಳೆ ಸುರಿದಂತೆ"
"ಅಕ್ಕಿಯಿಲ್ಲದ ತುಷಕ್ಕೆ ಅಗ್ಗವಣಿಯನೆರೆದರೆ
ಅದೆಂದಿಂಗೆ ಬೆಳೆದು ಫಲವಪ್ಪುದಯ್ಯ?"
"ಸಿಂಹದ ಮರಿಯ ಸೀಳ್ನಾಯಿ ತಿಂಬಡೆ ಭಂಗವಿನ್ನಾರದೊ?"
"ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ

ತಮ್ಮೊಳಗಿರ್ದ ಮಹಾಘನವನರಿಯರು!"
"ತಾಯಿ ನೊಂದಡೆ ಒಡಲ ಶಿಶು ನೋವ ತೆರನಂತೆ
ಭಕ್ತರು ನೊಂದಡೆ ತಾ ನೋವ ನೋಡಾ"
"ನಡೆಯದ ನುಡಿಗಡಣ, ಮಾಡದ ಕಲಿತನ
ಚಿತರದ ಸತಿಯ ಶೃಂಗಾವದೇತಕ್ಕೆ ಪ್ರಯೋಜನ?"
"ಕೊಳಲ ದನಿಗೆ ಸರ್ಪ ತಲೆದೂಗಿದಡೇನು
ಒಳಗಣ ವಿಷದ ಬಯಕೆ ಬಿಡದನ್ನಕ್ಕ?"
"ನೆಲ ತಳವಾರನಾದಡೆ ಕಳ್ಳನೆಲ್ಲಿಗೆ ಹೋಹನು?
ಕಂದನಲ್ಲಿ ಕುಂದನರಸುವರೆ?"
"ಹೊಳೆಯಿಳಿದ ಬಳಿಕ ಅಂಬಿಗಂಗೇನುಂಟು?"
"ಕೂಡಿ ಕೊಡುವ ಸುಖದಿಂದ ಒಪ್ಪಚ್ಚಿ ಅಗಲಿ ಕೂಡುವ ಸುಖ ಲೇಸು,"
"ಕತ್ತಲೆಯಲ್ಲಿ ಕನ್ನಡಿಯ ನೋಡಿ ಕಳವಳಗೊಂಡೆನಯ್ಯಾ!"

ಇನ್ನೂ ಇವೆ ಇಂಥ ಮಿಂಚಿನ ಮಾತುಗಳು, ವಾಕ್ಯಮಾಣಿಕ್ಯಗಳು, ಅಕ್ಕನ ಸಾಹಿತ್ಯದಲ್ಲಿ. ಅಕ್ಕ ಅನುಭವಮಂಟಪದ ಶರಣ ಶರಣೆಯರ ಬಗೆಗೆ ಹೇಳಿದ್ದಳು; "ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ ಎಂದು. ಅಕ್ಕನೂ ತನ್ನ ಸಾಹಿತ್ಯದಲ್ಲಿ" ಈ ತ್ರಿವಿಧಾಮೃತವನು ದಣಿಯ ಲೆರೆದು ಸಲಹಿರುವಳೆಮ್ಮನ್ನು. ಈ ತ್ರಿವಿಧಾಮೃತ ಎಂದೆಂದಿಗೂ ಕನ್ನಡಿಗರಿಗೆ ಮರುಜೇವಣಿ.

# ೩

# ಅಕ್ಕನ ಆಲೋಚನಾಮೃತ

ಭಾವನಿರ್ಭರತೆಗೆ ಸಮಸಮನಾಗಿ ಬುದ್ಧಿವಿಲಾಸವೂ ಪ್ರಕಾಶಿಸುತ್ತಿದೆ ಅಕ್ಕನ ಕೃತಿಗಳಲ್ಲಿ; 'ಬುದ್ಧಿ ಹೃದಯಗಳ ವಿದ್ಯುದಾಲಿಂಗನವಿಲ್ಲಿ ವಿರಾಜಿಸುತ್ತಿದೆ. ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯನ್ನು ಸೇವಿಸಿ ಬೆಳೆದ ಅಕ್ಕನ ವಾಣಿಯಲ್ಲಿ ಈ ಮೂರರ ಸ್ವರಸಂಗಮವನ್ನು ಕಾಣುತ್ತೇವೆ. ಒಂದರ್ಥದಲ್ಲಿ ಈ ಮೂರಕ್ಕೂ ಹೃದಯವೇ ಉಗಮಸ್ಥಾನವೇನೋ ಎನ್ನಿಸುತ್ತದೆ. ಎಲ್ಲ ದೊಡ್ಡ ಸತ್ಯಗಳೂ ಹೃದಯದಿಂದಲೇ ಹೊರಡುತ್ತವೆಯೆಂಬ ಹಳೆಯ ಮಾತೊಂದಿದೆ.[೧] ಹೃದಯವೇ ಚರಾಚರವಿಶ್ವವನ್ನು ಬೀಜರೂಪದಲ್ಲಿ ಅಡಗಿಸಿಕೊಂಡಿದೆಯೆಂಬ ಮಾತೂ ಒಂದಿದೆ. ಅಕ್ಕಮಹಾದೇವಿಯ ವಿಷಯದಲ್ಲಿ ಇದು ನಿಜವೇನೋ. ಆಕೆಯ ಮಸ್ತಕ ಆಲೋಚಿಸಿದುದೂ ಆಕೆಯ ಅನುಭಾವ ಕಂಡುದೂ ಆಕೆಯ ಹೃದಯರಸದಲ್ಲಿ ನೆನೆದು ಹೊರ ಬಂದಿರುವುದರಿಂದಲೇ ಆಕೆಯ ವೈಚಾರಿಕತೆಗೆ, ಪರಮಾರ್ಥಕ್ಕೆ ರವಸಂತಿಕೆ ದೊರೆತಿದೆ. ಶುಷ್ಕ ತರ್ಕ ಸಾಧಿಸದುದನ್ನು, ರುಕ್ಷಶಾಸ್ತ್ರಾಧ್ಯಯನ ಸಾಧಿಸದುದನ್ನು, ವಿತಂಡವಾದ, ಕೊನೆಯಿಲ್ಲದ ಚರ್ಚೆ, ಫಲರಹಿತ ಪ್ರವಚನಾದಿಗಳು ಸಾಧಿಸದುದನ್ನು ಅಕ್ಕನ ಹೃದಯ ಮೂಲದ ಅರಿವು ಅನುಭಾವಗಳು ಸಾಧಿಸಿವೆ. ಹರಿಹರನ ಮಹಾ ದೇವಿಯರ ರಗಳೆಯ ಒಂದು ಭಾಗ ಇಲ್ಲಿ ಪ್ರಸ್ತುತ: "ಬಳ್ಳಿವರಿದ ಗೋಷ್ಠಿಗಡರ್ಪಾಗಿ, ಭಕ್ತಿಯ ಬೀಜಂಗಳಂತಿರ್ದ ಪುರಾತನರ ಗೀತಂಗಳ ಚಿತ್ತಭೂಮಿಯೊಳ್ ಬಿತ್ತಿ ಆನಂದಾಶ್ರುಗಳನೆರೆದು, ಪುಳಕಂಗಳ ಬೊಬರಮನಿಕ್ಕಿ, ಭಕ್ತಿಜ್ಞನವೆಂಬ ಶಶಿರವಿಗಳಿಂ ಬಳೆಯಿಸಿ, ಪ್ರಸಂಗ ಕುಸುಮವನಲರ್ಚಿಸಿ, ಪರಿಣಾಮಫಲವನೆಯ್ದಿಸಿದ ಗೀತವೃಕ್ಷಂಗಳಿಂಗ ಶಿವಾನುಭವಕ್ಕೆ ನವಗೀತಮಂ ಪಾಡಿ... ಬಕ್ತಿರಸದೊಳದ್ದು, ಸಿವಜ್ಞನದೊಳೆಳ್ದು", ವೈರಾಗ್ಯಮಂ ತಾಳ್ದು,ಮಾಯೆಯಂ ತೂಳ್ದು... ನತಿಯಸುಖದೊಳ್ ಬಾಳ್ದು... ಭಕ್ತಿರಸದೊಳದ್ದಿಯೇ ಶಿವಜ್ಞಾನದೊಳೆದ್ದ ಅಕ್ಕನ ಕೃತಿಗಳಲ್ಲಿ ಓತಪ್ರೋತವಾಗಿ ತುಂಬಿರುವ ಆಲೋಚನಾಮೃತ ಅನುಭವೈಕ ಗಮ್ಯ.

---

೧. ಯಥಾ ನ್ಯಗ್ರೋದಬೀಜಸ್ಥಃ ಶಕ್ತಿರೂಪೋ ಮಹಾದ್ರುಮಃ ।
ತಥಾ ಹೃದಯ ಬೀಜಸ್ಥಂ ವಿಶ್ವಮೇತಚ್ಚರಾಚರಂ ॥

ಅಕ್ಕನಿಗೆ ತನ್ನ ಅಲ್ಪಾಯುವಿನ ಮುನ್ನರಿಕೆಯಿತ್ತೇನೋ ಎನ್ನಿಸುತ್ತದೆ, ಆಕೆಯ ಈ ವಚನಗಳನ್ನು ಓದಿದಾಗ:

"ಉದಯಾಸ್ತಮಾನವೆಂಬೆರಡು ಕೋಳಗದಲ್ಲಿ
ಆಯುಷ್ಯವೆಂಬ ರಾಶಿಯ ಅಳೆದು ತೀರದ ಮುನ್ನ
ಶಿವನ ನೆನೆಯಿರೇ, ಶಿವನ ನೆನೆಯಿರೇ!
ಈ ಜನ್ಮ ಬಳಿಕಿಲ್ಲ!"
"ಆಯುಷ್ಯ ಹೋಗುತ್ತಿದೆ, ಭವಿಷ್ಯ ತೊಲಗುತ್ತಿದೆ
ಕೂಡಿರ್ದ ಸತಿಸುತರು ತಮತಮಗೆ ಹರಿದು ಹೋಗುತ್ತೈದಾರೆ !
ಬೇಡ ಬೇಡವೆಲೆ ಬಂಜೆಯಾಗಿ ಕೆಡಬೇಡ ಬಯಲಿಂಗೆ ಮನವೆ!
ಚೆನ್ನಮಲ್ಲಿಕಾರ್ಜುನನ ಶರಣರ ಸಂಗದಲ್ಲಿ
ಹೊಣಿ ಹೊಕ್ಕು ಬದುಕು ಕಂಡಾ, ಮನವೆ!"
"ಕೆಡದಿರೆ, ಕೆಡದಿರೆ, ಮೃಡನಡಿಯ ಹಿಡಿಯಿರೇ !
ದೃಢವಲ್ಲ ನೋಡಿರೆ ನಿಮ್ಮೊಡಲು!"

ಇವುಗಳಿಂದ ಮಹಾದೇವಿಗೆ ಮುನ್ನರಿಕೆಯಿತ್ತೆಂದು ಸಿದ್ಧವಾಗದಿದ್ದರೂ ನಮಗೆ ಮುನ್ನೆಚ್ಚರಿಕೆ ಇದೆ! ನಾವು ಚಿರಂಜೀವಿಗಳೆಂಬ ಭ್ರಮೆಯಿಂದ ಏನೇನೋ ಗಾಳಿಗೋಪುರ ಕಟ್ಟುತ್ತೇವೆ. ಹಠಾತ್ತಾಗಿ ಎರಗುವ ಮೃತ್ಯುವಿನ ಅಪ್ಪಳಿಕೆಯಿಂದ ಅವು ನುಚ್ಚು ನೂರಾಗುತ್ತವೆ. ಇರುವಷ್ಟು ಆಯುಷ್ಯವನ್ನು ಅಂದಿಂದೆನ್ನದೆ ಸದುಪಯೋಗಿಸಿ ಕೊಂಡವನೇ ಜಾಣ. ಈ ಸದುಪಯೋಗವಾವುದೆಂಬುದು ನಿಶ್ಚಿತವಾಗಬೇಕು. ಅಕ್ಕನಿಗೆ ಎಳೆವರೆಯದಲ್ಲಿಯೇ ಈ ಸಮಸ್ಯೆ ಎದುರಾಗಿರಬೇಕು.

"ಎನ್ನ ಕಾಯ ಮಣ್ಣು, ಜೀವ ಬಯಲು:
ಆವುದ ಹಿಡಿವೆನಯ್ಯ?
ನಿಮ್ಮನಾವ ಪರಿಯಲ್ಲಿ ನೆನೆವೆನಯ್ಯಾ?"
"ಹಿಂದಣ ಹಳ್ಳ, ಮುಂದಣ ತೊರೆ–
ಸಲ್ಲುವ ಪರಿಯೆಂತು ಹೇಳಾ!
ಹಿಂದಣ ಕೆರೆ, ಮುಮದಣ ಬಲೆ–
ಹದುಳವಿನ್ನೆಲ್ಲಿಯದು ಹೇಳಾ?"

ಈ ಪ್ರಶ್ನೆಗೆ ಉತ್ತರ ಹುಡುಕುವಾಗ ಮಾನವಜೀವನದ ದುರಂತಚಿತ್ರವೇ ಅಕ್ಕನ ಕಣ್ಣಮುಂದೆ ಸುಳಿದು ಹೋದಂತಿದೆ.

"ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು;
ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು;
ಅಜ್ಞನ ಹುಟ್ಟಿದಲ್ಲಿ ಆಶೆ ಹುಟ್ಟಿತ್ತು;
ಆಶೆ ಹುಟ್ಟಿದಲ್ಲಿ ಕೋಪ ಹುಟ್ಟಿತ್ತು;
ಆ ಕೋಪಾಗ್ನಿಯ ತಾಮಸಧೂಮ್ರ ಮುಸುಕಿದಲ್ಲಿ
ನಾ ನಿಮ್ಮ ಮರೆದು ಭವದುಃಖಕ್ಕೀಡಾದೆ!"

ದುರಂತದ ಯಥಾರ್ಥ ಚಿತ್ರಣ; ಸಮಂಜಸ ಕಾರಣಮೀಮಾಂಸೆ! ಮಾನವನ ಹುಟ್ಟಿನಲ್ಲಿಯೇ ಹುಟ್ಟುತ್ತದೆ ಈ ದುರಂತ. ಹುಟ್ಟುವ ಮುನ್ನ ಅವನೇನಿದ್ದ? ಯಾರಿಗೂ ಗೊತ್ತಿಲ್ಲ. ಅನೇಕರ ಅಭಿಮತದಂತೆ ವಿಶ್ವಾತ್ಮನಲ್ಲಿ ಬೆರಸಿ ಬೇರಿಲ್ಲದಂತಿದ್ದ. ಹುಟುಟತ್ತಲೆ ಸಂಸಾರ, ಅದರೊಡನೆ ಅಜ್ಞಾನ, ಅದರೊಡನೆ ಆಶೆ, ಅದರೊಡನೆ ಕೋಪ, ಆ ಕೋಪ ಕಾರಣವಾಗಿ ಭವದುಃಖ! ಜನನದೊಡನೆ ಆರಂಭವಾಗುವ ಈ ದುಃಖಾಂತನಾಟಕಕ್ಕೆ ಕೊನೆಯ ಪರದೆ ಎಳೆಯುವುದು ಮರಣವೆಂದೇ ಮೇಲುನೋಟಕ್ಕೆ ಗೋಚರವಾಗುವುದು ಸಹಜ. ಅಂತೆಯೇ ಹುಟ್ಟು, ಬಂಧನ, ಸಾವುಬಿಡುಗಡೆಯೆಂದು ಕೆಲವರು ತೀರ್ಮಾನಿಸಿದ್ದರೆ ಆಶ್ಚರ್ಯವೇನಿಲ್ಲ. "ಆದರೆ ಈ ಜನನ–ಮರಣಗಳ ನಡುವಣ ಅವಧಿಯಾದ ಜೀವನದಲ್ಲಿ ದುಃಖದ ನಿವಾರಾಣೋಪಾಯವೇ ಇಲ್ಲವೆ?" ಎಂಬುದು ಬುದ್ಧನಿಂದ ಇಂದಿನ ಬುದ್ಧಿಜೀವಿಗಳ ವರೆಗೆ ಎಲ್ಲರನ್ನು ಕಾಡಿದ, ಕಾಡುತ್ತಿರುವ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಅಕ್ಕನ ಮೇಲಿನ ವಚನದಲ್ಲಿದೆ. ಮರೆದು ಪಡೆದ ದುಃಖವನ್ನು ಅರಿದು ಪರಿಹರಿಸಿಕೊಳ್ಳಬೇಕು. ಪ್ರತಿಲೋಮಗತಿಯಲ್ಲಿ ಮರಹು ಹೋದಾಗ ಕೋಪ ಹೋಗುತ್ತದೆ; ಕೋಪ ಹೋದಾಗಆಶೆ ಹೋಗುತ್ತದೆ; ಆಶೆ ಹೋದಾಗ ಅಜ್ಞಾನ ಹೋಗುತ್ತದೆ; ಅಜ್ಞಾನ ಹೋದಾಗ ಸಂಸಾರ ತೊಡಕಾಗದೆ ತೊಡವಾಗುತ್ತದೆ. ಒಟ್ಟಿನಲ್ಲಿ ಮರೆದ ಮಾನವ ಅರಿದ ಶರಣನಾದಾಗ ದುಃಖದ ಮೂಲೋತ್ಪಾಟನ!

ಅರಿದು ಶರಣನಾಗಬೇಕೆಂಬುದು ಸರಿಯೆ; ಆದರೆ ಏನನ್ನು ಅರಿಯುವುದು? ಇನ್ನೂ ನರನು ಅರಿದುದಕ್ಕಿಂತ ಅರಿಯದಿರುವುದೇ ಈ ತಿರೆಯಲ್ಲಿ ಹೆಚ್ಚಿದ್ದರೂ ಈಗ ಅವನು ಅರಿದಿರುವುದೇನೂ ಕಿರಿದಲ್ಲ; ಹಿರಿದಾದುದೇ. ಆದರೂ ಅವನಿಗೆ ದುಃಖ ನಿವೃತ್ತಿ ಆಗಿಲ್ಲವಲ್ಲ? ಅಕ್ಕ ಹೇಳುವುದು ಈ ಅರಿವಲ್ಲ; ನಾ ನಿಮ್ಮ ಮರೆದು ಭವದುಃ–ಖಕ್ಕೀಡಾದೆಯೆನ್ನುತ್ತಾಳೆ. ಅವನನ್ನು ಮರೆದುದರಿಂದ ಬಂದ ದುಃಖ ಅವನನ್ನು ಅರಿಯುವುದರಿಂದಲೇ ತೊಲಗಬೇಕು. ಈಗಿನ ಅರಿವು ಅವನನ್ನು ಹೊರತುಪಡಿಸಿದ

ಅರಿವು. ಶಿವನ ಸಹಿತ ಇರದ ಅರಿವು ಅಂಕಿಯ ಆಶ್ರಯವಿಲ್ಲದ ಸೊನ್ನೆಯಂತೆ. ಅಂತೆಯೇ ಮೇಲಣ ವಚನದ ಮುಂದಿನ ಎರಡು ಸಾಲುಗಳಲ್ಲಿ ಇದನ್ನು ಇನ್ನಷ್ಟು ಸ್ಪಷ್ಟ ಗೊಳಿಸುತ್ತಾಳೆ, ಅಕ್ಕ.

"ನೀ ಕರುಣದಿಂದೆತ್ತಿ, ಎನ್ನ ಮರಹ ವಿಂಗಡಿಸಿ,
ನಿಮ್ಮ ಪಾದವನರುಹಿಸಯ್ಯಾ, ಚೆನ್ನಮಲ್ಲಿಕಾರ್ಜುನಾ!"

ಅವನನರಿಯುವ ವರೆಗೆ ಏನೆಲ್ಲ ಅರಿತರೂ ನಿಷ್ಫಲ.[೧] ಅವನನರಿಯಲು ಅವನೇ ನೆರವಾಗಬೇಕು. ಅವನು ಕರುಣದಿಂದೆತ್ತಿ ತನ್ನ ಪಾದವನರುಹಿಸಿಕೊಳ್ಳದಿದ್ದರೆ ಅವನನ್ನರಿಯುವುದು ಆಗದು. ಅಂತೆಯೇ ಅಕ್ಕ ನಿವೇದಿಸಿಕೊಂಡಳು; ಚೆನ್ನಮಲ್ಲಿಕಾರ್ಜುನ, ನಿ ಅರಿವಾಗಿ ಮುಂದುದೋರಿದ ಕಾರಣ ನಿಮ್ಮಿಂದ ನಿಮ್ಮನರಿದೆನಯ್ಯ! ಇದಾಗುವ ಮುನ್ನ:

"ಎನ್ನ ನಾನರಿಯದಂದು, ಮುನ್ನ ನೀನೆಲ್ಲಿರ್ದೆ? ಹೇಳಯ್ಯ!
ಚಿನ್ನದೊಳಗಣ ಬಣ್ಣದಂತೆ ಎನ್ನೊಳಗಿರ್ದೆಯಯ್ಯ!
ಎನ್ನೊಳಗಿರ್ದು ಮೈದೋರದ ಭೇದವ
ನಿಮ್ಮಲ್ಲಿ ಕಂಡೆನು ಕಾಣಾ, ಚೆನ್ನಮಲ್ಲಿಕಾರ್ಜುನಾ!"

ಎಂಬ ಉದ್ಗಾರ ಸಹಜ. ಅರಿತರೆ ಹೃದಯ ಮಧ್ಯದಲ್ಲಿಯೇ, ಮರೆತರೆ? ಎಷ್ಟು ದೂರ ಆಚೆ? ಯಾರು ಅಳೆಯಬಲ್ಲರು. ಆ ಅಚಿಂತ್ಯ ಅಂತರವನ್ನು? ಹೃದಯದಲ್ಲಿಪ್ಪವನೇ ಉಪ್ಪವಡಿಸಿ ಮೈದೋರುವಂತೆ–

"ದೇವ, ಎನ್ನ ಹೃದಯ ಕಮಲದೊಳಗೆ ಪ್ರಜ್ವಳಿಸಿಪ್ಪ ಬೆಳಗೆ!
ದೇವ, ಎನ್ನ ಮನದ ಮೊನೆಯೊಳೊಪ್ಪುತಿರ್ಪ ಬೆಳಗಿನೊಳಗೆ!
ಗುರುವೆ ಬರ, ವರವೆ ಬಾರ, ಪರವೆ ಬಾರ ದೇವ ದೇವ!

---

೧. "ಎಲ್ಲ ಎಲ್ಲವನರಿದು ಫಲವೇನು? ಮತ್ತೆ ಎಲ್ಲ ಎಲ್ಲವನರಿದು ಫಲವೇನು?
ತನ್ನ ತಾನರಿಯದನ್ನಕ್ಕ? ತನ್ನರಿವು ಕರಿಗೊಂಡ ಬಳಿಕ ಇದಿರಿಟ್ಟು ಕೇಳಲುಂಟೆ?
ನಿಮ್ಮರಿವು ತಲೆದೋರಿದ ಕಾರಣ ನನ್ನ ನಾನರಿದೆ, ಚೆನ್ನಮಲ್ಲಿಕಾರ್ಜುನ,"
"ಮರವಿದ್ದು ಫಲವೇನು ನೆಳಲಿಲ್ಲದನಕ? ಧನವಿದ್ದು ಫಲವೇನು, ದಯವಿಲ್ಲದನಕ?
ಹಸುವಿದ್ದು ಫಲವೆನು, ಹಯನಿಲ್ಲದನಕ?
ರೂಪಿದ್ದು ಫಲವೇನು, ಗುಣವಿಲ್ಲದನಕ?... ನಾನಿದ್ದು ಫಲವೇನು,
ನಿಮ್ಮ ಜ್ಞಾನವಿಲ್ಲದನಕ ಚೆನ್ನಮಲ್ಲಿಕಾರ್ಜುನಾ"

ಹರನೆ ಬಾರ, ಸುಕೃತಸಾರ, ಸರ್ಪಹಾರ ಬಾರ ದೇವ!
ವೀರಭದ್ರ ರುದ್ರ, ದುರಿತದೂರ, ವಿಶ್ವರೂಪ ಬಾರ!
.... .... .... .... .... .... .... .... .... .... .... .... ....
ಬಾರ ಫಲವೆ, ಫಲದ ರಸವೆ, ರಸದ ಸವಿಯ ಸುಖವೆ ಬಾರ!
ಬಾರ ಸಿದ್ಧ, ಭವವಿರುದ್ಧ, ಸುಪ್ರಸಿದ್ಧ ಮಲ್ಲಿನಾಥ[೧]"

ಎಂದು ಆಲ್ಪಯರಿಯಬೇಕು.

ಇದು ಪ್ರೇಮಾತಿಶಯದಿಂದ, ಭಕ್ತಿಯಿಂದ ಸಾಧ್ಯ. ವಚನಗಳಾಗಿ ಹರಿದಿರುವ ಅಕ್ಕನ ಭಕ್ತಿಯ ಉತ್ಕಟತೆಯನ್ನು ವಿಕಳತೆಯನ್ನು, ಅಧ್ಯಾತ್ಮಿಕ ವಿರಹ ವಿಹ್ವಲತೆಯನ್ನು, ತೀವ್ರತೆ ಸಾಂದ್ರತೆಗಳನ್ನು ಈ ಹಿಂದೆ ನೋಡಿದ್ದೇವೆ. ಈಗ ಸ್ವರವಚನವಾಗಿ ಹೊಮ್ಮಿರುವ ಆಕೆಯ ಅನನ್ಯಶರಣತೆಯನ್ನು ನೋಡಬಹುದು.

"ನಂಬಿದೆ, ಗುರುವೆ ನಂಬಿದೆ, ಸ್ವಾಮಿ ನಂಬಿದೆ!
ಅಂಬಿಕಾರಮಣ ನೀನಂಬಿಗ!
ಹೊಳೆಯ ಭರವನೋಡಂಬಿಗ
ಸೆಳಹು ಬಹಳ ಕಾಣಂಬಿಗ
ಸುಳುಹಿನೊಳಗೆ ಬಿದ್ದೆನಂಬಿಗ ! ಎನ್ನ-
ನೆಳೆದುಕೊಳ್ಳೊ ನೀನಂಬಿಗ!
ಆರು ತೆರೆಯು ನೋಡಂಬಿಗ
ಮೀರಿ ಬರುತಲಿವೆ ಅಂಬಿಗ"

"ಹಾರಲೊದೆದು ಎನ್ನ ತಡಿಗೆ ಸಾರಿಸು । ನೀ
ದೂರ ಮಾಡದಿರು ಅಂಬಿಗ!
.... .... .... .... .... .... .... .... .... .... ....
ಸತ್ಯವೆಂಬ ಹುಟ್ಟಂಬಿಗ, ಸದ್
ಭಕ್ತಿಯೆಂಬ ಪಥವಂಬಿಗ
ನಿತ್ಯಮುಕ್ತ ನಮ್ಮ ಚೆನ್ನಮಲ್ಲಿಕಾರ್ಜುನನ
ಮುಕ್ತಿ ಮಂಟಪಕೊಯ್ಯೊ, ಅಂಬಿಗ!"

೧. ಹರಿಹರನ ಮಹಾದೇವಿಯಕ್ಕನ ರಗಳೆ: ಪಂಚಮ ಸ್ಥಲಂ

ಬಾಳಿನ ಹೊಳೆಯಲ್ಲಿ ಅಂಗದ ಹರಿಗೋಲು ಹೊರಟಿದೆ. ಅದಕ್ಕೆ ಶಿವನೇ ಅಂಬಿಗನಾಗಿ ತೊರೆಯ ದಾಟಿಸಬೇಕು! ಹುಟ್ಟು ಸತ್ಯವಂತೆ; ಸದ್ ಭಕ್ತಿಪಥವಂತೆ. ಹೀಗೆ ಸಾಗಿದರೆ ಹುಟ್ಟು ದುರಂತವಾಗದೆ ಸತ್ಯದ ಶೋಧನೆಯಾಗುವುದು; ಭಕ್ತಿಯು ಸ್ವರ್ಗದ ಆಶೆ, ನರಕದ ಭಯದಿಂದ ಮಾಡುವ ಭಕ್ತಿಯಾಗದೆ, ಫಲಾಪೇಕ್ಷೆಯಿಂದ ಮಾಡುವ ಭಕ್ತಿಯಾಗದೆ ಜೀವನನೌಕೆಯ ಜಲಪಥವಾಗುವುದು. ಅರೇಬಿಯಾದ ರಾಬಿಯಾ ತಾಯಿ ಒಮ್ಮೆ ಪುರವೀಧಿಯಲ್ಲಿ ಹೊರಟಿದ್ದಳಂತೆ. ಅವಳ ಒಂದು ಕೈಯಲ್ಲಿ ಬೆಂಕಿ, ಇನ್ನೊಂದು ಕೈಯಲ್ಲಿ ನೀರಿದ್ದಿತಂತೆ. ಯಾರೋ ಕೇಳಿದರಂತೆ ಈ ಬೆಂಕಿ ನೀರುಗಳನ್ನು ಹಿಡಿದು ಹರೊಟುದರ ಉದ್ದೇಶವೇನು ತಯೆ? ಎಂದು. ಉತ್ತರವಿತ್ತಳಂತೆ ಆ ಮಾತಾಯೀ. "ಈ ನೀರಿನಿಂದ ನರಕದ ಜ್ವಾಲೆಗಳನ್ನು ಆರಿಸಲು ಹೊರಟಿದ್ದೇನೆ; ಈ ಬೆಂಕಿಯಿಂದ ಸ್ವರ್ಗವನ್ನು ಸುಟ್ಟು ಭಸ್ಮ ಮಾಡಲು ಹೊರಟಿದ್ದೇನೆ. ಆಗಲಾದರೂ ಭುವನದ ಜೀವಿಗಳು ನರಕದ ಭಯ, ಸ್ವರ್ಗದ ಆಶೆಗಳನ್ನು ಮರೆತು ವಿಶುದ್ಧಭಕ್ತಿಯನ್ನು ಮಾಡಿ ಧನ್ಯರಾಗಲಿ!"

ಈಗ ಭಕ್ತಿವ್ಯಾಪಾರದ ಸರಕು. ಇಂಥ ಪೂಜೆಗೆ ಇಂಥ ಫಲ, ಆ ಪೂಜೆಗೆ ಇಷ್ಟು ಕಾಣಿಕೆ, ಇಷ್ಟು ದಕ್ಷಿಣೆ, ಇಷ್ಟು ಸಮಯವೆಂದು ಬೆಲೆಪಟ್ಟಿಯನ್ನು ಸಹ ಹಚ್ಚಿಯಾಗಿದೆ. ಅಲ್ಲಿ ಧರ್ಮದ ದಳ್ಳಾಳಿಗಳ ಹಾವಳಿ. ಮಠ ಮಂದಿರಗಳಲ್ಲಿ ಪೂಜಾರಿ,ಪುರೋಹಿತ, ಜೋಗಿ,ಜಂಗಮ, ಪಾರುಪತ್ಯಗಾರ, ಕಾವಲುಗಾರ–ಎಲ್ಲರೂ ಮುಗ್ಧಭಕ್ತರ ಮೈಚರ್ಮ ಸುಲಿದುಕೊಳ್ಳುವವರೇ! ಅಕ್ಕನೂ ಈ ಬಗ್ಗೆ ಕಠೋರವಾಗಿಯೇ ಹೇಳಿದ್ದಾಳೆ:

"ನಿತ್ಯತೃಪ್ತಂಗೆ ನೈವೇದ್ಯದ ಹಂಗೇತಕ್ಕೆ?
ಸುರಾಳ ನಿರಾಳಂಗೆ ಮಜ್ಜನದ ಹಂಗೇತಕ್ಕೆ?
ಸ್ವಯಂಜ್ಯೋತಿರ್ಮಯಂಗೆ ದೀಪಾರಾಧನೆಯ ಹಂಗೇತಕ್ಕೆ?
ಸುವಾಸನೆ ಸೂಕ್ಷ್ಮಗಂಧಕರ್ಪೂರಗೌರಂಗೆ ಪುಷ್ಪದ ಹಂಗೇತಕ್ಕೆ?
ಮಾಟದಲಿ ಮನ ನಂಬುಗೆಯಿಲ್ಲದ, ಅಹಂಕಾರಕ್ಕೀಡಾದ
ಭಕ್ತಿಯೆಂಬ ಪಸಾರವನಿಕ್ಕಿ, ಹೊಲೆಹದಿನೆಂಟು ಜನ್ಮವ ಹೊರೆವುದರಿಂದ
ಅಂಗೈಯ್ಯೊಳರಸಿ ಮುಕ್ತಿಯ!"

ಇಂಥ ಸ್ವಾರ್ಥಪೂರಿತ ಹೇಸಿ ಭಕ್ತಿಯನ್ನು ಮಾಡುವುದಕ್ಕಿಂತ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದಳು ರಾಬಿಯಾ; ಮುಕ್ತಿಯನ್ನೇ ಒರೆಸಿ ಒಗೆಯಿರೆಂದಳು, ಮಹಾದೇವಿ! ಇನ್ನೂ ಮುಂದೆ ಹೋಗಿ ಅಕ್ಕ ಶೈವರಲ್ಲಿಯೇ ವರ್ಗೀಕರಣ ಮಾಡಿಬಿಟ್ಟಿದ್ದಾಳೆ:

"ಜಾತಿಶೈವರು ಅಜಾತಿಶೈವರೆಂದು ಎರಡು ಪ್ರಕಾರವಾಗಿಹರಯ್ಯಾ;
ಜಾತಿಶೈವರೆಂಬವರು ಶಿವಂಗೆ ಭೋಗಸ್ತ್ರೀಯರಯ್ಯಾ;
ಅಜಾತಿಶೈವರೆಂಬವರು ಶಿವಂಗೆ ಕುಲಸ್ತ್ರೀಯರಯ್ಯಾ!

ಜಾತಿಶೈವರೆಂಬವರು ಸರ್ವಭೋಗಂಗಳ ಬಯಸಿ ಮಾಡುವರಾಗಿ!
ದ್ವಾರೇ ಯಸ್ಯ ಮಾತಮಗೋ ವಾಯುವೇಗ ಗುರಂಗಮಃ ।
ಪೂರ್ಣೇಂದು ವದನಾನಾರ್ಯಃ ಶಿವಪೂಜಾ ವಿಧೇಃ ಫಲಂ"

ಎಂದುದಾಗಿ,

"ಇವು ಜಾತಿಶೈವರಿಗೆ ಕೊಟ್ಟ ಭೋಗಂಗಳಯ್ಯಾ!
ಅಜಾತಿಶೈವರು ಗುರುಲಿಂಗಜಂಗಮಕ್ಕೆ ತನುಮನಧನದ ನಿವೇದಿಸಿ
ಸರ್ವಸೂತಕ ರಹಿತರಾಗಿಹರಯ್ಯಾ!
ಅಹಂ ಮಾಹೇಶ್ವರ ಪ್ರಾಣಾ ಮಮ ಪ್ರಾಣಾ ಮಹೇಶ್ವರಃ ।
ತಥೈಕಂ ನಿಷ್ಕ್ರಿಯಂ ಭೂಯಾದನ್ಯಲ್ಲಿಂಗೈಕ್ಯಮೇವಚ ॥"
"ಇದು ಕಾರಣ, ಸರ್ವೇಶ್ವರ ಚೆನ್ನಮಲ್ಲಿಕಾರ್ಜುನಯ್ಯನು
ಭಕ್ತಿಕಾಯವೆಂಬೈಕ್ಯಪದವನು ಅಜಾತಿಶೈವರಿಗೆ ಕೊಡುವನಯ್ಯಾ!"

ಕಾಯ ಭಕ್ತಿಕಾಯವಾದರಾಯಿತು. ಅದೇ ಐಕ್ಯಪದ. ಅಂಗ, ಲಿಂಗದ ಅಂಗವಾಗುವ ಪರಿ, ಇದು ಶರಣಸತಿತ್ವದ ಚರಮಗಮ್ಯ, ಇದನ್ನುಳಿದ ಸ್ವರ್ಗಾದಿ ಭೋಗಗಳಿಗೆ ಬಾಯ್ಬಿಡುವುದು ಬೆಲೆವೆಣ್ಣಿನ ರೀತಿ ನೀತಿ! ಇದು ಶರಣರ ಹಾದಿಯಲ್ಲ, "ಸಣ್ಣವರ ಸಮಾರಾಧನೆ!"

"ಅನ್ನವ ನೀಡುವವರಿಂಗೆ ಧಾನ್ಯವೆಸೆವ ಲೋಕ;
ಅರ್ಥವ ಕೊಡುವವರಿಂಗೆ ಪಾಷಾಣವೆಸೆವ ಲೋಕ;
ಹೆಣ್ಣು ಹೊನ್ನು ಮಣ್ಣುಮೂರನೂ
ಕಣ್ಣಿನಲಿ ನೋಡಿ, ಕಿವಿಯಲ್ಲಿ ಕೇಳಿ
ಕೈಯಲ್ಲಿ ಮುಟ್ಟಿ ಮಾಡುವ ಭಕ್ತಿ
ಸಣ್ಣವರ ಸಮಾರಾಧನೆಯಾಯಿತು!
ತನ್ನನಿತ್ತು ತುಷ್ಟಿವಡೆವರನೆನಗೆ ತೋರಾ
ಶ್ರೀಗಿರಿ ಚೆನ್ನಮಲ್ಲಿಕಾರ್ಜುನಾ"

ತನ್ನನಿತ್ತುತುಷ್ಟಿವಡೆವ ಭಕ್ತಿ–
"ಕಾಯ ಮೀಸಲಾಗಿ ನಿನಗರ್ಪಿತವಾಯಿತ್ತು;
ಕರಣ ಮೀಸಲಾಗಿ ನಿನಗರ್ಪಿತವಾಯಿತ್ತು!
ಆನೊಂದರಿಯೆನಯ್ಯ!
ಎನ್ನ ಗತಿ ನೀನಾಗಿ, ಎನ್ನ ಮತಿ ನೀನಾಗಿ

ಪ್ರಾಣ ನಿನಗರ್ಪಿತವಾಯಿತ್ತು!
ನೀನಲ್ಲದೆ ಪೆರತೊಂದ ನೆನೆದರೆ ಆಣೆ
ನಿಮ್ಮಾಣೆ ಚೆನ್ನಮಲ್ಲಿಕಾರ್ಜುನ!"

ಎನ್ನುವ ಭಕ್ತಿ. ಈ ಭಕ್ತಿ, ಮರೆದ ಅವನನ್ನು ಅರಿಯುವಂತೆ ಮಾಡುತ್ತದೆ; ಅವನನರಿತಾಕ್ಷಣ ತನ್ನನರಿವುದು ಸಾಧ್ಯವಾಗುತ್ತದೆ; ತನ್ನನರಿದ ಮೇಲೆ ಭಿನ್ನವಿಲ್ಲ, "ತನ್ನ ತಾನರಿದು ತಾನಾದರೆ ಚೆನ್ನಮಲ್ಲಿಕಾರ್ಜುನಲಿಂಗ ತಾನೆ ಬೇರಿಲ್ಲ."

ತನಗೆ ತನ್ನ ಅರಿವೆ ಗುರು ನಿಜ. ಆದರೆ ಅರಿವಿಗೆ ಮುಗಿಯುವುದಿಲ್ಲ ಅರಸುವಿಕೆ. ಒಳಗಿನ ಅರಿವಿಗೆ ತಕ್ಕಂತೆ ಹೊರಗಿನ ಆಚಾರವಿರಬೇಕು. ಇದನ್ನು ಸಾಧಿಸದೆ ಅರಿದೆನೆಂದು ಆಚಾರವ ಮರೆದರೆ ಸಾಧನೆಗೆ ಸಿದ್ದಿಯಿಲ್ಲ:

"ಅರಿವು ಸಾಧ್ಯವಾಯಿತ್ತೆಂದು
ಗುರುಲಿಂಗಜಂಗಮವ ಬಿಡಬಹುದೆ ?
ಸಂದು ಸಂಶಯವಳಿದಖಂಡಜ್ಞಾನವಾಯಿತ್ತೆಂದು
ಪರಧನ-ಪರಸ್ತ್ರೀಗಳುಪಬಹುದೆ ?
"ಯತ್ರ ಜೀವಸ್ತತ್ರ ಶಿವಃ" ಎಂಬ ಅಭಿನ್ನಜ್ಞಾನವಾಯಿತ್ತೆಂದು
ಶುನಕ-ಸೂಕರ-ಕುಕ್ಕುಟ-ಮಾರ್ಜಾಲಂಗಳ ಕೂಡಿ
ಭುಂಜಿಸಬಹುದೆ ?
ಭಾವದಲ್ಲಿ ತನ್ನ ನಿಜದ ನೆಲೆಯನರಿವುತ್ತಿಹುದು,
ಸುಜ್ಞಾನ-ಸತ್ಕ್ರಿಯಾ-ಸುನೀತಿ-ಸುಮಾರ್ಗದಲ್ಲಿ ವರ್ತಿಸುವುದು !
ಹೀಂಗಲ್ಲದೆ ಜ್ಞಾನವಾಯಿತ್ತೆಂದು
ತನ್ನ ಮನಕ್ಕೆ ಬಂದ ಹಾಂಗೆ
ಮೀರಿ ನುಡಿದು ನಡೆದೊಡೆ
ಶ್ವಾನಗರ್ಭದಲ್ಲಿ ಹುಟ್ಟಿಸದೆ ಬಿಡುವನೆ
ಚೆನ್ನಮಲ್ಲಿಕಾರ್ಜುನಯ್ಯನು ?

'ಒಲವು-ಅರಿವು-ಆಚಾರ' ಇದು ತ್ರಿಪುಟಿ ! ಒಲಿದು ಒಲಿಸಿಕೊಳ್ಳಬೇಕು ಶಿವನನ್ನು; ಶಿವನ ಒಲವಿನಿಂದ ಶಿವನ ಅರಿವು ಸಾಧ್ಯವಾಗಲು ಅದರ ಬಲದಿಂದ ತನ್ನನರಿಯಬೇಕು; ಅರಿದಂತೆ ಆಚರಿಸಬೇಕು, ಇದು ಅಕ್ಕನ ಕಾಣ್ಕೆ! ಇದನ್ನನುಸರಿಸುವ ಮಾರ್ಗ ಮಹಾದೇವಿ ನಿರೂಪಿಸಿರುವ "ಸುಜ್ಞಾನ-ಸತ್ಕ್ರಿಯಾ-ಸುನೀತಿಗಳ ಸುಮಾರ್ಗ!" ಹೊರಗೆ ಈ ಹಾದಿಯನ್ನು ತುಳಿಯುತ್ತಿದ್ದಂತೆ ಒಳಗೆ ಭಾವ ತನ್ನ ನಿಜದ ನೆಲೆಯನ್ನರಿಯುತ್ತಿರಬೇಕು! ಇದು

ಮಹಾದೇವಿಯಕ್ಕ ನಮ್ಮ ಮಂಡೆಗೆ ತಂದಿರುವ ಹೂವು! ಇದೊಂದು ಸರ್ವದೃಷ್ಟಿಯಿಂದಲೂ ಸ್ವಪರಿಪೂರ್ಣವೆನಿಸಬಲ್ಲ ದರ್ಶನ. ಇದನ್ನು ಇನ್ನಷ್ಟು ಹಿಗ್ಗಿಸಿ ಹಿಂಜಿ ನೋಡುವುದು ಅವಶ್ಯಕ. ಯಾಕೆಂದರೆ ಇದು ಅಕ್ಕನ ಆಲೋಚನಾಮೃತದ ಕೆನೆ.

ಅಕ್ಕ ಬರಿಯ ಜ್ಞಾನ–ಕ್ರಿಯೆ–ನೀತಿ–ಮಾರ್ಗಗಳೆನ್ನದೆ ಸುಜ್ಞಾನ–ಸತ್ಕ್ರಿಯಾ–ಸುನೀತಿ–ಸುಮಾರ್ಗಗಳೆಂದು ವಿಶ್ಲೇಷಿಸಿ ಹೇಳಿರುವುದು ಗಮನಾರ್ಹವಾದುದು. ಜ್ಞಾನ ಜ್ಞಾನದಲ್ಲಿ ಭೇದವಿದೆ. ಕ್ರಿಯೆ ಕ್ರಿಯೆಯಲ್ಲಿ ಭೇದವಿದೆ, ನೀತಿ ನೀತಿಯಲ್ಲಿ ಭೇದವಿದೆ, ಮಾರ್ಗ ಮಾರ್ಗದಲ್ಲಿ ಭೇದವಿದೆ, ಕಳ್ಳತನ ಮಾಡಲೂ ಆ ಕಸಬಿನ ಜ್ಞಾನಬೇಕು; ಕಳ್ಳತನವೂ ಒಂದು ಕ್ರಿಯೇ, ಕದ್ದ ವಸ್ತುಗಳನ್ನು ಹಂಚಿಕೊಳ್ಳುವ ವಿಷಯದಲ್ಲಿ ಕಳ್ಳರೂ ಒಂದು ನೀತಿಯನ್ನು ಅನುಸರಿಸುತ್ತಾರೆ. ಕಳ್ಳತನಕ್ಕೂ ಒಂದು ಮಾರ್ಗವಿದೆ. ಆದುದರಿಂದ ಕಳ್ಳತನ ಒಳ್ಳೆಯದಾಗಿ ಬಿಡುವುದೆ ? ಅನುಸರಣೀಯವಾಗಿ ಬಿಡುವುದೆ ?

ಒಳ್ಳೆಯ ಗುರಿಯನ್ನು, ಆ ಗುರಿಯತ್ತ ಮುಟ್ಟಲು ತಕ್ಕ ದಾರಿಯನ್ನು ತೋರುವುದೇ ಜ್ಞಾನ. ಗುರಿ–ದಾರಿ ಎರಡೂ ಒಳ್ಳೆಯವಾಗಿರಬೇಕೆಂದರು, ಗಾಂಧೀಜಿಯಂಥವರು. ದಾರಿ ಯಾವುದಾದರೇನು ? ಗುರಿ ಚೆನ್ನಾಗಿದ್ದರೆ ಸಾಕು– ಎಂದರು ಮಾರ್ಕ್ಸನಂಥವರು; ಇದನ್ನರಿತೇ ಅಕ್ಕ ಸುಜ್ಞಾನ, ಸತ್ಕ್ರಿಯ, ಸುನೀತಿ, ಸುಮಾರ್ಗಗಳನ್ನು ಬೋಧಿಸಿದ್ದಾಳೆ. ಬದುಕಿಸುವ ಜ್ಞಾನ, ಬದುಕಗೊಡುವ ಕ್ರಿಯೆ, ಶೋಷಣೆ ತಪ್ಪಿಸುವ ನೀತಿ, ಅಹಿಂಸಾತ್ಮಕ ಮಾರ್ಗಗಳಿಲ್ಲದ ಯಾವ ವ್ಯಷ್ಟಿ – ಸಮಷ್ಟಿ ವ್ಯವಸ್ಥೆಯೂ ಅವ್ಯವಸ್ಥೆಯಾಗಿ ಪರಿಣಮಿಸದಿರದು. ಜಗತ್ತಿನಲ್ಲಿ ಬೇಕಾದಷ್ಟು ನಿರುಪಯುಕ್ತಜ್ಞಾನವಿದೆ. ಆದರೆ ಬಾಳನ್ನು ಬೆಳಸಬಲ್ಲ, ಬಲಿಸಬಲ್ಲ, ಬೆಳಗಬಲ್ಲ ಜ್ಞಾನ ಹೆಚ್ಚದಚಿಲ್ಲ; ಎತ್ತ ನೋಡಿದರೂ ಕಿತ್ತುತಿನ್ನುವ ಕ್ರಿಯೆಗಳೇ. ದುಡಿದು ಪಡೆದು ಹಂಚಿ ಉಣ್ಣುವ ಕ್ರಿಯೆ ವಿರಳ; ಎಲ್ಲೆಲ್ಲೂ ಕುಟಿಲನೀತಿ, ಕುಂತತ್ರ, ಕಾರಸ್ಥಾನಗಳಿವೆ. ಆದರೆ 'ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು' ಒದಗಿಸುವ ನೀತಿಯಿಲ್ಲ. ಬೇಕಾದಷ್ಟು ಶಾಷನಗಳಿವೆ, ನ್ಯಾಯಬುದ್ಧಿ ಉಳಿದಿಲ್ಲ. ಬೇಕಾದಷ್ಟು ಮಾರ್ಗಗಳಿವೆ, ಗುರಿಮುಟ್ಟಿಸುವ ಮಾರ್ಗತಿಳಿದಿಲ್ಲ ! ಪರಿಣಾಮ? ದೊಂಬಿಗಳು, ಘರ್ಷಣೆಗಳು, ಹಿಂಸಾಕಾಂಡಗಳು, ರಕ್ತಪಾತ ಇತ್ಯಾದಿ ಅನಾಹುತಗಳು. ಪರಿಹಾರ? ಸುಜ್ಞಾನಸಂಪಾದನೆ, ಸತ್ಕ್ರಿಯಾಚರಣೆ, ಸುನೀತಿಪಾಲನೆ. ಸುಮಾರ್ಗಾನು ಸರಣೆಗಳು ! ಬೇರೆ ಶಬ್ದಗಳಲ್ಲಿ ಅಕ್ಕನ ಸೂತ್ರದ ಅನುಷ್ಠಾನ!

"ಅಲ್ಲೆಂದೊಡೆ ಉಂಟೆಂಬುದೀ ಮಾಯೆ;
ಒಲ್ಲೆನೆಂದೊಡೆ ಬಿಡದೀ ಮಾಯೆ !
ಎನಗಿದು ವಿಧಿಯೇ?
ಚೆನ್ನಮಲ್ಲಿಕಾರ್ಜುನಯ್ಯ;
ಒಪ್ಪಿ ಮರೆವೊಕ್ಕೊಡೆ ಮತ್ತುಂಟೆ?
ಕಾಯಯ್ಯಾ ಶಿವಧೋ!"

ಮಾಯೆಯೊಂದೇ ಏಕೆ ? ಹೊಲ್ಲವಾದುದೆಲ್ಲವೂ ಇಲ್ಲವಾಗುವುದು ಮಲ್ಲಿಕಾರ್ಜುನನ ಮರೆಹೊಕ್ಕೆಡೆ:

"ಪಂಚೇಂದ್ರಿಯ ಸಪ್ತಧಾತು ಅಷ್ಟಮದ ಕೊಂದು ಕೂಗಿತಲ್ಲಾ!
ಹರಿಬ್ರಹ್ಮರ ಬಲುಹ ಮುರಿದು ಕೊಂದು ಕೂಗಿತಲ್ಲಾ!
ಮಹಾಋಷಿಯರ ತಂಡವ ಕೆಡಿಸಿ ಕೊಂದು ಕೂಗಿತಲ್ಲಾ!
ಚೆನ್ನಮಲ್ಲಿಕಾರ್ಜುನಂಗೆ ಶರಣೆಂದು
ನಂಬಿ ಮರೆಹೊಕ್ಕಡೆ ಅಂಜಿ ನಿಂದುದಯ್ಯಾ!"

ನಂಬಿ ಮರೆಹೋಗಬೇಕು, ಏನೆಂದು ನಂಬಿ? ಶಿವನು ವಿನೊದಪ್ರಿಯ; ತನ್ನ ವಿನೋದಕ್ಕಾಗಿ ಜಗತ್ತನ್ನು ಸೃಜಿಸಿ ತನ್ನ ವಿನೋದಕ್ಕಾಗಿಯೇ ಅದಕ್ಕೆ ಸಕಲ ಪ್ರಪಂಚನು ಸುತ್ತಿ ತನ್ನ ವಿನೋದಕ್ಕಾಗಿಯೇ ಭವದುಃಖಗಳಲ್ಲಿ ತಿರುಗಿಸುತ್ತಾನೆ; ಇವನ್ನು ವಿನೋದಪ್ರವೃತ್ತಿಯಿಂದಲೇ ಸ್ವೀಕರಿಸಿ, ಅವನಿಗೆ ಮೊರೆಯಿಟ್ಟರೆ ಮತ್ತೆ ಅವನೇ ಮಾಯಾಪಾಶವನ್ನು ಹರಿದು ಪೊರೆವನೆಂದು ನಂಬಿ, ಶಿವನು ವಿನೋದಪ್ರಿಯ; ನಾವೂ ವಿನೋದಪ್ರಿಯರಾಗಬೇಕು; ವಿನೋದವಾಗಿಯೇ ಭವದುಃಖಗಳನ್ನು, ಮಾಯಾ ಪಾಶವನ್ನು ಸ್ವೀಕರಿಸಿ ಇವ ಮಾಣಿಸೆಂದು ಮರೆಹೋಗಬೇಕು;

"ತನ್ನ ವಿನೋದಕ್ಕೆ ತಾನೇ ಸೃಜಿಸಿದ ಸಕಲಜಗತ್ತ;
ತನ್ನ ವಿನೋದಕ್ಕೆ ತಾನೇ ಸುತ್ತಿದನದಕ್ಕೆ ಸಕಲ ಪ್ರಪಂಚನು;
ತನ್ನ ವಿನೋದಕ್ಕೆ ತಾನೇ ತಿರುಗಿಸದನನಂತ ಭವದುಃಖಂಗಳಲ್ಲಿ!
ಇಂತೆನ್ನ ಚೆನ್ನಮಲ್ಲಿಕಾರ್ಜುನನೆಂಬ ಪರಶಿವನು
ತನ್ನ ಜಗದ್ವಿಲಾಸ ಸಾಕಾದ ಮತ್ತೆ
ತಾನೆ ಪರಿವನದರ ಮಾಯಾಪಾಶವನು!"

ಈ ನಂಬಿಕೆಗೆ ಪ್ರತಿಯಾಗಿ ಬೇರೊಂದು ಬಗೆಯ ನಂಬಿಕೆಯನ್ನು ಇಟ್ಟುಕೊಳ್ಳಬಹುದು, ಅಂತೂ ನಂಬಬೇಕು. ನಂಬಿ ಕರೆದರೆ ಓ ಎಂಬ ಶಿವನು.' 'ನಂಬುವುದು ಸರಿಯೆ?' ಎಂಬುದು ಬೇರೆ ಪ್ರಶ್ನೆ, ಏನನ್ನೂ ನಂಬದೆ ಇರುವುದು ಸಾಧ್ಯವಿಲ್ಲ.' ನನಗೆ ಯಾತರಲ್ಲಿಯೂ ನಂಬಿಕೆಯಿಲ್ಲವೆನ್ನುವುದೂ ನಂಬಿಕೆಯೇ! ನಂಬುವುದೇ ನಿಜವಾದರೆ ಅದನ್ನಿದನ್ನು ನಂಬುವ ಬದಲು ಆ ಪರಾತ್ಪರ ಸತ್ಯವನ್ನೇ ಪರಮಾತ್ಮನನ್ನೇ ಏಕೆ ನಂಬಬಾರದು? ನಂಬಿದರೆ ಸರಿ; ನಂಬದಿದ್ದರೆ?

"ಗೂಗೆ ಕಣ್ಣ ಕಾಣಲರಿಯದೆ ರವಿಯ ಬಯ್ವುದು;
ಕಾಗೆ ಕಣ್ಣ ಕಾಣಲರಿಯದೆ ಶಶಿಯ ಬಯ್ವುದು;

ಕುರುಡ ಕಣ್ಣ ಕಾಣಲರಿಯದೆ ಕನ್ನಡಿಯ ಬಯ್ವುನು!
ಇವರ ಮಾತೆಲ್ಲವು ಸಹಜವೆ.
ನರಕಸಂಸಾರದಲ್ಲಿ ಹೊದಕುಳಿಗೊಳುತ್ತ
ಶಿವನಿಲ್ಲ, ಯುಕ್ತಿಯಿಲ್ಲ, ಹುಸಿಯೆಂದಡೆ
ನರಕದಲ್ಲಿಕ್ಕದೆ ಬಿಡುವನೆ ಚೆನ್ನಮಲ್ಲಿಕಾರ್ಜುಯನ್ನ?"

ಚೆನ್ನಮಲ್ಲಿಕಾರ್ಜುನಯ್ಯ ನರಕದಲ್ಲಿಕ್ಕಲಿ, ಬಿಡಲಿ–ಅವರವರ ದೃಷ್ಟಿಯಲ್ಲಿ ಅವರ ಮಾತೆಲ್ಲವು ಸಹಜವೆ ಎಂದು ಮುಂದೆ ಸಾಗಿ.

"ಎನ್ನ ಮಾಯದ ಮದವ ಮುರಿಯಯ್ಯಾ;
ಎನ್ನ ಕಾಯದ ಕತ್ತಲೆಯ ಕಳೆಯಯ್ಯಾ
ಎನ್ನ ಜೀವನ ಜಂಜಡವ ಮಾಣಿಸಯ್ಯಾ;
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ–
ಎನ್ನ ಸುತ್ತಿಹ ಪ್ರಪಂಚವ ಬಿಡಿಸಾ, ನಿಮ್ಮ ಧರ್ಮ!"

ಎಂದು ಬಿನ್ನವಿಸಿಕೊಳ್ಳುವುದು ಸುಲಭ ಹಾಗೂ ಸುರಕ್ಷಿತ ಮಾರ್ಗ.

"ಆಲಿಸೆನ್ನ ಬಿನ್ನಪವ, ಲಾಲಿಸೆನ್ನ ಬಿನ್ನಪವ, ಪಾಲಿಸೆನ್ನ ಬಿನ್ನಪವ!
ಏಕೆನ್ನ ಮೊರೆಯ ಕೇಳೆಯಯ್ಯಾ, ತಂದೆ?
ನೀನಲ್ಲದೆ ಮತ್ತಿಲ್ಲ, ಮತ್ತಿಲ್ಲ!
ನೀನೆ ಎನಗೆ ಗತಿ, ನಿನೆ ಎನಗೆ ಮತಿಯಯ್ಯಾ–
ಚೆನ್ನಮಲ್ಲಿಕಾರ್ಜುನಯ್ಯಾ"

ಎಂದು ಮತ್ತೆ ಮತ್ತೆ ಬಿನ್ನವಿಸಿಕೊಳ್ಳುವುದು ನೇರದಾರಿ;

"ಒಂದಲ್ಲ, ಎರಡಲ್ಲ, ಮೂರಲ್ಲ, ನಾಲ್ಕಲ್ಲ–
ಎಂಬತ್ತು ನಾಲ್ಕು ಲಕ್ಷ ಯೋನಿಗಳೊಳಗೆ ಬಂದೆ, ಬಂದೆ!
ಬಾರದ ಭವಂಗಳಲ್ಲಿ, ಉಂಡೆ ಉಂಡೆ ಶುಭಾಶುಭಂಗಳ!
ಹಿಂದಣ ಜನ್ಮ ತಾನೇನಾದಡೆಯೂ ಆಗಲಿ,
ಮುಂದೆ ನೀ ಕರುಣಿಸು!"

ಎಂದು ಅನನ್ಯ ಶರಣತೆಯೊಡನೆ ಅಂಗಲಾಚುವುದು ಬಟ್ಟೆಗಳಲ್ಲಿ ಬಟ್ಟೆ! ಬೇರೆ ಬಟ್ಟೆಗಳ ಸ್ವರೂಪು ತಿಳಿದೇ ಇದೇ. ಓದು, ವಾದ, ವೇದಾದಿಗಳ ಸ್ವರೂಪ ತಿಳಿದೇ ಇದೇ;

"ಓದಿ ಓದಿ ವೇದ ವಾದಕ್ಕಿಕ್ಕಿತ್ತು;
ಕೇಳಿ ಕೇಳಿ ಶಾಸ್ತ್ರಸಂದೇಹಕ್ಕಿಕ್ಕಿತು;

ಅರಿದೆಹೆ ಅರಿದೆಹೆನೆಂದು ಆಗಮ ಅರೆಯಾಗಿ ಹೋಯಿತ್ತು;
ಪೂರೈಸಿಹೆ ಪೂರಃಸಿಹೆನೆಂದು ಪುರಾಣ ಪೂರ್ವದ ಬಟ್ಟೆಗೆ
ಹೋಯಿತ್ತು!"

ಆದುದರಿಂದ

"ಆವ ವಿದ್ಯೆಯ ಕಲಿತಡೇನು–ಸಾವ ವಿದ್ಯೆ ಮಾಣದನ್ನಕ್ಕ?
ಅಶನವ ತೊರೆದಡೇನು, ವ್ಯಸನವ ಮರೆದಡೇನು
ಉಸಿರ ಗಿಡಿದರೇನು, ಬಸಿರ ಕಟ್ಟಿದಡೇನು?
ಚೆನ್ನಮಲ್ಲಿಕಾರ್ಜುನದೇವಯ್ಯ
ನೆಲ ತಳವಾರನಾದಡೆ ಕಳ್ಳನೆಲ್ಲಿ ಅಡಗುವ?"

ಶಿವ ಶಂಭುವ ನಂಬಿದರೆ ನಲೆ ತಳವಾರನಾದಂತೆ! ಎಲ್ಲಿಗೆ ಹೋದರೂ ಬೆನ್ನ ಹಿಂದಿದ್ದು ಬಟ್ಟೆ ದೋರುವ, ತನ್ನ ಪಾದವನ್ನರಿಯುವಂತೆ ಮಾಡಿ ಆ ಅರಿವಿನಿಂದ ನಾವು ನಮ್ಮನರಿತುಕೊಳ್ಳುವಂತೆ ಅನುಗ್ರಹಿಸುವ ನಮ್ಮ ನಾವು ಅರಿತ ಮೇಲೆ ಅನ್ಯಭಿನ್ನವೆಲ್ಲಿ? ಆಗ ಅಕ್ಕಮಹಾದೇವಿಯಂತೆ ನಾವೂ–

"ಘನವ ಕಂಡೆ; ಅನುವ ಕಂಡೆ;
ಆಯತ–ಸ್ವಾಯತ–ಸನ್ನಿಹಿತ ಸುಖವ ಕಂಡೆ!
ಅರಿವನರಿದು ಮರಹ ಮರೆದೆ!
ಕುರುಹಿನ ಮೋಹದ ಮರವೆಯನೀಡಾಡಿದೆ!
ಚೆನ್ನಮಲ್ಲಿಕಾರ್ಜುನ ನಿಮ್ಮನರಿದು ಸೀಮೆಗೆಟ್ಟೆನು!"

ಎಂದು ಉದ್ಗರಿಸಬಹುದು. ಅಕ್ಕನ,

"ಅರುಹಿಂದ ಆಚರಿಸಬೇಕು । ಮರಹಿಲ್ಲದೆ ತಾನಿರಬೇಕು ॥
ತೆರೆಯ ಮರೆಯ ಕುರುಹರಿಯ ಬೇಕು । ಪರಬ್ರಹ್ಮದೊಳಗೆ ತಾ
ನೆರೆಯ ಬೇಕು॥"

ಎಂಬ ಸಾಧನಸೋಪಾನವನ್ನೇರಲು ಸಿದ್ಧರಾಗಬಹುದು.

ನಂಬಿಕೆಯ ಈ ದಾರಿ ಸುಗಮವಾದುದೇನೋ ಸರಿ; ಆದರೆ ಈ ನಂಬಿಕೆ ತಾನಾಗಿ ತಲೆದೋರುವುದೆ? ಅದು ಸ್ವಯಂಭೂವೆ? ಅದಕ್ಕೂ ಉದ್ದೀಪಕಗಳ ಅಗತ್ಯವಿದೆಯೇ? ಇದ್ದರೆ ಅವು ಯಾವುವು? ಅವುಗಳನ್ನು ಪಡೆವ ಪರಿಯಾವುದು? ಅವು ಎಲ್ಲರಿಗೂ ಲಭ್ಯವೆ, ಪಡೆದು ಬಂದವರಿಗೆ ಮಾತ್ರ ಮೀಸಲೆ?

ಸ್ವಯಂ ಸ್ಫೂರ್ತತೆಗೆ ಸ್ಥಾನವಿಲ್ಲದಿಲ್ಲ, ಆದರೆ ತೆರೆದ ಕಣ್ಣು, ಕೇಳುವ ಕಿವಿ, ಅನುಭವಿಸುವ ಹೃದಯ, ಮನನಿಸುವ ಮನ, ಅರಿಯುವ ತವಕವುಳ್ಳ ಯಾರಾದರೂ ಸುತ್ತಣ ಪರಿಸರದಿಂದ

ಪ್ರೇರಣೆಗಳನ್ನು ಪಡೆದು ಸ್ವಂತ ವಿಶ್ವಾಸವೊಂದನ್ನು ಸೃಜಿಸಿ ಕೊಳ್ಳಬಹುದಾಗಿದೆ. ಸುತ್ತಲೂ ಸೂರೆಯಾಗಿರುವ ಸೃಷ್ಟಿ ಸೌಂದರ್ಯ, ಭೂಮಿಯಿಂದ ವ್ಯೋಮಪರ್ಯಂತ ಪಸರಿಸುವ ಸೋಜಿಗಗಳು, ಪ್ರಕೃತಿವ್ಯಾಪಾರಗಳು, ರಹಸ್ಯಗಳು, ಜನನದ ನಿಗೂಢತೆ, ಮರಣದ ಅಜ್ಞೇಯತೆ, ಜೀವನದ ದುರೂಹತೆಗಳು ಕ್ಷಣಕ್ಷಣಕ್ಕೂ ನಮ್ಮನ್ನು ಕೆಣಕುತ್ತಲೇ ಇರುತ್ತವೆ. ಅವುಗಳನ್ನು ನೋಡಿಯೂ ಕುರುಡರಂತೆ ನಡೆದರೆ, ಅವುಗಳ ಅಕಾಯ ಸ್ವರಗಳನ್ನು ಕೇಳಿಯೂ ಕಿವುಡರಂತೆ ಸಾಗಿದರೆ ಅವುಗಳು ಅಪರಾಧಿಗಳಾಗಲಾರವು. ಅಪರಾಧಿಗಳು ನಾವೇ. ಹುಟ್ಟುತ್ತಲೇ ಬೆರಗುಗಣ್ಣುಗಳನ್ನು, ಲವಲವಿಸುವ ಕಿವಿಗಳನ್ನು ಪಡೆದು ಬಂದರೂ ಬರಬರುತ್ತ ಅವು ಮರಗಣ್ಣು ಮರಗಿವಿಗಳಾಗುವಂತೆ ಮಾಡಿ ಬಿಡುತ್ತೇವೆ, ನಾವು!

ಅಕ್ಕನ ಹಿರಿಮೆಯಿರುವುದು ಇಲ್ಲಿ; ಕೊನೆಯವರೆಗೆ ಬೆರಗನ್ನು, ತೆರೆದ ಕಣ್ಣುಗಳನ್ನು, ಕೇಳುವ ಕಿವಿಗಳನ್ನು, ಪ್ರೀತಿಸುವ ಹೃದಯವನ್ನು, ಆಲೋಚಿಸುವ ಬುದ್ಧಿಯನ್ನು ಎಲ್ಲವನ್ನು ಉಳಿಸಿಕೊಂಡಳಾಕೆ, ಮಗುವಾಗಿದ್ದಾಗ ಯಾವ ಬೆರಗಿನಿಂದ ಭುವಿಯನ್ನು ನೋಡಿದಳೋ, ಸಾಧಕಳಾಗಿಯೂ ಅದೇ ನಿಬ್ಬೆರಗಿನಿಂದ ಸೃಷ್ಟಿ ವ್ಯಾಪಾರಗಳನು ಈಕ್ಷಿಸಿದಳು; ಈಕ್ಷಿಸಿ ಅವುಗಳ ಸೂಕ್ಷ್ಮ ರಹಸ್ಯಗಳನ್ನು ಅರಿತಳು;

"ಈಳೆ, ನಿಂಬೆ, ಮಾವು, ಮಾದಲಕ್ಕೆ
ಹುಳಿನೀರನೆರೆದವರಾರಯ್ಯ?
ಕಬ್ಬು, ಬಾಳೆ, ನಾರಿವಾಳಕ್ಕೆ
ಸಿಹಿನೀರನೆರೆದವರಾರಯ್ಯ?
ಕಳವೆ, ಶಾಲಿಗೆ
ಓಗರದ ಉದಕವನೆರೆದವರಾರಯ್ಯ?
ಮರುಗ, ಮಲ್ಲಿಗೆ, ಪಚ್ಚೆ, ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯ?
ಇಂತೀ ಜಲ ಒಂದೆ, ನೆಲ ಒಂದೆ, ಆಕಾಶ ಒಂದೆ
ಒಂದೇ ಜಲವು ಹಲವು ದ್ರವ್ಯಂಗಳ ಕೂಡಿ
ತನ್ನ ಪರಿ ಬೇರಾಗಿಹ ಹಾಂಗೆ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿದ್ದರೇನು? ತನ್ನ ಪರಿ ಬೇರೆ!"

ಇಲ್ಲಿ ಬಂದಿರುವುವು ಯಾರೂ ನೋಡದ ನೋಟಗಳೇನಲ್ಲ. ಆದರೆ ಅಕ್ಕನಂತೆ ನೋಡಿದವರು ಎಷ್ಟು ಮಂದಿ? ಮೇಲುನೋಟದಿಂದ ತೃಪ್ತಳಾಗದೆ ಮೂಲಕ್ಕಿಳಿದು, ಒಂದೇ ಜಲವು ಹಲವು ದ್ರವ್ಯಂಗಳ ಕೂಡಿಹಲವು ಪರಿಯಾಗುವ ಸೃಷ್ಟಿ ವ್ಯಾಪಾರದಿಂದ

ಹಲವು ಜಗಂಗಳ ಕೂಡಿಯೂ ತನ್ನ ಬೇರೆ ಪರಿಯನ್ನು ಉಳಿಸಿಕೊಂಡಿರುವ ಮಲ್ಲಿಕಾರ್ಜುನನ ನಿಜವನರಿದ ಅಕ್ಕನ ಬಗ್ಗೆ ಗೌರವ ಉಕ್ಕುವುದು ಅದಾವ ಅಚ್ಚರಿ? ಇಲ್ಲಿ ಬೆರಗು ಅರಿವಿನ ಅಂತಃಪುರಕ್ಕೆ ನಿಜದ ನೆಲೆಗೆ ದಾರಿಯಾಗಿರುವುದನ್ನು ನೋಡಬಹುದಾಗಿದೆ. ಈ ಬೆರಗು ಉದ್ದಕ್ಕೂ ಅಕ್ಕನ ಬಾಳಬನದ ಮೇಲೆ ಬೆಳ್ದಿಂಗಳಾಗಿ ಪವಡಿಸಿದೆ. ಇದೇ ಬೆರಗು ಅವಳ ಲಿಂಗಾರ್ಚನೆಯ ಸಂದರ್ಭದಲ್ಲಿಯೂ ಅಲ್ಲಲ್ಲಿ ವ್ಯಕ್ತರಾಗಿರುವುದು ಈ ಮಾತಿಗೆ ಪುಷ್ಟಿಯನ್ನೊದಗಿಸುತ್ತಿದೆ:

"ಕ್ರೀಗಳು ಮುಟ್ಟಲರಿಯವು; ನಿಮ್ಮನೆಂತು ಪೂಜಿಸುವೆ?!
ನಾದಬಿಂದುಗಳು ಮುಟ್ಟಲರಿಯವು; ನಿಮ್ಮನೆಂತು ಹಾಡುವೆ?!
ಕಾಯ ಮುಟ್ಟುವೊಡೆ ಕಾಣಬಾರದ ಘನವು;
ನಿಮ್ಮನೆಂತು ಕರಸ್ಥಲದಲ್ಲಿ ಧರಿಸುವೆ?
ಚೆನ್ನಮಲ್ಲಿಕಾರ್ಜುನಯ್ಯ,
ನಾನೇನೆಂದರಿಯದೆ ನಿಮ್ಮ ನೋಡಿ ಸೈವೆರಗಾಗುತಿರ್ದೆನು!"

ಈ ಬೆರಗೂ ಒಂದು ದಾರಿ; ಆದರೆ ಇದೊಂದೇ ದಾರಿಯೇನಲ್ಲ ಅರಿವಿನ ಅರಮನೆಗೆ! ಗುರೂಪದೇಶ, ಅರಿದವರ ಸಂಗ, ಸ್ವತಂತ್ರ ಚಿಂತನೆಗಳೂ ದಾರಿಗಳೇ. ಇವೆಲ್ಲವೂ ಪರಿಚಿತ ಮಾರ್ಗಗಳೇ ಅಕ್ಕನಿಗೆ, ಗುರುವಿಗೆ ಅತ್ಯಂತ ತುಂಬಿದ ಹೃದಯದಿಂದ ಭಕ್ತಿಯ ಕಾಣಿಕೆಯನ್ನು ಸಲ್ಲಿಸಿದ್ದಾಳೆ:

"ಒಳಗೆ ಶೋಧಿಸಿ, ಹೊರಗೆ ಶುದ್ಧವಿಸಿ,
ಒಳಹೊರಗೆಂಬ ಉಭಯ ಶಂಕೆಯ ಕಳೆದು
ಸ್ಫಟಿಕದ ಸಲಾಕೆಯಂತೆ ತಳವೆಳಗು ಮಾಡಿ,
ಸುಕ್ಷೇತ್ರವನರಿದು ಬೀಜವ ಬಿತ್ತುವಂತೆ
ಶಿಷ್ಯನ ಸರ್ವಪ್ರಪಂಚ ನಿವೃತ್ತಿಯಂ ಮಾಡಿ, ನಿಜೋಪದೇಶವನಿತ್ತು
ಆ ಶಿಷ್ಯನ ನಿಜದಾದಿಯನೈದಿಸುವನೀಗ ದೀಕ್ಷಾಗುರು!
ಆ ಸಹಜ ಗುರುವೀಗ ಜಗದಾರಾಧ್ಯನು!
ಅವನ ಶ್ರೀಪಾದಕ್ಕೆ ನಮೋ ನಮೋ ಎಂಬೆ ಕಾಣಾ
ಚೆನ್ನಮಲ್ಲಿಕಾರ್ಜುನಾ"

ನಿಜದಾದಿಯನೈದಿಸಲು ಅರಿದವರ ಸಂಗವೂ, ಅನುಭಾವಿಗಳ ಸಂಗವೂ ಅಗತ್ಯ. ಯಾಕೆ?

"ಸಂಗದಿಂದಲ್ಲದೆ ಅಗ್ನಿ ಹುಟ್ಟದು:
ಸಂಗದಿಂದಲ್ಲದೆ ಬೀಜ ಮೊಳೆದೋರದು:

ಸಂಗದಿಂದಲ್ಲದೆ ಸರ್ವಸುಖದೋರದು;
ಚೆನ್ನಮಲ್ಲಿಕಾರ್ಜುನಯ್ಯ
ನಿನ್ನ ಮಹಾನುಭಾವಿಗಳ ಸಂಗದಲಾನು
ಪರಮಸುಖಿಯಾದೆನಯ್ಯ!"

ಸಂಗ ಮಹಾನುಭಾವಿಗಳ ಸಂಗವಾಗಬೇಕು; ಅರಿದವರ ಸಂಗವಾಗಬೇಕು; ಅರಿಯದವರ ಸಂಗವಲ್ಲ! ಯಾಕೆ?

"ಅರಿಯದವರೊಡನೆ ಸಂಗವ ಮಾಡಿದರೆ
ಕಲ್ಲ ಹೊಯ್ದು ಕಿಡಿಯ ಕೊಂಬಂತೆ!
ಬಲ್ಲವರೊಡನೆ ಸಂಗವ ಮಾಡಿದರೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ!
ಚೆನ್ನಮಲ್ಲಿಕಾರ್ಜುನಯ್ಯ
ನಿಮ್ಮ ಶರಣರ ಸಂಗ
ಕರ್ಪುರಗಿರಿಯ ಉರಿಯು ಕೊಂಡಂತೆ!"

ಅನುಭಾವಿಗಳ, ಶರಣರ ಸಂಗ ದೊರೆತ ಮೇಲೆ, 'ಅರಿದೆನೆಂದರೆ ಅರಿಯ ಬಾರದು ನೋಡಾ! ಘನಕ್ಕೆ ಘನ ತಾನೆ ನೋಡಾ ! ಚೆನ್ನಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಸೋತೆನು!' ಎಂಬ ಹತಾಶಭಾವ ಬಯಲಾಗಿ,

"ಅಯ್ಯ, ನಿಮ್ಮನುಭಾವಿಗಳ ಸಂಗದಿಂದ
ಎನ್ನ ತನು ಶುದ್ಧವಾಯಿತ್ತು!
ಅಯ್ಯ, ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ಮನ ಶುದ್ಧವಾಯಿತ್ತು
ಅಯ್ಯ, ನಿಮ್ಮ ಅನುಭಾವಿಗಳು ಒರೆದೊರೆದು ಆಗುಮಾಡಿದ ಕಾರಣ
ಚೆನ್ನಮಲ್ಲಿಕಾರ್ಜುನ, ನಿಮಗಾನು ತೊಡಿಗೆಯಾದೆನು!"

ಎಂದು ಸಾರುವ ಆತ್ಮವಿಶ್ವಾಸ ಮೂಡುತ್ತದೆ. ಕೇವಲ ಸಂಗ ಮಾತ್ರದಿಂದ ಇದು ಸಾಧಿಸುವುದೆ? ಸಂಗ ಆತ್ಮ ಆತ್ಮಗಳ ಮಂಥನಕ್ಕೆ ದಾರಿಮಾಡಿಕೊಡುವುದಾಗಿ ಅಕ್ಕನದಕ್ಕೆ ಇಷ್ಟೊಂದು ಮಹತ್ವವಿತ್ತಿರುವುದು.

"ಮರಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳ ಸುಡಲಾಯಿತ್ತು!
ಆತ್ಮವಾತ್ಮ ಮಥನಿಸಿ ಅನುಭಾವ ಹುಟ್ಟಿ
ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು!

ಇಂತಪ್ಪ ಮಹಾನುಭಾವರ ಅನುಭಾವವ ತೋರಿ
ಎನ್ನನುಳುಹಿಕೊಳ್ಳ, ಚೆನ್ನಮಲ್ಲಿಕಾರ್ಜುನಾ!"

ಆತ್ಮ ಆತ್ಮ ಮಥನಿಸಿದಲ್ಲಿ ಅರಿವು ಅನುಭಾವವಾಗುವ ಅಚ್ಚರಿ ನಡೆಯುತ್ತದೆ. ಶರಣರ ಅನುಭಾವ ಏನ ಮಾಡದು?

"ನೋಡಿ ನುಡಿಸಿ ಮಾತಾಡಿಸಿದಡೊಂದು ಸುಖ!
ಏನ ಮಾಡದಯ್ಯ ನಿಮ್ಮ ಶರಣರ ಅನುಭಾವ?
ಚೆನ್ನಮಲ್ಲಿಕಾರ್ಜುನಯ್ಯ
ನಿಮ್ಮ ಶರಣರ ಸದ್ಗೋಷ್ಠಿ ಏನ ಮಾಡದಯ್ಯಾ?"

ನಿಜ, ಏನ ಮಾಡದು? ಅದು ನಿಜದಾದಿಗೆ, ನಿತ್ಯಸತ್ಯದ ಸಚ್ಚಿದಾನಂದ ನೆಲೆಗೆ ನಮ್ಮನ್ನು ಕರೆದೊಯ್ಯುವುದು; ಅದನ್ನು ಒಲಿಯುವಮತೆ ಮಾಡುವುದು. ಆಗ–

"ಗಂಗೆಯೊಡನಾಡಿದ ಪುಟ್ಟ ಬೆಟ್ಟಂಗಳು ಕೆಟ್ಟ ಕೇಡ ನೋಡಿರಯ್ಯಾ;
ಅಗ್ನಿಯಡೊನಾಡಿದ ಕಾಷ್ಠಗಳು ಕೆಟ್ಟ ಕೇಡ ನೋಡಿರಯ್ಯ;
ಜ್ಯೋತಿಯೊಡನಾಡಿದ ಕತ್ತಲೆ ಕೆಟ್ಟ ಕೇಡ ನೋಡಿರಯ್ಯ;
ಜ್ಞಾನಿಯೊಡನಾಡಿದ ಅಜ್ಞಾನಿ ಕೆಟ್ಟ ಕೇಡ ನೋಡಿರಯ್ಯ;
ಎಲೆ ಪರಶಿವಮೂರ್ತಿ ಹರನೆ,
ನಿಮ್ಮ ಜಂಗಮಲಿಂಗದೊಡನಾಡಿ
ಎನ್ನ ಭವಾದಿ ಭವಂಗಳು ಕೆಟ್ಟ ಕೇಡ ನೋಡಾ
ಚೆನ್ನಮಲ್ಲಿಕಾರ್ಜುನಾ!"

ಎಂದ ಉದ್ಗರಿಸುವಂತಾಗುತ್ತದೆ.

ಎತ್ತರಕ್ಕೆ ಏರುವುದು ಅಸಾಧ್ಯವೇನಲ್ಲ; ಆದರೆ ಆ ಎತ್ತರದಲ್ಲಿಯೇ ನಿಲ್ಲುವುದು ಕಷ್ಟದ ಕೆಲಸ. ಉತ್ತುಂಗ ಶಿಖರಗಳಿರುವುದು ವಿಹಾರಕ್ಕಾಗಿ, ವಸತಿಗಾಗಿಯಲ್ಲವೆಂಬ ಹೇಳಿಕೆಯೊಂದಿದೆ. ಆದರೆ ಎತ್ತರದಲ್ಲಿ ಉಳಿಯಲಾಗಿದ್ದರೆ ಹತ್ತಿದ ಶ್ರಮ ವ್ಯರ್ಥವಲ್ಲವೆ? ಅಂತೆಯೇ ಬೆರಗು, ಅರಿವು, ಅನುಭಾವಗಳ ಸೆರಗು ಹಿಡಿದು ನಿಜದಾದಿಗೆ ತೆರಳಿ ಅಲ್ಲಿಂದ ಮತ್ತೆ ಭವಕ್ಕೆ ಮರಳಿದರೆ ಏನು ಫಲ? ಅಲ್ಲಿಯೇ ನಿಲ್ಲಲು ಅಡ್ಡ ಬರುವುದಾವುದು? ಮನ! ಆ ಮನವನ್ನು ನಿಯಂತ್ರಿಸುವುದು ಹೇಗೆ?

"ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ
ತನ್ನ ನೂಲು ತನ್ನನೇ ಸುತ್ತಿ ಸಾವಂತೆ
ಮನ ಬಂದುದನ್ನು ಬಯಸಿ ಬೇವುತ್ತಿದ್ದೇನಯ್ಯಾ!

ಎನ್ನ ಮನದ ದುರಾಶೆಯ ಮಾಣಿಸಿ
ನಿಮ್ಮತ್ತ ತೋರಾ, ಚೆನ್ನಮಲ್ಲಿಕಾರ್ಜುನಾ!"

ಎಂದು ಪ್ರಲಾಪಿಸಿ ಪ್ರಾರ್ಥಿಸುವುದೇನೋ ಸರಿ; ಆದರೆ ಇದಿಷ್ಟರಿಂದಲೇ ಮನವನ್ನು ಮಹದಲ್ಲಿ ಕದಲದಂತೆ ನಿಲ್ಲಿಸುವುದು ಸಾಧ್ಯವೆ? ಮನ ಲಯವಾಗಬೆಕೆನ್ನುವವರು ಅನ್ನಲಿ, ಅದು ಲಯವಾಗುವಂಥದಲ್ಲ; ಅದು ಫಿನಿಕ್ಸ್ ಪಕ್ಷಿ, ಸುಟ್ಟಷ್ಟೂ, ಹುಟ್ಟಿ ಹಾರಾಡುತ್ತದೆ! ಬೇರೆ ದಾರಿಯನ್ನೇ ಹುಡುಕಬೇಕು, ಹುಡುಕಿದ್ದಾಳೆ ಅಕ್ಕ;

"ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೆ ಬೀಜ
ಎನಗುಳ್ಳುದೊಂದು ಮನ;
ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ
ಎನಗೆ ಭಯವುಂಟೆ, ಚೆನ್ನಮಲ್ಲಿಕಾರ್ಜುನ?"

ಭಯವಿರಲಾರದು! ಕರಣಂಗಳ ಎಲ್ಲ ಚೇಷ್ಟೆಗಳಿಗೆ ಬೀಜವಾದ ಮನವೇ ಮಲ್ಲಿನಾಥನಲ್ಲಿ ಮಗ್ನವಾದ ಬಳಿಕ ಭಯವೆಲ್ಲಿಯದು? ಆಗ ಕರಣಂಗಳೆಲ್ಲ ಲಿಂಗ ಕಿರಣಂಗಳು! ಅಂತೆಯೇ ನಿಶ್ಚಯದ ಸ್ವರದಲ್ಲಿ ಬರೆದಿದ್ದಾಳೆ, ಅಕ್ಕ;

"ವೇದಶಾಸ್ತ್ರ ಆಗಮ ಪುರಾಣಂಗಳೆಲ್ಲವೂ
ಕೊಟ್ಟಣದ ಕುಟ್ಟಿದ ನುಚ್ಚು ತೌಡು ಕಾಣಿಭೋ!
ಇವ ಕುಟ್ಟಲೇಕೆ, ಕುಸುಕಲೇಕೆ?
ಅತ್ತಲಿತ್ತ ಹರಿವ ಮನದ ಶಿವನರಿದಡೆ
ಬಚ್ಚ ಬರಿಯ ಬಯಲು, ಚೆನ್ನಮಲ್ಲಿಕಾರ್ಜುನ!"

ಅತ್ತಲಿತ್ತ ಹರಿವ ಮನವ ಹರಿಯದಂತೆ ಮಾಡಿ ಮಲ್ಲಿನಾಥನಲ್ಲಿಯೇ ನೆಲೆಗೊಳ್ಳುವಂತೆ ಮಾಡಿದುದೇ ಮಹಾದೇವಿಯಕ್ಕನ ಮಹತ್ಸಾಧನೆ, ಅಳಿಮನದವರಿಗಿದು ಸಾಧ್ಯವಿಲ್ಲ. ಅವರ ಸಾಧನೆ ಗಟ್ಟಿಗೊಳ್ಳದೆ, ಸುಟ್ಟು, ಇಟ್ಟಿಗೆಯಾಗದೆ, ಒಣ ಮಣ್ಣಿನ ಹೆಂಟೆಯಾಗಿಯೇ ಉಳಿಯುತ್ತದೆ; ನೀರು ಬಿದ್ದಿತೋ ಕರಗಿ ಹೋಗುತ್ತದೆ. ಅಕ್ಕನ ಸಾಧನೆ ಇಂಥದಲ್ಲ; ಅದು ನೀರು ಮುತ್ತಾಗಿ ಮಾರ್ಪಡುವ ರೀತಿಯ ಸಾಧನೆ;

"ಮುತ್ತೂ ನೀರಲಾಯಿತ್ತು;
ವಾರಿಕಲ್ಲೂ ನೀರಲಾಯಿತ್ತು;

ಉಪ್ಪೂ ನೀರಲಾಯಿತ್ತು;
ಉಪ್ಪು ಕರಗಿತ್ತು; ವಾರಿಕಲ್ಲೂ ಕರಿಗಿತ್ತು!
ಮುತ್ತು ಕರಗಿದುದನಾರೂ ಕಂಡವರಿಲ್ಲ!
ಈ ಸಂಸಾರಿ ಮಾನವರು
ಲಿಂಗವ ಮುಟ್ಟಿ ಭವಭಾರಿಗಳಾದರು!
ನಾನು ನಿಮ್ಮ ಮುಟ್ಟಿ ಕರಿಗೊಂಡೆನಯ್ಯ–
ಚೆನ್ನಮಲ್ಲಿಕಾರ್ಜುನಯ್ಯಾ!"

ನಿಜದಾರಿಯ ಮುಟ್ಟುವುದು ಮಾತ್ರವಲ್ಲ, ಮುಟ್ಟಿ ಕರಿಗೊಳ್ಳಬೇಕು; ನೀರು ಮುತ್ತಾಗುವ ರೀತಿಯಲ್ಲಿ ಕರಿಗೊಳ್ಳಬೇಕು; ಉಪ್ಪಾಗಿ, ವಾರಿಕಲ್ಲಾಗಿ ಕರಗಿ ಹೋಗುವುದರಿಂದ ಪ್ರಯೋಜನವಿಲ್ಲ. ಮುತ್ತಾಗಿ ಕರಿಗೊಂಡಾಗಲೇ ಬೆಡಗಿನ, ಅರಿವಿನ, ಗುರುವಿನ, ಅನುಭಾವಿಯ ಮೂಲಕ ಬಚ್ಚಬರಿಯ ಬಲಯನ್ನು ಮುಟ್ಟಿದುದು ಸಾರ್ಥಕವಾಗುತ್ತದೆ. ಮರಳಿ ಕರಗಿ ಹೋಗುವ ಭಯ ಲಯವಾಗುತ್ತದೆ;

"ದೃಷ್ಟಿವರಿದುದು; ಮನ ನೆಲೆಗೊಂಡುದಿದೇನೊ!
ಆವನೆಂದರಿಯೇ, ಭಾವನಟ್ಟುದವ್ವಾ!
ಕಳೆವರಿದು ಅಂಗ ಗಸಣೆಯಾದುದವ್ವಾ!
ಇನ್ನಾರೇನಂದಡೆ ಬಿಡೆನು, ಚೆನ್ನಮಲ್ಲಿಕಾರ್ಜುನಲಿಂಗವ!"

ಎಂದು ಸಾರುವ ಸತ್ವ ಮೂಡುತ್ತದೆ.

ಅನಾದ್ಯನಂತನನ್ನು, ಚೆಲುವಿಗೆ ಚೆಲುವಾದ, ಚೇತನಕೆ ಚೇತನವಾದ, ರಸಕ್ಕೆ ರಸವಾದ, ವಿಶ್ವಂಭರ ವಿಶ್ವಾತೀತನಾದ ವಿಶ್ವಾತ್ಮನನ್ನು ಒಲಿದಾಯಿತು; ಅವನೂ ಕರುಣದಿಂದ ಹಿಡಿದೆತ್ತಿ ತನ್ನ ಪಾದವನರುಹಿಸಿಕೊಂಡ; ಅವನರಿವಿನಿಂದ ಅಕ್ಕ ತನ್ನ ತಾನರಿದು–

"ಗುರುವೆನ್ನ ಕಾಯವು ಹರನೆನ್ನ ಮನವಯ್ಯ
ಪರಮಜಂಗಮವೆ ಅನುಭಾವ ಮುಖವೆನ್ನ
ಇರವೆಲ್ಲ ಲಿಂಗಮಯವಯ್ಯ!"

ಎಂದು ಹಾಡಿದುದಾಯಿತು;

"ಕಾಯದ ಕಳವಳವ ಕೆಡಿಸಿ ಮನದ ಮಾಯೆಯ ಮಾಣಿಸಿ
ಎನ್ನ ಹರಣವ ಮೇಲೆತ್ತಿ ಸಲಹಿದೆಯಯ್ಯಾ!
ಶಿವಶಿವ, ಎನ್ನ ಭವಬಂಧನವ ಬಿಡಿಸಿ

ನಿಮ್ಮತ್ತ ತೋರಿದ ಘನವನುಪಮಿಸಬಾರದಯ್ಯಾ!
ಇರುಳೋಸರಿಸಿದ ಜಕ್ಕವಕ್ಕಿಯಂತೆ ನಾನಿಂದು ನಿಮ್ಮ
ಶ್ರೀಪಾದವನಿಂಬುಗೊಂಡು
ಸುಖದೊಳೋಲಾಡುವೆನಯ್ಯಾ, ಚೆನ್ನಮಲ್ಲಿಕಾರ್ಜುನಾ!"

ಎಂದು ನುಡಿದುದಾಯಿತು!

ಅಕ್ಕನು ಅರಿವಿಗೆ ಆದ್ಯತೆಯನ್ನು ಕೊಟ್ಟಿದ್ದು ಸಹಜವೇ, ಸಮುಚಿತವೇ, ಅರಿವಿಲ್ಲದ ಆಚಾರ ಗೊಡ್ಡು.

"ಅಕ್ಕಿಯಿಲ್ಲದ ತುಷಕ್ಕೆ ಅಗ್ಘವಣಿಯನೆರೆದರೆ
ಅದೆಂದಿಂಗೆ ಬೆಳೆದು ಫಲವಪ್ಪುದಯ್ಯ?
ಅರಿವಿಲ್ಲದವರಿಗೆ ಆಚಾರವಿದ್ದರೆ
ಅರಕೆಗೆಟ್ಟು ಸುಖವೆಂದಪ್ಪುದಯ್ಯ?
ಹೊರೆದ ಪರಿಮಳ ಸ್ಥಿರವಾಗಬಲ್ಲುದೆ?
ಎನ್ನ ದೇವ ಚೆನ್ನಮಲ್ಲಿಕಾರ್ಜುನನನರಿಯದವರಿಗೆ
ಆಚಾರವಿಲ್ಲ ಕಾಣಿರಣ್ಣಾ!"

ಅರಿವಿಲ್ಲದ ಆಚಾರ ಅಂಧಾಚಾರ; ಅರಿವಿಲ್ಲದ ಆಚಾರ ಹೊಲ್ಲ! ಅಂತೆಯೇ ಆಚಾರವಿಲ್ಲದ ಅರಿವೂ ಬರಡರಿವು. ಸುಜ್ಞಾನ ಸತ್ಕ್ರಿಯೆಯಾಗಿ ಪ್ರಕಟವಾದಾಗ ಜ್ಞಾನಕ್ರಿಯೆಗಳೆರಡೂ ಧನ್ಯ! ಸುಜ್ಞಾನ ಸತ್ಕ್ರಿಯೆಗಳ ಸಾಮರಸ್ಯದ ಸೊಗಸೇ ಸೊಗಸು. ಆದುದರಿಂದ ಅಂತರಂಗದ ಅರಿವು ಬಹಿರಂಗದ ಕ್ರಿಯೆಯಾಗಿ ಮೈದೋರಲೇಬೇಕು. ಅಕ್ಕನಿದನ್ನು ಅರಿತೇ–

"ಎನ್ನಂಗದಲ್ಲಿ ಆಚಾರವ ತೋರಿದನಯ್ಯ ಬಸವಣ್ಣನು;
(ಆ)ಆಚಾರವೇ ಲಿಂಗವೆಂದರುಹಿದನಯ್ಯ ಬಸವಣ್ಣನು
ಎನ್ನ ಪ್ರಾಣದಲ್ಲಿ ಅರುಹ ತೋರಿದನಯ್ಯ ಬಸವಣ್ಣನು;
ಆ ಅರುಹೇ ಜಂಗಮವೆಂದರುಹಿದನಯ್ಯ ಬಸವಣ್ಣನು!
ಚೆನ್ನಮಲ್ಲಿಕಾರ್ಜುನ
ಎನ್ನ ಹೆತ್ತ ತಂದೆ ಸಂಗನಬಸವಣ್ಣನು
ಎನಗೀ ಕ್ರಮವನರುಹಿದನಯ್ಯ!"

ಪ್ರಾಣ ಅರಿವು, ಲಿಂಗ ಆಚಾರ! ಎಂಥ ಕ್ರಮ! ಅರಿವು ಜಂಗ, ಆಚಾರ ಲಿಂಗ! ಎಂಥಾ ವ್ಯಾಖ್ಯೆ! ಅಕ್ಕನ ಮಾತು ಅಮೃತ; ಅಕ್ಕನ ಅನುಭಾವ ಅಮೃತ!

ಅರಿವು ಒರೆದಂತೆ ಕರ ಮಾಡುತ್ತಿರಬೇಕು; ಮಾಡಿದೆನೆಂಬ ಮಮಕಾರ ಮುಡದಂತೆ ಮಾಡುತ್ತಿರಬೇಕು; ಮಾಡುವ ಕ್ರಿಯೆಗಳೆಲ್ಲ ಲಿಂಗಕ್ಕಾಗಿಯೆಂಬ ಭಾವವಿಡಿದು ಮಾಡುತ್ತಿರಬೇಕು.

"ಉಡುವೆ ನಾನು ಲಿಂಗಕ್ಕೆಂದು;
ತೊಡುವೆ ನಾನು ಲಿಂಗಕ್ಕೆಂದು;
ಮಾಡುವೆ ನಾನು ಲಿಂಗಕ್ಕೆಂದು;
ನೋಡುವೆ ನಾನು ಲಿಂಗಕ್ಕೆಂದು–
ಎನ್ನಂತರಂಗ ಬಹಿರಂಗಗಳು ಲಿಂಗಕ್ಕಾಗಿ!
ಮಾಡಿಯೂ ಮಾಡದಂತಿಪ್ಪೆ ನೋಡಾ!
ಆನೆನ್ನ ಚೆನ್ನಮಲ್ಲಿಕಾರ್ಜುನನೊಳಗಾಗಿ
ಹತ್ತರೊಡನೆ ಹನ್ನೊಂದಾಗಿಪ್ಪುದನೇನೆ ಹೇಳುವೆನವ್ವಾ!"

"ಹತ್ತರೊಡನೆ ಹನ್ನೊಂದಾಗಿಪ್ಪುದು!" ಮಾನವನು ಸಂಘಜೀವಿ, ಸಮಾಜ ಜೀವಿಯೆಂಬುದನ್ನು ಅಕ್ಕ ಒಪ್ಪಿ ಅಂಗೀಕರಿಸಿದ್ದಳೆಂಬುದಕ್ಕೆ ನಿದರ್ಶನ ಈ ಪದಪುಂಜ. ಅಕ್ಕ ತಂದೆ–ತಾಯಿಗಳನ್ನು ತೊರೆದು, ಕೌಶಿಕನನ್ನು ಧಿಕ್ಕರಿಸಿ, ಕೊನೆಗೆ ಕಲ್ಯಾಣವನ್ನೂ ತ್ಯಜಿಸಿ ಹೋದುದರ ಹಿನ್ನೆಲೆಯಲ್ಲಿ ಅಕ್ಕನ ಉಜ್ವಲ ವೈರಾಗ್ಯದ ಹಿನ್ನೆಲೆಯಲ್ಲಿ ಅಕ್ಕ ಸಮಾಜೀವಿಯೆಂದು ಸಾರುವುದು ಸಾಹಸದ ಮಾತೆನಿಸುವುದು ಸಹಜ. ಆದರೆ ಇದು ಸತ್ಯವಾದುದು. ಅಕ್ಕನ ಸಮಾಜದ ಪ್ರಜ್ಞೆಯನ್ನು ಸಾಮಾಜಿಕ ಹೊಣೆಗಾರಿಕೆಯ ಅರಿವನ್ನು ಆಕೆಯ ಅನೇಕ ವಚನಗಳು ಖಚಿತಪಡಿಸುತ್ತಿವೆ. ಗಣಮೇಳಾಪ ಆಕೆಯ ಬಾಳ ಉಸಿರು:

"ಆಡುವುದು ಹಾಡುವುದು
ಹೇಳುವುದು ಕೇಳುವುದು ನಡೆವುದು ನುಡಿವುದು–
ಸರಸ ಸಮ್ಮೇಳವಾಗಿಪ್ಪುದಯ್ಯಾ ಶರಣರೊಡನೆ!
ಚೆನ್ನಮಲ್ಲಿಕಾರ್ಜುನಯ್ಯಾ, ನೀ ಕೊಟ್ಟ ಆಯುಷ್ಯವುಳ್ಳನಕ್ಕರ
ಲಿಂಗಸುಖಿಗಳ ಸಂಗದಲ್ಲಿ ದಿನಗಳ ಕಳೆವೆನು!"

ಸಮಾಜದಲ್ಲಿ ಸರ್ವರೂ ಸಜ್ಜನರೇನಲ್ಲ; ದುರ್ಜನರೂ ಇರುತ್ತಾರೆ. ಆದರೆ ತನಗೆ ಬೇಕೆನಿಸಿದವರ ಸಹವಾಸದಲ್ಲಿರುವ ಸ್ವಾತಂತ್ರ್ಯ ಸಮಾಜದ ಘಟಕವಾದ ವ್ಯಕ್ತಿಗಿದೆ. ಅಕ್ಕ ತನಗೆ ಹಿತಕರವೆನಿಸಿದ ಗಣಂಗಳನ್ನು ಆರಿಸಿಕೊಂಡು ಅವರೊಡನೆ ಪರಮಹರುಷದೊಡನೆ ದಿನಗಳೆದಳು;

"ಆಯತ ಸ್ವಾಯತ ಅನುಭಾವವ ನಾನೆತ್ತ ಬಲ್ಲೆನಯ್ಯಾ?
ಗುರು–ಲಿಂಗ–ಜಂಗಮಕ್ಕೆ ಅರ್ಥ–ಪ್ರಾಣಾಭಿಮಾನವಂ ಸಮರ್ಪಿಸಿ
ಅಹಂಕಾರವಳಿದಿಹಂತಹ ಪುರಾತನರ ಮನೆಯಲ್ಲಿ
ಭೃತ್ಯರ ಭೃತ್ಯಳಾಗಿಪ್ಪೆನಯ್ಯಾ!
ಇದು ಕಾರಣ, ಚೆನ್ನಮಲ್ಲಿಕಾರ್ಜುನಯ್ಯನ
ಗಣಂಗಳಲ್ಲದನ್ಯವ ನಾನರಿಯೆನಯ್ಯಾ!"

ಗಣಂಗಳಲ್ಲದನ್ಯವನ್ನು ಜರೆಯಲಿಲ್ಲ ಅಕ್ಕ–ಅರಿಯಲಿಲ್ಲ! ಅಷ್ಟೇ. ಅವರವರ ಪಾಡಿಗೆ ಅವರನ್ನು ಬಿಟ್ಟು ತನಗೆ ಜೀವಜೀವಾಳವೆನಿಸಿದ ಶರಣರ ಸಂಗದಲ್ಲಿ ಹಿಗ್ಗಿ ನಲಿದಳಾಕೆ!

"ಇಂದೆನ್ನ ಮನೆಗೆ ಒಡೆಯರು ಬಂದೆಡೆ
ತನುವೆಂಬ ಕಳಶದಲುದಕವ ತುಂಬಿ
ಕಂಗಳ ಸೋನೆಯೊಡನೆ ಪಾದಾರ್ಚನೆಯ ಮಾಡುವೆ;
ನಿತ್ಯಶಾಂತಿಯೆಂಬ ಶೈತ್ಯದೊಡನೆ ಸುಗಂಧವ ಪೂಸುವೆ;
ಅಕ್ಷಯ ಸಂಪದವೆಂದರಿದು ಅಕ್ಷತೆಯನೇರಿಸುವೆ;
ಹೃದಯಕಮಲಪುಷ್ಪದೊಡನೆ ಪೂಜೆಯ ಮಾಡುವೆ;
ಸದ್ಭಾವನೆಯೊಡನೆ ಧೂಪವ ಬೀಸುವೆ;
ಶಿವಜ್ಞಾನ ಪ್ರಕಾಶದೊಡನೆ ಮಂಗಳಾರತಿಯನೆತ್ತುವೆ;
ನಿತ್ಯತೃಪ್ತಿಯೊಡನೆ ನೈವೇದ್ಯವ ಕೈಕೊಳಿಸುವೆ;
ಪರಿಣಾಮದೊಡನೆ ಕರ್ಪೂರ ವೀಳೆಯುವ ಕೊಡುವೆ;
ಪಂಚಬ್ರಹ್ಮದೊಡನೆ ಪಂಚಮಹಾವಾದ್ಯವ ಕೇಳಿಸುವೆ;
ಹರುಷದೊಡನೆ ನೋಡುವೆ;
ಆನಂದದೊಡನೆ ಕುಣಿಕುಣಿದಾಡುವೆ;
ಪರವಶದೊಡನೆ ಹಾಡುವೆ;
ಭಕ್ತಿಯೊಡನೆ ಎರಗುವೆ;
ನಿತ್ಯದೊಡನೆ ಕೂಡಿ ಆಡುವೆ!"

ಅಕ್ಕನ ಮಧುರಭಕ್ತಿಯ ಸವಿ,ಸುಜ್ಞಾನದ ಬೆಳಕು, ಸಾಮಾಜಿಕತೆಯ ಸುಗಂಧಗಳು ಬೆರೆತು ಹಾಡಾಗಿ ಹರಿದಿವೆ, ಈ ವಚನದಲ್ಲಿ!

ಇದೇನೋ ಸರಿ; ಆದರೆ ಲೋಕದವರೆಲ್ಲ ಇದನ್ನು ಮೆಚ್ಚುವರೆ? ಅವರಲ್ಲಿ ಇದಕ್ಕೆ ತೀರ ವಿರುದ್ಧವಾದ ಮನೋಧರ್ಮದವರೆಷ್ಟಿಲ್ಲ? ಕಾಕ–ಪೋಕರೆಷ್ಟಿಲ್ಲ? ಕುಟಿಲ–ಕುಹಕ–ಕಪಟಿ–ಕ್ರೂರಿಗಳೆಷ್ಟಿಲ್ಲ? ಇಂತವರ ಮಧ್ಯದಲ್ಲಿ ಆದರ್ಶಕ್ಕೆ ಅರ್ಪಿತವಾದ ಬಾಳನ್ನು

ನಡೆಸುವುದು ಸಾಧ್ಯವೆ? ಸಾಧ್ಯವಿದೆಯನ್ನುತ್ತಾಳೆ, ಅಕ್ಕ ಮಹಾದೇವಿ–ಮಹವನಿಂಬುಗೊಂಡ, ಮಹವನಪ್ಪುಗೊಂಡ, ಮಹವೇ ತಾನಾದ ಮಹಾದೇವಿ!

"ಲೋಕವ ಹಿಡಿದು ಲೋಕದ ಸಂಗದಂತಿಪ್ಪೆ;
ಆಕಾರವಿಡಿದು ಸಾಕಾರಸಹಿತ ನಡೆವೆ;
ಹೊರಗೆ ಬಳಸಿ ಒಳಗೆ ಮರೆದಿಷ್ಟೆ;
ಬೆಂದ ನುಲಿಯಂತೆ ಹುರಿಗುಂದದಿಪ್ಪೆ;
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಾ–
ಹತ್ತರೊಳಗೆ ಹನ್ನೊಂದಾಗಿ ನೀರ ತಾವರೆಯಂತಿಪ್ಪೆ!"

ಇದು ಲೋಕದೊಳಗಿದ್ದೂ, ಲೋಕದವರ ಸಂಗದೊಳಗಿದ್ದೂ, ಹತ್ತರೊಳಗೆ ಹನ್ನೊಂದಾಗಿದ್ದೂ ತನ್ನತನವನ್ನು ತನ್ನ ಗೊತ್ತು ಗುರಿಗಳನ್ನು, ತನ್ನ ಸಾಧನೆಯನ್ನು ಉಳಿಸಿಕೊಳ್ಳುವ ವಿಧಾನ! ನೀರ ತಾವರೆಯಂತೆ ಹೊದ್ದಿಯೂ ಹೊದ್ದದಂತಿರುವ ಪರಿ! ಪದ್ಮ ಪತ್ರದಂತಿದ್ದುಕೊಂಡು–

"ನಮಗೆ ನಮ್ಮ ಲಿಂಗದ ಚಿಂತೆ;
ನಮಗೆ ನಮ್ಮ ಭಕ್ತರ ಚಿಂತೆ;
ನಮಗೆ ನಮ್ಮ ಚೆನ್ನಮಲ್ಲಿಕಾರ್ಜುನನ ಚಿಂತೆಯಿಲ್ಲದೆ
ಲೋಕದ ಮಾತು ನಮಗೇಕಣ್ಣಾ?"

ಎಂದು ಕೇಳಬಹುದು; ಲಿಂಗದ, ಮಲ್ಲಿಕಾರ್ಜುನನ, ಭಕ್ತರ ಚಿಂತೆಯೊಳಗೆ ಇರಬಹುದು. 'ಭಕ್ತದೇಹಿಕದೇವ'ನೆಂಬ ನಂಬಿಕೆ ನಿಜವಾಗಲು ಭಕ್ತರ ಬಗೆಗೆ ಚಿಂತಿಸಲೇಬೇಕು;

"ಶಿವಭಕ್ತರ ರೋಮ ನೊಂದಡೆ ಶಿವನು ನೋವ ನೋಡಾ;
ಶಿವಭಕ್ತರು ಪರಿಣಾಮಿಸಿದರೆ ಶಿವನು ಪರಿಣಾಮಿಸುವ ನೋಡ;
ಭಕ್ತದೇಹಿಕ ದೇವನೆಂದು ಶ್ರುತಿ ಹೊಗಳುವ ಕಾರಣ
ಶಿವಭಕ್ತರ ಲೇಸು ಹೊಲ್ಲೆಹ ಶಿವನ ಮುಟ್ಟುವುದು ನೋಡಾ!
ತಾಯಿ ನೊಂದಡೆ ಒಡಲ ಶಿಶು ನೋವ ತೆರನಂತೆ
ಭಕ್ತರು ನೊಂದಡೆ ತಾ ನೋವ ನೋಡಾ–
ಚೆನ್ನಮಲ್ಲಿಕಾರ್ಜುನ!"

ಈ ವಚನದ ಕೊನೆಯಲ್ಲಿ ಬಂದಿರುವುದು ಸುಂದರ ಸಾಮತಿ! ಜೀವಿಗಳೆಲ್ಲ ಜಗನ್ಮಾತೆಯ ಒಡಲ ಶಿಶುಗಳು; ಆ ಶಿಶುಗಳಲ್ಲಿ ಒಂದು ನೊಂದರೂ ತಾಯಿಗೆ ನೋವಾಗಿ ನೊಂದುಕೊಳ್ಳುವಳು; ಆ ತಾಯಿ ನೊಂದರೆ ಉಳಿದೆಲ್ಲ ಶಿಶುಗಳೂ ನೋಯದಿರವು!

ಹೀಗೆ ಒಬ್ಬರ ನೋವು ಎಲ್ಲರ ನೋವಾಗಿ ಪರಿವರ್ತಿತವಾಗುವುದು. ಹೀಗಾಗದಿರಬೇಕಾದರೆ ಇನ್ನೊಬ್ಬರಿಗೆ ನೋವಾಗದ ರೀತಿಯಲ್ಲಿ ನಾವು ಬದುಕಬೇಕು. ಹೀಗೆ ಬದುಕುವುದು ಸುಲಭವಲ್ಲ. ಪರಸ್ಪರ ಅವಿರುದ್ಧವಾದ ಕ್ರಿಯೆಗಳಲ್ಲಿ, ಹಿತಾಸಕ್ತಿಗಳಲ್ಲಿ ಎಲ್ಲರೂ ತೊಡಗಿದ್ದರೆ ಮಾತ್ರ ಇದು ಸಾಧ್ಯ. ಎಲ್ಲರೂ ಎಲ್ಲಿ ಈ ಸೂತ್ರವನ್ನು ಅನುಸರಿಸುತ್ತಾರೆ? ಒಬ್ಬರ ಬಾಯ ತುತ್ತು ಕಸಿದು ಇನ್ನೊಬ್ಬರು ತಿನ್ನುವುದಿಲ್ಲವೆ? ಅದೇಕೆ, ಅನ್ಯರ ಚರ್ಮವನ್ನೇ ಸುಲಿದು ತಿನ್ನುವವರೆಷ್ಟಿಲ್ಲ? ಅಂತೆಯೇ ಮನುಜ ಸಮಾಜದಲ್ಲಿ ಘರ್ಷಣೆಗಳು! ತತ್ಫಲವಾಗಿ ಅನ್ಯಾಯ, ಅಶಾಂತಿ, ಅನಾಹುತಗಳು!

ಇದನ್ನು ಗಮನಿಸಿಯೇ ವ್ಯಷ್ಟಿ–ಸಮಷ್ಟಿಗಳ ನಡುವೆ, ವ್ಯಕ್ತಿ ವ್ಯಕ್ತಿಗಳ ನಡುವೆ ತಿಕ್ಕಾಟಗಳು ತಲೆದೋರದಂತೆ ಮಾಡಲು ನೀತಿಸಂಹಿತೆಯೊಂದನ್ನು ರೂಪಿಸುತ್ತಲೇ ಬಂದಿದ್ದಾರೆ ಆಯಾಕಾಲದ ಮನೀಷಿಗಳು, ತತ್ತ್ವದರ್ಶಿಗಳು, ಕವಿ–ಪ್ರವಾದಿಗಳು. ಅಂತೆಯೇ ಅಕ್ಕನು ಸುಜ್ಞಾನ ಸತ್ಕ್ರಿಯೆಗಳ ಜೊತೆಗೆ ಸುನೀತಿಯನ್ನು ಸೇರಿಸಿದ್ದಾಳೆ, ತಾನು ರೂಪಿಸಿದ ಸನ್ಮಾರ್ಗದಲ್ಲಿ ಸುನೀತಿಯಿಲ್ಲದ ಸಮಾಜ ಚುಕ್ಕಾಣೆಯಿಲ್ಲದೆ, ಉತ್ತರ ಮುಖಿಯಿಲ್ಲದ, ದೀಪಸ್ತಂಭವಿಲ್ಲದ ಹಡಗ, ಅದು ಬಂದವರವನ್ನು ಸೇರುವ ಬದಲು ಬಂಡೆಗೆ ಅಪ್ಪಳಿಸಿ, ಒಡೆದು ಹೋಗಬಹುದು! ನೈತಿಕ ತಳಹದಿಯನ್ನು, ಬಲವನ್ನು, ಅಧಿಕಾರವನ್ನು ಕಳೆದುಕೊಂಡ ಶಾಸನಾಂಗ–ನ್ಯಾಯಂಗ–ಕಾರ್ಯಾಂಗಗಳು, ಮಠ–ಮಂದಿರ–ಮಸೀದಿ–ಇಗರ್ಜಿ–ಗುರುದ್ವಾರ–ಚೈತ್ಯಾಲಯ–ವಿಹಾರಗಳು ಪ್ರಭಾಹೀನ, ಪ್ರಭಾವಶೂನ್ಯಗಳಾಗಿರುವುದನ್ನು ಕಣ್ಣಾರೆ ಕಾಣುತ್ತಿದ್ದೇವೆ ಈಗ. ನೈತಿಕ ಅಧಿಕಾರದ ಆಧಾರತಪ್ಪಿದ ಯಾವ ಅಧಿಕಾರವೂ ಉಳಿಯದೆಂಬ ತಿಳಿವಳಿಕೆ ಈಗೀಗ ತಲೆದೋರುತ್ತಿದೆ–ಅಲ್ಲಲ್ಲಿ!

ಬಸವಾಚರಣೆಯ ಬಾವನ್ನ ವಿವರಗಳನ್ನು ಬಣ್ಣಿಸುವಲ್ಲಿ ಅಕ್ಕನ ನೀತಿಸಂಹಿತೆ ರೂಪುಗೊಂಡಿದೆ; "ನಮ್ಮ ಬಸವಣ್ಣನು ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿ.. ಬಾವನ್ನ ವಿವರನೊಳಕೊಂಡು ಚರಿಸಿದನದೆಂತೆಂದಡೆ–ಗುರುಕಾರುಣ್ಯವೇದ್ಯನು... ಪಂಚಾಕ್ಷರೀ ಭಾಷಾಸಮೇತನು, ಲಿಂಗಾಂಗಸಂಬಂಧಿ... ಅರ್ಪಿತದಲ್ಲಿ ಅವಧಾನಿ... ತ್ರಿವಿಧಕ್ಕಾಯತನು, ತ್ರಿಕರಣಶುದ್ಧನು, ಭವಿಸಂಗವ ಮಾಡ, ಪರಸತಿಯ ಬೆರಸ, ಪರಧನವನೊಲ್ಲ, ಪರನಿಂದೆಯನಾಡ, ಅನೃತವ ನುಡಿಯ, ಹಿಂಸೆಯ ಮಾಡ, ತಾಮಸ ಭಕ್ತಸಂಗವ ಮಾಡ, ಗುರು–ಲಿಂಗ–ಜಂಗಮಕ್ಕೆ ಅರ್ಥಪ್ರಾಣಾಭಿಮಾನ ಮುಂತಾದವೆಲ್ಲವಂ ಸಮರ್ಪಿಸಿ ಪ್ರಸಾದ ಮುಂತಾಗಿ ಭೋಗಿಸುವ... ಅನ್ಯರನಾಸೆಯಗೆಯ್ಯ, ಪಾತ್ರಾಪಾತ್ರವನರಿದೀವ, ಚತುರ್ವಿಧಪವಿಯ ಹಾರ, ಅರಿಷಡ್ವರ್ಗಕ್ಕೆ ಅಳುಕ, ಕುಲಾದಿ ಮದಂಗಳ ಬಗೆಗೊಳ್ಳ, ದ್ವೈತಾದ್ವೈತವ ನುಡಿವನಲ್ಲ. ಸಂಕಲ್ಪವಿಕಲ್ಪವ ಮಾಡುವನಲ್ಲ, ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿ ಷಟ್ಸ್ಥಲಭರಿತ, ಸರ್ವಾಂಗಲಿಂಗಿ, ದಾಸೋಹಸಂಪನ್ನ, ಇಂತೀ ಐವತ್ತೆರಡು ವಿಧದಲ್ಲಿ ನಿಪುಣನಾಗಿ ಮೆರೆದ ನಮ್ಮ ಬಸವಣ್ಣನು!"

ಇವೆಲ್ಲ ವಿವರಗಳ ಬಗೆಗೆ ವಿಶದ ವಿವರಣೆ ಈ ಹೊತ್ತಗೆಯ ಗಾತ್ರಕ್ಕೆ ಹೊರಗಿನದಾಗುವುದು. ಒಂದರ ಬಗೆಗೆ ಅಕ್ಕನ ಮಾತಿನಲ್ಲಿಯೇ ಅರ್ಥವಿವರಣೆ ಅಗತ್ಯ. ಭವಿಸಂಗವ ಮಾಡ ಎಂಬ ವಿವರ ಅಪಾರ್ಥಕ್ಕೆ ಎಡೆಗೊಡದಿರಲಿ ಎಂದು ಅಕ್ಕನೇ ನೀಡಿರುವ ಭವಿ ಶಬ್ದದ ವ್ಯಾಖ್ಯೆಯನ್ನು ಉದಾಹರಿಸಲೇಬೇಕು;

"ಶೀಲ ಶೀಲವೆಂಬಿರಯ್ಯಾ–
ಶೀಲದ ನೆಲೆಯ ಬಲ್ಲಡೆ ಹೇಳೀರೋ! ಅರಿಯದಿದ್ದಡೆ ಕೇಳೀರೋ!
ಕಾಮ ಒಂದನೆಯ ಭವಿ, ಕ್ರೋಧ ಎರಡನೆಯ ಭವಿ,
ಲೋಭ ಮೂರನೆಯ ಭವಿ, ಮೋಹ ನಾಲ್ಕನೆಯ ಭವಿ,
ಮದ ಐದನೆಯ ಭವಿ, ಮತ್ಸರ ಆರನೆಯ ಭವಿ, ಆಮಿಷ
ಏಳನೆಯ ಭವಿ,
ಇಂತೀ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು
ಲಿಂಗವಿಲ್ಲದವರ ಭವಿ ಭವಿ ಎಂಬಿರಿ!
ತಮ್ಮಂತರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನರಿಯದೆ
ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯಪ್ರಸಾದಿಗಳೆಂದು
ಆಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಕ್ಕೆ ಮಜ್ಜನಕ್ಕೆರೆವ
ಹಗಲುಗಳ್ಳರ ಮೆಚ್ಚುವನೆ, ಚೆನ್ನಮಲ್ಲಿಕಾರ್ಜುನ?"

ಉಪರ್ಯುಕ್ತ ಅರ್ಥದಲ್ಲಿ ಭವಿಸಂಗತ್ಯಾಗ ಉಪಾದೇಯ. ಈ ಅರ್ಥದಲ್ಲಿ ಭವಿಸಂಗವನ್ನು ಬಹಿಷ್ಕರಿಸುವುದನ್ನು ಬಿಟ್ಟು ಲಿಂಗವಿಲ್ಲದವರ ಭವಿಯೆಂದು ಕರೆದು, ಅವರೊಡನೆ ಒಡನಾಟವನ್ನು ಕೆಳೆಕೂಟವನ್ನು, ಊಟ ಉಪಚಾರಗಳನ್ನುಬಸವಾದಿಪ್ರಮಥರ ಅನುಯಾಯಿಗಳೇ ತ್ಯಜಿಸಿದುದು ದುರದೃಷ್ಟಕರವಾದ ಬೆಳವಣಿಗೆ! ಅಕ್ಕ ನಿರ್ದೇಶಿಸಿರುವ ಏಳುಭವಿಗಳನ್ನು ದೂರವಿಡುವ ಮಹಾಶೀಲದ ಸಂಪಾದನೆಗಾಗಿ ಯತ್ನಿಸದೆ ಪಾಕ ಪಾನಕಗಳಲ್ಲಿ, ಕುಡಿವನೀರು ನಡೆವ ಭೂಮಿಯಲ್ಲಿ ಭ್ರಮಾತ್ಮಕ ಶೀಲಗಳನ್ನು ಸೃಷ್ಟಿಸಿಕೊಂಡು ಬಸವಧರ್ಮದ ಪ್ರಸರಣಕ್ಕೇ ವಿಘ್ನವೊಡ್ಡಿದ ಈ ಅನುಯಾಯಿಗಳ ಬಗ್ಗೆ ಕನಿಕರವೆನಿಸುತ್ತಿದೆ. ಈಗಲಾದರೂ ಅಕ್ಕನು ವಿವರಿಸಿರುವ ವಿಶಾಲರ್ಥದಲ್ಲಿಯೇ, ಉದಾತ್ತ ವ್ಯಾಖ್ಯೆಗೆ ಅನುಗುಣವಾಗಿಯೇ ಭವಿಸಂಗವರ್ಜನೆಯನ್ನು ಮಾಡಬೆಕು ಬಸವಾನುಯಾಯಿಗಳು! ಮಾದಾರ ಚೆನ್ನಯ್ಯನ ಅಂಬಲಿ, ಶಿವನಾಗಮಯ್ಯ ಕಕ್ಕಯ್ಯಗಳ ಪ್ರಸಾದ ಪವಿತ್ರವೆಂದು ನಂಬಿದ್ದ ಬಸವಣ್ಣನವರೆತ್ತ; ಅವನ ಅನುಯಾಯಿಗಳಲ್ಲಿಯೇ ಶೀಲವಂತರು ಶ್ರೇಷ್ಠರು, ಉಳಿದವರು ಕನಿಷ್ಠರೆಂದು ವಾದಿಸುವ ವಿವೇಕ ಶೂನ್ಯರೆತ್ತ?

ಮೇಲೆ ಉಲ್ಲೇಖಿಸಿರುವ ಬಾವನ್ನ ವಿವರಗಳಲ್ಲಿ ಅಕ್ಕಗಳ ನೀತಿಸಂಹಿತೆಯ ರೂಪ ರೇಖೆಗಳು ಸುಸ್ಪಷ್ಟವಿದ್ದರೂ ಬೇರೆ ವಚನಗಳಲ್ಲಿಯೂ ಉಲ್ಲೇಖಿತವಾಗಿರುವ ಉಪಷ್ಟಂಭಕ ವಾಕ್ಯಗಳನ್ನೂ ಗಮನಿಸುವುದು ಸೂಕ್ತವಾದುದು. ಜಾಲಗಾರನ ಉದಾಹರಣೆಯನ್ನಿತ್ತು ಅಹಿಂಸೆ ಅನಿವಾರ್ಯತೆಯನ್ನು ಅಕ್ಕ ವಿವರಿಸಿದುದನ್ನು ಈಗಾಗಲೇ ನೋಡಿಯಾಗಿದೆ. ಇನ್ನುಳಿದುವನ್ನು ಈಗ ಅವಲೋಕಿಸೋಣ.

"ಎಲ್ಲಿ ಹೋದಡೆ ಕಲಿಗೆ ಭವಯಿಲ್ಲ; ಹಂದೆಗೆ ಸುಖವಿಲ್ಲ, ಕೇಳಿರಣ್ಣಾ!
ಈವಂಗಮಗುಣವಿಲ್ಲ, ಕರುಣವುಳ್ಳವಂಗೆ ಪಾಪವಿಲ್ಲ.
ನಿಮ್ಮ ಮುಟ್ಟಿ ಪರಧನ ಪರಸ್ತ್ರೀಯ ತೊರೆದಾತಂಗೆ
ಮುಂದೆ ಭಯವಿಲ್ಲ, ಚೆನ್ನಮಲ್ಲಿಕಾರ್ಜುನಾ!

ಸೆಟೆ ದಿಟವೆಂಬ ಎರಡುವಿಡಿದು ನಡೆವನೆ ಶರಣನು?
ಹುಸಿಯೆಂಬುದೆ ಹೊಲೆ!"
"ಪಂಚೇಂದ್ರಿಯಗುಣಂಗಳೊಳಗೆ ಒಂದಕ್ಕೆ ಪ್ರಿಯನಾದಡೆ ಸಲದೆ?
ಸಪ್ತವ್ಯಸನಂಗಳೊಳಗೆ ಒಂದಕ್ಕೆ ಪ್ರಿಯನಾದಡೆ ಸಾಲದೆ?
ರತ್ನದ ಸಂಕಲೆಯಾದಡೇನು, ಬಂಧನ ಬಿಡುವುದೇ,
ಚೆನ್ನಮಲ್ಲಿಕಾರ್ಜುನಾ?
ಹಾಡಿದಡೇನು ಕೇಳಿದಡೇನು,
"ತನ್ನಲುಳ್ಳ ಅವಗುಣ ಬಿಡದನ್ನಕ್ಕ?"
"ನಡೆ ಶುಚಿ, ನುಡಿ ಶುಚಿ, ಮನ ಶುಚಿ, ಭಾವ ಶುಚಿ,
ಇಮತೀ ಪಂಚತೀರ್ಥಗಳನೊಳಕೊಂಡವರು ಶರಣರು
"ತನುಶುದ್ಧ, ಮನಶುದ್ದ, ಭಾವಶುದ್ಧವಾದವರನೆನಗೊಮ್ಮೆ ತೋರಾ!
ನಡೆಯೆಲ್ಲ ಸದಾಚಾರ, ನುಡಿಯೆಲ್ಲ ಶಿವಾಗಮ–
ನಿತ್ಯ ಶುದ್ಧರಾದವರನೆನಗೊಮ್ಮೆ ತೋರಾ"
"ಮಾಡುವರ ಕಂಡು ಮಾಡುವನಲ್ಲ
ಮಾಡದವರ ಕಂಡು ಮಾಡದವನಲ್ಲ
ತಾ ಮಾಡುವ ಮಾಟಕ್ಕೆ ತವಕಿಗನಾಗಿ ಹಿಂದು ಮುಂದರಿಯದ
ಶರಣನು
ನಮ್ಮ ಮನೆಯೊಳಿಂದು ಹಬ್ಬ ಸಂದಣಿ ಬಹಳ!
ನಿಮ್ಮ ನುಡಿಸಹೊತ್ತಿಲ್ಲಹೋಗಿ ವಿಷಯಗಳಿರಾ!"
"ಕುಲಮದವೆಂಬುದಿಲ್ಲ, ಛಲಮದವೆಂಬುದಿಲ್ಲ
ಧನಮದವೆಂಬುದಿಲ್ಲ, ವಿದ್ಯಾಮದವೆಂಬುದಿಲ್ಲ

ಮತ್ತಾವ ಮದವೆಂಬುದಿಲ್ಲ ನೀನವಗ್ರಹಿಸಿದ ಕಾರಣ"
"ಕೀಡೆ ತುಂಬಿಯ ಹಂಬಲದಿಂದ ತುಂಬಿಯಾಗಿ
ತನ್ನ ಬಿಡಲುಂಟೆ ಅಯ್ಯಾ?"

ಮೇಲ್ಕಾಣಿಸಿದ ಸುನಿತಿಸಾರ ಸರ್ವರ ಸರ್ವಕಾರ್ಯಗಳಿಗೆ ದಿಕ್ಸೂಚಿ ಧ್ರುವತಾರೆಯಾದರೆ ಕಲ್ಪನೆಯ ನಾಕ ನಿಜವಾದ ನಾಕವಾಗಿ ಈ ಲೋಕದಲ್ಲಿಯೇ ಆವಿರ್ಭಸಿಸೀತು! ಇಂಥ ನೀತಿಸಂಹಿತೆಯನ್ನು ಸಾರ್ವತ್ರಿಕವಾಗಿರಲಿ, ವೈಯಕ್ತಿಕ ಜೀವನದಲ್ಲಿ ಅಳವಡಿಸಿಕೊಳ್ಳುವವರೇ ವಿರಳ. ಆ ವಿರಳವ್ಯಕ್ತಿಗಳಿಗೂ ದುರ್ನೀತಿಯ ದುರ್ಜನರು ಎದುರಾದಾಗ ಏನು ಮಾಡಬೇಕು? ದುಷ್ಟರನ್ನು ಕಂಡರೆ ದೂರ ಸರಿಯೆಂದೇನೋ ಹೇಳಿಬಿಡಬಹುದು. ಆದರೆ ಇದರಿಂದ ಸಾಮಾಜಿಕರಾಗಿ ನಾಗರಿಕರಾಗಿ ಅವರ ಕರ್ತವ್ಯ ಮುಗಿದಂತಾಗುವುದೆ? ಅವರು ತಮ್ಮ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸಿದಂತಾಗುವುದೆ? ಇಲ್ಲ! ದೌರ್ಜನ್ಯವೆಲ್ಲಿದ್ದರೂ ಖಂಡಿಸಲೇಬೇಕು; ಈ ನೈತಿಕ ಧೈರ್ಯ ನಮಗೆ ಬರಲೇಬೆಕು. ಅಕ್ಕನ ನೈತಿಕ ಧೈರ್ಯ ಅವರ್ಣನೀಯ.

"ಅಯ್ಯಾ, ಸರ್ವ ಮುಲಾಹಂಕಾರವಿಡಿದು
ಕುಲಭ್ರಮೆ, ಛಲಭ್ರಮೆ, ಜಾತಿಭ್ರಮೆ.
ನಾಮ–ವರ್ಣ–ಆಶ್ರಮ–ಮತ ಶಾಸ್ತ್ರಭ್ರಮೆ
ತರ್ಕಭ್ರಮೆ, ರಾಜ್ಯಭ್ರಮೆ
ಧನ–ಧಾನ್ಯ–ಪುತ್ರ–ಮಿತ್ರ ಭ್ರಮೆ
ಐಶ್ವರ್ಯ–ತ್ಯಾಗ–ಭೋಗ–ಯೋಗಭ್ರಮೆ
ಕಾಯ–ಕರಣ–ವಿಷಯಭ್ರಮೆ
ವಾಯು–ಮನ–ಭಾವ–ಜೀವಮೋಹಭ್ರಮೆ
ನಾಹಂ–ಕೋಹಂ–ಸೋಹಮ ಮಾಯಾಭ್ರಮೆ ಮೊದಲಾದ
ಬತ್ತೀಸಪಾಶಭ್ರಮಿತರಾಗಿ ತೊಳಲುವ ವೇಷದಾರಿಗಳ ಕಂಡು
ಶಿವಶಕ್ತಿ, ಶಿವಭಕ್ತ, ಶಿವಪ್ರಸಾದಿ, ಶಿವಶರಣ, ಶಿವೈಕ್ಯ,
ಶಿವಜಂಗಮವೆಂದು ನುಡಿಯಲಾರದೆ
ಎನ್ನ ಮನ ನಾಚಿ ನಿಮ್ಮಡಿಗಭಿಮುಖವಾಯಿತಯ್ಯಾ–
ಚೆನ್ನಮಲ್ಲಿಕಾರ್ಜುನಾ?"

ವೇಷಧಾರಿಗಳನ್ನು ಆಷಾಢಭೂತಿಗಳನ್ನು, ಸಜ್ಜನಿಕೆಯ ಮುಖವಾಡ ಧರಿಸಿದ ದುರ್ಜನರನ್ನು ಅಕ್ಕನೊಬ್ಬಳೇ ಖಂಡಿಸಿಲ್ಲ. ಬೇರೆ ಶರಣರೂ ಖಂಡಿಸಿದ್ದಾರೆ. ಆದರೆ ಖಂಡನೆ ಖಂಡನೆಯಲ್ಲಿ ಭೇದವಿದೆ. ನೋವನ್ನುಂಟು ಮಾಡಿಯೂ ಉದ್ದೇಶ ಸಾಧಿಸಿದ

ಖಂಡನೆ ಕೆಲವರದಾದರೆ ನೋವನ್ನುಂಟುಮಾಡದೆಯೇ ಉದ್ದೇಶಿತ ಪರಿಣಾಮ, ಪ್ರಭಾವ ಬೀರುವ ಖಂಡನೆ ಕೆಲವರದು. ಅಕ್ಕನ ಖಂಡನೆ ಎರಡನೆಯ ಬಗೆಯದು. 'ಮೆಟ್ಟಿದ್ದ... ಲಟಲಟನೆ... ಎಂದಾತ ಅಂಬಿಗರ!' ಎಂಬಂತಹ ಖಂಡನಗಳೊಡನೆ' ಎನ್ನ ಮನ ನಾಚಿ ನಿಮ್ಮಡಿಗಭಿಮುಖವಾಯಿತಯ್ಯಾ! 'ಎಂಬ ಸೂಕ್ಷ್ಮ ಸುಸಂಸ್ಕೃತ ಖಂಡನೆಯನ್ನು ಹೋಲಿಸಿದಾಗ ಈ ಭೇದ ಸ್ಪಷ್ಟವಾಗುತ್ತದೆ. ಇನ್ನೊಂದು ಇಂಥದೇ ವಚನವನ್ನು ಅವಲೋಕಿಸೋಣ:

"ಅಯ್ಯ, ಚಿದಂಗ–ಚಿದ್ಘನಲಿಂಗ–
ಶಕ್ತಿ–ಭಕ್ತಿ–ಹಸ್ತ–ಮುಖ–ಪದಾರ್ಥ–ಪ್ರಸಾದ
ಎಂಬಿವಾದಿಯಾದ ಸಮಸ್ತ ಸಕಲಂಗಳ ನೆಲೆಕಲೆಯನರಿಯದೆ
ಜಿಹ್ವಾಲಂಪಟಕ್ಕೆ ಆಹ್ವಾನಿಸಿ
ಗುಹ್ಯಾಲಮಪಟದಲ್ಲಿ ವಿಸರ್ಜಿಸಿ
ಸಕಲೇಂದ್ರಿಯ ಮುಖದಲ್ಲಿ ಮೋಹಿಯಾಗಿ
ಸದ್ಗುರು ಕರುಣಾಮೃತರಸ ತಾನೆಂದರಿಯದೆ
ಬರಿದೆ ಭಕ್ತ–ಮಹೇಶ–ಪ್ರಸಾದಿ–ಪ್ರಾಣಲಿಂಗಿ–ಶರಣ–ಐಕ್ಯ
ಗುರು–ಚರ–ಪರವೆಂದು ಬೊಗಳುವ ಕುನ್ನಿಗಳ ನೋಡಿ
ಎನ್ನ ಮನ ಬೆರಗು, ನಿಬ್ಬೆರಗು ಆಯಿತಯ್ಯಾ
ಚೆನ್ನಮಲ್ಲಿಕಾರ್ಜುನ!"

ಇಲ್ಲಿ ಬೊಗಳುವ ಕುನ್ನಿಗಳು ಎಂಬ ಎರಡು ಕಠೋರ ಶಬ್ದಗಳು ಬಂದಿವೆ,ನಿಜ. ಆದರೆ ಅವುಗಳ ಬಗ್ಗೆ ಅಕ್ಕನ ಪ್ರತಿಕ್ರಿಯೆ ಎಂಥದು? 'ಎನ್ನ ಮನ ಬೆರಗು, ನಿಬ್ಬೆರಗು ಆಯಿತಯ್ಯ!' ಇದು ಕುಸುಮ ಸಹ ವಜ್ರದನಿತು ಕಠೋರವಾಗಬಲ್ಲುದೆಂಬುದಕ್ಕೆ ಉದಾಹರಣೆ, ಇಂಥಪ್ರತಿಭಟನೆಯಿಂದ ನೀತಿ ರಕ್ಷಣೆಗೆ ನೆರವಾಗುವುದು ಸಾಮಾಜಿಕ ಹೊಣೆಗಾರಿಕೆಯ ಸೂಕ್ತ ನಿರ್ವಹಣೆ.

ಇಂತಿದು ಅಕ್ಕನ ಸುಜ್ಞಾನ–ಸತ್ಕ್ರಿಯಾ–ಸುನೀತಿ–ಸನ್ಮಾರ್ಗದ ವಿಶದೀಕರಣ. ಈ ಬಗ್ಗೆ ಇನ್ನೂ ಎಷ್ಟು ಬೇಕಾದರೂ ಬರೆಯಬಹುದು. ಕಿಂ ಬಹುನಾ? ಅಕ್ಕನೇ ತನ್ನ ಇನ್ನೊಂದು ವಚನದಲ್ಲಿ ಈ ಸತ್ಯಸನ್ಮಾರ್ಗದ ಸಮಗ್ರ ಸ್ವರೂಪ ಒದಗಿಸಿದ್ದಾಳೆ:

"ಅಯ್ಯ, ಸದಾಚಾರ–ಸದ್ಭಕ್ತಿ–ಸತ್ಕ್ರಿಯಾ–ಸಮ್ಯಕ್‌ಜ್ಞಾನ–ಸದ್ವರ್ತನೆ
ಸಗುಣ–ನಿರ್ಗುಣ–ನಿಜಗುಣ–ಸಚ್ಚರಿತ್ರ–ಸದ್ಭಾವ,
ಅಕ್ರೋಧ, ಸತ್ಯವಚನ, ಕ್ಷಮೆ, ದಯೆ, ಭವಿಭಕ್ತಭೇದ,
ಸತ್ಪಾತ್ರದ್ರವ್ಯಾರ್ಪಣ, ಗೌರವಬುದ್ಧಿ

ಲಿಂಗಲೀಯೆ, ಜಂಗಮಾನುಭಾವ,
ದಶವಿಧಪಾದೋದಕ, ಏಕಾದಶಪ್ರಸಾದ, ಷೋಡಶಭಕ್ತಿ ನಿರ್ವಾಹ,
ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಚನೆ
ತ್ರಿವಿಧ ಷಡ್ವಿಧ ನವವಿಧ ಜಪ,
ತ್ರಿವಿಧ ಷಡ್ವಿಧ ನವವಿಧ ಲಿಂಗಾರ್ಪಣ
ಚಿದ್ವಿಭೂತಿಸ್ನಾನ ಧೂಳನ ಧಾರಣೆ
ಸರ್ವಾಂಗದಲ್ಲಿ ಚಿದ್ರುದ್ರಾಕ್ಷಿ ಧಾರಣ
ತಾ ಮಾಡುವ ಸತ್ಯಕಾಯಕ
ತಾ ಬೇಡುವ ಸದ್ಭಕ್ತಿ ಭಿಕ್ಷೆ
ತಾ ಕೊಟ್ಟು ಕೊಂಬ ಭೇದ
ತಾನಾಚರಿಸುವ ಸತ್ಯ ನಡೆ ನುಡಿ
ತಾ ನಿಂದ ನಿರ್ವಾಣಪದ–
ಇಂತೀ ಬತ್ತೀಸ ನೆಲೆಕಲೆಗಳ
ಸದ್ಗುರುಮುಖದಿಂದರಿದ ಬಸವ ಮೊದಲಾದ
ಸಮಸ್ತ ಪ್ರಮಥಗಣಂಗಳೆಲ್ಲ
ನಿರಾಭಾರಿ ವೀರಶೈವ ಸನ್ಮಾರ್ಗವಿಡಿದಾಚರಿಸಿದರು ನೋಡಾ!
ಇಂತು ಪ್ರಮಥಗಣಂಗಳಾಚರಿಸಿದ
ಸತ್ಯಸನ್ಮಾರ್ಗವನರಿಯದ
ಮೂಢ ಅಧಮರನೆಂತು ಶಿವಶಕ್ತಿ ಶಿವಶಕ್ತಿ ಶಿವಜಂಗಮವೆಂಬೆನಯ್ಯಾ
ಚೆನ್ನಮಲ್ಲಿಕಾರ್ಜುನ?"

ಇದು ವೀರಶೈವ ಸನ್ಮಾರ್ಗವೂ ಅಹುದು, ವೀರಶೈವ ಪಾರಿಭಾಷಿಕ ಪದಗಳನ್ನು ಬದಲಿಸಿ, ಮತಾತೀತ ಪದಗಳನ್ನು ಪ್ರಯೋಗಿಸಿದರೆ ಸರ್ವಜನಗ್ರಾಹ್ಯವಾಗಬಲ್ಲ ಸತ್ಯ ಸನ್ಮಾರ್ಗವೂ ಅಹುದು, ಇಂಥದೊಂದು ಸತ್ಯ ಸನ್ಮಾರ್ಗವನ್ನು ಸುಜ್ಞಾನ, ಸತ್ಕ್ರಿಯಾ, ಸುನೀತಿಗಳ ಸಂಗಮವಾದ ಸನ್ಮಾರ್ಗವನ್ನು ನಮಗೆ ತೋರಿರುವ ಅಕ್ಕ ಮಹಾದೇವಿ ಆಧ್ಯಾತ್ಮ ಲೋಕದ ಅಮರಜ್ಯೋತಿ, ಸಾಹಿತ್ಯಲೋಕದ ಸ್ವಯಂಜ್ಯೋತಿ, ನಾರೀಲೋಕದ ಗೌರವಜ್ಯೋತಿ!

ಮುಗಿಸುವ ಮುನ್ನ, ಅಲ್ಲ ಎನಿಸಿಕೊಂಬ ನಡೆನುಡಿ ಬಿಡಬೇಕೆಂದಿರುವ ಅಕ್ಕನು ಬೋಧಿಸಿರುವ ಬದುಕಿನ ಸೂತ್ರವೊಂದನ್ನು ಸ್ಮರಿಸೋಣ:

"ನಿಮ್ಮ ನಿಲುವಿಂಗೆ ನೀವು ನಾಚಬೇಡವೆ?
ಅನ್ಯರ ಕೈಯಲ್ಲಿ ಅಲ್ಲ ಎನಿಸಿಕೊಂಡ ನಡೆನುಡಿ ಎಕೆ?

ಅಲ್ಲಿ ಎನಿಸಿಕೊಂಬುದರಿಂದ
ಆ ಕ್ಷಣವೆ ಸಾವುದು ಲೇಸು ಕಾಣಾ, ಚೆನ್ನಮಲ್ಲಿಕಾರ್ಜುನಾ!"

ಅಲ್ಲ ಎನಿಸಿಕೊಳ್ಳದೆ ಬಾಳುವುದು–ಇದು ಗುರಿ. ಇದಕ್ಕೆ ದಾರಿ ಇಲ್ಲಿದೆ:

"ಕಣ್ಗೆ ಶೃಂಗಾರ ಗುರುಹಿರಿಯರ ನೋಡುವುದ;
ಕರ್ಣಕ್ಕೆ ಶೃಂಗಾರ ಪುರಾತನರ ಸುಗೀತಂಗಳ ಕೇಳುವುದು;
ವಚನಕ್ಕೆ ಶೃಂಗಾರ ಸತ್ಯವ ನುಡಿವುದು;
ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ;
ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು;
ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ!
ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ–
ಚೆನ್ನಮಲ್ಲಿಕಾರ್ಜುನಾ?"

ಇವಿಲ್ಲದ ಬಾಳುವೆ ಬೇಳುವೆ! ಇವನ್ನು ಅಳವಡಿಸಿಕೊಂಡರೆ ಅಕ್ಕನಿಗೆ ನಿಜವಾದ ಶ್ರದ್ಧೆ ಗೌರವಗಳನ್ನು ಸಲ್ಲಿಸಿದಂತೆ; ನಮ್ಮನ್ನೂ ನಾವೇ ಉನ್ನತಿಯತ್ತ ಮುನ್ನಡೆಸಿದಂತೆ!

# ೪

# ಅಕ್ಕನ ವ್ಯಕ್ತಿತ್ವ

ನಾರೀಜಗತ್ತು ನಮಗೆ ಒಬ್ಬರಿಗಿಂತ ಹೆಚ್ಚು ಚಕ್ರವರ್ತಿನಿಯರನ್ನು ಸ್ವಾತಂತ್ರ್ಯ ಸೇನಾನಿಗಳನ್ನು, ಯೋಗಿನಿ-ವಿರಾಗಿಣಿಯರನ್ನು, ಕಲಾವಿಲಾಸಿನಿಯರನ್ನು, ವಿದ್ಯಾವಿನೋದಿನಿಯರನ್ನು ಕೊಟ್ಟಿದೆ; ಆದರೆ ಒಬ್ಬಳೇ ಒಬ್ಬ ಅಕ್ಕ ಮಹಾದೇವಿಯನ್ನು ಕೊಟ್ಟಿದೆ. ೧) ಗ್ರೀಕ್ ದೇಶದ ಸೋಫೋ, ೨) ಈಸಾಯಿಗಳ ಥೆರೇಸಾ, ೩) ಕಾಶ್ಮೀರಿಯರ ಲಲ್ಲೇಶ್ವರಿ, ೪) ಅರೇಬಿಯಾದ ರಾಬಿಯಾ, ೫) ತಮಿಳರ ಅಂಡಾಳ, ೬) ರಾಜಸ್ಥಾನದ ಮೀರಾ, ೭) ಕರ್ನಾಟಕದವರೇ ಆದ ಮುಕ್ತಯಕ್ಕ, ಹೆಳವನಕಟ್ಟೆ, ಗಿರಿಯಮ್ಮ ಮೊದಲಾದವರಿಲ್ಲವೆ? ಎಂದು ಕೇಳಬಹುದು. ಇವರೆಲ್ಲರೂ ಅಧ್ಯಾತ್ಮ ಸಾಗರದ ಅನರ್ಘ್ಯರತ್ನಗಳೇ. ಆದರೆ ಅಕ್ಕನ ವ್ಯಕ್ತಿತ್ವ ಇವರೆಲ್ಲರಿಗಿಂತ ಹೆಚ್ಚು ಸಮಗ್ರವಾದುದಾಗಿ, ಸಂಕೀರ್ಣವಾದುದಾಗಿ, ಅನನ್ಯವಾದುದಾಗಿ ತೋರುತ್ತಿದೆಯೆಂಬುದು ಅಭಿಮಾನ ಪ್ರೇರಿತ ಉತ್ಪ್ರೇಕ್ಷೆಯೇನಲ್ಲ. ಅಪೂರ್ವತೆ, ಅತಿಶಯತೆ, ಉಜ್ವಲತೆ ಅಕ್ಕನ ವ್ಯಕ್ತಿತ್ವಕ್ಕೆ ಬೆರಗುಗೊಳಿಸುವ ಮೆರುಗನ್ನು, ಮೇಲ್ಮೈಯನ್ನು, ಹಿರಿಮೆ ಗರಿಮೆಗಳನ್ನು ಇತ್ತಿವೆ.

'ಸೋಫೊ'ಳ ಕವಿತೆಗಳು ಕಲಾತ್ಮಕ, ಮೋಹಕ, ಮಾದಕ ಆದರೆ ಅವುಗಳಲ್ಲಿ ಬಹಿರ್ಮುಖತೆ ಪಡೆದ ಸಫಲತೆಯನ್ನು ಅಂತರ್ಮುಖತೆ ಪಡೆಯಲಿಲ್ಲ. ಅಂತೆಯೇ ಅವಳ ಕವಿತೆಗಳಲ್ಲಿ ಕುಣಿವ ಉಲ್ಲಾಸ ಅವಳನ್ನು ನಿರಾಶೆಯಿಂದ ಪಾರುಮಾಡಲಿಲ್ಲ. ನಿರಾಶೆಯಲ್ಲಿಯೇ ಕಡಲ ಪಾಲಾದಳವಳು. ಥೆರೇಸಾಳ ವೈರಾಗ್ಯ, ಅಧ್ಯಾತ್ಮ ವಿರಹ ದೇವೋನ್ಮಾದಮಯ ದಿವ್ಯಜೀವನ ಎದ್ದು ಕಾಣುವಂತವು. ಆದರೆ ಅವಳು ಉದಾತ್ತ ಸಾಹಿತ್ಯವಿತ್ತಿಲ್ಲವೆಂಬುದೊಂದು ಕೊರತೆ. ರಾಬಿಯಾಳಲ್ಲಿ ಚಿಂತನಶೀಲತೆಯಿದೆ, ಅರಿವಿನ ಹರಹಿದೆ, ಪ್ರೇಮದ ಮಧುರವೇದನೆಯಿದೆ, ಆದರೆ ಸಂಘರ್ಷಜನ್ಯ ಜೀವನೋಜ್ವಲತೆಯಿಲ್ಲ. ಸಂಕೀರ್ಣತೆಯಿಲ್ಲ, ಕಾಶ್ಮೀರದ ಲಲ್ಲೇಶ್ವರಿ ಕ್ರಿ.ಶ. ೧೩೩೫ರಲ್ಲಿ ಎಂದರೆ ಅಕ್ಕನು ಐಕ್ಯವಾದ ಮೇಲೆ ಆರೇಳು ದಶಕಗಳ ತರುವಾಯ ಹುಟ್ಟಿದ ಮಹಾಯೋಗಿನಿ. ಅಕ್ಕನಿಗೂ ಈಕೆಗೂ ಒಂದೆರಡು ವಿಷಯಗಳಲ್ಲಿ ವಿಸ್ಮಯಜನಕ ಸಾಮ್ಯವಿದೆ. ಅಕ್ಕನು ಕೌಶಿಕನ ಮನೆಯಿಂದ ಹೊರಬಿದ್ದಂತೆ ಲಲ್ಲೇಶ್ವರಿ ಸಾಂಪೋರದ ತನ್ನ ಗಂಡನ ಮನೆಯಿಂದ, ಪ್ರೀತಿಸುವ ಮಾವ, ಪೀಡಿಸುವ ಅತ್ತೆ, ಪ್ರೀತಿಯನ್ನೇ ಅರಿಯದ ಗಂಡ-ಎಲ್ಲರನ್ನೂ

ಎಲ್ಲವನ್ನೂ ತೊರೆದು, ಉಟ್ಟ ಬಟ್ಟೆಯನ್ನೂ ಕಳಚಿ ಬಿಸಾಡಿ ಹೊರಡುತ್ತಾಳೆ. ಕಾಶ್ಮೀರೀ ಭಾಷೆಯಲ್ಲಿ ಲಲ್ಲ ಎಂದರೆ ಜೋಲುಬಿದ್ದ ಕಿಬ್ಬೊಟ್ಟೆಯಂತೆ. ಅಕ್ಕನಿಗೆ ಕೇಶರಾಶಿ ಕಾಮನ ಮುದ್ರೆಯ ಮುಚ್ಚಲು ನೆರವಾದಂತೆ ಲಲ್ಲೇಶ್ವರಿಗೆ ಈ ಜೋಲುಬಿದ್ದ ಕಿಬ್ಬೊಟ್ಟೆ ಮರ್ಮಾಂಗವನ್ನು ಮುಚ್ಚಲು ನೆರವಾದ ಕಾರಣ ಈಕೆ ಲಲ್ಲದೀದಿ,ಲಲ್ಲಮಾತೆ, ಲಲ್ಲಯೋಗೀಶ್ವರಿಯೆಂದೇ ಹೆಸರಾಗಿರುವಳಂತೆ. ಅಕ್ಕನು ತನ್ನ ದೂಷಕರ ಕೀಳ್ನುಡಿಗಳಿಂದ ಕಂಗೆಡದೆ ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯ... ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ–ನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು ಎಂದು ತನಗೆ ತಾನೇ ಸಾಂತ್ವನ ನೀಡಿಕೊಂಡಂತೆ, ಲಲ್ಲೇಶ್ವರಿಯೂ ತನ್ನನ್ನು ಕಾಡಿದ, ಏಡಿಸಿದ ಕೇಡಿಗಳಿಂದ ಕಂಗೆಡದೆ ನುಡಿದಳು:

"ನಿಂದಂತು ವಾ ಮಾಮಥವಾ ಸ್ತುವಂತು।
ಕುರ್ವಂತು ವಾರ್ಚಾಂ ವಿವಧೈಃ ಸುಪುಷ್ಪೈಃ ॥
ನ ಹರ್ಷಯಾಮ್ಯಥವಾ ವಿಷಾದಂ ।
ವಿಶುದ್ಧಬೋಧಾಮೃತಪಾನಸ್ವಸ್ಥಾ ॥"

(ನನ್ನನ್ನು ಹೊಗಳಲಿ, ತೆಗಳಲಿ, ವಿವಿಧವಾವ ಒಳ್ಳೆಯ ಹೂಗಳಿಂದ ಅರ್ಚಿಸಲಿ, ಬಿಡಲಿ. ಏನು ಮಾಡಿದರೂ ವಿಶುದ್ಧಬೋಧಾಮೃತವನ್ನು ಪಾನಮಾಡಿ ಸ್ವಸ್ಥಳಾಗಿರುವ ನಾನು ಹರ್ಷಿಸುವುದೂ ಇಲ್ಲ, ವಿಷಾದಿಸುವುದೂ ಇಲ್ಲ!)

ಕಷ್ಟಗಳ, ಕೋಟಲೆಗಳ ಕಟ್ಟಡವಿಯನ್ನು ದಾಟಿ, ಕಾರಿರುಳನ್ನು ಕಳೆದು ಕೊನೆಗೂ ಲಲ್ಲೇಶ್ವರಿ ಸಿದ್ಧಾವಸ್ಥೆಗೆ ಮುಟ್ಟುತ್ತಾಳೆ; ನಂದಋಷಿ, ನಸರುದ್ದೀನರೊಡನೆ ನಡೆದ ಪಾರಮಾರ್ಥಿಕ ಸಂವಾದಗಳಲ್ಲಿ ಗೆಲ್ಲುತ್ತಾಳೆ;

"ಕರೋಮಿ ಯತ್ಕರ್ಮ ತದೇವ ಪೂಜಾ।
ವದಾಮಿ ಯಚ್ಚಪಿ ತದೇವ ಮಂತ್ರಃ ॥
ಯದೇವ ಚಾಯಾತಿ ತಥೈವ ಯೋಗಾದ್ ।
ದ್ರವ್ಯಂ ತದೇವಾಸ್ತಿ ಮಮಾತ್ರ ತಂತ್ರಮ್ ॥"

(ನಾನು ಮಾಡುವುದೆಲ್ಲ ಪೂಜೆ, ಆಡುವುದೆಲ್ಲ ಮಂತ್ರ, ಪಡೆವುದೆಲ್ಲ ಪೂಜಾದ್ರವ್ಯ, ನಡೆವುದೆಲ್ಲ ತಂತ್ರ) ಎಂದು ಸಾರುವ ಪರಮೋಚ್ಚ ಸ್ಥಿತಿಗೆ, ಸ್ಥಾನಕ್ಕೆ ಏರುತ್ತಾಳೆ.

ಎಲ್ಲ ದೃಷ್ಟಿಯಿಂದಲೂ ಇವಳದೊಂದು ಅದ್ಭುತರಮ್ಯ ಜೀವನ. ಆದರೆ ಅಕ್ಕನ ವಚನಗಳಲ್ಲಿ ನಾವು ಭಾವಸೌಂದರ್ಯ ಭಾಷಾಸೌಂದರ್ಯಗಳ, ಅನುಭಾವೋದ್ದೀಪ್ತ ಬೌದ್ಧಿಕತೆಯ ಹೃದಯಂಗಮ ಸಂಗಮವನ್ನು ಕಾಣುವಂತೆ ಲಲ್ಲೇಶ್ವರಿಯ ವಾಕ್‌ಗಳಲ್ಲಿ

ಕಾಣಲಾರೆವೇನೋ. ಜಿಜ್ಞಾಸೆ, ಸ್ವಾತ್ಮವಿಮರ್ಶೆ, ಸ್ವರೂಪಾನುಸಂಧಾನ, ಯೋಗಸಾಧನೆ, ಅಮೃತತ್ವಪ್ರಾಪ್ತಿಯ ವಿಧಾನ ನಿರೂಪಣೆ ಇತ್ಯಾದಿ ಗಹನವಿಷಯಗಳನ್ನು ಶಾಸ್ತ್ರೀಯ ಪರಿಭಾಷೆಯಲ್ಲಿ ವಿವರಿಸುವ ಈ ವಾಕ್‌ಗಳಲ್ಲಿ ಅಕ್ಕನ ಅಕ್ಲಿಷ್ಟ ಮಾಧುರ್ಯ ವಿರಳವೆಂದೇ ಹೇಳಬೇಕು. ಅಲ್ಲದೆ ನಂದಋಷಿ ನಸರುದ್ದೀನರೊಡನೆ ಈಕೆ ನಡೆಸಿದ ಪಾರಮಾರ್ಥಿಕ ಸಂವಾದಗಳು ಅನುಭವ ಮಂಟಪದಲ್ಲಿ ಅಕ್ಕನು ಎದುರಿಸಿದ ಅಗ್ನಿಪರೀಕ್ಷೆಯ ಮುಂದೆ ಕಡಿಮೆ ಕಾಂತಿಯುಕ್ತವಾಗಿ ಕಾಣುತ್ತವೆ.

ಮುಕ್ತಯಕ್ಕ ಮಹಾದೇವಿಯಕ್ಕನಿಗೆ ಸಮಾನಸ್ಥಾನವನ್ನು ಪಡೆಯುತ್ತಿದ್ದಳೇನೋ, ಆಕೆಯ ಜೀವನದ ಸಾದ್ಯಂತ ವಿವರಗಳು ದೊರೆತಿದ್ದರೆ. ಒಮ್ಮೆಗೆ ಪ್ರಕಾಶದ ಪ್ರವಾಹವಾಗಿ ಹರಿದು ಬಂದು ಇನ್ನಷ್ಟು ಕಣ್ತುಂಬ ನೋಡಬೇಕೆನ್ನುವಷ್ಟರಲ್ಲಿ ಬಯಲಾಗಿ ಬಿಡುವ ಬೆಳಕಿನ ತೊರೆಯಂತೆ ತೋರುತ್ತಾಳೆ, ಆಕೆ. ಅಲ್ಲಮಪ್ರಭುಗಳ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಕೀರ್ತಿ ಅಕ್ಕ–ಮುಕ್ತಾಯಿಯರಿಗೆ ಸಮಾನವಾಗಿ ಸಲ್ಲುತ್ತದೆ. ಆದರೆ ಇಲ್ಲಿಗೆ ಮುಗಿಯುತ್ತದೆ, ಅವರೀರ್ವರ ಜೀವನಗಳಲ್ಲಿಯ ಈ ಸಾಮ್ಯ. ಮುಂದೆ ಮುಕ್ತಾಯಿ ಸರಸ್ವತಿ ಸರಿತ್ತಿನಂತೆ ಅದೃಶ್ಯವಾಹಿನಿಯಾಗಿಬಿಡುತ್ತಾಳೆ; ಅಕ್ಕನಾದರೋ ಭಾವವೆಂಬ ಹಾಲಿನ ಗಂಗೆ, ಸುಜ್ಞಾನವೆಂಬ ತುಪ್ಪದ ಯಮುನೆ, ಪರಮಾರ್ಥವೆಂಬ ಸಕ್ಕರೆಯ ಸರಸ್ವತಿಗಳನ್ನು ಒಳಗೊಂಡು ತ್ರಿವಿಧಾಮೃತದ ತೊರೆಯಾಗಿ ಹರಿಯುತ್ತಾಳೆ.

ಅಂಡಾಳ್ ಆತ್ಮಸಮರ್ಪಣೆಗೆ ಇನ್ನೊಂದು ಹೆಸರು. ರಂಗನಾಥನ ಕೈಹಿಡಿಯಲೆಂದೇ ಹುಟ್ಟಿದ ಆಕೆ, ಅಧ್ಯಾತ್ಮವಿರಹಿಣಿಯಾಗಿ ಹಾಡಿರುವ ಸುಂದರ ಸುಮಧುರ ಪಾಸುರಗಳು ತಮಿಳು ಸಾಹಿತ್ಯಕ್ಕೆ ತೊಡವಾಗಿ ಶೋಭಿಸುತ್ತಿವೆ. ರಂಗನಾಥನ ಸಗುಣೋಪಾಸಕಗಳಾಗಿದ್ದ ಅವಳಿಗೆ ಆ ವಿಶ್ವಮೋಹನನೂ ಮೋಹಿಸುವಷ್ಟು ತನು ಚೆಲುವಾಗಿ ಕಾಣಬೇಕೆಂಬ ತವಕ. ಅಂತೆಯೇ ಅವನ ಅರ್ಚನೆಗೆಂದು ಕಟ್ಟಿದ ಚಾರುತರ ಹಾರಗಳನ್ನು ತಾನೇ ಮೊದಲು ಧರಿಸಿ, ಕನ್ನಡಿಯಲ್ಲಿ ತನ್ನ ರೂಪ ನೋಡಿಕೊಂಡು ಅವನು ಒಲಿಯುವಷ್ಟು ನಾನು ಸುಂದರಗಳಾಗಿಲ್ಲವೆ? ಎಂದು ತನ್ನನ್ನು ತಾನೇ ಪ್ರಶ್ನಿಸಿಕೊಳ್ಳುತ್ತಾನೆ; ತಪೋನಿರತ ಗಿರಿಜೆಯಂತೆ ಮನ್ಮಥನ ನೆರವನ್ನು ಕೋರುತ್ತಾಳೆ. ಸುದೈವದಿಂದ ಇಲ್ಲಿ ಮನ್ಮಥ ದಹನವಾಗುವುದಿಲ್ಲ. ಗಿರಿಜೆಯಂತೆ ಇನ್ನಷ್ಟು ಉಗ್ರತಪವನ್ನಾಚರಿಸುವ ಅಗತ್ಯ ಉದ್ಭವಿಸುವುದಿಲ್ಲ. ರಂಗನಾಥ ಕನಸಿನಲ್ಲಿ ಬಂದು ಪೂಜಾರಿಗೆ ಹೇಳುತ್ತಾನೆ; ಮರ್ತ್ಯದ ಮಟ್ಟದಲ್ಲಿ ಮದುವೆ ನಡೆದು ಹೋಗುತ್ತದೆ. ಆದರೆ ಅಕ್ಕನಂತೆ ಒಲ್ಲದ ಗಂಡನ ಕೈಹಿಡಿದು, ಕೆಸರಿನಲ್ಲಿ ಬಿದ್ದ ಪಶುವಿನಂತೆ ದೆಸೆದೆಸೆಗೆ ಬಾಯಿಬಿಡುವ ಪ್ರಮೇಯವಾಗಲಿ, ದಾರಿಯುದ್ಧಕ್ಕೂ ಕಾಕಪೋಕರಿಂದ ಕೋಟಲೆ ಗಳಿಗೊಳಗಾವುದ ಸಂದರ್ಭವಾಗಲಿ, ಪ್ರಭುದೇವರಿಂದ ಪರೀಕ್ಷಿತಳಾಗುವ ಸನ್ನಿವೇಶವಾಗಲಿ ಅಂಡಾಳಳ ಬಾಳಿನಲ್ಲಿ ಕಾಣುವುಇದಲ್ಲ. ಹೆಳವನಕಟ್ಟೆಯ ಗಿರಿಯಮ್ಮನದೂ ಹೆಚ್ಚುಕಡಿಮೆ ಅಂಡಾಳಲ ಸಾಧನೆಯೇ.

ಅಕ್ಕನನ್ನು ಹಲವು ಬಗೆಯಲ್ಲಿ ಹೋಲುವ ಅಧ್ಯಾತ್ಮಜ್ಯೋತಿಯೆಮದರೆ ಮೀರಾಬಾಯಿ. ಇವರಿಬ್ಬರ ನಡುವೆ ಸುಮಾರು ಮೂರು ಶತಮಾನಗಳ ಅಂತರವಿದ್ದರೂ ಕನ್ನಡನಾಡಿನ ಉಡುತಡಿಯ ಮಹಾದೇವಿ, ರಾಜಸ್ಥಾನದ ಕುಡಕಿಯ ಮೀರಾ ಇವರಿಬ್ಬರ ಜೀವನ ಸಾಧನೆ, ಸಂದೇಶಗಳಲ್ಲಿ ಆಶ್ಚರ್ಯಕರವಾದ ಸಾಮ್ಯಗಳಿವೆ. ಮಹಾದೇವಿಯೇ ಮತ್ತೆ ಮೀರಾ ಆಗಿ ಹುಟ್ಟಿದಳೇನೋ ಎನ್ನುವಷ್ಟು ಸಾದೃಶ್ಯಗಳಿವೆ ಇಬ್ಬರಲ್ಲಿಯೂ ಚಿಕ್ಕಂದಿನಿಂದಲೂ ಅಕ್ಕ ಮಲ್ಲಿಕಾರ್ಜುನನ ಮಡದಿಯಾಗಲು ಹಾರೈಸಿ ಹಂಬಲಿಸಿದರೆ ಮೀರಾ ಗಿರಿಧರಗೋಪಾಲನ ಸತಿಯಾಗಲು ಹಾತೊರೆದಳು; 'ಈ ಸಾವ, ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ಎಂದು ಅಕ್ಕನು ಹೇಳಿದರೆ,' ಐಸೇ ವರಕೋ ಕ್ಯಾಕರೂಂ ಜೋ ಜನಮೆ ಔರ ಮರಜಾಯೆ! ವರ ವರಿಯೆ ಏಕ ಸಾವರಿಯಾರೀ!' (ಹುಟ್ಟಿ ಸಾಯುವ ವರನನ್ನು ನಾನೇನು ಮಾಡಲಿ? ಒಬ್ಬನೇ ಒಬ್ಬನಾದ ಕೃಷ್ಣನ ಕೈಯನ್ನೇ ಹಿಡಿವೆ)ಎಂದು ಮೀರಾ ಸಾರಿದಳು; ಇಬ್ಬರೂ ಹುಟ್ಟಿದ ಮನೆ ತೊರೆದು ಸಂಪ್ರದಾಯ ವಿರೋಧಿಗಳಾಗಿ, 'ಸಂತೆಯೊಳಗೊಂದು ಮನೆಯ ಮಾಡಿಶಬ್ದಕ್ಕೆ ನಾಚಿದಡೆಂತಯ್ಯ?' ಎಂದೂ' ಕೊಯಿ ನಿಂದೊ, ಕೊಯಿ ಬಿಂದೊ ಗುಣ ಗೊವಿಂದಕಾ ಗಾಸ್ಯಾ ಎಮದೂ ಹೊರಟವರು; 'ಬಂಜೆ ಬೇನೆಯನರಿಯಳು, ಮಲತಾಯಿ ಮದ್ದಬಲ್ಲಳೆ? ನೊಂದ ನೋವ ನೋಯದವರೆತ್ತಬಲ್ಲರು?' ಎಂದೂ' ಮೇರಾ ದರದ್ ಕೋಯಿ ನ ಜಾನೆ, ಘಾಯಲ್ ಕೀ ಗತಿ ಘಾಯಲ್ ಜಾನೇ ಎಂದೂ ಹೂವಿನ ಹಾಸಿಗೆಯನ್ನು ತೊರೆದು ಮುಳ್ಳು ಚೆಲ್ಲಿದ ಮಾರ್ಗದಲ್ಲಿ ಮುಂದುವರಿದವರು;' ಆರೂ ಇಲ್ಲದವಳೆಂದು ಆಳಿಗೊಳಲುಬೇಡ ಕಂಡಯ್ಯ! ಏನ ಮಾಡಿದಡೆಯೊ ನಾನು ಅಂಜುವಳಲ್ಲ! ತರಗೆಲೆಯ ಮೆಲಿದು ನಾನಿಹೆನು, ಸುರಗಿಯ ಮೇಲೊರಗಿ ನಾನಿಹೆನು! ಚೆನ್ನಮಲ್ಲಿಕಾರ್ಜುಯ್ಯ ಕರಕರ ಕಾಡಿ ನೋಡಿದೊಡೆ ಒಡಲನೂ ಪ್ರಾಣವನೂ ನಿಮಗೊಪ್ಪಿಸಿ ಶುದ್ಧಳಹೆ'ನೆಂದೂ' ಲೋಕ ಲಾಜಕೀ ಕಾಣನಯಾನೂ, ನಿರಭೈ ನಿಸಾನ ಘುಸ್ಯಾ ಹೋಮಾಯಿ; ಮೀರಾ ಸರಣ ಸಬಲ ಗಿರಿಧಾರಕೀ ಎಂದೂ ಗಂಡೆದೆಯೂ ನಡುಗುವಂಥ ಗಂಡುತನದೊಡನೆ ಮುನ್ನಡೆದವರು! ಎಲ್ಲ ಸಂಕಷ್ಟಗಳನ್ನೂ ಸಹಿಸುತ್ತ ನಿಂದೆ ಕಟಕಿಗಳ ನಂಜಿನ ಗುಟುಕುಗಳನ್ನು ಕುಡಿಯುತ್ತ ನಡೆದ ಇವರಿಗೆ ಹಸಿವಾದೊಡೆ ಭಿಕ್ಷಾನ್ನಗಳಿದ್ದುವು; ತೃಷೆಯಾದೊಡೆ ಹಳ್ಳಭಾವಿಗಳಿದ್ದುವು; ಶಯನಕ್ಕೆ ಹಾಳೂ ದೇಗುಲಗಳಿದ್ದುವು; ಚೆನ್ನಮಲ್ಲಿಕಾರ್ಜುನ ಆತ್ಮ ಸಂಗಾತಕ್ಕಿದ್ದನು! ಕೊಲ್ಲಲೆಂದು ರಾಣಾ ಕಳಿಸಿದ ವಿಷವೇ ಮೀರಾಳಿಗೆ ಅಮೃತವಾಯಿತು!

ಇಷ್ಟೆಲ್ಲ ಕಷ್ಟಗಳ ಕರವಾಳಗಳ ಮೇಲೆ ನಡೆದು ಅಕ್ಕ ಕಲ್ಯಾಣಕ್ಕೆ, ಮಿರಾ ವೃಂದಾವನಕ್ಕೆ ಹೋದಾಗ ಅವರಿಬ್ಬರಿಗೂ ದೊರೆತ ಸ್ವಾಗತ ಒಂದೇ ವಿಧವಾದುದು. 'ಸತಿ ನೀನು ಇತ್ತಲೇಕೆ ಬಂದೆಯವ್ವಾ? ನಿನ್ನ ಪತಿಯ ಕುರುಹು ಹೇಳಿದರೆ ಬಂದು ಕುಳ್ಳಿರು, ಇಲ್ಲದಿರೆ, ತೊಲಗು ತಾಯಿ!' ಎಂದು ಅಲ್ಲಮಪ್ರಭುಗಳು ಅಕ್ಕಮಹಾದೇವಿಗೆ ಹೇಳಿದರೆ, ವೃಂದಾವನದ ಜೀವಗೋಸ್ವಾಮಿಗಳು ಹೆಣ್ಣೆಂಬ ಕಾರಣದಿಂದ ಮೀರಾ ಬಾಯಿಯನ್ನು ನೋಡಲು

ನಿರಾಕರಿಸಿಬಿಡುತ್ತಾರೆ. ಅಲ್ಲಮ ಅಕ್ಕರ ಸಂವಾದವನ್ನು ಈ ಹಿಂದೆ ನೋಡಿದ್ದೇವೆ; ಮೀರಾ ಜೀವಗೋಸ್ವಾಮಿಗಳಿಗೆ ಕೊಟ್ಟ ದಿಟ್ಟ ಉತ್ತರವನ್ನೀಗ ನೋಡಬೇಕು! ಸ್ವಾಮೀಜಿ ಕೃಷ್ಣನೊಬ್ಬನೇ ಪುರುಷನೆಂದು ನಾನು ತಿಳಿದಿದ್ದೆ. ವೃಂದಾವನದಲ್ಲಿ ಅವನ ಇನ್ನೊಬ್ಬ ಪ್ರತಿಸ್ಪರ್ಧಿ ಇರುವನೆಂಬುದು ಇದೀಗ ಗೊತ್ತಾಯಿತೆನಗೆ! ಸ್ತ್ರೀಮುಖ ನೋಡುವುದೂ ಪಾಪವೆಂದು ತಿಳಿದ ನೀವು ರಾಧಾಪೂಜೆಯನ್ನೆಂತು ಮಾಡುವಿರಿ? ರಾಧಾಮಾಧವರ ಮಧುರಭಕ್ತಿಯನ್ನೆಂದು ಬೋಧಿಸುವಿರಿ?

ಅಕ್ಕನ ನಿಲವೂ ಇದೇ: 'ಗಂಡಗಂಡರನೆಲ್ಲ ಹೆಂಡಿರಾಗಿ ಆಳುವ ಗರುವ ಅವಳ ಚೆನ್ನಮಲ್ಲಿಕಾರ್ಜುನ. ಎನ್ನದೇವ ಚೆನ್ನಮಲ್ಲಿಕಾಜುನಯ್ಯನೆಂಬ ಗರುವಂಗೆ ಜಗವೆಲ್ಲಾ ಹೆಣ್ಣುನೋಡಾ!' ಎಂದ ಅಕ್ಕ, 'ಪುರುಷನೊಬ್ಬನೇ ಕೃಷ್ಣ' ಎಂದ ಮೀರಾ ಗಂಡುಹೆಣ್ಣಿನ ಭೇದ ಭ್ರಾಮಕವೆಂಬುದನ್ನು ಎತ್ತಿತೋರಿದ್ದಾರೆ; ಸ್ತ್ರೀ–ಪುರುಷರ ಸಮಾನತೆಯ ಸಂದೇಶ ಬೀರಿದ್ದಾರೆ. ಯಾರೇ ಮೆಚ್ಚಲಿ, ಬಿಡಲಿ, ತಮಗೆ ಸರಿದೋರಿದುದನ್ನು ನಿರ್ಭಯವಾಗಿ ನಿರೂಪಿಸಿದ್ದಾರೆ. ತಮ್ಮ ಅಂತರಂಗದ ಆರಾಧ್ಯ ಮೆಚ್ಚದಿದ್ದರೆ ಹೇಗೆ? ಎಂಬ ಪ್ರಶ್ನೆಯೂ ಅವರನ್ನು ಅಧೀರರನ್ನಾಗಿ ಮಾಡಿಲ್ಲ. ಅವನು ಮೆಚ್ಚಲಿ ಬಿಡಲಿ, ತಾವು ಅವನನ್ನು ಮೆಚ್ಚಿದರೆ ಸಾಲದೆ? ಅವನು ಮೆಚ್ಚಲೆಂಬ ಇಚ್ಛೆಯಾದರೂ ಏಕಿರಬೇಕು? ಅಂತೆಯೇ ಈ ಆತ್ಮಪ್ರತ್ಯಯದ ಉಗ್ಗಡಣೆ:' ಅಯ್ಯ ನೀ ಕೇಳಿದರೆ ಕೇಳು, ಕೇಳದಿದ್ದರೆ ಮಾಣು, ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ! ... ಅಯ್ಯಾ ನೀ ಮೆಚ್ಚಿದರೆ ಮೆಚ್ಚು, ಮೆಚ್ಚದಿದ್ದರೆ ಮಾಣು, ನಾ ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯಾ!' ಇದೇ ಶಪಥ ಮೀರಾಳದೂ: ಜಾವೋ ಹರಿ, ನಿರಮೋಹ ಡಾರೆ ಜಾಣೇ ಥಾರಿ ಪ್ರೀತ' (ಹೋಗು ಹರಿ: ನೀನು ನಿರ್ಮೋಹಿ; ನಿನ್ನ ಪ್ರೀತಿ ನನಗೆ ಗೊತ್ತಿದೆ!)

ಗಂಡಿನ ಮುಂದೆ ಮುಂಡೆಯೂರದ, ತಾವು ಒಲಿದ ಪರಮಾತ್ಮನನ್ನೂ ಅಂಗಲಾಚಿ ಬೇಡದ, ದೈನ್ಯಕ್ಕೆ ಎಡೆ ನೀಡದ, ಆತ್ಮವಿಶ್ವಾಸವನ್ನು ಕೈಬಿಡದ ಈ ಈರ್ವರೂ ನಾರೀಗೌರವವನ್ನು ಬಾನೆತ್ತರಕ್ಕೆ ಎತ್ತಿದವರೇ. ಆದರೂ ಅಕ್ಕನ ವಿಶಿಷ್ಟತೆ, ವಿಶೇಷತೆ ಇಲ್ಲಿಯೂ ಕಂಗೊಳಿಸದಿಲ್ಲ. ಉಡುತಡಿಯಿಂದ ಕಲ್ಯಾಣಕ್ಕೆ ಕಲ್ಯಾಣದಿಂದ ಶ್ರೀಶೈಲಕ್ಕೆ ಅಕ್ಕನು ಕೈಕೊಂಡ ಪಯಣ ಆಧ್ಯಾತ್ಮಸಾಧನೆಯ ಪಯಣ, ಮೈನವಿರೆಬ್ಬಿಸುವಂಥ ಅದ್ಭುತ ಪಯಣ. ಕೌಶಿಕನ ಪ್ರಕರಣ ಅದೆಷ್ಟು ಅಂತರಂಗದ ತುಮುಲಗಳಿಗೆ, ಕರುಳಿನ ಕೋಲಾಹಲಗಳಿಗೆ ಕಾರಣವಾಯಿತೆಂಬುದನ್ನು ನೆನೆದಾಗ ಅಕ್ಕನಲ್ಲದೆ ಇನ್ನಾರೂ ಆ ಅಗ್ನಿಪರೀಕ್ಷೆಯಲ್ಲಿ ಜಯಶಾಲಿಯಾಗುತ್ತಿರಲಿಲ್ಲವೇನೋ ಎನ್ನಿಸುತ್ತಿದೆ. ಅಲ್ಲಮಪ್ರಭು ಅಕ್ಕಮಹಾದೇವಿಯರ ಕಣ್ಣು ಕುಕ್ಕುವ ಕಾಂತಿಯ ಸಂವಾದದ ಮುಂದೆ ಜೀವಗೋಸ್ವಾಮಿ

೧. Dr. Alexis Carrel Reflections on life (Page 112)

ಮೀರಾರ ವಾಗ್ವಾದ ಸಪ್ಪೆಯೇ ಸರಿ. ಅಕ್ಕನ ವಚನಗಳ ವೈಶಿಷ್ಟ್ಯ ವದಂತಿರಲಿ, ಆಕೆ ಹಾಡುಗಬ್ಬಗಳನ್ನು, ಯೋಗಾಂಗತ್ರಿವಿಧಿಯನ್ನು, ಸೃಷ್ಟಿಯ ವಚನವನ್ನು ಕೊರವಂಜಿ ವಚನವನ್ನೂ ಬರೆದಿರುವುದು ಆಕೆಯ ಪ್ರತಿಭೆಯ ಹಲವು ಪೈಲುಗಳಿಗೆ ನಿದರ್ಶನ.

ಅಕ್ಕನ ಅಪೂರ್ವತೆ ಬೆಕ್ಕಸಗೊಳಿಸುವಂಥದು. ಅವಳ ಈ ಅಪೂರ್ವತೆಯ, ಅನನ್ಯತೆಯ, ಅನುಪಮತೆಯ ಗುಟ್ಟೇನು? ಡ. ಅಲೆಕ್ಸಿಸ್ ಕೆರೆಲ್ ಹೇಳಿರುವುದು ಸರಿಯೆನೋ: "It is dangerous to be exclusively an intellectual or a mystic, a logician or an intutitive, a scientist or a poet. It is by the simultaneous upward trend of his intellectual, moral, aresthetic and religious faculty that each one can attain the highest level compatible with his inherited latent powers."

ಅಕ್ಕನು ಈ ಎಲ್ಲ ಸಹಜಶಕ್ತಿಗಳನ್ನು ಬುದ್ಧಿಶಕ್ತಿ ನೈತಿಕಶಕ್ತಿ ಸೌಂದರ್ಯೋಪಾಸನೆಯ ಶಕ್ತಿ, ಧರ್ಮಾನುಸಂಧನ ಶಕ್ತಿ–ವರವಾಗಿ ಪಡೆದಿದ್ದಳು; ಅವೆಲ್ಲವುಗಳ ಸಹಕಾಲಿಕ ಸಮ್ಮುನ್ನತಿಯನ್ನು ಸಾಧಿಸಲು ತನ್ನ ಸರ್ವಸ್ವವನ್ನು ಪಣಕ್ಕೊಡ್ಡಿದಳು. ಅಂತೆಯೇ ಬರಿಯ ಬೌದ್ಧಿಕತೆಯನ್ನಾಗಲೀ, ಕೇವಲಾನುಭಾವವನ್ನಾಗಲೀ, ತಾರ್ಕಿಕತೆ ಮಾತ್ರವನ್ನಾಗಲಿ, ಅಂತರ್ದೃಷ್ಟಿಯೊಂದನ್ನೇ ಆಗಲಿ, ವೈಜ್ಞಾನಿಕತೆಯೊಂದನ್ನೇ ಆಗಲಿ, ಕಾವ್ಯಾನುಭವವೊಂದನ್ನೇ ಆಗಲಿ ಸಾಧಿಸದೆ ಇವೆಲ್ಲವುಗಳ ಸುಮಧುರ, ಹಿತಕರ, ಸಮುಚಿತ ಸಮ್ಮಿಶ್ರಣವನ್ನೇ ಸಾಧಿಸಿದಳು. ಅದೂ ರಾಸಾಯನಿಕ ಸಮ್ಮಿಶ್ರಣವನ್ನು, ಬರಿಯ ಭೌತಿಕ ಸಮ್ಮಿಶ್ರಣವನ್ನಲ್ಲ. ಅಕ್ಕನ ಕೃತಿಗಳಲ್ಲಿ ಬುದ್ಧಿಭಾವಗಳ ವಿದ್ಯುದಾಲಿಂಗನವಿರುವುದಂತೂ ಸರ್ವಸಮ್ಮತ ವಿಷಯುವೇ; ಅವುಗಳಲ್ಲಿ ಅಂತರ್ದೃಷ್ಟಿ ಅನುಭಾವಗಳು ಓತಪ್ರೋತವಾಗಿ ತುಂಬಿಕೊಂಡಿರುವುದೂ ಎಲ್ಲರೂ ಒಪ್ಪಿದ ವಿಷಯವೇ. ಆಕೆಯ ಸ್ಪಂದನಶೀಲ, ಸಂವೇದನಶೀಲ ಕವಿಹೃದಯದ ಬಗೆಗೂ ಭಿನ್ನಾಭಿಪ್ರಾಯವಿಲ್ಲ. ಆದರೆ ತಾರ್ಕಿಕತೆ ವೈಜ್ಞಾನಿಕತೆಗಳೂ ಅಲ್ಲಿವೆಯೆ? ಸೂಕ್ಷ್ಮಗ್ರಾಹಿಗಳಿಗೆ ಇಲ್ಲಿ ತರ್ಕಬದ್ಧ ವಿಚಾರಸರಣಿ, ವೈಜ್ಞಾನಿಕ ದೃಷ್ಟಿಗಳೂ ದೃಗ್ಗೋಚರವಾಗದಿರವು. ಉದಾಹರಣೆಗಳು ಅನಾವಶ್ಯಕ. ಓದುಗರಿಗೆ ಅಪ್ರಯತ್ನಿತವಾಗಿ ದೊರೆಯಬಹುದು, ಉದಾಹರಣೆಗಳು. ಅಕ್ಕನ ಅದ್ವಿತೀಯತೆಯ ರಹಸ್ಯವಿಲ್ಲಿದೆ.

ಒಟ್ಟಿನಲ್ಲಿ ಅಕ್ಕನೊಂದು ಮಹಿಳಾಸೃಷ್ಟಿಯ ಅದ್ಭುತ. ಕಾಯದ ಲಜ್ಜೆಯ ಕಲ್ಪಿತವ ಕಳೆದು, ಜೀವನ ಲಜ್ಜೆಯ ಮೋಹವಳಿದು, ಮನದ ಲಜ್ಜೆಯ ನೆನಹ ಸುಟ್ಟು, ಭಾವದ ಕೂಟ ಬತ್ತಲೆಯೆಂದರಿದು, 'ತನ್ನ ಸ್ವಾನುಭಾವದ ಉದಯದಿಂದ ತನ್ನ ತಾನರಿದ ನಿಜಶಕ್ತಿಯಾದ ಅಕ್ಕಮಹಾದೇವಿ, ನಾಮದಲಿ, ಹೆಂಗೂಸಾದೊಡೇನು, ಭಾವಿಸಲು ಗಂಡು ರೂಪು ಎಂದು ಸಾರಿದ ಅಕ್ಕಮಹಾದೇವಿ, ಚೆನ್ನಮಲ್ಲಿಕಾರ್ಜುನ ಕಾಮನಕೊಂದು

ಮನಸಿಜನಾಗುಳುಹಿದರೆ ಮನಸಿಜನ ತಲೆಯ ಬರೆಹವ ತೊಡೆವೆನು' ಎಂದು ಘೋಷಿಸಿದ ಮಹಾದೇವಿ, 'ನಮ್ಮ ಮನೆಯಲಿಂದು ಹಬ್ಬ; ನಮಗೆ ಸಂದಣಿ ಬಹಳ!

ನಿಮ್ಮ ನುಡಿಸ ಹೊತ್ತಿಲ್ಲ, ಹೋಗಿ ವಿಷಯಗಳಿರಾ! ಎಂದು ಎಚ್ಚರಿಸಿದ ಅಕ್ಕಮಹಾದೇವಿ, ಬಿಡು ಬಿಡು ಕರ್ಮವೇ, ನಿನ್ನ ಕೊಲ್ಲದೆ ಮಾಣೆನು! ಎಂದು ಉಗ್ಗಡಿಸಿದ ಅಕ್ಕಮಹಾದೇವಿ, ನಿಮ್ಮ ಮಾಯೆಗೆ ನಾನಂಜುವಳಲ್ಲ, ಚೆನ್ನಮಲ್ಲಿಕಾರ್ಜುನದೇವ, ನಿಮ್ಮಾಣೆ ಎಂದು ಸಿಡಿದು ನುಡಿದ ಮಹಾದೇವಿ, ನಿನ್ನರಿಕೆಯ ನರಕವೇ ಮೋಕ್ಷ, ನಿನ್ನನರಿಯದ ಮುಕ್ತಿಯೇ ನರಕ ಎಂದು ನಂಬಿದ್ದ ಮಹಾದೇವಿ ತನ್ನ ಬಗ್ಗೆ ತಾನೇ ಹೀಗೆ ಹೇಳಿಕೊಂಡಿದ್ದರೆ ಆಶ್ಚರ್ಯವೇನು?

"ಕಾಮನ ತಲೆಯ ಕೊರೆದು
ಕಾಲನ ಕಣ್ಣ ಕಳೆದು
ಸೋಮಸೂರ್ಯರ ಹುರಿದು
ಹುಡಿಮಾಡಿ ತಿಂಬವಳಿಂಗೆ
ನಾಮವನಿಡಬಲ್ಲವರಾರು ಹೇಳಿರೆ?"

ಹೌದು, ನಾಮವನಿಡಬಲ್ಲವರಾರು? ತಲೆದೂಗದವರಾರು? ತಲೆಬಾಗದವರಾರು?

* * * * *

# ಶರಣ ಸರಣಿ

# ೧

# ಶರಣರ ಅನುಭಾವ ಸರಣಿ

'ಕುಂಡಲಿಗನೊಂದು ಕೀಡೆಯ ತಂದು ತನ್ನಂತೆ ಮಾಡಿತಲ್ಲ!
ಎಲೆ ಮಾನವಾ. ಕೇಳಿ ನಂಬಯ್ಯ; ನೋಡಿ ನಂಬಯ್ಯ,
ಎಲೆ ಮಾನವಾ!
ತ್ವಚ್ಚಿಂತಯಾ ಮಹಾದೇವ ತ್ವಯ್ಯೇನಾಸ್ಮಿ ನ ಸಂಶಯಃ
ಭ್ರಮದ್ಭ್ರಮರ ಚಿಂತಾಯಾಂ ಕೀಟೋಪಿ ಭ್ರಮ್ಮರಾಯತೇ!
ಕೂಡಲ ಸಂಗನ ಶರಣರ ಅನುಭವ
**ಇದರಿಂದ ಕಿರುಕುಳವೆ, ಎಲೆ ಮಾನವಾ?'** ಬಸವಣ್ಣನವರು.

ಜೀವಸೃಷ್ಟಿಯ ಪ್ರಾರಂಭಿಕ ಯುಗಗಳಲ್ಲಿ ಪ್ರಸ್ಫುರಣೆ (instinct)ಯೇ ಎಲ್ಲ ಪ್ರಾಣಿಗಳ ನಡೆವಳಿಕೆಗಳಿಗೆ ವರ್ತನೆಗಳಿಗೆ ಪ್ರೇರಕ ಶಕ್ತಿಯಾಗಿದ್ದಿತೆಂದು ಹೇಳುತ್ತಾರೆ. ನಿಯತ ಪ್ರಸ್ಫುರಣೆಗಳ ನಿಯಮಿತ ಪ್ರೇರಣೆಗಳಿಗೆ ಪ್ರಾಣಿಗಳ ಪ್ರತಿಕ್ರಿಯಾತ್ಮಕ ವರ್ತನೆಯೂ ನಿಯತವಾಗಿರುತ್ತಿದ್ದಿತಾಗಿ ಪ್ರಮಾದಗಳಿಗೆ ಅಷ್ಟೊಂದು ಆಸ್ಪದವಿರಲಿಲ್ಲ.

ಆದರೆ ಲಕ್ಷಲಕ್ಷ ವರ್ಷಗಳ ವಿಕಾಸಕ್ರಿಯೆ. ಕ್ರಮಗಳಿಂದಾಗಿ ಕೆಲವು ಪ್ರಾಣಿಗಳಲ್ಲಿ ಆಂಶಿಕವಾಗಿ, ಮಾನವನಲ್ಲಿ ಎದ್ದು ಕಾಣುವಷ್ಟು ಪ್ರಜ್ಞೆ ತಲೆದೋರಿತು. ಈ ಅರಿವಿನ ಬಲದಿಂದಲೇ ಅದ್ಭುತ ಸಾಧನೆಗಳ ದೊಡ್ಡ ಸರಮಾಲೆಯನ್ನು ಧರಿಸಿ ಮೆರೆಯುತ್ತಲಿದ್ದಾನೆ ಮಾನವ; ಹೊಸ ಹೊಸ ಕ್ಷೇತ್ರಗಳಲ್ಲಿ ಹೊಸ ಹೊಸ ವಿಯಗಳನ್ನು ಪಡೆಯುತ್ತ ಹೊಸ ವಿಕ್ರಮಗಳನ್ನು ಪ್ರಸ್ಥಾಪಿಸುತ್ತ ನಡೆದಿದ್ದಾನೆ.

ಆದರೆ ಪ್ರಸ್ಫುರಣೆಗಳಿಂದ ಪ್ರಜ್ಞೆಗೆ ಜಿಗಿದ ಮಾನವ ಪ್ರಸ್ಫುರಣೆಯ ನಿಶ್ಚಿತತೆಗೆ ಬದಲಾಗಿ ಪ್ರಜ್ಞೆಯ ಅರೆನಿಶ್ಚಿತತೆಗೆ ಒಳಗಾಗಬೇಕಾಯಿತು. ಪ್ರಜ್ಞೆ ಇಂದ್ರಿಯಾನುಭವಗಳ ಮೂಲಕವೇ ರೂಪುಗೊಳ್ಳಬೇಕಾದುದೂ. ಇಂದ್ರಿಯಜನ್ಯ ಅನುಭವ, ಅರಿವುಗಳು ಕೆಲವೊಮ್ಮೆ ಪ್ರಮಾದಗರ್ಭಿತವಾಗಿರುವುದೂ ಭ್ರಮಾಧೀನವಾಗಿರುವುದೂ ಈ ನಿಶ್ಚಿತತೆ–ಅನಿಶ್ಚಿತತೆಗಳ

ತ್ರಿಶಂಕುಸ್ವರ್ಗಕ್ಕೆ ಕಾರಣ. ಹೀಗಾಗಿ ಪ್ರತ್ಯಕ್ಷ ಅನುಮಾನ, ಪ್ರಮಾಣಾದಿಗಳನ್ನು ಉಪಯೋಗಿಸಿಕೊಂಡು ನಿಶ್ಚಿತಜ್ಞಾನದ ಅನ್ವೇಷಣೆ ಆರಂಭವಾಯಿತು.

ಏನೆಲ್ಲ ಮಾಡಿದರೂ ಇಂದ್ರಿಯಾನುಭವಾವಲಂಬಿಯಾದ ಅರಿವು ಸಂಶಯಾತೀತವೆನಿಸಲಿಲ್ಲ. ಒಬ್ಬೊಬ್ಬರ ಅನ್ವೇಷಣೆ ಒಂದೊಂದು ವಿಧವಾಗಿರುವುದಾಗಿ ಅರಿವಿನ ದೊರೆಗಳ ಆಲೋಚನೆಗಳಲ್ಲಿ ವಿಚಾರಗಳಲ್ಲಿ ಘರ್ಷಣೆ ಅನಿವಾರ್ಯವಾಯಿತು. ಅಲ್ಲಮ ಪ್ರಭುಗಳ ಈ ವಚನ ಇಲ್ಲಿ ಮನನೀಯ.

> ವಿಚಾರವೆಂಬುದು ಸಂದೇಹಕ್ಕೊಳಗು ನೋಡಾ!
> ವಿಚಾರಿಸುವನ್ನಕ್ಕರ ನೀನಾನೆಂಬುದನೆತ್ತ ಬಲ್ಲೆ?
> ಮರುಳೆ ವಾಙ್ಮನೋತೀತವಾದ ಘನವು ವಿಚಾರಕ್ಕೆ ನಿಲುಕುವುದೆ?
> ಗುಹೇಶ್ವರಲಿಂಗನು ತನ್ನ ತಿಳಿದು ನೋಡಿಹೆನೆಂಬವರ ವಿಚಾರವೆಂಬ
> ಬಲಯಲ್ಲಿ ಕೆಡವಿದನು!'

ವೈಜ್ಞಾನಿಕ ಜಗತ್ತಿಗೆ ಒಳಪಡುವ ಭೌತಿಕ ವಸ್ತು ವಿಷಯಗಳ ಬಗ್ಗೆ ನಮ್ಮ ಪರಿಜ್ಞಾನ ಎಷ್ಟೇ ನಿಖರವಾಗಿದೆಯೆಂದು ವಾದಿಸಿದರೂ ಸೃಷ್ಟಿಯ ಉಗಮ, ಉದ್ದೇಶ ಆತ್ಯಂತಿಕ ಸ್ವರೂಪ ಜೀವನ–ಮರಣಾದಿಗಳ ಬಗ್ಗೆ ವಿಜ್ಞಾನವೂ ಸಾಶಂಕ ನಿಲುವನ್ನೇ ತಳೆಯಬೇಕಾಗಿ ಬಂದಿದೆ ಇನ್ನು ಆಧ್ಯಾತ್ಮದ ಪ್ರಪಂಚಕ್ಕೆ ತೆರಳಿದರೆ ವಿಚಾರಶಕ್ತಿಯೊಂದನ್ನೇ ಆಧರಿಸಿ ಅಲೆಯುವವರ ಗತಿ ಏನಾಗುವ್ಯದೆಂಬುದನ್ನು ಅಲ್ಲಮ ಪ್ರಭುಗಳು ಉಪಯುಕ್ತ ವಚನದಲ್ಲಿ ಮನೋಜ್ಞವಾಗಿ ವಿವರಿಸಿದ್ದಾರೆ. ಅವರೇ ಅನ್ಯತ್ರ ಬಣ್ಣಿಸಿರುವಂತೆ.

> 'ಕಂಡೆನೆಂಬುದೆ ಕಂಗೆ ಮರವೆ;
> ಕಾಣೆನೆಂಬೆದು ಮನದ ಮರವೆ;
> ಕೂಡಿದೆನೆಂಬುದು ಅರಿವಿನ ಮರವೆ;
> ಅಗಲಿದೆನೆಂಬುದು ಮರಹಿನ ಮರವೆ!
> ಅರಿವಿನೊಳಗೊಂದು ಮರವೆಯದೆ;
> ಮರವೆಯೊಳಗೊಂದು ಅರಿವದೆ;'

ದಾರಿ ಯಾವುದು ಹಾಗಾದರೆ? ಮೇಧಾಶಕ್ತಿಯೊಂದಿಗೆ ಹೃದಯಶಕ್ತಿಯೆಂಬುದೊಂದಿದೆ ಅದರ ಕಾರ್ಯ ಕಾರಣ ಸಂಬಂಧವೇ ವಿಚಿತ್ರವಾದುದು. ಅದು ಬೌದ್ಧಿಕ ಕ್ರಿಯೆಯಂತೆ ನಿರೀಕ್ಷಣೆ, ಪರೀಕ್ಷಣೆ, ಸಮೀಕರಣ, ಸಂಯೋಜನಾದಿಗಳಲ್ಲಿ ನಡೆಯದೆ ನಿಜದೊಡನೆ ನೇರ ಸಂಪರ್ಕವನ್ನು ಪಡೆಯಬಲ್ಲುದು ಅತೀಂದ್ರಿಯ ಜ್ಞಾನ, ಅಪರೋಕ್ಷ ಜ್ಞಾನ, ಅಂತರ್ಜ್ಞಾನ

ಇತ್ಯಾದಿ ಹೆಸರುಗಳಿಂದ ಕರೆಯಲಾಗುವ ಇದು ನಿಜದೊಡನೆ ನೇರ ಸಂಪರ್ಕವನ್ನು ಸಾಧಿಸಲು ತನ್ನದೇ ಆದ ತರ್ಕಾತೀತ ಅನುಸಂಧಾನವನ್ನು ಅವಲಂಬಿಸಿರುತ್ತದೆ.* My heart has its reasons which reason does not know' ಎಂದಿದ್ದಾನೆ. ಪಾಸ್ಕಲ್ 'My heart is wiser than reason's thoughts' ಎಂದಿದ್ದಾರೆ ಶ್ರೀ ಅರವಿಂದರು. 'All great truths come out of the heart' ಎಂಬ ಪಾಶ್ಚಾತ್ಯ ಪ್ರವಾದಿಯೊಬ್ಬರ ಉಕ್ತಿಯೂ ಇದೆ. ಆದುದರಿಂದ ಹೃದಯದ ಹಾದಿಯಲ್ಲಿಯೇ, ಎಂದರೆ ಜ್ಞಾನ–ಕ್ರಿಯೆ ಅರ್ಪಣಾದಿಗಳನ್ನೆಲ್ಲ ತನ್ನಲ್ಲಿ ಗರ್ಭೀಕರಿಸಿಕೊಂಡ ಶರಣರ ಭಕ್ತಿಯ ಸುರಭಿತ ಪಥದಲ್ಲಿಯೇ ಸಾಗಿ ಪರಮ ಸತ್ಯದೊಡನೆ ನಿಕಟ ಸಂಬಂಧವನ್ನು ಪಡೆಯಬೇಕು. ಅದನ್ನು ಬೆರೆಸಿ ಬೇರಿಲ್ಲದಿರಬೇಕು. ಇದು ಅಂತರ್ದೃಷ್ಟಿ (intuition)ಯ ದಾರಿ.

'All great men are gifted with intution. They know without reasoning or analysis what they need to know.' (Dr. Alexis Carrel in his world famous book Man the Unknown') ಇದೇ ಲೇಖಕರ ಇನ್ನೊಂದು ಉಕ್ತಿಯೂ ಇಲ್ಲಿ ಪ್ರಸ್ತುತ It is not reason but feeling which leads man to the height of his destiny. The spirit rises by suffering and desire rather than by intellect. At a certain point of journey it leaves the intellect, whose weight is too heavy, behind. It reduces itself to the essence of the soul which is love.' (viz. Reflections on Life)

ಪರಮಾತ್ಮನೂ ಪ್ರೇಮರೂಪನೇ. 'ಸಾ ತಸ್ಮಿನ್ ಪರಮ ಪ್ರೇಮರೂಪಾ' ಎಂದಿದೆ ನಾರದರ ಭಕ್ತಿ ಸೂತ್ರ. ಆ ಪ್ರೇಮ ಸ್ವರೂಪನನ್ನು ಪ್ರೇಮದಿಂದಲೇ ತಲುಪುವುದು ಸಾಧ್ಯ. ಅದು ಭೂಮಿ. ಉಳಿದುದೆಲ್ಲ ಅದರಲ್ಲಿಯೇ, ಅದರ ಮೇಲೆಯೇ. **ಅದರ ಸಾರವನ್ನು ಹೀರಿಯೇ ಬೆಳೆಯಬೇಕು:**

'ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ

---

**ಇಂಗ್ಲೀಷಿನಲ್ಲಿ ಇದಕ್ಕೆ ಸಂವಾದಿಸಿದ 'ಮಿಸ್ಟಿಸಿಜಮ್'. ಇದು 'ನಿಕಟವಾಗಿರು' ಎಂಬ ಅರ್ಥ ಕೊಡುವ ಮೂಲ ಗ್ರೀಕ್ ಧಾತುವಿನಿಂದ ಬಂದುದಂತೆ. ಪರಮಾತ್ಮನೊಂದಿಗೆ ನಿಕಟವಾಗಿರುವುದನ್ನು ತಿಳಿಸುವ ಇದಕ್ಕೆ ರಹಸ್ಯಜ್ಞಾನ, ಪವಿತ್ರಜ್ಞಾನವೆಂದೂ ಕರೆಯುವುದುಂಟು. ಪರಮಾತ್ಮನು ಪೂಜೆಗೊಳ್ಳುವ ಹೊರಗಿನ ವಸ್ತುವಾಗಿ ಉಳಿಯದೆ ನಿರಂತರವಾದ ಆಂತರಿಕ ಅನುಭವವಾಗುವಂತೆಸಗುವುದೇ ಇದರ ಗುರಿ. ಇದು ಅತೀಂದ್ರಿಯ ಅನುಭವವನ್ನು ಪಡೆಯಬಲ್ಲ ಅಂತಃಸ್ಮರಣೆ ಇಲ್ಲವೆ ಅನುಭಾವದಿಂದ ಸಾಧ್ಯವಾಗುತ್ತದೆ.**

ಲಿಂಗವೆಂಬ ಎಲೆಯಾಯಿತ್ತು
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಹಣ್ಣಾಯಿತ್ತು
ನಿಷ್ಪತ್ತಿಯೆಂಬ ಹಣ್ಣು, ತೊಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ'

ಬಸವಣ್ಣನವರ ಈ ವಚನ ಭಕ್ತಿ ನಿಷ್ಪತ್ತಿಯಾಗುವ ರಹಸ್ಯಪೇಟಿಕೆಗೆ ಬೀದ ಕೈ ಇದ್ದಂತಿದೆ. ನಿಜದೊಡನೆ ನೇರ ಸಂಬಂಧ ಪಡೆಯಲು ಭಕ್ತನ ಹೃದಯ ಹಾತೊರೆಯುತ್ತದೆ. ಗುರೂಪದೇಶದ ಬೀಜಾರೋಪಣವಾಗಿ ಲಿಂಗವೆಂಬ ಎಲೆ, ವಿಚಾರವೆಂಬ ಹೂವು, ಆಚಾರವೆಂಬ ಕಾಯಿ, ನಿಷ್ಪತ್ತಿಯೆಂಬ ಹಣ್ಣು ಹಂತ ಹಂತವಾಗಿ ಮೈದೋರುತ್ತವೆ.

ಆದುದರಿಂದ ಈ ಹಣ್ಣು ಬರಿಯ ಅರಿವಿನಿಂದ ದೊರೆವ ವರವಲ್ಲ. ಅರಿವು ಅರಿವಾಗಿಯೇ ಉಳಿದರೆ ಅತೃಪ್ತಿಯೇ ಫಲ. ಅರಿವಿಗೆ ತೃಪ್ತಿ ದೊರೆಯುವುದು ಅದು ಅನುಭಾವವನ್ನು ಆಶ್ರಯಿಸಿದಾಗ: ಅಂತೆಯೇ 'ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ; ಲಿಂಗಾನುಭಾವದಿಂದ ನಿಮ್ಮ ಕಂಡೆನ್ನ ಮರೆದೆ, ಕೂಡಲಸಂಗಮದೇವಾ' ಎಂದು ಸೂತ್ರಪ್ರಾಯವಾಗಿ ವಿವರಿಸಿದರು ಬಸವಣ್ಣನವರು. ಅರಿವಿನ ಅರಕೆಯನ್ನು ಅದು ತೃಪ್ತಿಯನ್ನು ಪಡೆಯಬೇಕಾದರೆ ಅನುಭಾವವನ್ನೇ ಆಶ್ರಯಿಸಬೇಕೆಂಬುದನ್ನು, ಅರಿವು ಕಾಣದ ನಿಜವನ್ನು ಲಿಂಗಾನುಭಾವದಿಂದ ಕಾಣಬಹುದೆಂಬುದನ್ನು, ನಿಜವು ಕಂಡವನು ತನ್ನನ್ನೇ ಮರೆಯುವ ಕಾರಣ ಕೊನೆಗೆ ನಿಜವೊಂದೇ ಉಳಿಯುವುದೆಂಬುದನ್ನು ಎಷ್ಟು ಸಂಕ್ಷಿಪ್ತವಾಗಿ. ಸಮಗ್ರವಾಗಿ, ವೈಶಿಷ್ಟ್ಯಪೂರ್ಣವಾಗಿ ವಚನಿಸಿದ್ದಾರೆ ಮಹಾನುಭಾವಿಗಳಾದ ಬಸವಣ್ಣನವರು!

ಲಿಂಗಾನುಭಾವಕ್ಕೆ ಲಿಂಗ ಪ್ರೇಮ (ಭಕ್ತಿ), ಲಿಂಗ ವಿಕಳತೆ, ಲಿಂಗಾನುಸಂಧಾನಗಳೇ ಆಧಾರ. ಅಂತೆಯೇ ಶರಣಸತಿಗೆ ಲಿಂಗಪತಿ. ಶರಣ ಸತಿಯು ಅರಿವು, ತರ್ಕ, ಅನುಮಾನ, ಪ್ರಮಾಣಾದಿಗಳಿಂದ ಕಂಡುಕೊಳ್ಳಬೇಕಿಲ್ಲ, ಲಿಂಗಪತಿಯನ್ನು, ಅರ್ಧಾಂಗಿಯಾದ ಅವಳು ನೇರವಾಗಿ ಪತಿಯನ್ನು ಸೇರಿ, ತನ್ನ ಪರಿಶುದ್ಧ ಪ್ರೇಮದ ಶಕ್ತಿಯಿಂದ ಸೇರಿ ತಾನಿಲ್ಲವಾಗುವಳು. ಇದು ಅಕ್ಕಮಹಾದೇವಿಯು, 'ನಿಮ್ಮಲ್ಲಿ ನೀವಾಗಿ ನಿಮ್ಮ ಮೆರೆದೆನಯಯ್ಯ' ಎಂದು ಹೇಳಿದ ಸ್ಥಿತಿ – ಆನಂದ ಶಕ್ತಿಯ ಶರಣಸ್ಥಲದ ಸಂವಿತ್ ಪ್ರಕಾರದ ಸದಾನಂದಮಯಸ್ಥಿತಿ; ಅನುಭಾವ ನೀಡುವ ನಿಜಾನಂದದ ಸ್ಥಿತಿ.

ಅಂತೆಯೇ ಬಸವಣ್ಣನವರು ಕೇಳಿದರು;

**'ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು;**

ಅನುಭಾವವಿಲ್ಲದ ಲಿಂಗ ಸಮರಸಸುಖವನೀಚುದು;
ಅನುಭಾವವಿಲ್ಲದ ಪ್ರಸಾದ ಪರಿಣಾಮ ಕೊಡದು;
ಕೂಡಲಸಂಗಮದೇವಾ,
ನಿಮ್ಮನುಭಾವನ ಮಾತಿನ ಮಥನವೆನಬಹುದು?'

ಪ್ರಭುದೇವರು ಸರಿಯಾಗಿಯೇ ಸಾರಿದರು;

**'ಅನುಭಾವದಿಂದ ಹುಟ್ಟಿತ್ತು ಲಿಂಗ;**
ಅನುಭಾವದಿಂದ ಹುಟ್ಟಿತ್ತು ಜಂಗಮ;
ಅನುಭಾವದಿಂದ ಹುಟ್ಟಿತ್ತು ಪ್ರಸಾದ;
ಅನುಭಾವದನುವಿನಲ್ಲಿ ಗುಹೇಶ್ವರಲಿಂಗವನುಪಮ ಸುಖಿ'

ಅಂತೆಯೇ ಅಕ್ಕ ಅಂಗಲಾಚಿ ಕೇಳಿಕೊಂಡಳು:

'ಮರಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುರಾದಿಗಳ ಸುಡಲಾಯಿತು;
ಆತ್ಮವಾತ್ಮ ಮಥನಿಸಿ ಅನುಭಾವ ಹುಟ್ಟಿ
ತನುಗುಣಾದಿಗಳ ಸುಡಲಾಯಿತು;
ಇದು ಕಾರಣ, ನಿಮ್ಮ ಮಹಾನುಭಾವಿಗಳ
ಅನುಭಾವವ ತೋರಿ
ಎನ್ನನುಳುಹಿಕೊಳ್ಳಾ, ಚೆನ್ನಮಲ್ಲಿಕಾರ್ಜುನಾ!'

ಅನುಭಾವದ ಹಿರಿಮೆ ಗರಿಮೆಗಳನ್ನು ಕುರಿತು ಅನೇಕ ಶರಣರು ಹಾಡಿದ್ದಾರೆ. ಸ್ವತಂತ್ರ ಸಿದ್ಧಲಿಂಗೇಶ್ವರರು, ಅನುಭಾವವೆಂಬುದು ಆತ್ಮವಿದ್ಯೆ; ಅನುಭಾವವೆಂಬುದು ನಿಜನಿವಾಸದಲ್ಲಿರಿಸುವುದು; ಇಂತಪ್ಪ ಅನುಭಾವದ ಅರಿವನರಿಯದೆ ಶಾಸ್ತ್ರಜಾಲದ ಪಸಾರನಿಕ್ಕಿ ಕೊಳದ ಕೊಡದ ವ್ಯವಹಾರವ ಮಾಡುವ ಅಣ್ಣಗಳಿರಾ, ನೀವೆತ್ತ ನಿಜಗುರು ಸ್ವತಂತ್ರಧೀರಸಿದ್ಧೇಶ್ವರನ ಅನುಭಾವವೆತ್ತ ಹೋಗಿರಣ್ಣ' ಎಂದು ಝುಂಕಿಸಿ, ಬಸವಣ್ಣನವರು ಹೇಳಿದಂತೆ ಅನುಭಾವ 'ಮಾತಿನ ಮಥನ'ವಲ್ಲವೆಂಬುದನ್ನು ಪುಷ್ಟೀಕರಿಸಿದರು.

'ಅನುಭಾವ ನೆಲೆಗೊಂಡಲ್ಲದೆ ಅಂಗ ಲಿಂಗದ
ಹೊಲಬನರಿಯಬಾರದು;
ಅನುಭಾವ ನೆಲೆಗೊಂಡಲ್ಲದೆ ಭಕ್ತಿ ವಿರಕ್ತಿನೆಲೆಗೊಳ್ಳದು:
ಅನುಭಾವ ನೆಲೆಗೊಂಡಲ್ಲದೆ ಜ್ಞಾನ ಸ್ವಜ್ಞಾನದ ನೆಲೆಯ
ಕಾಣಬಾರದು;
ಅನುಭಾವ ನೆಲೆಗೊಂಡಲ್ಲದೆ ತಾನದಾರೆಂಬುದು ತಿಳಿಯದು;
ಅನುಭಾವ ನೆಲೆಗೊಂಡಲ್ಲದೆ ತಾನು ತಾನಾಗಬಾರದು;

ಇದು ಕಾರಣ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ,
ನಿಮ್ಮಾನುಭಾವದ ಅನುವಿನಲ್ಲಿಪ್ಪವರ ನೀವೆಂದೇ ಕಾಂಬೆನು'

ಎಂದು ಘೋಷಿಸಿದ್ದಾರೆ. ಅನುಭಾವದ ಅನುವಿನಲ್ಲಿ ಜೀವಭಾವವಳಿದು ಶಿವಭಾವವೇ ಉಳಿವುದಾಗಿ ಅನುಭಾವಿ ಶಿವನೇ ಎಂಬುದು ಸಮಂಜಸವಾದುದೇ ಸರಿ.

ಈ ಸ್ಥಿತಿ ಸುಲಭಸಾಧ್ಯವಾದುದಲ್ಲ. 'ವಾರವೆಂದರಿಯೆ, ದಿನವೆಂದರಿಯೆ, ಏನೆಂದರಿಯೆನಯ್ಯ! ನಿಮ್ಮವ ಪೂಜಿಸಿ ಎನ್ನುವ ಮರೆದೆ, ಕೂಡಲ ಸಂಗಮದೇವಾ' ಎನ್ನುತ್ತ 'ಸಮುದ್ರದೊಳಗಣ ಸಿಂಪಿನಂತೆ ಬಾಯಬಿಡುತ್ತ' ಕಾಯಬೇಕು. ಆಗ

'ನಿಮ್ಮ ನೋಟವನಂತ ಸುಖ ಕೂಟ ಪರಮಸುಖ,

ಅವು ಟು ಕೋಟಿ ರೋಮಂಗಳೂ ಕಂಗಳಾಗಿ ನೋಡುತ್ತಿದ್ದೆನು' ಎಂಬಂಥ ಅಮೃತಾನುಭವ ಸಿದ್ಧಿಸುತ್ತದೆ: ಆಗ 'ನಿತ್ಯ ನಿರಂಜನ ಪ್ರಭೆಯ ಬೆಳಗು ಶಿವಯೋಗದನುಭಾವ ಏಕಾರ್ಥವಾಗಿ ಗುಹೇಶ್ವರಾ, ನಿಮ್ಮ ಶರಣನು ಅನುಪಮಸುಖಿಯಾಗಿರ್ದನು' ಎಂದು ಉದ್ಗರಿಸುವುದು ಸಾಧ್ಯವಾಗುತ್ತದೆ: 'ಅಂತರಂಗದ ರತ್ನ'ವೆನ್ನಿಸಿಕೊಂಡ ಅನುಭಾವದ ಪ್ರಕಾಶಮಯ ಪರಮಾನಂದವನ್ನು ಅನುಭವಿಸಿದವರು 'ಮೂಗ ಮೂಗರ ಪ್ರಸಂಗ'ವನ್ನಷ್ಟೇ ಮಾಡಬಲ್ಲರು: 'ಶಿಶು ಕಂಡ ಕನಸಿನಂತೆ' ಹಿಗ್ಗಿಯೂ ಹಾಡಲಾರದವರಾದಾರು.

ಭಾರತೀಯರ ಅನುಭಾವ ಇಸ್ಲಾಮಿನ ಸೂಫೀತತ್ತ್ವ, ಕ್ರೈಸ್ತರ ಮಿಸ್ಟಿಸಿಜಮ್ ಸಮಾನಾರ್ಥಕಗಳೆಂದು ಸಾಮಾನ್ಯವಾಗಿ ಸ್ವೀಕರಿಸಲಾಗಿದೆ. ಆದರೆ ಸೂಕ್ಷ್ಮಾಂಶಗಳಲ್ಲಿ ಭೇದಗಳಿಲ್ಲದಿಲ್ಲ. ಡಾ. ಎಸ್. ರಾಧಾಕೃಷ್ಣನ್ ಅವರು,

'Intuition is the extension of perception to regions beyond sense' ಎಂದು ಹೇಳಿದ್ದಾರೆ. 'Mystical experience is the experience of the whole of life, irradiated by the light divine, the light of unitive love' ಎಂದು ವ್ಯಾಖ್ಯೆ ನೀಡಲಾಗಿದೆ ಅನುಭಾವಕ್ಕೆ. ಈ ವಿಶಾಲಾರ್ಥದಲ್ಲಿ ಮೇಲಿನ ಮೂರೂ ಸಮಾನಾರ್ಥಕಗಳೆನ್ನಬಹುದಾದರೂ ಶರಣರ ಅನುಭಾವಸರಣಿಗೊಂದು ಸ್ವಂತಿಕೆಯಿದೆ. ಅರಿವನ್ನು ಅಮೂಲಾಗ್ರವಾಗಿ ಅಲ್ಲಗಳೆಯದೆ, ಅರಿವಿನ ನೆರವಿನಿಂದಲೇ, ಅರಿವಿನ ತೃಪ್ತಿಗಾಗಿಯೇ ಅನುಭಾವಗಳಿಸುವ ಸ್ವಂತಿಕೆಯದು. 'ನಿಮ್ಮ ಅಂತರಂಗದೊಳಗೆ ನಿಮ್ಮ ನಿಂಬಿಟ್ಟುಕೊಂಡೆ: ನಿಮ್ಮ ಬಹಿರಂಗದಲ್ಲಿ ನಿಮ್ಮನ್ನೇ ಪೂಜಿಸುವೆ; ನಿಮ್ಮ ಅರಿವಿನಿಂದ ನಿಮ್ಮನ್ನೇ ಅರಿವೆ' ಎಂಬ ಬಸವಣ್ಣನವರ ಮಾತಿನ ಮುತ್ತಿನ ಹಾರವಿಲ್ಲಿ ಪ್ರಸ್ತುತ. ಅವರ ಕೆಳಗಣ ವಚನ ಇನ್ನೂ ಅರ್ಥಪೂರ್ಣ **ದಿಶಾದರ್ಶಕ;**

'ಅರಿವನ್ನಕ್ಕರ ಅರ್ಚಿಸಿದೆ,
ಅರಿವನ್ನಕ್ಕರ ಪೂಜಿಸಿದೆ,
ಅರಿವನ್ನಕ್ಕರ ಹಾಡಿದೆ, ಹೊಗಳಿದೆ;
ಅರಿವುಗೆಟ್ಟು, ಮರಹುನಷ್ಟವಾಗಿ,
ಭಾವನಿರ್ಭಾವವಾಗಿ
ನಿಜ ಬಳಸಿಕೊಂಡಿತ್ತಾಗಿ
ಕೂಡಲಸಂಗಯ್ಯನಲ್ಲಿ ಸರ್ವನಿವಾಸಿಯಾದೆ;'

ಅರಿವಿನ ಬಳಿವಿಡಿದೇ ಅನುಭಾವಕ್ಕೇರುವ, ಭಾವದ ಬಳಿವಿಡಿದೇ ನಿರ್ಭಾವಕ್ಕೇರುವ, ನಿಜವೇ ತನ್ನನ್ನು ಬಳಸಿಕೊಳ್ಳುವಂತೆ ಮಾಡುವ, ನಿಜದಲ್ಲಿಂಯೇ ಸರ್ವನಿವಾಸಿಯಾಗುವಂತೆಸಗುವ ಶರಣರ ಅನುಭಾವಸರಣಿಯ ಪ್ರಮುಖ ವೈಶಿಷ್ಟ್ಯವೆಂದರೆ ಅದು 'ಅರಿವೆ ಗುರು' ಎಂದು ಒಪ್ಪಿಯೂ, ಅರಿವಿನ ತೃಪ್ತಿಗಾಗಿಯೇ ಅನುಭಾವವೆಂಬುದನ್ನು ಒಪ್ಪುವ ಕಾರಣ ಅರಿವನ್ನು ಮರೆಯುವ, ತೊರೆಯುವ, ಜರೆಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಬೇರೆ ಅನುಭಾವ ಪಂಥಗಳ ಬಗ್ಗೆ ಇರುವ ಬೌದ್ಧಿಕ ದುರ್ಬಲೀಕರಣದ 'Intellectual feebleness or intellectual enfeeblement'ದ ಆರೋಪ ಶರಣರ ಅನುಭಾವ ಸರಣಿಯ ಬಗ್ಗೆ ಬರುವಂತಿಲ್ಲ. ಯಾಕೆಂದರೆ ಅವರಿಗೆ ಅರಿವೆ ಗುರು, ಅನುಭಾವವೇ ಗುರಿ.

ಹಾವಿನಹಾಳ ಕಲ್ಲಯ್ಯನ ಈ ವಚನ ಇಲ್ಲಿ ಮನನೀಯ

'ತಾನಿಲ್ಲದ ಮುನ್ನವೆ ಗುರುವೆಲ್ಲಿಯದೊ? ಲಿಂಗವೆಲ್ಲಿಯದೊ?
ಜಂಗಮವೆಲ್ಲಿಯದೊ? ಪರವೆಲ್ಲಿಯದೊ? ಸ್ವಯವೆಲ್ಲಿಯದೊ?
ತನಗೆ ತೋರಿದ ಗುರು, ತನಗೆ ತೋರಿದ ಲಿಂಗ,
ತನಗೆ ತೋರಿದ ಜಂಗಮ, ತನಗೆ ತೋರಿದ ಪ್ರಸಾದ,
ತನಗೆ ತೋರಿದ ಪರ, ತನಗೆ ತೋರಿದ ಸ್ವಯ,
ಗುರುವೆಂದರಿದವನು ತಾನೇ, ಲಿಂಗವೆಂದರಿದವನು ತಾನೇ
ಪರವೆಚಿದರಿದವನು ತಾನೇ, ಸ್ವಯಂವೆಂದರಿಯದವನು ತಾನೇ
ಇಂತಿವೆಲ್ಲದ ಹೆತ್ತರಿವು ತಾನೇ ಸ್ವಯಂಜ್ಯೋತಿ, ಮಹಾಲಿಂಗ
ಕಲ್ಲೇಶ್ವರಾ'*

ಎಲ್ಲವನ್ನೂ ಹೆರುವ ಅರಿವು ಎಲ್ಲ ಸಾಧನೆಗೂ ಮೂಲಾಧಾರ; ಅನುಭಾವ ಸಾಧನೆಗೂ ಅದೇ ಆಧಾರ. ಆದರೆ ಅದೇ ಕೊನೆಯ ಗುರಿಯೆಂದುಕೊಂಡರೆ ಪ್ರಾರಂಭದಲ್ಲಿಯೇ ವಿವೇಚಿಸಿದಂತೆ ಅದರ ಬಲೆಯಲ್ಲಿಯೇ ಸಿಲುಕಿಕೊಳ್ಳಬೇಕಾಗುವುದು. 'ಅರಿವಿನ ಮರವೆ' ಮರವೆಗಿಂತ ಅಪಾಯಕಾರಿ. ನಗೆಯ ಮಾರಿತಂದೆಯ ಈ ಬೆಡಗಿನ **ವಚನ ಇದರ ಚಿತ್ತಾಕರ್ಷಕ ಚಿತ್ರಣ:**

'ಬಂದ ಬಂದವರೆಲ್ಲರು ನೀರ ಕಾಸುವರಲ್ಲದೆ
ಮಿಂದುಂಡು ಹೋಹವರನಾರನು ಕಾಣೆ!
ಕಾಗಲೆತ್ತಿತ್ತು, ಮೇಲುಮಡಕೆಯಿಲ್ಲ,
ಸೌದೆ ಬೆಂದಿತ್ತು, ಬೆಂಕಿಯ ಕಾಣೆ!
ಮೀವಾತ ಬಂದ, ಉದಕವನೆರೆವರನಾರನು ಕಾಣೆ!
ಕಂಡವರ ಹೇಳಿದಾತ ಬಂದು ಕಾಣಿಸಿಕೊಂಡವನಿಲ್ಲ
ಆತುರವೈರಿ ಮಾರೇಶ್ವರಾ!'

ಅರಿವೊಂದನೇ ಅಂತಿಮ ಗಂತವ್ಯವೆಂದು ನಂಬಿದರೆ ನೀರನ್ನು ಕಾಸಿ ಮೀಯದೇ ಹೋದಂತೆ! ಸೌದೆಯೇನೋ ಸುಟ್ಟು ಹೋಯಿತು, ಬೆಂಕಿಯೇ ಇಲ್ಲ! ಅವನನ್ನು ಕಂಡವರನ್ನು ಕಂಡೆವೆಂದು ಹೇಳುವವರು ಬಂದರು. ತಾನೇ ಕಂಡೆವೆಂದು ಹೇಳುವವರು ಬರಲಿಲ್ಲ! ಯಾಕೆಂದರೆ ಅವರ ಸಾಧನೆ ಅರಿವಿನ ಪರಿಧಿಯನ್ನು ದಾಟಿ ಮುಂದೆ ಹೋಗಲಿಲ್ಲ, ಅನುಭಾವದತ್ತ ಸಾಗಲಿಲ್ಲ! ಅರಿವವರಿಗೆ ಅರಿವಿನ ತೃಪ್ತಿ ದೊರೆಯಲಿಲ್ಲ.

ಅರಿವು ಅನುಭಾವವಾಗುವುದು ಯಾವ ಹಂತದಲ್ಲಿ? ಮತ್ತೆ ಪ್ರಭುದೇವರಿಗೇ ಮೊರೆ ಹೋಗೋಣ:

"ಎಲೆ ಮನವೆ, ನೀ ನಿನ್ನ ನಿಜವ ತಿಳಿದಡೆ
ಆ ನಿನ್ನ ನಿಜವ ಹೇಳುವೆ–ಕೇಳು!
ಅದು ಕೇವಲ ಜ್ಯೋತಿ, ಅದು ವರ್ಣನಾತೀತ!
ನೀನದನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು

---

* **ಹೋಲಿಸಿ : 'ಇಂದುವಿನ ಬೆಳಗಿನಿಂದ ಇಂದುವನು, ಭಾನುವಿನ ಬೆಳಗಿನಿಂದ ಭಾನುವನು,**
**ದೀಪದ ಬೆಳಗಿನಿಂದ ದೀಪದ ಕಾಂಬಂತೆ,**
**ತನ್ನ ಬೆಳಗಿನಿಂದ ತನ್ನನೆ ಕಂಡು ನಿಂದ ನಿಲುವು ನೀನೆ**
**ಸಿಮ್ಮಲಿಗೆಯ ಚೆನ್ನರಾಮ' ಚಂದಿಮರಸ**

ಅದೀಗ ನಿನ್ನ ಪರಿಪೂರ್ಣತ್ವದ ನೆಲೆ!
ಆ ನಿನ್ನ ಪರಿಪೂರ್ಣತ್ವದ ನೆಲೆ!
ಆ ನಿನ್ನ ನಿಜವ ನಿಶ್ಚೈಸಿ ನಿರ್ಗಮನಿಯಾದಲ್ಲಿ
ಅದೇ ನಿನ್ನ ಸಮ್ಯಕ್ ಜ್ಞಾನದ ತೋರಿಕೆ.
ಆ ತೋರಿಕೆಯ ಅಖಂಡ ಬೆಳಗಿನ ಹೊಳಹಿನೊಳಗೆ
ನೀ ನಮ್ಮ ಗುಹೇಶ್ವರಲಿಂಗ ಶ್ರೀ ಚರಣವನರಸಿಕೊಂಡು
ನಿಶ್ಚಿಂತನಾಗೆಲೆ ಮನವೆ!

ಮೋಳಿಗೆಯ ಮಾರಯ್ಯಗಳಂತೆ,

"ಮನಸ್ಸು ಏತರಿಂದ ಅರಿವುದು ಲಿಂಗವ?
ಬುದ್ಧಿ ಏತರಿಂದ ಅರಿವುದು ಮನಸ್ಸು?
ಚಿತ್ತವೇತರಿಂದರಿವುದು ಬುದ್ಧಿಯ?
ಅಹಂಕಾರವೇತರಿಂದರಿವುದು ಚಿತ್ತವ?
ಈ ಚತುಷ್ಟಯವ ಏತರಿಂದರಿವೆ. ಒಂದಕ್ಕೊಂದು ಹಂಗಿಲ್ಲದೆ?'

ಎಂಬ ಪ್ರಶ್ನೆಗಳಿಂದ ಪ್ರಾರಂಭಿಸಿ. ನಿಜದ ನಿಜವನ್ನರಸತೊಡಗುವುದು ಅರಿವಿನ ದಾರಿ. ಈ ಅರಸುವಿಕೆಯ ಯಾವುದೋ ಒಂದು ಹಂತದಲ್ಲಿ ಅದಕ್ಕೆ ನಿಶ್ಚಯದ ನೆಲೆ ದೊರೆಯುತ್ತದೆ. ಇದೇ ಅನುಭಾವದ ಮೊದಲ ಮೆಟ್ಟಿಲು. ಕೊನೆಯ ಮೆಟ್ಟಿಲು ಮುಟ್ಟಿದಾಗ ಶಿವಯೋಗಿ ಸಿದ್ಧಲಿಂಗೇಶ್ವರರಂತೆ.

'ಅರುಹಿನ ಜ್ಯೋತಿ ಎದ್ದಿತ್ತು. ಶರೀರವನ್ನೇ ತುಂಬಿತ್ತು.
ಮರಿವೆಯ ತಮ ಹರಿಯಿತ್ತು ಕರಣಿಂಗಳ ತುಂಡಿಸಿತ್ತು
ವಿಷಯಗಳ ಶಿರವನು ಹರಿಯಿತ್ತು,
ದಶವಿಧೇಂದ್ರಿಯಗಳ ದಾಳಿಯ ನಿಲ್ಲಿಸಿತ್ತು.
ಪಂಚಮಹಾಭೂತಂಗಳ ಪ್ರಪಂಚವ ಪರಿಹರಿಸಿತ್ತು;
ಬ್ರಹ್ಮವೇ ತಾನೆಂಬ ಕುರುಹ ಮೈಗಾಣಿಸಿತ್ತು,
ತಾನೆಂಬ ಕುರುಹನಳಿದ ಅವಿರಳ ಸಹಜನು ಭಕ್ತನು ನೋಡಾ
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ!'

ಎಂದು ಉದ್ಗರಿಸಲೇಬೇಕು.

ಶರಣರ ಅನುಭಾವ ಸರಣಿಯ ಇನ್ನೊಂದು ವಿಶೇಷತೆಯನ್ನು ವಿವರಿಸಿ ಮಿರಮಿಸಬಹುದು. ಅನುಭಾವಿ ಡಾ. ಆರ್.ಡಿ. ರಾನಡೆ ಅವರು ದೈವೀ ಅನುಭಾವದ ಪ್ರವಾಹವು ಸತತವಾಗಿ ಹರಿಯುವುದಿಲ್ಲ, ದೈವೀ ಅನುಭಾವದ ಸಂದರ್ಭಗಳಲ್ಲಿ ಐಹಿಕ

ಜೀವನವು ಸ್ಥಗಿತಗೊಳ್ಳುತ್ತದೆ ಹಾಗೂ ದೈವೀ ಅನುಭಾವವು ಸಾಮೂಹಿಕವಾಗಿ ರೂಢವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಶರಣರ ಶಿವಾನುಭಾವ ಸರಣಿಯಲ್ಲಿ ಇವು ಮೂರೂ ಸಾಧ್ಯವೆಂದು ತೋರುತ್ತಿದೆ.

'ಸರ್ವಾಂಗಲಿಂಗವಾಗಿ ಆ ಪ್ರಜ್ಞೆಯಲ್ಲಿ ಉಳಿಯುವುದು ಅನುಭಾವ'ವೆಂದು ವಿದ್ವಾಂಸ ಲಿಂ.ಸ.ಸ. ಮಾಳವಾಡರು ಹೇಳಿದ್ದಾರೆ. ಸರ್ವಾಂಗಲಿಂಗಮಯತೆ ಶರಣ ಮಾರ್ಗದ ಮುಖ್ಯ ಲಕ್ಷಣ. ಇಷ್ಟ ಪ್ರಾಣ –ಭಾವಲಿಂಗಗಳಲ್ಲದೆ ಒಂದೊಂದು ಇಂದ್ರಿಯಕ್ಕೂ ಒಂದೊಂದು ಲಿಂಗ ಕಲ್ಪಿಸಿದ ಶರಣರು ಸರ್ವಾಂಗಲಿಂಗಿಯಾಗುವುದನ್ನು ಸುಲಭಗೊಳಿಸಿದ್ದಾರೆ. ಆದಯ್ಯನ ಈ ವಚನ ಇದಕ್ಕೆ ನಿದರ್ಶನ:

> 'ಅಂಗದಲ್ಲಿ ಲಿಂಗವಿರಲು ಎನ್ನ ತನು ನಿರ್ಮಲವಾಯಿತ್ತು
> ಮನದಲ್ಲಿ ಅರಿವಿರಲು ಎನ್ನ ಮನ ನಿರ್ಮಲವಾಯಿತ್ತು
> ಪ್ರಾಣದಲ್ಲಿ ಪ್ರಸಾದವಿರಲು ಎನ್ನ ಪ್ರಾಣ ನಿರ್ಮಲವಾಯಿತ್ತು
> ಪಂಚೇಂದ್ರಿಯಂಗಳಲ್ಲಿ ಪಂಚಲಿಂಗವೆಡೆಗೊಂಡಿರಲು
> ಪಂಚೇಂದ್ರಿಯಂಗಳು ನಿರ್ಮಲವಾದವು.
> ಸೌರಾಷ್ಟ್ರ ಸೋಮೇಶ್ವರನ ಶರಣರ ಸಂಗದಿಂದ
> ಶಿವಪ್ರಸಾದ ದೊರಕೊಂಡಿತ್ತಾಗಿ ಸರ್ವಾಂಗಲಿಂಗವಾಯಿತ್ತಾ!'

ಅಲ್ಲಮ ಪ್ರಭುಗಳ 'ಹರಿವನೀರಿಗೆ ಮೈಯೆಲ್ಲ ಕಾಲು. ಉರಿವಗ್ನಿಗೆ ಮೈಯೆಲ್ಲ ನಾಲಿಗೆ' ಎಂಬ ವಚನ ಪ್ರಸಿದ್ಧವಾಗಿಯೇ ಇದೆ.

ಇನ್ನು ಅನುಭಾವದ ಸಂದರ್ಭಗಳಲ್ಲಿ ಕಾಯಕ ಜೀವಿಗಳಾದ ಶರಣರಿಗೆ ಐಹಿಕ ಜೀವನವು ಸ್ಥಗಿತಗೊಳ್ಳಬೇಕಿಲ್ಲ. ಕಾಯಕವೂ ಅನುಭಾವಕ್ಕೆ ಏಣಿಯಾಗಿರುವಾಗ ಅದನ್ನುಳಿದು ಅನುಭಾವ ಸಾಧಿಸುವ ಪ್ರಮೇಯವೇ ಇಲ್ಲ. ಶರಣರ, ಶಿವಾನುಭವ ಮಾರ್ಗದಲ್ಲಿ ಅನುಭಾವವು ಸಾಮೂಹಿಕವಾಗಿ ರೂಢವಾಗುವುದಿಲ್ಲ' ಎಂಬ ತೀರ್ಮಾನವೂ ನಿಲ್ಲುವುದಿಲ್ಲ. 'ಶಿವಾನುಭವ ಮಂಟಪ'ದ ಅಪೂರ್ವ, ಅದ್ಭುತ ಸಾಧನೆಯೇ ಇದು. ಸಾಮಾನ್ಯರೂ, ಅಸಾಮಾನ್ಯರೂ ಒಂದೆಡೆ ಸೇರಿ ಸಾಮೂಹಿಕವಾಗಿಯೇ ಅನುಭಾವವನ್ನು ರೂಡಿಸಿಕೊಂಡುದಲ್ಲದೆ ಅದಕ್ಕೆ ಅನನ್ಯವಾದ ಅಭಿವ್ಯಕ್ತಿಯನ್ನು ನೀಡಿ ಧನ್ಯರಾಗಿದ್ದಾರೆ.

ಇದರ ಬೋಧನೆಗಿಂತ ಇದರ ಸಾಧನೆ ಈಗ ನಡೆಯಬೇಕು. ಸಂಸಾರಿಯಾಗಿಯೇ, ಕಾಯಕ ಮಾಡುತ್ತಲೇ, ಇಲ್ಲದುದಕ್ಕೆ ತಲ್ಲಣಿಸದೆ, ಇದ್ದುದರಲ್ಲಿಯೇ ದಾಸೋಹ ಮಾಡುತ್ತ, ಶಿವಪ್ರಸಾದ ಸ್ವೀಕರಿಸುತ್ತ, ಸರ್ವಾಂಗಲಿಂಗಿಯಾಗಿ ಷಣ್ಮುಖಶಿವಯೋಗಿಗಳಂತೆ 'ಎನ್ನ

ಭಾವವು ಎಲ್ಲಿ ನಿಂದಿಹುದು ಅಲ್ಲಿ ನಿಮ್ಮ ನಿಲವೆ ತುಂಬಿರ್ಪುದಯ್ಯ' ಎಂದು ಆನಂದೋದ್ಗಾರ ತೆಗೆವಂತೆ ನಮ್ಮ ಬಾಳು ಸಾಗಿದರೆ ಅನುಭಾವ ಅಂಗೈನಲ್ಲಿಯಾದೀಯ.

* * * * *

# ೨

# ಶರಣರ ನೀತಿ ಸಂಹಿತೆ

ಸಮಷ್ಟಿ ಜೀವನವು ಸಂಘರ್ಷಮುಕ್ತವಾಗಿರಲು, ವ್ಯಷ್ಟಿ ಜೀವನ ಸಾರ್ಥಕವಾಗಲು, ಮಾನವೀಯ ಮೌಲ್ಯಗಳ ಸಂರಕ್ಷಣೆಯಾಗಲು ಕೆಲವು ಸೂತ್ರಗಳನ್ನು ಅನುಸರಿಸಲೇಬೇಕಾಗುತ್ತದೆ. ಈ ಸೂತ್ರಗಳ ಸೇರಿಕೆಯೇ ನೀತಿ ಸಂಹಿತೆ, ಜಗತ್ತಿನ ಎಲ್ಲ ಜನಾಂಗಗಳೂ, ಎಲ್ಲ ಸಭ್ಯತೆ, ಸಂಸ್ಕೃತಿಗಳೂ ತಮ್ಮ ತಮ್ಮ ನೀತಿಸಂಹಿತೆಗಳನ್ನು ರೂಪಿಸಿಕೊಂಡಿರುವುದು ಈ ಕಾರಣಕ್ಕಾಗಿಯೇ. ಕೆಲವೆಡೆ ಇದು ಧರ್ಮದ ಪ್ರಮುಖಾಂಗವಾಯಿತು; ಕೆಲವೆಡೆ ತತ್ವಜ್ಞಾನದ ಅಂಗವಾಯಿತು; ಕೆಲವೆಡೆ ಪ್ರಮಾಣಿಕ ವಿಜ್ಞಾನ (Normative Science)ದ ರೂಪಧಾರಣೆ ಮಾಡಿತು; ಕೆಲವೆಡೆ ಸೆಕ್ಯೂಲರ್ ಸ್ವರೂಪ ಪಡೆಯಿತು; ಕೆಲವೆಡೆ ಮನೋವಿಶ್ಲೇಷಣಾತ್ಮಕ ಭೂಮಿಕೆಯನ್ನು ಪಡೆಯಿತು. ಮಾನವನು ಹೊಸ ಜ್ಞಾನ–ವಿಜ್ಞಾನಗಳನ್ನು ಕಂಡು ಹಿಡಿಯುತ್ತ ಹೋದಂತೆ ಅದೂ ನೂತನಾ ವಿಧಾನಗಳನ್ನು ಪಡೆಯುತ್ತ ನಡೆಯಿತು.

ಈ ಎಲ್ಲವೂ ಎರಡು ಮುಖ್ಯ ತತ್ತ್ವಗಳನ್ನು ಆಧರಿಸಿವೆ; ಮೊದಲನೆಯದು ಮಾನವನ ಕೆಲವು ನಡೆವಳಿಕೆಗಳು ಮೂಲತಃ ಒಳ್ಳೆಯವೆಂದು ನಂಬುತ್ತದೆ; ಎರಡನೆಯದು ಆ ನಡೆವಳಿಕೆಗಳು ಯಾವುದೊಂದು ನೈತಿಕ ಮಾನದಂಡಕ್ಕೆ ಅನುಗುಣವಾದಾಗ ಮಾತ್ರ ಒಳ್ಳೆಯವೆಂದು ನಂಬುತ್ತದೆ. ಮೊದಲನೆಯದು ಕೆಲವು ಆತ್ಯಂತಿಕ ಸ್ವತಃಸಿದ್ಧ ಮೌಲ್ಯಗಳಿವೆಯೆಂದು ವಾದಿಸುತ್ತದೆ; ಎರಡನೆಯದು ಮೌಲ್ಯಗಳು ಕಾಲಧರ್ಮಕ್ಕ–ನುಗುಣವಾಗಿ ಪರಿವರ್ತಿತವಾಗುವವೆಂದು ಪ್ರತಿಪಾದಿಸುತ್ತದೆ.

ಮಾನವನ ಜೀವನದ ಗುರಿ ಎಂತೊ, ಅವನ ಮೌಲ್ಯಗಳೂ ಅಂತೆ ರೂಪಿತವಾಗುತ್ತವೆ. ನೀತಿಶಾಸ್ತ್ರದ ಇತಿಹಾಸದಲ್ಲಿ ಮೂರು ಗುರಿಗಳನ್ನು ಗುರುತಿಸಲಾಗಿದೆ. (೧) ಸುಖ ಇಲ್ಲವೆ ಸಂತೋಷ (೨) ಕರ್ತವ್ಯ, ಸದ್ಗುಣ ಇಲ್ಲವೆ ಋಣ ಪರಿಹಾರ, (೩) ಪರಿಪೂರ್ಣತೆಯ ಸಾಧನೆ.

ಈ ಮೂರು ಗುರಿಗಳನ್ನು ಆಧರಿಸಿ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ನೀತಿಸಂಹಿತೆಗಳು ಹುಟ್ಟಿಕೊಂಡಿವೆ. ಈಜಿಪ್ಟ್ ಮತ್ತು ಸುಮೇರುಗಳಲ್ಲಿ, ಪ್ರಾಚೀನ ಚೀಣಾದಲ್ಲಿ ಕ್ರಮಬದ್ಧ ನೀತಿಸಂಹಿತೆಗಳು ರೂಪಿತವಾಗಿರಲಿಲ್ಲವಾದರೂ ಅನುಕ್ರಮವಾಗಿ Ptah-hotep ಮತ್ತು Confucius ರಂಥವರ ನಡತೆಯ ನಿಯಮಗಳು ಪ್ರಚಾರ ಹೊಂದಿದ್ದುವು. ಹಿಬ್ರೂ ಜನಾಂಗಕ್ಕೆ ಮೋಜೆಸ್‌ನ ದಶಾದೇಶಗಳು (Ten Commandments) ದೊರೆತುವು. ಗ್ರೀಕರಲ್ಲಿ ಮಾತ್ರ ನೀತಿಶಾಸ್ತ್ರದ ಸುಸಂಬದ್ಧ ಅಧ್ಯಯನ ನಡೆಯಿತು. ಪೈಥೊಗರಸ್ ಮನದ ಸಂಯಮವನ್ನು ಸಾಧಿಸಲು ನೆರವಾಗುವುದೇ ನೀತಿ, ಸರಳತೆಯೇ ಅದರ ಸಾರವೆಂದು ಸಾರಿದನು. ಪ್ರೊಟೋಗರಸ್ ಮಾನವ ತೀರ್ಮಾನಗಳು ವ್ಯಕ್ತಿನಿಷ್ಠವಾದ ಕಾರಣ ಪ್ರತಿಯೊಬ್ಬನು ನೈತಿಕ ಪರಿಪ್ರೇಕ್ಷೆ ಅವನಿಗೆ ಮಾತ್ರ ಸಿಂಧುವೆಂದು ವಾದಿಸಿದನು. ಕೆಲವರಿಗೆ ಬಲವೇ ನೀತಿ (might is right)ಯೆನಿಸಿತು. ಸಾಕ್ರೆಟೀಸನಿಗೆ. ಜ್ಞಾನವೇ ಸದ್ಗುಣವೆನಿಸಿತು. ಸಿನಿಕರಿಗೆ ಸಂಯಮವೇ ನೀತಿ, ಸುಖ ಕೆಡುಕು ಎನಿಸಿದರೆ ಬೇರೆ ಕೆಲವರಿಗೆ ಸುಖವೇ ಸಂಸಾರ ಸಾರ ಸರ್ವಸ್ವ ಫಲವೆನಿಸಿತು.

ಪ್ಲೇಟೋನ ಪ್ರಕಾರ ಒಳಿತು ಪರವಸ್ತುವಿನ ಪ್ರಮುಖ ಅಂಗ. ಮಾನವನ ಆತ್ಮ ತ್ರಿಮುಖಿ, ಬುದ್ಧಿ, ಇಚ್ಛಾಶಕ್ತಿ ಮತ್ತು ಭಾವಗಳೇ (intellect, will and emotion) ಆ ಮೂರು ಮುಖಗಳು. ಬುದ್ಧಿಯ ಸಿದ್ಧಿ ಜೀವನದ ಗೊತ್ತು ಗುರಿಗಳನ್ನು ಗುರುತಿಸುವಲ್ಲಿ; ಇಚ್ಛಾಶಕ್ತಿಯ ಸಾರ್ಥಕತೆ ಧೈರ್ಯ ಮತ್ತ ಶ್ರಮ ಶಕ್ತಿಯಲ್ಲಿ; ಭಾವದ ಕೃತಕೃತ್ಯತೆ ಸಂಯಮದಲ್ಲಿ. ಇವುಗಳ ಸಮುಚಿತ ಸಮನ್ವಯವೇ ಪರಮೋಚ್ಚ ಸದ್ಗುಣವಾದ ನ್ಯಾಯ. ಇವು ಮೂರರಲ್ಲಿ ಬುದ್ಧಿಗೆ ಸಾರ್ವಭೌಮಿಕ ಸ್ಥಾನ, ಇಚ್ಛಾಶಕ್ತಿಗೆ ಹಿರಿಯ ಸ್ಥಾನ, ಭಾವಕ್ಕೆ ಇವೆರಡರ ಅಧೀನತ್ವದ ಸ್ಥಾನ.

ಅವನ ಶಿಷ್ಯ ಅರಿಸ್ಟಾಟಲನಿಗೆ ಪಾಶ್ಚಾತ್ಯರಲ್ಲಿ ನೀತಿಶಾಸ್ತ್ರವನ್ನು ಪ್ರತ್ಯೇಕ ಶಾಸ್ತ್ರವನ್ನು ಪ್ರಸ್ಥಾಪಿಸಿದ ಕೀರ್ತಿ ಸಲ್ಲುತ್ತದೆ. ಇವನ ನೀತಿಶಾಸ್ತ್ರ (ನಿಕೊಮ್ಯಾಕಿಯನ್ ಎಥಿಕ್ಸ್) ಸಾವಿರಾರು ವರ್ಷಗಳವರೆಗೆ ಈ ದಿಶೆಯಲ್ಲಿ ಚಿಂತನೆಯನ್ನು ನಡೆಸಿದವರ ಮೇಲೆ ತನ್ನ ಪ್ರಭಾವ ಮುದ್ರೆಯನ್ನೊತ್ತಿದೆ.

ಇವನ ಪ್ರಕಾರ ಸುಖಸಾಧನೆಯೇ ಜೀವನದ ಪರಮೋದ್ದೇಶವಾದರೂ 'ಎಂಥ ಜೀವನದಲ್ಲಿ ಸುಖ ಸಾಧ್ಯ?' ಎಂಬ ಪ್ರಶ್ನೆಯನ್ನು ಎತ್ತಿ ಅದಕ್ಕೆ ಉತ್ತರ ಹುಡುಕಲು ಹೆಣಗಿದ್ದಾನೆ. ಈ ಹುಡುಕಾಟದಲ್ಲಿಯೇ ತನ್ನ ನೀತಿಶಾಸ್ತ್ರದ ಸೂತ್ರಗಳನ್ನು ಕಂಡುಹಿಡಿದಿದ್ದಾನೆ. ಉತ್ಕೃಷ್ಟ ಜೀವನದಿಂದಲೇ ಉತ್ಕೃಷ್ಟ ಸುಖ ಸಾಧ್ಯ. ಉತ್ಕೃಷ್ಟ ಕಾರ್ಯಗಳಿಂದಲೇ ಉತ್ಕೃಷ್ಟ ಜೀವನ. ದೈಹಿಕ ಮಟ್ಟದಲ್ಲಿ ಮಾತ್ರ ಕ್ರಿಯಾಶೀಲನಾದರೆ ಸುಖ ಸಿಕ್ಕೇ ತೀರುವುದೆಂಬ ಖಾತ್ರಿಯಿಲ್ಲ. ಸುಖದ ಚತುರ್ಮುಖಗಳಾದ ಭೌತಿಕ ಸುಖ, ಮೌನ–ಗೌರವ, ಸಿರಿ,

ತಾತ್ವಿಕ ವಿವೇಕಗಳಲ್ಲಿ ಕೊನೆಯದು ಮಾತ್ರ ನಿತ್ಯ ಸುಖದಾಯಿನಿ. ವಿವಿಧ ಸುಗುಣ ಸಮನ್ವಯವೇ ಸೌಶೀಲ್ಯ. ಯಾವ ಗುಣವೂ ಪೂರ್ಣವಾಗಿ ಕೆಟ್ಟದ್ದೂ ಅಲ್ಲ, ಪೂರ್ಣವಾಗಿ ಒಳ್ಳೆಯದೂ ಅಲ್ಲ. ಅವುಗಳ ಅತಿರೇಕಗಳನ್ನು ಅಳಿದು ಸುವರ್ಣ ಮಧ್ಯಮಮಾರ್ಗವನ್ನು ಅನುಸರಿಸಿ, ಅವುಗಳ ಹಿತಮಿತವಾದ ಸಾಮಂಜಸ್ಯವನ್ನು ಸಾಧಿಸಿದಾಗಲೇ ನಿಜಸುಖ. ಇದು ತಾತ್ವಿಕ ವಿವೇಕದಿಂದಲೇ ಸಾಧ್ಯ.

ಸ್ಟೋಯಿಕ್ (Stoic) ಪಂಥದ ಚಿಂತಕರಲ್ಲಿ (Zeno)ಸೀನೋ ಕ್ರಿಸಿಪ್ಪಸ್ (Chrysiptus) ಸಿಸರೋ, ಎಪಿಕ್ಟೈಟಿಸ್ (Epictetus) ಮಾರ್ಕಸ್ ಅರೇಲಿಯಸ್ ಮುಂತಾದವರು ಉಲ್ಲೇಖನೀಯರು. ಇವರ ಅಭಿಮತದಂತೆ ನಿಸರ್ಗವು ಸುವ್ಯವಸ್ಥಿತ ಹಾಗೂ ಯುಕ್ತಿಯುಕ್ತವಾದುದಾಗಿದೆ (Orderly and rational) ಆದುದರಿಂದ ನಿಸರ್ಗದೊಡನೆ ಸಮ್ಮಿಳನ ಸಾಧಿಸಿದ ಬದುಕೇ ಒಳ್ಳೆಯದು. ಭೌತಿಕ ಸಂದರ್ಭ ಸನ್ನಿವೇಶಗಳೂ ಬದುಕನ್ನು ಪ್ರಭಾವಿಸುತ್ತವೆ. ಇವುಗಳಿಂದ ಆದಷ್ಟು ವಿಮುಕ್ತರಾಗಿ ಸಹನೆ, ಅನುದ್ವಿಗ್ನತೆ, ವ್ಯವಹಾರಜ್ಞಾನ, ಧೈರ್ಯ, ವಿವೇಚನೆ, ನ್ಯಾಯಬುದ್ಧಿ ಇತ್ಯಾದಿ ಗುಣಗಳನ್ನು ಬೆಳೆಸಿಕೊಂಡು ಬದುಕಬೇಕೆಂಬುದು ಇವರ ವಿಚಾರ ಸಾರ.

ಕ್ರಿ.ಶ. ಪೂರ್ವ ೩೦೦ರಲ್ಲಿದ್ದ ಅಥೆನ್ಸಿನ ತತ್ವಜ್ಞ ಎಪಿಕ್ಯೂರಸ್ಸನು ಬೋಧಿಸಿದ್ದೇ ಬೇರೆ, ಅವನ ಅನುಯಾಯಿಗಳು ಅದನ್ನು ಅರ್ಥವಿಸಿದ್ದೇ ಬೇರೆ. ಅತ್ಯುನ್ನತ ಸುಖವು ಧರ್ಮ ಶಾಂತಿಗಳಿಂದ ಮಾತ್ರ ದೊರೆಯುತ್ತದೆ. ಅಂಥ ಸುಖವನ್ನು ಸಂಪಾದಿಸುವುದೇ ಮನುಷ್ಯನ ಗುರಿಯಾಗಿರಬೇಕೆಂದು ಅವನು ಬೋಧಿಸಿದರೆ ಅವನ ಅನುಯಾಯಿಗಳು ಆ ಸುಖ ಇಂದ್ರಿಯ ಸುಖಮಾತ್ರವೆಂದು ಅಪಾರ್ಥ ಮಾಡಿ ಪ್ರಚುರಪಡಿಸಿದರು. ಪ್ರಸಿದ್ಧ ಕವಿ ಲುಕ್ರೇಷಿಯಸ್, ಡೆಮಾಕ್ರೆಟಿಸ್ ಮೊದಲಾದವರು ಧಾರ್ಮಿಕ ಭಾವನೆಗಳು ಮರಣ ಮತ್ತು ಮರಣೋತ್ತರ ಜೀವನದ ಅನಿಶ್ಚಿತತೆಗಳತ್ತ ನಮ್ಮ ಲಕ್ಷ್ಯ ಸೆಳೆದು ಭಾವನಾತ್ಮಕ ಕ್ಷೋಭೆಗಳಿಗೆ ಕಾರಣವಾಗುವುದಾಗಿ ಅವುಗಳಿಂದ ದೂರವಿದ್ದೇ ಮನಸ್ಸಿನ ಸ್ತಿಮಿತತೆ, ಶಾಂತತೆಗಳ ಮೂಲಕ ಸುಖ ಸಂಪಾದಿಸಬೇಕೆಂದು ಬೋಧಿಸಿದರು.

ಕ್ರೈಸ್ತರ ನೀತಿಶಾಸ್ತ್ರ ಗ್ರೀಕ್ ನೀತಿಶಾಸ್ತ್ರದಲ್ಲಿದ್ದ ಒಂದು ಕೊರತೆಯನ್ನು ತುಂಬಿತು. ಗ್ರೀಕರ ನೀತಿಶಾಸ್ತ್ರ ಗ್ರೀಕೇತರರಿಗೆ. ದಾಸರಿಗೆ ಅನ್ವಯಿಸುತ್ತಿದ್ದಿಲ್ಲ. ಕ್ರೈಸ್ತರ ನೀತಿಶಾಸ್ತ್ರ ಸರ್ವಮಾನವರಿಗೂ ಅನ್ವಯಿಸುವುದೆಂದು ಹೇಳಿದುದು ಒಂದು ದಿಟ್ಟ ಹೆಜ್ಜೆ. ಈ ಶಾಸ್ತ್ರದ ಪ್ರಕಾರ ಮಾನವನು ದೇವರ ದಯೆಯಿಲ್ಲದೆ ತನ್ನ ಇಚ್ಛಾ–ಜ್ಞಾನ–ಕ್ರಿಯಾಶಕ್ತಿಗಳಿಂದ ತನ್ನ ಒಳಿತನ್ನು ಸಾಧಿಸಿಕೊಳ್ಳಲಾರ. ಬೇರೆಯವರು ನಿನಗೆಸಗಬೇಕೆಂದು ನೀನು ಬಯಸುವುದನ್ನೇ ನೀನು ಬೇರೆಯವರಿಗೆ ಮಾಡು. ನಿನ್ನ ನೆರೆಹೊರೆಯವರನ್ನು ನಿನ್ನಂತೆಯೇ ಪ್ರೀತಿಸು. ನಿನ್ನ ವೈರಿಗಳನ್ನು ಪ್ರೀತಿಸು. ಸೀಜರನಿಗೆ ಸಲ್ಲುವುದನ್ನು ಸೀಜರನಿಗೆ ದೇವರಿಗೆ ಸಲ್ಲುವುದನ್ನು

ದೇವರಿಗೆ ಸಮರ್ಪಿಸು, ಇತ್ಯಾದಿ ಹೊಸ ಸೂತ್ರಗಳನ್ನು ಮೋಜೆಸನ ದಶಾದೇಶಗಳಿಗೆ ಸೇರಿಸಿದ ಕ್ರೈಸ್ತ ಮತ ಆರಂಭದಲ್ಲಿ ಸಂನ್ಯಾಸ, ಹುತಾತ್ಮತೆ, ಶ್ರದ್ಧೆ, ಕರುಣೆ, ಕ್ಷಮೆ, ಅಲೈಂಗಿಕ ಪ್ರೇಮ ಇತ್ಯಾದಿಗಳಿಗೆ ಪ್ರಾಶಸ್ತ್ಯವಿತ್ತಿತು.

ಆದರೆ ಚರ್ಚ್ ಪಿತೃಗಳು (Church fathers) ಒಳಿತು ಕೆಡುಕುಗಳು ಪರಸ್ಪರ ವಿರೋಧಿ ಶಕ್ತಿಗಳಾಗಿದ್ದು ಒಂದು ಇನ್ನೊಂದರ ಮೇಲೆ ಪ್ರಭುತ್ವ ಪ್ರಸ್ತಾಪಿಸಲು ನಿರಂತರ ಹೋರಾಟ ನಡೆದಿವೆಯೆಂಬ ಪರ್ಸಿಯಾ ಮೂಲದ Manichacism'ನ ಸವಾಲು ಸ್ವೀಕರಿಸಬೇಕಾಯಿತು. ಸಂತ ಅಗೋಸ್ತೀನನು ಒಳಿತು ದೇವನ ಗುಣವೆಂದ ಪ್ಲೆಟೋನ ವಿಚಾರವನ್ನೂ ಆದಮನ ಪತನ ಸಂಕೇತಿಸುವ ಪಾಪಕ್ಕೆ ಪರಿಹಾರ ಪರಮಾತ್ಮನ ದಯೆಯೆಂಬ ಕ್ರೈಸ್ತ ಪರಿಭಾವನೆಯನ್ನೂ ಸಮೀಕರಿಸುವುದರ ಮೂಲಕ ಈ ಸವಾಲನ್ನು ಸ್ವೀಕರಿಸಿದನು.

ಮಧ್ಯಯುಗದಲ್ಲಿ ಅರಿಸ್ಟಾಟಲನ ಕೃತಿಗಳ ಅರಬ್ಬೀ ಅನುವಾದಗಳ ಮೂಲಕ ಅವನ ವಿಚಾರಧಾರೆ ಮತ್ತೆ ಪ್ರಭಾವಶಾಲಿಯಾಯಿತು. ಇದನ್ನು ಎದುರಿಸಿದವನು ಸಂತ ಥಾಮಸ್ ಅಕ್ವಿನಾಸ್ ಇಂದ್ರಿಯಾನುಭವಗಳ ತಥ್ಯವನ್ನು ಅಕ್ವಿನಾಸ್ ಒಪ್ಪಿಕೊಂಡು ಅದನ್ನವನು ಮತ (paith)ದ ಸತ್ಯಕ್ಕೆ ಅಧೀನಗೊಳಿಸಿದನು. ಅರಿಸ್ಟಾಟಲನ ತರ್ಕದಿಂದಲೇ ಆಗಸ್ತೋನಿನ ಮೂಲ ಪಾಪದ (Original sin) ಪರಿಕಲ್ಪನೆಯನ್ನೂ ದೈವೀ ಕರುಣೆಯ ಮೂಲಕ ಅದರ ಪರಿಹಾರದ ಪರಿಕಲ್ಪನೆಯನ್ನೂ ಸಮರ್ಥಿಸಿದ ಅಕ್ವಿನಾಸ್ ಕ್ರೈಸ್ತ ನೀತಿ ಶಾಸ್ತ್ರೇತಿಹಾಸದಲ್ಲಿ ದೊಡ್ಡ ಹೆಸರು.

ಡ್ಯಾಂಟೇಯ ಡಿವೈನ್ ಕಾಮೆಡಿ (Divine comedy) ಪ್ಲೇಟೊ, ಅರಿಸ್ಟಾಟಲ್ ಮತ್ತು ಅಕ್ವಿನಾಸರ ವಿಚಾರಧಾರೆಗಳ ಸಂಗಮ. ಇದರಲ್ಲಿ ಪಾಪಗಳ ಪಟ್ಟಿಯೇ ಸಿಕ್ಕುತ್ತದೆ. ಈ ಪಾಪಗಳಿಗೆಲ್ಲ ಚರ್ಚ್ ಪಿತೃಗಳು ಪ್ರಾಯಶ್ಚಿತ್ತಗಳನ್ನು ರೂಪಿಸಿದರು. ಹೀಗೆ ಪಾಪಗಳ, ಅವುಗಳ ಪ್ರಾಯಶ್ಚಿತ್ತಗಳ ವಿವರಣೆಯೇ ಕ್ರೈಸ್ತ ನೀತಿಶಾಸ್ತ್ರದ ಹುರುಳು ತಿರುಳಾಯಿತು.

ಸುಧಾರಣಾಯುಗ (Age of Reformation)ದ ಪ್ರಭಾವವನ್ನಿಲ್ಲಿ ಗಮನಿಸಬೇಕು. ಮಾರ್ಟಿನ್ ಲೂಥರ್ ಮದುವೆಯಾಗಿ ಅದುವರೆಗೆ ಅವಿವಾಹಿತತೆಗಿದ್ದ (celibacy) ಮಹತ್ವವನ್ನು ಪ್ರೊಟೆಸ್ಟಂಟ್ ಕ್ರೈಸ್ತರಲ್ಲಿ ಕಡಿಮೆ ಮಾಡಿದನು. ಶ್ರದ್ಧೆಯ ಮಹತ್ವವನ್ನು ಹೆಚ್ಚಿಸಿದನು. ಜಾನ್ ಕಾಲ್ವಿನನೂ ಶ್ರದ್ಧೆಗೇ ಪ್ರಾಶಸ್ತ್ಯವಿತ್ತು ಸಂತ ಅಗೋಸ್ತೀನನ ಮೂಲಪಾಪದ (original sin) ಪರಿಕಲ್ಪನೆಯನ್ನು ಎತ್ತಿ ಹಿಡಿದನು. ಬಡತನವು ಪಾಪಕ್ಕೆ ದೊರೆತ ಶಿಕ್ಷೆ ಇಲ್ಲವೆ ದೇವ ಕರುಣೆಗೆ ಪಾತ್ರರಾಗದಿದ್ದುದರ ಪ್ರತೀಕವೆಂದು ಪ್ರತಿಪಾದಿಸಿದನು. ಈ ಪರಿಶುದ್ಧತಾವಾದಿಗಳ (Pwitans) ಕಾಲದಲ್ಲಿ ಒಳಿತು ಸಿರಿಯೊಡನೆ, ಕೆಡುಕು ಬಡತನದೊಡನೆ ಸಂಬಂಧ ಪಡೆಯಿತು. ವೈಯಕ್ತಿಕ ಹೊಣೆಗಾರಿಕೆ ಮತ್ತೆ ಸಂಪ್ರದಾಯಗಳ

ವಿಧೇಯತೆಗಿಂತ ಹೆಚ್ಚು ಮಹತ್ವವನ್ನು ಪಡೆಯಿತು. ಸೆಕ್ಯುಲರ್ ನೀತಿಸಂಹಿತೆಗೆ ದಾರಿ ಮಾಡಿಕೊಟ್ಟಿತು.

ಸೆಕ್ಯುಲರ್ ನೀತಿವಿದರಲ್ಲಿ ಹಾಬ್ಸ್‌ನ ಕಣ್ಣಿಗೆ ಸಮಾಜ 'a war of all against all' ಆಗಿ ಕಂಡಿತು. ಅಂತೆಯೇ ಸುರಕ್ಷಿತತೆಗಾಗಿ ಸಾಮಾಜಿಕ ಒಪ್ಪಂದವೊಂದನ್ನು ಮಾಡಿಕೊಂಡು ಅದಕ್ಕೆ ಜನರು ತಮ್ಮ ಅಧಿಕಾರಗಳನ್ನು ಅರ್ಪಿಸುತ್ತಾರೆಂದು ಅವನು ಪ್ರತಿಪಾದಿಸಿದನು. ಲಾಕ್ (looke)ನೂ ಈ ವಿಚಾರಧಾರೆಯಿಂದ ಪ್ರಭಾವಿತನಾದ. ಆದರೆ ಸಾಮಾಜಿಕ ಒಪ್ಪಂದ (Social contract)ದ ಉದ್ದೇಶವು ಸತ್ತೆಯ ನಿರಂಕುಶಾಧಿಕಾರವನ್ನು ನಿಯಂತ್ರಿಸಿ ವ್ಯಕ್ತಿಯ ಸ್ವಾತಂತ್ರ್ಯವನ್ನು ಬೆಳೆಸುವುದಾಗಿದೆಯೆಂದು ವಾದಿಸಿದನು.

ಸ್ಪಿನೋಜಾನ ಪ್ರಕಾರ ಮಾನವನ ವಿವೇಚನಾ ಶಕ್ತಿ (Reason)ಯೇ ಅವನ ನೈತಿಕ ವರ್ತನೆಯ ಒರೆಗಲ್ಲು. ಮಾನವನ ನಿಸರ್ಗ ಜ್ಞಾನಕ್ಕೆ ನೆರವಾಗುವುದೆಲ್ಲ ಅವನ ವಿವೇಚನಾ ಶಕ್ತಿಗೆ ಸರಿಹೊಂದುವುದೆಲ್ಲ ಅವನ ದೃಷ್ಟಿಯಲ್ಲಿ ಒಳಿತು ನರನಿಗೆ. ನಾವು ನಮಗಾಗಿ ಬಯಸುವ ಒಳಿತನ್ನೆ ಬೇರೆಯವರಿಗೂ ನಾವು ಬಯಸಬೇಕು. ದೇವನ ಬೌದ್ಧಿಕ ಪ್ರೇಮವೇ ಮಾನವ ಅತ್ಯುನ್ನತ ಸ್ಥಿತಿ ಸಾಧನ (Intellectual love of God is the highest of human state).

ನ್ಯೂಟನ್‌ನ ನಿಯಮಗಳು (Laws of Newton) ವಿಶ್ವದಲ್ಲಿ ದೈವಿಕ ವ್ಯವಸ್ಥೆ ಹೊಂದಿದೆಯೆಂಬ ನಂಬಿಕೆಗೆ ಪುಷ್ಟಿಯನ್ನೊದಗಿಸಿದೆಯೆಂದು ಅಂದಿನ ತತ್ತ್ವಜ್ಞರು ಪ್ರತಿಪಾದಿಸಿದರು. ಡೇವಿಡ್ ಹ್ಯೂಮ್, ಆಡಮ್ ಸ್ಮಿತ್‌ರ ಅಭಿಪ್ರಾಯದಲ್ಲಿ ರಕ್ತ ಸಂಬಂಧ ಮತ್ತು ಬೇರಾವ ಸಂಬಂಧಗಳಿಲ್ಲದವರ ಬಗೆಗೂ ಮಾನವರು ತೋರುವ ಸಹಾನುಭೂತಿಯಲ್ಲಿಯೇ ನೈತಿಕತೆಯ ಮೂಲಗಳಿವೆ. ರೂಸೋ ಹಾಬ್ಸನನ ಸಾಮಾಜಿಕ ಒಪ್ಪಂದದ ಸಿದ್ಧಾಂತವನ್ನು ಒಪ್ಪಿಕೊಂಡ. ಆದರೆ ಮಾನವನು ಮೂಲತಃ ಒಳ್ಳೆಯವನು. ಸಾಮಾಜಿಕ ವಿಷಮತೆಗಳೇ ಕೆಡುಕಿಗೆ ಕಾರಣವೆಂದು ಸಾರಿದ. ವಿಲಿಯಮ್ ಗೋಲ್ಡ್‌ವಿನ್ ಇನ್ನೂ ಮುಂದೆ ಸಾಗಿ ಸಾಂಸ್ಥಿಕ, ರಾಜ್ಯಕ ವ್ಯವಸ್ಥೆಗಳೆಲ್ಲವನ್ನೂ ತಿರಸ್ಕರಿಸಿದ. ಅವುಗಳ ಅಸ್ತಿತ್ವವೇ ಕೆಡುಕಿನ ಕುರುಹು. ಅವನ ದೃಷ್ಟಿಯಲ್ಲಿ.

ಕಾಂಟ್ ಹೊಸದನ್ನು ಹುಡುಕಿದ. ಮಾನವ ಕೃತ್ಯಗಳು ಪರಿಸ್ಥಿತಿ ಮತ್ತು ಆಕಸ್ಮಿಕಗಳಿಗೆ ಒಳಗಾಗಿ ಘಟಿಸುತ್ತವೆ. ಆದುದರಿಂದ ಒಂದು ಕೃತ್ಯದ ನೈತಿಕತೆಯನ್ನು ಅದರ ಪರಿಣಾಮದಿಂದ ಅಲ್ಲ, ಅದಕ್ಕೆ ಪ್ರೇರಣೆ (Motivation) ಯಾವುದೆಂಬುದರ ಮೇಲೆ ನಿರ್ಧರಿಸಬೇಕೆಂಬುದು ಅವನ ಅಭಿಮತ. 'Act as if the principle on Which your action is based were to become by your will auniversal law of

nature’. ಇದು ಅವನ ನಿಯಮ. ಇದನ್ನು ‘ಛಿಚಿಣಜರಂಡುಛಿಚಿಟ ುಟಂಜಡಿಚಿ–ಣುತಜ’ ಎಂದು ಕರೆಯಲಾಗಿದೆ. ಕಾಂಟನ ದೃಷ್ಟಿಯಲ್ಲಿ ಪ್ರತಿ ವ್ಯಕ್ತಿಯೂ ಸಾಧ್ಯ: ‘ಸಾಧನ’ ಮಾತ್ರವಲ್ಲ. (In every case an end, never as a means only)

ಜೆರೆಮಿ ಬೆಂಥಮ್, ಜೇಮ್ಸ್ ಮಿಲ್, ಅವನ ಮಗ ಜೆ.ಎಸ್. ಮಿಲ್ ಉಪಯೋಗವಾದ (Utilitarianism) ಪುರಸ್ಕರ್ತರು. ಬಹು ಜನರಿಗೆ ಹಿತವಾಗುವುದು ಯಾತರಿಂದಲೋ ಅದೇ ನೀತಿ (The greatest happiness of the greatest number) ಇದು ಧರ್ಮದಾನಿ ಬುದ್ಧನ ‘ಬಹುಜನ ಹಿತಾಯ, ಬಹುಜನ ಸುಖಾಯ’ ಸೂತ್ರದಂತಿದೆ.

ಹೆಗೆಲ್ ಕಾಂಟನ categorial imperative ಒಪ್ಪಿಕೊಂಡ. ಆದರೆ ನೈತಿಕತೆಯು ಸಾಮಾಜಿಕ ಒಪ್ಪಂದವೊಂದರ ಪ್ರತಿಫಲನವಲ್ಲವೆಂದೂ, ಕುಟುಂಬದಲ್ಲಿ ಕೊನರಿ ಪ್ರೂಷಿಯನ್ ಸ್ಟೇಟಿನಲ್ಲಿ ಪರ್ಯವಸಾನವಾಗುವ ನೈಸರ್ಗಿಕ ವಿಕಾಸವೆಂದೂ ವಾದಿಸಿದ ಸ್ಟೇಟಿಗೆ (state)ಗೆ ಶರಣಾಗುವುದೇ ತರಣೋಪಾಯ ಅವನ ದೃಷ್ಟಿಯಲ್ಲಿ.

ಕೀರ್ಕೆಗಾರ್ಡ್‌ನ ದೃಷ್ಟಿಯಲ್ಲಿ ನೈತಿಕತೆಯೆನ್ನುವುದು ಆಯ್ಕೆಯ ಸಮಸ್ಯೆ (The problem of choice) ಹೆಗೆಲ್ ಹೇಳುವಂತೆ ಇದೊಂದು ಜಾಗತಿಕ ಪರಿಹಾರ ಕಂಡುಕೊಳ್ಳಬಹುದಾದ ವಸ್ತುನಿಷ್ಠ ವಿಷಯವಲ್ಲ. ಪ್ರತಿಯೊಬ್ಬನೂ ಎದುರಿಸಿ ಕ್ರೈಸ್ತ ನೀತಿಶಾಸ್ತ್ರದ ಚೌಕಟ್ಟಿನಲ್ಲಿ ತನ್ನ ಆಯ್ಕೆಯನ್ನು ತಾನೇ ಮಾಡಿಕೊಳ್ಳಬೇಕಾದ ವ್ಯಕ್ತಿನಿಷ್ಠ ವಿಷಯ. ಇದರಲ್ಲಿಯೇ ಉದ್ಭವಿಸಿತು ಅಸ್ತಿತ್ವವಾದ ಮುಂದೆ.

ಡಾರ್ವಿನ್ನೋತ್ತರ ಕಾಲದ ಹರ್ಬರ್ಟ್‌ಸ್ಪೆನ್ಸರ್ ಮತ್ತು ನೀಶೆ (Neitssche) ಗಮನಾರ್ಹರು. ಹರ್ಬರ್ಟ್ ಸ್ಪೆನ್ಸರರ ಪ್ರಕಾರ ವಿಕಾಸಕ್ರಮದಲ್ಲಿ ಮಾನವರು ಬೆಳೆಸಿಕೊಂಡ ಕೆಲವು ರೂಢಿಗಳ ಗುಚ್ಛವೇ ನೀತಿಶಾಸ್ತ್ರ. ಅವನ ಸತ್ವಾತಿಶಯವುಳ್ಳುದೇ ಉಳಿಯುವುದು (Survival of the fittest) ಎಂಬ ಸೂತ್ರ. ನೀಶೇನ ಅತಿಮಾನವವಾದ. ರಾಜಕುಮಾರ ಪೀಟರ್ ಕ್ರೊಪೋಟ್ಕಿನ್ನನ ಪರಸ್ಪರ ಸಹಾಯದ ಸಿದ್ಧಾಂತ ಈ ಕಾಲದ ನೈತಿಕ ಪರಿಕಲ್ಪನೆಗಳು.

ಮಾನವಶಾಸ್ತ್ರ (Anthropology)ವೂ ನೀತಿ ಮೀಮಾಂಸೆಗೆ ತನ್ನ ಕಾಣಿಕೆಯನ್ನು ನೀಡಿದೆ. ನೈತಿಕತೆ ಸಾಪೇಕ್ಷ (Ethical relativity)ವೆಂಬುದೇ ಆ ಕಾಣಿಕೆ. ಫ್ರೈಡ್ ಅವನ ಅನುಯಾಯಿಗಳು ಪ್ಯಾವ್ಲೋಫ್ ಮೊದಲಾದ ಮನೋವಿಶ್ಲೇಷಣಜ್ಞರು ಸುಪ್ತ ಕಾಮನೆಗಳ ದಮನದಲ್ಲಿ ನೀತಿಬಾಹಿರ ಕೃತ್ಯಗಳ ಉಗಮವನ್ನು ಶೋಧಿಸಿದರೆ ವರ್ತನವಾದಿಗಳು ಅನುಕೂಲವಾದ ಪರಿಸ್ಥಿತಿಯನ್ನು ನಿರ್ಮಿಸುವುದರ ಮೂಲಕ ಮಾನವ ಸ್ವಭಾವವನ್ನು ಪರಿವರ್ತಿಸಬಹುದೆಂಬ ವಾದವನ್ನು ಮಂಡಿಸಿದರು.

ಇತ್ತೀಚಿನವರಾದ ಬರ್ಟರೆಂಡ್‌ರಸೆಲ್ಲರ ಪ್ರಕಾರ ನೀತಿ ನಿರ್ಣಯ ಮಾನವನ ಆಕಾಂಕ್ಷೆಗಳಂತೆ ಇಲ್ಲವೆ ಅಂಗೀಕೃತ ರೂಢಿಗಳಂತೆ ಮಾನವನ ಅನಿರ್ಬಂಧಿತ ಬೆಳವಣಿಗೆ ಮತ್ತು ಪೂರ್ಣ ಆತ್ಮ ವಿಕಾಸ (relatively unimpeded natural growth and self-realization) ಮುಖ್ಯ. ನಿಕೋಲಸ್ ಬರ್ಡ್ಯಾಲ ವೃಷ್ಟಿಯ ಆತ್ಮಸ್ವಾತಂತ್ರ್ಯ (freedom of the individual spirit)ವನ್ನು ಎತ್ತಿ ಹಿಡಿದ. ಮಾರ್ಟಿನ್ ಮಾನವ ಸಂಬಂಧಗಳಿಗೆ ಮಹತ್ವ ಕೊಟ್ಟ. ಪಾಲ್ ಟಲೆಕ್ (Paul Tillech) ತಾನು ತಾನಾಗಿರುವುದಕ್ಕೆ ಒತ್ತು ಕೊಟ್ಟ. ಗ್ಯಾಬ್ರಿಯೆಲ್ ಮರೀಲ್ ವ್ಯಕ್ತಿಯ ಅನನ್ಯತೆಗೆ ವ್ಯಕ್ತಿ ವ್ಯಕ್ತಿಗಳ ನಡುವಣ ಸಂವಹನಕ್ಕೆ (uniquence of the individual and the importance of communication between individual) ಮನ್ನಣೆ ನೀಡಿದ. ಮಾರ್ಟಿನ್ ಹೀಡೆಗ್ಗರ್ ಸಾತ್ರ ಅಸ್ತಿತ್ವವಾದದ ಅಧ್ವರ್ಯುಗಳಾಗಿ ಬದುಕಿನ ನಿರರ್ಥಕತೆಯನ್ನು ಪ್ರತಿಪಾದಿಸಿದರು. ಜಾನ್ ಡೆವಿ (Dewey) ಸಾರಾಸಾರ ವಿಚಾರ ಮಾಡಿ ಒಳಿತನ್ನು ಗುರುತಿಸಬೇಕೆಂದರು (the good is that which is chosen after reflecting upon both the means and the probable consequences of realizing the good).

ಈ ಎಲ್ಲ ಚಿಂತನ ಮಂಥನಗಳಿಗೆ ತೆರೆ ಎಳೆದಂತೆ ಜಾರ್ಜ್ ಎಡ್ವರ್ಡ್ ಮೂರ್ ಹೇಳಿದ; ಒಳಿತು ಅಜ್ಞೇಯ. ಪರಿಭಾಷೆ ವ್ಯಾಖ್ಯಾನೀಯ. (Good ununderstandable; terms definiable) ಎಂದು ಸಾರಿದ. ಮಹರ್ಷಿ ಅರವಿಂದರೂ ಸಾರಿಲ್ಲವೆ. ಎಲ್ಲ ವಿವರಿಸಿದ ಬಳಿಕ ಏನೂ ತಿಳಿದಿಲ್ಲ. (When all has been explained, nothing is known) ಎಂದು? ಈ ಅಪರಿಮಿತ ಕತ್ತಲೆಯಲ್ಲಿಯೇ ವಿಪರೀತದ ಬೆಳಕು ಕಾಣುವುದೇ ಅರಿವಿನ ಬಾಳಿನ ಗುರಿ.

ಪಾಶ್ಚಾತ್ಯ ನೀತಿಶಾಸ್ತ್ರೇತಿಹಾಸದ ಈ ಸಿಂಹಾವಲೋಕನ ಶರಣರ ನೀತಿ ಸಂಹಿತೆಯ ಸರಿಯಾದ ತಿಳಿವಳಿಕೆಗೆ ಅಗತ್ಯ. ಭಾರತೀಯ ನೀತಿ ಶಾಸ್ತ್ರ ಹೆಚ್ಚಾಗಿ 'ಸತ್ಯಂ ವದ, ಧರ್ಮಂ ಚರ' ಇತ್ಯಾದಿ ದೇವಾದೇಶಗಳಲ್ಲಿ ವ್ಯಕ್ತವಾಗಿದೆ. ಧರ್ಮದ ಅಭಿನ್ನ ಅಂಗವೂ ಆಗಿದೆ. ವ್ಯಷ್ಟಿಯ ನೆಲೆಯಲ್ಲಿ ಮಾತ್ರ ಆಚರಣೀಯವಾಗಿದೆ. ಶರಣರ ನೀತಿ ಸಂಹಿತ ಮಾತ್ರ ಅನುಭಾವಾಧಾರಿತ ವ್ಯಷ್ಟಿ ಸಮಷ್ಟಿಗಳೆರಡನ್ನೂ ಒಳಗೊಳ್ಳುವ ಸಾಧನಪಥ. ಇಲ್ಲಿ ಸಲ್ಲುವ ಮೂಲಕ ಅಲ್ಲಿ ಸಲ್ಲುವುದನ್ನು ಸಾಧ್ಯವಾಗಿಸುವ ಬೋಧಾಮೃತ.

ಬದುಕಿನ ಗುರಿ ಎಂತೊ ಅಂತೆ ಆಯಾ ಜನಾಂಗದ ನೀತಿ ಸೂತ್ರಗಳೆಂದು ಹಿಂದೆ ಹೇಳಲಾಗಿದೆ. ಶರಣರ ಬದುಕಿನ ಗುರಿ ಕೆಳಗಣ ವಚನಗಳಲ್ಲಿ ಅಭಿವ್ಯಕ್ತವಾಗಿದೆ:

'ಹಡೆವುದರಿದು ನರಜನ್ಮವ, ಹಡೆವುದರಿದು ಗುರುಕಾರುಣ್ಯವ;
ಹಡೆವುದರಿದು ಲಿಂಗ ಜಂಗಮದ ಸೇವೆಯ;

ಚೆನ್ನಮಲ್ಲಿಕಾರ್ಜುನಯ್ಯನ ಶರಣರ ಸಂಗದಲ್ಲಿ
ನಲಿದಾಡು ಕಂಡೆಯಾ, ಎಲೆ ಮನವೆ!'

ಅಕ್ಕಮಹಾದೇವಿ.

'ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯಾ?
ನಗುವುದು, ನುಡಿವುದು ಶಿವಭಕ್ತರೊಡನೆ
ಸುಮ್ಮಾನ ಹಮ್ಮು ಬಿಮ್ಮಾಗಿರಬೇಕಯ್ಯಾ!
ನಮ್ಮ ಕೂಡಲಸಂಗನ ಶರಣರೊಡನೆ ಮನದೆರೆದು
ಮಾತನಾಡುವುದಯ್ಯಾ.'

ಬಸವಣ್ಣ

ಚಂದ್ರನ ಶೈತ್ಯದಲು ಬೆಳೆವ ಕಾಯಕ್ಕೆ
ಬೆಳದಿಂಗಳ ಬಯಸುವ ಹಂಗೇಕಯ್ಯ?
ಶರಣರ ಸಂಗದಲಿರ್ದು ಶಿವನ ಬೇಡುವ ಹಂಗೇಕಯ್ಯ?
ಕೂಡಲ ಸಂಗಯ್ಯನ ಶರಣರು ಬಂದು ತಮ್ಮವನೆಂದರೆ
ಸಾಲದೆ ಅಯ್ಯಾ?' ಬಸವಣ್ಣನವರು

ಶಿವಭಕ್ತರೊಡನೆ ನಗುವುದು. ನುಡಿಯುವುದು. ಕಂಡಭಕ್ತರಿಗೆ ಕೈ ಮುಗಿವುದು, ಭಕ್ತರ ಮುಖ ದರ್ಪಣದಲ್ಲಿ ಲಿಂಗವ ಕಾಣುವುದು. ಶರಣರ ಸಂಗದಲ್ಲಿ ನಲಿದಾಡುವುದು. ಶರಣರು ಬಂದು ಇವನಾರವ ಎನ್ನದೆ ಇವನಮ್ಮವನೆನ್ನುವಂತೆ ಲೇಸೆನಿಸಿಕೊಂಡು ಐದೇ ದಿನವಾದರೂ ಸರಿ ಬದುಕುವುದು ಸಕಲ ಜೀವಾತ್ಮರಿಗೆ ಲೇಸನೇ ಬಯಸುತ್ತ. ಲೇಸನೇ ಮಾಡುತ್ತ, ಲೇಸಿಗಾಗಿ ಬದುಕುವುದು, ಮುಕ್ತಿಯ ಆಸೆ. ಕೈಲಾಸದಾಸೆಯನ್ನೂ ಕೂಡ ಮಾಡದಿರುವುದು:* ಸುಖ ಬಂದರೆ ಪುಣ್ಯದ ಫಲವೆನ್ನದೆ ದುಃಖ ಬಂದರೆ ಪಾಪದ ಫಲವೆನ್ನದೆ, ನೀ ಮಾಡಿದೊಡಾಯಿತೆನ್ನದೆ, ಕಾರ್ಯಕ್ಕೆ ಕರ್ತುವೆ ಕಡೆಯೆಂದೆನ್ನದೆ, ಉದಾಸೀನವಿಡಿದು ಶರಣೆನ್ನದೆ, ಸಂಸಾರವ ಸವೆಯೆ ಬಳಸುವುದು. ಕಾಯದ ಕಳವಳಕ್ಕಂಜಿ ಕಾಯಯ್ಯಾ ಎನ್ನದೆ, ಜೀವನೋಪಾಯಕ್ಕಂಜಿ ಈಯಯ್ಯ ಎನ್ನದೆ, ಬೇಕು ಬೇಡೆನ್ನದೆ, ಶಿವನ ಹಾರದೆ, ಮಾನವನ ಬೇಡದೆ ಸ್ವತಂತ್ರಧೀರನಾಗಿ ಬದುಕುವುದು, ಬೇಡಿ ಭವಿಯಾಗದೆ,

---

*** ಅಮೃತಕ್ಕೆ ಹಸಿವುಂಟೆ? ಜಲಕ್ಕೆ ತೃಷೆಯುಂಟೆ? ಘನ ಪುರುಷರಿಗೆ ವಿಷಯವುಂಟೆ? ಸದ್ಗುರು ಕಾರುಣ್ಯವಂ ಪಡೆದು ಲಿಂಗಾರ್ಚನೆಯ ಮಾಡುವ ಶರಣಂಗೆ ಮುಕ್ತಿಯ ಬಯಕೆಯುಂಟೆ?' ಉರಲಿಂಗ ಪೆದ್ದಿ**

**"ಕೈಲಾಸ ಮರ್ತ್ಯಲೋಕವೆಂಬರು. ಕೈಲಾಸವೆಂದರೇನು? ಮರ್ತ್ಯಲೋಕವೆಂದರೇನು? ಅಲ್ಲಿಯೂ ನಡೆಯು ಒಂದೇ. ಇಲ್ಲಿಯೂ ನಡೆಯು ಒಂದೇ. ಅದ ಕಂಡು ನಮ್ಮ ಶಿವಶರಣರು ಸುರಲೋಕವನು ತೃಣವೆಂದು ಭಾವಿಸಿದರು.' – ಲಿಂಗಮ್ಮ**

ನೀಡಿ ಭಕ್ತರಾಗಬೇಕೆಂಬ ಛಲದಿಂದ ಬದುಕುವುದು, ಬಯಸಿ ಬಂದುದು ಅಂಗಭೋಗ ಬಯಸದೆ ಬಂದುದು. ಲಿಂಗಭೋಗವೆಂದು ನಂಬಿ ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಗಳಾಗಿ ಬದುಕುವುದು.

ಬದುಕಿನ ಈ ಗುರಿಗೆ ತಕ್ಕಂತೆ ಅದನ್ನು ಮುಟ್ಟುವ ನೀತಿಯ ದಾರಿ ಶರಣರದು. ಇದನ್ನು ರೂಪಿಸುವಲ್ಲಿ ಪ್ಲೇಟೋ ಗುರುತಿಸಿದ ಬುದ್ಧಿ, ಭಾವನೆ, ಇಚ್ಛಾಶಕ್ತಿಗಳು ಕೆಲಸ ಮಾಡಿವೆ. 'ಅರಿದಡೆ ಶರಣ, ಮರೆದಡೆ ಮಾನವ' ಎಂಬ ಸೂತ್ರದಲ್ಲಿ ಬುದ್ಧಿಗೆ, 'ಶಿವಭಕ್ತರ ನೋವೇ ಲಿಂಗದ ನೋವು', ಅವರು ನೊಂದರೆ ನಾನು ಬೆಂದೆನಯ್ಯ' ಎಂಬ ಸೂತ್ರದಲ್ಲಿ ಭಾವನೆಗೆ, 'ಛಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ ಛಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ' ಮತ್ತು 'ಛಲವಿರಬೇಕು ಶಿವಭಕ್ತಿಯ ಮಾಡುವಲ್ಲಿ, ಹಿಡಿದು ಬಿಡೆನೆಂಬ ಛಲವಿರಬೇಕು ಶೀಲವ್ರತದಲ್ಲಿ, ಹಿಡಿದು ಬಿಡೆನೆಂಬ' ಸೂತ್ರದಲ್ಲಿ ಸಂಕಲ್ಪಶಕ್ತಿಗೆ ಸ್ಥಾನ ನೀಡಿರುವುದು ವೇದ್ಯವಾಗುತ್ತದೆ.

ಅರಿಸ್ಟಾಟಲನು ಪ್ರತಿಪಾದಿಸಿದ ಸುವರ್ಣಮಧ್ಯಮದ ಮಾರ್ಗವೂ ಶರಣರ ನೀತಿಸಂಹಿತೆಯಲ್ಲಿ ನಿಹಿತವಾಗಿದೆ. ಪ್ರಭುದೇವರ ಈ ವಚನ ನಿದರ್ಶನವಿದಕ್ಕೆ:

'ಎಣ್ಣೆ ಬೇರೆ, ಬತ್ತಿ ಬೇರೆ, ಎರಡೂ ಕೂಡಿ ಸೊಡರಾಯಿತ್ತು;
ಪುಣ್ಯ ಬೇರೆ, ಪಾಪ ಬೇರೆ, ಎರಡೂ ಕೂಡಿ ಒಡಲಾಯಿತ್ತು;
ಮಿಗಬಾರದು, ಮಿಗದಿರಬಾರದು; ಒಡಲಿಚ್ಛೆಯ ಸಲ್ಲಿಸದೆ
ನಿಮಿಷವಿರಬಾರದು;
ಕಾಯಗುಣವಳಿದು ಮಾಯಾಜ್ಯೋತಿ ವಾಯುವ ಕೂಡದ ಮುನ್ನ
ಭಕ್ತಿಯ ಮಾಡಬಲ್ಲಾತನೆ ದೇವ, ಗುಹೇಶ್ವರಾ!'
ಪ್ರಭುಲಿಂಗ ಲೀಲೆಯಲ್ಲಿ ಬರುವ ಈ ಪದ್ಯ ಇನ್ನೊಂದು ನಿದರ್ಶನ :
'ಒಳಗುಹೊರಗೆಂಬೆರಡು ಬಟ್ಟೆಗೆ। ಳೊಳಗೆ ನೀತಿ
ಪ್ರೀತಿಮಾರ್ಗಗ । ಳೊಳವು
ತಾವೆರಡೆರಡು ಪಥದಲಿ ಕವಲುವಟ್ಟೆಗಳು ॥
ತಿಳಿವೊಡವರೊಳು ಮಧ್ಯ ಮಾರ್ಗದ । ಬಳಿವಿಡವ
ಬಗೆಯುಳ್ಳೊಡಾತನೆ ।
ನೆಲೆಯ ಕಾಂಬನು ನಿತ್ಯನಪ್ಪನು ರಾಮಕೇಳೆಂದ'

ಸ್ಟೊಯಿಕರ (Stoics) ಮತವೇನೆಂಬುದನ್ನು ಹಿಂದೆ ನೋಡಿದ್ದೇವೆ. 'only a life led in harmony with nature can be good' ಎಂಬ ಅವರ ಸೂತ್ರದಲ್ಲಿ ನಿಸರ್ಗಕ್ಕೆ

ನೀಡಿರುವ ಮಹತ್ವ ಸ್ಪಷ್ಟ. ಮರ್ತ್ಯವೆಂಬುದು ಕರ್ತಾರನ ಕಮ್ಮಟ'ವೆಂದು ನಂಬಿದ್ದ ಶರಣರು ಅದರೊಡನೆ ಹೊಂದಿಕೊಂಡು ಬಾಳಬೇಕೆಂದಷ್ಟೇ ಹೇಳಲಿಲ್ಲ. ಅದನ್ನು ಸಂರಕ್ಷಿಸುತ್ತಲೇ ಬಾಳಬೇಕೆಂದು ಬೋಧಿಸಿದರು. ಅಣ್ಣನ ಈ ವಚನ ಮನೋಜ್ಞ.

'ಮರಗಿಡ ಬಳ್ಳಿ ಧಾನ್ಯಗಳ ಬೆಳಸೆಲ್ಲವ ತರಿತರಿದು,
ಪ್ರಾಣವ ಕೊಂದುಂಡು
ಶರೀರವ ಹೊರೆದ ದೋಷಕ್ಕೆ ಇನ್ನಾವುದು ವಿಧಿಯಯ್ಯಾ?
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ ಜೀವಜಾಲ
ಮೆಲ್ಲದೆ ಚರಾಚರವೆಲ್ಲವ?
ಅದು ಕಾರಣ, ಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವ
ಕೊಂಡು ನಿರ್ದೋಷಿಗಳಾಗಿ ಬದುಕಿದರು.'

ಈ ಚರಾಚರ ಸೃಷ್ಟಿಯನ್ನೇ ಸೇವಿಸಿ ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ ಜೀವಜಾಲವೆಲ್ಲ ಬದುಕಬೇಕು. ಆದುದರಿಂದ ಪ್ರಸಾದ ಭಾವನೆಯಿಂದ ಅದನ್ನು ಉಪಯೋಗಿಸಿಕೊಳ್ಳಬೇಕು. ಪ್ರಸಾದಭಾವನೆಯಿರುವಲ್ಲಿ ಅನಾವಶ್ಯಕವಾಗಿ ವಸ್ತು ಸಂಗ್ರಹ ನಡೆಯುವುದಿಲ್ಲ. ಅಸಂಗ್ರಹ–ಅಪರಿಗ್ರಹ ವ್ರತಗಳು ತಾವಾಗಿಯೇ ತಲೆದೋರುತ್ತವೆ. ಹೀಗೆ ನಿಸರ್ಗವನ್ನು ರಕ್ಷಿಸಿ ತಾವೂ ರಕ್ಷಿತರಾಗುವ ಬುದ್ಧಿ ತಲೆದೋರುತ್ತದೆ.

ನಿಸರ್ಗವನ್ನು ರಕ್ಷಿಸುವ ಜೊತೆಗೆ ನಿಸರ್ಗದಿಂದಲೂ ನೀತಿ ಸೂತ್ರಗಳನ್ನು ರೂಪಿಸಿದರು ಶರಣರು. 'ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯ. ಚಂದ್ರಕುಂದೆ ಕುಂದುವುದಯ್ಯ' ಎಂಬ ವಚನವನ್ನೂ, 'ಕಾಗೆಯೊಂದಗುಳ ತಂದರೆ ಕರೆಯದೇ ತನ್ನ ಬಳಗವನೆಲ್ಲವನು?' ಎಂಬ ವಚನವನ್ನೂ ಇಲ್ಲಿ ಉದ್ಧರಿಸಬಹುದು.

ಕ್ರೈಸ್ತ ಚರ್ಚ್‌ಪಿತೃಗಳು ಪಾಪಗಳ ಯಾದಿಯನ್ನೂ, ಅವುಗಳಿಗೆ ಪ್ರಾಯಶ್ಚಿತ್ತಗಳ ಸರಮಾಲೆಯನ್ನೂ ಸಿದ್ಧಪಡಿಸಿದುದನ್ನು ಹಿಂದೆ ನೋಡಿದ್ದೇವೆ. ವೈದಿಕ ಪರಂಪರೆಯಲ್ಲಿಯೂ ಇದು ವಿಧವಿಧ ರೂಪವನ್ನು ತಾಳಿದೆ. ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾಗಲೇ ಬೇಕು. ಈ ಪ್ರಾಯಶ್ಚಿತ್ತಗಳು ಬರಬರುತ್ತ ದುಬಾರಿಯಾಗಿ ಪಾಪಿಗಳ ಉದ್ಧಾರದ ಹೆಸರಿನಲ್ಲಿ ಅವರನ್ನು ನಿರ್ಗತಿಕರನ್ನಾಗಿ ಮಾಡತೊಡಗಿದುವು. ಶರಣರು ಈ ಪ್ರಾಯಶ್ಚಿತ್ತದ ದುಬಾರಿ ನೀತಿಯನ್ನು ಬಿಟ್ಟು ಪಶ್ಚಾತ್ತಾಪದ ಸುಲಭ ನೀತಿಯನ್ನು ಬೋಧಿಸಿದರು.

'ಎಲವೊ ಎಲವೋ ಪಾಪಕರ್ಮವ ಮಾಡಿದವನೆ.
ಎಲವೊ, ಎಲವೋ ಬ್ರಹ್ಮ ಹತ್ಯವ ಮಾಡಿದವನೆ.

ಒಮ್ಮೆ ಶರಣೆನ್ನೆಲವೂ। ಒಮ್ಮೆ ಶರಣೆಂದರೆ ಪಾಪಕರ್ಮ ಓಡುವುದು!
ಸರ್ವಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೈದವು!
ಓರ್ವಂಗ ಶರಣೆನ್ನು, ನಮ್ಮ ಕೂಡಲ ಸಂಗಮದೇವಂಗೆ!'

ಇದೇ ರೀತಿ, ಸಿರಿ ಪುಣ್ಯದ ಫಲ, ಬಡತನ ಪಾಪದ ಫಲವೆಂದ ಅವರ ವಾದವನ್ನೂ, ಎಲ್ಲ ಕರ್ಮದ ಫಲವೆಂಬ ವೈದಿಕರ ವಾದವನ್ನೂ 'ಕಾಯಕವೇ ಕೈಲಾಸ'ವೆಂಬ ಸೂತ್ರದಿಂದ ಖಂಡಿಸಿದರು. ಅಲ್ಲದೆ ಧನವನ್ನು ಪುಣ್ಯವಂತ ಮಾತ್ರವಲ್ಲ, ಪಾಪಿಯೂ ಗಳಿಸಬಹುದೆಂದೂ, ಆ ಪಾಪಿಯ ಧನಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದೆಂದೂ, ಮನೆಯ ಸಿರಿವಂತಿಕೆಗಿಂತ, ಮನದ ಸಿರಿವಂತಿಕೆಯೇ ಶ್ರೇಷ್ಠವೆಂದೂ, ಸಿರಿಗರ ಹೊಡೆದವರಿಗೆ ಬಡತನವೇ ಮಂತ್ರವಾದಿಯೆಂದೂ, ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದೇ ಲಿಂಗಕ್ಕೆ ಅರ್ಪಿತ, ಉಳಿದುದು ಅನರ್ಪಿತವೆಂದೂ ಸಾರಿ, 'ಕುದುರೆ–ಸತ್ತಿಗೆಯವರ ಕಂಡರೆ ಹೊರಳಿ ಬಿದ್ದು ಕಾಲಹಿಡಿದವರ, ಬಡಭಕ್ತರು ಬಂದರೆ ಎಡೆಯಿಲ್ಲ ಅತ್ತ ಸನ್ನಿ' ಎನ್ನುವವರ ಖಂಡಿಸಿದುವಲ್ಲದೆ ಸ್ವಾವಲಂಬನೆಯನ್ನು ತಮ್ಮ ನೀತಿಸಂಹಿತೆಯ ಅಂಗವನ್ನಾಗಿ ಮಾಡಿದ ಹಿರಿಮೆ ಶರಣರದು:

'ಮಾಡುವ ನೀಡುವ ಭಕ್ತನ ಕಂಡರೆ ನಿಧಿ ನಿಧಾನವ
ಕಂಡಂತಾಯಿತು:
ಪಾದೋದಕ ಪ್ರಸಾದ ಜೀವಿಯ ಕಂಡರೆ ಹೋದ
ಪ್ರಾಣ ಬಂದಂತಾಯಿತು;
ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚ
ಶರಣರ ಕಂಡರೆ
ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆನು!'

ಕಾಂಟ್ ಒಂದು ಕೃತ್ಯವನ್ನು ಅದರ ಪರಿಣಾಮದಿಂದಲ್ಲ. ಅದರ ಹಿಂದಿನ ಪ್ರೇರಣೆಯಿಂದ ಪರೀಕ್ಷಿಸಬೇಕೆಂದು ಹೇಳಿರುವನಷ್ಟೆ? ಶರಣರ ನೀತಿ ಸಂಹಿತೆಯಲ್ಲಿ ಈ ಅಂಶವೂ ಸೇರಿದೆ;

'ನರ ಕುರಂಬಿನಲೆಚ್ಚ, ಅವಗೊಲಿದೆಯಯ್ಯಾ!
ಅರಳಂಬಿನಲೆಚ್ಚ ಕಾಮನನುರಹಿದೆಯಯ್ಯಾ!
ಇರುಳು ಹಗಲೆನ್ನದೆ ಪ್ರಾಣ ಘಾತವ ಮಾಡಿದ ಬೇಡನ
ಕೈಲಾಸಕೊಯ್ಯೆಯಯ್ಯಾ'
ಎಂಬ ಬಸವಣ್ಣನವರ ವಚನದಲ್ಲಿ ಇದು ಧ್ವನಿತವಾಗುತ್ತದೆ.

ಹೆಗಲಿನಂತೆ ರಾಜ್ಯ ವ್ಯವಸ್ಥೆಯಲ್ಲಿ ಪರ್ಯವಸಾನವಾಗುವ ಉತ್ಕ್ರಾಂತಿವಾದದಲ್ಲಾಗಲಿ ವ್ಯಕ್ತಿಯ ನೆಲೆಯಲ್ಲಿ ಮಾತ್ರ ತೀರ್ಮಾನಿಸಬೇಕಾದುದೆಂಬ 'Either Or' ವಾದವಲ್ಲಾಗಲಿ ಶ್ರದ್ಧೆ ವಹಿಸಲಿಲ್ಲ ಶರಣರು. ಅನುಭವ ಮಂಟಪ'ದ ಅಮೃತಮಂಥನದ ಫಲವಾಗಿ ವ್ಯಷ್ಟಿ ಸಮಷ್ಟಿಗಳೆರಡನ್ನೂ ತನ್ನ ತೆಕ್ಕೆಯಲ್ಲಿ ತೆಗೆದುಕೊಳ್ಳುವ ನೀತಿಸಂಹಿತೆ ಅವರಿಂದ ರೂಪತವಾಯಿತು. ಸ್ಪೆನ್ಸರ್ ನೀಶೆಯವರ ಬಲವಂತನೇ ನೀತಿವಂತನೆಂಬ ವಾದಕ್ಕಂತೂ ಈ ಸಂಹಿತೆಯಲ್ಲಿ ಎಡೆಯೇ ಇಲ್ಲ. ದೀನ–ದಲಿತ–ದುರ್ಬಲರ ಉತ್ಥಾನಕ್ಕಾಗಿ ರೂಪಿತವಾದ ನೀತಿ ಸಂಹಿತೆಯಿದು.

ಈಗ ಕೆಲವು ವಚನಗಳ ಮೂಲಕ ಶರಣರ ನೀತಿಸಂಹಿತೆಯ ಸ್ವರೂಪವನ್ನರಿಯೋಣ. ಯಾವುದನ್ನು ಮಾಡಬಾರದು, ಯಾವುದನ್ನು ಮಾಡಬೇಕು – ಎಂಬ ನೇತ್ಯಾತ್ಮಕ ಮತ್ತು ಇತ್ಯಾತ್ಮಕ ವಿಧಾನಗಳೆರಡರಿಂದಲೂ ತಮ್ಮ ನೀತಿಸಂಹಿತೆಯನ್ನು ರೂಪಿಸಿದ್ದಾರೆ ಶರಣರು.

ಇದು ನೇತ್ಯಾತ್ಮಕ ವಿಧಾನ :

'ಕಳಬೇಡ, ಕೊಲಬೇಡ, ಹುಸಿಯ ನುಡಿಯಲು
ಬೇಡ, ಮುನಿಯ ಬೇಡ, ತನ್ನ ಬಣ್ಣಿಸಬೇಡ
ಇದಿರ ಹಳಿಯಲು ಬೇಡ.'

ಇದು ಇತ್ಯಾತ್ಮಕ ವಿಧಾನ :

'ಭಕ್ತನು ಶಾಂತನಾಗಿರಬೇಕು. ತನ್ನ ಕುರಿತು ಬಂದ ಠಾವಿನಲಿ ಸತ್ಯನಾಗಿರಬೇಕು, ಭೂತಹಿತ ವಚನವ ನುಡಿಯಬೇಕು, ಲಿಂಗಜಂಗಮದಲ್ಲಿ ಕುಂದು ನಿಂದೆಗಳಿಲ್ಲದಿರಬೇಕು, ಸಕಲ ಪ್ರಾಣಿಗಳು ತನ್ನಂತೆ ಭಾವಿಸಬೇಕು.

ತನು–ಮನ–ಧನ ಗುರುಲಿಂಗ ಜಂಗಮಕ್ಕೆ
ಸಮರ್ಪಿಸಬೇಕು
ಅಪಾತ್ರದಾನ ಗೈಯದಿರಬೇಕು,
ಸಕಲ ಇಂದ್ರಿಯಗಳೂ ತನ್ನ ವಶಗತ
ವಾಗಿರಬೇಕು.'

ಈ ಎರಡು ವಿಧಾನಗಳನ್ನು ಒಂದೇ ವಚನದಲ್ಲಿ ಅಳವಡಿಸಿ ತಮ್ಮ ಅರಿವಿನ ಹಿರಿಮೆಯನ್ನು ಮೆರೆದಿದ್ದಾರೆ ಚನ್ನಬಸವಣ್ಣನವರು:

'ಶಿವಭಕ್ತಿಯುಳ್ಳವಂಗೆ ಕಾಮ ಬೇಡ, ಕ್ರೋಧ ಬೇಡ, ಲೋಭ ಬೇಡ,
ಮೋಹ ಬೇಡ, ಮದ ಬೇಡ, ಮತ್ಸರ ಬೇಡ :

ಶಿವಭಕ್ತಿಯುಳ್ಳವಂಗೆ ಕಾಮ ಬೇಕು, ಕ್ರೋಧ ಬೇಕು, ಮೋಹ ಬೇಕು.
ಮದ ಬೇಕು, ಮತ್ಸರ ಬೇಕು:
ಬೇಕೆಂಬುದಕ್ಕಾವ ಗುಣ? ಬೇಡವೆಂಬುದಕ್ಕಾವ ಗುಣ?
ಕಾಮ ಬೆಕು ಲಿಂಗದಲ್ಲಿ; ಕ್ರೋಧ ಬೇಕು ಕರಣಂಗಳಲ್ಲಿ;
ಲೋಭ ಪಾದೋದಕ ಪ್ರಸಾದದಲ್ಲಿ; ಮೋಹ ಬೇಕು
ಗುರು–ಲಿಂಗ–ಜಂಗಮದಲ್ಲಿ;
ಮದ ಬೇಕು ಶಿವಾಚಾರ ಘನವೆಂಬಲ್ಲಿ : ಮತ್ಸರ ಬೇಕು
ಹೊನ್ನು–ಹೆಣ್ಣು–ಮಣ್ಣಿನಲ್ಲಿ;

ಇಂತೀ ಷಡ್ಗುಣವಿರಬೇಕು.
ಬೇಡೆಂಬುದಕ್ಕಾವ ಗುಣ?
ಕಾಮ ಬೇಡ ಪರಸ್ತ್ರೀಯರಲ್ಲಿ; ಕ್ರೋಧ ಬೇಡ ಗುರುವಿನಲ್ಲಿ;
ಲೋಭ ಬೇಡ ತನು ಮನದಲ್ಲಿ;
ಮೋಹ ಬೇಡ ಸಂಸಾರದಲ್ಲಿ; ಮದ ಬೇಡ ಶಿವಭಕ್ತರಲ್ಲಿ;
ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ;
ಇಂತೀ ಷಡ್ಗುಣವನರಿದು ಮರೆಯಬಲ್ಲಡೆ ಆತನೆ ಸದ್ಭಕ್ತ ಕಾಣಾ!'

ಇದು ಪ್ರಶ್ನಿಸಿ ನಿರ್ಣಯಿಸುವ ಮನೋಹರ ವಿಧಾನ:
'ಕಾಮವೇಕೊ ಲಿಂಗಪ್ರೇಮಿಯೆನಿಸುವಂಗೆ?
ಕ್ರೋಧವೇಕೊ ಶರಣವೆದ್ಯನೆನಿಸುವಂಗೆ?
ಲೋಭವೇಕೊ ಭಕ್ತಿಲಾಭವ ಬಯಸುವಂಗೆ?
ಮೋಹವೇಕೊ ಪ್ರಸಾದವೇದ್ಯನೆನಿಸುವಂಗೆ?
ಮದ ಮತ್ಸರವುಳ್ಳವಂಗೆ ಹೃದಯ ಶುದ್ಧವೆಲ್ಲಿಯದೊ?
ಹದುಳಿಗರಾದಲ್ಲಿಪ್ಪ, ನಮ್ಮ ಕೂಡಲ ಸಂಗಮದೇವ.'

ಶರಣರು ನೀತಿಗೆ ಕೊಟ್ಟ ಮಹತ್ವ ಅಷ್ಟಾವರಣಗಳಲ್ಲಿಯೂ ಅದು ಸೇರಿರುವುದರಿಂದ; ನೀತಿಸಂಹಿತೆಗೆ ಪೂರಕವಾಗಿ ಪಂಚಾಚಾರಗಳೆಂಬ ಆಚಾರ ಸಂಹಿತೆಯನ್ನೂ ಅವರು ರೂಪಿಸಿರುವುದರಿಂದ; ಮತ್ತು ಶೀಲಗಳನ್ನು ಜೋಡಿಸಿರುವುದರಿಂದ. ಷಟ್‌ಸ್ಥಲದಲ್ಲಿಯೂ ಆಯಾ ಸ್ಥಲಕ್ಕೆ ಅನುಗುಣವಾದ ನೀತಿ ಸೂತ್ರಗಳನ್ನು ಸಮೀಕರಿಸಿರುವುದರಿಂದ ಸಿದ್ಧವಾಗುತ್ತದೆ. ಉದಾ:

'ಭಕ್ತನಾದಡೆ ತನುಮನದಾಸೆಯನಳಿದಿರಬೇಕು;
ಮಹೇಶ್ವರನಾದರೆ ಪರಧನ. ಪರಚಿಂತೆ, ಪರಾಂಗನೆಯರ
ಎಡೆಯಳಿದಿರಬೇಕು;

ಪ್ರಸಾದಿಯಾದರೆ ಸುಖರುಚಿಯವಗ್ರಹವಂ ಮರೆದು ಪ್ರಸಾದ
ಘಟವಳಿಯದೆ ಉಳಿದಿರಬೇಕು;
ಪ್ರಾಣಲಿಂಗಿಯಾದರೆ ಘಟದಾಸೆಯ ತೊರೆದು ಪ್ರಾಣಲಿಂಗದೊಳಗೆ
ಬೆರೆಸಿ ಬೇರಿಲ್ಲದಿರಬೇಕು;
ಲಿಂಗೈಕ್ಯನಾದಡೆ ಅಪ್ಯಾಯನದೆಡೆಯಡಗಿ ಸುಖ ದುಃಖವಂ
ತಾಳದೆ ನಿಭ್ರಾಂತನಾಗಿರಬೇಕು.'
ಸೊಡ್ಡಳ ಬಾಚರಸ

ತನು ಮನಗಳಲ್ಲಿ ಮಾತ್ರವಲ್ಲ ಧನದಲ್ಲಿಯೂ ಶುಚಿಯಾಗಿ, ಪ್ರಾಣದಲ್ಲಿ ನಿರ್ಭಯನಾಗಿ, ಮನದ ಮುಂದಣ ಆಸೆಯೇ ಮಾಯೆಯೆಂದು ನಂಬಿ, ಆತ್ಮಸ್ತುತಿ ಪರನಿಂದೆಗಳಿಗೆ ಎಡೆಗೊಡದೆ, ಸ್ತುತಿನಿಂದೆಗಳು ಬಂದರೆ ಸಮಾಧಾನಿಯಾಗಿದ್ದು, ಮೃದುವಚನಗಳೆ ಸಕಲ ತಪಂಗಗಳೆಂದು ನಂಬಿ, ಸದುವಿನಯವೇ ಸದಾಶಿವನ ಒಲುಮೆಯಂಎದು ತಿಳಿದು. ಕಾಗೆ ಕೋಳಿಗಳಂತೆ ಹಂಚಿಕೊಂಡು ಉಣ್ಣುವುದನ್ನು ಕಲಿತು. ನಿಸರ್ಗದೊಡನೆ ಸಮರಸರಾಗಿ ಸಕಲ ಜೀವರಾಶಿಗಳಿಗೆ ಲೇಸನೇ ಬಯಸುತ್ತ, ಲೇಸನೇ ಗೈಯುತ್ತ, ಲೇಸೆನಿಸಿಕೊಂಡು ಬದುಕಬೇಕೆಂಬುದೇ ಶರಣರ ನೀತಿಸಂಹಿತೆಯ ಸಾರ. ಇದು ದುಡಿತದ ನೀತಿಯನ್ನೂ, ಸ್ವಾವಲಂಬನೆಯ ರೀತಿಯನ್ನೂ, ಸಿರಿಯ ಹಸುಗೆಯ ಪದ್ಧತಿಯನ್ನೂ, ಪ್ರಸಾದ – ದಾಸೋಹಗಳ ಪರಿಕಲ್ಪನೆಯನ್ನೂ, 'ಯತ್ರ ಜೀವಸ್ತತ್ರ ಶಿವ'ನೆಂಬ ಸೂತ್ರವನ್ನೂ, ಸರ್ವಜೀವ ದಯಾಪಾರಿತ್ವದ ಧೋರಣೆಯನ್ನೂ, ಅಂತರಂಗದ ಅರಿವು ಬಹಿರಂಗದ ಕ್ರಿಯೆಯಾಗುವ ಬಟ್ಟೆಯನ್ನೂ ಒಳಗೊಂಡಿರುವುದು ಅವರ ಹೆಗ್ಗಳಿಕೆ. ಈ ನೀತಿ ಸಂಹಿತೆಯನ್ನು ಆಚರಿಸುವ ಭಕ್ತ ಹೇಗಿರುತ್ತಾನೆ? ಈ ಪ್ರಶ್ನೆಗೆ ಏಲೇಶಕೇತಯ್ಯ ಉತ್ತರಿಸಿದ್ದಾನೆ:

'ಆತ ಅಂಗವ ತೊಟ್ಟರೇನು, ಪರಾಂಗನೆಯ ಸೋಂಕ'
ಕರವಿದ್ದರೇನು, ಮತ್ತೊಂದನಪಹರಿಸಿ ತೆಗೆಯ;
ಕರ್ಣವಿದ್ದರೇನು, ಮತ್ತೊಂದು ಅನ್ಯ ಶಬ್ದವ ಕೇಳ;
ಕಂಗಳಿದ್ದಡೇನು, ಲಿಂಗವಲ್ಲದುದ ನೋಡ;
ನಾಸಿಕವಿದ್ದಡೇನು, ಅರ್ಪಿತವಲ್ಲದುದ ವಾಸಿಸಪ
ಜಿಹ್ವೆಯಿದ್ದಡೇನು, ಪ್ರಸಾದವಲ್ಲದುದ ಸ್ವೀಕರಿಸ;
ಇಂತೀ ಎಲ್ಲದರಲ್ಲಿ ಸರ್ವ ವ್ಯವಧಾನಿಯಾಗಿ
ನಡೆ, ನುಡಿ, ಅರಿವು ಶುದ್ಧಾತ್ಮನು – ಏಲೇಶ್ವರ ಲಿಂಗವು ತಾನೇ!'

ಇಂತಿದು ಮಾನವನ ಒಳಗು–ಹೊರಗು. ನಡೆ–ನುಡಿ. ಅರಿವು–ಇರವುಗಳನ್ನು ಶುದ್ಧೀಕರಿಸುವ ಶರಣರ ನೀತಿಸಂಹಿತೆ.

* * *

## ೩

# ಆಚಾರ ಸ್ವರ್ಗದ ಆರೋಹಣ

ಸ್ವರ್ಗ ನಗರಕಗಳ ಕಲ್ಪನೆ ವೈದಿಕ ಧರ್ಮಕ್ಕೆ ಮಾತ್ರ ಸೀಮಿತವಾಗಿಲ್ಲ. ಕ್ರೈಸ್ತ, ಇಸ್ಲಾಂ ಧರ್ಮಗಳಲ್ಲಿಯೂ ಇದೆ. ಪುಣ್ಯಕಾರ್ಯಗಳಿಂದ ಸ್ವರ್ಗ ಪ್ರಾಪ್ತಿಯೆಂಬ ಆಶ್ವಾಸನೆ ನೀಡಿ ಪುಣ್ಯ ಕಾರ್ಯಗಳತ್ತ ಜನರನ್ನು ಆಕರ್ಷಿಸುವುದು ಸ್ವರ್ಗ ಕಲ್ಪನೆಯ ಮೂಲೋದ್ದೇಶವಾಗಿದ್ದರೆ, ಪಾಪಕಾರ್ಯಗಳಿಂದ ನರಕವಾಸ ಲಭಿಸುವುದೆಂಬ ಎಚ್ಚರಿಕೆ ನೀಡಿ ಅವರನ್ನು ಪಾಪಾಭೀರುಗಳನ್ನಾಗಿ ಮಾಡುವುದು ನರಕ ಕಲ್ಪನೆಯ ಮೂಲೋದ್ದೇಶವಾಗಿರಬೇಕೆಂದು ಹೇಳಬಹುದಾಗಿದೆ. ಮೊದ ಮೊದಲು ಈ ಉದ್ದೇಶ ಈಡೇರಿರಬಹುದು. ಆದರೆ ಸ್ವರ್ಗದ ಆಶೆ ಸಕಾಮಭಕ್ತಿಯನ್ನೂ, ಸ್ವರ್ಗಕ್ಕೆ ಪರ್ಮಿಟ್ ಕೊಡುವ ಪೂಜಾರಿ–ಪುರೋಹಿತ–ಬಾಬಾ–ತಾತಾ. ತೀತೀಗಳನ್ನೂ ಹುಟ್ಟು ಹಾಕಿದಂತೆ ನರಕದಭಯ ಪ್ರಾಯಶ್ಚಿತ್ತ, ಶಾಂತಿ ಕರ್ಮ, ದಾನ, ದಕ್ಷಿಣೆ ಮೊದಲಾದುವನ್ನು ಹುಟ್ಟಿಸಿತು. ಸ್ವರ್ಗದ ಆಸೆ, ನರಕದ ಭಯಗಳೇ ಮಾನವನ ಧಾರ್ಮಿಕ ಜೀವನವನ್ನಷ್ಟೇ ಅಲ್ಲ, ಅವನ ಸಾಮಾಜಿಕ ಜೀವನವನ್ನೂ ನಿಯಂತ್ರಿಸುವ, ರೂಪಿಸುವ ಅಂಶಗಳಾದಾಗ ಅರೇಬಿಯಾದ ರಾಬಿಯಾ ತಾಯಿಯಂಥವರು ಎರಡನ್ನೂ ನಿರಾಕರಿಸುವ, ನಿಷೇಧಿಸುವ ಕಾರ್ಯ ಮಾಡಬೇಕಾಯಿತು. ಒಮ್ಮೆ ಆ ತಾಯಿ ಒಂದು ಕೈಯಲ್ಲಿ ಉರಿವ ಕೊಳ್ಳಿಯನ್ನೂ ಇನ್ನೊಂದು ಕೈಯಲ್ಲಿ ನೀರಿನ ಮಗಿಯನ್ನೂ ಹಿಡಿದು ಹೊರಟಿದ್ದಳಂತೆ. 'ಈ ಬೆಂಕಿ ನೀರುಗಳನ್ನು ಕೊಂಡು ಎಲ್ಲಿಗೆ ಹೊರಟಿರುವಿರಿ?' ಎಂದು ಕೇಳಿದಾಗ, ಈ ಬೆಂಕಿಯಿಂದ ಸ್ವರ್ಗಕ್ಕೆ ಕಿಚ್ಚು ಹಚ್ಚಲು, ಈ ನೀರಿನಿಂದ ನರಕದ ಜ್ವಾಲೆಗಳನ್ನು ಆರಿಸಲು ಹೊರಟಿದ್ದೇನೆ ಎಂದು ಉತ್ತರಿಸಿದಳಂತೆ. ಅಷ್ಟು ಹಿಂದೆಯೇ ಈ ಸ್ವರ್ಗ ನರಕ ಕಲ್ಪನೆಗಳ ದುಷ್ಪರಿಣಾಮಗಳು ಹರಡಿದ್ದುವೆಂಬುದನ್ನು ಈ ಸಂಗತಿ ಸ್ಪಷ್ಟ ಪಡಿಸುತ್ತದೆ.

ಆದರೆ ಧಾರ್ಮಿಕರ ನರನರಗಳಲ್ಲಿಯೂ ನೆತ್ತರಾಗಿ ಹರಿಯುತ್ತಿರುವ ಈ ಕಲ್ಪನೆಗಳನ್ನು ಇಷ್ಟು ಸುಲಭವಾಗಿ ಕಿತ್ತೊಗೆಯಲಾಗುವುದೆ? ಅಪ್ಸರೆಯರು, ಕಾಮಧೇನು, ಕಲ್ಪವೃಕ್ಷ, ನಂದನವನೇತ್ಯಾದಿಗಳಿಂದ ಕೂಡಿದ ಸ್ವರ್ಗ ಅದೆಷ್ಟು ಆಕರ್ಷಣೀಯ; ಕಾಳೋರಗ, ಉಗ್ರಜ್ವಾಲೆಗಳು, ಯಮದೂತರಿಂದ ಕೂಡಿರುವ ನರಕ ಅದೆಷ್ಟು ಭಯಾನಕ! ಸ್ವರ್ಗದ ಸಮ್ಮೋಹಕತೆಗೆ ಸೋಮರಸದ ಮಾದಕತೆಯೂ ಸೇರಿದರೆ ಅದರ ಎಳೆತ ಸೆಳೆತಗಳಿಗೆ

ಒಳಗಾಗದವರಾರು? ಋಗ್ವೇದೋಕ್ತ ಈ ಪಿತೃಲೋಕ ಚಿತ್ರ ಹೇಗಿದೆ?' ಶಾಖೋಪಶಾಖೆಗಳಿಂದ ಶೋಭಿಸುವ ಮರದ ನೆರಳಿನಲ್ಲಿ ಯಮದೇವನು ಇತರ ದೇವತೆಗಳೊಡನೆ ಸೋಮಪಾನ ಮಾಡುತ್ತಿರುತ್ತಾನೆ. ಮಧುರವಾದ ಮುರಲಿಯ ನಾದವೊಂದು ಕಡೆ ಕೇಳಿ ಬರುತ್ತಿದೆ. ಅವನನ್ನು ಮೃತನು ಸೇರಿ ಜರಾಮರಣದೂರನಾಗಿ ಸ್ವಚ್ಛಂದವಾದ ಸುಖವನ್ನು ಪಡೆಯುತ್ತಾನೆ. ಸಂಗ್ರಾಮಗಳಲ್ಲಿ ಕಾದು. ಮಡಿದವರಿಗೆ ಈ ಪರಮ ಸುಖವುಂಟಾಗುತ್ತದೆ. ಇವರಿಗಿಂತ ಅಧಿಕವಾಗಿ ಈ ಸುಖ ಯಾಗಾದಿಗಳನ್ನು ಮಾಡಿ. ವೈತಾನ ದಾನಾದಿಗಳನ್ನು ಮಾಡಿದವರಿಗೆ ದೊರಕೊಳ್ಳುವುದು' (ಋಗ್ವೇದ ಋಷಿ–೧೪)

ಇಲ್ಲಿ ಬರುವ ಯಮ ಮೃತ್ಯುದೇವತೆಯಲ್ಲ. ಸನ್ಮಾರ್ಗಿಗಳಿಗಾಗಿ ಸ್ವರ್ಗದ ಕಲ್ಪನೆ ಮೂಡಿದಂತೆ ದುರ್ಮಾರ್ಗಿಗಳಿಗಾಗಿ ನರಕದ ಕಲ್ಪನೆ ಇನ್ನೂ ಆಗ ಮೂಡಿರಲಿಲ್ಲ. ಜೈಮಿನೀಯ ಬ್ರಾಹ್ಮಣದಲ್ಲಿ ಈ ಕಲ್ಪನೆ ಮೂಡಿತ್ತು. (ಋಗಿ–೪–೨೫) ಆ ಮೇಲೆ ಸ್ವರ್ಗ ನರಕಗಳ ಕಲ್ಪನೆ ಇಲ್ಲಿ ಎಲ್ಲರ ಅಸ್ಥಿಗಳಲ್ಲಿ ನೆಣವಾಗಿ ಸೇರಿಬಿಟ್ಟಿತು. ನರಕದ ಕಲ್ಪನೆಯಿಂದ ಅಷ್ಟಿಷ್ಟು ಒಳ್ಳೆಯದಾಗಿರಬಹುದಾದರೂ ಸ್ವರ್ಗದ ಕಲ್ಪನೆಯಿಂದ ಅನಾಹುತ ಪರಂಪರೆಯೇ ಉದ್ಭವಿಸಿತು. ಇದಾಗಲೇ ಉಲ್ಲೇಖಿಸಿರುವಂತೆ ಸ್ವರ್ಗಕ್ಕೆ ಪರ್ಮಿಟ್ ಕೊಟ್ಟು ಅಮಾಯಕ ಭಕ್ತರನ್ನು ಸುಲಿಯುವ ಒಂದು ವರ್ಗವೇ ಹುಟ್ಟಿಕೊಂಡಿತು. ಇವರು ಸ್ವರ್ಗಕ್ಕೆ ಕಳುಹಿಸಿದವರೆಲ್ಲ ಅಲ್ಲಿಯೇ ಉಳಿಯುವುದಿಲ್ಲ. ಪುಣ್ಯ ಕ್ಷೀಣಿಸುತ್ತಲೇ ಮತ್ತೆ ಮರ್ತ್ಯಕ್ಕೆ ಬಂದು ತಾವು ಮಾಡಿದ ಪಾಪ ಕರ್ಮಗಳಿಗೆ ತಕ್ಕಂತೆ ನಿರ್ಗತಿಕರಾಗಿಯೋ, ಅಂಗವಿಕಲರಾಗಿಯೋ, ಅಸ್ಪೃಶ್ಯರಾಗಿಯೋ ಹುಟ್ಟುವರು.* ಸುಲಿಗೆ ನಿರಂತರವಾಗಿ ನಡೆಯಲು ಈ ಕಲ್ಪನೆ ಬೇಕಲ್ಲವೇ? ತಮಗೆ ತಮ್ಮ ಪಾಪಕ್ಕನುಗುಣವಾಗಿಯೇ ಈ ದುರವಸ್ಥೆ ಬಂದಿದೆಯೆಂದು ನಂಬಿದವರು ಆ ದುಃಸ್ಥಿತಿಯಿಂದ ಮೇಲೆದ್ದು ಬರುವ ಯೋಚನೆಯನ್ನೇ ಮಾಡುವುದಿಲ್ಲ. ಪ್ರತಿಭಟನೆಯ ಮಾತಂತೂ ದೂರವೇ ಉಳಿಯಿತು. ಅವರಿಗಿಂತ ಸುಸ್ಥಿತಿಯಲ್ಲಿರುವವರೂ ಅವರ ಬಗ್ಗೆ ಮರುಕ ಪಡಬೇಕಾಗಿಲ್ಲ. ಅವರ ಪಾಪಕ್ಕೆ ತಕ್ಕ ಜನ್ಮವನ್ನೇ ಅವರು ಪಡೆದಿರುರಾಗಿ ಅದನ್ನು ಅವರು ಅನುಭವಿಸಿಯೇ ಮುಗಿಸಬೇಕು:

ಇನ್ನೊಂದು ವಿಚಾರಣೀಯ ಅಂಶವೆಂದರೆ ಈ ಲೋಕ ಪಾಪಿಗಳಿಗಾಗಿ ಎಂಬ ಪರಿಕಲ್ಪನೆ. ಪುಣ್ಯ ಮಾಡಿದವರೆಲ್ಲ ಸ್ವರ್ಗಕ್ಕೆ ಹೋದರೆ, ಹೋದರೂ ಪುಣ್ಯ ತೀರುತ್ತಲೇ ಮರ್ತ್ಯಕ್ಕೆ ಮರಳುವುದಾದರೆ ಈ ಮರ್ತ್ಯ ಪಾಪಿಗಳ ಲೋಕವೇ ಎಂದು ತೀರ್ಮಾನಿಸಿದಂತಾಗುತ್ತದಲ್ಲವೆ? ಇದಕ್ಕೆದುರಾಗಿ 'ಮರ್ತ್ಯವೆಂಬುದು ಕರ್ತಾರನ ಕಮ್ಮಟ'ವೆಂದು ಉದಾತ್ತ ಪರಿಕಲ್ಪನೆಯನ್ನು ಮಂಡಿಸಿದರು ಬಸವಣ್ಣನವರು. ಹಳೆಯ ಪರಿಕಲ್ಪನೆಗಳನ್ನು ಹಳಿದು ತೃಪ್ತರಾಗದೆ ಅವುಗಳಿಗೆ ಸಮಂಜಸವಾದ ಹೊಸ

ಅರ್ಥಸಂಪತ್ತನ್ನು ನೀಡಿ ಶಾಪವಾಗಿದ್ದ ಅವುಗಳನ್ನು ವರಗಳಾಗುವಂತೆ ಮಾಡಿದರು. 'ದೇವಲೋಕ, ಮರ್ತ್ಯಲೋಕ ಬೇರಿಲ್ಲ ಕಾಣಿರೋ. ಸತ್ಯ ನುಡಿವುದೇ ದೇವಲೋಕ, ಮಿಥ್ಯ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ. ಅನಾಚಾರವೇ ನರಕ' ಎಂಬ ದಿವ್ಯ ಪರಿಕಲ್ಪನೆಗಳನ್ನು ಎಲ್ಲರ ಮುಂದಿಟ್ಟರು.

'ಕಾಯಕವೇ ಕೈಲಾಸ', 'ಆಚಾರವೇ ಸ್ವರ್ಗ', 'ಅನಾಚಾರವೇ ನರಕ' ಎಂಥ ಅದ್ಭುತ ಪರಿಕಲ್ಪನೆಗಳಿವು; ಇವುಗಳಲ್ಲಿ 'ಆಚಾರವೇ ಸ್ವರ್ಗ' ಎಂಬ ಸಾರೋಕ್ತಿಯ ವಿವೇಚನೆ ಈ ಲೇಖನದ ಉದ್ದೇಶ. ಬಸವಾದಿ ಪ್ರಮಥರ ಪ್ರಕಾರ 'ಆಚಾರ ಸ್ವರ್ಗ ಯಾವುದು? ಅದರ ಆರೋಹಣದ ಬಗೆ ಯಾವುದು? ಅದರ ವೈಶಿಷ್ಟ್ಯವೇನು? ಇತ್ಯಾದಿಗಳನ್ನಿಲ್ಲಿ ವಿವೇಚಿಸೋಣ.

'ಆಚಾರಸಂಹಿತೆ'ಯೊಂದು ಇಲ್ಲದಿದ್ದುದೇ ಸಂಸದೀಯ ವ್ಯವಹಾರಗಳಿಂದ ಪಂಚಾಯತಿ ವ್ಯವಹಾರಗಳವರೆಗೆ ಎಲ್ಲ ರಂಗಗಳಲ್ಲಿಯೂ ಬಿಕ್ಕಟ್ಟುಗಳು ತಲೆದೋರಿರುವುದು ಎಲ್ಲರ ಗಮನಕ್ಕೆ ಬಂದಿರುವ ವಿಚಾರ. ಇಂದಿಗೂ ಮುಗಿಲ ಮಲ್ಲಿಗೆಯಾಗಿರುವ 'ಆಚಾರಸಂಹಿತೆ'ಯೊಂದನ್ನು ಎಂಟುನೂರಕ್ಕೂ ಮಿಕ್ಕಿದ ವರ್ಷಗಳಾಚೆ ರೂಪಿಸಿ, ಧರ್ಮಾಂಗವಾಗಿ ರೂಢಿಸಿ ಹೋದ ಬಸವಾದಿ ಪ್ರಮಥರ ದೂರದೃಷ್ಟಿ ಅನನ್ಯವಾದುದು. ಪಂಚಾಚಾರಗಳೇ ಅವರು ರೂಪಿಸಿದ ಆಚಾರ ಸಂಹಿತೆ. ಪಂಚಾಚಾರಗಳು ಒಳಗೊಳ್ಳದ ವಿಷಯವೇ ಇಲ್ಲ. ಇವು ಪ್ರಾಣ ಸ್ವರೂಪ ಲಿಂಗವಂತರಿಗೆ. 'ತನುವಿನ ಪ್ರಾಣ ಆಚಾರ, ಮನದ ಪ್ರಾಣ ಅನುಭಾವ' ಎಂದು ಚನ್ನಬಸವಣ್ಣನವರು ಹೇಳಿರುವುದು ಬಹಳ ಅರ್ಥವತ್ತಾಗಿದೆ.

**ಲಿಂಗಾಚಾರ :** ಪಂಚಾಚಾರಗಳಲ್ಲಿ ಇದು ಮೊದಲನೆಯದು. 'ಲಿಂಗವನಲ್ಲದೆ ಅನ್ಯವನರಿಯದಿಹುದೆ ಲಿಂಗಾಚಾರ'ವೆಂಬುದು ಚನ್ನಬಸವಣ್ಣನವರ ವ್ಯಾಖ್ಯೆಯಿದಕ್ಕೆ, ಇಷ್ಟಲಿಂಗದ ಕಲ್ಪನೆ ಅದ್ಭುತವಾದುದು. ಉರಿಲಿಂಗ ಪೆದ್ದಿಗಳ ಈ ವಚನ ಮನನೀಯ;

'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂದೆನಿಸುವ ಲಿಂಗವು, ಅತ್ಯತಿಷ್ಠದ್ದಶಾಂಗುಲ' ಎಂದೆನಿಸುವ ಲಿಂಗವು, 'ಚಕಿತಮಭಿದತ್ತೇ ಶ್ರುತಿರಪಿ' ಎಂದೆನಿಸುವ ಲಿಂಗವು, 'ಅಣೋರಣೀಯಾನ್ ಮಹತೋ ಮಹೀಯಾನ್' ಎಂದೆನಿಸುವ ಲಿಂಗವು, 'ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಹಃ' ಎಂದೆನಿಸುವ ಲಿಂಗವು, 'ಏಕ ಮೂರ್ತೀ ತ್ರಯೋರ್ಭಾಗಂ ಗರೋರ್ಲಿಂಗಂತು ಜಂಗಮಂ' ಎಂದೆನಿಸುವ ಲಿಂಗವು, ಶ್ರೀಗುರುಲಿಂಗ ಜಂಗಮ ರೂಪಾಗಿ, ಮತ್ತಂ 'ಇಷ್ಟ ಪ್ರಾಣಸ್ತಥಾ ಭಾವಸ್ತ್ರಿಥಾ

---

*** ಗೀತೆ ೯–೨೧– ಕ್ಷೀಣೇ ಪುಣ್ಯೇ ಮರ್ತ್ಯೆ. ಲೋಕಂ – ವಿಶಂತಿ**

ಚೈಕಂ ವರಾನನೆ' ಎಂದು, ತ್ರಿವಿಧವು ಏಕೀಭವಿಸಿ ಲಿಂಗರೂಪವಾಗಿ, ಎನ್ನ ಕರಸ್ಥಲಕ್ಕೆ ಬಂದು, ಕರತಲಾಮಲಕವಾಗಿ ತೋರುತ್ತಿದ್ದಾನೆ; ಆಹಾ ಎನ್ನ ಪುಣ್ಯವೆ; ಆಹಾ ಎನ್ನ ಭಾಗ್ಯವೆ; ಆಹಾ ಎನ್ನ ಸತ್ಯವೆ; ಆಹಾ ಎನ್ನ ನಿತ್ಯವೆ; ಆಹಾ ಎನ್ನ ಇರವೆ; ಆಹಾ ಎನ್ನ ಪರವೆ; ಆಹಾ ಎನ್ನ ಗುರುವೆ; ಆಹಾ ಎನ್ನ ಗಂಭೀರವೆ; ಆಹಾ ಎನ್ನ ಪರಂಜ್ಯೋತಿರ್ಮಯ ಲಿಂಗವೆ; ಶಿವಶಿವಾ, ಮಹಾದೇವ, ನೀವೇ ಬಲ್ಲಿರಿ – ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ....

ಲಿಂಗಧಾರಿಗಳೆಲ್ಲರಿಗೂ ಲಿಂಗದರ್ಶನದಿಂದ ಉರಿಲಿಂಗ ಪೆದ್ದಿಗಳ ಈ ಭೂಮಾನುಭೂತಿ. ಈ ರೋಮಾಂಚನ, ಈ ಧನ್ಯತೆ, ಈ ದಿವ್ಯಾನಂದ ದೊರೆಯಬೇಕು. ಆಗ ಬೇರೆ ದೇವರು ದಿಂಡರುಗಳ ಹಳವಂಡ ಹಾರಿ ಹೋಗುವುದು. ಲಿಂಗವನೆ ತಾಳಿ, ಲಿಂಗಕ್ಕಾಗಿ ಬಾಳಿ, ಲಿಂಗವನೆ ನೋಡಿ, ಲಿಂಗಕ್ಕಾಗಿ ಮಾಡಿ, ಅಂಗಗುಣಗಳು ಲಿಂಗಗುಣಗಳಾಗುವಂತೆ ಲಿಂಗಾಚಾರವನ್ನು ಆಚರಿಸಿ ಕೃತಾರ್ಥನಾಗುವವನು ಪ್ರಭುದೇವರಂತೆ ಹೀಗೆ ಪ್ರಶ್ನಿಸದಿರನು:

'ಅಮೃತ ಸಾಗರದೊಳಗಿದ್ದು ಆಕಳ ಚಿಂತೆಯೇಕೆ?
ಮೇರ ಮಂದಿರದೊಳಗಿದ್ದು ಜರಗ ತೊಳೆವ ಚಿಂತೆಯೇಕೆ?
ಶ್ರೀ ಗುರುವಿನೊಳಗಿದ್ದು ಮುಕ್ತಿಯ ಚಿಂತೆಯೇಕೆ?
ಕರಸ್ಥಳದೊಳಗೆ ಲಿಂಗವಿದ್ದ ಬಳಿಕ ಮತ್ತಿನ್ನಾವ ಚಿಂತೆಯೇಕೆ
ಹೇಳಾ ಗುಹೇಶ್ವರಾ?

**ಸದಾಚಾರ :** 'ಸಜ್ಜನ ಕಾಯಕದಲ್ಲಿ ತಂದು, ಗುರುಲಿಂಗ ಜಂಗಮಕ್ಕೆ ನೀಡಿ, ಸತ್ಯಶುದ್ಧನಾಗಿಹುದೆ ಸದಾಚಾರ' ಎಂದು ಚನ್ನಬಸವಣ್ಣನವರು ವ್ಯಾಖ್ಯಾನಿಸಿದ್ದಾರೆ. ಶರಣಧರ್ಮದ ಎರಡು ಪುಪ್ಪುಸಗಳಂತಿರುವ ಕಾಯಕ ಮತ್ತು ದಾಸೋಹಗಳೆರಡನ್ನೂ ಒಳಗೊಂಡಿದೆ ಈ ಆಚಾರ. 'ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ. ಸತ್ಯ ಶುದ್ಧವಿಲ್ಲದುದು ಕಾಯಕವಲ್ಲ' ಎಂಬ ಉರಿಲಿಂಗಪೆದ್ದಿಗಳ ಮಾತು ಕಾಯಕದ ಸೂತ್ರವೆಂದು ಹೇಳಬಹುದು. 'ಕಾಯಕವೇ ಕೈಲಾಸ'ವೆಂಬುದು ಮಹಾಸೂತ್ರ. 'ಕಾಯಕ' ದಾಸೋಹ' ಗಳೆರಡೂ ಪ್ರತ್ಯೇಕ ಲೇಖನ ಬಯಸುವ ಮಹಾತತ್ತ್ವಗಳು. ಅವುಗಳ ಬಗ್ಗೆ ಈ ಸೀಮಿತ ಸ್ಥಲದಲ್ಲಿ ವಿವೇಚಿಸುವುದು ಸುಸಾಧ್ಯವಲ್ಲ. ಎರಡು ವಚನಗಳನ್ನು ಅವಲೋಕಿಸಿ ಮುಂದೆ ಸಾಗೋಣ.

'ಕೃಷಿ ಕೃತ್ಯ ಆವ ಕಾಕದಿಂದಾದೊಡೇನು?
ತನುಮನ ಬಳಲಿಸಿ ಗಳಿಸಿ ತಂದು
ಗುರುಲಿಂಗ ಜಂಗಮಕ್ಕೆ ವೆಚ್ಚಿಸಿ ದಾಸೋಹವ ಮಾಡುವ
ಪರಮ ಸದ್ಭಕ್ತನ ಪಾದವ ತೋರಯ್ಯ ನನಗೆ;

ಆದೊಂತೆಂದೊಡೆ. ಆತನ ತನುಶುದ್ಧ ಆತನ ಮನಶುದ್ಧ
ಆತನ ನಡೆ ಶುದ್ಧ, ನಡೆಯೆಲ್ಲ ಪಾವನವು;
ಆತಂಗೆ ಉಪದೇಶ ಮಾಡಿದಾತನೇ ಪರಮ ಸದ್ಗುರು.
ಅಂತಪ್ಪ ಸದ್ಭಕ್ತನ ಮನೆಯ ಕೈಲಾಸವೆಂದು ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮನೇ ಜಗತ್ಪಾವನ;
ಇಂತಪ್ಪ ಗುರುಶಿಷ್ಯ ಜಂಗಮಕ್ಕೆ ನಾನು ನೆರೆ ನಂಬಿ
ನಮೋ ನಮೋ ಎಂದೆನಯ್ಯ – ಕೂಡಲ ಸಂಗಮದೇವಾ:

ಕಾಯಕ ದಾಸೋಹ ಕಡ್ಡಾಯ ಎಲ್ಲರಿಗೆ ಗುರುಗಳಿಗೆ ಜಂಗಮರಿಗೆ. ಲಿಂಗಕ್ಕೆ ಭಕ್ತರಿಗೆ, ಗಂಡಸರಿಗೆ, ಹೆಂಗಸರಿಗೆ –ಸರ್ವರಿಗೆ ಫಲ ಸ್ವಾವಲಂಬಿ ಸಮಾಜ, ಸಂಪತ್ತಿನ ಸರಿಯಾದ ಉತ್ಪತ್ತಿ ವಿತರಣೆ. ಆದರೆ ಕಾಯಕ ಸತ್ಯ ಶುದ್ಧವಾಗಿದ್ದರೇನೇ ದಾಸೋಹ ಸಫಲ; ಶಿವಲೆಂಕ ಮಂಚಣ್ಣರ ಈ ವಚನ ಅವಿಸ್ಮರಣೀಯ.

'ಕಾಯಕವೆಂದು ಕಾಯವ ಬಳಲಿಸದೆ
ತನುಕರಗದೆ, ಮನನೋಯದೆ,
ಬೇಡಿ ಕಾಡಿ ಮಾಡುವುದು ದಾಸೋಹವೇ?
ಆವ ಕಾಯಕವಾದಡೂ ಪ್ರಾಣವೇ ಕಡೆಯಾಗಿ,
ದ್ರವ್ಯ ಕಡೆಯಾಗಿ, ಚಿತ್ತ ಶುದ್ಧದಲ್ಲಿ ಬಂದುದಕ್ಕೆ ಸರಿಗಂಡು,
ದೇಹಿಗಳಿಗೆ ಒಂದೆ ಪ್ರಮಾಣದಲ್ಲಿ ಸರಿಗಂಡುದು
ಈಶಾನಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ತೃಪ್ತಿ'

**ಶಿವಾಚಾರ :** 'ಶಿವಭಕ್ತರಲ್ಲಿ ಕುಲಗೋತ್ರ ಜಾತಿ ವರ್ಣಾಶ್ರಮವನರಸದೆ ಅವರೊಕ್ಕುದ ಕೊಂಬುದೆ ಶಿವಾಚಾರ' ಎಂದಿದಕ್ಕೆ ಚನ್ನಬಸವಣ್ಣನವರ ವ್ಯಾಖ್ಯಾನ. ಪಂಚಾಚಾರಗಳಲ್ಲಿ ಶಿವಾಚಾರಕ್ಕೆ ಎಷ್ಟು ಪ್ರಾಧಾನ್ಯವಿದೆಯೆಂದರೆ ಲಿಂಗವಂತ ಧರ್ಮಕ್ಕೆ 'ಶಿವಾಚಾರ'ವೆಂಬುದು ಪರ್ಯಾಯ ನಾಮವಾಗಿಬಿಟ್ಟಿದೆ. ಬಸವಣ್ಣನವರೂ. ಇತರ ಕೆಲವು ಶರಣರೂ ಈ ಅರ್ಥದಲ್ಲಿ ಇದನ್ನು ಉಪಯೋಗಿಸಿದ್ದಾರೆ.ಕಾರಣ ಸ್ಪಷ್ಟ: ಇದು ಶಿವಭಕ್ತರಲ್ಲಿ ಕುಲಗೋತ್ರಗಳನ್ನು ನಿಷೇಧಿಸುತ್ತದೆ; ತನ್ಮೂಲಕ ಮೇಲು ಕೀಳುಗಳ ಕುಕಲ್ಪನೆಗಳನ್ನು ನಿಷೇಧಿಸುತ್ತದೆ; ಜಾತಿ ಕಲ್ಪನೆಯನ್ನು ನಿಷೇಧಿಸುತ್ತದೆ; ತನ್ಮೂಲಕ ಜಾತ್ಯತೀತ ಸಮಾಜ ಕಲ್ಪನೆಯನ್ನು ಪುರಸ್ಕರಿಸುತ್ತದೆ; ವರ್ಣಾಶ್ರಮ ವ್ಯವಸ್ಥೆಯನ್ನು ನಿಷೇಧಿಸುತ್ತದೆ; ತನ್ಮೂಲಕ ಅತಿವರ್ಣಧರ್ಮ ಸಾಧ್ಯವಷ್ಟೇ ಅಲ್ಲ, ಅನಿವಾರ್ಯವೆಂಬುದನ್ನು ಸಮರ್ಥಿಸುತ್ತದೆ. ಇನ್ನೂ ಮುಂದೆ ಹೋಗಿ ಎಲ್ಲರನ್ನೂ ಸಮಾನರೆಂದು ಕಂಡು ಅವರೊಕ್ಕುದನ್ನು ಕೊಳ್ಳಬೇಕೆಂದು ವಿಧಿಸುತ್ತದೆ. ಈ ಶಿವಾಚಾರ ಶರಣ ಧರ್ಮದ ಹೃದಯ. ನಾವಿದನ್ನು ನಿಜವಾಗಿಯೂ ಆಚರಿಸುತ್ತಿದ್ದೇವೆಯೇ? ಪ್ರತಿಯೊಬ್ಬ ವೀರಶೈವನೂ ಎದೆ ಮುಟ್ಟಿ ತನ್ನನ್ನು ತಾನೇ

ಕೇಳಿಕೊಳ್ಳಬೇಕಾದ ಪ್ರಶ್ನೆಯಿದು. ಶಿವಾಚಾರವನ್ನನುಸರಿಸದೆ ಇನ್ನೇನನನ್ನು ಅನುಸರಿಸಿದರೂ ವೀರಶೈವವತ್ವ ಅಳಪಡುವುದಿಲ್ಲ. ಈ ಎರಡು ವಚನಗಳ್ನಾದರೂ ಮರೆಯದಿರೋಣ.

'ಕುಲ ಎಷ್ಟು ಎಂದರೆ ಎರಡು ಕುಲ, ಭವಿ ಒಂದು ಕುಲ,
ಭಕ್ತ ಒಂದು ಕುಲ;
ಅಷ್ಟಾವರಣವೇ ಲಿಂಗವಾಗಿ, ಪಂಚಾಚಾರವೇ ಪ್ರಾಣವಾಗಿಪ್ಪ ಭಕ್ತರ
ಕುಲವನರಸಿದರೆ ಬಾರದ ಭವಂಗಳಲ್ಲಿ ಬಪ್ಪುದು ತಪ್ಪದು:
ನೀರಿನಿಂದಾದ ಮುತ್ತು ಮರಳಿ ಉದಕವಪ್ಪುದೆ?
ಮೃತ್ತಿಕೆಯಿಂದಾದ ಮಡಕೆ ಮರಳಿ ಮಣ್ಣಪ್ಪುದೆ?
ಮತ್ತೆ ವಾಮಮುನಿ ಹಿರಿಯ ಭಕ್ತರ ಮನೆಯ ಬಿನ್ನಹವ ಕೈಕೊಂಡು,
ಕುಲಕ್ಕಂಜಿ ಉಣಲೊಲ್ಲದೆ ಹೋದ ನಿಮಿತ್ತದಿಂದ
ಹಾವಿನಹಾಳ ಕಲ್ಲಯ್ಯಗಳ ಮನೆಯಲ್ಲಿ ಶ್ವಾನವಾಗಿ ಹುಟ್ಟಲ್ಲಿವೇ?
ಅದು ಕಾರಣ ಶಿವಭಕ್ತರೊಕ್ಕುಮಿಕ್ಕ ಪ್ರಸಾದವಕೊಳಬೇಕು ಎಂದಾತ
ನಮ್ಮ ಶಾಂತ ಕೂಡಲಸಂಗಮದೇವ' (ಗಣದಾಸಿ ವೀರಣ್ಣ)

'ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ,
ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ.
ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ.
ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ
ಪಂಚ ಮಹಾಪಾತಕ, ನರಕ ಕಾಣಾ, ಕೂಡಲ ಸಂಗಮದೇವಾ'

**ಗಣಾಚಾರ** : 'ಶಿವಾಚಾರದ ನಿಂದೆಯ ಕೇಳದಿಹುದೇ ಗಣಾಚಾರ' ಎಂದಿದರ ವ್ಯಾಖ್ಯೆ ಚನ್ನಬಸವಣ್ಣನವರಿಂದ. ತಾವು ನಂಬಿದ ತತ್ತ್ವಕ್ಕಾಗಿ ತ್ಯಾಗ ಮಾಡದವರು. ಬಲಿದಾನ ನೀಡದವರು ಆ ತತ್ವಕ್ಕೆ ಕಲಂಕ ಸ್ವರೂಪರು. ಶಿವಾಚಾರ ನಿಷ್ಠೆಯ ಒರೆಗಲ್ಲು ಗಣಾಚಾರ. ಶಿವಾಚಾರದ ಆಶಯಕ್ಕೆ ವಿರುದ್ಧವಾಗಿ ಯಾರಾದರೂ ಕುಲ ಜಾತಿ ಗೋತ್ರ ಸೂತ್ರ ವರ್ಣ ವರ್ಗಗಳ ಆಧಾರದ ಮೇಲೆ ಮೇಲು ಕೀಳಿನ ಕಾಳಕೂಟ ಹರಡ ಬಯಸಿದರೆ ಸುಮ್ಮನಿರುವುದು ಶ್ರೇಯಸ್ಕರವೇ? ಪ್ರತಿಭಟಿಸಲೇ ಬೇಕು. ಇಲ್ಲದಿದ್ದರೆ ತತ್ತ್ವ ಸತ್ತು ಶವವಾಗುತ್ತದೆ. ಶಿವಾಚಾರ ಶವಾಚಾರವಾಗುತ್ತದೆ. ಆಗ ಅಣ್ಣನವರ ಈ ವಚನ ನಮಗೆ ದಾರಿದೀಪವಾಗಬೇಕು.

'ಜೋಳವಾಳಿಯಾನಲ್ಲ; ವೇಳವಾಳಿಯಾನಲ್ಲ;
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯ;
ಕೇಳು ಕೂಡಲ ಸಂಗಮದೇವಾ, ಮರಣವೇ ಮಹಾನವಮಿ ನನಗೆ'

**ಭೃತ್ಯಾಚಾರ :** 'ಶಿವಶರಣರೇ ಹಿರಿಯರಾಗಿ, ತಾನೇ ಕಿರಿಯನಾಗಿ. ಭಯ ಭಕ್ತಿಯಿಂದ ಆಚರಿಸುವುದೇ ಭೃತ್ಯಾಚಾರ' ಎಂದು ಚನ್ನಬಸವಣ್ಣನವರು ಅರ್ಥವಿಸಿದ್ದಾರೆ. ಇದರ ಮಹತ್ವ ಸ್ವಯಂ ವೇದ್ಯ. 'ಸರ್ವರೂ ಶಿವನಂಶ'ವೆನ್ನುವ ಭಾವ ಬಲಿಯಬೇಕಾದರೆ ತನ್ನನ್ನುಳಿದು ಉಳಿದವರೆಲ್ಲರೂ ಶಿವಸ್ವರೂಪರೆಂದೂ. ತಾನೊಬ್ಬನೇ ಅವರ ಭಕ್ತನೆಂದೂ ನಂಬಿ ನಡೆಯಲೇಬೇಕು. ಅಣ್ಣನವರು ಇದನ್ನೇ ಮಾಡಿದರು. ಮಾಡಿ ಮಹೋನ್ನತಿಯನ್ನು ಪರಮ ಪದವಿಯನ್ನೂ ಪಡೆದರು. ಇದು ಎಂಥ ಅದ್ಭುತ ವಚನ;

'ಬಸವ ಬಾರಯ್ಯ;
ಮರ್ತ್ಯಲೋಕದೊಳಗೆ ಭಕ್ತರುಂಟೆ, ಹೇಳಯ್ಯ;
ಮತ್ತಾರೂ ಇಲ್ಲಯ್ಯ, ಮತ್ತಾರೂ ಇಲ್ಲಯ್ಯ;
ನಾನೊಬ್ಬನೇ ಭಕ್ತನು,
ಮರ್ತ್ಯದೊಳಗಣ ಭಕ್ತರೆಲ್ಲರೂ ಜಂಗಮ ಲಿಂಗ ನೀನೇ ಅಯ್ಯಾ
ಕೂಡಲ ಸಂಗಮದೇವಾ'

ಇಂತಿದು ಆಚಾರ ಸ್ವರ್ಗ – ಪಂಚಾಚಾರರೂಪೀ ಸ್ವರ್ಗ. ಇಲ್ಲಿ ಆಚಾರ ಅತ್ಯುನ್ನತಿಯನ್ನು ಪಡೆದುಕೊಂಡಿದೆ. ಮಡಿ–ಮೈಲಿಗೆ, ಉಂಬುದು, ಉಡುವುದು, ಕೊಂಬುದು, ಕೊಳುವುದು ಇತ್ಯಾದಿಗಳನ್ನು ಮೀರಿ ಮೇಲೇರಿ ಪರಮೋಚ್ಚಸ್ಥಿತಿಗೆ ನಮ್ಮನ್ನು ಕರೆದೊಯ್ಯುವ ಆಚಾರಗಳ ಸ್ವರ್ಗ. ಈ ಸ್ವರ್ಗಾರೋಹಣ ಗುರಿಯಾಗಲಿ – ಕಾಲ್ಪನಿಕ ಸ್ವರ್ಗದ ಆರೋಹಣವಲ್ಲ. ಈ ಆಚಾರ ಸಂಹಿತೆಯನ್ನುಳಿದು ನಡೆದರೆ ಏನಾಗುವುದೆಂಬುದು ಈ ವಚನದಲ್ಲಿ ಚಿತ್ರಿತವಾಗಿದೆ.

'ಆಚಾರವುಳ್ಳರೆ ಗುರು, ಆಚಾರವುಳ್ಳರೆ ಲಿಂಗ, ಆಚಾರವುಳ್ಳರೆ
ಜಂಗಮ.
ಆಚಾರವುಳ್ಳರೆ ಪಾದೋದಕ, ಆಚಾರವುಳ್ಳರೆ ಪ್ರಸಾದ,
ಆಚಾರವುಳ್ಳರೆ ಭಕ್ತ,
ಆಚಾರವುಳ್ಳರೆ ದಾಸೋಹ; ಇದು ಕಾರಣ,
ಆಚಾರವಿಲ್ಲದಿರ್ದೊಡೆ ಗುರುವಲ್ಲ, ನರನು;
ಆಚಾರವಿಲ್ಲದಿರ್ದೊಡೆ ಲಿಂಗವಲ್ಲ, ಶಿಲೆ;
ಆಚಾರವಿಲ್ಲದಿರ್ದೊಡೆ ಜಂಗಮವಲ್ಲ, ವೇಷಧಾರಿ,
ಆಚಾರವಿಲ್ಲದಿರ್ದೊಡೆ ಪಾದೋದಕವಲ್ಲ, ನೀರು;
ಆಚಾರವಿಲ್ಲದಿರ್ದೊಡೆ ಪ್ರಸಾದವಲ್ಲ, ಅಶನ;
ಆಚಾರವಿಲ್ಲದಿರ್ದೊಡೆ ಭಕ್ತನಲ್ಲ, ಭೂತ ಪ್ರಾಣಿ;

ಆಚಾರವಿಲ್ಲದಿರ್ದೊಡೆ ದಾಸೋಹದ ಮನೆಯಲ್ಲ, ವೇಶಿಯ
ಗುಡಿಸಲು'

(ಚನ್ನಬಸವಣ್ಣ)

ಈ ದುಃಸ್ಥಿತಿ ಶರಣ ಧರ್ಮಕ್ಕೆ ಬರದಿರಬೇಕಾದರೆ ನಾವೆಲ್ಲಾ ಆಚಾರ ಸ್ವರ್ಗದ ಆರೋಹಣ ಮಾಡಬೇಕು. ಮಾಡೋಣ.

* * *

# ೪

# ಪರಿಶುದ್ಧತೆ ... ಶರಣರು ಕಂಡಂತೆ

ಮಲತ್ರಯಾವೃತವಾದ ಶಿವಸ್ವರೂಪವೇ ಜೀವವೆನ್ನಿಸಿಕೊಳ್ಳುವ್ಯದೆಂದು ನಂಬಿದ್ದ ಬಸವಾದಿ ಪ್ರಮಥರು ಪರಿಶುದ್ಧತೆ ಜನ್ಮಸಿದ್ಧವಾದುದೆಂದು ಹೇಗೆ ಹೇಳಿಯಾರು? ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಿಗೆ ತಗಲಿಕೊಳ್ಳುವ ಕಾರ್ಮಿಕ. ಮಾಯಾ ಹಾಗೂ ಆಣವ ಮಲಗಳ ನಿವಾರಣೆಯಾಗುವವರೆಗೆ ಜೀವನಿಗೆ ಅಶುದ್ಧತೆ ತಪ್ಪಿದ್ದಲ್ಲ. ಅಶುದ್ಧಿಯೊಡನೆಯೇ ಉದಿಸಿದ್ದರೂ ಅಶುದ್ಧನಾಗಿ ಉಳಿಯದೆ, ಅಂತರಂಗ ಬಹಿರಂಗ ಶುದ್ಧಿಗಳನ್ನು ಸಾಧಿಸಿಕೊಂಡು, ಪರಿಪೂರ್ಣ ಪರಿಶುದ್ಧಿಯನ್ನು ಪಡೆದುಕೊಳ್ಳುವುದೇ ಗುರಿಯಾಗಬೇಕು ಜೀವಿಗೆ. ಜಗತ್ತು, ಸಮಾಜ, ಜೀವನ ಅದೆಷ್ಟೇ ಅಶುದ್ಧವಾಗಿದ್ದರೂ ಶುದ್ಧವಾಗಿ ಉಳಿಯಬೇಕು. ಬೆಳೆಯಬೇಕು ಎಂಬ ಬಯಕೆ ಬಲವಾದರೆ ಶುದ್ಧಿ ಸಿದ್ಧಿಸದೆ? ಪರಿಶುದ್ಧಿಯ ಪ್ರಾಪ್ತಿಗೆ ಅಶುದ್ಧಿ ತೊಡಕಾಗದೆ ತೊಡವಾಗುವುದೂ ಸಾಧ್ಯ.

> 'ಪಂಕವಿಲ್ಲದೆ ಕಮಲಕ್ಕೆ ಸುಲಲಿತವೆಂತಪ್ಪುದಯ್ಯ?
> ಹೊನ್ನು, ಹೆಣ್ಣು, ಮಣ್ಣು ಇಲ್ಲದೆ
> ದೇವತಾಯೋಗ್ಯವೆಂತಪ್ಪುದಯ್ಯ?
> ಕಮಲ ಪಂಕದಲ್ಲಿ ವರ್ತಿಸಿದಂತೆ
> ಇಹರು ನಿಮ್ಮ ಶರಣರು, ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.'

ಕಾರ್ಮಿಕ ಮಲದ ಪ್ರತೀಕವೆನಿಸಬಹುದಾದ ಹೊನ್ನು, ಮಾಯಾ ಮಲದ ಸಂಕೇತವೆನಿಸಬಹುದಾದ ಹೆಣ್ಣು. ಆಣವಮಲಸೂಚಕನೆನಬಹುದಾದ ಮಣ್ಣು – ಇವು ಮೂರೂ ದೇವತಾ ಯೋಗ್ಯವೆನಿಸಲು ಅಗತ್ಯವಾದುವುಗಳೇ. ಕೆಸರಿಲ್ಲದೆ ಕಮಲವನ್ನು ಬಯಸಿದರೆ ಬಂದೀತೆ? ಕೆಸರಲ್ಲಿದ್ದೂ ಕೆಸರನ್ನು ಅಂಟಿಸಿಗೊಳ್ಳದಂತಿರುವುದೇ ಅಶುದ್ಧಿಯನ್ನೇ ಶುದ್ಧಿಯ ಸಿದ್ಧಿಗಾಗಿ ಬಳಸಿಕೊಳ್ಳುವ ಬಗೆಯಾಗಿದೆ. ಇದನ್ನೇ ಇನ್ನಷ್ಟು ವಿಶದೀಕರಿಸಿದ್ದಾರೆ ಉರಿಲಿಂಗ ಪೆದ್ದಿಯವರು: '... ಇಂತು ಹೆಣ್ಣು, ಹೊನ್ನು, ಮಣ್ಣು ಈ ಮೂರನ್ನೂ ಹಿಡಿದು, ಗುರು–ಲಿಂಗ–ಜಂಗಮಕ್ಕೆ ಸದ್ಭಕ್ತಿಯ ಮಾಡಬಲ್ಲಡೆ ಭವಂನಾಸ್ತಿ, ಅಲ್ಲಿ ಇದ್ದರೆಯೂ ನೀರತಾವರೆಯಂತಿಪ್ಪರು, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ, ನಿಮ್ಮ ಶರಣರು.'

ಆದುದರಿಂದಲೇ ಸಿದ್ಧರಾಮೇಶ್ವರರು ಸಾರಿದರು:

'ಭಕ್ತನ ಮನ ಹೆಣ್ಣಿನೊಳಗಾದರೆ ವಿವಾಹವಾಗಿ ಕೂಡುವುದು. ಭಕ್ತನ ಮನ ಮಣ್ಣಿನೊಳಗಾದರೆ ಕೊಂಡು ಆಲಯವ ಮಾಡುವುದು. ಭಕ್ತನ ಮನ ಹೊನ್ನಿನೊಳಗಾದರೆ ಬಳಲಿ ದೊರಕಿಸುವುದು ನೋಡಾ, ಕಪಿಲ ಸಿದ್ಧ ಮಲ್ಲಿಕಾರ್ಜುನಾ.'

ಈ ಮೂರೂ ತ್ಯಾಜ್ಯವಲ್ಲ, ಭೋಜ್ಯ. ಈ ಮೂರೂ ಮಾಯೆಯಲ್ಲ. ಯಾವುದು ಮಾಯೆ ಹಾಗಾದರೆ? ಅಲ್ಲಮ ಪ್ರಭುಗಳನ್ನೇ ಕೇಳೋಣ. ಏನು ಹೇಳುವರವರು?

'ಹೊನ್ನು ಮಾಯೆಯೆಂಬರು, ಹೆಣ್ಣು ಮಾಯೆಯೆಂಬರು,
ಮಣ್ಣು ಮಾಯೆಯಲ್ಲ,
ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ,
ಮಣ್ಣು ಮಾಯೆಯಲ್ಲ,
ಮನದ ಮುಂದಣಾಸೆಯೇ ಮಾಯೆ ಕಾಣಾ, ಗುಹೇಶ್ವರಾ!'

ಮನದ ಮುಂದಣಾಸೆಯೆಂದರೇನು? ವಿವಾಹವಾಗಿ ಹೆಣ್ಣ ಕೊಡದೆ, ವಿವಾಹವಾಗದೆ ಕೂಡ ಬಯಸುವುದು. ವಿವಾಹಾವಾದ ಮೇಲೆ 'ಪರವಧುವಗೌರಿ'ಯೆಂದುಕಾಣದೆ ಪರದಾರಸಂಗ ಬಯಸುವುದು, ಇದೂ ಸಾಲದೆ ದಾಸಿಯರ, ವೇಶ್ಯೆಯರ ದಾಸನಾಗುವುದು. 'ದಾಸಿಯರ ಸಂಗ ಕಸನೀರ ಹೊರಿಸಿತ್ತು. ವೇಶಿಯರ ಸಂಗ ಎಂಜಲನು ತಿನಿಸಿತ್ತು. ಪರಸ್ತ್ರೀಯರ ಸಂಗ ಪಂಚಮಹಾಪಾತಕವ ತಂದಿತ್ತು,' ಎಂಬ ಚೆನ್ನಬಸವಣ್ಣನವರ ಸೂಳ್ನುಡಿಯನ್ನು ಗಮನಿಸದೆ ಸೂಳೆಯರ ಆಳಾಗುವುದು ಹೆಣ್ಣಿಗೆ ಸಂಬಂಧಿಸಿದಂತೆ 'ಮನದ ಮುಂದಣಾಸೆ!'

ತಾನು ದುಡಿದು ಪಡೆಯದೆ ಇನ್ನೊಬ್ಬರು ದುಡಿದುದನ್ನು ದೋಚಿಕೊಳ್ಳುವುದು, ದುಡಿದುದಕ್ಕಿಂತ ಹೆಚಾಗಿ ಪಡೆದುಕೊಳ್ಳುವುದು, ತನ್ನ ಸುಖಕ್ಕಾಗಿ ಅನ್ಯರನ್ನು ಜೀತದಾಳುಗಳನ್ನಾಗಿ ಮಾಡಿಕೊಳ್ಳುವುದು, ಶ್ರಮಿಕರನ್ನು ಶೋಷಿಸುವುದು. ಉಳುವವರನ್ನು ವಂಚಿಸುವುದು, ದೇವರ, ಧರ್ಮದ ಹೆಸರಿನಲ್ಲಿ ಭಕ್ತರನ್ನು ಸುಲಿಯುವುದು, ವರದಕ್ಷಿಣೆಗಾಗಿ ವಧುದಹನದಂಥ ಅಮಾನುಷ ಕೃತ್ಯಗಳನ್ನು ಮಾಡುವುದು. ಕಳ್ಳಪೇಟೆ ಕಾಳಸಂತೆಗಳಲ್ಲಿ ಗ್ರಾಹಕರ ಚರ್ಮ ಸುಲಿಯುವುದು. ದಾಸ್ತಾನು ಮಾಡಿ, ಕೃತ್ರಿಮ ಕೊರತೆ ಹುಟ್ಟಿಸಿ ಬೆಲೆಯೇರಿಸಿ ಬಡವರನ್ನು ನಿಧಾನವಾಗಿ ಕೊಲ್ಲುವುದು, ಕರ ಕೊಡದೆ ಸಿರಿಯನ್ನು ಬಚ್ಚಿಡುವುದು, ಹುಸಿ ಲೆಕ್ಕ ಪತ್ರ ತೋರಿ ನೈಜ ಲೆಕ್ಕ ಪತ್ರಗಳನ್ನು ಮುಚ್ಚಿಡುವುದು. ನಿರ್ವಂಚನೆಯಿಂದ ಸೇವೆ ಸಲ್ಲಿಸದೆ ಲಂಚ ಸೆಳೆದುಕೊಳ್ಳುವುದು. ರಮಲ, ಶಕುನ,

ಸಾಮುದ್ರಿಕ. ಶಾಂತಿಕರ್ಮೇತ್ಯಾದಿ ಕುತಂತ್ರಗಳಿಂದ ಅಮಾಯಕರ ಲೂಟಿ ಮಾಡುವುದು. ಇತ್ಯಾದಿ ಹೊನ್ನಿಗೆ ಸಂಬಂಧಿಸಿದಂತೆ 'ಮನದ ಮುಂದಣ ಆಸೆ'.

ಉಳುವವರ, ಗೇಣಿದಾರರ, ಕೋರುದಾರರ, ಭೂರಹಿತ ಕಾರ್ಮಿಕರ ಹೊಟ್ಟೆಯ ಮೇಲೆ ಹೊಡೆದು ಭೂಮಿಯಿಂದ ಬಂದುದನ್ನೆಲ್ಲ ತಾವೇ ಬಕ್ಕರಿಸುವುದು, ಗೇಣು ಭೂಮಿಯೂ ಇಲ್ಲದವರು ತನ್ನ ಓಣಿಯಲ್ಲಿಯೇ ಅನೇಕರಿರುವಾಗಲೂ, ದೊಡ್ಡ ಭೂಭಾಗದ ಒಡೆಯನಾಗಿದ್ದೂ ಅವರಿಗೆ ಕಾಲೂರಲೂ ಕೂಡ ಸ್ಥಳವೀಯದಿರುವುದು. ತನ್ನ ಭೂಮಿಯಲ್ಲಿ ಮುಂಜಾವಿನಿಂದ ಸಂಜೆಯವರೆಗೆ ಬೆವರು ಹರಿಸುತ್ತ ದುಡಿವ ಕೂಲಿಕಾರರಿಗೆ ಯೋಗ್ಯ ಕೂಲಿ ಕೊಡದಿರುವುದು, ಗಿರಣಿಗಳಲ್ಲಿ ಹೆಣ್ಮಕ್ಕಳನ್ನೂ, ಸಣ್ಣ ಮಕ್ಕಳನ್ನೂ ನಿಷ್ಕರುಣೆಯಿಂದ ದುಡಿಸಿಕೊಂಡು ಅವರಿಗೆ ಹೊಟ್ಟೆಗಾಗುವಷ್ಟನ್ನು ಕೊಡದಿರುವುದು, ತಮ್ಮ ಸುಖಕ್ಕೆ ತಿಲಾಂಜಲಿಯನ್ನಿತ್ತು. ಹಗಲಿರುಳು ಕಷ್ಟಪಟ್ಟು ಬೆಳೆಸಿದ ಮುಪ್ಪಿನ ತಂದೆ ತಾಯಿಗಳ ಹೊಟ್ಟೆ ಬಟ್ಟೆಗೆ ಸರಿಯಾಗಿ ನೋಡಿಕೊಳ್ಳದಿರುವುದು ಇತ್ಯಾದಿ ಮಣ್ಣಿಗೆ ಸಂಬಂಧಿಸಿದಂತೆ 'ಮನದ ಮುಂದಣಾಸೆ!' ಈ ದುರಾಶೆಗಳು ಅಳಿದರೆ ಮಾನವ ಜೀವನದ ತ್ರಿಪುಟಿಯಂತಿರುವ ಹೆಣ್ಣು, ಹೊನ್ನು, ಮಣ್ಣುಗಳು ಬಾಧಕವಾಗದೆ ಸಾಧಕವಾಗುವುವು. ಉಪಾಧಿಯಾಗದೆ ಉಪಾದೇಯವಾಗುವುವು; ಅಶುದ್ಧವಾಗದೆ ಶುದ್ಧಿದಾಯಕವಾಗುವುವು.

ಯಾವುದೊಂದು ವಸ್ತು ಶುದ್ಧ ಅಥವಾ ಅಶುದ್ಧವಾಗುವುದು ಅದರ ಸಂಪಾದನಾ ವಿಧಾನದಿಂದ, ಪರಿಶುದ್ಧ ಸಾಧನದಿಂದ ಅರ್ಜಿಸಿದರೆ ಅದು ಶುದ್ಧವಾಗಿಯೇ ದೊರೆಯುತ್ತದೆ. ಅನ್ಯಾಯ ಮಾರ್ಗದಿಂದ, ಅಧರ್ಮ ಅನೀತಿಗಳಿಂದ, ಅಶುದ್ಧ ಸಾಧನದಿಂದ ಸಂಪಾದಿಸಿದರೆ ಅದು ಅಶುದ್ಧವಾಗಿಯೇ ಬಳಿಗೆ ಬರುತ್ತದೆ.

ಧರ್ಮಾವಿರುದ್ಧವಾದ ಅರ್ಥ ಕಾಮಗಳು ಅತ್ಯಗತ್ಯವಿರುವಷ್ಟೇ ಧರ್ಮವಿರುದ್ಧವಾದ ಅರ್ಥಕಾಮಗಳು ಅನರ್ಥಕಾರಿಯೆಂಬುದು ಈ ದೇಶ ನಂಬಿಕೊಂಡು ಬಂದಿರುವ ಮೂಲ ತತ್ತ್ವವಾಗಿರುವಂತೆ, ಶಿವಶರಣರೂ ಶುದ್ದ ಸಾಧನಗಳಿಂದಲೇ ಈ ಮೂರನ್ನೂ ಪಡೆದು, ಮಾನವ ಜೀವನದ ಪರಿಶುದ್ಧಿಯನ್ನು ಕಾಯ್ದುಕೊಳ್ಳಬೇಕೆಂಬುದನ್ನು ಪ್ರಬಲವಾಗಿ ಪ್ರತಿಪಾದಿಸಿದರು. ಇದಿಲ್ಲದೆ ಕ್ಷೇತ್ರಯಾತ್ರೆ, ತೀರ್ಥಸ್ನಾನ, ಬಕಧ್ಯಾನ, ಕಪಟ ಜಪಗಳೆಲ್ಲ ವ್ಯರ್ಥವೆಂದು ಸಾರಿದರು. ಅಣ್ಣನ ಈ ವಚನ ಅದೆಷ್ಟು ಮನೋಜ್ಞ:

'ತೊರೆಯಮೀವಣ್ಣಗಳಿರಾ,
ತೊರೆಯಮೀವಸ್ವಾಮಿಗಳಿರಾ,
ತೊರೆಯಿಂ ಭೋ, ತೊರೆಯಿಂ ಭೋ,
ಪರನಾರಿಯ ಸಂಗವ ತೊರೆಯಿಂ ಭೋ,
ಪರಧನದಾಮಿಷವ ತೊಯರೆಯಿಂ ಭೋ,

ಇವ ತೊರೆಯದೆ ಹೋಗಿ ತೊರೆಯ ಮಿಂದರೆ
ಬರುದೊರೆ ಹೋಹುದು – ಕೂಡಲಸಂಗಮದೇವಾ!'

ತೊರೆ ತೊರೆಯುವುದು ನಮ್ಮ ಹೊರಗನ್ನು ಮಾತ್ರ ಹೊರಗು ಮಾತ್ರ ಶುದ್ಧವಾಗಿ ಒಳಗು ಅಶುದ್ಧವಾಗಿ ಉಳಿದರೆ ಎಲ್ಲ ಅಶುದ್ಧವಾಗಿ ಉಳಿದಂತೆಯೇ! ಮೈ ಮಿಂದಿದೆಯೆಂದಾಕ್ಷಣ ಗೈದ ಪೂಜೆ ಸಾರ್ಥಕವಾಗುವುದೆ?

'ಮಿಂದು ದೇವರ ಪೂಜಿಸಿಹೆನೆಂಬ ಸಂದೇಹಿ ಮಾನವ ನೀ ಕೇಳಾ;
ಮೀಯದೆ ಮೀನು? ಮೀಯದೆ ಮೊಸಳೆ?
ತಾ ಮಿಂದು ತನ್ನ ಮನ ಮೀಯದನ್ನಕ್ಕರ
ಈ ಬೆಡಗಿನ ಮಾತ ಮೆಚ್ಚುವನೆ, ಗುಹೇಶ್ವರ ಲಿಂಗವು?'

ಮನ ಮೀಯುವುದೆಂದರೇನು? 'ಮನದ ಮುಂದಣಾಸೆ' ಮಾಯವಾಗುವುದು. ಅದು ಮಾಯವಾಗದಿದ್ದರೆ ಏನ ಮಿಂದರೂ, ಏನ ತಿಂದರೂ, ಏನ ಕೇಳಿದರೂ, ಏನ ನೋಡಿದರೂ, ಏನ ಮಾಡಿದರೂ, ಏನನ್ನುಟ್ಟರೂ, ಏನ ತೊಟ್ಟರೂ, ಏನ ಬರೆದರೂ, ಏನನೊರೆದರೂ ಫಲವಿಲ್ಲ. 'ಹುತ್ತವ ಬಡಿದರೆ ಹಾವು ಸಾವುದೆ?' ಎಂದು ಅಣ್ಣನವರು ಕೇಳಿಯೇ ಇದ್ದಾರೆ. ಪ್ರಭುವಿನ ಪ್ರಸಾದ ವಾಣಿಯಿದು:

'ತನು ಬತ್ತಲೆ ಇದ್ದರೇನಯ್ಯ,
ಮನ ಶುಚಿಯಾಗದನ್ನಕ್ಕರ?
ಮಂಡೆ ಬೋಳಾದಡೇನು,
ಭಾವ ಬಯಲಾಗದನ್ನಕ್ಕರ?
ಭಸ್ಮವ ಪೂಸಿದಡೇನು,
ಕರಣಾದಿ ಗುಣಂಗಳನೊತ್ತಿ, ಮೆಟ್ಟಿ ಸುಡದನ್ನಕ್ಕರ?
ಇಂತು ಆಶೆಯ ವೇಷದ ಭಾಷೆಗೆ
ಗುಹೇಶ್ವರ ಸಾಕ್ಷಿಯಾಗಿ ಛೀ ಎಂಬನು ಕಾಣಾ,
ಸಂಗನ ಬಸವಣ್ಣ'

ಒಳಗೆ ದುರಾಶೆ, ಹೊರಗೆ ಆಶಾರಹಿತತ್ವದ ವೇಷ, ವೇಷದ ಮೋಸ ಸಾಲದೆಂಬಂತೆ ವೈರಾಗ್ಯದ ಭಾಷೆಯ ಮೋಸ. 'ಹೆಗ್ಗಣವನ್ನಿಕ್ಕಿ ನೆಲಗಟ್ಟ ಕಟ್ಟಿದಂತೆ' ಒಳಗೆ ದುರಾಶೆಯನ್ನಿರಿಸಿ. ಹೊರಗೆ ಹುಸಿ ವಿರತಿಯ, ಕಪಟ ಧರ್ಮರತಿಯ, ಪರಿಶುದ್ಧ ಪ್ರೀತಿಯ ವೇಷಧರಿಸಿ ಭಾಷೆ ನುಡಿದರೆ 'ಹೊಳ್ಳ ಕುಟ್ಟಿ ಕೈನೋಯಿಸಿಕೊಂಡಂತೆ' ಜೇಡರ ದಾಸಿಮಯ್ಯ ಲೇಸಾಗಿಯೇ ಹೇಳಿದ್ದಾನೆ.

‘ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ?
ಜೊಳ್ಳು ತೂರಿದಲ್ಲಿ ಭತ್ತ ಉಂಟೆ?
ಕಳ್ಳ ಹಾದರಿಗರ ಸಂಪಾದನೆ
ಹೊಳ್ಳ ಕುಟ್ಟಿ ಕೈ ಹೊಟ್ಟಾದಂತೆ ಕಾಣಾ, ರಾಮನಾಥಾ’

ಆಶೆಗೆ ದಾಸರಾಗಿ ಗಳಿಸುವುದೆಲ್ಲ ಕಳ್ಳ ಹಾದರಿಗರ ಸಂಪಾದನೆ. ಅದರಿಂದ ಪರಿಶುದ್ಧಿ ಸಾಧ್ಯವೆ? ಅಂತೆಯೇ ಸತ್ಯಕ್ಕ ಸಾರಿದ್ದಾಳೆ:

‘ಲಂಚ ವಂಚನೆಗೆ ಕಯ್ಯಾನದ ಭಾಷೆ
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ಕೈ ಮುಟ್ಟಿ ಎತ್ತಿದೆನಾದೊಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ನೀನಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯ
ಶಂಭು ಜಕ್ಕೇಶ್ವರಾ! ನಿಮ್ಮಾಣೆ!’

ಇಲ್ಲಿ ‘ಭಿಕ್ಷೆ’ಯೆಂದರೆ ಈ ದೇಶದಲ್ಲಿ ಊರೂರಗೆ ಹರಡಿ, ಲಕ್ಷಾವಧಿ ಜನರನ್ನು ಪರೋಪಜೀವಿಗಳನ್ನಾಗಿ ಮಾಡಿರುವ ಭಿಕ್ಷೆಯಲ್ಲ. ಮಾನವರಿಕ್ಕುವ ಭಿಕ್ಷೆಯಲ್ಲ, ಶಿವನಿಕ್ಕುವ ಭಿಕ್ಷೆ. ತಾನು ಮಾಡುವ ಕಾಯಕಕ್ಕೆ ಶಿವನು ನೀಡುವ ಫಲ. ಶರಣರು ಏನನ್ನಾದರೂ ಬಿಟ್ಟುಕೊಡಲಾರರು. ಕೈಲಾಸವನ್ನು ಬೇಡುವುದೂ ಭಕ್ತಿಗೆ ಕೂಲಿಯನ್ನು ಬೇಡುವುದೂ ಒಂದೇ ಎಂದು ನಂಬಿದ್ದ ಅವರು ಕಾಯಕದಲ್ಲಿಯೇ ಕೈಲಾಸವನ್ನು ಕಂಡರು. ಅಂಥವರು ಪರಧನಕ್ಕೆ, ಪರವನಿತೆಗೆ, ಪರೋಪಜೀವಿತ್ವಕ್ಕೆ, ಪರಾವಲಂಬನಕ್ಕೆ, ಪರಶೋಷಣೆಗೆ ಆಶೆ ಪಟ್ಟಾರೆ?

‘ಹಣ, ಬಂಗಾರ, ವಸ್ತು ಕಪ್ಪಟ
ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು
ಕಂಡು ಕಾತರಸಿ ಕೈ ಮುಟ್ಟಿ ಎತ್ತದ ಭಾಷೆ!
ಕೊಟ್ಟೊಡೆ ಮುಟ್ಟದ ಭಾಷೆ!
ಪರಧನ, ಪರಸತಿಗೆ ಅಳುಪದ ಭಾಷೆ!
ಇಂತಕ್ಕಳುಪಿದೆನಾದೊಡೆ,
ಸೌರಾಷ್ಟ್ರ ಸೋಮೇಶ್ವರಾ,
ನಿಮ್ಮಾಣೆ, ನಿಮ್ಮ ಪ್ರಮಥರಾಣೆ!’

ಇದು ಆದಯ್ಯನ ಉದ್ಘೋಷ, ಎಲ್ಲ ಶರಣರ ಭಾಷೆ. ಶರಣ ದೇಹಧಾರಿಯಾದರೂ ದೇಹಕ್ಕೆ ದಾಸನಲ್ಲ, ಇಂದ್ರಿಯಗಳ ಗುಲಾಮನಲ್ಲ, ಆಶೆಯ ಪಾಶದಿಂದ ಬದ್ಧನಲ್ಲ; ಅಣ್ಣನ ಮಾತಿನಲ್ಲಿ ಆತನು 'ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ' ಏಲೇಶ ಕೇತಯ್ಯನ ಮಾತಿನಲ್ಲಿ:

'ಆತ ಲಿಂಗವ ತೊಟ್ಟರೇನು?
ಪರಾಂಗನೆಯ ಸೋಂಕ;
ಕರವಿದ್ದರೇನು?
ಮತ್ತೊಂದನಪಹರಿಸಿ ತೆಗೆಯ;
ಕರ್ಣವಿದ್ದೊಡೇನು?
ಮತ್ತೊಂದು ಅನ್ಯ ಶಬ್ದವ ಕೇಳ;
ಕಂಗಳಿದ್ದೊಡೇನು?
ಲಿಂಗವಲ್ಲದುದ ನೋಡ;
ನಾಸಿಕವಿದ್ದೊಡೇನು?
ಅರ್ಪಿತವಲ್ಲದುದ ವಾಸಿಸ;
ಜಿಹ್ವೆಯಿದ್ದೊಡೇನು?
ಪ್ರಸಾದವಲ್ಲದುದ ಸ್ವೀಕರಿಸ;
ಇಂತೀ ಎಲ್ಲದರಲ್ಲಿ ಸರ್ವವ್ಯವಧಾನಿಯಾಗಿ
ನಡೆ, ನುಡಿ, ಅರಿವು ಶುದ್ಧಾತ್ಮನು,
ಏಲೇಶ್ವರ ಲಿಂಗವು ತಾನೇ!'

ಶುದ್ಧಾತ್ಮನಾಗಿ ಸತ್ಯಶುದ್ಧ ಕಾಯಕ ಮಾಡುವವನಿಗೆ ಯಾವ ಕೊರತೆಯೂ ಬರದು. ಯಾವ ಅರಕೆಯೂ ಬಾಧಿಸದು. ದುರಾಶೆಯಿರುವಲ್ಲಿ ಸಿರಿಯೂ ದಾರಿದ್ರ್ಯವಾಗಿ ತೋರುವುದು. ಇದಕ್ಕೂ ಹೆಚ್ಚಿನ ಸಿರಿ ಸಿಕ್ಕಲಿಲ್ಲವಲ್ಲ – ಎಂಬ ವ್ಯಾಕುಲದಲ್ಲಿ. ದುರಾಶೆಯಿಲ್ಲದಲ್ಲಿ ದಾರಿದ್ರ್ಯವೂ ಸಂಪದವಾಗಿ ಶೋಭಿಸುವುದು. ಯಾಕೆ? ಅಣ್ಣನ ಉತ್ತರ ಇದಕ್ಕೆ: 'ಮನೆ ನೋಡಾ ಬಡವರು; ಮನ ನೋಡಾ ಸಿರಿವಂತರು 'ಮನಶುದ್ಧವಾಗಲು ಧನದ ಕೊರತೆ ಕಾಡೀತೆ? ಶರಣ ಮಾರಯ್ಯ ಹೇಳುವುದನ್ನು ಕೇಳೋಣ:

'ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತ ಶುದ್ಧನಾಗಿ ಕಾಯಕ ಮಾಡುವ ಸದ್ಭಕ್ತರಿಗೆ
ಎತ್ತ ನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು.
ಮಾರಯ್ಯ ಪ್ರಿಯ ಅಮಳೇಶ್ವರ ಲಿಂಗದ
ಸೇವೆಯುಳ್ಳನ್ನಕ್ಕರ'

ಪರಿಶುದ್ಧತೆಯ ಬೀಗದ ಕೈ ಇಲ್ಲಿದೆ: ಧನದಲ್ಲಿ, ಮನದಲ್ಲಿ, ತನುವಿಲ್ಲಿ ಶುಚಿಯ ಸಾಧಿಸಬೇಕು. ಏನೆನ್ನೇ ಸಂಪಾದಿಸಲಿ ಶುದ್ದ ಕಾಯಕದಿಂದ, ಶುದ್ಧ ಸಾಧನದಿಂದ ಸಂಪಾದಿಸಬೇಕು. ತನಗೆ ಬೇಕಾಗುವಷ್ಟನ್ನು ಉಳಿಸಿಕೊಂಡು ಉಳಿದುದನ್ನು ದಾಸೋಹಕ್ಕೆ, ಸಮಾಜಕ್ಕೆ ಸಲ್ಲಿಸಿದಾಗ ತನು–ಮನ–ಧನಗಳು. ನಡೆನುಡಿಗಳು ಶುದ್ಧವಾಗುವುವು. ಆಗ ಪರಿಶುದ್ಧಿ ಪ್ರಾಪ್ತವಾಗುವುದು. ಬಸವಣ್ಣನವರ ಮಾತಿನೊಡನೆ ಮುಗಿಸೋಣ :

'ಕೃಷಿ ಕೃತ್ಯ ಕಾಯಕದಿಂದಾಡೇನು?
ತನು ಮನ ಬಳಲಿಸಿ ತಂದು ದಾಸೋಹವ ಮಾಡುವ
ಪರಮ ಸದ್ಭಕ್ತನ ಪಾದವ ತೋರಯ್ಯ, ಎನಗೆ;
ಅದೇಕೆನೆ, ಆತನ ತನು ಶುದ್ಧ, ಆತನ ಮನ ಶುದ್ಧ,
ಆತನ ನಡೆ ಶುದ್ಧ, ನುಡಿಯೆಲ್ಲ ಪಾವನವು
ಆತಂಗೆ ಉಪದೇಶವ ಮಾಡಿದಾತನೇ ಪರಮ ಸದ್ಗುರು
ಅಂತಪ್ಪ ಸದ್ಭಕ್ತನ ಮನೆಯ ಕೈಲಾಸವೆಂದು ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮನೇ ಜಗತ್ಪಾವನ ನೋಡಾ
ಇಂತಪ್ಪವರ ನಾನು ನೆರೆ ನಂಬಿ ನಮೋ ನಮೋ ಎಂಬೆನಯ್ಯ
– ಕೂಡಲ ಸಂಗಮದೇವಾ

ಊ

# ವಿಷಯದಿಂದ ನಿರ್ವಿಷಯದತ್ತ

ನಿರ್ವಿಷಯದ ವಿಷಯ ಪ್ರವೇಶ ಬಸವಣ್ಣನವರ ಈ ಅಮೋಘ ವಚನದಿಂದಲೇ ಆಗುವುದು ವಿಹಿತವೆಂದು ತೋರುತ್ತಿದೆ:

'ವಿಷಯವೆಂಬ ಹಸುರನೆನ್ನ ಮುಂದೆ ತಂದು
 ಪಸರಿಸಿದೆಯಯ್ಯಾ!
ಪಶುವೇನ ಬಲ್ಲುದು? ಹಸುರೆಂದೆಳಸುವುದು!
 ವಿಷಯ ರಹಿತನ ಮಾಡಿ,
 ಭಕ್ತಿರಸವ ದಣಿಯೆ ಮೇಯಿಸಿ,
 ಸುಬುದ್ಧಿಯೆಂಬುದಕವನೆರೆದು,
 ನೋಡಿ ಸಲಹಯ್ಯಾ, ಕೂಡಲಸಂಗಮದೇವಾ'

ವಸುಧೆಯೊಳಗೆಲ್ಲ ವಿಷಯದ ಹಸುರು ಪಸರಿಸಿದೆ. ಹಸುರು ಕಂಡೊಡನೆ ಪಶು ಅದಕ್ಕೆ ಬಾಯ್ಬಿಡುವುದು. ಅದನ್ನು ಅತಿಯಾಗಿ ತಿಂದಾಗ ಹೊಟ್ಟೆ ಜಾಡಿಸಿ ಒದ್ದಾಡುವುದು ಪಶುವಿಗೆ ಸಹಜವಾಗಿರುವಂತೆ ವಿಷಯದ ಹಸುರನ್ನು ಕಂಡ ಪಶ್ವಂಶಪೂರಿತ ಜೀವಿ ಅದಕ್ಕೆ ಬಾಯಿ ಬಿಡುವುದೂ, ಅದನ್ನು ಅತಿಯಾಗಿ ಅನುಭೋಗಿಸಿದಾಗ ಅಳಲಿ ಬಳಲುವುದೂ ಸ್ವಾಭಾವಿಕ. ಪಶು ತಿನ್ನುವ ಹಸುರಿಗಿಂತ ಪಶುಸದೃಶ ನರ ಸೇವಿಸುವ ವಿಷಯದ ಹಸುರು ಕೆಟ್ಟುದು. ಆದಿ ಪುರಾಣದ ಈ ಉಕ್ತಿ ಇದಕ್ಕೆ ಸಾಕ್ಷಿ:

'ವರಂ ವಿಷಂ ಯದೇಕಸ್ಮಿನ್ ಭವೇ ಹಂತಿ ನಹಂತಿ ವಾ
ವಿಷಯಾಸ್ತು ಪುನರ್ಘ್ನಂತಿ ಹಂತ ಜಂತೂನನೇಕತಃ'

(ವಿಷಯ ಸೇವಿಸುವುದು ಎಷ್ಟೋ ವಾಸಿ. ಯಾಕೆಂದರೆ ಅದು ಒಂದೇ ಭವದಲ್ಲಿ ಪ್ರಾಣಿಯನ್ನು ಕೊಲ್ಲಬಹುದು, ಕೊಲ್ಲದಿರಲೂ ಬಹುದು. ಆದರೆ ವಿಷಯ ಮಾತ್ರ ಎಳ್ಳಷ್ಟೂ ಒಳ್ಳೆಯದಲ್ಲ. ಯಾಕೆಂದರೆ ವಿಷಯಗಳು ಪ್ರಾಣಿಗಳನ್ನು ಭವಭವಗಳಲ್ಲಿ ಪುನಃ ಕೊಲ್ಲುವುವು.)

ಇಷ್ಟೇ ಅಲ್ಲ, ವಿಷಯ ಲಾಲಸೆಗೆ ತೃಪ್ತಿಯೆಂಬುದೇ ಇಲ್ಲ. ತೃಪ್ತಿ ಪಡಿಸಿದಷ್ಟೂ ಅದರ ಅತೃಪ್ತಿ ಅಧಿಕವಾಗುತ್ತಲೇ ಹೋಗುತ್ತದೆ. ಉಪ್ಪು ನೀರು ಕುಡಿದವನ ನೀರಡಿಕೆ ಹೆಚ್ಚುತ್ತಲೆ ಹೋಗುವಂತೆ, ಸಾವಿರ ವರ್ಷಗಳ ಸಂಗಸುಖ ಪಡೆದೂ ಊರ್ವಸಿಯಲ್ಲಿ ವಿಕ್ರಮನ ಮೋಹ ಹೆಚ್ಚುತ್ತಲೇ ಹೋದಂತೆ. ವಿಷಯದಕ್ಕೆ ವಿಧೇಯನಾಗುವುದೆಂದರೆ ತುಪ್ಪವನ್ನು ಸುರಿದು ಉರಿಯನ್ನು ಆರಿಸುವ ಪ್ರಯತ್ನದಂತೆ ಅನರ್ಥಕಾರಿ, ಸೀತೆಯ ಕಣ್ಣಿಗೆ ಮಾಯಾಮೃಗವಾಗಿ, ದ್ರೌಪದಿಯ ನಾಸಿಕಕ್ಕೆ ಸೌಗಂಧಿಕಾ ಪುಷ್ಪದ ಸುಗಂಧವಾಗಿ, ಅಮೃತಮತಿಯ ಕಿವಿಗೆ ಅಷ್ಟಾವಕ್ರನ ಮಧುರ ಸ್ವರವಾಗಿ, ಪಾಂಡುವಿನ ತ್ವಚಕ್ಕೆ ಮಾದ್ರಿಯ ಮೃದು ಸ್ಪರ್ಶವಾಗಿ. ಪಂಜರದಲ್ಲಿದ್ದ ಪರೀಕ್ಷಿತರಾಜನ ರಸನೆಗೆ ಹಣ್ಣಿನ ರುಚಿಯಾಗಿ ವಿಷಯ ವಾಂಛೆ ವಿಷವಾಗಿ ಪರಿಣಮಿಸಲಿಲ್ಲವೆ?

ಪ್ರಾಣಿ ಪ್ರಪಂಚವೂ ಈ ಇಂದ್ರಿಯ ಚಾಪಲ್ಯಕ್ಕೆ, ತಜ್ಜನ್ಯ ವಿಷಯ ವ್ಯಾಮೋಹಕ್ಕೆ ಹೊರತಾಗಿಲ್ಲ. ಒಂದೊಂದು ಪ್ರಾಣಿಗೂ ಒಂದೊಂದು ಐಂದ್ರಿಯಿಕ ದೌರ್ಬಲ್ಯ, ಅಲ್ಲಮಪ್ರಭುಗಳ ಈ ವಚನ ಇದಕ್ಕೆ ಮನೋಜ್ಞ ನಿದರ್ಶನ:

'ಕರಿಯು ಸ್ಪರ್ಶನೇಂದ್ರಿಯದಿಂದ ಬಂಧನವೆಡೆದಳಿಯಿತ್ತು;
ಪತಂಗನು ರೂಪೇಂದ್ರಿಯದಿಂದ ಬಂಧನವಡೆದಳಿಯಿತ್ತು;
ಭೃಂಗನು ಗಂಧೇಂದ್ರಿಯದಿಂದ ಬಂಧನವಡೆದಳಿಯಿತ್ತು;
ಕುರಂಗನು ಶಬ್ದೇಂದ್ರಿಯದಿಂದ ಬಂಧನವಡೆದಳಿಯಿತ್ತು;
ಮತ್ಸ್ಯವು ರಸನೇಂದ್ರಿಯದಿಂದ ಬಂಧನವಡೆದಳಿಯಿತ್ತು;
ಇಂತೀ ಒಂದೊಂದು ಇಂದ್ರಿಯೋದ್ರೇಕದಿಂದ ಒಂದೊಂದು
ಪ್ರಾಣಿಯ ಪ್ರಳಯವಾಯಿತ್ತು;
ಪಂಚೇಂದ್ರಿಯಗಳ ಒಂದು ಘಟದಲ್ಲಿ ತಾಳಿದ ಮನುಷ್ಯ ಪ್ರಾಣಿಗಳಿಗೆ
ಮರವೆ ಎಡಗೊಂಡು, ದೇಹ ಮೋಹ ಭ್ರಾಂತು ಮುಸುಕಿ,
ಮಾಯೆಯ ಬಾಯ ತುತ್ತಹುದು
ಚೋದ್ಯವೇನು ಹೇಳಾ, ಗುಹೇಶ್ವರಾ?'

ವಿಷಯಧ್ಯಾನದಲ್ಲಿ ಉಗಮಿಸುವ ಅನರ್ಥಪರಂಪರೆಯ ಯಥಾರ್ಥ ಚಿತ್ರಣ ಭಗವದ್ಗೀತೆಯ ಕೆಳಗಣ ಶ್ಲೋಕಗಳಲ್ಲಿ ದೊರೆಯುತ್ತದೆ.

ಧ್ಯಾಯತೋ ವಿಷಯಾನ್ ಪುಂಸಃ
ಸಂಗಸ್ತೇಷೂಪಜಾಯತೇ
ಸಂಗಾತ್ ಸಂಜಾಯತೇ ಕಾಮಃ

ಕಾಮಾತ್ ಕ್ರೋಧೋಭಿಜಾಯತೇ
ಕ್ರೋಧಾದ್ಭವತಿ ಸಂಮೋಹಃ
ಸಂಮೋಹಾತ್ ಸ್ಮೃತಿ ವಿಭ್ರಮಃ
ಸ್ಮೃತಿಭ್ರಂಶಾದ್ಬುದ್ಧಿ ನಾಶೋ
ಬುದ್ಧಿ ನಾಶಾತ್ ಪ್ರಣಶ್ಯತಿ

ವಿಷಯಧ್ಯಾನದಿಂದ ಸಂಗ ಸಂಜನನ, ಸಂಗದಿಂದ ಕಾಮ ಸಮುದ್ಭವ, ಕಾಮದಿಂದ ಕ್ರೋಧದ ಹುಟ್ಟು, ಕ್ರೋಧದಿಂದ ಸಂಮೋಹೋತ್ಪತ್ತಿ, ಸಂಮೋಹದಿಂದ ಸ್ಮೃತಿ ವಿಭ್ರಮದ ಪ್ರಾದುರ್ಭಾವ. ಸ್ಮೃತಿ ವಿಭ್ರಮದಿಂದ ಬುದ್ಧಿನಾಶ, ಬುದ್ಧಿ ನಾಶದಿಂದ ಪೂರ್ಣವಿನಾಶ! ಇಂದ್ರಿಯಗಳು ಪ್ರೇರೇಪಿಸುತ್ತವೆ; ಮನ ಕಾಮಿಸುತ್ತದೆ; ಕಾಮಿಸಿದ್ದು ಕೈಗೂಡದಿದ್ದರೆ ಕ್ರೋಧ ಕಿಡಿಗೆದರುತ್ತದೆ; ಕೈಗೂಡಿದರೆ ಇನ್ನೂ ಬೇಕೆಂಬ ಲೋಭ ಹುಟ್ಟುತ್ತದೆ; ಇನ್ನಷ್ಟು ದೊರೆತರೆ ಇನ್ನಾರಿಗೂ ಇಲ್ಲದ್ದು ತನಗೇ ಇದೆಯೆಂಬ, ಅದು ತನ್ನ ಕೈ ಬಿಡದಿರಲೆಂಬ ಮೋಹ ಹುಟ್ಟುತ್ತದೆ; ದೊರೆಯುವುದು ಹೆಚ್ಚಿದಂತೆ ಮದ ಪುಚ್ಚ ಬಿಚ್ಚುತ್ತದೆ; ತನಗೆ ದೊರೆತುದು ಬೇರೆಯವರಿಗೂ ದೊರೆತಾಗ ಮತ್ಸರ ಮೈದೋರುತ್ತದೆ. ವಿಷಯ ವ್ಯಾಮೋಹ ಹೀಗೆ ಅನರ್ಥಗಳ ವ್ಯೂಹವನ್ನೇ ರಚಿಸುತ್ತದೆ.

ಈ ವ್ಯೂಹದ ಜಟಿಲತೆ, ಕಠಿನತೆ ಕಠೋರತೆಗಳು ಕೆಳಗಿನ ಸ್ವತಂತ್ರ ಸಿದ್ಧ ಲಿಂಗಾಂಕಿತ ವಚನದಲ್ಲಿ ವರ್ಣಿತವಾಗಿವೆ:

'ಪಂಚೇಂದ್ರಿಯವೆಂಬ ಹೆಡೆಯುಳ್ಳ ಸಂಸಾರಸರ್ಪದಷ್ಟವಾಗಲು
ಪಂಚ ವಿಷಯವೆಂಬ ವಿಷಹತ್ತಿ
ಮೂರ್ಛಿತರಾದರೆಲ್ಲ ಸಕಲ ಲೋಕದವರು!
ಸರ್ಪರ ಕಿಚ್ಚಿ ಕೂಡಿಯಾಡುವ
ಸರ್ಪನ ಬಾಯ ಕಟ್ಟಲರಿಯದೆ ಮರಣವಾದರಲ್ಲ!'

ವಿಷಯ ಸುಖವೆಂಬುದು ಸುಳ್ಳು ಸುಖವೆಂದರಿದೂ ಅದಕ್ಕೆ ಮನ ಸೋಲುತ್ತಾನೆ ಮನುಷ್ಯ ಚಂದಿಯರಸನ ಈ ವಚನ ಉತ್ಪ್ರೇಕ್ಷೆಯಿಂದ ಕೂಡಿದಂತೆ ಕಂಡು ಬಂದರೂ ವಿಷಯ ಸುಖದ ಹುಸಿಗೆ ಹಿಡಿದ ಕನ್ನಡಿಯೆಂದು ಹೇಳಬಹುದು.

'ಬಟ್ಟೆಯಲ್ಲಿ ಹೋಗುತ್ತಿದ್ದ ಮನುಜನೊಬ್ಬನನ್ನು
ಹುಲಿ, ಕಾಡುಗಿಚ್ಚು, ರಕ್ಕಸಿ, ಕಾಡಾನೆಗಳು
ನಾಲ್ಕು ದಿಕ್ಕಿನಲ್ಲಿ ಅಟ್ಟಿ ಬರುತ್ತಿರಲು,
ಅವಂ ಕಂಡು, ಭಯದಿಂದ ಹೋಗಲು ದಿಕ್ಕು ತೋರದೆ
ಹಾಳು ಭಾವಿಯಂ ಕಂಡು ತಲೆಯೂರಿ ಬೀಳುವಲ್ಲಿ,

ಹಾವ ಕಂಡು ಬೀಳಲಮ್ಮದೆ ಇಲಿ ಕಡಿದ ಬಳ್ಳಿಯಂ ಹಿಡಿದು ನಿಲ್ಲಲು
ಜೇನುಹುಳು ಮೈನೂರುವಾಗ
ಮೂಗಿನ ತುದಿಯಲೊಂದು ಹನಿ ಮಧು ಬಿಂದು ಬೀಳಲಾಗಿ,
ಆ ಮಧುವಂ ಕಂಡು, ಹಿರಿದಪ್ಪ ದುಃಖವನ್ನೆಲ್ಲ ಸೈರಿಸಿ,
ನಾಲಗೆಯಲ್ಲಿ ಆ ಮಧುವ ಸೇವಿಸುವನಂತೆ,
ಈ ಸಂಸಾರ ಸುಖವ ವಿಚಾರಿಸಿ ನೋಡಿದರೆ ದುಃಖದಾಗರವು
ಇದನರಿದು, ಸಕಲ ವಿಷಯಗಳಲ್ಲಿಯ
ಸುಖವಿಂತುಂಟೆಂದು ನಿರ್ವಿಷಯಿಯಾಗಿ ನಿಂದ ನಿಲವು ನೀನೇ
ಸಿಮ್ಮಲಿಗೆಯ ಚೆನ್ನರಾಮಾ!

ಜಾಗರದಲ್ಲಿ ಕಾಡಿ ಪೀಡಿಸಿದುದು ಸಾಲದೆಂಬಂತೆ ಸ್ವಪ್ನದಲ್ಲಿಯೂ ಕಾಡುವ ವಿಷಯಾಭಿಲಾಷೆಗಳು ನೀಡುವ ಸುಖ ಅದೆಷ್ಟು ಅಲ್ಪವಾದುದೆಂಬುದಕ್ಕೆ ಉದಾಹರಣೆಗಳನ್ನು ಕೊಡುವುದೇ ಬೇಡ. ಕಣ್ಣು ನೋಡುವಾಗ ಇನ್ನೂ ನೋಡಲಾಗಲಿಲ್ಲವಲ್ಲ ಎಂಬ ಎದೆಗುದಿಯಲ್ಲಿರುತ್ತವೆ; ಬಾಯಿ ಉಣ್ಣುವಾಗ ಇನ್ನಷ್ಟು ಉಣ್ಣುವುದು ಆಗಲಿಲ್ಲವೆಂಬ ದುಗುಡದಲ್ಲಿರುತ್ತದೆ; ಕಿವಿ ಕೇಳುವಾಗ ಇನ್ನಷ್ಟು ಕೇಳಲಾಗಲಿಲ್ಲವೆಂಬ ವ್ಯಥೆಯಲ್ಲಿರುತ್ತದೆ. ಹೀಗೆಯೇ ಎಲ್ಲ ಇಂದ್ರಿಯಗಳ ಹಾಡು ಅತೃಪ್ತಿಯ ವಸ್ತುವನ್ನೇ ಒಳಗೊಂಡಿರುತ್ತದೆ.

ಹೀಗಿದ್ದೂ ವಿಷಯಲೋಲುಪತೆ ಜೀವಿಯ ಹುಟ್ಟುಗುಣ. ದೇವರು ಎಷ್ಟೇ ಕೊಟ್ಟರಲಿ, ಎಂಥ ಉನ್ನತ ಸ್ಥಾನದಲ್ಲಿಯೇ ಇಟ್ಟಿರಲಿ, 'ಆದಣವನೇರಿದ ಸೊಣಗನಂತೆ ಕಂಡೊಡೆ ಬಿಡದು ಮುನ್ನಿನ ಸ್ವಭಾವವನು! ಸುಡು ಸುಡು ಮನವಿದು ವಿಷಯಕ್ಕೆ ಹರಿವುದು' ಎಂದು ಅಣ್ಣನವರು ಮಾರ್ಮಿಕವಾಗಿ ಹೇಳುರುವಂತೆ, ವಿಷಯದತ್ತ ಹರಿವುದನ್ನು ನಿಲ್ಲಿಸುವುದಿಲ್ಲ ಜೀವಿ. ಅಂತೆಯೇ ವಿಷಯ ರಹಿತನ ಮಾಡೆಂದು ಬೇಡಿಕೊಂಡರು ಬಸವಣ್ಣನವರು. 'ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು ನನ್ನ'ನೆಂದು ಕೂಡಲಸಂಗನಲ್ಲಿ ಪ್ರಾರ್ಥಿಸಿಕೊಂಡರು. 'ಭಕ್ತಿರಸವ ಮನದಣಿವವರೆಗೆ ಸೇವಿಸಿ, ಸುಬುದ್ಧಿಯೆಂಬ ಉದಕವ ಕುಡಿದು, ಶರಣರ ಪಾದಸ್ಮರಣೆಯಲ್ಲಿದ್ದು ವಿಷಯಮೋಹದಿಂದ ಪಾರಾಗುವ ದಾರಿಯನ್ನು ಕಂಡುಕೊಂಡರು ಬಸವಣ್ಣನವರು.

ಚೆನ್ನಬಸವಣ್ಣನವರ ಚಮತ್ಕಾರವೇ ಬೇರೆ. ಷಡ್ರಿಪುಗಳೆಂದೇ ಪ್ರಸಿದ್ಧವಾದ ಕಾಮಕ್ರೋಧಾದಿಗಳನ್ನು ಷಣ್ಮಿತ್ರರನ್ನಾಗಿ ಮಾಡಿಕೊಳ್ಳುವ ಮಾರ್ಗ ತೋರಿಸಿದರು ಅವರು.

'ಶಿವಭಕ್ತಿಯುಳ್ಳವಂಗೆ ಕಾಮ ಬೇಡ, ಕ್ರೋಧ ಬೇಡ,
ಲೋಭ ಬೇಡ, ಮೋಹ ಬೇಡ, ಮದ ಬೇಡ, ಮತ್ಸರ ಬೇಡ;
ಶಿವಭಕ್ತಿಯುಳ್ಳವಂಗೆ ಕಾಮ ಬೇಕು, ಕ್ರೋಧ ಬೇಕು,

ಲೋಭ ಬೇಕು, ಮೋಹ ಬೇಕು, ಮದ ಬೇಕು, ಮತ್ಸರ ಬೇಕು
ಬೇಕೆಂಬುದಕ್ಕಾವ ಗುಣ? ಬೇಡವೆಂಬುದಕ್ಕಾವ ಗುಣ?
ಕಾಮ ಬೇಕು ಲಿಂಗದಲ್ಲಿ, ಕ್ರೋಧ ಬೇಕು ಕರಣಂಗಳಲ್ಲಿ
ಲೋಭ ಬೇಕು ಪಾದೋದಕ ಪ್ರಸಾದದಲ್ಲಿ
ಮೋಹ ಬೇಕು ಗುರುಲಿಂಗ ಜಂಗಮದಲ್ಲಿ
ಮದ ಬೇಕು ಶಿವಾಚಾರ ಘನವೆಂಬಲ್ಲಿ
ಮತ್ಸರ ಬೇಕು ಹೆಣ್ಣು ಹೊನ್ನು ಮಣ್ಣುಗಲಲ್ಲಿ,
ಇಂತೀ ಸದ್ಗುಣವಿರಬೇಕು.
ಬೇಡವೆಂಬುದಕ್ಕಾವ ಗುಣ?
ಕಾಮ ಬೇಡ ಪರಸ್ತ್ರೀಯರಲ್ಲಿ, ಕ್ರೋಧ ಬೇಡ ಗುರುವಿನಲ್ಲಿ,
ಲೋಭ ಬೇಡ ತನುಮನದಲ್ಲಿ, ಮೋಹ ಬೇಡ ಸಂಸಾರದಲ್ಲಿ,
ಮದ ಬೇಡ ಶಿವಭಕ್ತರಲ್ಲಿ, ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ,
ಇಂತೀ ಸದ್ಗುಣವರಿದು ಮೆರೆಯಬಲ್ಲೊಡೆ
ಆತನೇ ಸದ್ಭಕ್ತನು ಕಾಣಾ, ಕೂಡಲ ಚೆನ್ನಸಂಗಮದೇವಾ!

ಬಸವಣ್ಣನವರು ಭಕ್ತನಾಗಿ ವಿಷಯವಿರತಿಯನ್ನು ಸಾಧಿಸಿದರು; ಚೆನ್ನಬಸವಣ್ಣನವರು ಸದ್ಭಕ್ತನ ಲಕ್ಷಣಗಳನ್ನು ವಿವರಿಸಿ ಈ ಸಾಧನಪಥದ ದಿಶಾದರ್ಶನ ಮಾಡಿದರು. ಅಶಿವದತ್ತ ಎಳೆವ ಈ ಆರಕ್ಕೂ ಹೊಸ ತಿರುವು ಕೊಟ್ಟು ಶಿವಕರವಾದುದರಲ್ಲಿ ತೊಡಗಿಸಿದರೆ ಈ ಶತ್ರುಗಳೇ ನಮ್ಮ ಮಿತ್ರರಾಗುತ್ತಾರೆ, ವಿಷಯುಗಳಿಂದ ಸುತ್ತುವರಿದಿದ್ದು ನಿರ್ವಿಷಮಿಯಾಗುವುದು ಸಾಧ್ಯವಾಗುತ್ತದೆಂಬುದು ಶರಣ ಸರಣಿ. ಷಣ್ಮುಖ ಶಿವಯೋಗಿಗಳ ಈ ವಚನ ಇಲ್ಲಿ ಮನನೀಯ:

'ಎನ್ನ ತನುವಿನೊಳಗೆ ತನ್ನ ತನುವನಿಟ್ಟು
ಮಹಾತನುವ ಮಾಡಿದ;
ಎನ್ನ ಮನದೊಳಗೆ ತನ್ನ ಮನವನಿಟ್ಟು
ಮಾಹಾಮನವ ಮಾಡಿದ;
ಎನ್ನ ಪ್ರಾಣದೊಳಗೆ ತನ್ನ ಪ್ರಾಣವನಿಟ್ಟು
ಚಿತ್ಪ್ರಾಣವ ಮಾಡಿದ;
ಎನ್ನ ಜೀವದೊಳಗೆ ತನ್ನ ಜೀವವನಿಟ್ಟು
ಸಂಜೀವನವ ಮಾಡಿದ;
ಎನ್ನ ಭಾವದೊಡನೆ ತನ್ನ ಭಾವವನ್ನಿಟ್ಟು
ಸದ್ಭಾವವ ಮಾಡಿದ;
ಎನ್ನ ಕರಣಂಗಳೊಳಗೆ ತನ್ನ ಕರಣಂಗಳನಿಟ್ಟು

ಚಿತ್ ಕರಣಂಗಳ ಮಾಡಿದ;
ಎನ್ನ ಇಂದ್ರಿಯಗಳೊಳಗೆ ತನ್ನ ಇಂದ್ರಿಯಂಗಳನಿಟ್ಟು
ಚಿದಿಂದ್ರಿಯಂಗಳ ಮಾಡಿದ;
ಎನ್ನ ವಿಷಯಂಗಳೊಳಗೆ ತನ್ನ ವಿಷಯಂಗಳನಿಟ್ಟು
ನಿರ್ವಿಷಯಂಗಳ ಮಾಡಿದನಾಗಿ
ಅಖಂಡೇಶ್ವರನೆಂಬ ನಲ್ಲನೊಳಗೆ ಕರ್ಪೂರವೆಣ್ಣು
ಉರಿಪುರುಷನನಪ್ಪಿ ರೂಪಳಿದಂತಾದೆನು. ಕೇಳಿರವ್ವ!'

ದುರ್ವಿಷಯಂಗಳ ಸ್ಥಳದಲ್ಲಿ ಸದ್ವಿಷಯಂಗಳ ಬಿತ್ತುವುದೇ ನಿರ್ವಿಷಯ ಸಾಧಿಸುವ ನೇರ ದಾರಿ, ಇದನ್ನು ಸಾಧಿಸಿದವರಿಗೆ ಶರಣರು ಒಂದು ಅಪರೂಪದ ವಿಶೇಷಣವನ್ನು ಕೊಟ್ಟಿದ್ದಾರೆ. 'ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ' ಎಂದು. ಬಹಳ ಮನೋಜ್ಞವಾದ, ಮಾರ್ಮಿಕವಾದ, ಅರ್ಥವತ್ತಾದ ವಿಶೇಷಣವಿದು. 'ಪದ್ಮಪತ್ರಮಿವಾಂಭಸಃ' ಎಂಬಂತೆ ಹೊದ್ದಿಯೂ ಹೊದ್ದದ ಸ್ಥಿತಿಯಷ್ಟೇ ಅಲ್ಲ ಇದು. ಅನುಭವಿಸಿಯೂ ಅನುಭವಿಸದ ಸಂಸ್ಥಿತಿ. ಆದಯ್ಯನ ಈ ವಚನ ಅದೆಷ್ಟು ಸಮೀಚೀನ:

ಮನವಿರ್ದು ಮನವಿಲ್ಲ,
ಮನವು ಮಹದಲ್ಲಿ ಲಯವಾಗಿತ್ತಾಗಿ;
ಜೀವವಿರ್ದು ಜೀವವಿಲ್ಲ,
ಜೀವ ಪರಮನಲ್ಲಿ ಐಕ್ಯವಾಯಿತ್ತಾಗಿ;
ಭಾವವಿದ್ದು ಭಾವವಿಲ್ಲ,
ಭಾವ ನಿರ್ಭಾವದಲ್ಲಿ ನಿಂದಿತಾಗಿ;
ಕರಣಂಗಳಿದ್ದು ಕರಣಂಗಳಿಲ್ಲ.
ಕರಣಂಗಳು ಲಿಂಗ ಕಿರಣಂಗಳೆಯ್ದಿದವಾಗಿ,
ಇಂತು ಸರ್ವವಿದ್ದು ಸರ್ವವಿಲ್ಲ;
ಇದು ಕಾರಣ ಸೌರಾಷ್ಟ್ರ ಸೋಮೇಶ್ವರಾ,
ನಿಮ್ಮ ಶರಣರು ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು!'

ಸರ್ವವಿದ್ದೂ ಸರ್ವವಿಲ್ಲ; ವಿಷಯಂಗಳಿದ್ದೂ ವಿಷಯಂಗಳಿಲ್ಲ; ಕೆಳಮಟ್ಟದ ವಿಷಯಗಳು ಮೇಲ್ಮಟ್ಟದ ವಿಷಯಗಳಿಗೆ ದಾರಿಬಿಡುತ್ತ ಹೋಗುತ್ತವೆ; ಮಹದೊಡನೆ ಬೆರೆತು ಮಹವಾಗಿ ಬಿಡುತ್ತವೆ; ಅದಿರು ಅಪರಂಜಿಯಾಗುವಂತೆ, ಶಿಲೆ ಶಿಲ್ಪವಾಗುವಂತೆ, ಮಾತು ಜ್ಯೋತಿರ್ಲಿಂಗವಾಗುವಂತೆ, ಬಣ್ಣ ಚಿತ್ರವಾಗುವಂತೆ, ನಡೆ ನೃತ್ಯವಾಗುವಂತೆ ವಿಷಯಗಳು ನಿರ್ವಿಷಯಗಳಾಗಿ ಪರಿವರ್ತನೆ ಹೊಂದಿ ಮಾನವನಿಗೆ ಮಾರಕವಾಗದೆ ತಾರಕವಾಗಿ ಪರಿಣಮಿಸುತ್ತವೆ.

ಸರ್ವ ಸಮಸ್ಯೆಗಳಿಗೂ ಸುಲಭವಾದ, ಸಾಮಾನ್ಯರಿಗೂ ಸಾಧ್ಯವಾಗುವ ಪರಿಹಾರವನ್ನು ಸೂಚಿಸುವುದು ಶರಣರ ಹಿರಿಮೆ, ಹೆಗ್ಗಳಿಕೆ, ಸಮಸ್ಯೆಯನ್ನು ಮಾತ್ರ ಗುರುತಿಸಿ ಅದಕ್ಕೆ ಪರಿಹಾರೋಪಾಯವನ್ನು ತೋರದಿದ್ದರೆ ರೋಗನಿಧಾನ ಮಾಡಿ ಔಷಧ ಕೊಡದೇ ಹೋದಂತೆ. ಇಂಥ ವೈದ್ಯರಿಂದ ರೋಗಿಗಾವ ಲಾಭ? ಭವರೋಗ ವೈದ್ಯರೂ ರೋಗ ನಿಧಾನವನ್ನೂ ಮಾಡಬೇಕು. ಅದಕ್ಕೆ ತಕ್ಕ ಔಷಧವನ್ನೂ ನೀಡಬೇಕು. ಶರಣರು ಈ ಎಡರನ್ನೂ ಮಾಡಿದ ಭವರೋಗ ವೈದ್ಯರು. ಈ ನಿರ್ವಿಷಯ ಸಾಧನೆಯ ನೂತನ ವಿಧಾನವಂತೂ ಸಂಸಾರದಲ್ಲಿದ್ದೇ ಸದ್ಗತಿ ಪಡೆಯಬೇಕೆನ್ನುವವರಿಗೆ ದಾರಿ ದೀಪ, ಧ್ರುವತಾರೆ, ದೀಪಸ್ತಂಭ. ಇದೊಂದನ್ನೇ ಸಾಧಿಸಿದರೂ ಸಾಕು. ಬಾಳು ಬಂಗಾರವಾಗುತ್ತದೆ. ಅಂತೆಯೇ ಸಿದ್ಧರಾಮಶಿವಯೋಗಿಗಳು ಸಾರಿದರು:

> 'ಅರುವತ್ತೆಂಟು ಸಾವಿರ ವಚನಗಳ ಹಾಡಿ ಹಾಡಿ
> ಸೋತಿತೆನ್ನ ಮನ ನೋಡಯಾ
> ಹಾಡುವುದೊಂದೆ ವಚನ. ನೋಡುವುದೊಂದೆ ವಚನ.
> ವಿಷಯ ಬಿಟ್ಟು ನಿರ್ವಿಷಯನಾಗುವುದೊಂದೆ ವಚನ,
> ಕಪಿಲ ಸಿದ್ಧ ಮಲ್ಲೇಶನಲ್ಲಿ'

ನಾವೂ ಕಿನ್ನರಿ ಬ್ರಹ್ಮಯ್ಯಗಳಂತೆ ವಿಷಯಂಗಳು ನಿರ್ವಿಷಯವಾದವಿಂದು' ಎಂದು ಘೋಷಿಸಬಲ್ಲವರಾಗುವೆವೆ?

೬

# ಶರಣರ ದೃಷ್ಟಿಯಲ್ಲಿ ಸುಖದುಃಖಗಳು

ನರನ ಇರವು ಸುಖದುಃಖಗಳ ಸುರುಳಿ. ಇದರಲ್ಲಿ ಸುಖಕ್ಕಿಂತ ದುಃಖವೇ ಹೆಚ್ಚೆಂಬುದು ಅರಿತವರ ಅಭಿಪ್ರಾಯ 'ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ' ಎಂದು ಅಲ್ಲಮ ಪ್ರಭುಗಳು ಉದ್ಗರಿಸಿದರು. ಭುವಿಯ ಬೆಳಕೆನಿಸಿದ ಬುದ್ಧನಂತೂ ದುಃಖದ ಮೂಲವನ್ನೇ ಶೋಧಿಸಲೆಂದು ಸರ್ವವನ್ನೂ ತೊರೆದು ಹೊರಟು ದುಃಖದ ಕಾರಣವನ್ನು ಕಂಡು ಹಿಡಿದುದಲ್ಲದೆ ಅದರ ನಿವಾರಣೋಪಾಯವನ್ನೂ ಬೋಧಿಸಿದ.

ಆದರೆ, ಅವನ ದುಃಖ ಪರಿಹಾರೋಪಾಯದಿಂದ ದುಃಖಿಗಳೇ ಇಲ್ಲದಂತಾದರೆ ಇಹಲೋಕದಲ್ಲಿ? ಅಂತೆಯೇ ಅಲ್ಲಮ ಪ್ರಭುಗಳು ಸಾರಿದರು:

'ಹಳ್ಳದೊಳು ಉರುಳಿ ಬರುತ್ತಿರಲು
ನೊರೆ ತೆರೆಗಳು ತಾಗದಿಪ್ಪವೆ?
ಸಂಸಾರ ಸಾಗರದೊಳಗೆ ಮುಳುಗಾಡುತಿಪ್ಪ
ಪ್ರಾಣಿಗಳಿಗೆ ಸುಖದುಃಖಗಳು ತಾಗದಿಪ್ಪವೆ?'

ಶಿವಲೆಂಕ ಮಂಚಣ್ಣನವರು ಸರಿಯಾಗಿಯೇ ಹೇಳಿದ್ದಾರೆ :

'ಸುಖ ದುಃಖಾದಿಗಳ ಮೀರುವ ಎನ್ನವರ ಕಾಣೆ;
ಸುಖ ದುಃಖಾದಿಗಳ ಮೀರುವ ನಿನ್ನವರ ಕಾಣೆ'

ಕೋಲ ಶಾಂತಯ್ಯನವರು ಎಚ್ಚರಿಸಿದರು:

'ಸುಖ ದುಃಖಗಳು ಸತಿಪುರುಷರಿಗೂ ಸರಿ.'

ತೋಂಟದ ಸಿದ್ಧಲಿಂಗ ಶಿವಯೋಗಿಗಳಂತೂ, 'ಹುಟ್ಟುವುದು ಮಹಾದುಃಖ ಹುಟ್ಟಿ ಸಂಸಾರ ಶರಧಿಯೊಳು ಬದುಕುದುವುದ ದುಃಖ, ಸಾವಸಂಕಟವನದನಾನೇಂಬೆನಯ್ಯ. ಅದು ಆಗಣಿತ ದುಃಖ'ವೆಂದು ತೀರ್ಮಾನಿಸಿದ್ದಾರೆ.

'ಸುಖಿಯಾಗಿಪ್ಪವರ ಒಬ್ಬರನಾದಡೂ ಕಾಣೆನವ್ವಾ!' ಎಂದು ಗಣೇಶ ಮಸಣಯ್ಯನವರ ಪುಣ್ಯಸ್ತ್ರೀ ತಮ್ಮ ಅನುಭವಕ್ಕೆ ಉಸಿರಿತ್ತರು. ಜಾ ಕೋ ದೇಖಾ ದುಖಿಯಾ ದೇಖಾ' ಎಂಬ ಮಹಾಸಂತ ಕಬೀರದಾಸರ ಉಕ್ತಿಯೂ ಇದನ್ನೇ ಪುಷ್ಟೀಕರಿಸುತ್ತದೆ.

ಅಂದಿನವರ ಈ ಅಭಿಮತ ಇಂದಿನ ಕೆಲವರಿಗೂ ಸಮ್ಮತ ಕವೀಂದ್ರ ರವೀಂದ್ರರೆಂದರು: 'ದುಃಖದ ಬಟ್ಟಲಲ್ಲಿ ಸುಖದ ಮದಿರೆ!' ಮಹಾಕವಿ ಮಹಮ್ಮದ ಇಕಬಾಲರೆಂದರು : 'ಅಳಲ ಅಲೆಯ ತಲೆಯ ಮೇಲೆ ನಲಿವುದು ಬಾಳ ಬುದ್ಬುದ!' ಬೇಂದ್ರೆಯವರಿಗೋ 'ಹುದುಗಲಾರದ ದುಃಖ ಹುದುಗಿಸಿ ನಗು'ವ ಬಳಲಿಕೆಯೇ ಬಾಳು. ದುಃಖ ಬದುಕಿನ ಬುನಾದಿ. ಅದನ್ನು ಹಳಿದು ಪ್ರಯೋಜನವಿಲ್ಲ; ತುಳಿದು ಪ್ರಯೋಜನವಿಲ್ಲ; ಅದಕ್ಕೆ ಹುಸಿಯ ಬಣ್ಣ ಬಳಿದು ಪ್ರಯೋಜನವಿಲ್ಲ. It cannot be wished away.

ಹಾದಿ ಯಾವುದು ಹಾಗಾದರೆ? 'ಖ' ಎಂದರೆ ಇಂದ್ರಿಯವೆಂಬ ಅರ್ಥವಿದೆ. ಈ 'ಖ'ಕ್ಕೆ ಹಿತವೆನಿಸುವುದಾವುದೋ ಅದು ಸುಖ; ಅಹಿತವೆನಿಸುವುದು ದುಃಖ. ಆದುದರಿಂದ ಇಂದ್ರಿಯಗಳು ತಮಗೆ ಹಿತವೆನಿಸಿದುದು ದೊರೆತಾಗ ಹಿಗ್ಗುವುದು, ಅಹಿತವೆನಿಸಿದುದು ಸಿಕ್ಕಾಗ ಕುಗ್ಗುವುದು ಸಹಜ,* ಅವುಗಳಿಗೆ ಸುಖತೃಷ್ಣೆ ಸ್ವಾಭಾವಿಕ ಈ ತೃಷ್ಣೆ ಹೋದರೆ ದುಃಖವೂ ಹೋಗುವುದು. ಆದುದರಿಂದ ಇಂದ್ರಿಯ ನಿಗ್ರಹವೇ ಹಾದಿಯೆಂಬುದೊಂದು ವಾದ.

ಆದರೆ ಬಸವಾದಿ ಪ್ರಮಥರು ಬೋಧಿಸಿದುದೇ ಬೇರೆ. 'ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವುವು ದೋಷಂಗಳು: ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು; ಸತಿಪತಿರತಿ ಸುಖವ ಬಿಟ್ಟಿದ್ದರೆ ಸಿಂಧು ಬಲ್ಲಾಳರು, ಸಿರಿಯಾಳ ಚೆಂಗಳೆಯರು?' ಎಂದು ಕೇಳಿದರು ಬಸವಣ್ಣನವರು: 'ಕಂಗಳೇತಕೆ ನೋಡಬೇಡವೆಂದರೆ ಮಾಣವು; ಶ್ರೋತ್ರಂಗಳೇಕೆ ಆಲಿಸ ಬೇಡವೆಂದರೆ ಮಾಣವು; ತ್ವಚೆಯೇಕೆ ಸೋಂಕಬೇಡವೆಂದರೆ ಮಾಣದು?' ಎಂದು ಅಲ್ಲಮ ಪ್ರಭುಗಳು ಹೇಳಿದರು: 'ಇಂದ್ರಿಯಂಗಳ ಕೊಂದಿಹೆನೆಂದಡೆ ಅವು ಕಂದರ್ಪನ ಹಂಗು; ಕಂದರ್ಪನ ಕೊಂದಿಹೆನೆಂದಡೆ ಅವು ಕಂಗಳ ಲಾಭ' ಎಂದು ಮೇದಾರ ಕೇತಯ್ಯನವರು ಎಚ್ಚರಿಸಿದರು.

ಇಂದ್ರಿಯದಮನ ಸರ್ವಮಾನ್ಯ, ಸರ್ವಸಾಧ್ಯ ಪರಿಹಾರವಾಗಲಾರದು. ಅದು ನೈಸರ್ಗಿಕವಾದುದೂ ಆಗಲಾರದು. ಇಷ್ಟೇ ಅಲ್ಲ, ಅವುಗಳನ್ನು ಅತಿಗಳೆವುದು ಪಾಪವೆಂದೇ ಪ್ರತಿಪಾದಿಸಿದ್ದಾರೆ ಅಲ್ಲಮ ಪ್ರಭುದೇವರು:

'ಪಂಚೇಂದ್ರಿಯ ಸಪ್ತಧಾತುವನತಿಗಳೆದಲ್ಲಿ ಫಲವೇನು?
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ

ವಿಷಯಗಳನತಿಗಳೆದಲ್ಲಿ ಫಲವೇನು?
ಇವೆಲ್ಲವ ಕೊಂದ ಪಾಪ ನಿಮ್ಮ ತಾಗುವುದು, ಗುಹೇಶ್ವರಾ!'

ಇದು ಸಂಸಾರಿಯೊಬ್ಬರ ಅಭಿಪ್ರಾಯವಲ್ಲ, ಮಾಯಾಕೋಲಾಹಲರೆಂದೇ, ವೈರಾಗ್ಯ ಚಕ್ರವರ್ತಿಗಳೆಂದೇ ಪ್ರಸಿದ್ಧರಾದ ಪ್ರಭುದೇವರ ಪ್ರಬೋಧೆ. ಇವರ ಪ್ರತಿರೂಪರೆಂದೇ ಪ್ರಖ್ಯಾತರಾದ ತೋಂಟದ ಸಿದ್ಧಲಿಂಗೇಶ್ವರರ ಸಿದ್ಧವಾಣಿಯಿದು:

'ಅರುಹಿನ ಕುರುಹನರಿಯದೆ
ತನುವ ಕರಗಿಸಿ, ಮನವ ಬಳಲಿಸಿದಡೇನು ಪ್ರಯೋಜನ?
ಇಂದ್ರಿಯ ನಿಗ್ರಹವ ಮಾಡಿ
ವಿಷಯಂಗಳ ಬಂಧಿಸಿ,
ಆತ್ಮಗೆ ಬಂಧನವ ಮಾಡಿದರೆ ಆತ್ಮದ್ರೋಹ ಕಾಣಿರೋ!
ಹೀಗೆ ಉದ್ದೇಶದಿಂದ ತನುವ ಒಣಗಿಸಿದರೆ
ಹಸಿಯ ಮರನ ತಂದು ಬಿಸಿಲಿಗೆ ಹಾಕಿದಂತೆ!
ತನುವ ಒಣಗಿಸಿದರೇನಯ್ಯಾ,
ಮನದ ಮಲಿನವು ಹಿಂಗದನ್ನಕ್ಕರ?....
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ'

ಮನದಲ್ಲಿ ಮಾಲಿನ್ಯವಿದ್ದರೆ ಇಂದ್ರಿಯಗಳ ಬಯಕೆಗಳೂ ಮಲಿನವಾಗುತ್ತವೆ: ಮನ ನಿರ್ಮಲವಾದರೆ ಇಂದ್ರಿಯಾಭಿಲಾಷೆಗಳೂ ವಿಮಲವಾಗುತ್ತವೆ. ಮನದ ಶುದ್ಧಿ, ಅಂತರಂಗದ ಆತ್ಮಶುದ್ಧಿ ಮೊದಲು ನಡೆಯಬೇಕು. ಅದಿಲ್ಲದೆ ಹೊರಗೆ ಜಪತಪಾದಿಗಳನ್ನು, ಇಂದ್ರಿಯ ದಮನೋಪಾಯಾದಿಗಳನ್ನು ಮಾಡಿದರೆ ಬಸವಣ್ಣನವರು ಬಣ್ಣಿಸಿದಂತೆ 'ಹುತ್ತವ ಬಡಿದು ಹಾವ ಸಾಯಿಸುವ' ವಿಫಲ ಪ್ರಯತ್ನ. ವ್ಯರ್ಥ ಪರಿಶ್ರಮ, ಮನ ಶುದ್ಧವಾದರೆ ತನು ಶುದ್ಧ, ಜೀವನ ಶುದ್ಧ.

ಇದನ್ನು ಸಾಧಿಸಲು ಶರಣರು ಕಂಡುಕೊಂಡ ಸುಲಭೋಪಾಯವೆಂದರೆ ಲಿಂಗಭೋಗೋಪಭೋಗಿತ್ವ. ಇಂದ್ರಿಯ ಭೋಗಗಳೆಲ್ಲ ಆಯಾ ಇಂದ್ರಿಯಗಳಲ್ಲಿ ಮೂರ್ತಗೊಂಡ ಲಿಂಗ ಮುಖಾಂತರವಾಗಿ ನಡೆದರೆ ಅವು ಸುಖ ದುಃಖಾದಿಗಳಿಗೆ ಕಾರಣವಾಗದೆ ಲಿಂಗಾನಂದಕ್ಕೆ ದಾರಿಯಾಗುವುದು.* ಹೀಗೆ ಮಾಡಿದಾಗ ಶಿವನೇ ಕೊಡುವವ. ಶಿವನೇ ಭೋಗಿಸುವವ ಎಂಬ ಭಾವ ಬಲಿದು ಜೀವತ್ವ ಭಾವದಿಂದ

---

*** 'ಕಾಯಕ್ಕೆ ಸೋಂಕು ಸುಖ, ಜಿಹ್ವೆಗೆ ಮಧುರ ಸುಖ, ದೃಕ್ಕಿಗೆ ಚಿತ್ರಭೇದ ಸುಖ. ಶ್ರೋತ್ರಕ್ಕೆ ನಾದಶಬ್ಧ ಸುಖ, ಘ್ರಾಣಕ್ಕೆ ಸುಗಂಧ ಸುಖ.' ಬಿಬ್ಬ ಬಾಚಯ್ಯನವರು.**

ಭೋಗಿಸುವಾಗ ಸಹಜವಾಗಿ ತಲೆದೋರುವ ಸುಖ ದುಃಖಾನುಭವಗಳು ಇಲ್ಲವಾಗುವುವು.

'ದುಃಖ ಹೋಯಿತು ತನ್ನಲ್ಲಿ ತನಿಲ್ಲದೆ;
ಸುಖ ನಿಂದುದು ತನ್ನಲ್ಲಿ ತನು ಸಿಲುಕದೆ;
ನಿಜ ನಿಂದುದು ಭ್ರಾಂತುದೋರದೆ;
ಸಕಳೇಶ್ವರ ದೇವ ತಾನಾಗಿ ನಿಂದವಂಗೆ.'

ಎಂಬ ಸಕಳೇಶ ಮಾದರಸನ ವಚನದಲ್ಲಿ ಮನನೀಯ.

ಇದೇ ಶರಣನ ಇನ್ನೊಂದು ವಚನ ಜೀವನು ದೇವನಾಗಿಯೇ ಎಲ್ಲವನ್ನೂ ಭೋಗಿಸುವ ತತ್ತ್ವವನ್ನು ಇನ್ನಷ್ಟು ವಿಶದೀಕರಿಸುತ್ತದೆ.

'ಸುಖವನನುಭವಿಸಿ ಆನು ಸುಖದ ಹದನನು ಕಂಡೆ;
ದುಃಖವನನುಭವಿಸಿ ಅನು ದುಃಖದ ಹದನನು ಕಂಡೆ;
ಸಾಕೆಂದು ನಿಂದೆ ನಿಃಭ್ರಾಂತನಾಗಿ
ಸಾಕೆಂದು ನಿಂದೆ – ಸಕಳೇಶ್ವರ ದೇವನಲ್ಲದೆ
ಪೆರತೇನೂ ಇಲ್ಲವೆಂದು ಸಾಕೆಂದು ನಿಂದೆ!'

ಸುಂಕದ ಬಂಕಣ್ಣನವರ ಈ ವಚನವನ್ನೂ ಇಲ್ಲಿಯೇ ಪರಾಮರ್ಶಿಸೋಣ:

'ಸುಖದ ನಿಶ್ಚೈಸಲಿಲ್ಲ; ಅದು ದುಃಖಕ್ಕೆ ಬೀಜ।
ದುಃಖವ ನಿಶ್ಚೈಸಲಿಲ್ಲ; ಸುಖದೊಡಲು !
ಸುಖದುಃಖವರಡು ಕಾಲನ ಸುಂಕಕ್ಕೆ ಒಳಗು!
ಬಂಕೇಶ್ವರ ಲಿಂಗದೊಳಗೆ ಒಬ್ಬರೂ ಇಲ್ಲ!'

ಭೋಗಿಸುವವ, ಸುಖಿಸುವವ, ದುಃಖಿಸುವವ ತಾನೆಂಬ ಭಾವ ಜೀವಿಯಲ್ಲಿರುವವರೆಗೆ ಸುಖ ದುಃಖಗಳು ನೀಡುವ ಹಿಗ್ಗು ಕುಗ್ಗುಳು ಅಪರಿಹಾರ್ಯ. ಒಕ್ಕಲು ಮುದ್ದಯ್ಯನಂತೆ 'ಲಿಂಗವೇ ಭೂಮಿಯಾಗಿ, ಲಿಂಗವೇ ಬೆಳೆಯಾಗಿ, ವಿಶ್ವಾಸವೆಂಬ ಭತ್ತ ಒಲಿದು, ಉಂಡು ಸುಖಿಯಾಗ ಟೀಕೆನ್ನುವವರಿಗೆ ಸುಖ ದುಃಖಗಳ ಜಂಜಾಟವೇ ಇಲ್ಲ. ತೋಂಟದ ಸಿದ್ಧಲಿಂಗೇಶ್ವರರಂತೆ.

'ಎನ್ನರುಹೆ ನಿನ್ನರುಹಯ್ಯ; ನಿನ್ನರುಹೆ ಎನ್ನರುಹಯ್ಯ;
ಎನ್ನ ಜೀವನವೆ ನಿನ್ನ ಜೀವನವಯ್ಯ; ನಿನ್ನ ಜೀವನವೆ
ಎನ್ನ ಜೀವನಯ್ಯ;
ಎನ್ನ ಸುಖವೆ ನಿನ್ನ ಸುಖವಯ್ಯ; ನಿನ್ನ ಸುಖವೆ ಎನ್ನ ಸುಖವಯ್ಯ;
ಎನಗೆ ನಿನಗೆ ಸಂದು ಸಂಶಯವಿಲ್ಲವನಯ್ಯ'

ಎಂದು ಶಿವಭಾವದಲ್ಲಿರುವವರಿಗೆ ಲಿಂಗಭೋಗೋಪಭೋಗಿತ್ವ ಸಹಜ ಸುಲಭ ತತ್ವ. ಇದು ಚೆನ್ನಬಸವಣ್ಣನವರು ತೆರೆದು ತೋರಿರುವ ಪುರಾತನರ ಪಥ:

'ನಡೆವ ನುಡಿವ ಚೈತನ್ಯವುಳ್ಳನ್ನಕ್ಕರ
ಒಡಲ ಗುಣಂಗಳಾರಿಗೆಯೂ ಬಿಡವು ಕೇಳಿರಣ್ಣಾ,
ನೋಡುವ ನಯನ, ಕೇಳುವ ಶ್ರೋತ್ರ,
ನಾಸಿಸುವ ಘ್ರಾಣ, ಮುಟ್ಟುವ ತ್ವಕ್ಕು, ರುಚಿಸುವ ಜಿಹ್ವೆ
ನೋಡುತ್ತೆ, ಕೇಳುತ್ತ ವಾಸಿಸುತ್ತ
ಮುಟ್ಟುತ್ತ, ರುಚಿಸುತ್ತ ಲಿಂಗರ್ಪಿತರ ಮಾಡಿ
ಲಿಂಗಭೋಗೋಪಭೋಗಿಯಾದ ಪ್ರಸಾದಿಗೆ
ಸರ್ವಾಂಗ ಶುದ್ಧವೆಂದಿತಯ್ಯ!
ಕಾಯತ್ರಯಂಗಳು ಜೀವತ್ರಯಂಗಳು ಭಾವತ್ರಯಂಗಳು
ಇವುಗಳನೊಂದು ಮಾಡಿ
ಸುಖ–ದುಃಖ, ಗುಣ–ನಿರ್ಗುಣಂಗಳು
ಇಂತೀ ಉಭಯವ ಲಿಂಗದಲ್ಲಿ ಏಕವ ಮಾಡಿ
ಅಹುದು, ಅಲ್ಲ, ಬೇಕು, ಬೇಡವೆಂಬ ಸಂಶಯದ ಕಳೆದು
ಕೂಡಲ ಚೆನ್ನಸಂಗಯ್ಯನಲ್ಲಿ ಆದಿಯ ಪುರಾತನರು ಕೂಡಿದ
ಪಥವಿದು.

ಈ ಪಥದ ಪಥಿಕರಾದವರು ಸಂಚಿತ, ಪ್ರಾರಬ್ಧ, ಅಗಾಮಿಗಳೆಂಬ ಕರ್ಮದ ತಲೆಗೆ ತಮ್ಮ ಸುಖದುಃಖಗಳನ್ನು ಕಟ್ಟಿ ಕೈಕಟ್ಟಿಕೊಂಡು ಕುಳಿತುಕೊಳ್ಳಬೇಕಿಲ್ಲ. ಹಿಂದಿನ ದುಃಖಗಳ ಬಗ್ಗೆ ನೆನೆದು ನರಳುತ್ತ, ಮುಂದಿನ ದುಃಖಗಳ ಬಗ್ಗೆ ಚಿಂತಿಸುತ್ತ, ಇಂದಿನ ದುಃಖಗಳ ಬಗ್ಗೆ ಕಂಬನಿಗರೆಯುತ್ತ ಮಲಗಬೇಕಿಲ್ಲ. ಉಳಿದ ಆಯುಷ್ಯವನ್ನು ಕಳೆವುದು ಹೇಗೆಂದು ಕಳವಳಿಸಬೇಕಿಲ್ಲ. ಬಾಹೂರ ಬೊಮ್ಮಣ್ಣಗಳ ಈ ವಚನ ದಾರಿ ಥೋರಲಿ ಎಲ್ಲರಿಗೆ;

'ಹಿಂದಳ ಸುಖ ಮುಂದಳ ದುಃಖಂಗಳು,
ಮುಂದಳ ಸುಖ ಹಿಂದಳ ದುಃಖಂಗಳು,
ಇವ ತಾ ಸಂಧಿಸಿ ಅನುಭವಿಸಿದಲ್ಲಿ
ಸಂಚಿತ ಪ್ರಾರಾಬ್ಧ ಅಗಾಮಿಗಳೆಂದು

---

*** ಶೋತ್ರದಲ್ಲಿ ಪ್ರಸಾದಲಿಂಗ, ತ್ವಕ್ಕಿನಲ್ಲಿ ಜಂಗಮಲಿಂಗ, ನೇತ್ರದಲ್ಲಿ ಶಿವಲಿಂಗ, ಜಿಹ್ವೆಯಲ್ಲಿ ಗುರುಲಿಂಗ, ಘ್ರಾಣದಲ್ಲಿ ಆಚಾರ ಲಿಂಗ. ಹೃದಯದಲ್ಲಿ ಮಹಾಲಿಂಗವೆಂದು ಈ ಲಿಂಗಗಳ ಹೆಸರುಗಳು**

ಅಲ್ಲಿ ಅಲ್ಲಿ ಸಂಕಲ್ಪಿಸಿ ಕೇಳಲೇತಕ್ಕೆ?
ಹಿಂದೆ ಅಳಿದವರ ಕೇಳಿ, ಮುಂದೆ ಸಾವವರ ಕಂಡು
ಅಂದಂದಿಗೆ ನೂರು ತುಂಬಿತ್ತೆಂದು
ಸಂದೇಹ ನಿವೃತ್ತಿಯಾಗಿರಬೇಕು
ಸಂಗನ ಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗನರಿವುದಕ್ಕೆ।

ದಿನದಿನವೂ 'ಇಂದೆ ನನಗೆ ನೂರು ತುಂಬಿ'ತೆಂದು ನಂಬಿ ನಿರ್ವ್ಯಾಕುಲನಾಗಿರಬಲ್ಲ ಶರಣನಿಗೆ ಇದು ಸುಖ, ದುಃಖವೆಂಬ ದಂದುಗವೆಲ್ಲಿ? ಎಲ್ಲವನ್ನೂ ಭೋಗಿಸುವವ ಲಿಂಗದೇವನೆಂದು ಭಾವಿಸಬಲ್ಲವನಿಗೆ ಇವುಗಳ ಬಾಧೆಯಲ್ಲಿ? ದುಃಖ ಬೇಡ, ಸುಖ ಬೇಕೆನ್ನುವುದು ಜೀವಿಗೆ ಸಹಜವಾದರೂ ಎಂತ ಸುಖವನ್ನು ಬೇಡಿದರು ಶರಣರು? ಮರುಳ ಶಂಕರದೇವರೇ ಉತ್ತರಿಸಲಿ;

'ಲಿಂಗದಲಳವಟ್ಟ ಸುಖವು ಲಿಂಗದಲ್ಲಿ ಲೀಯವಾಗಿ,
ಲಿಂಗದಲ್ಲಿ ಲೀಯವಾದ ಸುಖವು ಮಹಾಲಿಂಗದಲ್ಲಿ ಲೀಯವಾಗಿ,
ಮಹಾಲಿಂಗದಲ್ಲಿ ಲೀಯವಾದ ಸುಖವು ಜ್ಞಾನಮುಖದಲ್ಲಿ
ಲೀಯವಾಗಿ,
ಜ್ಞಾನಮುಖದಲ್ಲಿ ಲೀಯವಾದ ಸುಖವು ಮಹಾಜ್ಞಾನದಲ್ಲಿ
ಲೀಯವಾಗಿ,
ಮಹಾಜ್ಞಾನದಲ್ಲಿ ಲೀಯವಾದ ಸುಖವು ಸರ್ವಾಂಗ
ಮುಖದಲ್ಲಿ ಲೀಯವಾಗಿ,
ಸರ್ವಾಂಗ ಲಿಂಗದಲ್ಲಿ ಲೀಯವಾದ ಸುಖವು ಸಮರಸ
ಸಂಗದಲ್ಲಿ ಲೀಯವಾಗಿ
ಸಮರಸ ಸಂಗದಲ್ಲಿ ಲೀಯವಾದ ಸುಖವು ಐಕ್ಯ
ಸ್ಥಲದಲ್ಲಿ ಲೀಯವಾಗಿ
ಐಕ್ಯಸ್ಥಲದಲ್ಲಿ ಲೀಯವಾದ ಸುಖವು ನಿರಾಕಾರದಲ್ಲಿ ಲೀಯವಾಗಿ,
ನಿರಾಕಾರದಲ್ಲಿ ಲೀಯವಾದ ಸುಖವು ನಿಃಶಬ್ದದಲ್ಲಿ ಲೀಯವಾಗಿ,
ನಿಃಶಬ್ದದಲ್ಲಿ ಲೀಯವಾದ ಸುಖವು ನಿರಂಜನದಲ್ಲಿ ಲೀಯವಾಗಿ,
ನಿರಂಜನದಲ್ಲಿ ಲೀಯವಾದ ಸುಖವು ಪರಬ್ರಹ್ಮದಲ್ಲಿ ಲೀಯವಾಗಿ,
ಪರಬ್ರಹ್ಮದಲ್ಲಿ ಲೀಯವಾದ ಸುಖವು ಅಹಂಬ್ರಹ್ಮದಲ್ಲಿ
ಲೀಯ ಮಾಡಿದರು ನಮ್ಮ ಶರಣರು.'

ಸುಖದ ಉತ್ತರೋತ್ತರ ಉದಾತ್ತೀಕರಣ, ಪರಮ ಸುಖದ ಪ್ರಾಪ್ತಿ ಶರಣರ ಗುರಿ. ಇದು ಸಾಮಾನ್ಯರಿಗೆ ನುಂಗಲಾಗದ ತುತ್ತು ಎಂದರೆ ಅಂಥವರು ಅಣ್ಣನವರ ಈ ಒಂದು

ವಚನವನ್ನಾದರೂ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ಸಾಕು. :

'ಸುಖ ಬಂದರೆ ಪುಣ್ಯದ ಫಲವನ್ನೆನು;
ದುಃಖ ಬಂದರೆ ಪಾಪದ ಫಲವೆನ್ನೆನು;
ನೀ ಮಾಡಿದೊಡಾಯಿತ್ತೆಂದೆನ್ನನು;
ಕರ್ಮಕ್ಕೆ ಕರ್ತುವೆ ಕಡೆಯೆಂದೆನ್ನೆನು;
ಉದಾಸೀನವಿಡಿದು ಶರಣೆನ್ನೆನು;
ಕೂಡಲಸಂಗಮದೇವಾ,
ನೀ ಮಾಡಿದುಪದೇಶವು ಎನಗೀ ಪರಿಯಲಿ;
ಸಂಸಾರವ ಸವೆಯೆ ಬಳಸುವೆನು.'

# ೭

# ಶರಣರು ಪರಿಶೋಧಿಸಿ ಸಾಧಿಸಿದ ಶಿವಯೋಗ

ಒಬ್ಬ ಸಾಧಾರಣ ಮಾನವ ನಿಸರ್ಗ ತನ್ನಲ್ಲಿ ನಿಕ್ಷೇಪಿಸಿರುವ ಅದ್ಭುತಶಕ್ತಿಗಳಲ್ಲಿ ನೂರರಲ್ಲೊಂದು ಪಾಲನ್ನು ಮಾತ್ರ ಬಳಸಿಕೊಂಡು ಬದುಕು ಸಾಗಿಸುತ್ತಾನೆ. ಇನ್ನುಳಿದ ನೂರಕ್ಕೆ ತೊಂಬತ್ತೊಂಬತ್ತು ಪಾಲು ಶಕ್ತಿ ವ್ಯರ್ಥವಾಗುತ್ತದೆ. ಅದನ್ನೂ ಉಪಯೋಗಿಸಲು ಅವನು ಕಲಿತರೆ ಅವನು ಅತಿಮಾನವನಾಗುತ್ತಾನೆ. ದೇವಮಾನವನಾಗುತ್ತಾನೆ. 'ಅದನ್ನು ಉಪಯೋಗಿಸಿಕೊಳ್ಳುವುದೆಂತು?' ಎಂಬ ಪ್ರಶ್ನೆ ಸಾವಿರಾರು ವರ್ಷಗಳ ಹಿಂದೆಯೇ ಈ ದೇಶದ ಮನೀಷಿಗಳನ್ನು ಕಾಡಿತು. ಅವರು ಕಂಡುಕೊಂಡ ಉತ್ತರನೇ ಯೋಗವಿಜ್ಞಾನ.

ಈ ಯೋಗವಿಜ್ಞಾನ ತಿಳಿಸುವಂತೆ ಬ್ರಹ್ಮಾಂಡದಲ್ಲೆಲ್ಲ ಪಸರಿಸಿರುವ ಚೈತನ್ಯಶಕ್ತಿಯೇ ದೇಹತ್ವವನ್ನು ಪಡೆದು ಮಾನವನಲ್ಲಿಯೂ ಮೂಡಿ ಮೆದುಳುಬಳ್ಳಿಯ ಬುಡದಲ್ಲಿರುವ ಮೂಲಾಧಾರಚಕ್ರದಲ್ಲಿ ಸುಪ್ತವಾಗಿರುತ್ತದೆ. ಇದನ್ನು ಕುಂಡಲಿನಿಯೆಂದು ಕರೆದಿದ್ದಾರೆ. ಇದೊಂದು ಸಾಂಕೇತಿಕ ಸರ್ಪ; ಪ್ರಕೃತಿಯ ಪ್ರತಿಕೃತಿ. ಕುಟಿಲಾಂಗಿ, ಭುಜಂಗಿ, ಶಕ್ತ, ಈಶ್ವರಿ, ಅರುಂಧತಿ– ಇವು ಇದರ ಇತರ ನಾಮಗಳು. ನಮ್ಮ ಎಲ್ಲ ರಾಗ–ದ್ವೇಷಗಳಿಗೆ, ಕ್ಲೇ–ಶೇಷಣಗಳಿಗೆ ಕಾರಣವಾದ ಈ ಅರೆಸುರುಳಿಸುತ್ತಿದ ಸರ್ಪವೇ ಜಾಗೃತಗೊಂಡು ಯೌಗಿಕ ಅಷ್ಟ ಚಕ್ರಗಳಲ್ಲಿ (ಮೂಲಾಧಾರ, ಸ್ವಾದಿಷ್ಠಾನ, ಮಣಿಪೂರ, ಸೂರ್ಯ, ಅನಾಹುತ, ವಿಶುದ್ಧಿ, ಆಜ್ಞಾ, ಸಹಸ್ರಾರ) ಶಕ್ತಿಯಾಗಿ ಪ್ರವಹಿಸಿದಾಗ ಯಾವ ಯಾವ ಯೌಗಿಕ ಚಕ್ರಕ್ಕೆ ಕುಂಡಲಿನೀ ಶಕ್ತಿಪ್ರವಾಹ ತಲುಪುವುದೋ ಆ ಚಕ್ರ ವಿಕಸಿತವಾಗುತ್ತದೆ; ಆ ಚಕ್ರದ ನರ–ನಾಡಿಗಳು ಉದ್ದೀಪನಗೊಂಡು, ಅಂತಃಕರಣದೊಂದಿಗೆ ಸಂಬಂಧಪಟ್ಟ ಜ್ಞಾನ ತಂತುಗಳು (Parasympathetic narves and ductless glands) ಉದ್ದೀಪನಗೊಂಡು ಯೌಗಿಕ ಚಕ್ರದಲ್ಲಿ ಕ್ರಮವಾಗಿ ಚೈತನ್ಯ ಚಿಮ್ಮಿ, ಮನಃಶಕ್ತಿ ವರ್ಧಿಸಿ, ಆತ್ಮವಿಕಾಸ ಸಾಧಿಸಲು ವ್ಯಕ್ತಿ ಶಕ್ತನಾಗುತ್ತಾನೆ. ಇದೇ ಜೀವನಶಕ್ತಿ ಸಹಸ್ರಾರವನ್ನು ತಲುಪಿದಾಗ ಸಮಾಧಿಯ ಯೋಗ್ಯತೆ ಪ್ರಾಪ್ತವಾಗುತ್ತದೆ.

ಮುಂದುವರಿಯುವ ಮುನ್ನ ಈ ಯೌಗಿಕ ಅಷ್ಟಚಕ್ರಗಳ ಸತ್ಯಾಸತ್ಯತೆಯನ್ನು ಒರೆಗೆ ಹಚ್ಚಬೇಕು, ಆಧುನಿಕ ಶರೀರ ಶಾಸ್ತ್ರಜ್ಞರು ಮಾನವ ದೇಹದಲ್ಲಿ ಜ್ಞಾನತಂತುಗಳ

ಸಂಗಮಸ್ಥಾನಗಳನ್ನು ಗುರುತಿಸಿದ್ದಾರೆ. ಬೇರೆ ಬೇರೆ ಸ್ಥಳಗಳಲ್ಲಿ ಕವಲೊಡೆದ ಜ್ಞಾನತಂತುಗಳು ಗ್ರಂಥಿರೂಪದಲ್ಲಿ ಇಲ್ಲಿ ಸೇರುತ್ತವೆ. ಇಂಥ ಒಂದೊಂದು ಸಂಗಮ ಸ್ಥಳವನ್ನೂ ಒಂದು ಚಕ್ರವೆಂದು ಯೋಗವಿಜ್ಞಾನ ಗುರುತಿಸಿದರೆ ಇಂಥ ಚಕ್ರಗಳ ಸ್ಥಾನದಲ್ಲಿಯೇ ಶರೀರಶಾಸ್ತ್ರಜ್ಞರು ಗುರುತಿಸಿರುವ ನಿರ್ನಾಳಗ್ರಂಥಿ (ductless glands)ಗಳು ಇರುವುದು ಕುತೂಹಲಕಾರಿ. ಕೆಳಗಣ ಕೊಷ್ಟಕ ಮನನೀಯ.

**ಯೌಗಿಕ ಚಕ್ರಕ್ಕೆ ಸಮಾನಾಂತರ ಸ್ಥಾನದಲಲಿರುವ ನಿರ್ನಾಳಗ್ರಂಥಿಗಳು:**

| ಯೌಗಿಕ ಚಕ್ರ | ಮಿದುಳು ಬಳ್ಳಿಯಲ್ಲಿ ಯೌಗಿಕ ಚಕ್ರದ ಅಸ್ತಿತ್ವ | ಯೌಗಿಕ ಚಕ್ರಕ್ಕೆ ಸಮಾನಾಂತರ ದಲ್ಲಿರುವ ನಿರ್ನಾಳ ಗ್ರಂಥಿಗಳು |
|---|---|---|
| ೧. ಮೂಲಾಧಾರ | ಜನನೇಂದ್ರಿಯಕ್ಕೆ ಸಮಾನಾಂತರ | ಲೈಂಗಿಕ(testes ovaries)ನಿರ್ನಾಳ ಹಾರ್ಮೋನ್ ಉತ್ಪಾದನಾ ಗ್ರಂಥಿ |
| ೨. ಸ್ವಾಧಿಷ್ಠಾನ | ಮೂತ್ರಪಿಂಡಕ್ಕೆ ಸಮಾನಾಂತರ | ಎಡ್ರಿನಾಲಿಸ್ ಗ್ರಂಥಿ |
| ೩. ಮಣಿಪೂರ | ಜಠರಕ್ಕೆ ಸಮಾನಾಂತರ | ಮೇದೋಜೀರಕ ಗ್ರಂಥಿ |
| ೪. ಸೂರ್ಯ | ಹೃದಯಕ್ಕೆ ಸಮಾನಾಂತರ | ಥೈಮಸ್ ಗ್ರಂಥಿ |
| ೫. ಅನಾಹತ ವಿಶುದ್ಧಿ ಚಕ್ರ | ಕಂಠಮೂಲಕ್ಕೆ ಸಮಾನಾಂತರ | ಥೈರೈಡ್ ಮತ್ತು ಪೆರಾಥೈರೈಯ್ಡ್ ಗ್ರಂಥಿಗಳು |
| ೬. ಆಜ್ಞಾ ಚಕ್ರ | ಭ್ರೂಮಧ್ಯಕ್ಕೆ ಸಮಾನಾಂತರ | ಪಿನಿಯಲ್ ಗ್ರಂಥಿ |
| ೭. ಸಹಸ್ರಾರ | ಮೆದುಳಿನ ತಳಭಾಗ | ಪಿಟ್ಯುಟರಿ ಗ್ರಂಥಿ |

ಈ ಚಕ್ರಗಳು ಆರು ಮಾತ್ರವೆಂಬುದೂ ಇದೆ. ಆಧಾರ – Sacral blexus, ಸ್ವಾದಿಷ್ಠಾನ – Prostatic, ಮಣಿಪೂರ – Epigastric, ಅನಾಹುತ – Cardial, ವಿಶುದ್ಧಿ – Pharyngal, ಆಜ್ಞಾ – Cavernous ಈ ಆರು ಗ್ರಂಥಿಗಳನ್ನು ಹೇಳಲಾಗಿದೆ.

ಪ್ರತಿಯೊಂದು ಚಕ್ರಕ್ಕೂ ಒಂದೊಂದು ಭೂತ, ಕೋಣಿ, ಪದ್ಮ, ಅಕ್ಷರ, ವರ್ಣ, ಅಧಿದೇವತೆಗಳನ್ನು ಹೇಳಲಾಗಿದೆ. ಅಖಿಲ ಭಾರತ ಖ್ಯಾತಿಯ ಮಹಾಯೋಗಿ ಅಲ್ಲಮಪ್ರಭುಗಳ ಈ ವಚನ ಇವೆಲ್ಲವನ್ನು ವಿಶದೀಕರಿಸುತ್ತದೆ.

‘ಗುದಸ್ಥಾನದಲ್ಲಿ ಆಧಾರಚಕ್ರ, ಪೃಥ್ವಿಯೆಂಬ ಮಹಾಭೂತ, ಚತುಃಕೋಣೆ, ಬೌದಳ ಪದ್ಮ, ಅಲ್ಲಿಹ ಅಕ್ಷರ ನಾಲ್ಕು : ವ.ಹ.ಷ.ಸ; ಅದರ ವರ್ಣಸುವರ್ಣ, ಅದಕ್ಕೆ ಅಧಿದೇವತೆ ದಾಕ್ಷಾಯಣಿ; ಲಿಂಗಸ್ಥಾನದಲ್ಲಿ ಸ್ವಾಧಿಷ್ಠಾನ ಚಕ್ರ, ಅಪ್ಪುವೆಂಬ ಮಹಾಭೂತ, ಧನುರ್ಗತಿ, ಷಡುದಳ ಪದ್ಮ, ಅಲ್ಲಿಹ ಅಕ್ಷರವಾರು; ಬ–ಭ–ಮ–ಯ–ರ–ಲಪ; ಅದರ ವರ್ಣ ಪಚ್ಚೆಯ ವರ್ಣ, ಅದಕ್ಕೆ ಅಧಿದೇವತೆ ಬ್ರಹ್ಮನು; ನಾಭಿಸ್ಥಾನದಲ್ಲಿ ಮಣಿಪೂರಕ ಚಕ್ರ. ತೇಜವೆಂಬ ಮಹಾಭೂತ, ತ್ರಿಕೋಣಿ, ದಶದಳ ಪದ್ಮ, ಅಲ್ಲಿಹ ಅಕ್ಷರ ಹತ್ತು; ಡ–ಢ–ಣ–ತ–ಥ–ದ–ಧ–ನ–ಪ–ಫ, ಅದರ ವರ್ಣ ಕೃಷ್ಣವರ್ಣ. ಅದಕ್ಕೆ ಅಧಿದೇವತೆ ವಿಷ್ಣು; ಹೃದಯ ಸ್ಥಾನದಲ್ಲಿ ಅನಾಹತ ಚಕ್ರ, ವಾಯುವೆಂಬ ಮಹಾಭೂತ, ಷಡ್ಕೋಣಿ, ದ್ವಾದಶದಳ ಪದ್ಮ, ಅಲ್ಲಿಹ ಅಕ್ಷರ ಹನ್ನೆರಡು : ಕ–ಖ–ಗ–ಘ–ಙ–ಚ–ಛ–ಜ–ಝ–ಞ–ಟ–ಠ; ಅದರ ವರ್ಣ ಕುಂಕುಮ ವರ್ಣ, ಅದಕ್ಕೆ ಅಧಿದೇವತೆ ಮಹೇಶ್ವರನು; ಕಂಠಸ್ಥಾನದಲ್ಲಿ ವಿಶುದ್ಧಿ ಚಕ್ರ, ಆಕಾಶವೆಂಬ ಮಹಾಭೂತ, ವರ್ತುಳಾಕಾರ, ಷೋಡಶದಳ ಪದ್ಮ, ಅಲ್ಲಿಹ ಅಕ್ಷರ ಹದಿನಾರು; ಅ–ಆ–ಇ–ಈ–ಉ–ಊ–ಋ–ೠ–ಌ–ೡ–ಏ–ಐ–ಓ–ಔ–ಅಂ–ಅಃ; ಅದರ ವರ್ಣ ಶ್ವೇತವರ್ಣ, ಅದಕ್ಕೆ ಅಧಿದೇವತೆ ಸದಾಶಿವನು; ಭ್ರೂಮಧ್ಯಸ್ಥಾನದಲ್ಲಿ ಆಜ್ಞಾಚಕದ್ರ, ಮನವೆಂಬ ಮಹಾಭೂತ, ತಮಂಧಾಕಾರ, ದ್ವಿದಳ ಪದ್ಮ, ಅಲ್ಲಿಹ ಅಕ್ಷರವೆರಡು; ಹಂ–ಕ್ಷಂ; ಅದರ ವರ್ಣ ಮಾಣಿಕ್ಯ ವರ್ಣ, ಅದಕ್ಕೆ ಅಧಿದೇವತೆ ಶ್ರೀಗುರು; ಉನ್ಮನಿ ಜ್ಯೋತಿ ಬ್ರಹ್ಮರಂಧ್ರದಲ್ಲಿ ಸಹಸ್ರದಣ ಪದ್ಮ ಅಲ್ಲಿ ಅಮೃತವಿಹುದು. ಅಲ್ಲಿ ಓಂಕಾರ ಸ್ವರೂಪವಾಗಿ ಗುಹೇಶ್ವರಲಿಂಗವು ಸದಾ ಸನ್ನಿಹಿತನು’. (ಅಲ್ಲಮನ ವಚನ ಚಂದ್ರಿಕೆ – ೧೮೮)

ಈಗ ಅಧೋಮುಖಿಯಾದ ಕುಂಡಲಿನಿಯು ಊರ್ಧ್ವಗಾಮಿಯಾಗುವಂತೆ ಮಾಡಿ ಅದರ ಶಕ್ತಿ ಪ್ರವಾಹವನ್ನು ಈ ಚಕ್ರಗಳಿಗೆ ಹರಿಸುವುದು ಹೇಗೆ – ಎಂಬ ಪ್ರಶ್ನೆ ಎದುರಾಗುತ್ತದೆ. ವೇದಾಗಮೋಪನಿಷತ್ತುಗಳಲ್ಲಿಯೂ, ಭಗವದ್ಗೀತೆಯಲ್ಲಿಯೂ, ಶ್ರೀಮದ್ಭಾಗವತದಲ್ಲಿಯೂ ಬಂದಿರುವ ಯೋಗ ವಿಷಯಕ ಮಂತ್ರ ಶ್ಲೋಕಾದಿಗಳಲ್ಲಿ ಹರಡಿದ ಆಂಶಿಕ ವಿವರಗಳನ್ನು ಮಥಿಸಿ ೨ನೆಯ ಶತಮಾನದ ಪತಂಜಲಿ ಮಹರ್ಷಿ ರಚಿಸಿದ ಯೋಗಸೂತ್ರಗಳೇ ಯೋಗಾನುಷ್ಠಾನಾರ್ಥಿಗಳಿಗೆ ದಾರಿದೀಪಗಳೆನಿಸಿವೆ. ‘ಹಠ ಯೋಗಪ್ರದೀಪಿಕಾ’ ‘ಘೇರಂಡ ಸಂಹಿತಾ’, ‘ಗೋರಕ್ಷ  ಪದ್ಧತಿ’ ‘ಯೋಗ ತಾರಾವಳಿ’ ‘ಸಿದ್ಧಸಿದ್ಧಾಂತ ಪದ್ಧತಿ’ ‘ಯೋಗಬೀಜ’, ‘ಶಿವಯೋಗ ಪ್ರದೀಪಿಕಾ’ ‘ಶಿವತತ್ತ್ವ ರತ್ನಾಕರ’ ‘ಗೋರಕ್ಷ ಸಿದ್ಧಾಂತ’ ‘ಸಿದ್ಧ ಸಿದ್ಧಾಂತ ಸಂಗ್ರಹ’ ಸನತ್ಕುಮಾರ ಸಂಹಿತಾ’ ‘ಸ್ಕಂದ ಪುರಾಣಿ’ ‘ಯೋಗ ವಾಶಿಷ್ಠಂ’ ‘ಯೋಗ ಯಾಜ್ಞಮ್ಕ್ಯಂ’ ‘ಷಟ್ಚಕ್ರ ಚಿಂತಾಮಣಿಃ’ ‘ರಾಜಯೋಗ ಚಿಂತಾಮಣಿಃ’ ‘ವಿಷ್ಣು ಪುರಾಣಂ’ ‘ಯೋಗ ಚಿಂತಾಮಣಿಃ’ ಇತ್ಯಾದಿ ಗ್ರಂಥಗಳೂ ಇವೆ. ಪರಿಣಾಮ, ಅನೇಕ ಯೋಗ ಮಾರ್ಗಗಳ ಉಗಮ; ತತ್ಪರಿಣಾಮವಾಗಿ ಉಪರಿ ನಿರ್ದಿಷ್ಟ ಪ್ರಶ್ನೆಗೆ ಬೇರೆ ಬೇರೆ ಉತ್ತರ. ಪತಂಜಲಿಯ ಯೋಗಸೂತ್ರಗಳಿಗೆ ವ್ಯಾಸ ಭಾಷ್ಯ, ವಾಚಸ್ಪತಿಯವರ ‘ತತ್ವ ವೈಶಾರದೀ’

ಎಂಬ ವಿವರಣಾ ಗ್ರಂಥ, ಭೋಜರಾಜನ 'ರಾಜ ಮಾತಾಂಡ' ಎಂಬ ಭಾಷ್ಯ ಗ್ರಂಥಗಳಿದ್ದು 'ಯೋಗ ಸೂತ್ರ'ಗಳೇ ಯೋಗ ವಿಷಯಕ ಆಧಾರ ಗ್ರಂಥವೆಂದು ಭಾವಿಸಲಾಗಿದೆ.

ಇದರ ಪ್ರಕಾರ ಯೋಗವೆಂದರೆ ಚಿತ್ತವೃತ್ತಿ ನಿರೋಧವೇ (ಯೋಗಶ್ಚಿತ್ತವೃತ್ತಿ ನಿರೋಧಃ) ಚಿತ್ತ ವೃತ್ತಿಗಳು ಐದು ತೆರನಾಗಿವೆ;

೧. ಕ್ಷಿಪ್ತ : ವಿಷಯಗಳ ಮಧ್ಯೆ ಎಸೆಯಲ್ಪಡುವ ಅವಸ್ಥೆ
೨. ಮೂಢ : ನಿದ್ದೆಯಲ್ಲಿರುವಂಥ ಸ್ಥಿತಿ
೩. ವಿಕ್ಷಿಪ್ತ : ಸತ್ವಪ್ರಧಾನವಾದ ಸ್ಥಿತಿಯಾಗಿದ್ದು ಇಲ್ಲಿ ಮನಸ್ಸು ವಿಷಯ ಮತ್ತು ಧ್ಯಾನಗಳ ಮಧ್ಯೆ ಹೊಯ್ದಾಡುತ್ತಿರುತ್ತದೆ.
೪. ಏಕಾಗ್ರ : ಯಾವುದೇ ಒಂದು ವಸ್ತುವಿನಲ್ಲಿ ಏಕಾಗ್ರತೆ ಹೊಂದಿರುವ ಸ್ಥಿತಿ
೫. ನಿರುದ್ಧ : ಮೇಲಿನ ನಾಲ್ಕು ಸ್ಥಿತಿಗಳಿಂದ ಹೊರಗಾದ ಸ್ಥಿತಿ; ಮನಸ್ಸು ಪೂರ್ಣ ಹತೋಟಿಯಲ್ಲಿರುವ ಸ್ಥಿತಿ

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ವೃತ್ತಿಗಳಲ್ಲಿ ಎರಡು ಪ್ರಕಾರ : ಬಾಹ್ಯ, ಆಂತರಿಕ ವಿಪರ್ಯಾಯ, ಪ್ರಮಾಣ, ವಿಕಲ್ಪ, ನಿದ್ರಾಸ್ಥಿತಿ – ಇವು ಮೂರು ಬಾಹ್ಯವೃತ್ತಿಗಳು; ಧ್ಯಾನ ಸಮಾಧಿಗಳೇ ಅರಿತವೃತ್ತಿಗಳು ಬಾಹ್ಯವೃತ್ತಿಗಳ ವಿವರ:

**ವಿಪರ್ಯಾಯ :** 'ವಿಪರ್ಯಾಯೋ ಮಿಥ್ಯಾಜ್ಞಾನಂ ಅತದ್ರೂಪಪ್ರತಿಷ್ಠಂ' ಇದ್ದ ವಸ್ತುವಿನಲ್ಲಿ ಇಲ್ಲದ ವಸ್ತುವಿನ ಜ್ಞಾನ ಮಾಡಿಕೊಳ್ಳುವುದು.

**ಪ್ರಮಾಣ :** 'ಪ್ರತ್ಯಕ್ಷ ಅನುಮಾನ ಆಗಮಾಃ ಪ್ರಮಾಣಾನಿ' (ಪತಾಂಜಲ ಯೋಗ ಸೂತ್ರ –೧–೭) ಇಂದ್ರಿಯಗಳ ಮೂಲಕ ಬಾಹ್ಯವಸ್ತುಗಳನ್ನು ಅರಿತುಕೊಳ್ಳುವುದು ಪ್ರತ್ಯಕ್ಷ ಪ್ರಮಾಣ : ಹೇತುವಿನ ಸಹಾಯದಿಂದ ಸಾಧ್ಯ ವಸ್ತುವನ್ನು ಸಿದ್ಧ ಮಾಡುವುದು ಅನುಮಾನ ಪ್ರಮಾಣ; ಶಾಸ್ತ್ರ ಹಾಗೂ ಆಪ್ತ ಪುರುಷನ ವಚನಗಳಿಂದ ವಸ್ತು ಜ್ಞಾನ ಮಾಡಿಕೊಳ್ಳುವುದು ಆಗಮ ಇಲ್ಲವೆ ಶಬ್ದ ಪ್ರಮಾಣ

**ವಿಕಲ್ಪ :** 'ಶಬ್ದ ಜ್ಞಾನಾನುಪಾತೀ ವಸ್ತು ಶೂನ್ಯೋ ವಿಕಲ್ಪಃ' ಇಲ್ಲದ ವಸ್ತುವಿನ ಬರಿ ಶಾಬ್ದಿಕಜ್ಞಾನ ಉಂಟಾದರೆ ಅದು ವಿಕಲ್ಪ.

**ನಿದ್ರಾ :** 'ಅಭಾವಪ್ರತ್ಯಯಾಲಂಬನಂ ವೃತ್ತಃ ನಿದ್ರಾ', ವಿಪರ್ಯಾಯ, ಪ್ರಮಾಣ, ವಿಕಲ್ಪ ವೃತ್ತಿಗಳಿಲ್ಲದೆ ಚಿತ್ತವು ಸುಪ್ತಸ್ಥಿತಿಯಲ್ಲಿದ್ದರೆ ಅದು ನಿದ್ರೆ

ಬಾಹ್ಯ ವೃತ್ತಿಗಳಿಗೆ ಪರಮಾತ್ಮನನ್ನು ಗ್ರಹಿಸುವ ಸಾಮರ್ಥ್ಯವಿಲ್ಲ : ಧ್ಯಾನ–ಸಮಾಧಿರೂಪಿ ಅಂತರ್ವೃತ್ತಿಗಳಿಂದ ಮಾತ್ರ ದಿವ್ಯಾನುಭವ ಸಾಧ್ಯ. ಮನಸ್ಸನ್ನು ವಿಷಯಗಳತ್ತ ಹರಿಯಲು ಬಿಡದೆ ಹೃದಯಸ್ಥ ಆತ್ಮದೇವನಲ್ಲಿಯೇ ಕೇಂದ್ರೀಕರಿಸುವುದು ಧ್ಯಾನವೃತ್ತಿ, ಅದನ್ನು ಅಲ್ಲಿಯೇ ಸ್ಥಿರಗೊಳಿಸುವುದು ಸಮಾಧಿ.

ಇದು ಗುರಿ. (ಸಂಯೋಗೋ ಯೋಗ ಇತ್ಯಾಹುರ್ಜೀವಾತ್ಮ ಪರಮಾತ್ಮನೋಃ ಯಾಜ್ಞವಲ್ಕ್ಯ) ದಾರಿ? ಪತಂಜಲಿ 'ಚಿತ್ತವೃತ್ತಿ ನಿರೋಧಃ' ಎಂದು ಹೇಳುತ್ತಾನೆ. ಅದಕ್ಕಾಗಿ 'ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧಾರಣಾಧ್ಯಾನಸಮಾಧಯೋಷ್ಟಾಂಗಾನಿ' ಎಂಬ ಸಾಧನ ಕ್ರಯವನ್ನು ಹೇಳಿದ್ದಾನೆ. ಇವುಗಳ ವ್ಯಾಖ್ಯೆಯನ್ನು ಪತಂಜಲಿಯ ಯೋಗ ಸೂತ್ರಗಳಲ್ಲಿ ಕೆಳಗಿನಂತೆ ಕೊಡಲಾಗಿದೆ:

**ಯಮ:** ಅಹಿಂಸಾ ಸತ್ಯಾಸ್ತ್ರೇಯ ಬ್ರಹ್ಮಚರ್ಯಾಪರಿಗ್ರಹಾ ಯಮಾಃ
–ಸೂತ್ರ–೩೦

**ನಿಯಮ :** ಶೌಚ–ಸಂತೋಷ–ತಪಃ?–ಸ್ವಾಧ್ಯಾಯೇಶ್ವರ ಪ್ರಣಿಧಾನಾನಿ ನಿಯಮಾಃ
–ಸೂತ್ರ ೨–೩೨

**ಆಸನ :** ಸ್ಥಿರ ಸುಖಮಾಸನಂ. ಯೋ
–ಸೂತ್ರ ೨–೪೪

**ಪ್ರಾಣಾಯಾಮ :** ತಸ್ಮಿನ್ ಸತಿ ಶ್ವಾಸ ಪ್ರಶ್ವಾಸಯೋರ್ಗತಿ ವಿಚ್ಛೇದಃ ಪ್ರಾಣಾಯಾಮಃ
–ಸೂತ್ರ ೨–೪೬

**ಪ್ರತ್ಯಾಹಾರ :** ಸ್ವ ವಿಷಯಾಸಂಪ್ರಯೋಗೆ ಚಿತ್ತ ಸ್ವರೂಪಾನುಕಾರ ಇವೇಂದ್ರಿಯಾಣಾಂ ಪ್ರತ್ಯಾಹಾರಃ – ಸೂತ್ರ ೨–೫೪

**ಧಾರಣ :** ದೇಶಬಂಧಶ್ಚಿತ್ತಸ್ಯಧಾರಣಾ – ಸೂತ್ರ ೩–೧

**ಧ್ಯಾನ :** ತತ್ರ ಪ್ರತ್ಯಯೈಕತಾನತಾಧ್ಯಾನಂ – ಸೂತ್ರ ೩–೨

**ಸಮಾಧಿ :** ತದೇವಾರ್ಥ ಮಾತ್ರ ನಿರ್ಭಾಸಂ ಸ್ವರೂಪಶೂನ್ಯ ಮಿವ ಸಮಾಧಿಃ
– ಸೂತ್ರ ೩–೩

ಯಮ ನಿಯಮಾದಿಗಳು ಒಳಗೊಳ್ಳುವ ಅಂಗಗಳ ವ್ಯಾಖ್ಯೆಯನ್ನು ಪತಂಜಲಿ ಯೋಗಸೂತ್ರ ಭಾಷ್ಯಕಾರ ವ್ಯಾಸ ಕೊಟ್ಟಿದ್ದಾನೆ. ಅವುಗಳನ್ನು ತಿಳಿದುಕೊಳ್ಳುವುದು ಅಗತ್ಯವಾದುದು.

**೧. ನಿಯಮ :**

ಅಹಿಂಸೆ – 'ತತ್ರಾಹಿಂಸಾ ಸರ್ವಥಾ ಸರ್ವಥಾ ಸರ್ವಭೂತನಾಮನಭಿದ್ರೋಹಃ'
(ಭಾಷ್ಯ – ೩೦)

ಅರ್ಥಾತ್, ಯಾವ ರೀತಿಯಲ್ಲಿಯೂ, ಯಾವ ಕಾಲದಲ್ಲಿಯೂ ಯಾವ ಜೀವಿಗಳಿಗೂ ತೊಂದರೆಯನ್ನುಂಟು ಮಾಡದಿರುವುದೇ ಅಹಿಂಸೆ. ಇದು ನೇತ್ಯಾತ್ಮಕ ವ್ಯಾಖ್ಯೆ. ಇತ್ಯಾತ್ಮಕವಾಗಿ ಹೇಳುವುದಾದರೆ 'ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ' ಎಂಬ ಬಸವೋಕ್ತಿಯನ್ನು ಉದಾಹರಿಸಬೇಕು; 'ತನ್ನಂತೆ ಪರರ ಬಗೆಯಬೇಕು' ಎಂಬ ಸರ್ವಜ್ಞವಚನವನ್ನು ಉದಾಹರಿಸಬೇಕು; 'ಆತ್ಮವತ್ಪತ್ರಿ ಕೂಲಾನಿ ನ ಪರೇಷಾಂಸಮಾಚರೇತ್' ಎಂಬ ಸುಭಾಷಿತವನ್ನು ಉದಾಹರಿಸಬೇಕು, ಜೈನ ಬೌದ್ಧ ಧರ್ಮಗಳ ಧ್ಯೇಯವಾಕ್ಯಗಳಾದ 'ಅಹಿಂಸಾ ಪರಮೋ ಧರ್ಮಃ' ಮತ್ತು 'ಸಮ್ಯಕ್ ಕರ್ಯಾಂತುಗಳನ್ನು ಉದಾಹರಿಸಬೇಕು. ಪಾತಂಜಲಿ 'ಏಕೇ ಜಾತಿ ದೇಶಕಾಲಸಮಯಾನವಚ್ಛಿನ್ನಾ ಸಾರ್ವಭೌಮ ಮಹಾವ್ರತಮ್ = ಜಾತಿ, ದೇಶ, ಕಾಲ ಮತ್ತು ಇವುಗಳಿಂದ ಸೀಮಿತವಾಗದಿದ್ದರೆ ಅಹಿಂಸೆ ಸಾರ್ವಭೌಮ ಮಹಾವ್ರತ'ವೆಂದು ಹೇಳಿರುವುದು ಅತ್ಯಂತ ಸೂಕ್ತವಾದುದು.

ಸತ್ಯ – ಪಾತಂಜಲ ಯೋಗಸೂತ್ರಗಳ ವ್ಯಾಸಭಾಷ್ಯ ಸತ್ಯವನ್ನು
ಹೀಗೆ ನಿರ್ವಚಿಸಿದೆ;

'ಸತ್ಯಂ ಯಥಾರ್ಥೇ ವಾಙ್ಮನಸಿ । ಯಥಾ ದೃಷ್ಟಂ ಯಥಾ
ಶ್ರುತಂ ವಾಙ್ಮನಶ್ಚೇತಿ'

'.... ಮಾತು ಮನಗಳಲ್ಲಿರುವ ಯಥಾರ್ಥತೆಯೇ ಸತ್ಯ; ಕಂಡುದನ್ನು ಕಂಡಂತೆ, ಕೇಳಿದಂತೆ ಆಲೋಚಿಸುವುದು ಮತ್ತು ನುಡಿಯುವುದೇ ಸತ್ಯ; ಕಂಡುದನ್ನು ಕಂಡಂತೆ, ಕೇಳಿದಂತೆ ಆಲೋಚಿಸುವುದು ಮತ್ತು ನುಡಿಯುವುದೇ ಸತ್ಯ'. ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ' ಎಂಬ ಸುಭಾಷಿತಾರ್ಥದಲ್ಲಿ ಸತ್ಯವನ್ನು ನುಡಿದರೆ ಸಾಲದು, ಅದರಂತೆ ನಡೆಯುವುದು ಅಗತ್ಯವೆಂಬುದು ಸೂಚಿತವಾಗಿದೆ. 'ದಿಟವ ನುಡಿವುದು, ನುಡಿದಂತೆ ನಡೆವುದು' ಎಂಬ ಬಸವಸೂತ್ರ ಸತ್ಯದ ಸ್ವರೂಪನಿರ್ಣಯಕ್ಕೆ ಸಹಕಾರಿ. 'ಸತ್ಯಂವದ' ಎಂಬುದು ಆದೇಶ.

**ಅಸ್ತೇಯ** – 'ಕಳಬೇಡ' ಎನ್ನುವುದು ಅಣ್ಣನವರ ಒಂದನೆಯ ಆದೇಶ, ಕಳ್ಳತನವೆಂದರೆ ಇನ್ನೊಬ್ಬರ ವಸ್ತುವನ್ನು ಕದಿಯುವುದು ಮಾತ್ರವಲ್ಲ. ಶರಣರಿದರ ನೂರಾರು ಮುಖಗಳನ್ನು ತೋರಿಸಿದ್ದಾರೆ. 'ತುಡುಗುಣಿತನ' ಬಹುರೂಪಿಯಾದುದು. ಕೃತಿಚೌರ್ಯ, ಮಿಗುತಾಯಮೌಲ್ಯದ ಚೌರ್ಯ, ದುಡಿಯದೆ ಪಡೆಯುವುದು, ದೇವರ, ಧರ್ಮದ, ಮತದ, ಮಹಾಪುರುಷರ ಹೆಸರಿನಲ್ಲಿ ದಾನ–ದಕ್ಷಿಣೆ–ಯಜ್ಞ–ಯಾಗ–ಯಾತ್ರೆ–ಅಭಿಷೇಕ ಇತ್ಯಾದಿ ದೊಡ್ಡ ಹೆಸರುಗಳನ್ನು ದೋಚುವುದು – ಒಂದೇ, ಎರಡೇ, ನೂರಾರು ಈ ಕಳ್ಳತನದ ಕಳ್ಳರೂಪಗಳು. ಇವೆಲ್ಲವುಗಳನ್ನು ತ್ಯಜಿಸುವುದು ಅಸ್ತೇಯ.

**ಬ್ರಹ್ಮಚರ್ಯ –** ‘ವೀರ್ಯಧಾರಣಂ ಬ್ರಹ್ಮಚರ್ಯಮ್’ ಎನ್ನುತ್ತವೆ ಶಾಸ್ತ್ರ. ‘ಬ್ರಹ್ಮಚರ್ಯಂ ಗುಪ್ತೇಂದ್ರಿಯಸ್ಯೋಪಸ್ಥಸ್ಯ ಸಂಯಮಃ’ ಎನ್ನುತ್ತದೆ ವ್ಯಾಸ ಭಾಷ್ಯ. ಬ್ರಹ್ಮಚರ್ಯದ ಅರ್ಥ ಇದಕ್ಕೂ ವಿಶಾಲವಾದುದು. ಸಂಯಮಶಕ್ತಿಯ ಸಂಅದನೆಯೇ ಬ್ರಹ್ಮಚರ್ಯದ ಗುರಿ. ಸಂಸಾರಿಯಾದವನೂ ಸಂಯಮದಿಂದ ವೀರ್ಯನಾಶವನ್ನು ತಪ್ಪಿಸಿಕೊಂಡು ವೀರ್ಯರಕ್ಷಣೆಯು ನೀಡುವ ಗ್ರಹಣಶಕ್ತಿ, ಸ್ಮರಣಶಕ್ತಿ, ಪ್ರಜ್ಞಾಶಕ್ತಿ, ಕಾರ್ಯಶಕ್ತಿಗಳ ಹೆಚ್ಚಳವನ್ನು ಪಡೆದುಕೊಳ್ಳಬಹುದು. ಸತಿಯಿದ್ದೂ ವ್ರತಿಯಾಗಿ ಬ್ರಹ್ಮಚಾರಿಗಳಾಗಿದ್ದ ಬಸವ – ಬಾಪೂಜಿಯಂಥವರು ಇದಕ್ಕೆ ನಿದರ್ಶನ. ಶ್ರೀ ಶಂಕರಾಚಾರ್ಯರು ಸದ್ಗ್ರಂಥಗಳ ಅಧ್ಯಯನದಲ್ಲಿರುವವರು, ಬ್ರಹ್ಮವಸ್ತುವಿನ ಆಧಾರದಲ್ಲಿಯೇ ನಡೆಯುವವರು, ‘ಅಹಂ ಬ್ರಹ್ಮಾಸ್ಮಿ’ ಎಂಬ ಮಹಾವಾಕ್ಯದಲ್ಲಿ ಅಚಲ ನಿಷ್ಠೆಯುಳ್ಳವರು ಬ್ರಹ್ಮಚಾರಿಗಳೇ, ಆದರೂ ಹನ್ನೆರಡು ವರ್ಷಗಳ ನೈಷ್ಠಿಕ ಬ್ರಹ್ಮಚರ್ಯೆ ಅಗಾಧಶಕ್ತಿದಾಯಕವೆನ್ನುತ್ತಾರೆ ಸ್ವಾಮಿ ವಿವೇಕಾನಂದರು:

‘Power comes to him who observes unbroken brahmacharya for a period of twelve years. Complete continenance gives great intellectual and spiritual power’. ಮುಂದುವರಿದು ಅವರೇ ಬ್ರಹ್ಮಚರ್ಯದ ಸಾರವತ್ತಾದ ನಿರ್ವಚನವನ್ನು ನೀಡುತ್ತಾರೆ. ‘Chastity in thought, word and deed always and in all conditions is what is called Brahmacharya. The Brahmacharin must be pure in thought, word and deed’.

ಅಪರಿಗ್ರಹ – ವಸ್ತುಗಳನ್ನು ಸಂಗ್ರಹಿಸುತ್ತ ವಸ್ತುಗಳ ಗುಲಾಮನಾಗುವುದೇ ಪರಿಗ್ರಹ ಬುದ್ಧಿ, ಸಂಗ್ರಹಬುದ್ಧಿ, (Possesive impulse)ಇದಕ್ಕೆ ದಾಸನಾದವನಿಗೆ ಜೀವನದ ಉನ್ನತ ಮೌಲ್ಯಗಳತ್ತ (higher values of life) ಲಕ್ಷ್ಯವೇ ಹೋಗುವುದಿಲ್ಲ. ಯೋಗಸಾಧನೆ ದೂರನೇ ಉಳಿಯಿತು. ಸಭ್ಯತೆ ಸಂಸ್ಕೃತಿಗಳೂ ಅಪ್ರಿಯವಾಗುತ್ತವೆ ಅವನಿಗೆ. ಆದುದರಿಂದ ಈ ಸಂಗ್ರಹ ಬುದ್ಧಿಯ ಒಂಟೆ ಹಿಡಿತವನ್ನು ತಪ್ಪಿಸಿಕೊಳ್ಳಬೇಕು. ವ್ಯಾಸಭಾಷ್ಯದ ಈ ವ್ಯಾಖ್ಯಾನ ಮನನೀಯ ‘ವಿಸಯಾಣಾಮಾರ್ಜನರಕ್ಷಣಕ್ಷಯಸಂಗ ಹಿಂಸಾದೋಷದರ್ಶನಾದ–ಸ್ವೀಕರಣಮಪರಿಗ್ರಹ ಇತ್ಯತೇ ಯಮಾಃ’ – ಎಂದರೆ ವಸ್ತುಗಳ ಸಂಪಾದನೆಯು ಅವುಗಳ ರಕ್ಷಣೆ, ನಾಶ ಮತ್ತು ಅವುಗಳಲ್ಲಿ ಆಸಕ್ತಿ ಅವುಗಳಿಗಾಗಿ ಹಿಂಸೆ ಇತ್ಯಾದಿ ದೋಷಗಳಿಂದ ಕೂಡಿರುವುದುರಿಂದ ಅವುಗಳನ್ನು ಸ್ವೀಕರಿಸದಿರುವುದೇ ಅಪರಿಗ್ರಹ.

ಜೀವನಾಗತ್ಯದ ವಸ್ತುಗಳನ್ನು ನಿರಾಕರಿಸಬೇಕೆಂದು ಇದರ ಅರ್ಥವಲ್ಲ. ಬದುಕಲು ಅಪರಿಹಾರ್ಯವಾಗಿ ಬೇಕಾಗುವ ಗಾಳಿ, ನೀರು, ಬೆಳಕು, ಅನ್ನ, ಅರಿವೆ, ಮುಂತಾದವನ್ನು ನಿರಾಕರಿಸುದಾದರೂ ಹೇಗೆ? ಪತಂಜಲಿ ಪ್ರಣೀತ ಅಷ್ಟಾಂಗ ಮುಂತಾದವನ್ನು

ನಿರಾಕರಿಸುವುದಾದರೂ ಹೇಗೆ? ಪತಂಜಲಿ ಪ್ರಣೀತ ಅಷ್ಟಾಂಗ ಯೋಗದಲ್ಲಿ (ಯೋಗ ಸೂತ್ರ ೫೫೫ : ೩೧) ಕಂಠ ಮೂಲಕ್ಕೆ ಸಮಾನಾಂತರದಲ್ಲಿ ಮಿದುಳು ಬಳ್ಳಿಯಲ್ಲಿರುವ ವಿಶುದ್ಧಿ ಚಕ್ರದಡೆಗೆ ಕುಂಡಲಿನೀ ಶಕ್ತಿ ಹರಿದಾಗ ಆಹಾರವಿಲ್ಲದೆಯೆ ಸೂರ್ಯಶಕ್ತಿಯನ್ನು ನೇರವಾಗಿ ಆಹ್ವಾನಿಸಿ ಆಸ್ವಾದಿಸಿ ತನ್ನ ದೈಹಿಕ ಕ್ರಿಯೆಗೆ ಬೇಕಾಗುವ ಚೈತನ್ಯವನ್ನು ಪಡೆಯಬಹುದೆಂದು ಹೇಳಿದ್ದರೂ ಎಷ್ಟು ಜನರು ಆ ರೀತಿ ಆಹಾರವಿಲ್ಲದೆ ಇರಬಲ್ಲರು? ಯುಗಕ್ಕೊಬ್ಬರು. ಸಾಮಾನ್ಯ ಸಾಧಕರು 'ಯುಕ್ತಾಹಾರ ವಿಹಾರಿ'ಗಳಾಗಿಯೇ ಇರಲೇಬೇಕಾಗುತ್ತದೆ. ಆದುದರಿಂದ ತನ್ನ ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವಷ್ಟು ನ್ಯೂನತಮ ವಸ್ತುಗಳನ್ನು ಪರಿಗ್ರಹಿಸಿದರೆ ಅಪರಿಗ್ರಹ ಭಂಗವಾಗುವುದಿಲ್ಲ. ದುರಾಶಾ ಪ್ರೇರಿತನಾಗಿ ಅಗತ್ಯಕ್ಕಿಂತ ಹೆಚ್ಚಿನ ವಸ್ತುಗಳನ್ನು ಸಂಗ್ರಹಿಸರತೊಡಗಿದಾಗ ಅದು ತುಚ್ಛ ಪರಿಗ್ರಹವಾಗುತ್ತದೆ. ಶರಣರ ವಿಚಾರಧಾರೆ ಈ ತೊಡಕನ್ನು ಬಿಡಿಸುವಲ್ಲಿ ಸಫಲವಾಗಿದೆ. ತನ್ನ ಕನಿಷ್ಠತಮ ಅಗತ್ಯಗಳಿಗಿಂತಲೂ ಹೆಚ್ಚಾಗಿ ಸಂಗ್ರಹಿಸಿದರೆ ಆ ಮಿಗುತಾಯವನ್ನು ದಾಸೋಹಕ್ಕೆ ಸಮರ್ಪಿಸಬೇಕು. ಈ ನಿಜಗುರುಸ್ವತಂತ್ರ ಸಿದ್ಧಲಿಂಗೇಶ್ವರಾಂಕಿತದ ವಚನ ಅದೆಷ್ಟು ಮನೋಜ್ಞ!

'ಬಂದುದ ಕಿರಿದು ಮಾಡಿ, ಬಾರದುದ ಹಿರಿದು ಮಾಡಿ
ಆವಾಗಲೂ ಚಿಂತಿಸಿ ಬಳಲುತ್ತಿರಲೇಕೆ?
ಇರುಹೆ ಅರುದಿಂಗಳ ದವಸವ ಕೂಡಿ ಹಾಕುವಂತೆ
ತಾ ಕಿರಿದಾದರೂ ಆಸೆ ಹಿರಿದಾಯಿತ್ತು!
ಸ್ಥೂಲಕಾಯವಾದ ಮದಗಜಕ್ಕೇನು ಮುಂದಕ್ಕೆ
ಬೇಕೆಂಬ ಆಸೆಯಯಂಟೆ?
ಇಲ್ಲ. ಇರುಹೆಯ ಆನೆಯ ಅಂತರವ ನೋಡಿರಣ್ಣ!
ಅರಿದು ಸಲಹುವ ಶಿವನಿದ್ದ ಹಾಗೆ, ಬರಿದೆ ಆಸೆಯಿಂದಲೇಕೆ ಸಾವಿರಿ,
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಾಧೀನವನರಿಯದೆ?'

ಆಶೆಯೇ ಪಾಶ, ಆಶೆಯೇ ದಾಸತ್ವ. ಆಶಾರಹಿತತ್ವನೇ ಈಶತ್ವ. ಈ ಆಶಾಪಾಶವನ್ನು ಹರಿಯಲು ಅಪರಿಗ್ರಹವ್ರತ ಅನಿವಾರ್ಯ.

**೨ – ನಿಯಮ :**

ಶೌಚ ಇದು ಎರಡು ವಿಧ : ಒಂದು ಬಾಹ್ಯಶೌಚ; ಎರಡು, ಅಂತರಿಕಶೌಚ, ಬಾಹ್ಯಶೌಚಕ್ಕೆ ಮೃಜ್ಜಲಾದಿಗಳಿಂದ ಮಜ್ಜನ ಸಾಕು; ಆಂತರಿಕ ಶೌಚಕ್ಕೆ ಹಠಯೋಗ ಪ್ರದೀಪಿಕೆ (೨–೨೨) ಷಟ್ಕರ್ಮಗಳನ್ನು ಹೇಳಿದೆ.

'ಧೌತಿರ್ಬಸ್ತಿಸ್ಥತಾ ನೇತಿ ಸ್ತ್ರಾಟಕಂ ನೌಲಿಕಂ ಕಥಾ ।
ಕಪಾಲಭಾತಿಶ್ಯೇತಾನಿ ಷಟ್ಕರ್ಮಾಣಿ ಪ್ರಚಕ್ಷತೇ ॥

ಧೌತಿ, ಭಸ್ತಿ, ನೇತಿ, ತ್ರಾಟಕ, ನೌಲಿ, ಕಪಾಲಭಾತಿ – ಈ ಷಟ್ಕರ್ಮಗಳಿಂದ ಅಂತರಿಕಶುದ್ಧಿ, ಧೌತಿಯೆಂದರೆ ತೊಳೆಯುವುದು. ಇದು ನಾಲ್ಕು ವಿಧ: ಅಂತರ ಧೌತಿ, ದಂತಧೌತಿ, ಹೃದೌತಿ, ಮಲಶೋಧನ. ಅಂತರಧೌತಿಯಲ್ಲಿ ನಾಲ್ಕು ವಿಧಗಳು : ವಾತಸಾರಧೌತಿ, ವಾರಿಸಾರಧೌತಿ, ವಹ್ನಿಸಾರಧೌತಿ, ಬಹಿಷ್ಕೃತಧೌತಿ. ದಂತಧೌತಿಯಲ್ಲಿಯೂ ನಾಲ್ಕು ಪ್ರಕಾರಗಳು : ದಂತಮೂಲಧೌತಿ, ಜಿಹ್ವಾಮೂಲ ಧೌತಿ, ಕರ್ಣಧೌತಿ, ಕಪಾಲರಂಧ್ರಧೌತಿ. ಹೃದ್ಧೌತಿಯಲ್ಲಿ ಮೂರು ಪ್ರಕಾರಗಳು: ದಂಡಧೌತಿ, ವಯನಧೌತಿ, ವಾಸಧೌತಿ, ಮಲಶೋಧನ ಧೌತಿಯಲ್ಲಿ ಉಪವಿಭಾಗಗಳಿಲ್ಲ. ಇವೆಲ್ಲವುಗಳ ವಿವರಣೆ ಈ ಲೇಖನದ ವ್ಯಾಪ್ತಿಗೆ ಹೊರಗು.

ಬಸ್ತಿಯಲ್ಲಿ ಎರಡು ಬಗೆ : ಜಲಬಸ್ತಿ ಮತ್ತು ಸ್ಥಲಬಸ್ತಿ
ನೇತಿಯಲ್ಲಿ ಮೂರು ಪ್ರಕಾರಗಳು : ಜಲನೇತಿ, ಕಪಾಲನೇತಿ, ಸೂತ್ರನೇತಿ
ತ್ರಾಟಕದಲ್ಲಿ ಸೂರ್ಯತ್ರಾಟಕ, ಚಂದ್ರತ್ರಾಟಕ, ದೀಪತ್ರಾಟಕ, ಮರದೆಲೆಗಳ ತ್ರಾಟಕ ವಾರಿತ್ರಾಟಕ, ದರ್ಪಣತ್ರಾಟಕ, ಮೂರ್ತಿತ್ರಾಟಕ, ಓಂತ್ರಾಟಕಗಳೆಂಬ ಪ್ರಕಾರಗಳು
ನೌಲಿಯಲ್ಲಿ ಉಪಭೇದಗಳಿಲ್ಲ.
ಕಪಾಲಭೌತಿಯಲ್ಲಿ ವ್ಯುತ್ಕ್ರಮವೆಂಬ ಮೂರು ಭೇದಗಳು.
ಇವುಗಳ ವಿವರಣೆಗೂ ಸ್ಥಲ ಸಾಲದು.

ನಿಯಮದಲ್ಲಿ ಎರಡನೆಯದೇ ಸಂತೋಷ. ಸಂತೋಷ ಯಾರಿಗೆ ಬೇಡ? ಆದರೆ ಎಷ್ಟು ಜನರಿಗೆ ಸಿಕ್ಕುತ್ತದೆ ನಿಜವಾದ ಸಂತೋಷ? ಬಯಸುವುದು ಸಂತೋಷವನ್ನು, ಪಡೆಯುವುದು ವಿಷಯ ವ್ಯಾಕುಲತೆಯನ್ನು, ಬಯಸುವುದು ಸುಖವನ್ನು, ಪಡೆಯುವುದು ದುಃಖವನ್ನು, ಮಗ್ಗೆಯ ಮಾಯಿದೇವ ಪ್ರಭುವಿನ ಈ ಪದ್ಯ ಹೃದ್ಯ:

‘ಸುಖಮಂ ಕಾಂಕ್ಷಿಪರೈಸೆ ಸರ್ವರುಮನೇಕಾಯಸದಿಂ ಯತ್ನದಿಂ–
ದಖಿಲೋಪಾಯದಿನಲ್ಲದೂಹಿಪರೆ ನಾನಾ ಯುಕ್ತಿಯಿಂ
ದುಃಖಮಂ?
ಸುಖಕೆಂದಿಟ್ಟ ಸೊಡರ್ ನಿಮಿರ್ದು ಮನೆಯಂ ಸುಟ್ಟಂದದಿಂ
ದುಃಖಮಂ
ಸುಖಕಾಮತ್ವವೆ ಮಾಳ್ಪೊದಂತದು ಭವತ್ಕೃತ್ಯಂ ಶಿವಾವಲ್ಲಭಾ।

ಜಾರ್ಜ ಸಾಂತಾಯನರ ಈ ಮಾತುಗಳೂ ಮಾರ್ಮಿಕ : ‘Nothing happensts to us as we would. We want place and make war; we need science and obey the will to believe; we want art and flounder among whimslcalities;

we believe in general comfort and equality and we strain every nerve to become millionairs'

ಆದಯ್ಯನ ಈ ವಚನ ನಿಜಸುಖೇಚ್ಛುಗಳಿಗೆ, ಸಂತೋಷಾರ್ಥಿಗಳಿಗೆ ದಾರಿದೀಪ :

'ಸಕಲೇಂದ್ರಿಯಂಗಳಲ್ಲಿ ವಿಕಾರಿಸುವ ಮನವ
ಸೆಳೆದು ನಿಂದಾತನೇ ಸುಖಿ;
ಪಂಚೇಂದ್ರಿಯಂಗಳಿಚ್ಛೆಯಲ್ಲಿ ಮನಂಗೊಂಡು
ಸುಳಿವಾತ ದುಃಖಿ।
ಮನ ಬಹಿರ್ಮುಖವಾಗಲು ಮಾಯಾ ಪ್ರಪಂಚಿ
ಮನವಂತರ್ಮುಖಿಯಾದರೆ ಅವಿರಳ ಜ್ಞಾನಿ
ಮನವು ಮಹದಲ್ಲಿ ನಿಂದಿರಲಾತ ಮುಕ್ತನು
ಮನೋರ್ಲಯವಾದರೆ ಸೌರಾಷ್ಟ್ರ ಸೋಮೇಶ್ವರ ಲಿಂಗದಲ್ಲಿ
ಅಭೇದ್ಯನು'

**೩. ನಿಯಮ :**

ತಪಸ್ಸು – ತಪಸ್ಸು ವಿಶಾಲಾರ್ಥವುಳ್ಳುದು. ತೈತರೀಯೋಪನಿಷತ್ತು ತಪಸ್ಸಿನ ಅರ್ಥವನಿಂತು ಕ್ರೋಢಿಕರಿಸಿದೆ: 'ಋತಂ ತಪಸ್ಸತ್ಯಂತಪಸಶ್ರುತಂ ತಪೊದ ಮಸ್ತಪಶ್ಯಮಸ್ತಪೋ ದಾನಂ ತಪೋ ಭೂರ್ಭುಸ್ಸುವರ್ಬ್ರಹ್ಮೈ ತದುಸಾಶ್ಯೀ ತತ್ತಪಃ' ಮನದಲ್ಲಿ ಧರ್ಮಾವಿರುದ್ಧವಾದ ವಿಷಯವನ್ನು ಯೋಚಿಸುವುದು, ಫಲಾಭಿಸಂಧಿ ಇಲ್ಲದೆ ಮಾಡುವ ಕರ್ಮವು, ಸತ್ಯವಾದ ನಡೆ – ನುಡಿ, ವೇದಾಂತಶ್ರವಣ, ಶಮದಮಾದಿ ಗುಣಯುಕ್ತನಾಗರುವುದು, ದಾನ, ದೇವತಾರಾಧನೆ, ಯಾಗಾದಿ ಕರ್ಮ – ಇವೆಲ್ಲ ತಪಸ್ಸೇ. ಅಲ್ಲದೆ, ಸ್ವರ್ಗ ಮರ್ತ್ಯ ಪಾತಾಳಲೋಗಳೆಲ್ಲವೂ ಬ್ರಹ್ಮಸ್ವರೂಪನೆಂದು ಭಾವಿಸುವುದು, ಅರ್ಥಾತ್, ಆಕಾರ, ಉಕಾರ, ಮಕಾರಸ್ವರೂಪವಾದ ಓಂಕಾರದಿಂದ ಸಮಾಧಿಯನ್ನು ಸಾಧಿಸುವುದು ತಪಸ್ಸೆನಿಸುವುದು.

ತಪಸ್ಸಿನಲ್ಲಿ ಮೂರು ವಿಧ : ದೈಹಿಕ, ವಾಚಕ, ಮಾನಸಿಕ.

ಇವುಗಳ ಬಗ್ಗೆ ಅನ್ಯತ್ರ ಸಿಕ್ಕುವ ವಿವರಣೆಗಳೇನೇ ಇರಲಿ, ಶ್ರೀ ಮನ್ನಿಜಗುಣ ಶಿವಯೋಗಿಗಳವರ ಕೆಳಗಣ ಹಾಡು ಅತ್ಯಂತ ಬೋಧಪ್ರದ:

ಮಾಡಲಿಲ್ಲವೆ ತಪವ ಮಾಡಲಿಲ್ಲವೆ
ಕೂಡಿ ಸುಗಣದೊಡನೆ ತಿಳಿದು
ನೋಡಿ ತ್ರಿವಿಧ ಕರಣದಲ್ಲಿ – ಮಾಡಲಿಲ್ಲವೆ ತಪವ
ಗುರುಭಜನೆ ಸುಕರ್ಮವೃತ್ತಿ
ಹರನ ಪೂಜೆ ಶರಣ ಸೇವೆ

ಪರಮ ಸಾತ್ವಿಕಂಗಳಿನಿತು
ನೆರೆದು ನೆಲಸಿ ತನುವಿಲ್ಲಿ – ಮಾಡಲಿಲ್ಲವೆ ತಪವ
ವಿನಯವನ್ಯಹಿತವತರ್ಕ
ವನಪಶಬ್ದ – ವಚಲಿತಾರ್ಥ –
ವನಷ ಮಂತ್ರವಾಗಮಂಗ –
ಳಿನಿತು ವಿಡಿದು ವಚನದಲ್ಲಿ – ಮಾಡಲಿಲ್ಲವೆ ತಪವ...
ಶಮೆ ವಿವೇಕನಾತ್ಮವಿದ್ಯೆ
ದಮೆದಯಾ ವಿರಕ್ತಿ ಯೋಗ –
ವಮಳ ರೂಪ ಶಂಭುಲಿಂಗ
ನಮರ್ದು ತೋರೆ ಸುಮನದಲ್ಲಿ – ಮಾಡಲಿಲ್ಲವೆ ತಪವ...

ನಿಯಮದ ನಾಲ್ಕನೆಯ ಅಂಗ ಸ್ವಾಧ್ಯಾಯ : ಸ್ವಾಧ್ಯಾಯ ಪ್ರವಚನಾಭ್ಯಾಂ ನಪ್ರಮಾದಿತಮ್ಯಮ್.... (ತ್ರೈತ್ರರೀಯೋಪ ನಿಷತ್)
(ಅಧ್ಯಯನ ಮತ್ತು ಪ್ರವಚನದಲ್ಲಿ ಪ್ರಮಾದ ಕೂಡದು)

ಆದರೆ ಯೋಗ್ಯಕ್ಕೆ ಸಂಬಂಧಿಸಿದಂತೆ ಸ್ವಾಧ್ಯಾಯವೆಂದರೆ ಸಾಮಾನ್ಯ ಅಧ್ಯಯನವಲ್ಲ, ವಿಶೇಷ ಅಧ್ಯಯನ. ಇದನ್ನು ವ್ಯಾಸಭಾಷ್ಯ ವಿಶದೀಕರಿಸುತ್ತದೆ; 'ಸ್ವಾಧ್ಯಾಯೋ ಮೋಕ್ಷಶಾಸ್ತ್ರಾಣಾಮಧ್ಯಯನಂ ಪ್ರಣವಜಪೋವಾ' – ಮೋಕ್ಷ ಶಾಸ್ತ್ರದ ಅಧ್ಯಯನ ಮತ್ತು ಓಂಕಾರ ಜಪವೇ ಸ್ವಾಧ್ಯಾಯ. ಮೋಕ್ಷಶಾಸ್ತ್ರವೆಂದರೆ ವೇದಾಂತ, ವೇದಾಂತವು ಉಪನಿಷತ್ ಪ್ರಣೀತವಾದುದು. ಇದು ಆತ್ಮತತ್ತ್ವದ ಉಪಾಸನೆಗೆ ಸಹಕಾರಿ. ಆತ್ಮದ ವ್ಯಾಖ್ಯೆಯನ್ನು ಶ್ರೀ ಶಂಕರಾಚಾರ್ಯರು, 'ಯದಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ । ಯಚ್ಚಾಸ್ಯ ಸಂತತೋಭಾವಸ್ತಸ್ಮದುದಾತ್ಮೇತಿ ಕೀರ್ತ್ಯತೇ' ಎಂದು ತಮ್ಮ ಕಠೋಪನಿಷದ್ಭಾಷ್ಯದಲ್ಲಿ ಮಾಡಿದ್ದಾರೆ. ಎಂದರೆ, ಆತ್ಮವು ಸಮಸ್ತ ವಸ್ತುಗಳಲ್ಲಿ ವ್ಯಾಪಿಸಿದೆ. ಸಮಸ್ತ ವಸ್ತುಗಳನ್ನೂ ತನ್ನ ತನ್ನ ಸ್ವರೂಪದಲ್ಲಿ ಗ್ರಹಿಸುತ್ತದೆ; ಸ್ಥಿತಿ ಕಾಲಗಳಲ್ಲಿ ಅದು ವಿಷಯಗಳನ್ನು ಅನುಭವಿಸುತ್ತದೆ. ಇವರ ಇರುವಿಕೆ ನಿರಂತರವಾದುದು. ಇಂಥ ಆತ್ಮತತ್ತ್ವದ ಅನುಸಂಧಾನದಿಂದ ಆಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಮುಜ್ಯಗಳೆಂಬ ಚತುರ್ವಿಧ ಮೋಕ್ಷವನ್ನು ಪಡೆಯಬಹುದು. ಜೊತೆಗೆ 'ಓಂಕಾರ ಜಪ ನಡೆಯುತ್ತಿದ್ದರೆ ಇನ್ನೂ ಲೇಸು ಯಾಕೆಂದರೆ 'ಓಂ ಮಿತಿ ಇದಂ ಸರ್ವಂ' 'ಓಂ ಇತಿ ಬ್ರಹ್ಮ' ಎಂದು ತೈತ್ತರೀಯೋಪನಿಷತ್ ಸಾರಿದರೆ, 'ಓಂ ಇತ್ಯೇಕಾಕ್ಷರಂ ಬ್ರಹ್ಮ ಧ್ಯೇಯಾಸ್ಸರ್ವ ಮುಮುಕ್ಷುಭಿಃ, ಎಂದು ಧ್ಯಾನ ಬಿಂದೂಪನಿಷತ್ ಹೇಳುತ್ತದೆ. ಒಟ್ಟಿನಲ್ಲಿ ಬ್ರಹ್ಮವಿದನಾಗಿ, ಬ್ರಹ್ಮೋಪಾಸಕನಾಗಿ ಬ್ರಹ್ಮನಲ್ಲಿ ಕೂಡಲು ಸ್ವಾಧ್ಯಾಯ ಸಹಾಯಕವಾಗುತ್ತದೆ.

ನಿಯಮದ ಐದನೆಯ ಅಂಶವೇ ಈಶ್ವರಪ್ರಣಿಧಾನ, ಪರಮಾತ್ಮನಧ್ಯಾನ, ಪರಮಾತ್ಮನಲ್ಲಿ ಭಕ್ತಿ–ಇದೇ ಈಶ್ವರ ಪ್ರಣಿಧಾನ, ಧ್ಯಾನದ ವಿಷಯ ಮುಂದೆ ಬರುತ್ತದೆ. ಇಲ್ಲಿ ಭಕ್ತಿಯೆಂದರೇನೆಂಬುದನ್ನು ತಿಳಿದುಕೊಂಡರೆ ಸಾಕು: ಇದು ನಿಜಗುಣ ಶಿವಯೋಗಿಗಳ ಪ್ರಸಿದ್ಧ ವ್ಯಾಖ್ಯೆ:

'ಆವ ಕಾಲದೊಳು ಬಳಿಕಾವ ದೇಶದೊಳು ಬೇ–
ರಾವ ವಸ್ತುವಿನೊಳೊಡವೆರೆಯದತಿ ಮಮತೆ
ಆವ ಪರಿಯೊಳು ತನ್ನ ಮೆಲಿರ್ಪುದಂತೆ ಗುರು
ದೇವತೆಯೊಳನುರಾಗವಿಹುದೆ ನಿಜಭಕ್ತಿ'

(ಜೀವಿಗೆ ತನ್ನ ಮೇಲಿರುವ ಅತಿ ಮಮತೆ ಇನ್ನಾವ ವಸ್ತುವಿನ ಮೆಲೂ ಇರದು. ಅದೇ ಅತಿ ಮಮತೆಯನ್ನು ಗುರು–ದೇವತೆಗಳ ಮೇಲಿರಿಸುವುದೇ ಭಕ್ತಿ). ಈ ಭಕ್ತಿ ಸಾಧ್ಯವಾಗಬೇಕಾದರೆ ತಾನೂ, ದೇಹವೂ, ಕರ್ಮವೂ, ವಿಷಯಗಳೂ, ಭೋಗೇತ್ಯಾದಿಗಳೂ, ಈ ಪ್ರಪಂಚವೆಲ್ಲವೂ ಈಶ್ವರನೇ, ಬೇರೆಯಲ್ಲವೆಂದು ತಿಳಿದು ಪ್ರೀತಿಪೂರ್ವಕವಾಗಿ ಅಭಿಮಾನಾದಿಗಳನ್ನುಳಿದು ಶ್ರೀ ಗುರು ಶಂಭು ಲಿಂಗನನ್ನು ಧ್ಯಾನಿಸಬೇಕೆಂದು ಅವರೇ ಅನ್ಯತ್ರ (ಕೈವಲ್ಯ ಪದ್ಧತಿ: ನೀತಿ ಕ್ರಿಯಾಚರ್ಯಸ್ಥಲ) ಹೇಳಿದ್ದಾರೆ. 'ಪ್ರೇಮಪೂರ್ವಕಯನುಧ್ಯಾನಂ ಭಕ್ತಿರಿತ್ಯಭಿದೀಯತೇ' ಎಂದು ನಾರದ ಭಕ್ತಿಸೂತ್ರದಲ್ಲಿ ಹೇಳಿದೆ. ಭಾಗವತ ಭಾವಪೂರ್ಣ ವ್ಯಾಖ್ಯೆಯನ್ನು ನೀಡಿದೆ.: (೧೧–೧೦–೧೪)

'ಅಜಾತ ಪಕ್ಷಾ ಇವ ಮಾತರಂ ಖಗಾಃ ಸ್ತನ್ಯಂ ಯಥಾ
ವತ್ಸರತಾಃ ಕ್ಷುಧಾರ್ತಾಃ।

ಪ್ರಿಯಂ ಪ್ರಿಯೇವ ವ್ಯುಕ್ಷಿತಾ ವಿಷಣ್ಣಾ ಮನೋರವಿಂದಾಕ್ಷದಿದ್ರಿಷತೇತ್ವಾಮ್' ಎಂದರೆ ರೆಕ್ಕೆಯಿಲ್ಲದ ಹಕ್ಕಿಗಳು ತಮ್ಮ ತಾಯಿಯ ವಿಷಯದಲ್ಲಿ ಕಾತರಿಸುವಂತೆ, ಇಲ್ಲವೆ ಹಸಿವಿನಿಂದ ಬಸವಳಿದ ಕೂಸುಗಳು ತಮ್ಮ ತಾಯಿಯ ಹಾಲಿಗಾಗಿ ಹಂಬಲಿಸುವಂತೆ, ಅಥವಾ ವಿರಹಸಂತಪ್ತ ವನಿತೆಯ ತನ್ನ ಪ್ರಿಯತಮನಿಗಾಗಿ ಚಡಪಡಿಸುವಂತೆ, ಭಗವಂತನಿಗಾಗಿ ಹಾತೊರೆಯುವವನೇ ಭಕ್ತ.

ಭಕ್ತಿಯಲ್ಲಿ ಹಲವು ವಿಧಗಳನ್ನು ಹೇಳಲಾಗಿದೆ. ಭಕ್ತಿಮಾರ್ಗ ಜನಪ್ರಿಯವಾದುದರ ಸಂಕೇತವಿದು. ಗೌಣೀ ಭಕ್ತಿ, ಪರಾಭಕ್ತಿಯೆಂದೂ, ನವವಿಧಭಕ್ತಿಯೆಂದೂ, ಷಡ್ವಿಧ ಭಕ್ತಿಯೆಂದೂ ಭಕ್ತಿಯ ವಿಧಗಳನ್ನು ವಿವರಿಸಲಾಗಿದ್ದರೆ ಭಕ್ತರಲ್ಲಿಯೂ ಆತ್ಮ, ಜಿಜ್ಞಾಸು, ಅರ್ಥಾರ್ಥಿ, ಜ್ಞಾನಿ ಎಂಬ ಭೇದಗಳನ್ನು ಹೇಳಿದೆ ಭಗವದ್ಗೀತೆ. ಅದರ 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂವ್ರಜ' ಎಂಬ ಉಕ್ತಿ ಈಶ್ವರ ಪ್ರಣಿಧಾನದ ಸೂಕ್ತ ನಿರ್ವಚನವಾಗಿದೆ.

೩. **ಆಸನ :** 'ಸ್ಥಿರಸುಖಮಾಸನಂ' ಎಂಬುದು ಯೋಗಸೂತ್ರ. ಬಹಳ ಹೊತ್ತು ಸ್ಥಿರವಾಗಿ ಮತ್ತು ಸುಖವಾಗಿ ಕುಳಿತುಕೊಳ್ಳುವುದನ್ನು ಯೋಗಸಾಧನೆ ಮಾಡುವವರು ಕಲಿಯಬೇಕಾಗುತ್ತದೆ. ಕಲಿಯದಿದ್ದರೆ ಧ್ಯಾನ ಧಾರಣ ಸಮಾಧಿಗಳು ಸಿದ್ಧಿಸುವುದಿಲ್ಲ. ಆಸನಸಿದ್ಧಿಯಿಂದ ಬೇರೆ ಲಾಭಗಳೂ ಇವೆ. ಶರೀರ ಶುದ್ಧಿ. ಸ್ವಾಸ್ಥ್ಯವೃದ್ಧಿಗಳೆ ಅವು. ಈ ಆಸನಗಳ ಸಂಖ್ಯೆ ಇಂತಿಷ್ಟೇ ಎಂದು ನಿರ್ಧಾರವಾದಂತಿಲ್ಲ. ಯೋಗ ಶಾಸ್ತ್ರದಲ್ಲಿ ಅವು ೮೪ ಲಕ್ಷವೆಂದು ಹೇಳಲಾಗಿದೆ. ನಿಜಗುಣ ಶಿವಯೋಗಿಗಳು ತಮ್ಮ 'ವಿದೇಸಿ ಚಿಂತಾಮಣಿ'ಯಲ್ಲಿ ಅವುಗಳನ್ನು ೮೪ ಲಕ್ಷಗಳಿಂದ ೪ಕ್ಕೆ ಇಳಿಸಿದ್ದಾರೆ. ಆದಯ್ಯನು ಹೆಸರಿಸಿರುವ ಆಸನಗಳು ಇವು: 'ಪದ್ಮಾಸನ, ಸಿದ್ಧಾಸನ, ಬದ್ಧಾಸನ, ವಜ್ರಾಸನ, ಮಯೂರಾಸನ, ಗರುಡಾಸನ, ಅರ್ಧಾಸನ, ಕುಕ್ಕುಟಾಸನ, ಮಂಡೂಕಾಸನ, ಗೋಮುಖಾಸನ, ಮತ್ಸ್ಯಾಸನ, ವೀರಾಸನ, ಸ್ಮಶಾನಾಸನ, ಹಸ್ತಾಸನ, ಮಸ್ತಕಾಸನ, ಕುಠಾರಾಸನ, ಸಿಂಹಾಸನ, ಮಧ್ಯಲವಣ, ಶಿರೋಲವಣಿಯೊಳಗಾದ ಆಸನಬಂಧಂಗಳಿಂದಾ ಚರಿಸುವುದು ಆಸನಯೋಗ' ಇವೆಲ್ಲ ರಾಜಯೋಗ ಸಾಧಕನಿಗೆ ಅವಶ್ಯಕವಲ್ಲ, ಸುಖಾಸನ, ಪದ್ಮಾಸನಗಳು ಸಾಕು, ಎಂದು ಹೇಳಲಾಗಿದೆ.

೪. **ಪ್ರಾಣಾಯಾಮ :** 'ತಸ್ಮಿನ್ ಸತಿಶ್ವಾಸಪ್ರಶ್ವಾಸಸಯೋರ್ಗತಿವಿಚ್ಛೇದಃ' ಎಂಬುದು ಯೋಗ ಸೂತ್ರ. ಶ್ವಾಸಪ್ರಶ್ವಾಸಗಳನ್ನು ತಡೆದು ಪ್ರಾಣಶಕ್ತಿಯನ್ನು ಅಂಕಿತದಲ್ಲಿಟ್ಟುಕೊಳ್ಳುವುದು ಪ್ರಾಣಾಯಾಮ. ಒಳಗೆಳೆಯುವ ಉಸಿರನ್ನು ನಿಶ್ಚಿತವಾದ ಅವಧಿಯವರೆಗೆ ಒಳಗೆ ಹಿಡಿದಿಟ್ಟುಕೊಳ್ಳುವುದು 'ಪೂರಕ' : ಹೀಗೆ ಒಳಗೆಳೆದುಕೊಂಡ ಉಸಿರನ್ನು ನಿಶ್ಚಿತ ಅವಧಿಯವರೆಗೆ ಒಳಗೇ ಹಿಡಿದಿಟ್ಟುಕೊಳ್ಳುವುದು 'ಕುಂಬಕ': ಆಮೇಲೆ ನಿಯಮದಿಂದ ನಿಶ್ಚಿತ ಅವಧಿಯಲ್ಲಿ ಅದನ್ನು ಹೊರಬಿಡುವುದು 'ರೇಚಕ'. ಮೂಗಿನ ಒಂದು ದ್ವಾರದಿಂದ ಉಸಿರೆಳೆದುಕೊಂಡು ಇನ್ನೊಂದು ದ್ವಾರದಿಂದ ನಿಯಮಿತವಾಗಿ ಬಿಡುವುದೂ ಇದೆ. ಪ್ರಾಣಾಯಾಮದಲ್ಲಿ ಬಾಹ್ಯವೃತ್ತಿ, ಅಭ್ಯಂತರ ವೃತ್ತಿ, ಸ್ತಂಭವೃತ್ತಿ ಮತ್ತು ತುರೀಯವೃತ್ತಿ ಎಂಬ ನಾಲ್ಕು ಪ್ರಭೇದಗಳುಂಟು. ಇವೆಲ್ಲ ಗುರು ಮುಖದಿಂದಲೇ ಕಲಿಯಬೇಕಾದುವುದ. ಪ್ರಾಣಾಯಾಮದಿಂದ ರಕ್ತ ಶುದ್ಧಿ, ಆರೋಗ್ಯ ವೃದ್ಧಿ, ಮಾನಸಿಕ ಪರಿಶುದ್ಧಿ, ಸ್ಥಿರತೆ ಸಮತೆಗಳು ಸಾಧಿತವಾಗುವುದರಲ್ಲಿ ಸಂದೇಹವಿಲ್ಲ.

೫. **ಪ್ರತ್ಯಾಹಾರ :** ಪಂಚೇಂದ್ರಿಗಳಲ್ಲಿ ಒಂದಕ್ಕೆ ವಶವಾದರೆ ಸಾಕು, ಬಂಧನ ಬಿಟ್ಟದ್ದಲ್ಲ, ಅಳಿವು ತಪ್ಪುವುದಿಲ್ಲ. ಪ್ರಭುದೇವರ ಈ ವಚನ ಅತ್ಯಂತ ಮನೋಜ್ಞ;

'ಕರಿಯು ಸ್ಪರ್ಶನೇಂದ್ರಿಯಗಳಿಂದ ಬಂಧನವಡೆದಳಿಯಿತ್ತು
ಪತಂಗನು ರೂಪೇಂದ್ರಿಯದಿಂದ ಬಂಧನವವಡೆದಳಿಯಿತ್ತು
ಭೃಂಗನು ಗಂಧೇಂದ್ರಿಯದಿಂದ ಬಂಧನವಡೆದಳಿಯಿತ್ತು

ಕುರುಂಗನು ಶಬ್ದೇಂದ್ರಿಯದಿಂದ ಬಂಧನವಡೆದಳಿಯಿತ್ತು
ಮತ್ಸ್ಯವು ರಸನೇಂದ್ರಿಯದಿಂದ ಬಂಧನವಡೆದಳಿಯಿತ್ತು
ಇಂತೀ ಒಂದೊಂದು ಇಂದ್ರಿಯೋದ್ರೇಕದಿಂದ ಒಂದೊಂದು
ಪ್ರಾಣಿಯ ಪ್ರಳಯವಾಯಿತ್ತು!
ಪಂಚೇಂದ್ರಿಯಂಗಳ ಒಂದು ಘಟದಲ್ಲಿ ತಾಳಿದ ಮನುಷ್ಯ
ಪ್ರಾಣಿಗಳಿಗೆ
ಮರವೆ ಎಡೆಗೊಂಡು, ದೇಹಮೋಹ ಭ್ರಾಂತು ಮುಸುಕಿ
ಮಾಯೆಯ ಬಾಯೆ ತುತ್ತಹುದು ಚೋದ್ಯವೇನು ಹೇಳಾ?

ಈ ಪಂದೇಂದ್ರಿಯಗಳು ತರುವ ಅನಾಹುತಗಳನ್ನು ತಪ್ಪಿಸಿಕೊಳ್ಳುವ ಉಪಾಯವೊಂದಿದೆ. ಈ ಪಂಚೇಂದ್ರಿಯಗಳೆಂಬ ದೇಹರಥದ ಹಯಗಳನ್ನು ಕುಣಿಸುವುದು, ಓಡಿಸುವುದು ಮನಸ್ಸು. ಆದುದರಿಂದ ಮನಸ್ಸು ಬಹಿರ್ವಿಷಯಗಳತ್ತ ಹರಿಯದಂತೆ ಹಿಡಿದಿಟ್ಟು ಬಿಟ್ಟರೆ ಪಂಚೇಂದ್ರಿಯಗಳ ಚೇಷ್ಟೆಗಳು ತಾನಾಗಿ ನಿಲ್ಲುತ್ತವೆ. ಹೀಗೆ ವಿಷಯೋನ್ಮುಖಿಯಾದ ಮನಸ್ಸನ್ನು ಪರವಸ್ತುವಿನತ್ತ ಸೆಳೆಯುವ ಸಾಧನವೇ ಪ್ರತ್ಯಾಹಾರ. ಇದು ಸಾಧಿಸಿದರೆ ಮಾತ್ರ ಮುಂದಿನ ಧಾರಣ, ಧ್ಯಾನ ಸಮಾಧಿಗಳು ಸಾಧ್ಯ.

**೬. ಧಾರಣಾ :** 'ದೇಶಬಂಧಶ್ಚಿತ್ತಸ್ಯ ಧಾರಣಾ' – ಇದು ಯೋಗ ಸೂತ್ರ ಚಿತ್ತವನ್ನು ನಿಶ್ಚಲವಾಗಿ ಅಪೇಕ್ಷಿತ ವಸ್ತು, ವಿಚಾರ, ಸ್ಥಳ, ಆಕಾರಾದಿಗಳ ಮೇಲೆ ನೆಲೆಯಾಗಿ ನಿಲ್ಲಿಸುವುದೇ ಧಾರಣಾ. ಪ್ರಾಣಾಯಾಮದಿಂದ ಉಸಿರಿನ ಮೆಲೆ ಹಿಡಿತ, ಪತ್ಯಾಹಾರದಿಂದ ಇಂದ್ರಿಯಗಳ ಮೇಲೆ ನಿಯಂತ್ರಣ, ಧಾರಣೆಯಿಂದ ಉಪಾಸಿತ ವಸ್ತುವಿನಲ್ಲಿ ಚಿತ್ತದ ಕೇಂದ್ರೀಕರಣ – ಇದು ಮುಂದಿನ ಮೆಟ್ಟಲಾದ ಧ್ಯಾನಕ್ಕೆ ಅತ್ಯಾವಶ್ಯಕ.

**೭. ಧ್ಯಾನ :** 'ತತ್ರಪ್ರತ್ಯಯೇಕತಾನತಾ ಧ್ಯಾನಮ್' – ಇದು ಪತಂಜಲಿಯ ಸೂತ್ರ. ಮನಸ್ಸನ್ನು ಧ್ಯೇಯವಸ್ತುವಿನಲ್ಲಿ ಪೂರ್ಣವಾಗಿ ನಿಲ್ಲಿಸುವುದೇ ಧ್ಯಾನ. ಧ್ಯಾನಿಸುವವ ಮತ್ತು ಧ್ಯಾನಿಸುವ ವಸ್ತು – ಇವೆರಡರಲ್ಲೂ ಭಿನ್ನತೆಯೆ ಉಳಿಯುವುದಿಲ್ಲ. ಇಂದ್ರಿಯಗಳು ಮನಸ್ಸು ಮೊದಲೇ ನಿಗ್ರಹಿಸಲ್ಪಟ್ಟಿವೆಯಾಗಿ ಧ್ಯಾನಜ್ಯೋತಿ ನಿರ್ವಾತ ಸ್ಥಳದಲ್ಲಿ ನಿಶ್ಚಲವಾಗಿ ಉರಿಯುವ ದೀಪದಂತೆ ಅವಿಚಲಿತವಾಗಿ ಬೆಳಗುತ್ತದೆ. ದೇಹಭಾವವಳಿದು, ಜೀವಭಾವವಳಿದು, ಶಿವಭಾವ ಮೂಡುತ್ತದೆ.

**೮. ಸಮಾಧಿ :** ಇದು ಯೋಗ ಸಾಧನೆಯ ಅಂತಿಮ ಫಲ. ಇಲ್ಲಿ ಸಾಧಕ ತನ್ನನ್ನು ತಾನೇ ಮರೆತು, ಧೇಯವಸ್ತುವಿನಲ್ಲಿ ತನ್ಮಯನಾಗಿ, ಯೋಗಸೂತ್ರದಲ್ಲಿ ವಿವರಿಸಿದಂತೆ 'ತದೇವಾರ್ಥಮಾತ್ರ ನಿರ್ಭಾಸಂ ಸ್ವಸ್ವರೂಪ ಶೂನ್ಯಮಿವ ಸಮಾಧಿಃ' ಆಗಿ, ನಿಜತತ್ವದಲ್ಲಿ

ಬೆರೆತು ಹೋಗುತ್ತಾನೆ. ಇಲ್ಲಿಯೂ ಸಂಪ್ರಜ್ಞಾತ ಸಮಾಧಿ, ಅಸಂಪ್ರಜ್ಞಾತ ಸಮಾಧಿಯೆಂಬ ಎರಡು ಪ್ರಕಾರಗಳಿವೆ. ಸಂಪ್ರಜ್ಞಾತ ಸಮಾಧಿಯಲ್ಲಿ ಪ್ರಜ್ಞೆ ಉಳಿದಿರುತ್ತದೆ; ಅಸಂಪ್ರಜ್ಞಾತ ಸಮಾಧಿಯಲ್ಲಿ ಪ್ರಜ್ಞೆ ಅಳಿದಿರುತ್ತದೆ. ನಿಜದಲ್ಲಿ ನಿಂತುದರ ನೆನಹು ಉಳಿದರೆ ಅದು ಸಂಪ್ರಜ್ಞಾತ ಸಮಾಧಿ, ನೆನಹು ಅಳಿದರೆ ಅಸಂಪ್ರಜ್ಞಾತ ಸಮಾಧಿ. ಅಲ್ಲಮ ಪ್ರಭುಗಳ ಈ ವಚನ ಇಲ್ಲಿ ಪ್ರಸ್ತುತ:

'ಅಷ್ಟಾಂಗಯೋಗದಲ್ಲಿ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣಸಮಾಧಿಯೆಂದು. ಎರಡು ಯೋಗ ಉಂಟು ಅಲ್ಲಿ. ಆಳಿದು ಕೂಡುವುದೊಂದು ಯೋಗ; ಅಳಿಯದೇ ಕೂಡುವುದೊಂದು ಯೋಗ. ಈ ಎರಡು ಯೋಗದೊಳಗೆ ಅಳಿಯದೆ ಕೂಡುವ ಯೋಗವರಿದು ಕಾಣಾ, ಗುಹೇಶ್ವರಾ ! (ಅ.ವ.ಚಂ.೨೫೭)

ಶಿವಯೋಗದ ವಿಷಯ ಬಂದಾಗ ಈ ಅಳಿಯದೆ ಕೊಡುವ ಯೋಗದ ವಿಷದೀಕರಣವಾಗುತ್ತದೆ. ಈಗ ಸಮಾಧಿ ಸ್ಥಿತಿಯ ಬಗ್ಗೆ ಇನ್ನಷ್ಟು ತಿಳಿದು ಕೊಳ್ಳೋಣ. ಸಮಾಧಿಸ್ಥಿತಿಯಲ್ಲಿ ಧ್ಯಾನದ ವಿಷಯ, ಧ್ಯಾನಕ್ಕೆ ಸಾಧನವಾದ ಮನಸ್ಸು, ಧ್ಯಾನವೆಂಬ ಕ್ರಿಯೆ. ಇವು ಮೂರೂ ಇಲ್ಲವಾಗಿ ಆತ್ಮವು ತನ್ನ ಆನಂದದಲ್ಲಿ ತನ್ಮಯವಾಗಿರುತ್ತದೆ. ಈ ಸ್ಥಿತಿಯನ್ನೇ ಕೈವಲ್ಯವೆಂದು ಕರೆಯಲಾಗಿದೆ. ಈ ಸ್ಥಿತಿಯಲ್ಲಿ ಸಾಧಕನು ತಾನು ಶರೀರ ಮಾತ್ರವಲ್ಲ, ಜೀವಿ ಮಾತ್ರವಲ್ಲ, ಅನಂತಶಕ್ತಿಸಮೇತವಾದ ಅಮರ ಆತ್ಮ, ಶರೀರ–ಕಾಲ–ನಿಮಿತ್ತ–ತ್ರಿಗುಣ – ಇತ್ಯಾದಿಗಳಿಂದ ಅತೀತನಾಗಿರುವೆನೆಂಬುದನ್ನು ಅನುಭವಿಸುತ್ತಾನೆ. ಇದು ಸದೇಹಕೈವಲ್ಯ, ಜೀವನ್ಮುಕ್ತಿ. ಅದಮ್ಯನಿದನ್ನು ತನ್ನದೇ ಆದ ರೀತಿಯಲ್ಲಿ ಬಣ್ಣಿಸಿದ್ದಾನೆ. 'ಅಪ್ರತಿಭಾಸ್ಥಾನದಿಂದುತ್ತರ ವಿಭಾಗೆಯ ಅಜಪೆಯಿಂದತ್ತಣ ಚಿತ್‌ಪ್ರಭೆಯಿಂದುಜ್ವಳ ತೇಜ ಸ್ವಯಂಪ್ರಕಾಶ ದಿವ್ಯತೇಜದಿಂದೊಪ್ಪಿಪ್ಪ ಮಹಾಘನ ಪರವಸ್ತುವನಿದಿರಿಟ್ಟೀಕ್ಷಿಸಿ. ಆ ಮಹಾಪ್ರಕಾಶದಲ್ಲಿ ಒಡಗೂಡಿ, ತಾನು ತಾನಾಗಿ, ಜಗದ್ವಿಹರಣೆಯನೇನೆಂದರಿಯದ ಪರಮಕಾಷ್ಠೆಯ ಸಮಾಧಿಯಲ್ಲಿಪ್ಪುದು ಸಮಾಧಿಯೋಗ'.

ಇದಿಷ್ಟು ಅಷ್ಟಾಂಗಯೋಗದ ಸಾಮಾನ್ಯ ಸ್ವರೂಪ. ಪ್ರಸ್ಥಾನತ್ರಯಿಗಳನ್ನೇ ಆಧರಿಸಿ ವಿವಿಧ ದರ್ಶನಗಳು ಮೈದೋರಿದಂತೆ ಅಷ್ಟಾಂಗಯೋಗವನ್ನೇ ಆಧರಿಸಿ ವಿವಿಧ ಯೋಗದರ್ಶನಗಳು ಉದ್ಭವಿಸಿದುವು. ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ ಇವು ಪ್ರಾರಂಭದಿಂದಲೂ ಪ್ರಚಲಿತಿರುವ ಯೋಗ ಪ್ರಕಾರಗಳು. ಇವಲ್ಲದೆ ಅಷ್ಟಾಂಗಯೋಗ, ಪಂಚಯೋಗ, ಶಾಂಭವೀಯೋಗ, ಖೇಚರಿ, ಷಣ್ಮುಖೀ, ಬಹುಮುದ್ರೆಗಳೆಂಬ ಯೋಗ ಪ್ರಕಾರಗಳನ್ನು ಸಿದ್ಧರಾಮನೂ, (ವಚನ–೧೧೪೩) ಹಠಯೋಗ. ಅಂಬಿಕಾಯೋಗ, ಆತ್ಮಯೋಗ, ಸಿದ್ಧಯೋಗ, ಪಿಶಾಚಯೋಗವೆಂಬ

ಯೋಗ ಪ್ರಕಾರಗಳನ್ನು ಆದಯ್ಯನೂ (ಸ.ಪು.ವ.ಭಾಗ ೨) ಉಲ್ಲೇಖಿಸುತ್ತಾರೆ. ಕರ್ಮಯೋಗ, ಜ್ಞಾನ ಯೋಗ, ಭಕ್ತಿಯೋಗಗಳೂ ಬೆಳೆದು ನಿಂತವು. ಬಹುಶಃ ಇವುಗಳಿಗಿಂತ ಹಿಂದಿನದಾದ ಶಿವಯೋಗವೂ ರಾಜಯೋಗಾಭಿನ್ನವಾಗಿ ಪ್ರವರ್ಧಿಸಿತು. ಇವುಗಳ ಬಗ್ಗೆ ಬರೆಯುವ ಮುನ್ನ ಒಂದು ವಿಷಯವನ್ನು ಪ್ರಸ್ತಾಪಿಸಲೇಬೇಕು.

ವೇದಾಂತದ ಬಳಿವಿಡಿದು ದುರುಳ ವೇದಾಂತಿಗಳು ಹುಟ್ಟಿದಂತೆ, ಧರ್ಮಮಾರ್ಗದ ಬಳಿವಿಡಿದು ವಾಮಮಾರ್ಗಿಗಳು ಹುಟ್ಟಿದಂತೆ ಯೋಗ ಮಾರ್ಗದ ಬಳಿವಿಡಿದು ಅಣಿಮಾದಿ ಅಷ್ಟಸಿದ್ಧಿಗಳ ಬೆನ್ನು ಹತ್ತಿದವರೂ ಹುಟ್ಟಿದರು. ಯೋಗದ ವಿಕೃತ ರೂಪಗಳು ಕಾಣಿಸಿಕೊಂಡು ಯೋಗವೂ ಶೋಷಣೆಯ ಸಾಧನವಾಗಿ ಪರಿಣಮಿಸಿತು. ಇಂಥ ಯೋಗಮಾರ್ಗಗಳನ್ನು ಶರಣರು ನಿಸ್ಸಂಕೋಚವಾಗಿ ಖಂಡಿಸಿದ್ದರೆ. ಇದು ಅಲ್ಲಮಪ್ರಭುಗಳ ಅಧಿಕಾರವಾಣಿ :

'ಹಠಯೋಗ ಲಂಬಿಕೆಯೆಂದು, ಆಕುಂಚನವೆಂದು, ವಜ್ರ ಅಮರಿಯ ಕಲ್ಪವೆಂದು ಮಲಮೂತ್ರಂಗಳಂ ಸೇವಿಸುತ, ಇದು ಪೂರ್ವನವನಾಥ ಸಿದ್ಧರ ಮತೋಕ್ತವೆಂದು ಕಾಪಾಲಿಕಾಚರಣೆಯನಾಚರಿಸುವವರಲ್ಲ ಶರಣರು: ಮೇಣು, ತಲೆಯೊಳಗಣ ವಾತಪಿತ್ತಶ್ಲೇಷ್ಮವ ತೆಗೆದು ಅಮೃತವೆಂದು ಬಿನುಗುದೃಷ್ಟವ ತೋರುವವರಲ್ಲ ಶರಣರು! ದ್ರವಿಸುವ ದೇಹದಲ್ಲಿ ಅಪ್ಪುವಿನ ಫಲರಸ ಕ್ಷೀರ ಮೊದಲಾದುವ ಸೇವಿಸುತ್ತ ಅನ್ನವ ಬಿಟ್ಟೆವೆಂಬ ಭೂತಚೇಷ್ಟಕರಲ್ಲ ಶರಣರು. ಇವೆಲ್ಲವು ಕಾರು ಸಟೆ ಭ್ರಾಂತೆಂದು ತಿಳಿದು ನಿರ್ಭರ ನಿಜದಿ ನಿಂದರು. ಗುಹೇಶ್ವರ, ನಿಮ್ಮ ಶರಣರು ಅಗ್ರಗಣ್ಯರು'.

ಇದು ಅಲ್ಲಮಪ್ರಭುಗಳ ಅಪರಾವತಾರಿಗಳೆನಿಸಿದ ತೋಂಟದ ಸಿದ್ಧಲಿಂಗೇಶ್ವರರ ವಿವೇಕವಾಣಿ:

'ಅಂಬಿಕಾ ಯೋಗಿಗಳ ಡೊಂಬರಿಗೆ ಸರಿಯೆಂಬೆ
ಹಠಯೋಗಿಗಳ ಅಟಮಟಕಾರರೆಂಬೆ
ಅಷ್ಟಾಂಗಯೋಗಿಗಳ ಕಷ್ಟ ಕರ್ಮಿಗಳೆಂಬೆ
ಪವನಯೋಗಿಗಳ ಪ್ರಪಂಚಿಗಳೆಂಬೆ
ಲಯಯೋಗಿಗಳ ನಾಯಿಗಿಂತ ಕಡೆಯೆಂಬೆ

ಅದೇನು ಕಾರಣವೆಂದೆಡೆ:
ಲಯಯೋಗವೆಂಬುದು ನಾನಾ ದರ್ಶನದಲ್ಲಿ
ವರ್ತಿಸುವುದಾಗಿ ಅದ ಶಿವಯೋಗಿಗಳೊಲ್ಲರು

ಮಂತ್ರಯೋಗವೆಂಬುದು ಸರ್ವರನ್ನು ಸಂದೇಹಕ್ಕಿಕ್ಕಿ
ಕೊಲ್ಲುತ್ತಿಪ್ಪುದು

ಅದೇನು ಕಾರಣವೆಂದೆಡೆ :
ಮಂತ್ರವೇ ಲಿಂಗ, ಲಿಂಗವೇ ಮಂತ್ರವೆಂದರಿದು
ಲಿಂಗ ನೆನಹ ಸಂಬಂಧಿಸಿಕೊಳಲರಿಯದೆ
ಲಿಂಗವಿರಹಿತನಾಗಿ ಮಾಡುತ್ತಿಪ್ಪರಾಗಿ
ಅದ ಲಿಂಗಲಿಂಗಸಂಬಂಧಿಗಳು ಮೆಚ್ಚರು ನೋಡಾ!

ಅದೇನು ಕಾರಣವೆಂದೆಡೆ:
ಕೆಲವು ಶೈವರುಗಳು ಮಾಡುವರಾಗಿ
ರಾಜಯೋಗವೆಂಬುದು ಗಾಜುಗೋಜು ನೋಡಾ.
ಅದನು ಲಿಂಗವಿರಹಿತವಾಗಿ ಜ್ಞಾತೃಜ್ಞಾನಜ್ಞೇಯವೊಂದಾದಲ್ಲಿಯೇ
ಯೋಗವೆನುತಿಪ್ಪರಾಗಿ ಇವು ಒಂದೂ ಲಿಂಗಾಂಗ
ಯೋಗದ ಹೆಜ್ಜೆಯಲ್ಲ.
ಇದು ಕಾರಣ ಲಿಂಗನಿಷ್ಠರು ಮೆಚ್ಚರು. ಅದೇನು ಕಾರಣವೆಂದಡೆ
ಲಿಂಗವ ತೆಗೆದಡೆ ಲಿಂಗದೊಡನೆ ಪ್ರಾಣ ಹೋಗದಾಗಿ
ಅವೆಲ್ಲಿಯ ಯೋಗವ್ಯೆಭ್ರಾಂತು ಯೋಗ!
ಇದು ಕಾರಣ ಲಿಂಗಪ್ರಾಣಿಗಳು ಪ್ರಾಣಲಿಂಗಸಂಬಂಧಿಗಳು
ಪ್ರಸಾದಮುಕ್ತರು– ಈ ಮೂರು ಪ್ರಕಾರದಲ್ಲಿ
ಕೂಡುತ್ತಿಪ್ಪರು ಶಿವಯೋಗಿಗಳು
ಇದು ಕಾರಣ, ನಿಮ್ಮ ಶರಣರು ಸ್ವಾನುಭಾವಜ್ಞಾನಶುದ್ಧ
ಶಿವಯೋಗದಲ್ಲಿಪ್ಪರು ಕಾಣಾ.
ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೆ'

ಶಿವಶರಣರ ಒಲವು ಶಿವಯೋಗದತ್ತ ಎಂಬುದು ಸಿದ್ಧವಾಯಿತು. ಈ ಶಿವಯೋಗದ ಸ್ವರೂಪವೇನು? ಉಪನಿಷತ್‌ಪ್ರಣೀತಯೋಗ, ಆಗಮೋಕ್ತ ಶಿವಯೋಗವೆ? ಇಪ್ಪತ್ತು ಉಪನಿಷತ್ತುಗಳಲ್ಲಿ. ಎಂದರೆ ಅದ್ವಯ ತಾರಕೋಪನಿಷತ್, ಅಮೃತನಾದೋಪನಿಷತ್, ಅಮೃತಬಿಂದೂಪನಿಷತ್, ಕ್ಷುರಿಕೋಪನಿಷತ್, ತೇಜೋಬಿಂದೂಪನಿಷತ್, ತ್ರಿಶಿಖಿ ಬ್ರಾಹ್ಮಣೋಪನಿಷತ್, ಜಾಬಾಲದರ್ಶನೋಪನಿಷತ್. ಧ್ಯಾನಬಿಂದೂಪನಿಷತ್, ನಾದಬಿಂದೂಪನಿಷತ್, ಪಾಶುಪತಬ್ರಹ್ಮೋಪನಿಷತ್, ಬ್ರಹ್ಮವಿದ್ಯೋಪನಿಷತ್, ಮಂಡಲ ಬ್ರಾಹ್ಮಣೋಪನಿಷತ್, ಮಹಾವಾಕ್ಯೋಪನಿಷತ್, ಯೋಗಕುವಡಿಲ್ಯುಪನಿಷತ್,

ಯೋಗಚೂಡಾಮಣ್ಯಪನಿಷತ್, ಯೋಗತತ್ತೋಪನಿಷತ್, ಯೋಗಶಿಖೋಪನಿಷತ್ ವರಾಹೋಪನಿಷತ್, ಶಾಂಡಿಲ್ಯೋಪನಿಷತ್ ಮತ್ತು ಹಂಸೋಪನಿಷತ್ತುಗಳಲ್ಲಿ ಯೋಗ ವಿಷಯ ಪ್ರತಿಪಾದಿತವಾಗಿದೆ ಮಂತ್ರಯೋಗ, ಹಠಯೋಗ ಲಯಯೋಗ, ರಾಜಯೋಗ, ಧ್ಯಾನ, ಧಾರಣ, ಸಮಾಧಿ, ಅಷ್ಟಾಂಗಯೋಗ, ನಾಡೀಸ್ಥಾನಗಳು, ವಾಯುವ್ಯಾಪಾರಗಳು, ಒಂಬತ್ತು ಆಸನಗಳು, ಬಂದಗಳ ಪ್ರಕಾರಗಳು, ಮುದ್ರೆಗಳು, ಧ್ಯಾನಸ್ವರೂಪ, ನಾದಾನುಸಂಧಾನ, ಯಮ ನಿಯಮಾದಿಗಳ ನಿರೂಪಣೆ, ಸುಷುಮ್ನಾನಾಡಿಯ ಮಹಾ ಕುಂಡಲಿನಿಯ ಸಹಾಯದಿಂದ ಗ್ರಂಥಿತ್ರಯಗಳನ್ನು ನಿವಾರಿಸಿ ನಿರ್ವಿಕಲ್ಪ ಸಮಾಧಿಯನ್ನು ಪಡೆವ ಪರಿ. ಪರಬ್ರಹ್ಮನ ಸ್ವರೂಪ ಇತ್ಯಾದಿಗಳ ನಿರೂಪಣೆಯಿದೆ. ಸುಪ್ರಭೇದಾಗಮ ಮೃಗೇಂದ್ರಾಗಮಾದಿ ಕೆಲವು ಆಗಮಗಳಲ್ಲಿ ಆಗಮಗಳ ಯೋಗಪಾದ ಲಭ್ಯವಿದ್ದು ಇವುಗಳಲ್ಲಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಸಮಾಧಿಗಳ ಬಗ್ಗೆ, ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಸೂರ್ಯ, ಅನಾಹತ, ವಿಶುದ್ಧಿ, ಆಜ್ಞಾ ಎಂಬ ಷಡ್ ಚಕ್ರಗಳ ಬಗ್ಗೆ ವಿವರಣೆಯಿದೆ. ಅಲ್ಲದೆ, ಮಾನವನ ಶರೀರದಲ್ಲಿರುವ ೭೨೦೦೦ ನಾಡಿಗಳು, ಅವುಗಳಲ್ಲಿ ಪ್ರಧಾನವಾದ ಇಡಾ, ಪಿಂಗಳಾ, ಸುಷುಮ್ನಾ ನಾಡಿಗಳು, ದಶವಾಯುಗಳು, ಅಣಿಮಾದಿ ಸಿದ್ಧಿಗಳ ವಿವರ, ಇತ್ಯಾದಿಗಳನ್ನು ಪ್ರತಿಪಾದಿಸಲಾಗಿದೆ.

ಶರಣರು ಪರಿಶೋಧಿಸಿ ಸಾಧಿಸಿದ ಶಿವಯೋಗದ ಸ್ವರೂಪವಾವುದೆಂಬುದನ್ನು ನೋಡುವ ಮೊದಲು ಇನ್ನೆರಡು ಅಂಶಗಳನ್ನು ಗಮನಿಸಬೇಕು. ಲಿಂಗಕ್ಯ ಡಾ. ಶಿ.ಚೆ. ನಂದಿಮಠ ಅವರು (ಶ್ರೀ ಶಿವಯೋಗಮಂದಿರದ ಬೆಳಗು) ಸರಿಯಾಗಿಯೇ ಕಂಡು ಹಿಡಿದಿರುವಂತೆ ಸುಪ್ರಭೇದಾಗಮ ಮತ್ತು ಈಶಾನ ಶಿವಯೋಗಿಗಳ ('ಈಶಾನಶಿವಗುರುದೇವ ಪದ್ಧತಿ') ವರ್ಣಿತವಾದ ಯೋಗವು ಯೋಗದರ್ಶನದಿಂದ ವಿಶೇಷವಾಗಿ ಭಿನ್ನವಾಗಿಲ್ಲದಿದ್ದರೂ ಒಂದು ಮಹತ್ವದ ವ್ಯತ್ಯಾಸವಿದೆ. ಈಶ್ವರನ ಪ್ರತಿಬಿಂಬ (ಮೂರ್ತಿ)ವನ್ನು ಮುಂದಿಟ್ಟುಕೊಂಡು ಅದರ ಮೇಲೆ ದೃಷ್ಟಿಯನ್ನಿರಿಸಿ. ಅದರಲ್ಲಿಯೇ ಮನಸ್ಸಿನ ವ್ಯಾಪಾರವನ್ನೆಲ್ಲ ಕೇಂದ್ರಿಕರಿಸಿ, ಧ್ಯಾನವನ್ನು ದೃಢಪಡಿಸಿ. ಸಮಾಧಿಯನ್ನು ಸಾಧಿಸುವ ವಿಧಾನಕ್ಕೆ ಶೈವಾಗಮಗಳು ಪ್ರಾಮುಖ್ಯತೆಯನ್ನು ಕೊಟ್ಟಂತೆ ತೋರುವುದು ರಾಜಯೋಗದ ತತ್ತ್ವಗಳು ಶೈವಾಗಮಗಳ ಯೋಗದಲ್ಲಿ ಅಡಕವಾಗಿವೆಯಾದರೂ ಮೂರ್ತಿಯನ್ನು ಮುಂದಿಟ್ಟುಕೊಂಡು ಧ್ಯಾನಿಸುವುದೊಂದು ಅದರ ವೈಶಿಷ್ಟ್ಯ.

ಎರಡನೆಯ ಅಂಶ ಇದು: ಮೇಲ್ಕಾಣಿಸಿದ ಯೋಗವಿಧಾನಗಳೆಲ್ಲ ಸಾಮಾನ್ಯರಿಗೆ ಸಾಧ್ಯವಾಗದ ವಿಧಾನಗಳು. ಹಠಯೋಗ, ಲಯಯೋಗ ಇತ್ಯಾದಿಗಳನ್ನು ಯೋಗ್ಯ ಗುರುವಿನ ಮಾರ್ಗದರ್ಶನವಿಲ್ಲದೆ ಸಾಧಿಸಲು ಹೋದರೆ ಅಪಾಯ ಕಟ್ಟಿಟ್ಟ ಗಂಟು. ಜ್ಞಾನಯೋಗವಂತೂ ಹೇಳಿ ಹೇಳಿ ಜ್ಞಾನೋಪಾಸಕರಿಗೆ ಮೀಸಲಾದುದು. ಸಾಧನಚತುಷ್ಟಯಗಳೆನಿಸಿರುವ ನಿತ್ಯಾನಿತ್ಯ ವಸ್ತು ವಿವೇಕ, ಇಹಾಮುತ್ರಾರ್ಥ –

ಫಲಭೋಗವಿರಾಗ, ಶಮಾದಿ ಷಟ್ಕ ಸಂಪತ್ತು, ಮುಮುಕ್ಷತ್ವಗಳನ್ನು ಅಳವಡಿಸಿಕೊಂಡು, ಶ್ರವಣ ಮನನ – ನಿಧಿ ಧ್ಯಾಸಗಳ ಮೂಲಕ ಉಪದೇಶ ಮಹಾವಾಕ್ಯಗಳೆನಿಸಿರುವ ತತ್ತ್ವಮಸಿ, ಅಹಂಬ್ರಹ್ಮಾಸ್ಮಿ, ಅಯಮಾತ್ಮಾಬ್ರಹ್ಮ, ಪ್ರಜ್ಞಾನಂ ಬ್ರಹ್ಮಗಳ ಅಂತರಾರ್ಥವ್ನು ಅರಿತು ಅನುಭವಿಸಿ, ಜ್ಞಾನಯೋಗವನ್ನು ಸಾಧಿಸಬೇಕಾಗುತ್ತದೆ. ರಾಜಯೋಗದ ವಿಚಾರ ಇದಾಗಲೇ ಪ್ರಸ್ತಾಪಿತವಾಗಿದೆ. ಅಷ್ಟಾಂಗಯೋಗದ ಪ್ರಾಣಾಯಾಮ, ಸಮಾಧಿಗಳು ಸಾಮಾನ್ಯ ಸಂಸಾರಿಗಳಿಗೆ ಎಟುಕದ ವಿಷಯುಗಳು. ಅಲ್ಲದೆ ಇವುಗಳ ಸಾಧನೆಯನ್ನು ಮನೆಯಲ್ಲಿದ್ದುಕೊಂಡು ಮಾಡಲಾಗದು. ಭಗವದ್ಗೀತೆಯ ಕೆಳಗಣ ಶ್ಲೋಕಗಳಲ್ಲಿ ಪ್ರಸ್ತುತ:

'ಯೋಗೀ ಯಂಜೀತ ಸತತಮಾತ್ಮಾನಂ ರಹಸಿ ಸ್ಥಿತಃ ।
ಏಕಾಕೀ ಯತಚಿತ್ತಾತ್ಮಾ ನಿರಾಶೀರಪರಿಗ್ರಹಃ॥'

(ಅಧ್ಯಾಯ ೬, ಶ್ಲೋಕ ೧೦)

ಯೋಗಿಯು ನಿರ್ಜನ ಪ್ರದೇಶದಲ್ಲಿ ಇದ್ದುಕೊಂಡು, ಏಕಾಕಿಯಾಗಿ, ಸಂಯತ ಚಿತ್ತಾತ್ಮನೂ, ನಿರಾಶಿಯೂ, ಅಪರಿಗ್ರಹವ್ರತನೂ ಆಗಿ ಯಾವಾಗಲೂ ಮನಸ್ಸನ್ನು ಯೋಗದಲ್ಲಿರಿಸಬೇಕು.

'ತತ್ರೈಕಾಗ್ರಂ ಮನಃ ಕೃತ್ವಾ ಯತಚಿತ್ತೇಂದ್ರಿಯಕ್ರಿಯಃ।
ಉಪವಿಶ್ಯಾಸನೇ ಯುಂಜ್ಯಾದ್ಯೋಗಮಾತ್ಮವಿಶುದ್ಧಯೇ॥

(ಅಧ್ಯಾಯ ೬ ಶ್ಲೋಕ ೧೨)

ಆಸನಸ್ಥನಾಗಿ, ಮನಸ್ಸನ್ನು ಏಕಾಗ್ರಗೊಳಿಸಿ, ಚಿತ್ತೇಂದ್ರಿಯಗಳನ್ನು ನಿಗ್ರಹಿಸಿ, ಅಂತಃಕರಣಶುದ್ಧಿಯನ್ನು ಪಡೆದು ಯೋಗವನ್ನು ಸಾಧಿಸಬೇಕು.

'ಪ್ರಶಾಂತಾತ್ಮಾ ವಿಗತಭೀ ಬ್ರಹ್ಮಚಾರಿವ್ರತೇ ಸ್ಥಿತಃ।
ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಅಸೀತ ಮತ್ಪರಃ ॥

(ಅಧ್ಯಾಯ ೬ ಶ್ಲೋಕ ೧೪)

ಪ್ರಶಾಂತಾತ್ಮನೂ ನಿರ್ಭಯನೂ ಆಗಿ. ಬ್ರಹ್ಮಚಾರಿವ್ರತದಲ್ಲಿ ಇರುವವನಾಗಿ, ಮನಸ್ಸನ್ನು ಸಂಯಮ ಯುಕ್ತವನ್ನಾಗಿ ಮಾಡಿ, ತನ್ನಲ್ಲಿಯೇ ಚಿತ್ತವುಳ್ಳವನಾಗಿ, ನಾನೇ ಪರಮಗತಿಯೆಂದು ಭಾವಿಸಿ ಯೋಗಯುಕ್ತನಾಗಿರಬೇಕು.

ಇವೆಲ್ಲ ಶ್ರೀಸಾಮಾನ್ಯರಿಗೆ ಸಾಧ್ಯವಾಗದ ಸಂಗತಿಗಳೆಂದು ಹೇಳುವುದೇ ಬೇಡ. ಯಜ್ಞ–ಯೋಗ–ಹೋಮ–ಹವನಾಶ್ರಿತ ಕರ್ಮಯೋಗವೂ,* ತ್ರಯೋಪಚಾರ. ಪಂಚೋಪಚಾರ, ದಶೋಪಚಾರ, ಷೋಡಶೋಪಚಾರಗಳೇ ಮುಖ್ಯವಾಗುತ್ತ ಬಂದ ಭಕ್ತಿಯೋಗವೂ ಬಡವರಿಗೆ ಭಾರವೆನಿಸಿದುದು ಆಶ್ಚರ್ಯವಲ್ಲ. ಇದನ್ನರಿತೇ ಶ್ರೀ ಕೃಷ್ಣನು–

ಪತ್ರಂ ಪುಷ್ಪಂ ಫಲಂ ತೋಯಂ

ಯೋ ಮೇ ಭಕ್ತ್ಯಾ ಪ್ರಯಚ್ಛತಿ।
ತದಹಂ ಭಕ್ತ್ಯುಪಹೃತಮ್
ಅಶ್ನಾಮಿ ಪ್ರಯತಾತ್ಮನಃ॥ (ಅಧ್ಯಾಯ ೯ – ಶ್ಲೋಕ ೨೬)

ಎಂದು ಸಾರಬೇಕಾಯಿತು. ಹೀಗೆ ಸಾರಿದರೂ ಹಿಂದೂ ದೇವಾಲಯಗಳಲ್ಲಿ ಷೊಡಶೋಪಾಚಾರಗಳ ಅಟ್ಟಹಾಸವೇ ಅಟ್ಟಹಾಸ: ಬಾಹ್ಯಾಡಂಬರ ಅರ್ಚನ ವಿಧಾನದಲ್ಲಿ ಭಕ್ತಿ ಹೂತುಹೋಯಿತು.

ಪ್ರಚಲಿತವಿದ್ದ ಎಲ್ಲ ಯೋಗ ವಿಧಾನಗಳಲ್ಲಿದ್ದ ಅರಕೆಗಳನ್ನೂ ಕಠಿನತೆ – ಕಠೋರತೆಗಳನ್ನೂ, ದುಬಾರಿತನ ದಾಂಭಿಕತೆಗಳನ್ನೂ ಗುರುತಿಸಿದ ಶಿವಶರಣರು ತಮ್ಮ ಜನಪರ ನಿಲುವಿಗೆ ತಕ್ಕ ಸುಲಭಸಾಧ್ಯವಾದ ಯೋಗಪದ್ಧತಿಯೊಂದನ್ನು ಯೋಗ–ಸಮನ್ವಯದ್ವಾರಾ ರೂಪಿಸಿದರು. ಅದರ ಕೇಂದ್ರ ಬಿಂದು ಇಷ್ಟ ಲಿಂಗಾರ್ಚನೆ. ಆಗಮಗಳ ಮೂರ್ತಿಮೂಲಕ ಯೋಗಾನುಷ್ಠಾನದಲ್ಲಿಲ್ಲದ ಯೌಗಿಕ ಮಹತ್ವ ಇಷ್ಟಲಿಂಗಾರ್ಚನೆಗೆ ಇದೆ. ಕಳಾಭರಿತವಾದ ಕಂತೆಯ ಹೊರಾವರಣವುಳ್ಳ, ಶಾಸ್ತ್ರೀಯವಾಗಿ ಸಿದ್ಧಪಡಿಸಿದ ಇಷ್ಟಲಿಂಗವನ್ನು ಅಂಗೈಯಲ್ಲಿಟ್ಟು, ಆ ಅಂಗೈಯನ್ನು ಭ್ರೂಮಧ್ಯದಿಂದ ಸುಮಾರು ಹನ್ನೆರಡು ಅಂಗುಲ ಪ್ರಮಾಣದಲ್ಲಿರಿಸಿ, ಇಷ್ಟಲಿಂಗದಲ್ಲಿ ದೃಷ್ಟಿಯನ್ನು ಕೀಲಿಸಬೇಕು. ತನಗೆ ಸಹ್ಯವೆನಿಸುವ ಸುಲಭವಾದ ಆಸನದಲ್ಲಿ ಕುಳಿತಿರಬೇಕು. ಇಷ್ಟ ಲಿಂಗಾರ್ಚನೆಯಿಂದ ಪ್ರಾಣಲಿಂಗೋಪಾಸನೆಗೆ, ಪ್ರಾಣಲಿಂಗೋಪಾಸನೆಯಿಂದ ಭಾವಲಿಂಗೋಪಾಸನೆಗೆ ಅವರೋಹಿಸಬೇಕು. ಇದು ಶರಣರು ಶೋಧಿಸಿ ಸಾಧಿಸಿದ ಶಿವಯೋಗದ ಸ್ವರೂಪ. ಅಷ್ಟಾಂಗ ಯೋಗಗಳಲ್ಲಿ ಮಹತ್ವವಿರುವುದು ಸಾಧನೆಗೆ ಸಹಾಯಕವಾಗುವ ಮೊದಲಿನ ಐದು ಅಂಗಗಳಿಗಲ್ಲ, ಸಾಧ್ಯವೆನಿಸುವ ಕೊನೆಯ ಮೂರಕ್ಕೆ* ಎಂದರೆ ಧಾರಣಾ, ಧ್ಯಾನ ಸಮಾಧಿಗಳಿಗೆ. ಇವುಗಳನ್ನೇ ಇಷ್ಟಲಿಂಗಾರ್ಚನೆಯು ಸುಲಭವಾಗಿ ಸಾಧಿಸುತ್ತದೆ. ಇಷ್ಟದಲ್ಲಿ ನೆಟ್ಟ ದೃಷ್ಟಿ ದಾರಣಾ, ಇಷ್ಟದ ಧ್ಯಾನವೇ ಧ್ಯಾನ, ತದ್ಧ್ಯಾನಾನಂದದಲ್ಲಿ ಲೀನವಾಗುವುದೇ ಸಮಾಧಿ. ಇವುಗಳೆ ಇಷ್ಟ, ಪ್ರಾಣ, ಭಾವಲಿಂಗಪೂಜೆಗಳು ಕೂಡ. ಇಲ್ಲಿ ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ ರಾಜಯೋಗಗಳ ಸುಂದರ ಸಮನ್ವಯ. ಅಂತೆಯೇ ಅನುಪಮ ಜ್ಞಾನಿ ಅಲ್ಲಮಪ್ರಭುಗಳೂ ಕೇಳಿದರು; 'ಅಮೃತಸಾಗರದೊಳಿದ್ದು ಆಕಳ ಚಿಂತೆಯೇಕೆ? ಮೇರುಮಂದಿರದೊಳಗಿದ್ದು ಜರಗ ತೊಳೆವ ಚಿಂತೆಯೇಕೆ? ಶ್ರೀಗುರುವನೊಳಗಿದ್ದು ತತ್ತ್ವವಿದ್ಯದ ಚಿಂತೆಯೇಕೆ? ಪ್ರಸಾದದೊಳಗಿದ್ದು ಮುಕ್ತಿಯ ಚಿಂತೆಯೇಕೆ? ಕರಸ್ಥಲದೊಳಗೆ ಲಿಂಗವಿದ್ದ ಬಳಿಕ ಮತ್ತಿನ್ನಾವ ಚಿಂತೆಯೇಕೆ ಹೇಳಾ, ಗುಹೇಶ್ವರಾ?'

ಕರಸ್ಥಲದ ಇಷ್ಟಲಿಂದಕ್ಕೆ ಅಲ್ಲಮಪ್ರಭುಗಳೂ ಇಷ್ಟು ಮಹತ್ವ ಕೊಡಲು ಕಾರಣಗಳಿವೆ. ಉಳಿದ ಯೋಗಗಳ ಗುರಿ ಸಮಾಧಿಯಾದರೆ ಶಿವಯೋಗದ ಗುರಿ ಲಿಂಗಾಂಗ ಸಾಮರಸ್ಯ,

ಸರ್ವಾಂಗ ಲಿಂಗಮಯತ್ವ. ಅಲ್ಲಮಪ್ರಭುಗಳ ಅಪರಾವತಾರಗಳೆನಿಸಿದ ತೋಂಟದ ಸಿದ್ಧಲಿಂಗ ಶಿವಯೋಗೀಶ್ವರರು ಇದನ್ನು ಮನೋಹರವಾಗಿ ನಿರೂಪಿಸಿದ್ದಾರೆ.

'ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನಧಾರಣ ಸಮಾಧಿ ಈ ಎಂಟು ಅಷ್ಟಾಂಗ ಯೋಗಗಳು. ಈ ಯೋಗಾಂಗಳೊಳಗೆ ಉತ್ತರಭಾಗ, ಪೂರ್ವಭಾಗ ಎಂದು ಎರಡು ಪ್ರಕಾರವಾಗಿಹವು. ಯಮ ಪಂಚಕವೈದು ಪೂರ್ವಯೋಗ, ಧ್ಯಾನ ಧರಣ ಸಮಾಧಿ ಎಂದು ಮೂರು ಉತ್ತರ ಯೋಗ.... ಈ ಎಂಟು ಇತರ ಮತದವರು ಮಾಡುವ ಯೋಗಂಗಳು. ಈ ಕರ್ಮಕೌಶಲ್ಯದಲ್ಲಿ ಲಿಂಗವಿಲ್ಲ ನೋಡಾ.... ಇನ್ನು ವೀರಮಾಹೇಶ್ವರರುಗಳ ಲಿಂಗಾನುಸಂಧಾನವೆಂತೆಂದೊಡೆ – ಬ್ರಹ್ಮರಂಧ್ರದಲ್ಲಿಪ್ಪ ನಾದ ಚೈತನ್ಯವಪ್ಪ ಪರಮಚಿತ್ಕಳೆಯನೇ ಭಾವಮನಕರಗಳಲ್ಲಿ ಶ್ರೀಗುರು ತಂದು ಸಾಹಿತ್ಯವ ಮಾಡಿದವನಾಗಿ, ಭಾವದಲ್ಲಿ ಸತ್ಸ್ವರೂಪವಪ್ಪ, ಒಂದೇ ವಸ್ತು ತನುಮನ ಭಾವಂಗಳಲ್ಲಿ ಇಷ್ಟಪ್ರಾಣ ಭಾವವಾದ ಭೇದವನರಿಯದೆ, ಇಷ್ಟಲಿಂಗವ ದೃಷ್ಟಿಯಿಂದ ಗ್ರಹಿಸಿ, ಪ್ರಾಣಲಿಂಗವ ಮನಜ್ಞಾನದಿಂದ ಗ್ರಹಿಸಿ, ತೃಪ್ತಿಲಿಂಗವ ಭಾವಜ್ಞಾನದಿಂದ ಗ್ರಹಿಸಿ, ಈ ಲಿಂಗತ್ರಯುವಿಡಿದಾಚರಿಸಿ, ಲಿಂಗದೊಡನೆ ಕೂಡಿ, ಲಿಂಗವೇ ತಾನಾಗಿ ವಿರಾಜಿಸುತಿರ್ಪುದೀಗ ಶಿವಯೋಗ ನೋಡಾ ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೆ.

ಈ ಸ್ಥಿತಿಯನ್ನು ತಲುಪುವಲ್ಲಿ ವಿಘ್ನಗಳು ಮೂರು – ಇಂದ್ರಿಯ ಚಾಪಲ್ಯಗಳು, ಮನಸ್ಸು, ಉಸಿರಿನ ಉರವಣಿಗೆ. ಮನದ ಚಂಚಲತೆ ಇಂದ್ರಿಯಗಳ ಸಂಚಲತೆಗೆ ಕಾರಣವಾಗುತ್ತದೆ. ವಾಯುವಿನ ಸಂಚಲನತೆ ಮನದ ಚಂಚಲತೆಗೆ ಕಾರಣವಾಗುತ್ತದೆ. ವಾಯುವನ್ನು ಪ್ರಾಣಾಯಾಮದಿಂದ, ಇಂದ್ರಿಯಗಳನ್ನು ಶಮಾದಿಗಳಿಂದ, ಮನವನ್ನು ಧ್ಯಾನಧರಣ ಸಮಾಧಿಗಳಿಂದ ಸಂಯತಗೊಳಿಸಲು ದಾರಿ ತೋರುತ್ತದೆ. ಅಷ್ಟಾಂಗಯೋಗ.

---

***ತ್ರಯೋಪಚಾರ : ಧೂಪ ಮೊದಲಾದ ಸುಗಂಧ ದ್ರವ್ಯಗಳನ್ನು ಉರಿಸುವುದು, ದೀಪ ಬೆಳಗುವುದು, ನೈವೇದ್ಯ**

**ಪಂಚೋಪಚಾರ : ಗಂಧ ಸಮರ್ಪಣೆ, ಪುಷ್ಪ ಸಮರ್ಪಣೆ, ಧೂಪ, ದೀಪ, ನೈವೇದ್ಯ**

**ದಶೋಪಚಾರ : ಅರ್ಘ್ಯ, ಪಾದ್ಯ, ಅಚಮನ, ಸ್ನಾನ, ಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ, ಪುನರಾಚಮನ**

**ಷೋಡಶೋಪಚಾರ : ಧ್ಯಾನ, ಆವಾಹನ, ಆಸನ, ಪಾದ್ಯ, ಅರ್ಘ್ಯ, ಸ್ನಾನ, ವಸ್ತ್ರ, ಯಜ್ಞೋಪವೀತ, ಚಂದನ, ಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ, ನೀರಾಜನಾ, ಸುವರ್ಣಪುಷ್ಪ (ಧನ ಕನಕ)**

ಆದರೆ ಪ್ರಾಣಾಯಾಮ ಯೋಗ್ಯ ಗುರು ದೊರೆತರೆ ಮಾತ್ರ ಸಾಧ್ಯ; ಇಲ್ಲದಿದ್ದರೆ ಪ್ರಾಣಾಯಾಮ ಪ್ರಾಣಾಪಾಯವೆಂಬುದನ್ನು ಇದಾಗಲೇ ಸೂಚಿಸಲಾಗಿದೆ.

ಇನ್ನು ಇಂದ್ರಿಯಗಳ ವಿಚಾರ. ನಿರೋಧ, ದಮನ, ನಿಗ್ರಹ ಇತ್ಯಾದಿಗಳಿಂದ ಇಂದ್ರಿಯಗಳನ್ನು ವಶಪಡಿಸಿಕೊಳ್ಳುವ ವಿಧಾನ ಅಷ್ಟೊಂದು ಫಲಪ್ರದವಲ್ಲ, ಪ್ರಶಸ್ತವಲ್ಲ. ಬಸವಣ್ಣನವರು ಹೇಳಿಲ್ಲವೆ – 'ಇಂದ್ರಿಯನಿಗ್ರಹ ಮಾಡಿದರೆ ಹೊಂದುವುವು ದೋಷಗಳು, ಮುಂದೆ ಬಂದು ಕಾಡುವುವು ಪಂಚೇಂದ್ರಿಯಂಗಳು' ಎಂದು? ಅಲ್ಲಮಪ್ರಭುಗಳ ಈ ವಚನ ಇಲ್ಲಿ ಪ್ರಸ್ತುತ:

'ಕಂಗಳೇಕೆ ನೋಡಬೇಡ ಎಂದಡೆ ಮಾಣವು?
ಶ್ರೋತ್ರಂಗಳೇಕೆ ಆಲಿಸಬೇಡ ಎಂದಡೆ ಮಾಣವು?
ಜಿಹ್ವೆಯೇಕೆ ರುಚಿಸಬೇಡ ಎಂದಡೆ ಮಾಣವು?
ನಾಸಿಕವೇಕೆ ವಾಸಿಸಬೇಡ ಎಂದಡೆ ಮಾಣವು?
ತ್ವಕ್ಕೇಕೆ ಸೋಂಕಬೇಡ ಎಂದಡೆ ಮಾಣವು?
ಈ ಭೇದವನರಿದು ನುಡಿಸಲು ಸಮಧಾತುವಾಯಿತ್ತು
ಗುಹೇಶ್ವರ ಲಿಂಗಕ್ಕೆ ಒಲಿದ ಕಾರಣ, ಅಭಿಮಾನದ ಲಜ್ಜೆ
ಬೇಸತ್ತು ಹೋಯಿತ್ತು.'

ಬೇಡವೆಂದರೆ ಮಾಣವು ಇಂದ್ರಿಯಗಳು, ಲಿಂಗಕ್ಕೆ ಒಲಿದರೆ ಮಾತ್ರ ಅವುಗಳ ಉಪಶಮನ ಸಾಧ್ಯ. ಒಲಿವುದು ಸುಲಭವಾಗಲೆಂದು ಒಂದೊಂದು ಇಂದ್ರಿಯಕ್ಕೂ ಒಂದೊಂದು ಲಿಂಗವನ್ನು ಅಳವಡಿಸಿದರು. ಶ್ರೋತ್ರ – ವಾಕ್ಕುಗಳೆಂಬ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಪ್ರಸಾದಲಿಂಗ, ತ್ವಕ್ಕು – ವಾಣಿಗಳೆಂಬ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಜಂಗಮಲಿಂಗ, ನೇತ್ರ ಪಾದಗಳೆಂಬ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಶಿವಲಿಂಗ, ಜಿಹ್ವೆ – ಗುಹ್ಯಗಳೆಂಬ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಗುರುಲಿಂಗ, ನಾಸಿಕ – ಗುದಗಳೆಂಬ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೆ ಆಚಾರ ಲಿಂಗ, ಮನಕ್ಕೆ ಮಹಾಲಿಂಗ. ಹೀಗೆ ಇಷ್ಟಲಿಂಗವು ಆಚಾರಲಿಂಗ ಮೊದಲುಗೊಂಡು ಮಹಾಲಿಂಗದವರೆಗೆ ಆರು ಲಿಂಗಗಳ ರೂಪಗಳನ್ನು ಧರಿಸಿದಾಗ ಅಂಗನೂ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಕರಣ, ಐಕ್ಯಸ್ಥಲಗಳನ್ನು ಪಡೆಯುತ್ತಾನೆ. ಈ

---

*** ಯಮನಿಯಮವಾದಿಕಾಷ್ಟ ವಿಧಯೋಗದೊಳುತ್ತರ ಪೂರ್ವಭಾ ಗಮನನು ಮಾನದೃಷ್ಟಿ ವಿಮಳಶ್ರುತದಿಂದರಿದಲ್ಲಿ ಪೂರ್ವಭಾ ಗಮನನುಳಿದುತ್ತರಾರ್ಧ ಶಿವಯೋಗ ಸಮಾಹಿತ ಭಕ್ತಿ ಸತ್ಕ್ರಿಯಾ ಶ್ರಮ ಪರಮಾರ್ಥಮಂ ಬಿಡದೆ ವರ್ತಿಸುವರ್ ಶರಣರ್ ಶಿವಾಧವಾ ॥ ಮಗ್ಗೆಯ ಮಾಯಿದೇವರು.**

ಷಡ್ವಿಧಲಿಂಗೋಪಾಸನೆಯನ್ನು ಷಡ್ವಿಧೇಂದ್ರಿಯ ಮುಖದಿಂದಲೇ ಮಾಡಬೇಕಾಗುತ್ತದೆ. ಈ ವಿಶಿಷ್ಟ ಉಪಾಸನೆಯಿಂದ ಸರ್ವೇಂದ್ರಿಯಗಳಗೂ ಲಿಂಗಸಂಬಂಧವು ಉಂಟಾಗಿ ಸರ್ವೇಂದ್ರಿಯಗಳೂ ಲಿಂಗಮಯವಾಗಿ, ಲಿಂಗಕಳೆಯಿಂದ ಥಳಥಳಿಸುವುವು. ಕರಣಂಗಳು ಲಿಂಗಕಿರಣಂಗಳಾಗಿ ಅಂಗನು ಸರ್ವಾಂಗಲಿಂಗಿಯಾಗುವನು. ಇದು ಇಂದ್ರಿಯಗಳನ್ನು ವಿರೋಧಿಸದೆ, ನಿಗ್ರಹಿಸದೆ ಅವುಗಳನ್ನು ಉದಾತ್ತೀಕರಿಸುವ ವಿನೂತನ ವಿಧಾನ.

ಇನ್ನು ಮನದ ವಿಚಾರ : ಮನದ ಮರ್ಕಟತನ ಸರ್ವವೇದ್ಯ, ಅಕ್ಕಮಹಾದೇವಿಯ ಈ ವಚನ ಮನವನ್ನು ಗೆಲ್ಲುವುದು ಹೇಗೆಂಬುದನ್ನು ಮನೋಜ್ಞವಾಗಿ ನಿರೂಪಿಸುತ್ತದೆ;

'ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೂ ಮನವೇ ಬೀಜ
ಅ ಮನ ನಿಮ್ಮಲ್ಲಿ ಒಡವೆರೆದ ಬಳಿಕ
ಎನಗೆ ಭವವುಂಟೆ, ಚೆನ್ನ ಮಲ್ಲಿಕಾರ್ಜುನ?

ಮನಕ್ಕೂ ಲಿಂಗ ಸಂಬಂಧದಿಂದಲೇ ಮಹದಲ್ಲಿ ಮನೆಮಾಡುವುದು ಸಾಧ್ಯವಾಗುತ್ತದೆ. ಹೀಗೆ ವಾಯು, ಇಂದ್ರಿಯುಗಳು, ಮನ – ಇವುಗಳನ್ನು ಜಯಿಸುವುದು ಇಷ್ಟಲಿಂಗಾರ್ಚನೆಯೊಂದರಿಂದಲೇ ಸಾಧ್ಯವಾಗುತ್ತದೆ. ಚಾಮರಸನ ಪ್ರಭುಲಿಂಗ ಲೀಲೆಯ ಈ ಪದ್ಯಗಳು ಹೃದ್ಯ:

ಆದೊದಾಲಿಸಿ ಕೇಳು ಭಕ್ತಿಯ । ಹಾದಿಗೊಂದೇ ಕೀಲು ದಿಟ ಬೇ ।
ಕಾದುದೀ ತನು ತನುವಿಡದು ಕಾಬುದು ಸಮಸ್ತವನು ॥
ಹೇಳುವೊಡೆ ಮನವೆಂಬ ಹಕ್ಕಿಗೆ । ಕಲುಗಳೆಲ್ಲೈ ತೊಳಲುತಿಹ ಕ–'
ಣ್ಣಾಲಿಗಳು ದಿಟವದಕೆ ಪಕ್ಕಗಳೀಡೆ ಪಿಂಗಳದ ॥
ಗಾಳಿಯಾಗಿಹುದಂತುಕಾರಣ । ವಾಲಿಯೇ ಸಾಧನಕೆ ಸಾಧನ।
ಮೂಲವನೆ ನಿಲಿಸುವನು ಭಕ್ತನು ಬಸವ ಕೇಳೆಂದ ॥
ಆಲಿನಿಂದೊಡೆ ಸುಳಿದು ಸೂಸುವ ।
ಗಾಳಿ ನಿಲುವುದು, ಗಾಳಿ ನಿಲೆ ಮನ ।
ಮೇಲೆ ನಿಲುವುದು ಮನವು ನಿಂದೊಡೆ ಬಿಂದು ನಿಂದಿಹುದು ।
ಲೀಲೆಯಿಂದಲಿ ಬಿಂದು ನಿಂದಿಡೆ ।
ಕಾಲಕಾಮರಗೆದ್ದು ಮಾಯೆಯ
ಹೇಳ ಹೇಳರಿಲ್ಲೆನಿಸಬಹುದ್ಯೆ ಬಸವಕೇಳೆಂದ.॥

ಆಲಿಯೇ ಸಾಧನಕೆ ಸಾಧನ. ಅಲಿ ಇಷ್ಟದಲ್ಲಿ ನೆಲೆಯಾಗಿ ನಿಂತಾಗ ಗಾಳಿ ನಿಲ್ಲುವುದು; ಗಾಳಿ ನಿಂತಾಗ ಮನ ನಿಲ್ಲುವುದು, ಮನ ನಿಂತಾಗ ಬಿಂದು ನಿಲ್ಲುವುದು. ಒಂದೇ ಏಟಿಗೆ ಮೂರು ಅಮೃತಫಲಗಳನ್ನು ಪಡೆವ ಪವಾಡವಿದು. ಅಷ್ಟಾಂಗಯೋಗದ ಪೂರ್ವಾರ್ಧದ ಗೊಡವೆಗೆ ಹೋದೆಯೂ ಯೋಗಸಾಧನೆ ಸಾಧ್ಯವೆಂಬುದನ್ನು ಈ ಶತಮಾನದ ಮಹಾಯೋಗಿ ಅರವಿಂದರು ತೋರಿಸಿಕೊಟ್ಟರು – ತಮ್ಮ ಪೂರ್ಣಯೋಗದ ಪ್ರತಿಪಾದನೆಯಿಂದ ಇದನ್ನೇ ಶಿವಶರಣರು ಹನ್ನೆರಡನೆಯ ಶತಮಾನದಲ್ಲಿಯೇ ತೋರಿಸಿಕೊಟ್ಟರು ತಮ್ಮ ಶಿವಯೋಗದ ಮೂಲಕ ಷಟ್‌ಚಕ್ರಗಳ, ಅಷ್ಟಾಂಗ ಯೋಗದ. ಹಲವು ಯೋಗ ಪ್ರಕಾರಗಳ ಹಳುವಿನಲ್ಲಿ ಕಂಗೆಟ್ಟಿದ್ದ ಶ್ರೀ ಸಾಮಾನ್ಯರಿಗೆ – ಸ್ತ್ರೀ ಪುರುಷರಿಬ್ಬರಿಗೂ ಮನೆಯಲ್ಲಿಯೇ ಕುಳಿತು ಲಿಂಗಾಂಗಯೋಗವನ್ನು ಸಾಧಿಸುವ ಸದಾವಕಾಶ ದೊರೆಯಿತು.

ಇದೊಂದು ಸ್ವತಂತ್ರ ಯೋಗಮಾರ್ಗ – ಶಿವಯೋಗಪ್ರದೀಪಿಕೆಯು ಹೇಳುವಂತೆ ತತ್ತ್ವತಃ ರಾಜಯೋಗವೇ ಅಲ್ಲ. ಶಿವಜ್ಞನ, ಶಿವಭಕ್ತಿ, ಶಿವಾರ್ಚನ ಇತ್ಯಾದಿಗಳನ್ನು ಸೇರಿಸಿದಾಕ್ಷಣ ರಾಜಯೋಗ ಶಿವಯೋಗವಾಗುವುದಿಲ್ಲ. ಇದಕ್ಕಾಗಿ ತಮ್ಮದೇ ಅದ ಪರಿಭಾಷೆಯನ್ನೇ ಸೃಷ್ಟಿಸಿ ಬಿಟ್ಟರು ಶಿವಶರಣರು. ಇದು ಸಿದ್ಧರಾಮನ ದೃಷ್ಟಿಯಲ್ಲಿ ಷಟ್‌ಚಕ್ರಗಳ ಸ್ವರೂಪ :

'ಆಧಾರ ಸ್ವಾಧಿಷ್ಠಾನ, ಮಣಿಪೂರಕ, ವಿಶುದ್ಧಿ, ಆಜ್ಞೆ ಎಂಬರು
ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ವಿಶುದ್ಧಿ, ಆಜ್ಞೆಯ ಬಲ್ಲರೆ
ನೀವು ಹೇಳಿರೋ
ಅರಿವು ಉಳ್ಳುದೇ ಆಧಾರ, ಅನಾಹತ ಕೂಡಿಪ್ಪುದೇ ಸ್ವಾಧಿಷ್ಠ
ಮಣಿಯ ಬೆಳಗಿನಲ್ಲಿಪ್ಪುದೇ ಮಣಿಪೂರಕ, ಆಶೆ ಇಲ್ಲದುದೆ ಅನಾಹತ
ಸರ್ವಜೀವಂಗಳಲ್ಲಿ ದಯೆಯುಳ್ಳುದೇ ಆಜ್ಞೆ
ಇಂತಪ್ಪುದೀಗ ಶಿವಯೋಗ
ಉಳಿದ ಅಭ್ಯಾಸ ಯೋಗಿಗಳ ಕಂಡು ನಗುತಿರ್ದನಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನ

ಇದು ತೋಂಟದ ಸಿದ್ಧಲಿಂಗ ಶಿವಯೋಗೀಶ್ವರರು ಯೋಗದ ಅಷ್ಟಾಂಗಗಳಿಗೆ ನೀಡಿರುವ ವಿವರಣೆ:

೧) **ಯಮ :** ಅನೃತ, ಹಿಂಸೆ, ಪರಧನದಾಶೆ, ಪರಸ್ತ್ರೀ ಮೋಹ, ಪರನಿಂದೆ – ಈ ಐದನ್ನು ಬಿಟ್ಟು ಲಿಂಗಾರ್ಚನೆ ಮಾಡುವುದೇ ಯಮಾಂಗ

೨) **ನಿಯಮ :** ತ್ರಿಕರಣಗಳಲ್ಲಿ ಷಡಕ್ಷರ ಮಂತ್ರ ಜಪಿಸುತ್ತ, ಅಶುಚಿತ್ವವನ್ನು ಬಿಟ್ಟು,

ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ, ಶಿವಲಿಂಗಾರ್ಚನ ತತ್ಪರನಾಗಿದ್ದು ಪಾಪಕ್ಕೆ ಭೀತನಾಗಿರುವುದೇ ನಿಯಮಾಂಗ

೩) **ಆಸನ :** ಸಿದ್ಧಾಸನ, ಪದ್ಮಾಸನ, ಸ್ವಸ್ತಿಕಾಸನ, ಅರ್ದಚಂದ್ರಾಸನ, ಪರ್ಯಂಕಾಸನ – ಈ ಐದು ಆಸನಗಳಲ್ಲಿ ಒಂದನ್ನು ಪರಿಗ್ರಹಿಸಿ, ಸುಸ್ಥಿರ ಚಿತ್ತನಾಗಿ ಮೂರ್ತಗೊಂಡು ಶಿವಲಿಂಗಾರ್ಚನೆ ಮಾಡುವುದೇ ಆಸನಾಂಗ

೪) **ಪ್ರಾಣಾಯಾಮ :** ಈಡಾ ಪಿಂಗಳಗಳಲ್ಲಿ ಚರಿಸುವ ರೇಚಕ ಪೂರಕಂಗಳ ಭೇದವನರಿದು, ಮನಪವನಂಗಳ ಮೇಲೆ ಲಿಂಗವ ಸಂಬಂಧಿಸಿ, ಮನಪವನ ಪ್ರಾಣಗಳನ್ನು ಲಿಂಗದೊಡನೆ ರೂಢಿಸಿ, ಲಿಂಗಸ್ವರೂಪವ ಮಾಡಿ, ವಾಯು ಪ್ರಾಣಿತ್ವವ ಕಳೆದು ಲಿಂಗ ಪ್ರಾಣಿಯಾಗಿ, ಹೃದಯ ಕಮಲ ಮಧ್ಯದಲ್ಲಿ ಪ್ರಣಮವನುಚ್ಚರಿಸುತ್ತಾ ಪರಶಿವಧ್ಯಾನದಲ್ಲಿ ಪರವಶನಾಗುವುದೇ ಪ್ರಾಣಾಯಾಮ ಯೋಗ.

೫) **ಪ್ರತ್ಯಾಹಾರ :** ಗುರು ಕೃಪೆಯಿಂದ ಸರ್ವೇಂದ್ರಿಯಗಳನ್ನು ಸಾವಧಾನದಿಂದ ಲಿಂಗಮುಖಗಳನ್ನಾಗಿ ಮಾಡಿಕೊಳ್ಳುವುದೇ ಪ್ರತ್ಯಾಹಾರ ಯೋಗ.

೬) **ಧ್ಯಾನ :** ಅಂತರಂಗದ ಶುದ್ಧ ಪರಮಾತ್ಮ ಲಿಂಗವನ್ನೇ ಶ್ರೀಗುರು ಶಿವಲಿಂಗಸ್ವರೂಪವ ಮಾಡಿ ಕರಸ್ಥಲಕ್ಕೆ ತಂದು ಕೊಟ್ಟಿರುವನು. ಆ ಕರಸ್ಥಲದ ಲಿಂಗವೇ ಪರಮಾತ್ಮ ಸ್ವರೂಪವೆಂದರಿದು, ಅದನ್ನು ಆಧಾರಾದಿ ಸ್ಥಾನಗಳಲ್ಲಿ ಆಹ್ವಾನ ವಿಸರ್ಜನೆಗಳಿಲ್ಲದೆ ಧ್ಯಾನಿಸುವದೇ ಧ್ಯಾನಯೋಗವೆನಿಸುವುದು.

೭) **ಧಾರಣ** : ಶ್ರೀ ಗುರು ಕರುಣಿಸಿದ ಲಿಂಗವನ್ನು ಭಾವ, ಮನ, ಕರ ಮೊದಲಾದ ಸರ್ವಾಂಗದಲ್ಲಿ ಧರಿಸುವದೇ ಧರಣಯೋಗ

೮) **ಸಮಾಧಿ :** ಸತ್ಕ್ರಿಯಾ ಜ್ಞಾನಯೋಗದಿಂದ ಪ್ರಾಣಂಗೆ ಶಿವಕಳೆಯ ಸಂಬಂಧಿಸಿ, ಇಷ್ಟ–ಪ್ರಾಣ–ಭಾವವೆಂಬ ಲಿಂಗತ್ರಯವನು ಏಕಾಕಾರ ಮಾಡಿ, ಅಖಂಡ ಪರಿಪೂರ್ಣ ಕೇವಲ ಪರಂಜ್ಯೋತಿ ಸ್ವರೂಪವಾದ ಮಹಾಲಿಂಗದೊಡನೆ ಸಂಯೋಗವಾಗಿ, ಭಿನ್ನವಿಲ್ಲದೆ ಏಕಾರ್ಥವಾಗಿರುವುದೇ ಸಮಾಧಿಯೋಗ. ಇಂತೀ ಅಷ್ಟಾಂಗಯೋಗದಲ್ಲಿ ಶಿವ ಲಿಂಗಾರ್ಚನೆಯ ಮಾಡಿ ಶಿವತತ್ತ್ವದೊಡನೆ ಕೂಡುವುದೇ ಲಿಂಗಾಂಗಯೋಗವೆನಿಸುವುದು.

ಇವೆಲ್ಲವನ್ನು ಅಳವಡಿಸಿಕೊಳ್ಳುವ ಪೂಜೆ ಹೇಗಿರಬೇಕು? ಚೆನ್ನಬಸವಣ್ಣನವರ ಈ ವಚನ ಇದನ್ನು ಬೆರಗಾಗುವಂತೆ ಬಣ್ಣಿಸುತ್ತದೆ. ಎಲ್ಲವನ್ನು ನವೀಕರಿಸಿದರು ಶರಣರು:

ಹೊರಗನೆ ಕೊಯ್ದು ಹೊರಗನೆ ಪೂಜಿಸಿದಡೆ
ಪ್ರಯೋಜನವಿಲ್ಲ. ಸುಖದೊರಕೊಳ್ಳದು ನೋಡಾ ಅದೆಂತೆಂದಡೆ:
ಸರ್ವಜೀವಂಗಳಲ್ಲಿ ಹಿಂಸೆಯ ಮಾಡದಿರಬಲ್ಲಡೆ ಪ್ರಥಮ ಪುಷ್ಪ
ಸರ್ವೇಂದ್ರಿಯಂಗಳ ನಿಗ್ರಹಿಸಿಕೊಂಡಿರಬಲ್ಲಡೆ ದ್ವಿತೀಯ ಪುಷ್ಪ

ಸರ್ವಾಹಂಕಾರವಳಿದು ಶಾಂತನಾಗಿರಬಲ್ಲಡೆ ತೃತೀಯ ಪುಷ್ಪ
ಸರ್ವವ್ಯಾಪಾರವಳಿದು ನಿರ್ವ್ಯಾಪಾರಿಯಾಗಿರಬಲ್ಲೆಡ ಚತುರ್ಥಪುಷ್ಪ
ದುರ್ಭಾವ ಪ್ರಕೃತಿಯಳಿದು ಸದ್ಭವ ಎಡೆಗೊಂಡಿರಬಲ್ಲಡೆ
ಚತುರ್ಥಪುಷ್ಪ
ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಯಾಗಿರಬಲ್ಲಡೆ ಷಷ್ಠ ಪುಷ್ಪ
ಅನೃತವ ಮರೆದು ಸತ್ಯವ ನುಡಿಯಬಲ್ಲಡೆ ಸಪ್ತಮ ಪುಷ್ಪ
ಸಕಲ ಪ್ರಪಂಚವಳಿದು ಶಿವಜ್ಞಾನಸಂಪನ್ನನಾಗಿರಬಲ್ಲಡೆ ಅಷ್ಟವಾ ಪುಷ್ಪ
ಇಂತೀ ಅಷ್ಟದಳ ಕಮಲದಲ್ಲಿ ಸಹಜ ಪೂಜೆ ಮಾಡಬಲ್ಲ ಶರಣರು
ನಿಮ್ಮ ಪ್ರತಿಬಿಂಬದಂತಿಪ್ಪರು ಕಾಣಾ, ಕೂಡಲ ಚೆನ್ನಸಂಗಮದೇವಾ

ಇಂತಿದು ಬೆರಸಿಯೂ ಬೇರಿಪ್ಪ, ಅಳಿಯದೆ ಕೊಡುವ, ಶಿವಯೋಗ, ಲಿಂಗಾಂಗ ಯೋಗ. ಯೋಗಕ್ಕೆ ಕೂಟವೆಂದು ಕರೆಯುವುದಾದರೆ ಇದನ್ನು ನೋಟಕೂಟವೆಂದು ಕರೆಯಬಹುದು. ದೃಷ್ಟಿಯೋಗವೆಂದೂ ಕರೆಯಬಹುದು. ಇಲ್ಲಿ ಮುಖ್ಯವಾದುದು ಜೀವಭಾವವು ಶಿವಭಾವವಾಗಿ ಪರಿವರ್ತಿತವಾಗುವುದು. ಇದು ಸಾಧ್ಯವಾಗುವುದು ಲಿಂಗಪೂಜೆಯಿಂದ.

'ಲಿಂಗದೊಳಿದ್ದು ಲಿಂಗಮನೆ ತಾಳ್ದು ನಿರಂತರ ಲಿಂಗಪೂಜೆಯಂ
ಲಿಂಗದಿನೊಲ್ದು ವಿಸ್ತರಿಸಿ ಲಿಂಗಕೆ ಲಿಂಗಮನರ್ಪಿಸುತ್ತು ಮಾ ।
ಲಿಂಗ ಪದಾರ್ಥಮಂ ಸವಿದುಂ ಲಿಂಗ ಸುಖಾಸ್ವದನಾಗಿ ರಾಜಿಪಂ
ಲಿಂಗನಿಜೈಕ್ಯನಯ್ಯ ಪರಮ ಪ್ರಭುವೇ ಮಹದೈ ಪುರೀತರಾ ॥
ಮಗ್ಗೆಯ ಮಾಯಿದೇವರು

ಇದುವರೆಗೆ ವಿವರಿಸಿದ ಎಲ್ಲವನ್ನೂ ಏಕತ್ರಗೊಳಿಸಿದ ಚನ್ನಬಸವಣ್ಣನವರ ಸುದೀರ್ಘ ವಚನವೊಂದಿದೆ. ಅದನ್ನು ಉದಾಹರಿಸಿ ಈ ಬರಹಕ್ಕೆ ಪೂರ್ಣವಿರಾಮ ಹಾಕಬಹುದಾಗಿದೆ. ಶಿವಯೋಗದ ಗುರಿಯಾದ ಸರ್ವಾಂಗಲಿಂಗಮಯತ್ವದ ಸಾಧನೆಗೆ ಇದು ಬೀಗದಕೈಯಾಗಿದೆ.

'ಎನ್ನ ಸರ್ವಾಂಗವೆಲ್ಲವೂ ಲಿಂಗವಾದ ಪರಿಶ್ರಮವೆಂತೆಂದಡೆ
ಶ್ರೀಗುರು ಬಸವಣ್ಣನುಪದೇಶಿಸಿದ ಇಷ್ಟಲಿಂಗವೆನ್ನ ಸರ್ವಾಂಗದಲ್ಲಿ
ಭಿನ್ನನಾಮಂಗಳಿಂದ ಪ್ರಕಾಶಿಸುತ್ತಿಹುದು
ಅದೆಂತೆಂದಡೆ : ಸ್ಥೂಲಾಂಗದಲ್ಲಿ ಇಷ್ಟಲಿಂಗವೆಂದು, ಸೂಕ್ಷ್ಮಾಂಗದಲ್ಲಿ
ಪ್ರಾಣಲಿಂಗವೆಂದು

ಕಾರಣಾಂಗದಲ್ಲಿ ಭಾವಲಿಂಗವೆಂದು ತ್ರಿಬೇಧವಾಗಿಹುದು
ಇಂತು ಲಿಂಗವ ಕುರುಹು ಮೂರುತೆರನಾಯಿತ್ತು
ಇನ್ನು ಇಂದ್ರಿಯಂಗಳ ಕುರಿತು ಆರುತೆರನಾಗಿರ್ಪುದು

ಅದು ಹೇಗೆಂದಡೆ: ಹೃದಯದಲ್ಲಿ ಮಹಾಲಿಂಗವೆಂದು, ದ್ರೋತ್ರದಲ್ಲಿ ಪ್ರಸಾದ ಲಿಂಗವೆಂದು ತ್ವಕ್ಕಿನಲ್ಲಿ ಜಂಗಮಲಿಂಗವೆಂದು, ನೇತ್ರದಲ್ಲಿ ಶಿವಲಿಂಗವೆಂದು, ಜಿಹ್ವೆಯಲ್ಲಿ ಗುರುಲಿಂಗವೆಂದು, ಘ್ರಾಣದಲ್ಲಿ ಆಚಾರಲಿಂಗವೆಂದು ಇಂತು ಷಡಿಂದ್ರಿಯಗಳಲ್ಲಿ ಷಡ್ವಿಧಲಿಂಗವಾಗಿ ತೋರಿತ್ತು. ಇಂತೀ ಮರ್ಯಾದೆಯಲ್ಲಿ ಜ್ಞಾನ ಕರ್ಮೇಂದ್ರಿಯಂಗಳಲ್ಲಿಯೂ ಲಿಂಗವೇ ಪ್ರಕಾಶಿಸುತ್ತಿಹುದು.

ಅದು ಹೇಗೆಂದಡೆ: ಜ್ಞಾನೇಂದ್ರಿಯಂಗಳಿಗೆಯೂ, ಕರ್ಮೇಂದ್ರಿಯಂಗಳಿಗೂ ಭೇದವಿಲ್ಲ.

ಇಂತೀ ಜ್ಞಾನೇಂದ್ರಿಯಂಗಳಿಗೆಯೂ, ಕರ್ಮೇಂದ್ರಿಯಂಗಳಿಗೆಯೂ ಹೃದಯವೆ ಆಶ್ರಯ ಸ್ಥಾನವಾದ ಕಾರಣ ಹೃದಯ ಆಕಾಶವೆನಿಸಿತ್ತು. ಅಲ್ಲಿ ಸ್ಥೂಲ ಸೂಕ್ಷ್ಮ ಕಾರಣರೂಪಿಂದೆಲ್ಲಾ ಇಂದ್ರಿಯಂಗಳಿರುತ್ತಿಹವು.

ಅದು ಹೇಗೆಂದಡೆ : ಘ್ರಾಣದ ಘ್ರಾಣವೆ ಆಚಾರ ಲಿಂಗ: ಜಿಹ್ವೆಯ ಜಿಹ್ವೆಯ ಗುರುಲಿಂಗ, ನೇತ್ರದ ನೇತ್ರವೆ ಶಿವಲಿಂಗ; ತ್ವಕ್ಕಿನ ತ್ವಕ್ಕೇ ಜಂಗಮಲಿಂಗ: ಶ್ರೋತ್ರದ ಶ್ರೋತ್ರವೆ ಪ್ರಸಾದಲಿಂಗ; ಹೃದಯದ ಹೃದಯವೆ ಮಹಾಲಿಂಗ. ಈ ಆರು ಲಿಂಗಕ್ಕೆ ಅಂಗ ಸ್ಥಲ ಆರು. ಅವಾವುವೆಂದರೆ ಐಕ್ಯ, ಶರಣ, ಪ್ರಾಣಲಿಂಗಿ, ಪ್ರಸಾದಿ, ಮಾಹೇಶ್ವರ, ಭಕ್ತ – ಎಂದೀ ಆರು ಅಂಗಸ್ಥಲಗಳು.

ಇನ್ನು ಷಡಾಧಾರಂಗಳಲ್ಲಿ ಷಡಕ್ಷರ ರೂಪದಿಂದ
ಷಡ್ಲಿಂಗ ಸ್ಥಾಪ್ಯವಾಗಿಹವು.
ಇಂತೀ ಮರ್ಯಾದೆಯಲ್ಲಿ ಷಡ್ಧಾತುವಿನಲ್ಲಿ ಷಡಕ್ಷರ ರೂಪಿನಿಂದ
ಷಡ್ಲಿಂಗ ಸ್ಥಾಪ್ಯವಾಗಿಹವು.
ಇಂತೀ ಷಡ್ಧಾತುವೇ ಷಡಕ್ಷರಮಯವಾಗಿ, ಅವೆ ಲಿಂಗಂಗಳಾಗಿ
ಒಳಹೊರಗೆ ತೆರಹಿಲ್ಲದೆ ಸರ್ವಾಂಗವೆಲ್ಲವೂ ಲಿಂಗಮಯವಾದ
ಇರುವು.

ಅದು ತಾನೆ ಶಿವನಿರವು. ಅದು ತಾನೆ ಶಿವನ ಭವನ,
ಅದು ತಾನೇ ಶಿವನ ವಿಶ್ರಾಮ ಸ್ಥಾನ.

ಇಂತೀ ಷಡ್ಸ್ಥಲ ಬ್ರಹ್ಮವನರಿದಾತನೇ ಶರಣ.
ಆತನೇ ಲಿಂಗೈಕ್ಯ. ಕೂಡಲ ಚನ್ನಸಂಗಯ್ಯ'

ಶಿವಯೋಗದ ಸ್ವರೂಪ ಇಷ್ಟರಿಂದ ಸ್ಪಷ್ಟವಾಗಿದ್ದರೆ ನನ್ನ ಶ್ರಮ ಸಾರ್ಥಕ. ಇಲ್ಲಿ ಶಿವಯೋಗದ ಬಗ್ಗೆ ಬರೆಯಬೇಕಾದುದೆಲ್ಲವನ್ನೂ ಬರೆಯಲಾಗಿಲ್ಲ. ಬರೆದುದೆಲ್ಲ ಸರಿಯಿದೆಯೆಂಬ ಭ್ರಮೆಯೂ ನನಗಿಲ್ಲ. 'ಶಿವಯೋಗಮಂದಿರ'ದಲ್ಲಿ ಶಿವಯೋಗದ ಬಗ್ಗೆ ಒಂದು ಕಮ್ಮಟ ನಡೆದು ಅದರಲ್ಲಿ ಶಿವಯೋಗ ಸಾಧಕರೆಲ್ಲ ಭಾಗವಹಿಸಿ, ಶಿವಯೋಗದ ಬಗ್ಗೆ ಅಧಿಕೃತವಾದ ಒಂದು ಗ್ರಂಥವನ್ನು ರಚಿಸಿ ಪ್ರಕಟಿಸಿದರೆ ಬಹಳ ಚೆನ್ನಾಗುವುದು. ಅಂಥ ಪ್ರಮಾಣಗ್ರಂಥ ಬರುವವರೆಗೆ ಶಿವಭಕ್ತರು ಇಷ್ಟಲಿಂಗಾರ್ಚನೆಯ ಸರಿಯಾದ ರೀತಿಯನ್ನು ಅರಿತುಕೊಂಡು ಮನೆಯಲ್ಲಿಯೇ ಇಷ್ಟಲಿಂಗಾನುಸಂಧಾನದ ಮೂಲಕ ಇಷ್ಟ ಪ್ರಾಣಭಾವಲಿಂಗಗಳ ಉಪಾಸನೆಯನ್ನು ಮಾಡಿದರೆ ಕ್ರಮೇಣ ಲಿಂಗ ಲಿಂಗಮಯವಾಗಿ ಜೀವಶಕ್ತಿ ಶಿವಶಕ್ತಿಯಾಗಿ ವಿಕಸಿತವಾಗುವುದು; ಅಂಗದಲ್ಲಿ ನಿಕ್ಷೇಪಿತವಾಗಿರುವ ಶರ್ವಶಕ್ತಿಗಳು ಪ್ರಖರವಾಗಿ ಪ್ರಕಟವಾಗಿ ಮಾನವ ಶರಣನಾಗುವನು.

**ಗ್ರಂಥಋಣ :** ಅಲ್ಲಮ ಪ್ರಭು, ಚೆನ್ನಬಸವ, ಸಿದ್ಧರಾಮ, ತೋಂಟದ ಸಿದ್ಧಲಿಂಗೇಶ್ವರರ ವಚನಗಳು, ಶಿವಯೋಗ ಪ್ರದೀಪಿಕೆ, ಕೈವಲ್ಯ ಪದ್ಧತಿ, ಅಷ್ಟಾಂಗ ಯೋಗದಲ್ಲಿ ಯಮ ನಿಯಮ, ಶತಕಕ್ರಮ, ಭಗವದ್ಗೀತೆ, ಸಿದ್ಧಾಂತ ಶಿಖಮಣಿ, ವಚನಶಾಸ್ತ್ರಸಾರ, ರಜತದೀಪ್ತಿ, ಚಿತ್ಪ್ರಭೆ, ಮಹಾಂತ, ಸಿದ್ಧಗಂಗಾಶ್ರೀ, ಅರ್ಚನ, ಯೋಗಾಂಗ ವಿಭೂಷಣ, ಲಿಂಗಚಿದಮೃತಬೋಧೆ, ಪರಂಜ್ಯೋತಿ (ಜುಲೈ ೧೯೮೯), ಶಿವಯೋಗ ಪ್ರದೀಪಿಕಾ, ವೈರಾಗ್ಯದಲರು, ಶಿವಯೋಗ ಮಂದಿರದ ಬೆಳಗು, ಪಾತಂಜಲ ಯೋಗ ಸೂತ್ರ ಇತ್ಯಾದಿ.

# ೮

# ಕಾಯಕದ ಅರ್ಥಪ್ರಪಂಚ

'ಕಾಯಕ' ಶಬ್ದವು ಅರ್ಥಶಾಸ್ತ್ರದ, ಲೋಕನೀತಿಯ, ಸಾಮಾಜಿಕ ನ್ಯಾಯದ, ಆತ್ಮಾನುಶಾಸನದ, ವೃತ್ತಿಯ ಉದಾತ್ತೀಕರಣದ, ಲೌಕಿಕ ಪಾರ ಲೌಕಿಕಗಳ ಸಮನ್ವಯದ, ಸಹಜೀವನದ ಒಂದು ಅದ್ಭುತ ಅರ್ಥಪ್ರಪಂಚವನ್ನೇ ಒಳಗೊಂಡಿದೆಯಾಗಿ ಅದರ ಅರ್ಥ ಇಷ್ಟೇ ಎಂದು ನಿರ್ದಿಷ್ಟವಾಗಿ ಹೇಳಲಾಗದು. ತೋಡಿದಷ್ಟೂ ಸೆಲೆ ಚಿಮ್ಮುವ, ನೀರು ಹೊಮ್ಮುವ ಜಲಮೂಲದಂತೆ ಬರೆದಷ್ಟೂ ಬರೆಯ ಹಚ್ಚುವ ಶಬ್ದವಿದು. ಅದರ ಈ ಅಸೀಮವಾದ ಅರ್ಥಪ್ರಪಂಚದಲ್ಲಿ ಅರ್ಥಶಾಸ್ತ್ರಕ್ಕೆ ಸಂಬಂಧಿಸಿದಂತೆ ಮಾತ್ರ ಇಲ್ಲಿ ವಿಷಯಮಂಥನ ಉದ್ದೇಶಿತ.

ಇಂದು ಕ್ಷಿಪ್ರಗತಿಯಲ್ಲಿ ಕರಗುತ್ತ ನಡೆದಿರುವ ಆಹಾರ, ಶಕ್ತಿ ಇತ್ಯಾದಿ ಜಾಗತಿಕ ಸಂಪನ್ಮೂಲಗಳ ಬಗ್ಗೆ ಕಳವಳ ಹೆಚ್ಚುತ್ತಲಿದೆ ಎಲ್ಲೆಲ್ಲೂ. ಪರಿಸರ ಮಲಿನ್ಯವಂತೂ ಪೆಡಂಭೂತವಾಗಿ ಮನುಕುಲಕ್ಕೆ ಸವಾಲಾಗಿ ನಿಂತಿದೆ. ಇದು 'ಸಣ್ಣದೇ ಸುಂದರ'ವೆಂಬ ವಾದಕ್ಕೂ ಜನ್ಮವಿತ್ತಿದೆ. ಅಭಿವೃದ್ಧಿಯ ಪರಿಕಲ್ಪನೆಯೇ ಬುಡಮೇಲಾಗುತ್ತ ನಡೆದಿದೆ. ಕೇವಲ ಉಓಕ ಯ ಹೆಚ್ಚಳ ಇಲ್ಲವೆ ತಲಾ ವರಮಾನದ ಹೆಚ್ಚುಗೆ – ಇವುಗಳಿಂದ ತೃಪ್ತವಾಗುವಂತಿಲ್ಲ. ಬದಲಾಗುತ್ತಿರುವ ಬೆಳವಣಿಗೆಯ ಪರಿಕಲ್ಪನೆ. ದಟ್ಟದಾರಿದ್ರ್ಯದ ನಿರ್ಮೂಲನ, ದುಡಿಯುವ ಶಕ್ತಿಯುಳ್ಳ ಎಲ್ಲ ಸ್ತ್ರೀ ಪುರುಷರಿಗೆ ಸೂಕ್ತ ವೇತನದೊಂದಿಗೆ ಉದ್ಯೋಗಾವಕಾಶ ಪ್ರದಾನ, ಸ್ವದತ್ತ ವೃತ್ತಿಗಳಲ್ಲಿರುವವರಿಗೆ ಕನಿಷ್ಠ ವೇತನ ಹಾಗೂ ಸಹ್ಯ ಜೀವನಗಳ ನಿರ್ಮಾಣ ಇತ್ಯಾದಿಗಳು ಹೊಸ ಅಭಿವೃದ್ಧಿ ಪರಿಕಲ್ಪನೆಯ ಗುರಿಗಳಾಗತ್ತ ನಡೆದಿದೆ.

ಈ ಎರಡೂ ಅಂಶಗಳ ಸಂಯುಕ್ತ ವಿಶ್ಲೇಷಣೆ ಕೆಳಗಣ ನಿರ್ಣಾಯಕಾಂಶಗಳನ್ನು ನಮ್ಮ ಮುಂದಿರಿಸುತ್ತದೆ.

೧) ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಮುಂಭರುವ ಕಾಲುಶತಮಾನದಲ್ಲಿ ತಲೆದೋರಲಿರುವ, ಮೂವರಲ್ಲಿ ಇಬ್ಬರಂತಿರುವ ಉದ್ಯೋಗಾನ್ವೇಷಿಗಳಿಗೆ ಕೃಷಿವಲಯದ ಹೊರಗೆ ಕೆಲಸ ಕೊಡಬಲ್ಲ ಏಕೈಕ ಉಪಾಯವೆಂದರೆ ಸಣ್ಣ

ಬಂಡವಾಳ ಬಯಸುವ ಸಣ್ಣ ಉದ್ಯಮಗಳಿಗೆ ಪ್ರೋತ್ಸಾಹ ನೀಡುವುದೇ ಆಗಿದೆ. ಯಾಕೆಂದರೆ ಭಾರತದಂಥ ದೇಶಗಳಲ್ಲಿ ದೊಡ್ಡ ಕೈಗಾರಿಕೆಗಳಿಗೆ ಸಾಕಾಗುತ್ತದೆ. ದೊಡ್ಡ ಉದ್ಯಮಗಳಲ್ಲಿ ಒಬ್ಬನಿಗೆ ಕೆಲಸ ಹುಟ್ಟಿಸಬೇಕಾದರೆ ಒಂದು ಸಾವಿರ ಪೌಂಡುಗಳಷ್ಟು (ಇದು ೧೯೬೭ ರ ಅಂದಾಜು. ಈಗ ಇನ್ನೂ ಹೆಚ್ಚು) ಬಂಡವಾಳ ತೊಡಗಿಸಬೇಕಾಗುವುದೆಂದೂ, ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಒಬ್ಬನಿಗೆ ಎಪ್ಪತ್ತು ಪೌಂಡುಗಳಿಗಿಂತ ಹೆಚ್ಚು ಹಣ ತೊಡಗಿಸಬೇಕಾದ ಉದ್ಯಮಗಳು ಅನುಪಯುಕ್ತವೆಂದೂ ಈ ಎಫ್. ಷೂಮಾಕರ್ (E.F. Schumacher) ತನ್ನ ಬಹುಚರ್ಚಿತ ಕೃತಿ 'Industrialisation'ದಲ್ಲಿ ಹೇಳಿದ್ದಾನೆ.

೨) ಎಷ್ಟೇ ಸಣ್ಣ ದೊಡ್ಡ ಉದ್ಯಮಗಳನ್ನು ಪ್ರಾರಂಭಿಸಿದರೂ ಸ್ವದತ್ತ ವೃತ್ತಿಗಳ (Self - employment sector) ವಿಶಾಲ ವಲಯದ ವಿಪುಲ ಸಾಧ್ಯತೆಗಳನ್ನು ಬಳಸಿಕೊಳ್ಳದೆ ಹೋದರೆ. ಅದರಲ್ಲೂ ಸೇವಾಧಾರಿತ ವೃತ್ತಿಗಳ ಅಪಾರ ಸಾಧ್ಯತೆಗಳನ್ನು ಅಳವಡಿಸಿಕೊಳ್ಳದೆ ಹೋದರೆ ದುಡಿಯಬಲ್ಲ ಎಲ್ಲ ಹೆಣ್ಣು ಗಂಡುಗಳಿಗೆ ಕೆಲಸ ಕೊಡುವುದು ಸಾಧ್ಯವಾಗುವುದಿಲ್ಲ. ಉತ್ಪತ್ತಿ ಆಧಾರಿತ, ಲಾಭ ಕೇಂದ್ರಿತ, ಕಾಲ–ಶ್ರಮಗಳ ಉಳಿತಾಯ ವಿಧಾನ (time saving and labour saving devices)ಗಳಿಗೇ ಗಮನ ನೀಡುವ ದೊಡ್ಡ ಉದ್ಯಮಗಳಿಂದಲೇ ನಿರುದ್ಯೋಗ ನಿವಾರಣೆ ಅಸಂಭವ.

ಎಲ್ಲರಿಗೂ ಉದ್ಯೋಗವಕಾಶ, ತನ್ಮೂಲಕ ದಾರಿದ್ರ್ಯ ನಿವಾರಣೆಯ ಈ ಗುರಿಯನ್ನು ಗಾಂಧೀಜಿಯವರು ಗ್ರಾಮೋದ್ಯೋಗಗಳ ಪುನರುಜ್ಜೀವನದ ಮೂಲಕ ಮುಟ್ಟ ಬಯಸಿದರು. ಬಸವಣ್ಣನವರು ಕಾಯಕ–ಕೇಂದ್ರಿತ ಕಾಯಕ ಸಮಾಜವನ್ನು * ಸ್ಥಾಪಿಸುವುದರ ಮುಖಾಂತರ ಈ ಗುರಿ ಸಾಧಿಸ ಬಯಸಿದರು.

ಈ ದೇಶದ, ಬೇರೆ ವಿಕಾಸಶೀಲದೇಶಗಳ ಅರೆ ನಿರುದ್ಯೋಗ, ಪೂರ್ಣ ನಿರುದ್ಯೋಗ ಹಾಗೂ ಭೀಕರ ಬಡತನಗಳ ದ್ವಿಸಮಸ್ಯೆಗಳ ಬಗ್ಗೆ ಬಸವಣ್ಣನವರ ಹಾಗೂ ಬಾಪೂಜಿಯವರ ನಿಲುವು ಮತ್ತು ಧೋರಣೆಗಳಲ್ಲಿ ಆಶ್ಚರ್ಯಕರವಾದ ಸಾಮ್ಯಗಳಿವೆ. ಕೆಲವು ವ್ಯತ್ಯಾಸಗಳೂ ಇವೆ. ಇವುಗಳನ್ನು ಯಾವ ಅಭಿನಿವೇಶನಗಳಿಗೂ ಒಳಗಾಗದೆ ವಿಶ್ಲೇಷಿಸುವುದು ಅತ್ಯಗತ್ಯವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಇದು ಈ ಪರಿಮಿತ ಪ್ರತಿಪಾದನೆಯ ವ್ಯಾಪ್ತಿಯಲ್ಲಿ ಅಳವಡಿಸಲಾಗದ ವಿಷಯ. ಆದರೂ, ಉದಾಹರಣೆಗಾಗಿ ಒಂದು ಅಂಶವನ್ನು ವಿವರಿಸಬಹುದು. ಗಾಂಧೀಜಿಯವರು ಮಿಗುತಾಯಗಳ (Surpluses) ಸಮಸ್ಯೆಯನ್ನು ಇಗುತಾಯಗಳೇ ಇಲ್ಲದಂತೆ ಮಾಡುವುದರ ಮೂಲಕ ಪರಿಹರಿಸಬಯಸಿದರು; ಬಸವಣ್ಣನವರು, ಶಿವಶರಣರು ಮಿಗುತಾಯಗಳನ್ನು ಸಮಾಜದ

ಸ್ಥಳೀಯ ಘಟಕಕ್ಕೆ ದಾಸೋಹಾರ್ಥವಾಗಿ ಅರ್ಪಿಸುವುದರ ಮೂಲಕ – ಮಾರ್ಕ್ಸನಂತೆ ಸ್ಟೇಟಿಗೆ ಸಲ್ಲಿಸುವುದರ ಮೂಲಕ ಅಲ್ಲ – ಈ ಸಮಸ್ಯೆಗೆ ಪರಿಹಾರ ಹುಡುಕಿದರು. ಎಲ್ಲ ಆರ್ಥಿಕ ಚಿಂತಕರಿಗೆ, ವಿಚಾರವಾದಿಗಳಿಗೆ ಇಲ್ಲಿ ಒಂದು ಹೊಸ ಹೊನ್ನಿನ ಗಣಿಯಿದೆ. ಇಷ್ಟವಿದ್ದವರು ಇದನ್ನು ಆಳವಾಗಿ ಪರಿಶೋಧಿಸಲಿ! ಇಂದು ಜಗತ್ತಿನ ಎಲ್ಲೆಡೆಗಳಲ್ಲಿ ಉಳ್ಳವರ ಇಲ್ಲದವರ ನಡುವಣ ಕಂದಕವನ್ನು ಇಲ್ಲಗೊಳಿಸಬಲ್ಲ, ದೊಡ್ಡ ಮತ್ತು ಸಣ್ಣ ಕೈಗಾರಿಕೆಗಳ, ಬಂಡವಾಳ ಮತ್ತು ಶ್ರಮಗಳ ಸಮತೋಲನವನ್ನು ಸಾಧಿಸಬಲ್ಲ, ತಂತ್ರಜ್ಞಾನ ಹಾಗೂ ಬರಿಹೊಟ್ಟೆಗಳ ಬೇಡಿಕೆಗಳೆರಡನ್ನು ಪೂರೈಸಬಲ್ಲ ನೂತನ ಆರ್ಥಿಕಾಭಿವೃದ್ಧಿ ವಿಧಾನವೊಂದನ್ನು ಕಂಡು ಹಿಡಿಯುವ ಮಹಾಮಣಿಹದಲ್ಲಿ ತೊಡಗಿದ್ದಾರೆ ಧೀಮಂತರೆಲ್ಲ. ಅವರು ಕಾಯಕದ ಅರ್ಥಪ್ರಪಂಚದತ್ತಲೂ ಕಣ್ಣು ಹೊರಳಿಸುವುದು ಕ್ಷೇಮಕಾರಿ.

ಬಸವಣ್ಣನವರ ಹಿರಿಮೆ ಗರಿಮೆಗಳಿರುವುದೇ ಇಲ್ಲಿ. ಇನ್ನಾವ ಪ್ರವಾದಿಯನ್ನೂ ಕಾಡದ ಸಮಾಜದ ಆರ್ಥಿಕ ಅಸ್ತಿವಾರದತ್ತ ಗಮನ ಹರಿಸಿದರು ಅವರು. ಈ ದಿಶೆಯಲ್ಲಿ ಅವರೇ ಮೊದಲಿಗರೆಂದು ಹೇಳಿದರೂ ತಪ್ಪಾಗದು. ಸಮಾಜದ ಆರ್ಥಿಕ ಬುನಾದಿ ಭದ್ರವಾಗಿರದಿದ್ದರೆ, ಸರ್ವಸುಖ ಸರ್ವಹಿತ ಸಾಧಕವಾಗಿರದಿದ್ದರೆ, ಸಮಕಾಲೀನ ಸವಾಲುಗಳನ್ನು ಎದುರಿಸಬಲ್ಲುದಾಗಿರದಿದ್ದರೆ, ಎಂಥ ಆದರ್ಶ ಸಾಮಾಜಿಕ ವ್ಯವಸ್ಥೆಯೂ ಬಹುಕಾಲ ಬಾಳಲಾರದೆಂಬುದು ಬಸವಣ್ಣನವರ ನಿಶ್ಚಲ ನಿಲುವಾಗಿದ್ದಿತು. ಅವರ ೪೩೮ನೆಯ ವಚನ ಸಾರಿ ಹೇಳುತ್ತಿದೆ. 'ಆವ ನೇಮವಾದರೂ ಹೇಮವಿಲ್ಲದಂಗೈಸ ಬಹುದೆ?

ಸಂಪತ್ತು ಸ್ವಭಾವತಃ ಅನಿಷ್ಟವೇನಲ್ಲ, ಇಷ್ಟವಾದುದೇ. ಸಮಾಜದ ಸ್ನಾಯುಗಳಲ್ಲಿ ರಕ್ತವಾಗಿ ಸಂಚರಿಸಿ ಅದರ ಸ್ವಾಸ್ಥ್ಯ ರಕ್ಷಣೆ ಮಾಡುವ ಅದು ಅನಿಷ್ಟ ಹೇಗಾದೀತು? ಸಮಾಜದ ಸಮಗ್ರ ದೇಹದಲ್ಲೆಲ್ಲ ಸಂಪತ್ತಿನ ಶೋಣಿತ ಸದಾ ಸಂಚರಿಸುತ್ತಲಿದ್ದರೇ ಸಮಸ್ತ ಶರೀರಕ್ಕೆ ಆರೋಗ್ಯ ಭಾಗ್ಯ. ಅದರ ಯಾವುದೇ ಒಂದು ಭಾಗದಲ್ಲಿ ರುಧಿರ ಸಂಚಾರ ನಿಂತು ಹೋದರೂ ಆ ಭಾಗಕ್ಕೆ ಲಕ್ವಾ ಹೊಡೆಯುತ್ತದೆ. ಬರಬರುತ್ತ ಸಮಾಜದ ಸಮಗ್ರ ಶರೀರವೇ ವಿಕಲಾಂಗವಾಗುವಂತೆ, ನಿಷ್ಪ್ರಯೋಜಕವಾಗುವಂತೆ ಮಾಡುತ್ತದೆ.

ಈ ಬಹಳ ಬಳಕೆಯಾಗಿರುವ ಹೋಲಿಕೆಯನ್ನು ಇನ್ನಷ್ಟು ಹಿಗ್ಗಿಸದೆ ಇಷ್ಟನ್ನು ಮಾತ್ರ ಖಚಿತವಾಗಿ ಹೇಳಬಹುದು. ಯಾವುದೇ. ಸಾಮಾಜಿಕ ವ್ಯವಸ್ಥೆಯಿರಲಿ, ಸಂಪತ್ತಿನ ಉತ್ಪಾದನೆ–ವಿತರಣೆಗಳ ವ್ಯವಸ್ಥೆಯೇ ಆಗಿರಲಿ, ಅದು ಕೆಲವರ ಕೈಯಲ್ಲಿ ಸಂಪತ್ತಿನ ಕೇಂದ್ರೀಕರಣಕ್ಕೆ ನೆರವಾಗಿ ಬಹುಜನರನ್ನು ಬಡತನದಲ್ಲಿ ಬಳಲಿಸುವುದಕ್ಕೆ ಕಾರಣವಾದರೆ ಅದು ಮುಂದುವರೆಯುವುದೆ ಬೇಡ! ಮುಂದುವರೆದರೆ ಕೇಡು ಕಟ್ಟಿಟ್ಟ ಗಂಟು. ಶೋಷಣೆಯ

ಸಾಧನವಾದಾಗಲೇ ಸಂಪತ್ತು ವಿಪತ್ತಾಗುತ್ತದೆ; ಒಳಿತನ್ನು ಸಾಧಿಸಬಲ್ಲ ಅದೇ ಕೆಡುಕಾಗಿ ಬಿಡುತ್ತದೆ! ಅದು ಶೋಷಣೆಯ ಶಸ್ತ್ರವಾಗಬಾರದು. ಸರ್ವೋದಯದ ಅಸ್ತ್ರವಾಗಬೇಕು. ಶ್ರೀಸಾಮಾನ್ಯರ ಜೀವನದ ಉತ್ತಮೀಕರಣದ, ಹಿತಸಾಧನೆಯ ಸಾಧನವಾಗಬೇಕು.

ಇದನ್ನರಿತೇ ಬಸವಣ್ಣನವರು ಘೋಷಿಸಿದರು. 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯ; ಕೂಡಲ ಸಂಗನ ಶರಣರಿಗಲ್ಲದೆ ಮಾಡುವ ಅರ್ಥವು ವ್ಯರ್ಥ ಕಂಡಯ್ಯ!' ಎಂದು ಸಂಪತ್ತನ್ನು ಸತ್ಕಾರ್ಯಕ್ಕೋ, ದುಷ್ಕಾರ್ಯಕ್ಕೋ ಉಪಯೋಗಿಸುವವರು ನಾವೇ! ಸಮಾನ ವಿಭಾಗವಿಲ್ಲದಿದ್ದರೆ ಹೋಗಲಿ, ನ್ಯಾಯ–ನೀತಿ ಸಮ್ಮತವಾದ ರೀತಿಯಲ್ಲಿ ಸಂಪತ್ತಿನ ವಿತರಣೆಯ ಬೀಜವನ್ನು ನಾವೇ ಬಿತ್ತದಿದ್ದರೆ ಸರ್ವೋದಯದ ಬೆಳೆಯನ್ನು ನಾವೆಂತು ಬೆಳೆದುಕೊಂಡೇವು? ಹಾಗೂ, ಎಲ್ಲರೂ ತಮ್ಮ ತಮ್ಮ ಶಕ್ತ್ಯಾನುಸಾರ ಒಂದಿಲ್ಲೊಂದು ರೀತಿಯಲ್ಲಿ ಸಂಪತ್ತಿನ ಉತ್ಪಾದನೆಯಲ್ಲಿ ತೊಡಗದಿದ್ದರೆ ಎಲ್ಲರಿಗೂ ನ್ಯಾಯ ಸಮ್ಮತ ರೀತಿಯಲ್ಲಿ (equitable, thought not equal) ಹಂಚಲು ಸಂಪತ್ತು ಬರಬೇಕೆಲ್ಲಿಂದ?

ಅಂತೆಯೇ, ಕಾಯಕದ ಮೂಲಕ ಸಂಪತ್ತಿನ ಉತ್ಪಾದನೆಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸದ ಯಾರಿಗೂ ಶಿವಶರಣರ ಕಾಯಕ ಸಮಾಜದಲ್ಲಿ ಸ್ಥಾನವಿಲ್ಲ! ಅಲ್ಲದೆ, ಸಮಾಜದ ದುರ್ಬಲ ವರ್ಗಗಳ ಹಿತಕ್ಕಾಗಿ ತಮ್ಮ ಮಿಗುತಾಯಗಳನ್ನು ಸ್ವಸಂತೋಷದಿಂದಲೇ ಸಮಾಜಕ್ಕೆ ಅರ್ಪಿಸದವರಿಗೂ ಸ್ಥಾನವಿಲ್ಲ! ಅನ್ಯರ ದುಡಿಮೆಯ ಮೇಲೆ ಬದುಕಿರುವವನಂತೂ ಬಹಿಷ್ಕೃತ ಈ ಸಮಾಜದಿಂದ, ಹೀಗೆ ಬಸವಣ್ಣನವರ, ಶರಣರ ಕಾಯಕ ಸಮಾಜವು ಅನುತ್ಪಾದಕತೆಯ ವಿರುದ್ಧ, ಸಂಪತ್ತಿನ ಕೇಂದ್ರೀಕರಣಗೈದು ಅದನ್ನು ಶೋಷಣೆಯ ಶಸ್ತ್ರವನ್ನಾಗಿ, ಘೋರಾಸ್ತ್ರವನ್ನಾಗಿ ಬಳಸುವವರ ವಿರುದ್ಧ, ಪರೋಪಜೀವಿತ್ವದ ವಿರುದ್ಧ ಸಮರವನ್ನೇ ಸಾರಿದೆ. ಇನ್ನೂ ಮುಂದೆ ಸಾಗಿ ಅದು ಎಲ್ಲರಿಗೂ ಒಂದಿಲ್ಲೊಂದು ಪವಿತ್ರ ಕಾಯಕ ಒದಗಿಸಿತ್ತು; ಬಡತನದ ಬೇರುಗಳನ್ನೇ ಕತ್ತರಿಸಿತ್ತು. ದುರಾಶೆಗೆ ಸಿಕ್ಕಿ ಸಮಾಜಘಾತುಕವಾಗುವ ಸಂಪತ್ತನ್ನು ಶೋಷಣೆಗೆ ತುತ್ತಾಗಿ ತತ್ತರಿಸುವವರಿಗಾಗಿ ಉಳಿಸಿ ಉಪಯೋಗಿಸಿತು. ಅವರ ಇಂದಿನ ಅನುಯಾಯಿಗಳು ಇದನ್ನು ಮಾಡದೇ ಪತನೋನ್ಮುಖರಾಗಿದ್ದಾರೆ. ಗಾಂಧೀಜಿಯವರ ಈ ಅಮೃತೋಕ್ತಿ ಅದೆಷ್ಟು ಅಪ್ಯಾಯಮಾನ: 'There is enough in this world for every body's need, not for his greed!'

---

*** ಸಹಕಾರೀ ಸಮಾಜದ ಸ್ಥಾಪನೆಯೇ ನಮ್ಮ ಗುರಿಯೆಂದೊಮ್ಮೆ, ಸಮಾಜವಾದೀ ಸಮಾಜದ ಸ್ಥಾಪನೆಯೇ ನಮ್ಮ ಗುರಿಯೆಂದೊಮ್ಮೆ, ಸಾಮಾಜಿಕ ನ್ಯಾಯವುಳ್ಳ ಸಮಾಜದ ಸ್ಥಾಪನೆಯೆ ನಮ್ಮ ಗುರಿಯೆಂದೊಮ್ಮೆ ನಾನಾ ವಿಧವಾಗಿ ನಮ್ಮ ಗುರಿಯ ನಿರೂಪಣೆ ನಮ್ಮ ಧುರೀಣರಿಂದ ಆಗಿದೆ. ಇವೆಲ್ಲವುಗಳಿಂದ ಕಾಯಕ ಸಮಾಜ, ಸ್ಥಾಪನೆಯೇ ನಮ್ಮ ಗುರಿಯೆನ್ನುವುದು ಹೆಚ್ಚು ಅರ್ಥಪೂರ್ಣ.**

'ದಾನ', 'ನೆರವು' ಮುಂತಾದ ಔದಾರ್ಯದ ವಿಕೃತ ರೂಪಗಳು ಕೊಡುವವರಿಗೂ, ಪಡೆಯುವವರಿಗೂ ಕೂಡಿಯೇ ಕೇಡು ಮಾಡಿದೆ. ಅವು ಸ್ವಾವಲಂಬನೆಯ ಮೂಲಕ್ಕೇ ಕುಠಾರವಾಗಿ ಪಡೆದವರಲ್ಲಿ ಪರಾವಲಂಬನೆಯನ್ನೂ, ಪರಾಭೂತ ಮನೋಭಾವವನ್ನೂ ಹುಟ್ಟಿಸುತ್ತವೆ. ಅವು ಸಮಾಜಕ್ಕೆ ತಾವೇನನ್ನೂ ನೀಡದೆ ಸಮಾಜದ ಸಂಪತ್ತಿನಲ್ಲಿ, ಪಾಲು ಪಡೆಯುವ ಅನುತ್ಪಾದಕ ಜೀವಿಗಳ ಅನಿಷ್ಟ – ವರ್ಗವೊಂದನ್ನು ಹುಟ್ಟಿಸುತ್ತವೆ. ಇದೇ ಸ್ಥಿತಿಯಲ್ಲಿ ಈ ವರ್ಗಗಳು ಮುಂದುವರಿದರೆ ಆ ವರ್ಗಗಳವರು ದ್ವಿತೀಯ ಶ್ರೇಣಿಯ ನಾಗರಿಕರಾಗಿ ನಾಚಿಕೆಗೇಡಾಗಿ ಬದುಕಬೇಕಾಗುತ್ತದೆ.

ಆದುದರಿಂದ ಶರಣರು ಸಮಾಜದ ಎಲ್ಲ ನೈತಿಕ ಆರ್ಥಿಕ ಅನಿಷ್ಟಗಳ ನಿವಾರಣೆಗೆ ಕಾಯಕವೊಂದೇ ತರಣೋಪಾಯವೆಂದು ಸಾರಿದರು. ಗುರುವಾಗಲಿ, ಜಂಗಮವಾಗಲಿ ಕಾಯಕಕ್ಕಾಗಿ ಲಿಂಗಪೂಜೆಯನ್ನಾದರೂ ತೊರೆಯಬೇಕೆಂದು ಕಟ್ಟಳೆ ವಿಧಿಸಿದರು. ಅವರ ಕಾಯಕ ಸೂತ್ರದ ಪ್ರಕಾರ ಅದು ತನು ಮನ ಬಳಲಿಸಿ ಮಾಡುವುದಾಗಿರಬೆಕು. ಹಿಂಸೆ, ಸುಲಿಗೆ, ಸಂಗ್ರಹ ಬುದ್ಧಿ, ದುರಾಶೆ, ದುರ್ಮದಗಳಿಂದ ದೂರವಿರುವುದಾಗಿರಬೇಕು; ಅದರಿಂದ ಬಂದ ಆದಾಯವು ಸ್ವಂತದ ನ್ಯಾಯವಾದ ಅಗತ್ಯಗಳನ್ನು ಪೂರೈಸಿ ಮಿಕ್ಕಿದರೆ ಆ ಮಿಗುತಾಯವನ್ನು ದಾಸೋಹಕ್ಕಾಗಿ ಸಮಾಜದ ಸ್ಥಳೀಯ ಘಟಕಕ್ಕೆ ನೀಡಬೇಕು.

ಇಂಥ ಕಾಯಕ ಯೋಗಿಗಳಿಂದ ಕೂಡಿದ ಸಮಾಜದಲ್ಲಿ ಹಸಿವೆಯಾಗಲಿ, ಶೋಷಣೆಯಾಗಲಿ, ಆರ್ಥಿಕ ವಿಷಮತೆಗಳಾಗಲಿ ಇರಲಾರವೆಂದು ಬೇರೆ ಹೇಳುವುದೇ ಬೇಡ. ಎಲ್ಲ ಕಾಯಕಗಳೂ ಸಮಾನ, ಎಲ್ಲ ಕಾಯಕಗಳೂ ಪವಿತ್ರವೆಂದು ಪರಿಗಣಿತವಾಗಿದ್ದುವಾಗಿ ಕಾಯಕದ ಆಧಾರದ ಮೇಲೆ ಮೇಲು ಕೀಳುಗಳನ್ನು ಕಲ್ಪಿಸುವ ಪ್ರಶ್ನೆಯೇ ಏಳುತ್ತಿರಲಿಲ್ಲ. ಒಂದು ಕಡೆಯಿಂದ ಜನ್ಮಾಧಾರಿತ ಜಾತಿಪದ್ಧತಿಯ ಮೇಲೆ. ಇನ್ನೊಂದು ಕಡೆಯಿಂದ ಉದ್ಯೋಗಾಧಾರಿತ ಶ್ರೇಷ್ಠ – ಕನಿಷ್ಠತೆಗಳ ಕಲ್ಪತೆಯ ಮೇಲೆ ಏಕ ಕಾಲಕ್ಕೇ ದಾಳಿ ಮಾಡಿ ಶರಣರು ಹುಟ್ಟಿನಿಂದ, ವೃತ್ತಿಯಿಂದ ಬಂದ ಅಸಮಾನತೆಗಳ, ನೀಚೋಚ್ಚ ಕಲ್ಪನೆಗಳ ಹುಟ್ಟನ್ನೇ ಅಡಗಿಸಿಬಿಟ್ಟರು. ನಿಷ್ಠೆಯಿಂದ ಕಾಯಕ ಮಾಡಿದರೆ ಕಾಯಕವೇ ಈ ಲೋಕದಲ್ಲಿಯೇ, ಈ ಜನ್ಮದಲ್ಲಿಯೇ ಕೈಲಾಸವಾಗುವುದೆಂದು ತಮ್ಮ ಆಚರಣೆಯಿಂದ ತೋರಿಸಿಕೊಟ್ಟರು. ಇನ್ನೂ ಮುಂದೆ ಹೋಗಿ 'ಕಾಯಕದ ಸವಿ ಕೈಲಾಸದೊಳಗುಂಟೆ?' ಎಂದು ಹರನನ್ನೇ ಕೇಳಿಬಿಟ್ಟರು.

ವ್ಯಕ್ತಿಗೆ ಉದ್ಧಾರ, ಸಮಷ್ಟಿಯ ಸಂತುಲಿತ ಅಭಿವೃದ್ಧಿಗೆ ಆಧಾರ – ಎರಡನ್ನೂ ನೀಡುವ ಕಾಯಕ ನಿಜವಾಗಿಯೂ ನಾಡಿಗರ ನಿತ್ಯಜೀವನದ ಸುವರ್ಣಸೂತ್ರವಾಗಿ ಈ ದೇಶದಲ್ಲಿ ಕಾಯಕ ಸಮಾಜದ ಸ್ಥಾಪನೆಯಾಗಬೇಕು. 'Mass production' ಅಲ್ಲ, 'production by masses' ಸರ್ವರ ಕಲ್ಯಾಣದ ಹೆದ್ದಾರಿಯೆಂದು ಹೇಳಿದ್ದಾರೆ

ನಮ್ಮ ರಾಷ್ಟ್ರಪಿತ ಗಾಂಧೀಜಿಯವರು. ಕಾಯಕವೂ 'Production by masses - not mass production'. ಜೊತೆಗೆ ಸತ್ಯಶುದ್ಧವಾದುದು, ಪವಿತ್ರವಾದುದು; ಆಸ್ತೇಯ, ಅಸಂಗ್ರಹ, ಅಪರಿಗ್ರಹ, ಅಹಿಂಸೆಗಳನ್ನು ಗರ್ಭೀಕರಿಸಿಕೊಂಡು 'ಎಲ್ಲರಿಗೂ ಸಮ ಬಾಳು, ಎಲ್ಲರಿಗೂ ಸಮಪಾಲು' ಸಿಕ್ಕುವಂತೆ ಮಾಡುವ ಶಕ್ತಿಯುಳ್ಳುದು. ಆದುದರಿಂದ ಇದು ಎಲ್ಲರೂ ಕಣ್ದೆರೆದು ನೋಡಬೇಕಾದ ಅರ್ಥಪ್ರಪಂಚ. ಇಲ್ಲದಿದ್ದರೆ ಅನರ್ಥ ಕಾದಿದೆ ಪ್ರಪಂಚಕ್ಕೆ. ಎರಹರ್ಡ್ ಎಪ್ಲರ್ ಅವರ ಈ ಎಚ್ಚರಿಕೆ ೧೯೭೧ರಲ್ಲಿಯೇ ಪ್ರಕಟವಾಗಿದೆ: 'There are many vicious circles in the third world - are the 1970's likely to add another; desperation leading to vollence. voilence disrupting and destroying development and this producing even more desperation?' (Vide Not much time for the third world by Erhard Eppler - Federal German Minister for Economic Cooperation).

ನಿರುದ್ಯೋಗ, ತಜ್ಜನ್ಯ ದಾರಿದ್ರ್ಯ, ತತ್ಫಲವಾದ ಸಂಕಷ್ಟ, ಸಂಕ್ಲೇಶಗಳು ಹೆಚ್ಚಿ. ನಮ್ಮ ಕಣ್ಣೆದುರಿಗೇ ಈ ದೇಶದಲ್ಲಿ ಹತಾಶೆ ಹೆಚ್ಚಿ, ಹತಾಶೆ ಹಿಂಸೆಗೆ ತಿರುಗಿ, ಹಿಂಸೆ ಇರುವಷ್ಟು ಅಭಿವೃದ್ಧಿಯ ಸಾಧ್ಯತೆಗಳನ್ನೂ ಧ್ವಂಸಗೊಳಿಸುತ್ತ ಭವಿಷ್ಯವು ಭೀಕರವಾಗುವಂತೆ ಮಾಡುತ್ತಿರುವುದನ್ನೂ ನಾವಿಂದು ನೋಡುತ್ತಿದ್ದೇವೆ. ಇದು ನಿಲ್ಲಬೇಕಾದರೆ ಬಡತನ ತೊಲಗಬೇಕು. ಬಡತನ ತೊಲಗಬೇಕಾದರೆ ದುಡಿಯಬಲ್ಲ ಎಲ್ಲರಿಗೂ ಕೆಲಸ ಸಿಕ್ಕಬೇಕು, ಎಲ್ಲರಿಗೂ ಕೆಲಸ ಸಿಕ್ಕು ಬೇಕಾದರೆ ಕಾಯಕದ ಅರ್ಥ ಪ್ರಪಂಚವನ್ನೇ ಅವಲಂಬಿಸಬೇಕು.

# ೬

# ಕಾಯಕ ಮೀಮಾಂಸೆ

ಹನ್ನೆರಡನೆಯ ಶತಮಾನದ ಶಿವಶರಣರು ನಡೆಸಿದ ಚಿಂತನ–ಮಂಥನಗಳಲ್ಲಿ ಹೊರಬಿದ್ದ ಅಮೂಲ್ಯ ವಿಚಾರಗಳಲ್ಲಿ, ಪರಿಕಲ್ಪನೆಗಳಲ್ಲಿ ಕಾಯಕದ ಪರಿಕಲ್ಪನೆ ಅಮೋಘವಾದುದು. ಅರ್ಥಶಾಸ್ತ್ರದ, ಲೋಕನೀತಿಯ, ಸಾಮಾಜಿಕ ನ್ಯಾಯದ, ಆತ್ಮಾನುಶಾಸನದ, ವೃತ್ತಿಯ ಉದಾತ್ತೀಕರಣದ, ಸಮಾನತೆಯ ಸ್ಥಾಪನೆಯ, ಲೌಕಿಕ ಪಾರಲೌಕಿಕಗಳೆರಡರ ಸಮನ್ವಯದ, ಸಹಜೀವನದ ಸುವರ್ಣರೇಷೆಗಳಿಂದ ನೇಯ್ಗೆಗೊಂಡ ದಿವ್ಯಾಂಬರವದು. ಇಂಥ ವರ್ಗದವರು ಇಂಥ ವೃತ್ತಿಗಳನ್ನೇ ಕೈಗೊಳ್ಳಬೇಕೆಂಬ ನಿರ್ಬಂಧವನ್ನು ನಿರ್ನಾಮಗೊಳಿಸಿ ಎಲ್ಲರಿಗೂ ತಂತಮ್ಮ ಒಲವಿನಂತೆ ತಂತಮ್ಮ ವೃತ್ತಿಯನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ನೀಡಿ, ವೃತ್ತಿ ಸ್ವಾತಂತ್ರ್ಯದ ಶ್ರಮಗೌರವದ, ವೃತ್ತಿ ಮೂಲ, ಕೀಳು ಮೇಲುಗಳ ಕಲ್ಪನೆಯ ಮೂಲೋತ್ಪಾಟನದ ಹೊಸ ಯುಗ ಮೊಗವೆತ್ತುವಂತೆ ಮಾಡಿತು ಈ ಕಾಯಕದ ಪರಿಕಲ್ಪನೆ.

'ದೇವ ಸಹಿತ ಭಕ್ತ ಮನೆಗೆ ಬಂದೊಡೆ ಕಾಯಕವಾವುದೆಂದು ಬೆಸಗೊಂಡೆನಾದೊಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ' ಎಂದು ಘೋಷಿಸಿದರು ಬಸವಣ್ಣನವರು. ಭಕ್ತರ ಕುಲವನ್ನು ಕೇಳಕೂಡದು; ಅಂತೆಯೇ ಭಕ್ತರ ಕಾಯಕವನ್ನೂ ಕೇಳಕೂಡದು. ಭಕ್ತರೆಲ್ಲಾ ಸಮಾನರು; ಅಂತೆಯೇ ಅವರು ಕೈಗೊಂಡ ಕಾಯಕಗಳೆಲ್ಲ ಸಮಾನವಾದವುಗಳು. ರಾಷ್ಟ್ರಕವಿ ಕುವೆಂಪು ಕೇಳಿಲ್ಲವೆ, 'ಚವರಿ ಹಿಡಿವುದು ಮೇಲೆ, ಪೊರಕೆವಿಡಿಯುವುದು ಕೀಳೆ?' ಬಸವ ಪ್ರಣೀತ ಶರಣಧರ್ಮದಲ್ಲಿ ಬಸವಣ್ಣನವರು ಮಹಾಮಂತ್ರಿಗಳಾಗಿ ಮಾಡುತ್ತಿದ್ದ ಕೆಲಸಕ್ಕೆ ಮಾದಿಗರ ಚೆನ್ನಯ್ಯ, ಢೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮೇದಾರ ಕೇತಯ್ಯ, ಮಡಿವಾಳ ಮಾಚಯ್ಯ, ತುರುಗಾಹಿ ರಾಮಕೃಷ್ಣ, ಮೋಳಿಗೆಯ ಮಾರಯ್ಯ, ನುಲಿಯ ಚಂದಯ್ಯ, ಕುಂಬಾರ ಗುಂಡಯ್ಯಾದಿಗಳು ಮಾಡುತ್ತಿದ್ದ ಕೆಲಸ ಯಾವ ದೃಷ್ಟಿಯಿಂದಲೂ ಕಡಮೆಯಾದುದಲ್ಲ. ಹೀಗೆ ಜನ್ಮಾವಲಂಬಿ ಶ್ರೇಷ್ಠತೆ ಕನಿಷ್ಠತೆಗಳನ್ನು ತೊಡೆದು ಹಾಕಿದಂತೆ ವೃತ್ತಿಮೂಲ ಮೇಲು ಕೀಳುಗಳನ್ನು ಹೊಡೆದೋಡಿಸಿದರೂ ಶರಣರು.

'ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ' – ಇದು ಅಣ್ಣನವರ ಇನ್ನೊಂದು ಅಮೃತೋಕ್ತಿ. ಧನ ತ್ಯಾಜ್ಯವೂ ಅಲ್ಲ, ಪೂಜ್ಯವೂ ಅಲ್ಲ, ಭೋಜ್ಯವಾದುದು. 'ಅವ ನೇಮವಾದರೂ ಹೇಮವಿಲ್ಲದೆ ಅಂಗೈಸಬಹುದೆ?' ಎಂದು ಅಣ್ಣನವರೇ ಕೇಳಿದ್ದಾರೆ. ಭದ್ರವಾದ ಆರ್ಥಿಕ ಅಸ್ತಿವಾರವಿಲ್ಲದೆ ಯಾವ ಸಮಾಜವೂ ಬಾಳಲಾರದು. ಧನ ಆರ್ಥಿಕ ವ್ಯವಸ್ಥೆಯ ಅನಿವಾರ್ಯ ಅಂಗ. ಅದು ಸಮಾಜ ಪುರುಷನ ಸ್ನಾಯುಗಳಲ್ಲಿ ರಕ್ತವಾಗಿ ಹರಿಯುತ್ತಲೇ ಇರಬೇಕು. ಎಲ್ಲ ಅಂಗಾಂಗಳಿಗೆ ಅದು ತಲುಪುತ್ತಲೇ ಇರಬೇಕು. ಯಾವುದೇ ಉಪಾಂಗಕ್ಕೆ ಅದು ತಲುಪದಿದ್ದರೆ ಆ ಉಪಾಂಗಕ್ಕೆ ಮಾತ್ರವಲ್ಲ, ಒಟ್ಟು ಅಂಗಕ್ಕೆ ಅಪಾಯ.

ಆದರೆ ನರಗಳಲ್ಲಿ ಹರಿಯುವ ರಕ್ತವೇ ಅಶುದ್ಧವಾಗಿದ್ದರೆ, ರಕ್ತಾರ್ಬುದದಿಂದ ಕೂಡಿದ್ದರೆ, ಇನ್ನಾವುದೋ ವಿಷಾನಿಲದಿಂದ ದೂಷಿತವಾಗಿದ್ದರೆ? ಆಗಲೂ ಅಪಾಯ ಕಟ್ಟಿಟ್ಟ ಗಂಟು. ಮಾನವ ದೇಹದ ರಕ್ತ ಶುದ್ಧವಾಗಿರಬೇಕಾದದ್ದು ಎಷ್ಟು ಅವಶ್ಯಕವೋ, ಎಷ್ಟು ಅನಿವಾರ್ಯವೋ ಅಷ್ಟೇ ಸಮಾಜ ದೇಹದಲ್ಲಿ ಹರಿದಾಡಬೇಕಾದ ರಕ್ತ, ಎಂದರೆ ಧನ ಶುದ್ಧವಾಗಿರಬೇಕಾದುದೂ ಅಷ್ಟೇ ಅಪರಿಹಾರ್ಯ. ಅಶುದ್ಧ ಧನ, ಪಾಪದ ಧನ ಸಮಾಜದ ದೇಹಕ್ಕೆ ಆರೋಗ್ಯವನ್ನಲ್ಲ, ರೋಗಗಳನ್ನು ತಂದಿಡುತ್ತದೆ. ಅಂತೆಯೇ ಬಸವಣ್ಣನವರು ಸಾರಿದರು. 'ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ, ಸತ್ಪಾತ್ರಕ್ಕೆ ಸಲ್ಲದಯ್ಯ' ಎಂದು ಆದುದರಿಂದ ಗಳಿಸುವ ಧನ ಪವಿತ್ರವಾಗಿರಬೇಕಾದರೆ ಬಳಸುವ ಕಾಯಕವೂ ಸತ್ಯಶುದ್ಧ ಕಾಯಕವಾಗಿರಬೇಕು. 'ಕಂದಿಸಿ ಕುಂದಿಸಿ, ಬಂಧಿಸಿ ಬಳಲಿಸಿ' ಮಾಡುವ ಕಾಯಕವಾಗಿರಬಾರದು. ಕೈಗೊಂಡ ಕಾಯಕ ಶುಚಿಯಾಗಿದ್ದರೆ ಅದರಿಂದ ಬರುವ ಧನವೂ ಶುಚಿಯಾಗಿದ್ದು ಸಮಾಜಶರೀರದ ಸ್ನಾಯುಗಳಲ್ಲಿ ಶುದ್ಧಕ ರಕ್ತವಾಗಿ ಸಂಚರಿಸುತ್ತದೆ.

ಧನದಲ್ಲಿ ಇನ್ನೊಂದು ಅಪಾಯ ಅಡಗಿದೆ. ಗಳಿಸಿದ ಹಣ ಗಳಿಸಿದವನ ನಿತ್ಯಜೀವನದ ಅಗತ್ಯಗಳನ್ನು ಪೂರೈಸುವಷ್ಟು ಮಾತ್ರವಿದ್ದರೆ ಸರಿ; ಅದಕ್ಕೂ ಹೆಚ್ಚಾಗಿದ್ದರೆ ಅದು ಮಿಗುತಾಯವಾಗಿ ಪರಿಣಮಿಸುತ್ತದೆ. ಆ ಮಿಗುತಾಯಗಳನ್ನು ಸಂಗ್ರಹಿಸುತ್ತ ಹೋದಾಗ ಅದು ಇಲ್ಲವೆ ಭೋಗಲಾಲಸೆಯನ್ನು ಕೆರಳಿಸಿ ವಿಷಯ ಲೋಲುಪತೆಗೆ ದಾರಿ ಮಾಡಿಕೊಡುತ್ತದೆ. ಇಲ್ಲವೆ ಬಂಡವಾಳವಾಗಿ ಮಾರ್ಪಟ್ಟು ದುರ್ಬಲರ ದಾಸ್ಯಕ್ಕೆ, ಶೋಷಣೆಗೆ, ಸುಲಿಗೆಗೆ ಸಾಧನವಾಗಿ ಬಿಡುತ್ತದೆ. 'ಈ ಮಿಗುತಾಯಗಳು ಸೃಷ್ಟಿಸುವ ಸಮಸ್ಯೆಗಳಿಗೆ ಪರಿಹಾರವೇನು?' ಎಂಬ ಪ್ರಶ್ನೆ, ಜಗತ್ತಿನ ಮನನಿಕರನ್ನು, ಮನೀಷಿಗಳನ್ನು ಕಾಡುತ್ತಲೇ ಬಂದಿದೆ. ವಿಭಿನ್ನ ಪರಿಹಾರಗಳೂ ಹೊರಬಿದ್ದಿವೆ. ಇಲ್ಲಿ ಮೂರನ್ನು ಮಾತ್ರ ವಿವೇಚಿಸಬಹುದು. ಸಾಮ್ಯವಾದ ಮಿಗುತಾಯಗಳೆಲ್ಲ ರಾಜ್ಯ (ಖಣಚಿಣಜ) ಕ್ಕೆ ಸೇರಬೇಕೆನ್ನುತ್ತದೆ. ಹೀಗೆ ಮಾಡಿದುದರ ದುಷ್ಪರಿಣಾಮಗಳು ಈಗ ಎಲ್ಲರಿಗೂ ವೇದ್ಯವಾಗಿವೆ. ಮಿಗುತಾಯಗಳೇ ಇಲ್ಲದಂತೆ ಮಾಡಬೇಕೆಂದು ಗಾಂಧೀವಾದ ಹೇಳುತ್ತದೆ. ಮಿಗುತಾಯಗಳನ್ನು ದಾಸೋಹಕ್ಕೆ ಸಲ್ಲಿಸಬೇಕೆಂದು ಕಾಯಕಧರ್ಮ ಹೇಳುತ್ತದೆ. ಇಂದಿಗೂ

ಅನೇಕ ವೀರಶೈವ ಮಠಗಳಲ್ಲಿ, ಮನೆತನಗಳಲ್ಲಿ ದಾಸೋಹ ಪದ್ಧತಿ ಪ್ರಚಲಿತವಾಗಿದ್ದು, ಯುಗಧರ್ಮಕ್ಕೆ ತಕ್ಕಂತೆ ಅದರ ಅರ್ಥವ್ಯಾಪ್ತಿಯೂ ವಿಸ್ತೃತಗೊಂಡು ಅದೀಗ ಅನ್ನದಾನವನ್ನಲ್ಲದೆ ವಿದ್ಯಾದಾನ, ಭೈಷಜ್ಯ ದಾನ, ಆರೋಗ್ಯದಾನೇತ್ಯಾದಿ ಎಲ್ಲ ಸಮಾಜ ಕಲ್ಯಾಣ ಕಾರ್ಯಗಳನ್ನೂ ಒಳಗೊಂಡಂತಿದೆ. ಈ ಮಿಗುತಾಯಗಳು ಕರ, ಕಂದಾಯ, ಶುಲ್ಕ ಮೊದಲಾದ ರೂಪಗಳಲ್ಲಿ ಸರಕಾರಕ್ಕೂ ಸೇರುತ್ತವೆ. ಉಳಿದ ಭಾಗ ಸ್ಥಳೀಯ ಮಠ ಮಾನ್ಯಗಳ ದಾಸೋಹ ನಿಧಿಗಳಾಗಿ ಮಾರ್ಪಟ್ಟು ಸ್ವಯಮಾಡಳಿತ ಸೌಲಭ್ಯಗಳನ್ನೆಲ್ಲ ಒಳಗೊಂಡು ಕ್ಷಿಪ್ರ ಹಿತಕಾರಿ ಕಾರ್ಯಗಳಿಗೆ ವಿನಿಯೋಗವಾಗುತ್ತದೆ. ಕಾಯಕ ದಾಸೋಹ ಒಂದೆ ನಾಣ್ಯದ ಎರಡು ಮುಖಗಳು. ಕಾಯಕಜೀವಿಯಲ್ಲಿ ಸಂಗ್ರಹ ಬುದ್ಧಿ ಮೊಳೆದೋರದಿರಲೆಂದು ಇಂದಿನ ಗಳಿಕೆ ನಾಳಿಗೆ ತಂಗುಳ. ಆದುದರಿಂದ ಲಿಂಗಕ್ಕೆ ಅನರ್ಪಿತವಾಗುವುದು. ಅಂತೆಯೇ ಅಂದಂದಿನ ಗಳಿಕೆಯಿಂದಲೇ ಲಿಂಗಕ್ಕೆ ನೈವೇದ್ಯವನ್ನು ಅರ್ಪಿಸಬೇಕೆಂಬ ಕಟ್ಟಳೆಯನ್ನು ಹಾಕಲಾಯಿತು. 'ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದೇ ಲಿಂಗಕ್ಕರ್ಪಿತ. ಉಳಿದುದು ಅನರ್ಪಿತ'ವೆಂದು ಕಟ್ಟು ಹಾಕಲಾಯಿತು ಸ್ವತಃ ಬಸವಣ್ಣನವರೇ;

'ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ
ನಿಮ್ಮಾಣೆ; ನಿಮ್ಮ ಪುರಾತರಾಣೆ;
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ,
ಕೂಡಲಸಂಗಮದೇವಾ' ಎಂದೂ,
ನಾನು ಆರಂಭವ ಮಾಡುವೆನಯ್ಯ ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ
ಜಂಗಮ ದಾಸೋಹಕ್ಕೆಂದು,
ನಾನಾವ ಕರ್ಮಂಗಳ ಮಾಡಿದರೆಯೂ
ಆ ಕರ್ಮ ಫಲಭೋಗವ ನೀ ಕೊಡುವೆಯೆಂಬುದು ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ರೀಯ ಮಾಡೆನು'

'ನಿಮ್ಮ ಸೊಮ್ಮಿಗೆ ಸಲಿಸುವೆನು ನಿಮ್ಮಾಣೆ, ಕೂಡಲಸಂಗಮದೇವಾ' ಎಂದು ಸಾರಿ. ಅದರಂತೆ ಆಚರಿಸಿ. ಕೊನೆಗೂ ಬರಿಗೈಯವರಾಗಿ ಕಲ್ಯಾಣ ತೊರೆದು. ಈ ವಿಷಯದಲ್ಲಿ ಮೇಲ್ಪಂಕ್ತಿ ಹಾಕಿಕೊಟ್ಟರು. ಕಾಯಕ ಲಿಂಗಾರ್ಚನೆಯ ಅವಿಭಾಜ್ಯ ಅಂಗವಾಯಿತು. ಅಸಂಗ್ರಹ ಬುದ್ಧಿಯು ಗಂಗೋತ್ರಿಯಾಯಿತು. ದಾಸೋಹ ವ್ಯವಸ್ಥೆಯು ಮೂಲಾಧಾರವಾಯಿತು.

ಸಮಾಜದಲ್ಲಿ ಎಲ್ಲರೂ ಉತ್ಪಾದಕ ವ್ಯಕ್ತಿಗಳಾಗಿದ್ದರೇ ಆ ಸಮಾಜ ಸ್ವಪರಿಪೂರ್ಣ–ವಾಗುವುದು. ಭಿಕ್ಷುಕರೆಂದು, ಬಾಬಾಗಳೆಂದು, ಸಾಧು ಸಂನ್ಯಾಸಿಗಳೆಂದು, ಜ್ಯೋತಿಷಿ, ಜೋಗಿ ಜೋಗಿತಿಯರೆಂದು ಲಕ್ಷ ಲಕ್ಷ ಜನರು ಅನುತ್ಪಾದಕ ಹಾಗೂ ಪರಾವಲಂಬಿ ವ್ಯಕ್ತಿಗಳಾಗಿಬಿಟ್ಟರೆ ಆ ಸಮಾಜ ಎಂದೆಂದಿಗೂ ಆರ್ಥಿಕವಾಗಿ ದುರ್ಬಲವಾಗಿಯೇ ಉಳಿಯುವುದು. ನೈತಿಕವಾಗಿ ಕೆಳಮಟ್ಟದಲ್ಲಿಯೇ ಉಳಿಯುವುದು. ಇದನ್ನು ತಪ್ಪಿಸಲು ಶರಣರು ಕಾಯಕವನ್ನು ಎಲ್ಲರಿಗೂ ಕಡ್ಡಾಯ ಮಾಡಿದರು. ಅನ್ಯರ ದುಡಿಮೆಯ ಮೇಲೆ ಬದುಕುವುದಂತೂ ಅಸಾಧ್ಯವಾಯಿತು. ಶರಣ ಸಮಾಜದಲ್ಲಿ ತುಡುಗುಣಿತನ ನಿಷಿದ್ಧವಾಯಿತು. ಇಬ್ಬರು ಶರಣವರೇಣ್ಯರ ವಚನಗಳಿಲ್ಲಿ ಪ್ರಸ್ತುತ, ಮನನೀಯ:

'ಗುರುವಾದರೂ ಕಾಯಕದಿಂದವೆ ಜೀವನ್ಮುಕ್ತಿ,
ಲಿಂಗವಾದರೂ ಕಾಯಕದಿಂದವೆ ಶಿಲೆಯ ಕುರುಹು ಹರಿವುದು;
ಜಂಗಮವಾದರೂ ಕಾಯಕದಿಂದ ತನ್ನ ವೇಷದ ಪಾಪ ಹರಿವುದು;
ಇದು ಚಂದೇಶ್ವರ ಲಿಂಗದ ಅರಿವು ಕೇಳಾ ಪ್ರಭುವೆ;
(ನುಲಿಯ ಚಂದಯ್ಯನವರು)

ಕಾಯಕದಿಂದ ಯಾರಿಗೂ ವಿನಾಯಿತಿಯಿಲ್ಲ; ಇಷ್ಟೇ ಅಲ್ಲ ಕಾಯಕದಲ್ಲಿ ನಿರತನಾಗಿರುವಾಗ ಎಲ್ಲರ ಹಂಗನ್ನೂ ಹರಿದುಕೊಳ್ಳಬೇಕು.

'ಕಾಯಕದಲ್ಲಿ ನಿರತನಾದರೆ ಗುರುದರುಶನವಾದರೂ ಮರೆಯಬೇಕು;
ಲಿಂಗಪೂಜೆಯಾದರೂ ಮರೆಯಬೇಕು;
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು;
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ
ಕಾಯಕದೊಳಗು (ಆಯ್ದಕ್ಕಿ ಮಾರಯ್ಯನವರು)

ತಾನು ದುಡಿದು ಪಡೆವವ, ತಾನು ದುಡಿದುದನ್ನೇ ಲಿಂಗಕ್ಕರ್ಪಿಸಿ ಪ್ರಸಾದ ಸೇವಿಸುವವ, ಅನ್ಯರ ಗಳಿಕೆಯಿಂದ ಬದುಕದೆ ನಿತ್ಯನಿತ್ಯ ಕಾಯಕ ಮಾಡಿ ಜೀವಿಸುವವ ಪಾವನ ಮಾನವ. ಬಸವಣ್ಣನವರಂತೂ ಇನ್ನೂ ಮುಂದೆ ಹೋಗಿ

'ಮಾಡುವ ನೀಡುವ ಭಕ್ತನ ಕಂಡರೆ
ನಿಧಿನಿಧಾನವ ಕಂಡಂತಾಯಿತ್ತು;
ಪಾದೋದಕ ಪ್ರಸಾದ ಜೀವಿಯ ಕಂಡರೆ
ಹೋದ ಪ್ರಾಣ ಬಂದಂತಾಯಿತ್ತು;

ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ;
ಅಚ್ಚ ಶರಣರ ಕಂಡರೆ ನಿಶ್ಚಯವಾಗಿ ಕೂಡಲ
ಸಂಗಯ್ಯನೆಂಬೆನು'

ಎಂದು ಸಾರಿ, ಕಾಯಕವೇ ಕೈಲಾಸ ಮಾತ್ರವಲ್ಲ, ಅದು ಸಾಕ್ಷಾತ್ ಸಂಗಯ್ಯನೆಂದು ಬೋಧಿಸಿದರು. ಆದುದರಿಂದ

'ಸತ್ಯ ಶುದ್ಧ ಕಾಯಕದಲ್ಲಿ ಚಿತ್ತ ಸ್ವಚ್ಛಂದವಾಗಿರಬೇಕು,
ನೇಮದ ಕೂಲಿಯಂದಿನ ನಿತ್ಯಕಾಯಕದಲ್ಲಿ ಸಂದಿರಬೇಕು.
ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ
ತಾ ಮಾಡುವ ಸೇವೆ ನಷ್ಟವಯ್ಯ;
ಈ ನಿನ್ನ ಸೇವೆ ನನಗೆ, ನನ್ನ ಪ್ರಸಾದಕ್ಕೆ, ಚಂದೇಶ್ವರ
ಲಿಂಗಕ್ಕೆ ಪ್ರಾಣವಯ್ಯ'
(ನುಲಿಯ ಚಂದಯ್ಯನವರು)

ಕಾಯಕ ಕಡ್ಡಾಯವಾದಾಗ ಎಲ್ಲರಿಗೂ ಅದು ಸುಲಭವಾಗಿ, ಅಯಾಚಿತವಾಗಿ, ಯಾರಿಗೂ ಅರ್ಜಿ ಹಾಕದೆ, ಮರ್ಜಿ ಕಾಯದೆ ಸಿಕ್ಕಬೇಕಷ್ಟೇ? ಕಾಯಕದ ಹಿರಿಮೆಗರಿಮೆಗಳಿರುವುದು ಇಲ್ಲಿಯೇ. ಅದು ಸ್ವದತ್ತ ವೃತ್ತಿ (Self Employment) ಯಾರ ಹಂಗಿಗೂ ಒಳಗಾಗದೆಯೇ ತನೇ ತನ್ನ ಒಲವು ಅನುಕೂಲಗಳಂತೆ ಆರಿಸಿಕೊಳ್ಳಬಹುದಾದ ವೃತ್ತಿಯದು. ಅದಕ್ಕೆ ಬಹಳ ಬಂಡವಾಳ ಬೇಕಿಲ್ಲ. ದೊಡ್ಡ ಉದ್ಯಮಗಳಲ್ಲಿ ಒಬ್ಬನಿಗೆ ಉದ್ಯೋಗ ಹುಟ್ಟಿಸಲು ೧೯೬೭ರ ಅಂದಾಜಿನ ಪ್ರಕಾರ ಒಂದು ಸಾವಿರ ಪೌಂಡು ಹಣ ತೊಡಗಿಸಬೇಕಿತ್ತಂತೆ. ಈ ದೇಶದಲ್ಲಿ ಇದು ಒಂದು ಲಕ್ಷಕ್ಕೇರಿದೆ. ಕಾಯಕಕ್ಕೆ ಕೆಲವು ನೂರು ಹೆಚ್ಚೆಂದರೆ ಒಂದೆರಡು ಸಾವಿರ ಸಾಕು. ಸರಕಾರೀನೌಕರಿಗಳು ನೂರಕ್ಕೆ ಮೂರು ನಾಲ್ಕು ಜನರಿಗೆ ಸಿಕ್ಕಾವು. ದೊಡ್ಡ ಸಣ್ಣ ಉದ್ಯಮಗಳನ್ನು ಇಲ್ಲಿ ಬೆಳಸಿಯೂ ಈಗ ಆರೇಳು ಕೋಟಿ ನಿರುದ್ಯೋಗಿಗಳು ಈ ದೇಶದಲ್ಲಿರುವಂತೆ. ಇವರೆಲ್ಲರಿಗೂ ಸ್ವದತ್ತ ವೃತ್ತಿಯಾದ ಕಾಯಕವೇ ಕಾಮಧೇನು, ಕಲ್ಪವೃಕ್ಷವಾಗಬೇಕು.

ಕೊನೆಗೊಂದು ನುಡಿಯ ಮುತ್ತಿನ ಹಾರ:
'ಕೃಷಿ ಕೃತ್ಯ ಕಾಯಕದಿಂದಾದಡೇನು?
ತನುಮನ ಬಳಲಿಸಿ ತಂದು ದಾಸೋಹ ಮಾಡುವ
ಪರಮ ಸದ್‌ಭಕ್ತರ ಪಾದವ ತೋರಯ್ಯಾ ಎನಗೆ,
ಅದೆಂತೆನೆ, ಆತನ ತನುಶುದ್ಧ, ಆತನ ಮನಶುದ್ಧ,

ಆತನ ನಡೆ ಶುದ್ಧ ನುಡಿಯೆಲ್ಲ ಪಾವನವು;
ಆತಂಗೆ ಉಪದೇಶವ ಮಾಡಿದಾತನೆ ಪರಮ ಸದ್ಗುರು.
ಅಂತಪ್ಪ ಸದ್‌ಭಕ್ತನ ಮನೆಯ
ಕೈಲಾಸವೆಂದು ಹೊಕ್ಕು ಇಂತಪ್ಪನವರ ನಾನು ನೆರೆ ನಂಬಿ
ನಮೋ ನಮೋ ಎಂಬೆನಯ್ಯಾ
ಕೂಡಲ (ಚೆನ್ನ)ಸಂಗಮದೇವಾ;

ಇಂತಪ್ಪನವರ ಸಂಖ್ಯೆ ಹೆಚ್ಚಿ ಇದು ಸೋಮಾರಿಗಳಿಲ್ಲದ, ಅನುತ್ಪಾದಕರಿಲ್ಲದ, ಶೋಷಕರಿಲ್ಲದ, ಪರಾವಲಂಬಿಗಳಿಲ್ಲದ ದೇಶವಾಗಲಿ.

# ೧೦

# ಶರಣರ ಸಾಹಿತ್ಯ ಸರಣಿ

ನನಗೆ ಊರುಗೋಲು ಅಂಬಿಗ ಚವುಡಯ್ಯನ ಈ ವಚನ:
'ವಚನಾರ್ಥವ ಕಂಡಿಹರೆಂದು ರಚನೆಯ ಮರೆಮಾಡಿ
ನುಡಿಯಲೇತಕ್ಕೆ?
ದಾರಿಯಲ್ಲಿ ಸರಕು ಮರೆಯಲ್ಲದೆ ಮಾರುವಲ್ಲಿ ಮರೆ ಉಂಟೆ?
ತಾನರಿದಲ್ಲಿ ಮರೆಯಲ್ಲದೆ ಬೋಧೆಗೆ ಮರೆಯಿಲ್ಲ,
ಎಂದನಂಬಿಗ ಚೌಡಯ್ಯ'

ವಚನ ಸಾಹಿತ್ಯವೊಂದು ಜ್ಯೋತಿರ್ಮಯ ಲೋಕ; ಶಿವಾನುಭವ ಲೋಕಾನುಭವಗಳ, ವಿಚಾರ ಮಂಥನ ಆರ್ಥಿಕ ಚಿಂತನಗಳ ರಸಪಾಕ; ಪಂಡಿತ, ಪಾಮರರಿಬ್ಬರನ್ನೂ ಸಮಾನವಾಗ ಆಕರ್ಷಿಸುವ ಚುಂಬಕ, ವೈವಿಧ್ಯ, ವೈಪುಲ್ಯ, ಮೌಲ್ಯಗಳಲ್ಲಿ ವಿಶೇಷತೆ, ಅತಿಶಯತೆ, ವಿಶಿಷ್ಟತೆಗಳನ್ನು ಪ್ರಕಾಶಿಸುತ್ತ ವಿಶ್ವಸಾಹಿತ್ಯಕ್ಕೆ ಕನ್ನಡದ ಹೆಮ್ಮೆಯ ಕೊಡುಗೆಯಾಗಿರುವ ಸಾಹಿತ್ಯವಿದು.

ಇದರ ಮೂಲವನ್ನು ತಮಿಳಿನ ನಾಯನ್ಮಾರರ 'ತೇವಾರಂ'ಗಳಲ್ಲಿಯೋ, ಸಂಸ್ಕೃತದ 'ಛಂದೋಗಂಧಿ'ಗಳಾದ ಗದ್ಯಪ್ರಕಾರದ ಸೋತ್ರಗಳಲ್ಲಿಯೋ, ವೇದ ಉಪನಿಷತ್ತು – ಬ್ರಾಹ್ಮಣಗಳ ಗದ್ಯ ಭಾಗದಲ್ಲಿಯೋ ಹುಡುಕುವ ಪ್ರಯತ್ನಗಳು ನಡೆದಿವೆಯಾದರೂ ಅವು ಸಫಲವಾಗಿಲ್ಲ. ಈ ಮೂಲಗಳನ್ನು ಹುಡುಕುವ ಹಂಬಲಕ್ಕೆ ಹೊಸ ಸಾಹಿತ್ಯ ಪ್ರಕಾರವೊಂದು ತಂತಾನೇ ದಿಢೀರನೆ ಹುಟ್ಟಿ ಬರುವುದಿಲ್ಲವೆಂಬ ಭಾವನೆ ಕಾರಣವಾಗಿದೆ. ಇದರಲ್ಲಿ ಸತ್ಯಾಂಶವಿದ್ದರೂ ಇದೊಂದು ಸಾರ್ವತ್ರಿಕ ಸಾರ್ವಕಾಲಿಕ ಸತ್ಯವಲ್ಲ. ಯಾವುದೊಂದರ ಮೂಲವನ್ನು ಕಂಡು ಹಿಡಿದರೂ ಆ ಮೂಲಕ್ಕೆ ಮೂಲವನ್ನು ಕಂಡು ಹಿಡಿದವರಾರು? ಸ್ವಯಂಭು ಸಾಹಿತ್ಯ ಅಸಂಭಾವ್ಯವೇನಲ್ಲ. ಆದುದರಿಂದ ವಚನಗಳು ಯಾವುದೇ ಹೊರಗಿನ ಮಾದರಿಯನ್ನು ಅನುಸರಿಸಿ ಅಥವಾ ಅನುಕರಿಸಿ ಹುಟ್ಟಿದುವಲ್ಲ ಎಂಬುದು ಬಹುಮಟ್ಟಿಗೆ ಖಚಿತ' ಎಂಬ ಹಿರಿಯ ಸಂಶೋಧಕ ಡಾ. ಎಂ. ಚಿದಾನಂದ ಮೂರ್ತಿಯವರ ಅಭಿಪ್ರಾಯ (ವಚನ ಸಹಿತ್ಯ – ಪುಟ ೮) ವನ್ನು ಒಪ್ಪುವುದೇ ವಿಹಿತ.

ಪ್ರಾತಃಸ್ಮರಣೀಯರಾದ ಎಂ.ಆರ್. ಶ್ರೀನಿವಾಸಮೂರ್ತಿಗಳವರ ಅಭಿಪ್ರಾಯವಂತೂ ಪ್ರಸಿದ್ಧವಾಗಿಯೇ ಇದೆ: 'ವಚನ ಸಾಹಿತ್ಯ ಎರವಲು ತಂದದ್ದಲ್ಲ; ಅದು ಕನ್ನಡದ ಸ್ವಾರ್ಜಿತ ಸ್ವತ್ತು. ವಚನಕಾರರು ಸಂಸ್ಕೃತದ ಆಚಾರ್ಯರಲ್ಲ; ಅವರು ಅಚ್ಚ ಕನ್ನಡದ ಬೇಸಾಯಗಾರರು.' (ವಚನ ಧರ್ಮಸಾರ – ಪುಟ ೯)

ಮೂಲದ ಪ್ರಶ್ನೆಯಂತೆ ವಚನ ಸಹಿತ್ಯದ ಉಗಮಕಾಲದ ಪ್ರಶ್ನೆಯೂ ಸಾಕಷ್ಟು ಜಿಜ್ಞಾಸೆಗೆ ಒಳಗಾಗಿದೆ. ಬಸವ ಪೂರ್ವಕಾಲದಲ್ಲಿ ಇದರ ಉಗಮವೆಂದು ಸಾಮಾನ್ಯವಾಗಿ ಗ್ರಹಿಸಲಾಗಿದೆ. ಬಸವಪೂರ್ವದ ವಚನಕಾರರೆಂದು ವಚನ ಸಾಹಿತ್ಯ ವ್ಯಾಸಂಗಿಗಳ ಗಮನವನ್ನು ಸೆಳೆದಿರುವವರು ಕೊಂಡಗುಳಿ ಕೇಶಿರಾಜ, ಜೇಡರ ದಾಸಿಮಯ್ಯ, ಶಂಕರ ದಾಸಿಮಯ್ಯ, ಢೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಕೆಂಭಾವಿ ಭೋಗಣ್ಣ, ತೆಲುಗು ಬೊಮ್ಮಣ್ಣ, ನಿಜಗುಣದೇವ, ಚಂದಿಮರಸ ಮತ್ತು ಸಕಲೇಶ ಮಾದರಸರು. ಇವರಲ್ಲಿ ಕೊಂಡಗುಳಿ ಕೇಶಿರಾಜನ ಕಂದಗಳಲ್ಲಿ ವಚನಕಾರರ ಕೆಲವು ಪರಿಕಲ್ಪನೆಗಳು ದೊರೆಯುತ್ತವಾದರೂ ಅವನು ವಚನಗಳನ್ನು ಬರೆದಂತಿಲ್ಲ. ಕೆಂಭಾವಿ ಬೋಗಣ್ಣ, ಎಲುಗು ಬೊಮ್ಮಣ್ಣರೂ ವಚನಗಳನ್ನು ರಚಿಸಿದಂತಿಲ್ಲ. ಜೇಡರ ದಾಸಿಮಯ್ಯನೊಬ್ಬನೇ ಬಸವಪೂರ್ವ ಕಾಲದ ವಚನಕಾರನಾಗಿ ಗೋಚರಿಸುತ್ತಾನೆ. ಆದರೆ ಇವನೂ ಬಸವಾದಿ ಪ್ರಮಥರ ಹಿರಿಯ ಸಮಕಾಲೀನ, ಜೇಡರ ದಾಸಿಮಯ್ಯ ಶಂಕರದಾಸಿಮಯ್ಯರು ಸಮಕಾಲೀನರೆಂಬುದು ನಿರ್ವಿವಾದವಾದುದು. ಶಂಕರ ದಾಸಿಮಯ್ಯ ತನ್ನದೊಂದು ವಚನದಲ್ಲಿ ಮಹಾನುಭಾವದ ಮೂರ್ತಿ ಸಂಗನ ಬಸವಣ್ಣನ ಕೃಪೆಯಿಂದಲೆನಗೆ ನಿಜವು ಕಾಣ ಬಂದಿತ್ತು' ಎಂದು ಬಸವಣ್ಣನನ್ನು ಸ್ತುತಿಸಿದ್ದಾನೆ. ಜೇಡರ ದಾಸಿಮಯ್ಯನ ಸಧರ್ಮಿಣಿ ದುಗ್ಗಳೆಯ ಲಭ್ಯವಿರುವ ಏಕಮಾತ್ರ ವಚನವೂ 'ಭಕ್ತನಾದರೆ ಬಸವಣ್ಣನಂತಾಗಬೇಕು' ಎಂದೇ ಪ್ರಾರಂಭವಾಗುತ್ತದೆ. ಆದುದರಿಂದ ಈ ಮೂವರೂ ಬಸವನ ಹಿರಿಯ ಸಮಕಾಲೀನರೆಂದು ಹೇಳಲು ಅಭ್ಯಂತರವಿಲ್ಲ.

ಡೋಹರ ಕಕ್ಕಯ್ಯ ಚನ್ನಯ್ಯರು ಬಸವಣ್ಣನವರ ಹಿರಿಯ ಸಮಕಾಲೀನರೆಂಬುದು ಈಗ ಖಚಿತವಾದಂತಾಗಿದೆ. ಡೋಹರ ಕಕ್ಕಯ್ಯನಂತೂ, 'ಎನ್ನ ಕಷ್ಟಕುಲದ ಸೂತಕ ನಿಮ್ಮ ಹಸ್ತ ಮುಟ್ಟಿನಲ್ಲಿ ಬಯಲಾಗಿತ್ತು; ಶುಕ್ಲ ಶೋಣಿತದಿಂದಾದ ಸೂತಕ ಲಿಂಗ ಮುಟ್ಟಲೊಡನೆ ಬಯಲಾಗಿತ್ತು' ಎಂದು ಬಸವಣ್ಣನವರನ್ನು ಕೊಂಡಾಡಿ ತಾನವರ ಹಿರಿಯ ಸಮಕಾಲೀನನೆಂಬುದನ್ನು ಸಾಬೀತು ಮಾಡಿದ್ದಾನೆ. ಚನ್ನಯ್ಯನ ವಚನಗಳ ಮೇಲೆ ಬಸವಣ್ಣನ ವಚನಗಳ ಪ್ರಭಾವ ಸ್ಪಷ್ಟ. ಸಕಲೇಶ ಮಾದರಸನೂ ಬಸವನ ಹಿರಿಯ ಸಮಕಾಲೀನನೆಂಬಲ್ಲಿ ಸಂದೇಹ ಉಳಿದಿಲ್ಲ. ಇನ್ನುಳಿದವರು ಗುರು ಶಿಷ್ಯರಾದ ನಿಜಗುಣ ಚಂದಿಮರಸರು. ಎಳೆಮಳೆಯ ಗುರುಶಾಂತದೇವರ ಮಿಶ್ರ ಸ್ತೋತ್ರದ ವಚನಗಳಲ್ಲಿ ಚಂದಿಮರಸನ ವಚನಗಳೆರಡಿವೆ :

(೧) 'ದಾಸಯ್ಯನೆನಗೆ ಸಾಲೋಕ್ಯನಯ್ಯ;
ಚೆನ್ನಯ್ಯನೆನಗೆ ಸಾಮೀಪ್ಯನಯ್ಯ;
ಕಕ್ಕಯ್ಯನೆನಗೆ ಸಾರೂಪ್ಯನಯ್ಯ;
ಮಾಚಯ್ಯನೆನಗೆ ಸಾಯುಜ್ಯನಯ್ಯ;
ಪುರಾತಗೊಳಗಾಗಿ ಬಸವಣ್ಣನ ಡಿಂಗರಿಗ
ಚನ್ನಬಸವಣ್ಣನ ಹಳೆಯನೆಂದು ತಮ್ಮೊಕ್ಕುದನಿಕ್ಕಿ
ಸಲಹಿದರು ಕಾಣಾ, ಸಿಮ್ಮೊಲಿಗೆಯ ಚೆನ್ನರಾಮಾ!'

(೨) 'ಸಾಕಾರಸ್ವರೂಪಿ ಸಂಗನ ಬಸವಣ್ಣ ನೋಡಾ,
ನಿರಾಕಾರ ಸ್ವರೂಪಿ ಚೆನ್ನಬಸವಣ್ಣ ನೋಡಾ,
ನಿರ್ವಯಲ ಪರವಸ್ತು ಸ್ವರೂಪಿ ಪ್ರಭುದೇವರೂ ನೋಡಾ,
ಇಂತೀ ಮೂವ ಕಾರುಣ್ಯ ಪ್ರಸಾದವಕೊಂಡು
ಮೀರಿದ ಘನವಾದೆನು ಸಿಮ್ಮಲಿಗೆಯ ಚೆನ್ನರಾಮನಲ್ಲಿ!'
(ಆಕರ ಚಂದಿಮರಸನ ವಚನಗಳು,
ಸಂಪಾದಕರು ಡಾ। ಎಸ್. ವಿದ್ಯಾಶಂಕರ)

ಇದುವರೆಗಿನ ವಿವೇಚನೆಯಿಂದ ವಚನ ಸಾಹಿತ್ಯದ ಉಗಮಕಾಲ ಬಸವನ ಕಾಲವೇ ಎಂಬುದು ವಿದಿತವಾಗಿರಲು ಸಾಕು. ಅವನ ಹಿರಿಯ ಸಮಕಾಲೀನರು ಬಸವನಿಗಿಂತ ಮೊದಲೇ ವಚನರಚನೆ ಪ್ರಾರಂಭಿಸಿದ್ದರೋ, ಬಸವಾದಿ ಪ್ರಮಥರಿಂದ ಪ್ರಭಾವಿತರಾಗಿ ವಚನ ಬರೆಯಲು ಮೊದಲು ಮಾಡಿದರೋ ಎಂಬುದೀಗ ಪ್ರಶ್ನೆ. ನನ್ನ ಅಭಿಮತದಂತೆ ಎರಡನೆಯದೇ ಸಂಭವನೀಯವಾದುದಾಗಿದೆ.

ಹಿರಿಯ ವಿದ್ವಾಂಸ ಡಾ॥ ಪಿ.ವಿ. ನಾರಾಯಣರು ಸರಿಯಾಗಿಯೇ ಹೇಳಿರುವಂತೆ 'ವಚನ ಚಳುವಳಿಯು ನಮ್ಮ ದೇಶದ ಮೊತ್ತ ಮೊದಲನೆಯ ಜನತಾ ಚಳುವಳಿ; ತನಗಿಂತ ಹಿಂದೆ ಎಂದೂ ನಡೆಯದಿದ್ದ ರೀತಿಯಲ್ಲಿ ಮತ್ತು ವ್ಯಾಪ್ತಿಯಲ್ಲಿ ಸಾಮಾನ್ಯರನ್ನು ಒಳಗೊಂಡು' ಚಳುವಳಿ (ವಚನ ಚಳುವಳಿ ಪುಟ ೨-೧) ಈ ಸಾಮಾನ್ಯರಲ್ಲಿ ಪತಿತರಿದ್ದಾರೆ, ದಲಿತರಿದ್ದಾರೆ, ಉಪೇಕ್ಷಿತರಿದ್ದಾರೆ, ಉತ್ಪೀಡಿತರಿದ್ದಾರೆ, ಸ್ತ್ರೀಯರಿದ್ದಾರೆ, ಕಿರಿಯರಾದರೂ ಅರಿವಿನಿಂದ ಹಿರಿಯರಾದವರಿದ್ದಾರೆ, ಎಲ್ಲ ಕಾಯಕಗಳವರು ಇದ್ದಾರೆ. ಇವರೆಲ್ಲ ಅರಮನೆ ಗುರುಮನೆ ಸಿರಿಮನೆಗಳಿಂದ ಬಂದವರ ಸರೀಕರಾಗಿ, ಸಾಧಕರಾಗಿ, ಅನುಭಾವಿಗಳಾಗಿ, ತಮ್ಮ ಅನುಭಾವ-ಆಲೋಚನೆ-ಅನಿಸಿಕೆಗಳಿಗೆ ಅಪೂರ್ವ ಅಭಿವ್ಯಕ್ತಿಯನ್ನು ನೀಡಿದ ವಚನಕಾರರಾದುದು ಮಾತೃಭಾಷಾ ಮಾಧ್ಯಮದ ವಿಜಯ ವೈಜಯಂತಿಯೆಂದೇ

ಹೇಳಬೇಕು; ಕನ್ನಡದ ಸಿರಿವಂತಿಕೆಯನ್ನು, ಕನ್ನಡ ಸಾಹಿತ್ಯದ ಹಿರಿಮೆಯನ್ನು, ಕನ್ನಡ ನಾಡಿನ ಗರಿಮೆಯನ್ನು ಹೆಚ್ಚಿಸಿದ ಮಹಾಸಾಧನೆಯೆಂದೆ ಹೇಳಬೇಕು.

ಇದರಿಂದಾಗಿಯೇ ಈ ಸಾಹಿತ್ಯ ವೈಯಕ್ತಿಕ ನೆಲೆಯಲ್ಲಿ ಹೊರಟ ಅಂತರಂಗದ ಸ್ವರ ಮಾತ್ರವಾಗಲಿಲ್ಲ; ಅದರೊಡನೆಯೇ ಸಮುದಾಯದ ಸಹ ಚಿಂತನೆಯಿಂದ ಹೊಮ್ಮಿದ ಸಮಷ್ಟಿ ಸ್ವರವೂ ಆಗಿ ಆ ಯುಗದ ವಾಣಿಯಾಯಿತು; ಈ ಚಳುವಳಿಯು ತಂದ ವಿಚಾರ ಕ್ರಾಂತಿಗೆ ಕಾರಣವಾಯಿತು; ಯಾವ ಸಾಹಿತ್ಯ ಸೂತ್ರಗಳನ್ನೂ ಅನುಸರಿಸದೆ ಅಪ್ರಯತ್ನಿತವಾಗಿ, ಅಪ್ರಜ್ಞಾಪೂರ್ವಕವಾಗಿ, ಅಕೃತಕವಾಗಿ ರೂಪುಗೊಂಡು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಶ್ರೀ ಸಾಮಾನ್ಯರ ಯುಗ ಮೊಗವೆತ್ತುವಂತೆ ಮಾಡಿತು. ಇದು ತೆರೆದು ತೋರಿಸಿದ ವಿಚಾರ ಪ್ರಪಂಚ ವಿಸ್ಮಯಜನಕವಾದುದು. ಶೂದ್ರರೂ, ಶೂದ್ರರೆಂದೇ ಪರಿಗಣಿತರಾಗಿದ್ದ ಸ್ತ್ರೀಯರೂ, ದಲಿತ ದೀನ ದುರ್ಬಲರೂ ನಮಗೆ ನೀಡಿರುವ ವಿಚಾರಗಳಂತೂ ರೋಮಾಂಚಿತರನ್ನಾಗಿ ಮಾಡುತ್ತವೆ ನಮ್ಮನ್ನು ಕಾಯಕ ಪ್ರೇರಿತ ವಚನಗಳು, ಸತಿಪತಿ ಭಾವದ ವಚನಗಳು, ಆತ್ಮ ಪರೀಕ್ಷಣೆಯ ವಚನಗಳು, ಸಾಮಾಜಿಕ ಲೋಪ ದೋಷಗಳ ತೀಕ್ಷ್ಣ ವಿಮರ್ಶೆಯ ವಚನಗಳು. ಅನುಭವದ ಸೂಕ್ಷ್ಮ ಚಿಂತನೆಗಳ ವಚನಗಳು, ನವಮಾನವನ ನಿರ್ಮಾಣದ, ನವ ಸಮಾಜದ ಸ್ಥಾಪನೆಯ ಆಶಯ, ಧ್ಯೇಯ–ಧೋರಣೆಗಳನ್ನು ಒಳಗೊಂಡ ವಚನಗಳು – ಎಷ್ಟು ಬಗೆಯ ವಚನಗಳು:

ಈ ವಚನಗಳಲ್ಲಿ ಎದ್ದು ಕಾಣುವ ವೈಶಿಷ್ಟ್ಯಗಳನ್ನು ಪಟ್ಟಿ ಮಾಡುವುದು ಸುಲಭವಲ್ಲ. ಆದರೂ, ಇಲ್ಲಿ ಕೆಲವನ್ನಾದರೂ ಉಲ್ಲೇಖಿಸಲೇಬೇಕು:

೧) ಇದು ಜನವಾಣಿಯಲ್ಲಿ ಜನ್ಮವೆತ್ತಿದ ಸಾಹಿತ್ಯ. ಮಹಾಪಂಡಿತ ಲಿಂ.ಶಿ.ಶಿ. ಬಸವನಾಳರ ಮರೆಯಲಾಗದ ಮಾತಿನಲ್ಲಿ, 'ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವಚನಕಾರರದು.' (ಬಸವಣ್ಣನವರ ಷಟ್‌ಸ್ಥಲದ ವಚನಗಳು – ಪೀಠಿಕೆ ಪು–೧) ಕನ್ನಡ ನುಡಿ ದೇವವಾಣಿಯಾಯಿತು ಇವರ ಕೈವಾಡದಿಂದ.

೨) ಇದು ವರ್ಣ ಮತ್ತು ವರ್ಗಮುಕ್ತ ನಿರಂಕುಶ ಮತಿಗಳ ಚಿಂತನ ಸ್ವಾತಂತ್ರ್ಯದ ಸತ್ಫಲ.

೩) ಇದು ಉಳಿದವರ ಅನುಭವದ ಒರೆಗಲ್ಲಿಗೆ ಸ್ವಂತ ಚಿಂತನೆಯನ್ನು ಒಳಪಡಿಸಲು ಹಿಂಜರಿಯದಿದ್ದ ವಿಚಾರವಾದಿಗಳ ಸಾಹಿತ್ಯ; 'ಆತ್ಮ ಆತ್ಮ ಮಥನಿಸಿ' ಬಂದ ಸೂತ್ರ ಸಾಹಿತ್ಯ.

೪) ಇದು ಗದ್ಯ ಪದ್ಯಗಳ ನಡುವಣ ಭೇದವನ್ನೇ ಮರೆಸಿ ದಿ. ಪ್ರೊ. ಬಿ.ಎಚ್. ಶ್ರೀಧರರ ಮಾತಿನಲ್ಲಿ ಹೇಳುವುದಾದರೆ 'ಅಲ್ಪದಲ್ಲಿ ಕಲ್ಪವನ್ನು ಕೆತ್ತಿದ ಶಿಲ್ಪ'ವನ್ನೊಳಗೊಂಡ ಸಾಹಿತ್ಯ.

೫) ಇದು ಬದುಕನ್ನು ಸ್ಪರ್ಶಿಸುವ ಎಲ್ಲ ವಿಷಯಗಳನ್ನೂ ಚರ್ಚಿಸಿ ಮಾರ್ಮಿಕ ಫಲಿತಾಂಶಗಳನ್ನು ನೀಡಿದ ಸಾಹಿತ್ಯ.

೬) ಇದು ಮಣ್ಣಿನ ವಾಸನೆ, ಮಲ್ಲಿಗೆಯ ವಾಸನೆ, ಬೆವರಿನ ವಾಸನೆ, ಬಾವನ್ನದ ವಾಸನೆಗಳನ್ನೆಲ್ಲ ಒಳಗೊಂಡು ಆದರ್ಶವಾದ ವಾಸ್ತವವಾದಕ್ಕೆ ಸುವರ್ಣ ಸೇತುವೆಯಾದ ಸಾಹಿತ್ಯ.

೭) ಇದು ಹಿರಿಯ ಸಾಹಿತಿ ವಿಮರ್ಶಕ ಪ್ರೊ. ಎಚ್. ತಿಪ್ಪೇರುದ್ರ ಸ್ವಾಮಿಯವರು ಸರಿಯಾಗಿಯೇ ಹೇಳಿರುವಂತೆ 'ಯಾವ ಒಂದು ಸೂತ್ರದಿಂದಲೂ ವಿವರಿಸಲು ಸಾಧ್ಯವಲ್ಲದ 'ತಂತ್ರ'ವೊಂದರಿಂದ ಗದ್ಯವನ್ನು 'ಗದ್ಯಗೀತೆ'ಯನ್ನಾಗಿ, ಆತ್ಮಗೀತೆಯನ್ನಾಗಿ ಮಾರ್ಪಡಿಸಿದ ಸಾಹಿತ್ಯ. (ಶರಣರ ಅನುಭಾವ ಸಾಹಿತ್ಯ, ಪು–೨೨೪)

೮) ಇದು ಓದಿದ ಸಲಕ್ಕೊಮ್ಮೆ ಹೊಸ ಅರ್ಥದ ಸೆಳಕು – ಬಳಕು – ಬೆಳಕುಗಳನ್ನು ಬೀರಬಲ್ಲ ವಚನ ರತ್ನಗಳನ್ನು, ವಾಕ್ಯಮಾಣಿಕ್ಯಗಳನ್ನು ಒಳಗೊಂಡ ಸಾಹಿತ್ಯ.

೯) ಇದು ಭಾಷೆಯನ್ನು ಅದ್ಭುತರೀತಿಯಲ್ಲಿ ದುಡಿಸಿಕೊಳ್ಳುವುದರ ಮೂಲಕ ಮಾತನ್ನು ಗೀತವನ್ನಾಗಿ, ಜ್ಯೋತಿಯನ್ನಾಗಿ, ಜ್ಯೋತಿರ್ಲಿಂಗವನ್ನಾಗಿ ಮಾಡಿದ ಸಾಹಿತ್ಯ.

೧೦) ಇದು ಮಾನವತೆ, ಸೋದರತೆ, ಸಮಾನತೆ, ಸ್ವತಂತ್ರತೆಗಳ ಬಾವುಟವನ್ನು ಹಾರಿಸಿ ದುಡಿವವರಿಗೆ ಒಡೆಯರ ಜೋಳವಾಳಿತನ, ಶಿವನ ವೇಳೆವಾಳಿತನದ ಸುವರ್ಣ ಸೂತ್ರವನ್ನಿತ್ತ ಸಾಹಿತ್ಯ.

ಕಲ್ಯಾಣವು ಕಂಡ ತ್ರಿವಿಧ ಕ್ರಾಂತಿಯಲ್ಲಿ ಈ ಸಾಹಿತ್ಯ ಕ್ರಾಂತಿಯು ಮಹತ್ತರವಾದುದು. ವಚನ ಸಾಹಿತ್ಯವು ಸಾಹಿತ್ಯವೂ ಹೌದು, ಶಾಸ್ತ್ರವೂ ಹೌದು, ದೀನದಲಿತರ ಅಬಲೆಯರ ಆಶೋತ್ತರಗಳ ಚಿತ್ರವೂ ಹೌದು. ಇದರ ಕಾವ್ಯಾಂಶಗಳು ಸಾಕಷ್ಟು ಚರ್ಚಿತವಾಗಿವೆ. ಇದರ ಪ್ರಮುಖ ಲಕ್ಷಣಗಳನ್ನು ಹಿರಿಯ ಸಾಹಿತಿ ಹಾ.ಮಾ. ನಾಯಕರು ಹೀಗೆ ಕ್ರೋಢೀಕರಿಸಿದ್ದಾರೆ: 'ಸಂಕ್ಷಿಪ್ತ ನಿರೂಪಣೆ, ಮೊಟಕಾದ ವ್ಯಾಕರಣ, ಆರಂಭದ ಸಾಲನ್ನೋ, ಸಾಲುಗಳನ್ನೋ ಮತ್ತೆ ಮತ್ತೆ ತರುವ ರಚನಾ ವಿಧಾನ, ರೂಪಕ ಉಪಮಾನಗಳಲ್ಲಿಯೇ ಮಾತನಾಡುವ ಸೊಗಸು, ವಿರೋಧಾಭಾಸದ ಹೇಳಿಕೆಗಳಿಂದ ರಸೋತ್ಕರ್ಷವನ್ನುಂಟು ಮಾಡುವ ಜಾಣ್ಮೆ, ಸಾದೃಶ್ಯ ವೈದೃಶ್ಯಗಳ ಸ್ಥಾಪನೆಯಿಂದ ತೆರೆದು ತೋರುವ ಆಕರ್ಷಣೆ, ಮಾತಿನ ಅರ್ಥವನ್ನು ಏರುಪೇರಾಗಿಸುವುದರಿಂದ ಒದಗುವ ಉಲ್ಲಾಸಗತಿ, ಆರಾಧ್ಯ ದೈವವನ್ನು ಸಂಬೋಧಿಸುವುದರಲ್ಲಿಯೇ ಏರ್ಪಡುವ ಹೃದಯ ಸಂವಾದ, ಇತ್ಯಾದಿ.'

('ವಚನೋದ್ಯಾನ'ದ ಮುನ್ನುಡಿಯಲ್ಲಿ) ಇವಲ್ಲದೆ ಬೇರೆ ಲಕ್ಷಣಗಳನ್ನೂ ಗುರುತಿಸುವುದು ಸಾಧ್ಯ ಸಾಹಿತ್ಯಜ್ಞನಿಗೆ.

ಆದರೆ ವಚನ ಸಾಹಿತ್ಯದ ಅದಮ್ಯ ಆಕರ್ಷಣೆಯಿರುವುದು ಈ ಲಕ್ಷಣಗಳಿಂದ ಮಾತ್ರವಲ್ಲ. ಅದು ತುಳಿತಕ್ಕೆ ಒಳಗಾದವರ, ನೋವುಂಡವರ, ಅನಾಥರ, ಅಂಗವಿಕಲರ ಕೀಳರಿಮೆಯನ್ನು ಸುಟ್ಟು, ಅವರನ್ನು ಬಿಗಿದಿದ್ದ ವರ್ಣ–ವೃತ್ತಿ–ಲಿಂಗ–ಮಂತ್ರ–ಮಾಟ–ಯಜ್ಞ–ಯಾಗ–ಕ್ಷೇತ್ರ–ತೀರ್ಥ– ಜ್ಯೋತಿಷ್ಯ–ಮಾರಿ–ಮಸಣಿ–ಶಕುನ ಸ್ಪೃಶ್ಯ–ಅಸ್ಪೃಶ್ಯ ಇತ್ಯಾದಿ ಬೇಡಿಗಳನ್ನು ಕತ್ತರಿಸಿ, ಅವರಲ್ಲಿ ಅರಿವಿನ ಅದಮ್ಯ ಆಸೆಯನ್ನೂ, ಬೆಳಕಿನ ಬದುಕಿನ ಬಲವಾದ ಬಯಕೆಯನ್ನೂ ಪ್ರಚೋದಿಸಿ. ಅವರೆಲ್ಲ ಉತ್ಪಾದಕ ಹಾಗೂ ಪರಸ್ಪರ ಪೂರಕ ವ್ಯಕ್ತಿಗಳಾಗುವಂತೆ ಮಾಡಿ, ಸಮಾನ ವ್ಯಕ್ತಿಗಳ ಸ್ವಪರಿಪೂರ್ಣ ಸಮಾಜವೊಂದು ಮೈದಾಳುವಂತೆಸಗಿ, ಯಜಮಾನ ಸಂಸ್ಕೃತಿಯು ಅವರಲ್ಲಿ ಬಿತ್ತಿದ್ದ ಭಯದ ಬೇರುಗಳನ್ನು ಕಿತ್ತೊಗೆದು ನವಮಾನವರ ನವಯುಗವೊಂದನ್ನು ಆರಂಭಿಸಿದ್ದರಿಂದ ಅದು ಜಾಗತಿಕ ಸಾಹಿತ್ಯದಲ್ಲಿಯೇ ಅಪೂರ್ವ ತೇಜಸ್ವಿನಿಂದ ರಾರಾಜಿಸುತ್ತಿದೆ. ವಚನಕಾರರು ಮಾಡಿದುದು ವಿಶಾಲಾರ್ಥದಲ್ಲಿ ನೈಜ ಸಾಂಸ್ಕೃತಿಕ ಕ್ರಾಂತಿ. ಎಲ್ಲರಿಗೆ ತಂತಮ್ಮ ವ್ಯಕ್ತಿತ್ವದ ಅನನ್ಯತೆಯನ್ನು ಬೆಳೆಸಿಕೊಂಡು, ಉಳಿದವರ ಜೊತೆಗೆ ಹುದುವಾಳಿಕೆಯನ್ನು ಕುದುರಿಸಿಕೊಂಡು, ಲೇಸೆನಿಸಿಕೊಂಡು ಒಂದು ದಿನ ಬಾಳಿದರೂ ಸಾಕೆಂಬ ಭಾಷೆ ತೊಟ್ಟು, ಆತ್ಮಸಾಧನೆ (ಖಜಟಜಿ ಂಛಿಣಣಚಿಟುದಚಿಣುಂಟಿ). ಶಾರೀರಿಕ – ಮಾನಸಿಕ ಆರೋಗ್ಯ ಸಂಪಾದನೆ, ಸಮಾನ ಸ್ಥಾನಮಾನ, ಶ್ರೇಷ್ಠತೆಗಳ ಗಳಿಕೆ ಅಳವಡಿಕೆಗಳು ಸಾಧ್ಯವಾಗುವಂಥ ಸಾಮಾಜಿಕ ವ್ಯವಸ್ಥೆಯ ನಿರ್ಮಾಣವೇ ಸಾಂಸ್ಕೃತಿಕ ಕ್ರಾಂತಿ. ಈ ಬಗ್ಗೆ ಅನ್ಯತ್ರ (ಬಸವಣ್ಣನವರ ಜೀವನ ಹಾಗೂ ಸಂದೇಶ) ವಿಶದವಾಗಿ ವಿವರಿಸಿದ್ದೇನೆ. ಈಗ ವರಕವಿ – ವಿಮರ್ಶಕ ಡಾ॥ ಜಿ.ಎಸ್. ಶಿವರುದ್ರಪ್ಪನವರ ಮಾತುಗಳನ್ನು ಕೇಳೋಣ:

'ವಚನಗಳಲ್ಲಿ ನಾವು ಕಾಣುವುದು ಒಂದು ಸಮನ್ವಯ ಸಂಸ್ಕೃತಿ. ಉತ್ತಮ ಸಂಸ್ಕೃತಿಯ ಮುಖ್ಯ ಗುಣಗಳಾದ ವಿನಯ, ಶ್ರದ್ಧೆ, ಧೈರ್ಯ, ಸಮಾನತೆ, ಶ್ರಮ ಇತ್ಯಾದಿಗಳನ್ನು ನಾವು ವಚನಕಾರರ ನಡೆನುಡಿಗಳಲ್ಲಿ ಕಾಣಬಹುದು. ಪ್ರತಿಯೊಬ್ಬ ವಚನಕಾರನಿಗೂ ತಾನು ಮಾಡಿಕೊಳ್ಳುತ್ತಿರುವುದು ಆತ್ಮ ಸಂಸ್ಕಾರವೆನ್ನುವ ಅರಿವಿನ ಜೊತೆಗೆ ಸುಭದ್ರವಾದ ಸಮಾಜ ರಚನೆಯ ದೃಷ್ಟಿಯೂ ಇದೆ. 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ವಿನಯದಲ್ಲಿ, 'ನೀನೊಲಿದರೆ ಒಲಿ, ಒಲಿಯದಿದ್ದರೆ ಮಾಣು, ನಾ ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯ', ಎಂಬ ವೀರ ಶ್ರದ್ಧೆಯಲ್ಲಿ, 'ಶಿರ ಹರಿದು ಬಿದ್ದರೆ ಪ್ರಾಣ ನಿಮಗರ್ಪಿತವೆಂಬೆನು' ಎಂಬ ಸ್ಥೈರ್ಯದಲ್ಲಿ, 'ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು ಬಪ್ಪುದು ನಮಗೀಗಲೇ ಬರಲಿ' ಎಂಬ ಮೃತ್ಯುಂಜಯ ಮನೋಭಾವದಲ್ಲಿ, 'ಛಲ–ಬೇಕು ಶರಣಂಗೆ ಪರಧನವ ನೊಲ್ಲೆನೆಂಬೆ' ಎಂಬ ಮಾಹೇಶ್ವರ ಮನೋಭಾವದಲ್ಲಿ,

‘ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲರೂ ಒಂದೇ ಎಂಬೆ’ ಎಂಬ ಸಮಾನತಾ ದೃಷ್ಟಿಯಲ್ಲಿ ನಾವು ಉತ್ತಮ ಸಂಸ್ಕೃತಿಯ ನಾನಾ ಮುಖಗಳನ್ನು ಕಾಣುತ್ತೇವೆ. ಈ ಅನುಭವ ಸೌಂದರ್ಯವನ್ನು ಪಡೆಯುವ ಅರಿವು ಬೇಕು. ಇದನ್ನು ‘ಅರಿತರೆ ಶರಣ– ಮರೆತರೆ ಮಾನವ’ ಮಾನವ ಶರಣನಾಗುವ ವಿಧಾನವೇ ಈ ಸಂಸ್ಕೃತಿಯ ಸ್ವರೂಪ’. (ಪರಿಶೀಲನ – ಪುಟ ೩೨) ಇಂಥ ಸಂಸ್ಕೃತಿಯು ಶ್ರೀಸಾಮಾನ್ಯರಿಗೂ ಮುಟ್ಟುವಂತೆ ಮಾಡಿದುದೇ ಹನ್ನೆರಡನೆಯ ಶತಮಾನದ ವಚನ ಸಾಹಿತ್ಯದ ಹಿರಿಮೆ, ಹೆಗ್ಗಳಿಕೆಗಳು. ಅಂತೆಯೇ ಅದಮ್ಯ ಉಸುರಿದ:

‘ಹಿಂದಣ ಕಥೆಯ ಮುಂದೆ ಹೇಳುವ ಕಾವ್ಯವಲ್ಲ;
ಮುಂದಣ ಕಥೆಯನಿಂದು ಹೇಳುವ ನಾಟಕವಲ್ಲ;
ಬಂದ ಶಬ್ದವ ಸಂದಿಲ್ಲದುಸುರುವೆನೆಂಬ ಅಭ್ಯಾಸಿಯಲ್ಲ;
ಛಂದ ವಿಚ್ಛಂದವೆಂಬ ಸಂದೇಹಿಯಲ್ಲ;
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರ
ಸ್ವಯಾನುಭಾವದ ಪರಿ ಬೇರೆ!’

ಈ ಸ್ವಯಾನುಭಾವವು ಕೆರೆ, ಹಳ್ಳ, ಬಾವಿಗಳಾಗಿ ಮೈದೆಗೆದು ಗುಳ್ಳೆ ಗೊರಚೆ ಚಿಪ್ಪುಗಳನ್ನು ಕೊಡದೆ ವಾರಿಧಿಯಾಗಿ ಮೈದೆಗೆದು ರತ್ನಂಗಳ ಕೊಟ್ಟುದು ಕನ್ನಡದ ಪುಣ್ಯ, ಕನ್ನಡಿಗರ ಪುಣ್ಯ. ಇವು ಮನುಕುಲದ ಬದುಕಿನ ಭಾಗವಾದರೆ ಮನುಕುಲದ ಭಾಗ್ಯ.

ವಚನ ಸಾಹಿತ್ಯವು ಮುಂದೆ ಸಂಗೋಪನ ಯುಗ, ಸಂಕಲನ ಯುಗಗಳನ್ನು ಕಂಡು, ಸಾಹಿತ್ಯಲೋಕದ ಅದ್ಭುತಗಳೆನಿಸಿದ ನಾಲ್ಕು ಶೂನ್ಯ ಸಂಪಾದನೆಗಳನ್ನು ನಮಗೆ ಕೊಟ್ಟು, ಶಿವಯೋಗೀಶ್ವರ ಸಿದ್ಧಲಿಂಗೇಶ್ವರರಿಂದ ಪುನರುಜ್ಜೀವಿತವಾಗಿ ಹೊಸದೊಂದು ಹೊಗರು ತೋರಿ, ಗುಮ್ಮಾಳಾ ಪುರದ ಸಿದ್ಧಲಿಂಗಯತಿ, ಸ್ವತಂತ್ರ ಸಿದ್ಧಲಿಂಗೇಶ್ವರ. ಘನಲಿಂಗದೇವ, ಷಣ್ಮುಖ ಸ್ವಾಮಿ, ಕಾಡಸಿದ್ಧೇಶ್ವರನಲ್ಲಿ ಸತ್ಫಲಗಳನ್ನು ನೀಡಿ ಇಂದಿಗೂ ಬತ್ತದ ಹಾಲ ತೊರೆಯಾಗಿ ಹರಿಯುತ್ತಿರುವುದು ಹೆಮ್ಮೆಯ, ಹಿಗ್ಗಿನ, ಹಿರಿಮೆಯ ಸಂಗತಿಯಾಗಿದೆ.

ಆಧುನಿಕ ವಚನಕಾರರೆಂದು ಪ್ರೊ. ಸಂಗಮೇಶ ಹಂಡಿಗಿಯವರು ೧೨೫ ಜನರನ್ನು ಗುರುತಿಸಿದ್ದಾರೆ. ಇವರಲ್ಲಿ ಹದಿನಾರು ಜನ ಅಕ್ಕ ತಂಗಿಯರಿರುವುದು ನಿಜವಾಗಿಯೂ ಆಶಾದಾಯಕವಾದ ಬೆಳವಣಿಗೆ. ಇವರೆಲ್ಲರ ವಚನಗಳನ್ನೂ ನಾನು ಓದಿಲ್ಲವೆಂದು ಆರಂಭದಲ್ಲಿಯೇ ಒಪ್ಪಿಕೊಂಡು, ನಾನು ಓದಿರುವವರ ಬಗ್ಗೆ ಮಾತ್ರ ನಾಲ್ಕು ಮಾತು ಹೇಳಿ ಉಳಿದವರ ಕ್ಷಮೆ ಕೋರುತ್ತೇನೆ.

ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರ ಜನಸೇವಕನ ವಚನಗಳು ಅಂಬಿಕಾತನಯದತ್ತರ ಕರುಳಿನ ವಚನಗಳು, ಕುವೆಂಪು ಅವರ ಕಿಂಕಿಣಿ, ಆರ್.ಆರ್. ದಿವಾಕರರ ಅಂತರಾತ್ಮನಿಗೆ – ವಿಶ್ವಾತ್ಮನಿಗೆ, ಎಸ್.ವಿ. ರಂಗಣ್ಣನವರ 'ರಂಗಬಿನ್ನಪ' ಜೀರಿಗೆ ಕಟ್ಟೆಬಸಪ್ಪನವರ 'ಕಟ್ಟೆಯ ಬಸವೇಶ್ವರ ವಚನಗಳು' ಡಾ। ಜ.ಚ.ನಿ. ಅವರು ಹೆಸರಿಸಬೇಕಾದ ಆರಂಭದ ಆರಂಭಕಾರರು ಇವರಲ್ಲಿ ಡಾ। ಜ.ಚ.ನ. ಅವರದು ಬಹುದೊಡ್ಡ ಸಾಧನೆ. ಶ್ರೀ ಮೂಜಗಂ' ಅವರು 'ಜ.ಚ.ನಿ. ಅವರ ಸಾಹಿತ್ಯ ಸೃಷ್ಟಿ ಆತ್ಮಪುಷ್ಟಿಗೆ ಆಹಾರ ನೋಡಯ್ಯಾ!' ಎಂದು ಕೈವಾರಿಸಿರುವುದು ಇಲ್ಲಿ ಉಲ್ಲೇಖನೀಯ 'ಶ್ರೀ ಮೂಜಗಂ' ಅವರ 'ಚಿತ್ಸುಮನ' ಅವರ ವಿಶಾಲದೃಷ್ಟಿಗೆ ಸಾಕ್ಷಿ. 'ಗುರು ವಿರಕ್ತರೆಂಬವರು ಸಮಾಜ ಪುರುಷಂಗೆ ಕಣ್ಣೆರೆಡು ನೋಡಾ!' ಎಂಬ ಅವರ ನಿಲುವು ಸ್ಪೃಹಣೀಯವಾದುದು. ಮುಂಡರಗಿಯ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳವರ 'ವಚನವಲ್ಲರಿ' ವೀರಶೈವ ಸಿದ್ಧಾಂತವನ್ನು ಚೇತೋಹಾರಿಯಾಗಿ ನಿರೂಪಿಸುವ ವಚನಗಳ ಸಂಗ್ರಹ. ಮಾತೆ ಮಾಹಾದೇವಿಯರವರ ವಚನಗಳು ಮಾಧುರ್ಯ ಸೌಂದರ್ಯಗಳ ಸಂಗಮ. ಪೂಜ್ಯ ಸದಾಶಿವ ಶಿವಾಚಾರ್ಯರು, ಪೂಜ್ಯ ಶಿವಮೂರ್ತಿ ಸ್ವಾಮಿಗಳು ವಾಚನೀಯವಾದ ವಚನಗಳನ್ನು ಬರೆದಿದ್ದಾರೆ. ಇದು ಗುರುಮನೆಗಳ ಕೊಡುಗೆ ಆಧುನಿಕ ವಚನಸಾಹಿತ್ಯಕ್ಕೆ.

ಎಸ್.ವಿ. ರಂಗಣ್ಣನವರ 'ರಂಗಬಿನ್ನಪ' ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರವನ್ನು ಪಡೆದು ಆಧುನಿಕ ವಚನ ಸಾಹಿತ್ಯಕೆಕ ಮನ್ನಣೆಯ ಮುದ್ರೆ ಒತ್ತಿತು. ಪ್ರೊ. ಎಸ್.ವಿ. ಪರಮೇಶ್ವರ ಭಟ್ಟರ 'ಉಪ್ಪು ಕಡಲು' ಆಧುನಿಕ ವಚನ ಸಾಹಿತ್ಯದ ಅಮೂಲ್ಯ ಕೃತಿ. ಬಹುಮುಖ ಪ್ರತಿಭೆಯ ಮಹಾದೇವ ಬಣಕಾರರ ವಚನಗಳು ತುಂಬ ಸತ್ವಸಂಪನ್ನ ವಚನಗಳು ಗಮಕ ಕಲಾನಿಧಿ ಜೋಳದ ರಾಶಿ ದೊಡ್ಡನ ಗೌಡರ ವಚನಗಳು ಕೆಚ್ಚಿನಿಂದ ಕೂಡಿ ಪ್ರಭಾವಪೂರ್ಣವಾಗಿವೆ. ಸಂಗಮೇಶ ಹೊಸಮನಿ ಅವರ 'ವಚನ ತೀರ್ಥ'ವೊಂದು ಮೇಲ್ಮಟ್ಟದ ವಚನ ಸಂಗ್ರಹ. ಚಂದ್ರಶೇಖರ ಐತಾಳರ 'ಮಾತೃಸಂಪದ' ಮೌಲಿಕ ಕೃತಿ. ಸಿಂಪಿಲಿಂಗಣ್ಣನವರ ವಚನಗಳು ಅವರ ಉಳಿದ ಸಾಹಿತ್ಯ ಕೃತಿಗಳಂತೆ ಆಹ್ಲಾದಕರ.

ಆಧುನಿಕ ವಚನಗಾರ್ತಿಯರಲ್ಲಿ ಶ್ರೀಮತಿ. ಶಿವಲಿಂಗಮ್ಮ ಕಟ್ಟಿ ಅವರ 'ಕರುಣಕಿರಣ' ಮತ್ತು ಶ್ರೀಮತಿ ಗಂಗಮ್ಮ ಹೊಸಮನಿ ಅವರ 'ವಚನಾಂಜಲಿ ಮತ್ತು ಕಮಲಾ ಹಂಪನಾ ಅವರ ಬಿಂದಲಿ'ಗಳನ್ನು ಓದಿ ಆನಂದಿಸಿದ್ದೇನೆ. ಶ್ರೀಮತಿ ಶಂಕರಮ್ಮ, ಶ್ರೀಮತಿ ಓಂಕಾರಮ್ಮ, ಶ್ರೀಮತಿ ಗುರುದೇವಿ ಹಿರೇಮಠ ಇತ್ಯಾದಿ ವಚನಗಾರ್ತಿಯರೂ ಆಧುನಿಕ ವಚನ ಸಾಹಿತ್ಯಕ್ಕೆ ಗಮನಾರ್ಹವಾದ ಕೊಡುಗೆಗಳನ್ನು ನೀಡಿದ್ದಾರೆ. ಇದು ಈ ಶತಮಾನದಲ್ಲಿ ವಚನ ರಚನೆಗೆ ವಸಂತಕಾಲ ಬಂದಿರುವುದಕ್ಕೆ ಸಾಕ್ಷಿ. ಇಲ್ಲಿ ವಚನ ಸಾಹಿತ್ಯ ಪ್ರಸಾರಕ್ಕೆ ಕಾರಣರಾದ ಹಳಕಟ್ಟಿ, ಹರ್ಡೇಕರ್, ಬಸವನಾಳ, ಹಿರೇಮಠ, ದೇ.ಜ.ಗೌ. ಸಿ.ಪಿ.ಕೆ. ಸುಜನಾ, ಜಿ.ಎಸ್. ಸಿದ್ಧಲಿಂಗಯ್ಯ, ಕಲಬುರ್ಗಿ, ಮಾಳವಾಡ ದಂಪತಿಗಳು ಮೊದಲಾದವರನ್ನು ಸ್ಮರಿಸುತ್ತೇನೆ.

## ೧೧

# ವಚನಕಾರರ ಶೈಲಿ

ವಚನಸಾಹಿತ್ಯವೊಂದು ಜ್ಯೋತಿರ್ಮಯ ಲೋಕ, ಕನ್ನಡ ಸರಸ್ವತಿಗೆ ನಾಕ. ಕನ್ನಡದ ಅಂತಃಸತ್ವದ ರಸಪಾಕ. ಕನ್ನಡದ ವಿಶಿಷ್ಟ ಮನೋಧರ್ಮದ ಪ್ರತೀಕ. ಡಾ|| ಡಿ.ವಿ. ಗುಂಡಪ್ಪನವರಂಥ ಪಂಡಿತ ಪ್ರಕಾಂಡರು. ಹೊರಗಿನ ಜನಾಂಗಗಳು ಬಂದು ನಿಮ್ಮ ಕನ್ನಡದಲ್ಲಿ ಏನಿದೆಯೆಂದು ಕೇಳಿದಾಗ ನಾವು ಅವರಿಗೆ ತೋರಿಸುವುದರ ಬಹು ಭಾಗವು ವಚನಸಾಹಿತ್ಯವೆಂದು ಸಾರಬೇಕಾದರೆ ಅದರ ಸಾರಸತ್ವವಾವುದೆಂದು ನಾವು ಸೂಕ್ಷ್ಮವಾಗಿ ವಿಚಾರಿಸಬೇಕಲ್ಲವೆ? ಇತ್ತೀಚೆಗೆ ವಚನ ಸಾಹಿತ್ಯದ ಬಗ್ಗೆ ಸರ್ವತ್ರ ಅದರ ಭಾವವು ಹುಟ್ಟತೊಡಗಿದ್ದರೂ ಅದರ ಆಳವಾದ, ವಿಮರ್ಶಾತ್ಮಕವಾದ ಶಾಸ್ತ್ರೀಯ ವ್ಯಾಸಂಗವು ನಡೆದಿಲ್ಲವೆಂದು ಪ್ರೊ. ಭೂಸನೂರಮಠವೇ ಒಪ್ಪಿದ್ದಾರೆ. 'ಶೈಲಿಯನ್ನು ಕುರಿತು ವಿಚಾರಿಸುವುದೆಂದರೆ ಕಾವ್ಯ ಸೌಂದರ್ಯದ ಸಮಗ್ರ ಮೀಮಾಂಸೆಯನ್ನು ಮಾಡಿದಂತೆ.[೧] ಕಾರಣ ಇದುವರೆಗೂ ಯಾರೂ ಲಕ್ಷಿಸದಿರುವ ಈ ವಿಮರ್ಶಾವಿಧಾನದಿಂದ ವಚನಸಾಹಿತ್ಯದ ನೆಲೆ ಬೆಲೆಗಳನ್ನು ಅಳೆಯಲು ಯತ್ನಿಸಿದ್ದೇನೆ. ರೀತಿರಾತ್ಮಾಕಾವ್ಯಸ್ಯ[೨] ವಚನಕಾರರ ರೀತಿ ಯಾವುದು?

ಶೈಲಿಯೆಂಬುದೇ ಮಾತಿನ ಬಲೆಗೆ ಸಿಲುಕದ ಮೀನವೊಂದು. 'Styles virum arguit, our style betrays us[೩] "the art of style is eternally elusive and that the attempt to reduce it to rule is the forlorn hope of academic infatuation.' ಮತ್ತು 'To analyse the precise method whereby a great personality can make itself felt in words, even while it neglects and contemns the study of words, would be to lay bare the secrets of religion and life-it is beyond human competence.[೧]

ಹೀಗೆ ಎಲ್ಲ ಸಾಹಿತ್ಯ ಕೃತಿಗಳು, ಅಮರಕೃತಿಗಳು. The true business of the literary artist is to plait of weave his meaning...[೨]' ಇತ್ಯಾದಿ ವ್ಯಾಖ್ಯೆ

೧. ದಿವಂಗತ ಸಾಸನೂರ ೨. ವಾಮನ ೩. The Anatomy of Melancholy

ವಿಭಜನೆಗಳನ್ನು ಅಣಕಿಸುವಾಗ ವಚನಗಳ ಶೈಲಿಯನ್ನು ಕುರಿತು ಸಮಾಲೋಚನೆಗೆ ಆರಂಭ ಮಾಡುವುದು ಅಪಹಾಸ್ಯವಲ್ಲವೆ? ವಚನಗಳು ರಚನೆಯಲ್ಲ – ಉಸಿರು. ಅವು ಶರಣರ ಆತ್ಮಗೀತೆಗಳು. ಶರಣನಿಗೆ. 'The portals of heaven open up to him the vision of things unseen; his utterances have astrange fire; his penetrating glance sees through the hollow shows and senseless formalities of evey day respectability. He is the interpreter of divine wishes, the oracle of divine wisdom, the herald of divine justice. ಶರಣರ ವಚನಗಳು 'are spontaneous and direct outcome' of the divine afflatus springing from within the result of inspiration through god intexication. ಇಂಥ ಉಸಿರನ್ನು ಶೈಲಿಯ ಮಾನದಂಡದಿಂದ ಅಳೆಯುವುದು ಹೇಗೆ? 'Nevertheless a brief and diffident consideration of the matter may bring us much comfort'[೩] ನನ್ನ ಅಭಿಪ್ರಾಯದಲ್ಲಿ ವಚನಕಾರರ ವಿವಿಧ ಸ್ವತಂತ್ರ, ಸುಂದರ ಶೈಲಿಗಳೇ ವಚನ ಸಾಹಿತ್ಯದ ಹಿರಿಮೆ, ಹೆಗ್ಗಳಿಕೆ.

ಶರಣರ ಶೈಲಿಯನ್ನು ಕುರಿತು ವಿಚಾರಿಸುವಾಗ ವಚನಕಾರರು ಸ್ವತಂತ್ರ ಸಾಹಿತ್ಯ ಯುಗದ ಸಂಸ್ಥಾಪಕರೆಂಬಂಶವನ್ನು ಮರೆಯಲಾಗದು. ಸಾಹಿತ್ಯ ಯುಗವೆಂದರೇನು?

ಸಾಹಿತ್ಯವು ಮಾನವ ವಿಕಾಸದ ಪ್ರತಿಬಿಂಬ. ಇದರಿಂದಲೇ ಸಾಹಿತ್ಯವು ಮಾನವಪ್ರಾಣಸ್ತೋತಸ್ವಿನಿಯ ಸಾಮಯಿಕ ಪ್ರಭಾವವನ್ನು ಪಡೆದು ಉನ್ಮುಖ ೧. ದಿವಂಗತ ಸಾಸನೂರ, ೨. ವಾಮನ, ೩. The Anatomy of Melancholy'

ಇಲ್ಲವೆ ಅಧೋಮುಖವಾಗಿ ಹರಿದಿದೆ. ತನ್ನ ಪ್ರಾಣಸಂವಾಹಕನು ಸಂಸಾರದ ಬಾಹ್ಯ ಹಾಗೂ ಆಂತರಿಕ ಆವರ್ತನ ಪ್ರತ್ಯಾವರ್ತನಗಳಲ್ಲಿ ತನಗಾಗಿ ಏನನ್ನು ಕಂಡುಕೊಂಡನೋ ಅದನ್ನೇ ಸಾಹಿತ್ಯವು ಸಮೀಕ್ಷಿಸಿತು. ಈ ಅವರ್ತನ ಪ್ರತ್ಯಾವರ್ತನಗಳ ಮೂಲಧಾರಣೆಗಳು ವಾತಾವರಣ, ಪರಿಸ್ಥಿತಿ, ದೇಶ, ಕಾಲಗಳ ಮುದ್ರೆಯನ್ನು ಧರಿಸಿದ್ದರೂ, ಅವುಗಳ ಚಿತ್ತಧಾರೆಗಳಲ್ಲಿ ಎಷ್ಟೇ ದೃಷ್ಟಿ ಭೇದಗಳಿದ್ದರೂ ಮಾನವ ಶರೀರದಲ್ಲಿ ಹರಿಯುವ ರಸದಂತೆ ಅವುಗಳ ಪ್ರಾಣ ಸ್ಪಂದನ ಶಕ್ತಿ ಮಾತ್ರ ಒಂದೇ ಇರುತ್ತದೆ. ವಾಣಿಭೇದ. ದೃಷ್ಟಿಭೇದ, ರಸಭೇದಗಳಿದ್ದರೂ ವಸ್ತುಗ್ರಹಣ ಭೇದ ಮಾತ್ರ ಇರದು. ಈ ರಸೈಕತೆ, ಈ ಜೀವನದ

---

**೧. Sir Walter Releigh - Style**

೨. **R.L. Stevenson- On some Technical Elements of Style**

೩. **Sir Walter Releigh.**

ಏಕಾತ್ಮ್ಯ, ಈ ವಸ್ತುಗ್ರಹಣ ಸಾಮಾನ್ಯತೆಗಳ ಸಮೂಹವೇ ಸಾಹಿತ್ಯ ಯುಗ. ಈ ಪ್ರಕಾರದ ಸಾಹಿತ್ಯವಾಹಿನಿಯು ಮತ್ತೊಬ್ಬ ಭಗೀರಥನು ಹುಟ್ಟಿ ಬಂದು ಅದರ ಪ್ರವಾಹದ ದಿಸೆಯನ್ನೇ ಬದಲಿಸುವವರೆಗೆ ಒಂದೇ ನಿಟ್ಟಿನಲ್ಲಿ ಹರಿಯುತ್ತಿರುತ್ತದೆ.

ವಚನಕಾರರ ಹಿಂದಿನ ಸಾಹಿತ್ಯ ಯುಗವು ಸಂಪ್ರದಾಯಶರಣವಾಗಿ, ಅನುಕರಣ ಪ್ರಧಾನವಾಗಿ, ಪಾಂಡಿತ್ಯ ಪ್ರದರ್ಶಕವಾಗಿ, ರೂಢಿಬಂಧಿತವಾಗಿ, ವ್ಯಕ್ತಿತ್ವ ವಿಹೀನವಾಗಿ ಬರ್ನಾರ್ಡ್ ಷಾ ನ ಮಾತಿನಲ್ಲಿ ಹೇಳುವುದಾದರೆ 'A Store in which the very latest and most precious acquisitions are flung on top of a noisome heap of rug-and-bottle refuse and worthless antiquities from the museum lumber room' ಆಗಿದ್ದಿತು. ಈ ರೂಢಿವಾದಿ (Classical) ಯುಗದ ದೋಷಗಳನ್ನು ಸರ್ ವಾಲ್ಟರ್ ರಾಲೇಯವರ ಮಾತಿನಲ್ಲಿಯೇ ಕೇಳೋಣ. ಅಚಲತೆ (Fixity) ಹಾಗೂ ಅಂತಿಮತೆ (finality)ಗಳು ಈ ಯುಗದ ಕುಂದುಕೊರತೆಗಳು. Nature avenges herself on those who would thus make her prisoner, their truths degenerate into truisims, and feeling dies in the ice-palaces that they build to house it. In their search for permanence they become unreal, abstract, didactic, lovers of generalisation, cherishers of the dry bones of life: their art is transformed into a science, their expression into an academic terminology. Immutablity is their ideal and they find it is the arms of death'. ಇಂಥ ಯುಗ ಸಂಧಿಯಲ್ಲಿ ಹೊಸ ಯುಗದ ಕ್ರಾಂತಿ ಪುರುಷರಿಗಾಗಿ ಕಾಲವು ಕಾದಿರುತ್ತದೆ. 'The most significant feature in the history of an epoch is in the manner it has of welcoming a great man',[೨]

ಯುಗ ಪುರುಷನೂ ಹುಟ್ಟಿದನು. ಹೊಸ ಯುಗವೂ ಮೊಗವೆತ್ತಿತು. ಈ ಯುಗದ ಮನೋವೃತ್ತಿಗಳು. ಅಂತಃಪ್ರವಾಹಗಳು, ನುಡಿತ ಮಿಡಿತಗಳು. ಆಶೆ ಆಕಾಂಕ್ಷೆಗಳು, ಆದರ್ಶ ವೈಶಿಷ್ಟ್ಯಗಳನ್ನರಿಯದೇ ವಚನಕಾರರ ವ್ಯಕ್ತಿತ್ವ ವಿಕಾಸದ ತತ್ಫಲವಾದ ಅವರ ಶೈಲಿಯ ನಿರ್ಷರ್ಷೆಯಾಗದು. ವಚನ ಸಾಹಿತ್ಯದಲ್ಲಿ ನಮಗೆ ಮುಖ್ಯವಾಗಿ ತೋರುವುದು ಧರ್ಮಭಾವನೆ. ತದನಂತರ ತೋರುವುದು ವ್ಯಕ್ತಿ ಸ್ವಾತಂತ್ರ್ಯ: ಇವೆರಡರ ವಿವೇಚನೆ ಅವಶ್ಯ.

---

**೨. Carlyle, On Heroes and Hero Worship**

ವಚನಕಾರರು ಧರ್ಮಪ್ರಸಾರಕ್ಕಾಗಿ ವಚನ ಸಾಹಿತ್ಯವನ್ನು ಉಪಯೋಗಿಸಿ ಕೊಂಡರು. ಆದರೆ ಕೇವಲ ಧರ್ಮ ಪ್ರಸಾರವೇ ಚರಮಗಮ್ಯವಾಗಿರಲಿಲ್ಲ. ನೀತಿ ಪ್ರಸಾರ. ಲೋಕ ಶಿಕ್ಷಣ, ಜತೆಗೆ ತಮ್ಮ ಜೀವನ್ಮುಕ್ತಿ, ಅಂತರಂಗದ ಆವಿಷ್ಕರಣ. ಹೀಗೆ ವಚನ ಸಂಗೀತದಲ್ಲಿ ಬೇರೆ ಬೇರೆ ಸ್ವರಗಳೂ, ಬೇರೆ ಬೇರೆ ತಂತಿಗಳೂ ಕೂಡಿವೆ. ಅವರ ಧರ್ಮಾಭಿಮಾನವು ಮಾನವ ಪ್ರೇಮದಿಂದ ಪ್ರಚೋದಿತವಾದದ್ದು. ಅವರ ನೀತಿಬೋಧೆಯು, ಹೃದಯರಸದಿಂಧ ಕೂಡಿದ್ದು. ಅವರ ಅಂತರಂಗದ ಸಾಧನೆಯು ಶಿವಭಕ್ತಿಯಿಂದ ತುಂಬಿದ್ದು. ಒಬ್ಬೊಬ್ಬರೂ ತಮ್ಮ ತಮ್ಮ ಸಾಧನಾ ಮಾರ್ಗದಲ್ಲಿ ಸ್ವತಂತ್ರರು.

ಇಂದಿನ ಸಮಾಜವಾದಿ, ಸಾಮ್ಯವಾದಿ ಸಾಹಿತ್ಯದಲ್ಲಿಯೂ ವ್ಯಕ್ತಿತ್ವ ಪ್ರಾಧಾನ್ಯವು ಕಂಡುಬರುತ್ತಲಿದೆ. ಇದೂ ವ್ಯಕ್ತಿ ಯುಗವೇ. ಆದರೆ ಇಂದಿನ ವ್ಯಕ್ತಿವಾದಿ ವಿಚಾರಧಾರೆಯ ಹಿಂದೆ ನಮಗೆ ಕಂಡುಬರುವುವು ಅಸಂತೋಷ, ಅತೃಪ್ತಿ, ನಿರಾಶೆ, ವಿಲಾಸ, ಪರಾಜಯ ಭಾವಗಳು. ಇವು ಸಾಹಿತಿಯ ನಿಷ್ಕ್ರಿಯತೆ ಹಾಗೂ ಅಸಮಾಜಿಕತೆ, ಅವಿಧಾಯಕತ್ವಗಳಿಗೆ ಕಾರಣವಾಗಿವೆ. ಸಮಾಜ ಸಂಸ್ಕರಣದ ಭ್ರಮಜಾಲದಲ್ಲಿ ಸಾಹಿತಿಯು ಸಮಾಜದಿಂದ ತಾನೇ ದೂರ ಉಳಿದು ಅಚೇತನನಾಗುತ್ತಾನೆ. ಆದರೆ ವಚನಕಾರರು ಅಸಂತೋಷ ಅತೃಪ್ತಿಗಳಿಗೆ ಆಹುತಿಯಾದ ಅಸಾಮಾಜಿಕ, ನಿಷ್ಕ್ರಿಯ ವಿದ್ರೋಹಿ (rebels)ಗಳಲ್ಲ. ಅವರೆದುರು ಸರ್ವಾಂಗ ಸುಂದರವಾದ ಸಮಾಜ ರಚನೆಯೊಂದಿದೆ. ಅದರೊಡನೆ ಹೋಲಿಸಿ ನೋಡಿದಾಗ ಪ್ರಚಲಿತ ಸಮಾಜ ವ್ಯವಸ್ಥೆಯು ವಿದ್ರೂಪ. ವಿನಾಶಕಾರಕನಾಗಿ ತೋರುತ್ತಿದೆ. ಇದನ್ನು ನಿರ್ಮೂಲ ಮಾಡಿ ಹೊಸ ಸಮಾಜ ಮಂದಿರವನ್ನು ಕಟ್ಟುವ ಅಚಲ ಶ್ರದ್ಧೆ ಹಾಗೂ ಅಪಾರವಾದ ವಿಶ್ವಾಸ, ಆಶೆಗಳು ಅವರಿಗೆ ಶಕ್ತಿಯನ್ನು ತಂದುಕೊಟ್ಟಿವೆ. ಈ ಆದರ್ಶಕ್ಕೆ ಸಹಜವಾಗಿ, ಸುಲಭವಾಗಿ ಒಳಗಾಗದೇ ಪ್ರತಿಭಟಿಸುವ ಪತಿತ ಸಮಾಜವನ್ನು ಕಂಡು ಇವರು ರೊಚ್ಚಿಗೇಳುವದೂ ಉಂಟು. ಆದರೆ ಈ ರೊಚ್ಚಿಗೆ ಕಾರಣವಾದದ್ದು ಅಸಂತೋಷ, ಅತೃಪ್ತಿ, ನಿರಾಶೆ, ಪರಾಭವ ಭಾವಗಳಲ್ಲ. ಅವರ ಆಳವಾದ ಮಾನವ ಪ್ರೇಮ. ‘While relentless towards the follies and foibles of his contemporaries, her is yet solicitous of their salvation. He fears their fate but seeks to save them from ruin. A cynic can never be a saviour - Beneath the rind of occasional sternness ther must always be a core if compassion of a prophet or a saint is to succeed in his mission.’

ವಚನಕಾರರ ಧರ್ಮವು ಸಮಾಜ ಹಿತಕ್ಕೆ ಅಧೀನ, ಸಮಾಜವು ವ್ಯಕ್ತಿಹಿತಕ್ಕೆ ಅವಿರೋಧಿ, ವ್ಯಕ್ತಿಯು ಸಮಾಜ ನಿಯಮಕ್ಕೆ ಬದ್ಧ. No religion that ignores the social aspect of faith has any chance of survival’[೪] ಇದನ್ನರಿತ ವಚನಕಾರರು ಸಮಾಜ

ವ್ಯವಸ್ಥೆಗೆ ಮಹತ್ವಕೊಟ್ಟರು. ಸಮಾಜವು ವ್ಯಕ್ತಿ ವಿಕಾಸಕ್ಕೆ ಪ್ರತಿಬಂಧಕವಾಗದಂತೆಸಗಿದರು. ವ್ಯಕ್ತಿ ಸ್ವಾತಂತ್ರ್ಯವು ಉಚ್ಚಂಖಲ ವೃತ್ತಿಯಾಗದಂತೆ ಸಮಾಜ ನಿಯಮಕ್ಕೆ ಅಧೀನ ಮಾಡಿದರು. F faith and practice, personal benefit and social need'[೩] ಇವುಗಳ ಸಮತೂಕವನ್ನು ಸಾಧಿಸಿದ್ದೇ ವಚನಕಾರರ ಪ್ರಗತಿಶೀಲತೆಯ ನಿದರ್ಶನ. ರವೀಂದ್ರರು ಹೇಳುವುದೇನು? 'Religion inevitably concentrates itself on humanity, which illumines our reason, inspires our wisdom, stimulates our love, claims our intelligent service'[೩] ಅಥವಾ ಬೆಂಜಾಮಿನ್ ಕಿಡ್ಡರ ಈ ಉಕ್ತಿಯನ್ನು ಆಲಿಸಿ `.... a religion is a form of belief, providing an ultra-rational sanction for that large class of conduct in the, individual where his interest and the interests of the social organism are antagonistic, and by Which the former are rendred subordinate to the latter in the general interests of the evolution which the ace is undergoing'[೪] ವಚನಕಾರರ ವೈಯಕ್ತಿಕ ಅಭಿರುಚಿಗಳು ಸಮಾಜದ ಅಭೀಷ್ಟಕ್ಕೆಂದೂ ವಿರೋಧಿಗಳಾಗಲಿಲ್ಲ. ಪ್ರಭುದೇವರು ಆಲಿಸಿ, ತಿದ್ದಿ ಸಮ್ಮತಿಯನ್ನಿತ್ತ ಮೇಲೆಯೇ ವಚನಗಳು ಅಧಿಕೃತವಾಗಿ ಹೊರಬೀಳುತ್ತಿದ್ದವು. ಹೀಗೆ ತಿದ್ದುವಾಗ ಅನುಭವ ಮಂಟಪವು ಅನುಭವದ ಚರ್ಚೆ, ಸಂವಾದಗಳಿಂದ ಪ್ರಕಾಶಮಾನವಾಗುತ್ತಿದ್ದಿತು.

ಹೀಗೆ ವಚನ ಸಾಹಿತ್ಯವು ಸಮಕಾಲೀನ ಜೀವನದ ಸಂವೇದನೆ, ಸಂಚಲನೆಗಳ ಅಭಿವ್ಯಕ್ತಿಯಾಗಿ ಕನ್ನಡ ಸಾಹಿತ್ಯದ ಬಹುಭಾಗದಲ್ಲಿ ಕಂಡುಬರುವ ಸಮಕಾಲೀನ ಸತ್ಯ ಹಾಗೂ ಸಮಕಾಲೀನ ಜೀವನವನ್ನು ವಂಚಿಸಿ ಯಾವುದೋ ಒಂದು ಸಾಮಯಿಕ ವಸ್ತು, ಚರಿತ್ರೆಯನ್ನು ಛಾಯಾಗ್ರಹಣ ಯಂತ್ರದಂತೆ ಚಿತ್ರಿಸುವ ಪ್ರವೃತ್ತಿಯನ್ನು ಹೋಗಲಾಡಿಸಿಯೂ ಅನುಭಾವ ಪ್ರಧಾನವಾಗಿದೆ. ಧರ್ಮದ ಅಭಯವಾಣಿ, ಸಮಾಜದ ಸಮನ್ವಯಗೀತೆ. ವ್ಯಕ್ತಿಯ ಆತ್ಮಗೀತೆಗಳೊಡನೆ ಅನುಭಾವದ ಸ್ವರಸಂಗೀತವೂ ಸೇರಿದೆ. ಬಸವಯುಗದ ಸಾಮೂಹಿಕ ಚೇತನೆ, ಹಾಗೂ ಸಾಮೂಹಿಕ ಮನೋವೃತ್ತಿ, ಅಂತಃಪ್ರವೃತ್ತಿಗಳ ಆಳವಾದ ಪ್ರತಿಬಿಂಬವಾದಾಗ ವಚನ ಸಾಹಿತ್ಯ ಫ್ರಾನ್ಸಿನ ಆರಾಗಾಮ್, ಜೇಡ್, ಇಂಗ್ಲೆಂಡಿನ ಲಿವಿಸ್, ಅಡೆನ್, ಸ್ಪೆಂಡರರ ಸಮಾಜವಾದೀ ಯಥಾರ್ಥವಾದಕ್ಕೆ ಸಮೀಪವಾಗುತ್ತದೆ; ಧರ್ಮತತ್ವಗಳ ವಿವರಣೆಗೆ ಕೈ ಹಾಕಿದಾಗ 'ಎಲ್ಲ ಸಾಹಿತ್ಯವೂ ನೀತಿ ಹಾಗೂ ಧರ್ಮ ಪ್ರಚಾರಕ್ಕಾಗಿ' ಎಂಬ ಪ್ಲೇಟೋ ಹಾಗೂ ಇಂಗ್ಲೆಂಡಿನ Puritan

---

**೩. Pratt. The Religions Consciousness, White head, Religion in the Making, and The Religion of Man.**

**೪. B. Kidd, Social Evolution.**

ಕವಿಗಳ ಪರಂಪರೆಗೆ ಸೇರುತ್ತದೆ; ಆತ್ಮವಿಕಾಸಕ್ಕೆ ಸಾಧನವಾದಾಗ ಆದರ್ಶವಾದಿಯಾಗುತ್ತದೆ; ಸಮಾಜ ಸಂಸ್ಕರಣಕ್ಕೆ ಕೈ ಹಾಕಿದಾಗ ಮೂಲಪರಿವರ್ತನವಾದಿಯಾಗುತ್ತದೆ. ಈ ವಿವಿಧ ಉದ್ದೇಶಗಳ ಸಾಧನೆಯಲ್ಲಿ ವಚನಕಾರರು ತಮಗೆ ಗೊತ್ತಿಲ್ಲದಂತೆಯೇ ಇ.ಖಿ. ಹೆಲ್ಮನ ಚಿತ್ರ ಕಲ್ಪನಾವಾದ (Imagism) ಎಡ್ಗರ್ ಅಲನ್‌ಪೋ ಕ್ರೋಸೆರ ಅಭಿವ್ಯಂಜನಾವಾದ; ಬೋರೆಲಿಯರ, ವರ್ಲೆನ್, ರೆಂಬಾ, ರೋಜಿಟ ಮಾರಿಸ್, ಆಸ್ಕರ್ ವಾಯಿಲ್ಡ ಮತ್ತು ಹಾಪಕಿನ್ಸರ ಪ್ರತೀಕವಾದ; ಭವಿಷ್ಯವಾದ; ಹರ್ಬರ್ಟ ರೀಡ ಇತ್ಯಾದಿ ಜನರ ಅತಿವಸ್ತುವಾದ (Surrealism)ಇತ್ಯಾದಿ ಸಾಹಿತ್ಯ ರೂಪಗಳನ್ನು ಕೊಟ್ಟಿದ್ದಾರೆ. ಸೂಕ್ಷ್ಮವಾಗಿ ನೋಡುವವರಿಗೆ ಮೇಲಿನ ಎಲ್ಲ ವಾದಗಳಿಗೂ (Schools of Poetry) ಅನುಗುಣವಾದ ಉದಾಹರಣೆಗಳು ವಚನ ಸಾಹಿತ್ಯದಲ್ಲಿ ಸಿಕ್ಕುತ್ತವೆ. ಈ ವೈವಿಧ್ಯಮಯತೆಯೇ ವಚನಸಾಹಿತ್ಯದ ವೈಶಿಷ್ಟ್ಯವೆಂದು ಮೊದಲೇ ತಿಳಿಸಿದೆ. ಆದರೆ ಮೇಲಿನ ಎಲ್ಲ ವಾದಗಳನ್ನೂ ಎರಡು ಗುಂಪಿನಲ್ಲಿ ವಿಭಾಗಿಸಬಹುದು. (೧) ಆತ್ಮ ಪ್ರಧಾನ ಅಥವಾ ವ್ಯಕ್ತಿತ್ವ ಪ್ರಧಾನ (೨) ಪ್ರಕೃತಿ ಪ್ರಧಾನ ಅಥವಾ ಸೃಷ್ಟಿ ಪ್ರಧಾನ. K.T. Butlerg ರು1 ವಿಭಾಗಿಸಿದ Idealist, neo-idealist, romantic, neo-romantic, symbolist, ಪರಂಪರೆಗಳು ಮೊದಲನೆಯ ವಿಭಾಗಕ್ಕೂ, realist, neorealist, impressionist ಪರಂಪರೆಗಳು ಎರಡನೆಯ ವಿಭಾಗಕ್ಕೂ ಸೇರುವುದು. ವಚನಕಾರರು ಯಾವ ಗುಂಪಿಗೆ ಸೇರಿದವರು?

ವಚನಕಾರರ ಸಮಾಜಕ್ರಾಂತಿಯಿಂದ ಎಲ್ಲೆಡೆಯಲ್ಲಿಯೂ ಆತ್ಮನಿರ್ಬಂಧನ, ಶಕ್ತಿವಿಕಾಸ, ವ್ಯಕ್ತಿತ್ವ ವಿಕಾಸಕ್ಕೆ ಅನುಕೂಲ ವಾತಾವರಣವು ಉಂಟಾಗಿದ್ದಿತು. ಅಂತೆಯೇ ಎಲ್ಲ ವಚನಕಾರರೂ ಸಹಜವಾಗಿಯೇ ಆತ್ಮಶಕ್ತಿಯ ಸಾಕ್ಷಾತ್ಕಾರಕ್ಕಾಗಿ ಹಂಬಲಿಸಿದರು. ಆತ್ಮಶಕ್ತಿಯು ಪುಟಗೊಳ್ಳದ ಮೊದಲೇ ವಿಶ್ವವನ್ನು ನೋಡಿದಾಗ ಕವಿಗೆ ವ್ಯಕ್ತಿತ್ವವಿಲ್ಲ. ಆತ್ಮಶಕ್ತಿಯ ಸಾಕ್ಷಾತ್ಕಾರವಾದ ಮೇಲೆ ಜಗತ್ತನ್ನು ಅರಿಯಲಿಚ್ಛಿಸಿದರೆ ಅವನ ವ್ಯಕ್ತಿತ್ವವಾಣಿ ರೂಪಗೊಳ್ಳುತ್ತದೆ. ಕಾರಣ ವಚನಕಾರರು ಮೊದಲು ಆತ್ಮನಿವೇದನ, ಅಂತರಂಗದ ಆವಿಷ್ಕಾರಗಳ ಮೂಲಕ ಅಪರಿಮಿತ ಶಕ್ತಿವಿಕಾಸವನ್ನು ಪಡೆಯುತ್ತಾರೆ. ಅಲ್ಲಿ ಅವರ ವಚನಗಳು ವ್ಯಕ್ತಿತ್ವ ಪ್ರಧಾನವಾಗುತ್ತವೆ. ಇದಾದ ಮೇಲೆ ಅವರು ವಿಶ್ವವನ್ನು ನೋಡುತ್ತರೆ. ಆಗ ವಿಶ್ವದ ರಹಸ್ಯಗಳೆಲ್ಲವೂ, ಜೀವನದ ಸಮತೆ ವಿಷಮತೆಗಳೆಲ್ಲವೂ ಸಮಾಜದ ಸುಖ–ದುಃಖಗಳೆಲ್ಲವೂ ಅವರ ವಾಣಿಯಲ್ಲಿ ಕೇಂದ್ರೀಭೂತವಾಗಿ ಹಾಡುತ್ತವೆ. ಸೃಷ್ಟಿಯ ಸಂಗೀತವು ಒಂದು ಕಣದಲ್ಲಿಯೇ ಸ್ಪಂದಿತವಾಗತೊಡಗುತ್ತದೆ. ಅನುಭೂತಿಯು ಆತ್ಮಸೌಂದರ್ಯದ ಬೀಗದಕ್ಕೈ. ಅದನ್ನು ಪಡೆದು ಕವಿಯು ಆನಂದ ಕೇಳಿಯ ಆಮಂತ್ರಣವನ್ನು ಸ್ವೀಕರಿಸಲು ಸಮರ್ಥನಾಗುತ್ತಾನೆ. ಈ ಆತ್ಮಸೌಂದರ್ಯವು ಪ್ರಖರವಾಗಿ ಹೊರಹೊಮ್ಮಿದಾಗ ಕವಿಯು ತನ್ನಲ್ಲಿ ಸೀಮಿತನಾಗಿಯೂ ಅಸೀಮನಾಗುತ್ತಾನೆ. 'ನಾನು'

---

೫. **K.T. Butler, A History of French Literature.**

ಎಂಬುದು ಚಿರಂತನ ಭಾವನೆಗಳಲ್ಲಿ 'ಎಲ್ಲರ' ರೂಪಧರಿಸುತ್ತದೆ; ಮತ್ತು ಭಾವನೆಯ ವಿಶೇಷ ದೃಷ್ಟಿಬಿಂದುವಿನಲ್ಲಿ 'ಎಲ್ಲರ' ರೂಪಧರಿಸುತ್ತದೆ; ಮತ್ತು ಭಾವನೆಯ ವಿಶೇಷ ದೃಷ್ಟಿಬಿಂದುವಿನಲ್ಲಿ 'ಎಲ್ಲ' ಎಂಬುದು 'ನನ್ನ'ಲ್ಲಿ ಸಮಾವೇಶವಾಗುತ್ತದೆ. ಇದುವೇ ದೈವೀಕ್ಷಣ. ಇಲ್ಲಿ ಕವಿಯು ವಿಶ್ವದ ಪ್ರತಿನಿಧಿಯಾಗಿ ಹಾಡತೊಡಗುವನು – ವಿಶ್ವವು ಕವಿಯ ವಾಣಿಯಲ್ಲಿ ತನ್ನ ರಹಸ್ಯಗಳಿಗೆ ಅಭಿವ್ಯಕ್ತಿಯನ್ನು ಪಡೆಯುವುದು. ಆತ್ಮಾಭಿವ್ಯಕ್ತಿಯು ಆತ್ಮ ಸಮಾಜೀಕರಣದಲ್ಲಿ ಪರ್ಯವಸಾನವನ್ನು ಹೊಂದುವದು. ಆತ್ಮಾಭಿವ್ಯಕ್ತಿಯು ಆತ್ಮಸಮಾಜೀಕರಣದಲ್ಲಿ ಪರ್ಯವಸಾನವನ್ನು ಹೊಂದುವದು; ವ್ಯಕ್ತಿಗತ ಅನುಭವದಲ್ಲಿ ಸಮ್ಮಿಲಿತವಾಗುವದು. ಹೀಗೆ M. Franceರ ಮತದಂತೆ ಕಾವ್ಯವು ಕೇವಲ ಆತ್ಮಾಭಿವ್ಯಕ್ತಿಯಾಗಿಯೇ ಉಳಿಯದೆ (not self-expression nor self compression) ಅಥವಾ ಕವಿಯ ಮನಸ್ಸಿನ ಮೇಲೆ ಜಗತ್ತು ಉಂಟು ಮಾಡಿದ ಪ್ರಭಾವ impression) ಮಾತ್ರವಾಗಿರದೆ H.W. Ganrod ರು ಹೇಳುವಂತೆ '.... the prophesying soul of the great poet expresses, not itself, but the prophetic soul of the great world dreaming on things to come.' ವಚನಕಾರರೂ subjective ಆತ್ಮನಿವೇದನದಿಂದ objective ವಿಶ್ವದರ್ಶನವರೆಗೆ ಏರುತ್ತ ಹೋಗಿ ವಿಶ್ವಚೇತನೆಯ ಪ್ರತಿನಿಧಿಗಳಾಗುತ್ತಾರೆ. ಇಲ್ಲಿ ಕವಿಯ ಪರಿಸ್ಥಿತಿಯ (environment)ಯ ಸಂಬಂಧವಿಂತು' .... environment as acting not upon, but in and with, the poet-I concive the poet, not as having, but as being, his experience' ಆದ್ದರಿಂದಲೇ ಇಲ್ಲಿ expression ಮತ್ತು impressionಗಳಲ್ಲಿ ಭೇದವಿಲ್ಲ. 'the form and the matter of thought of imagination, one, not two things, but a single effect ಅಂತೆಯೇ 'the slowly self realising world - consciousness speaks in poetry' ಇದುವೇ ಕಾವ್ಯ ಸಮೀಕ್ಷೆಯ ಪ್ರಣಾಲಿ.

ಕಾವ್ಯವು ಕವಿಯ ಪ್ರತಿಭೆ, ದೃಷ್ಟಿ ಸೂಕ್ಷ್ಮತೆ, ತೀಕ್ಷ್ಣತೆ ತಾದಾತ್ಮ್ಯಗಳ ರಸಮಯ ಕಾರ್ಯ. ಅದು ಜೀವನಮಯ, ರಸಮಯವಾಗಿದ್ದಷ್ಟೂ ಅಧಿಕ ಕಾಲ ಬಾಳುವದು. ಎಷ್ಟು ಅಧಿಕ ಹೃದಯ, ಹೃದಯದ ಎಷ್ಟು ಅಧಿಕರಸ, ರಸೋತ್ಪನ್ನ ಎಷ್ಟು ಅಧಿಕ ಪ್ರಾಣವಿದೆಯೋ ಕಾವ್ಯವೂ ಅಷ್ಟೇ ದೀರ್ಘವ್ಯಾಪಿಯಾಗುವದು Impersonal ಕಾವ್ಯವು ಅಶಕ್ಯವೆಂದು ಒಪ್ಪಿಯೂ ಕವಿಯ ಭಾವನೆಗಳು, ವಿಚಾರಗಳು ವಿಶ್ವ ವ್ಯಪಿಯಾಗದಿದ್ದರೆ ಅವನಿಗೆ ಅಮರತ್ವವಿಲ್ಲ. '..... the complete realisation of universal significance in a personal and particular expression' ಇದನ್ನು ಸಾಧಿಸಿದಾಗ ಶೈಲಿ '.... through it the whole spectrum of his emotions is suddenly concentrated into a ray of intense, pure light-the perfect condensation of a whole universe of experience into a dozen lines'ಇದೀಗ ವಚನಕಾರರ ಶೈಲಿಯ

ಗುಟ್ಟು. ಇದನ್ನು ಸಂಕ್ಷಿಪ್ತವಾಗಿ ಹೀಗೆ ವಿವರಿಸಲಾಗಿದೆ. 'The highest sytle is a combination of the maximum of personality with the maximum of impersonality; on the one hand it is a concentration of pocullar and personal emotion, on the other it is a complete projection of this personal emotion into a created thing.... the expression that is inevitable and organic to an individual mode of experience.... it rises and falls in the scale of absolute perffection according as the whole of experience expressed is more or less significant and universal-more or less completely embraces, is more or less adequate to, the whole of our human universe... this is a style that is the very pinnacle of the pyramid of art'. ವಚನಕಾರರ ಶೈಲಿಯೂ ಕಲಾಮಂದಿರದ ಕಳಸ. ಯಾಕೆಂದರೆ Remy de Gourmont ಅವರ ಮಾತಿನಲ್ಲಿ ಅವರ ಪ್ರಯತ್ನವು 'was to erect their personal impressions into universal laws'. ಹೀಗೆ ಅವರ ಭಾವಗಳ, ವಿಚಾರಗಳ ಆಳ, ವೈವಿಧ್ಯ, ವೈಶಾಲ್ಯ (depth, variety and comprehensiveness)ಗಳ ಮೂಲಕ ವಚನಕಾರರ ಶೈಲಿಯೂ ಉನ್ನತೋನ್ನತವಾಯಿತು. ಆದರೆ Flaubert ನು ಹೇಳಿದಂತೆ 'the undertone of that deeper style which lies beneath the words themselves, is `the soul' which gives the words their being'.

ಇನ್ನೊಂದು ವಿಚಾರಿಸತಕ್ಕ ಅಂಶವು ಉಳಿಯಿತು. ವಚನ ಸಾಹಿತ್ಯವು ಹೃದಯ ಹಾಗೂ ಅನುಭಾವಗಳ ಸಂಗಮವೆಂದು ಹೇಳಿದೆ. ಇದರಲ್ಲಿ ತತ್ವ, ನೀತಿ ಪ್ರತಿಪಾದನೆ ಬಂದರೂ ಅವು 'are irradiated by imagination'. ಈ ಅನುಭಾವ ಪ್ರಧಾನ ಸಾಹಿತ್ಯದ ಲಕ್ಷಣಗಳೇನು? ಇಂದು ರಹಸ್ಯವಾದಿ (Mystic)ಯೆಂದು ಹೆಸರುಗೊಂಡಿರುವ ಸಾಹಿತ್ಯವೇ ಇದು ಅಹುದೆ?

ಎರಡರಲ್ಲಿಯೂ ಕೆಲವು ಸಾಮ್ಯಗಳಿವೆ. ವ್ಯತ್ಯಾಸವೂ ಇದೆ. ರಹಸ್ಯವಾದಿ, ವಚನಕಾರ, ಇಬ್ಬರ ಆತ್ಮದಲ್ಲಿಯೂ ವಿಶ್ವಾತ್ಮನ ಅನುಭೂತಿಯಿದೆ. ಅಂತರಂಗದಲ್ಲಿ ಆರಾಧ್ಯನನ್ನು ಹುಡುಕಲು ಸೂರ್ಯಕಿರಣಗಳಂತೆ ಸರ್ವತ್ರಗತಿ ಶೀಲರಾಗಿ ಇಬ್ಬರೂ ಸಪ್ತಾಕಾಶಗಳನ್ನು ಸಹ ದಾಟಲು ಹೋಗುತ್ತಾರೆ. 'ಅಷ್ಟಕೋಟಿ ರೋಮಂಗಳೆಲ್ಲ ಕಂಗಳಾಗಿ' ನೋಡುತ್ತಾರೆ. ಇಬ್ಬರಿಗೂ ಪ್ರೇಮವೊಂದೇ ಆಧಾರ– ಆರಾಧ್ಯನನ್ನೊಲಿಸಿಕೊಳ್ಳಲು, ಆತ್ಮ ಸಮರ್ಪಣ ಭಾವ ಇಬ್ಬರಲ್ಲಿಯೂ ನಿಖರವಾಗಿರುತ್ತದೆ. ಆದರೆ ರಹಸ್ಯವಾದಿಯು 'ಪ್ರೇಮದ ಪ್ರಾದುರ್ಭಾವವು ವಿವೇಕದಲ್ಲಿ ಅಲ್ಲ–ಭಾವದಲ್ಲಿ' ಎಂದು ವಾದಿಸಿ ಜ್ಞಾನವನ್ನು ನಿರಾಕರಿಸುತ್ತಾನೆ. ಮಾರಗರೆಟ್ ಸ್ಮಿಥ್ ಹೇಳುವುದೇನು? ಈ ಪ್ರೇಮ ಜೀವನದ ಮದಿರೆ.

ಇದರಲ್ಲಿ ಉಲ್ಲಾಸದ ನಿಶೆಯಿದೆ. ಯಾವನು ಇದನ್ನು ಕುಡಿಯುವನೋ ಅವನು ಸರ್ವ ಕೃತಕೃತ್ಯನು' ಪರಮಾತ್ಮನನ್ನು ಸುಮ್ಮನೇ ಪ್ರೀತಿಸಬೇಕು. 'ನಾಯಾಮಾತ್ಮಾ ಪ್ರವಚನೇನ ಲಭ್ಯೋನ ಮೇಧಯಾ ನ ಲಹುನಾ ಶ್ರುತೇನ' ಒಪ್ಪಿಗೆ. ಆದರೆ ಗಯಟ್‌ಯು ಹೇಳುವಂತೆ ಆ ಆತ್ಮನು ಎಷ್ಟು ದೊಡ್ಡವನೆಂದು ಸಹ ಅರಿಯದೇ ಆ ಹೆಸರನ್ನು ದಿನ ದಿನವೂ ಬಾಯಲ್ಲಿ ಹೇಳಿದರೆ ಅದೊಂದು ಬಂಜೆಯಾದ ಮಾತು. ವಚನಕಾರರು ಜ್ಞಾನವನ್ನು ತಿರಸ್ಕರಿಸಲಿಲ್ಲ. ಅನುಭಾವವು ಅರಿವಿಂಗಾಶ್ರಯವಾಯಿತು. ಭವ, ಅನುಭಾವಗಳ ಬೆರಕೆಯು ಬೇರೆ ಬೇರೆ ಪ್ರಮಾಣದಲ್ಲಿ ಕಂಡುಬರುತ್ತದೆ. ಇದಕ್ಕೆ ಕಾರಣ ಅವರ ಸ್ವತಂತ್ರ ಸಾಧನ ಮಾರ್ಗ. 'ಅಲ್ಲಮನ ಲಕ್ಷ್ಯ ವೈರಾಗ್ಯದಲ್ಲಿ. ಚೆನ್ನಬಸವನ ಲಕ್ಷ್ಯ ಕ್ರಿಯಾಜ್ಞಾನದಲ್ಲಿ. ಬಸವನ ಲಕ್ಷ್ಯ ಭಕ್ತಿಯಲ್ಲಿ, ಮಡಿವಾಳನ ಲಕ್ಷ್ಯ ಅಹಂಕಾರ ನಾಶದಲ್ಲಿ, ಸಕಳೇಶ್ವರನ ಲಕ್ಷ್ಯ ಸಮತೆಯಲ್ಲಿ – ಶಿವಯೋಗಿ ಸಿದ್ಧರಾಮನೆಂಬ ಬಾಲಕನ ಲಕ್ಷ್ಯ ಲಿಂಗಪೂಜೆಯಲ್ಲಿ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗವೆ.' ಇದರಂತೆಯೇ ಅಜಗಣ್ಣನ ಐಕ್ಯ. ನಿಜಗುಣನ ಆರೂಢ ಸ್ಥಲಗಳು ಪ್ರಸಿದ್ಧವಿವೆ. ಅಕ್ಕನ ಸಮರತಿಯ ಸರ್ವಶ್ರೇಷ್ಠವಿದೆ.

ಈ ಕೆಳಗಣ ವಚನಗಳಿಂದ ಅವರವರ ವ್ಯಕ್ತಿತ್ವವು ಸ್ಪಷ್ಟವಾಗುತ್ತದೆ. ಅದರಂತೆಯೇ ಅವರ ಶೈಲಿಯು ರೂಪುಗೊಂಡಿದೆ.

**ಅಲ್ಲಮ :** 'ಸಮತೆ ಎಂಬ ಕಂಥೆಯ ತೊಟ್ಟು, ಸುಬುದ್ಧಿ ಎಂಬ ಟೊಪ್ಪರವನಿಕ್ಕಿ. ವಿಷಯವೆಂಬ ಹಾವುಗೆಯ ಮೆಟ್ಟಿ, ತಮಂಧವೆಂಬ ಕುಳಿಯ ಬೀಳದೆ, ವೈರಾಗ್ಯವೆಂಬ ಕೊರಡನೆಡಹದೆ, ಮರವೆ ಎಂಬ ಚಳಮೆಟದೆ ಗುಹೇಶ್ವರನ ಶರಣ ಬಂದೆನು–ಭಕ್ತಿ ಭಿಕ್ಷಯನಿಕ್ಕು ಸಂಗನಬಸವಣ್ಣ'.

**ಬಸವ :** 'ಎನ್ನ ಕಾಯವ ದಂಡಿಗೆಯ ಮಾಡಯ್ಯ. ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ ನರವ ತಂತಿಯ ಮಾಡಯ್ಯ, ಎನ್ನ ಬೆರಳ ಕಡ್ಡಿಯ ಮಾಡಯ್ಯ, ಮುವತ್ತೆರಡು ರಾಗಗಳ ಹಾಡನ್ನು ಉರದಲೊತ್ತಿಬಾರಿಸು–ಕೂಡಲ ಸಂಗಮದೇವ...'

**ಸಿದ್ಧರಾಮ :** 'ಅಯ್ಯಾ ಮನದ ರಜದ ಮಣ್ಣ ಕಳೆದು ಶಾಂತಿಯ ಉದಕದಲ್ಲಿ ತೆಗೆವೆನಯ್ಯ. ಜಳಕವನೇ ಮಾಡಿ ಯೋಗ ಕಂಪನಿಕ್ಕಿ ಹೋದಿಹೆನಯ್ಯ. ಅದನೊಂದು ಎಡೆಗೆ ತಂದು ಒಟ್ಟಿ ಗಾಣದಲಿಕ್ಕಿ ಹಿಳಿವೆನಯ್ಯ. ಹಿಳಿದ ರಸದ ಕಂಪ ಕೊಡುವ ಒಡೆಯ ನೀನೆ ಕಪಿಲಸಿದ್ಧ.'

**ಚೆನ್ನಬಸವ :** ಕಾಯಪುರದಲ್ಲಿ ಮನವೆಂಬರಸು, ತ್ರಿಕರಣವೆಂಬ ಪ್ರಧಾನಿ, ವಶೀಕರಣವೆಂಬ ಶಾನಬೋವ, ಆಸೆರೋಷವೆಂಬ ದ್ವಾರಪಾಲಕರು, ತ್ರಿಮಲವೆಂಬ ಕೋಟೆ,

ಬಂಧಿಸುವ ಹಸಿವು, ತೃಷೆ, ವಿಷಯಾದಿಗಳ ಬೊಬ್ಬೆಯಬ್ಬರ, ಪಂಚೇಂದ್ರಿಯಂಗಳೆಂಬ ಕಾಹು, ಅರಿಷಡ್ವರ್ಗಾದಿಗಳ ಪೆರ್ಬಲ, ಸಂಚಲತೇಜಿ, ಅಷ್ಟಮದಗಳೆಂಟಾನೆ, ಮೊದಲ ನಾಯಕರಿಪ್ಪತ್ತೈದು ಮಂದಿ, ಪ್ರಜೆಪಸಾಯತರು ನೂರನಾಲ್ವತ್ತೆಂಟು... ಆ ಮುರಕ್ಕೆ ಅಧಿಪತಿಯಾಗಿ .... ಸುಚಿತ್ತ ಸುಬುದ್ಧಿ ಸುಮನ ಸುಜ್ಞಾನವೆಂಬ ನಾಲ್ವರು ತಳವಾರರು ಇದಿರೆನ್ನದೆ, ಅಲ್ಲಿ ಸ್ವೈವೆರಗಾದ ನಿಜಶರಣನಲ್ಲಿಯೆ ಸನ್ನಿಹಿತನವ್ವಾ ಕೂಡಲ ಚೆನ್ನಸಂಗಮದೇವ.'

**ಅಕ್ಕಮಹಾದೇವಿ :** 'ವನವೆಲ್ಲ ನೀವೇ. ವನದೊಳಗಣ ದೇವತರುವೆಲ್ಲ ನೀವೆ. ತರುವಿನೊಳಗಾಡುವ ಖಗಕುಲವೆಲ್ಲ ನೀವೆ. ಚೆನ್ನಮಲ್ಲಿಕಾರ್ಜುನಾ ಸರ್ವಭರಿತನಾಗಿ ಎನಗೆ ಮುಖದೋರ.'

**ಮಾಚಿದೇವ :** 'ತನುನಷ್ಟ, ಮನನಷ್ಟ, ನೆನಹುನಷ್ಟ, ಭಾವನಷ್ಟ, ಜ್ಞಾನನಷ್ಟ. ಇಂತೀ ಪಂಚನಷ್ಟದೊಳಗೆ ನಾ ನಷ್ಟವಾದೆನು. ಆ ನಷ್ಟದೊಳಗೆ ನೀ ನಷ್ಟವಾದೆ. ಕಲಿದೇವರದೇವಾ ಎಂಬ ನುಡಿ ನಿಃಶಬ್ದ ಬ್ರಹ್ಮಮುಚ್ಯತೇ ಎನುತಿದ್ದಿತು'.

**ಜೇಡರದಾಸಿಮಾಯ್ಯ :** 'ಹೂವಿನೊಳಗಣ ಕಂಪ ಹೊರ ಸೂಸಿ ಸುಳಿವ ಅನಿಲನಂತೆ, ಅಮೃತದೊಳಗಣ ರುಚಿಯ ನಾಲಿಗೆಯ ತುದಿಯಲ್ಲಿ ಅರಿವನ ಚೇತನದಂತೆ, ನಿಳವಿಲ್ಲದ ರೂಪ ಕಳೆಯಲ್ಲಿ ವೇಧಿಸುವವನ ಪರಿ ರಾಮನಾಥಾ'

**ಗಣೇಶಮಸಣಯ್ಯ :** 'ಮುನಿಸ ಮುನಿದಡೆ ಶ್ರೀಗಂಧದ ಮುರುಡಿನ ಹಾಗಿರಬೇಕವ್ವಾ. ತೆಗೆದಪ್ಪಿದಡೆ ಚಂದನದ ಶೀತಲದ ಹಾಗಾಗಬೇಕು. ಹೆಣಗುವಲ್ಲಿ ಮೈಯೆಲ್ಲ ಕೈಯಾಗಿ ಹೆಣಗಬೇಕವ್ವಾ. ಮಹಾಲಿಂಗ ಗಜೇಶ್ವರನ ನೆರೆವ ಭರದಿಂದ ನೊಂದು ಅಂಕದ ಮೇಲೆ ಬಿದ್ದಹಾಗಿರಬೇಕವ್ವಾ.'

**ಉರಿಲಿಂಗದೇವ :** 'ಇಂಬಿನ ಚುಂಬನವಮೃತಾಹಾರ, ಆಲಿಂಗನವೆ ಆಭರಣ, ಸೋಂಕೇ ಸುವಸ್ತು, ನೋಟವೇ ಕೂಟ, ಒಡನಾಟವೇ ಅಷ್ಟಭೋಗವೆನಗೆ. ಉರಿಲಿಂಗದೇವನ ಕೂಟ ಪರಾಪರವಾಙ್ಮನಾತೀತಿ ಪರಮ ಸುಖವು'.

**ಸತ್ಯಕ್ಕ :** 'ಈ ನನಗೆ ತವಕವಿಲ್ಲ. ಎನಗೆ ಸೈರಣೆಯಿಲ್ಲ. ಮನದಿಚ್ಛೆಯನರಿವ ಸಖಿಯರಿಲ್ಲ. ಇನ್ನೇನವ್ವಾ! ಮನ್ಮಥ ವೈರಿಯ ಅನುಭಾವದಲ್ಲಿ ಎನ್ನ ಮನ ಸಿಲುಕಿ ಬಿಡದು. ಇನ್ನೇವೆ? ದಿನ ವ್ರಥಾ ಹೋಗದೆ? ಯೌವನ ಬೀಸರವೋಗದೆ?'

**ಮುಕ್ತಾಯಕ್ಕ :** 'ಆರೆಂದು ಕುರುಹ ಬೆಸಗೊಳಲು ಏನೆಂದು ಹೇಳುವೆನಯ್ಯ? ಕಾಯದೊಳಗೆ ಮಾಯವಿಲ್ಲ. ಭಾವದೊಳಗೆ ಭ್ರಮೆಯಿಲ್ಲ. ಕರೆದು ಬೆಸಗೊಂಬರೆ ಕುರುಹಿಲ್ಲ. ಒಬ್ಬರಿಗು ಹುಟ್ಟಿದೆ, ಆಯೋನಿಯೊಳು ಬಂದು ದುರ್ಬುದ್ಧಿಯಾದವಳನೇನೆಂಬೆನಣ್ಣಾ? ತಲೆಯುಳಿದು ತಲೆಗೆಟ್ಟು ಬೆಳಗುವ ಜ್ಯೋತಿ ಎನ್ನ ಅಜಗಣ್ಣ ತಂದೆಯ ಬಳಿಯವಳು ನೀನಾರಣ್ಣ?'

**ಲಕ್ಕಮ್ಮ :** 'ಒಮ್ಮನವ ತಂದು ಒಮ್ಮನದಲ್ಲಿಯೆ ಮಾಡಿ, ಇಮ್ಮನವಾಗದ ಮುನ್ನವೆ ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗಕ್ಕೆ ಸಲ್ಲಬೇಕು. ಮಾರಯ್ಯ'.

ಹೀಗೆ ಎಲ್ಲ ವಚನಕಾರರ ವ್ಯಕ್ತಿತ್ವವನ್ನೂ ಅವರವರ ವಚನಗಳಿಂದ ಸುಲಭವಾಗಿಯೇ ಅರಿಯಬಹುದು. ಎಲ್ಲರೂ ಸತ್ಯಶೋಧನೆಗಾಗಿ ಹೊರಟವರು, ಅವರವರ ಯೋಗ್ಯತೆಗನುಗುಣವಾಗಿ ಬೇರೆ ಬೇರೆ ಮಾರ್ಗಗಳನ್ನನುಸರಿಸಿ ನಡೆದರು. ಈ ಮಾರ್ಗಭಿನ್ನತೆಯಲ್ಲಿಯೇ ಅವರ ದೃಷ್ಟಿಭಿನ್ನತೆ ಹಾಗೂ ಅವರ ಶೈಲಿಭಿನ್ನತೆಯ ರಹಸ್ಯವಿದೆ. ಇದನ್ನೇ ಮಿಡಲ್‌ಟನ್ ಮರೇನು 'Individual mode of emotional or intellectual experience' ಎಂದು ಕರೆದಿರುವನು. ಈ 'Originating emotion' ಇದೇ ಭಾಷೆಯಲ್ಲಿಯೇ ವ್ಯಕ್ತವಾಗುವುದು ಸಾಧ್ಯವೆಂದು ನಮಗೆನಿಸುವುದು. ಬರೆಹಗಾರನು ಈ 'compelling language to conform to his mode of experience' ಈ ಕಾರ್ಯದಲ್ಲಿ ಎಷ್ಟು ಜಯಶಾಲಿಯಾಗುವನೋ ಅಷ್ಟೆ ಅವನ ಶೈಲಿಯೂ ಸುಸ್ಪಷ್ಟವಾಗುವುದು. ಈ ಭಾಷೆಯ ಮೇಲೆ ಅವರಿಗೆ ದೊರೆತ ವಿಜಯವನ್ನು ತೋರುವ ಮೊದಲು ಇದುವರೆಗೆ ಅಸ್ತವ್ಯಸ್ತವಾಗಿ ವಿವರಿಸಿದ ವಿಷಯುಗಳ ಸಾರವನ್ನಿಂತು ಸಂಗ್ರಹಿಸಬಹುದು. 'ಮತಸಂಬಂಧವಾದ ವಿಷಯವು ಕುಶಲಕಲೆಗೆ ಯೋಗ್ಯವಾದ ವಸ್ತುವಾಗಬೇಕಾದರೆ ಅದರಲ್ಲಿ ಸರ್ವರನ್ನೂ ಆಕರ್ಷಿಸುವ ಸರ್ವಮಾನವ ತತ್ವವಿರಬೇಕು' ಎಂದು ಗಯಟೆಯ ಅಭಿಪ್ರಾಯ. ವಚನಕಾರರ ಮತವೂ ವಿಶ್ವವ್ಯಾಪಿಯಾದ ಸರ್ವಸಾಮಾನ್ಯ ತತ್ವಗಳನ್ನೇ ಪ್ರತಿಪಾದಿಸುತ್ತದೆ. ಇವರ ನೀತಿಬೋಧೆಯು The hammer-blows of affirmation' ಅಲ್ಲ–ಹೃದಯಕ್ಕೆ ಹೇಳುವ ಸದಯತೆಯ ಸವಿ ಮಾತು; ಅದು ಕಲ್ಪನೆಯಿಂದ ಕೂಡಿ ಕಮನೀಯವಾಗಿದೆ. ವಚನ ಸಾಹಿತ್ಯವು ವಿಶ್ವದ ಪ್ರತಿನಿಧಿಯಾಗಿಯೂ ವ್ಯಕ್ತಿತ್ವ ಪ್ರಧಾನವಾಗಿದೆ – ಆತ್ಮಾಭಿವ್ಯಕ್ತಿಯಲ್ಲಿ ವಿಶ್ವ ರಹಸ್ಯ ವ್ಯಕ್ತಿಯನ್ನು ಸಾಧಿಸಿ ವಿಶ್ವ ಸಾಹಿತ್ಯವಾಗಿದೆ. ಸಮಾಜ ಸಂಸ್ಕರಣಕ್ಕೆ ಕೈ ಹಾಕಿ ತನ್ನ `Mellow, infinitely tolerant humanity'ಯಿಂದ ಸಹಜವಾಗಿ ಆಕರ್ಷಕ ಹಾಗೂ ಜ್ಯೋತಿರ್ಮಯವಾಗಿದೆ. ಭಾವನೆಯ ಪುಷ್ಪದಲ್ಲಿ ಅನುಭಾವದ ಸುಗಂಧವನ್ನು ಸೇರಿಸಿ ನಿತಾಂತಸುಂದರವಾಗಿದೆ. ಆತ್ಮವಿಕಾಸ ಸಾಧನದಲ್ಲಿ ವಸ್ತುವಿನೊಂದಿಗೆ ತದೇಕಚಿತ್ತನಾಗಲು ಭಕ್ತಿ–ಸತಿಪತಿಭಾವದ ಪ್ರೇಮವನ್ನೇ ಆಶ್ರಯಿಸಿದ್ದರೂ 'ಅನುಭವವಿಲ್ಲದ ಭಕ್ತಿ' ಅರಿವಿಂಗೆಬಾರದು', ಅನುಭಾವವಿಲ್ಲದ ಸಂಗ ಸಮರಸಕ್ಕೆ ನಿಲುಕದು –

ಅನುಭಾವೆಂಬುದು ಅಂತರಂಗದ ರತ್ನ – ಅದು 'ತಾನಾರೆಂಬುದು ತೋರುವದು, ನಿಜನಿವಾಸದಲ್ಲಿರಿಸುವದು' ಎಂದು ತಿಳಿದಿದ್ದರು. ಅದರಂತೆ ತಮ್ಮ ಜೀವನವನ್ನು ಉದಾತ್ತವಾಗಿ ಮಾಡಿಕೊಂಡರು. ಗಯಟೆ ಹೇಳುವಂತೆ ಶೈಲಿ ಉದಾತ್ತವಾಗಬೇಕಾದರೆ ಜೀವನ ಉದಾತ್ತವಾಗಲೇಬೇಕು. ಹೀಗೆ ವಚನ ಸಾಹಿತ್ಯವು 'the union of vivid definite presentment with immense reac of metaphysical suggestion seems to intertwine the roots of the universe with the particular fact. Tempting the mind to explore the other side of the idea presented to it. the side turned away from it, and held by something behind'. ಶರಣರು ಸತ್ಯವನ್ನು ಕಂಡುಹಿಡಿಯುವ ರೀತಿಯದು. 'The reality is unitary and divine that ordinary experience is merely phenomenal, its content only imperfectly known; that its limitation and contradictions are transcended in true knowledge; that is such a knowledge of the soul. Which is the key to reality, rises to identity with God and infinite vision; that the Divine presence may be found hidden in the midst of daily life...' ಇದೀಗ ವಚನಕಾರರ ಶೈಲಿಯ ಅಂತರಂಗ ಸೌಂದರ್ಯದ ಬಗೆಗೆ ನನಗೆ ತಿಳಿದಿರುವ ಎಲ್ಲವನ್ನೂ ಹೇಳಿದಂತಾಯಿತು. ಇನ್ನೊಂದೇ ಮಾತು. ಈ ಅನುಭಾವವು ಎಲ್ಲವನ್ನೂ ಹೇಳಿದಂತಾಯಿತು. ಇನ್ನೊಂದೇ ಮಾತು. ಈ ಅನುಭಾವವು ಎಲ್ಲವನ್ನೂ ಕೆಳಗೊತ್ತಿ ತಾನೇ ತಾನಾದರೆ ಅದು ಸಾಹಿತ್ಯವೆ? ಅತ್ಯಂತ ಮಹತ್ವದ ಗುಟ್ಟು ಇಲ್ಲಿದೆ. ವಚನ ಸಾಹಿತ್ಯದಲ್ಲಿ 'the emotion and the knowledge conveyed are as delicate as a theread of gold.' ಇದೇ ಶೈಲಿ. ಇಲ್ಲಿಯೇ ವಚನಗಳನ್ನು ಕುರಿತು :

'To see a world in a grain of sand
And a heaven in a wild flower,
Hold infinity in thepalm of your hand
And eternity in an hour?'
ಎಂದು ಆಶ್ಚರ್ಯಪಡಬೇಕಾಗುತ್ತದೆ.

# ೧೨

# ಬಸವಣ್ಣನವರ ವಾಕ್-ಪರುಷ

ಬಸವಣ್ಣನವರ ವಚನಗಳು ಅವರ ಮಾತಿನಲ್ಲಿಯೇ ಹೇಳುವುದಾದರೆ 'ಲಿಂಗವಶದಿಂದ ಬಂದ ನುಡಿಗಳು', 'ಸಮಸ್ತ ಕತ್ತಲೆಯ ಮಸಕ ಕಳೆದಿಪ್ಪ' ಅವರ ಇರವು 'ಬೆಳಗಿಂಗೆ-ಬೆಳಗು' ಸಿಂಹಾಸನವಾಗಿ, ಬೆಳಗು ಬೆಳಗ ಕೂಡಿದ ಕೂಟವನ್ನು, 'ತಾಳಮನ ಸರಿಸಮ' ನರಿಯದೆ, 'ಓಜೆ ಬಜಾವಣಿಯ ಲೆಕ್ಕವ' ನರಿಯದೆ, 'ನಿರಂತರ ಹಾಡಿ ಹಾಡಿ - ನಿಷ್ಪತ್ತಿಯೆಂಬ ಹಣ್ಣಾಗಿ ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ.'

ಹೀಗೆ ಆದರ್ಶಕ್ಕೆ ಅರ್ಪಿತವಾಗಿದ್ದ ಅವರ ಬಾಳು ಸೈಪಿನ ಬೀಣೆಯಾಗಿ ನುಡಿಯಿತು. ಅವರ ಕಾಯ, ಮನ, ಪ್ರಾಣಗಳು ಹೋಗುತ್ತ ಬರುತ್ತ ಕೊಯ್ಯುವ ಗರಗಸದಂತಿರುವ, 'ಬಾಳ ಬಾಯಿ ಧಾರೆ'ಯೆಂತಿರುವ ಭಕ್ತಿಯ ಭಟ್ಟಿಯಲ್ಲಿ ಸುಟ ಶುದ್ಧವಾಗಿ ಅವರ ದೇಹವೇ ದೇವ ದೇವನ ವೀಣೆಯಾಗಿ ಬಿಟ್ಟಿತು. ಅದೆಂಥ ವಿಸ್ಮಯಕರ ವೀಣೆ!?

'ಎನ್ನ ಕಾಯವ ದಂಡಿಗೆಯ ಮಾಡಯ್ಯಾ;
ಎನ್ನ ಶಿರವ ಸೋರೆಯ ಮಾಡಯ್ಯಾ;
ಎನ್ನ ನರವ ತಂತಿಯ ಮಾಡಯ್ಯಾ;
ಎನ್ನ ಬೆರಳ ಕಡ್ಡಿಯ ಮಾಡಯ್ಯಾ!
ಬತ್ತೀಸ ರಾಗವ ಹಾಡಯ್ಯಾ; ಉರದಲೊತ್ತಿ ಬಾರಿಸು,
ಕೂಡಲ ಸಂಗಮದೇವಾ!'

ನನ್ನನ್ನು ನಿನ್ನ ವೇಣುವನ್ನಾಗಿ ಮಾಡಿಕೊಳ್ಳೆಂದು ಕವೀಂದ್ರ ರವೀಂದ್ರರು ಕೋರಿದರು; ನನ್ನನ್ನು ನಿನ್ನ ವೀಣೆಯನ್ನಾಗಿ ಮಾಡಿಕೊಳ್ಳೆಂದು 'ಶರಣ ಸರೋಜಸಂಕುಳಸಹಸ್ರಕರ' ಬಸವಣ್ಣನವರು ಬೇಡಿಕೊಂಡರು. ಭಗವಂತನೇ ಮಿಡಿದ ಅವರ ದೇಹವೀಣೆಯ ತಂತಿಗಳಿಂದ ಅದೆಂಥ ದಿವ್ಯ ಸ್ವರ ಹೊರ ಹೊಮ್ಮಿತೆಂಬುದಕ್ಕೆ ಅವರ ವಚನಗಳು ನಿದರ್ಶನವಾಗಿ ನಿಂತಿವೆ.

ಅವರ ಪರುಷದೃಷ್ಟಿಗೆ ಬಿದ್ದ ಪದಾರ್ಥವೆಲ್ಲ ಅಪರಂಜಿಯಾಯಿತು. ಪ್ರಾಣಿಗಳು, ಪಕ್ಷಿಗಳು, ಪತಿತರು, ಪದಹತರು, ಹೆಂಗಳೆಯರು, ಕಾಯಕಗಳು, ಅನ್ನ, ನೀರು, ವಸ್ತ್ರ ಎಲ್ಲ ಅವರ ವಚನಗಂಗೆಯಲ್ಲಿ ಮಿಂದು, ಮಡಿಯಾದುವು. ಅದೆಂಥ ಅಪಾರವಾದ ಅನುಕಂಪ ತುಂಬಿದ್ದಿತು. ಅವರ ಎದೆಯಲ್ಲಿ! ಅದೆಂಥ ವಿಶ್ವಾನುಭೂತಿ ಉಸಿರಾಡಿಸುತ್ತಿದ್ದಿತು ಅವರ ರೋಮ ರೋಮದಲ್ಲಿ! ಅಷ್ಟಕೋಟಿ ರೋಮಂಗಳೆಲ್ಲ ಕಂಗಳಾಗಿ' ಕೂಡಲ ಸಂಗನನ್ನು ಕಾಣಲೆಳಸಿದ ಅವರ ಕಣ್ಣಿಗೆ ಸರ್ವವೂ ಶಿವಮಯವಾಗಿ ಕಂಡಿದ್ದರೆ ಅದರಲ್ಲಿ ಅಚ್ಚರಿಯೇನು?

ವಿಶ್ವದ ಆತ್ಮೀಕರಣವನ್ನು ಅಳವಡಿಸಿಕೊಂಡಿದ್ದ ಅವರ ವಚನಗಳಲ್ಲಿ ಅಭಿವ್ಯಕ್ತವಾಗಿರುವ ಅನುಭವಾದ ಅನಂತ ಮುಖಗಳನ್ನು, ವಾಕ್ಯ ರಚನಾ ವಿನ್ಯಾಸಗಳನ್ನು, ಪದಪ್ರಯೋಗಪ್ರಾವೀಣ್ಯವನ್ನು, ಸಾಮತಿ ಸಾದೃಶ್ಯಾದಿಗಳ ಸೌಂದರ್ಯವನ್ನು, ಪ್ರಾಣಿ ರೂಪಕಗಳ ರಮಣೀಯತೆಯನ್ನು, ಭಾಷೆಯ ಸರಳತೆ ಸುಭಗತೆಗಳನ್ನು ಬಿಡಿಬಿಡಿಯಾಗಿ ವಿವರಿಸುತ್ತಾ ಹೋದರೆ ಹೆಬ್ಬೊತ್ತಗೆಯೊಂದು ಸಿದ್ಧವಾದೀತು. ಆದುದರಿಂದ ಇಲ್ಲಿ ಒಂದೆರಡು ಅಂಶಗಳನಷ್ಟೇ ಅವಲೋಕಿಸೋಣ.

ದೇಹವು ವೀಣೆಯಾಗಿ ಅವರ ಕಣ್ಣಿಗೆ ಕಂಡಂತೆ ಚಿಂತಿತ ವಿಷಯ ಸನ್ನಿಹಿತ ಸಂದರ್ಭಗಳಿಗನುಗುಣವಾಗಿ ಬೇರೆ ರೂಪಗಳಲ್ಲಿಯೂ ಕಾಣಿಸಿಕೊಂಡಿತು. ದೇಹದ ಕಶ್ಮಲತೆ, ನಶ್ವರತೆಗಳನ್ನು ಕಂಡು ಬಣ್ಣಿಸಿದವರಿಗೆ ಕೊರತೆಯಿಲ್ಲ. ಆದರೆ ಕಸವನ್ನು ರಸವನ್ನಾಗಿ ಮಾರ್ಪಡಿಸಿದ ಬಸವಣ್ಣನವರು ಅದರ ಅನಿತ್ಯತೆ ಅಗಾಧತೆಗಳೆರಡನ್ನೂ ಗುರುತಿಸಿ ಅನನುಕರಣೀಯವಾಗಿ ಬಣ್ಣಿಸಿದ್ದಾರೆ. ಅವರ ವಾಸ್ತವಿಕ ದೃಷ್ಟಿಗೆ ದೇಹವೊಂದು ಹಾವಿನ ಬುಟ್ಟಿಯಾಗಿ ಕಾಣಿಸಿತು. 'ಮನವೇ ಸರ್ಪ, ತನುವೇ ಹೇಳಿಗೆ! ಹಾವಿನೊಡತಣ ಹುದುವಾಳಿಗೆ! ಇನ್ನಾವಾಗ ಕೊಂದಹುದೆಂದರಿಯೇ; ಇನ್ನಾವಾಗ ತಿಂದುಹುದೆಂದರಿಯೆ!' ಇದೆಂಥ ಹಾವು, ಇದೆಂಥ ಹೇಳಿಗೆ! ಈ ಹಾವಿನ ವಿಷಕ್ಕೆ ಔಷಧವೇ ಇಲ್ಲವೇ? ಇದೆ : 'ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲೊಡೆ ಅದೇ ಗಾರುಡ, ಕೂಡಲ ಸಂಗಮದೇವ!'

'ಅದೋ ವಿಷ. ಇದೋ ಔಷಧ, ಅಂಜದಿರು, ನೆರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ, ಅನ್ಯರಿಗೆ ಹಂಗಾಗದ ಮುನ್ನ, ಕಾಲ ಮೇಲೆ ಕೈಯನೂರಿ ಕೋಲ ಹಿಡಿಯದ ಮುನ್ನ, ಮುಪ್ಪಿನಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ, ಪೂಜಿಸು ನಮ್ಮ ಕೂಡಲಸಂಗಮದೇವನ' ಎಂದು ಎಚ್ಚರಿಸಿ ಅಭಯವಿತ್ತರು. ಇದಕ್ಕಿಂತ ಚೆನ್ನಾಗಿ ಇನ್ನಾರು ಎಚ್ಚರಿಸಿ ಅಭಯವಿತ್ತಾರು?

ಹೀಗಿದ್ದೂ 'ದೇಹೋಹಂ' ಎಂಬ ಭಾವನೆಯಿಂದ ಭ್ರಮಿತರಾಗಿ ದೇಹವನ್ನೇ ನೆಚ್ಚ ಕುಳಿತುಕೊಳ್ಳುವವರಿಗೇನೆನ್ನಬೇಕು? ಅರಿತ ಶರಣರಲ್ಲ, ಮರೆತ ಮಾನವರೆನ್ನಬೇಕು. ಅಷ್ಟೇ. ಅರಿತು ಶರಣರಾದ ಬಸವಣ್ಣನವರು ಈ ತನುಭಾವದ ನಟನೆಯ ನಿಜಸ್ವರೂಪವನ್ನು ಗುರುತಿಸಿ ವಿವರಿಸಿರುವುದು ಹೀಗೆ:

'ಸಂಜೆಯ ಮಂಜಿನ ಕಪ್ಪು, ಅಂಜಿದೊಡೆ ಶಂಕೆ ತದ್ರೂಪವಾಗಿ
ನಿಂದಿತ್ತು!
ತನುಭಾವದ ನಟನೆ ನಡೆವನ್ನಕ್ಕರ ನಡೆಯಿತ್ತು;
ಅದು ನಿಂದಲ್ಲಿಯೇ ನಿಂದಿತ್ತು! ಅದರಂತುವನರಿದಡೆ
ಹಿಂದೆ ಹುಡಿ, ಮುಂದೆ ಕೂಡಲಸಂಗಮ ದೇವರ ನಿಲವು ತಾನೆ!'

ಇದು ಅದರ ನಿಜಸ್ವರೂಪವಾದರೂ ಇರುವವರೆಗೆ ಅದೇ ಮನೆಯಲ್ಲವೆ ಆತ್ಮನಿಗೆ? ಮನೆಯನ್ನೇ ತೊರೆದು ಇರಲಿಕ್ಕಾಗುವುದೆ? ಇಲ್ಲ. ಆದರೆ ಮನೆಯಿರುವಲ್ಲೆಲ್ಲ ಮನೆಯೊಡೆಯನೂ ಇರುವನೆಂಬ ನಿಯಮವಿಲ್ಲ; ಮನೆಯಿದ್ದೂ ಮನೆಯೊಡೆಯನಿಲ್ಲದಂತಾದರೆ ಮನೆಗಾವ ಮನ್ನಣೆ, ಮರ್ಯಾದೆ?

'ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೆಯೋ ಇಲ್ಲವೋ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ
ಕೂಡಲಸಂಗಮದೇವಾ.'

ಹುಸಿ ವಿಷಯಗಳೆಂಬ ಹುಲ್ಲು ರಜಗಳು ತುಂಬಿದರೆ ಈ ತನುವಿನ ಮನೆಯಲ್ಲಿ ಮನೆಯೊಡೆಯನಿಲ್ಲವೆಂದೇ ಹೇಳಬೇಕು. ಈ ಮನೆ ಮಲಿನವಾಗದಿರಲಿ, ಚೊಕ್ಕಟವಾಗಿರಲಿ ಎಂದು ಎಚ್ಚರಿಸುತ್ತಾರೆ. ಬಸವಣ್ಣನವರು. 'ಕೆಡುವೊಡಲ ನೆಚ್ಚಿ, ಕಡು ಹುಸಿಯಿನೆ ಹುಸಿದು, ಒಡಲ ಹೊರೆ'ವವರಿಗಾಗಿಯಲ್ಲ, 'ಹಸಿದು ಎಕ್ಕೆಯ ಕಾಯಿ ಮೆಲೊಲುವ'ರಿಗಾಗಿಯಲ್ಲ. 'ಬೆರಣಿಯ ನಾಯಲಲ್ಲದೆ ಅಟ್ಟುಣ್ಣಲು ತೆರಹಿಲ್ಲ'ದವರಿಗಾಗಿಯಲ್ಲ, 'ಹೊತ್ತಿಗೊಂದು ಪರಿಯಪ್ಪ ಗೋಸುಂಬೆ'ಯಂತಹರಿಗಲ್ಲ. ಬಾಳುವೆಣ, ಬೀಳುವೆಣ, ನಡೆವೆಣ, ನುಡಿವೆಣಗಳಿಗಾಗಿಯಲ್ಲ ಈ ಎಚ್ಚರಿಕೆ – ಲೇಸೆನಿಸಿಕೊಂಡು ಒಂದು ದಿನವಾದರೂ ಬದುಕಿದರೆ ಸಾಕೆಂಬ ಹಿರಿಯ ಗುರಿಯುಳ್ಳವರಿಗಾಗಿ, ಬಹಳಕಾಲ ಬದುಕುವುದೆ ಬಾಳ್ವೆಯಲ್ಲ.

'ಹಾವು ಹದ್ದು, ಕಾಗೆ ಅನಂತಕಾಲ ಬದುಕವೆ? ಬೇಡವೋ, ಮಾನವ, ಲೇಸೆನೆನಿಸಿಕೊಂಡು ಬದುಕೆಲೋ ಮಾನವಾ!' ಇದಕ್ಕಾಗಿ ಮನೆಯನ್ನು ಮೊದಲು ಸ್ವಚ್ಛಗೊಳಿಸೋ ಮಾನವಾ!

ಮನೆ ಮಲವಿರಹಿತವಾಗಿದ್ದರೆ ಮನೆಯೊಡೆಯನು ಬಂದೇ ಬರುವನು, ಮನದನ್ನನು ತಾನಾಗಿಯೇ ಹಿಂದಿರುಗುವನು. ಹೀಗೆ:

ಎನ್ನ ಗಂಡ ಬರಬೇಕೆಂದು ಎನ್ನಂತರಂಗವೆಂಬ
ಓವರಿಯೊಳಗೆ ನಿಜ ನಿವಾಸವೆಂಬ ಹಾಸುಗೆಯ ಹಾಸಿ,
ಧ್ಯಾನ ಮೌನವೆಂಬ ಮೇಲು ಕಟ್ಟೆ ಕಟ್ಟಿ
ಜ್ಞಾನವೆಂಬ ದೀಪವ ಬೆಳಗಿ, ನಿಷ್ಕ್ರಿಯೆಗಳೆಂಬುಪ
ಕರಣಗಳ ಹರಹಿಕೊಂಡು ಪಶ್ಚಿಮ ದ್ವಾರವೇಂಬ
ಬಾಗಿಲ ತೆರೆದು, ಕಂಗಳೇ ಪ್ರಾಣವಾಗಿ
ಹಾರುತಿರ್ದೆನಯ್ಯಾ! ಎನ್ನ ಮನದ ಬಯಕೆ
ಸಮನಾಗಿತ್ತು'

ಬಂದೇ ಬರುತ್ತಾನೆ. ಮನೆಯೊಡೆಯ ಮನೆಗೆ ನಿಶ್ಚಯವಾಗಿ ಬರುತ್ತಾನೆ ನೈರ್ಮಲ್ಯವಿದ್ದರೆ ಮೊದಮೊದಲು.

ಬೆದರಿಸುವ, ಬೆಚ್ಚಿಸುವ, ಮುಯ್ಯಾನುವ,
ಮೇಳವಾಡುವ, ಅಳಿಗೊಳಿಸುವ, ಬಳಲಿಸುವ,
ಒತ್ತಿ ನೋಡುವ, ಒಳ ಹೊರಗೆ ಹೊಳೆದು ಹೋಹ,
ಬೇಳುಮಾಡುವ, ನೀಳವಾಡುವ, ಹೊಳೆದು ಹೋಹ.'

ಇದಕ್ಕಂಜದೆ ಮನೆಯನ್ನು ಶುಚಿಗೊಳಿಸಿ ಕಾದಿದ್ದರೆ, ಹುತ್ತವ ಕಂಡಲ್ಲಿ ಹಾವಾಗಿ ನೀರ ಕಂಡಲ್ಲಿ ಹೊಳೆಯಾಗದೆ! ನಂಬಿಯಂತೆ ನಂಬಿಕೊಂಡಿದ್ದರೆ, 'ಕುಲವಳಿದು, ಛಲವಳಿದು, ಮುದವಳಿದು, ಮತ್ಸರವಳಿದು, ಆತ್ಮ ತೇಜವಳಿದು, ಸರ್ವ ಅಹಂಕಾರವಳಿದು, ಶ್ರೀಮನ್ನಿಜ ಉಳಿದು ತಾನಳಿದು. ತಾನುಳಿದು, ಸಹಜ ಪದವಿಯಲ್ಲಿ ಕೂಡಲಸಂಗಯ್ಯನಲ್ಲಿ ತಾನು ತಾನಾಗಿದ್ದರೆ, 'ಕೊನೆಗೆ ಕೇಳದೆ ಬಹನಾತ' ಅವನು ಬರಲೆಂದು, ಬರುವನೆಂದು ಗುಡಿ ಕಟ್ಟಿ ಕಾಯುತ್ತಿರಬೇಕು ಕಲ್ಲು ಮಣ್ಣಿನ ಗುಡಿಯನ್ನಲ್ಲ – ಕಾಯದ ಕಡು ಚೆಲ್ವಿನ ಗುಡಿಯನ್ನು – ಉಳ್ಳವರು, ಇಲ್ಲದವರು, ಎಲ್ಲರೂ ಕಟ್ಟಬಹುದಾದ ಗುಡಿಯನ್ನು ('ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ')

ತನುಭಾವದ ಉದಾತ್ತೀಕರಣವನ್ನು ಇದಕ್ಕೂ ಮಿಗಿಲಾಗಿ ಮಾಡಲಾಗುವುದೆಂದು ನನಗೆನಿಸುವುದಿಲ್ಲ ಬಸವಣ್ಣನವರ ದೃಷ್ಟಿಗೆ ಒಂದು ಸಾಮಾನ್ಯವಸ್ತು ಎಷ್ಟು ವಿಧವಾಗಿ, ಎಷ್ಟು ಅರ್ಥವತ್ತಾಗಿ, ಎಷ್ಟು ಭಾವ ಸಂಕೇತಪೂರ್ಣವಾಗಿ ತೋರುವುದೆಂಬುದಕ್ಕೆ ಈ ಕಾಯವನ್ನು ಕುರಿತ ವಚನಗಳು ಸಾಕ್ಷಿ. ಇವುಗಳಲ್ಲಿ ಉಪಯೋಗಿಸಲಾಗಿರುವ ಸಾಮತಿ ಸಾದೃಶ್ಯಗಳ ಔಚಿತ್ಯವನ್ನು, ಔನ್ನತ್ಯವನ್ನು, ಸೌಂದರ್ಯವನ್ನು, ಸಾರ್ಥಕತೆಯನ್ನು ಗಮನಿಸಿದರೆ ಅವರ ವಚನಗಳು ಅದೆಂಥ ಮಹೋನ್ನತಿಯನ್ನು ಮುಟ್ಟಿವೆಯೆಂಬುದು ವೇದ್ಯವಾಗುವುದು.

ಉದಾತ್ತೀಕರಣದಲ್ಲಿ ಮಾತ್ರ ಸಿದ್ಧಹಸ್ತರಲ್ಲ ಶರಣ ಬಸವಣ್ಣನವರು; ಯಥಾರ್ಥ ಚಿತ್ರಣದಲ್ಲಿಯೂ ಎತ್ತಿದ ಕೈ ಅವರು.

**ಇದು ನಿದ್ರೆಯ ರುದ್ರವರ್ಣನೆ :**

'ಅಂಧಕಾರವೆಂಬ ಗಹ್ವರದೊಳಗೆ ನಿದ್ರೆಯೆಂಬ ರಾಕ್ಷಸಿ,
ವೀರರ ನಿಗ್ರಹಿಸಿ ನೀರ ಮಾಡಿ, ಧೀರರ ಧೃತಿಗೆಡಿಸಿ,
ಶಾಪಾನುಗ್ರಹ ಸಮರ್ಥರ ಸತ್ತಂತಿರಿಸಿ, ನಿಚ್ಚ ನಿಚ್ಚ ಜೀವ
ನಾಶ ಮಾಡುತ್ತಿದ್ದಾಳೆ ನೋಡಾ ಕೂಡಲಸಂಗಮದೇವಾ!'

'ನಿದ್ರೆಗೊಮ್ಮೆ ನಿತ್ಯ ಮರಣ, ಎದ್ದ ಸಲ ನವೀನ ಜನನ,' ಎಂಬ ವರಕವಿ 'ಅಂಬಿಕಾತನಯದತ್ತರ' ಅರ್ಥ ಪೂರ್ಣ ಉಕ್ತಿ ನೆನಪಾಗುವುದಿಲ್ಲವೆ. ಈ ವಚನದ ಕೊನೆಯ ಸಾಲನ್ನು ಓದಿದಾಗ?

'ಹತ್ತು ಸಾವಿರ ಗೀತವ ಹಾಡಿ ಅರ್ಥವಿಟ್ಟಲ್ಲಿ ಫಲವೇನು. ಮುಟ್ಟುವ ತೆರನನರಿಯದನ್ನಕ್ಕ?' ಎಂದು ಅಣ್ಣನವರೇ ಎಚ್ಚರಿಸಿದ್ದಾರೆ. ಬರೆಹಗಾರನ ಒರೆಗಲ್ಲು ಮನಮುಟ್ಟುವ ತೆರನನರಿತಿರುವುದು. ಅದು ಒಮ್ಮೆಗೆ ಅಳವಡುವುದಿಲ್ಲ ಅಣ್ಣನವರು ಅದಕ್ಕಾಗಿ 'ಸಮುದ್ರಗೊಳಗಣ ಸಿಂಪಿನಂತೆ' ಬಾಯ್ಬಿಟ್ಟರು; 'ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ, ಬಳಿದಪ್ಪಿದ ಪಶು ತನ್ನ ಹಿಂಡನರಸುವಂತೆ' ಬಯಸಿ ಅರಸಿದರು; 'ಅಯ್ಯಾ ಅಯ್ಯಾ' ಎಂದು ಕರೆದರು; 'ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯಾ' ಎಂದು ಕೋರಿದರು; 'ಅಡವಿಯೊಳಗೆ ಹೊಲುಬುಗೆಟ್ಟ ಪಶುವಿನಂತೆ, 'ಅಂಬೇ ಅಂಬೇ' ಎಂದು ಒರಲಿದರು; ಕೂಡಲ ಸಂಗನಮುಂದೆ 'ದಂದಣ, ದತ್ತಣ'ವೆಂದರು. ಶಿವ ಶರಣರ ಮುಂದೆ 'ಕೋಡಂಗಿಯಾಟವನಾಡಿ'ದರು; 'ಜಜ್ಜನೆ ಜರಿದರು, ಬಿಬ್ಬನೆ ಬಿರಿದರು, ಬಿದಿರಿದರು;' 'ತರಗೆಲೆ ಗಿರಕೆಂದೊಡೆ ಹೊರಗನಾಲಿಸಿದರು; 'ಬಿರಿ ಮುಗುಳಂದದಿ ಎನ್ನ ಹೃದಯ ನಿಮ್ಮ ಶ್ರೀಚರಣದ ಮೇಲೆ ಬಿದ್ದರಳುಗೆ' ಎಂದು ಹಾರೈಸಿದರು. ಅವರ ಹಾರೈಕೆ ಸಿದ್ಧಿಸಿತು. ಅವರ ನುಡಿದುದು ಮುತ್ತಿನ ಹಾರವಾಯಿತು, ಮಾಣಿಕ್ಯದ

ದೀಪ್ತಿಯಾಯಿತು, ಸ್ಫಟಿಕದ ಶಲಾಕೆಯಾಯಿತು. ಹೆಚ್ಚೇನು, ಅವರು ನುಡಿಯಲು ಲಿಂಗ ಮೆಚ್ಚಿ 'ಅಹುದಬಹುದು' ಎನ್ನುವಂತಾಯಿತು.

ಬಸವಣ್ಣನವರ ಪುಣ್ಯದಿಂದ ಕನ್ನಡದಲ್ಲಿ 'ಜೇನಮಳೆಗಳು ಕರೆದುವು. ಅಮೃತ ಕಳೆಗಳು ಸುರಿದುವು!' ವಚನಮಂದಾಕಿನಿಗೆ ಮಹಾಪೂರ ಬಂದಿತು. ಅವರೇ ಕೇಳಿದಂತೆ ಒಂದು ಮಾತೆನ್ನಬಹುದೇ ಆ ಶಬ್ಧ ಸಾರಾಯವನು? ಇಲ್ಲ; ಅದು ಕನ್ನಡದ, ಕನ್ನಡಿಗರ ಅಂತಃಸತ್ವದ ಅಮೃತಸ್ರೋತಸ್ವಿನಿ.

ಬಸವಣ್ಣನವರು ಪಂಚಪರುಷಮೂರುತಿಗಳೆಂದು ನೆಗಳ್ತೆವಡೆದಿದ್ದಾರೆ. ಅವರ ನಡೆ, ನುಡಿ, ನೋಟ, ಸ್ಪರ್ಶ, ಪ್ರಸಾದಗಳೆಂಬ ಪಂಚಪರುಷಗಳಲ್ಲಿ ಇಂದು ನಮಗುಳಿದಿರುವುದು ಅವರ ವಾಕ್ ಪುರುಷವೊಂದೇ. ಅವರ ವಚನಗಳ ರೂಪದಲ್ಲಿ ಉಳಿದಿರುವ ಅವರ ವಾಕ್–ಪರುಷದ ಪ್ರಭಾವಕ್ಕೆ ನಮ್ಮ ಮನದ ಕಬ್ಬುನವನ್ನು ಒಳಪಡಿಸಿ ಅದನ್ನು ಸುವರ್ಣವನನ್ನಾಗಿ ನಾವು ಮಾರ್ಪಡಿಸಿಕೊಳ್ಳದ್ದಿದ್ದರೆ ನಮ್ಮಂಥ ನಿರ್ಭಾಗ್ಯರು ನಾವೇ!

# ೧೩

# ಬಸವಣ್ಣನವರ ವಚನಗಳಲ್ಲಿ ದುರಂತ ಪ್ರಜ್ಞೆ – ಬದುಕುವ ಪ್ರತಿಜ್ಞೆ

ಪ್ರಪಂಚದ ಪ್ರಮುಖ ವಿಚಾರಧಾರೆಗಳಾದ ಆದರ್ಶವಾದ–ವಾಸ್ತವವಾದಗಳ ಬಳಿವಿಡಿದು ಆಶಾವಾದ ನಿರಾಶಾವಾದಗಳು ಹುಟ್ಟಿಕೊಂಡಿವೆ. ಆಶಾವಾದದ ಕಣ್ಣಿಗೆ ಬೆಳ್ಳಗಿದ್ದುದೆಲ್ಲ ಹಾಲಾಗಿ ಕಾಣಿಸುತ್ತದೆ; ನಿರಾಶವಾದದ ಕಣ್ಣಿಗೆ ನಿಜವಾದ ಹಾಲೂ ಕಳ್ಳಿಯ ಹಾಲಾಗಿ ಕಾಣಿಸುತ್ತದೆ. ಮಾನವನ ಬದುಕು ಇವೆರಡನ್ನೂ ಒಳಗೊಂಡು 'ಅಪರಿಮಿತ ಕತ್ತಲೆಯೊಳಗೆ ವಿಪರೀತದ ಬೆಳಗಿ'ಗೆ ಉದಾಹರಣೆಯಾಗಿ ನಿಂತಿದೆ.

ಮಾನವನ ಬದುಕೊಂದೇ ಅಲ್ಲ, ಸಮಸ್ತ ಸೃಷಟಿಯೇ ಮನೋಹರ ಭಯಂಕರ. ಒಟ್ಟು ನೋಟಕ್ಕೆ ಮನೋಹರ; ದಿಟ್ಟಿಸಿ ನೋಡಿದರೆ ಭಯಂಕರ! ಮೇಲುನೋಟಕ್ಕೆ ಅನಂತ ಸೌಂದರ್ಯದ ಲೀಲಾವಿಲಾಸ ಗೋಚರಿಸಿದರೆ ಒಳಹೊಕ್ಕು ನೋಡಿದಾಗ ಒಂದನ್ನೊಂದು ತಿಂದು ಬದುಕುವ ಜೀವಾವಳಿಯ ಮೈನಡುಗಿಸುವ ದುರಂತಮಯ ದೃಶ್ಯ. ಇವೆರಡರಲ್ಲಿ ಯಾವುದನ್ನೇ ಪೂರ್ಣ ಸತ್ಯವೆಂದು ನಂಬಿ ನಡೆದೂ ಭ್ರಮಿತರಾಗುತ್ತೇವೆ.

ಬದುಕಿನಲ್ಲಿ ಬೆಳಕು ಕತ್ತಲೆಗಳೆರಡೂ, ದುರಂತ ಸುಖಾಂತಗಳೆರಡೂ ಆಶೆ–ನಿರಾಶೆಗಳೆರಡೂ, ನೋವು–ನಲಿವುಗಳೆರಡೂ ಅನಿವಾರ್ಯವಷ್ಟೇ ಅಲ್ಲ. ಪರಸ್ಪರ ಪೂರಕಗಳೆಂದು ಅರಿತುಕೊಂಡು ಬದುಕಿನ ದುರಂತವನ್ನೂ, ಅದರ ಅಂತಿಮ ಗುರಿಯನ್ನೂ ಸಮಾನವಾಗಿ ಸ್ವೀಕರಿಸಿದವರು ಬಸವಣ್ಣನವರು ದುರಂತಾಂಶಗಳ ಮೇಲೆ ತೆರೆ ಎಳೆಯುವ, ಸುಖಾಂಶಗಳನ್ನು ವೈಭವೀಕರಿಸುವ ರೀತಿ ಅವರದಲ್ಲ. ಅವರು ಕಂಡ ಈ ದುರಂತ ಚಿತ್ರಗಳನ್ನು ಅನ್ಯರೂ ಕಂಡಿರಬಹುದು; ಆದರೆ ಅವರಂತೆ ಅವುಗಳಾಚೆಯ ಸೈಪಿನ ಚಿತ್ರಗಳನ್ನು ನೀಡಿದವರಾರು?

'ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ
ತಳಿರ ಮೇಯಿತ್ತು!'
'ಹಾವಿನ ಬಾಯ ಕಪ್ಪೆ ಹಸಿದು ಹಾರುವ ನೊಣಕ್ಕೆ

ಆಸೆ ಮಾಡುವಂತೆ!'
'ಹಗಹದಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೆ? ಕೋಳದ ಮೇಲೆ ಸಂಕೋಲೆಯನಿಕ್ಕುವರೇ!'
'ಕೆಸರಲ್ಲಿ ಬಿದ್ದ ಪಶುವಿನಂತಾನು ದೆಸೆದೆಸೆಗೆ ಬಾಯ ಬಿಡುತ್ತಿದ್ದೇನಯ್ಯಾ!'
'ಬಡ ಪಸು ಪಂಕದಲ್ಲಿ ಬಿದ್ದೊಡೆ ಕಾಲ ಬಡಿವುದಲ್ಲದೆ ಬೇರೆ ಗತಿಯುಂಟೆ?'
'ಬೆಳೆಯ ಭೂಮಿಯಲ್ಲೊಂದು ಪ್ರಳಯದ ಕಸ ಹುಟ್ಟಿ
ತಿಳಿಯಲೀಯದು
ಎಚ್ಚರಲೀಯದು!'
'ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ 'ಅಂಬೇ' 'ಅಂಬೇ' ಎಂದು ಕರೆಯುತ್ತಲಿದ್ದೇನೆ!'
'ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ, ಸಂಸಾರವೆಂಬ ರಹು ಸರ್ವಗ್ರಾಸಿಯಾಗಿ ನುಂಗಿತ್ತಯ್ಯಾ!'
'ಇಲಿ ಗಡಹನೊಡ್ಡಿದಲ್ಲಿಪ್ಪಂತೆ ಎನ್ನ ಸಂಸಾರ!'
'ಶೂಲದ ಮೇಲಣ ವಿಭೋಗವೇನಾದೊಡೇನೊ? ನಾನಾವಣ್ಣ ಸಂಸಾರ ಹಾವು ಹಾವಡಿಗನ ಸ್ನೇಹದಂತೆ!'
'ಸಂಸಾರ ಸಾಗರ ಸಿರದುದ್ದವಾದ ಬಳಿಕ ಏನ ಹೇಳುವೆನಯ್ಯ?'

ಬಸವಣ್ಣನವರ ದುರಂತ ಪ್ರಜ್ಞೆ ಮೇಲಿನ ಪಶ್ಯಂತಿವಾಕ್ಯಗಳಲ್ಲಿ ಸ್ಫುಟವಾಗಿ ಪ್ರಕಟವಾಗಿದೆ. ಬದುಕಿನ ಈ ದುರಂತ ಚಿತ್ರಗಳಿಗೆ ಎರಡು ವಿಧವಾಗಿ ಪ್ರತಿಕ್ರಿಯಿಸಬಹುದು.

'Like flies to wanton boys, we are to the gods

They kill us for their sport' ಎಂದು ಉದ್ಗರಿಸಿ ದೈವದ ಮೇಲೋ, ಕರ್ಮದ ಮೇಲೋ ಇದರ ಹೊಣೆ ಹೇರಿ ಹಲುಬುತ್ತ ಕೂಡ್ರುವುದು ಒಂದನೆಯ ವಿಧ; ಬದುಕಿಗೇ ಅರ್ಥವಿಲ್ಲದಿರುವಾಗ ಇವುಗಳನ್ನು ಗಮನಿಸುವುದೇ ವ್ಯರ್ಥವೆನ್ನುವುದು ಎರಡನೆಯ ವಿಧ. – ಎರಡೂ ಸಕ್ರಿಯ ಪ್ರತಿಕ್ರಿಯೆಗಳಲ್ಲ – ಸೋತು ಮೊಂಡೆಯೂರುವ ಪ್ರತಿಕ್ರಿಯೆ. ಮನುಜಕುಲಕ್ಕೇ ಲಾಂಛನಾಸ್ಪದ.

ಬಸವಣ್ಣನವರ ಪ್ರತಿಕ್ರಿಯೆ ಸತ್ಯಪರಾಕ್ರಮಿಯ ಪ್ರತಿಕ್ರಿಯೆ :
'ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ

ಇಳಿಯ ಬಿಟ್ಟೊಡೆ ನಿಮ್ಮ ನಗುವರಯ್ಯಾ!
ಶಿವಬಟ್ಟೆಯೊಳೆನ್ನನು ಇರಿಸಯ್ಯ, ಹರನೇ,
ಹೊಲಬುಗೆಟ್ಟೆನು, ಬಟ್ಟೆಯ ತೋರಯ್ಯಾ!
ಹುಯ್ಯಲಿಟ್ಟೆನು – ಗಣಂಗಳೂ ಕೇಳಿರಯ್ಯಾ,
ಕೂಡಲಸಂಗಮದೇವಯ್ಯನೆನ್ನ ಕಾಡಿಹನಯ್ಯಾ!'

ಇಲ್ಲಿ ಎರಡು ಅಂಶಗಳು ಗಮನಾರ್ಹ; ಹುಟ್ಟಿಸಿದ ಶಿವ ಶಿವಬಟ್ಟೆಯಲ್ಲಿರಿಸದೆ ಕೈಬಿಟ್ಟರೆ ಅವನೇ ನಗೆಗೀಡಾಗುತ್ತಾನೆ; ಶಿವನು ಕೈ ಬಿಟ್ಟರೆ ಅವನೇ ನಗೆಗೀಡಾಗುತ್ತಾನೆ; ಶಿವನು ಕೈಬಿಟ್ಟರೂ ಭಕ್ತ –ಗಣಂಗಳಿಗೆ ಮೊರೆಯಿಟ್ಟರೆ ಅವನು ದಾರಿಗೆ ಬರುತ್ತಾನೆ. ಎಂದರೆ ಶಿವನನ್ನೂ ಬಗ್ಗಿಸುವ ಶಕ್ತಿ ಶಿವಭಕ್ತರಿಗಿದೆ.

ಇದೇ ಆಶಯ ಕೆಳಗಣ ವಚನದಲ್ಲಿ ದುಂದುಭಿಗಭೀರನಾದದಲ್ಲಿ ಅಭಿವ್ಯಕ್ತವಾಗಿದೆ;

'ಜಂಭೂದ್ವೀಪ ನವಖಂಡ ಪೃಥಿಯೊಳಗೆ ಕೇಳಿರಯ್ಯಾ
ಎರಡಾಳಿನ ಭಾಷೆಯ
'ಕೊಲುವೆ'ನೆಂಬ ಭಾಷೆ ದೇವನದು
'ಗೆಲುವೆ' ನೆಂಬ ಭಾಷೆ ಭಕ್ತನದು!
ಸತ್ಯವೆಂಬ ಕೂರಲಗನೇ ಕಳೆದುಕೊಂಡು
ಸದ್‌ಭಕ್ತರು ಗೆದ್ದರು, ಕಾಣಾ, ಕೂಡಲಸಂಗಮದೇವಾ!'

ಬದುಕೊಂದು ಬವರ–ಕೊಲುವೆನೆಂಬ ಅದೃಷ್ಟದೊಡನೆ, ಅದೃಶ್ಯ ಶಕ್ತಿಯೊಡನೆ ಬವರ–ಸತ್ಯವೆಂಬ ಕೂರಲಗು ಕೈಯಲ್ಲಿದ್ದರೆ ಭಕ್ತನಿಗೇ ಗೆಲವು ಕಟ್ಟಿಟ್ಟ ಗಂಟು.

ಆದುದರಿಂದ ಬದುಕಿನ ದುರಂತಾಂಶಗಳಿಂದ ವಿಚಲಿತನಾಗದೆ, ನೆಚ್ಚಿನಿಂದ ಕಲಿಯಾಗಿ ಕಾದಬೇಕು. ಈ ದೃಢ ಸಂಕಲ್ಪದೊಡನೆ ಮುನ್ನುಗ್ಗಬೇಕು;

'ಎನಿಸೆನಿಸೆಂದೊಡೆ ನಾ ಧೃತಿಗೆಡನಯ್ಯ
ಎಲುದೋರಿದರೆ, ನರ ಹರಿದರೆ, ಕರುಳು ಕುಪ್ಪಳಿಸಿದರೆ
ನಾ ಧೃತಿಗೆಡೆನಯ್ಯಾ!
ಸಿರ ಹರಿದು ಅಟ್ಟ ನೆಲಕ್ಕೆ ಬಿದ್ದರೆ
ನಾಲಗೆ 'ಕೂಡಲಸಂಗಾ, ಶರಣೆ'ನ್ನುತ್ತಿದ್ದೀತಯ್ಯ!'
ಇನ್ನೊಂದು ಇಂಥದೇ ವಚನ:

'ಒಣಗಿಸಿ ಎನ್ನ ಘಟಫಣಲನೆ ಮಾಡಿದರೆಯೂ
ಹರಣವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ, ಮಾಣೆ!
ಶರಣೆಂಬುವ ಮಾಣೆ, ಮಾಣೆ!
ಕೂಡಲಸಂಗಮದೇವಯ್ಯಾ, ಎನ್ನ ಹೆಣದ ಮೇಲೆ
ಕಂಚಿಟ್ಟುಂಡರೆಯೂ ಮಾಣೆ, ಮಾಣೆ!'
ಈ ಧೃತಿ, ಈ ಧೃಡತೆ, ಈ ಛಲದ ಬಲಗಳ ಮುಂದೆ
ದೈವದಾಟ ನಡೆದೀತೆ?
'ಶರಣರೊಡನೆ ಶ್ರವನ ಮಾಡಿ ಮಾರುಗೋಲ ಬಿಡುವೆನಯ್ಯಾ
ತಾಗಲಿ, ತಪ್ಪಲಿ 'ಗೆಲವೆನ್ನದೆಂ' ಬೆನಯ್ಯಾ
ಕಳನಿಂದ ಕಡೆಗಳಕ್ಕೆ ಓಡುವೆ, ಕೂಡಲಸಂಗಯ್ಯಾ
ಜೀವನದ ದುರಂತಾಂಶಗಳಂತೆ ಜೀವನದ ಕ್ಷಣಭಂಗುರತೆಯ ಅರಿವೂ ಅಣ್ಣನವರಿಗಿದೆ.
'ನಿಮಿಷದ ನಿಮಿಷಂ ಬೋ, ಕ್ಷಣದೊಳಗರ್ಧಂ ಬೋ!
ಕಣ್ಣುಮುಚ್ಚಿ ಬಿಚ್ಚುವೈಸು ಬೇಗಂ ಬೋ!
ಸಂಸಾರ ದಾಗುಬೋ! ಸಂಅರದ ಹೋಗುಂ ಬೋ!
ಸಂಸಾದೊಪ್ಪ ಬೋ!
ಕೂಡಲಸಂಗಮ ದೇವಾ
ನೀ ಮಾಡಿದ ಮಾಯೇಂ ಬೋ, ಅಭ್ರಚ್ಛಾಯೇಂ ಬೋ!'

ಆದರೇನು, 'ಲೇಸೆನಿಸಿಕೊಂಡು ಒಂದು ದಿನ ಬದುಕಿದರೂ' ಸಾಕೆಂದಿದ್ದ ಅವರು, 'ಮರಣವೆ ಮಹಾನವಮಿ' ಎಂದಿದ್ದ ಅವರು, 'ಮರಣವೇ ಮಹಾನವಮಿ' ಎಂದಿದ್ದ ಅವರು. 'ಕಾಳ ಬೆಳದಿಂಗಳು ಸಿರಿ ಸ್ಥಿರವಲ್ಲ' ಎಂದು ಸಾರಿದ್ದ ಅವರು, 'ಕೇಡಿಲ್ಲದ ಪದವಿ'ಯನ್ನು ಪಡೆಯಲು ಕಂಕಣ ಕಟ್ಟಿದರು. ಅದನ್ನು ಒಮ್ಮೆಗೇ ಪಡೆಯಲಾಗದೆಂದು ಅರಿತೆಯೇ,

'ಭಕ್ತನೆನಿಸುವೆನಯ್ಯ ಮೆಲ್ಲಮೆಲ್ಲನೆ
ಯುಕ್ತನೆನಿಸುವೆನಯ್ಯಾ ಮೆಲ್ಲಮೆಲ್ಲನೆ
ಸಾರಿ ಶರಣನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ!
ಎಡಹುಗುಳಿಗಳ ದಾಟಿ ಬರಬರ ಲಿಂಗೈಕ್ಯನೆನಿಸುವೆನಯ್ಯಾ
ಕೂಡಲ ಸಂಗಮದೇವಾ, ನಿಮ್ಮಿಂದಧಿಕನೆನಿಸುವೆನಯ್ಯಾ!'
ಎಂದು ಪ್ರತಿಜ್ಞೆ ಮಾಡಿ, ಅದನ್ನು ಪೂರೈಸಿ ಪರಮಾರಾಧ್ಯರಾದರು.
ಇಂತಿದು ಬಸವ ವಚನಗಳಲ್ಲಿ ದುರಂತ ಪ್ರಜ್ಞೆ, ಬದುಕುವ ಪ್ರತಿಜ್ಞೆ?

# ೧೪

# ಬಸವಣ್ಣನವರು ಹೆಸರಿಸಿರುವ ಶರಣರು*

ಬಸವಣ್ಣನವರ ಅನ್ಯಾಸದೃಶವಾದ ಶರಣಪ್ರೇಮ ಅವರ ಅನೇಕ ವಚನಗಳಲ್ಲಿ ಅಭಿವ್ಯಕ್ತವಾಗಿದೆ. 'ಕೂಡಲ ಸಂಗನ ಶರಣರ ಧರ್ಮದ ಕವಿಲೆಯಾನು' (೮೪) 'ನಮ್ಮ ಕೂಡಲ ಸಂಗನ ಶರಣರನರಿಯದವರ ಕೈಯಲ್ಲಿ ಲಿಂಗವಿರ್ದು ಫಲವೇನು?' (೧೦೮) 'ಕೂಡಲ ಸಂಗನ ಶರಣರ ಅನುಭಾವವಿಲ್ಲದವರು ಎಲ್ಲಿದ್ದರೇನು? ಎಂತಾದರೇನು?' (೧೨೨) 'ಕೂಡಲ ಸಂಗನ ಶರಣರು ಬಂದ ಭರವ ನಿಂದ ನಿಲವ ಅನಂಗಸಂಗಿಗಳೆತ್ತ ಬಲ್ಲರು?'

(೧೨೫) 'ಸಂಗವೆರಡುಂಟು, ಒಂದ ಬಿಡು, ಒಂದ ಹಿಡಿ: ಮಂಗಳಮೂರ್ತಿ ನಮ್ಮ ಕೂಡಲಸಂಗನ ಶರಣರ' (೧೩೪) 'ಕಾಡ ಸೊಪ್ಪು ತಂದು, ಓಡಿನಲ್ಲಿ ಹುರಿದಿಟ್ಟು, ಕೂಡಿಕೊಂಡಿಪ್ಪುದು ನಮ್ಮ ಕೂಡಲ ಸಂಗನ ಶರಣರ' (೧೩೬) 'ಕರ್ತೃ ಕೂಡಲ ಶರಣರ ಸಂಗವು ಮತ್ತೆ ಭವಮಾಲೆಗೆ ಹೊದ್ದಲೀಯದು, ನೋಡಾ' (೧೪೦) 'ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ ಕರ್ಮ ನಿರ್ಮಳವಾಗದಿಹುದೆ?' (೧೪೧) 'ನಮ್ಮ ಕೂಡಲ ಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ' (೧೪೪) 'ಶಿವ ಶರಣರ ಮುಂದೆ ಆಡಿರಯ್ಯಾ, ಹಾಡಿರಯ್ಯಾ' (೧೭೯) 'ನಮ್ಮ ಕೂಡಲ ಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥ ಕಂಡಯ್ಯಾ' (೨೨೩) 'ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು' (೨೫೦) 'ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು' (೨೫೧) 'ಕೂಡಲ ಸಂಗನ ಶರಣರನ್ನಾಳ್ದರೆಂಬೆ' (೨೫೬) 'ಎನ್ನ ಮನದ ಅವಗುಣವ ಕಳೆದು ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು' (೨೬೧) 'ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸಯ್ಯಾ' (೨೬೪) 'ನಿಮ್ಮಚ್ಚ ಶರಣರ ಒಕ್ಕುದ ಮಿಕ್ಕುದ ನಚ್ಚಿಸು, ಮೆಚ್ಚಿಸು' (೨೬೫) 'ಕೂಡಲ ಸಂಗನ ಶರಣರ ಕಂಡು ಲಿಂಗವೆಂದೇ ನಂಬು, ಮನವೆ! (೨೬೩) 'ಕೂಡಲ ಸಂಗನ ಶರಣರ ಕಂಡು ಆಡಿ, ಹಾಡಿ ಬದುಕು, ಮನವೇ!' (೨೭೫) 'ಕೂಡಲ ಸಂಗನ ಶರಣರ ಭಕ್ತಿ ಭಂಡಾರವು ಎನಗೆಂತು ಸಾಧ್ಯವಪ್ಪುದು?' (೩೧೮) 'ಎನಗೆ ಒಡೆಯರುಂಟು ಕೂಡಲ ಸಂಗನ ಶರಣರು' (೩೨೩) 'ಕೂಡಲ ಸಂಗನ ಶರಣರು ಸ್ವತಂತ್ರಧೀರರು' (೩೨೫) 'ನಮ್ಮ ಕೂಡಲ ಸಂಗನ ಶರಣರ

ಮುಂದೆ ಆನುಭಕ್ತನೆಂಬ ನಾಚಿಕೆ ಸಾಲದೆ? (೩೩೦) 'ನಿಮ್ಮ ನಂಬಿದ ಶರಣರ ಡಿಂಗರಿಗ ನಾನು' (೩೩೬) 'ಪ್ರಾಣದೊಡೆಯರಯ್ಯ, ಕೂಡಲ ಸಂಗಮದೇವಾ. ನಿಮ್ಮ ಶರಣರು' (೩೪೯) 'ನಿಮ್ಮ ಶರಣರೊಲಿದೆನ್ನ ಸಲಹುವರಾಗಿ' (೩೫೦) 'ನಿಮ್ಮ ಶರಣರ ಮನೆಯ ಮಗ ನಾನಯ್ಯಾ' (೩೫೭) 'ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು' (೩೫೯) 'ಕಾಗೆ ವಿಷ್ಟಿಸುವ ಹೊನ್ನ ಕಳಸವಹುದರಿಂದ ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗೆಯ ಮಾಡಯ್ಯಾ!' (೩೬೧) ಕೂಡಲ ಸಂಗನ ಶರಣರಲ್ಲದೆ ಅನ್ಯವನರಿಯೆನಗಿ (೩೬೩) ದಿನಕರನುದಯಕ್ಕೆ ಕಮಲ ವಿಕಸಿತವಾದಂತೆ ಎನಗೆ ನಿಮ್ಮ ಶರಣರ ಬ್ಬು' (೩೬೫) 'ಕೂಡಲ ಸಂಗನ ಬರವೆನಗೆ ಪ್ರಾಣ ಜೀವಾಳವಯ್ಯ' (೩೬೬)

ಹೀಗೆಯೇ ಉದಾಹರಿಸುತ್ತ ಹೋಗಬಹುದು, ಶರಣರೇ ಹರಣ ಬಸವಣ್ಣನವರಿಗೆ. ಅವರ ದೃಷ್ಟಿಯಲ್ಲಿ ಬದುಕಿಗೆ ಅರ್ಥ ಬರುವುದೇ ಶರಣರ ಸಂಗದಿಂದ :

'ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯಾ?
ನಗುವುದು, ನುಡಿವುದು ಶಿವಭಕ್ತರೊಡನೆ...
ನಮ್ಮ ಕೂಡಲ ಸಂಗನ ಶರಣರೊಡನೆ ಮನದೆರೆದು
ಮಾತನಾಡುವುದಯ್ಯಾ' (೨೪೨)

ಶರಣರ ಸಂಗವೇ ಸಾಕು ಬಸವಣ್ಣನವರಿಗೆ. ಅದು ದೊರೆತ ಮೇಲೆ ಶಿವನನ್ನೂ ಬೇಡುವ ಅಗತ್ಯ ಉಳಿಯುವುದಿಲ್ಲ. ಇದನ್ನವರು ಹೃದಯಂಗಮವಾಗಿ ಹೇಳಿದ್ದಾರೆ :

'ಚಂದ್ರನ ಶೈತ್ಯದಲು ಬೆಳೆದ ಕಾಯಕ್ಕೆ
ಬೆಳದಿಂಗಳ ಬಯಸುವ ಹಂಗೇಕಯ್ಯಾ?
ಶಿವಶರಣರ ಸಂಗದಲಿರ್ದು ಶಿವನ ಬೇಡುವ ಹಂಗೇಕಯ್ಯಾ?
ಕೂಡಲ ಸಂಗಯ್ಯನ ಶರಣರು ಬಂದು ತಮ್ಮವನೆಂದರೆ
ಸಾಲದೆ ಅಯ್ಯಾ? (೪೪೨)

ಶರಣರು ಬಂದು ತಮ್ಮವನೆಂದರೆ ಸಾಕು–ಹುಟ್ಟಿದುದು ಸಾರ್ಥಕವಾದಂತೆ. ಜೀವಿ ಧನ್ಯನಾದಂತೆ, ಪರಮೋನ್ನತ ಪದವಿಯನ್ನು ಪಡೆದಂತೆ. ಅಂತೆಯೇ ಬಸವಣ್ಣನವರು ಶರಣರ ಬರವನ್ನು ಅತ್ಯುತ್ಸುಕತೆಯಿಂದ ನಿರೀಕ್ಷಿಸುತ್ತಾರೆ. ಅವರ ಪ್ರತೀಕ್ಷೆಯ ಪ್ರಖರತೆಯನ್ನು ಅವರ ಮಾತುಗಳಲ್ಲಿಯೇ ಅರಿಯುವುದು ಸಾಧ್ಯ:

'ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ,
ಬಳಿದಪ್ಪಿದ ಪಶು ತನ್ನ ಹಿಂಡನರಸುವಂತೆ,
ಬಯಸುತ್ತಿರ್ದೆನಯ್ಯಾ ನಿಮ್ಮ ಶರಣರ ಬರವನು,
ಬಯಸುತ್ತಿರ್ದೆನಯ್ಯಾ ನಿಮ್ಮ ಭಕ್ತರ ಬರವನು:' (೩೬೫)

'ಗಿಳಿಯ ಹಂಜರವಿಕ್ಕಿ, ಸೊಡರಿಂಗೆಣ್ಣೆಯನೆರೆದು,
ಬತ್ತಿಯನಿಕ್ಕಿ ಬರವ ಹಾರುತ್ತಿದ್ದೆನೆಲಗವ್ವಾ!'
ತರಗೆಲೆ ಗಿರುಕೆಂದರೆ ಹೊರಗನಾಲಿಸುವೆ! (೩೭೪)

ಶರಣರು ಬಂದರೋ, ಬಸವಣ್ಣನವರ ಹಿಗ್ಗು ಹೀಲಿಗೆದರುತ್ತದೆ. ಆನಂದ ಶರಧಿ ಉಕ್ಕೇರುತ್ತದೆ.

'ಸಾಸವೆಯ ಮೇಲೆ ಸಾಗರವರಿದಂತಾಯಿತ್ತಯ್ಯಾ;
ಆನಂದದಿಂದ ನಲಿನಲಿದಾಡುವೆ,
ಆನಂದದಿಂದ ಕುಣಿ ಕುಣಿದಾಡುವೆ;
ಕೂಡಲ ಸಂಗನ ಶರಣರು ಬಂದರೆ
ಉಬ್ಬಿ, ಕೊಬ್ಬಿ ಹರುಷದಲೋಲಾಡುವೆ.' (೩೭೭)

ಯಾವ ಶರಣರು ಬಂದರೂ 'ಹರುಷದಲೋಲಾಡು'ತ್ತಿದ್ದ ಬಸವಣ್ಣನವರು ಎಲ್ಲರನ್ನೂ ತಮ್ಮ ವಚನಗಳನ್ನು ಹೆಸರಿಸಲು ಹೋಗಿಲ್ಲ. ಅದು ಸಾಧ್ಯವೂ ಇಲ್ಲ. 'ಅಸಂಖ್ಯಾತ'ರೆಂದೇ ಉಕ್ತವಾಗಿರುವ ಅವರೆಲ್ಲರ ಹೆಸರುಗಳನ್ನು ಹೇಳುವುದು ಹೇಗೆ ಸಾಧ್ಯ? ಆದರೆ ಕೆಲವರ ಹೆಸರುಗಳನ್ನು ಹೇಳದೆ ಬಿಟ್ಟಿಲ್ಲ ಅವರು. ಇವರಲ್ಲಿ ಕೆಲವರ ಹೆಸರುಗಳನ್ನು ಹಲವು ಸಲ, ಇನ್ನುಳಿದವರ ಹೆಸರಗಳನ್ನು ಒಂದೆರಡು ಸಲ ಹೇಳಿದ್ದಾರೆ. ಇದು ಈ ಶರಣರೇ ಅವರಿಗೆ ಅತ್ಯಂತ ಪ್ರಿಯರಾಗಿದ್ದರೆಂದಾಗಲೀ, ಉಳಿದವರು ಕೇವಲ ಪ್ರಿಯರಾಗಿದ್ದರೆಂದಾಗಲೀ ಸೂಚಿಸದೆಂದು ತೋರುತ್ತಿದೆ. ಯಾವುದೊಂದು ವಚನದಲ್ಲಿ ಯಾವುದೋ ಶರಣ ಅಥವಾ ಶರಣರ ಉಲ್ಲೇಖ ಬಂದಿದೆಯೆಂದರೆ ಆಯಾ ವಚನದ ಆಶಯದ ಸಮರ್ಥನೆಗಾಗಿಯೋ, ಪುಷ್ಟೀಕರಣಕ್ಕಾಗಿಯೋ ಬಂದಿದೆಯೆಂದು ಭಾವಿಸುವುದೇ ವಿಹಿತ.

ಯಾವ ಅಹಮಿಕೆಯನ್ನೂ ಹತ್ತಿರ ಸುಳಿಯಗೊಡದ ಅಣ್ಣನವರು ತಮ್ಮ ವಿಚಾರಫಳನ್ನೂ ಶರಣರ ಹೆಸರುಗೊಂಡೇ ಹೇಳಿದರು: ತಮ್ಮ ಹಮ್ಮಿನ ಬೇರನ್ನು ತಾವೇ ಕಿತ್ತಸೆದರು. ತಾವು ಅರಿವಿನ ಹಾಗೂ ಭಕ್ತಿಯ ದೊರೆಯಲ್ಲವೆಂಬುದಮನ್ನು ಕೆಳಗಣ ವಚನದಲ್ಲಿ ಮನೋಜ್ಞವಾಗಿ ಬಣ್ಣಿಸಿದ್ದಾರೆ:

'ಬಾಣ ಮಯೂರನಂತೆ ಬಣ್ಣಿಸಬಲ್ಲೆನೆ?
ಸಿರಿಯಾಳನಂತೆ ಉಣಲಿಕ್ಕ ಬಲ್ಲೆನೆ?
ದಾಸಿಮಯ್ಯನಂತೆ ಉಡಕೊಡಬಲ್ಲೆನೆ? (೩೮೯)

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಮೇಲರಿಮೆ ಶನಿಯಾಗಿ ಕಾಡದಂತೆ ಕೆಳಗಣ ವಚನದಲ್ಲಿ ಮಾರ್ಮಿಕವಾಗಿ ಮೇಲರಿಮೆಯ ಮೂಲಕ್ಕೇ ಕುಠಾರವನ್ನಿಟ್ಟಿದ್ದಾರೆ:

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ
ಕಕ್ಕಯ್ಯನೊಕ್ಕದನಿಕ್ಕ ನೋಡಯಾ;
ದಾಸಯ್ಯ ಶಿವದಾನವನೆರೆಯ ನೋಡಯ್ಯಾ;
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ!' (೩೪೩)

ಇನ್ನೂ ನಿಖರವಾಗಿ ತಮ್ಮ ಹಾರುವತನದ ಲೇವಡಿ ಮಾಡಿದ್ದಾರೆ ಬಸವಣ್ಣನವರು– ಶರಣರ ಸಾಮತಿ ಕೊಟ್ಟೇ:

'ಸೆಟ್ಟಿಯೆಂಬೆನೆ ಸಿರಿಯಾಳನ?
ಮಡಿವಾಳನೆಂಬೆನೆ ಮಾಚಯ್ಯನ?
ಡೋಹಾರನೆಂಬೆನೆ ಚೆನ್ನಯ್ಯನ?
ಆನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯ!' (೩೪೪)

ದೊಡ್ಡವರ ಸಂಬಂಧ ಹೇಳಿ ತಮ್ಮ ಪರಿಚಯ ಪ್ರಾರಂಭಿಸುವವರಿದ್ದಾರೆ. ಬಸವಣ್ಣನವರೂ ತಮ್ಮನ್ನು ಪರಿಚಯಿಸಿಕೊಳ್ಳಲು ಹಲವು ಶರಣರ ಹೆಸರುಗಳನ್ನು ಹೇಳಿ ಅವರೊಡನಿರುವ ತಮ್ಮ ಸಂಬಂಧವನ್ನು ಸುಂದರವಾಗಿ ವಿವರಿಸಿದ್ದಾರೆ:

'ಅಪ್ಪನು ನಮ್ಮ ಮಾದಾರ ಚೆನ್ನಯ್ಯ :
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ;
ಚಿಕ್ಕಯ್ಯನೆಮ್ಮಯ್ಯ, ಕಾಣಯ್ಯಾ;
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ;
ಎನ್ನನೇತಕ್ಕರಿಯಿರಿ, ಕೂಡಲ ಸಂಗಯ್ಯಾ?' (೪೩೮)

'ಎಮ್ಮ ತಾಯಿ ನಿಂಬವ್ವೆ : ನೀರನೆರೆದುಂಬಳು;
ಎಮ್ಮಯ್ಯ ಚೆನ್ನಯ್ಯ; ರಾಯಕಂಪಣವ ಹೋರುವ;
ಎಮಗಾರೂ ಇಲ್ಲವೆಂದೆಂಬಿರಿ.
ಎಮ್ಮಕ್ಕ ಕಂಚಿಯಲ್ಲಿ ಬಾಣಸವ ಮಾಡುವಳು!' (೩೫೧)

'ಎನಗಾರೂ ಇಲ್ಲ, ಎನಗಾರೂ ಇಲ್ಲವೆಂಬರು;
ಬಾಣನವ ನಾನು, ಮಯೂರನವ ನಾನು, ಕಾಳಿದಾಸನವ ನಾನು;
ಕಕ್ಕಯ್ಯ ಹಿರಿಯಯ್ಯ ಚಿಕ್ಕಯ್ಯ ಚೆನ್ನಯ್ಯ
ಎತ್ತಿ ಮುದ್ದಾಡಿ ಸಲಹಿದರೆನ್ನ, ಕೂಡಲ ಸಂಗಯ್ಯಾ!' (೩೫೨)

ಎಲ್ಲರೂ ಶ್ರಮದಾಯಕ ಕಾಯಕ ಮಾಡುತ್ತಿದ್ದಾಗ ತಾನು ಮಂತ್ರಿಪೀಠದಲ್ಲಿ ಮೆರೆಯುತ್ತಿರುವೆನೆಂಬ ಅನಿಸಿಕೆ ಕಾಡಿರಬೇಕು ಬಸವಣ್ಣನವರನ್ನು ಮೋಳಿಗೆಯ ಮಾರಯ್ಯನವರ ಪ್ರಸಂಗದಿಂದ ಪ್ರಚೋದಿತವಾಗಿರಬಹುದಾದ ಈ ವಚನ ಅದಕ್ಕೆ ಕನ್ನಡಿ ಹಿಡಿಯುತ್ತದೆ:

'ಭಕ್ತಿ ವಿಶೇಷವ ಮಾಡುವರೆ ಹತ್ತು ಬೆರಳುಗಳುಂಟು;
ಹಾಸಿ ದುಡಿದರೆ ತನಗುಂಟು, ತನ್ನ ಪ್ರಮಥರಿಗುಂಟು;
ಮಾರಿ ತಂದೆಗಳಂತೆ ಎನಗೇಕಹುದಯ್ಯಾ?
ರನ್ನದ ಸಂಕಲೆಯನ್ನಿಕ್ಕಿ ಕಾಡಿಹೆ,
ಕೂಡಲಸಂಗಮದೇವಾ, ಶಿವಧೋ, ಶಿವಧೋ!' (೩೨೪)

ಈ 'ರತ್ನದ ಸಂಕಲೆ' ತಮ್ಮನ್ನು ಬಿಗಿದಿರಲು ತಮ್ಮ ಭಕ್ತಿ ಅರೆಯಾಯಿತ್ತೆಂದು ಎನ್ನಿಸಿರಬಹುದು ಬಸವಣ್ಣನವರಿಗೆ. ಅಂತೆಯೇ, 'ಭಕ್ತಿ ಎಂತಹದಯ್ಯಾ? ದಾಸಯ್ಯ ಮಾಡಿದಂತಹದಯ್ಯಾ, ಸಿರಿಯಾಳ ಮಾಡಿದಂತಹದಯ್ಯಾ.... ಸಿಂಧು ಬಲ್ಲಾಳ ಮಾಡಿದಂತಹದಯ್ಯಾ... ನೀ ಬಾಣನ ಬಾಗಿಲ ಕಾಯ್ದಂತಹುದಯ್ಯಾ' ಎಂದು ನಿಜಭಕ್ತರನ್ನು ಹೆಸರಿಸಿದ್ದಾರೆ. ಅವರು ನಿಜಭಕ್ತರಾಗಲು ಅವರ ಗಟ್ಟಿ ನಂಬಿಕೆಯೇ ಕಾರಣ. ಆದುದರಿಂದ.

'ನೆರೆ ನಂಬೋ ನೆರೆ ನಂಬೋ ಧುರಧುರವಿಲ್ಲದೆ
ಸಾಮವೇದಿಗಳಂತೆ:
ನೆರೆ ನಂಬೋ ನೆರೆ ನಂಬೋ ದಾಸ–ದುಗ್ಗಳೆಯರಂತೆ;
ನೆರೆ ನಂಬೋ ನೆರೆ ನಂಬೋ ಸಿರಿಯಾಳ – ಚಂಗಳೆಯರಂತೆ :
ನೆರೆ ನಂಬೋ ನೆರೆ ನಂಬೋ ಸಿಂಧು ಬಲ್ಲಾಳನಂತೆ; (೧೪೯)

'ನಂಬಿದೆಯಾದೊಡೆ ತನ್ನನೀವ ಕೂಡಲ. ಸಂಗಮದೇವ' ಎಂದು ನಿಜವಾಗಿ ನಂಬಿದವರನ್ನು ಹೆಸರಿಸಿ 'ನಂಬಿ ಕರೆದೊಡೆ ಓ ಎಂಬ ಶಿವನು' ಎಂಬ ತಮ್ಮ ಸೂತ್ರವನ್ನು ಸಮರ್ಥಿಸಿಕೊಂಡಿದ್ದಾರೆ.

ಹೀಗೆಯೇ ವಚನ 332ರಲ್ಲಿ 'ಚೆನ್ನ ಚೇರಮರ ಬಂಟ ನಾನಯ್ಯ' ಎಂದೂ, ವಚನ 350ರಲ್ಲಿ 'ಹಿರಿಮಯ್ಯ ಶ್ವಪಚಯ್ಯ' ಎಂದೂ, ವಚನ 474ರಲ್ಲಿ 'ತೆಲುಗ ಬೊಮ್ಮಯ್ಯಂಗೆ

---

* **ಈ ಲೇಖನದಲ್ಲಿ ಉದಾಹೃತವಾಗಿರುವ ವಚನಗಳ ಸಂಖ್ಯೆ ಲಿಂಗೈಕ್ಯ ಶರಣ ಪ್ರೊ. ಎಸ್.ಎಸ್. ಬಸವನಾಳರು ಸಂಪಾದಿಸಿರುವ 'ಬಸವಣ್ಣನವರ ವಚನಗಳು' ಎಂಬ ಹೊತ್ತಗೆಯನ್ನು ಅನುಸರಿಸಿದೆ.**

ಒಲಿದಾತ ಮತ್ತೊಬ್ಬ ದೇವನೆ ಅಯ್ಯಾ?' ಎಂದೂ, ವಚನ 519ರಲ್ಲಿ 'ಓಹಿಲಯ್ಯನ ನಿಜ ಪುರಕ್ಕೊಯಿದೆ' ಎಂದೂ, ವಚನ 680ರಲ್ಲಿ 'ಕೂಡಲ ಸಂಗಮ ದೇವರಲ್ಲಿ ತನ್ನ ಕೊಟ್ಟ ಸಿಂಧು ಮರಾಳ' ಎಂದೂ, ವಚನ 232ರಲ್ಲಿ 'ನಿನಗೆಂದಟ್ಟಡಿಗೆಯ ನೀಡಕಲಿಸಿದಾತ ಕೆಂಬಾವಿಯ ಭೋಗಯ್ಯ ಎಂದೂ ವಚನ 807ರಲ್ಲಿ 'ನಿನಗೆಂದಟ್ಟಡಿಗೆಯ ನೀಡಕಲಿಸಿದಾತ ಕೆಂಬಾವಿಯ ಭೋಗಯ್ಯ' ಎಂದೂ, ವಚನ 807ರಲ್ಲಿ 'ಪ್ರಾಣಲಿಂಗದ ಗಡಣಿ ಆರಿಗೂ ಇಲ್ಲ ಕೂಡಲ ಸಂಗನ ಶರಣರಲ್ಲಿ ತಂಗಟೂರ ಮಾರಯ್ಯಂಗಲ್ಲದೆ' ಎಂದೂ ವಚನ 888ರಲ್ಲಿ 'ಎನ್ನವಗುಣವ ನೋಡದೆ ಶಿವರಾತ್ರೆಯ ಸಂಕಣ್ಣಗಳಿಗೆ ಕರುಣಿಸಿದಂತೆ ಎನಗೆ ಕೃಪೆ ಮಾಡಯ್ಯಾ' ಎಂದೂ ಇನ್ನೂ ಕೆಲವರು ಶರಣರನ್ನು ಹೆಸರಿಸಿದ್ದಾರೆ. ಬಸವಣ್ಣನವರು. ಇವರಲ್ಲಿ ಬಾಣ, ಮಯೂರ, ಕಾಳಿಸಾಸರಂಥ ಕವಿಗಳಿದ್ದಾರೆ; ಬಾಣಾಸುರನಂಥ ಅಸುರರಿದ್ದಾರೆ; ಅರುವತ್ತು ಮೂರು ಪುರಾತನರಿದ್ದಾರೆ; ಪುರುಷರಂತೆ ಸ್ತ್ರೀಯರೂ ಇದ್ದಾರೆ; ರಾಜರಿದ್ದಾರೆ. ರಂಕರಿದ್ದಾರೆ; ಬಸವಣ್ಣನವರಿಗಿಂತ ಸ್ವಲ್ಪ ಪೂರ್ವದವರೋ ಇಲ್ಲವೆ ಅವರ ಹಿರಿಯ ಸಮಕಾಲೀನರಾದವರೋ ಇದ್ದಾರೆ; ಸಮಕಾಲೀನ ಶರಣರಿದ್ದಾರೆ. ಇವರೆಲ್ಲರ ಜೀವನ ಚರಿತ್ರೆಗಳು ಬೆಳಿಗೆ ಬಂದರೆ ಬಸವನ ಬದುಕಿನ ಮೇಲೂ ಹೊಸ ಬೆಳಕು ಬೀಳಬಹುದು. ಇಷ್ಟು ಮಾತ್ರ ಸ್ಪಷ್ಟ: ಎಲ್ಲವನ್ನೂ ಶರಣರ ಉಡಿಯಲ್ಲಿ ಹಾಕಿ ತಾವು 'ಬಚ್ಚ ಬರಿಯ ಬಸವ' (818)ನಾಗಿ ಉಳಿದವರು ಈ ದೃಷ್ಟಿಯಿಂದ ಅವರ ಈ ವಚನ ಅತ್ಯಂತ ಮನನೀಯ:

'ಮರದ ನೆರಳಲ್ಲಿದ್ದು ತನ್ನ ನೆಳಲನರಸಬಹುದೆ?
ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯಾ?
ನಿಮ್ಮ ಶರಣರ ಮುಂದೆ ನಾನೇತರ ಮುಕ್ತನಯ್ಯಾ?
ಆನು ಭಕ್ತನೆಂಬ ನುಡಿ ಸುಡದೆ ಕೂಡಲ ಸಂಗಮದೇವಾ? (999)

ಇಲ್ಲಿದೆ, 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದ ಬಸವಣ್ಣನವರ ಮಹೋಜ್ವಲ ಮಹಾನ್ ವ್ಯಕ್ತಿತ್ವದ ಬೀಗದಕ್ಕೈ.

೧೫

# ಪ್ರಭುವಚನ ಲೀಲಾವಿಲಾಸ

ಆರಂಭದಲ್ಲಿಯೇ ಅಲ್ಲಮಪ್ರಭುದೇವರ – ಪುಣ್ಯ ಪಾಪವಿಲ್ಲವಾಗಿ ಯಮನ ಹಂಗಿಲ್ಲದ, ಬಂದುದನುಂಡನಾಗಿ ಮಾನವರ ಹಂಗಿಲ್ಲದ, ಸತ್ಯ ಜ್ಞಾನದಿರವೇ ತಾನಾಗಿ ಇನ್ನಾರ ಹಂಗೂ ಇಲ್ಲದ ಅಲ್ಲಮ ಪ್ರಭುದೇವರ, 'ವ್ಯೋಮ ಮೂರುತಿ' 'ಬಯಲಿಗ' ಅಲ್ಲಮ ಪ್ರಭುದೇವರ ವಚನವೊಂದನ್ನು ಅಲ್ಪ ಪರಿವರ್ತನೆಯೊಡನೆ ಅಳವಡಿಸಿಕೊಳ್ಳುತ್ತೇನೆ – ನನ್ನ ಅಂತರಂಗದ ಅಳುಕನ್ನು ಚಿತ್ರಿಸಲು:

'ಎತ್ತಣ ಮಾಮರ, ಎತ್ತಣ ಕೋಗಿಲೆ,
ಎತ್ತಣಿಂದೆತ್ತ ಸಂಬಂಧವಯ್ಯ?
ಬೆಟ್ಟದ ನೆಲ್ಲಿಯ ಕಾಯಿ, ಸಮುದ್ರದೊಳಗಣ ಉಪ್ಪು
ಎತ್ತಣಿಂದೆತ್ತ ಸಂಬಂಧವಯ್ಯ?
ಚಿದ್ರೂಪ, ಚಿನ್ಮಯ, ಚಿತ್ಪ್ರಕಾಶ ಪ್ರಭುದೇವರಿಗೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯ?

ಆದರೂ, 'ಸರವರದೊಳಗೊಂದು ಕೋಗಿಲೆ ಸರಗೈಯುತ್ತಿದ್ದರೆ ಕೊಂಬಿನ ಮೇಲೊಂದು ಕಾಗೆ ಕರ್ರೆನ್ನದೆ?' ದಯವಿಟ್ಟು 'ಹೊರಗನೆ ಕೊಯ್ದು ಹೊರಗನೆ ಪೂಜಿಸಿದ' ನನ್ನ ಕಂಡು ನಾಚದಿರಿ; ಪ್ರಭುದೇವರ ವಚನಗಳಿಗೆ ವಿಮರ್ಶೆಯೆ? 'ಮಿಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೆ?' ಆದರೂ ಬರೆಯಲಾಗದಿದ್ದರೂ ಈ ಮಿಸುನಿಯ ಚಿನ್ನವನ್ನು ತೂಗಲು ಅಣಿಯಾಗಿದ್ದೇನೆ. ನೆನಪಿಡಿ: 'ಹೊನ್ನ ತೂಗಿದ ತ್ರಾಸು ಕಟ್ಟಳೆ ಹೊನ್ನಿಂಗೆ ಸರಿಯಪ್ಪುದೆ?'

ಪ್ರಭುದೇವರವೆಂಬ ಬೇರೆ ಕೃತಿಗಳಿವೆಯಾದರೂ ಅವರ ವಚನಗಳನ್ನು ಮಾತ್ರ ಈ ಅಧ್ಯಯನಕ್ಕಾಗ ಆರಿಸಿಕೊಂಡಿರಲು ಕಾರಣವಿಷ್ಟೆ: ವಚನಗಳು ಕನ್ನಡ ವಿಶಿಷ್ಟ ಸಾಹಿತ್ಯ ಪ್ರಕಾರವಷ್ಟೇ ಅಲ್ಲ, ವಿಶ್ವಸಾಹಿತ್ಯಕ್ಕೆ ಕನ್ನಡವು ನೀಡಿರುವ ಕೊಡುಗೆಯಾಗಿವೆ. ದಿವಂಗತ ಎಂ.ಆರ್.ಶ್ರೀ ಅವರ ಮಾತಿನಲ್ಲಿ 'ಅಚ್ಚಗನ್ನಡದ ಬೇಸಾಯಗಾರರಾಗಿ' ಆರಂಭಿಸಿದ

ವಚನಕಾರರು, 'ಕನ್ನಡ ಮಾಧ್ಯಮದ ಆದ್ಯ ಪ್ರವರ್ತಕರಾಗಿ' ಮೂಡಿದ ವಚನಕಾರರು ಗದ್ಯವೆಂದರೆ ಕೇವಲ ಗದ್ಯವಲ್ಲದ, ಪದ್ಯಗುಣಗಳಿದ್ದೂ ಪದ್ಯವಲ್ಲದ, 'ಗದ್ಯ ಪದ್ಯಗಳ ಕೃತಕ ಗಡಿಗಳನ್ನು ಕಿತ್ತೆಸೆದ' ನವೀನ ಸಾಹಿತ್ಯ ಪ್ರಕಾರವೊಂದರ ಸೃಷ್ಟಾರರಾಗಿ, ನವೀನ ದರ್ಶನವೊಂದರ ದ್ರಷ್ಟಾರರಾಗಿ, 'ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ'ವನ್ನು ಮೆರೆದುದು ಕನ್ನಡಿಗರ ಭಾಗ್ಯ, ಭುವನದ ಭಾಗ್ಯ. ವಚನಗಳಲ್ಲಿ 'ಅಣುವಿನಲ್ಲಿ ಅದ್ಭುತಶಕ್ತಿಯನ್ನು ಹಿಡಿದಿಟ್ಟಂಥ ಧ್ವನಿಶಕ್ತಿಯನ್ನು ಇಷ್ಟು ಚೆನ್ನಾಗಿ ಬಳಸಿಕೊಂಡ ಸಾಹಿತ್ಯ ವಿಶ್ವಸಾಹಿತ್ಯದಲ್ಲಿಯೇ ಅತ್ಯಂತ ಅಪೂರ್ವ.'

ಇಷ್ಟೆಲ್ಲ ಹೇಳಿದರೂ ವಚನಗಳ ವೈಶಿಷ್ಟ್ಯವನ್ನು ಕುರಿತು ಎಲ್ಲವನ್ನೂ ಹೇಳಿದಂತಾಗುವುದಿಲ್ಲ. ಕಾರಣವಿಷ್ಟೆ: ವಚನಗಳು ರಚನೆಯಲ್ಲ; 'ಅವು ಅಂತರ್ವಾಣಿಯ ಅವಿರ್ಭಾವಗಳು'. ಮಾತಿನಲ್ಲಿಯೇ ಮೂಡಿಯೂ ಮಾತನ್ನು ಮೀರಿನಿಂತ ಅವುಗಳ ವಿಸ್ಮಯಜನಕ ರೂಪ ಅಪರೂಪಗಳಲ್ಲಿ ಅಪರೂಪ. 'ಒಂದು ಮಾತೆನ್ನಬಹುದು ಶಬ್ದ ಸಾರಾಯವನು?' ಸಿದ್ಧರಾಮ ಸಾರಿಯೇ ಇದ್ದಾನೆ:

'ವಚನಾನುಭವ ವಾಗ್ರಚನೆಯಲ್ಲ ಮನವೆ;
ವಚನಾನುಭವ ವಾಗ್ರಚನೆಯಲ್ಲ ಮನವೆ;
ವಚನಾನುಭವ 'ವಚೋನ' ಎಂಬುದುದು
ಶ್ರುತಿಸಿದ್ದ ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನಾ'

ಮಾತೇ ಜ್ಯೋತಿರ್ಲಿಂಗವೆಂಬುದು ಪ್ರಭುದೇವರ ಪೆರ್ನುಡಿಗಳಲ್ಲಿ ಒಂದು. ಮಾತಿನಲ್ಲಿ ಮೈದಾಳಿಯೂ ಮಾತಾಗಿ ಉಳಿಯದ ವಚನಗಳಿಗೆ ಈ ಮಹೋಕ್ತಿ ಸಾರ್ಥಕವಾಗಿ ಅನ್ವಯಿಸುತ್ತದೆ. 'ಕಂಗಳ ಕರುಳ ಕೊಯ್ದು, ಮನದ ತಿರುಳ ಹುರಿದ, ಮಾತಿನ ಮೊದಲ ಬಲ್ಲ' ಅಲ್ಲಮ ಪ್ರಭುದೇವರ ವಚನಗಳಂತೂ ಮಾತಿನ ಜ್ಯೋತಿರ್ಲಿಂಗರೂಪಕ್ಕೆ ಉಜ್ವಲ ಉದಾಹರಣೆಗಳಾಗಿವೆ. ಇದು ಹೇಗೆ ಸಾಧ್ಯವಾಯಿತು. ಪ್ರಭುವಿಗೆ?

'ಹಿಂದಣ ಕವಿಗಳೆನ್ನ ತೊತ್ತಿನ ಮಕ್ಕಳು;
ಮುಂದಣ ಕವಿಗಳೆನ್ನ ಕರುಣದ ಕಂದಗಳು;
ಆಕಾಶದ ಕವಿಗಳೆನ್ನ ತೊಟ್ಟಿಲ ಕೂಸು;
ಹರಿಬ್ರಹ್ಮರೆನ್ನ ರಕ್ಷಕುಳ; ನೀ ಮಾವ ನಾನಳಿಯ, ಗುಹೇಶ್ವರ.'

ಎನ್ನುವಂತಹ ಆಶ್ಚರ್ಯಕರವಾದ ಸಕೃದ್ಧದರ್ಶನಕ್ಕೆ ಅಹಂಕಾರವೆಂದು ತೋರಬಹುದಾದ ಆತ್ಮ ವಿಶ್ವಾಸದಿಂದಲೆ?

‘ಕಾಮವ ಸುಟ್ಟು, ಹೋಮವನರುಹಿ, ತ್ರಿಪುರ ಸಂಹಾರದ
ಕೀಲಬಲ್ಲಡೆ,
ಯೋಗಿಯಾದಡೇನು, ಬೋಗಿಯಾದಡೇನು, ಶೈವನಾದಡೇನು,
ಸನ್ಯಾಸಿಯಾದಡೇನು?’ ಎನ್ನುವ ಹೃದಯ ವೈಶಾಲ್ಯದಿಂದಲೆ?
‘ಅದ್ವೈತವ ನುಡಿದು ಅಹಂಕಾರಿಯಾದೆನಯ್ಯ
ಬ್ರಹ್ಮವನುಡಿದು ಭ್ರಮಿತನಾದೆನಯ್ಯ,
ಶೂನ್ಯವನುಡಿದು ಸುಖ ದುಃಖಕ್ಕೆ ಗುರಿಯಾದೆನಯ್ಯ;

ಗುಹೇಶ್ವರ, ನಿಮ್ಮ ಶರಣ ಸಂಗನಬಸವಣ್ಣನ ಸಾನ್ನಿಧ್ಯದಿಂದಾನು
ಸದ್ಭಕ್ತನಾದೆನಯ್ಯ;’ ಎನ್ನುವ ಭಕ್ತಿನಿರ್ಭರತೆಯಿಂದಲೆ?

‘ಆ ಮಾತು ಈ ಮಾತು ಹೋಮಾತೆಲ್ಲವು ನೆರೆದು ಹೋಯಿತ್ತಲ್ಲಾ;
ಭಕ್ತಿ ನೀರಲ್ಲಿ ನೆರೆದು ಜಲವ ಕೂಡಿ ಹೋಯಿತ್ತೆಲ್ಲಾ;
ಸಾವನ್ನಕ್ಕರ ಸರವುಂಟೆ, ಗುಹೇಶ್ವರ?’ ಎಂಬ ವಾಸ್ತವಿಕೆಯ
ಅರಿವಿನಂದಲೆ?
‘ಹಿಂದಣ ಅನಂತವನು, ಮುಂದಣ ಅನಂತವನು ಒಂದೆ
ದನ ಒಳಕೊಂಡಿತ್ತು ನೋಡು;’ ಎಂಬ ಕಾಣ್ಕೆಯಿಂದಲೆ?

‘ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ,
ಸಕಲ ವೇದಶಾಸ್ತ್ರವೆಂಬ ನೇಣ ಕಟ್ಟಿ,
ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ ಭ್ರಾಂತಿಯೆಂಬ ತಾಯಿ!
ತೊಟ್ಟಿಲ ಮುರಿದು, ನೇಣು ಹರಿದು, ಜೋಗುಳ ನಿಂದಲ್ಲದೆ
ಗುಹೇಶ್ವರನೆಂಬ ಲಿಂಗವ ಕಾಣಬಾರದು;’ ಎಂಬ ವಿವೇಕದಿಂದಲೆ?

‘ಮುನಿಯದಿರಿ, ಮುನಿಯದಿರಿ, ನಿಮಗೊಂದು ಯುಕ್ತಿಯ
ಹೇಳುವೆನು.
ಅದೆಂತೆಂದರೆ, ನೀವೆನ್ನ ವಂಶೀಭೂತರಾದ ಕಾರಣ,
ನಿಮ್ಮ ಹೆಚ್ಚು ಕುಂದು ಎನ್ನದಾಗಿ, ನಿಮ್ಮ ಅಸ್ತಿನಾಸ್ತಿ ಎನ್ನದಾಗಿ,
ನಿಮ್ಮ ಹಾನಿವೃದ್ಧಿ ಎನ್ನದಾಗಿ, ಹಾವ ಹಿಡಿದವರು ಬೇಲಿಯ
ಹೊಗದೆ
ಹೋಹುದೇ ಅಯ್ಯಾ? ವ್ಯಾಧನು ಸೂಸಲ ಚೆಲ್ಲಿ, ಜಂತ್ರವ ಹಣ್ಣಿ,

ಅಡಿಗಲ್ಲನೊಡ್ಡಿ ಹೋದಬಳಿಕ ಸೂಸಲ ಕಂಪಿಗೆ ಹೆಗ್ಗಣ
ಬಂದು ಬಿದ್ದಂತೆ
ಬಿದ್ದಿರಲ್ಲ ಮಾಯದ ಬಲೆಯಲ್ಲಿ' ಎನ್ನುವ
ಮಾನವೀಯತೆಯಿಂದಲೇ?

'ಆವ ಜಾತಿಯಲ್ಲಾದರೂ ಆಗಲಿ, ಪುರಾತನರ ಚಾರಿತ್ರದಲ್ಲಿ ನಡೆದು,
ಗುರುಲಿಂಗ ಜಂಗಮಕ್ಕೆ ಅರ್ಥಪ್ರಾಣಾಭಿಮಾನವಂ ಕೊಟ್ಟು,
ಅಹಂಕಾರವಳಿದಂಥ ಪುರಾತನರ ಬಾಯ ತಂಬೂಲವ ಮೆಲುವೆ,
ಬೀಳುಡಿಗೆಯ ಹೊದಿವೆ. ಆತನ ಪಾದರಕ್ಷೆಗಳೆರಡನೂ ಮಂಡೆಯ
ಮೇಲೆ ಹೊತ್ತುಕೊಂಡು ಬದುಕುವೆನಯ್ಯ; ಆ ಗಣಂಗಳ
ದಾಸನ ದಾಸನಾನು ಜನ್ಮ ಜನ್ಮದಲ್ಲಿ ಆಗುವ ಕಾಣಾ, ಗುಹೇಶ್ವರಾ'
ಎನ್ನುವ ವಿನಯ ಸಂಪತ್ತಿನಿಂದಲೆ?

'ನಿಮ್ಮ ಲೀಲೆ, ನಿಮ್ಮ ವಿನೋದ, ನಿಮ್ಮ ಹಣಿ, ನಿಮ್ಮ ಕೊಳಲು;
ಅದಕ್ಕೆ ಬೇಕೆನ್ನೆ, ಬೇಡೆನ್ನೆ ! ಮೇಘವಹ್ನಿ ಧರೆಗುರುಳುತ್ತ ಲೋಕವ
ಬೆಸೆಗೊಂಡಿತ್ತೆ? ಉದರಾಗ್ನಿ ಧರೆಗತಗುತ್ತ ಭೂತಂಗಳ
ಬೆಸಗೊಂಡಿತ್ತೆ?
ಗುಹೇಶ್ವರಲ್ಲಿ ಮನ ನಿರುಪಮ ಮಹಿಮೆ ಎಂತಿದ್ದಿತ್ತು ಹಾಂಗೆ
ನೀನು ಮಾಡುವುದಲ್ಲದೆ, ನಾನಿದಕೆ ಬೇಕೆನ್ನೆನು, ಬೇಡೆನ್ನೆನು'
ಎನ್ನುವ ಶರಣಾಗತಿಯಿಂದಲೆ?

ಹೀಗೆ ವಿಶ್ಲೇಷಿಸುತ್ತ ಹೋದರೆ ಈ ನಿಜ ಉಂಡ ನಿರ್ಮಳನ, 'ನಿಜವನರಿದ ನಿಶ್ಚಿಂತನ' ನೆಲೆ ನಮಗೆ ಸಿಕ್ಕದೆ ಹೋಗಬಹುದು. ಪ್ರಭು ತನುವಿನ ಕೊರತೆಗೆ ಸುಳಿ ಸುಳಿದು, ಮನವ ಕೊರತೆಗೆ ನೆನೆನೆನೆದು, ಭಾವದ ಕೊರತೆಗೆ ತಿಳಿತಿಳಿದು, ಶಬ್ದದ ಕೊರತೆಗೆ ಉಲಿ ಉಲಿದು ಗುಹೇಶ್ವರನೆಂಬ ಲಿಂಗ ಮನದಲ್ಲಿ ನೆಲೆಗೊಳ್ಳದೆ' ಹೋದಾತನಲ್ಲ; 'ಲಿಂಗಂಗದಲ್ಲಿ ತರಹರವಾಗಿ, ಸಮತೆ ಶಾಂತಿಯಲ್ಲಿ ತರಹರವಾಗಿ, ಮನ ಜ್ಞಾನದಲ್ಲಿ ತರಹರವಾಗಿ, ಭಾವ ನಿರ್ಭಾವದಲ್ಲಿ ತರಹರವಾಗಿದ್ದ' ಅಚ್ಚ ಶರಣನಾತ, ಮಾತಿನ ಮೂಲವನರಿದಾತನೆಂದು ಈ ಹಿಂದೆಯೇ ಹೇಳಿ ಆಗಿದೆ. ಮಾತು ಜ್ಯೋತಿಯಾಗುವ ಮರ್ಮವನ್ನೇ ಬಿತ್ತರಿಸಿದ್ದಾನೆ ಎರಡು ವಾಕ್ಯಗಳಲ್ಲಿ:

'ತನ್ನ ತಾನರಿದಡೆ ನುಡಿಯೆಲ್ಲ ಪರತತ್ತ್ವ ನೋಡಾ, ತನ್ನತಾ ಮರೆದಡೆ ನುಡಿಯೆಲ್ಲ ಮಾಯೆ ನೋಡಾ; ಅರಿದು ಮರೆದ ಶಿವಯೋಗಿಯ ಶಬುದವೆಲ್ಲ ಉಪದೇಶವಲ್ಲದೆ ಭಿನ್ನವುಂಟೆ?' ತಮ್ಮ ತಾವರಿಯದ ಮಾತಿಗೆ ಮೊದಲು ಮಾಡಿದರೆ ಹೊರಡುವವು 'ಲಿಂಗ ಮೆಚ್ಚಿ ಅಹುದೆನ್ನುವಂತಹ' ನುಡಿಗಳಲ್ಲ, ಸದ್ದುಗಳ ಸಂದಣಿ.

'ಶಬ್ದ ಸಂಭ್ರಮದಲ್ಲಿ ಹಿಂದುಗಾಣರು, ಮುಂದುಗಾಣರು,
ತಮ್ಮ ತಾವರಿಯರು; ಇದು ಕಾರಣ,
ಮೂರು ಲೋಕವೆಲ್ಲವು ಬರಿ ಸೂರೆ ಹೋಯಿತ್ತು,
ಗುಹೇಶ್ವರ;'

ತನ್ನ ತಾನರಿದಾಕ್ಷಣ ಭಾಷೆಯ ಎಲ್ಲ ಸಾಧ್ಯತೆಗಳ ಬೀಗದ ಕೈ ತನ್ನಿಂದ ತಾನೇ ಹಸ್ತಗತವಾಗುವುದೆಂದು ಹೇಳಲಾಗದು. ಭಾಷೆಯ ಗೂಢಸತ್ಯಗಳನ್ನೂ, ಗಾಢ ಅರ್ಥವಂತಿಕೆಗಳನ್ನೂ, ರಮಣೀಯ ರಹಸ್ಯಗಳನ್ನೂ, ಸಾಹಿತ್ಯ ಶಾಸ್ತ್ರದ ಸುವರ್ಣಸೂತ್ರಗಳನ್ನೂ, ಆಡುಮಾತಿನ ಗಾಡಿ ಮೋಡಿಗಳನ್ನೂ, ಇನ್ನೂ ಏನು ಏನನ್ನೋ ಅರಿತು ಅರಗಿಸಿಕೊಳ್ಳಬೇಕಾಗುತ್ತದೆ. ಆದರೆ ಪ್ರಭುವಿನ ದೃಷ್ಟಿಯಲ್ಲಿ ಇವುಗಳಿಗೆ ಎರಡನೆಯ ಮಹತ್ವ 'ವಾಕ್ಕು ಪಾಕವಾದಡೇನೋ ಮನ ಪಾಕವಾಗದನ್ನಕ್ಕರ?' ಎಂಬುದು ಅವನು ಎತ್ತಿದ ಮೂಲಭೂತ ಪ್ರಶ್ನೆ 'ಪರಿಣಾಮದೊಳಗೆ ಮನದ ಪರಿಣಾಮವೆ ಚೆಲುವ', ಆದುದರಿಂದ ಮನದ ಚೆಲುವು ಚಿಗುರಿದಾಗ ಮಾತಿನ ಚೆಲುವು ಚಿಮ್ಮಲೇಬೇಕು. 'ಮನದ ಕೊನೆಯ ಮೊನೆಯ ಮೇಲೆ ನೆನದ ನೆನಹು ಜನನ ಮರಣವ ನಿಲ್ಲಿಸಿ ಜ್ಞಾನ ಜ್ಯೋತಿಯ ಉದಯಭಾನು ಕೋಟಿಯ ಮೀರಿ ಸ್ವಾನುಭವದ ಉದಯ ಜ್ಞಾನ ಶೂನ್ಯದಲಡಗಿದ ಘನವ' ಪಡೆದ ಪ್ರಭುವಿಗೆ ಪ್ರಯತ್ನಿಸದೆ ವಶವಾಗದ ಉಕ್ತಿ ವಿಲಾಸಗಳುಂಟೆ? ಒಳಗೆ ಭಾನುಕೋಟಿಯ ಮೀರಿ ಸ್ವಾನುಭವದ ಉದಯ ತನ್ನ ತಾನು ತಿಳಿದ ಮೇಲೆ, ತಾನು ತಾನಾದಾಗ ಅದರ ಪ್ರಖರ ಪ್ರಕಾಶ ಪ್ರಕಟವಾಗಲು ತಕ್ಕ ಪದಪುಂಜಗಳು ತಾವೇ ಬರಲಾರವೆ ನಾ ಮುಂದೆ ನೀ ಮುಂದೆ ಎಂದು? ಒಳಗೆ ಅನುಭವದ ಅದಮ್ಯತೆಯಿಲ್ಲದೆ, ಅಭಿಯವ್ಯಕ್ತಿಯ ಅನಿವಾರ್ಯತೆಯೆನಿಸದೆ, ಸಂವೇದನೆಯ ಸಂಸ್ಫುರಂಣೆಯಿಲ್ಲದೆ ಏನನ್ನಾದರೂ ರಚಿಸಿದರೂ ಅದು ಒತ್ತಿ ಹಣ್ಣ ಮಾಡಿದಂತೆ. 'ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದೋ? ಕಾಮಿಸಿ, ಕಲ್ಪಿಸಿ, ಭಾವಸಿದಡೆ ಅದೇ ಭಂಗ; ಭಾವಿಸುವ ಭಾವನೆಗಿಂತ ಸಾವುದೇ ಲೇಸು ಕಾಣಾ, ಗುಹೇಶ್ವರಾ;'

ಹೌದು, 'ಹೂಮಿಡಿಯ ಹರಿದಡೆ ಹಣ್ಣಪ್ಪುದೆ?' ಎಂಬ ಪ್ರಶ್ನೆಗೆ ಹಣ್ಣಾಗದೆಂಬುದೇ ಉತ್ತ, ತಮ್ಮ ತಾವರಿಯುವುದೇ ಹೂವು ಹಣ್ಣಾಗುವ ವಿಧಾನ. ಅದನುಳಿದು 'ಜ್ಞಾನದ ಉಬ್ಬುಕೊಬ್ಬಿನಲ್ಲಿ ನುಡಿಯುತಿಪ್ಪುವ' ರಾರೋ? 'ಏನೆಂದರೆ ಎಂತೆಂದರಿಯದೆ ಬರಿ

ಮಾತಿನ ಬ್ರಹ್ಮವನಾಡು' ತಿಪ್ಪವರಾರೋ, 'ಜಗವಂದ್ಯರೆಂದು ನುಡಿವವರಾರೋ'. ಇಂಥ 'ಶಿವನಿಚ್ಚೆಯನರಿಯದೆ ಮಾತಾಡುವವರ ಮೆಚ್ಚುವನೆ ಗುಹೇಶ್ವರ?

ನುಡಿಯ ಮಹೋನ್ನತಿಯ, ಸ್ವಾನುಭವದ ದುರ್ದಮನೀಯತೆಯ, ಸ್ವಸ್ವರೂಪಜ್ಞಾನದ ಪಾರಮ್ಯದ ಈ ಮೂಲ ಸೂತ್ರವನ್ನು ಪ್ರಾರಂಭದಲ್ಲಿಯೇ ಅರಿತುಕೊಂಡುದರಿಂದಲೋ ಏನೋ ಪ್ರಭುವಿನ ವಚನಗಳಲ್ಲಿ ಸಾಧಿಕಾವಸ್ಥೆಯನ್ನು ಸೂಚಿಸುವ ವಚನಗಳು ವಿರಳವಾಗಿವೆ; ಸಿದ್ಧಾವಸ್ತೇಯ ವಿಜಯ ವೈಜಯಂತಿಯಂತಿರುವ ವಚನಗಳೇ ಅತ್ಯಧಿಕವಾಗಿವೆ. ಎಲ್ಲೋ ಒಂದೆರಡು ಕಡೆ ಮಾತ್ರ ಸಾಧಕಾವಸ್ಥೆಯ ಕಲಮಲ ತುಮುಲಗಳನ್ನು ತೋರುವ ಸಣ್ಣ ವಚನಗಳು ಸಿಕ್ಕಿವೆ;

'ಉಗುಳ ನುಂಗಿ ಹಸಿವ ಕಳೆದು ತೆವರ ಮಲಗಿ ನಿದ್ರೆಗೆಯ್ದುವಲ್ಲಾ'
'ಅರಸಿ ಅರಸಿ ಹಾಹಾ ಎನತಿದ್ದೆನು, ಬೆದಕಿ ಬೆದಕಿ
ಬೆದ ಬೆದ ಬೇವುತಿದ್ದೆನು'
ಗೋಹೇಶ್ವರ, ಕಣ್ಣವೇಲಾದಲಲ್ಲಿದ್ದವನ ಕಾಣೆನು'.

ಇಂಥ ಆತ್ಮ ಚರಿತ್ರೆಯ ಸಂಜ್ಞೆಗಳನ್ನೊಳಗೊಂಡ ಕೆಲವು ವಚನಗಳನ್ನೂ, ಶ್ರೀಸಾಮಾನ್ಯರಿಗಾಗಿಯೇ ಉಸಿರಿದ ಹಲವು ವಚನಗಳನ್ನೂ ಬಿಟ್ಟರೆ ಓದುಗರನ್ನು ಔನ್ನತ್ಯಕ್ಕೆ ಔದಾತ್ಯಕ್ಕೆ, ಭೂಮಾನುಭೂತಿಗೆ, ಬೃಹತ್ತಿಗೆ, ಮಹತ್ತಿಗೆ ಆಹ್ವಾನಿಸುವ ವಚನಗಳೇ ಹೆಚ್ಚು, ವಾಚಕರನ್ನು ಚಕಿತಗೊಳಿಸುವ ಉಕ್ತಿ ವೈಭವ, ಬೆರಗುಗೊಳಿಸುವ ಅರಿವಿನ ಹರಹು, ದಿಗ್ಭ್ರಾಂತರನ್ನಾಗಿ ಮಾಡುವ ದರ್ಶನದೀಪ್ತಿ, ಮಂಕುಗೊಳಿಸುವ ಗಹನತೆ, ಗೂಢತೆ, ಪ್ರಗಾಢತೆಗಳು, ಕಲ್ಪನೆಯ ದಿಟ್ಟತನ, ಹೋಲಿಕೆಗಳ ಹೊಸತನ, ಅಭಿವ್ಯಕ್ತಿಯ ಸಂಕೀರ್ಣತೆ, ರಹಸ್ಯಮಯತೆ, ರಮಣೀಯತೆಗಳು, ತೋಡಿದಷ್ಟೂ ಆಳವಾಗುವ ಅರ್ಥವಂತಿಕೆ, ಚರ್ಚಿಸಿದಷ್ಟೂ ಹಿರಿದೆನಿಸುವ ಚಿಂತನಪರತೆ, ನೋಡಿದನಿತೂ ನಿತ್ಯನವೀನವೆನಿಸುವ ಅಂತರ್ಬಾಹ್ಯ ಸೌಂದರ್ಯಗಳು ಅವನ ವಚನಗಳು ಎದ್ದು ಕಾಣುವ ಸಿದ್ಧಿರಶ್ಮಿಗಳು. ಅವನ ವಚನಗಳನ್ನು ಓದುವಾಗ ಶಿಖರದಿಂದ ಶಿಖರಕ್ಕೆ ಹಾರಿದ ಅನುಭವ, ಜ್ಯೋತಿರ್ಲೋಕದಿಂದ ಜ್ಯೋತಿರ್ಲೋಕಕ್ಕೆ ಜಿಗಿದ ಅನುಭವ, ಜ್ಞಾನದಿಂದ ಅಜ್ಞಾತಕ್ಕೆ, ಶಬ್ಧದಿಂದ ನಿಶ್ಯಬ್ಧಕ್ಕೆ, ವರ್ಣನೀಯದಿಂದ ಅವರ್ಣನೀಯಕ್ಕೆ ನೆಗೆದ ಅನುಭವ ಉಂಟಾಗುತ್ತವೆ.

ಇದರ ಅರ್ಥ ಅಲ್ಲಮಪ್ರಭುವಿಗೆ ಶ್ರೀಸಾಮಾನ್ಯರಲ್ಲಿ ಆಸಕ್ತಿ ಅನುರಕ್ತಿಗಳೇ ಇರಲಿಲ್ಲವೆಂದಲ್ಲ. ಬಸವಣ್ಣನವರಂತೆ ಪ್ರಭುದೇವರೂ ಮಾನವಪಾರಮ್ಯದ ಪ್ರವಾದಿಗಳೆ. 'ಸಕಲದ ಅಳಿವಿನ ಉಳಿವಿನ ನಿಂದ ನಿಜದ ನಿಲವ ನೋಡಿ ಕಂಡ' ಅವರೇ ಈಶ್ವರ ಸೃಷ್ಟಿಯಲ್ಲಿ ಮಾನವನಿಗಿರುವ ಅದ್ಯತೆಯನ್ನೂ ಕಂಡು ಸಾರಿದರು.

'ಎನ್ನ ನಾನರಿಯದ ಮುನ್ನ ನೀನೇನಾಗಿದ್ದೆ ಹೇಳಾ? ಮುನ್ನ ನೀ ಬಾಯಿ ಮುಚ್ಚಿಕೊಂಡಿದ್ದೆಯೆಂಬುದ ನಾ ನಿನ್ನ ಕಣ್ಣಿಂದ ಕಂಡೆನು. ಎನ್ನ ನಾನರಿದ ಬಳಿಕ ಇನ್ನು ನೀ ಬಾಯ್ದೆರೆದು ಮಾತನಾಡಿದರೆ, ಅದನ್ನೆನ್ನ ಕಣ್ಣಿಂದ ಕಂಡು ನಾಚಿದೆ ನೋಡಾ'. 'ಎನ್ನ ಕಾಬ ನಿನಗೆ ನಿನ್ನ ಕಾಬ ಎನಗೆ ಸಂಚದ ನೋಟ ಒಂದೆ ನೋಡಾ? ಗುಹೇಶ್ವರ, ನಿನ್ನ ಬೆಡಗಿನ ಬಿನ್ನಾಣವನರಿದೆ ನೋಡಾ'.

ಮಾನವನಿಗೆ ಬಾಯಿಬಂದ ಮೇಲೆಯೇ ದೇವನಿಗೂ ಬಾಯಿ ಬಂದಿತೆಂದು ಹೇಳಿರುವುದು ಅದೆಷ್ಟು ಮಾರ್ಮಿಕವಾಗಿದೆ, ಮನೋಜ್ಞವಾಗಿದೆ. ಇನ್ನೂ ಆಲಿಸಿರಿ : 'ನಾ ದೇವನಲ್ಲದೆ ನೀ ದೇವನೆ? ನೀದೇವನಾದರೆ ಎನ್ನನೇಕೆ ಸಲಹೆ? ಅರ್ರೈದು ಬಂದು ಕುಡಿತೆ ಉದಕವನೆರೆವೆ, ಹಸಿದಾಗ ಬಂದು ತುತ್ತು ಓಗರವನಿಕ್ಕುವೆ, ನಾದೇವ ಕಾಣಾ, ಗುಹೇಶ್ವರಾ.'

ಮಾನವನ ಮೇಲ್ಮೆಯನ್ನು ಮನಗಂಡವನಾದುದರಿಂದಲೇ ಪ್ರಭು ಹೀಗೆ ಹೇಳಿದ:

'ಹುಟ್ಟುವರೆಲ್ಲರ ಹುಟ್ಟಬೇಡೆಂದೆನೆ? ಹೊಂದುವರೆಲ್ಲರ
ಹೊಂದಬೇಡೆಂದೆನೆ?
ಪ್ರಳಯದಲ್ಲಿ ಅಳಿವವರ ಅಳಿಯಬೇಡೆಂದೆನೆ? ಗುಹೇಶ್ವರ,
ನಿಮ್ಮನರಿದು
ನೆರೆದ ಬಳಿಕ ಧರೆಯ ಮೇಲುಳ್ಳವರ ಇರಬೇಡೆಂದೆನೆ?'

ತಾನು ಗುಹೇಶ್ವರನ ಅರಿದು ಬೆರೆದಿದ್ದರೂ ಲೋಕದ ಜೀವಿಗಳ ಬಗ್ಗೆ ಜಿಗುಪ್ಸೆಯಿಲ್ಲ ಪ್ರಭುವಿಗೆ. ಲೋಕದವರ ಕಾಕುನುಡಿ ಕಾಕು ನಡೆಗಳನ್ನು ಕಂಡಿರಲಿಲ್ಲವೆಂತಲ್ಲ. ಸಮಾಜದ ಎಲ್ಲ ಸ್ತರಗಳಲ್ಲಿ, ಜೀವನದ ಎಲ್ಲ ರಂಗಗಳಲ್ಲಿ ರಿಂಗಣಗುಣಯುತ್ತಿದ್ದ ಮಂಗತನ, ನಾಯಿತನ, ಹಂದಿತನಗಳಮ್ಮೆ ಸಾಕಷ್ಟು ಕಂಡಿದ್ದ: ಅಂತೆಯೇ, ಒಂದರ ಮೋರೆಯನೊಂದು ಮೂಸಿನೋಡಿ ಮತ್ತೊಚ್ಚಿ ಹೊತ್ತಿಂಗೆ ಕಚ್ಚಿಯಾಡಿ ಹೋದಂತಾಯಿತ್ತು ನೋಡಿರೇ– ಕಲಿಯುಗದ ಮೇಳಾಪವ'. ಗುರುವೆಂಬಾತ ಶಿಷ್ಯನಂತುವನರಿಯೆ; ಶಿಷ್ಯನೆಂಬಾತ ಗುರುವಿನಂತುವರಿಯ; ಭಕ್ತನೆಂಬಾತ ಜಂಗಮದಂತುವನರಿಯ, ಜಂಗಮನೆಂಬಾತ ಭಕ್ತನಂತುವನರಿಯ; ಗುರು ಗುರುವಿನಲ್ಲಿ ಸಮವಿಲ್ಲ, ಶಿಷ್ಯ ಶಿಷ್ಯರಲ್ಲಿ ಸಮವಿಲ್ಲ. ಭಕ್ತ ಭಕ್ತರಲ್ಲಿ ಸಮವಿಲ್ಲ. ಜಂಗಮ ಜಂಗಮದಲ್ಲಿ ಸಮವಿಲ್ಲ; ಇದು ಕಾರಣ ಕಲಿಯುಗದೊಳಗೆ ಉಪದೇಶವ ಮಾಡುವ ಕಾಳುಗಾರಿಕೆ ಮಕ್ಕಳನೇನೆಂಬೆ ಗುಹೇಶ್ವರ?'

ಮಾನವರಿಗೆ ಮಾಡುವ ಉಪದೇಶದ ಅಪ್ರಯೋಜಕತೆಯನ್ನು, ಅಸಾರ್ಥಕತೆಯನ್ನು ಅರಿತೋ ವಸೋಮನಕ್ಕುಪದೇಶ ಮಾಡಿದ್ದಾನೆ ಪ್ರಭು ಅಲ್ಲಲ್ಲಿ;

'ಎಲೆ ಮನವೆ, ಎಲ್ಲಿ ಹವಣಸಬಾರದ ಅಖಂಡ ಬೆಳಗು ತೋರುತ್ತಿಹುದು ಅದೀಗ ನಿನ್ನ ನಿಜ. ಎಲೆಮನವೆ. ಅವಲ್ಲಿ ನೀನೆಂಬ ಶಂಕೆ ಹಿಂಗಿ ತಾನೆ ತೋರುತ್ತಿಹುದು ಅದೀಗ ನಿನ್ನ ನಿಜ. ಎಲೆ ಮನವೆ, ನಿನ್ನ ನಿಜವನರಿಯಬಲ್ಲಡೆ ಅದೇ ಬ್ರಹ್ಮಜ್ಞಾನ. ಅದೇ ಕೇವಲ ಮುಕ್ತಿ. ಅದೇ ನಮ್ಮ ಗುಹೇಶ್ವರಲಿಂಗವನರಿವ ಸಹಜ ಭಕ್ತಿಯ ಕುಳ ಕಣಾ, ಎಲೆ ಮನವೆ, ನೀನಿದ ನಿಶ್ಚಿಯಿಸಿಕೋ ಮರೆಯದೆ.'

'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ. ಅವು ಜಗಕಿಕ್ಕಿದ ವಿಧಿ. ನಿನ್ನೊಡವೆಯೆಂಬುದು ಗುರುಲಿಂಗಜಂಗಮಕ್ಕೆ ದಾಸೋಹವ ಮಾಡುವ ಜ್ಞಾನರತ್ನ. ಅಂತಪ್ಪ ದಿವ್ಯರತ್ನವ ಕೆಡಗುಡದೆ ಆ ರತ್ನವ ನೀನಲಂಕರಿಸಿದೆಯಾದಡೆ ನಮ್ಮ ಗುಹೇಶ್ವರ ಲಿಂಗದಲ್ಲಿ ನಿನ್ನಿಂದ ಬಿಟ್ಟು ಸಿರಿವಂತರಾರು ಇಲ್ಲ ಕಾಣಾ, ಎಲೆ ಮನವೆ!'

ಸಿದ್ಧಶಿಷ್ಯಗಣವನ್ನು ಸಂಬೋಧಿಸದೆ, ಠರಾವಿಕ ಭಕ್ತಸಮುದಾಯವನ್ನು ಉದ್ದೇಶಿಸಿ ಹೇಳದೆ ಮನಕ್ಕೆ ಪ್ರಭು ಬೋಧಿಸಿದುದು ಒಂದು ದೃಷ್ಟಿಯಿಂದ ಒಳ್ಳೆಯದೇ ಆಯಿತು. ಆತನ ಸಂದೇಶ ವಿಶ್ವಕ್ಕೆ ನೀಡಿದ ಸಂದೇಶವಾಯಿತು; ಅವನ ವಚನಗಳು ಮನುಕುಲದ ಹಮದೈಶ್ವರ್ಯದ ಅಮೂಲ್ಯ ಅಂಗವಾದುವು. ಯಾವ ದೇಸದವರು ಈ ವಚನಗಳು ನಮಗೆ ಬೇಡವೆಂದಾರು?

'ಸಂಸಾರವೆಂಬ ಹೆಣ ಬಿದ್ದಿರೆ ತಿನ ಬಂಧ ನಾಯ ಜಗಳವ ನೋಡಿರೇ'
ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿದೆ, ಗುಹೇಶ್ವರನೆಂಬ
ಲಿಂಗ ಅಲ್ಲಿಲ್ಲ ಕಾಣರೇ',

'ಹೊನ್ನು ಮಾಯೆಯೆಂಬುದು, ಹೊನ್ನು ಮಾಯೆಯಲ್ಲ;'
ಹೆಣ್ಣು ಮಾಯೆಯೆಂಬುರು, ಹೆಣ್ಣು ಮಾಯೆಯಲ್ಲ;
ಮಣ್ಣು ಮಯೆಯೆಂಬುದು, ಮಣ್ಣು ಮಾಯೆಯಲ್ಲ
ಮನದ ಮುಂದಣ ಆಶೆಯೇ ಮಾಯೆ ಕಾಣಾ, ಗುಹೇಶ್ವರಾ;'
'ಕೊಟ್ಟ ಕುದುರೆಯನೇಲರಿಯದೆ ಮತ್ತೊಂದು ಕುದುರೆಯ
ಬಯಸುವವರು ವೀರರೂ ಅಲ್ಲ, ಧೀರರೂ ಅಲ್ಲ; ಇದು ಕಾರಣ,
ನೆರೆ ಮೂರು ಲೋಕವೆಲ್ಲವು ಹಲ್ಲಣವ ಹೊತ್ತುಕೊಂಡು
ಬಳಲುತ್ತೈದಾರೆ; ಗುಹೇಶ್ವರನೆಂಬ ಲಿಂಗವನವರೆತ್ತ ಬಲ್ಲರೋ'
'ದೇಶ ಗುರಿಯಾಗಿ ಲಯವಾಗಿ ಹೋದವರ ಕಂಡೆ,
ತಮಂಧ ಗುರಿಯಾಗಿ ಲಯವಾಗಿ ಹೋದವರ ಕಂಡೆ,
ಕಾಮ ಗುರಿಯಾಗಿ ಬೆಂದು ಹೋದವರ ಕಂಡೆ,

ನೀ ಗುರಿಯಾಗಿ ಹೋದವರನಾದನೂ ಕಾಣೆ ಗುಹೇಶ್ವರಾ:'

'ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷ ಗಂಗೆಯ ಮಿದಂಡಿಲ್ಲ,
ತುತ್ತ ತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ,
ನಿತ್ಯ ನೇಮದಿಂದ ತನುವ ಮುಟ್ಟಿಕೊಂಡೊದಿಲ್ಲ
ನಿಚ್ಚಕ್ಕೆ ನಿಚ್ಚ, ನೆನೆವ ಮನವ, ಅಂದಂದಿಗೆ ಅತ್ತಲಿತ್ತ ಹರಿವ ಮನವ
ಚಿತ್ತದಲ್ಲಿ ನಿಲಿಸಬಲ್ಲಡೆ ಬಚ್ಚ ಬರಿಯ ಬೆಳಗು ಗುಹೇಶ್ವರ ಲಿಂಗವು.'

'ಇಹಲೋಕ ಪರಲೋಕ ತನಿದ್ದಲ್ಲಿ, ಗಗನಮೇರುಮಂದಿರ
ತಾನಿದ್ದಲ್ಲಿ, ಸಕಲ ಭುವನ ತಾನಿದ್ದಲ್ಲಿ, ಸತ್ಯ ನಿತ್ಯ ನಿರಂಜನ
ಶಿವತತ್ತ್ವ ತಾನಿದ್ದಲ್ಲಿ, ಉತ್ತರೋತ್ತರ ಚತುರ್ನಳಯ ತಾನಿದ್ದಲ್ಲಿ,
ಚಂದ್ರ ಸೂರ್ಯ ತಾರಾಮಂಡಲ ತಾನಿದ್ದಲ್ಲಿ, ಅಂತರ ಮಹದಂತರ
ತಾನಿದ್ದಲ್ಲಿ, ಸ್ವತಂತ್ರ ಗುಹೇಶ್ವರ ಲಿಂಗ ತಾನಿದ್ದಲ್ಲಿ:'

'ಎಣ್ಣೆ ಬೇರೆ, ಬತ್ತಿ ಬೇರೆ, ಎರಡೂ ಕೂಡಿ ಸೊಡರಾಯಿತ್ತು;
ಪುಣ್ಯ ಬೇರೆ, ಪಾಪ ಬೇರೆ, ಎರಡೂ ಕೂಡಿ ಒಡಲಾಯಿತ್ತು;
ಮಿಗಬಾರದು, ಮಿಗದಿರಬಾರದು, ಒಡಲಿಚ್ಛೆಯ ಸಲಿಸದೆ
ನಿಮಿಷವಿರಬಾರದು;
ಕಾಯಗುಣವಳಿದು, ಮಾಯಾಜ್ಯೋತಿ ವಾಯುವ ಕೂಡದ ಮುನ್ನ
ಭಕ್ತಿಯ ಮಾಡಬಲ್ಲಾತನೇ ದೇವ, ದುಹೇಶ್ವರ;'
'ಹಿಡಿದ ಕೈಯ ಮೇಲೆ ಕತ್ತಲೆಯಯ್ಯಾ; ನೋಡುವ ಕಂಗಳ ಮೇಲೆ
ಕತ್ತಲೆಯಯ್ಯಾ; ನೆನೆವ ಮನದ ಮೇಲೆ ಕತ್ತಲೆಯಯ್ಯಾ;
ಕತ್ತಲೆಯೆಂಬುದು ಇತ್ತಲೆಯಯ್ಯಾ; ಗುಹೇಶ್ವರನೆಂಬುದು
ಅತ್ತಲೆಯಯ್ಯ;'
'ಗಗನವೇ ಗುಂಡಿಗೆ, ಆಕಾಶವೆ ಅಗ್ಘವಣಿ, ಸೂರ್ಯ
ಚಂದ್ರರಿಬ್ಬರೂ ಪುಷ್ಪನೋಡಾ;
ಬ್ರಹ್ಮಧೂಪ, ವಿಷ್ಣು ದೀಪ, ರುದ್ರನೋಗರ ಸಯಿಧನ ನೋಡಾ;
ಗುಹೇಶ್ವರಲಿಂಗಕ್ಕೆ ಪೂಜೆ ನೋಡಾ;'

ಅಲ್ಲಮ ಪ್ರಭುಗಳ ವಚನಗಳ ರನ್ನಗಣಿಯಿಂದಾಯ್ದು ಈ ನವರತ್ನಗಳ ಕಾಂತಿ ಸಾಲದೆ ನಮ್ಮ ಹೃದಯ ಕುಹರಗಳ ತಮಂಧವನ್ನಳಿದು ಅಲ್ಲಿ ಬೆಳಗಿನ ಬಳಗವನ್ನು ನೆರೆಯಿಸುವುದಕ್ಕೆ?

ಸೂತ್ರಗಳ ಸಂಗ್ರಹ ಶಕ್ತಿ, ಗಾದೆಗಳ ಗಾಡಿ, ನಾಣ್ಣುಡಿ ಜಾಣ್ಣುಡಿಗಳ ಜೋಡಣೆ, ಆಡುಮಾಡಿನ ಸೊಗಡು, ಪ್ರೌಢಭಾಷೆಯ ಗಾಂಭೀರ್ಯ, ನವೋನವ ರೂಪಕ ಪ್ರತೀಕ ಸಂಕೇತ ಸಾಮತಿಗಳ ರಮಣೀಯತೆ, ಗುಹ್ಯಾದ್ಗುಹ್ಯ ಜ್ಞಾನವನ್ನು ಜನವಾಣಿಯಲ್ಲಿಯೇ ಬಿತ್ತರಿಸುವ ಪ್ರತಿಭೆ – ಇತ್ಯಾದಿಗಳಿಗೆ ಉದಾಹರಣೆಗಳನ್ನು ಕೊಡುತ್ತ ಹೋದರೆ ಕೊಟ್ಟ ಸ್ಥಲಾವಕಾಶದ ಕಟ್ಟನ್ನು ಮುರಿಯಬೆಕಾದೀತು. ಆದುದರಿಂದ ಒಂದೆರಡು ಉದಾಹರಣೆಗಳಿಂದಲೇ ತೃಪ್ತರಾಗಬೇಕು ನಾವು:

'ಹರಿವ ನದಿಗೆ ಮೈಯೆಲ್ಲ ಕಾಲು. ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ,
ಬೀಸುವ ಗಾಳಿಗೆ ಮೈಯೆಲ್ಲ ಕೈ; ಇದು ಕಾರಣ, ಗುಹೇಶ್ವರ
ನಿಮ್ಮ ಶರಣಂಗೆ ಸರ್ವಾಂಗವೆಲ್ಲ ಲಿಂಗಮಯವಯ್ಯ;'
'ಉಭಯ ದೃಷ್ಟಿ ಏಕದೃಷ್ಟಿಯಲ್ಲಿ ಕಾಬಂತೆ, ದಂಪತಿ ಏಕಭಾವವಾಗಿ
ನಿಂದಲ್ಲಿ ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತು.'
'ರಾತ್ರಿಯೆಂಬ ಹುತ್ತಿನೊಳಗೆ ನಿದ್ರೆಯೆಂಬ ರಾಹು ಹೆಡೆಯನೆತ್ತಿ
ಕಚ್ಚಲೊಡನೆ
ಅಂಜನಾಸಿದ್ಧರ ಅಂಜನ ಹಾರಿತ್ತು, ಘಟಿಕಾಸಿದ್ಧರ ಘಟಿಕೆಯುರುಳಿತು.
ಯಂತ್ರಿಗಳ ಯಂತ್ರ – ಎದ್ದು ಹೋಯಿತ್ತು, ಮಂತ್ರಿಗಳ ಮಂತ್ರ
ಮರೆತು ಹೋಯಿತು. ಔಷಧಿಗಳ ಔಷಧವನಾರಡಿಗೊಂಡಿತ್ತು, ಸರ್ವ
ವಿದ್ಯಾಮುಖದ ಜ್ಯೋತಿ ನಂದಿತ್ತು;
ಈ ವಿಷಯದ ಲಹರಿಯಲ್ಲಿ ಮೂರು ಲೋಕದವರೆಲ್ಲರೂ
ಮೂರ್ಛಿತರಾದರು ಕಾಣಾ, ಗುಹೇಶ್ವರಾ;'
'ಕಾಲುಗಳೆರಡೂ ಗಾಲಿ ಕಂಡಯ್ಯ, ದೇಹವೆಂಬುದೊಂದು ತುಂಬಿದ
ಬಂಡಿ ಕಂಡಯ್ಯ;
ಬಂಡಿಯ ಹೊಡೆಯುವರೈವರು ಮಾನಿಸರು; ಒಬ್ಬರಿಗೊಬ್ಬರು
ಸಮವಿಲ್ಲವಯ್ಯ;
ಅದರಿಚ್ಛೆಯನರಿದು ಹೊಡೆಯದಿದ್ದರೆ ಅದರಚ್ಚು ಮುರಿಯಿತ್ತು
ಗುಹೇಶ್ವರ;'
'ಶಬ್ದಿಯಾದಾತ ತರುಗಳ ಹೋತ; ನಿಶ್ಯಬ್ದಿಯಾದಾತ
ಪಾಷಾಣವ ಹೋತ;
ಕೋಪಿಯಾದಾತ ಅಗ್ನಿಯ ಹೋತ; ಶಾಂತನಾದಾತ ಜಲವ ಹೊತ;
ಬಲ್ಲೆ ಬಲ್ಲೆನೆಂಬಾತ ಇಲ್ಲವೆಯ ಹೋತ; ಅರಿಯೆನೆಂಬಾತ
ಪಶುವ ಹೋತ;

೪. ಮಹಾದೇವಿ ೨೭೧ಇದು ಕಾರಣ, ಅರಿಯೆನೆನ್ನದೆ, ಬಲ್ಲೆನೆನ್ನದೆ, ಅರಿವಿನ ಕುರುಹನಳಿದುಳಿದು

ಗುಹೇಶ್ವರನೆಂಬ ಲಿಂಗವ ಹೋತವರನಾರನೂ ಕಾಣೆ;'

ಇಲ್ಲಿ ವ್ಯಕ್ತವಾಗಿರುವ ಉಕ್ತಿ ವೈಶಿಷ್ಟ್ಯಗಳ ವಿವರಣೆಗೆ ಸಮಯ ಸಾಲದು, ಸಮಯಾಭಾವವಿದ್ದರೂ ಅಲ್ಲಮಪ್ರಭುವಿನ ಮಿಂಚಿನ ಮಾತುಗಳು ಕೆಲವನ್ನು ಇಲ್ಲಿ ಹೇಳಲೇಬೇಕು. ಅಗ್ನಿಗೆ ತಂಪುಂಟೆ, ದಾಳಿಕಾರಂಗೆ ಧರ್ಮವುಂಟೆ?

ಅನಾಚಾರಿ ಗುರುವಿಂಗೆ ವ್ರತಗೇಡಿ ಶಿಷ್ಯನು. ಅಭ್ಯಾಸ ಮಾಡುವ ಕೋಲಿಂಗೆ ಶರಣೆಂದರೆ ಮುಂದಿನ ಬವರಕ್ಕಲಗಾಗಬಲ್ಲುದೆ?

ಅಮೃತಕಲೆಯ ಸೂಡಿದನಂಬಲಿಯನುಂಬನೆ?
ಅಮೃತ ಸಾಗರದೊಳಗಿದ್ದು ಆಕಳ ಚಿಂತೆಯೇಕೆ?
ಅರಿಯದಡೆರಡು, ಅರಿದರೊಂದೆ,
ಅವಧಾನತಪ್ಪಿ, ಆಚಾರಗೆಟ್ಟು ನಡೆದು ಶಿವಾಧೀನವೆಂದರೆ ಹೋಹುದೆ?
ಆಸೆಯ ಚೋಹವ ತೊಟ್ಟು ನಾಯಾಗಿ ಬೊಗಳುವವರನೇನೆಂಬೆ?
ಆಕಾಶವನಡರುವಂಗೆ ಅಟ್ಟಗೋಲ ಹಂಗೇಕೋ?
ಇಕ್ಷುದಂಡಕ್ಕೆ ಕೀಳುಮೇಲ್ಲದೆ ಸಕ್ಕರೆಯ ದಂಡಕ್ಕೆ ಕೀಳುಮೇಲುಂಟೆ?
ಉಳ್ಳವರು ಹಗೆಯವ ತೆಗೆವನ್ನಕ್ಕರ ಇಲ್ಲದವರ ಹರಣ ಹೋಯಿತ್ತು.
ಉಳಿ ಮುಟ್ಟಿದ ಲಿಂಗವ ಮನಮುಟ್ಟಬಲ್ಲುದೆ?
ಉಂಡುಉಪವಾಸಿ, ಬಳಸಿ ಬ್ರಹ್ಮಚಾರಿ
ಊರಕ್ಕಿ ಊರೆಣ್ಣೆ ಉಣ್ಣು ಮಾರಿಕಣ್ಣೆ
ಎಲ್ಲಾ ಅವನಿಯಲ್ಲಿ ಹೇಮವಿರ್ಪೂದೆ? ಇಪ್ಪುದೊಂದು ಠಾವಿನಲ್ಲಿ
ಒತ್ತಿ ಹಣ್ಣ ಮಾಡಿದಡೆ ಅದೆತ್ತಣ ರುಚಿಯಪ್ಪುದಘ?
ಒಲುಮೆಯ ಕೂಟಕ್ಕೆ ಹಾಸಿಗೆಯ ಹಂಗೇಕೆ?
ಒಳಗಣ ರಣರಂಗ, ಹೊರಗಣ ಶೃಂಗಾರ
ಓಡಿನೊಳುಂಟೆ ಕನ್ನಡಿಯ ನೋಟ?
ಕರ್ಪೂರದ ಗಿರಿಯ ಉರಿಯು ಹಿಡಿದರೆ ಇದ್ದಿಲುಂಟೆ?
ಕಳ್ಳಗಂಜಿ ಕಾಡ ಹೊಕ್ಕರೆ ಹುಲಿ ತಿಂಬುದ ಮಾಬುದೆ? ಹುಲಿಗಂಜಿ ಹುತ್ತವ ಹೊಕ್ಕಡೆ ಸರ್ಪತಿಂಬುದ ಮಾಬುದೆ?
ಕಾಡುಗಿಚ್ಚೆದ್ದರೆ ಅಡವಿಯೇ ಗುರಿ, ನೀರುಗಿಚ್ಚೆದ್ದರೆ ಸಮುದ್ರವೇ ಗುರಿ,

ಒಡಲುಗಿಚ್ಚೆದ್ದರೆ ಆ ತನುವೆ ಗುರಿ.
ಕುರುಹನೇ ಕಂಡರು. ಕೂಡಲರಿಯದೆ ಕೆಟ್ಟರು
ಕ್ರಿಯಾಮಥನವಿಲ್ಲದೆ ಕಾಣಬಹುದೆ ಇಕ್ಷುವಿನೊಳಗಣ ಮಧುರ?
ಕೆಂಡದ ಮಳೆ ಕರೆವಲ್ಲಿ ಉದಕವಾಗಿರಬೇಕು
ಕೆಂಡದ ಗಿರಿಯನರಗಿನ ಬಾಣದಲೆಚ್ಚಡೆ ಮರಳಿ ಬಾಣನನರಸಲುಂಟೆ?
ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದು ಕುದುರೆಯ
ಬಯಸುವವರು ವೀರರರೂ ಅಲ್ಲ, ಧೀರರೂ ಅಲ್ಲ.
ಗುಹೇಶ್ವರನ ಕೂಡಿದ ಕೂಟ ಇಂದು ಸುಖ, ಮುಂದೆ ಲೇಸು
ಘನತರದ ಚಿತ್ರದ ರೂಹ ಬರೆಯಬಹುದಲ್ಲದೆ ಪ್ರಾಣವ
ಬರೆಯಬಹುದೆ?
ತಮ್ಮ ಬುದ್ಧಿ ತಮ್ಮನ್ನೇ ತಿಂದಿತ್ತು.
ತಾ ಬಾಳಲಾರದೆ ವಿಧಿಯ ಬೈದ
ದೇಹವೇ ಪೀಠಿಕೆ, ಜೀವ ಲಿಂಗ
ಪಣತೆಯೂ ಇದೆ, ಬತ್ತಿಯೂ ಇದೆ, ಜ್ಯೋತಿಯು ಬೆಳಗುವುದೆ
ತೈಲವಿಲ್ಲದೆ?
ನಾಮವಿಲ್ಲದ ದೇವರಿಗೆ ನೇಮವೆಲ್ಲಿಯದೋ?
ಪರಿಮಳವಿಲ್ಲದ ನನೆಯನರಳಿಸಿ ಮುಡಿದಹೆನೆಂದರೆ ಸೌರಭ ಉಂಟೆ?
ಪರುಷದ ಪುತ್ಥಳಿಗೆ ಕಬ್ಬುನದ ಆಭರಣಗಳುಂಟೆ?
ಪರಿಣಾಮದೊಳಗೆ ಮನದ ಪರಿಣಾಮವೆ ಚೆಲುವ
ವರುಷವಿದೆ, ಕಬ್ಬುನವಿದೆ–ಸಾಧಿಸಬಲ್ಲವಂಗೆ
ಬಯಕೆಯೆಂಬುದು ದೂರದ ಕೂಟ, ಬಯಸೆನೆಂಬುದು ಕೂಟದ ಸಂದು
ಬಯಲ ಬಿತ್ತಲು ಇಲ್ಲ, ಬೆಳೆಯಲು ಇಲ್ಲ, ಒಕ್ಕಲೂ ಇಲ್ಲ,
ತೂರಲೂ ಇಲ್ಲ.
ಬಿರುಗಾಳಿ ಬೀಸಿ ಮರ ಮುರಿವಂತಹ ಸುಳಿಹ ಸುಳಿಯದೆ ತಂಗಾಳಿ
ಪರಿಮಳದೊಡಗೂಡಿ ಸುಳಿವಂತೆ ಸುಳಿಯಬೇಕು.
ಬೆಟ್ಟಕ್ಕೆ ಚಳಿಯಾದಡೆ ಏನ ಹೊದ್ದಿಸುವರಯ್ಯ? ಬಯಲು ಬತ್ತಲೆ
ಯಾದರೆ ಏನನುಡಿಸುವರಯ್ಯ?
ಬೆಲ್ಲದ ಪುತ್ಥಳಿಯ ಕೈಯಲ್ಲಿ ಹಿಡಿದು ಎಲ್ಲಿ ಚುಂಬಿಸಿದರೂ
ಇನಿದಹುದು
ಬೆಳ್ಳಿಗೆಯಾಕಳವೆಂದರೆ ಬಳ್ಳವಾಲ ಕರೆವುದೆ?
ಮದ್ಯವಲ್ಲವೇನು ಅಷ್ಟಮದಂಗಳು? ಮಾಂಸವಲ್ಲವೇನು ಸಂಸಾರಸಂಗ?
ಮನದ ಮುಂದಣ ಆಸೆಯೇ ಮಾಯೆ

ಮರಣವುಳ್ಳವರಿಗೆ ಮರುಜೇವಣ ಸಿಕ್ಕುವುದೆ?
ಮೇರುಮಂದಿರದೊಳಗಿದ್ದು ಜರಗ ತೊಳೆವ ಚಿಂತೆಯೇಕೆ?
ಮೇರುವ ಸಾರಿದ ಕಾಗೆ ಹೊಂಬಣ್ಣವಾಗದಿದ್ದರೆ ಆಮೇರುವಿಂದತ್ತಣ
ಹುಲುಮೊರಡಿಯೆ ಸಾಲದೆ?
ಮಂಜಿನ ಶಿವಾಲಯಕ್ಕೆ ಬಿಸಿಲ ಕಳಸವುಂಟೆ?
ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯ ಕೊಡುವಂತೆ
ರತ್ನದೀಪ್ತಿಯಾದರೇನು? ಬಂಧಿಸಿದ ಕುಂದಣದಲ್ಲಿಯೆ ಸಂದಿರಬೇಕು
ರಂಭೆಯ ನುಡಿ ಸಿಂಬಿಗೆ ಶೃಂಗಾರವೆ?
ಶಿರವಿಲ್ಲದ ಮುಂಡಕ್ಕೆ ಸೇಸೆಯನಿಕ್ಕುವರೆ?
ಸಕ್ಕರೆಯ ಸವಿವುದಕ್ಕೆ ಬೇವೊಂದು ಪದಾರ್ಥವೆ?
ಸತ್ಯವನರಿದವಂಗೆ ಮಿಥ್ಯಭಾವವುಂಟೆ?
ಸಹಜವ ನುಡಿದರೆ ಸೇರುವರಿಲ್ಲ. ಅಸಹಜಕ್ಕಲ್ಲದೆ ಲೋಕ ಭಜಿಸದು!
ಸಾಣೆಯ ಮೇಲೆ ಶ್ರೀಗಂಧವ ತೇವರಲ್ಲದೆ ಇಟ್ಟಿಗೆಯ ಮೇಲೆ ತೇವರೆ?
ಸಾವನ್ನಕ್ಕರ ಸಾಧನೆಯ ಮಾಡಿದರೆ ಕಾದುವ ದಿನವಾವುದು?
ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ
ಸಿಡಿಲೊಡನೆ ಕಾದುವಂಗೆ ಕೊಡೆಯೊಂದು ಮರೆಯೆ?
ಸಿಡಿಲು ಹೊಯ್ದ ಬಾವಿಗೆ ಸೋಪಾನವೇಕೊ?
ಪರ್ವತವ ಹೊರುವಂಗೆ ಸಿಂಬಿಯೊಂದು ಸಹಾಯವೆ?
ಹವಣಲ್ಲದ ಶಾಖೆಯ ಕಪಿ ಹಿಡಿಯಲೊಲ್ಲದು; ಗಮನವಿಲ್ಲದೆ
ಪಿಕಶಿಶು ನುಡಿಯದು;
ಪ್ರಭಾವಿಸಿದಲ್ಲದೆ ಉಲಿಯದು ಕುಕ್ಕುಟ
ಹಸಿದಡುಣಬಹುದೇ ನಸುಗುನ್ನಿ ತುರುಚಿಯನು?
ಹೊಲದಲ್ಲಿ ಆವಿಲ್ಲ. ಮನೆಯಲ್ಲಿ ಕರುವಿಲ್ಲ ನೆಲಹಿನ ಮೇಲಣ ಬೆಣ್ಣೆ
ಇದು ದಿಟವೊ?
ಹೊಸ ಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು
ಹೊರಗನೆ ಕೊಯ್ದು, ಹೊರಗನೆ ಪೂಜಿಸಿ, ಹೊರಗಾಗಿ ಹೋಯಿತ್ತು
ತ್ರಿಜಗವೆಲ್ಲ

ಇಂಥ ವಾಕ್ಯಮಾಣಿಕ್ಯಗಳನ್ನು ಇನ್ನೂ ಆರಿಸಬಹುದು ಅಲ್ಲಮಪ್ರಭುಗಳ ಅನರ್ಘ್ಯ ವಚನಗಳಿಂದ.

ಇವುಗಳಲ್ಲಿ ನಿಗಮಾಗಮಾದಿಗಳಿಂದ ಪ್ರಚೋದಿತವಾದ ಸಾರೋಕ್ತಿಗಳಿಗಿಂತ ಸ್ವಾನುಭವ ಪ್ರೇರಿತವಾದ, ಸುತ್ತು ಮುತ್ತಲಿನ ಸಮಾಜದಿಂದ, ಸೃಷ್ಟಿಯಿಂದ, ಜೀವನದಿಂದ, ಅವರ

ಮೌಲ್ಯ ಪ್ರಜ್ಞೆಯಿಂದ, ಆಧ್ಯಾತ್ಮಿಕ ಅನುಭೂತಿಯಿಂದ, ಅತಿ ಮಾನಸದಿಂದ ಅವಿರ್ಭವಿಸಿದ ಮಹಾವಾಕ್ಯಗಳೇ ಹೆಚ್ಚು. ಇವುಗಳಲ್ಲಿ ರಸ ಪ್ರಜ್ಞೆ, ನೀತಿಪ್ರಜ್ಞೆ, ಆಧ್ಯಾತ್ಮಿಕ ಪ್ರಜ್ಞೆಗಳು ಸಹಜವಾಗಿ ಸಂಗಮಿಸಿರುವುದು ಅವುಗಳ ಹೃದಯಂಗಮತೆಯನ್ನು ಹೆಚ್ಚಿಸಿದೆ. ಈ ಉಕ್ತಿ ಮೌಕ್ತಿಕಗಳ ಮಾಲೆ ನಮ್ಮ ಮಾನಸಕ್ಕೆ ಮಾಸದ ಅಲಂಕಾರ.

ಪ್ರಭುದೇವರ ವಚನಗಳ ಬಗ್ಗೆ ವಿವೇಚಿಸುವಾಗ ಅವರ ಬೆಡಗಿನ ವಚನಗಳ ಬಗ್ಗೆ ಒಂದೆರಡು ಮಾತುಗಳನ್ನಾದರೂ ಹೇಳಲೇಬೇಕು. (ಬೆಡಗು ಎಂದರೆ 'ಚಲುವು, ಸರಳವಲ್ಲದ್ದು ಎಂದು ಅರ್ಥ.ಯಾವುದನ್ನು ಹಲವಾರು ಮಾತುಗಳಲ್ಲಿ ಬಿಚ್ಚಿ ಹೇಳಬಹುದಿತ್ತೋ ಅದನ್ನು ಕಡಿಮೆ ಮಾತುಗಳಲ್ಲಿ ಮುಚ್ಚಿ ಹೇಳುವುದು ಬೆಡಗಿನ ವಚನಗಳ ವೈಶಿಷ್ಟ್ಯ. ಭಾರತೀಯ ತಂತ್ರ ಸಾಹಿತ್ಯದಲ್ಲಿ ಬರುವ 'ಸಂಧಾಬಾಷಾ' ಎಂಬುದೂ ಇದೇ ಶೈಲಿಯ ರಚನೆ', ಎಂದು ವಿಶದೀಕರಿಸಿದ್ದಾರೆ ಡಾ॥ ಎಂ. ಚಿದಾನಂದಮೂರ್ತಿಯವರು 'ಬೆಡಗು' ಎಂಬುವ ಪದಕ್ಕೆ ವಚನಸಾಹಿತ್ಯದಲ್ಲಿ ಇನ್ನೂಹೆಚ್ಚಿನ ವಿಶೇಷಾರ್ಥವಿದ್ದರೂ ಇರಬಹುದು. 'ಬೆಡಗು' ಎಂಬುದನ್ನು ಸ್ವಲ್ಪ ಬದಲಿಸಿದರೆ 'ಬೆಗಡು' ಎಂದಾಗುತ್ತದೆ. ಅಲ್ಲಮನಿಗೋ ಬೆಡಗು, ನಮಗೆ ಬೆಗಡು.

ಹೀಗೆಂದ ಮಾತ್ರಕ್ಕೆ ಬೆಡಗಿನ ವಚನಗಳು ನಿರುಪಯೋಗಿಯೆಂದು ಹೇಳಲಾಗದು. ಅವುಗಳ ಮೂಲಕ ಹೊಸ ರೂಪಕಗಳ ಪ್ರತಿಮೆಗಳ ಪ್ರತೀಕಗಳ. ಸಂಕೇತಗಳ ಹೊಸ ಪ್ರಪಂಚವನ್ನು ನಾವು ಬೇರೆ ಕಡೆಗಳಲ್ಲಿಯೂ ನೋಡಬಹುದು. ಆದರೆ ಇಲ್ಲಿ ತೆರೆಯಲಾಗಿರುವ ಪ್ರಪಂಚ ಅದ್ಭುತವಾದುದು. ಅಲ್ಲಮಪ್ರಭುಗಳ ಬೆಡಗಿನ ವಚನಗಳಲ್ಲಿಯೇ ಭೂತವರ್ಗ, ಪಶು-ಪಕ್ಷಿ ಪ್ರಾಣಿವರ್ಗ, ಸಸ್ಯವರ್ಗ, ಮಾನವ ದೈಹಿಕವರ್ಗ, ಭೂಗೋಲ ಖಗೋಲವರ್ಗ, ಗ್ರಾಮ-ಗೃಹ-ಸಾಮಗ್ರಿವರ್ಗ, ದಿಕ್-ಸಂಖ್ಯಾವರ್ಗ, ಅತಿಮಾನ್ ವರ್ಗಗಳಿಗೆ ಸಂಬಂಧಿಸಿದಂತೆ ಎಷ್ಟು ಬೆಡಗಿನ ಪದಗಳು ಬಂದಿವೆಯೆಂಬುದನ್ನು ಡಾ॥ ಎಲ್ ಬಸವರಾಜು ಅವರು ತೋರಿಸಿದ್ದಾರೆ. ತಮ್ಮ 'ಅಲ್ಲಮನ ವಚನ ಚಂದ್ರಿಕೆ'ಯಲ್ಲಿ. ಒಂದು ದೇಹಕ್ಕೆ ಸಂಬಂಧಿಸಿದಂತೆಯೇ ಅಪ್ಪು, ಧರೆ, ನೆಲ, ಪೃಥ್ವಿ, ಮಣ್ಣು, ಭೂಮಿ, ಗೂಡು, ತತ್ತಿ, ಪಂಜರ, ಕದಳಿಯಬನ, ಗಿಡು, ತಾಳೆಮರ, ತೋಟ, ಸಾರಿವಾಳದ ಕಾಯಿ, ಒಡಲು, ಏರಿ, ಕಲ್ಲು, ಕೊಂಕಣದ್ವೀಪ, ಜಂಬೂದ್ವೀಪ, ದೇಶ, ಭಾವಿ, ಮುಗಿಲು, ಮೇಘ, ಮೇರು, ಹುತ್ತ, ಊರು, ಒರಳು, ಒಲೆ (ತನುತ್ರಯ) ಕಂದಲಿ, ಕಬ್ಬುನ, ಕೊಡ, ಪಟ್ಟಣ, ಪುತ್ಥಳಿ, ಮರ, ಬಗರಿಗೆ, ಭಿತ್ತಿ, ಮಂಟಪ, ಮಠ ಮಡಕೆ, ಮಸಿ, ಸೆಜ್ಜೆ, ಹರಗೋಲು, ಹೊರೆಗೇರಿ, ತೊಟ್ಟಿಲು, ಅರೆ, ಎಂಟು (ಅಷ್ಟ ತನು) ಎಂಬ ನಾಲ್ವತ್ತು ಏಳು ಬೆಡಗಿನ ಪದಗಳು ಬಂದಿವೆ. ಇವುಗಳಿಂದ ಕನ್ನಡ ನುಡಿಯ ಸಿರಿವಂತಿಕೆ, ಅರ್ಥವಂತಿಕೆ ಹೆಚ್ಚಿಲ್ಲದೆ? ಇವುಗಳನ್ನು ಆರಿಸಿಕೊಳ್ಳಲು ಆಧರಿಸಿದ ಸೂತ್ರಗಳ ವಿಷಯವೇ ಒಂದು ಅಧ್ಯಯನಕ್ಕೆ ಸಾಮಗ್ರಿಯಾದೀತು. ಕೆಲವು ಬೆಡಗಿನ ಪದಗಳ ಔಚಿತ್ಯವಂತೂ

ವಿಸ್ಮಯಕಾರಕವಾದುದು. ಉದಾಹರಣೆಗೆ ಇಲ್ಲವೆ ಮಾಯೆ, ಉರಿ–ತಾಪತ್ರಯ, ಗಾಳಿಯಧೂಳಿ–ರಜೋಗುಣಯುಕ್ತ ವಿಆರ, ನೆಲನಿಲ್ಲದ ಭೂಮಿ–ಭೂಮಿಪಿಂಡನೆಯ ಭಾವ ಹಿಂಗಿದ ಭಕ್ತಿಯೆಂಬ ಪಿಂಡ, ಕಸ್ತೂರಿಯ ಮೃಗ ಸ್ವಾನುಭಾವ, ಕುರಿಗಳು–ಇಂದ್ರಿಯಗಳು, ಕೊಂಬು–ಅಹಂಕಾರ, ನೊಣ–ಸಂಶಯ, ಪಕ್ಕ–ಭಕ್ತಿ ಮತ್ತು ಜ್ಞಾತ. ಅಗಳಿಯಮರ, ಮರ–ವಾಗ್ಜಾಲ, ಬೇರು–ಮೂಲಾಹಂಕಾರ, ಬೇರಿಲ್ಲದ ಮರ–ವಿವೇಕ, ಹವಳಬಳ್ಳಿ, ಮಂತ್ರಚೇತನ, ಎಂಜಲು, ಭವಭವಗಳಲ್ಲಿ ಉಂಡುಂಡು ಮಿಕ್ಕ ಪ್ರಾರಬ್ಧಕರ್ಮ, ಕಂಗಳಕರುಳು – ಇದಿರಿಟ್ಟು ತೋರುವ ಭಿನ್ನರೂಪ, ಕಣ್ಣಕಾಡು, ಅಜ್ಞಾತ, ಕಾಲುಂಟು ಹೆಜ್ಜೆಯಲ್ಲಿ, ಮನಸ್ಸು ಚಲಿಸುವುದನ್ನು ತಿಳಿಯಬಹುದು ಆದರೆ ಅದರ ಹೆಜ್ಜೆ ಕಾಣಬಾರದು. ಕುಲ–ದೇಹಜಾಡ್ಯ, ಕೈ ಬೆಸಲಾಗು–ಕೈಗೆ ಇಷ್ಟಲಿಂಗಪ್ರಾಪ್ತಿಯಾಗು, ತಲೆ–ಜ್ಞಾನ, ತಲೆಮಾತ, ಶುದ್ಧಜ್ಞಪ್ತಿಯೇ ಶಿರಸ್ಸಾಗಿರುವ ಪರಬ್ರಹ್ಮ, ನೋಟ–ಮೂಲಜ್ಞಾನದ ದೃಷ್ಟಿ, ಬಾಯ ಬಾಗಿಲ ತಲೆ ಹೊಲ. ವಾಗದ್ವೈಕ, ಅದರ ಅರಿವು, ಮದವಣಿಗನಿಕೆ ಮದವಳಗಿತ್ತಿ ರಂಡೆ–ಶಿವಭಾವವಿರಲು ಶರಣಭಾವನಷ್ಟ. ಮೂಗು–ಸದ್ವಾಸನೆ, ಸ್ವಪ್ನ – ದೇಹೋಹಂಭಾವ, ಕರಿ–ಅಜ್ಞಾನ, ತೂಬು–ನವನಾಳಗಳು, ತೊರೆ–ಹರಿವ ಮನಸ್ಸು, ಊರಿಲ್ಲದ ಊರು–ದೇಹಭಾವವಳಿದ ನಿರ್ದೇಹ, ಬಿಲ್ಲು–ಮನ, ಮನೆಯಕಟ್ಟಿದರೆ–ಹುಟ್ಟಿದರೆ, ಮೂಬೀದಿ–ಭೂತ, ವರ್ತಮಾನ, ಭವಿಷ್ಯ, ಸೂಜಿ, ಮನಸ್ಸು, ಸೂಲಗಿತ್ತಿ, ಹೊಗೆ–ಅಜ್ಞಾನಭಾವ, ಹಿಪ್ಪ–ವಿಶ್ವವ್ಯಾಪಕತ್ವ ಇತ್ಯಾದಿಗಳಲ್ಲಿ ಅವಿತಿರುವ ಔಚಿತ್ಯ ಪ್ರಜ್ಞೆ ಭಾಷಾಸಿದ್ಧಿಗಾಗಿ ಮಾಡಿದ ದಿಟ್ಟ ಪ್ರಯೋಗಗಳು ಇಂದಿಗೂ ಅನುಸರಣೀಯ.

ಒಟ್ಟಿನಲ್ಲಿ ಅಲ್ಲಮ ಪ್ರಭುಗಳ ವಚನಗಳು ವಿದ್ಯಾರ್ಥಿಗಳಿಗೆ ಉಕ್ಕಿನ ಕಡಲೆಗಳು. ಜಿಜ್ಞಾಸುಗಳಿಗೆ ಉಪ್ಪುಗಡಲೆಗಳು, ವಿಜಿಗೀಷುಮತಿಗಳಿಗೆ ಹುರಿಗಡಲೆ ಬೆಲ್ಲ–ಅಲ್ಲ ಕಡಲೆಬೇಳೆಯ ಹೂರಣದ ಹೋಳಿಗೆಗಳು. ಇವುಗಳ ಅಧ್ಯಯನ ಅನುಸಂಧಾನಗಳು ಈಗ ನಡೆದಿರುವುದಕ್ಕಿಂತ ನೂರ್ಮಡಿ ಸಾಸಿರ್ಮಡಿ ನಾಡಿನ ಒಳಗೂ ಹೊರಗೂ, ದೇಶ ವಿದೇಶಗಳಲ್ಲಿ ನಡೆದರೆ ಒಂದು ಹೊಸ ಬೆಳಕಿನಲ್ಲಿ ಜಳಕ ಮಾಡಿದ ಅನುಭವ ಅಸಂಖ್ಯಾತರಿಗೆ ಒದಗೀತು!

ಪ್ರಭುವೆ ಮಹಾಗುರುಪ್ರಭುವೆ ಲಿಂಗಕಳಾಪ್ರಭುವೇ ಚರಾಭಿದ ।
ಪ್ರಭುವೆ ಶಿವಾತ್ಮವಿತ್ಪ್ರಭುವೆ ಯೋಗಿವರ ಪ್ರಭುವೇ ಚಿದಂಗನಾ ॥
ಪ್ರಭುವೆ ಸದಾಮಲ ಪ್ರಭುವೆ ರಕ್ಷಿಸು ದೇವ ಗುಹೇಶ್ವರಾಲ್ಲಮ ।
ಪ್ರಭುವೆ ನಿರಂಜನ ಪ್ರಭುವೆ ಮತ್ಪ್ರಭುವೇ ಪ್ರಭುವೇ ಶಿವಾಧವಾ ।

## ೧೬

# ಅಣ್ಣನ ಅಸೀಮ ಅನುಕಂಪೆ

ಅಹಿಂಸೆ ಸತ್ಯ, ದಯೆ, ಕ್ಷಮೆ, ದಾನ, ಧ್ಯಾನ ಇತ್ಯಾದಿ ಗುಣಗಳು ಕೇವಲ ವೈಯಕ್ತಿಕ ಸದ್ಗುಣಗಳಾಗಿ ಉಳಿದರೆ ಸಮಾಜೋತ್ಕರ್ಷ, ಸಮಾಜದ ನೈತಿಕ ಉನ್ನತಿ ಹಾಗೂ ಸಮಷ್ಟಿ ಸಾಮರಸ್ಯಗಳು ಸಂಪೂರ್ಣವಾಗಿ ಸಾಧಿತವಾಗದೇ ಹೋಗುತ್ತವೆ ಬಹುತೇಕವಾಗಿ ವೈಯಕ್ತಿಕ ಸದ್ಗುಣಗಳಾಗಿಯೇ ಉಳಿಯುವ ಇವುಗಳನ್ನು ಸಾಮೂಹಿಕ ಸದ್ಗುಣಗಳನ್ನಾಗಿ ಪರಿವರ್ತಿಸಿ ಸಮಷ್ಟಿಯ ಸಹಕಾರದೊಂದಿಗೆ ವೃಷ್ಟಿ–ಸಮಷಟಿಗಳ ಅತ್ಯಂತಿಕ ವಿಕಾಸವನ್ನು ಸಾಧಿಸುವವರು ಆಗೊಮ್ಮೆ ಈಗೊಮ್ಮೆ ಹುಟ್ಟುತ್ತಾರೆ. ಸತ್ಯ ಅಹಿಂಸೆಗಳನ್ನು ಸಾಮೂಹಿಕ ಸದ್ಗುಣಗಳನ್ನಾಗಿ ಪರಿವರ್ತಿಸಿ ಸ್ವಾತಂತ್ರ್ಯ ಸಮರವನ್ನು ಗೆದ್ದ ಗಾಂಧೀಜಿಯವರಂತೆ, ಕ್ರಿಸ್ತನ ಪ್ರೇಮ ಸಂದೇಶವನ್ನು ಆಧಿರಿಸ ಅಸಂಖ್ಯ ದೀನ ದಲಿತರ ಸೇವೆಯಲ್ಲಿ ಧನ್ಯತೆಯ ದಾರಿ ಕಂಡ ಮದರ್ ತೆರೆಸಾಳಂತೆ.

ಬಸವರ್ಣಣನವರದು 'ದಯೆಯ ದಾರಿ. ದಯವೇ ಧರ್ಮದ ಮೂಲ'ವೆಂದು ಸಾರಿ ಅಲ್ಲಿಗೇ ನಿಲ್ಲಲಿಲ್ಲ ಅವರು. 'ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ' ಎಂದು ಹೇಳಿ ದಯೆ ವೈಯಕ್ತಿಕ ಸದ್ಗುಣವಾಗಿ ಮಾತ್ರ ಉಳಿಯದೇ ಅದು ಸಾರ್ವಜನಿಕ ಸ್ಗುಣವಾಗುವಂತೆ ಮಾರ್ಗದರ್ಶನ ಮಾಡಿದರು. ತಾನು ಜೀವಹಿಂಸೆ ಮಾಡದೆ ಬದುಕಿದಾಗ ಅಹಿಂಸೆ ವೈಯಕ್ತಿಕ ಸದ್ಗುಣ. ಅನ್ಯರು ಹಿಂಸೆಗೆ ಒಳಗಾದಾಗ ಅದನ್ನು ತಡೆಯಲು ಮುಂದಾದಾಗ ಅದು ಸಾಮೂಹಿಕ ಸದ್ಗುಣ. ಅಂತೆಯೇ ಪ್ರೇಮ, ದಯೆ ಇತ್ಯಾದಿಗಳು ಸಾಮೂಗಿಕ ಸದ್ಗುಣಗಳ ಸ್ವರೂಪವನ್ನೂ ಪಡೆದು ದಿವ್ಯ ಜೀವನದ ದಾರಿ ದೀಪಗಳಾಗಬೇಕು.

ಬಸವಣ್ಣನವರು ದಯೆಯನ್ನು ಸಕ್ರಿಯ ಸಾಮೂಹಿಕ ದಯೆಯನ್ನಾಗಿ ಮಾರ್ಪಡಿಸಿ 'ಸರ್ವಜೀವ–ದಯಾ–ಪಾರಿತ್ವ'ದ ಪ್ರಬುದ್ಧ ಕಲ್ಪನೆಯನ್ನು ಲೋಕದ ಮುಂದಿಟ್ಟರು. 'ಜೀವ ಜೀವಾತ್ಮವ ಸರಿಯೆಂದು ಕಂಡರೆ ಸಮವೇಧಿಸದಿಪ್ಪನೆ ಶಿವನು?' ತನ್ನ ಮನದಲ್ಲಿ 'ಯತ್ರಜೀವಸ್ತತ್ರಶಿವ'ನೆಂದು ಸರ್ವಜೀವದಯಾಪಾರಿಯಾದಲ್ಲಿ ಕೂಡಲಸಂಗಮದೇವನು

ಬಂದು ಎತ್ತಿಕೊಳ್ಳದಿಪ್ಪನೆ?' ಎಂದು ಪ್ರಶ್ನಿಸಿದರು. 'ಅನೀ ಬಿಜ್ಜಳಂಗಂಜುವೆನೆ ಅಯ್ಯ ನೀನು ಸರ್ವಜೀವದಯಾಪಾರಿಯಾದ ಕಾರಣ ನಿನಗಂಜುವೆನಲ್ಲದೆ?' ಎಂದು ಕೇಳಿದರು.

ದಯೆ ಸರ್ವಜೀವದಯಾಪಾರಿತ್ವವಾಗಿ ಸಾಮೂಯಹಿಕ ಸದ್ಗುಣವಾಗುತ್ತದೆ. 'ಯತ್ರ ಜೀವಸ್ತತ್ರ ಶಿವ'ನೆಂಬ ಮಹಾವಾಕ್ಯವು ವಾಕ್ಯಮಾತ್ರವಾಗಿ ಉಳಿಯದೆ ಸರ್ವ ಕಲ್ಯಾಣದ ಸುವರ್ಣಸೂತ್ರವಾಗಿ ಸರ್ವರೂ ನಿರ್ಭಯರಾಗಿ ಬಾಳಿ, ಸರ್ವಜೀವಹಿತರತಿಯುಗೆ ಮೊಗವೆತ್ತುವಂತೆ ಮಾಡುತ್ತದೆ.

ಈ ಸರ್ವಜೀವದಯಾಪಾರಿತ್ವವು 'ಬೀದಿಯಲ್ಲಿ ಬಿದ್ದ ಶಿಶುವನ್ನು ಹತ್ತಿರ ಬಂದು ಎತ್ತುವ ಹೆತ್ತ ತಾಯಿ'ಯಂತಾದಾಗ ಅನುಕಂಪೆಯಾಗುತ್ತದೆ. ಸ್ವಾನುಕಂಪೆಯಲ್ಲ, ಸರ್ವಾನುಕಂಪೆ. ಕಾಗೆಯೊಂದಗುಳ ಕಂದೊಡೆ ತನ್ನ ಬಳಗವೆಲ್ಲವ ಕೂಗಿ ಕರೆವುದು. ಈ ಅನುಕಂಪೆ ಕಾರಣವಾಗಿ : ಕೋಳಿಯೊಂದು ಗುಟುಕ ಕಂಡರೆ ತನ್ನ ಕುಲವನೆಲ್ಲವ ಕರೆವುದು ಈ ಅನುಕಂಪೆಗೆ ಒಳಗಾಗಿ ಮಾನವನು ಉತ್ಪೀಡಿತರ. ದೀನ ದಲಿತರೆ ನೆರವಿಗೆ ಧಾವಸುವುದು. ಈ ಅನುಕಂಪೆಯ ಕರೆಗೆ ಓಗೊಟ್ಟು. ಈ ಅನುಕಂಪೆ ಕಡಮೆಯಾಗಿಯೇ ಬೀದಿಯಲ್ಲಿ ಬಿದ್ದವರನ್ನು, ಹಾಡು ಹಗಲೇ ಅತ್ಯಾಚಾರಕ್ಕೆ ಒಳಗಾಗುತ್ತಿರುವ ಅಬಲೆಯರನ್ನು, ಹಸಿದು ಕಂಗಾಲಾಗಿರುವ ಕೂಸುಗಳನ್ನು, ಕಸದ ತೊಟ್ಟಿಗಳಲ್ಲಿ ಅನ್ನದ ಅಗುಳುಗಳನ್ನು ಆಯುತ್ತಿರುವ ಅನಾಥರನ್ನು ಕಣ್ಣಾರೆ ಕಂಡೂ ಏನು ಅರಿಯದವರಂತೆ ಮುಂದೆ ಸಾಗುತ್ತೇವೆ. ನಮ್ಮಲ್ಲಿ ಸಯಲಾಗಿರುವ ಈ ಅನುಕಂಪೆಗೆ ಅಣ್ಣನ ಸರ್ವಜೀವದಯಾಪಾರಿತ್ವದ ರಕ್ತದಾನ ನೀಡಿ ಅದು ಸಜೀವ ಹಾಗೂ ಸಕ್ರಿಯವಾಗುವಂತೆ ಮಾಡದಿದ್ದರೆ ನಮ್ಮ ಪಟ್ಟಣಗಳೆಲ್ಲ ನಿಷ್ಠೆಯಿಲ್ಲದವರ ದಟ್ಟಡವಿಗಳೇ ಆಗಿ ಉಳಿಯುವುದು.

ಅಣ್ಣವ ಅನುಕಂಪೆ ಅಸೀಮವಾದುದು – ಸಮಸ್ತ ಸಚರಾಚರ ಸೃಷ್ಟಿಯನ್ನೇ ತನ್ನ ತೆಕ್ಕೆಯಲ್ಲಿ ಒಳಗೊಂಡುದು. ಕಳ್ಳರು ಹಸುಗಳನ್ನು ಕದ್ದೊಯ್ದಾಗ, ಮಹಾ ಮಂತ್ರಿಯಾಗಿದ್ದೂ ಕಳ್ಳರನ್ನು ಬಂಧಿಸಿ ತರಲು ಆಜ್ಞೆ ನೀಡದೇ ಕರುಗಳನ್ನು ಅವುಗಳ ತಾಯಿಯರ ಬಳಿಗೆ ಕಳಿಸಿಕೊಟ್ಟ, 'ಮಾತಿನ ಮಾತಿಗೆ ನಿನ್ನ ಕೊಂದಾರೆಂದು ಎಲೆ ಹೋತೆ ಅಳು ಕಂಡೆಯಾ' ಎಂದು ಕನಿಕರಿಸಿದ ಬಸವಣ್ಣನವರ ಅನುಕಂಪೆ ಅದೆಷ್ಟು ಅಸೀಮವಾದುದೆಂಬುದನ್ನು ಊಹಿಸಿಯೇ ತಿಳಿಯಬೇಕು.

ಪಶುಪಕ್ಷಿಗಳ ಬಗ್ಗೆ ಸದಯರಾಗಿರುವಷ್ಟು ಸುಲಭವಾದುದು ದುಃಖಿತ ಮಾನವರ ಬಗ್ಗೆ ಅನುಕಂಪೆ ತೋರುವದು ಸುಲಭವಲ್ಲ. ಮಾನವರೇ ಮಾನವರಲ್ಲಿ ಹುಟ್ಟುಹಾಕಿರುವ ವರ್ಣ–ವರ್ಗ–ಜಾತಿ–ಕುಲ–ಕಸುಬುಗಳನ್ನು ಆಧರಿಸಿರುವ ಮೇಲು ಕೀಳುಗಳೆಷ್ಟು, ನೋಚೋಚ್ಚ ಭಾವನೆಗಳೆಷ್ಟು; ಅಸಮತೆ ವಿಷಮತೆಗಳೆಷ್ಟು! ಹುಟ್ಟು ಕಾರಣವಾಗಿ ಕುಲಜ–

ಕುಲಹೀನರು, ಅಗ್ರಜ – ಅಂತ್ಯಜರು; ದಾಸೀಪುತ್ರ –ವೇಶ್ಯಪುತ್ರರು, ಆರ್ಥಿಕ ವ್ಯವಸ್ಥೆ ಕಾರಣವಾಗಿ ದಾಸರು, ಋಣಬಂಧಿತರು. ಈ ಯಾದಿಯನ್ನು ಎಷ್ಟು ಬೇಕಾದರೂ ಬೆಳೆಸಬಹುದು. ಜಾತಿಗಳ ಈ ಜನ್ಮಭೂಮಿಯಲ್ಲಿ!

ಇವರೆಲ್ಲರ ಬಗ್ಗೆ ಒಂದೇ ವಿಧವಾದ ಅನುಕಂಪ ತೋರುವುದು ಅನ್ಯರಿಗೆ ಸಾಧ್ಯವಾಗದಿದ್ದರೂ ಅಣ್ಣನವರಿಗೆ ಸಾಧ್ಯವಾಯಿತು. ಹುಟ್ಟಿನ ಮೂಲಕ ಹುಟ್ಟಿದ ಕೃತ್ರಿಮ ವಿಭೇದಗಳ ಬೇರುಗಳನ್ನೇ ಕೀಳಲು ತಮ್ಮ ಹುಟ್ಟನ್ನೇ ಹುಟ್ಟಿನಿಂದ ಕೀಳರೆನ್ನಿಸಿದ್ದವರ ಮಟ್ಟಕ್ಕೆ ಇಳಿಸಿಕೊಂಡರು.

'ಹರನು ಮೂಲಿಗನಾಗಿ; ಪುರಾತರೊಳಗಾಗಿ,
ಬಳಿ ಬಳಿಯಲು ಬಂದ ಮಾದಾರನ ಮಗ ನಾನಯ್ಯ!
ಕಳದ ಹೊಲೆಯನೆಮ್ಮಯ್ಯ; ಜಾತಿ ಸೂತಕ
ಮಾದಾರನ ಮಗ ನಾನಯ್ಯ,
ಕೂಡಲ ಸಂಗಯ್ಯ
ಚನ್ನಯ್ಯನೆನ್ನ ಮುತ್ತಯ್ಯನಜ್ಜನಪ್ಪಯ್ಯ ॥'

ಇನ್ನೂ ಮುಂದೆ ಹೋಗಿ ಚನ್ನಯ್ಯನ ಮನೆಯ ದಾಸಿಯ ಮಗ ಕಕ್ಕಯ್ಯನ ಮನೆಯ ದಾಸಿಯ ಮಗಳಿಗೆ ಹುಟ್ಟಿದ ಮಗ ನಾನು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ ಬಸವಣ್ಣನವರು. ಇದು ಮೇಲಿನವರು, ಕೆಳಗಿನವರನ್ನು ಪ್ರದರ್ಶನಕ್ಕಾಗಿ ಮುಟ್ಟಿ ಮತ್ತೆ ಸ್ನಾನ ಮಾಡಿ ಶುದ್ಧರಾಗುವ ಹಂಚಿಕೆಯಲ್ಲ; ತಮ್ಮನ್ನೇ ಅವರ ಸ್ಥಿತಿಗೆ ಇಳಿಸಿ, ಅವರೊಡನೆ ಒಂದಾಗಿ, ಮೇಲು–ಕೀಳಿನ ಮೂಲವೇ ಇಲ್ಲದಂತೆ ಮಾಡುವ ಜೀವಂತ ಅನುಕಂಪೆ. ಬುದ್ಧಿ ಒಪ್ಪಿದುದನ್ನು ಹೃದಯ ಒಪ್ಪುವ ರೀತಿಯಲ್ಲಿ ಮಾಡಿದರು, ಬಸವಣ್ಣನವರು; ಬುದ್ಧಿಯು ಅಸ್ಪೃಶ್ಯತೆ ಅನಿಷ್ಟವಾದುದು. ಕರಿಯ–ಬಿಳಿಯರೆಂಬ ಕೃತಕ ಭೇದ ಅವೈಜ್ಞಾನಿಕವಾದುದು. ಸಕ್ರಮ ಸಂತಾನ ಅಕ್ರಮ ಸಂತಾನವೆಂಬ ವರ್ಗೀಕರಣ ಅವಿಚಾರಪೂರ್ಣವಾದುದು ಎಂದು ಒಪ್ಪಿದರೂ; ನಮ್ಮ ಹೃದಯಗಳು ಇದನ್ನು ಇನ್ನೂ ಒಪ್ಪಿಲ್ಲವಾಗಿ ಈ ಶನಿಸಂತಾನ ಬದುಕಿ ಉಳಿದಿದೆ. ಇನ್ನೂ ಹೊಸ ಹೊಸ ಹೆಡೆಗಳನ್ನು ಪಡೆಯುತ್ತಿದೆ. ಬಸವಣ್ಣನವರ ಅನುಕಂಪೆ ಈ ವಿಷಮಯ ಭೇದಗಳನ್ನು ತೊಡೆದು ಹಾಕಿ ಎಲ್ಲರನ್ನೂ ಏಕಪ್ರಕಾರವಾಗಿ ತಮ್ಮ ಅನುಕಂಪೆಗೆ ಅರ್ಹರನ್ನಾಗಿ ಮಾಡಿದುದು ಅಪೂರ್ವ ಸಾಧನೆಯಾಗಿದೆ.

ಕುಲದ ಬಾಲಗೋತ್ರ, ತಮ್ಮ ಗೋತ್ರನಾಮ ಗೊತ್ತಿಲ್ಲದೆ ತಲೆತಗ್ಗಿಸಿ ನೆಲನ ಬರೆಯುತ್ತಿದ್ದವರನ್ನು ಕಂಡ ಬಸವಣ್ಣನವರು ಅವರಿಗೆ ನೀಡಿದ ಸಾಂತ್ವನ ಅದೆಷ್ಟು ಮಾರ್ಮಿಕವಾದುದು.

'ಗೋತ್ರನಾಮವ ಬೆಸಗೊಂಡರೆ
ಮಾತು ನೂಂಕದೆ ಸುಮ್ಮನಿದ್ದಿರಿದೇನಯ್ಯಾ?
ತಲೆಯ ಕುತ್ತಿ ನೆಲನ ಬರಿಯುತ್ತಿದ್ದಿರಿದೇನಯ್ಯಾ?
ಗೋತ್ರ ಮಾದಾರ ಚೆನ್ನಯ್ಯ,
ಡೋಹಾರ ಕಕ್ಕಯ್ಯಾನೆಂಬುದೇನು
ಕೂಡಲಸಂಗಯ್ಯ?'

ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯರನ್ನು ಗೋತ್ರಪ್ರವರ್ತಕರನ್ನಾಗಿ ಮಾಡಿದ ಹೃದಯ ವೈಶಾಲ್ಯವೇ ದಾಸೀ–ಪುತ್ರ ಮತ್ತು ವೇಶ್ಯಾ ಪುತ್ರರನ್ನು ಶಿವದೀಕ್ಷಾಬಲದಿಂದ ವಂದನೆ ಪೂಜೆಗಳಿಗೆ ಪಾತ್ರರನ್ನಾಗಿಸುತ್ತದೆ; ಬಡ ಭಕ್ತರನ್ನು ಕಂಡು ಉದಾಸೀನ ಮಾಡುವವರನ್ನು ಕಂಡು ಕೇಳಿ.

'ಕುದುರೆ–ಸತ್ತಿಗೆಯವರ ಕಂಡರೆ ಹೊರಳಿ ಬಿದ್ದು ಕಾಲ ಹಿಡಿವರು;
ಬಡ ಭಕ್ತರು ಬಂದರೆ 'ಎಡೆಯಿಲ್ಲ, ಅತ್ತ ಸನ್ನಿ' ಎಂಬರು!
ಎನ್ನೊಡೆಯ ಕೂಡಲ ಸಂಗಯ್ಯನವರ
ತಡೆಗಡೆಹಿ ಮೂಗ ಕೊಯ್ಯದೆ ಮಾಣ್ಬನೆ?'

ಎಂದು ಎಚ್ಚರಿಕೆಯನ್ನೀಯುವಂತೆ ಮಾಡುತ್ತದೆ. ಸಿರಿಗರ ಹೊಡೆದು ನುಡಿಸಲಾಗದ ಐಶ್ವರ್ಯವಂತರಿಗೆ ಬಡತನವೆಂಬ ಮಂತ್ರವಾದಿಯ ನೆನಪು ಕೊಡುವಂತೆ ಮಾಡುತ್ತದೆ. 'ಏನು ಬಂದಿರಿ, ಹದುಳವಿದ್ದಿರೆ?' ಎಂದರೆ ನಿಮ್ಮ ಮೈಸಿರಿ ಹಾರಿ ಹೋಹುದೆ? 'ಕುಳ್ಳಿರಿ' ರೆಂದರೆ ನೆಲ ಕುಳಿಹೋಹುದೆ? ಒಡನೆ ನುಡಿದರೆ ಶಿರ–ಹೊಟ್ಟೆಯೊಡೆವುದೆ? ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದಡೆ ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ, ಕೂಡಲಸಂಗಮದೇವನು?' ಎಂದು ತಿವಿದು ಕೇಳುವಂತೆ ಮಾಡುತ್ತದೆ. ಇದೆಲ್ಲದರ ಹಿಂದೆ ಕೆಲಸ ಮಾಡುತ್ತಿರುವದು ಅವರ ಅಸೀಮ ಅನುಕಂಪೆ.

ಸುಧಾರಕನೋ, ಉದ್ಧಾರಕನೋ, ಧರ್ಮಸ್ಥಾಪಕನೋ, ಅವತಾರ ಪುರುಷನೋ ಆಗಬೇಕೆಂಬ ಅಭಿಲಾಷೆಯಲ್ಲಿ ಅಲ್ಲ! ಶಿವನ ಸದ್ಭಕ್ತರ ಪಾದವನನವರಿವ ಮಹಾ ಪದವಿಯೊಂದನ್ನು ಬಿಟ್ಟು ಇನ್ನಾವ ಪದವಿಯನ್ನೂ ಅವರು ಬಯಸಲಿಲ್ಲ!

## ೧೭

# ಬಚ್ಚ ಬರಿಯ ಬಸವ

ಬಸವಣ್ಣನವರ ಸಮಕಾಲೀನ ಶರಣರೂ, ತರುವಾಯದ ಶರಣರೂ, ಕವಿ ಪುಂಗವರೂ ಬಸವಣ್ಣನವರನ್ನು 'ದ್ವಿತೀಯ ಶಂಭು'ವೆಂದು, ನಂದೀಶ್ವರನ ಅವತಾರವೆಂದು, ಭಕ್ತಿಭಂಡಾರಿಯೆಂದು, ವೀರಶೈವನಿರ್ಣಯ ಪರಮಾವತಾರನೆಂದು, ಮಹಾಮಂತ್ರಮೂರ್ತಿಯೆಂದು, ಅಸಾಧ್ಯಸಾಧಕನೆಂದು, ಈಶನ ಮೀಸಲಪ್ಪ ಭಕ್ತನೆಂದು, ಷಡುಸ್ಥಲ ಬ್ರಹ್ಮರೂಪನೆಂದು ಇನ್ನೂ 'ಏನೋನೋ ಎಂದು ಕೀರ್ತಿಸಿದ್ದಾರೆ. ಆದರೆ ಬಸವಣ್ಣನವರು ಬಯಸಲಿಲ್ಲ ಇವನ್ನು'. ಏನನ್ನು ಬಯಸಿದರವರು?

ತಮತಮಗೆಲ್ಲ ನೊಸಲ ಕಣ್ಣವರು, ತಮತಮಗೆಲ್ಲ ನಂದಿವಾಹನರು,
ತಮತಮಗೆಲ್ಲ ಖಡ್ವಾಂಗ ಕಪಾಲ ತ್ರಿಶೂಲಧರರು:
ದೇವರಾರು ಭಕ್ತರಾರು ಹೇಳಿರಯ್ಯ;
ಕೂಡಲಸಂಗಮದೇವಾ, ನಿಮ್ಮ ಶರಣರು ಸ್ವತಂತ್ರರು,
ಎನ್ನ ಬಚ್ಚಬರಿಯ ಬಸವನೆನಿಸಯ್ಯ; (೮೧೮)

ಬಚ್ಚ ಬರಿಯ ಬಸವ! ಎಂಥ ಬಯಕೆ ಬಸವಣ್ಣನವರದು; ವರ್ಷಕ್ಕೊಬ್ಬರಂತೆ ಬೆಳೆಯುತ್ತಿರುವ ಸ್ವಘೋಷಿತ ಜಗದ್ಗುರುಗಳೂ, ಬಿರುದು ಬಾವಲಿಗಳಿಗಾಗಿ ಪರದಾಡುವ ಪದಕೋಪಜೀವಿಗಳೂ, ಬೂದಿ ಕೊಡುವ ಭಗವಾನರೂ, ಪತ್ರಿಕಾ ಪ್ರಸಿದ್ಧಿಗಾಗಿ ಹಾತೊರೆವ ಹೆಸರಿನ ಹಂಬಲದವರೂ ಲಕ್ಷಿಸಬೇಕಾದ ಬಯಕೆಯಿದು. ಪದಿಗಿದವಿಗಳ ಆಶೆ ನಮ್ಮಂಥವರಿಗೆ: ಬಸವಣ್ಣನವರಿಗೋ –

ಬ್ರಹ್ಮ ಪದವಿಯನೊಲ್ಲೆ, ವಿಷ್ಣು ಪದವಿಯನೊಲ್ಲೆ,
ರುದ್ರಪದವಿಯನೊಲ್ಲೆ,
ಮತ್ತಾವ ಪದವಿಯನೊಲ್ಲೆನಯ್ಯ;
ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ
ಮಹಾಪದವಿಯನೆ ಕರುಣಿಸಯ್ಯ;

ಅದ್ಭಕ್ತರ ಪಾದವನರಿದಿಪ್ಪ ಮಹಾಪದವಿಯನ್ನೇ ಬಯಸಿದರು ಬಸವಣ್ಣನವರು ಯಾಕೆ? ಅವರ ದೇವ 'ಭಕ್ತದೇಹಿಕ ದೇವ'. ಭಕ್ತರ ಕಾಯವೇ ಅವನ ಕಾಯ; ಭಕ್ತ ಮುಖವೆ ಅವನ ಮುಖ ಅವನು ನಡೆಯುವುದು ಭಕ್ತರ ದೇಹವನ್ನಾಶ್ರಯಿಸಿ; ಅವನು ನುಡಿಯುವುದು ಭಕ್ತರ ವಚನವನ್ನಾಶ್ರಯಸಿ. ಈ ಭಕ್ತದೇಹಿಕ ದೇವನದಲ್ಲಿ ಬಸವಣ್ಣನವರ ನಿಷ್ಠೆ ಎಷ್ಟೆಂದರೆ ಭಕ್ತನ ಮುಖದರ್ಪಣದಲ್ಲಿಯೇ ಅವರು ಲಿಂಗವನ್ನು ಕಾಯಬಯಸಿದರು; ಕಂಡರು ಕೂಡ. ಇಷ್ಟೇ ಅಲ್ಲ, ಭಾಷೆ ತೊಟ್ಟರು. ಯಾವ ಭಾಷೆಯನ್ನು? ಅವರ ಮಾತಿನಲ್ಲಿಯೇ ಅರಿಯೋಣ;

> ಭಕ್ತದೇಹಿಕ ದೇವನಪ್ಪ ದೇವನು ಸದ್ಭಕ್ತರ ಬಳಿಯಲು ಬಪ್ಪನಾಗಿ,
> ಆಳ್ದನು ಬರಲು ಆಳು ಮಂಚದ ಮೇಲಿಪ್ಪುದು ಗುಣವೆ ಹೇಳಾ?
> ಕೂಡಲಸಂಗಮದೇವರು –
> ಜಂಗಮರೂಪವಾಗಿ ಸಂಗಯ್ಯ ಸಂದಾನೆಂದು
> ಎಂದೆಂದೂ ನಾನು ಮಂಚವೇರದ ಭಾಷೆ; (೩೯೫)

ಮಂಚವೇರುವುದಿರಲಿ, ಶರಣರು ಲಿಂಗಾರ್ಚನೆ ಮಾಡುವಲ್ಲಿ ಪ್ರವೇಶಿಸಲೂ ಅರೆನೆಂದಿದ್ದಾರೆ. ಅವರು :

> 'ಲಿಂಗಾರ್ಚನೆ ಮಾಡುವ ಮಹಿಮರೆಲ್ಲರೂ
> ಸಲಿಗೆವಂತರಾಗಿ ಒಳಗೆ ಐದಾರೆ
> ಆನು, ದೇವಾ, ಹೊರಗಳವನು;
> 'ಸಂಬೋಳಿ, ಸಂಬೋಳಿ' ಎನ್ನುತ್ತ ಇಂಬಿನಲ್ಲಿ ಇದೇನೆ;
> ಕೂಡಲಸಂಗಮದೇವಾ,
> ನಿಮ್ಮ ನಾಮವಿಡಿದ ಅನಾಮಿಕ ನಾನು; (೯೩೩)

'ಸಂಬೋಳಿ' ಎಂಬ ಕೂಗಿನ ಹಿನ್ನೆಲೆ ಬಲ್ಲವರಿಗೆ ಬಸವಣ್ಣನವರ ಈ ವಚನ ಅದ್ಭುತವಾದ ಧ್ವನಿಪರಂಪರೆಯನ್ನು ನೀಡುತ್ತದೆ. ಈ ವಚನ ವಚನಿಸುವುದನ್ನೇ ಚಿತ್ರವನ್ನಾಗಿ ಕುಸುರಿದರೆ ಬಸವಣ್ಣವನವರ 'ಅನುಪಮ' ಚಿತ್ರಕ ಶಕ್ತಿಯ ದರ್ಶನವಾಗುತ್ತದೆ.

ಬಸವಣ್ಣನವರೆಷ್ಟೇ ತಡೆದರೂ ಜನರು ಹಟದಿಂದ ಅವರ ಅಡಿಗಳಿಗೆ ಎರಗುತ್ತಿದ್ದರೆಂದು ತೋರುತ್ತಿದೆ. ಅಂತೆಯೇ ನೊಂದು ನುಡಿದರು. ಬೆಂದು ಬೇಡಿಕೊಂಡರು ಬಸವಣ್ಣನವರು;

> ಅವರಿವರೆನ್ನದೆ ಚರಣಕ್ಕೆರಗಲು ಅಯ್ಯತನವೇರಿ
> ಬೆಬ್ಬನೆ ಬಿರೆವೆ ನಾನು; ಕೆಚ್ಚು ಬೆಳೆಯಿತ್ತಯ್ಯಾ;

ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳಕನು ಮಾಡಿ
ಬೆಳಗಾರದಂತೆ ಮಾಡು ಕೂಡಲಸಂಗಮದೇವಾ (೨೩೫)

ಜೀವನದುದ್ದಕ್ಕೂ 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ;' ಎಂದು, 'ಆನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯಾ;' ಎಂದು, 'ಆನು ಹಾರುವನೆಂದರೆ ಕೂಡಲ ಸಂಗಯ್ಯ ನಗುವನಯ್ಯಾ' ಎಂದು, 'ಮಾದಾರನ ಮಗ ನಾನಯ್ಯ' ಎಂದು, 'ಅಯ್ಯಾ,' ನಿಮ್ಮ ವಂಶಾವಳಿಯಲು ಒಬ್ಬ ತೊತ್ತಿನ ಮಗ ಹುಟ್ಟಿದ; ಆತನ ತೊತ್ತಿನ ಮಗ ನಾನಯ್ಯ; ಬಳಿದೊತ್ತು, ಬಗಳದೊತ್ತು, ವಂಶದೊತ್ತು ನಾನಯ್ಯ; ಎಂದು, 'ಕಕ್ಕಯ್ಯ ಹಿರಿಯಯ್ಯ ಚಿಕ್ಕಯ್ಯ ಚೆನ್ನಯ್ಯ ಎತ್ತಿ ಮುದ್ದಾಡಿ ಸಲಹಿದರೆನ್ನ' ಎಂದು 'ಮೇಲಾಗಲೊಲ್ಲೆನು ಕೀಳಾಗಲಲ್ಲದೆ: ಕೀಳಿಂಗಲ್ಲದೆ ಹಯನ ಕರೆವುದೇ?' ಎಂದು 'ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿಯೆಂಬರು; ನಾನೇನು ಪಾಪವ ಮಾಡಿದೆನೊ; ಬೆಳೆಯುವ ಮುನ್ನವೆ ಕೊಯ್ವರೆ?' ಎಂದು, 'ಎನ್ನವರೆನಗೊಲಿದು ಹೊನ್ನಶೂಲವನಿಕ್ಕಿದರಯ್ಯಾ; ಅಹಂಕಾರ ಪೂರಾಯ ಘಾಯದಲ್ಲಿ ಅನೆಂತು ಬದುಕವೆ, ಎಂತು ಜೀವಿಸುವೆ; ಎಂದು ಹಮ್ಮು ಬಿಮ್ಮುಗಳನ್ನು ಕೊನರುತ್ತಲೇ ಚಿವುಟಿ ಹಾಕುತ್ತ ನಡೆದಿದ್ದ ಬಸವಣ್ಣನವರು ಬಚ್ಚ ಬರಿಯ ಬಸವನಾಗಿಯೇ, 'ಬಾಗಿದ ತಲೆಯ ಮುಗಿದ ಕೈಯ' ಬಸವನಾಗಿಯೇ ಉಳಿಯಲು ಬಯಸಿದುದು ಸಹಜವೆ. ಇದು ಅವರ ಅತ್ಯುನ್ನತಿಗೆ ಸಾಕ್ಷಿ ಒಂದು ಚೆತೋಹಾರಿಯಾದ ಹೋಲಿಕೆಯ ಮೂಲಕ ಈ ಬಯಕೆಯ ಬೆಡಗನ್ನು ಬಹಿರಂಗಗೊಳಿಸಿದರು ಬಸವಣ್ಣನವರು:

'ಮರದ ನೆಳಲಲಿದ್ದಾ ತನ್ನ ನೆಳಲನರಸಬಹುದೆ?
ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯಾ?
ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯಾ?
ಆನು ಭಕ್ತನೆಂಬ ನುಡಿ ಸುಡದೆ, ಕೂಡಲ ಸಂಗಮದೇವಾ?
(೩೩೩)

ಭಕ್ತಜನಭಾಗ್ಯಶುಭೋದಯರಾಗಿಯೂ ತಾವು ಭಕ್ತರಲ್ಲವೆಂಬ ಭಾವನೆ ಬಿಡಲಿಲ್ಲ ಬಸವಣ್ಣನವರನ್ನು 'ಆನುಭಕ್ತನಲ್ಲವಯ್ಯಾ; ಆನು ವೇಷಧಾರಿಯಯ್ಯಾ;' ಎಂದೇ ಮರುಗಿದರು ಕಡೆತನಕ. ಯಾಕೆ? ಅವರಾಗ ಬಯಸಿದ್ದು ಅಂತಿಂಥ ಭಕ್ತನಲ್ಲ. ಸರ್ವಜೀವಿಗಳಲ್ಲಿ ಶಿವನನ್ನು ಕಂಡು ಆ ಸರ್ವಜೀವ ಶರೀರಿಯಾದ ಶಿವನಿಗೆ ಭಕ್ತನಾಗುವುದನ್ನು ಬಯಸಿದರವರು. ಈ ಲೋಕೋತ್ತರ ವಚನವಿದಕ್ಕೆ ಕನ್ನಡಿ ಹಿಡಿಯುತ್ತದೆ.

'ಬಸವ ಬಾರೈ, ಮರ್ತ್ಯಲೋಕದೊಳಗೆ ಭಕ್ತರುಂಟೆ? ಹೇಳಯ್ಯಾ'
ಮತ್ತಾರೂ ಇಲ್ಲಯ್ಯ, ಮತ್ತಾರೂ ಇಲ್ಲಯ್ಯಾ
ಮತ್ತಾರೂ ಇಲ್ಲಯ್ಯಾ;
ನಾನೊಬ್ಬನೆ ಭಕ್ತನು; ಮರ್ತ್ಯಲೋಕದ ಭಕ್ತರೆಲ್ಲರೂ
ಜಂಗಮಲಿಂಗ, ನೀನೆ, ಅಯ್ಯಾ –ಕೂಡಲಸಂಗಮದೇವಾ; (೮೯೩)

ಇಂಥ ಭಕ್ತ ಇನ್ನೆಲ್ಲಿ? ಇಂಥ ಭಕ್ತ ಎಲ್ಲ ಉಪಾಧಿಗಳನ್ನು ಧಿಕ್ಕರಿಸಿ ಬಚ್ಚ ಬರಿಯ ಬಸವನಾಗಲು ಹಾರೈಸಿ, ಆಗಿ ಹೋದುದು ಅದಾವ ಅಚ್ಚರಿ?

# ೧೮

# ಅಕ್ಕಮಹಾದೇವಿಯ ತ್ರಿವಿಧಾಮೃತ

ಅಧ್ಯಾತ್ಮ ಸರಸಿಯ ಅರವಿಂದ, ಮಧುರ ಭಕ್ತಿಯ ಮಂದಾಕಿನಿ, ಅನನ್ಯ ವ್ಯಕ್ತಿತ್ವದ ತೇಜೋರಾಶಿಯೆನಿಸಿರುವ ಅಕ್ಕಮಹಾದೇವಿ ನಾರೀ ಲೋಕದ ಸಾಧನಾ – ಹಿಮಾಲಯದ ಗೌರೀಶಂಕರವೆಂದರೂ ಸಲ್ಲುತ್ತದೆ.

'ಮಹಾದೇವಿಯಕ್ಕನ ಜೀವನ ಚರಿತ್ರೆ ಹೆಣ್ಣಿನಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪರಮಾರ್ಥ ಸಾಧನೆಯ ಒಂದು ಮಹಾ ಪ್ರಕರಣ'ವೆಂದು ಕೀರ್ತಿಶೇಷ ಶ್ರೀ ಎಂ. ಆರ್. ಶ್ರೀ ಅವರು ಹೇಳಿರುವುದು ಅಕ್ಷರಶಃ ಸತ್ಯವಾದುದು. ಅಕ್ಕನ ವಚನಗಳಲ್ಲಿಯೇ ಆಧಾರಗಳಿವೆ ಇದಕ್ಕೆ.

ಅಕ್ಕನು ಅನುಭವ ಮಂಟಪದಲ್ಲಿ ಅಳವಡಿಸಿಕೊಂಡಿದ್ದ 'ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆ'ಯ ತ್ರಿವಿಧಾಮೃತದೊಡನೆ ಸೌಂದರ್ಯ ಪ್ರಜ್ಞೆ, ಸೂಕ್ಷ್ಮ ಸಂವೇದನೆ. ಸ್ವತಂತ್ರ ಚಿಂತನೆ ಹಾಗೂ ಆಧ್ಯಾತ್ಮಿಕ ಆತ್ಮಚರಿತ್ರೆಯ ಸುಂದರ ಸುವರ್ಣ ರೇಖೆಗಳನ್ನು ಒಳಗೊಂಡ ಅಕ್ಕನ ವಚನಗಳು ಅನರ್ಘ್ಯರತ್ನಗಳು.

ಅವುಗಳನ್ನು ಅಕ್ಕನ ಸಾಧನ ಕ್ರಮದಲ್ಲಿಯೇ ಆಲಿಸಿದರೆ ದೊರೆವ ಆನಂದ ಆನಿರ್ವಚನೀಯವಾದುದು. ಇದೊಂದು ಆ ಆನಂದದ ಅರವಟ್ಟಿಗೆ ನಿಮಗೆ. ಬನ್ನಿ, ಅಕ್ಕನು ಆರಂಭದಲ್ಲಿಯೇ ಮಾನವ ಜೀವನದ ಮೂಲಕ್ಕೇ ಇಳಿದು ತಳೆದ ನಿಲುವನ್ನು ನೋಡೋಣ:

'ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು:
ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು:
ಅಜ್ಞಾನ ಹುಟ್ಟಿದಲ್ಲಿ ಆಶೆ ಹುಟ್ಟಿತ್ತು:
ಆಶೆ ಹುಟ್ಟಿದಲ್ಲಿ ಕೋಪ ಹುಟ್ಟಿತ್ತು;
ಆ ಕೋಪಾಗ್ನಿಯ ತಾಮಸಧೂಮ್ರ ಮುಸುಕಿನಲ್ಲಿ
ನಾ ನಿಮ್ಮ ಮರೆದು ದುಃಖಕ್ಕೀಡಾದೆ!

ನೀ ಕರುಣದೆಂದೆತ್ತಿ, ಎನ್ನ ಮರಹ ಬಿಂಗಡಿಸಿ
ನಿಮ್ಮ ಪಾದವನರುಹಿಸಯ್ಯ, ಚನ್ನಮಲ್ಲಿಕಾರ್ಜುನಾ'

ಸುಖದ ಶೋಧನೆಯಲ್ಲಿಯೇ ನಿತ್ಯ ನಿಮಗ್ನನಾಗಿರುವ ಮಾನವ ದುಃಖವನ್ನು ಪಡೆಯುವುದೇ ಹೆಚ್ಚು. ಈ ದುಃಖದ ಕಾರಣಮೀಮಾಂಸೆನ್ನು ಮನೋಜ್ಞವಾಗಿ ಮಾಡುವುದಲ್ಲದೆ ದುಃಖ ನಿವಾರಣೆಯ ದಾರಿಯನ್ನೂ ತೋರಿದ್ದಾಳೆ ಅಕ್ಕ ಈ ಮಹತ್ವದ ವಚನದಲ್ಲಿ. ಹುಟ್ಟಿನೊಡನೆ ಸಂಸಾರ, ಸಂಸಾರದೊಡನೆ ಅಜ್ಞಾನ, ಅಜ್ಞಾನದೊಡನೆ ಅಳಿಯಾಸೆ, ಅಳಿಯಾಸೆಯೊಡನೆ ಕೋಪ, ಕೋಪದೊಡನೆ ಮರಹು, ಮರಹಿನೊಡನೆ ದುಃಖ. ಈ ದುಃಖ ತೊಲಗಲು ಪರಮಾತ್ಮ ಕರುಣಿಸಿ, ಮರಹ ಮಾಣಿಸಿ, ಅರುಹ ನೀಡಬೇಕು. ಅರುಹಿನಿಂದ ಮರಹಿನ ಅಂತ್ಯ; ಆಗ ಕೋಪಕ್ಕೆ ಕೊನೆ; ಆಗ ಅಳಿಯಾಸೆಗೆ ವಿದಾಯ, ಅದಾಗುತ್ತಲೇ ಅಜ್ಞನದ ಲಯ; ತತ್ಪರಿಣಾಮವಾಗಿ ತೊಡಕಾಗಿದ್ದ ಸಂಸಾರವೇ ತೊಡವಾಗುವ ವಿಸ್ಮಯ! ಆದುದರಿಂದಲೇ ಅರುಹ ಬರಿಸಿ ಮರಹನೊರೆಸಲು ಆ ಪರಮಗುರುವನ್ನೇ ನಂಬಬೇಕು. ಅಕ್ಕನೂ ಅವನನ್ನೇ ನಂಬಿದ್ದಳು:

'ನಂಬಿದೆ ಗುರುವೆ ನಂಬಿದೆ,
ಸ್ವಾಮಿ ನಂಬಿದೆ।
ಅಂಬಿಕಾರಮಣ ನೀನಂಬಿಗ –
ನಂಬಿದೆ, ನಿನ್ನ ನಂಬಿದೆ ॥
ಆರು ತೆರೆಯು ನೋಡಂಬಿಗ ಬಲು
ಮೀರಿ ಬರುತಲಿದೆ ಅಂಬಿಗ ।
ಹಾರಲೊದೆದು ಎನ್ನ ತಡಿಗೆ ಸಾರಿಸು – ನೀ
ದೂರ ಮಾಡದಿರು ಅಂಬಿಗ ॥
ತುಂಬಿದ ಹರಿಗೋಲಂಬಿಗ – ಅದ
ಕೊಂಬತ್ತು ಛಿದ್ರ ನೋಡಂಬಿಗ
ಸಂಭ್ರಮವನ ನೋಡಂಬಿಗ – ಇದ
ರಿಂಬನರಿದು ತೆಗೆಯಂಬಿಗ ॥
ಸತ್ಯವೆಂಬ ಹುಟ್ಟಂಬಿಗ – ಸದ್
ಭಕ್ತಿಯೆಂಬ ಪಥವಂಬಿಗ ॥
ನಿತ್ಯ ಮುಕ್ತ ನಮ್ಮ ಚನ್ನಮಲ್ಲಿಕಾರ್ಜುನನ
ಮುಕ್ತಿ ಮಂಟಪಕೊಯ್ಯೊ ಅಂಬಿಗ ॥
ನಂಬಿದೆ, ಗುರುವೆ, ನಂಬಿದೆ....

ಅಕ್ಕನ ಈ ನಂಬಿಕೆ, ಹಂಬಲ ಹಣ್ಣಾಗಿ, ಇರವಿನ ತೊರೆಯ ಅಂಬಿಗನಾಗಿ ಗುರುವೊಬ್ಬನು ದೊರೆತ. 'ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ, ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ'

ಗುರುವೆಂಬ ಅಂಬಿಗನನ್ನು ನೆನೆಯುತ್ತಲಿದ್ದ ಅಕ್ಕನಿಗೆ ಗುರು ದೊರೆತಾಗ, 'ಅರಲುಗೊಂಡ ಕೆರೆಗೆ ತೊರೆಬಂದು ಹಾಯ್ದಂತಾಯಿತ್ತು; ಬರಲುಗೊಂಡ ಸಸಿಗೆ ಮಳೆ ಸುರಿದಂತಾಯಿತ್ತು' ಹಿಗ್ಗಿ 'ನಿತ್ಯವೆನ್ನ ಮನೆಗೆ ನಡೆದು ಬಂದಿತ್ತಿಂದು... ಗುರುವೆ ನಮೋ. ಪರಮ ಗುರುವೆ ನಮೋ, ನರಜನ್ಮವ ತೊಡೆದು ಹರಜನ್ಮವ ಮಾಡಿದ ಗುರುವ ನವೋ' ಎಂದು ಹಾಡಿ ಬೇಡಿದಳು:

'ಎನ್ನ ಮಾಯದ ಮದವ ಮುರಿಯಯ್ಯ;
ಎನ ಕಾಯದ ಕತ್ತಲೆಯ ಕಳೆಯಯ್ಯ;
ಎನ್ನ ಜೀವದ ಜಂಜಡವ ಮಾಣಿಸಯ್ಯ;
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ,
ಎನ್ನ ಸುತ್ತಿಹ ಪ್ರಪಂಚವ ಬಿಡಿಸಾ, ನಿಮ್ಮ ಧರ್ಮ.'

ಗುರು–ಬೋಧೆಯ ಸುಧೆಯ ಪ್ರಭಾವದಿಂದ, ಕಾಯಕ್ಕೆ ನೆಳಲಾಗಿ, ಪ್ರಾಣಕ್ಕೆ ಮನವಾಗಿ, ಮನಕ್ಕೆ ನೆನಹಾಗಿ, ನೆನಹಿಂಗೆ ಅರುಹಾಗಿ, ಅರುಹಿಂಗೆ ಮರಹಾಗಿ, ಯೋಗಿಗೆ ಯೋಗಿಣಿಯಾಗಿ, ಸವಣಂಗೆ ಸವಣಿಯಾಗಿ, ಯತಿಗೆ ಪರಾಕಿಯಾಗಿ ಕಾಡುವ, ಬಿಟ್ಟೆನೆಂದಡೆ ಬಿಡದ ಮಾಯೆಯನ್ನು ಗೆದ್ದು, 'ಎನ್ನ ಕಾಯ ಮಣ್ಣು, ಜೀವ ಬಯಲು – ಅವುದ ಹಿಡಿವೆನಯ್ಯಾ?' ಎಂಬ ಎರಡಕ್ಕೆ ಬಿಟ್ಟ ಕರುವಿನಂತಹ, ಉಭಯ ಸಂಕಟದ ಅವಸ್ಥೆಯನ್ನು ದಾಟಿ. 'ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ, ತನ್ನ ನೂಲು ತನ್ನನೆ ಸುತ್ತಿ ಸಾವಂತೆ ಮನಬಂದುದ ಬಯಸಿ ಬೇವುತ್ತಿದ್ದೇನಯ್ಯ'; ಎಂಬ ಸ್ಥಿತಿಯನ್ನು ಮೀರಿ ಆತ್ಮ ವಿಶ್ವಾಸದಿಂದ ಹಾಡಿದಳು ಅಕ್ಕ :

'ಲೋಕದ ಚೇಷ್ಟೆಗೆ ರವಿ ಬೀಜವಾದಂತೆ
ಕರಣಂಗಳ ಚೇಷ್ಟೆಗೆ ಮನವೆ ಬೀಜ;
ಎನಗುಳ್ಳುದೊಂದು ಮನ
ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ
ಎನಗೆ ಭವವುಂಟೆ, ಚನ್ನಮಲ್ಲಿಕಾರ್ಜುನ?'

ಆಗ ಅಕ್ಕ 'ನಾನು ನಿನಗೊಲಿದೆ, ನೀನು ಎನಗೊಲಿದೆ, ನೀನೆನ್ನಗಲದಿಪ್ಪೆ, ನಾ ನಿನ್ನನಗಲದಿಪ್ಪೆನಯ್ಯಾ. ನಿನ್ನರಿಕೆಯ ನರಕವೆ ಮೋಕ್ಷ ನೋಡಯ್ಯ, ನಿನ್ನನರಿಯದ

ಮುಕ್ತಿಯೆ ನರಕ ಕಂಡಯ್ಯ, ನೀನೊಲ್ಲದ ಸುಖವೆ ದುಃಖ ಕಂಡಯ್ಯ, ನೀನೊಲಿದ ದುಃಖವೆ ಪರಮ ಸುಖ ಕಂಡಯ್ಯ.' ಎಂದು ಸಾರುವ ಔನ್ನತ್ಯಕ್ಕೆ ಏರಿದಳು. 'ನಚ್ಚುಗೆ ಮನ ನಿಮ್ಮಲ್ಲಿ, ಮಚ್ಚುಗೆ ಮನ ನಿಮ್ಮಲ್ಲಿ, ಸಲುಗುಗೆ ಮನ ನಿಮ್ಮಲ್ಲಿ, ಸೋಲುಗೆ ಮನ ನಿಮ್ಮಲ್ಲಿ, ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ, ಕರಗುಗೆ ಮನ ನಿಮ್ಮಲ್ಲಿ, ಕೊರಗುಗೆ ಮನ ನಿಮ್ಮಲ್ಲಿ, ಎನ್ನ ಪಂಚೇಂದ್ರಿಯಂಗಳು ಕಬ್ಬುನ ಉಂಡ ನೀರಿನಂತೆ ನಿಮ್ಮಲ್ಲಿ ಬೆರಸುಗೆ, ಚನ್ನಮಲ್ಲಿಕಾರ್ಜುನಯ್ಯ' ಎಂದು ನಿವೇದಿಸುವ ಸರ್ವಸಮರ್ಪಣ ಭಾವಕ್ಕೆ ಸಂದಳು. ಆಕೆಯ ಆಗಿನ ಆನಂದಾತಿಶಯದ ಸ್ಥಿತಿಯನ್ನು ಕಂಡ ಕೆಳದಿಯರು ಅದರ ಕಾರಣ ಕೇಳಿದಾಗ ಹೇಳಿದಳು.

'ಅಕ್ಕ ಕೇಳವ್ವ, ಅಕ್ಕಯ್ಯ, ನಾನೊಂದು ಕನಸ ಕಂಡೆ
ಅಕ್ಕಿ ಅಡಕೆ ಓಲೆ ತೆಂಗಿನ ಕಾಯ ಕಂಡೆ,
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ,
ಮಿಕ್ಕು ಮೀರಿ ಹೋಹನ' ಬೆಂಬತ್ತಿ ಕೈವಿಡಿದೆನು
ಚನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು,'

ಬೆಚ್ಚಿ ಬಿದ್ದ, ಬೆಕ್ಕಸ ಬೆರಗಾದ ಸುಮುಗ್ಧ ಸಖಿಯರು ಮನುಷ್ಯ ಮಾತ್ರರಿಗೆ ಗಗನ ಕುಸುಮವೆನಿಸುವ, ಹುಚ್ಚು ಹವ್ಯಾಸವೆನಿಸುವ ಹರನ ಕೈ ಹಿಡಿವ ಹಂಬಲವನ್ನು ತೊರೆದು, ಅನುರೂಪನಾದ ವರನೊಬ್ಬನ ಕರ ಹಿಡಿಯಲು ಸಲಹೆ ನೀಡುತ್ತರೆ. ಅವರು ನಿರುತ್ತರರಾಗುವಂಥ ಉತ್ತರವನ್ನಿತ್ತು ತನ್ನ ಅನುಭಾವದ ಎತ್ತರವನ್ನು ಮರೆಯುತ್ತಾಳೆ ಅಕ್ಕಮಹಾದೇವಿ:

'ಗಿರಿಯಲ್ಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದ ನವಿಲು?
ಕೊಳನಲ್ಲದೆ ಕಿರುವಳ್ಳಕ್ಕೆಳಸುವುದೆ ಹಂಸ?
ಮಾಮರ ತಳಿತಲ್ಲದೆ ಸರಗೈವುದೆ ಕೋಗಿಲೆ?
ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ?
ಎನ್ನ ದೇವ ಚನ್ನಮಲ್ಲಿಕಾರ್ಜುನಂಗಲ್ಲದೆ
ಅನ್ಯಕ್ಕೆಳಸುವುದೆ ಎನ್ನ ಮನ
ಪೇಳಿರೆ ಕೆಳದಿಯರಿರಾ?'

ಹಿಂದೆಂದೂ ಕಂಡು ಕೇಳರಿಯದ ಅಕ್ಕನ ಈ ನಿರ್ಧಾರವು ಬಿರುಗಾಳಿಯನ್ನೆ ಎಬ್ಬಿಸಿರಬೇಕು ಉಡುತಡಿಯಲ್ಲಿ. ಚಕಿತರಾದರಾರೊ, ಹೊಗಳಿದವರಾರೋ,

ತೆಗಳಿದವರಾರೋ, ಈ ಸ್ತುತಿನಿಂದೆಗಳು ಅಕ್ಕನಿಗೂ ಗೊತ್ತಾಗಿರಬೇಕು. ಆಗ ಉಸುರಿರಬಹುದಾದ ಅಕ್ಕನ ಈ ವಚನ ಜಗದ ಜೀವಿಗಳಿಗೆಲ್ಲ ಸಾಂತ್ವನ ನೀಡಬಲ್ಲ ಸುಧಾನಿಧಿ:

'ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಂಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದಡೆಂತಯ್ಯ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ಧಕ್ಕೆ ನಾಚಿದಡೆಕಂತಯ್ಯ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ –
ಲೋಕದೊಳಗೆ ಹುಟ್ಟಿದ್ದ ಬಳಿಕ ಸ್ತುತಿನಿಂದೆಗಳು ಬಂದೆಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.'

ದೊರೆ ಕೌಶಿಕನ ಮೋಹದ ಪ್ರಕರಣ ನಿರ್ಧಾರದ ಉಕ್ಕನ್ನು ಪರೀಕ್ಷಿಸುವ ಪ್ರಸಂಗವಾಗಿ ಪರಿಣಮಿಸಿತು. ಮಹಾದೇವಿಯಕ್ಕನು ಮೂರು ಕರಾರುಗಳನ್ನು ಹಾಕಿ ಅವನನ್ನುಮದುವೆಯಾದಳೋ, ಮದುವೆಯನ್ನೇ ನಿರಾಕರಿಸಿದಳೋ – ಖಚಿತವಾಗಿ ಹೇಳುವುದು ಕಷ್ಟ. ಇಷ್ಟು ಮಾತ್ರ ನಿಜ: ಆ ಅಗ್ನಿ ಪರೀಕ್ಷೆಯಿಂದ ಪ್ರಜ್ವಲಿಸುವ ಪ್ರಭೆಯಾಗಿ ಹೊರಬಿದ್ದಳು ಅಕ್ಕ. ಮದುವೆಯ ಪ್ರಸ್ತಾಪ ಬಂದಾಗಲೋ, ಮದುವೆ ಮುರಿದು ಬಿದ್ದಾಗಲೋ ಗೆಳತಿಯರು, ತಂದೆ ತಾಯಿಯರು, ಕೌಶಿಕನನ್ನು ನಿರಾಕರಿಸುವುದು ಸರಿಯಲ್ಲವೆಂದು ವಾದಿಸಿದರೇನೋ – ಮೂಡಿ ಬಂದಿತು ಅಕ್ಕನ ಈ ಅದ್ಭುತ ಉತ್ತರ:

'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ.
ಎಡೆಯಿಲ್ಲದ ತಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ,
ಭಯವಿಲ್ಲದ ಭವವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು,
ಕುಲ ಸೀಮೆಯಿಲ್ಲದ ನಿಸ್ಸೀಮ ಚೆಲುವಂಗೊಲಿದೆ ನಾನು,
ಇದು ಕಾರಣ, ಚನ್ನಮಲ್ಲಿಕಾರ್ಜುನನೇ ಚೆಲುವ ಗಂಡನೆನಗೆ,
ಈ ಸಾವ ಕೆಡುವ ಗಂಡರನೊಯ್ದು ಒಲೆಗಿಕ್ಕು ತಂದೆ,'

ಹರಿಹರ ಹೇಳಿದಂತೆ 'ಒದೆದು ಸಮಸ್ತರಾಜ್ಯಮಂ, ಕಾಮಮತ್ತಗಜ ಮಸ್ತಕದ ಮದಮಂ ಸಡಿಲ್ಚಿ;' ಹಡೆದ ತಂದೆ ತಾಯಿಗಳನ್ನೂ, ಹುಟ್ಟಿದೂರನ್ನೂ ಬಿಟ್ಟುಹೊರಡುತ್ತಾಳೆ ಅಕ್ಕ.

ಎಲ್ಲಿಗೆ? 'ಕಲ್ಯಾಣ, ನಿಮ್ಮ ಶರಣ ಬಸವಣ್ಣನ ಕಾಂಬೆನೆಂಬ ತವಕವೆನಗಾಯಿತ್ತು ನೋಡ' ಎಂದು ಹಾಡಿದ್ದ ಆಕೆ ದಿಗಂಬರವೇ ದಿವ್ಯಾಂಬರವಾಗಿ, ಕೇಶಾಂಬರಧಾರಿಯಾಗಿ, ರಾಹುಮುಸುಕಿದ ಚಂದ್ರಕಳೆಯಂತೆ ಹೊರಡುತ್ತಾಳೆ ಕಲ್ಯಾಣಾಭಿಮುಖಿಯಾಗಿ.

ಮಾರ್ಗದಲ್ಲಿ ಅಕ್ಕ ಅನುಭವಿಸಿದ ಸಂಕಷ್ಟಗಳಿಗೆ, ಸಂಕ್ಲೇಶಗಳಿಗೆ ಲೆಕ್ಕವಿಲ್ಲ. ಅಧೀರಳಾಗಲಿಲ್ಲ ಅಕ್ಕ. ಕೆಣಕಿದ ಕಾಮುಕರ ಮೈನಡುಗುವಂತೆ ಗುಡುಗಿದಳು. ಮುಗಿಲೇ ಮುನಿದು ಗುಡುಗಿದಾಗ, 'ಕಿಡಿ ಕೆದರಿದಡೆ ಎನಗೆ ಹಸಿವು ತೃಷೆಯಡಗಿತ್ತೆಂಬೆನು, ಮುಗಿಲ ಹರಿದು ಬಿದ್ದಡೆ ಎನಗೆ ಮಜ್ಜನಕ್ಕೆರೆದರೆಂಬೆನು; 'ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆನು, ಗಿಡುಗಿಡುದಪ್ಪದೆ ಬೇಡಿದೆನೆನ್ನಂಗಕ್ಕೆ ಕಂದು; ಅವು ನೀಡಿದುವು ತಮ್ಮ ಲಿಂಗಕ್ಕೆಂದು, ನಾನು ಬೇಡಿ ಭವಿಯಾದೆ, ಅವು ನೀಡಿ ಭಕ್ತರಾದವು' ಎಂದು ಉದ್ಗರಿಸಿದಳು. ಕಲ್ಯಾಣ ಮುಟ್ಟುವುದರೊಳಗಾಗಿ ಆತ್ಮಶ್ರೀಗಿರಿಯ ಉತ್ತುಂಗ ನಡೆದ ಸಂವಾದದಲ್ಲಿ ಗೆದ್ದ ಮೇಲಂತೂ ಬಾನೆತ್ತರಕ್ಕೆ ಬೆಳೆದಳು ಅಕ್ಕಮಹಾದೇವಿ. ತನ್ನ ಪತಿಯ ಕುರುಹನ್ನು ಹೀಗೆ ಹೇಳಿದಳಾಕೆ;

'ಗುರುವೆ ತೆತ್ತಿಗನಾದ. ಲಿಂಗವೇ ಮದುವಣಿಗನಾದ,
ನಾ ಮದುವಳಿಗೆಯಾದೆನು,
ಈ ಭುವನವೆಲ್ಲವರಿಯಲು
ಅಸಂಖ್ಯಾತರೆನಗೆ ತಾಯಿ ತಂದೆಗಳು,
ಕೊಟ್ಟರು ಸಾದೃಶ್ಯವಪ್ಪ ವರನ ನೋಡಿ,
ಇದು ಕಾರಣ, ಚನ್ನಮಲ್ಲಿಕಾರ್ಜುನನೆ ಗಂಡನೆನಗೆ,
ಮಿಕ್ಕಿದ ಲೋಕದವರೆನಗೆ ಸಂಬಂಧವಿಲ್ಲವಯ್ಯ, 'ಪ್ರಭುವೆ!'

ಕಲ್ಯಾಣದಲ್ಲಿ 'ಅವ್ವ ನೀಲವ್ವನ ಮೋಹದ ಮಗಳಾಗಿ, ಅಪ್ಪ ಬಸವಣ್ಣನ ಸುಚಿತ್ತದ ಪುತ್ಥಳಿಯಾಗಿ, ನಿಃಕಳಂಕ ಸದ್ಗುರು ಪ್ರಭುದೇವರ ಸತ್ಯದ ಸೊಸೆಯಾಗಿ' ಕೆಲವು ದಿನ ಶರಣ ಸತಿತ್ವ – ಲಿಂಗಪತಿತ್ವದ ಸಾಧನೆ ನಡೆಸಿದಳು ಅಕ್ಕಮಹಾದೇವಿ. 'ಅಯ್ಯ, ನೀ ಕೇಳಿದರೆ ಕೇಳು, ಕೇಳದಿದ್ದರೆ ಮಾಣು – ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ; ಚನ್ನಮಲ್ಲಿಕಾರ್ಜುನಯ್ಯ, ನಾ ನಿಮ್ಮ ಪೂಜಿಸಿ ಹರುಷದಲೋಲಾಡುವೆನಯ್ಯ; ಎಂದು ಛಲ ಹಿಡಿದಳು. ಆಧ್ಯಾತ್ಮ ವಿರಹವು ಪ್ರಖರವಾಗಿ ಕಳವಳದ ಮನವು ತಲೆ ಕೆಳಗಾಗಲು, ಸುಳಿದು ಬೀಸುವ ಗಾಳಿ ಉರಿಯಾಗಲು, ಬೆಳುದಿಂಗಳು ಬಿಸಿಲಾಗಲು, 'ಒಮ್ಮೆ ಕಾಮನ ಕಾಲ ಹಿಡಿವೆ, ಒಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ ಸುಡಲಿ ವಿರಹವ! ಚನ್ನಮಲ್ಲಿಕಾರ್ಜುನ ದೇವ ನನನೊಲ್ಲದ ಕಾರಣ ಎಲ್ಲರಿಗೆ ಹಂಗಿತಿಯಾದೆನವ್ವ ಎಂದು ಪರಿತಪಿಸಿದಳು. ಕೊನೆಗೆ ಶ್ರೀಗಿರಿಯಲ್ಲಿಯೇ ಮಲ್ಲಿಕಾರ್ಜುನನ ಬೆರಸುವ ಬಯಕೆ ಬಲವಾಗಲು ಹೊರಟೇ ಬಿಟ್ಟಳು ಶ್ರೀಶೈಲಕ್ಕೆ – ಬೀಳ್ಕೊಡಲು ಬಂದ ಶರಣ ಶರಣೆಯರಿಗೆ

ಶಿರಬಾಗಿ ಹಾಡಿದಳು – ವಾಣಿಯ ವೀಣೆಯೇ ಹಾಡಿದಂತೆ:

ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ;
ಬೆಳೆದೆನು ಅಸಂಖ್ಯಾತರ ಕರುಣದೊಳಗೆ;
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ,
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ;
ಇಂತಪ್ಪ ತ್ರಿವಿಧಾಮೃತವ ದಣಿಯಲೆರೆದು ಸಲಹಿದರೆನ್ನ;
ಬಸವಣ್ಣ ಮೆಚ್ಚಲು ಒಗತನವ ಮಾಡುವೆ;
ಚನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲತಾರೆನು;
ಅವಧರಿಸಿ, ನಿಮ್ಮಡಿಗಳೆಲ್ಲರೂ ಬಿಜಯಂಗೈವುದು – ಶರಣಾರ್ಥಿ'

ನೆರೆದ ಶರಣ ಶರಣೆಯರು ಸ್ತಂಭೀಭೂತರಾಗಿ ನಿಂತು ಬಿಟ್ಟಿದ್ದರು. ಅವರ ಕಂಠಗಳು ಬಿಗಿದಿದ್ದುವು; ಕಣ್ಣುಗಳು ಕಂಬನಿದುಂಬಿದ್ದವು; ಅಕ್ಕ ಬಹುದೂರ ಹೋದ ಮೇಲೂ 'ನಿಮ್ಮ ಮಂಡೆಗೆ ಹೂವತಹೆ, ಹುಲ್ಲು ತಾರೆ,' ಎಂಬ ಅಕ್ಕನ ನುಡಿಗಳು ಅವರ ಕಿವಿಗಳಲ್ಲಿ ನಿನದಿಸುತ್ತಲಿದ್ದವು. ಅಕ್ಕನ ಈ ಸಲದ ಪ್ರಯಾಣ ಬಣ್ಣನೆಗೆ ನಿಲುಕದ ಪ್ರಸ್ಥಾನ. 'ವನವೆಲ್ಲ ನೀವೆ, ವನದೊಳಗಣ ದೇವ ತರುವೆಲ್ಲ ನೀವೆ; ತರುವಿನೊಳಗಾಡುವ ಖಗಮೃಗವೆಲ್ಲ ನೀವೆ – ಚನ್ನಮಲ್ಲಿಕಾರ್ಜುನ, ಸರ್ವಭರಿತನಾಗಿ ಎನಗೆ ಮುಖದೋರ' ಎಂದು ಎಲ್ಲೆಲ್ಲೂ ಮಲ್ಲಿಕಾರ್ಜುನನನ್ನು ಕಾಣಲು ಹಾತೊರೆದಳು ಅಕ್ಕ. ಕಾಣುವ ಹಂಬಲ ಉತ್ಕಟವಾಗಲು ಉತ್ಕಂಠಿತಳಾಗಿ ಕಂಡುದೆಲ್ಲವನ್ನೂ ಚನ್ನಮಲ್ಲಿಕಾರ್ಜುನನ ತೋರಿರೆ, ಎಂದು ಕೇಳಿದಳು 'ಅಳಿ ಸಂಕುಲವೇ, ಮಾಮರವೆ, ಬೆಳುದಿಂಗಳೆ, ಕೋಗಿಲೆಯೇ, ನಿಮ್ಮನೆಲ್ಲರನೂ ಒಂದ ಬೇಡುವೆನು, ಎನ್ನೊಡೆಯ ಚನ್ನಮಲ್ಲಿಕಾರ್ಜುನ ದೇವರ ಕಂಡಡೆ ತೋರಿರೆ,' ಎಂದು ಅಂಗಲಾಚಿದಳು. ಭಾವದ ತೀವ್ರತೆ ಹೆಚ್ಚಲು, ಕಾಣುವ ತವಕ ಹೆಚ್ಚಲು ವನಕ್ಕೆ ವನವೇ ಮಾರ್ದನಿಗುಡುವಂತೆ ಹಾಡಿದಳು.

'ಚಿಲಿಮಿಲಿ ಎಂದು ಓದುವ ಗಿಳಿಗಳಿರಾ,
ನೀವು ಕಾಣಿರೆ, ನೀವು ಕಾಣಿರೆ;
ಸರವೆತ್ತಿ ಪಾಡುವ ಕೋಗಿಲೆಗಳಿರಾ –
ನೀವು ಕಾಣಿರೆ, ನೀವು ಕಾಣಿರೆ;
ಎರಗಿ ಬಂದಾಡುವ ತುಂಬಿಗಳಿರಾ –
ನೀವು ಕಾಣಿರೆ, ನೀವು ಕಾಣಿರೆ;
ಕೊಳನ ತಡಿಯೊಳಾಡುವ ಹಂಸೆಗಳಿರಾ
ನೀವು ಕಾಣಿರೆ, ನೀವು ಕಾಣಿರೆ;

ಗಿರಿಗಂಹ್ವರದೊಳಾಡುವ ನವಿಲುಗಳಿರಾ –
ನೀವು ಕಾಣಿರೆ, ನೀವು ಕಾಣಿರೆ;
ಚನ್ನಮಲ್ಲಿಕಾರ್ಜುನನೆಲ್ಲಿದ್ದಿಹನೆಂದು ಹೇಳಿರೆ'

ಸೃಷ್ಟಿ ಸಮಸ್ತದೊಡನೆ ಸಾಮರಸ್ಯವನ್ನು, ತಾದಾತ್ಮ್ಯವನ್ನು ಸಾಧಿಸಿ ಬಿಟ್ಟಿದ್ದಳು ಅಕ್ಕ. ಆಗ ಅವಳ ಕಣ್ಣಿಗೆ ಮಲ್ಲಿಕಾರ್ಜುನನಲ್ಲದುದು, ಮಲ್ಲಿಕಾರ್ಜುನನಿಲ್ಲದುದು ಯಾವುದು? ಆದರೂ, ಚಿಕ್ಕಂದಿನಿಂದಲೂ ತನ್ನ ಕನಸುಗಳಲ್ಲಿ ಕುಣಿಯುತ್ತಲಿದ್ದ ಶ್ರೀಗಿರಯನ್ನು ವೈರಾಗ್ಯದ ಸೋಪಾನದಿಂದ ಮಾನವನ ಊರ್ಧ್ವಗಾಮಿ ಅಭೀಪ್ಸೆಯ ಮಹತ್ ಸಂಕೇತವಾಗಿ ಏರ ತೊಡಗಿದಾಗ ಅಲ್ಲಿ ವನವೆಲ್ಲ ಕಲ್ಪತರು, ಗಿಡವೆಲ್ಲ ಮರುಜೇವಣಿ, ಶಿಲೆಗಳೆಲ್ಲ ಪರುಷ. ನೆಲವೆಲ್ಲ ಅವಿಮುಕ್ತ 'ಕ್ಷೇತ್ರ, ಜಲವೆಲ್ಲ ನಿರ್ಜರಾಮೃತ, ಮೃಗವೆಲ್ಲ ಪುರುಷಾಮೃಗ, ಎಡಹುವ ಹರಳೆಲ್ಲ ಚಿಂತಾಮಣಿಯಾಗಿ ತೋರಿದವು ಅಕ್ಕನಿಗೆ. ಇಂಥ 'ಚನ್ನಮಲ್ಲಿಕಾರ್ಜುನಯ್ಯನನೊಲಿದಿದಳು ಆಕೆ.' ಇನ್ನೂ ಮುಂದುವರೆದು 'ಕದಳಿ ಎಂಬುದು ತನು, ಕದಳಿ ಎಂಬುದು ಮನ, ಕದಳಿ ಎಂಬುದು ವಿಷಯಂಗಳು, ಕದಳಿ ಎಂಬುದು ಭವ ಘೋರಾಣ್ಯ' ಎಂದು ಕದಳಿ ಶಬ್ದಕ್ಕೆ ಅಪೂರ್ವ ಅರ್ಥ ಸಂಪತ್ತನ್ನು ನೀಡುತ್ತಾಳೆ. 'ಈ ಕದಳಿ ಎಂಬುದ ಗೆದ್ದು, ತವೆ ಬದುಕಿ ಬಂದು, ಕದಳಿಯ ಬನದಲ್ಲಿ ಭವಹರನ ಕಂಡೆನು. ಭವಗೆದ್ದು ಬಂದ ಮಗಳೆ ಎಂದು ಕರುಣದಿಂದ ತೆಗೆದು ಬಿಗಿದಪ್ಪಿದಡೆ ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು,' ಎಂದು ಉದ್ಗರಿಸುತ್ತಾಳೆ. ಇದು 'ಲಿಂಗವೆನ್ನೆ, ಲಿಂಗೈಕ್ಯವೆನ್ನೆ, ಸಂಗವೆನ್ನೆ, ಸಮರಸವೆನ್ನೆ, ನಾನೆನ್ನೆ, ನೀನೆನ್ನೆ' ಎನ್ನುವಂತಹ ಅವಿನಾಭಾವದ ಅವಸ್ಥೆಯಾದರೂ ತನ್ನ ಮನದನ್ನನ ಭುವನಮನೋಹರ ದಿವ್ಯಸುಂದರ ರೂಪವನ್ನು ಆ ಮುನ್ನ ಕಣ್ಣಾರೆ ಕಂಡ ಮಹಾಸಿದ್ಧಿ ಅಕ್ಕಮಹಾದೇವಿಯದು. ಈ ರೋಮಾಂಚನಕರ ರೂಪವನ್ನು ಮನದಲ್ಲಿ ನೆನೆಯುತ್ತಿದ್ದರೆ ಮನವೆ ಮಂದಿರ, ಈ ರೂಪವೇ ಮಹಾಲಿಂಗವಾಗುತ್ತದೆ:

'ಹೊಳೆವ ಕೆಂಜಡೆಗಳ,
ಮಣಿ ಮುಕುಟದ,
ಒಪ್ಪುವ ಸುಲಿಪಲ್ಗಳ,
ನಗೆಮೊಗದ ಕಂಗಳ ಕಾಂತಿಯ,
ಈರೇಳು ಭುವನವಂ ಬೆಳಗುವ
ದಿವ್ಯಸ್ವರೂಪನ ಕಂಡೆ ನಾನು,
ಕಂಡೆನ್ನ ಕಂಗಳ ಬರ ಹಿಂಗಿತ್ತೆನಗೆ;
ಗಂಡ ಗಂಡರೆಲ್ಲರ
ಹೆಂಡಿರಾಗಿ ಆಳುವ ಗುರುವನ ಕಂಡೆ ನಾನು,

ಜಗದಾದಿ ಶಕ್ತಿಯೊಳು
ಬೆರಸಿ ಮಾತನಾಡುವ
ಪರಮಗುರು ಚನ್ನಮಲ್ಲಿಕಾರ್ಜುನನ
ನಿಲವ ಕಂಡು ಬದುಕಿದೆನು.'
ನಾವೂ ಬದುಕೋಣ – ಬದುಕಿಸಬಲ್ಲ ಅಕ್ಕನ ವಚನಾಮೃತವನ್ನು ಸವಿದು;

# ೧೯

# ಅದ್ವಿತೀಯ ಅನುಭವ ಮಂಟಪ

೧-೧-೧೯೪೪ರ 'ಜಯಂತಿ' ಸಂಚಿಕೆಯಲ್ಲಿ ಅನುಭವ ಮಂಟಪದ ಐತಿಹಾಸಿಕತೆಯನ್ನು ಶಂಕಿಸಿದ ಶ್ರೀ ಕಪಟರಾಳ ಕೃಷ್ಣರಾಯರೂ, ಇದಕ್ಕೆ 'ಜಯ ಕರ್ನಾಟಕ'ದ ಅದೇ ವರ್ಷದ ಮಾರ್ಚ್, ಏಪ್ರಿಲ್, ಮೇ, ಜೂನ್ ತಿಂಗಳುಗಳ ಸಂಚಿಕೆಗಳಲ್ಲಿ ಉತ್ತರ ಕೊಡುವುದಲ್ಲದೆ, 'ಅನುಭವ ಮಂಟಪದ ಐತಿಹಾಸಿಕತೆ' ಎಂಬ ಗ್ರಂಥವನ್ನೇ ೧೯೫೧ರಲ್ಲಿ ಬರೆದ ಹಿರಿಯರಾದ ಚನ್ನಪ್ಪ ಉತ್ತಂಗಿಯವರೂ ಇಂದು ನಮ್ಮ ಮಧ್ಯದಲ್ಲಿಲ್ಲ. ಅನುಭವ ಮಂಟಪದ ಐತಿಹಾಸಿಕತೆಯನ್ನು ಮತ್ತೆ ಪ್ರಬಲವಾಗಿ ಪ್ರಶ್ನಿಸಿದುದೂ ಇಲ್ಲವೆಂದೇ ತೋರುತ್ತದೆ. ಆದರೂ ಈ ಬಗ್ಗೆ ಇದುವರೆಗೆ ನಡೆದ ವಾದ ಪ್ರತಿವಾದಗಳ ಸಿಂಹಾವಲೋಕನವೊಂದು ಪ್ರಯೋಜನಕಾರಿ.

'ಅನುಭವ ಮಂಟಪ'ವೆಂಬ ಸಂಸ್ಥೆಯು ೧೨ನೆಯ ಶತಮಾನದ ಕಲ್ಪನೆಯಾಗಿರದಿದ್ದರೆ ಈ ಹೆಸರು ಯಾವ ಕಾಲದಲ್ಲಿ ಪ್ರಾರಂಭವಾಯಿತೆಂಬ ಪ್ರಶ್ನೆಯುಂಟಾಗುತ್ತದೆ. ಇದು ಸಿಂಗಿರಾಜ ಪುರಾಣದಲ್ಲಿದೆಯೆಂದು ಕೃಷ್ಣರಾಯರು ಒಪ್ಪಿದ್ದಾರೆ. ಚೆನ್ನಬಸವ ಪುರಾಣದಲ್ಲಿಯೂ ಈ ಹೆಸರು ಬರುತ್ತದೆ (ಕಾಂಡ ೧, ಸಂಧಿ ೪, ಪದ್ಯ ೮). ಶಿವಾನುಭವ ಮಂಟಪಕ್ಕೆ ಅನುಭವ ಮಂಟಪವೆಂಬ ಹೆಸರು ಬಂದುದು ಬಹುಶಃ ಅಲ್ಲಮನಿಂದ, 'ಮಂಟಪ' ಸಿಂಹಾಸನ'ವೆಂಬ ಪದಗಳು ಬಯಲು ಸಿದ್ಧಾಂತಕ್ಕೆ ಮೂಲಪುರುಷನಾದ ಅಲ್ಲಮನ ವಚನಗಳಲ್ಲಿ ಪ್ರಯೋಗವಾಗಿರುವಷ್ಟು ಧಾರಾಳವಾಗಿ ಬೇರೆ ಯಾರ ವಚನಗಳಲ್ಲಿಯೂ ಪ್ರಯೋಗವಾಗಿರುವುದಿಲ್ಲ..... ಹೀಗಾಗಿ ವಚನವಾಙ್ಮಯದಲ್ಲಿ ಅನೇಕ ಕಡೆಗಳಲ್ಲಿ ದೊರೆಯುವ 'ಅಚಲ ಮಂಟಪ' 'ವಿಶಾಲ ಮಂಟಪ' 'ಜ್ಞಾನ ಮಂಟಪ' 'ಪ್ರಕಾಶ ಮಂಟಪ' ಕರ್ಪೂರ ಸಿಂಹಾಸನ' ಮುಂತಾದ ಹೆಸರುಗಳು ಕಲ್ಯಾಣದ ಆ ಶಿವಾನುಭವ ಮಂಟಪದ ಸ್ಮಾರಕಗಳೆಂದೇ ತಿಳಿದುಕೊಳ್ಳತಕ್ಕದು.... 'ಮಹಮನೆ'ಗೂ 'ಅನುಭವ ಮಂಟಪ'ಕ್ಕೂ ಯಾವ ತರದ ವ್ಯತ್ಯಾಸವಿರುವುದಿಲ್ಲವೆಂದು ೧೫ನೆಯ ಶತಮಾನದ ವೀರಶೈವ ಸಾಹಿತ್ಯದಿಂದ ಸ್ಪಷ್ಟವಾಗಿ ತಿಳಿದು ಬಂದುದರಿಂದಲೇ ೧೬ನೆಯ ಶತಮಾನದವರು – ಅಂದರೆ ಸಿಂಗಿರಾಜ, ವಿರೂಪಾಕ್ಷ ಪಂಡಿತ ಮೊದಲಾದ

ಕವಿಗಳು ತಮ್ಮ ಗ್ರಂಥಗಳಲ್ಲಿ 'ಅನುಭವ ಮಂಟಪ'ವೆಂಬ ಹೆಸರನ್ನು ನಿರಾತಂಕವಾಗಿ ಪ್ರಯೋಗಿಸಿದ್ದಾರೆ...'

(ಚೆನ್ನಪ್ಪ ಉತ್ತಂಗಿ ಅವರು : ಅನುಭವ ಮಂಟಪದ ಐತಿಹಾಸಿಕತೆ, (೧೯೫೦) ಪು. ೧೦೨-೧೦೪)

ಬಸವ ಪುರಾಣದಲ್ಲಿ ಬರುವ 'ಭವನ ಮಂಟಪ' (ಸಂಧಿ ೫, ಪದ್ಯ ೨೫). ಹರಿಹರನಲ್ಲಿ ಬರುವ 'ಪುರಾತನರ ಗೀತ ಗೋಷ್ಠಿ' (ಸ್ಥಲ ೬, ಪದ್ಯ ೪೦ – ೫೦) ವಚನಗಳಲ್ಲಿ ಅನೇಕ ಕಡೆಗಳಲ್ಲಿ ಉಕ್ತವಾಗಿರುವ 'ಅನುಭವಗೋಷ್ಠಿ', ಕಾಲಜ್ಞಾನ ವಚನಗಳಲ್ಲಿ ಕಾಣುವ 'ವಿಚಾರ ಮಂಟಪ' (ಪುಟ ೨), 'ಆಚಾರಸಂಪನ್ನರ ಅನುಭವ ಮಂಟಪ' (ಪುಟ ೩೭), 'ಪ್ರಕಾಶ ಮಂಟಪ' (ಪುಟ ೪), 'ಎಲ್ಲ ದೇವ ಅನುಭವ ಮಂಟಪ' (ಪುಟ ೮) ಇತ್ಯಾದಿ ಉಲ್ಲೇಖನಗಳಿಂದಲೂ ಅನುಭವ ಮಂಟಪದ ಐತಿಹಾಸಿಕತೆ ಸಿದ್ಧವಾಗುವುದಾದರೂ ಸಮಕಾಲೀನ ವಚನ ಸಾಹಿತ್ಯದಲ್ಲಿಯೇ ಇದಕ್ಕೆ ಸ್ಪಷ್ಟ ಉಲ್ಲೇಖ ಸಿಕ್ಕದಿದ್ದುದೊಂದು ಕೊರತೆಯೆನಿಸಿದ್ದಿತು. ಈಗ ಆ ಕೊರತೆಯೂ ತುಂಬಿ ಬಂದಿದೆ. ಇನ್ನಾರೂ ಅಲ್ಲ. ಬಸವಣ್ಣನವರ ಧರ್ಮಪತ್ನಿ ನಿಜಭಕ್ತಿಯ ನೀಲಮ್ಮನವರ ಒಂದು ವಚನವೇ ನಿಸ್ಸಂದಿಗ್ಧವಾಗಿ ಅನುಭವ ಮಂಟಪದ ಅಸ್ತಿತ್ವವನ್ನು, ಐತಿಹಾಸಿಕತೆಯನ್ನು ಉದ್ಘೋಷಿಸುತ್ತಿದೆ:

'ಇಪ್ಪತ್ತೈದು ಸಾವಿರ ಚಾರ್ವಾಕರಂ ನೆಗ್ಗಲಿತ್ತಿ,
ಅಪ್ರತಿಮ ಶಿವಗಣಂಗಳ ಮಹಾತ್ಮ್ಯೆಯಂ
ಮೆರೆದಾತ ನಮ್ಮ ಬಸವಯ್ಯನು,
ಪ್ರಣವದ ಬೀಜವ ಬಿತ್ತಿ, ಪಂಚಾಕ್ಷರಿಯ ಬೆಳೆಯ ಬೆಳೆದು,
ಪರಮ ಪ್ರಸಾದವನೊಂದು ರೂಪಮಾಡಿ ಮರೆದು,
ಭಕ್ತಿಫಲವನುಂಡಾತ ನಮ್ಮ ಬಸವಯ್ಯನು
ಚನ್ನಬಸವನೆಂಬ ಪ್ರಸಾದಿಯ ಪಡೆದು,
ಅನುಭವ ಮಂಟಪವನು ಮಾಡಿ;
ಅನುಭವಮೂರ್ತಿಯಾದ ನಮ್ಮ ಬಸವಯ್ಯನು.
ಅರಿವ ಸಂಪಾದಿಸಿ, ಆಚಾರವನಂಗಗೊಳಿಸಿ,
ಏಳುನೂರಪ್ಪತ್ತು ಅಮರಗಣಂಗಳ
ಅನುಭವ ಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು....'
(ಶಿವಶರಣೆಯರ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ ಪ್ರಕಾಶನ,
ಪುಟ ೧೯೩)

ಅನುಭವ ಮಂಟಪದ ಐತಿಹಾಸಿಕತೆಯ ಇತ್ಯರ್ಥವಾದ ಮೇಲೆ ಅದಕ್ಕೆ ಪ್ರೇರಣೆ ಎಲ್ಲಿಂದ ಬಂದಿರಬಹುದೆಂಬುದರ ಬಗ್ಗೆ, ಅದರಂತಹ ಬೇರ ಸಂಸ್ಥೆಗಳಿದ್ದುವೇ ಎಂಬ ಬಗ್ಗೆ ಜಿಜ್ಞಾಸೆ ಸಹಜ. ವಚನಗಳ ಉಗಮವನ್ನು ಅರಸುವವರು ವಚನಗಳ ಕಮ್ಮಟವಾದ ಅನುಭವ ಮಂಟಪದ ಉಗಮವನ್ನು ಅರಸುವುದು ಸ್ವಾಭಾವಿಕ. ಆದರೆ ಒಂದು ಮಾತು; ಈ ಮೂಲಗಳ ಶೋಧನೆ ಹಿಂದೆಳೆಯುತ್ತ ಹೋದಂತೆ ಮೊದಲಿಲ್ಲದಾಗುವುದು. ಉದಾಹರಣೆಗೆ, ವಚನಗಳ ಉಗಮ ತೇವಾರಗಳಲ್ಲಿ ಎಂದು ಇಟ್ಟುಕೊಳ್ಳೋಣ. ವಾದಕ್ಕಾಗಿ, ತೇವಾರದ ಉಗಮವೆಲ್ಲಿ? ಅವುಗಳ ಉಗಮ ದೊರೆತರೂ ಅವುಗಳ ಉಗಮದ ಉಗಮವೆಲ್ಲಿ? ಹೀಗೆ ಹಿಂದು ಹಿಂದಕ್ಕೆ ಹೋದಾಗ ಮಾನವನೇ ಮೊದಲ ಮೂಲವೆಂಬುದು ನಿರ್ವಿವಾದವಾಗುತ್ತದೆ. ಇಷ್ಟು ಹಿಂದಿನ ಕಾಲದ ಮಾನವ ಎಲ್ಲದಕ್ಕೂ ಮೂಲನಾಗಬಹುದಾದರೆ, ಹನ್ನೆರಡನೆಯ ಶತಮಾನದ ಅನುಭವ ಮಂಟಪದ ಕಲ್ಪನೆಗೆ ಮೂಲನಾಗಲಾರನೆ?

ಆದರೂ ಈ ಸಂಸ್ಥೆಯನ್ನು ಅರಿಸ್ಟಾಟಲನ ಲಿಸಿಯಮ್ಮಿಗೋ, ತಮಿಳರ ಸಂಗಮಕ್ಕೋ, ಉಪನಿಷದಾರಾಮಗಳಿಗೋ, ಅಶೋಕನ ಧರ್ಮ ಸಭೆಗಳಿಗೋ ಹೋಲಿಸುವ ಹವ್ಯಾಸವಿದ್ದೇ ಇದೆ, ಇರಲಿ, ಆದರೆ ಒಂದು ಮುಖ್ಯ ಭೇದ ನೆನಪಿರಲಿ.

'ಜಗತ್ತಿನ ಧಾರ್ಮಿಕ ಇತಿಹಾಸದಲ್ಲಿ ಸಂಘಶಕ್ತಿಯಿಂದ ಆದ ಅನೇಕ ಮಹತ್ವದ ಕೆಲಸಗಳ ಉಲ್ಲೇಖಗಳು ದೊರೆಯುತ್ತವೆ. ಪ್ಲೇಟೋ ಸಂಗ್ರಹಿಸಿರುವ ಸೊಕ್ರೇಟಿಸನ ಸಂಭಾಷಣೆಗಳು, ತಮಿಳು ನಾಡಿನ ಸಂಘ ಸಾಹಿತ್ಯ, ಮಧ್ಯಕಾಲದ ಪರ್ಶಿಯಾ ದೇಶದ ಸೂಫಿ ಸಾಹಿತ್ಯಗಳನ್ನು ಅನುಭವ ಮಂಟಪದ ಸಾಹಿತ್ಯ ಸೃಷ್ಟಿಗೆ ಹೋಲಿಸಬಹುದು. ಆದರೆ ಒಬ್ಬ ವ್ಯಕ್ತಿಯನ್ನೇ ಅವಲಂಬಿಸದೆ ತತ್ತ್ವಗಳ ಬುನಾದಿಯ ಮೇಲೆ ನಿಂತು ಸಮಾಜ, ಧರ್ಮ, ವ್ಯಕ್ತಿ ಪ್ರಗತಿಗಳೆಲ್ಲವನ್ನೂ ಸಮಾನ ದೃಷ್ಟಿಯಿಂದ ಅನುಲಕ್ಷಿಸಿ, ಜನಜೀವನದ ಎಲ್ಲ ಅಂಗಗಳ ಮೇಲೂ ತನ್ನ ಪ್ರಭಾವಮುದ್ರೆಯನ್ನೊತ್ತಿದ ಕೀರ್ತಿ ಅನುಭವ ಮಂಟಪಕ್ಕೆ ಸೇರುತ್ತದೆ. ಅನುಭವ ಮಂಟಪದ ಶರಣರ ಜಿಜ್ಞಾಸು ಲಕ್ಷಣ, ವಿಚಾರ ಧೋರಣೆ ಹಾಗೂ ಸತ್ಯದ ಸ್ಪಷ್ಟ ಅನ್ವೇಷಣೆ – ಇವು ಅವರ ಬೋಧೆಗೆ ಹಿರಿಯ ಸ್ಥಾನವನ್ನು ಕಲ್ಪಿಸಿಕೊಟ್ಟಿವೆ.' (ಅ.ನ.ಕೃಷ್ಣರಾಯರು: 'ಅನುಭವ ಮಂಟಪ' ವೀರಶೈವ ತತ್ತ್ವಪ್ರಕಾಶ, ಪು. ೨೪೪ –೪೭)

ಇನ್ನೂ ವಿಶದವಾಗಿ ವಿವರಿಸುವುದಾದರೆ ಅನುಭವ ಮಂಟಪದ ಅದ್ವಿತೀಯತೆಗೆ ಕಾರಣವಾಗಿರುವುವು ಕೆಳಗಣ ಪ್ರಮುಖಾಂಶಗಳು:

(೧) 'ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು
ಅನುಭಾವವಿಲ್ಲದ ಲಿಂಗ ಸಮರಸ ಸುಖವನೀಯದು

ಅನುಭಾವವಿಲ್ಲದ ಪ್ರಸಾದ ಪರಿಣಾಮ ಕೊಡದು
ಅನುಭಾವವಿಲ್ಲದೆ ಏನೇನೂ ಅರಿಯಬಾರದು.
ತನ್ನಲ್ಲಿ ಸನ್ನಿಹಿತ ಉಳ್ಳೊಡೆ ಶಿವಶರಣರ ಸಂಗವೇತಕ್ಕೆನಲುಂಟೆ?
ಕೂಡಲ ಸಂಗಮದೇವಯ್ಯ, ನಿಮ್ಮ ಅನುಭಾವ
ಮಾತಿನ ಮಥನವೆಂದು ನುಡಿಯಬಹುದೇ ಪ್ರಭುವೆ!'

'ಅನುಭಾವವಿಲ್ಲದೆ ಏನನ್ನೂ ಅರಿಯಬಾರದು; ಅನುಭಾವಕ್ಕೆ ವ್ಯಷ್ಟಿಯ ಅನುಭವವೇ ಆಧಾರ. ಆದರೂ ಶಿವಶರಣರ ಸಂಗದಲ್ಲಿಯೇ, ಅವರ ಅನುಭವಗೋಷ್ಠಿಯಲ್ಲಿಯೇ ಅದಕ್ಕೆ ಸಾರ್ಥಕತೆ. ಇದು ವ್ಯಷ್ಟಿಯ ಪ್ರಾಥಮಿಕತೆಯನ್ನು ಒಪ್ಪಿಯೂ ಸಮಷ್ಟಿಯ ಪ್ರಾಧಾನ್ಯವನ್ನು ಒತ್ತಿ ಹೇಳುವ ವಿಧಾನ. ಆದುದರಿಂದ ಅನುಭಾವದ ಗುರಿಗೆ ಅನಭವ ಗೋಷ್ಠಿಯೇ ದಾರಿ.

'ಮರ ಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳ ಸುಡಲಾಯಿತ್ತು;
ಆತ್ಮವಾತ್ಮ ಮಥನಿಸಿ ಅನುಭಾವ ಹುಟ್ಟಿ
ತನುಗುಣಾದಿಗಳ ಸುಡಲಾಯಿತ್ತು;
ಇದು ಕಾರಣ, ನಿಮ್ಮ ಮಹಾನುಭಾವಿಗಳ ಅನುಭಾವವ ತೋರಿ
ಎನ್ನೊಡಲನುಳುಹಿಕೊಳ್ಳಾ, ಚೆನ್ನಮಲ್ಲಿಕಾರ್ಜುನಾ!'

ಈ 'ಆತ್ಮವಾತ್ಮಗಳ ಮಥನ' ಕೇವಲ ಮತಿಗಳ ಮಥನವಲ್ಲ. ಚಿಂತನೆಗಳ ಮಂಥನವಲ್ಲ, ಅಕ್ಕಮಹಾದೇವಿಯ ಮಾತಿನಲ್ಲಿ, 'ನಿಮ್ಮನುಭಾವಿಗಳೆನ್ನ ನೊರೆದೊರೆದು ಆಗು ಮಾಡಿದ ಕಾರಣ, ಚೆನ್ನಮಲ್ಲಿಕಾರ್ಜುನ, ನಿಮಗಾನು ತೊಡಿಗೆಯಾದೆನು' ಎನ್ನುವ 'ಒರೆದೊರೆದು ಆಗು ಮಾಡುವ' ಮೋಡಿ. ಇಷ್ಟೇ ಅಲ್ಲ, ಇದು ಆತ್ಮಮಥನದೊಡನೆ ಕ್ರಿಯಾಮಥನವೂ ಹೌದು!

'ಕ್ರಿಯಾಮಥನವಿಲ್ಲದೆ ಕಾಣ ಬಂದುದೇ ಇಕ್ಷುವಿನೊಳಗಣ ಮಧುರ?
ಕ್ರಿಯಾಮಥನವಿಲ್ಲದೆ ಕಾಣ ಬಂದುದೇ ತಿಲದೊಳಗಣ ತೈಲ?
ಕ್ರಿಯಾಮಥನವಿಲ್ಲದೆ ಕಾಣ ಬಂದುದೇ ಕಾಷ್ಠದೊಳಗಣ ಅಗ್ನಿ?
ಇದು ಕಾರಣ, ನಮ್ಮ ಗುಹೇಶ್ವರ ಲಿಂಗವ ತನ್ನೊಳರಿದೆನೆಂಬ
ಮಹಾಂತಂಗೆ ಸತ್ಕ್ರಿಯಾಚರಣೆಯೇ ಸಾಧನ ಕಾಣಿ ಭೋ!

ಇಂತಿದು ಕ್ರಿಯಾಜ್ಞಾನ ಸಾಮರಸ್ಯದ, ಅನುಭಾವ–ಕಾಯಕಗಳ ಅವಿನಾಭಾವತೆಯ, ವಿಚಾರ ಆಚಾರಗಳ ಸಕ್ರಿಯ ಸಮನ್ವಯದ ಪ್ರಯೋಗಶಾಲೆ ಈ ಅನುಭವಮಂಟಪ. ಈ

ದ್ವಿಮುಖ ಸಾಧನೆಗೆ ಸಹಾಯಕವಾಗಲೆಂದೇ ಅನುಭವ ಮಂಟಪದ ಚರ್ಚೆಗಳು ನಡೆಯುತ್ತಿದ್ದುದು. ಪ್ರಭುದೇವರ ಸೃಷ್ಟಿಯ ವಚನದ ಟೀಕಾಕಾರ ಕಥಿಸುವಂತೆ, ಬೆಳಗಿನ ಜಾವದಲ್ಲಿ;

'ವಚನ ಭಾಂಡಾರದ ಶಾಂತಯ್ಯಗಳು ವಚನಾಮೃತವ ಲೇಖನಂ ಗೈದು ಬಸವ ರಾಜದೇವರಿಗೆ ಕೊಡಲು, ಅವರು ಅದನ್ನು ಓದಿಕೊಂಡು ಷಡ್‌ಸ್ಥಲಜ್ಞಾನ ಸಾರೋದ್ಧಾರ, ಲಿಂಗೋದ್ಧರಣ ವಿಮಲ ವಿಚಕ್ಷಣರಾದ ಚೆನ್ನಬಸವೇಶ್ವರ ದೇವರು, ಷಟ್‌ಸ್ಥಲ ಬ್ರಹ್ಮಿಗಳನೊಡಗೊಂಡಿರುವಂಥ 'ಅನುಭಾವ ಮಂಟಪ'ಕ್ಕೆ ಬಸವರಾಜದೇವರು ಸುಪ್ರಭಾತಸಮಯದೊಳು ಈಶ್ವರಾರ್ಚನೆಯಂ ಗೈದು ಅಸಂಖ್ಯಾತರೊಡಗೊಂಡು ಬಂದು ಚೆನ್ನಬಸವೇಶ್ವರದೇವರಿಗೆ ಅಷ್ಟಾಂಗ ಪ್ರಣೀತರಾಗಿ ಮೂರ್ತವ ಮಾಡಿಕೊಂಡಿರಲು ಬಸವರಾಜದೇವರು ಅದನೋದಿಕೊಂಡು ಚನ್ನಬಸವರಾಜದೇವರಿಗೆ ಕೊಡಲು ಅವರು ತ್ರಿವಿಧ ಲಿಂಗಾನುಭಾವವಂ ಮಾಡಲು ಎಲ್ಲ ಅಸಂಖ್ಯಾತ ಮಹಾಗಣಂಗಳು ಒಂದು ಜಾವ ಹೊತ್ತು ಕೇಳಿ ತಮ್ಮ ದಿವ್ಯಾಧ್ಯಾವಸಾನವರಿನರಿದೆಕೊಂಡ ಬಳಿಕ ತಮ್ಮ ತಮ್ಮ ಗೃಹಕ್ಕೆ ಹೋಗಿ ಕಾಯಕ ವೃತ್ತಯಂ ಕೈಕೊಂಡು ಗುರುಭಕ್ತಿ ಲಿಂಗಪೂಜೆ ಜಂಗಮ ದಾಸೋಹದೋಳ್ ಪರಿಣತರಾಗಿರುತ್ತಿದ್ದರು.' (ಅನುಭವ ಮಂಟಪದ ಐತಿಹಾಸಿಕತೆ, ಪು.೫೭-೫೮)

ಇಂತಿದು ಕಾಯಕೊದ್ದೀಪನಕ್ಷಮ ಮಹಾನುಭಾವ ಪ್ರಸಂಗ, ಅಂತರಂಗ ಕೃಷಿರಂಗ, ಅನುಭವ ಮಂಟಪದ ಕ್ರಿಯಾಂಗ, 'ಎನ್ನ ಭಾವವು ಎಲ್ಲಿ ನಿಂದಿಹುದು, ಅಲ್ಲಿ ನಿಮ್ಮ ನಿಲವೆ ತುಂಬಿರ್ಪುದಯ್ಯ, ಅಖಂಡೇಶ್ವರಾ' ಎಂಬ ಅಂತರನುಭವದ ಸಿದ್ಧಿಯ ತುಂಗಮಂಗಲ ಶೃಂಗ.

೨. ಎರಡನೆಯದಾಗಿ, ಒಬ್ಬ ಪ್ರವಾದಿ ಎಂದೋ ಹೇಳಿದ ಮಾತುಗಳನ್ನು ಯುಗ-ಯುಗಗಳವರೆಗೆ ಅವನ ಅನುಯಾಯಿಗಳು ಚಾಚೂ ತಪ್ಪದೇ, ಒಂದಕ್ಕರವನ್ನೂ ತಿದ್ದದೆ ಅನುಸರಿಸಿಕೊಂಡು ಹೋಗಬೇಕೆಂಬ ಅಧಿಕಾರೀ ಮನೋವೃತ್ತಿಯುವರದಲ್ಲ ಅನುಭವಮಂಟಪ. ಅನುಭವದ ಒರೆಗಲ್ಲಿಗೆ ಉಜ್ಜಿದಾಗ ಉದುರಿ ಹೋಗುವುದೇನಾದರೂ ಇದ್ದರೆ ಹೋಗಿ ಅಪರಂಜಿ ಮಾತ್ರ ಉಳಿಯಲಿ ಎನ್ನುವ ಪ್ರಗತಿಪರ ಪುರೋಗಾಮೀ ದೃಷ್ಟಿಯವರ ಮಂಟಪವದು.

೩. ಮೂರನೆಯದಾಗಿ, ಯಾವುದೇ ಒಂದು ಗ್ರಂಥದ ಅಪೌರುಷೇಯತೆಯನ್ನಾಗಲಿ, ಅನುಲ್ಲಂಘನೀಯತೆಯನ್ನಾಗಲಿ. ಅಂತಿಮತೆಯನ್ನಾಗಲಿ ಮನ್ನಿಸುವವರ ಮಂಟಪವಲ್ಲ ಅದು.

'ಅನಂತ ವೇದ, ಶಾಸ್ತ್ರ ಆಗಮ, ಪುರಾಣ, ತರ್ಕ, ತಂತ್ರಗಳನ್ನು
ಆತ್ಮಮಾಡಿದನಲ್ಲದೆ, ಆತ್ಮನನವು ಮಾಡಿದುದಿಲ್ಲ.
ಎನ್ನಂತರಂಗದ ಅರಿವಿನ ಮೂರ್ತಿಯಾಗಿ,
ಎನ್ನ ಉರಿಲಿಂಗ ದೇವರು ಸಂಕಲ್ಪಿಸಿ ಆಗೆಂದರಾದವು'
ಎಂದು ನಂಬುವ ಆಧ್ಯಾತ್ಮವೀರರ ಮಂಟಪವದು

೪. ನಾಲ್ಕನೆಯದಾಗಿ, ಸಾಮಾನ್ಯ–ಅಸಾಮಾನ್ಯ, ಹಿರಿಯ–ಕಿರಿಯ, ಸ್ಪೃಶ್ಯ–ಅಸ್ಪೃಶ್ಯ, ಸ್ತ್ರೀ–ಪುರುಷ, ಕುಲಜ – ಕುಲಹೀನ, ಬಲ್ಲಿದ–ಬಡವ, ಪಂಡಿತ – ಪಾಮರ, ಶ್ರೇಷ್ಠ ವೃತ್ತಿಯವ – ಕನಿಷ್ಠ ವೃತ್ತಿಯವ, ಕರಿಯ–ಬಿಳಿಯ, ಇತ್ಯಾದಿ ಯಾವ ಕೃತ್ರಿಮ ವಿಭೇದಕ್ಕೂ ಆಸ್ಪದವೀಯದೆ ಎಲ್ಲರಿಗೂ ಮುಕ್ತದ್ವಾರವಾಗಿದ್ದ ಪ್ರಜಾತಂತ್ರೀಯ ಸಮಾನವಾವಾದೀ ಮಂಟಪವದು.

೫. ಐದನೆಯದಾಗಿ, ಹಡಪದ ಅಪ್ಪಣ್ಣ ಅಪ್ಪಣೆ ಕೊಡಿಸಿದಂತೆ, 'ಜಗದೊಳಗೆ ಹುಟ್ಟಿದವರೆಲ್ಲ ಹಗರಣಿಗರಾಗಿ ಹುಟ್ಟಿದರಲ್ಲದೆ, ಜಗವ ಗೆಲ್ಲಲರಿಯದೆ ನಗೆಗೆಡೆಯಾಗಿ ಹೋದರು. ಎಮ್ಮ ಶರಣರು ಅಂತಲ್ಲ ಕೇಳಿರಣ್ಣಾ! ಜಗದಲ್ಲಿಯೇ ಹುಟ್ಟಿ, ಜಗದಲ್ಲಿಯೇ ಬೆಳೆದು, ಜಗದಂತೆ ಇದ್ದು, ಈ ಜಗವ ಗೆದ್ದು ಹೋಗುವರು.' ಜಗವ ತ್ಯಜಿಸದೆ ಜಗದೊಳಗೆ ಇದ್ದು, ಜಗವ ಗೆದ್ದು ಹೋಗಲು ಹೋರಾಡಿದವರ ಮಂಟಪವದು. 'ಕೊಲುವೆನೆಂಬ ಭಾಷೆ ದೇವನದು, ಗೆಲುವೆನೆಂಬ ಭಾಷೆ ಭಕ್ತನದು' ಎಂಬ ಛಲವಿದ್ದವರು ಮಂಟಪ.

೬. ಆರನೆಯದಾಗಿ, ಉರಿಲಿಂಗಪೆದ್ದಿ ವಿವರಿಸಿದಂತೆ, 'ಪಂಕವಿಲ್ಲದೆ ಕಮಲಕ್ಕೆ ಸುಲಲಿತವೆಂತಪ್ಪುದಯ್ಯ; ಹೊನ್ನು, ಹೆಣ್ಣು, ಮಣ್ಣು ಇಲ್ಲದೆ ದೇವತಾಯೋಗ್ಯವೆಂತಪ್ಪುದಯ್ಯ? ಕಮಲ ಪಂಕದಲ್ಲಿ ವರ್ತಿಸಿದಂತೆ ಇಹರು ನಿಮ್ಮ ಶರಣರು, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ!' ಇಂಥ ಶರಣರ ಮಂಟಪವದು.

೭. ಏಳನೆಯದಾಗಿ, ಬಸವಣ್ಣನವರು ಬಣ್ಣಿಸಿದಂತೆ, 'ಮಾಡುವ ನೀಡುವ ಭಕ್ತನ ಕಂಡರೆ ನಿಧಿನಿಧಾನವ ಕಂಡಂತಾಯಿತ್ತು; ಪಾದೋದಕ ಪ್ರಸಾದಜೀವಿಯ ಕಂಡರೆ ಹೋದ ಪ್ರಾಣ ಬಂದಂತಾಯಿತ್ತು; ಅನ್ಯರ ಮನೆಗೆ ಹೋಗಿ ತನ್ನುದರವ ಹೊರೆಯದ ಅಚ್ಚಶರಣರ ಕಂಡರೆ ನಿಶ್ಚಯವಾಗಿ ಕೂಡಲಸಂಗಯ್ಯನೆಂಬೆನು.' ಇಂತ ಅಚ್ಚಶರಣರ ಮಂಟಪವದು.

೮. ಎಂಟನೆಯದಾಗಿ ಸಂಪೂರ್ಣ ವಿಚಾರ ಸ್ವಾತಂತ್ರ್ಯ, ವಿಮರ್ಶಾ ಸ್ವಾತಂತ್ರ್ಯವಿದ್ದ ಮಂಟಪವದು. ಅಲ್ಲಿ ಎಲ್ಲರೂ ಮುಮ್ಮೇಳದವರೇ, ಹಿಮ್ಮೇಳದವರಾರೂ ಇಲ್ಲ. ಚರ್ಚೆಯಲ್ಲಿ ನಿರ್ಭೀತತೆ, ಮೌಲ್ಯಮಾಪನದಲ್ಲಿ ನಿರ್ದಾಕ್ಷಿಣ್ಯಪರತೆ, ನಿಲುವಿನಲ್ಲಿ ವಸ್ತುನಿಷ್ಠತೆ, ದೋಷ

ನಿರ್ದೇಶದಲ್ಲಿ ನ್ಯಾಯ ನಿಷ್ಠುರತೆ, ವ್ಯಕ್ತಿ ಗೌರವಕ್ಕಿಂತ ಗುಣಗೌರವ ಗುಣಗೌರವ ದೃಷ್ಟಿ, ಪ್ರಶಂಸಾ ಪರಾನ್ಮುಖತೆ – ಇತ್ಯಾದಿಗಳಿಂದ ಸಾಮೂಹಿಕ ಸತ್ಯಾನ್ವೇಷಣೆಯ ಪವಿತ್ರ ಕ್ಷೇತ್ರವಾಗಿದ್ದಿತದು. ಗುಣದೋಷಗಳ ವಿವೇಚನೆ ಎಷ್ಟು ಕಠೋರವಾಗಿರಬಹುದಾಗಿತ್ತೆಂಬ ಬಗ್ಗೆ ಮೋಳಿಗೆಯ ಮಾರಯ್ಯನ ಈ ವಚನ ನಿದರ್ಶನ :

'ಮಹಾಮನೆಯ ಮಾಡಿ ಕೆಟ್ಟ ಬಸವಣ್ಣ
ಹೇಳಿ ಕೆಟ್ಟ ಚೆನ್ನಬಸವಣ್ಣ
ಉಂಡಿಹೆನೆಂದು ಕುಳಿತು ಕೆಟ್ಟ ಪ್ರಭುದೇವರು...
ಇವರೆಲ್ಲರು ಆಡುವ ಅಂದಣಗಿತ್ತಿಯ ಮನೆಯ
ಉಂಬಳಿಕಾರರಾದರು

ಇಂಥ ಕಠೋರ ವಿಮರ್ಶೆ ಸತ್ಯದ ಮೇಲಿನ ಹಿರಣ್ಮಯ ಪಾತ್ರೆಯನ್ನು ತೆಗೆದೊಗೆಯಲು ಅನಿವಾರ್ಯವೇ ಸರಿ.

೯. ಒಂಭತ್ತನೆಯದಾಗಿ, ಚರ್ಚಿತವಾದ ವಿಷಯಗಳು ಜೀವನದಷ್ಟೇ ವಿವಿಧ, ವಿಪುಲ, ವ್ಯಾಪಕವಾದವುಗಳು. ಅನುಭವ ಮಂಟಪದ ವ್ಯಾಪ್ತಿಗೆ ಒಳಗಾಗದಿದ್ದ ವಿಷಯಗಳೇ ಆ ಕಾಲದ ದೃಷ್ಟಿಯಿಂದ ಇರಲಿಲ್ಲವೆಂದರೂ ಸಲ್ಲುತ್ತದೆ. ಎಲ್ಲ ವಿಷಯಗಳ ಬಗೆಗೂ ತೆರೆದ ಮನಸ್ಸು. ಪೂರ್ವಾಗ್ರಹ ದೂಷಿತವಲ್ಲದ ಚಿತ್ತ, ಇರುವುದನ್ನು ಇರುವಂತೆ ಅರಿಯಬೇಕೆನ್ನುವ ತವಕ, ಏನನ್ನೂ ಯಾರಿಂದಲೂ ಮುಚ್ಚಿಡಬಾರದೆಂಬ ಬಿಚ್ಚು ಬಗೆ, ತಪ್ಪನ್ನೊಪ್ಪಿಕೊಳ್ಳುವಲ್ಲಿ ನಿಸ್ಸಂಕೋಚತೆ. ಇದು ನನಗೆ ತಿಳಿಯದೆನ್ನುವಲ್ಲಿ ಪ್ರಾಂಜಲತೆ, ಪಾಂಡಿತ್ಯ ಪ್ರದರ್ಶನ, ಮೇಲರಿಮೆಯ ಮೆರೆವಣಿಗೆ, ಮನ್ನಣೆಯ ದಾಹ– ಇವುಗಳ ಅನುಪಸ್ಥಿತಿ ಇತ್ಯಾದಿಗಳು ಮಂಟಪದಲ್ಲಿ ನಡೆವ ವಾದ – ಚರ್ಚೆಗಳಿಗೆ ಅನನ್ಯವಾದ ಸ್ವೋಪಜ್ಞತೆ, ಸ್ವಂತಿಕೆ, ಸಹಜತೆಗಳನ್ನು ನೀಡುತ್ತಿದ್ದವು.

೧೦. ಇದು ರಾಜಾಶ್ರಯಕ್ಕಾಗಿ ಹಂಬಲಿಸಿ, ಧರ್ಮಸತ್ತೆಯನ್ನು ರಾಜಸತ್ತೆಯ ಸ್ಥಿರೀಕರಣಕ್ಕಾಗಿ ಉಪಯೋಗಿಸಿದವರ ಮಂಟಪವಲ್ಲ. 'ನೆಲದಾಣ್ಮನ ಹೆಣವೆಂದೊಡೆ ಒಂದಡಕೆಗೆ ಕೊಂಬವರಿಲ್ಲ' ಎಂದು ಸಾರಿ ಪ್ರಜಾಶಕ್ತಿಯನ್ನೇ ನಂಬಿದವರ ಮುಕ್ತ ಮಂಟಪ. ಇನ್ನೂ ಒಂದೆರಡು ಮುಖ್ಯಾಂಶಗಳನ್ನು ಸೇರಿಸಬಹುದು. ಇಲ್ಲಿ ಇಷ್ಟು ಸಾಕು.

ಇವುಗಳಿಂದಲೇ ಅನುಭವ ಮಂಟಪದ ಅದ್ವಿತೀಯತೆ ಸಿದ್ಧವಾಗುವುದೆಂದು ನಂಬಿದ್ದೇನೆ. ಶ್ರೀಸಾಮಾನ್ಯರಿಗೂ ವಿಚಾರ ವಿನಿಮಯ, ಚಿಂತನ ಮಂಥನಗಳ ಅವಕಾಶಗಳನ್ನು ಕಲ್ಪಿಸಿಕೊಟ್ಟು, ಅದುವರೆಗಿನ ಬೌದ್ಧಿಕತೆಯ ಏಕಸ್ವಾಮ್ಯವನ್ನು ಕೊನೆಗಾಣಿಸಿ, ಸಮಾಜದ

ಸಮಸ್ತ ಶ್ರೇಣಿಗಳವರಲ್ಲಿ, ಸ್ತರಗಳವರಲ್ಲಿ ಮುಕ್ತ ಮನಸ್ಸಿನ ವಿಚಾರಗಳ ಆದಾನ ಪ್ರದಾನಗಳನ್ನು ಆರಂಭಿಸಿ, ಎಲ್ಲರಿಗೂ ಬೆಳವಣಿಗೆ, ಆತ್ಮ ಸಾಧನೆ, ಮಾನಸಿಕ ಆರೋಗ್ಯ ಸಂಪಾದನೆ, ಅನನ್ಯತೆ ಮತ್ತು ಸ್ವಾಯತ್ತತೆಗಳ ಅರ್ಜನೆ, ಅತ್ಯುನ್ನತಿಯ ಅಳವಡಿಕೆಯ ಅವಕಾಶಗಳನ್ನು ನೀಡಿದುದು ಈ ಮಂಟಪದ ಮಹತ್ ಸಾಧನೆ, ವಿರಾಟ್ ವೈಶಿಷ್ಟ್ಯ. ವಿಚಾರಗಳ ಏಕಕಮಾರ್ಗೀಯ ಸಂಚಾರವನ್ನು ತಪ್ಪಿಸಿ ದ್ವಿಮಾರ್ಗೀಯ ಸಂಚಾರ ವ್ಯವಸ್ಥೆಯನ್ನು ರೂಪಿಸಿದುದು. ಆಲೋಚನೆಗಳ ಅಡ್ಡ ಪರಾಗಾಧಾನವನ್ನು ಏರ್ಪಡಿಸಿದುದು, ಕತ್ತಲೆಯ ಕರಿ ಮೊಸರನ್ನೇ ಕಡೆದು ಬೆಳಕಿನ ಬೆಣ್ಣೆಯನ್ನು ಬರಿಸಿದುದು ನಿಜಕ್ಕೂ ಅಪೂರ್ವ ಕ್ರಾಂತಿ. ಈ ದೃಷ್ಟಿಯಿಂದ ಅನುಭವ ಮಂಟಪ ವಿಚಾರ ಸ್ವಾತಂತ್ರ್ಯದ ವಿಜಯಧ್ವಜ. ಸಾಂಸ್ಕೃತಿಕ ಕ್ರಾಂತಿಯೊಂದರ ಸಂಕೇತ. ಶ್ರೀಸಾಮಾನ್ಯರ ಶುಭೋದಯದ ಶ್ರೀಕಾರ, ಸರ್ವಸಮಾನತೆಯ ಝೇಂಕಾರ.

ಮನದೊಡೆಯ ಮಹಾದೇವ ಮನವ ನೋಡಿಹೆನೆಂದು
ಮನುಜರ ಕೈಯಿಂದ ಒಂದೊಂದು ನುಡಿಸುವನು.
ಇದಕ್ಕೆ ಕಳವಳಿಸದಿರು ಮನವೆ
ಕಾತರಿಸದಿರು ತನುವೆ
ನಿಜವ ಮರೆಯದಿರು ಕಂಡಾ!
ನಿಶ್ಚಿಂತನಾಗಿರುವ ಮನವೆ
ಬಸವಣ್ಣಪ್ರಿಯ ಚೆನ್ನಸಂಗಯ್ಯನು
ಬೆಟ್ಟದನಿತಪರಾಧವನು ಒಂದು ಬೊಟ್ಟಿನಲಿ ತೊಡೆವನು!

–ಅಕ್ಕನಾಗಮ್ಮ.

# ೨೦

# ಸಿದ್ಧಾಂತ ಸಾಧನಾ ವಿಧಾನಗಳ ಸುಂದರ ಸಮ್ಮಿಳನ – ಷಟ್ಸ್ಥಲ

ಅರಿಯಲು ಕಠಿನ, ಆಚರಿಸಲು ಸುಲಭ – ಇದು ಶರಣರು ಸಂಶೋಧಿಸಿ, ಸಂಪಾದಿಸಿ, ಸಮಗ್ರಗೊಳಿಸಿದ ಷಟ್ಸ್ಥಲದ ವಿಶೇಷತೆ. ಮಾನವನ ದೈಹಿಕ, ಮಾನಸಿಕ, ಜೈವಿಕ, ನೈತಿಕ, ಯೌಗಿಕ, ದಾರ್ಶನಿಕ, ಅನುಭಾವಿಕ ಅಗತ್ಯಗಳನ್ನು ಏಕಕಾಲಕ್ಕೆ ಪೂರೈಸಿ ಅವನ ಪೂರ್ಣ ವಿಕಾಸಕ್ಕೆ ಸರಳ, ಸುಲಭ, ಸುಭಗ ದಾರಿಯನ್ನು ತೋರುವ ಈ ಸಮನ್ವಯಪಥ ಪಡೆಯಿತು ಶಿವಮತದವರಿಂದ ಸ್ವಾಗತ.

ಬಸವಯುಗದ ಪೂರ್ವದಲ್ಲಿ ಇದರ ಬೇರುಗಳನ್ನು ಕಾಣಬಹುದಾದರೂ ಇದು ಪರಿಪೂರ್ಣತೆಯನ್ನು ಪಡೆದುದು ವಚನ ವಾಙ್ಮಯದಲ್ಲಿಯೇ ಎಂಬುದನ್ನು ಸ್ಥಿರೀಕರಿಸಲು ಪ್ರಕಾಂಡಪಂಡಿತ ಲಿಂಗೈಕ್ಯ ವೈ ನಾಗೇಶ ಶಾಸ್ತ್ರಿಗಳು ಕ್ರಿಯಾಸಾಗರದ ಈ ಉಕ್ತಿಯನ್ನು ಉದ್ಧರಿಸಿದ್ದಾರೆ:

‘ಏಕೋತ್ತರ ಸ್ಥಲಾನಾಂ ಷಟ್‌ಸ್ಥಲಾಂತರಗತತ್ತ್ವೇನ ನ ತೇಷಾಂ
ಪೃತುಗುಪದೇಶಃ ।
ತದ್ಭೇದಸ್ತು ಭಾಷಾ ಪ್ರಬಂಧಾದೇವ ಅವಗಂತವ್ಯ।*

ಇದು ನಿಜ. ವಚನ ವಾಙ್ಮಯದಲ್ಲಿ ಷಟ್ ಸ್ಥಲೋಪಾಸನೆಯು ಪಡೆದಿರುವಷ್ಟು ವಿವೇಚನೆಯನ್ನು, ವಿಶ್ಲೇಷಣೆಯನ್ನು, ವಿಸ್ತರಣೆಯನ್ನು ಇನ್ನೆಲ್ಲೂ ಕಾಣೆವು.

ಇದರ ಸಾರವನ್ನು ಸಾಮಾನ್ಯರಿಗೂ ವಿವರಿಸುವ ಪ್ರಯತ್ನ ಈ ಪುಟ್ಟ ಪ್ರಬಂಧದ ಉದ್ದೇಶ.

* ‘ಷಟ್‌ಸ್ಥಲ ತತ್ತ್ವದರ್ಪಣ’ ಪುಟ ೩

ಷಟ್‌ಸ್ಥಲದ ವಿವೇಚನೆ ಸ್ಥಲದ ವಿವೇಚನೆಯಿಂದಲೇ ಪ್ರಾರಂಭವಾಗಬೇಕಲ್ಲವೆ? ಸ್ಥಲವೆಂದರೇನು? ವಿಶ್ವವು ಮೊದಲು ಸ್ಥಿತಿಯನ್ನೂ, ಅನಂತರದಲ್ಲಿ ಲಯವನ್ನೂ ಯಾವ ತತ್ತ್ವದಲ್ಲಿ ಹೊಂದುವುದೋ ಅದೇ ಸ್ಥಲವು 'ಸ್ಥ' ಎಂಬ ಅಕ್ಷರ ಸ್ಥಾನ ವಾಚಕ; ಲಕಾರ ಲಯವಾಚಕ.

ಈ ಸ್ಥಲ ಸರ್ವಶೂನ್ಯ ನಿರಾಲಂಬ ಸ್ಥಿತಿಯಿಂದ ಸ್ವವಿಮರ್ಶಶಕ್ತಿ ಸಹಿತ ಶಿವನಲ್ಲಿ ಶಕ್ತಿ ಕ್ಷೋಭೆ ತಲೆದೋರುವವರೆಗೆ ಹಲವು ಹಂತಗಳನ್ನು ದಾಟುತ್ತದೆ. ಶಕ್ತಿಕ್ಷೋಭೆ ಸಂಭವಿಸುತ್ತಲೇ ಈ ಸ್ಥಲವು ಅಂಗ–ಲಿಂಗ ಎಂದು ಎರಡಾಗುತ್ತದೆ. ಈ ಎರಡೂ ಒಂದೇ – ಶಿವಸ್ವರೂಪಿ. ಉಪಾಸ್ಯ ಉಪಾಸಕ ಭೇದ ತೋರಿಕೆಗೆ ಮಾತ್ರ, 'ಶಿವೋ ಭೂತ್ವಾ ಶಿವಂ ಯಜೇತ್' ಎಂದು ಹೇಳಿರುವುದರಿಂದ ಉಪಾಸಕ ಶಿವನಾಗಿಯೇ ಉಪಾಸ್ಯ ಶಿವನನ್ನು ಆರಾಧಿಸಬೇಕು; ಅಂಗ ಲಿಂಗವಾಗಬೇಕು.

ಶಕ್ತಿಯೂ ಎರಡಾಯಿತು; ಲಿಂಗಸ್ಥಲವನ್ನಾಶ್ರಯಿಸಿ 'ಕಲೆ' ಎಂದೂ, ಅಂಗಸ್ಥಲವನ್ನಾಶ್ರಯಿಸಿ 'ಭಕ್ತಿ'ಯೆಂದೂ ಹೆಸರುಗೊಂಡಿತು. ಲಿಂಗ–ಗತ ಶಕ್ತಿ ಸೃಷ್ಟಿನಿರತವಾಗಿ ಪ್ರವೃತ್ತಿಪರವಾಗುತ್ತದೆ, ಅಂಗ–ಗತ ಭಕ್ತಿಯು ಅಂಗನ ತ್ರಿಮಲ ನಿವಾರಣ ಕಾರ್ಯವೆನ್ನೆಸಗುತ್ತ ನಿವೃತ್ತಿಪರವಾಗುತ್ತದೆ.

ಈ ತ್ರಿವಿಧ ಮಲಗಳ–ಕಾರಣ ಶರೀರ ರೂಪದಿಂದ ಮೊದಲನೆಯ ಆವರಣವಾಗಿಉವ ಆಣವ ಮಲ, ಸೂಕ್ಷ್ಮಶರೀರ ರೂಪದಿಂದ ಜೀವನಿಗೆ ಎರಡನೆಯ ಆವರಣವಾಗಿರುವ ಮಾಯಾಮಲ, ಸ್ಥೂಲಶರೀರ ರೂಪದಿಂದ ಮೂರನೆಯ ಆವರಣವಾಗಿರುವ ಕಾರ್ಮಿಕ ಮಲ – ಇವುಗಳ ನಿವಾರಣೆ ಹೇಗೆ? ದೀಕ್ಷೆಯಿಂದ, ಲಿಂಗಧಾರಣೆಯಿಂದ. ಆಣವ ಮಲಕ್ಕೆ ವೇಧಾ ದೀಕ್ಷೆ, ಮಾಯಾ ಮಲಕ್ಕೆ ಕ್ರಿಯಾದೀಕ್ಷೆ. ಕಾರ್ಮಿಕ ಮಲಕ್ಕೆ ಕ್ರಿಯಾದೀಕ್ಷೆ. ಕಾರಣ ಶರೀರಕ್ಕೆ ಭಾವಲಿಂಗ, ಸೂಕ್ಷ್ಮ ಶರೀರಕ್ಕೆ ಪ್ರಾಣಲಿಂಗ. ಸ್ಥೂಲ ಶರೀರಕ್ಕೆ ಇಷ್ಟಲಿಂಗದ ಸಂಬಂಧ ಸ್ಥಾಪನೆ. ಈ ಸಂಬಂಧದಿಂದ ಲಿಂಗನು ತ್ಯಾಗಾಂಗ, ಭೋಗಾಂಗ, ಯೋಗಾಂಗನೆಂದು ತ್ರಿವಿಧ ಭೇದವನ್ನು ಹೊಂದುತ್ತಾನೆ. ಮಲತ್ರಯ ಭ್ರಾಂತಿ ತೊಲಗುವುದರಿಂದ ತ್ಯಾಗಾಂಗ, ಶಿವನೊಡನೆ ಸಹಭೋಗಿತ್ವ ಸಿದ್ಧಿಸುವುದರಿಂದ ಭೋಗಾಂಗ, ಶಿವಯೋಗಾನುಸಂಧಾನ ಸಾಧಿಸುವುದರಿಂದ ಯೋಗಾಂಗ. ಈ ತ್ರಿವಿಧಾಂಗರಿಗೆ ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳ, ವಿಶ್ವ, ತೈಜಸ, ಪ್ರಾಜ್ಞರೆಂಬ ತ್ರಿವಿಧ ಜೀವರ ಸಂಬಂಧವನ್ನೂ ಹೇಳುವುದುಂಟು.

ಈ ತ್ರಿವಿಧ ಲಿಂಗ ತ್ರಿವಿಧ ಅಂಗಗಳು ಮತ್ತೆ ಷಡ್ವಿಧವಾಗುತ್ತವೆ. ಹೃದಯದಲ್ಲಿ ಮಹಾಲಿಂಗ, ಶ್ರೋತ್ರದಲ್ಲಿ ಪ್ರಸಾದ ಲಿಂಗ, ತ್ವಕ್ಕಿನಲ್ಲಿ ಜಂಗಮ ಲಿಂಗ. ನೇತ್ರದಲ್ಲಿ ಶಿವ

ಲಿಂಗ, ಜಿಹ್ವೆಯಲ್ಲಿ ಗುರುಲಿಂಗ, ಘ್ರಾಣದಲ್ಲಿ ಆಚಾರ ಲಿಂಗ – ಇವು ಷಡ್ಲಿಂಗಗಳು; ತ್ಯಾಗಾಂಗದಲ್ಲಿ. ಭಕ್ತ ಮಹೇಶ, ಭೋಗಾಂಗದಲ್ಲಿ ಪ್ರಸಾದಿ ಪ್ರಾಣಲಿಂಗಿ, ಯೋಗಾಂಗದಲ್ಲಿ ಶರಣ, ಐಕ್ಯ – ಇವು ಷಡಂಗಗಳು.

ಇದೆ ರೀತಿ ಲಿಂಗಗತ ಶಕ್ತಿ. ಲಿಂಗಗತ ಭಕ್ತಿಗಳೂ ಷಡ್ವಿಧವಾಗಿ ವಿಭಕ್ತವಾಗುವುದು. ಆಚಾರ ಲಿಂಗದಲ್ಲಿ ನಿವೃತ್ತಿ ಕಲೆಯೆಂಬ ಹೆಸರಿನ ಕ್ರಿಯಾಶಕ್ತಿ. ಗುರುಲಿಂಗದಲ್ಲಿ ಪ್ರತಿಷ್ಠಾಕಲೆಯೆಂಬ ಹೆಸರಿನ ಜ್ಞಾನ ಶಕ್ತಿ, ಶಿವಲಿಂಗದಲ್ಲಿ ವಿದ್ಯಾಕಲೆಯೆಂಬ ಹೆಸರಿನ ಇಚ್ಛಾಶಕ್ತಿ. ಜಂಗಮ ಲಿಂಗದಲ್ಲಿ ಶಾಂತಿ ಕಲೆಯೆಂಬ ಹೆಸರಿನ ಆದಿಶಕ್ತಿ, ಪ್ರಸಾದ ಲಿಂಗದಲ್ಲಿ ಶಾಂತ್ಯತೀತೋತ್ತರ ಕಲೆಯೆಂಬ ಹೆಸರಿನ ಚಿಚ್ಛಕ್ತಿ ಇವು ಷಡ್ವಿಧ ಶಕ್ತಿಗಳು.

ಭಕ್ತ ಸ್ಥಲದಲ್ಲಿ ಶ್ರದ್ಧಾ ಭಕ್ತಿ, ಮಹೇಶ ಸ್ಥಲದಲ್ಲಿ ನಿಷ್ಠಾ ಭಕ್ತಿ, ಪ್ರಸಾದಿ ಸ್ಥಲದಲ್ಲಿ ಅವಧಾನ ಭಕ್ತಿ, ಪ್ರಾಣ ಲಿಂಗಿ ಸ್ಥಲದಲ್ಲಿ ಅನುಭಾವ ಭಕ್ತಿ, ಶರಣ ಸ್ಥಲದಲ್ಲಿ ಆನಂದ ಭಕ್ತಿ, ಐಕ್ಯ ಸ್ಥಲದಲ್ಲಿ ಸಮರಸ ಭಕ್ತಿ. ಇವು ಷಡ್ವಿಧ ಭಕ್ತಿಗಳು.

ಶಿವಯೋಗೀಶ್ವರ ತೋಂಟದ ಸಿದ್ಧಲಿಂಗೇಶ್ವರರ ಈ ವಚನವನ್ನು ಮನದಟ್ಟು ಮಾಡಿಕೊಂಡರೆ ಈ ವಿಭೇದಗಳೆಲ್ಲ ಕರತಲಾಮಲಕವಾಗುವುವು.

'ಲೋಕಾದಿ ಲೋಕಂಗಳುಯೇನೂ ಇಲ್ಲದಂದು
ಏಕಮೇವ ಬ್ರಹ್ಮನು ತಾನೊಂದೇ ನೋಡಾ।
ಅದು ತನ್ನನು ನೆನೆಯದೆ, ಇದಿರನು ನೆನೆಯದೆ
ನೆನಹು ನಿಷ್ಪತ್ತಿಯಾಗಿದ್ದಿತ್ತು ನೋಡಾ
ಆ ನೆನಹಿಲ್ಲದ ಘನವಸ್ತು ನೆನೆದ ನೆನಹೇ
ಸಾವಯವಾಗಿ ಚಿತ್ತೆನಿಸಿಕೊಂಡಿತ್ತು.
ಆ ಚಿತ್ತೇ ಸತ್ತು, ಚಿತ್ತು, ಆನಂದ, ನಿತ್ಯ, ಪರಿಪೂರ್ಣ
ಎಂಬ ಐದಂಗವನಂಗೀಕರಿಸಿ
ನಿಃಕಲ ಶಿವತತ್ತ್ವನೆನಿಸಿತ್ತು ನೋಡಾ.
ಆ ನಿಃಕಲ ಶಿವತತ್ತ್ವ ತಾನೊಂದೆ; ತನ್ನ ಶಕ್ತಿಯ
ಚಲನೆ ಮಾತ್ರದಿಂದ ಒಂದೆರಡಾಯಿತ್ತು ನೋಡಾ.
ಅದರೊಳಗೆ ಒಂದು ಲಿಂಗಸ್ಥಲ, ಮತ್ತೊಂದು ಅಂಗಸ್ಥಲ.
ಹೀಂಗೆ ಅಂಗಲಿಂಗವೆಂದು. ಉಪಾಸ್ಯ ಉಪಾಸಕನೆಂದು
ವರ್ತಿಸುಡತ್ತಿಹುದು ನೋಡಾ.
ಆ ಪರಶಿವನ ಚಿಚ್ಛಕ್ತಿ ತಾನೆ ಎರಡು ತೆರನಾಯಿತ್ತು;

ಲಿಂಗಸ್ಥಲವನಾಶ್ರಯಿಸಿ ಶಕ್ತಿಯೆನಿಸಿತ್ತು;
ಅಂಗಸ್ಥಲವನಾಶ್ರಯಿಸಿ ಭಕ್ತಿಯೆನಿಸಿತ್ತು;
ಶಕ್ತಿಯೆ ಪ್ರವೃತ್ತಿಯೆನಿಸಿತ್ತು;
ಭಕ್ತಿಯೆ ನಿವೃತ್ತಿಯೆನಿಸಿತ್ತು;
ಶಕ್ತ ಭಕ್ತಿಯೆಂದೆರಡು ತೆರನಾಯಿತ್ತು ಶಿವನ ಶಕ್ತಿ.
ಲಿಂಗವಾರು ತೆರನಾಯಿತ್ತು; ಅಂಗವಾರು ತೆರನಾಯಿತ್ತು;
ಶಕ್ತಿಯಾರು ತೆರನಾಯಿತ್ತು; ಭಕ್ತಿಯಾರು ತೆರನಾಯಿತ್ತು;
ಮೊದಲಲ್ಲಿ ಲಿಂಗ ಮೂರು ತೆರನಾಯಿತ್ತು;
ಭಾವಲಿಂಗವೆಂದು, ಪ್ರಾಣಲಿಂಗವೆಂದು, ಇಷ್ಟಲಿಂಗವೆಂದು
ಮೂರು ತೆರನಾಯಿತ್ತು;
ಈ ಒಂದೊಂದು ಲಿಂಗವೆರಡೆರಡಾಗಿ ಆರು ತೆರನಾಯಿತ್ತು
ಭಾವ ಲಿಂಗವು ಮಹಾಲಿಂಗವೆಂದು, ಶಿವಲಿಂಗವೆಂದು'
ಎರಡು ತೆರನಾಯಿತ್ತು;
ಇಷ್ಟಲಿಂಗವು ಗುರುಲಿಂಗವೆಂದು, ಆಚಾರಲಿಂಗವೆಂದು
ಎರಡು ತೆರನಾಯಿತ್ತು;
ಹೀಂಗೆ ಒಬ್ಬ ಶಿವನು ಆರು ತೆರನಾದನು.
ಶಾಂತ್ಯತೀತೋತ್ತರೆಯೆಂಬ ಕಲಾಪರಿಯಾಯವನುಳ್ಳ ಚಿಚ್ಛಕ್ತಿ,
ಶಾಂತ್ಯತೀತೆಯೆಂಬ ಕಲಾಪರಿಯಾಯವನುಳ್ಳ ಪರಾಶಕ್ತಿ,
ಶಾಂತಿಯೆಂಬ ಕಲಾಪರಿಯಾಯವನುಳ್ಳ ಆದಿಶಕ್ತಿ,
ವಿದ್ಯಾ ಕಲಾಪರಿಯಾಯವನುಳ್ಳ ಇಚ್ಛಾಶಕ್ತಿ
ಪ್ರತಿಷ್ಠಾ ಕಲಾಪರಿಯಾಯವನುಳ್ಳ ಜ್ಞಾನಶಕ್ತಿ
ನಿವೃತ್ತಿ ಕಲಾಪರಿಯಾಯವನುಳ್ಳ ಕ್ರಿಯಾಶಕ್ತಿ.
ಹೀಂಗೆ ಒಂದೇ ಶಿವಶಕ್ತಿ ಆರುತೆರನಾಗಿ
ಷಟ್ ಪ್ರಕಾರವಹಂಥಾ ಲಿಂಗಕ್ಕೆ ಅಂಗರೂಪವಾಯಿತ್ತು
ಇದು ಲಿಂಗ ಷಟ್‌ಸ್ಥಲ.
ಇನ್ನು ಒಂದು ಅಂಗ ಮೂರು ತೆರನಾಯಿತ್ತು;
ಯೋಗಾಂಗ, ಭೋಗಾಂಗ, ತ್ಯಾಗಾಂಗವೆಂದು ಮೂರು
ತೆರನಾಯಿತ್ತು
ಈ ತ್ರಯಾಂಗ ಒಂದೊಂದು ಎರಡೆರಡಾಗಿ ಆರು ತೆರನಾಯಿತ್ತು
ಯೋಗಾಂಗವೆ ಐಕ್ಯವೆಂದು, ಶರಣನೆಂದು ಎರಡು ತೆರನಾಯಿತ್ತು
ಭೋಗಾಂಗವೆ ಪ್ರಾಣಲಿಂಗಯೆಂದು, ಪ್ರಸಾದಿಯೆಂದು
ಎರಡು ತೆರನಾಯಿತ್ತು

ತ್ಯಾಗಾಂಗವೆ ಮಾಹೇಶ್ವರನೆಂದು, ಭಕ್ತನೆಂದು ಎರಡು ತೆರನಾಯಿತ್ತು
ಹೀಂಗೆ ಒಬ್ಬ ಶಿವಶರಣನು ಆರು ತೆರನಾದನು.
ಸಮರಸಭಕ್ತಿ, ಆನಂದಭಕ್ತಿ, ಅನುಭಾವ ಭಕ್ತಿ,
ಅವಧಾನ ಭಕ್ತಿ, ನೈಷ್ಠಿಕಾ ಭಕ್ತಿ, ಸದ್ಭಕ್ತಿ ಎಂದು
ಮಹಾ ಘನ ಅನುಪಮಭಕ್ತಿ ತಾನೆ ಆರು ತೆರನಾಗಿ
ಷಟ್‌ಪ್ರಕಾರವಹಂಥಾ ಶರಣಂಗೆ ಅಂಗರೂಪವಾಯಿತ್ತು
ಇಂದು ಅಂಗ ಷಟ್‌ಸ್ಥಲ'

ಪ್ರವೃತ್ತಿ ಪರವಾಗಿ ಅಂಗ ಷಟ್‌ಸ್ಥಲವಾದ ಲಿಂಗಶಕ್ತಿ ನಿವೃತ್ತಿ ಪರವಾಗಿ ಲಿಂಗ ಷಟ್‌ಸ್ಥಲವಾಗುತ್ತ ಮಲತ್ರಯಬಂಧದಿಂದ ಬಿಡುಗಡೆಯನ್ನು ಪಡೆಯುತ್ತ, ವಿಷಯ ರೂಪದಿಂದ ಹೇಯವಾದ ಭೋಗವನ್ನು ವರ್ಜಿಸಿ ಪ್ರಸಾದ ರೂಪೀಭೋಗವನ್ನು ಸವಿಯುತ್ತ, ಲಿಂಗ ಭೋಗೋಪಭೋಗಿಯಾಗಿ ದಿನದಿನವೂ ಲಿಂಗಾಂಗ ಸಾಮರಸ್ಯವನ್ನು ಪಡೆದು ಆನಂದಿಸುವುದೇ ಷಡ್‌ಸ್ಥಲಾಚರಣೆಯ ಪ್ರಧಾನೊದ್ಧೇಶ. ಲಿಂಗಾಂಗ ಸಾಮರಸ್ಯವೆಂದರೆ ಮರಣೋತ್ತರ ಮೋಕ್ಷವಲ್ಲ. ವಸ್ತುತಃ ಲಿಂಗದಲ್ಲಿ ಲಿಂಗ ಲೀನವಾಗುವುದಲ್ಲ – ಅಂಗ ಗುಣಗಳು ಲಿಂಗ ಗುಣಗಳಾಗುವುದು; ಕರಣಂಗಗಳು ಲಿಂಗಕಿರಣಂಗಳಾಗುವುದು.

ಇನ್ನೂ ಸೂಕ್ಷ್ಮ ವಿವರಗಳಿಗೆ ಕೈ ಹಾಕಿದರೆ ಅದಕ್ಕೆ ಇಲ್ಲಿ ಸ್ಥಳಾವಕಾಶ ಸಾಲದು. ಸೈದ್ಧಾಂತಿಕವಾಗಿ ಭಕ್ತ–ಮಹೇಶ ಸ್ಥಲಗಳಲ್ಲಿ ದ್ವೈತವನ್ನೂ, ಪ್ರಸಾದಿ ಪ್ರಾಣಲಿಂಗಿ ಸ್ಥಲಗಳಲ್ಲಿ ವಿಶಿಷ್ಟಾದ್ವೈತವನ್ನೂ, ಶರಣ– ಐಕ್ಯಸ್ಥಲಗಳಲ್ಲಿ ಶಿವಾದ್ವೈತವನ್ನೂ ಒಳಗೊಂಡಿರುವ ಈ ಷಟ್‌ಸ್ಥಲಾಚರಣೆಯು ಅಷ್ಟಾವರಣಗಳಣ್ಣೂ ಪಂಚಾಚಾರಗಳನ್ನೂ, ಶಿವಯೋಗವನ್ನೂ ತನ್ನಲ್ಲಿ ಗರ್ಭೀಕರಿಸಿಕೊಂಡಿರುವುದು ಸೋಜಿಗಗಳಲ್ಲಿ ಸೋಜಿಗ.

ಅಷ್ಟಾವರಣದ ಗುರು–ಲಿಂಗ–ಜಂಗಮ–ಪ್ರಸಾದ–ಪ್ರಸಾದ ತೃಪ್ತಿಗಳು ಕ್ರಮವಾಗಿ ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳಾಗುತ್ತವೆಯಿಲ್ಲಿ. ಮಂತ್ರವು ಗುರು ಸ್ವರೂಪವನ್ನು ಪಡೆಯುತ್ತದೆ. ಪಾದೋದಕ ಪ್ರಸಾದಲ್ಲಿ ಅಂತರ್ಗತವಾಗುತ್ತದೆ.

ಪಂಚಾಚಾರ ಆಚಾರಲಿಂಗವಾಗುತ್ತದೆ. ಈ ಎಲ್ಲ ಲಿಂಗಗಳ ಸ್ವರೂಪ ನಿರೂಪಣೆಗೆ ಸ್ಥಳ ಸಾಲದು. ಅಚಾರಲಿಂಗವು ಕ್ರಿಯಾಸ್ವರೂಪವಾದುದು. ಷಟ್‌ಸ್ಥಲದ ಮೊದಲ ಮೂರು ಸ್ಥಲಗಳು ಕ್ರಿಯಾ ಪ್ರಧಾನವೂ. ಉಳಿದ ಮೂರೂ ಜ್ಞಾನ ಪ್ರಧಾನವೂ, ಉಳಿದ ಮೂರೂ ಜ್ಞಾನ ಪ್ರಧಾನವೂ ಎಂದು ಹೇಳಲಾಗಿದೆ. ಇವು ಅನ್ಯೋನ್ಯಾಶ್ರಯಿಗಳಾಗಿ ಕ್ರಿಯಾಜ್ಞಾನ ಸಾಮರಸ್ಯವನ್ನು ಸಾಧಿಸುವುವು. ಯಾಕೆಂದರೆ ಜೇಡರ ದಾಸಿಮಯ್ಯ ಮನೋಜ್ಞವಾಗಿ

ಹೇಳಿರುವಂತೆ' ಅಗ್ನಿ ಸುಡಲಲ್ಲದೆ ಸುಳಿಯಲರಿಯದು; ವಾಯು ಸುಡಲಲ್ಲದೆ ಸುಳಿಯಲರಿಯ; ಅಗ್ನಿ ವಾಯು ಕೂಡಿದಲ್ಲದೆ ಮುಂದಡಿಯಿಡಲರಿಯದು'.

ಮಾಡುವ ಕರ್ಮ ಅರ್ಚನೆಯಾಗಲು ಕಾಯಕವನ್ನು ಕಲ್ಪಿಸಿದಂತೆ ಒಂದೊಂದೆ ಸ್ಥಲಕ್ಕೂ ನೀತಿ ಕ್ರಿಯಾಚರಣೆಯನ್ನು ನಿರವಿಸಿ ಅಂತರಂಗ ಬಹಿರಂಗ ಶುದ್ಧಿಗಳನ್ನು ಸಹಜವಾಗಿಯೇ ಸಾಧಿಸುವ ದಾರಿನ್ನೂ ತೋರಲಾಗಿದೆ ಷಟ್‌ಸ್ಥಲಾಚರಣೆಯಲ್ಲಿ. ಕೆಲವು ವಚನಗಳನ್ನಿಲ್ಲಿ ಉದ್ಧರಿಸಲೇ ಬೇಕು–

ಭಕ್ತಸ್ಥಲಕ್ಕೆ –

ಭಕ್ತನು ಶಾಂತನಾಗಿರಬೇಕು;
ತನ್ನ ಕುರಿತು ಬಂದ ತಾವಿನಲ್ಲಿ ಸತ್ಯನಾಗಿರಬೇಕು;
ಭೂತ ಹಿತ ವಚನವ ನುಡಿಯಬೇಕು;
ಲಿಂಗ ಜಂಗಮದಲ್ಲಿ ಕುಂದು ನಿಂದೆಗಳಿಲ್ಲದಿರಬೇಕು;
ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು; ತನುಮನಧನ ಗುರುಲಿಂಗ
ಜಂಗಮಕ್ಕೆ ಅರ್ಪಿಸಬೇಕು
ಅಪಾತ್ರದಾನ ಗೈಯದಿರಬೇಕು
ಸಕಲ ಇಂದ್ರಿಯಗಳೂ ತನ್ನ ವಶಗತವಾಗಿರಬೇಕು
ಸಕಲ ಇಂದ್ರಿಯಗಳೂ ತನ್ನ ವಶಗತವಾಗಿರಬೇಕು;
ಇದೆ ಮೊದಲಲ್ಲಿ ಬೇಹ ಶೌಚ ನೋಡಾ;
ಲಿಂಗವ ಪೂಜಿಸಿ ಪ್ರಸಾದವ ಪಡೆವೆಡೆ ಎನಗಿದೆ ಸಾಧನವು ನೋಡಾ
ಕೂಡಲ (ಚೆನ್ನ) ಸಂಗಮದೇವಾ!
ಬಸವಣ್ಣ – ಚೆನ್ನಬಸವಣ್ಣ

ಮಹೇಶ್ವರಸ್ಥಲಕ್ಕೆ –

'ಕಳವು, ಪರದಾರ, ಜೀವ ಹಿಂಸೆ, ಎಂಬಿವನತ್ತತ್ತಲೆ ಕಡೆನೂಂಕಿ,
ಕ್ರೋಧ, ಲೋಭ, ಚಿತ್ತದಲ್ಲಿ ಮೊಳೆಯುವ ಕಪಟ,
ಕಳವಳದಲ್ಲಿ ಬೆಳೆಯದೆ, ಕುಂದು ನಿಂದೆಗಳಿಂದೆ ಕೆಡೆನುಡಿವ ವಾಕು
ಮನದಲ್ಲಿ ಪಲ್ಲವಿಸದೆ, ಮದ ಮತ್ಸರ ಅಹಂಕಾರದಲ್ಲಿ
ಮುಗುಳೊತ್ತದೆ.
ಪ್ರಕೃತಿ, ವಿಕೃತಿ, ಭ್ರಾಂತು ಭಾವದಲ್ಲಿ ಫಲಿಸದೆ,
ಸುಜ್ಞಾನದಿಂದ ಧರ್ಮಾಂಧರ್ಮಂಗಳ ಮರ್ಮವನರಿತು
ಮನಕ್ಕೆ ಮನ ಸಾಕ್ಷಿಯಾಗಿ,
ಸದ್ವರ್ತನೆ, ಸಮತೆ, ಸಾರಹೃದಯ, ಅನಿಂದೆ,

ಅನುಬಂಧ, ಅಕಪಟ ಪಟುತರವಾಗಿ,
ಸಟೆಯಳಿದು, ದಿಟ ಘಟಿಸಿ, ನಿಜನಿರುಗೆಯಾದಲ್ಲಿ
ಸೌರಾಷ್ಟ್ರ ಸೋಮೇಶ್ವರನೆಡೆ ಬಿಡುವಿಲ್ಲದಿಪ್ಪನು'
–ಆದಮ್ಯ

ಪ್ರಸಾದಿಸ್ಥಲಕ್ಕೆ –

'ಮೌನದಲುಂಬುದು ಆಚಾರವಲ್ಲ;
ಲಿಂಗಾರ್ಪಿತವ ಮಾಡಿದ ಬಳಿಕ
ತುತ್ತಿಗೊಮ್ಮೆ 'ಶಿವಶರಣು' ಎನ್ನುತ್ತಿರಬೇಕು
ಕರಣವೃತ್ತಿಗಳಡಗುವವು.
ಕೂಡಲ ಸಂಗನ ನೆನೆಯುತ್ತ ಉಂಡರೆ' – ಅಣ್ಣನವರು

'ಲಿಂಗಕ್ಕೆ ಸಮರ್ಪಿಸಿದ ಸಕಲ ದ್ರವ್ಯಂಗಳನು
ಲಿಂಗ ಸಹಿತವಾಗಿ ಭೋಗಿಸಬೇಕು;
ಅನರ್ಪಿತವ ಮುಟ್ಟದಿರಬೇಕು;
ಲಿಂಗದಲ್ಲಿ ಅತಿ ಸಾವಧಾನ ಭಕ್ತಿ ನೆಲೆಗೊಂಡಿರಬೇಕು;
ಇಂತಪ್ಪ ಪರಮ ಪ್ರಸಾದಿಗಳ ಶ್ರೀ ಚರಣಕ್ಕೆ
ನಮೋ ನಮಃ ಎಂಬೆನಯ್ಯಾ, ಅಖಂಡೇಶ್ವರಾ!'
'ಷಣ್ಮುಖ ಶಿವಯೋಗಿಗಳು.

ಪ್ರಾಣಲಿಂಗಿಸ್ಥಲಕ್ಕೆ –

ಸುಗುಣವೆ ಲಿಂಘ ಪ್ರಾಣಿಯಯ್ಯಾ,
ದುರ್ಗುಣವೆ ವಾಯುಪ್ರಾಣಿಯಯ್ಯಾ,
ಸುಗುಣ ದುರ್ಗುಣವೆಂಬ ಭಯವನತಿಗಳೆದು,
ಸುಖದುಃಖಾದಿಗಳ ಸಮಾನಂಗಂಡು,
ಶತ್ರು ಮಿತ್ರಾದಿಗಳ ಸಮಾನಂಗಂಡು,
ಸ್ತುತಿ ನಿಂದ್ಯಾದಿಗಳ ಸಮಾನಂಗಂಡು,
ಹಾಸ್ಯ, ವಿಸ್ಮಯ, ವಿರಹ, ಕರಣ ಹೇಸಿಕೆ
ಇಂತಿ ಪ್ರಾಣನ ವಿಷಯ ಭ್ರಾಂತಿಯನತಿಗೆಳೆದು
ಪ್ರಾಣನ ಪೂರ್ವಾಶ್ರಯವಳಿದು,
ಲಿಂಗದ ನೆನಹು ಸಂಬಂಧಿಸಿ,
ಲಿಂಗವೇ ಪ್ರಾಣವಾಗಿರಬಲ್ಲರೆ
ಪ್ರಾಣಲಿಂಗಿ ಸ್ಥಲವಿದೆಂಬೆನಯ್ಯಾ,
ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೆ'
ತೋಂಟದ ಸಿದ್ಧಲಿಂಗ ಶಿವಯೋಗಿಗಳು.

ಶರಣಸ್ಥಲಕ್ಕೆ –

'ಭಲ ಬೇಕು ಶರಣಂಗೆ ಪರಧನವನೊಲ್ಲೆನೆಂಬ;
ಭಲ ಬೇಕು ಶರಣಂಗೆ ಪರಸತಿಯನೊಲ್ಲೆನೆಂಬ;
ಭಲ ಬೇಕು ಶರಣಂಗೆ ಪರದೈವವನೊಲ್ಲೆನೆಂಬ;
ಭಲ ಬೇಕು ಶರಣಂಗೆ ಲಿಂಗಜಂಗಮ ಒಂದೆ ಎಂಬ;
ಭಲ ಬೇಕು ಶರಣಂಗೆ ಪ್ರಸಾದ ದಿಟವೆಂಬ;
ಭಲವಿಲ್ಲದವರ ಮೆಚ್ಚ ನಮ್ಮ ಕೂಡಲಸಂಗಮದೇವ'

–ಬಸವಣ್ಣನವರು

ಐಕ್ಯಸ್ಥಲಕ್ಕೆ –

'ಭಕ್ತನಾಯಿತ್ತೆ ಭಕ್ತಿ ದಾಸೋಹ,
ಮುಕ್ತನಾಯಿತ್ತೆ, ಯುಕ್ತಿ ದಾಸೋಹ,
ಐಕ್ಯನಾಯಿತ್ತೆ ಮಮಕಾರ ದಾಸೋಹ;
ಸರ್ವದಲ್ಲೂ ದಾಸೋಹವೆ ಬೇಕು;
ಈ ದಾಸೋಹದ ಅನುವ ಕೂಡಲಸಂಗಯ್ಯ ತಾನೆ ಬಲ್ಲ'

–ಬಸವಣ್ಣನವರು.

ಚನ್ನ ಬಸವಣ್ಣನವರು ಒಂದು ವಚನದಲ್ಲಿ ಐವತ್ತು ಆಚಾರಗಳನ್ನು ಹೇಳಿದ್ದಾರೆ ಅವುಗಳಲ್ಲಿ –

'ಪರರ ಹೆಣ್ಣಿಗೆ ಕಣ್ಣಿಡದಿಹುದೇ ಒಂದನೆಯ ಆಚಾರ,
ಪರರ ದ್ರವ್ಯವ ಅಪಹಾರ ಮಾಡದಿಹುದೇ ಒಂದನೆಯ ಆಚಾರ,
ಪರರ ದ್ರವ್ಯವ ಅಪಹಾರ ಮಾಡದಿಹುದೆ ಎರಡನೆಯ ಆಚಾರ,
ಸುಳ್ಳಾಡದಿಹುದೇ ಮೂರನೆಯ ಆಚಾರ,
ವಿಶ್ವಾಸಘಾತವ ಮಾಡದಿಹುದೇ ನಾಲ್ಕನೆಯ ಆಚಾರ,
ಪ್ರಾಣ ಹಿಂಸೆಯ ಮಾಡದಿಹುದೇ ಐದನೆಯ ಆಚಾರ,
ಸಕಲ ಶಿವಶರಣರ್ಗೆ ಸಂತೋಷಮಂ ಪುಟ್ಟಿಸುವುದೇ
ಆರನೆಯ ಆಚಾರ,
ಕೆಟ್ಟ ಜನರ ಸಹವಾಸ ಮಾಡದಿಹುದೇ ಒಂಭತ್ತನೆಯ ಆಚಾರ,
ಸಜ್ಜನ ಸಂಘತಯ ಬಿಡದಿಹುದೇ ಹತ್ತನೆಯ ಆಚಾರ
ಸಕಲ ಜೀವಿಗಳಿಗೆ ಹಿತವ ಬಯಸುವುದೇ ಹದಿನಾಲ್ಕನೆಯ ಆಚಾರ,
ಸರ್ವರಿಗೆ ಹಿತವ ಮಾಡುವುದೇ ಹದಿನೈದನೆಯ ಆಚಾರ,
ಸತ್ಯವನು ನುಡಿದು ತಪ್ಪದಿಹುದೇ ಇಪ್ಪತ್ತೆರಡನೆಯ ಆಚಾರ,
ಷಡ್ವರ್ಗಂಗಳ ಮೆಟ್ಟಿ ಷಟ್‌ಸ್ಥಲವನಿಂಬುಗೊಂಡದೇ
ಮೂವತ್ತೆರಡನೆಯ ಆಚಾರ.'

ಹೀಗೆ ಸ್ಥಲವೊಂದಕ್ಕೂ ಆಚಾರಗಳನ್ನು ವಿಧಿಸಿ, ಆಚಾರಲಿಂಗದ ಕಲ್ಪನೆಯನ್ನೇ ಮಂಡಿಸಿ ಶರಣರು ಷಟ್‌ಸ್ಥಲಾಚರಣೆಗೆ ಹೊಸ ಮೆರುಗನ್ನು, ಮಹತಿಯನ್ನು ನೀಡಿದ್ದಾರೆ. ಮೋಳಿಗೆಯ ಮಾರಯ್ಯನವರ ಕೆಳಗಣ ವಚನದೊಂದಿಗೆ ಈ ವಿಷಯಕ್ಕೆ ವಿರಾಮ ನೀಡಬಹುದು.

'ಕಾಯ ಇಂದ್ರಿಯಗಳಲ್ಲಿ ಮೆಚ್ಚಿಹನ್ನಕ್ಕರ ಭಕ್ತಸ್ಥಲವಿಲ್ಲ;
ಆತ್ಮ ಹಲವು ವಿಷಯಗಳಲ್ಲಿ ಹರಿನನ್ನಕ್ಕರ ಮಹೇಶ್ವರಸ್ಥಲವಿಲ್ಲ;
ಹಿರಿದು ಕಿರಿದನರಿದು, ರೋಚಕ ಅರೋಚಕವೆಂಬನ್ನಕ್ಕರ
ಪ್ರಸಾದಿಸ್ಥಲವಿಲ್ಲ;
ಜಾಗ್ರದಲ್ಲಿ ಕಂಡು, ಸ್ವಪ್ನದಲ್ಲಿ ತೋರಿ, ಸುಷುಪ್ತಿಯಲ್ಲಿ ತಿಳಿದನ್ನಕ್ಕರ
ಪ್ರಾಣಲಿಂಗ ಸಂಬಂಧಿಯಿಲ್ಲ;
ಚತುರ್ವಿಧ ಫಲಪದಂಗಳಲ್ಲಿ ಕಾಂಬ ಕಾಣಿಕೆಯುಳ್ಳನ್ನಕ್ಕರ
ಶರಣಸ್ಥಲವಿಲ್ಲ;
ಅರಿದೆ, ಮರೆದೆ ಎಂಬ ಉಭಯದ ಸಂದೇಹವುಳ್ಳನ್ನಕ್ಕರ
ಐಕ್ಯಸ್ಥಲವಿಲ್ಲ'

ಇನ್ನು ಷಟ್‌ಸ್ಥಲಾಚರಣೆಯಲ್ಲಿ ಶಿವಯೋಗವೂ ಹೇಗೆ ಸಮೀಕೃತವಾಗಿದೆ–ಯಂಬುದನ್ನಷ್ಟುನೋಡೋಣ. ಯೋಗವು ಅಷ್ಟಾಂಗ ಯೋಗವೆಂದಿದ್ದು ಅದರಲ್ಲಿ ಕೊನೆಯವಾದ ಧ್ಯಾನ. ಧಾರಣ, ಸಮಾಧಿಗಳೇ ಯೋಗಸಾರ ಸರ್ವಸ್ವವೆನಿಸಿವೆ. ಉಳಿದುವು ಅವುಗಳ ಸಾಧನೆಗೆ ಸಿದ್ಧತೆಗಳೆನಿಸಿವೆ. ಮಗ್ಗೆಯ ಮಾಯಿದೇವರು ಶಿವಯೋಗಕ್ಕೆ ಸಂಬಂಧಿಸಿದಂತೆ ಈ ಧ್ಯಾನ, ಧಾರಣ, ಸಮಾಧಿಗಳಾವುವೆಂಬುದನ್ನು ತಮ್ಮ ಶಿವಾಧವ ಶತಕದಲ್ಲಿ ಹೀಗೆ ವಿವರಸಿದ್ದಾರೆ;

'ಧ್ಯಾನವದಿಷ್ಟಲಿಂಗಮನಹರ್ನಿಶಮುಂ ನೆನೆವೇಕನಿಷ್ಠೆ; ತದ್
ಜ್ಞಾನ ಪರಾಯಣಾಮಳ ಮನೋಲಯವೇ ಸುಸಮಾಧಿಃ ತಲ್ಲಯ
ಸ್ಥಾನಮೆನಿಪ್ಪ ಲಿಂಗಮನನಾರತಮಂಗದ ಮೇಲೆ ಭಕ್ತಿ ಸ–
ನ್ಮಾನ ವಿಧಾನದಿಂ ಧರಿಸೆ ಧರಣಮೆಂಬ ಪದಂ ಶಿವಧವಾ

ಇಷ್ಟಲಿಂಗವನ್ನು ಏಕನಿಷ್ಠೆಯಿಂದ ನೆನೆವುದೇ ಧ್ಯಾನ; ಆ ಇಷ್ಟಲಿಂಗವನ್ನು ಅನವರತ ಅಂಗದ ಮೇಲೆ ಧರಿಸುವುದೇ ಧಾರಣ; ಅದರಲ್ಲಿ ಮನಲೀನವಾಗಿ ಲಯವಾಗುವುದೇ ಸಮಾಧಿ; ಎಷ್ಟು ಸುಲಭ ಈ ಯೋಗ:

ತೋಂಟದ ಸಿದ್ಧಲಿಂಗೇಶ್ವರರು ಅಷ್ಟಾಂಗಯೋಗದ ಮೊದಲಿನ ಐದು ಅಂಗಗಳಿಗೂ ಶಿವಯೋಗಪರ ಪ್ರತಿಪಾದನೆ ನೀಡಿ ಅದನ್ನು ಸಂಪೂರ್ಣಗೊಳಿಸಿದ್ದಾರೆ:

'ಅನೃತ, ಹಿಂಸೆ, ಪರಧನ, ಪರಸ್ತ್ರೀ, ಪರನಿಂದೆ ಇಂತಿವೈದನು
ಬಿಟ್ಟು ಲಿಂಗ ಪೂಜೆಯ ಮಾಡುವುದೀಗ ಯಮಯೋಗ;
ಆರು ಚಿತ್ತವ ಬಿಟ್ಟು ವಿಭೂತಿ ರುದ್ರಾಕ್ಷಿಯ ಧರಿಸಿ,
ಶಿವಲಿಂಗಾರ್ಚನತತ್ಪರನಾಗಿ ಪಾಪಭೀತನಾದರೆ ನಿಯಮಯೋಗ;
ಸಿದ್ಧಾಸನ, ಪದ್ಮಾಸನ, ಸ್ವಸ್ತಿಕಾಸನ, ಅರ್ಧಚಂದ್ರಾಸನ
ಪರ್ಯಂಕಾಸನ – ಈ ಐದು ಆಸನ ಯೋಗಂಗಳಲ್ಲಿ
ಸ್ವಸ್ಥಿರಚಿತ್ತನಾಗಿ ಮೂರ್ತಿಗೊಂದು
ಶಿವಲಿಂಗಾರ್ಚನೆಯ ಮಾಡುವುದೀಗ ಆಸನಯೋಗ;
ಹೀಂಗೆ ಈಡೆ ಪಿಂಗಳದಲ್ಲಿ ಚರಿಸುವ
ರೇಚಕ ಪೂರಕಂಗಳ ಭೇದವನರಿತು
ಮನ ಪವನಂಗಳ ಮೇಲೆ ಲಿಂಗವ ಸಂಬಂಧಿಸಿ
ಮನ ಪವನ ಪ್ರಾಣಂಗಳ ಲಿಂಗದೊಡನೆ ಕೂಡಿ
ಲಿಂಗಸ್ವರೂಪವ ಮಾಡಿ,
ವಾಯು ಪ್ರಾಣತ್ವವ ಕಳೆದು ಲಿಂಗಪ್ರಾಣಿಯ ಮಾಡಿ
ಹೃದಯಕಮಲ ಮಧ್ಯದಲ್ಲಿ ಪ್ರಣಮವನುಚ್ಚರಿಸುತ್ತ
ಪರಶಿವಧ್ಯಾನದಲ್ಲಿ ತರಹರವಾಗಿಪ್ಪುದೀಗ ಪ್ರಾಣಾಯಾಮ
ಸರ್ವೆಂದ್ರಿಯಂಗಳ ಸುಲಿಂಗ ಮುಖದಿಂದ
ಸಾವಧಾನ ಮಾಡಿ ಕೊಂಡಿಪ್ಪುದೀಗ ಪ್ರತ್ಯಾಹಾರಯೋಗ.'

ಇಲ್ಲಿ ಉಪಾಸನ ವಿಧಿಯ ಬಗ್ಗೆ ಎರಡು ಮಾತು ಬರೆದು ಮಂಗಳ ಹಾಡಬಹುದೆಂದು ತೋರುತ್ತಿದೆ. ಗುರಿ ಸರ್ವಾಂಗಲಿಂಗಮಯ ಸ್ಥಿತಿಯ ಸಾಧನೆಯಾಗಿರುವುದರಿಂದ ತನುತ್ರಯದಲ್ಲಿ ಲಿಂಗತ್ರಯಗಳ ಆರಾಧನೆಯಂತೂ ಸರಿಮೆ; ಷಡಂಗಗಳಲ್ಲಿ ಷಡ್ಲಿಂಗಗಳ ಪೂಜೆಯೂ ಪ್ರಾರಂಭವಾಗಬೇಕು. ಇಷ್ಟ ಲಿಂಗವನ್ನು ದೃಷ್ಟಿಯಿಂದ ಗ್ರಹಿಸಿ ಪ್ರಾಣಲಿಂಗವನ್ನು ಮನಜ್ಞಾನದಿಂದ ಗ್ರಹಿಸಿ, ಭಾವಲಿಂಗವನ್ನು ಜ್ಞಾನದಿಂದ ಗ್ರಹಿಸಿ ತ್ರಿವಿಧ ಲಿಂಗೋಪಾಸನೆ ಮುಂದುವರಿಯುತ್ತದೆ; ಷಡ್ಲಿಂಗೋಪಾಸನೆ ಆರಂಭವಾಗುತ್ತದೆ. ಆ ಷಡ್ಲಿಂಗಗಳಿಗೆ ಅನುಕ್ರಮವಾಗಿ ಗಂಧ ರಸ ರೂಪ ಸ್ಪರ್ಷ ಶಬ್ದ ಪರಿಣಾಮವೆಂಬ ಆರು ಪದಾರ್ಥಗಳನ್ನು ಅರ್ಪಿಸಿ ಅವುಗಳನ್ನು ಪ್ರಸಾದ ರೂಪದಲ್ಲಿ ಪಡೆದು ಸ್ವೀಕರಿಸುವುದು ಸಾಗುತ್ತದೆ. ಭಕ್ತ ಸ್ಥಲದಿಂದ ಐಕ್ಯಸ್ಥಲದವರೆಗೆ ಇದರ ಆಚರಣೆ ಹೀಗೆ :

**ಭಕ್ತ :** ಭಕ್ತನು ಶ್ರದ್ಧಾಭಕ್ತಿಯಿಂದ ಭೂಮ್ಯಂಗದಲ್ಲಿದ್ದು, ಕ್ರಿಯಾಶಕ್ತಿಯುಕ್ತನಾಗಿ ಆಧಾರ ಚಕ್ರದಲ್ಲಿರುವ ಆಚಾರ ಲಿಂಗಕ್ಕೆ ನಾಸಿಕ ಮುಖದಲ್ಲಿ ಸುಚಿತ್ರ ಹಸ್ತದಿಂದ ಚಂದನಾದಿ ನಾನಾ ಪರಿಮಳದ್ರವ್ಯಗಳನ್ನು ಅರ್ಪಿಸಿ ಗಂಧ ಪ್ರಸಾದವನ್ನು ಪಡೆದುಕೊಳ್ಳುತ್ತಾನೆ.

**ಮಹೇಶ :** ಮಹೇಶನು ನಿಷ್ಠಾಭಕ್ತಿಯಿಂದ ಜಲಾಂಗದಲ್ಲಿದ್ದು, ಜ್ಞಾನ ಶಕ್ತಿ ಸಮೇತವಾದ ಗುರುಲಿಂಗಕ್ಕೆ ಜಿಹ್ವಾಮುಖದಲ್ಲಿ ಸುಬುದ್ಧಿಹಸ್ತದಿಂದ, ಮಧುರಾದಿ ಷಡ್ರಸ ಪದಾರ್ಥಗಳನ್ನು ಅರ್ಪಿಸಿ ತದ್ರಸ ಪ್ರಸಾದವನ್ನು ಪಡೆದುಕೊಳ್ಳುತ್ತಾನೆ.

**ಪ್ರಸಾದಿ :** ಪ್ರಸಾದಿಯು ಅವಧಾನ ಭಕ್ತಿಯಿಂದ ಅಗ್ನ್ಯಂಗದಲ್ಲಿದ್ದು, ಇಚ್ಛಾಶಕ್ತಿಯುಕ್ತವಾದ ಶಿವಲಿಂಗಕ್ಕೆ ನೇತ್ರಮುಖದಲ್ಲಿ ನಿರಹಂಕಾರ ಹಸ್ತದಿಂದ ಶ್ವೇತಾದಿ ವರ್ಣ ಪದಾರ್ಥಗಳನ್ನು ಸಮರ್ಪಿಸಿ ತದ್ರೂಪ ಪ್ರಸಾದವನ್ನು ಪಡೆದುಕೊಳ್ಳುತ್ತಾನೆ.

**ಪ್ರಾಣಲಿಂಗಿ :** ಪ್ರಾಣಲಿಂಗಿಯು ಅನುಭವ ಭಕ್ತಿಯಿಂದ ವಾಯ್ವಂಗದಲ್ಲಿದ್ದು, ಆದಿಶಕ್ತಿಸಮೇತವಾದ ಜಂಗಮದಲ್ಲಿ ತಚ್ಚುಖದಲ್ಲಿ ಸುಮನೋ ಹಸ್ತದಿಂದ ಮೃದುಕಠಿಣಾದಿ ಪದಾರ್ಥಗಳನ್ನು ಸಮರ್ಪಿಸಿ ತತ್‌ಸ್ಪರ್ಶ ಪ್ರಸಾದವನ್ನು ಪಡೆದುಕೊಳ್ಳುತ್ತಾನೆ.

**ಶರಣ–ಶರಣನು** ಆನಂದ ಭಕ್ತಿಯಿಂದ ಆಕಾಶಾಂಗದಲ್ಲಿದ್ದು, ಪರಾಶಕ್ತಿಯುಕ್ತವಾದ ಪ್ರಸಾದಲಿಂಗಕ್ಕೆ ಶ್ರೋತ್ರಮುಖದಲ್ಲಿ ಸುಜ್ಞಾನಹಸ್ತದಿಂದ ವೀಣಾದಿ ನಾದದ್ರವ್ಯವನ್ನು ಸಮರ್ಪಿಸಿ ತನ್ನಾದ ಪ್ರಸಾದವನ್ನು ಪಡೆದುಕೊಳ್ಳುತ್ತಾನೆ.

ಐಕ್ಯ–ಐಕ್ಯ ಸ್ಥಲಾತ್ಮನು ಸಮರಸಭಕ್ತಿಯಿಂದ ಆತ್ಮಾಂಗದಲ್ಲಿದ್ದು, ಚಿಚ್ಛಕ್ತಿಯುತವಾದ ಮಹಾಲಿಂಗಕ್ಕೆ ಹೃದಯ ಮುಖದಲ್ಲಿ ಸದ್ಭಾವ ಹಸ್ತದಿಂದ ಸುಖಾದಿ ಪರಿಣಾಮ ಪದಾರ್ಥಗಳನ್ನು ಸಮರ್ಪಿಸಿ ತತ್‌ತೃಪ್ತಿ ಪ್ರಸಾದವನ್ನು ಪಡೆದುಕೊಳ್ಳುತ್ತಾನೆ.

ಒಟ್ಟಿನಲ್ಲಿ ಹೇಳುವುದಾದರೆ ಸರ್ವವನ್ನೂ ಶಿವನಿಗರ್ಪಿಸಿ ಶಿವಪ್ರಸಾದ ಸೇವಿಸುತ್ತ ಶಿವತ್ವವನ್ನು ಪಡೆಯುತ್ತಾನೆ. ಇನ್ನೇನು ಬೇಕು? ಕೆಳಗಣ ಕೋಷ್ಟಕ ನೆನಪಿರಲಿ.

ಅಂಗ – ಭಕ್ತ ಮಹೇಶ – ಪ್ರಸಾದಿ–ಪ್ರಾಣಲಿಂಗಿ – ಶರಣ – ಐಕ್ಯ
ಲಿಂಗ – ಆಚಾರಲಿಂಗ – ಗುರುಲಿಂಗ – ಶಿವಲಿಂಗ – ಜಂಗಮಲಿಂಗ – ಪ್ರಸಾದಲಿಂಗ – ಮಹಲಿಂಗ
ಮುಖ – ಪ್ರಾಣ – ಜಿಹ್ವೆ – ನೇತ್ರ – ತ್ವಕ್ಕು – ಶೋತ್ರ – ಹೃದಯ
ಹಸ್ತ – ಸುಹಸ್ತ – ಸುಬುದ್ಧಿ – ನಿರಹಂಕಾರ – ಸುಮನ – ಸುಜ್ಞಾನ – ಸದ್ಭಾವ

ಶಕ್ತಿ – ಕ್ರಿಯಾಶಕ್ತಿ – ಜ್ಞಾನಶಕ್ತಿ – ಇಚ್ಛಾಶಕ್ತಿ – ಆದಿಶಕ್ತಿ – ಪರಾಶಕ್ತಿ – ಚಿಚ್ಛಕ್ತಿ
ಭಕ್ತಿ – ಶ್ರದ್ಧಾಭಕ್ತಿ – ನಿಷ್ಠಾಭಕ್ತಿ – ಸಾವಧಾನಭಕ್ತಿ – ಅನುಭಾವಭಕ್ತಿ – ಆನಂದಭಕ್ತಿ – ಸಮರಸಭಕ್ತಿ

ಪದಾರ್ಥ – ಗಂಧ – ರಸ – ರೂಪ – ಸ್ಪರ್ಶ – ಶಬ್ದ – ತೃಪ್ತಿ
ಪ್ರಸಾದ – ಸುಗಂಧ – ಸುರಸ – ಸುರುಪ – ಸುಸ್ಪರ್ಶ – ಸುಶಬ್ದ – ಸಂತೃಪ್ತಿ

ಅವಾಚ್ಯಾತ್ಮಸ್ವರೂಪಾಯ ಶಿವಭಾವಪ್ರದಾಯಿನೆ ।
ನಮಸ್ಸದ್ಗುರುನಾಥಾಯ ಷಟ್ಸ್ಥಲ ಬ್ರಹ್ಮಮೂರ್ತಯೇ॥

* * * * *

# ಅನುಬಂಧ – ೧

## (ಹಿಂದಿನ ಆವೃತ್ತಿಗಳ ಪ್ರಕಾಶಕರ ಮಾತು)

Blank

# ಹಾರೈಕೆ

ಕರ್ನಾಟಕ ವಿಶ್ವವಿದ್ಯಾಯಲದ ಕನ್ನಡ ಅಧ್ಯಯನಪೀಠದ ಆಶ್ರಯದಲ್ಲಿ ಪ್ರಾರಂಭವಾಗಿರುವ "ಧಾರವಾಡದ ಶ್ರೀ ಮೃತ್ಯುಂಜಯ ವಿಶೇಷ ವ್ಯಾಖ್ಯಾನ ಮಾಲೆ" ಒಂದು ಅಪೂರ್ವ ಉಪಕ್ರಮ ಅಪ್ಪಗಳು ಈ ಯುಗದ ದೇವಮಾನವರು. 'ಸಕಲಜೀವಾತ್ಮರಿಗೆ ಲೇಸನೇ ಬಯಸುವ' ಅವರ ಬದುಕು ಸಮಾಜ ಸೇವೆಗೆ ಮೀಸಲಾಗಿದ್ದಿತು. ಪ್ರಜೆಗಳ ಸೇವೆಯಲ್ಲಿಯೇ ಪರಶಿವ-ಪೂಜೆಯನ್ನು ಅನುಭವಿಸುವತ್ತ ಅವರು ಭಕ್ತಕೋಟಿಯನ್ನು ಉದ್ಧರಿಸಿದುದು, ನಮ್ಮ ನಾಡಿನ ಇತಿಹಾಸ ಒಂದು ಅಪೂರ್ವ ಅಧ್ಯಾಯ.

ಇಂತ ಪುಣ್ಯ ಪುರುಷರ ಸ್ಮರಣೆಯನ್ನು ನೂರಾರು ವಿಧಗಳಲ್ಲಿ ಅನುಷ್ಠಾನ ಗೊಳಿಸುತ್ತಿರುವ ಭಕ್ತರು ಅವರ ಹೆಸರಿನಲ್ಲಿ ಪ್ರಾರಂಭಿಸಿರುವ ಈ ವ್ಯಾಖ್ಯಾನಮಾಲೆ ವಿನೂತನವಾದುದು. ಪ್ರತಿವರ್ಷ ದೇಶ ವಿದೇಶಗಳ ವಿದ್ವಾಂಸರು ವೀರಶೈವ ಧರ್ಮ, ಸಾಹಿತ್ಯ, ಸಮಾಜ ಮೊದಲಾದ ವಿಷಯಗಳನ್ನು ಕುರಿತು ನೀಡುವ ಈ ಉಪನ್ಯಾಸಗಳು ವೀರಶೈವದ ಹೊಸ ಹೊಸ ಮುಖಗಳನ್ನು ಪ್ರಕಟಪಡಿಸುತ್ತವೆ; ಪ್ರಕಟಗೊಂಡು ಸಮಾಜದಲ್ಲಿ ಗ್ರಂಥ ಜ್ಯೋತಿಯಾಗಿ ಬೆಳಗುತ್ತವೆ.

ಈ ವ್ಯಾಖ್ಯಾನ ಮಾಲೆ ಕಳೆದ ವರ್ಷ ನಮ್ಮ ದೇಶದ ಉಪರಾಷ್ಟ್ರಪತಿಗಳೂ ಶರಣ ಮಾರ್ಗಾನುಯಾಯಿಗಳೂ ಆದ ಡಾ.ಬಿ.ಡಿ.ಜತ್ತಿಯವರ ಅಮೃತ ಹಸ್ತದಿಂದ ಉದ್ಘಾಟಿಸಲ್ಪಟ್ಟು ಡಾ. ಆರ್. ಆರ್. ದಿವಾಕರ ಅವರ 'ಶರಣರ ಅನುಭವ ಅನು ಭಾವ ಅನುಭೂತಿ' ಎಂಬ ಪ್ರಥಮ ಉಪನ್ಯಾಸದೊಂದಿಗೆ ಶುಭಾರಂಭವಾಯಿತು. ಈ ಮಾಲೆಯ ದ್ವಿತಿಯ ಉಪನ್ಯಾಸವಾಗಿ ಶ್ರೇಷ್ಠ ಕವಿಗಳೂ ಆಡಳಿತಗಾರರೂ, ಶರಣಸಾಹಿತ್ಯಪ್ರವೇಮಿಗಳೂ ಬಹುಮುಖವ್ಯಕ್ತಿತ್ವವಂತರೂ ಆದ ಡಾ. ಸಿದ್ಧಯ್ಯ ಪುರಾಣಿಕ ಅವರ 'ಬಸವಣ್ಣನವರ ಜೀವನ ಹಾಗೂ ಸಂದೇಶ' ಎಂಬ ಕೃತಿ ಈಗ ಪ್ರಕಟವಾಗಿ ಹೊರಬರುತ್ತಿರುವುದು ತುಂಬಾ ಆನಂದದ ಸಂಗತಿ. ಡಾ. ಸಿದ್ಧಯ್ಯ ಪುತಾಣಿಕ ಅವರು ವಿಶ್ವವಿದ್ಯಾಲಯದ ವೇದಿಕೆಯಮೇಲೆ ಮೂರುದಿನಗಳವರೆಗೆ ಉಪ ನ್ಯಾಸ ನೀಡಿ ಬರೆದುಕೊಟ್ಟ ಈ ಹೊತ್ತಿಗೆಯನ್ನು ಭಕ್ತಕೋಟಿ ಸಂತೋಷದಿಂದ ಸ್ವೀಕರಿಸಲೆಂದೂ ಶ್ರೀ ಶಿವಯೋಗೀಶ್ವರನು ಉಪನ್ಯಾಸಕರಿಗೆ ಉತ್ತರೋತ್ತರ ಸನ್ಮಂಗಲಗಳನ್ನು ನೀಡಲೆಂದೂ ಹಾರೈಸುತ್ತೇವೆ.

**– ಶ್ರೀ ಮಹಾಂತಸ್ವಾಮಿಗಳು**

ಶ್ರೀ ಮುರುಘಾಮಠ, ಧಾರವಾಡ

೧೦-೫-೧೯೭೬

# ಪ್ರಕಾಶಕರ ನುಡಿ

'ಬಸವ ಸಮಿತಿ'ಯು ೧೯೮೯ರ ಮೇ ೬,೭, ೮ರಂದು ತನ್ನ ಬೆಳ್ಳಿಯ ಹಬ್ಬವನ್ನು ಹಿಗ್ಗಿನೊಡನೆ ಆಚರಿಸಲಿರುವ ಶುಭ ಸಂದರ್ಭದಲ್ಲಿ 'ಪ್ರಮಥ ಪಂಚಕ'ರೆನ್ನಿಸಿಕೊಂಡಿರುವ ಬಸವಣ್ಣ' ಅಲ್ಲಮಪ್ರಭು, ಅಕ್ಕಮಹಾದೇವಿ, ಚೆನ್ನಬಸವಣ್ಣ ಮತ್ತು ಸಿದ್ಧರಾಮ ಶಿವಯೋಗಿಗಳ ಬಗ್ಗೆ ಸಾಮಾನ್ಯ ವಾಚಕರಿಗಾಗಿ ಪುಸ್ತಕಗಳನ್ನು ಪ್ರಕಟಿಸಬೇಕೆಂದು ತೀರ್ಮಾನಿಸಲಾಯಿತು, ಆ ಪ್ರಕಾರ ಈಗ ಮೂರು ಪುಸ್ತಕಗಳು ಮಾತ್ರ ಪ್ರಕಟವಾಗುತ್ತಿವೆ, ಬಸವಣ್ಣ, ಸಿದ್ಧರಾಮೇಶ್ವರರ ಬಗ್ಗೆ ಪುಸ್ತಕಗಳು ಈಗ ಕಾರಣಾಂತರಗಳಿಂದ ಪ್ರಕಟವಾಗದಿದ್ದರೂ ಮುಂದೆ ಅವುಗಳನ್ನು ಪ್ರಕಟಿಸಲಾಗುವುದು,

'ಅಲ್ಲಮಪ್ರಭುದೇವ'ರನ್ನು ಕುರಿತು ಈ ಪುಸ್ತಕವನ್ನು ಬರೆದಿರುವವರು ಶರಣಸಾಹಿತ್ಯ ಸತ್ವಸಂಪುಷ್ಟ ಹಿರಿಯ ಸಾಹಿತಿಗಳೂ, ೫೮ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮೇಳನಾಧ್ಯಕ್ಷರೂ ಆದ ಡಾ॥ ಸಿದ್ಧಯ್ಯ ಪುರಾಣಿಕರು, ಅವರಿಗೆ 'ಬಸವ ಸಮಿತಿ'ಯ ಕೃತಜ್ಞತೆಗಳು.

ಅವರ ಈ ಪುಸ್ತಕ ಜನಪ್ರಿಯವಾಗುವುದೆಂದು ನಂಬಿದ್ದೇವೆ.

ಸಹಿ/–
**(ಡಾ॥ ಬಿ.ಡಿ. ಜತ್ತಿ)**
ಅಧ್ಯಕ್ಷರು, ಬಸವ ಸಮಿತಿ

# ಪೀಠಿಕೆ

**ಬಸವೇಶ್ವರಪೀಠ**

ಶ್ರೀ ಬಸವೇಶ್ವರಪೀಠ ಶರಣ ಸಮಾಜದ ಭಕ್ತಿ ತ್ಯಾಗದ ಮೇಲೆ ನಿಂತ ಒಂದು ವಿಶೇಷ ಪ್ರತಿಷ್ಠಾನ. ಈ ಪ್ರತಿಷ್ಠಾನದ ಪುಣ್ಯ ಚೇತನ– ಬಸವತತ್ವವನ್ನು ಬಾಳಿನುದ್ದಕ್ಕೂ ಬದುಕಿ, ಬದುಕಿಸಿದ ಮುರಗೋಡದ ಪೂಜ್ಯ ಮಹಾಂತಶಿವಯೋಗಿಗಳು. ಶ್ರೀಗಳವರಿಗೆ ನೂರುವರ್ಷ ತುಂಗಿದಾಗ ನಾಡಿನ ಭಕ್ತಕೋಟಿ ಅವರ ಜನ್ಮ ಶತಮಾನ ನೋತ್ಸವವನ್ನು ಭಕ್ತಿ–ಉತ್ಸಾಹದಿಂದ ಅರ್ಥಪೂರ್ಣವಾಗಿ ಆಚರಿಸಿತು. ಆ ಮಹಾ ಉತ್ಸವದ ಪುಣ್ಯಸ್ಮರಣೆಯಾಗಿ, ಮಹಾಸ್ಮಾರಕವಾಗಿ ೧೯೭೦ರಲ್ಲಿ ಶ್ರೀ ಬಸವೇಶ್ವರಪೀಠ ಕರ್ನಾಟಕ ವಿಶ್ವವಿದ್ಯಾಲಯದ ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನಪೀಠದಲ್ಲಿ ಅಸ್ತಿತ್ವಕ್ಕೆ ಬಂದಿತು.

ಬಸವಣ್ಣನವರು ಕನ್ನಡ ನಾಡು ಕಂಡು ಒಂದು ಅಪೂರ್ವ ಚೇತನ, ಆರ್ಥರ್ ಮೈಲ್ಸ್ ಹೇಳುವಂತೆ ಅವರು ಭಾರತದ ಪ್ರಥಮ ಸ್ವತಂತ್ರ ವಿಚಾರವಾದಿ. ಹನ್ನೆರಡನೆಯ ಶತಮಾನದಲ್ಲಿ ಅವರು ಮಾಡಿದ ಸಮಾಜೋ–ಧಾರ್ಮಿಕ ಕ್ರಾಂತಿ ಜಗತ್ತಿನ ಇತಿಹಾಸದಲ್ಲಿಯೇ ಕಂಡರಿಯದ ಘಟನೆ. ವ್ಯಕ್ತಿ–ಸಮಾಜ–ದೇವರು ಈ ಮೂರುರಲ್ಲಿಯೂ ಹೊಸ ಕ್ರಾಂತಿಯನ್ನು ಹೊಮ್ಮಿಸಿದ ಇಂಥ ಲೋಕಮಾನ್ಯ ವ್ಯಕ್ತಿ ಕನ್ನಡಿಗನಾಗಿರುವುದು ನಮ್ಮ ನಾಡಿಗೆ ದೊಡ್ಡಗೌರವ.

ಬಸವಣ್ಣನವರ ಲೋಕೋತ್ತರ ವಿಚಾರಗಳಿಗೆ ಲೋಕವಿಸ್ತಾರದ ಕ್ಷಿತಿಜವನ್ನು ಕಲ್ಪಿಸುವುದು–ಅಂದರೆ ಬಸವತತ್ವಗಳನ್ನು ಕರ್ನಾಟಕದಿಂದ ಭಾರತಕ್ಕೆ, ಭಾರತದಿಂದ ವಿಶ್ವಕ್ಕೆ ವಿಸ್ತರಿಸುವ ಉನ್ನತ ಧ್ಯೇಯಾದರ್ಶಗಳನ್ನು ಶ್ರೀ ಬಸವೇಶ್ವರಪೀಟ ಇಟ್ಟು ಕೊಂಡಿದೆ. ಈ ಉದ್ದೇಶ ಸಾಧನೆಗಾಗಿ ಸಂಶೋಧನೆ, ಸಂಪಾದನೆ, ಸೃಜನ, ವಿಮರ್ಶನ, ಅನುವಾದ ಇತ್ಯಾದಿ ರೂಪದ ಅಧ್ಯಯನಗಳನ್ನು ಕನ್ನಡ ಹಾಗೂ ಕನ್ನಡೇ ತರ ಭಾಷೆಗಳ ಮೂಲಕ ಈ ವೇದಿಗೆ ನಡೆಸುತ್ತ ಬಂದಿದೆ.

ಈ ಪೀಠದ ಅಡಿಯಲ್ಲಿ ಶ್ರೀ ಬಸವೇಶ್ವರ ಅಧ್ಯಯನ ಡಿಪ್ಲೋಮಾ ಕೋರ್ಸು ವೀರಶೈವ ಕ್ರೇಂದ್ರ ಗ್ರಂಥಾಲಯ, ವಿಶೇಷ ಉಪನ್ಯಾಸ, ವಿಚಾರಸಂಕಿರಣ, ಕಮ್ಮಟ, ಸಂಶೋಧನ ಯೋಚನೆಗಳು ಮತ್ತು ಗ್ರಂಥ ಪ್ರಕಟನಾ ಕಾರ್ಯ ಯಶಸ್ವಿಯಾಗಿ ನಡೆಯುತ್ತ ಬಂದಿವೆ.

**೧೯೮೧ರಲ್ಲಿ** ಆರಂಭವಾದ ಬಸವ ಅಧ್ಯಯನ ಡಿಪ್ಲೋಮಾ ಕೋರ್ಸಿನಲ್ಲಿ ಬಸವಣ್ಣನವರ ಜೀವನ–ಸಾಹತ್ಯ–ಸಾಧನೆ ಕುರಿತ ಸಮಗ್ರ ಅಧ್ಯಯವನ್ನು ಮಾಡಿಸಲಾಗುತ್ತಿದೆ. ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗೆ ಮುಂಡರಗಿ ಜಗದ್ಗುರುಗಳು ಪ್ರತಿಷ್ಠಾಪಿಸಿದ ಸುವರ್ಣ ಪದಕವನ್ನು ನೀಡಲಾಗುತ್ತದೆ.

ಅದೇ ವರ್ಷ ಆರಂಭವಾದ ವೀರಶೈವ ಕೇಂದ್ರ ಗ್ರಂಥಾಲಯದಲ್ಲಿ, ವೀರಶೈವ ಧರ್ಮ–ತತ್ವ–ಸಿದ್ಧಾಂತ–ಸಾಹಿತ್ಯ–ಸಂಸ್ಕೃತಿ–ಸಂಶೋಧನೆಗಳಿಗೆ ಸಂಬಂಧಿಸಿದ ಸುಮಾರು ಆರು ಸಾವಿರಕ್ಕೂ ಹೆಚ್ಚು ಗ್ರಂಥಗಳನ್ನು ಅನೇಕ ನಿಯತಕಾಲಿಕೆಗಳನ್ನು ಸಂಗ್ರಹಿಸಿದ್ದು, ಇದು ಶರಣ ಸಂಸ್ಕೃತಿ ಅಧ್ಯಯನ–ಸಂಶೋಧನ ಮಾಡುವವರಿಗೆ ಅಪೂರ್ವ ಆಕರ ಸಾಮಗ್ರಿಯನ್ನು ಒದಗಿಸುವ ಕೇಂದ್ರವೆನಿಸಿದೆ.

೧೯೭೯ ರಿಂದ ಆರಂಭವಾದ ವಿಚಾರಸಂಕಿರಣ ವಿಶೇಷೋಪಾನ್ಯಾಸ ಪ್ರಚಾರೋಪನ್ಯಾಸ, ಕಮ್ಮಟಗಳ ಮೂಲಕ ಬಸವ ಬದುಕಿನ ಜೊತೆಗೆ ಒಟ್ಟು ಶರಣ ಸಮಾಜದ, ವೀರಶೈವ ಧರ್ಮದ ತತ್ವ–ಸಾಹಿತ್ಯ–ಸಿದ್ಧಾಂತ–ಸಂಸ್ಕೃತಿಗಳ ಪರಿಚಯವನ್ನು ನಾಡಿನ ಜನತೆಗೆ ಮಾಡಿಸುತ್ತ ಬರಲಾಗಿದೆ. ಈಗಾಗಲೇ ೩೦ಕ್ಕೂ ಹೆಚ್ಚು ವಿಶೇಷೋಪನ್ಯಾಸ, ವಿಚಾರಸಂಕಿರಣಗಳು ನಾಡಿನ ವಿವಿಧ ಭಾಗಗಳಲ್ಲಿ ನಡೆದಿವೆ. ೩೫ಕ್ಕೂ ಹೆಚ್ಚು ಗ್ರಂಥಗಳು ಪ್ರಕಟವಾಗಿ ಸಹೃದಯರ, ವಿಮರ್ಶಕರ ಮೆಚ್ಚುಗೆಯನ್ನು ಪಡೆದಿವೆ.

ಡಾ. ಎಚ್. ಪಿ. ಮಲ್ಲೇದೇವರು ಈ ಪೀಠದ ಮೊದಲ ಪ್ರಾಧ್ಯಾಪಕರಾಗಿ ವಚನಗ್ರಂಥ ಸಂಪಾದನೆಯ ಮೂಲಕ ಉತ್ತಮ ಅಡಿಪಾಯವನ್ನು ಹಾಕಿದರು. ಅನಂತರ ಬಂದ ಡಾ. ಎಂ. ಎಂ. ಕಲಬುರ್ಗಿ ಅವರು ಇದನ್ನು ಒಂದು ಮಾದರಿಯ ಪೀಠವನ್ನಾಗಿ ಬೆಳೆಸಿದರು. ಅವರ ಕಾಲಕ್ಕೆ ಅನೇಕ ನೂತನ ಯೋಚನೆಗಳು ಅನುಷ್ಠಾನಗೊಂಡು ಕ್ರಮಬದ್ಧವಾಗಿ, ತುಂಬಾ ವ್ಯವಸ್ಥಿತವಾಗಿ ಹಾಗೂ ವ್ಯಾಪಕವಾಗಿ ತ್ವರಿತಗತಿಯಲ್ಲಿ ನಡೆದವು. ಆ ಕಾರಣವಾಗಿ ವರ್ಷದಿಂದ ವರ್ಷಕ್ಕೆ ಈ ಪೀಠ ತನ್ನ ಮೈಯನ್ನು ಹಿಗ್ಗಿಸಿಕೊಳ್ಳುತ್ತ ನಡೆದುಬಂದಿವೆ; ಕಾಲ ಕಾಲಕ್ಕೆ ಹೊಸ ಹೊಸ ಯೋಜನೆಗಳನ್ನು ರೂಪಿಸಿಕೊಂಡು, ಬೇರೆ ಬೇರೆ ಆಯಾಮಗಳಲ್ಲಿ ಮುನ್ನಡೆಯುವ ಸಂಕಲ್ಪವನ್ನು ಇರಿಸಿಕೊಂಡು ಕಾರ್ಯಪ್ರವೃತ್ತವಾಗಿದೆ.

**ಬೆಳ್ಳಿಹಬ್ಬ :**

ಶ್ರೀ ಬಸವೇಶ್ವರಪೀಠ ಈಗ ತನ್ನ ಬೆಳ್ಳಿಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲು ಯೋಜಿಸಿದೆ. ಏಳು ವರ್ಷಗಳ ಹಿಂದೆಯೇ (೧೯೯೪) ನಡೆಯಬೇಕಾಗಿದ್ದ ಈ ಉತ್ಸವವನ್ನು ಅನಿವಾರ್ಯ ಅಡ್ಡಿ-ಆತಂಕಗಳಿಂದ ಇಲ್ಲಿಯವರೆಗೆ ಮುಂದೂಡುತ್ತ ಬರಲಾಗಿತ್ತು. ಈಗ ಕಾಲ ಕೂಡಿಬಂದಿದೆ. 'ಎಮ್ಮವರು ಬೆಸಗೊಂಡರೆ ಶುಭ ಲಗ್ನವೆನ್ನಿರಯ್ಯ' ಎಂಬ ಬಸವಣ್ಣನವರ ಧ್ಯೇಯವಾಕ್ಯದಂತೆ ಈ ಉತ್ಸವದ ಆಚರಣೆಗೆ ತೊಡಗಲಾಗಿದೆ. ಶ್ರೀ ಬಸವೇಶ್ವರಪೀಠದ ಸಲಹಾ ಮಂಡಳಿ ಇದಕ್ಕೆ ತುಂಬು ಹೃದಯದ ಪ್ರೋತ್ಸಾಹ ನೀಡಿದೆ.

ಉತ್ಸವದ ಅಂಗವಾಗಿ ಕೆಲವು ಮಹತ್ವದ ಯೋಜನೆಗಳನ್ನು ಹಾಕಿಕೊಳ್ಳಲಾಗಿತ್ತು. ಒಂದು ವರ್ಷ ಕಾಲ ಬೆಳ್ಳಿಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವುದು; ೨೫ ಮೌಲಿಕ ಗ್ರಂಥಗಳನ್ನು ಪ್ರಕಟಿಸುವುದು ; ವರ್ಷದುದ್ದಕ್ಕೂ ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿಚಾರಸಂಕಿರಣ ವಿಶೇಷೋಪನ್ಯಾಸ, ವಚನ ಸಂಗೀತ ಗೋಷ್ಠಿಗಳನ್ನು ಏರ್ಪಡಿಸುವುದು ; 'ಬಸವಭವನ' ನಿರ್ಮಾಣಕ್ಕೆ ಅಡಿಗಲ್ಲು ಹಾಕುವುದು ; ಕೆಲವು ನೂತನ ಸಂಶೋಧನೆ ಯೋಜನೆಗಳನ್ನು ಹಾಕಿಕೊಳ್ಳುವುದು.

೨೦೦೧ ಜನೇವರಿ ೬ ರಂದು ಮುರಗೋಡದ ಶ್ರೀಮಠದಲ್ಲಿ ಬೆಳ್ಳಿಹಬ್ಬದ ಉದ್ಘಾಟನೆ ನೆರವೇರಿತು. ಅಂದೇ 'ಬಸವಣ್ಣನವರ ಪ್ರಮುಖ ಚಿಂತನೆಗಳು' ಎಂಬ ವಿಷಯದ ಮೇಲೆ ವಿಚಾರಸಂಕಿರಣವೂ ನಡೆಯಿತು. ಮುಂದೆ 'ವಚನ ಸಾಹಿತ್ಯ ಮತ್ತು ಆಧುನಿಕ ಕನ್ನಡ ಸಾಹಿತ್ಯ ಮುಖಾಮುಖಿ', 'ಶಿವಶರಣೆಯರ ವಚನಗಳ ವಿಭಿನ್ನ ನೆಲೆಗಳು' ಎಂಬ ವಿಚಾರ ಸಂಕಿರಣಗಳು, 'ಶೈವಾಗಮಗಳು ಮತ್ತು ವಚನಸಾಹಿತ್ಯ', 'ಉಪನಿಷತ್ತುಗಳು ಮತ್ತು ವಚನಸಾಹಿತ್ಯ', 'ಇಪ್ಪತ್ತನೆಯ ಶತಮಾನದ ಭಾರತೀಯ ಅನುಭಾವಿಗಳು ಮತ್ತು ಬಸವಣ್ಣ' ಎಂಬ ವಿಶೇಷ ಉಪನ್ಯಾಸಗಳು, ಉಳವಿ, ಗಡಹಿಂಗ್ಲಜ, ಕೂಡಲಸಂಗಮ, ಧಾರವಾಡಗಳಲ್ಲಿ ಕೆಲವು ಇತರ ಉಪನ್ಯಾಸಗಳು, ವಚನಸಂಗೀತಗೋಷ್ಠಿ, ಶರಣಕ್ಷೇತ್ರದರ್ಶನ ಪ್ರಾತ್ಯಕ್ಷಿಕೆಗಳು ನಡೆದವು.

ವಿಶ್ವವಿದ್ಯಾಲಯದ ಆವರಣದಲ್ಲಿ 'ಬಸವಭವನ' ನಿರ್ಮಾಣಕ್ಕೆ ಈಗಾಗಲೇ ಎರಡು ಎಕರೆ ನಿವೇಶನವನ್ನು ಪಡೆಯಲಾಗಿದೆ. ಸರ್ಕಾರ ಹಾಗೂ ಸಾರ್ವಜನಿಕರ ಉದಾರ ನೆರವಿನಿಂದ ಕಟ್ಟಡ ನಿರ್ಮಾಣದ ಸಂಕಲ್ಪ ಮಾಡಲಾಗಿದೆ. ಬೆಳ್ಳಿಹಬ್ಬ ಸಮಾರೋಪ ಸಮಾರಂಭದಂದು ಮಾನ್ಯ ಮುಖ್ಯಮಂತ್ರಿಗಳಿಂದ ಶಿಲಾನ್ಯಾಸ ಸಮಾರಂಭ ನೆರವೇರಲಿದೆ.

ಬೆಳ್ಳಿಹಬ್ಬದ ಸ್ಮರಣೆಗಾಗಿ ಈ ಕೆಳಗಿನ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ : ೧.'ಶಿವಶರಣರ ಚರಿತ್ರೆಗಳು' ಕೃತಿ ಪರಿಷ್ಕೃತ ಆವೃತ್ತಿ ಪ್ರಕಟಣೆ, ೨. ಬೆಡಗಿನ ವಚನ

ನಿಘಂಟು ರಚನೆ, ೩. ಸಮಗ್ರ ವಚನಸಾಹಿತ್ಯ ವರ್ಣಾನುಕ್ರಮ ಸೂಚಿ ಸಿದ್ಧಪಡಿಸುದ, ೪. ಸಮಗ್ರ ವಚನಸಾಹಿತ್ಯ ಚರಿತ್ರೆ ರಚನೆ, ೫. ಮೌಲಿಕ ವೀರಶೈವ ಗ್ರಂಥಗಳ ಅನುವಾದ.

ಇಪ್ಪತ್ತೆಂಟು ಮೌಲಿಕ ಗ್ರಂಥಗಳ ಪ್ರಕಟಣೆ ಬೆಳ್ಳಿಹಬ್ಬದ ಮಹತ್ವಾಕಾಂಕ್ಷೆಯ ಯೋಜನೆ. ಅದನ್ನು ಕೊಡುಗೈ ದಾಸೋಹಿಗಳ ಧನಸಹಾಯದಿಂದ ಪೂರೈಸಲಾಗಿದೆ. ಬಸವಣ್ಣನವರ ಜೀವನ–ಸಾಧನೆ ಕುರಿತ ಪ್ರಾಚೀನ ಕಾವ್ಯಗಳು, ಆಧುನಿಕ ಚರಿತ್ರೆಗಳು ವೈಚಾರಿಕ, ಸಂಶೋಧನಾತ್ಮಕ ಪ್ರಬಂಧಗಳು, ಇತರ ಶರಣರನ್ನು ಕುರಿತ ಕೃತಿಗಳು ಹಾಗೂ ಶರಣಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳು ಇದರಲ್ಲಿ ಸಮಾವೇಶಗೊಂಡಿವೆ. ಇಪ್ಪತ್ಮೂರು ಗ್ರಂಥಗಳು ಕನ್ನಡ ಭಾಷೆಯಲ್ಲಿದ್ದರೆ, ಮೂರು ಇಂಗ್ಲೀಷಿನಲ್ಲಿ, ಒಂದು ಮರಾಠಿಯಲ್ಲಿ, ಮತ್ತೊಂದು ಉರ್ದು ಭಾಷೆಗಳಲ್ಲಿವೆ. ಇವುಗಳಲ್ಲಿ ಏಳು ಈ ಹಿಂದೆ ಶ್ರೀ ಬಸವೇಶ್ವರಪೀಠ ಪ್ರಕಟಿಸಿದ ಗ್ರಂಥಗಳ ಮರುಮುದ್ರಣಗಳು, ಇಪ್ಪತ್ತೊಂದು ಪ್ರಥಮ ಮುದ್ರಣಗಳು ಸೇರಿವೆ. ನಮ್ಮ ನಾಡಿನ ಹೆಸರಾಂತ ವಿದ್ವಾಂಸರಿಂದ ರಚನೆಗೊಂಡ ಈ ಕೃತಿಗಳು ಶರಣಸಾಹಿತ್ಯ ಕ್ಷೇತ್ರಕ್ಕೆ ಶ್ರೀ ಬಸವೇಶ್ವರಪೀಠ ನೀಡಿದ ನೂತನ ಕೊಡುಗೆಗಳೆನಿಸಿವೆ.

ಪ್ರಸ್ತುತ 'ಮಹಾದೇವಿ' ಕೃತಿ ಖ್ಯಾತ ಕವಿ, ಆಧುನಿಕ ವಚನಕಾರ, ಅನುಭಾವಿಗಳಾಗಿದ್ದ ಲಿಂ. ಡಾ. ಸಿದ್ಧಯ್ಯ ಪುರಾಣಿಕ ಅವರಿಂದ ರಚನೆಗೊಂಡಿದೆ. ಅಕ್ಕಮಹಾ ದೇವಿಯ ಜೀವನ–ಸಾಧನೆ–ಸಿದ್ಧಿಗಳನ್ನು ಇಲ್ಲಿ ತುಂಬ ವಸ್ತುನಿಷ್ಠವಾಗಿ ಹಾಗೂ ಅತ್ಮೀಯವಾಗಿ ನಿರೂಪಿಸಲಾಗಿದೆ. ೧೯೮೨ರಲ್ಲಿ ಶ್ರೀ ಬಸವೇಶ್ವರಪೀಠದಿಂದ ಪ್ರಥಮ ಆವೃತ್ತಿಯಾಗಿ ಪ್ರಕಟವಾಗಿ, ಈಗ ಪ್ರತಿಗಳೆಲ್ಲ ತೀರಿ, ವಿಶೇಷ ಬೇಡಿಕೆ ಹೊಂದಿರುವ ಇದನ್ನು ಮರುಮುದ್ರಣಗೊಳಿಸಲಾಗಿದೆ.

**ಕೃತಜ್ಞತೆಗಳು :**

ಬೆಳ್ಳಿಹಬ್ಬ ಯಶಸ್ವಿಯಾಗಿ ನೆರವೇರಲು ಅನೇಕ ವ್ಯಕ್ತಿಗಳ ಮುಕ್ತವಾದ ಸಹಾಯ ಸಂದಿದೆ. ಅವರನ್ನು ಕೃತಜ್ಞತೆಯಿಂದ ನೆನೆಯುವುದು ನನ್ನ ಪರಮ ಕರ್ತವ್ಯ.

ಉತ್ಸವ ಆಚರಣೆಯ ವಿಚಾರವನ್ನು ಸಂತೋಷದಿಂದ ಒಪ್ಪಿಕೊಂಡು ಎಲ್ಲ ರೀತಿಯ ಸಹಾಯ–ಸಹಕಾರ–ಮಾರ್ಗದರ್ಶನ ನೀಡಿದ ಶ್ರೀ ವಸವೇಶ್ವರಪೀಠದ ಸಲಹಾ ಮಂಡಳಿಯ ಹಿಂದಿನ ಅಧ್ಯಕ್ಷರಾಗಿದ್ದ ಮಾನ್ಯ ಕುಲಪತಿ ಡಾ. ಎ. ಎಂ. ಪಠಾನ್ ಅವರಿಗೆ, ಕುಲಸಚಿವರಾಗಿದ್ದ ಡಾ.ಎಸ್. ರಾಜಶೇಖರ, ಶ್ರೀ ಶಿವಯೋಗಿ ಕಳಸದ ಅವರಿಗೆ, ಇಂದಿನ ಕುಲಪತಿಗಳಾದ ಡಾ.ಎಂ ಖಾಜಾಪೀರ್ ಅವರಿಗೆ, ಕುಲ ಸಚಿವರಾದ ಶ್ರೀ ವೈ.ಆರ್. ಪಾಟೀಲ ಅವರಿಗೆ ಹಾಗೂ ಉಳಿದೆಲ್ಲ ಸದಸ್ಯರಿಗೆ ಅನಂತ ನಮಸ್ಕಾರಗಳು.

ಉತ್ಸವದ ಕಾರ್ಯಪ್ರಗತಿಯನ್ನು ನಿತ್ಯ ವಿಚಾರಿಸುತ್ತ, ವಿಳಂಬವಾದಾಗ ಎಚ್ಚರಿಸುತ್ತ, ನನಗಿಂತ ಹೆಚ್ಚು ಮುತುವರ್ಜಿ ವಹಿಸಿ ಕಾರ್ಯ ಮಾಡುತ್ತ, ನಿರಂತರ ವಿಧಾಯಕ ಮಾರ್ಗದರ್ಶನ ನೀಡಿದವರು ಮುರಗೋಡದ ಪೂಜ್ಯ ನೀಲಕಂಠ ಮಹಾ ಸ್ವಾಮಿಗಳು ಮತ್ತು ಬೆಳಗಾವಿಯ ಪ್ರಸಿದ್ಧ ವರ್ತಕರೂ ಶರಣಜೀವಿಗಳೂ ಆದ ಶ್ರೀ ಸಿದ್ಧರಾಮಣ್ಣ ಬೆಂಬಳಗಿ ಅವರು. ಇವರಿಗೆ ವಿಶೇಷ ಭಕ್ತಿ ಪ್ರಣಾಮಗಳು.

ನಮ್ಮ ಕೋರಿಕೆಯನ್ನು ಪ್ರೀತಿಯಿಂದ ಸ್ವೀಕರಿಸಿ, ಗ್ರಂಥಗಳನ್ನು ಸಿದ್ಧಪಡಿಸಿ ಕೊಟ್ಟ ಸಂಪಾದಕರಿಗೆ ಹಾಗೂ ಲೇಖಕರಿಗೆ, ಉಪನ್ಯಾಸಗಳನ್ನು ನೀಡಿ ಸಕಾಲಕ್ಕೆ ಪ್ರಬಂಧಗಳನ್ನು ಬರೆದುಕೊಟ್ಟು ಗ್ರಂಥಗಳು ಏಕಕಾಲಕ್ಕೆ ಪ್ರಕಟವಾಗಲು ನೆರವಾದ ವಿಶೇಷೋಪನ್ಯಾಸಕರು ಹಾಗೂ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ ಎಲ್ಲಾ ವಿದ್ವಾಂಸರಿಗೆ ಧನ್ಯವಾದಗಳು.

ಒಂದೊಂದು ಗ್ರಂಥದ ಪ್ರಕಟಣೆಯ ವೆಚ್ಚವನ್ನು ಸಂತೋಷದಿಂದ ಭರಿಸಿದ ಎಲ್ಲ ಗ್ರಂಥ ದಾಸೋಹಿಗಳಿಗೆ ತುಂಬುಹೃದಯದ ನಮನಗಳು.

ಬೆಳ್ಳಿಹಬ್ಬ ಯಶಸ್ವಿಯಾಗಿ ಜರುಗಲೆಂದು ಸಲಹೆ–ಸೂಚನೆ ಹಾಗೂ ಸದಾಶಯ ವ್ಯಕ್ತಪಡಿಸಿದ ನಾಡಿನ ಎಲ್ಲ ಪೂಜ್ಯರಿಗೆ, ಮಂತ್ರಿಮಾನ್ಯರಿಗೆ, ಶ್ರೀ ಚೆನ್ನವೀರ ಕಣವಿ, ಶ್ರೀಮತಿ ಶಾಂತಾದೇವಿ ಮಾಳವಾಡ, ಡಾ.ಎಂ.ಕುಲಬುರ್ಗಿ, ಶ್ರೀ ಸದಾನಂದ ಕನವಳ್ಳಿ ಅವರಿಗೆ ಹಾಗೂ ಸಾರಸ್ವತಲೋಕದ ಗಣ್ಯರಿಗೆ ಅನಂತ ವಂದನೆಗಳು.

ನನ್ನ ಜೊತೆ ಕೈಗೂಡಿಸ, ಬೆಳ್ಳಿಹಬ್ಬದ ಕಾರ್ಯಕ್ರಮಗಳನ್ನು ಯೋಚಿಸಿ, ಗ್ರಂಥ ಪ್ರಕಟಣೆಯ ಜವಾಬ್ದಾರಿಯನ್ನು ವಹಿಸಿಕೊಂಡು, ಮುಖಪುಟ ವಿನ್ಯಾಸವನ್ನೂ ಪರಿಭಾವಿಸಿ, ಎಲ್ಲ ಕಾರ್ಯಕಲಾಪಗಳು ನಿರಾಯಾಸವಾಗಿ ನೆರವೇರಲು ಸಹಾಯ ನೀಡಿದ ಶ್ರೀ ಬಸವರಾಜು ಹೂಗಾರ ಅಭಿನಂದನೆಗಳು.

ವರ್ಷದುದ್ದಕ್ಕೂ ಬೆಳ್ಳಿಹಬ್ಬ ಉತ್ಸಾಹದಿಂದ ನೆರವೇರಲು ಸಹಕರಿಸಿದ ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನಪೀಠದ ಎಲ್ಲ ಪ್ರಾಧ್ಯಾಪಕರು, ಶಿಕ್ಷ ಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ, ಅರ್ಥಪೂರ್ಣವಾದ ರಕ್ಷಾ ಕವಚ ರಚಿಸಿಕೊಟ್ಟ ರವೀರಂದ್ರ ವಿಶ್ವಜ್ಞ ಅವರಿಗೆ, ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟ ಗದುಗಿನ ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್‌ದ ಒಡೆಯರಿಗೆ ಅನಂತ ಕೃತಜ್ಞತೆಗಳು.

**–ಡಾ. ವೀರಣ್ಣ ರಾಜೂರ**

ಕಾರ್ಯನಿರ್ವಾಹಕ ಪ್ರಾಧ್ಯಾಪಕರು ಶ್ರೀ ಬಸವೇಶ್ವರಪೀಠ
ಹಾಗೂ ಅಧ್ಯಕ್ಷರು, ಡಾ. ಆರ್. ಸಿ. ಹಿರೇಮಠ, ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಯ, ಧಾರವಾಡ.

Blank

# ಅನುಬಂಧ – ೨

## (ಮುನ್ನುಡಿಗಳು)

Blank

## ಬಸವಣ್ಣನವರ ಜೀವನ ಹಾಗೂ ಸಂದೇಶ

# ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನಪೀಠ, ಅನೇಕ ಸ್ವರಗಳಲ್ಲಿ ವಿಸ್ತಾರವಾಗಿ ಬೆಳೆಯುತ್ತಲಿದೆ. ಅದು ನಮ್ಮ ನಾಡಿನ ಪ್ರಮುಖ ಧರ್ಮಗಳಾದ ಜೈನ. ವೀರಶೈವ, ಬ್ರಾಹ್ಮಣ ಇವನ್ನು ಕುರಿತು ಅಭೂತಪೂರ್ವ ಯೋಜನೆಗಳನ್ನು ಕಲ್ಪಿಸಿಕೊಂಡು ಕಾರ್ಯಪ್ರವೃತ್ತವಾಗಿದೆ.

ಇವುಗಳಲ್ಲಿ ವೀರಶೈವಕ್ಕೆ ಸಂಬಂಧಪಟ್ಟಂತೆ ೧೯೬೨ ರಿಂದ ಪ್ರಾರಂಭವಾದ 'ಸಮಗ್ರವಚನ ವಾಙ್ಮಯ ಪ್ರಕಟನ ಯೋಜನೆ' ನಮ್ಮ ನಾಡಿನ ಸಾರಸ್ವತಕ್ಷೇತ್ರದಲ್ಲಿ ಅಗ್ರಸ್ಥಾನ ಪಡೆದಿದೆ. ಇದಕ್ಕೆ ಸಮಗೂಕವಾದ ಇನ್ನೊಂದು ಉಪಕ್ರಮವೆಂದರೆ, ಅಧ್ಯಯನಪೀಠದಲ್ಲಿ ಅನುಷ್ಠಾನಗೊಂಡ "ಶ್ರೀ ಬಸವೇಶ್ವರಪೀಠ". ಭಾರತದ ಇತಿಹಾಸದಲ್ಲಿ ಬುದ್ಧನ ತರುವಾಯ ಸ್ಮರಿಸಬೇಕಾದ ಮಹಾವ್ಯಕ್ತಿಯೆಂದರೆ ಶ್ರೀ ಬಸವಣ್ಣನವರು. 'ಉಪಲಬ್ಧ ಸಂಗತಿಗಳ ಆಧಾರದಿಂದ ಹೇಳುವುದಾದರೆ ಅವರು ಕೈಕೊಂಡು ಆಂದೋಲನ ಕನ್ನಡ ನೆಲದ ಮೇಲೆ ನಡೆದ ಪ್ರಥಮಕ್ರಾಂತಿ. ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಮೊದಲಾದ ಕ್ಷೇತ್ರಗಳಲ್ಲಿ ತೂರಿಬಂದ ಈ ಕ್ರಾಂತಿಯ ಅಧ್ಯಯನ ತಲಸ್ಪರ್ಶಿಯಾಗಿ ನಡೆಯಬೇಕೆಂಬ ನಮ್ಮ ನಾಡಿನ ಮಹಾಜನರ ಪ್ರಯತ್ನದ ಫಲವಾಗಿ " ಶ್ರೀ ಮುರಗೋಡ ಮಠಾಧೀಶರಾದ ಶ್ರೀ ಮ. ನಿ. ಪ್ರ. ಸ್ವ. ಮಹಾಂತ ಶಿವಯೋಗೀಶ್ವರ ಶತ ಮಾನೋತ್ಸವ ಸ್ಮಾರಕ ಶ್ರೀ ಬಸವೇಶ್ವರಪೀಠ" ಕನ್ನಡ ಅಧ್ಯಯನಪೀಠದಲ್ಲಿ ಅಧಿಷ್ಠಾನ ಗೊಂಡಿತು. ಇದರ ಜೊತೆಯಲ್ಲಿಯೇ ಆಸ್ತಿತ್ವಕ್ಕೆ ಬಂದಿತು– "ಧಾರವಾಡ ಶ್ರೀ ಮೃತ್ಯುಂಜನ ವಿಶೇಷ ವ್ಯಾಖ್ಯಾನ ಮಾಲೆ."

ಶ್ರೀ ಮ.ನಿ.ಪ್ರ.ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು ನಮ್ಮ ನಾಡಿನ ಶಿವಬೆಳಕು. ಲೋಕಸೇವೆ, ಅದರಲ್ಲಿಯೂ ಸಾಹಿತ್ಯಲೋಕ–ಶಿಕ್ಷಣಲೋಕಗಳ ಸೇವೆ ಅವರ ಪ್ರಾಣ– ಆತ್ಮ ವೆನಿಸಿದ್ದವು. "ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ"ಯ ಹೆಸರಿನಲ್ಲಿ ಅವರು ಪ್ರಕಟಿಸಿದ ಗ್ರಂಥಸಂಖ್ಯೆ ನೂರಾರು. "ಶ್ರೀ ಮುರುಘರಾಜೇಂದ್ರ ಪ್ರಸಾದ ನಿಲಯ"ದಲ್ಲಿ ಅವರು ಬೆಳೆಸಿ, ಬೆಳಗಿಸಿದ ವ್ಯಕ್ತಿಗಳು ಸಾವಿರಾರು. ಇಂಥ 'ಮರ್ತ್ಯಲೋಕದ ಮಹಾದೇವ'ರನ್ನು ಸ್ಮರಿಸುವದು, ಸ್ಮರಣೆಯನ್ನು ಶಾಶ್ವತಗೊಳಿಸುವುದು ಪ್ರಜೆಗಳ ಕೃತಜ್ಞತೆಯ ಕುರುಹು. ಇದಕ್ಕೆ ಅನುಗುಣವಾಗಿ ಅಧ್ಯಯನಪೀಠದಲ್ಲಿ ಪ್ರಾರಂಭವಾದ

ಈ ವ್ಯಾಖ್ಯಾನ ಮಾಲೆಯನ್ನು ಕಳೆದ ವರ್ಷ ಉದ್ಘಾಟಿಸಿದವರು ಭಾರತಸೇವೆ, ಬಸವಸೇವೆಗಳ ಕೂಡಲಸಂಗಮವಾಗಿರುವ ಮಾನ್ಯ ಉಪರಾಷ್ಟ್ರಪತಿಗಳಾದ ಡಾ.ಬಿ.ಡಿ.ಜತ್ತಿ ಅವರು. ಅವರ ಶುಭಹಸ್ತಸ್ಪರ್ಶ ಕಾರಣವಾಗಿ ಈ ಮಾಲೆ, ಮಾಲೆ ಮಾಲೆಯಾಗಿ ಮುಂದುವರಿಯುವುದೆಂದು ಬೇರೆ ಹೇಳಬೇಕಿಲ್ಲ.

ಈ ವ್ಯಾಖ್ಯಾನ ಮಾಲೆಯ ಪ್ರಥಮ ಉಪನ್ಯಾಸವನ್ನು ಡಾ.ಆರ್.ಆರ್. ದಿವಾಕರ ಅವರು ನೀಡಿದರು. ಕನ್ನಡ ಅಧ್ಯಯನಪೀಠದ ಆಶ್ರಯದಲ್ಲಿ ದಿನಾಂಕ ೪–೧೨–೭೫ ರಂದು ಮಾಡಿದ ಅವರ ಉಪನ್ಯಾಸ ಪುಸ್ತಕರೂಪದಲ್ಲಿ ಈಗಾಗಲೆ ಪ್ರಕಟವಾಗಿ ಓದುಗರಮನವನ್ನು ಸೂರೆಗೊಂಡಿದೆ. ಈಗ ಈ ಮಾಲೆಯ ದ್ವಿತೀಯ ಉಪನ್ಯಾಸವನ್ನು ಕನ್ನಡ ನಾಡಿನ ಶ್ರೇಷ್ಠ ಕವಿಗಳೂ, ಅನುಭಾವಿಗಳೂ ಆಡಳಿತ ತಜ್ಞರೂ, ಶರಣಸಾಹಿತ್ಯ ಪ್ರೇಮಿಗಳೂ ಆದ ಡಾ. ಸಿದ್ಧಯ್ಯ ಪುರಾಣಿಕ ಅವರು ನೀಡಿದ್ದಾರೆ. ಅವರು ಮಾಡಿದ ಮೂರು ಉಪನ್ಯಾಸಗಳ ಲಿಖಿತರೂಪ ಈ ಪುಸ್ತಕ. ಬಸವಣ್ಣನವರ ಬದುಕು ಬರಹವನ್ನು ಭಕ್ತಿಯಿಂದ ಅಭ್ಯಸಿಸಿ ಕಾವ್ಯಮಯ ಶೈಲಿಯಲ್ಲಿ ರಚಿಸಿದ ಈ ಕೃತಿಯನ್ನು ಸಹೃದಯರು ಸಂತೋಷದಿಂದ ಸ್ವಾಗತಿಸುವರೆಂದು ನಂಬಿರುವೆ.

ಬೆಂಬಲ ಮುಂಬಲವಾಗಿ ನಿಂತು ಕನ್ನಡದ ಬೆಳವಣಿಗೆಗೆ ನಿರಂತರ ಸ್ಫೂರ್ತಿ ನೀಡುತ್ತಿರುವ ಮಾನ್ಯ ಕುಲಪತಿಗಳಾದ ಡಾ.ಆರ್.ಸಿ.ಹಿರೇಮಠ ಅವರಿಗೂ ನಮ್ಮ ಬಿನ್ನಹದಮೇರೆಗೆ ಉಪನ್ಯಾಸ ನೀಡಿ ಈ ಹೊತ್ತಿಗೆಯನ್ನು ಬರೆದುಕೊಟ್ಟ ಡಾ. ಸಿದ್ಧಯ್ಯ ಪುರಾಣಿಕ ಅವರಿಗೂ ನಮ್ಮ ಅಭಿನಂದನೆಗಳು ಸಲ್ಲುತ್ತವೆ.

ಈ ಗ್ರಂಥದ ಪ್ರಕಟನೆಯ ಕಾರ್ಯದಲ್ಲಿ ವಿಶೇಷ ಆಸ್ಥೆವಹಿಸಿದ ಶ್ರೀ ಚೆನ್ನವೀರ ಕಣವಿ ಹಾಗೂ ಶ್ರೀ ಎಸ್. ಬಿ. ನಾಯಕ ಅವರಿಗೂ ಅಚ್ಚುಕಟ್ಟಾಗಿ ಅಚ್ಚುಮಾಡಿ ಕೊಟ್ಟ ಮನೋಹರ ಮುದ್ರಣಾಲಯದ ಒಡೆಯರಾದ ಶ್ರೀ ಸೋಮಶೇಖರ ಆಕಳವಾಡಿ ಅವರಿಗೂ, ಮುದ್ರಣಾಲುದ ಸಿಬ್ಬಂದಿ ವರ್ಗಕ್ಕೂ ನಮ್ಮ ಕೃತಜ್ಞತೆಗಳು.

ಕನ್ನಡ ಅಧ್ಯಯನ ಪೀಠ

**– ಎಂ.ಎಸ್. ಸುಂಕಾಪುರ**
೧೦–೫–೧೯೭೭

# ಪ್ರಕಟನ ವಿಭಾಗದ ನಿರ್ದೇಶಕರ ಮಾತು

ಬಸವ ಸಮಿತಿ ಶರಣರ ವಿಚಾರಧಾರೆಯನ್ನು ಜನರಿಗೆ ಪರಿಚಯಿಸುವ ಅವರ ತತ್ತ್ವಗಳನ್ನು ಪ್ರಚಾರಮಾಡುವ ಸಲುವಾಗಿ ಕಟ್ಟಿದ ಮಹಾಸಂಸ್ಥೆ. ಅದು ಈ ಮಣಿಹವನ್ನು ಹಲವಿಧದಲ್ಲಿ ನಡೆಸುತ್ತಾ ಬಂದಿದೆ. ವರ್ಷದುದ್ದಕ್ಕೂ ವಿಚಾರಗೋಷ್ಠಿಗಳು. ಪ್ರಚಾರೋಪನ್ಯಾಸಗಳು, ವಿಶೇಷೋಪನ್ಯಾಸಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿರುವುದಲ್ಲದೆ ಮೌಲ್ವಿಕವಾದ ಗ್ರಂಥಗಳನ್ನು ಪ್ರಕಟಿಸುತ್ತಿದೆ, ಬಸವ ಪಥ ಹಾಗೂ Basava Journal ಮಾಸಿಕ ಪ್ರತಿಕೆಗಳು ಬಸವ ಸಮಿತಿಯ ಮುಖವಾಣಿಯಾಗಿ ಮೂಡಿಬರುತ್ತಿವೆ.

ಹೀಗೆ ಬಸವ ಸಮಿತಿ ತನ್ನ ಸಾರ್ಥಕವಾದ ೨೫ ವರ್ಷಗಳನ್ನು ದಾಟುತ್ತಿರುವ ಶುಭಾವಸರದಲ್ಲಿ ಅದರ ಬೆಳ್ಳಿಹಬ್ಬ ನಡೆಯುತ್ತಿದೆ, ರಜತದ ಸವಿಯ ಸವಿನೆನಪಿಗೆಂದು ಬಸವ ಸಮಿತಿ, ಕೆಲವು ಪ್ರಕಟಣೆಗಳನ್ನು ಹೊಸ ತರುತ್ತಿದೆ. ಅವುಗಳಲ್ಲಿ 'ಪ್ರಲ್ಲಮಪ್ರಭು' ವನ್ನು ಕುರಿತು ಲೇಖಕರಾದ ಶ್ರೀ ಸಿದ್ಧಯ್ಯ ಪುರಾಣಿಕ ಬರೆದ ಪುಸ್ತಕ ಒಂದಾಗಿದೆ, ಶ್ರೀ ಸಿದ್ಧಯ್ಯ ಪುರಾಣಿಕರು ಹೆಸರಾಂತ ಸಾಹಿತಿಗಳು, ಪಜ್ಞಾವಂತ ಲೇಖಕರು. ಅವರ ಈ ಕೃತಿ ಜನ್ ಪ್ರಿಯವಾಗುವುದರಲ್ಲಿ ನನಗೆ ಸಂಶಯವಿಲ್ಲ.

ಎಂದಿನಂತೆ ಕನ್ನಡ ಜನತೆ ಬಸವ ಸಮಿತಿಯ ಬೆಳ್ಳಿಹಬ್ಬದ ಪ್ರಕಟಣೆಗಳನ್ನು ಕೊಂಡು ಓದಿ ಪ್ರೋತ್ಸಾಹಿಸಬೇಕಾಗಿ ವಿಜ್ಞಾಪಿಸುತ್ತೇನೆ

ದಿನಾಂಕ : ೨-೫-೧೯೮೯

ಸಹಿ/-
**(ಸಿ. ಎ. ಜಮಖಂಡಿಮ)**
ಪ್ರಕಟಣ ವಿಭಾಗ
ಬಸವ ಸಮಿತಿ

## ಸಿದ್ಧರಾಮ

ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಮ್ ।
ವರ್ಷಂ ಶತ್ ಭಾರತಂ ನಾಮ ಭಾರತೀ ಯತ್ರ ಸಂತತಿಃ ॥

# ಸ್ವಾಗತ

'ಭಾರತ–ಭಾರತಿ ಪುಸ್ತಕ ಸಂಪದ' ಭಾರತದ ಸಾವಿರಾರು ವರ್ಷಗಳ ಇತಿಹಾಸದಲ್ಲಿ ಉಜ್ವಲವಾಗಿ ಬೆಳಗುವ ಪುಣ್ಯಚೇತನರನ್ನು ಮಕ್ಕಳಿಗೆ ಪರಿಚಯ ಮಾಡಿಕೊಡುವ ಮಹತ್ಕಾರ್ಯಕ್ಕೆ ಮುಡಿಪಾಗಿ, ಮೊದಲನೆಯ ವರ್ಷದಲ್ಲಿ ಅರವತ್ತು ಪುಸ್ತಕಗಳನ್ನು ಎಳೆಯರ ಕೈಗಳಲ್ಲಿರಿಸಿವೆ, ಸಮಸ್ಯೆಗಳೂ ಆತಂಕಗಳೂ ಎದಿರಾದರೂ ಕನ್ನಡಿಗರ ಅಂತಃಕರಣದ ಮೆಚ್ಚಿಕೆ ಮತ್ತು ಕ್ರಿಯಾತ್ಮಕ ಸಹಕಾರ ನಮಗೆ ರಕ್ಷೆಯಾಗಿವೆ. ಹೃದಯ ತುಂಬಿ ಬರುವ ಕೃತಜ್ಞತೆಯಿಂದ ಈ ಉಪಕಾರವನ್ನು ಸ್ಮರಿಸುತ್ತೇವೆ.

ಭಾರತದ ಭಾಗ್ಯವನ್ನೂ ದಾರಿದೀಪಗಳನ್ನೂ ಮಕ್ಕಳಿಗೆ ತೋರಿಸಿ ಕೊಡುವ ಪವಿತ್ರ ಕಾರ್ಯಕ್ಕೆ ಕನ್ನಡಿಗರ ಔದಾರ್ಯದ ಸ್ಫೂರ್ತಿಯಿಂದ ಇನ್ನೂ ಹೆಚ್ಚಿನ ಆತ್ಮವಿಶ್ವಾಸದಿಂದ ಮುಡಿಪಾಗುತ್ತಿದ್ದೇವೆ. ಈ ವರ್ಷ ತೊಂಬತ್ತು ಪುಸ್ತಕಗಳನ್ನು ಸಮರ್ಪಿಸಲಿದ್ದೇವೆ.

ನಮ್ಮೆಲ್ಲರ ಕರ್ತವ್ಯಪ್ರಜ್ಞೆಯನ್ನು ತಾಯಿ ಭಾರತಿ ಎಚ್ಚರಿಸಲಿ. ಭಾರತದ ಮಕ್ಕಳಾಗಿ, ಪ್ರಪಂಚದ ಪ್ರಜೆಗಳಾಗಿ ನಾವು ಸಾರ್ಥಕವಾಗಿ ಬಾಳುವಂತಾಗಲಿ.

ಇಗೋ ಇಲ್ಲಿದೆ ಭಾರತದ ಕೃಪೆಯ. ನಮ್ಮ ಪುಣ್ಯದ ದರ್ಶನ. ಬನ್ನಿ, ಸ್ವಾಗತ !

ವಂದೇ ಮಾತರಂ !

**ಶ್ರೀ ಪ್ರಮಾದೀಚ** — **ಎಲ್.ಎಸ್. ಶೇಷಗಿರಿ ರಾವ್**
ದೀಪಾವಳಿ – ೧೯೭೩ — ಪ್ರಧಾನ ಸಂಪಾದಕ

# ಅನುಬಂಧ – ೩

## (ನಿವೇದನೆಗಳು)

Blank

# ನಿವೇದನೆ

೧೯೪೧ ರಲಿ 'ಆತ್ಮಾರ್ಪಣ' ನಾಟಕ ಬರೆದು ನಾನೇ ಬಸವಣ್ಣನವರ ಪಾತ್ರವಹಿಸಿ ನನ್ನ ಗೆಳೆಯರೊಡನೆ ಹೈದರಾಬಾದಿನಲ್ಲಿ ಅದನ್ನು ರಂಗಭೂಮಿಯಮೇಲೆ ತಂದೆ. ಅದು ೧೯೪೨ ರಲ್ಲಿ ಪ್ರಕಟವಾದಾಗ 'ನನ್ನ ನಿವೇದನ'ದಲ್ಲಿ ಹೀಗೆ ಬರೆದಿದ್ದೆ : "ಕರುನಾಡಿನ ಕಮಲಾಸನದ ಮೇಲೆ ಕಾಲಿಟ್ಟು ಜನಹೃದಯದ ರತ್ನ ಸಿಂಹಾಸನದ ಮೇಲೆ ರಾರಾಜಿಸುತ್ತಲಿರುವ ಬಸವಣ್ಣನವರಿಗೆ ದೊರೆತ ಸನ್ಮಾನವೆಂದರೆ ಕರ್ನಾಟಕಕ್ಕೆ ಬಂದ ಕೀರ್ತಿ; ಅವರ ತತ್ತ್ವಗಳಿಗೆ ದೊರೆತ ಮಾನ್ಯತೆಯು ಕನ್ನಡ ನಾಡಿಗೆ ದೊರೆತ ಗುರುತ್ವ ; ಅವರ ಜೀವನವು ವಿಶ್ವ ಸಂಸ್ಕೃತಿಗೆ ಕನ್ನಡವು ನೀಡಿದ ಕಾಣಿಕೆ."

ಏಳೆಂಟು ವರ್ಷಗಳ ಅಧ್ಯಯನದ ಫಲವಾಗಿ ಈ ತೀರ್ಮಾನಕ್ಕೆ ಬಂದಿದ್ದೆ. ಆ ತರುವಾಯ ಮೂರೂವರೆ ದಶಕಗಳ ವರೆಗೆ ನಡೆದ ಅಧ್ಯಯನದ ಪರಿಣಾಮವಾಗಿ ಈ ಅಭಿಪ್ರಾಯದಲ್ಲಿ ಏನಾದರೂ ಪರಿವರ್ತನೆಯಾಗಿದೆಯೇ ? ಇಲ್ಲ. ತದ್ವಿರುದ್ಧವಾಗಿ ನನ್ನ ಬಸವಭಕ್ತಿ ಬೆಳೆಯುತ್ತಲೇ, ಬಲಿಯುತ್ತಲೇ ನಡೆದಿದೆ. ಮೊದಲು ಬಸವ ಭಕ್ತನಾಗಿದ್ದ ನಾನೀಗ ಬಸವನ ಭಕ್ತರ ಭಕ್ತ ; ಬಸವನ ಬಳಿದೊತ್ತು ಬಳಗದೊತ್ತು ! ನನಗೀಗ ಲಿಂಗಾಯತನೆಂದು ಕರೆಯುವುದಕ್ಕಿಂತ 'ಬಸವಾಯತ' ಎಂದು ಕರೆಯುವುದು ಹೆಚ್ಚು ಸೂಕ್ತ, ಸಮಂಜಸ. ನಾನು 'ಬಸವಮತ'ದ ಅನುಯಾಯಿ; ನಾನು 'ಬಸವಾಯತ' !

ನನ್ನ ಬಸವಭಕ್ತಿ ಕುರುಡು ಭಕ್ತಿಯಲ್ಲ. ಬಸವಣ್ಣನವರನ್ನು ನನ್ನ ಅಂತರಂಗ ಬಹಿರಂಗಗಳ ಆರಾಧ್ಯನನ್ನಾಗಿ ಸ್ವೀಕರಿಸುವ ಮುನ್ನ ಅವರನ್ನು ಕಠೋರ ನಿಷ್ಠುರ ವಿಮರ್ಶೆಗೆ, ಅನೇಕ ಅಗ್ನಿದಿವ್ಯಗಳಿಗೆ, ವಿಶ್ವ ವಿಚಾರಧಾರೆಯ ಒರೆಗಲ್ಲಿಗೆ, ಪ್ರಚಲಿತ ಸಮಸ್ಯೆಗಳ ಹಿನ್ನೆಲೆಯಲ್ಲಿ ತೀಕ್ಷ್ಣ ಪರೀಕ್ಷೆಗಳಿಗೆ, ವ್ಯಷ್ಟಿ–ಸಮಷ್ಟಿ ಜೀವನಗಳಲ್ಲಿ ಉದ್ಭವಿಸಿರುವ ಸಂದೇಹಗಳ ಸಂಗೋಹನಗಳಿಗೆ ಒಳಪಡಿಸಿದ್ದೇನೆ, ಈಡುಮಾಡಿದ್ದೇನೆ. ಆಮೇಲೆ 'ಕರಗಿಸಿ ಮನದ ಕಾಳಿಕೆಯ' ಕಳೆದುಕೊಂಡ, 'ಒರೆ ಬಣ್ಣಕ್ಕೆ ತಂದು ಪುಟವಿಕ್ಕಿ ನೋಡಿಕೊಂಡ, 'ಕಡಿಹಕ್ಕೆ ಬಡಿಹಕ್ಕೆ' ತಂದು ಕಡೆಯಾಣಿಯ ಮಾಡಿಕೊಂಡ, ಸಂಗನ 'ಶರಣರ ಪಾದಕ್ಕೆ ತೊಡಗೆಯ' ಮಾಡಿಕೊಂಡ ಈ ಮಹಾನುಭಾವನನ್ನು, ಮಹಾ ಮಾನವನನ್ನು ನನ್ನ 'ಸಖ, ದಾರ್ಶನಿಕ, ಮಾರ್ಗದರ್ಶಕ' ನನ್ನಾಗಿ ಸ್ವೀಕರಿಸಿದ್ದೇನೆ.

ಆದುದರಿಂದ ನಾನು ನಿಮ್ಮೆದುರು ಮಂಡಿಸಲಿರುವ ಮೂರು ಉಪನ್ಯಾಸಗಳಲ್ಲಿ ಮೂಡಿರುವ ಅನಿಸಿಕೆಗಳು, ಅಭಿಪ್ರಾಯಗಳು, ಅನವರ್ತನೆಗಳು, ಅನುಶೀಲನೆಗಳು, ಅನುಮೇಯಗಳು ಅಂಧಶ್ರದ್ಧೆಯಿಂದ, ಮತಾಭಿಮಾನದಿಂದ, ವ್ಯಕ್ತಿಪೂಜಾಪಾರವಶ್ಯದಿಂದ, ಪ್ರಾದೇಶಿಕ ಭಾವನೆಯ ಬಲಿವಂತತೆಯಿಂದ ಬಂದವುಗಳಲ್ಲ, ವಿಧಾಯಕ ವ್ಯಾಸಂಗ ಮತ್ತು ವಿಚಿಕಿತ್ಸಕ ಅನ್ವೇಷಣೆಗಳಿಂದ ಉದ್ಭೂತವಾದವುಗಳೆಂದು ನಮ್ರವಾಗಿ ನಿವೇದಿಸಿಕೊಳ್ಳುವೆ, ಕ.ವಿ.ವಿ. ಕುಲಪತಿ ಡಾ. ಆರ್. ಸಿ. ಹಿರೇಮಠರ, ಕನ್ನಡ ಅಧ್ಯಯನ ಪೀಠದ ನಿರ್ದೇಶಕ ಡಾ.ಎಂ.ಸ್. ಸುಂಕಾಪುರರ ಆತ್ಮೀಯತೆಯ ಆಗ್ರಹವಿಲ್ಲದಿದ್ದಲ್ಲಿ ಈ ಸಾಹಸಕ್ಕೆ ಕೈಹಾಕುತ್ತಿರಲಿಲ್ಲ ನಾನು. ಆದೇಶವಿತ್ತ ಅವರ, ಪ್ರೋತ್ಸಾಹವಿತ್ತ ಡಾ. ಎಂ. ಎಂ. ಕುಲಬುರ್ಗಿ, ಡಾ. ಕೊಟ್ರಶೆಟ್ಟಿ, ಡಾ, ಬಿ. ವ್ಹಿ. ಮಲ್ಲಾಪುರ ಮೊದಲಾದವರ ಮಂಡೆಗಳಿಗೆ ಹುವ್ವತರಲು ಹೆಣಗಿದ್ದೇನೆ. ಬಸವ ಮತಕ್ಕೆ ಬಸವಣ್ಣನವರ ವಚನಗಳೇ ಆಧಾರವೆಂಬುದನ್ನು ತೋರಿಸಲು ಉದ್ದಕ್ಕೂ ಅವರ ವಚನಗಳನ್ನೇ ಉದಾಹರಿಸಿದ್ದೇನೆ. ವಿಷಯ ನಿರೂಪಣೆಯಲ್ಲಿ ಅವರ, 'ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ, ಅನ್ಯರಿಗೆ ಅಸಹ್ಯಪಡಬೇಡ' ಎಂಬು ತ್ರಿವಿಧ ಸೂತ್ರವನ್ನುನುರಿಸಿದ್ದೇನೆ.

**– ಸಿದ್ಧಯ್ಯ ಪುರಾಣಿಕ**

# ನನ್ನ ನಾಲ್ಕು ಮಾತು

ಕರ್ನಾಟಕ ವಿಶ್ವವಿದ್ಯಾಲಯದ ಔದಾರ್ಯದಿಂದ ಬಸವಣ್ಣನವರ ಜೀವನ ಮತ್ತು ಸಂದೇಶ ಹಾಗೂ ಮಹಾದೇವಿ ಎಂಬ ಎರಡು ಕೃತಿಗಳನ್ನು ಬರೆದು ಪ್ರಕಟಿಸುವುದು ಸಾಧ್ಯವಾಯಿತು, ಪ್ರಭುದೇವರನ್ನು ಕುರಿತು ಕೃತಿಯೊಂದನ್ನು ರಚಿಸಿಬಿಟ್ಟರೆ ಶರಣ ಸಮುದಾಯದ ಈ ತ್ರಿಮೂರ್ತಿಗಳಿಗೆ ನನ್ನ ಸಣ್ಣಸೇವೆ ಸಲ್ಲಿಸಿದಂತಾಗುವುದೆಂಬ ಗೇನಿಕೆ ಬಹಳ ದಿನಗಳಿಂದ ನನ್ನ ಮನದ ವನದಲ್ಲಿ ಗುಂಯ್‌ಗುಡುತ್ತಿತ್ತು. ಅದೇ ಪ್ರಮಾಣದಲ್ಲಲ್ಲದಿದ್ದರೂ ತಕ್ಕ ಪ್ರಮಾಣದಲ್ಲಿ ಪ್ರಭುವಿಗೆ ನನ್ನ ಭಕ್ತಿ ಸಲ್ಲಿಸುವ ಸುಯೋಗವನ್ನು ಬಸವ ಸಮಿತಿ ನನಗೆ ಒದಗಿಸಿದ್ದಕ್ಕಾಗಿ ಸಮಿತಿಗೆ ನನ್ನ ಕೃತಜ್ಞತೆಗಳು.

ಮಹೋನ್ನತಿಗೆ ಇನ್ನೊಂದು ಹೆಸರು ಪ್ರಭುದೇವ. ದೇವರ ಜೀವನವೆಷ್ಟು ಮಹೋಜ್ವಲವೋ ಅವರ ವಚನಗಳೂ ಅಷ್ಟೇ ಓಜೋಮಯ, ಅವುಗಳಲ್ಲಿ ಅಭಿವ್ಯಕ್ತವಾಗಿರುವ ಅನುಭಾವ, ಯೋಗ, ದರ್ಶನ, ಸಮಾಜ ವಿಮರ್ಶೆ, ವಿಡಂಬನೆಗಳು, ವಿಚಾರರಶ್ಮಿಗಳು, ಸುಬೋಧೆಗಳೂ ಅವರ್ಣನೀಯ, ಎಷ್ಟು ಜನ ವಿವೇಚಕರು ಎಷ್ಟು ಕಾಲದವರೆಗೆ ಅವುಗಳ ಬಗ್ಗೆ ಬರೆಯುತ್ತ ಹೋದರೂ ಬರೆಯುವುದು ಉಳಿದೇ ಉಳೀಯುವುದು. ಹೀಗಿರುವಾಗ ನನ್ನ ಈ ಸಣ್ಣ ಕೃತಿ ಎಷ್ಟರಮಟ್ಟಿಗೆ ಅವರಿಗೆ ನ್ಯಾಯ ನೀಡಿದೆಯೆಂಬುದನ್ನು ಓದುಗರೇ ನಿರ್ಧರಿಸಬೇಕು.

ಯಡೆಯೂರಿನ ಯತೀಶ್ವರ ಶ್ರೀ ಸಿದ್ಧಲಿಂಗೇಶ್ವರರ ಸನ್ನಿಧಿಯಲ್ಲಿ ನನ್ನ ಪೂಜ್ಯ ಪಿತೃದೇವರ ಭಾವಚಿತ್ರದ ಕೆಳಗೆ ಕುಳಿತೇ ಈ ಕೃತಿ ರಚನೆಯಾದುದು ನನಗೆ ಧನ್ಯತೆಯನ್ನು ನೀಡಿದೆ. ಇದರಲ್ಲಿ ಉತ್ತಮವಾದುದೇನಾದರೂ ಅರಳಿದ್ದರೆ ಅದು ಶ್ರೀಸಿದ್ಧಲಿಂಗೇಶ್ವರರ ಕೃಪೆ, ಕವಿರತ್ನ ಕಲಿನಾಥ ಶಾಸ್ತ್ರಿಗಳವರ ಹಸಾದ

**– ಸಿದ್ಧಯ್ಯ ಪುರಾಣಿಕ**

ಎಡೆಯೂರು ಸುಕ್ಷೇತ್ರ
೧೫–೩–೧೯೮೯

# ಅರಿಕೆ
## (ಮೊದಲ ಮುದ್ರಣ)

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 'ಬಸವಪೀಠ'ದ ಉದಯ ಒಂದು ಐತಿ ಹಾಸಿಕ ಅಗತ್ಯದ ಈಡೇರಿಕೆ. ಈಗ ಡಾ.ಎಂ.ಎಂ. ಕಲಬುರ್ಗಿಯವರ ನೇತೃತ್ವದಲ್ಲಿ ಆ ಅಗತ್ಯದ ಈಡೇರಿಕೆಗೆ ಮೂರ್ತಸ್ವರೂಪ ದೊರೆಯುತ್ತಲಿರುವುದು ಬಹಳ ಸಂತಸದ ಬೆಳವಣಿಗೆ.

'ಪೀಠ'ದ ಪ್ರಥಮ ಕಂತಿನ ಪ್ರಕಟನೆಗಾಗಿ ಬಸವ, ಪ್ರಭುದೇವ, ಅಕ್ಕಮಹಾದೇವಿಯವರ ಜೀವನ ಹಾಗೂ ಸಂದೇಶಗಳನ್ನೊಳಗೊಂಡ ಕಿರುಹೊತ್ತಿಗೆಗಳು ಹೊರ ಬರಬೇಕೆಂದು ಪೀಠದ ಸಂಪಾದಕ ಸಮಿತಿ ನಿರ್ಧರಿಸಿ, ಅಕ್ಕನ ಬಗೆಗೆ ನಾನೇ ಬರೆಯಬೇಕೆಂದು ನಿರ್ಣಯಿಸಿತು. ಬರೆಯಲು ಒಪ್ಪಿದೆನಾದರೂ ಬರೆಯುವುದು ಬಹಳ ಬಿಕ್ಕಟ್ಟಿನದಾಗಿ ತೋರಿತು– ನಿವೃತ್ತನಾದ ಮೇಲೆ ಇನ್ನಷ್ಟು ಕಾರ್ಯ ಪ್ರವೃತ್ತನಾಗಿರುವ ನನಗೆ. ಕೊನೆಗೆ ಭದ್ರಾವತಿಯಲ್ಲಿ ಮಗಳು ಭಾರತಿಯ ಮನೆಯಲ್ಲಿ ಕುಳಿತು ಬರೆದುಮುಗಿಸಬೇಕಾಯಿತು. ಈ ಅವಕಾಶ ಕಲ್ಪಿಸಿಕೊಟ್ಟ ಅಳಿಯ ಮೃತ್ಯುಂಜಯಪ್ಪ, ಮಗಳೂ ಭಾರತೀಯರಿಗೆ ಈ ಕೃತಿಯ ಶ್ರೇಯಸ್ಸಿನ ಸ್ವಲ್ಪ ಭಾಬ ಸಲ್ಲಬೇಕು. ಡಾ. ಎಂ. ಎಸ್. ಸುಂಕಾಪುರ, ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ, ಡಾ. ಬಿ. ಬಿ. ಹೆಂಡಿ, ಡಾ. ಎಂ. ಎಂ. ಕುಲಬುರ್ಗಿ ಅವರ ಸಲಹೆ ಸಹಾಕಾರಗಳಿಗಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಅಕ್ಕನ ಆರಾಧಕರ , ಅಭಿಮಾನಿಗಳ ಸಂಖ್ಯೆ ದಿನದಿನಕ್ಕೆ ಬೆಳೆಯುತ್ತಲಿದೆ. ಅವರೆಲ್ಲರ ಅಭಿರುಚಿಗಳಿಗೆ ಈ ಕೃತಿ ಸಂಪೂರ್ಣವಾಗಿ ಒಗ್ಗುವುದೆಂದಬ ಒಣ ಹೆಮ್ಮೆ ನನಗಿಲ್ಲ. ಆದರೆ ಪೂರ್ಣ ಕೃತಿ ಒಪ್ಪಿಗೆಯಾಗದಿದ್ದರೂ ಅಕ್ಕನ ಆಲೋಚನಾಮೃತವನ್ನು ನಾನು ಹೊರದೆಗೆದ ಬಗೆ, ಅವರಿಗೆ ರುಚಿಸದಿರಲಾರದೆಂದು ನಂಬಿದ್ದೇನೆ.

**– ಸಿದ್ಧಯ್ಯ ಪುರಾಣಿಕ**

"ಶ್ರೀಗಿರಿ" ೪/೫ಅ, ಅಲಿ ಅಸ್ಕರ್ ರಸ್ತೆ,
ಬೆಂಗಳೂರು–೫೬೦೦೫೨

# ನನ್ನ ಬಿನ್ನಹ

೧೯೬೪ರಲ್ಲಿ 'ಶರಣ ಚರಿತಾಮೃತ' ಪ್ರಕಟವಾಗ ಅದಕ್ಕೆ ಪೂರಕವಾಗಿ 'ಶರಣ ಬೋಧಾಮೃತ'ವೆಂಬ ಇನ್ನೊಂದು ಹೆಬ್ಬೊತ್ತಗೆಯನ್ನು ಬರೆಯಬೇಕೆಂಬ ಬಯಕೆಯಿತ್ತು. ಆದರೆ ಅಧಿಕಾರದ ಅಂತಸ್ತು ಮೇಲೇರಿದಂತೆ ಆಡಳಿತ ಹೊಣೆಗಾರಿಕೆಗಳೂ ಹೆಚ್ಚಿದುವಾಗಿ ಆ ಬಯಕೆ ಬಯಕೆಯಾಗಿಯೇ ಉಳಿಯಿತು.

ಆದರೂ 'ಶರಣ ಚರಿತಾಮೃತ'ಕ್ಕೆ ದೊರೆತ ಜನಪ್ರಿಯತೆಯು ಅನೇಕರು ಸಂದರ್ಭಾನುಸಾರವಾಗಿ ಶರಣರ ಬಗ್ಗೆ. ಅವರ ವಿಚಾರಸರಣಿಯ ಬಗ್ಗೆ ನನ್ನಿಂದ ಬರಹಗಳನ್ನು ಬೇಡುವಂತೆ ಮಾಡಿತು. ಈ ಸಂಗ್ರಹದಲ್ಲಿ ಪ್ರಕಟಗೊಂಡಿರುವುವು ಅವುಗಳಿಂದ ಆಯ್ದ ಕೆಲವು ಲೇಖನಗಳು.

ಇವು ಪ್ರಕಟವಾಗಲು ಶ್ರೀಮದುಜ್ಜಯಿನಿಸದ್ಧರ್ಮಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಡಾ ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ಕೃಪಾದೃಷ್ಟಿಯೇ ಕಾರಣ. ಅವರಿಗೆ ಅನಂತ ಭಕ್ತಿ ಪುರಸ್ಸರ ಪ್ರಣಾಮಗಳು. 'ಶರಣ ಚರಿತಾಮೃತ' ಬರೆದಾಗ ವಿಶ್ವಬಂಧು ಮರುಳಸಿದ್ಧರ ಚರಿತ್ರೆ ನನಗೆ ತಿಳಿದಿರಲಿಲ್ಲ. ಈಗ ಈ ಕೃತಿಯನ್ನು ಅವರಿಗೆ ಅರ್ಪಿಸಿ ನನ್ನ ತಪ್ಪನ್ನು ತಿದ್ದಿಕೊಂಡಿದ್ದೇನೆ.

'ಶರಣ ಸರಣೆ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಿತವಾಗಿರುವ ಈ ಬಿಡಿ ಬರಹಗಳು ಇಡಿಯಾಗಿ ಶರಣ ವಿಚಾರ ಸಾರವನ್ನು ಹಿಡಿದಿರದಿದ್ದರೂ ಆ ದಿಶೆಯತ್ತ ಸಾಗುವವರಿಗೆ ಸ್ವಲ್ಪವಾದರೂ ದಿಶಾದರ್ಶನ ಮಾಡಿದರೆ ನನ್ನ ಶ್ರಮ ಸಾರ್ಥಕ.

**– ಸಿದ್ಧಯ್ಯ ಪುರಾಣಿಕ**

ಶ್ರೀ ಗಿರಿ. ೪/೫೦, ಆಲೀ ಆಸ್ಕರ್ ರಸ್ತೆ
ಬೆಂಗಳೂರು – ೫೬೦೦೫೨

blank

# ಅನುಬಂಧ – ೪

(ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ)

# ಸಿದ್ಧಯ್ಯ ಪುರಾಣಿಕರ ಜೀವನ ವಿವರ

| ಇಸವಿ | ಘಟನೆಗಳು |
|---|---|
| ೧೯೧೮ | ಜನನ, ೧೮.೬.೧೮೧೮, ಕೊಪ್ಪಳ ಜಿಲ್ಲೆಯ ಯಲಬುರಗಿ ತಾಲ್ಲೂಕ್, ದ್ಯಾಂಪುರದಲ್ಲಿ ತಂದೆ ಕಲ್ಲನಾಥಶಾಸ್ತ್ರಿಯವರು, ತಾಯಿ ದಾನಮ್ಮನವರು. |
| ೧೯೩೨ | 'ಬೆಳಗು' ಕವನ ರಚನೆ |
| ೧೯೩೭ | ಹರ್ಡೇಕರ ಮಂಜಪ್ಪನವರೊಂದಿಗೆ ಅಲಮಟ್ಟಿಯಲ್ಲಿ ವಾಸ |
| ೧೯೪೩ | ತಹಸೀಲ್ದಾರ ತರಬೇತಿ, ನಾಂದೇಡ, ಹೈದರಾಬಾದ್ |
| ೧೯೪೪ | (೧೧.೫.೧೯೪೪)ರಲ್ಲಿ ವಿವಾಹ, ಗಿರಿಜಾದೇವಿಯ ವರೊಡನೆ |
| ೧೯೪೪ | ಅಸಿಸ್ಟೆಂಟ್ ಕಲೆಕ್ಟರ್, ನಾಂದೇಡ |
| ೧೯೪೫ | ಅಸಿಸ್ಟೆಂಟ್ ಕಲೆಕ್ಟರ್, ಲ್ಯಾಂಡ್ ರಿಕಾರ್ಡ್ಸ ವಿಭಾಗ, ಗುಲಬರ್ಗಾ |
| ೧೯೪೮ | ಅಸಿಸ್ಟೆಂಟ್ ಕಮಿಷನರ್ (ಜಾಗೀರಾತ್) |
| ೧೯೫೧ | ಅಸಿಸ್ಟೆಂಟ್ ರೆವಿನ್ಯೂ ಸೆಕ್ರೆಟರಿ, ಹೈದರಾಬಾದ್ ಸಂಸ್ಥಾನ |
| ೧೯೫೨ | ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ |
| ೧೯೫೩ | ಕೃಷಿ ಯೋಜನೆ ಹಾಗು ಪೂರೈಕೆ ಇಲಾಖೆಯ ಸಚಿವರ, ಕಾರ್ಯದರ್ಶಿ |
| ೧೯೫೫ | ಡೆಪ್ಯೂಟಿ ಕಲೆಕ್ಟರ್, ತಾಂಡೂರ |
| ೧೯೫೭ | ಡೆಪ್ಯೂಟಿ ಕಲೆಕ್ಟರ್, ಯಾದಗಿರಿ |
| ೧೯೫೮ | ಭಾರತೀಯ ನಾಗರಿಕ ಸೇವೆ (ಐ.ಎ.ಎಸ್.) |
| ೧೯೬೦ | ವಿದ್ಯಾಇಲಾಕೆಯ ಡೆಪ್ಯೂಟಿ ಸೆಕ್ರೆಟರಿ |
| ೧೯೬೨ | ನಿರ್ದೇಶಕರು, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ |

೧೯೬೪ ಅರ್ಥಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ, ಚಿನ್ನ ನಿಯಂತ್ರಣಾಧಿಕಾರಿ

೧೯೬೫ ಡೆಪ್ಯೂಟಿ ಕಮಿಷನರ್, ಮಡಿಕೇರಿ

೧೯೬೭ ಸಾರಿಗೆ ಕಮಿಷನರ್, ಬೆಂಗಳೂರು

೧೯೭೦ ಡೆಪ್ಯೂಟಿ ಕಮಿಷನರ್, ಬೆಳಗಾವಿ

೧೯೭೨ ಲೇಬರ್ ಕಮಿಷನರ್, ಬೆಂಗಳೂರು

೧೯೭೪ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೧೯೭೬ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ

೧೯೭೬ ನಿವೃತ್ತಿ ಹಾಗೂ ವಿಶ್ರಾಂತಿ ಜೀವನ

೧೯೭೮ 'ವಚನೋದ್ಯಾನ'ಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮ ಪುಸ್ತಕ ಪುರಸ್ಕಾರ

೧೯೭೯ ಬಸವ ಸಮಿತಿಯ ಸಂಶೋಧನ ಮತ್ತು ಪ್ರಕಟಣ ವಿಭಾಗದ ನಿರ್ದೇಶಕ; ಬಸವ ಪಥ (ಕನ್ನಡ ಮಾಸಿಕ), ಬಸವ ಜರ್ನಲ್ (ಇಂಗ್ಲೀಷ್ ತ್ರೈಮಾಸಿಕ) ಪತ್ರಿಕೆಗಳ ಪ್ರಧಾನ ಸಂಪಾದಕ.

೧೯೮೦ ಬಿಲ್ವಾರ ಪ್ರಶಸ್ತಿ (ಭಾರತೀಯ ಭಾಷಾ ಪರಿಷತ್ತು ಕಲ್ಕತ್ತಾ) 'ವಚನೋದ್ಯಾನ' ಕೃತಿಗೆ

೧೯೮೧ ಮಾಳವಾಡ ಪ್ರಶಸ್ತಿ (ಕರ್ನಾಟಕ ವಿಶ್ವವಿದ್ಯಾಲಯ)

೧೯೮೧ ರಾಜ್ಯಮಟ್ಟದ ಅಭಿನಂದನ ಸಮಿತಿಯ ಸತ್ಕಾರ, ಅಭಿನಂದನ ಗ್ರಂಥ, ನಿಧಿ ಸಮರ್ಪಣೆ

೧೯೮೩ 'ವಚನ ನಂದನ' ಪ್ರಕಟಣೆ

೧೯೮೫ ದ್ವಿತೀಯ ಮಕ್ಕಳ ಸಾಹಿತ್ಯ ಸಮ್ಮೇಳನ (ಧಾರವಾಡ)ದ ಅಧ್ಯಕ್ಷರು

೧೯೮೭ ಗುಲ್ಬರ್ಗಾದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ೫೮ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು.

೧೯೯೪ 'ವಚನ ಬ್ರಹ್ಮ' ಬಿರುದು–ಕಲಾಜ್ಯೋಗಿ ಸ್ನೇಹಿತರ ಸಂಘ ಹಾಗೂ ಸರ್ವಜ್ಞ ಕಲಾನಿಕೇತನ, ಬೆಂಗಳೂರು

೧೯೯೪ ಮರಣ (೫.೯.೧೯೯೪) ■

# ಅನುಬಂಧ – ಙ

## (ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ)

blank

# ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ

**ಕವನ ಸಂಕಲನಗಳು**

| | | | |
|---|---|---|---|
| ೧. | ಜಲಪಾತ | ಸಂಗಡಿಗರ ಸಮಿತಿ,<br>ರಾಯಚೂರು | ೧೯೫೩, ೬೪ |
| ೨. | ಕರುಣಾಶ್ರಾಣವ | ಸಹಜೀವನ ಪ್ರಕಾಶನ,<br>ಕಾಚೀಗೂಡಾ<br>ಹೈದರಾಬಾದ್ ದಕ್ಷಿಣ<br>ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್,<br>ಕೃಷ್ಣಮೂರ್ತಿ ಪುರಂ,<br>ಮೈಸೂರು–೪ | ೧೯೫೫, ೬೭ |
| ೩. | ಮಾನಸ ಸರೋವರ | ಶಾರದಾ ಪ್ರಕಟನಾಲಯ,<br>ಬೆಂಗಳೂರು | ೧೯೫೯ |
| ೪. | ಕಲ್ಲೋಲ ಮಾಲೆ | ತಾರಾಗ್ರಂಥ ಪ್ರಕಾಶನ,<br>ಧಾರವಾಡ | ೧೯೬೮ |
| ೫. | ಮೊದಲು ಮಾನವನಾಗು | ತಾರಾಗ್ರಂಥ ಪ್ರಕಾಶನ,<br>ಧಾರವಾಡ | ೧೯೬೯ |
| ೬. | ಚರಗ | ಶ್ರೀಗಿರಿ ಪ್ರಕಾಶನ, ಕುಡಿ–೩ | ೧೯೮೭ |
| ೭. | ಹಾಲ್ದೆನೆ | ಅನುಪಮ ಪ್ರಕಾಶನ, ಅಥಣಿ | ೧೯೯೦ |
| ೮. | ಮರುಳಸಿದ್ಧನ ಕಂತೆ | ಶ್ರೀಗಿರಿ ಪ್ರಕಾಶನ<br>ಬೆಂಗಳೂರು, ಕುಡಿ–೭ | ೧೯೯೧<br>೧೯೭೭ |
| ೯. | ಸಮಗ್ರ ಕಾವ್ಯ | ಶ್ರೀಗಿರಿ ಪ್ರಕಾಶನ,<br>ಬೆಂಗಳೂರು | ೨೦೦೮ |

**ವಚನ ಸಂಗ್ರಹಗಳು:**

| | | |
|---|---|---|
| ೧. ವಚನೋದ್ಯಾನ | ಶ್ರೀಗಿರ ಪ್ರಕಾಶನ, ಬೆಂಗಳೂರು | ೧೯೭೭, ೨೦೦೦ ೨೦೧೦, ೨೦೧೮ |
| ೨. ವಚನ ನಂದನ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೮೩, ೨೦೦೦ |
| ೩. ವಚನಾರಾಮ | ಶ್ರೀ ಅನ್ನದಾನ ವಿಜಯ ವಿದ್ಯಾ ಪ್ರಸಾರಕ ಸಮಿತಿ, ನರೇಗಲ್ಲ | ೧೯೯೨ |
| ೪. ಸಮಗ್ರ ವಚನ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೨೦೦೯ |

**ನಾಟಕಗಳು:**

| | | |
|---|---|---|
| ೧. ಆತ್ಮಾರ್ಪಣ | ಹೈದರಾಬಾದು ವೀರಶೈವ ತರುಣ ಸಂಘ | ೧೯೪೨ |
| ೨. ಭಾರತ ವೀರ | ನರೇಶ್ ಅಂಡ್ ಕಂಪನಿ, ಮೌಂಟ್ ಜಾಯ್ ರಸ್ತೆ, ಬೆಂಗಳೂರು–೧೯ | ೧೯೬೩ ೬೪, ೬೭ |
| ೩. ರಜತ ರೇಖೆ | ಶ್ರೀ ಎಂ. ಬಿ. ತರುಮರಿ ಕಾರ್ಯದರ್ಶಿ, ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ ಲಿಮಿಟೆಡ್, ಧಾರವಾಡ | ೧೯೬೨ ೬೫ |
| ೪. ಭಗ್ನ ನೂಪುರ | ಕರ್ನಾಟಕ ಟ್ರೇಡಿಂಗ್ ಏಜನ್ಸೀಸ್, ಬನಶಂಕರಿ ಎರಡನೇ ಹಂತ, ಬೆಂಗಳೂರು–೭೦ | ೧೯೮೪ |
| ೫. ಸಮಗ್ರ ನಾಟಕಗಳು | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೨೦೧೦ |

**ಕಥಾ ಸಂಕಲನಗಳು:**

| | | | |
|---|---|---|---|
| ೧. | ಕಥಾಮಂಜರಿ | ಸತ್ಯಾಶ್ರಯ ಪ್ರಕಾಶನ ಮಂದಿರ ಹೈದ್ರಾಬಾದ್ | ೧೯೫೧ |
| ೨. | ತುಷಾರ ಹಾರ | ಶ್ರೀ ಗಿರಿ ಪ್ರಕಾಶನ, ಬೆಂ. | ೧೯೮೭ |

**ಕಾದಂಬರಿ:**

| | | | |
|---|---|---|---|
| ೧. | ತ್ರಿಭುವನ ಮಲ್ಲ | ಗುರು ಕುಮಾರಿ ಪ್ರಕಾಶನ, ೨೨೨೪ ಬಸವೇಶ್ವರ, ನಾಲ್ಕನೇ ಅಡ್ಡರಸ್ತೆ ಮೈಸೂರು–೫೭೦ ೦೦೪ | ೧೯೬೪ ೧೯೮೧ ೧೯೮೫ |

**ಮಕ್ಕಳ ಸಾಹಿತ್ಯ:**

| | | | |
|---|---|---|---|
| ೧. | ತುಪ್ಪಾ ರೋಟ್ಟಿ ಗೇ ಗೇಗೇ | ಕರ್ನಾಟಕ ಸಹಕಾರಿ ಪ್ರಕಾಶನ ಮಂಡಿರ | ೧೯೬೪, ೭೩ |
| ೨. | ಗಿಲ್ ಗಿಲ್ ಗಿಲಗಚ್ಚಿ | ಭಾರತೀ ಸಾಹಿಯ ಭಂಡಾರ, ವಿಜಾಪೂರ | ೧೯೭೮ |
| ೩. | ತಿರುಗೆಲೆತಿರುಗೆಲೆ ತಿರುಗು ಯ್ಯಾಲೆ | ಭಾರತೀ ಸಾಹಿತ್ಯ ಭಂಡಾರ, ವಿಜಾಪೂರ | ೧೯೮೧, ೧೯೮೯ |
| ೪. | ಬಣ್ಣ ಬಣ್ಣದ ಓಕುಳಿ | ನಿರ್ಮಲ ಪ್ರಕಾಶನ, ರಾಮಲಕ್ಷ್ಮಣ ನಿಲಯ, ಕೆ.ಆರ್. ಬಡಾವಣೆ, ತಿಪಟೂರು | ೧೯೮೭ |
| ೫. | ಭಾರತವೆಲಕೆ ಬಾವುಟವೊಂದೇ | ಶ್ರೀ ಗಿರಿ ಪ್ರಕಾಶನ, ಬೆಂಗಳೂರು, ಕುಡಿ–೭ | ೧೯೯೧ |
| ೬. | ಸಮಗ್ರ ಮಕ್ಕಳ ಸಾಹಿತ್ಯ | ಶ್ರೀಗಿರಿ ಪ್ರಕಾಶನ ಬೆಂಗಳೂರು | ೨೦೧೬ |
| ೭. | ಮಕ್ಕಳ ಹಾಡುಗಳು | ಹೇಮಂತ ಸಾಹಿತ್ಯ ಬೆಂಗಳೂರು | ೨೦೧೮ |

**ಮಕ್ಕಳ ನಾಟಕ:**

| | | |
|---|---|---|
| ೧. ನ್ಯಾಯ ನಿರ್ಣಯ | ಭಾರತಿಚ ವ ಸಾಹಿತ್ಯ ಭಂಡಾರ, ವಿಜಾಪೂರ | ೧೯೮೬ |

**ಮಕ್ಕಳ ಪ್ರವಾಸ ಸಾಹಿತ್ಯ**

| | | |
|---|---|---|
| ೧. ಮಕ್ಕಳ ಲೋಕ ಸಂಚಾರ | ಭಾರತೀ ಸಾಹಿತ್ಯ ಭಂಡಾರೆ ವಿಜಾಪುರ | ೧೯೮೯ |

**ಜೀವನ ಚರಿತೆಗಳು:**

| | | |
|---|---|---|
| ೧. ಶರಣ ಚರಿತಾಮೃತ | ವಯಸ್ಕರ ಶಿಕ್ಷಣ ಸಮಿತಿ, ಮೈಸೂರು | ೧೯೬೪ |
| | | ೭೭, ೯೨ |
| | ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ೨೦೧೦, ೨೦೧೩ |
| ೨. ಸಿದ್ಧರಾಮ | ಭಾರತ–ಭಾರತಿ ಪುಸ್ತಕ ಸಂಪದ, ಬೆಂಗಳೂರು–೧೯ | ೧೯೭೪ |
| ೩. ಬಸವಣ್ಣನವರ ಜೀವನ ಹಾಗೂ ಸಂದೇಶ | ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೭೭ |
| ೪. ನಜೀರ್ ಅಕಬರಾಬಾದಿ | ಸಾಹಿತ್ಯ ಆಕಾಡೆಮಿ, ನವದೆಹಲಿ | ೧೯೭೮ |
| ೫. ಹರ್ಡೇಕರ ಮಂಜಪ್ಪ | ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನ ಮಠ, ಗದಗ | ೧೯೭೮ |
| ೬. ಮಿರ್ಜಾ ಗಾಲಿಬ್ | ಭಾರತ–ಭಾರತಿ ಪುಸ್ತಕ ಸಂಪದ, ಬೆಂಗಳೂರು–೧೯ | ೧೯೭೯ |
| ೭. ಮಹಾದೇವಿ | ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ | ೧೯೮೨, ೨೦೦೩ |
| ೮. ಅಲ್ಲಮ ಪ್ರಭು | ಬಸವ ಸಮಿತಿ, ಬೆಂಗಳೂರು–೧ | ೧೯೮೯ |

**ಸಂಪಾದಿತ ಕೃತಿಗಳು:**

| | | | |
|---|---|---|---|
| ೧. | ಸುಬೋಧ ಸಾರ | | ೧೯೩೬,೫೧ |
| ೨. | ಶ್ರೀಕಾರ | ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ್ | ೧೯೫೪ |
| ೩. | ಪ್ರಬಂಧ ಮಾಲೆ | ಕರ್ನಾಟಕ ಸಾಹಿತ್ಯ ಮಂದಿರ ಹೈದರಾಬಾದ್ | ೧೯೫೪ |
| ೪. | ಪದ್ಯ ರತ್ನಾಕರ | | |
| ೫. | ಮಹಾತ್ಮ ಕನಕದಾಸರ ಪ್ರಶಸ್ತಿ | ರಾಜ್ಯಸಮಿತಿ, ಶ್ರೀ ಕನಕದಾಸರ ನಾಲ್ಕನೇ ಶತಮಾನೋತ್ಸವ, ಬೆಂಗಳೂರು | ೧೯೬೫ |
| ೬. | ಶರಣ ಪ್ರಸಾವ | ನೃಪತುಂಗ ಪ್ರಕಾಶನ, ಕಲಬುರ್ಗಿ | ೧೯೬೯ |
| ೭. | ಸಿದ್ಧಗಂಗಾಶ್ರೀ | ಶ್ರೀ ಮನ್ನಿರಂಜನ ಪ್ರಣವಸ್ವರೂಪಿ ಡಾ. ಶಿವಕುಮಾರ ಸ್ವಾಮಿಗಳ ಅಭಿನಂದನ ಗ್ರಂಥ ಸಮಿತಿ | ೧೯೮೧ |
| ೮. | ಮಣಿಹ | ಬಿ.ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ (ರಿ) ೫೪ 'ಅರವಿಂದ' ೩ನೆಯ ಅಡ್ಡಬೀದಿ, ಗವಿಪುರಂ ವಿಸ್ತರಣ, ಬೆಂಗಳೂರು | ೧೯೮೨ |
| ೯. | ಬಸವದರ್ಶನ (ಹಿಂದಿ) | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು | ೧೯೮೩ |
| ೧೦ | ಬಸವ ಮತ್ತು ದಲಿತೋದಯ | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ ಬೆಂಗಳೂರು. | ೧೯೮೩ |
| ೧೧ | ಬಸವ ಮತ್ತು ವಿಚಾರವಾದ | ಬಸವ ಸಮಿತಿ, ಬಸವ ಭವನ, ಬಸವೇಶ್ವರ ವೃತ್ತ ಬೆಂಗಳೂರು | ೧೯೮೪ |
| ೧೨ | ಮಳೆಯರಾಜ ಚಾರಿತ್ರ್ಯ | ಶ್ರೀಗಿರಿ ಪ್ರಕಾಶನ, ಬೆಂಗಳೂರು | ೧೯೮೯ |

**ಇತರ ಕೃತಿಗಳು:**

| | | |
|---|---|---|
| ೧. ವಿಕಾಸವಾಣಿ | ಸಹಜೀವನ ಪ್ರಕಾಶನ, ಕಾಚಿಗೂಡಾ, ಹೈದರಾಬಾದ್ | ೧೯೫೫ |
| ೨. ಗ್ರಾಮ ಸ್ವರಾಜ್ಯ | ಸಹ್ಯಾದ್ರಿ ಪ್ರಕಾಶನ | ೧೯೮೨ |
| ೩. ಚಿಂತನ ಲಹರಿ | ಶ್ರೀಗಿರಿ ಪ್ರಕಾಶನ, ಬೆಂಗಳೂರು, ೫೬–೫ | ೧೯೮೯ |
| ೪. ಶರಣಸರಣಿ | ತರಳಬಾಳು ಪ್ರಕಾಶನ, ಸಿರಿಗೆರೆ | ೧೯೯೨ |

**ಆಯ್ದ ಕವನಗಳು**

| | | |
|---|---|---|
| ೧. ಕಾವ್ಯಾನಂದರ ಆಯ್ದ ಕವನಗಳು | ನರೇಶ್ ಅಂಡ್ ಕಂಪನಿ, ಹನುಮಂತನಗರ, ಬೆಂಗಳೂರು | ೧೯೮೨ |
| ೨. ಆಯ್ದ ಕವನಗಳು | ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ವಿಶ್ವಕನ್ನಡ ಸಮ್ಮೇಳನ, ಬೆಂಗಳೂರು) | ೧೯೮೨ |
| ೩. ಕಾವ್ಯಾನಂದರ ಕವಿತೆಗಳು | ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು | ೨೦೦೧ |

■■

# ಡಾ. ಸಿದ್ಧಯ್ಯ ಪುರಾಣಿಕರ ಬಗ್ಗೆ ಪ್ರಕಟಿತ ಕೃತಿಗಳು

| | | |
|---|---|---|
| ೧. ಕಾವ್ಯಶ್ರೀ ಕಾವ್ಯಾನಂದ | ಸತ್ಯಾನಂದ, ಮೇಘಮಿತ್ರ ಸಂಭಾವನಾ ಗ್ರಂಥ ಕಾವ್ಯಾನಂದ ಸಮಿತಿ ಬಿಜಾಪೂರ | ೧೯೬೯ |
| ೨. ಜೀವನ ವಿಕಾಸ ವಿಶೇಷ ಸಂಚಿಕೆ | ಸಂ. ಸಹ ನಿರ್ದೇಶಕರು, ಶಿಕ್ಷಣ ಇಲಾಖೆ, ಕಲಬುರ್ಗಿ, ಸಂಪುಟ ೯ ಸಂಚಿಕೆ ೮–೯ | ೧೯೭೩ |
| ೩. ಕಾವ್ಯಾನಂದ | ಮಿರ್ಜಿ ಅಣ್ಣಾರಾಯ, ಕೃಷ್ಣಕೊಲ್ಲಾರ ಕುಲಕರ್ಣಿ, ಚಂದ್ರಗಂಗಾ ಜ್ಞಾನಪೀಠ, ಶೇಡಬಾಳ | ೧೯೭೩ |
| ೪. ಕಾವ್ಯಾನಂದ | ಸಾ.ಶಿ.ಮರುಳಯ್ಯ, ಸಿದ್ಧಯ್ಯ ಪುರಾಣಿಕರ ಅಭಿನಂದನ ಸಮಿತಿ, ಚಾಮರಾಜಪೇಟೆ, ಬೆಂಗಳೂರು–೧೮ | ೧೯೮೧ |
| ೫. ಸಹೃದಯ | ಟಿ.ಆರ್.ಮಹದೇವಯ್ಯ, ಪುರಾಣಿಕರ ಅಭಿನಂದನಾ ಸಮಿತಿ ಬೆಂಗಳೂರು–೧೮ | ೧೯೮೧ |
| ೬. ಸಾಹಿತಿಗಳ ಸಂಗದಲ್ಲಿ | ಲೇ: ದೇಜಗೌ | ೧೯೮೧ |
| ೭. ಕಾವ್ಯಾನಂದರ ಕಾವ್ಯ | ವೃಷಬೇಂದ್ರ ಅರ್ಕಸಾಲಿ, ಸಂಕ್ರಮಣ ಪ್ರಕಾಶನ, ಧಾರವಾಡ | ೧೯೮೭ |

| | | | |
|---|---|---|---|
| ೮. | ಸಿದ್ಧಯ್ಯ ಪುರಾಣಿಕ | ಜಿ.ಎಸ್.ಸಿದ್ಧಲಿಂಗಯ್ಯ, ವೀರಶೈವ ಅಧ್ಯಯನ ಸಂಸ್ಥೆ, ಗದಗ | ೧೯೯೫ ೨೦೧೮ |
| ೯. | ಡಾ. ಸಿದ್ಧಯ್ಯ ಪುರಾಣಿಕರ ಕೃತಿಗಳು | ಎನ್.ಬಿ. ಬುಳ್ಳಾ, ಜ್ಯೋತಿಶ್ರೀ ಪ್ರಕಾಶನ, ಮಾಣಿಕೇಶ್ವರಿ ನಗರ, ಗುಲಬರ್ಗಾ | ೧೯೯೯ |
| ೧೦. | ಕಾವ್ಯಾನಂದ | ಡಾ. ಚೆನ್ನಬಸವ ಹಿರೇಮಠ ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ-೫೮೫೧೦೬ | ೨೦೦೫ |
| ೧೧. | ಕಾವ್ಯಾನಂದರ ಬದುಕು ಮತ್ತು ಕಾವ್ಯ | ಡಾ. ಪ್ರಕಾಶಗಿರಿ ಮಲ್ಲನವರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು | ೨೦೧೮ |

■■